ಜಾಹೀರ ನೋಟೀಸು.

ಹೊನ್ನಾವರ ತಾಲೂಕ ಮುಗ್ವಾ ಮಗ್ರೆ ಗ್ರಾಮದ ಈ ಕೆಳಗೆ ಸಹಿ ಮಾಡುವವರು ವಿನಂತಿಪೂರ್ವಕ ತಿಳಿಸುವದೇನಂದರೆ –

ನಮ್ಮ ಮುಗ್ವೆ ಗ್ರಾಮದ ಶ್ರೀ ಬೆಳೆಯಮ್ಮಾ ದೇವೀ ದೇವಸ್ಥಾನದ ಜೀರ್ಣೋದ್ಧಾರ–ಕಲಾವೃದ್ಧಿ ಕೆಲಸವನ್ನು ಮಾಡುವದು ನಿಶ್ಚಯಿಸಿಕೊಂಡಿದ್ದೇವೆ ಸದ್ರಿ ದೇವೀ ಸ್ಥಳದ ಮಹಿಮೆಯೆಂದರೆ, ಪ್ರತ್ಯಕ್ಷ ಮನುಷ್ಯರ ಮೇಲೆ ಬಂದು ಆಡಿತೋರಿಸುವಂಥಾದ್ದು ಇದ್ದು ಸದ್ರಿ ಕೆಲಸಕ್ಕೆ ಬಹಳ ದ್ರವ್ಯ ಬೇಕಾಗುತ್ತದೆ. ಆದರೆ ಈ ದುಷ್ಕಾಳದಲ್ಲಿ ದ್ರವ್ಯದ ಪೂರವಟಿ ನಮ್ಮೆರಡು ಗ್ರಾಮದಿಂದ ಆಗದೇ ಹೋದ್ದರಿಂದ ಮಹನೀಯರಾದ ಸಭ್ಯ ಗೃಹಸ್ಥರು ಸ್ವಹಸ್ತ–ಪರಹಸ್ತದಿಂದ ಸಹಾಯ ಮಾಡಬೇಕಾಗಿ ಅಪೇಕ್ಷಿಸುತ್ತೇವೆ ಮತ್ತು ಈ ದ್ರವ್ಯದ ವಸೂಲಿಯ ಬಗ್ಗೆ ಸದ್ರಿ ದೇವೀ ಕೆಲಸ ಮಾಡಿಸುವ ಪಂಚರು ತಮ್ಮ ಸಹಿ ಜಾಕೆ ವಿನಂತಿ ಪತ್ರ, ಹಾಗು ಪೋಹರಸಿಕಿ ಪಾವ್ತಿ ಪುಸ್ತಕು ಕೊಟ್ಟು ಮನುಷ್ಯನನ್ನು ವಸೂಲಿಗೆ ಕಳಿಸುತ್ತಾರೆ, ಅವರ ಕಡೆಗೆ ಕೊಡತಕ್ಕ ದ್ರವ್ಯ ಕೊಟ್ಟು ಪಾವ್ತಿ ಪಡೆಯಬೇಕಲ್ಲದೆ, ಬೇರೆ ಯಾರಾದರೂ ಸದ್ರಿ ದೇವಿ ಹೆಸರಿನಿಂದ ಸದ್ರಿ ಕೆಲಸದ ಬಗ್ಗೆಂತ ವಸೂಲಿಗೆ ಬಂದರೆ ಯಾರೂ ದ್ರವ್ಯ ಸಹಾಯ ಮಾಡಬಾರದಾಗಿ ಸಹ ನಮ್ಮ ಹೇಳಿಕೆ ಇದೆ. ಜಾಹೀರ ಇರಲಿ

ತಾ ೩ ೧—೧೯೩೪

ಗಣೇಶ ರಾಮ ಹೆಗಡೆ ಕಣ್ಣಿ.
ನಾರಾಯಣ ಪರಮೇಶ್ವರ ಹೆಗಡೆ ಕಣ್ಣಿ.

ಅಲ್ಲಲ್ಲಿ ಇಷ್ಟಿಷ್ಟು!

ಹಿಂದುಸ್ಥಾನದೊಳಗಿನ ರಾಜಕೀಯ ಪರಿಸ್ಥಿತಿಯ ಪತ್ತೆ ಹತ್ತುವ ಗುಪ್ತ ಕಾರಭಾರ ಈಗ ಮಹಾತ್ಮರು ತಮ್ಮ ಪರಿವಾರದೊಡನೆ ದಿಲ್ಲಿಯಲ್ಲಿ ಮುಕ್ಕಾಮು ಹೂಡಿದ್ದಾರೆ. ಹರಿಜನ ಸೇವಕ ಸಂಘದ ಕಾರ್ಯಕ್ಕಾಗಿ ಅಲ್ಲಿ ಈ ತಿಂಗಳ ಕೊನೆಯ ತನಕ ಉಳಿಯುವರು ಈ ಸಮಯ ಮಹಾತ್ಮರಿಗೂ, ಬಂಗಾಲದ ಗವ್ಹರ್ನರರಾದ ಸರ್ ಜ್ಹೊನ್ ಎಂಡರಸನ್‌ರವರಿಗೂ ಭೆಟ್ಟಿಯೊದಲು ಮಾತು–ಕಥೆಯಾಗಬಹುದಂತೆ. ಆ ಮೇಲೆ ಸರ್ವಾಧಿಪತಿ ವಿಲಿಂಗಡನ್ ದೊರೆಗಳಿಗೂ ಮಹಾತ್ಮರಿಗೂ ಸಂಭಾಷಣ ನಡೆಯಬಹುದಂತೆ. ದಕ್ಷಿಣ ಆಫ್ರಿಕೆಯ ಮುಖ್ಯ ಪ್ರಧಾನರಾದ ಸೇನಾಪತಿ ಸ್ಮಟ್ಸ್‌ರವರು ಈಗ ಲಂಡನಿನಲ್ಲಿದ್ದಾರೆ ಅವರಿಗೂ ಮಹಾತ್ಮರಿಗೂ ರಾಜ್ಯಸುಧಾರಣೆಯ ವಿಷಯ ಅಂತರಂಗದಿಂದ ಪತ್ರವ್ಯವಹಾರ ನಡೆಯುತ್ತಿದೆ. ಬ್ರಿಟಿಶ ಪ್ರಧಾನ ಮಂಡಳವು ಕೊಡಮಾಡಿದ ರಾಜ್ಯಾಧಿಕಾರವನ್ನು ಅಂಗೀಕರಿಸಬೇಕಾಗಿ ಅವರು ಮಹಾತ್ಮರ ಮನವೊಲಿಸುತ್ತಿದ್ದಾರೆ. ಈ ಪತ್ರವ್ಯವಹಾರವನ್ನು ಪ್ರಕಟಿಸಬಾರದು, ಅದು ಖಾಸಗಿ ಸ್ವರೂಪದ್ದೆಂದು ಅವರು ಉದ್ಗರಿಸಿದರು. ದೀನಬಂಧು ಎಂಡ್ರ್ಯೂಸರವರು ರ್‍ಯಾಮ್ಸೆ ಮೆಕ್ಡೊನಾಲ್ಡ ಮೊದಲಾದವರು ಸದ್ಯಕ್ಕೆ ಲಂಡನಿನಲ್ಲಿ ಭಾಷಣ ಮಾಡುವವರಿದ್ದಾರೆ. ಈ ಕುರಿತು ಮಾಹಿತಿ ಸಂಗ್ರಹ ಮಾಡುವದಕ್ಕಾಗಿ ಅವರು ಲಗುಬಗೆಯಿಂದ ಹಡಗ ಹತ್ತಿ ಲಂಡನಿನಿಂದ ಹಿಂದುಸ್ಥಾನಕ್ಕೆ ಬಂದು ಮಹಾತ್ಮರ ಕಡೆಗೂ, ದೊಡ್ಡ ದೊಡ್ಡ ಅಧಿಕಾರಿಗಳ ಕಡೆಗೂ ಮಾತನಾಡಿ ಪುನಃ ಹಡಗ ಹತ್ತಿ ಲಂಡನಿಗೆ ತೆರಳಿದ್ದಾರೆ. ದೀನಬಂಧು ಎಂಡ್ರ್ಯೂಸರವರೂ, ಸೇನಾಪತಿ ಸ್ಮಟ್ಸರವರೂ ಮಹಾತ್ಮರಿಗೂ ಹಿಂದುಸ್ಥಾನ ಸರಕಾರಕ್ಕೂ ಮಧ್ಯಸ್ಥಿಕೆ ನಡಿಸುತ್ತಾರಾಗಿ ಒಂದು ವಾರ್ತೆ. ಈ ಸಂಗತಿಗಳಿಗೆ ಏನೂ ಮಹತ್ವ ಕೊಡಬಾರದಾಗಿ ಮಹಾತ್ಮರು ದಿಲ್ಲಿಯಿಂದ ಪ್ರಕಟಣೆ ಹೊರಡಿಸಿದ್ದಾರೆ.

***

ದಿಲ್ಲಿಯ 'ರೊಯ್ಸು ವೀಕ್ಲಿ' ಪತ್ರಿಕೆಯ ಲಂಡನ್ ಸುದ್ದಿಗಾರರ ವಾರ್ತೆ ಬೇರೆ – "ಸೇನಾಪತಿ ಸ್ಮಟ್ಸರವರು ಬ್ರಿಟಿಶ ಪ್ರಧಾನ ಮಂಡಳದವರೊಡನೆ ಮಾತನಾಡಿದ್ದಾರೆ. ಮಹಾತ್ಮರ ಧೋರಣ ಅನುಕೂಲವಾದ್ದಲ್ಲಿ ಕೆಲವು ನಿರ್ಬಂಧಗಳು ದೂರವಾಗಲಿಕ್ಕಿವೆ. ತಪ್ಪಿದಿದ್ದರೆ ಇಡೀ ರಾಜ್ಯಸುಧಾರಣೆಯ ಯೋಜನೆಯೇ ರದ್ದಾಗಬಹುದು. ಮಹಾತ್ಮರ ಒಪ್ಪಿಗೆಯಿದ್ದರೆ ಬ್ರಿಟಿಶ ಸರಕಾರವು ಅನುಕೂಲ್ಯಗಳನ್ನು ಪೂರೈಸೀತು" ಇತ್ಯಾದಿ ಬರೆಯುತ್ತಾರೆ. ರಾಜ್ಯಸುಧಾರಣೆ ನೇಮಸ್ತರಿಗೆ ಸಹ ತ್ಯಾಜ್ಯವಾದ ಬಳಿಕ, ಅಂಥ ರಾಜ್ಯಸುಧಾರಣೆಯನ್ನು ಭಾರತ ಮಂತ್ರಿ ಹೋರರ ವಿರೋಧಿಗಳು ಪಾರ್ಲಿಮೆಂಟಿನಲ್ಲಿ ರದ್ದು ಮಾಡಿಸಗೊಳಿಸಿದರೆ ಹಿಂದೀಯರಿಗೆ ಎಂದಿಗೂ ಪಶ್ಚಾತ್ತಾಪವಿಲ್ಲ. ಅಂತು ರಾಜ್ಯಸುಧಾರಣೆಯ ಚರ್ಚೆ ಗುಪ್ತವಾಗಿಯೇ ನಡೆದದೆ.

**

(೧೨ನೇ ಪುಟದ ಮೇಲೆ ಮುಂದುವರಿದಿದೆ)

ನಾಯಕ್ ಬ್ರದರ್ಸರ

ಶ್ರೀಮಧ್ವಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು !

ವೃದ್ಧಿಕಲ್ಪ (ಸ್ತ್ರೀಯರಿಗೆ ಅತ್ಯಂತ ಗುಣಕಾರಿ).
ಮುಕ್ತಾಫಲ ವನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ)
ಮಹಾಭೃಂಗರಾಜ ತೈಲ (ಕೇಶನಾಶಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ (ಕೀಲರೋಗಕ್ಕೆ ಅತ್ಯುತ್ತಮ).
ಕೃಷ್ಣಾಂಜನ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ರಕ್ತಪಿತ್ತ, ಅಪಸ್ಮಾರ, ಅಪಸ್ಮಾರಗಳಿಗೆ ರಾಮಬಾಣ)
ಭುವನ ರಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ)
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಸಿದ್ಧ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:–

ಹೆಚ್ಚಿನ ವಿವರಗಳಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು !

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಅವರ ಶ್ರೀಮಧ್ವಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾವಕಾಶ ನೋಡಿ ತುಂಬಾ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಿದೆಯೆಂತ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯವಂಶಕ್ಕೆ ಸೇರಿದವರಾಗಿಯೂ, ಗಣನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ಪರೀಕ್ಷಿಸಿದೆನು. ಅವು ಶಾಸ್ತ್ರಸಿದ್ಧವಾಗಿ ಅನುಭವಪೂರ್ವವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವೂ ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ಪರೀಕ್ಷಾ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯವು ಈ ಜಿಲ್ಲೆಯಲ್ಲಿ ಇವರು ಪ್ರಥಮವಾಗಿ ಪಡೆದು ಇದರ ವ್ಯವಸ್ಥಾಪಕರು ಯತ್ನಿಸುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸ್ಥೆವಹಿಸುವವರಾದಾಗಲೇ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ ಉಡುಪಿ. ೧೧–೧೧–೧೯೩೩

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ

ನಾಯಕ್ ಬ್ರದರ್ಸರ ಶ್ರೀಮಧ್ವಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ

ಪತ್ರಕರ್ತರ ನುಡಿಗನ್ನಡಿ.

೧ ಪ್ರಾಂತಿಕ ಸರಕಾರದ ರಾಜಮಾರ್ಗಗಳ ಮೇಲೆ ಜಕಾತ ಕಟ್ಟೆಗಳನ್ನಿಡುವ ಪದ್ಧತಿ ಮೋಘಲಾಯಿ ಕಾಲದ್ದು ಅದನ್ನು ಕಿತ್ತೊಗೆಯಬೇಕಾಗಿ ದೀರ್ಘಕಾಲದಿಂದ ನಡೆದ ಚಳವಳಿಯನ್ನನುಲಕ್ಷಿಸಿ ಸರಕಾರವು ಅವನ್ನು ಕಿತ್ತೊಗೆದಿತ್ತು. ಹಣದ ಅಡಚಣಿಯೆಂದು, ತಾತ್ಕಾಲಿಕವೆಂದು ಸರಕಾರವು ಪುನಃ ಜಕಾತಕಟ್ಟೆಗಳನ್ನೇರ್ಪಡಿಸಿತು. ಅಲ್ಪ ಕಾಲದಲ್ಲಿಯೇ ಅವನ್ನು ಕಿತ್ತೊಗೆಯುವ ಅಭಿವಚನ ಕೊಟ್ಟು ಸರಕಾರವು ಅವನ್ನು ಪುನಃ ಪ್ರಸ್ಥಾಪಿಸಿತು. ಮುಂದಿನ ವರುಷದಿಂದ ಜಕಾತ ಕಟ್ಟೆಗಳನ್ನು ಕಿತ್ತೊಗೆಯುವ ಆಲೋಚನೆಯಿಂದ ಸರಕಾರವು ಸದ್ಯಕ್ಕೆ ಪ್ರಕಟಣೆಯನ್ನು ಹೊರಡಿಸಿದೆ. ಈ ಪ್ರಕಟಣೆಯಂತೆ ಮೋಟರ ಸೈಕಲು, ಮೋಟರ ಕಾರು, ಮೋಟರ ಬಸ್ಸು ಮೊದಲಾದ ಪ್ರಯಾಣಿಕರ ಹಾಗು ಸರಕುಗಳ ವೇಗ-ವಾಹನ (*fast moving traffic*)ಗಳ ಮೇಲೆ ಪ್ರಾಂತಿಕ ತೆರಿಗೆ ಹೇರಲ್ಪಡುವದಾಗಿ ಪ್ರಕಟಿಸಿದೆ. ಮೋಟರ ಸೈಕಲುಗಳಿಗೆ ರೂ ೩೦—೪೦, ಮೋಟರ ಕಾರು – ಬಸ್ಸುಗಳಿಗೆ ರೂಪಾಯಿ ೧೬೦ ರಿಂದ ಪ್ರಯಾಣಿಕರ ಸಂಖ್ಯೆಯಂತೆ ೮೧೦ರ ತನಕ ತೆರಿಗೆ ಎತ್ತುವಳಿಯಾಗುವದು ೪ ಮಂದಿಗಳ ತನಕ ಕೂಡ್ರುವ ಕಾರು-ಬಸ್ಸುಗಳಿಗೆ ರೂ. ೧೬೦, ಆ ಮೇಲೆ ಪ್ರತಿ ಒಬ್ಬ ಪ್ರಯಾಣಿಕನಿಗೆ ರೂ ೫೦ರಂತೆ ತೆರಿಗೆ ಆಕರಿಸಬೇಕೆಂದು ಗೊತ್ತಾಗಿದೆ. ಮೋಟಾರಿನವರು ಇದೊಂದೇ ತೆರಿಗೆ ಕೊಡತಕ್ಕದ್ದಾಯಿತು. ಮ್ಯುನಿಸಿಪಾಲಿಟಿಯ ಇಲ್ಲವೆ ಸರಕಾರದ ಇನ್ನಿತರ ಜಕಾತ ಕಟ್ಟೆಗಳ ಉಪಟಳವಿಲ್ಲ. ಈ ಪ್ರಕಟಣೆಯಿಂದ ಜಕಾತ ಕಟ್ಟೆ ಸಾಯುವದಕ್ಕಿಂತ ಬದುಕಿ ಕಾಡುವದೇ ಲೇಸೆಂದು ಅಭಿಪ್ರಾಯವಾಗಲಾರಂಭಿಸಿದೆ.

---

೨ ರಾಜಮಾರ್ಗಗಳನ್ನು ಕಟ್ಟಿಸಿ ಊರು-ಊರುಗಳಿಗೆ, ಪಟ್ಟಣ-ಪಟ್ಟಣಗಳೊಳಗೆ ವಾಹನ ಸೌಕರ್ಯಗಳನ್ನೇರ್ಪಡಿಸುವದು ರಾಜ್ಯಾಧಿಕಾರಿಗಳ ಆದ್ಯ ಕರ್ತವ್ಯ. ಅವರ ಅನುಕೂಲತೆಗಳಿಗಾಗಿ ಜಕಾತ ಕಟ್ಟೆಗಳು ಮೋಘಲಾಯಿಯಲ್ಲಿ ಅವತಾರ ಹೊಂದಿದ್ದವು. ಇವು ಸುಧಾರಿಸಿದ ರಾಜ್ಯಪದ್ಧತಿಗ ಸಲ್ಲವೆಂದು ಸರಕಾರಕ್ಕೆ ಮನವರಿಕೆಯಾದ ಬಳಿಕ ಸರಕಾರವು ಅವನ್ನು ಕಿತ್ತೊಗೆಯಿತು. ಪುನಃ ಪ್ರಸ್ಥಾಪನೆ ಮಾಡುವಾಗ ಶೀಘ್ರವೇ ಅವನ್ನು ಕಿತ್ತೊಗೆಯುವ ಅಭಿವಚನ ಕೊಟ್ಟಿತ್ತು. ಆದರೆ ಕಿತ್ತೊಗೆಯುವ ಪ್ರಕಟಣೆಯಲ್ಲಿ ನಮೂದಿಸಿದ ದರವಾರ ನೋಡಿ ಮೋಟರ ಉದ್ದಿಮೆಯವರ ಎದೆಹಾರಿದೆ. ಜಕಾತ ಕಟ್ಟೆ ದಾಟಿಹೋದರೆ ಮಾತ್ರ ಜಕಾತನ್ನು ತೆರುವ ಪದ್ಧತಿ. ಈಗ ಜಕಾತಕಟ್ಟೆ ದಾಟದಿದ್ದಾಗ್ಯೂ ಜಕಾತನ್ನು ತೆರಬೇಕಾಗುತ್ತದೆ. ಮೋಟರು ಯಾವದೇ ಕಾರಣದಿಂದ ಓಡಾಟ ನಡೆಸಲಸಮರ್ಥವಾದರೂ ತೆರಿಗೆ ತೆರಬೇಕು. ಮೇಲಾಗಿ ತೆರಿಗೆಯ ಮಾನ ವಿಪರೀತವಿದೆ. ಮುಂಬಯಿಯ, ಲೋರಿಟ್ರಾನ್ಸ್‌ಪೋರ್ಟ ವರ್ಕರ್ಸ ಯೂನಿಯನ್‌ದ ಅಧ್ಯಕ್ಷರು ಪ್ರಕಟಿಸಿದಂತೆ, ರಿಜಿಸ್ಟ್ರೇಶನ್ ಫೀ, ಮ್ಯುನಿಸಿಪಲ್ ತೆರಿಗೆ ಎಂದು ರೂಪಾಯಿ ೨೦೦-೦-೦ರ ಮಟ್ಟಿಗೆ ಮುಂಬಯಿಯಲ್ಲಿ ತೆರುವ ಮೋಟಾರ ಲೋರಿಗಳು ಲೋಕೋಪಕಾರಕ್ಕಾಗಿ ಸರಕಾರವು ಹೊರಡಿಸಿದ ಪ್ರಕಟಣೆಯಂತೆ ರೂಪಾಯಿ ೬೩೨-೮೦೦ರ ಮಟ್ಟಿಗೆ ಈಗ ತೆರಬೇಕಾಗುತ್ತದೆ. ಮೋಟರ ಧಂದೆಯ ಮೇಲೆ ವಿವಿಧ ರೂಪದಿಂದ ತೆರಿಗೆ ಎತ್ತುವಳಿಯಾಗುತ್ತದೆ. ಯಂತ್ರ ಸಾಹಿತ್ಯಗಳ ಮೇಲೆ ಆಮದು ತೆರಿಗೆ, ಪೆಟ್ರೋಲಿನ ಮೇಲೆ, ಮಾರ್ಗಗಳ ತೆರಿಗೆ, ಹೀಗೆ ಭಿನ್ನ ಭಿನ್ನ ರೂಪದಿಂದ ತೆರಿಗೆ ಎತ್ತುವಳಿಯಾಗುವಾಗ, ಸರಕಾರವು ಜಕಾತ ಕಟ್ಟೆಗಳನ್ನು ಕಿತ್ತೊಗೆಯುವ ಉಪಕಾರ ಮಾಡುವಾಗ ನೂತನ ತೆರಿಗೆ ಹೇರುವದು ಮಹದನ್ಯಾಯವಲ್ಲವೇ? ಸರಕಾರವು ಒಂದು ವರ್ಷದ ಪೂರ್ತ ಹೇರಿದ ರಿಜಿಸ್ಟ್ರೇಶನ್ ಫೀ ಈ ವರೆಗೆ ನಡದು ಬಂದು ಈಗ ಅದನ್ನು ಸರಕಾರವು ಹೊಸ ತೆರಿಗೆಯಲ್ಲಿ ಸೇರಿಸಿ ರಕಮು ನಿಶ್ಚಯಿಸಿದೆ. ಕೋಳಿ ನುಂಗಿದ ಕಲ್ಲು ತಿರುಗಿ ಸಿಗಬಹುದು, ಆದರೆ, ಸರಕಾರವು ಹಂಗಾಮಿಯೆಂದು ಇಲ್ಲವೆ ಯಾವದೇ ನೆವದಿಂದ ಒಮ್ಮೆ ಹೇರಿದ ತೆರಿಗೆ ಕಡಿಮೆಯಾಗುವದಿಲ್ಲವಾಗಿ ಜನಾಭಿಪ್ರಾಯವಾದರೆ ತಪ್ಪಾದೀತೇನು? ಸರಕಾರವು ಹಣದ ಅಡಚಣಿ ಎಂದು ಪ್ರಕಟಿಸಿ ನಿರುಪಾಯವಾಗಿದೆಂದು ಸೂಚಿಸುತ್ತದೆ, ಜನವಾದರೂ ಸಂಪತ್ತಿನಿಂದ ತುಂಬಿ ತುಳುಕುತ್ತಾರೇನೆಂಬ ವಿಚಾರ ಬೇಡವೇ? ಮೋಟರಿನ ಬಾಳಿಕೆ ಎಷ್ಟು? ಅದಕ್ಕೆ ತಗಲುವ ನಿತ್ಯ ನೈಮಿತ್ತಿಕ ಖರ್ಚೆಷ್ಟು? ಮೋಟರಿನವರಿಗೆ ಸಿಗುವ ಲಾಭವೆಷ್ಟು ತೆರಿಗೆ ಎಷ್ಟು ತೆರಬೇಕು? ಎಂಬ ಲೆಕ್ಕ ನೋಡದೆ ತೆರಿಗೆ ಹೇರುವದು ತೀರ ಅನ್ಯಾಯವಾದದ್ದು. ಮುಪ್ಸಲ ಇಲಾಖೆಗೆ ಬೊಟ್ಟು ತೋರಿಸಿ ಅಲ್ಲಿಗಿಂತ ಇಲ್ಲಿಯ ದರ ೨೦-೪೦ ರೂಪಾಯಿ ಕಡಿಮೆ ಇರುವದಾಗಿ ಪ್ರತಿಪಾದಿಸುವದು ಪ್ರಶಸ್ತವಲ್ಲ. ಮುಪ್ಸಲ ಇಲಾಖೆಯಲ್ಲಿ ಕೈಕೊಂಡ ಉಪಕ್ರಮವು ಲೋಕಕಂಟಕವಾಗಿದ್ದರೆ, ಮುಂಬಯಿ ಇಲಾಖೆಯವರು ಅದನ್ನು ತಿದ್ದಿಮಾಡಿ ಹಾಕಿಕೊಡಬೇಕು, ಹೊರತು ದುಡ್ಡು ಸಿಗುತ್ತದೆಂದು ಅನ್ಯಾಯದ ಪುರಸ್ಕಾರ ಮಾಡಲಾಗದು. ಈ ಉತ್ಪನ್ನದಿಂದ ಸಿಕ್ಕದ ಹಣ ಹೆಚ್ಚಿನ ಮಾರ್ಗರಚನೆಗಾಗಿ ಖರ್ಚು ಮಾಡಲ್ಪಡುವದೆಂದು ಸರಕಾರದ ಹೇಳಿಕೆ. ಹೆಚ್ಚಿನ ಮಾರ್ಗ ರಚನೆಯಾಗಿ ವಾಹನಸೌಖ್ಯವಾಗುವ ಸಂಗತಿ ಭವಿಷ್ಯದಲ್ಲಿ! ಸದ್ಯಕ್ಕೆ ಮೋಟರ ಉದ್ದಿಮೆಯು ಈ ತೆರಿಗೆ ಸಹಿಸಬಲ್ಲದೇನೆಂಬ ಪ್ರಶ್ನೆ. ಅದನ್ನೇ ಮುಂಬಯಿ ಸರಕಾರವು ಆಳವಾಗಿ ವಿಚಾರಿಸಿ ಜಕಾತ ಕಟ್ಟೆಗಳ ಬದಲಿಗೆ ನೂತನ ತೆರಿಗೆ ಹೇರುವ ವಿಚಾರ ತ್ಯಾಗ ಮಾಡಬೇಕಾಗಿ ನಮ್ಮ ಅರಿಕೆ.

---

೩. ಈ ಪ್ರಕಟಣೆಯಿಂದ ವೇಗವಾಹನೇತರರಿಗೆ ಕೊಂಚ ಉಪಶಾಯವಾಗಿದೆ. ಗಾಡಿ, ಎತ್ತು, ಕುದುರೆ, ಕತ್ತೆ, ಒಂಟೆ ಮೊದಲಾದ ವಾಹನಗಳ ಮೇಲೆ ಪ್ರಾಂತಿಕ ಸರಕಾರದ ಜಕಾತ ಕಟ್ಟೆಗಳಲ್ಲಿ ವಸೂಲಾಗುವ ಸುಂಕ ತಪ್ಪಿದೆ. ಆದರೆ ಮ್ಯುನಿಸಿಪಾಲಿಟಿ, ಲೋಕಲ್ ಬೋರ್ಡು ಮೊದಲಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ವಾಹನ ತೆರಿಗೆಯನ್ನು ಅವು ಈ ನಂತೆ ಮುಂದೆಯೂ ತೆರಬೇಕು. ಇದನ್ನು ಸರಕಾರವು ರದ್ದು ಮಾಡಿದರೆ ಗಾಡಿ ಮೊದಲಾದ ವಾಹನಗಳನ್ನಿಟ್ಟುಕೊಂಡು ಹೇಗೂ ಹೊಟ್ಟೆ ಹೊರೆಯುವ ಬಡಬಗ್ಗರು ಸರಕಾರದ ಉಪಕಾರ ಸ್ಮರಣೆ ಮಾಡುವರು. ಸರಕಾರವು ಈ ವಿಷಯವನ್ನು ಪರಾಂಬರಿಸಬೇಕಾಗಿ ಸೂಚನೆ.

---

೪ ಮುಂಬಯಿಯ 'ಟೈಮ್ಸ' ಪತ್ರಿಕೆಯಲ್ಲಿ ಮಿ| ಜೇ. ಬಿ. ಗ್ರೀವ್ಸರವರು ಮಾಡಿದ ಸೂಚನೆ ವಿಚಾರಾರ್ಹವಿದೆ. ಮ್ಯುನಿಸಿಪಾಲಿಟಿಗಳಲ್ಲಿ ಆಮದು ಸರಕುಗಳ ಮೇಲೆ ತೆರಿಗೆ ಎತ್ತುವಳಿ ಮಾಡುವ ನಿಯಮವಿದ. ಮ್ಯುನಿಸಿಪಾಲಿಟಿಯ ಕಾರ್ಯಕ್ಷೇತ್ರವು ನಿಯಮಿತವಾದದ್ದು. ಮ್ಯುನಿಸಿಪಲ್ ಸೀಮೆಯಲ್ಲಿ ವಾಸಿಸುವ ಜನರು ತಮ್ಮ ಸೌಕರ್ಯ ಪೂರೈಸಿಕೊಳ್ಳಲು ನಿರ್ಮಿಸಿಕೊಂಡ ಸಂಸ್ಥೆಯದು. ಸಂಸ್ಥೆಯ ಸಂಕಲ್ಪದಂತೆಯೂ, ಸಾಮಾನ್ಯ ನೀತಿಯಂತೆಯೂ ಆ ಸಂಸ್ಥೆಯ ಖರ್ಚನ್ನು ಅಲ್ಲಿಯ ರಹಿವಾಸಿಗಳೇ ಪೂರೈಸಬೇಕು. ಆ ಖರ್ಚನ್ನು ಯಾವದೇ ರೂಪದಿಂದ ಮ್ಯುನಿಸಿಪಾಲಿಟಿಯ ಹೊರಪ್ರದೇಶದವರ ಮೇಲೆ ಹಾಕಿಸಲಾಗದು. ಈಗ ಟರ್ಮಿನಲ್ ಟೆಕ್ಸಿನ ಪದ್ಧತಿ ಇದ. ಊರೊಳಗೆ ಖರ್ಚಾಗುವ ಸಾಮಗ್ರಿ ಇರಲಿ, ಪರಊರಿಗೆ ರಫ್ತಾಗಬಂದ ಸರಕಿರಲಿ, ಎಲ್ಲವೂ ಮ್ಯುನಿಸಿಪಾಲಿಟಿಯ ಪ್ರವೇಶ ದ್ವಾರದಲ್ಲಿ ಸುಂಕತೆರಬೇಕು. ಈ ಸುಂಕ ಪ್ರತ್ಯಕ್ಷವಾಗಿ ತೆರುವವರು ಸರಕು ಖರೀದಿ ಮಾಡಿ ತಂದ ವರ್ತಕರು. ಆದರೆ, ಅದನ್ನು ನಿಜವಾಗಿ ತೆರುವವರು ಮ್ಯುನಿಸಿಪಾಲಿಟಿಯ ಸೌಕರ್ಯದ ಲಾಭ ಪಡೆಯದ ಗ್ರಾಮಾಂತರಗಳಲ್ಲಿ ವಾಸಿಸುವ ಒಡ ಬೇಸಾಯಗಾರರು. ಬೇಸಾಯಗಾರರ ಕಡೆಯಿಂದ ಸರಕು ಖರೀದಿ ಮಾಡುವಾಗ ವರ್ತಕರ ಈ ಸುಂಕ ಗೃಹೀತ ಹಿಡಿದು ಆ ಮಾನದಿಂದ ಸರಕಿನ ಬೆಲೆಯನ್ನು ಕಡಿಮೆ ಹಿಡಿಯುತ್ತಾರೆ. ಬೇಸಾಯಗಾರರ ಮೇಲೆ ಮ್ಯುನಿಸಿಪಾಲಿಟಿಯು ತೆರಿಗೆ ಬೀಳಬಾರದೆಂದು ಸರಕಾರದ ಸಂಕಲ್ಪವಿದೆ. ಆದರ ಪ್ರತ್ಯಕ್ಷ ಪರಿಣಾಮ ಮಾತ್ರ ತೀರ ವಿಪರೀತವಾದದ್ದು. ಇದಲ್ಲದ ಈ ಕ್ರಮದಿಂದ ಮತ್ತೊಂದು ಪ್ರಕಾರದಿಂದ ಊರವರಿಗೆ ನಷ್ಟ ಒದಗುತ್ತದೆ. ಮ್ಯುನಿಸಿಪಾಲಿಟಿಯ ಸುಂಕವನ್ನು ತಪ್ಪಿಸಿಕೊಳ್ಳುವದಕ್ಕಾಗಿ ವರ್ತಕರು ತಮ್ಮ ಸರಕುಗಳನ್ನು ಹೊರಮಾರ್ಗಗಳಿಂದ ಸಂಕಲ್ಪಿತ ಸ್ಥಳಗಳಿಗೆ ಸಾಗಿಸುತ್ತಾರೆ. ಉದಾಹರಣಾರ್ಥವಾಗಿ ನಮ್ಮ ಕುಮಟಾ ಬಂದರದ ಪರಿಸ್ಥಿತಿಯನ್ನೇ ವಿಚಾರಿಸಬಹುದು. ಶಿರ್ಸಿ ಮೊದಲಾದ ಘಟ್ಟದ ಮೇಲಿಂದ ಮುಂಬಯಿ ಕಡೆ ರಫ್ತಾಗುವ ಅಡಿಕೆ, ಮೆಣಸು, ಯಾಲಕ್ಕಿ ಮೊದಲಾದ ಸಾಮಾನುಗಳು, ಮುಂಬಯಿಯಿಂದ ಇತ್ತ ಕಡೆ ಹೋಗುವ ಸಕ್ಕರೆ, ಕಟ್ಲರಿ, ಜವಳಿ ಮೊದಲಾದ ಸರಕುಗಳು ನಮ್ಮ ಕುಮಟೆ ಮಾರ್ಗವಾಗಿ ಹೋಗುತ್ತಿದ್ದವು. ಈಗ ಅವೆಲ್ಲ ತದಡಿ ಮಾರ್ಗವಾಗಿ ಆಮದು-ರಫ್ತು ಆಗುತ್ತವೆ. ಬೇರೆಯಾಗಿ ಮ್ಯುನಿಸಿಪಾಲಿಟಿಯ ಸುಂಕದ ಮೂಲಕ ಕುಮಟೆ ಪೇಟೆಯಲ್ಲಿ ಜಿನಸುಗಳ ಧಾರಣೆ ಹೆಚ್ಚು. ಆದರಿಂದ ಹಳ್ಳಿಯವರು ಕುಮಟೆ ಪೇಟೆಯೊಳಗಿಂದ ಜಿನಸು ಖರೀದಿ ಮಾಡುವ ಬದಲಿಗೆ, ತದಡಿ, ಹಗಡೆ ಮೊದಲಾದ ನೆರೆ-ಹೊರೆ ಗ್ರಾಮಗಳಲ್ಲಿಯೇ ಖರೀದಿ ಮಾಡಲಾರಂಭಿಸಿದ್ದಾರೆ. ಹೊನ್ನಾವರ ಪೇಟೆಗಿಂತ ಶಿರ್ಸಿ ಪೇಟೆಯ ವ್ಯಾಪಾರ ಬೆಳೆಯುವ ಕಾರಣವಾದರೂ ಹೊನ್ನಾವರ ಮ್ಯುನಿಸಿಪಾಲಿಟಿಯ ಸುಂಕವೇ. ಇದರಿಂದ ಕುಮಟಾ-ಹೊನ್ನಾವರ ಪಟ್ಟಣಗಳಲ್ಲಿ ದಲಾಲಿ, ವ್ಯಾಪಾರ, ಕೂಲಿ ನಡಿಸಿ ಜೀವನೋಪಾಯ ಮಾಡುವ ಸಾವಿರಾರು ಜನರು ನಿರುದ್ಯೋಗಿಗಳಾಗಿದ್ದಾರೆ. ಊರ ಸುಖಸೌಕರ್ಯಗಳಿಗಾಗಿ ನಿರ್ಮಾಣವಾದ ಮ್ಯುನಿಸಿಪಾಲಿಟಿಯಿಂದ ಮ್ಯುನಿ

ಸಿಪಾಲಿಟಿಯ ಸೀಮೆಯೊಳಗಿನ ಪಟ್ಟಿ ಹೆಚ್ಚಿನ ಒಡ್ಡಲು, ಅದು ಕುಗ್ಗದೆ ಕವಟ ಪೇಟೆಗಿಂತ ಜಾಸ್ತಿ ಸುಗಳು ತರುವಿ, ಹೆಗಡೆ ಮಾಡಬಾರದವರಲ್ಲಿ ಹೆಚ್ಚಾಗಿ ಸಿಗತೊಡಗಿದ ಒಟ್ಟಿಕ ಕವಟ ಪೇಟೆ ವ್ಯಾಪಾರದ ವ್ಯಕ್ತಿತ್ವವಾಗಿ ತಗ್ಗಿದರೆ ಅಷ್ಟು ಯೋಗ್ಯವಲ್ಲ ಮಿ| ಗೀನ್ಸರವರು ಪ್ರತಿಪಾದಿಸಿದಂತೆ ಹೊರಗಿನಿಂದ ಬರುವ ದಕ್ಕಿತರ ಜಕಾತಿ ವಿಚಾರ ಮಾಡಿ ವ್ಯಾಪಾರ ಪ್ರವೇಶ ಸಂಕಟ ಪದ್ಧತಿ ತಪ್ಪು ಬಾಸಿವಾ ಸಿ ಕಲ್ಯಾಣ ಬಂದ ಬಳಿಕ ವ್ಯಕ್ತಿ ಇದ್ದ ತಪ್ಪು ಆದರೆ ಪವ್ಯಾಸಿಪಾಲಿಟಿ ಇಷ್ಟ ಊರಿನ ಒಳಗಿಂದ ಪರಊರಿಗೆ ರಫ್ತಾಗುವ ಜಿನಸುಗಳ ಮೇಲೆ ಯಾವದೇ ಪ್ರಕಾರದ ಸುಂಕವನ್ನು ಎತ್ತುವ ಮಾಡಕೂಡದು ಸುಂಕ ಎತ್ತುವಿಕೆಯಾಗದಂತೆ ಸರಕಾರವು ಉಪಾಯ ಯೋಜನ ಮಾಡಬೇಕಾಗಿ ಮಿ ಗ್ರೀನ್ಸರವರು ಮಾಡಿದ ಸಿನಂತಿಯನ್ನು ನಾವು ಅಂತಃಕರಣಪೂರ್ವಕ ಮನ್ನಿಸುತ್ತೇವೆ

ಘಟ್ಟದ ಮೇಲಿನ ತೀರ್ವೆ ತಿದ್ದುಪಡಿಯ ಚೌಕಶಿ.

ಘಟ್ಟದ ಮೇಲಿನ ಶಿರ್ಸಿ, ಸಿದ್ದಾಪುರ ಮತ್ತು ಯಲ್ಲಾಪುರ ಈ ಮೂರು ತಾಲೂಕುಗಳಲ್ಲಿ ಸೆಟ್ಲಮೆಂಟ ಆಫೀಸರರ ಶಿಫಾರಸು ತೀರ್ವೆ ದ್ದಿನ ಚೌಕಶಿಯ ಕ್ರಮ ನಡೆದಿದ ನಮ್ಮ ಓದುಗರಿಗೆ ಗೊತ್ತಿದೆ ಸೆಟಲಮೆಂಟ ಆಫೀಸರರಾಗಿದ್ದ ಮಿ| ದೇಸಾಯಿಯವರು ಈ ಚೌಕಶಿಯನ್ನು ನಡಿಸುತ್ತಿದ್ದಾರೆ ಈ ವಿಷಯ ಕೆಲವು ಸಂಗತಿಗಳನ್ನು ಸಮಜಾಯಿಸುವದು ಅವಶ್ಯಕ

ಸಾವೇ ಶೂಲ! ಎಂಬ ಲೋಕೋಕ್ತಿಯಲ್ಲಿ ತೀರ್ವೆ ಆಕರಣ ಮತ್ತು ವಸೂಲಿಗಳ ಕುರಿತು ಸಾಮಾನ್ಯ ವಿಚಾರಗಳನ್ನು ನಾವು ಪ್ರಕಟಿಸಿದ್ದೇವೆ ಬೇರೆ ಬೇರೆ ಪ್ರಾಂತ, ಬೇರೆ ಬೇರೆ ದೇಶಗಳೊಳಗಿನ ತೀರ್ವೆ ಎತ್ತುವಿಕೆಯ ಕ್ರಮ ವನ್ನು ಪರಿಶೀಲಿಸಿದ್ದೇವೆ ತೀರ್ವೆ ಎತ್ತುವಿಕೆಯು ವಿಷಯವು ಬೇಸಾಯಗಾರರ ಜೀವನದ ವಿಷಯವಾದ್ದರಿಂದ ಈ ಕುರಿತು ಚರ್ಚೆ ಎಷ್ಟು ನಡೆದರೂ ಕಡಿಮೆ ತೀರ್ವೆ ಆಕರಣೆಯ ಪದ್ಧತಿಯನ್ನು ಆಮೂಲಾಗ್ರ ವಿಚಾರಿಸಿ ಹೊಸ ಪದ್ಧತಿಯನ್ನು ಸೃಷ್ಟಿಸುವ ಸಮಯ ಈಗ ಬಂದಿದೆ ಬೇರೆ ಬೇರೆ ಕಡೆಗಳಲ್ಲಿ ಈ ಉಪಕ್ರಮ ನಡೆದಿದೆ ಇಂಥ ಪರಿಸ್ಥಿತಿಯಲ್ಲಿ ನಮ್ಮ ಮುಂಬಯಿ ಸರಕಾರವು ಶಿರ್ಸಿ ಸಿದ್ದಾಪುರ, ಯಲ್ಲಾಪುರ ತಾಲೂಕುಗಳ ತೀರ್ವೆ ತಿದ್ದುಪಡಿಗಾಗಿ ನೂತನವಾದ ವಿಶಾಲ ದೃಷ್ಟಿಯ ಚೌಕಶಿ ಮಂಡಳವನ್ನೇ ನೇಮಿಸಿ ವಿಚಾರಕ್ರಮ ನಡಿಸಿದರೆ ಸಮಂಜಸವಾಗಿತ್ತು ಈಗಿನ ಪದ್ಧತಿಯಲ್ಲಿಯೇ ಸೆಟಲಮೆಂಟ ಆಫೀಸರರ ಚೌಕಶಿಯಿಂದ ಬೇಸಾಯಗಾರರ ಕಲ್ಯಾಣವಾಗುವದು ಅಶಕ್ಯವಲ್ಲಾದರೂ ದುರಾಪಾಸ್ತವಾದುದು

ಈಗಿನ ಪದ್ಧತಿಯ ವಿಚಾರವನ್ನೇ ಔದಾರ್ಯದಿಂದ ನಡಿಸಿದರೂ ಕೆಲ ಮಟ್ಟಿಗೆ ಬೇಸಾಯಗಾರರ ಕಷ್ಟಪರಿಹಾರವಾಗುವಂತಿದೆ ಆದರೆ ಮಿ|ದೇಸಾಯಿಯವರು ಕೆಲ ಹಳ್ಳಿಗಳನ್ನು ಮಾದರಿ ಎಂದು ಗೃಹೀತ ಹಿಡಿದು, ಆ ಹಳ್ಳಿಗಳಲ್ಲಿ ಮಾತ್ರ ತಿರುಗಾಡುತ್ತ ಅಲ್ಲಿ ಒಬ್ಬರು ಒರೆಯುತ್ತಾರೆ, ಆ ಹಳ್ಳಿಗಳ ಗೇಣಿಯ ಮಾನ, ಭೂಮಿ ವಿಕ್ರಯದ ಮಾನಗಳನ್ನು ವಿಚಾರಿಸಿ ಆ ಪ್ರದೇಶದೊಳಗಿನ ತೀರ್ವೆ ನಿರ್ಣಯಿಸುವ ಕಲ್ಪನೆ ಮಾಡಿರುವರಂತೆ ಈ ಪದ್ಧತಿ ದೋಷಾಸ್ಪದವಿದೆ ಗೇಣಿಯ ಮೊಬಲಗಿನ ಮೇಲಿಂದ ತೀರ್ವೆ ಆಕರಣೆ ಮಾಡುವದು ಗಂಡಾಂತರಪ್ರದವಿದೆ ಮಿ| ದೇಸಾಯಿಯವರು ದೀರ್ಘಾಲೋಚನ ಮಾಡಿದರೆ ಅವರಿಗೂ ತಪ್ಪು ತಿಳಿದುಬರುವಂತಿದೆ

ಈಗಿನ ಅಡಚಣೆಯ ದಿವಸಮಾನದಲ್ಲಿ ರೈತರು ತಮ್ಮ ಭೂಮಿಗಳನ್ನು ಸಾವಕಾರರಿಗೆ ಸ್ವಾಧೀನ ಮಾಡಿ ಅವರಿಂದ ಆ ಭೂಮಿಯನ್ನು ಖಾಸ ಗೇಣಿಗೆ ಪಡೆದಿದ್ದರೆ ಗೇಣಿಯನ್ನು ನಿಶ್ಚಯಿಸುವಾಗ ಭೂಮಿಯ ಉತ್ಪತ್ತಿ ಎಷ್ಟು? ಆ ರೈತನಿಗೆ ತಗಲುವ ಖರ್ಚೆಷ್ಟು? ... ನೋಡದೆ ಸಾವಕಾರರಿಂದ ಸಾಲ ತಗೆದು ಒತ್ತಾಯದಿಂದ ಆ ಗೇಣಿಯ ಮಾನ ನಿಶ್ಚಯಿಸಲ್ಪಟ್ಟಿದ ಬಗ್ಗೆ ಅನೇಕ ಉದಾಹರಣೆಗಳನ್ನು ಕೊಡಬಹುದು ೧೯೦೭ ನೇ ಇಸವಿಯಲ್ಲಿ ಗೇಣಿಯ ಮೊಬಲಗಿನ (*Profits of Agriculture*) ಬಗ್ಗೆ ಸರಕಾರದ ಧೋರಣವು ಎಷ್ಟೋ ಎಣಿಸಲಿಲ್ಲ ಈಗಂತೂ ಈ ಗೇಣಿ ತೆರಲಿಕ್ಕೆ ಸಹ ರೈತರು ಶಕ್ತರಾಗಿದ್ದಿಲ್ಲ ಕೋರ್ಟ ನಡಿಸುತ್ತಿದ್ದರೆ ಅಕ್ಷರಶಃ ಮಾವ ಲೋಕಾಂತರ ಕಚೇರಿಯಲ್ಲಿಯೂ ಸಂಬಂಧಪಟ್ಟ ಸಿವಿಲ್ ಕೋರ್ಟಗಳಲ್ಲಿಯೂ ಚೌಕಶಿ ನಡಿಸಿದ್ದಲ್ಲಿ ಈ ಸಂಗತಿ ಸಿದ್ಧವಾಗುವಂಥ ಹಲವು ದಾವೆಗಳಲ್ಲಿ ಹಲವು ವರ್ಷಗಳ ತನಕ ರಕಮು ವಸೂಲ ಬರದೆ ಬಾಕಿ ಬಿದ್ದದ್ದನ್ನು ಕಾಣಬಹುದು ಮಿ ದೇಸಾಯಿಯವರು ಗೇಣಿಯ ವಿಚಾರ ಮಾಡುವಾಗ ಗೇಣಿಗೆ ಒರಕೆ ಬಿಡ ಸಾವಕಾರರ ಕರೆಸಿಕೊಂಡು ಗೇಣಿಯ ಮೂಲವನ್ನು, ಗೇಣಿಯ ವಸೂಲಿಯನ್ನೂ ಪರಿಶೋಧಿಸಬೇಕಾಗಿ ಸೂಚನೆ

ಮಿ| ಎಸ್ ಜಿ ಎಚ್, ಎಂಡರಸನ್‌ರವರು ಮುಂಬಯಿಯ ಕಂದಾಯ ಖಾತೆಯ ತಜ್ಞರು ಅವರು ಬರೆದಿರುವ ಪುಸ್ತಕವು ಕಾಲದಲ್ಲಿ (*Facts and fallacies*) ಸತ್ಯ ಸಂಗತಿ ಮತ್ತು ಭ್ರಮೆಗಳು ಎಂಬುದೊಂದು ಚಿಕ್ಕ ಪುಸ್ತಕ ಬರೆದು ಮುಂಬಯಿ ಇಲಾಖೆಯೊಳಗಿನ ಈಗಿನ ತೀರ್ವೆ ಎತ್ತುವಿಕೆಯ ಪದ್ಧತಿ ತೀರ ಯೋಗ್ಯವಾದದ್ದೆಂದು ಪ್ರತಿಪಾದಿಸಿದ್ದಾರೆ ಆ ಪ್ರತಿಪಾದನೆ ಬಗ್ಗೆ ಮತಭೇದವಿರುವದು ಸಹಜವಿದೆ ಆದರೆ ಆ ಗ್ರಂಥದಲ್ಲಿ ಅವರು ಬರೆದ ಒಂದೆರಡು ಮಾತುಗಳು ಮನನೀಯವಿವೆ "ಕಂದಾಯದ ಪದ್ಧತಿಯು ಪ್ರತ್ಯಕ್ಷ ಸಾಗುವಳಿ ಮಾಡುವ ಬೇಸಾಯಗಾರನ ಜೀವನ ಖರ್ಚಿಗೆ ಸ್ಪರ್ಶಿಸುವದಿಲ್ಲ ಆದರೆ ಯೋಗ್ಯ ಪ್ರತಿಫಲಕ್ಕೆ ಮಿಕ್ಕಿ ಬೇಸಾಯಗಾರರಿಗೆ ಸಿಗುವ ಲಾಭದ ಮೇಲೆ ಈ ಪದ್ಧತಿ ರಾಜಾರ್ಥ ವಸೂಲ ಮಾಡದೆ ಬಿಡುವದಿಲ್ಲ" (*The Land Revenue system never touches the subsistence of the worker but it does prevent any worker from getting away with too much of the unearned in come in excess of the just remuneration for his work para 193*) ಜೀವನಕ್ಕೆ ತಗಲುವ ಖರ್ಚನ್ನು ಶೋಧಿಸುವ ಪದ್ಧತಿಯನ್ನೂ ಮಿ| ಎಂಡರಸನ್‌ರವರು ನಮೂದಿಸಿದ್ದಾರೆ " ಇಡೀ ವರ್ಷ ಬೇಸಾಯ ಮಾಡಿ ಹೆಂಡರು–ಮಕ್ಕಳು, ದನಕರುಗಳು ಸಂಸಾರ ಖರ್ಚಿಗೆ ತಕ್ಕಷ್ಟು ಉತ್ಪತ್ತಿ ಕೊಡಬಲ್ಲ ಕನಿಷ್ಟ ಪ್ರತಿಯ ಭೂಮಿ ಕಂದಾಯ ಎತ್ತುವಳಿಗೆ ಅನರ್ಹವಾದುದು ಇಷ್ಟೇ ಭೂಮಿಗೆ ಇಷ್ಟೇ ಪರಿಶ್ರಮದಿಂದ ಇದಕ್ಕೂ ಹೆಚ್ಚಿಗೆ ಉತ್ಪತ್ತಿಯಾಗುವ ಉಚ್ಚ ಪ್ರತಿಯ ಭೂಮಿಯೆಲ್ಲ ಉಚ್ಚತೆಯ ಮಾನದಂತೆ ತೀರ್ವೆಗೆ ಪಾತ್ರವಿದೆ [*The poorest land when cultivated by a full year's work and paying no rent gives on an average the standard minimum on which an agriculturist can work and live All other land yields more (para 206)*

ಮಿ| ಎಂಡರಸನ್‌ರವರ ಈ ಸಿದ್ಧಾಂತಗಳನ್ನು ಮಿ| ದೇಸಾಯಿಯವರು ವಿಚಾರ ಮಾಡಬೇಕು ತೀರ್ವೆ ತಿದ್ದುಪಡಿಯ ವಿಚಾರ ಮಾಡುವಾಗ ಭೂಮಿಯ ಉತ್ಪತ್ತಿ ಎಷ್ಟು? ಆ ಭೂಮಿಗೆ ಅಷ್ಟು ಉತ್ಪತ್ತಿ ಮಾಡಲಿಕ್ಕೆ ತಗಲುವ ಜನ—ಜಾನುವಾರಗಳೆಷ್ಟು? ಅವರಿಗಾಗಿ ತಗಲುವ ಖರ್ಚೆಷ್ಟು? ಎಂಬುದನ್ನು ಕೂಲಂಕೂಷವಾಗಿ ಪರಿಶೋಧಿಸಬೇಕು ಕನಿಷ್ಟ ಪ್ರತಿಯ ಭೂಮಿಯ ಪರಿಶೋಧ ಮಾಡಿ ಉಚ್ಚತೆಯ ಮಾನವನ್ನು ನಿರ್ಧರಿಸಬೇಕು ಗೇಣಿ–ಕ್ರಯಗಳ ಮೊಬಲಗಿನ ಲೆಕ್ಕ ಹಿಡಿದು ತೀರ್ವೆ ಆಕರಣೆ ಮಾಡುವದು ಸರಿಯಾದುದಲ್ಲ

ಘಟ್ಟದ ಮೇಲಿನ ಸ್ಥಿತಿ ತೀರ ಕೆಂಗೆಟ್ಟಿದೆ ಬೇಸಾಯದಿಂದ ಬೇಸಾಯಗಾರರಿಗೆ ಇತ್ತ ಜೀವನ ಸಾಗಿಸುವದು ಕಷ್ಟವಾಗಿ ಜನರು ಸಾಲದಲ್ಲಿ ಮುಳುಗಿಕೊಂಡಿದ್ದಾರೆ ಹಲವರು ತಮ್ಮ ಭೂಮಿಗಳನ್ನು ಸಾವಕಾರರಿಗೆ ಮಾರಿ ಬಿಟ್ಟಿದ್ದ ಬಗ್ಗೆ ಅವನ್ನು ಗೇಣಿಗೆ ಪಡೆದು ಗೇಣಿ ಸಹ ತೆರಲಾರದೆ ಒದ್ದಾಡುತ್ತಿದ್ದಾರೆ ವರ್ಷಾನುವರ್ಷ ಹೆಚ್ಚೆಚ್ಚು ಭೂಮಿ ಬಂಜರು ಬೀಳಲಾರಂಭಿಸಿದೆ ೧೯೨೭ ನೇ ಇಸವಿಯಲ್ಲಿ ೨,೪೦,೩೯೦ ಎಕರೆ ಭೂಮಿ ಸಾಗುವಳಿಯಾಗುತ್ತಿತ್ತು, ೩೦ ವರ್ಷಗಳಲ್ಲಿ ಅದು ೧,೯೬,೨೪೯ ಕ್ಕೆ ಇಳಿಯಿತು ಅಡಿಕೆಯ ತೋಟದ ಪ್ರದೇಶವು ೧೯೦೯ ನೇ ಇಸವಿಯಲ್ಲಿ ೩೪,೭೫೩ ಎಕರೆ ಇತ್ತು, ೩೦ ವರುಷಗಳಲ್ಲಿ ಅದು ೨೪,೯೩೦ ಕ್ಕೆ ಬಂದು ನಿಲ್ಲಿತು ಇತ್ತ ೩೦ ವರ್ಷಗಳಲ್ಲಿ ಎಷ್ಟು ಭೂಮಿ ಬಂಜರು ಬಿದ್ದಿದೆ ಆ ಲೆಕ್ಕ ಇನ್ನೂ ಪ್ರಕಟವಾಗಲಿಲ್ಲ ಲೋಕ ಸಂಖ್ಯೆ ಸಹ ಕುಗ್ಗಿತು ೧೯೩೧ ನೇ ಇಸ್ವಿಯ ಜನಗಣತಿಯಂತೆ ೧,೪೪,೭೭೪ ಲೋಕ ಸಂಖ್ಯೆಯಿದೆ ೧೮೮೧ ನೇ ಇಸ್ವಿಯಲ್ಲಿ ೧,೯೫,೫೩೭ ಜನರಿದ್ದರು ಭೂಮಿ–ಜನರೊಡನೆ ಬೆಳೆಯ ಮಾನವೂ ಕುಗ್ಗಿತು ಅದರಿಂದ ರಫ್ತಿನ ಸರಕು ಕುಗ್ಗಿತು ೧೯೦೩ ನೇ ಇಸ್ವಿಯಲ್ಲಿ ೧೯,೫೦೭ ಖಂಡಿ ಅಡಿಕೆ ೫,೮೧೦ ಖಂಡಿ ಮೆಣಸು, ೩೩೩ ಖಂಡಿ ಯಾಲಕ್ಕಿ ರಫ್ತಾಗಿತ್ತು ೧೯೩೦ ನೇ ಇಸ್ವಿಯಲ್ಲಿ ೧೬,೮೭೪ ಖಂಡಿ ಅಡಿಕೆ, ೧,೪೪೦ ಖಂಡಿ ಮೆಣಸ ೫೨ ಖಂಡಿ ಯಾಲಕ್ಕಿ ಹೀಗೆ ರಫ್ತಾಯಿತು ಈ ರಫ್ತು ಇತ್ತ ಮತ್ತೂ ಕುಗ್ಗಿದೆ ಮುಂಬಯಿಗೆ ಸಿಂಗಾಪುರದಿಂದ ಅಡಿಕೆ ಹೋಗಲು ಆರಂಭಿಸಿದ ೩೦ ವರ್ಷದಿಂದಲೂ ಅಡಿಕೆ ಮುಂಬಯಿ ಕಡೆ ರಫ್ತಾಗುತ್ತಿದೆ, ಸರಾಸರಿ ೬೦ ಸಾವಿರ ಖಂಡಿ ಇತ್ತ ೨ ವರ್ಷಗಳಲ್ಲಿ ಮುಂಬಯಿಗೆ ರಫ್ತಾಯಿತೆಂದು

ಹೇಳುತ್ತಾರೆ ಹೀಗಾಗಿ ನಮ್ಮ ಕಡೆ ಅಡಿಕೆ ಬಿಟ್ಟ ತರಗತಿಯವಿದ್ದರೂ ಅದಕ್ಕೆ ತಕ್ಕದ್ದಾಗಿ ದರ ಬಂದಿಲ್ಲ. ಬೇಸಾಯಗಾರರು ಕಷ್ಟಕ್ಕೀಡಾಗಿದ್ದಾರೆ ಒಂದು ಖಂಡಿ ಅಡಿಕೆಗೆ ೨೦೦ ರೂ. ದರ ಕೊಂಡವರು ಈಗ ಬರೇ ೬೦-೭೦ ರೂ.ಕ್ಕೆ ಒಂದರಿಂದ ರೂಪಾಯಿಗಳನ್ನು ಕೊಂಡು ಮನೆಗೆ ಹೋಗಬೇಕಾಗಿದೆ. ಅಡಿಕೆ ದರ ಈ ವೇಳೆ ಬೀಳದು ನಿಂತ ಅಡಿಕೆ ಕೊಯ್ಯುವ ಮಜೂರಿ ಟಕ್ಕೆ ತಯಾರಿಸಿದ ಖರ್ಚು ಹುಟ್ಟುವದು ಕಠಿಣ. ಮಿ| ಕೊಲಿನ್ಸರವರು ೧೯೩೭ ನೇ ಇಸ್ವಿಯಲ್ಲಿ ಬೇಸಾಯಗಾರರ ಆಯ ವ್ಯಯಪತ್ರದ ಲೆಖ್ಖ ಮಾಡಿದ್ದರು ಅದರಂತೆ ಪ್ರತಿ ಒಂದು ಎಕ್ರೆ ತೋಟಕ್ಕೆ ರೂಪಾಯಿ ೨೫೮ ಖರ್ಚು, ರೂ ೪೭೭ ಉತ್ಪನ್ನ ಬರುತ್ತದೆ. ೧೯೩೪ ನೇ ಇಸ್ವಿಯ ಈಚೆ ದರ ಬಿದ್ದಂದಿನಿಂದ ಉತ್ಪನ್ನದ ಮಾನ ರೂಪಾಯಿ ೨೨೭ ಕ್ಕೆ ಇಳಿಯಿತು. ಖರ್ಚು ಆ ಮಾನದಿಂದ ತಗ್ಗಲಿಲ್ಲ. ಮೇಲಾಗಿ ಕೊಳೆ ರೋಗದ ಬಾಧ ತಪ್ಪಿ. ಮಿ| ಕೊಲಿನ್ಸರವರ ಲೆಖ್ಖದಂತೆ ಉತ್ಪನ್ನ ಕೈಸೇರಿದ್ದಲ್ಲಿ ಪ್ರತಿ ಎಕರೆಗೆ ರೂಪಾಯಿ ೭೧೯ ನಷ್ಟ ಸಹಿಸಬೇಕು. ಈ ಪ್ರಕಾರ ಘಟ್ಟದ ಮೇಲಿನ ಸ್ಥಿತಿಯಾಗಿದೆ.

ಮಿ| ಜೇಸಾಯಿ ಮನೆಯ ಬೇಸಾಯಗಾರರ ಸಾಮಾನ್ಯ ಪರಿಸ್ಥಿತಿಯನ್ನು ವಿಚಾರಿಸಬಹುದು. ಬರೀ ಬೇಸಾಯದಿಂದಲೇ ಜೀವನೋಪಾಯ ಮಾಡುವವರು ಸಾಲಗಾರರಾದ ಪರಿಸ್ಥಿತಿಯಲ್ಲಿ ತೀರ್ವೆಯ ಮಾನ ಏರಿದಷ್ಟು ಎಂದು ಎಣಿಸಲೇಬೇಕು. ದಾರಿದ್ರ್ಯವನ್ನು ಯಾರೂ ಬರಮಾಡಿಕೊಳ್ಳುವದಿಲ್ಲ. ಉಪಾಯವಿಲ್ಲದೆ ಜನರು ಉಪವಾಸವನ್ನು ಸಹಿಸುತ್ತಾರೆ. ಅಡಿಕೆ ತೋಟಗಳು ನಮ್ಮ ಜಿಲ್ಹೆಯೊಳಗಿನ ದೊಡ್ಡ ಸಂಪತ್ತು, ವರ್ಷಾಸನ ೧೦ ಲಕ್ಷ ರೂಪಾಯಿ ಇತ್ತ ಕಡೆ ಬರಬಹುದು. ಇದನ್ನು ಜೋಪಾನ ಮಾಡುವದು ಸರಕಾರದ ಕರ್ತವ್ಯವಿದೆ. ಬೇಸಾಯಗಾರರಿಗೆ ಈ ಉದ್ದಿಮೆಯಿಂದ ಪ್ರತಿಫಲ ತಿಗುವಂತೆ ಏರ್ಪಾಟಿಂಗ ವಿನ್ಹರ ಈ ಉದ್ದಿಮೆ ನಿರ್ನಾಶವಾಗುವದೆಂದು ಬೇರೆ ಹೇಳಬೇಕಾಗಿಲ್ಲ. ಜನರು ಉಪವಾಸದ ಕಷ್ಟಗಳನ್ನು ಎಲ್ಲಿಯ ತನಕ ಸಹಿಸ್ಯಾರು? ಇದನ್ನೆಲ್ಲ ಪರಾಂಬರಿಸಿ ವಿಶಾಲ ದೃಷ್ಟಿಯಿಂದ ತೀರ್ವೆ ಇಳಿಸುವದರ ವಿಚಾರವಾಗುವದವಶ್ಯ. ಮಿ| ಜೇಸಾಯಿಯವರಂಥ ಪರಂಪರಾಗತ ಪದ್ಧತಿಬದ್ಧ ಸೆಟ್ಲಮೆಂಟ ಆಫೀಸರರ ಕಡೆಯಿಂದ ದೀರ್ಘ ವಿಚಾರ ನಡೆಯದು, ಅದನ್ನು ಅಪೇಕ್ಷಿಸುವದೂ ಸರಿಯಲ್ಲ. ಮುಂಬಯಿ ಸರಕಾರವು ಪುನರ್ವಿಚಾರ ಮಾಡಿ ತಜ್ಞರ ಚೌಕಸಿ ಮಂಡಳಿಯೊಂದನ್ನು ನೇಮಿಸಿ ತೀರ್ವೆ ತಿದ್ದುಪಡಿಯ ಕ್ರಮವನ್ನು ಕೈಕೊಳ್ಳಬೇಕಾಗಿ ಸ್ಪಷ್ಟ ಸೂಚಿಸುತ್ತೇವೆ. ಅಂದರೆ ಮಾತ್ರ ಘಟ್ಟದ ಮೇಲಿನ ಪ್ರಜೆಗಳು ಬದುಕು-ಬಾಳ್ವೆ ಮಾಡಿಕೊಂಡು ಉಳಿದಾರು.

[೩ ನೇ ಕಾಲಮಿನಿಂದ ಮುಂದರಿಸಿದ್ದು]

ಇತ್ತೀಚೆ ಆಬ್ಬೇಸಿನಿಯಾ ದೇಶದ ಬಾಲ್ಕನ್ ಪ್ರದೇಶ, ಆಡ್ರಿಯಾಟಿಕ್ ಸಮುದ್ರದ ದಂಡೆಗಿದೆ. ಅಲ್ಲಿ ಇಟಾಲಿಯ ಪ್ರಸ್ಥ ಬೆಳಸಬೇಕಾಗಿ ಮುಸೋಲಿನಿಯವರ ಪ್ರಯತ್ನ. ರುಸ್ಯರ ಸಂಪ್ರದಾಯ ನೆಲಿಸ ಪದಕ್ಕಾಗಿ ಸೋವಿಯೆಟ್ ಸರಕಾರದ ಕಾರಸ್ಥಾನ ನಡೆದಿದೆ. ಹೊರಿಯಲ್ಲಿ ಗ್ರೀಸ ದೇಶವಿದೆ. ಗ್ರೀಕರಿಗೂ ಆಲ್ಬೇನಿಯಾದವರಿಗೂ ಸೆಟ್ಟೊಲ್ಲ. ಈ ಪ್ರಕರಣವನ್ನೂ, ಜಪಾನದ ಕಾರಸ್ಥಾನವನ್ನೂ ವರ್ಣಿಸಲು ಸಮಯವಿಲ್ಲದ್ದರಿಂದ ಇಷ್ಟಕ್ಕೇ ನಾನು ಇಂದಿಗೆ ವಿರಾಮ ಪಡೆಯುತ್ತೇನೆ.

ನಾಳಿನ ರವಿವಾರ.

[ನಿರೀಕ್ಷಕನು ಬರೆದುದು]

ಸಾರ ಪ್ರದೇಶದೊಳಗಿನ ಮತದಾನದ ಸಮಯ ತೀರ ಸಮೀಪಿಸಿ ಬಂತು. ಬರುವ ರವಿವಾರವೇ ಅಲ್ಲಿ ಮತದಾನದ ಗಲಾಟೆ. ಸುಖದಿಂದ ಮತದಾನವಾಗಬೇಕೆಂದು ಎಲ್ಲರದೂ ಆಶೆ. ಆದರೆ ಸುಖದಿಂದ ಅದು ಪಾರಗಂಡೀತೆಂದು ನಾ ಹೇಳಲಾರೆ. ಕಲ್ಲಿದ್ದಲಿ, ಕಬ್ಬಿಣ ಮೊದಲಾದ ಖನಿಜ ಸಂಪತ್ತುಗಳಿಂದ ತುಂಬಿ ತುಳುಕುವ ಐಶ್ವರ್ಯ ಭರಿತ ಸಾರ ಪ್ರದೇಶದ ಸ್ವರಾಜ್ಯಾಧಿಕಾರವನ್ನು ಜರ್ಮನಿಗೆ ಒಪ್ಪಿಸದಂತೆ ಕಾರಸ್ಥಾನಗಳು ಒಳಗಿಂದೊಳಗೆ ನಡೆಯುತ್ತವೇನೆಂಬುದೊಂದು ಸಂದೇಹ ಹುಟ್ಟಿದೆ. ಜರ್ಮನರೆಂತು ಸಾರ ಪ್ರದೇಶವನ್ನು ಕೈವಶ ಮಾಡಿಕೊಳ್ಳಲು ನಾನಾ ಉದ್ಯೋಗ ನಡೆಸಿದ್ದಾರೆ. ಮತದಾರರಿಗೆ ಕರಕರಲಿಕ್ಕಾಗಿ ಒಂದು ಲಕ್ಷ ಸವನು ಖರ್ಚು ಮಾಡಲು ತಯಾರಾಗಿದ್ದಾರೆ. ಈ ಪ್ರದೇಶವು ಜರ್ಮನರ ವಶವಾಗದಿದ್ದಲ್ಲಿ ಯುರೋಪ ಖಂಡದ ಶಾಂತತೆ ಭಂಗವಾಗುವದೆಂದು ಪಾರ್ಲಿಮೆಂಟಿನ ಸಭಾಸದರಾದ ಮಿ| ರೊಬರ್ಟ ಬರ್ನೇಸರವರು 'ಜೋನ್ ಲಂಡನ್ನ ವೀಕ್ಲಿ' ಪತ್ರಿಕೆಯಲ್ಲಿ ಬರೆಯುತ್ತಾರೆ. ಇಲೆಕ್ಷನ್ ಮಂಡಳದವರು ಸಾರ ಸೀಮೆಯಲ್ಲಿ ಮುಂದಾಗಿ ಅಪ್ಪಣೆ ಪಡೆಯದೆ ಯಾರೂ ಸೇರಕೂಡದೆಂದು ಪ್ರತಿಬಂಧಿಸಿದ್ದಾರೆ. ನಾಕ ಪೋಲಿಸರು ಒಟ್ಟುಸೇರಿ ಗಲಾಟೆ ಮಾಡಬಹುದೆಂದು ಈ ಮುಂಜಾಗ್ರತೆ ಕೊಳ್ಳಬೇಕಾಗಿರುವದಂತೆ! ಜನವರಿ ೧ ನೇ ತಾರೀಖಿಗೆ ಜರ್ಮನ್ ಪಕ್ಷಪಾತಿಗಳಿಗೂ ವಿರೋಧಿಗಳಿಗೂ ಮುಖ್ಯ ಪಟ್ಟಣವಾದ ಸಾರಬ್ರುಕನದಲ್ಲಿ ಕಲಹವಾಯಿತು. ಗುಂಡುಗಳು ಹಾರಿದವು. ಕೆಲವರಿಗೆ ಸೆರೆ ಹಿಡಿಯಲಾಗಿದೆ. ಇದೇ ಪ್ರಕಾರ ಗ್ರಾಮಾಂತರಗಳಲ್ಲಿಯೂ ಚಿಕ್ಕ-ಪುಟ್ಟ ಕದನಗಳಾದ ವಾರ್ತೆ ಇವೆ. ೬ ಮಂದಿ ಪೋಲೀಸರಿಗೆ ಪದಚ್ಯುತ ಮಾಡಲಾಗಿದೆ. ಜರ್ಮನರು ಫಕ್ಕನೆ ಫ್ರಾನ್ಸ ದೇಶದ ಮೇಲೆ ದಂಡೆತ್ತಿ ಬರಬಾರದೆಂದು ಜರ್ಮನಿ, ಫ್ರಾನ್ಸ ದೇಶಗಳ ನಡುವೆಯಿರುವ ರ್‍ಹೈನ ನದಿಯ ಮೇಲಿನ ಹಂಗಾಮಿ ಸಂಕಗಳನ್ನೆಲ್ಲ ಮುರಿದುಹಾಕಬೇಕೆಂದು ಫ್ರಾನ್ಸ ದೇಶದ ಯುದ್ಧ ಇಲಾಖೆಯವರು ನಿರ್ಧರಿಸಿದ್ದಾರೆ. ಆರು ಕಡೆ ಶಾಶ್ವತ ಸಂಕಗಳಿವೆ. ಅವುಗಳನ್ನು ದಾಟಿ ಜರ್ಮನರು ಫ್ರಾನ್ಸದಲ್ಲಿ ಸಾಗಬಾರದೆಂತೆ ಪ್ರಚಂಡ ಫ್ರೆಂಚ ಸೈನ್ಯ ಪಥಕಗಳನ್ನು ಕಾವಲು ಇಡಲಾಗಿದೆ. ಗುರುವಾರ ತಾರೀಖು ೩ ನೇ ಗೆ ಜರ್ಮನಿಯ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಹಿಟ್ಲರ ಮೊದಲಾದ ನಾಝಿ ಪ್ರಮುಖರದೊಂದು ಪ್ರಚಂಡ ಸಭೆಯಾಗುವದಿತ್ತು. ನಾಝಿ ಪಕ್ಷದವರೆಲ್ಲರೂ ಐಕ್ಯಮತ್ಯದಿಂದಿದ್ದಾರೆಂದು ಲೋಕಕ್ಕೆ ಜಾಹೀರಪಡಿಸಲು ಈ ಸಭೆಯಂತೆ! ಈ ಸಭೆಗಾಗಿ ಪ್ರಚಂಡ ತಯಾರಿ ನಡೆದಿದೆ. ಹಿಟ್ಲರರ ಅರಮನೆಗೂ ಸಭಾಗೃಹಕ್ಕೂ ನಡುವೆ ೧೦ ಸಾವಿರ ಸಶಸ್ತ್ರ ಸೈನ್ಯ ಸಾಲಾಗಿ ನಿಲ್ಲುವದಿತ್ತು. ವಿಮಾನಗಳಿಗೆ ಹಾರ್‍ಯಾಡದಂತೆ ನಿರ್ಬಂಧ ಹೊರಡಿಸಿ ಇದೊಂದು ರಾಜಕಾರ್ಯ (State Act) ವೆಂದು ಪ್ರಕಟವಾಗಿದೆ. ಈ ರಾಜಕಾರ್ಯದ ರೂಪರೇಷೆಯೇನೆಂಬ ತಿಳಿಯಲಿಲ್ಲ. ಸಾರ ಪ್ರದೇಶದೊಳಗಿನ ಮತದಾನದ ಗಲಾಟೆಗೂ ಬರ್ಲಿನದೊಳಗಿನ ರಾಜಕಾರ್ಯದ ಸಭೆಗೂ ಸಂಬಂಧವಿರಬಹುದೇನು? ಜರ್ಮನಿ ಫ್ರಾನ್ಸ ದೇಶಗಳೊಳಗೆ ಸಾರ ಪ್ರದೇಶದ ಕುರಿತು ಸಂಧಿಯಾಗಿರುವಾಗ ಫ್ರಾನ್ಸ ದೇಶಕ್ಕೆ ಜರ್ಮನರು ಫಕ್ಕನೆ ನುಗ್ಗಬಹುದೆಂದ ಭೀತಿ ಹೇಗೆ? ಇಂಥ ಪ್ರಸಕ್ತಿಯಲ್ಲಿ ಮತದಾನ ಸುರಕ್ಷಿತವಾಗಿ ಪಾರಗಂಡೀತೇನು?

ಇಟಾಲಿ, ಅಬಿಸೀನಿಯಾ ದೇಶಗಳೊಳಗಿನ ವಿವಾದವು ಇನ್ನೂ ಬಗೆಹರಿಯಲಿಲ್ಲ. ಇಟಾಲಿಯವರು ಮಾತ್ರ ಬಲಾತ್ಕಾರ ನಡಿಸಿದ್ದಕ್ಕಾಗಿ ಅಬಿಸೀನಿಯಾ ಸರಕಾರವು ರಾಷ್ಟ್ರಸಂಘದ ಕಡೆ ಮೊರೆಕೊಳ್ಳುತ್ತಿದೆ. ಏನೂ ಬಲಾತ್ಕಾರ ನಡೆಯುವದಿಲ್ಲವಾಗಿ ಇಟಾಲಿಯವರ ಅಂಬೋಣ. ಉಲವೆಲ್ ಗ್ರಾಮವು ಅಬಿಸೀನಿಯಾ ದೇಶದ ಗಡಿ ಸೀಮೆಯಿಂದ ೧೦೦ ಮೈಲು ಒಳಭಾಗದಲ್ಲಿದೆ. ಇಟಾಲಿಯವರು ತಯಾರಿಸಿದ ನಕಾಶೆಯಿಂದಲೇ ಈ ಸಂಗತಿ ಸಿದ್ಧವಾಗುತ್ತದೆ. ರಾಷ್ಟ್ರಸಂಘದವರು ಈ ನಕಾಶೆ ನೋಡಿ, ಇಟಾಲಿಯ ನಿಯೋಗವು ಕೇಳಿ ಆಶ್ಚರ್ಯಗೊಂಡರಂತೆ. ಅಬಿಸೀನಿಯಾ ಪ್ರದೇಶದಲ್ಲಿ ಇಟಾಲಿಯ ವರ್ಚಸ್ಸ ಬೆಳಸಿ ಆ ಪ್ರದೇಶವನ್ನು ಇಟಾಲಿಯ ಮಾಂಡಲಿಕ ರಾಜ್ಯವಾಗಿ ಪರಿಣಮಿಸಲು ಇಟಾಲಿಯ ಮುಸೋಲಿನಿಯವರು ಬಹುಕಾಲದಿಂದ ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ಬ್ರಿಟಿಶರೂ ಫ್ರೆಂಚರೂ ಒಪ್ಪುತ್ತಾರಾಗಿ ಬರ್ಲಿನದ 'ಬರ್ಲಿನರ ಟಿಜಬ್ಲೆಟ' ಪತ್ರಿಕೆಯ ಅಭಿಪ್ರಾಯ. ಇಟಾಲಿಯವರಿಗೂ ಅಬಿಸೀನಿಯಾದವರಿಗೂ ವ್ಯಾಪಾರ ವಿಷಯ ತಕರಾರುಗಳಾಗಿದ್ದವಂತೆ! ಅವನ್ನು ಅಬಿಸೀನಿಯಾದವರು ಮುರಿದರಂತೆ! ವರ್ತಕರಿಂದ ಪರದೇಶಗಳನ್ನು ಸದ್ದು ಮಾಡದೆ ಸ್ವಾಧೀನ ಪಡಿಸಿಕೊಳ್ಳುವ ಸಾಧನೆಯಿದು. ಈಗ ಫ್ರಾನ್ಸ ದೇಶದವರಿಗೂ ಇಟಾಲಿ ದೇಶದವರಿಗೂ ಒಂದು ಕರಾರು ಮಾಡಿಯಾಗಲಿಕ್ಕಿದೆ. ಫ್ರಾನ್ಸ ದೇಶದ ರಾಜಬಂದರ್ ಕಾದ ಎಮ್. ಲಾವಲ್‌ರವರು ೧ ರಂದು ರೋಮ್ ಪಟ್ಟಣಕ್ಕೆ ಹೋಗಿದ್ದಾರೆ. ಅಲ್ಲಿ ಫ್ರಾನ್ಸ, ಇಟಾಲಿ, ಯುಗೋಸ್ಲಾವಿಯಾ, ಝೆಕೋಸ್ಲೋವಾಕಿಯಾ ದೇಶಗಳು ಆಸ್ಟ್ರಿಯಾ ದೇಶದ ಸ್ವಾತಂತ್ರ್ಯ ಭಂಗವಾಗದಂತೆ ಪ್ರಯತ್ನಪಡಬೇಕೆಂದು ಗೊತ್ತಾಗಿರುವದಂತೆ. ಅಬಿಸೀನಿಯಾ ಪ್ರಕರಣದಲ್ಲಿ ಇಂಗ್ಲಂಡ, ಫ್ರಾನ್ಸ ದೇಶಗಳ ಸಹಾನುಭೂತಿಯನ್ನು ಇಟಾಲಿಯು ಸಂಗ್ರಹಿಸಿರುವದರಿಂದ ಅಬಿಸೀನಿಯಾ ಪ್ರಕರಣವು ಯುರೋಪ ಖಂಡದ ಶಾಂತತೆಯ ಭಂಗ ಮಾಡಲು ಕಾರಣವಾಗಲಿಕ್ಕಿಲ್ಲವಾಗಿ ಒಂದು ಊಹೆ.

ಇನ್ನೊಂದೆಡೆಯಲ್ಲಿಯೇ ಆಲ್ಬೇನಿಯಾ ದೇಶದಲ್ಲಿ ರಾಜ್ಯಕ್ರಾಂತಿಯಾದ ಸುದ್ದಿ ಬಂತು. ಅದು ಸುಳ್ಳೆಂದು ತಿದ್ದುಪಡಿಯ ವಾರ್ತೆ ಬಂತು. ಆ ವೇಳೆ ಪುನಃ ಗಡಿಬಿಡಿಯಾಗಿರುವದಾಗಿ ಮತ್ತೊಂದು ವಾರ್ತೆ. ಅರಸರಾದ ಝೋಗರವರಿಗೆ ಬಾಂಬು ತಾಗಿ ಗಾಯವಾಯಿತು. ಝೋಗ ಅರಸರ ಅಂಗರಕ್ಷಕರೊಬ್ಬರು ೩|| ಸಾವಿರ ದೊಂಬಿಗಾರರನ್ನು ಕೂಡಿಸಿಕೊಂಡು ದೊಂಬಿಯನ್ನೆಬ್ಬಿಸಿದ್ದಾರೆ. ಉತ್ತರ ಪಾರ್ಶ್ವದಲ್ಲಿಯೂ ಯುಗೋಸ್ಲಾವಿಯಾದ ಮೋರೆಯಂಚ ಪ್ರದೇಶದಲ್ಲಿಯೂ ಲಷ್ಕರಿ ಕಾಯಿದೆಯ ಪ್ರಸ್ಥಾಪನೆಯಾಗಿದೆ. ಇತ್ಯಾದಿ ವರ್ತಮಾನ ಗ್ರೀಸ ದೇಶದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದು ಸಂಪೂರ್ಣ ಸುಳ್ಳೆಂದು ಲಂಡನಿನೊಳಗಿನ ಆಲ್ಬೇನಿಯಾ ಸರಕಾರದ ಪ್ರತಿನಿಧಿಗಳು ನಿರಾಕರಿಸು

[೧ ನೇ ಪುಟದ ಅಂಕ್ಕಕ್ಕೆ ಮುಂದರಿಸಿದೆ]

ಕರ್ನಾಟಕವೃತ್ತ.

ಶ್ರೀ ಭಾವ ಸಂ। ಪುಷ್ಯ ಶು। ೨ಗೆ, ಸೋಮವಾರ.

ಸಾಲವೇ ಶೂಲ!

ತೀರ್ವೆ ಆಕರಣೆ-ವಸೂಲಿಯ ವಿಚಾರ

ಸಾಲವಾಗುವ ಸಂಪೂರ್ಣ ಹೊಣೆಗಾರಿಕೆಯನ್ನು ಸಾಲ ಮಾಡಿದ ದುರ್ವ್ಯಸನಿಗಳ ಮೇಲೆ ಹೊರಿಸುವದು ಸುಲಭವಾದ ಕೆಲಸ. ಸಾಲಗಾರರು ವಿಚಾರಹೀನರಾಗಿ ವಿವೇಕ ಶೂನ್ಯರಾಗಿ ಮದುವೆ-ಮುಂಜಿ ಮೊದಲಾದ ಶುಭ ಕಾರ್ಯಗಳಲ್ಲಿ ಶಕ್ತಿ ಮೀರಿ ಹಣ ವೆಚ್ಚಮಾಡುತ್ತಾರಾಗಿ ಆರೋಪ ಹೊರಿಸಿ ಸಾಲಗಾರರಿಗೆ ದೂರುವದೇನು ದೊಡ್ಡ ಮಾತಲ್ಲ. ಆದರ ವಸ್ತುಸ್ಥಿತಿ ಬೇರೆ. ಮುಂಬಯಿ ಸರಕಾರವು ೧೮೭೫ನೇ ಇಸ್ವಿಯಲ್ಲಿ *The Deccan Ryots Commission* (ದಕ್ಷಿಣ ರೈತರ ಸ್ಥಿತಿ ವಿಚಾರ ಮಂಡಳ) ಎಂಬ ಆಲೋಚನಾ ಸಮಿತಿಯನ್ನು ನೇಮಿಸಿಕೊಂಡು ಮಹಾರಾಷ್ಟ್ರ ಕರ್ನಾಟಕ ಪ್ರದೇಶಗಳೊಳಗಿನ ರೈತರ ಸ್ಥಿತಿಗತಿಯ ವಿಚಾರ ಮಾಡಿತು. ಆ ಮಂಡಳದ ವರದಿಯಲ್ಲಿ ಪ್ರಕಟಗೊಂಡ ವಿಚಾರಗಳು ಈಗಲೂ ವಿಚಾರಗ್ರಾಹ್ಯವಿವೆ. ರಿಪೋರ್ಟಿನೊಳಗಿನ ಉಲ್ಲೇಖವೇನಂದರೆ 'ರೈತರ ಸಾಲದ ಮೂಲ ಮದುವೆ ಮೊದಲಾದ ಶುಭ ಕಾರ್ಯಗಳ ಮೇಲಿನ ಖರ್ಚೆಂದು ಹೇಳುವದು ಅತಿಶಯೋಕ್ತಿಯೆಂದು ಮಂಡಳದ ಅಭಿಪ್ರಾಯವಾಗಿದೆ. ರೈತರ ಸ್ಥಿತಿಯ ವಿಚಾರದಿಂದ ಆ ಪ್ರಸಂಗದಲ್ಲಿ ಖರ್ಚಾಗುವ ರಕಮು ನಿಸ್ಸಂಶಯವಾಗಿ ದುಂದುಗಾರಿಕೆಯದೆಂದು ಹೇಳಬಹುದು. ಆದರೆ ಇಂಥ ಪ್ರಸಂಗಗಳು ಒದಗುವದೇ ಅಪರೂಪ. ಸಾಮಾಜಿಕ (*social*) ಖಾಸಗಿ (*domestic*) ವಿನೋದಗಳಿಗಾಗಿ ಅಂಥ ದರ್ಜೆಯ ಮನುಷ್ಯರು ಅಷ್ಟು ಅವಧಿಯಲ್ಲಿ ಖರ್ಚ ಮಾಡಬಹುದಾದ ರಕಮಿಗಿಂತ ಈ ರಕಮು ಮಿಗಿಲಾಗದು. ಇದು ಖರ್ಚಿನ ರಕಮೇನೋ ಹೌದು. ಆದರೆ ಅದರಿಂದ ಸಾಲ ಉದ್ಭವಿಸಿದ್ದು (*nucleus*) ನಮಗೆ ತೋರಲಿಲ್ಲ. ನಿತ್ಯ ಆಹಾರಕ್ಕಾಗಿ, ಬೀಜ-ಎತ್ತುಗಳಿಗಾಗಿ, ಸರಕಾರ ತೀರ್ವೆಗಾಗಿ ಕಾಲಕಾಲಕ್ಕಾದ ಚಿಕ್ಕ-ಪುಟ್ಟ ಸಾಲದ ರಕಮಿನಿಂದ ರೈತರು ಸಾಲದಲ್ಲಿ ಮುಳುಗಿಕೊಂಡಿದ್ದಾರೆ. ಪ್ರಸಂಗವಶಾತ್ ಒದಗುವ ಮದುವೆಯ ಖರ್ಚು ಸಾಲಕ್ಕೆ ಕಾರಣವಲ್ಲ.' ಇದರ ಮೇಲಿಂದ ಸಾಲಗಾರರಿಂದ ರೈತರಿಗೆ ದೊರೆವ ಸಾಲ ನಿವಾರಣೆಯ ಉಪಾಯ ಯೋಜನೆ ಮಾಡದಿರುವದ ಎಷ್ಟು ಸ್ವಾಭಾವಿಕವಲ್ಲ.

ರೈತರ ಸ್ಥಿತಿ ವಿಚಾರ ಮಂಡಳವು ಅಭಿಪ್ರಾಯಪಟ್ಟಂತೆ ರೈತರನ್ನು ಸಾಲದಿಂದ ಬಿಡುಗಡೆ ಮಾಡಬೇಕಾದರೆ, ಮುಂದೆ ಸಾಲ ಒದಗದಂತೆ ಏರ್ಪಾಟು ಮಾಡಬೇಕಾದರೆ ಕೈಕೊಳ್ಳಬೇಕಾದ ಉಪಾಯ ಒಂದೇ. ರೈತರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದು. ಅಂದರೆ ರೈತರ ಉತ್ಪನ್ನವನ್ನು ಹೆಚ್ಚಿಸುವದು, ಖರ್ಚನ್ನು ತಗ್ಗಿಸುವದು. ಹಿಂದುಸ್ಥಾನವು ಬೇಸಾಯಪ್ರಧಾನ ದೇಶ. ಸನ್ ೧೯೩೧ನೇ ಇಸ್ವಿಯ ಜನಗಣತಿಯಂತೆ ೧೦ ಕೋಟಿ ಪ್ರಜೆಗಳು ಬೇಸಾಯಗಾರರು. ೨೫ ಕೋಟಿ ಎಕರೆ ಭೂಮಿ ಇವರ ಸಾಗುವಳಿಯಲ್ಲಿದೆ. ಅಂದರೆ ಪ್ರತಿಯೊಬ್ಬನಿಗೆ ಸರಾಸರಿ ೩ ಎಕರೆ ಭೂಮಿ ಬಂತು. ಎಲ್ಲ ಭೂಮಿಯಲ್ಲಿ ಗೋದಿ ಬೆಳೆಯುವದೆಂದು ಹಿಡಿದಾಗ್ಯೂ [illegible] ಯುಗ ಮಿಕ್ಕಿ ಇಡೀ ಬೆಳೆ ಆತನ ಕೈಸೇರಿದ ಸರಾಸರಿ ಉತ್ಪನ್ನಕ್ಕಿಂತ ಹೆಚ್ಚಿಗೆ ಸಿಗುವದೂ ಉಂಟು, ಕಡಿಮೆಯಾಗುವದೂ ಉಂಟು. ಇದೇ ಸಂದರ್ಭದಲ್ಲಿ ಪುಣೆಯ ರಾ. ಸರ್ವಾಕಿಸ ಬರ್ವೆಯವರು ಪ್ರಕಟಿಸಿದ ಲೆಕ್ಕದ [illegible] ಮೂದಿಸುತ್ತೇವೆ. ರಾ. ಬರ್ವೆಯವರಿಗೆ ಸೋಲಾಪುರ ಜಿಲ್ಲೆಯಲ್ಲಿ ಕಲಭೂಮಿ ಇದೆ. ಅವರು ೧೯೦೭ನೇ ಇಸ್ವಿಯಿಂದ [illegible] ಉತ್ಪನ್ನ, ಸರಕಾರದ ಕರ [illegible] ಉಳಿಯುವ ಮುನಾಫೆ ಇವುಗಳ ಲೆಕ್ಕ ಕಟ್ಟಿ ಪ್ರಕಟಿಸಿದ್ದಾರೆ. ೧೯೦೭-[illegible] ಭಾಗಗಳಲ್ಲಿ ಅವರಿಗೆ ಪ್ರತಿ ವರ್ಷ [illegible] ಗಳಲ್ಲಿ ಪ್ರತಿ ವರ್ಷ [illegible] ಉತ್ಪನ್ನವು [illegible] ತೀರ್ವೆ [illegible] ವರ್ಷಗಳಲ್ಲಿ [illegible] ಯಿತು [illegible] ಬೆಳೆಯು [illegible] ಉತ್ಪನ್ನದ [illegible] ಅವರು ಸ್ವಂತ ಇಟ್ಟದ್ದು. ಆಯಾ ವರ್ಷದ ದರ [illegible] ಇಸ್ವಿಯ ಸರಕಾರಿ [illegible] ಕೊಂಡ ಲೆಕ್ಕ ಮಾಡಿದ. ಆ ಲೆಕ್ಕದ ಮೇಲಿಂದ ತೋರಿಬರುವದೇನು? [illegible] ಉತ್ಪನ್ನ [illegible] ಕಂಡಿದೆ [illegible] ತೆತ್ತು ಉಳಿಯುವ ರಕಮಿನಿಂದ ಉಣ್ಣುವದೇನು? ಸಂಸಾರ ಸಾಗಿಸುವದು ಹೇಗೆ? ಬೇಸಾಯ ನಡಿಸುವ ಬಗೆ ಹೇಗೆ? ಪ್ರಯೋಗ ಶಾಲೆಗಳಲ್ಲಿ ಸಿದ್ಧವಾದ ತರತರದ ಪ್ರಯೋಗ ಸಾಧನಗಳನ್ನು ಕೊಂಡುಕೊಳ್ಳುವ ಬಗೆ ಹೇಗೆ? 'ಸರ್ವಾರಂಭಾಃ ತಂಡುಲ ಪ್ರಸ್ಥಮೂಲಾಃ' ಎಂಬ ಕಥೆಯಾಗುತ್ತ [illegible] ವ್ಯವಸಾಯಕ್ಕೆ ಅವರ ಅಭಾವದಲ್ಲಿ ಬೇಸಾಯಗಾರರು ಏನು ಮಾಡಬಲ್ಲರು? ಉತ್ಪತ್ತಿ ಕಡಿಮೆ ಎಂದು ದೂಷಣೆ ಮಾಡುವದೇನು ತಪ್ಪುವದಿಲ್ಲ. ನಿಯಮಿತ [illegible] ಏರಿದೊಡನೆ ಹೊಟ್ಟೆ ಯಾರ ಮಾತೂ ಕೇಳದು, ಅದನ್ನು ತುಂಬಲೇಬೇಕು. "ಹಡಗ ತುಂಬಬಹುದು, ಹೊಟ್ಟೆ ತುಂಬಲಾಗದು" ಎಂಬ ಗಾದೆ ಮಾತು ಇದೆ. ಬೀಜ-ಎತ್ತು ಮೊದಲಾದ ಸಾಮಗ್ರಿಗಳನ್ನು ಪೂರೈಸಿಕೊಳ್ಳಲೇಬೇಕು. ಬಂಗಾಲ ಸರಕಾರದ ಆರೋಗ್ಯ ಇಲಾಖೆಯ ಡೈರೆಕ್ಟರರಾಗಿದ್ದ ಡಾ| ಸಿ. ಎ. ಬೆಂಟ್ಲೀಯವರ ಅಭಿಪ್ರಾಯದಂತೆ, ಬೇಸಾಯಗಾರರ ಊಟ ಸಾಮಗ್ರಿಗಳ ಮೇಲಿನ ವೆಚ್ಚ ಇನ್ನೂ ಮಿಗಿಲಾಗಬೇಕು. ಹೆಗ್ಗಣಗಳು ತಿನ್ನಲಾರದಂಥ ಪೌಷ್ಟಿಕ ಸತ್ವಹೀನ ಆಹಾರವನ್ನು ಬೇಸಾಯಗಾರರು ನಿರುಪಾಯರಾಗಿ ಉಣ್ಣುತ್ತಾರೆ. ಆದರಿಂದ ಬೇಸಾಯಗಾರರು [illegible] ರಕ್ತಹೀನರಾದ [illegible] ತೀರ್ವೆ ಆಕರಣೆ [illegible] ವಸೂಲಿಯ ಕ್ರಮವನ್ನು ಪುನಃ ವಿಮರ್ಶಿಸಬೇಕಾಗಿದೆ.

ಕಾಳುಕಡಿಗಳ ಉತ್ಪತ್ತಿ ಮತ್ತು ದರ ಇಳಿಯಲು ಬೇಸಾಯಗಾರರು ಕಾರಣರಲ್ಲ. ಮಹಾಯುದ್ಧವಾದಂದಿನಿಂದ ಲೋಕದೊಳಗಿನ ದೃಷ್ಟಿಕೋನವೇ ಬದಲಿದೆ. ಪ್ರತಿ ಒಂದು ರಾಷ್ಟ್ರವು ಸ್ವದೇಶದಲ್ಲಿಯೇ ಅವಶ್ಯವುಳ್ಳ ಆಹಾರ ಸಾಮಗ್ರಿಗಳನ್ನು ಬೆಳೆಸಿಕೊಳ್ಳುವ ರಾಜ್ಯಧೋರಣವನ್ನಿಟ್ಟಿದೆ. ಮೇಲಾಗಿ ಅಮೇರಿಕಾ, ಕೆನಡಾ, ಅರ್ಜಂಟೈನಾ, ಆಸ್ಟ್ರೇಲಿಯಾ, ನ್ಯೂಝಿಲಂಡ ಮೊದಲಾದ ದೇಶಗಳಲ್ಲಿ ಬೇಸಾಯದ ವ್ಯಾಪ್ತಿಯು ವಿಪರೀತವಾಗಿ ಬೆಳೆಯಿತು. ಹುಟ್ಟಿದ ಸಾಮಗ್ರಿಗಳನ್ನು ಪರದೇಶಗಳಲ್ಲಿ ರಫ್ತು ಮಾಡಿ ಪ್ರತಿಫಲ ಪಡೆಯಲಿಕ್ಕೆ ಹೊಸ ರಾಜ್ಯಧೋರಣದ ಪ್ರತಿಬಂಧ. ಆದರಿಂದ ಬೆಳೆ ಬೆಳಸಿದ ಒಕ್ಕಲಿಗರಿಗೆ ವಿಚಾರ ಹುಟ್ಟಿದ. ಅವರು ಕಷ್ಟಕ್ಕೀಡಾದರು. ಆದಕಾರಣ ಬೇಸಾಯದ ಕ್ಷೇತ್ರವನ್ನೇ ತಗ್ಗಿಸುವ ಉಪಕ್ರಮ ನಡೆದಿದೆ. ಜಾವಾ ನಡುಗಡ್ಡೆಯಲ್ಲಿ ಈ ವರ್ಷ ಕಬ್ಬು ಬೆಳೆದ ಸಾವಿರಾರು ಹೊಲಗಳಿಗೆ ಬೆಂಕಿ ಹಾಕಿ ಸುಟ್ಟುಹಾಕಿದ ಕಾರಣವಾದರೂ ಇದೇ. ಹುಟ್ಟಿದ ಬೆಳೆಗೆ ತಕ್ಕ ಪ್ರತಿಫಲ ಒಕ್ಕಲಿಗರಿಗೆ ಸಿಗಲಿ ಎಂಬದೇ. ಈ ಪರಿಸ್ಥಿತಿಯ ಮೂಲಕ ಕಾಳುಕಡಿಗಳ ದರ ತೀರಳ ತಗ್ಗಿತು. ಇನ್ನು ಅದು ಏರದು, ಏರುವ ಲಕ್ಷಣ ಕಾಣವು. *World Agriculture* ಯಾನೆ 'ಜಗತ್ತಿನೊಳಗಿನ ಬೇಸಾಯ' ಎಂಬ ಗ್ರಂಥದಲ್ಲಿ ಈಗಿನ ಸ್ಥಿತಿ ಸಾಮಾನ್ಯವಾಗಿ ಚಿರಸ್ಥಾಯಿ ಎಂದು ಅಭಿಪ್ರಾಯ ಪ್ರಕಟವಾಗಿದೆ. ಸದ್ಯಕ್ಕೆ ಹಿಂದುಸ್ಥಾನ ಸರಕಾರವು ಪ್ರಕಟಿಸಿದ ೧೯೩೩-೩೪ನೇ ವ್ಯಾಪಾರ ವರದಿಯಲ್ಲಿಯೂ ಅಭಿವೃದ್ಧಿ ಲಕ್ಷಣಗಳು ಕಾಣಬರುವದಿಲ್ಲವಾಗಿ ಅಭಿಪ್ರಾಯ ನಮೂದಾಗಿದೆ. ಆದರಿಂದ ಇದೇ ಪರಿಸ್ಥಿತಿಯನ್ನು ಆಧಾರವಾಗಿ ಇಟ್ಟುಕೊಂಡು ತೀರ್ವೆ ವಿಚಾರ ಮಾಡಬೇಕಾಗಿದೆ.

ಸರಕಾರಕ್ಕೆ ತೆರುವ ತೀರ್ವೆ ನಿರ್ದಿಷ್ಟ ರಕಮು. ಬೆಳೆ ಬೆಳೆಯಲಿ, ಸುಟ್ಟು ಹೋಗಲಿ, ಇದು ಹೋಗಲಿ, ಸರಕಾರಕ್ಕೆ ತೀರ್ವೆಯನ್ನು ನಿರ್ದಿಷ್ಟ ಅವಧಿಯಲ್ಲಿ ತೆತ್ತುಬಿಡಬೇಕು. ಇದು ಒಕ್ಕಲಿಗರ ಸಾರ್ವತ್ರಿಕ ದೂರು. ಒಕ್ಕಲಿಗ ಸಮಾಜವೇ ಈ ಸ್ಥಿತಿಯನ್ನು ಆಕ್ಷೇಪಿಸುತ್ತದೆ. ಮೇಲ್ಕಾಣಿಸಿದ 'ಜಗತ್ತಿನೊಳಗಿನ ಬೇಸಾಯ' ಗ್ರಂಥಕರ್ತರು ನಿಷ್ಪಕ್ಷವಾಗಿ ಬರೆದಿದ್ದಾರೆ. ಈ ಗ್ರಂಥವನ್ನು ಇಂಗ್ಲಂಡ ದೇಶದೊಳಗಿನ ಅಂತರ್ರಾಷ್ಟ್ರೀಯ ಸಂಗತಿಯ ವಿಚಾರ ಮಾಡುವ ರಾಜಾಶ್ರಯ ಸಂಸ್ಥೆ (*The Royal Institute of International Affairs, England*)ಯಿಂದ ಪ್ರಕಟಿಸಲ್ಪಟ್ಟಿದೆ. ಈ ಗ್ರಂಥವನ್ನು ಮೊಟ್ಟಮೊದಲು ಆ ಸಂಸ್ಥೆಯ ಅಭ್ಯಾಸ ಮಂಡಳ *Study Group* ದವರು ತಯಾರಿಸಿದರು. ಅದನ್ನು ಹಲವು ಮಿಕ್ಕ ತಜ್ಞರು ಪರೀಕ್ಷಿಸಿದ ಬಳಿಕ ಗ್ರಂಥ ಪ್ರಕಟಣೆಯಾಗಿದೆ. ಒಕ್ಕಲಿಗರ ದೂರು ಏನಂದರೆ — "ನಿರ್ದಿಷ್ಟ ಉತ್ಪನ್ನವಿಲ್ಲದಿದ್ದರೆ ತೆರಬೇಕಾದ ರಕಮೆಂದು ಬೇಸಾಯೇತರ ಉದ್ದಿಮೆಯವರ ಬಗ್ಗೆ ಕಟ್ಟಳೆ ಇದೆ, ಆ ಅನುಕೂಲತೆ ನಮಗಿಲ್ಲ. ಕಂದಾಯ, ಬಾಡಿಗೆ, ಬಡ್ಡಿ ಮೊದಲಾದ ನಿರ್ದಿಷ್ಟ ಆಕರಣೆ ತೆರುವಷ್ಟು ಕನಿಷ್ಟ ಉತ್ಪತ್ತಿ ಪ್ರಾಪ್ತಿಯಾಗದಿದ್ದಾಗ್ಯೂ ತಮ್ಮಿಂದ ಅದು ವಸೂಲಾಗುತ್ತದೆ." ಈ ಪ್ರಕಾರ ಅಭ್ಯಾಸ ಮಂಡಳದವರು ಅಭಿಪ್ರಾಯ ಕೊಟ್ಟಿದ್ದಾರೆ. ಇಂಗ್ಲಂಡ ದೇಶದೊಳಗೆ ಬೇರೊಂದು

ನಿಯಮವಿದೆ. ಉತ್ಪನ್ನದ ಪ್ರಮಾಣದಂತೆ ಕಂದಾಯ ತೆರಬೇಕು. ಉತ್ಪನ್ನ ಹೆಚ್ಚು-ಕಡಿಮೆಯಾದಂತೆ ರಾಜಾದಾಯವೂ ಏರಿಳಿಯುತ್ತದೆ. ಮುಂಚಿನ ವರ್ಷದ ಉತ್ಪತ್ತಿಯ ಪ್ರಮಾಣದ ಮೇಲೆ ಕರಗಳ ವಸೂಲಾಗುತ್ತಿದೆ. ಅಮೇರಿಕೆಯಲ್ಲಿ ಕಳೆದ ಜೂನ ೧೯೩೪ ತಾರೀಖ "*The Farmer's Tax Problem*" (ಒಕ್ಕಲಿಗರ ಮೇಲಿನ ತೆರಿಗೆಯ ಪ್ರಶ್ನೆ) ಎಂಬ ವರದಿ ಲೋಕಪ್ರತಿನಿಧಿ ಸಭೆಗೆ ಸಾದರವಾಗಿದೆ. "ಇನ್‌ಕಮ್ ಟೆಕ್ಸಿನಂತೆ ಒಕ್ಕಲಿಗರ ಕಡೆಯಿಂದ ತೀರ್ವೆ ವಸೂಲಾಗಬೇಕು. ನಿರ್ದಿಷ್ಟ ರಕಮು ಪ್ರಾಪ್ತಿಯಾದರೆ ಮಾತ್ರ ಪ್ರಾಪ್ತಿ ಕರ ವಸೂಲಾಗುತ್ತದೆ. ಅದರಂತೆಯೇ ತೀರ ಕಡಿಮೆ ಉತ್ಪನ್ನವಿದ್ದ ಬೇಸಾಯಗಾರರಿಗೆ ಕಂದಾಯ ಮಾಫಿಯಾಗಬೇಕು. ಆ ಉತ್ಪತ್ತಿಗೆ ಮಿಕ್ಕಿ ಪ್ರಾಪ್ತಿ ಇದ್ದವರಿಗೆ ಮಾತ್ರ ಭೂಕಂದಾಯ ಆಕರಿಸಲ್ಪಡಬೇಕು." ಹೀಗೆ ಆ ವರದಿಯಲ್ಲಿ ನಮೂದಿಸಿದೆ. ಇಂಗ್ಲಂಡ, ಅಮೇರಿಕಾ ದೇಶಗಳು ಸುಧಾರಿಸಿದ ರಾಷ್ಟ್ರಗಳು. ನಾವಂತು ಸುಧಾರಿಸಿದ ರಾಷ್ಟ್ರಾಧೀನರಾಗಿದ್ದೇವೆ. ಅಲ್ಲಿಯಂತೆ ಇಲ್ಲಿ ಯಾಕೆ ರಾಜ್ಯಧೋರಣವನ್ನಿಡಬಾರದೆಂದು ನಮ್ಮ ಪ್ರಶ್ನ. ಚಿಕ್ಕ-ಪುಟ್ಟ ವ್ಯಾಪಾರ-ಉದ್ದಿಮೆಯವರಿಗೆ ಪ್ರಾಪ್ತಿ ಕರವಿಲ್ಲದಾಗ ಚಿಕ್ಕ-ಪುಟ್ಟ ಒಕ್ಕಲಿಗರ ಕಡೆಯಿಂದ ನಿರ್ದಿಷ್ಟ ತೆರಿಗೆಯನ್ನು, ನಿರ್ದಿಷ್ಟ ಅವಧಿಯಲ್ಲಿ, ಗೃಹೀತ ಉತ್ಪನ್ನ ಹಿಡಿದು ಆಕರಿಸಿದ ತೀರ್ವೆಯನ್ನು ತೆತ್ತುಬಿಡಬೇಕೆಂದು ಒತ್ತಾಯ ಮಾಡುವದು ನೀತಿಯೇನು?

ಸರಕಾರದ ಜಮಾ-ಖರ್ಚಿನ ಅಡಚಣೆಯನ್ನು ಪ್ರಜಾಕ್ಷೇಮ ವಿಚಾರದ ಪ್ರಶ್ನೆಯಲ್ಲಿ ಮುಂದೊತ್ತಲಾಗದು. ಈ ಹಿಂದ ಹೇಳಿದಂತೆ ಪ್ರಜಾಕ್ಷೇಮಕ್ಕಾಗಿಯೇ ರಾಜಸಂಸ್ಥೆಯ ಕಲ್ಪನೆಯಾಗಿದೆ. ರಾಜಸಂಸ್ಥೆಯ ಮೂಲಭೂತ ಧ್ಯೇಯ ಪ್ರಜಾಕ್ಷೇಮ. ಯೋಜನೆ ಪ್ರಜಾಕ್ಷೇಮಕ್ಕೆ ಭಂಗ ಬರದಂತೆ ರಾಜಸಂಸ್ಥೆಯ ವ್ಯಾಪಾರ ನಡೆಯಬೇಕು, ಪ್ರಜಾಪೋಷಕವಾಗುವಂತೆ ಖರ್ಚು ಸಾಗಬೇಕು. ಅಮೇರಿಕೆಯ ಸರಕಾರದವರು ದುಡ್ಡು ಹೆಚ್ಚಾಗಿ ೧೦||| ಕೋಟಿ ಡಾಲರು (= ೩ ರೂಪಾಯಿ) ಖರ್ಚು ಮಾಡಲು ಸಂಕಲ್ಪ ಮಾಡಲಿಲ್ಲ. ನಿರುದ್ಯೋಗಿಗಳಿಗೆ ಉದ್ಯೋಗ ಪೂರೈಸಿ ಅವರಿಗೆ ಸಂಪಾದನೆ ಮಾಡಿಕೊಟ್ಟು ತರಿಪಾಲಿಸುವದೇ ರಾಜಸಂಸ್ಥೆಯ ಪ್ರಧಾನ ಕರ್ತವ್ಯವೆಂದು ಆ ಸರಕಾರದ ತಿಳುವಳಿಕೆಯಾಗಿದೆ. ಯಾವತ್ತೂ ಸುಧಾರಿಸಿದ ರಾಜಸಂಸ್ಥೆಗಳ ತಿಳುವಳಿಕೆಯಾದರೂ ಹಾಗೆಯೇ. ಪುರಾತನ ಕಾಲದಲ್ಲಿಯೂ ಹೀಗೆಯೇ. ಕಲ್ಹಣ ಇತ್ತ 'ರಾಜತರಂಗಿಣಿ'ಯೊಳಗಿನ ಅರಸರಾದ ಲಲಿತಾದಿತ್ಯ ಮುಕ್ತಾಪೀಡರವರ ಉಲ್ಲೇಖವನ್ನು ನಾವು ಈ ಹಿಂದ ಮಾಡಿದ್ದು ಇದೇ ಉದ್ದೇಶದಿಂದ [ಹಿಂದಿನ ಅಂಕದಲ್ಲಿ ಲಲಿತಾದ್ಯ ಮುಕ್ತಾಪೀಡ ಎಂದೂ, ಅವರು 'ರಾಜತರಂಗಿಣಿ'ಯ ಕರ್ತರೆಂದೂ ಬರೆದದ್ದು ಕಣ್ಣು ತಪ್ಪಿಕೆಯಿಂದ] ಲಲಿತಾದಿತ್ಯ ಅರಸರು ಲೋಕಕಂಟಕರೆಂದು ನಾವು ಬಲ್ಲೆವು. ಪ್ರಜೆಗಳ ಬಳಿ ದ್ರವ್ಯಸಂಚಯವಾಗಬಾರದೆಂದು ಅವರು ಕಠಿಣ ಜಾಗ್ರತೆ ಕಾಯ್ದಿದ್ದರೂ ನಿಜ. ತರತರದ ಪ್ರಜಾಪೀಡನೆಯನ್ನು ಅವರು ನಡಿಸಿದ್ದರು. ಪ್ರಜಾಜನರಲ್ಲಿ ಸಂಪತ್ತು ಸಂಗ್ರಹವಾದರೆ ಅವರು ಉದ್ಧಟರಾಗಿ ರಾಜಾಜ್ಞೆಯನ್ನು ಅಲಕ್ಷ್ಯ ಮಾಡಬಹುದೆಂಬ ವಿಪರೀತ ಕಲ್ಪನೆಯೂ ಲಲಿತಾದಿತ್ಯರಲ್ಲಿ ಬೇರೂರಿಕೊಂಡಿತ್ತು. ಗಡಿನಾಡಿನೊಳಗಿನ ನಿರಪರಾಧಿ ಜನರು ಯಾವದೊಂದು ದಿನ ಒಕ್ಕಟ್ಟಾಗಿ ತಾವಾಗಿ ಏರಿಬರುವರೆಂದು ಲಲಿತಾದಿತ್ಯರು ನಿಷ್ಠುರಣವಾಗಿ ಕಲ್ಪಿಸಿ ಅವರಿಗೆ ಪಡಿಸುತ್ತಿದ್ದ ಸಂಗತಿಯನ್ನು ನಾವು ಒಪ್ಪುತ್ತೇವೆ. ಆದರೆ ಪ್ರಜೆಗಳ ಕಷ್ಟಕಾಲದಲ್ಲಿ ಹೊಟ್ಟೆಗಿಲ್ಲದೆ ಅವರು ಉಪವಾಸ ಸಾಯುತ್ತಿರುವಾಗ ಲಲಿತಾದಿತ್ಯರು ಜನರಿಗೆ ಆಹಾರಸಾಮಗ್ರಿ ಕೊಟ್ಟು ಸಲಹುತ್ತಿದ್ದರು. ರಾಜಧರ್ಮದ ಕರ್ತವ್ಯವನ್ನು ಲೋಕಕಂಟಕರು ಸಹ ಪಾಲಿಸುತ್ತಿದ್ದರೆಂದು ನಮೂದಿಸುವದೇ ನಮ್ಮ ಮುಖ್ಯ ಉದ್ದೇಶವಾಗಿದ್ದಿತು. ಈಗಿನ ಪರಿಸ್ಥಿತಿಯಲ್ಲಿ ಸುಧಾರಿಸಿದ ಜನಾಂಗವು ಈ ದೃಷ್ಟಿ ಹಿಡಿದು ವರ್ತಿಸಬೇಕೆಂದೇ ಆ ಉಲ್ಲೇಖ ಮಾಡಿದ ಕಾರಣ.

ತೀರ್ವೆ ಆಕರಣೆ ಮತ್ತು ವಸೂಲಿಯ ಕ್ರಮಗಳು ಈಗಿನ ಪರಿಸ್ಥಿತಿಗೆ ಸರ್ವಥಾ ಅನುಚಿತವಾದವುಗಳು. ಪಂಜಾಬದ ಗವ್ಹರ್ನರರಾದ ಸರ್ ಇಮರಸನ್‌ರವರು ಸಹ ಇದೇ ಸಂಗತಿಯನ್ನು ಪ್ರತಿಪಾದಿಸಿ ದರದ ಮಾನದಂತೆ ತೀರ್ವೆಯಲ್ಲಿ ತಿದ್ದುಪಡಿಯಾಗಬೇಕಾಗಿ ಸೂಚಿಸಿದ ಸಂಗತಿಯನ್ನು ನಾವು ಈ ಹಿಂದ ಪರಾಂಬರಿಸಿದ್ದೇವೆ. ಆ ಸೂಚನೆಯಲ್ಲಿ ದರದ ಏರಿಳಿತ ಮಾತ್ರ ವಿಚಾರಿಸಲ್ಪಟ್ಟಿದೆ. ಉತ್ಪತ್ತಿಯ ಪ್ರಮಾಣ ಆಲೋಚಿಸಲ್ಪಡಲಿಲ್ಲ. ತೀರ್ವೆ ಕೊಡುವ ನಿರ್ದಿಷ್ಟ ಉತ್ಪನ್ನದ ಪರಿಮಾಣವೂ ಅಲಕ್ಷ್ಯ ಮಾಡಲಾಗಿದೆ. ಇವೆಲ್ಲವನ್ನೂ ಪರಾಂಬರಿಸಬೇಕು. ಸರಕಾರಕ್ಕೆ ಬೇಸಾಯಗಾರರ ಸ್ಥಿತಿಯನ್ನು ತಿಳಕೊಳ್ಳಲು ಇಂಗ್ಲಂಡ ಅಮೇರಿಕಾ ದೇಶಗಳಲ್ಲಿರುವಂತೆ ಸಾಧನಗಳಿಲ್ಲವೆಂದು ನಾವು ಒಪ್ಪುತ್ತೇವೆ. ಇಂಗ್ಲಂಡ-ಅಮೇರಿಕಾ ಮೊದಲಾದ ಪಾಶ್ಚಾತ್ತ್ಯ ರಾಷ್ಟ್ರಗಳಲ್ಲಿ ಬೇಸಾಯ ಸಂಘದವರು ಬೇಸಾಯಗಾರರ ಕಡೆಯಿಂದ ಉತ್ಪತ್ತಿ ಖರ್ಚು ತೋರಿಸುವಂಥ ಕೋಷ್ಟಕಗಳನ್ನು ಪ್ರತಿ ವರ್ಷ ತರಿಸಿಕೊಂಡು ತಜ್ಞರ ಕಡೆಯಿಂದ ಅವುಗಳನ್ನು ಪರಾಂಬರಿಸಿ ಪ್ರಕಟಿಸುವ ಪದ್ಧತಿ ಇದೆ. ನಮ್ಮ ಹಿಂದುಸ್ಥಾನವು ವಿಶಾಲವಾದ ಪ್ರದೇಶ. ಒಕ್ಕಲತನವೇ ಇಲ್ಲಿಯ ಮುಖ್ಯ ಧಂದೆ. ಸುಧಾರಿಸಿದ ರಾಷ್ಟ್ರಕ್ಕೆ ಅಧೀನವಾಗಿ ೧||| ಶತಮಾನ ಮೀರಿತು. ಆದಾಗ್ಯೂ ಇತ್ತ ಕಡೆ ಇಂಥ ಯಾವದೂ ಉಪಕ್ರಮಗಳಿಲ್ಲ. ಬೇಸಾಯಗಾರರ ಉದ್ಧಾರ ಮಾಡಲೋಸುಗ ಸ್ಥಾಪನೆ ಹೊಂದಿದ ಪ್ರಯೋಗ ಹೊಲಗಳಲ್ಲಿ ಒಕ್ಕಲಿಗರ ಸ್ಥಿತಿ-ಗತಿಯ ವಿಚಾರ ಮಾಡದ, ಸುತ್ತುಮುತ್ತಲಿನ ಪರಿಸ್ಥಿತಿಯ ಗ್ರಹಿಕೆ ಪಡೆಯದ ಪ್ರಯೋಗಗಳು ನಡಿಯುತ್ತವೆ. ಅವುಗಳಿಂದ ಸಾಮಾನ್ಯ ಒಕ್ಕಲಿಗರಿಗೆ ಹೇಳತಕ್ಕಷ್ಟು ಪ್ರಯೋಜನ ದೊರೆಯಲಿಲ್ಲ. ಪ್ರಯೋಜನ ದೊರೆಯುವ ಲಕ್ಷಣಗಳೂ ಇಲ್ಲ. ಸಾಮಾನ್ಯ ಒಕ್ಕಲಿಗರಿಗೂ ಪ್ರಯೋಗ ಹೊಲದವರಿಗೂ ಆಪ್ತತ್ವ ಉಂಟಾಗುವಂತೆ ಏರ್ಪಾಟಾದನಕ ಇವುಗಳಿಂದ ಪ್ರಯೋಜನವಾಗದು. ಪ್ರಯೋಗ ಹೊಲದವರು ಸುತ್ತುಮುತ್ತಲಿನ ಗ್ರಾಮಗಳಲ್ಲಿ ಸಂಚರಿಸಿ ಅಲ್ಲಲ್ಲಿಯ ಬೇಸಾಯಗಾರರ ಉತ್ಪತ್ತಿ ಖರ್ಚು, ಅನುಕೂಲತೆ ಅನನುಕೂಲತೆಗಳನ್ನು ಪರಿಶೀಲಿಸಿ ಅಲ್ಲಲ್ಲಿಯ ಪರಿಸ್ಥಿತಿಗೆ ಪೋಷಕವಾಗುವಂಥ ಪ್ರಯೋಗಗಳನ್ನು ಆಯಾ ಸ್ಥಳಗಳಲ್ಲಿಯೇ ನಡಿಸಿ ಪ್ರಚುರಗೊಳಿಸಿದರೆ ಬೇಸಾಯಗಾರರ ಅಭಿವೃದ್ಧಿಯಾದೀತು. ಇವಲ್ಲದೆ ಅಲ್ಲಲ್ಲಿಯ ಪರಿಸ್ಥಿತಿಯ ಕುರಿತು ಸರಕಾರಕ್ಕೆ ಕಾಲಕಾಲಕ್ಕೆ ವರದಿ ಸಾದರಪಡಿಸಬೇಕು. ಇಂದಿನ ಸಂಕ್ರಾಂತಿ ತಜ್ಞರ ತಪಾಸಣೆಯ ಶಿಸ್ತಿನ ಬೇಸಾಯಗಾರರ ಸ್ಥಿತಿ ಸುಧಾರಿಸಲು ಉಪಯುಕ್ತ ಯೋಜನೆ ಮಾಡಬಹುದೇನು? ಪ್ರಜೆಗಳ ಶಕ್ತಿಯಂತೆ ರಾಜಾದಾಯ ಪಡೆದು ಹಿತಮಾಡಬೇಕೆಂಬದಂತೆ placing first the interests of the people, and of adjusting their burdens to their capacity to pay ಎಂಬದಾಗಿ ಪಂಜಾಬ ಗವ್ಹರ್ನರರು ಲಾಯಲ್‌ಪುರ ಗಿರಣಿಯ ಉದ್ಘಾಟನ ಸಮಾರಂಭ ಕಾಲದಲ್ಲಿ ಅಂತಃಕರಣಪೂರ್ವಕವಾಗಿ ನುಡಿದ ವಚನ ಕೇಳಿ ನಮಗೆ ಸಂತೋಷವಾಗಿದೆ. ಒಕ್ಕಲಿಗರ ಸ್ಥಿತಿ ತೀರ ಕಂಗೆಟ್ಟಿದೆಂದು ನಾವು ಮತ್ತೆ ಹೇಳಬೇಕಾಗಿಲ್ಲ. ಸರಕಾರವು ದೀರ್ಘಾಲೋಚನೆ ಮಾಡಿ ತೀರ್ವೆ ಪದ್ಧತಿಯಲ್ಲಿ ಆಮೂಲಾಗ್ರ ತಿದ್ದುಪಡಿ ಮಾಡಬೇಕಾಗಿ ವಿನಂತಿ. ತೀರ್ವೆ ಪದ್ಧತಿಯಲ್ಲಿ ತಿದ್ದುಪಡಿಯಾಗದಿದ್ದರೆ ಒಕ್ಕಲಿಗರು ಸಾಲದೊಳಗಿಂದ ಎಷ್ಟಕ್ಕೂ ಬಿಡುಗಡೆಯಾಗಲಾರರೆಂಬದು ಸ್ಪಷ್ಟವಿದೆ.

"ಕನ್ನಡಿಗ"ನು ಬರೆಯುವದೇನಂದರೆ—

ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಕಾರವಾರ ರೈತರ ಸಹಾಯಕ್ಕಾಗಿ ನಿಧಿ ಸಂಗ್ರಹ ಮಾಡುತ್ತಿದ್ದಾರೆ. ಕೊಂಗ್ರೆಸ ಮೆಂಬರರನ್ನು ಕೂಡಿಸುವ ಕೆಲಸ ಈಗ ಭರದಿಂದ ನಡೆಯುವದು. ಸ್ವಯಂಸೇವಕರು ಹಳ್ಳಿಹಳ್ಳಿಗಳಲ್ಲಿ ತಿರುಗಾಡುವರು. ಆ ಸಮಯ ಸಾಲ್ಯಾಣೆ ಕೊಂಗ್ರೆಸ ಪಟ್ಟಿಯ ಜೊತೆಗೆ ಕಾರವಾರ ರೈತರ ಸಹಾಯಕ್ಕಾಗಿ ೨-೪ ಆಣೆ ಕೊಡಹೇಳಿದರೆ ಎಲ್ಲರೂ ಸಂತೋಷದಿಂದ ಕೊಡುವರು. ಈ ಬಗ್ಗೆ ಟಿಕೇಟುಗಳನ್ನು ಮುದ್ರಿಸಿ ಕೊಂಗ್ರೆಸ ಮೆಂಬರರನ್ನು ದಾಖಲಿಸುವವರಿಗೆಲ್ಲ ಹಂಚಬೇಕಾಗಿ ಸೂಚನೆ.

ಗೋವೆಯ ಶ್ರೀ ರಾಮನಾಥ ದೇವಸ್ಥಾನದ ಮಹಾಜನರ ಬಳಿಗೆ—

ಗೋವೆಯ ಶ್ರೀರಾಮನಾಥ-ಶಾಂತೇರಿ-ಕಾಮಾಕ್ಷಿ ದೇವಸ್ಥಾನದ ಉತ್ಪನ್ನವು ಇತ್ತಲಾಗಿ ಭತ್ತ, ಅಡಿಕೆ ಕಾಯಿಗಳ ದರಗಳು ತಗ್ಗಿದ್ದರಿಂದ ಬಹಳ ಕಡಿಮೆಯಾಗಿದೆ. ಬಂದ ಉತ್ಪನ್ನದಿಂದ ಖರ್ಚು ಸಾಗುವದಿಲ್ಲವೆಂದು ವ್ಯವಸ್ಥಾಪಕರು ತಿಳಿಸುತ್ತಾರೆ. ಈ ಬಗ್ಗೆ ದೇವಸ್ಥಾನದ ಪ್ರಮುಖ ಮಹಾಜನರಾದ ರಾ|ಬ| ಪರಶುರಾಮ ಗೋಪಾಳರಾವ ಮಸುರೇಕರ ಬಾರ್-ಎಟ್-ಲಾ, ಮುಕ್ಕಾಂ ರಾಜಕೋಟ ಇವರು ಒಂದು ಕಾಯಂ ಸ್ವರೂಪದ ಯೋಜನೆಯನ್ನು ತಯಾರಿಸಿದ್ದಾರೆ. ಅದನ್ನು ಓದಿ ಬಹಳ ಭಜಕಜನರು ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಸದರಿ ಯೋಜನೆಯ ವಿಚಾರ ಮಾಡಿ, ಶ್ರೀ ದೇವಸ್ಥಾನದ ಉತ್ಪನ್ನವನ್ನು ಹೇಗೆ ಬೆಳೆಸಬೇಕೆಂಬದರ ಕುರಿತು ಆಲೋಚನೆ ಮಾಡುವದಕ್ಕೆ ಮುಂಬಯಿಯೊಳಗಿನ ಕೆಲವು ಪ್ರಮುಖ ಭಜಕರು ಇದೇ ಒವ ತಾ ೧೩—೧— ೧೯೩೫ನೇ ದಿನ ಮಧ್ಯಾನ್ಹ ೩ ತಾಸಿಗೆ ಮುಂಬಯಿಯಲ್ಲಿ ಗಿರಗಾಂವ, ಭಟವಾಡಿ ರಸ್ತೆ, ನೀಲೆ ಲಕ್ಷ್ಮೀಬಾಯಿ ಸಭಾಮಂದಿರದಲ್ಲಿ ಯಾವತ್ತು ಭಜಕರ ಸಭೆಯನ್ನು ಕರೆದಿದ್ದಾರೆ. ರಾ|ಬ| ಮಸುರೇಕರರ ಯೋಜನೆಯನ್ನು ಓದಬಯಸುವವರು ಯಾ ವಿಷಯ ಮಾಹಿತಿ ಬೇಕಾದವರು ಈ ಕೆಳಗಿನ ಪತ್ತೆಯ ಮೇಲೆ ಚೌಕಶಿ ಮಾಡಬಹುದು.

ಶ್ರೀ|| ಜಯವಂತ ಶ್ರೀನಿವಾಸ ಶಣೈ,
ಸುಕೇರಕಾರ

೧೦ ಮೆಸರ್ಸ ಲಕ್ಷ್ಮೀಕಾಂತ ಮತ್ತು ಕಂಪನಿ
ದಾವಕರ ಮನಸಿ [illegible] ಮಾಳಿಗೆ
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಸುಮಾರು, ಊರಲ್ಲಿ ಜ್ವರಾದಿ ರೋಗಗಳ ಬಾಧೆ. ಕೆಲ ಹಣ್ಣಿ, ಳ್ಲಿ ಮೈಲಿ ಉಪದ್ರವ ಉಂಟು. ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಮೈಲಿಯ ವಿಶೇಷ ಉಪದ್ರವ.

ಶ್ರೀ ದೊಡ್ಡನ ನಾಗೇಶ ಗಣೇಶ ಹೆಗಡೆ ಇವರ ಮೇಲ ಬೀಳಾಯಿದೆಲ ಸಭೆಗೆ ಪ್ರೋತ್ಸಾಹ ಕೊಟ್ಟ ಒಗ್ಗ ನಡೆದ ಬಿಟ್ಟಿಯ ತೀರ್ಪು ತಾ. ಜನೇಗೆ ಸಬಡಿವ್ಹಿಜನಲ್ ಮ್ಯಾಜಿಸ್ಟ್ರೇಟರು ಹೇಳಲಿಲ್ಲ. ತಾ. ...ನೇಗೆ ಹೇಳಲ್ಪಡುವದು.

ಕಾರವಾರ ಫರ್ಸ್ಟ್ ಕ್ಲಾಸ ಕೋರ್ಟಿನಲ್ಲಿ ತೆರಿಗೆದಾರರು ನಡಸಿದ ದಾವೆಯಲ್ಲಿ ಮೊನ್ನೆ ಮುನಿಸಿಪಾಲಿಟಿಯ ಪರವಾಗಿ ಹಂಗಾಮು ತಾಶೀಲಿಯ ಅರ್ಜಿಗೆ ತಾ ...ನೇಗೆ ಉದಾಹರಣೆ ಮಾಡಲಾಯಿತು. ಆ ಉದಾಹರಣೆಯಲ್ಲಿ ೧೯೩೩-೩೪, ೧೯೩೪-೩೫ನೇ ವರ್ಷಗಳ ಮನೆ ತೆರಿಗೆಯ ವಸೂಲಿ ವಿಷಯ ಇನ್ನೂ ವಿಚಾರ ನಡೆದಿರುವದರಿಂದ ವಸೂಲಿಗೆ ತಡೆಯಾಗಿರುವದಾಗಿ ಉದಾಹರಣೆಯಲ್ಲಿ ನಮೂದಿಸಲಾಗಿದೆ.

ಈಗ ಊರತುಂಬ ಒಂದೇ ಸುದ್ದಿ: ರಿಜ್ಯನ್ ಪ್ಲಿ ಸರದಾರ ರಾ| ಬಾಪಟರವರು ರಚಿಸಿದ ಮನೆತೆರಿಗೆ ಬಾಪಟರವರು ಮ್ಯುನಿಸಿಪಾಲಿಟಿಯ ಸಾಂಪ್ರತಿಕ ಸ್ಥಿತಿಯನ್ನು ಬಹಳ ಬೆಳಸಿದರು ೩|| ಸಾವಿರದಷ್ಟು ತೆರಿಗೆಯನ್ನು ೮|| ಸಾವಿರಕ್ಕೆ ಏರಿಸಿದ್ದಾರೆ. ಕೆಲವರಿಗೆ ಮೂರು ಪಾಲು ಹೆಚ್ಚಿಗೆ ತೆರಿಗೆ ಬಂದಿದೆ. ... ಕೊರಿಕ ... ಬಾಪಟರವರು ... ತೆರಿಗೆ ... ಬಾಪಟರವರು ... ಬಾಪಟರವರಿಗೆ ... ಶ್ರೀ ಬಾಪಟರವರ ... ಸೆಟ್ಲಮೆಂಟ ಆಫೀಸರರಾಗಿ ... ಲಾಭವಾಗುವದಾಗಿಯೂ ಕೆಲವರು ಹೇಳುತ್ತಾರೆ.

ಇಲ್ಲಿಯ ಆನರೇರಿಯಾದ ಮಿ| ಬಿದ್ರೀಕರರವರು ಹುಬ್ಬಳ್ಳಿಯಿಂದ ತಾ ೧೫ನೇ ತಾರೀಖಿನಂದು ಬದಲಿ ಹೋಗುತ್ತಾರೆ. ಅಂಕೋಲೆಯಲ್ಲಿ ಮಾಮಲೇದಾರರಾಗಿದ್ದ ಮಿ| ಆಲ್ಬ ... ಇಲ್ಲಿಯ ಮಾಮಲೇದಾರರಾಗಿ ನೇಮಿಸಲ್ಪಟ್ಟಿರುತ್ತಾರೆ. ಹೊಸ ಮಾಮಲೇದಾರರು ನಿಸ್ಪೃಹತೆಯಿಂದಲೂ, ನಿಷ್ಪಕ್ಷಪಾತದಿಂದಲೂ ವರ್ತಿಸಿ ಲೋಕಾದರಕ್ಕೆ ಪಾತ್ರರಾಗುವರೆಂದು ಹಾರೈಕೆ.

ದನಗಳಿಗೆ ದೊಡ್ಡಿಗೆ ಹಾಕುವ ಉಪದ್ರವ ಇನ್ನೂ ನಿಲ್ಲಲಿಲ್ಲ. ಪೋಲೀಸರು ವಿಚಾರ ಸಹ ಮಾಡದೆ ಕೊಟ್ಟಿಗೆಗೆ ಬರುವ ದನಗಳಿಗೆ ಸಹ ಹಿಡಿದು ದೊಡ್ಡಿಗೆ ಒಯ್ಯುತ್ತಾರೆ. ಈ ಮೇಲೆ ... ಮ್ಯಾಜಿಸ್ಟ್ರೇಟರು ... ಪೋಲೀಸ ಸಾಹೇಬರು ... ಮ್ಯಾಜಿಸ್ಟ್ರೇಟರೂ ಜನರ ಬಡಸ್ಥಿತಿಯ ವಿಚಾರ ಮಾಡಿ ಈ ಉಪದ್ರವದಿಂದ ಜನರನ್ನು ಕಾಯಬೇಕಾಗಿ ವಿನಂತಿ.

ಭಟಕಳ— ಬ್ಯಂದೂರಿನ ನಾಗ ಎಂಬವನು ತನ್ನ ಚಕ್ಕಡಿಯ ಮೇಲೆ ಭತ್ತ ಹೇರಿ ಬಟಕಳಕ್ಕೆ ಮಾರಾಟಕ್ಕೆ ತಂದಿದ್ದನು. ಭತ್ತ ಮಾರಿ ಚಕ್ಕಡಿ ಸಹಿತ ತಿರುಗಿ ಹೋಗುವಾಗ ರಾಮಪ್ಪ ದೇವು, ಕಾಳಪ್ಪ ಎಂಬ್ಯ ಚಳ್ಳೆ ಗ್ರಾಮದವರು ಗಾಡಿಯಲ್ಲಿ ಕಾಲುಕೊಂಡು ಹೋಗುತ್ತಿದ್ದರು. ಗಾಡಿಯವನು ಸರ್ವೇಕಟ್ಟೆ ಟೋಲು ನಾಕೆಯ ಬಳಿ ಗಾಡಿ ನಿಲ್ಲಿಸಿ ಟೋಲು ಕೊಡಲು ಇಳಿದು ಟೋಲಿಗೆ ಹೋದಷ್ಟರಲ್ಲಿ ಗಾಡಿಯವನಿಗೆ ತಿಳಿಸದೆ ಗಾಡಿ ಇಳಿದು ನಡೆದು ಬಿಟ್ಟರು. ಗಾಡಿಯವನು ತಿರುಗಿ ಬಂದು ನೋಡಿದರೆ ಗಾಡಿಯಲ್ಲಿದ್ದ ಅವನ ಹಣದ ಚೀಲವೂ ಕಾಣೆ! ರಾಮಪ್ಪನೂ ಕಾಣೆ! ಈ ವೃತ್ತ ಇದೆಂದು ನಡೆದನೆಂದು ಕಾಳಪ್ಪನು ಹೇಳಿದನು. ಕೂಡಲೇ ನಾಗನು ಜತೆಗೆ ಕಾಳಪ್ಪನಿಗೆ ಕರಕೊಂಡು ಭಟಕಳಕ್ಕೆ ಬಂದು ಫೌಜದಾರರ ಕಡೆ ಕಳವಿನ ಫಿರ್ಯಾದಿ ಕೊಟ್ಟನು. ಪೋಲೀಸರು ಕಾಳಪ್ಪನಿಗೆ ಕೈದು ಮಾಡಿದ್ದಾರೆ. ಫಿರ್ಯಾದಿಯ ಚೌಕಶಿ ನಡೆದದೆ.

ಶಿರಸಿ— ಚಳಿ ಬಹಳ. ಕೆಲವು ದಿನಗಳ ಹಿಂದೆ ಈ ತಾಲೂಕಿನ ಪ್ರತಿ ರಂಗಾಪೂರ ಎಂಬಲ್ಲಿ ವ್ಯಾಘ್ರ ... ದಲ್ಲಿ ಒಂದು ಮನೆಗೆ ಬೆಂಕಿ ಬಿದ್ದು ಬೆಂಕಿಯು ... ಮನೆಗಳನ್ನು ಸುಟ್ಟು ಬೂದಿ ಮಾಡಿತು. ಸ್ಥಳದ ಜನ ... ಶ್ರಮ ಪಡದೆ ... ಮನೆಗಳಿಗೆ ಬಹಳ ಲುಕ್ಸಾನು ಆಗಿರುತ್ತದೆ.

ಸೆಟ್ಲಮೆಂಟ ಆಫೀಸರರಾದ ಮಿ| ದೇಸಾಯಿಯವರು ಭೂಮಿಗಳ ಹಾಗೂ ... ಗಳ ... ಕೆಲವು ... ಮಿ| ದೇಸಾಯಿಯವರು ... ತಾಲೂಕಿನ ಕಚೇರಿಗೆ ... (೧) ... (೨) ... (೩) ... ಮಾಡುತ್ತಾರೆ ... ೧೦೦೦ ರೂ. ಗಳ ... ಯಿಗಳಿಗೆ ... ನಾಗಿಯೂ ಅವರ ಸಹಾಯವಾಗಿದೆ.

ಅಂಕೋಲಾ— ಈ ತಾಲೂಕಿನ ಬಳವರೆ ಗ್ರಾಮದಲ್ಲಿ ಒಂದು ದೊಡ್ಡ ಗಣಪತಿಯಿದೆ. ಈ ಗ್ರಾಮದಲ್ಲಿ ತಾರಿಯ ಬಳಿ ಉತ್ಸವ-ಜಾತ್ರೆ ಮಾತ್ರಿಗಳಿದ್ದ ಒಂದು ದೇವಸ್ಥಾನವಿತ್ತು. ದೇವಾಲಯವು ಆರದ ಮೇಲು ... ಇದನ್ನು ನೆರೆಹೊರೆಯ ಒಕ್ಕಲಿಗರು ಪೂಜಿಸುತ್ತಿದ್ದರು. ಸಂಕ್ರಾಂತಿ ಮೊದಲಾದ ಪರ್ವಕಾಲಗಳಲ್ಲಿ ಉತ್ಸವ ನಡೆಯುತ್ತಿದ್ದವು ... ಯಾಗುತ್ತಿದ್ದವು ... ದ್ರವ್ಯವಿರುತ್ತದೆಂದು ಒಂದು ... ವೇಳೆ ... ಸಂಕ್ರಾಂತಿಯಲ್ಲಿ ... ಉಳಿಯುತ್ತಿದ್ದರಂತೆ. ... ಈ ... ಪೋಲೀಸರಿಗೆ ... ವ್ಯವಸ್ಥೆ ಮಾಡುತ್ತಿದ್ದರಂತೆ ... ಪೋಲೀಸ ಪಾಟೀಲ ... ನಡೆದವು ... ಈ ... ಜನರು ... ಪೋಲೀಸ ಚೌಕಶಿಯಲ್ಲಿ ... ಪ್ರಶ್ನೆ ಹುಟ್ಟಿದೆ.

ಇಲ್ಲಿಯ ಮಾಮಲೇದಾರರಾದ ರಾ| ವಿಠ್ಠಲ ಮಾಮಾ ವೇಲಣಕರ ಇವರಿಗೆ ಕೃಷ್ಣ ಯುಗಾದಿಯ ಸಮಯ ರಾವಸಾಹೇಬ ಎಂಬ ಕಿತಾಬು ದೊರೆತಿದೆ. ಇದೇ ಜಿಲ್ಲೆಯಲ್ಲಿ ಅವರಿಬ್ಬರಿಗೇ ಪ್ರಾಪ್ತವಾಗಿದೆ ... ಅವರು ಸರ್ವರೀತಿಯಿಂದ ಜನಪ್ರಿಯರಾಗಿದ್ದಾರೆ. ಮುಂದೆ ... ರಾಜ್ಯಕಾರಭಾರ ... ಇವರ ಸಮಯ ... ಉಪಯೋಗವಾಗಲೆಂದು ...

ಕಾರವಾರ— ... ನಾಗರಿಕ "ಸೋನಾರವಾಡ" ಬದಿಯ ಬಗ್ಗೆ ... "ಕಾರವಾರ ಮ್ಯುನಿಸಿಪಲ್ ಕಚೇರಿಯ ... ಕ್ಕೆ ಒಂದು ಹದಿಗೆ ಮಾಗಾಣಿ ಇದೆ; ಎರಡು ಹದಿಗಳಲ್ಲಿ ಅಂಗಡಿ-ಮಳಿಗೆಗಳಿವೆ; ಇನ್ನೊಂದು ಹದಿಯು ಖುಲ್ಲಾ ಇದೆ. ಮೇಲೆ ಚಪ್ಪರವಿಲ್ಲ, ದುರಗಳ ... ಗಳ ಚಪ್ಪರದ ಕೆಲಸ ಮಾಡುತ್ತಿವೆ. ಮಾರ್ಕೇಟಿನಲ್ಲಿ

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮ ... ಸ್ಥೆಗೆ ಉತ್ತೇಜನ ಕೊಡಿ!!!

ಪ್ರೊವ್ಹಿನ್ಶಿಯಲ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪೊಲಿಸಿದಾರರಿಗೆ ವಿಶೇಷಾಭಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ !!

[ವಿ. ಸೂ. ' ಇಂಡಸ್ಟ್ರಿಯಲ್ ವಿಮೆ ' ಎಂಬ ' ರೂಪಾಯಿ ಪೊಲಿಸಿ 'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.]

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು !

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು: ಮೆಸರ್ಸ ಜೀವನ ಏಜನ್ಸಿ, ಕಾರವಾರ.

ಬೇಸಿಗೆಯಲ್ಲಿ ಧೂಳಾದರೆ ಮಳೆಗಾಲದಲ್ಲಿ ರಾಡಿಯಾಗುತ್ತದೆ. ಆದ್ದರಿಂದ ಮ್ಯುನಿಸಿಪಾಲಿಟಿಯವರ ಲಕ್ಷ್ಯವೇ ಹೋಗುವದಿಲ್ಲ! ಇಂಥ ಈ ಕೆಲಸಕ್ಕೆ ಬಾಗಿಯ ಮೇಲೆ ಹಿಂದೆ ಮ್ಯುನಿಸಿಪಾಲಿಟಿಯವರು ೫ ಅಡಿ ಉದ್ದಗಲ ಸ್ಥಳಕ್ಕೆ ದಿನ ೧ಕ್ಕೆ ೧ ಬಿಲ್ಲಿಯಂತೆ ಬಜಾರದ ಫೀ ವಸೂಲ ಮಾಡುತ್ತಿದ್ದರು. ಈಗ ಹೊಸ ಬೋಡಿಯವರು ಮಾರ್ಕೆಟಿನ ಸುತ್ತಲೂ ಬೇಲಿ ಹಾಕಿ, ಒಂದೆರಡು ಕಿರಿದಾದ ಬಾಗಿಲುಗಳನ್ನಿಟ್ಟು, ಒಳಹೋಗುವ ಪ್ರತಿಯೊಬ್ಬ ವ್ಯಾಪಾರಿಯ ಕಡೆಯಿಂದ ಬುಟ್ಟಿಗೊಂದು ಬಿಲ್ಲಿ, ಮೂಟೆಗೊಂದು ಬಿಲ್ಲಿ ಹೀಗೆ ವಸೂಲ ಮಾಡುತ್ತಾರೆ; ಸ್ಥಳ ಪಡೆಯಲು ಮುಂದೆ ಬರೇ ಮಾರಾಟಗಾರರಿಗೆ ನಿಲ್ಲಿಸುತ್ತಾರೆ. ಮ್ಯುನಿಸಿಪಾಲಿಟಿಯು ಬಜಾರದ ಫೀ ಉತ್ಪನ್ನ ಹೆಚ್ಚಿಸಿದವರೆಂದು ಹಿಗ್ಗುತ್ತಾರೆ. ಈ ಎರಡು ಕ್ರಮಗಳಲ್ಲಿ ಯಾವುದು ನ್ಯಾಯದ್ದೆಂದು ಕ್ರಮವೆಂದು ಜಿಲ್ಲೆಯ ಲೋಕಲ ಬೋರ್ಡವೇ ತಿಳಿಸಬೇಕು. ಹೊಸಕ್ರಮದಿಂದ ಸಂತೆಗೆ ಬರುವ ವ್ಯಾಪಾರಸ್ಥರಿಗೆ ಬಹು ತೊಂದರೆ. ಬೇಲಿಯಿಂದ ಗಿರಾಕಿಗಳಿಗೂ ತೊಂದರೆ. ಹೊಸ ಉತ್ಸಾಹಿ ಮೆಂಬರರು ಇತ್ತ ಕಡೆ ಗಮನಿಸಬೇಕು.

“ ಮ್ಯುನಿಸಿಪಾಲಿಟಿಯ ನೌಕರಿ ಸಮಿತಿಯ ಚೇರಮನ್ನರು ಹೊಸ ವಿಚಿತ್ರ ಹುಕುಮು ಹೊರಡಿಸಿದ್ದಾರೆ. ಈಗ ಅಲ್ಲಿನ ಕೆಲ ಬೀಳುವ ಸಮಯಮಾತ್ರದಿಂದ ವರ್ತಕರು ತಮ್ಮ ತಮ್ಮ ಅಂಗಡಿಗಳನ್ನೂ ಭಂಡಸಾಲೆಗಳನ್ನೂ ಸ್ವಚ್ಛಗೊಳಿಸಬೇಕಾಗಿಯೂ, ಅಂಗಡಿ–ಭಂಡಸಾಲೆಗಳಲ್ಲಿ ಬೀಳುವ ಕಸಗಳನ್ನು ಸಾಯಂಕಾಲ ಕಸದ ಗಾಡಿ ಬರುವ ೧–೨ ಅಡಿ ಅಂತರ ಬಿಡಬೇಕಾಗಿಯೂ ಚೇರಮನ್ನರ ಹುಕುಮು. ನಾನಾ ಜಾಗಗಳನ್ನು ದಾಸ್ತಾನು ಇಟ್ಟು ದಿನಾಲು ವ್ಯವಹಾರ ನಡೆಯುವ ಅಂಗಡಿಗಳಲ್ಲಿ ಇಂಥ ವ್ಯವಸ್ಥೆ ಸಾಧ್ಯವೋ ಹ್ಯಾಗೆಂಬುದರ ವಿಚಾರ ಚೇರಮನ್ನರಿಗೆ ಹೊಳೆದ ಹಾಗೆ ಕಾಣುವದಿಲ್ಲವೋ!

“ ಮ್ಯುನಿಸಿಪಾಲಿಟಿಯವರು ಊರೊಳಗಿನ ಕಚರಾ ಭಾಗಗಳನ್ನು ಗಾಡಿಯಲ್ಲಿ ಹೇರಿ ಕೋಡಿಭಾಗಕ್ಕೆ ಹೋಗುವ ರಸ್ತೆಯ ಬದಿಗೆ ಊರ ಪಾರ್ಶ್ವಭಾಗದಲ್ಲೇ ದಾಸ್ತಾನ ಮಾಡುತ್ತಿದ್ದಾರೆ. ಮೊದಲೇ ಈ ಭಾಗದಲ್ಲಿ ಕೆಲವು ದಿನಗಳಿಂದ ದುರ್ಗಂಧ! ಈ ಕಚರಾ ರಾಶಿಯಿಂದ ಹವೆಯು ಕೆಟ್ಟು ಆಸಪಾಸದಲ್ಲಿರುವ ಜನರ ಆರೋಗ್ಯಕ್ಕೆ ಬಾಧೆಯಾಗಲು ಕಾರಣವಾಗದು! ಪ್ಲೇಗಿನ ಭೀತಿಯಿಂದ ನಾವೆಲ್ಲ ಕಂಪಿಸುತ್ತಿರುವಾಗ ಪ್ರತಿಬಂಧ ಮಾಡಬಯಸುವ ಚೇರಮನ್ನರಿಗೆ ಈ ಬಗ್ಗೆ ಲಕ್ಷ್ಯ ಕೊಡಬೇಕು ?”

ಸದ್ಯಃಕಾಲದ ವ್ಯಾಯಾಮ ಮಂಡಳದ ವಂಚಿಮಾರ್ಷಿಕ ಪಂದ್ಯಾಟಗಳು ತಾ. ೩೧ನೇಗೆ ಬುಧವಾರ ಮೈದಾನದಲ್ಲಿ ನಡೆದವು. ಈ ಪಂದ್ಯಾಟಗಳನ್ನು ನೋಡಲಿಕ್ಕೆ ಊರಿನಿಂದ ನೂರಾರು ಕೆಲವು ಗೃಹಸ್ಥರು ಬಂದಿದ್ದರು. ಮಂಡಳಿಯ ಆಟಗಾರರಿಗೆ ಅಧ್ಯಕ್ಷರಾದ ಮಾನನೀಯ ನಾಯಕರವರು ಬಹುಮಾನಗಳನ್ನು ಹಂಚಿದರು. ಮಂಡಳದ ಸಂಸ್ಥಾಪಕರಾದ ಶ್ರೀ ಕೃಷ್ಣರಾವ ಮತ್ತು ಅವರ ಮಿತ್ರರು ಜನತೆಯಲ್ಲಿ ವ್ಯಾಯಾಮ ಪ್ರಿಯತೆಯನ್ನು ಹುಟ್ಟಿಸಿ ಪ್ರಶಂಸನೀಯ ಕಾರ್ಯ ಮಾಡುತ್ತಿದ್ದಾರೆ.

ಮದ್ರಾಸದಿಂದ ದಿ। “ಎ. ಪಿ. ಐ.” ರವರು ತಿಳಿಸುವದೇನೆಂದರೆ:—

“ ಮದ್ರಾಸಿನ ಸರಾಯಿ ಮೇಲಿನ ಜಕಾತಿ ಮೊದಲು ಗ್ಯಾಲನ್ ೧ಕ್ಕೆ ೨ ರೂಪಾಯಿಯಂತೆ ಹಾಕಲು ಕೊಟ್ಟು ದಾರೂಗಳಿಂದ ಹಣ ಪಡೆಯುತ್ತಿದ್ದರು. ಹದಿನಾರು ವರ್ಷಗಳ ಹಿಂದೆ ಅದೇ ಗ್ಯಾಲನ್ನಿಗೆ ೬ ರೂ ಹಾಕಲು ಆಯಿತು. ಆಗ ಸರ್ಕಾರಿ ಮುತ್ಸದ್ದಿಯು ಸರಾಸರಿ ರೂ. ೪೦೦೦ಕ್ಕೆ ಮುಟ್ಟುತ್ತಿತ್ತು. ೩ ವರ್ಷಗಳ ಹಿಂದೆ ಅಧಿಕಾರಿಗಳು ಮುತ್ಸದ್ದಿಯನ್ನು ರೂ. ೩೫೦೦ಕ್ಕೆ ಕೊಟ್ಟು ಸಾರಾಯಿ ದಾಟಿಸಲಿಕ್ಕೆ ಲೈಸೆನ್ಸುಗಳನ್ನು ಇಳಿಸಿದರು. ಮಾಡಲು ಮಾತ್ರ ೪ ಕ್ಕಿಗಳಿಗೆ ಏರಿತು! ಕಳೆದ ವರ್ಷ ಕೆಲ ಮುತ್ಸದ್ದಿಯರು ತಾವು ಲೈಸೆನ್ಸುಗಳನ್ನಿಡುವದಕ್ಕೆ ಸಿದ್ಧರಿರುತ್ತೇವೆಂದಾಗಿಯೂ, ರೂ. ೪೫೦೦ ರ ವರೆಗೆ ತಮ್ಮ ಸವಾಲು ಅಂಗೀಕೃತವಾಗಿಯೂ ತಿಳಿಸಿದ್ದರಂತೆ ಆದರೆ ಅಧಿಕಾರಿಗಳು ಮುಂಚಿನ ಮುತ್ಸದ್ದಿಯರಿಗೆ ಮುಂಚಿನ ಸಾಲಿಗೇ ಮುತ್ತು ಕೊಟ್ಟರು. ಈ ವರ್ಷ ಲಿಲಾವಿಗೆ ಮತ್ತೆ ಕೊಡುವದಾದರೆ ಅಧಿಕಾರಿಗಳು ತಾವೇ ಮಾಡಲು ೬ ಕ್ಕೆ ಮಾಡಬೇಕಾಗಿ ನಿರ್ಣಯಿಸಿದ.”

— ಮುಂಬಯಿಯೊಳಗಿನ ರುಷ್ಟೀಯ ಸಭೆಗೆ ೫೧ ಲಕ್ಷ ರೂಪಾಯಿ ಖರ್ಚು ತಗಲಿತು. ಉತ್ಪನ್ನವೂ ಅಷ್ಟರ ಮಟ್ಟಿಗೇನೇ. ಜಮಾ–ಖರ್ಚು ಬಾಯಿಗೂಡಿತು! ಅದೇ ಕ್ಷಯಿಂತೆ ಉಳಿಯುವುದೇನಾಗಲಿಲ್ಲ.

ದ್ವಿಗುಣವಾದ ಲಾಭವನ್ನು ಹೊಂದಿರಿ!

ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ!!

ಮಕ್ಕಳ ಲಿವರ್ ಕಂಪ್ಲೈಂಟು (ಕೂರ್ಮವ್ಯಾಧಿ) ಮತ್ತು ಜ್ವರಗಳಿಗೆ

ಜಮ್ಮಿ ವೆಂಕಟರಮಣಯ್ಯನವರ

‘ಲಿವರ್ ಕ್ಯುಅರ್’ ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಿರಿ!

ಹೆಚ್ಚಿನ ಮಾಹಿತಿಗೆ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ.)

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪೆನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲವು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents -
D. K. Nayak Bros.
D. S. Pai.
K. N. Nayak.
Honavar Agent:-
R. V. Prabhu Esq.

K. Padmanabha Rao & Sons
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೇ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಯಾರು ಬೇರೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಅಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ

(Registered Trade Mark.)

ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗದೀತು. ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ.ಪಿ. ೪ ಅಣೆ ಡಜನ್ ೧ ಕ್ಕೆ ರೂ. ೨-೮-೦. ವಿ. ಪಿ. ೦-೮-೦.

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ–ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ.ಬಾ. ೫೧೦, ಪೋರ್ಕಾಟಿನ ಮದರಾಸ.

ಅಲ್ಲಲ್ಲಿ ಇಷ್ಟಿಷ್ಟು!

(೩ನೇ ಪಾನಿನಿಂದ ಮುಂದುವರಿಸಿದ್ದು.)

ಮೇ ತಿಂಗಳಲ್ಲಿ ಪಂಚಮ ಜೋರ್ಜ ಭೂಪಾಲರ ರೌಪ್ಯಮಹೋತ್ಸವದ ಸಂಭ್ರಮ ಸಾಮ್ರಾಜ್ಯತುಂಬ ನಡೆಯಲಿಕ್ಕಿದೆ. ಅಲ್ಲಲ್ಲಿ ಪ್ರಾಂತಾಧಿಪರೂ, ಡಿ| ಮೆಜಿಸ್ಟ್ರೇಟರೂ ಸಭೆಸೇರಿಸಿ ದ್ರವ್ಯಸಂಗ್ರಹ ಮಾಡುತ್ತಿದ್ದಾರೆ. ಮುಂಬಯಿ ಗವ್ಹರ್ನರರಾದ ಬ್ರೆಬರ್ನ ದೊರೆಗಳು ಮುಂಬಯಿಯಲ್ಲಿ ಮಹಾನುಭಾವರ ಸಭೆ ಸೇರಿಸಿ ಪಟ್ಟಿ ಕೊಡಬೇಕಾಗಿ ಅತ್ಯಾಗ್ರಹದ ವಿನಂತಿ ಮಾಡಿದರು. ಈ ಎತ್ನವಳಿ ನಡೆಯುತ್ತಿರುವಾಗ ಬೇರೆ ಯಾವದೇ ಎತ್ನವಳಿ ನಡೆಯಬಾರದೆಂದು ಆಪೇಕ್ಷಿಸಿದರು. ಈ ಮಹೋತ್ಸವದ ಸಮಯ ಕೂಡಿದ ಹಣ ಬೇರೆ ಬೇರೆ ಔಷಧೋಪಚಾರದ ಸಂಸ್ಥೆಗಳಿಗೆ ಅರ್ಪಿಸಲ್ಪಡುವದಾಗಿಯೂ, ಸದ್ವ್ಯಯವಾಗುವದಾಗಿಯೂ ಗವ್ಹರ್ನರರು ಸಭಿಕರಿಗೆ ತಿಳಿಸಿದ್ದಾರೆ. ಸಭೆಯಲ್ಲಿಯೇ ೩೦ ಸಾವಿರ ರೂಪಾಯಿ ಕೂಡಿತು. ಉತ್ಸವದ ನಿಮಿತ್ತ ಮೇ ೬ನೇ ತಾರೀಖಿಗೆ ರಜೆ. ಮತ್ತೊಂದು ದಿನ ರಜೆ ಕೊಡಬೇಕೆಂದು ಹಿಂದೆ ಸ್ಥಾನಿಕ ಸರಕಾರದ ಸಂಕಲ್ಪವಿದೆ. ಆ ದಿನ ನಿರ್ಣಯಿಸುವ ಹಕ್ಕು ಪ್ರಾಂತಿಕ ಉತ್ಸವ ಮಂಡಳಿಗಳಿಗೆ ಒಪ್ಪಿಸಲ್ಪಟ್ಟಿದೆ. ಅದರಂತೆ ಸಭೆಯಲ್ಲಿ ಚರ್ಚೆಯಾಯಿತು. ಕೆಲವರು ಕೊನೆಯ ದಿನವಾದ ಮೇ ೧೨ ನೇ ತಾರೀಖಿನ ರಜೆ ಕೊಡಬೇಕೆಂದರು. ಹಲವರಿಗೆ ಇದು ಸಮ್ಮತವಾಗಲಿಲ್ಲ. ಆದರಿಂದ ಕೊನೆಯ ನಿರ್ಣಯವಾಗಲಿಲ್ಲ. ಉತ್ಸವದ ನಿಮಿತ್ತ ಮಾಡುವ ವ್ಯವಸ್ಥಾಪಕ ಮಂಡಳದವರು ಈ ದಿನ ನಿರ್ಣಯಿಸಬೇಕೆಂಬ ಸರ್ವಾನುಮತದಿಂದ ಠರಾವಾಯಿತು. ಉತ್ಸವದ ಸಮಯ ಸರಕಾರಿ ಕಡೆಯಿಂದ ಸರಕಾರಿ ಇನಾಮದಾರರಿಗೆ ದೀಪಾರಾಧನ ಮಾಡುವರು. ಪ್ರಜೆಗಳೆಲ್ಲರೂ ಸ್ವಂತ ಖರ್ಚಿನಿಂದ ದೀಪಾರಾಧನೆ ಮಾಡಬೇಕಾಗಿ ಪ್ರಾಂತಾಧಿಪರು ಅಪೇಕ್ಷಿಸುತ್ತಾರೆ. ಅಖಿಲ ಭಾರತೀಯ ರೌಪ್ಯ ಮಹೋತ್ಸವ ಮಂಡಳದ ಅಧ್ಯಕ್ಷಸ್ಥಾನ ಸರ್ವಾಧಿಪತಿಗಳ ಪತ್ನಿಯರಾದ ವಿಲಿಂಗಡನ್ ದೊರೆಸಾನಿಗಳಿಗೆ ಅರ್ಪಿಸಲ್ಪಟ್ಟಿದೆ. ಆದರಿಂದ ಸ್ತ್ರೀ ಸಮಾಜವು ಈ ಉತ್ಸವದಲ್ಲಿ ಹುರುಪಿನಿಂದ ಮುಂದಾಗಬೇಕಾಗಿ, ಮುಂದಾಗುವದಾಗಿ ಸಮಸ್ತರೂ ಅಪೇಕ್ಷಿಸುತ್ತಾರೆ. ಹಿಂದೀ ಸ್ತ್ರೀ-ಸಮಾಜಕ್ಕೆ ವಿಲಿಂಗಡನ್ ದೊರೆಸಾನಿಗಳ ಅಧ್ಯಕ್ಷಸ್ಥಾನವು ಗೌರವಪ್ರದವೆಂದ ಪಾಡಬೇಕೆಂಬ ಪ್ರಚಾರ ನಡೆದಿದೆ. ಊರೂರಿಗೆ ಎತ್ನವಳಿ ಮಾಡಿದ ಹಣದಿಂದ ಬಡಬಗ್ಗರಿಗೆ ಅನ್ನಸಂತರ್ಪಣೆ, ಮಕ್ಕಳಿಗೆ ಮಿಠಾಯಿ ಹಂಚಬೇಕೆಂದು ಅಪ್ಪಣೆಯಾಗಿದೆ. ಅಲ್ಲಲ್ಲಿಯ ಜನರು ತಮ್ಮ ತಮ್ಮ ದೇವಾಲಯಗಳಲ್ಲಿ ಸೇರಿ ಪಂಚಮ ಜೋರ್ಜ ಭೂಪಾಲರ ಅಭೀಷ್ಟಚಿಂತನ ಮಾಡಬೇಕೆಂದು ಗೊತ್ತಾಗಿದೆ. ಈ ಉತ್ಸವಕ್ಕಾಗಿ ಲಂಡನಿನಿಂದ ರಾಜಪುತ್ರ ಜಾರ್ಜರವರು ನೂತನ ಪತ್ನಿಯೊಡನೆ ಹಿಂದುಸ್ಥಾನಕ್ಕೆ ಆಗಮಿಸುವವರಿದ್ದಾರೆ. ಹಿಂದುಸ್ಥಾನವೆಂದಿಗೂ ರಾಜನಿಷ್ಠವಾಗಿ ... ಸಂಬಂಧವುಳ್ಳವಾಗಿಯೂ ರಾಜಕಾರಣದಿಂದ ಬಹಿಷ್ಕಾರ ...ರು ಉತ್ಸವದಲ್ಲಿ ಸೇರದೆ ... ಸಾರ್ವಭೌಮರು. ಈ ರಾಜಕಾರಣದಿಂದ ಅಲಿಪ್ತರಾದ ಮುಂಬಯಿಯ 'ಟೈಮ್ಸ' ಪತ್ರಿಕೆಯು ಪ್ರತಿಪಾದಿಸಿ ಯಾವತ್ತೂ ಜನರು ಏಕ್ಯಮತ್ಯದಿಂದ ಮುಂದಾಗಬೇಕೆಂದು ಸೂಚಿಸುತ್ತಿದೆ. ಮುಂಬಯಿಯ ಇಂಡಿಯನ್ ಸೋಶಲ್ ರಿಫಾರ್ಮರ ಪತ್ರಿಕೆಯ ಸಂಪಾದಕರಾದ ಶ್ರೀ ನಟರಾಜನ್‌ರವರ ಅಭಿಪ್ರಾಯವೇ ಬೇರೆ. ಈ ಉತ್ಸವದಿಂದ ... ನಲ್ಲಿ ಜನಸಾಮಾನ್ಯರ ಉತ್ಸಾಹವುಂಟಾಗಬೇಕಾದರೆ ಒಂದು ಕಠಿಣ ... ಇದಕ್ಕೆ ... ... ವನ್ನು ... ... ವದಲ್ಲಿ ಆ ಉತ್ಸವವನ್ನು ಸಂಸ್ಥಾನಿಕರೂ, ಅಧಿಕಾರಿಗಳೂ ಅಧಿಕಾರಿ ... ರವರು ಮಾತ್ರ ನಡಿಸಬೇಕಾಗುವದು ... ಉತ್ಸವ ತಯಾರಿ ವಿಚಾರದಿಂದ ನಡೆದಿದೆ.

* *

ಪಂಡಿತ ಮದನ ಮೋಹನ ಮಾಲವೀಯರವರು ಕೇಲ ಕಾಲ ಅಸ್ವಾಸ್ಥ್ಯದಲ್ಲಿದ್ದರು. ಅವರ ಪತ್ನಿಯರೂ ಅಸ್ವಸ್ಥ ಬಿದ್ದಿದ್ದರು. ಸತಿ-ಪತಿಯರು ಸ್ವಸ್ಥರಾದ ಬಗ್ಗೆ ಡಿಸೆಂಬರ ತಿಂಗಳಲ್ಲಿ ಪಂ| ಮಾಲವೀಯರವರ ವರ್ಧಂತಿಯ ದಿನ ಜನರು ಉತ್ಸವ ನಡಿಸಬೇಕಾಗಿ ಸಂಕಲ್ಪಿಸಿದ್ದರು. "ಈ ಸಮಯ ಉತ್ಸವದ್ದಲ್ಲ, ರಾಷ್ಟ್ರೋದ್ಧಾರ ಕಾರ್ಯ ಮಾಡುವ ದಿನಗಳಿವು, ಕಾರಣ ತಮ್ಮ ವರ್ಧಂತಿಯ ದಿನ ಉತ್ಸವ ನಡಿಸಲಾಗದು" ಹೀಗ ದೇಶಬಾಂಧವರಿಗೆ ಪಂ| ಮಾಲವೀಯರವರು ಅಪ್ಪಣೆ ಕೊಟ್ಟಂತೆ, ಪಂಡಿತ ಮಾಲವೀಯರವರ ೭೪ನೇ ವರ್ಧಂತಿಯ ದಿನ ಉತ್ಸವ ನಡೆಯಲಿಲ್ಲ. ಮುಂಬಯಿಯಲ್ಲಿ ಮಾತ್ರ ಕಾರ್ಯಕ್ರಮದಂತೆ ಒಂದು ಸಭೆ ನಡೆದು ಪಂ| ಮಾಲವೀಯರವರಿಗೆ ಆಯುರಾರೋಗ್ಯಸ್ವಾಸ್ಥ್ಯ ಅವರ ಕಡೆಯಿಂದ ದೇಶೋದ್ಧಾರವನ್ನು ಸಾಧಿಸಿಕೊಳ್ಳಬೇಕಾಗಿ ಪ್ರಾರ್ಥನೆ ನಡೆಯಿತು.

* *

ಈ ಹೊತ್ತು ಮುಸಲ್ಮಾನರ ರಮಝಾನ ಹಬ್ಬ ಮುಗಿಯಿತು. ಇಡೀ ರಮಝಾನ ತಿಂಗಳಲ್ಲಿ ಮುಸಲ್ಮಾನರು ಉಪವಾಸ ಉಳಿದು ಈಶಪ್ರಾರ್ಥನೆ ನಡಿಸಬೇಕಾಗಿ ಒಂದು ನಿಯಮ. ಪಂಜಾಬ ಪ್ರಾಂತದ ಲಿ...ಯನ್‌ವಾಲಾ ಗ್ರಾಮದಲ್ಲಿ ಫತೇಮಾ ಎಂಬ ವಹಿವಾಟಿನ ಹೆಂಗಸು ಇರುತ್ತಿದ್ದಳು. ರಮಝಾನ ತಿಂಗಳಲ್ಲಿ ಧರ್ಮಾಜ್ಞೆಯಂತ ಉಪವಾಸ ಮಾಡುತ್ತಿದ್ದಳು, ಈಶ ಪ್ರಾರ್ಥನೆ ನಡಿಸುತ್ತಿದ್ದಳು. ನೆರೆಹೊರೆಯಲ್ಲಿನ ಒಂದು ಮನೆಯಲ್ಲಿ ಒಬ್ಬ ವಿಲ ಸಿಂಗನಿದ್ದನು. ಆತನು ಬೀಡಿ ಹುಕ್ಕಾ ಸೇದುತ್ತಿದ್ದನು, ಮಿಷ್ಟಾನ್ನ ಭೋಜನ ಮಾಡುತ್ತಿದ್ದನು. "ನೀನು ಮುಸಲ್ಮಾನ ಸ್ತ್ರೀಯೇ' ಕುರಾನದೊಳಗಿನ ಆಜ್ಞೆಗಳನ್ನು ಪಾಲಿಸಬೇಕು, ಉಪವಾಸ ಮಾಡಬೇಕು. ಹೀಗಮ್ಮ...

ಮುಂಬಯಿ ಸ್ವದೇಶೀ ವಸ್ತು ಪ್ರದರ್ಶನದಲ್ಲಿ ಉಚ್ಚ ತರಗತಿಯ ಪಾರಿತೋಷಕ ಪಡೆದ,



ವೆಜಿಟೇಬಲ್ ಸೋಪ ವರ್ಕ್ಸ, ಕಲ್ಲಿಕೋಟೆ.

ಡಿಸ್ಟ್ರಿಬ್ಯೂಟರರು:— ಬಸ್ತಿ ಹಿತ್ತಲ ಮಹಮೂದ ಸಾಹೇಬ, ಕುಮಟಾ. (ಉ. ಕನ್ನಡ)

ಆತನಿಗೆ ಬುದ್ಧಿ ಹೇಳುತ್ತಿದ್ದಳು, ಪುನಃ ಪುನಃ ಹೇಳುತ್ತಿದ್ದಳು ವಿಲಾಸಿಗೆ ಸಿಟ್ಟು ಬಂತು. ಕೊಡ್ಲಿಯಿಂದ ಪತ್ನೀಪ್ರಾಣಗಳಿಗೆ ಆತನು ಹೊಡೆದನು, ಆಕೆಯು ದಮ್ಮಾನದಲ್ಲೇ ತೀರಿ ಸ್ವರ್ಗಸ್ಥಳಾದಳು! ವಿಲಾಸಿಗೆ ಸರೆ ಹಿಡಿಯೋಣಾಗಿದೆ. ಬಿಟ್ಟೆ ನಡೆದ ಮಾತೇ ಯುಕ್ತ ಕಂಡ ಪ್ರಾಯಶ್ಚಿತ್ತವಾಗುವದು ಈಗಿನ ದಿನಮಾನದಲ್ಲಿ ಪಶ್ಚಾತ್ತಾಪ ಮಾಡುವದೂ ಕಷ್ಟ!

* *

ಕರಾಚಿಯಲ್ಲಿ ಅಖಿಲ ಭಾರತೀಯ ಸ್ತ್ರೀ-ಪರಿಷತ್ತು ಕಳೆದ ವಾರ ಸೇರಿ ಅನೇಕ ಠರಾವುಗಳಾಗಿವೆ. ಮೊದಲನೇ ಹೆಂಡತಿ ಜೀವಂತ ಇರುವಾಗ ಎರಡನೇ ಹೆಂಡತಿ ಆಗಕೂಡದು ಸ್ತ್ರೀಯರಿಗೆ ಪುರುಷರಂತೆಯೇ ವಾರಸಾ ಹಕ್ಕು ಇರಬೇಕು ಹಿಂದುಸ್ಥಾನೀ ಭಾಷೆಯನ್ನು ಸಾರ್ವತ್ರಿಕವಾಗಿ ಉಪಯೋಗಿಸಬೇಕು ಹಿಂದುಸ್ಥಾನದಲ್ಲಿ ಸಾರ್ವತ್ರಿಕ ಶಿಕ್ಷಣ ಕೊಡುವ ವ್ಯವಸ್ಥೆಯಾಗಬೇಕು. ಮಹಾತ್ಮರು ಹೊರಡಿಸಿದ ಅಖಿಲ ಭಾರತೀಯ ಗ್ರಾಮೋದ್ಧಾರ ಸಂಘದ ಕಾರ್ಯಕ್ರಮವನ್ನು ಉತ್ಸಾಹದಿಂದ ಪುರಸ್ಕರಿಸಬೇಕು ಪಾದ ಸಂಸ್ಥೆಗಳನ್ನು ಏರ್ಪಡಿಸಿ ಸಾರ್ವಜನಿಕ ವಿಷಯಗಳ ಮೇಲೆ ಸ್ತ್ರೀಯರೂ ಚರ್ಚೆ ನಡಿಸಬೇಕು ಭಾರತ ಮಂತ್ರಿ ಹೋರನ ಪ್ರೇರಣೆಯ ಮೇರೆಗೆ ಹಿಂದುಸ್ಥಾನಕ್ಕೆ ಕೊಡಮಾಡಿದ ರಾಜ್ಯಸುಧಾರಣೆ ಧಿಕ್ಕರಿಸಲ್ಪಟ್ಟಿತು. ಸ್ವದೇಶೀ ಪುರಸ್ಕಾರ ಮಾಡಬೇಕಾಗಿಯೂ ಗೊತ್ತಾಯಿತು ಗಡಿನಾಡಿನಲ್ಲಿ ಒಲುಚೀ ಸ್ತ್ರೀಯರ ಮೇಲೆ ನಡೆಯುವ ಬಲಾತ್ಕಾರಗಳನ್ನು ಮಿಸೆಸ್ ಹಮೀದ ಅಲ್ಲಿಯವರು ವರ್ಣಿಸಿದರು. ಗಡಿನಾಡಿನೊಳಗಿನ ಶೋಕಕಂಟಕ ರೂಢಿಗಳ್ಯಾವವೆಂದರೆ — ಮೃತರ ಹೆಂಡತಿ ವಾರಸದಾರರ ಹೆಂಡತಿಯಾಗುತ್ತಾಳೆ ಈ ರೂಢಿಗೆ 'ಭಜಾಯಿ' ಎಂದು ಹೆಸರು ಕೊಲೆಗಡಕನ ಮಗಳಂದಿರೂ, ಅಕ್ಕ-ತಂಗಿಯರೂ ಕೊಲೆ ಮಾಡಿದವರ ಭೋಗ್ಯ ವಸ್ತುಗಳು! ಇದಕ್ಕೆ 'ಖೂನವೇಹಾ' ಎಂದು ಹೆಸರು. ತೊಟ್ಟಿಲಲ್ಲಿ ಮದುವೆ ಮಾಡುವ ಪದ್ಧತಿಯನ್ನು ಎಲ್ಲರೂ ಬಲ್ಲಾದ ವಿಷಯ. ಗಡಿನಾಡಿನೊಳಗಿನ ಪದ್ಧತಿ ಮತ್ತೂ ವಿಚಿತ್ರ! ಗರ್ಭಾವಸ್ಥೆಯಲ್ಲಿಯೇ ಮದುವೆಯಾಗುತ್ತದೆ! ಈ ಪದ್ಧತಿಗೆ 'ತಾಬದುಲ್ಲಾ' ಎಂದು ಹೆಸರು ಈ ಕೆಟ್ಟ ಪದ್ಧತಿಗಳನ್ನು ನಿರ್ಮೂಲಿಸುವದಕ್ಕಾಗಿ ಸ್ತ್ರೀಯರು ಆವೇಶದಿಂದ ಮಾತನಾಡಿದರು ಸರಕಾರವು ಶಾರದಾ ಕಾಯಿದೆಯಂತೆ ಕಠೋರ ಉಪಾಯ ಕೈಕೊಳ್ಳಬೇಕಾಗಿಯೂ ಸ್ತ್ರೀಯರು ನಿರ್ಣಯಿಸಿರುತ್ತಾರೆ

ವೃತ್ತಸಾರ.

— ನಾಗಪುರದ ಬೇಸ್ಟರ ಅಭ್ಯಂಕರರವರು ಮಧುಮೇಹದ ವಿಕಾರದಿಂದ ಬುಧವಾರ ರಾತ್ರಿ ತೀರಿಕೊಂಡರು. ಅಭ್ಯಂಕರರು ಸ್ವಾತಂತ್ರ್ಯಸಂಗ್ರಾಮದ ವೀರ ಭಟರು. ಸತ್ಯಾಗ್ರಹ ಪಡಾಶಿ ಎಂಬಾತನ ಜೈಲಿಗೆ ಹೋಗಿದ್ದರು. ನಾಗಪುರದ ಬೇಸ್ಟರರು, ಸಾವಿರಾರು ರೂಪಾಯಿ ಪ್ರಾಪ್ತಿಯಿದ್ದ ಬೇರಿಷ್ಟರಿಯನ್ನು ಬಿಟ್ಟರೇ ಕೃಪಾಕ ರಾಷ್ಟ್ರಸಂಗ್ರಾಮದಲ್ಲಿ ಸೇರಿದರು ಮಧ್ಯ ಪ್ರಾಂತದ ಕಾನ್ಸಿಲಿನ ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಅವರು ಆರಿಸಲ್ಪಟ್ಟಿದ್ದರು. ಕಾಲಿಗೆ ಬಾವು ಬಾಗಿದ ನವದಿಂದ ಹುಣ್ಣಾಗಿ ಅದೇ ದೊಡ್ಡದಾಗಿ ಎಷ್ಟು ಔಷಧೋಪಚಾರ ಮಾಡಿದಾಗ್ಯೂ ಅವರ ಪ್ರಕೃತಿ ನೆಟ್ಟಗಾಗಲಿಲ್ಲ ಮುಂಬಯಿಯಲ್ಲಿ ಕಂಡು ನಾ. ಗೋಪಾಳರಾವ ದೇಶಮುಖ ಪ್ರಭೃತಿ ವೈದ್ಯರಿಂದಲೂ ಉಪಚಾರ ಮಾಡಿದಾಗ್ಯೂ ಬೇರಿಸ್ಟರ ಅಭ್ಯಂಕರರಿಗೆ ಗುಣ ಕಾಣಲಿಲ್ಲ. ಬುಧವಾರ ಕಾಲು ಕೊಳೆಯಲಾರಂಬಿಸಿದ್ದರಿಂದ ಶಸ್ತ್ರಪ್ರಯೋಗ ಮಾಡಬೇಕಾಯಿತು ಆದಾಗ್ಯೂ, ಬೇರಿಸ್ಟರ ಅಭ್ಯಂಕರರ ಪ್ರಕೃತಿ ಕೆಟ್ಟು ಬುಧವಾರ ರಾತ್ರಿ ಸ್ವರ್ಗಸ್ಥರಾದರು

— ಹರಿಜನ ಸೇವಕ ಸಂಘದ ಅಖಿಲ ಭಾರತೀಯ ಕಾರಭಾರಿ ಮಂಡಳವು ದಿಲ್ಲಿಯಲ್ಲಿ ಒಂದು ವಿದ್ಯಾಲಯವನ್ನು ಸ್ಥಾಪಿಸಬೇಕಾಗಿ ಠರಾಯಿಸಿದ್ದಾರೆ. ಒಂದು ಸಾವಿರ ರೂಪಾಯಿ ಖರ್ಚು ಮಾಡಿ ಸ್ಥಳ ಕೊಂಡು ಅಲ್ಲಿ ಅಷ್ಟೇ ಬೆಲೆಯ ಒಂದು ಕಟ್ಟಡವನ್ನು ಕಟ್ಟಿಸಿ ಅಲ್ಲಿ ಹರಿಜನರಿಗೆ ಚರ್ಮ ಹದ ಮಾಡುವ ಕೆಲಸವನ್ನು, ಪಾದರಕ್ಷೆಗಳನ್ನು ತಯಾರಿಸುವ ಕೆಲಸವನ್ನು ಕಲಿಸಬೇಕಾಗಿ ಠರಾಯಿಸಿದ್ದಾರೆ

— ಜಿನ್ನಾ ಕಂಪನಿಯವರು ಇದೇ ೧ನೇ ತಾರೀಖಿನಿಂದ ಕರಾಚಿ, ಮದ್ರಾಸ, ಮುಂಬಯಿ ಮೊದಲಾದ ಕಡೆ ವಿಮಾನಗಳ ಓಡ್ಯಾಟವನ್ನು ಪ್ರಾರಂಭಿಸಿದ್ದಾರೆ ಮುಂಬಯಿಯಲ್ಲಿ ಬೆಳಗ್ಗೆ ಹೊರಟು ಮಧ್ಯಾಹ್ನ ವಿಜಾಪುರ-ಹೈದರಾಬಾದಿಗೆ ಬಂದು, ಅಲ್ಲಿ ರಾತ್ರಿ ಉಳಿದು, ಮರುದಿನ ಬೆಳಗಿನ ೧೦ ಘಂಟೆಗೆ ಮದ್ರಾಸಿಗೆ ತಲ್ಪುವುದು ಅಗಿಬೋಟಿಯ ಪ್ರವಾಸ ಹಿಂದಾಗಿ ವಿಮಾನದ ಪ್ರವಾಸ ಮುಂದುಗಡೆಯಾಗುತ್ತಿದೆ. ಸ್ವರ್ಗ ತೀರ ಸಮೀಪವಾಗುತ್ತಿದೆ!

— ಗಡಿನಾಡಿನ ಗಾಂಧಿಗಳ ಅನುಯಾಯಿ ಡಾ। ಖಾನ ಸಾಹೇಬರವರು ಗಡಿನಾಡಿಗೆ ಹೋಗಿ ಅಕ್ಕರಸ್ಥಿಯೇ ತನ್ನ ವೈದ್ಯಕೀ ಧಂದೆಯನ್ನು ಪುನಃ ಪ್ರಾರಂಭಿಸುವವರಿದ್ದಾರೆ

— ಮುಂಬಯಿಯ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ನಾಳೆ ಮಂಗಳವಾರ ಕರ್ನಾಟಕ ರೈತರ ದಿನವನ್ನು ಪಾಲಿಸಬೇಕೆಂದು ಗೊತ್ತುಮಾಡಿದ್ದಾರೆ. ಆದಿನ ಗಾಂಧಿ ಸೇನಾ ಸೇನೆಯವರೂ, ದೇಶಸೇವಿಕೆಯರೂ, ಇತರ ಸ್ವಯಂಸೇವಕರೂ ಮನೆ-ಮನೆಗೆ ಹೋಗಿ ಧರ್ಮ ಕೂಡಿಸುವರು. ಇದಲ್ಲದೆ ಪ್ರಾಂತಿಕ ಕಮಿಟಿಯವರು ಪ್ರತಿಯೊಂದು ವಠಾರ ಸಂಘದವರಿಗೆ ಯಥಾಶಕ್ತಿ ನೆರವಾಗುವಂತೆ ಬಿನ್ನಹ ಪತ್ರಿಕೆಗಳನ್ನು ಕಳಿಸಿರುತ್ತಾರೆ. ಶ್ರೀ। ಪರವಾನ, ಸೌ। ಗೋಶಿಬೇನ ಕಪ್ತಾನ್, ನಾಗಿನದಾಸ ಮಾಸ್ತರ ಎಸ್. ಕೆ. ಪಾಟೀಲ ಮೊದಲಾದವರು ಹುರುಪಿನಿಂದ ಈ ಕಾರ್ಯದಲ್ಲಿ ತೊಡಗಿದ್ದಾರೆ. ಕರ್ನಾಟಕದ ರೈತರಿಗಾಗಿ ದೇಶಾಭಿಮಾನಿ ಬಂಧು ಭಗಿನಿಯರು ಪ್ರಯತ್ನ ಮಾಡುವುದನ್ನು ನೋಡಿ ಸಮಸ್ತರ ಪ್ರತಿಯೊಂದರಿಂದ ನೆರವಾಗಬೇಕಾಗಿ ವಿನಂತಿ

—ಬಾಂದ್ರದೊಳಗಿನ ಒಂದು ಸುದ್ದಿ ಹರಿಜನ ಹುಡುಗ ಕಾಲಿಕಾರರ ಕೇರಿಗಳ ೩೯ ಕಿಂದಿ ಅಂಗಡಿ ತೆರೆಯಬಾರದಾಗಿ ಜನರು ಮಾಡಿದ ನಿಷೇಧವನ್ನು ಒಂದಿಗೊತ್ತ ಸರಕಾರವು ಅಲ್ಲಿಂದು ಕಿಂದಿ ಅಂಗಡಿ ತೆರೆದಿದೆ ಮಾಂಚೆ ಅಂಗಡಿಗೆ ಗಿರಾಕಿಯಿಲ್ಲ, ಅಂಗಡಿಕಾರನು ಚಿಕ್ಕ ಮಕ್ಕಳಿಗಲ್ಲ ಪುಕ್ಕಟೆಯಾಗಿ ಬಂದೊಬ್ಬ ಗುಟುಕು ಕಿಂದಿ ಕುಡಿಯಲು ಮಕ್ಕಳಿಗೆ ಈಗ ಅದೊಂದು ಚಟವಾಗಿದೆ. ತಿಂಡಿಗಾಗಿ ತಾಯಿ-ತಂದೆಗಳಿಂದ ಪಡೆದ ದುಡ್ಡು-ಕಾಸನ್ನು ಕಿಂದಿ ಅಂಗಡಿಕಾರನಿಗೆ ಕೊಟ್ಟು ಕಿಂದಿ ಕುಡಿಯುತ್ತಾರೆ. ಎಂಥಾ ಪಾಪ ದೊಡ್ಡದು 'ಕ್ರಾಂತಿ ಸ್ವಾತಂತ್ರ್ಯಕ್ಕಾಗಿ ಪವಿತ್ರವಾದ ಚಿಕ್ಕ ಮಕ್ಕಳಿಗೆ ಕಿಂದಿ ಕುಡಿಯ ಕಲಿಸಿದ ಅಂಗಡಿಕಾರನದೋ, ಜನರ ನಿಷೇಧ ತಿರಸ್ಕರಿಸಿ ಅಂಗಡಿ ಸ್ಥಾಪಿಸಿದ ಸರಕಾರದ್ದೋ?'

ವಿಕ್ರಿಗೆ

ತಯಾರಾಗಿದೆ!

ವೇ॥ ಮೊಗೇರಿ ಭಾಸ್ಕರ ಅಡಿಗಳಿಂದ

ಸೂರ್ಯಸಿದ್ಧಾಂತರೀತ್ಯಾ ತಯಾರಿಸಲ್ಪಟ್ಟ,

ಕೆಕ್ಕಾರ ಶ್ರೀ ದರ್ಶನವಿದ್ಯಾಪರಿಷತ್ತಿನ ಆಶ್ರಯ ಪಡೆದ

ಯುವಸಂ॥ ಪಂಚಾಂಗವು

ಮಾರಾಟಕ್ಕೆ ಸಿದ್ಧವಾಗಿದೆ!

ನಿಯಮಿತ ಪ್ರತಿಗಳು ತೆಗೆದಿರುವದರಿಂದ,

ಬೇಕಾದವರು ಶೀಘ್ರ ಬರೆಕೊಳ್ಳಬೇಕು

ಪತ್ತೆ:—

"ಸ್ಟಾರ ಆಫ್ ಕೆನರಾ ಪ್ರೆಸ್," ಕುಮಟಾ.

ಬನ್ನಿರಿ! ಬಾಳಿಕೆ ಬರುವ ಕೆಲಸಗಳನ್ನು ಮಾಡಿಸಿಕೊಳ್ಳಿರಿ!!

ಉತ್ತಮವಾದ ಕೆಲಸ! ಯೋಗ್ಯವಾದ ಧಾರಣೆ!!

ಯು. ಶಿವಾ ಎಂಡ್ ಬ್ರದರ್ಸ,

ಒಟೊಮೊಬೈಲ ಇಂಜಿನಿಯರ್ಸ ಎಂಡ್ ಬೊಡಿ-ಬಿಲ್ಡರ್ಸ,

ಕುಮಟಾ. (ಉ. ಕನ್ನಡ.)

ನಮ್ಮ ಕಾರಖಾನೆಯಲ್ಲಿ

ಶವರಲೆಟ್, ಬ್ಯೂಕ, ಕ್ರೈಸಲರ, ಸಿಟ್ರೊನ್, ಡೊಜ್, ಡಿಸೊಟೊ, ಪ್ಲೈಮೌತ, ಎಸೆಕ್ಸ, ಎರಸ್ಕಿನ್, ಫಾರ್ಗೊ, ಫ್ಯಾಟ, ಜಿ ಎಮ್. ಸಿ., ಫೋರ್ಡ ಎ, ಫೋರ್ಡ ಎಎ., ಹಪ್‌ಮೊಬೈಲ್, ಹಡಸನ್, ಮೆಸ್ಕಿವೆಲ್, ಓವರಲೆಂಡ್, ವಿಪೆಟ್, ವಿಲೀಸ, ಸ್ಟುಡಬೇಕರ, ರುಗ್ಬಿ, ಪ್ಲಿಮೌಥ, ರಿಯೋ, ಸಿಂಗರ ಮೊದಲಾದ ಯಾವತ್ತೂ ಮೇಕರ್ಸ್‌ಗಳ ಮೋಟರುಗಳ ರಿಪೇರಿ ಕೆಲಸವು ಉತ್ತಮವಾಗಿಯೂ ಸವಲತ್ತಿಯ ದರದಿಂದಲೂ ಮಾಡಿಕೊಡುವೆವು ಬೇಕಾದ ಸ್ಪ್ರಿಂಗ ಬೋಲ್ಟುಗಳು ನಮ್ಮಲ್ಲಿ ಮಾಡಿಕೊಡುತ್ತೇವೆ ಇದಲ್ಲದೆ—

ಎಕ್ಸ್ರಗಟ್ಟಿ ಜಮೀನಿಗೆ ಸುಲಭವಾಗಿ ನೀರು ಸೇಯುವ ಟಿಕಾವು ಸಣ್ಣ-ದೊಡ್ಡ ನೀರಿನ ರಾಟೆಗಳನ್ನು ತಯಾರಿಸಿ ಬೇಕಾದಲ್ಲಿ ಸಿಟಿಂಗ ಮಾಡಿಕೊಡುವೆವು, ಬೊಡಿಬಿಲ್ಡಿಂಗ, ಬೇಕಾದ ನಮೂನೆಯ ಖುರ್ಚಿಗಳೂ, ಬಾಂಕುಗಳೂ, ಕೊಟುಗಳೂ ಮಾಡಿಕೊಡುವೆವು, ಬಡಗಿಯ ಅನೇಕ ಕೆಲಸಗಳು ಸಹ ಮಾಡಿಕೊಡಲ್ಪಡುತ್ತವೆ

ॐ

'दशमूलारिष्ट.'

ದಶಮೂಲಾರಿಷ್ಟ

ಇದು ಬಹು ತರವಾಗಿ ಎಲ್ಲ ಆಯುರ್ವೇದ್ಯರಿಗೂ ಹಾಗೂ ಎಲ್ಲಾ ಫಾರ್ಮಾಸಿಗಳಲ್ಲೂ ಸಿಗುವ ಔಷಧವಿರುತ್ತದೆ. ಆದರೆ ಇದರಲ್ಲಿ [illegible] ಸಿಗುವ ವನಸ್ಪತಿಗಳು ಎಲ್ಲಾ ಕಡೆಯ [illegible] ಸಿಗುವದು [illegible] ಅದರಿಂದ ಅದರ ಗುಣಧರ್ಮ ಸರಿಯಾಗಿ ಕೊಡದೇ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ ದಶಮೂಲಾರಿಷ್ಟವು [illegible] ವನಸ್ಪತಿಗಳ [illegible] ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. [illegible] ವನಸ್ಪತಿಗಳು [illegible] ಸಿಗುವದರಿಂದ ಇದರ ಗುಣವು [illegible] ಉತ್ತಮವಾಗಿರುತ್ತದೆ.

ಈ [illegible] ಹೊಟ್ಟೆಯೊಳಗಿನ [illegible] ಸರಿಪಡಿಸಿ [illegible] ತಾಕತ್ತು [illegible] ಉಂಟುಮಾಡಿ [illegible].

ಇದರಿಂದ [illegible] (ವಾತ, ಕ್ಷಯ, [illegible]) [illegible] ರಕ್ತ ಸಂಬಂಧದ [illegible] ವ್ಯಾಧಿ, [illegible] ಅಗ್ನಿಮಾಂದ್ಯ, ಉದರರೋಗ, [illegible] ರೋಗ, ಮೂತ್ರಕೃಚ್ಛ್ರ, [illegible] ಸ್ತ್ರೀಯರ ಗರ್ಭ [illegible] ಇದ್ದರೆ [illegible] ಹೆಂಗಸರಿಗೆ [illegible] ನಂತರ [illegible] ಹಾಗೂ [illegible] ರೋಗಗಳಿಗೆ ಅತ್ಯುತ್ತಮ [illegible].

ವಿಶೇಷವಾಗಿ ಹೆಂಗಸರಿಗೆ [illegible] ನಂತರ (ದಿನ ಎರಡಾವರ್ತಿ) [illegible] ದಿನಗಳವರೆಗೆ ಕೊಟ್ಟರೆ [illegible] ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ಸವ [illegible] ವ್ಯಾಪಾರಸ್ಥರಿಗೆ [illegible] ವೆಚ್ಚ [illegible] ನವರು ಪತ್ರವ್ಯವಹಾರ ಮಾಡಬೇಕು.

[illegible] ಬಾಟ್ಲಿ ಕ್ಕೆ ರೂ [illegible]—[illegible]—0

" ಬಾಟ್ಲಿ ಒಕ್ಕೆ ರೂ [illegible] 0

" ಬಾಟ್ಲಿ ಒಕ್ಕೆ ರೂ [illegible]—0 0

ಇದಲ್ಲದೆ ನಮ್ಮಲ್ಲಿ ಆಯುರ್ವೇದ [illegible] ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೆಹ, ಅಶ್ವಗಂಧಾರಿಷ್ಟ, ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, [illegible] ಆಸವ, ಲೋಹಾಸವ, [illegible] ತೈಲ, [illegible] ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ [illegible] ಔಷಧಗಳು [illegible] ಬೇಕಾದ [illegible] ಅನುಭವ [illegible].

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,

ಮಾಲಕ,

ಆಯುರ್ಧನ್ವಂತರಿ ಔಷಧಾಲಯ,

ಪೋಸ್ಟ — **ಕುಮಟಾ.** (ಉ ಕನ್ನಡ)

ಶ್ರೀ [illegible] ಪ್ರಸನ್ನ |

ಡಾ| [illegible] ಎಮ್. ಡಿ, ([illegible]) ಸಂಕೇಶ್ವರ ಆಸ್ಪತ್ರಿ ಇವರು ದಮ್ಮು ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ ರಾಮಬಾಣ ಔಷದವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ- ಮನೆತನದ ವೈದ್ಯ !

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ದೋಷಿ ಅಥವಾ [illegible]) [illegible] ([illegible]), ಟಾಯಿಫಾಯಿಡ (ವಿಷಮಜ್ವರ), ಹೊಟ್ಟೆಕಡಿ, ಕಾಲರಾ, ಪ್ಲೇಗ, ಇನ್‌ಫ್ಲುಯೆಂಝಾ [illegible] (ಹಳೆದಾಗಿ ಇದ್ದವೆ [illegible]) ಚಿಕ್ಕ ಹುಡುಗರ ಅನಸ್ಕಾರ, ಅಗ್ನಿಮಾಂದ್ಯ, [illegible], ಧಂಡಿಯು [illegible] ಗಂಟಲು ನೋವು ಮತ್ತು ಗಂಟಲಿನ [illegible] ಧ್ವನಿ [illegible] ರಕ್ತದೋಷ, [illegible], ಪಾಂಡುರೋಗ, [illegible] ಹೊಟ್ಟೆಯೊಳಗಿನ ಗಂಟು, ಪುಪ್ಪುಸದ [illegible] ವಿಕಾರ, ಧಾತುಕ್ಷೀಣತೆ, ಸ್ವಪ್ನದೋಷ, [illegible] ಮುಂತಾದ ಎಲ್ಲಾ ರೋಗಗಳ ಮೇಲೆ [illegible] ಈ ಔಷಧವು ತಕ್ಕೊಳ್ಳುವಿಕೆಗೆ [illegible], ರುಚಿಕರವಾದ [illegible] ಹುಡುಗರಿಂದ [illegible] ಪ್ರೀತಿಯಿಂದ ತಕ್ಕೊಳ್ಳುವರು. ಇದು [illegible] ರಕ್ತವೃದ್ಧಿಯಾಗಿ ವೀರ್ಯವೃದ್ಧಿಯಾಗುವದು. [illegible]

ಈ ಔಷಧದಿಂದ [illegible] ವರ್ಷಗಳಿಂದ ದಮ್ಮಿನ ರೋಗದಿಂದ [illegible] ರೋಗಿಗಳು ಪೂರ್ಣ [illegible] ಈಗ ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗಗಳ [illegible] ಈ ಔಷಧ [illegible] ರೋಗಮುಕ್ತರಾಗಿ [illegible] ಸಾವಿರಾರು ಜನರು [illegible] ಈ ಔಷಧ [illegible] ಇದನ್ನು ಹಳ್ಳಿಗರು ಹಾಗೂ [illegible] ಸಂಗ್ರಹದಲ್ಲಿ ಇಟ್ಟುಕೊಳ್ಳತಕ್ಕದ್ದು.

[illegible] ಹೊತ್ತಿನಲ್ಲಿ ಜನರು [illegible] ಜ್ವರವು [illegible] ಈ ಕಷಾಯ [illegible] ಮತ್ತು [illegible] ಈ ಔಷಧವು [illegible] ತಕ್ಕೊಳ್ಳುವ [illegible] ಸಂಗತಿ ಸಿಗುತ್ತದೆ.

ಲಕ್ಷ್ಮೀಬಾಯಿ ಕೊಲ್ಹಾಪೂರ [illegible] ಬಡೋದಾ, ಆಸ್ಥಾನ [illegible] — ತಮ್ಮ 'ಕಲ್ಪತರು ಕಷಾಯ' ಈ ಔಷಧವನ್ನು ನನ್ನ ಧ್ವನಿ ಬಿದ್ದ ಹೊತ್ತಿನಲ್ಲಿ ತಕ್ಕೊಳ್ಳುವ ಪ್ರಸಂಗ ಬಂತು [illegible] ಔಷಧ ತಕ್ಕೊಂಡ ಅರ್ಧ ತಾಸಿನಲ್ಲಿಯೇ ಮೊದಲಿನಂತೆಯೇ [illegible] ಒಂದು ಧ್ವನಿ ಬಿದ್ದ ಕಲ್ಪನೆಯೇ ಉಳಿಯಲಿಲ್ಲ [illegible]

ಶ್ರೀಯುತ [illegible] ಕಿರಪೇಕರ, [illegible] ಬಿಲ್ಡಿಂಗ- ಮುಂಬಯಿ [illegible] 'ಕಲ್ಪತರು ಕಷಾಯ'ವು ದಮ್ಮಿನ ಮೇಲೆ [illegible] ನನ್ನ [illegible] ದಮ್ಮು [illegible] ಅದಕ್ಕಾಗಿ [illegible] ಕಷಾಯದ ಬಾಟ್ಲಿಗಳನ್ನು ರೇಲ್ವೆ ಪಾರ್ಸಲಿನಿಂದ ಕಳಿಸಿಕೊಡಿರಿ.

ಕಿಮ್ಮತ್ತು [illegible] ಬಾಟ್ಲಿಗೆ ರೂ [illegible], ಅರ್ಧ [illegible] ಬಾಟ್ಲಿಗೆ ರೂ [illegible], [illegible] ಬಾಟ್ಲಿಗೆ [illegible].

ನಟಶ್ರೇಷ್ಠ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪೂರಕರ ಮೊದಲಾದ ಅನೇಕ ಮಹನಿಯರು ಉಪಯೋಗಿಸಿ ಪ್ರಶಂಸಾ ಪತ್ರಗಳನ್ನು ಕೊಟ್ಟಿರುತ್ತಾರೆ

ಔಷದೀ ದಂತಮಂಜನ

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು, ಕೀವು, ರಕ್ತ, ಹಲ್ಲು [illegible] ರೋಗ [illegible] ವಾಸಿಯಾಗುತ್ತವೆ. ಈ ಔಷಧವನ್ನು ದಿನಾ ಒಂದಾವರ್ತಿ ಯಾ ಎರಡಾವರ್ತಿ ಹಲ್ಲುಗಳಿಗೆ ತಿಕ್ಕುವದಲ್ಲದೆ ನಾಲಿಗೆಗೂ ತಿಕ್ಕಬೇಕು [illegible]

[illegible] ಥಂಡಿ ಜ್ವರ (ಮಲೇರಿಯಾ) ದ ಮೇಲೆ ಮಿಶ್ರಣ, [illegible] ಔಷದ, ಜಂತುನಾಶಕ ಕಷಾಯ, ಕಾಲರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ [illegible] ಔಷದಗಳು ನಮ್ಮಲ್ಲಿ ಸಿಗುತ್ತವೆ

ಶ್ರೀ ರಾಮ ಆಯುರ್ವೇದಿಕ ಫಾರ್ಮಸಿ, ಗಡಹಿಂಗ್ಲಜ. (ಕೊಲ್ಹಾಪುರ ಸಂ)

[illegible] ಸಿಗುವ ಸ್ಥಳ — [illegible] ಕಲಭಾಗಕರ ದುಕಾನ, ಕುಮಟಾ

ಇದನ್ನು ಪಾಂಡುರಂಗ ಕೃಷ್ಣ [illegible] (ಸಂ [illegible]) [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

Reg No. B 1270. Monday, 14th January, 1935

ವರ್ಷ ೧೭

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೦

ಪತ್ರದ ವರ್ಗಣಿ.
ಕುಮಟೆಯಲ್ಲಿ ಆಗಾವು
ರೂಪಾಯಿ 2-4-0
ಮನಿಯಾರ್ಡರಿನಿಂದ
ರೂ. 3-1-0
ವ್ಹಿ. ಪಿ. ಆ ಖರ್ಚು ಸೇರಿ
ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ವ್ಯಾಪಾರಿ
ಜ್ಯಾಹಿರ (೧೫ ಎಡ್ ಅಂದ) ೩ ಸಾಲುಗಳವರೆಗೆ ರೂ. 1-0-0
ಆ ನಂತರ, ಪ್ರತಿಸಾಲಿಗೆ 0-2-0
ಹತ್ತಿಂಗಳ ಸಾಲು ಎಷ್ಟು ಹೆಚ್ಚಿರುವವರೋ ಆ ಪ್ರಮಾಣದಿಂದ ಚಿಪ್ಪು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—(ಕುಮಟಾ— ಕಾನಡಾವೃತ್ತ, ಸೋಮವಾರ, ಕಾರ್ತೀಕ ಬ ೧೪ ವಾರ ಜನವರಿ ಸನ್ ೧೯೩೫ ನೇ ಇಸವಿ.)—

ವಿಕ್ರಿಗೆ ತಯಾರಾಗಿದೆ!

ವೇ|| ಮೂಗೇರಿ ಭಾಸ್ಕರ ಅಡಿಗಳಿಂದ
ಸೂರ್ಯಸಿದ್ಧಾಂತರೀತ್ಯಾ ತಯಾರಿಸಲ್ಪಟ್ಟ
ಕೆಕ್ಕಾರ ಶ್ರೀ ಧರ್ಮವಿದ್ಯಾಪರಿಷತ್ತಿನ ಆಶ್ರಯ ಪಡೆದ

ಯುವಸಂ|| ಪಂಚಾಂಗವು
ಮಾರಾಟಕ್ಕೆ ಸಿದ್ಧವಾಗಿದೆ!

ನಿಯಮಿತ ಪ್ರತಿಗಳು ತೆಗೆದಿರುವದರಿಂದ,
ಬೇಕಾದವರು ಶೀಘ್ರ ಬರಕೊಳ್ಳಬೇಕು
ಪತ್ತೆ —
"ಸ್ಟಾರ ಆಫ್ ಕೆನರಾ ಪ್ರೆಸ್" ಕುಮಟಾ.

Siromani Udipi Narayanacharya
CHAUKHAMBA BENARES CITY

S U N & CO
BENARES CITY

ಮಹಾಶ[illegible] ದೇ[illegible] ಗಂಗಾ[illegible]ಸೆ ತೆಪ್ಪ[illegible] ತ್ತನ್ನವಾದ [illegible] ಧರಿಸಿಕೊಂಡು [illegible] ಪತ್ರ[illegible] [illegible] ಶ್ರೀ 108 [illegible] 6-0 ಯಿಂದ 10 ರೂ[illegible] [illegible] ಇದು [illegible]ದಾಗುತ್ತ ಆಗುತ್ತ [illegible] ಕಂಬಿ [illegible] 32 [illegible] ರೂ 0 8 0 [illegible] ರೂ 100 [illegible] 1 [illegible] 3 8 0 [illegible] 50 [illegible] ತಿಳಿಯಲು ಅಪೇಕ್ಷಿಸುವವರು 0 1 0 [illegible] ಸಿಂದ, 1 [illegible] ಪತ್ರೆ, 1 ವಿಶ್ವೇಶ್ವರನ [illegible] ಕಳಿಸಿಕೊಡಬೇಕು

ಪತ್ತೆ – ಶಿರೋಮಣಿ ನಾರಾಯಣಾಚಾರ್ಯ,
ಚೌಕಾಂಬಾ, ಕಾಶೀ ಕ್ಷೇತ್ರ

ಡಾ|| ಮಹಿಷಿಯವರ
ಎಲ್ಲಾ ಥರದ ಔಷಧಗಳು
ದೇವಪ್ಪ ಅಯ್ಯಾ ನಾಯ್ಕ, ಕುಮಟಾ
(ಸೋಲ ಏಜಂಟ ಕಾರವಾರ ಜಿಲ್ಹಾ) ಇವರಲ್ಲಿ
ಮಾರಾಟಕ್ಕೆ ಸಿಗುತ್ತವೆ

ಮೀನುಕಣ್ಣಿಗೆ (Corn) ಮದ್ದು

ಹತ್ತಾಣೆ ಬಿಲ್ಲಿ ಸ್ಟಾಂಪು ಕಳಿಸಿದರೆ ಕಳಿಸುತ್ತೇವೆ
ವ್ಹಿ. ಪಿ. ಯಿಂದ ಖರ್ಚ ಹೆಚ್ಚು
ಕಲಬಾಗ ಗಂಗಾಧರ ಎಂಡ್ ಸನ್ಸ
ಕುಮಟಾ. (ಕಾರವಾರ)

The Canara Industrial & Banking Syndicate, Ltd.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Head Office — **Mukund Nivas, UDIPI**

Branches Udipi, Bangalore City, Mangalore, Payyanur, C[illegible]nore, Brahmavar, Honnavar, Karwar, Hubli, Belgaum, Sirsi, Kumta, Hunsekatta, Coondapur, Ankola, Kanhangad & Bellary

ಬಡ್ಡಿಯ ದರ.

***(Current)* ಚಾಲತಿ ಠೇವು. *(Savings Bank)* ಸೇವಿಂಗ್ಸ ಬೇಂಕ ಠೇವು**

ಪ್ರತಿ ದಿನದ ಶಿಲ್ಕಿನ ಮೇಲೆ ಶೇಕಡಾ 2 ರೂಪಾಯಿ	6ನೇ ತಾರೀಕಿನಿಂದ ತಿಂಗಳ ಅಂತದ ವರೆಗೆ, ಅತಿ ಕಡಿಮೆ ಶಿಲ್ಕಿನ ಮೇಲೆ ಶೇಕಡಾ 3½ ರೂಪಾಯಿ

[*Fixed deposits*] ಕಾಯಂ ಠೇವು.

3ರಿಂದ 5ತಿಂಗಳ ವರೆಗೆ ಶೇಕಡಾ 4	12ರಿಂದ 23 ತಿಂಗಳ ವರೆಗೆ ಶೇಕಡಾ 5
5 ,, 11 ,, ,, ,, 4½	24 ತಿಂಗಳಿಗೆ ಶೇಕಡಾ 5½

ಅಲ್ಪ ಅವಧಿಯ ಠೇವುಗಳು ಶೇಕಡಾ 3½ ರೂಪಾಯಿಯಂತೆ ಅಂಗೀಕರಿಸಲ್ಪಡುವವು
ಬಿನ್ನಾಭರಣಗಳ ಈಡಿನ ಮೇಲೆ ಸಾಲಗಳನ್ನು ಕೊಡುತ್ತದೆ
ಚೆಕ್ಕು, ಹುಂಡಿ, ಮತ್ತು ಡ್ರಾಫ್ಟುಗಳು ಇವೇ ಮೊದಲಾದ ಬೇಂಕಿನ ಎಲ್ಲಾ ತರದ ವ್ಯವಹಾರಗಳು ನಡೆಯಲಾಗುವವು
ಹೆಚ್ಚಿನ ಮಾಹಿತಿಗೆ ಪತ್ರದ್ವಾರಾ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು

Kumta 2—12—1934 | **T. RANGA PAI,**
Agent at KUMTA

|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||

ಬನ್ನಿರಿ!

ಉಡುಪಿ ಬ್ರಾಹ್ಮಣರ
ದಿ ಮೊಡರ್ನ ಹಿಂದೂ ಹೊಟೆಲ್,
ಕುಮಟಾ (ಉ. ಕನ್ನಡ)

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರಾವ್ಹಲರರಿಗೂ ಊ ಕಾಲೇಜಿಗೂ ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್" ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ.- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ.

ಅಲ್ಲಲ್ಲಿ ಇಷ್ಟಿಷ್ಟು!

ಇದೇ ಬರುವ ಜನವರಿ ೧೬ ನೇ ತಾರೀಖಿಗೆ ದಿಲ್ಲಿಯಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳ, ಪಕ್ಷ ಪಾರ್ಲಿಮೆಂಟರಿ ಬೋರ್ಡಿನ ಸಭೆ ನಡೆಯುವದಿದೆ. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ರಾಷ್ಟ್ರೀಯ ಸಭಿಕರು ಯಾವ ಧೋರಣವನ್ನಿಟ್ಟು ನಡಕೊಳ್ಳಬೇಕೆಂಬದರ ಕುರಿತು ಚರ್ಚೆಯಾಗಿ ನಿರ್ಣಯ ಕೈಕೊಳ್ಳಲ್ಪಡುವದು. ಸುಧಾರಣೆಯ ಈ ಸೂಚನೆಯನ್ನು ರಾಜ್ಯಘಟನೆಯನ್ನು ಬಲಾತ್ಕಾರದಿಂದ ಸರಕಾರವು ಪುರಸ್ಕರಿಸಿದಲ್ಲಿ ರಾಷ್ಟ್ರೀಯ ಸಭಿಕರು ದಿವಾನಾಧಿಕಾರಗಳನ್ನು ಅಂಗೀಕರಿಸಬೇಕೋ ಬೇಡವೋ ಎಂಬದರ ಕುರಿತು ವಿವಾದವಾಗುವದು. ಯಾವತ್ತು ಅಧಿಕಾರಸ್ಥಾನಗಳನ್ನು ರಾಷ್ಟ್ರೀಯ ಸಭಿಕರು ಆಕ್ರಮಿಸಿಕೊಂಡು ಪರಸ್ಪರಾವಧಿಯ ದೇಶಹಿತ ಮಾಡಬೇಕೆಂಬದೊಂದು ವಿಚಾರವು ಮದ್ರಾಸ ಇಲಾಖೆಯ ಯೋಗಿಗಳ ಆಂಧ್ರದ ಶ್ರೀ ಕಲ್ಲೇಶ್ವರರಾವ್ ಪ್ರಭೃತಿ ಮಂಡಳಿಗರು ಪ್ರತಿಪಾದಿಸಲಾರಂಭಿಸಿದ್ದಾರೆ. ಈ ಘಟನೆಯಲ್ಲಿಯ ಪ್ರತ್ಯಕ್ಷ ಆಲೋಚನ ಪಡದು ಅವರನ್ನು ಶಿಫಾರಸುಗಳನ್ನು ಕೈಕೊಂಡ ರಾಜ್ಯಯೋಜನೆಗೆ ಹಿಂದೀಯರ ಬೆಂಬಲ ಪಡಕೊಳ್ಳುವ ಗುಪ್ತ ಕಾರಸ್ಥಾನ ನಡೆಯುವದಾಗಿಯೂ ಒಂದು ಸರ್ಕಾರಿ ಮಸೂದೆ ಲಂಡನಿಗೆ ಹೋಗಿರುವದಂತೆ! ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಯಲ್ಲಿ ರಾಷ್ಟ್ರೀಯ ಸಭಿಕರು ಗೆದ್ದವರಿಂದ ಸಾಮ್ರಾಜ್ಯ ಸರಕಾರವು ಆಲೋಚನೆಯಲ್ಲಿ ತೊಡಗಿರುವದಂತೆ! ಕಲಕತ್ತೆಯ ಅಮೃತ ಬಝಾರ ಪತ್ರಿಕೆಯ ದಿಲ್ಲಿಯ ಸುದ್ದಿಗಾರರ ಈ ಪ್ರಕಾರ ಪ್ರಕಟಿಸುತ್ತಾರೆ. ದೀನಬಂಧು ಎಂಡ್ರೂಜರವರು ಮಹಾತ್ಮರ ಅಭಿಪ್ರಾಯ ಕೇಳಿಕೊಳ್ಳುವದಕ್ಕಾಗಿಯೇ ಇತ್ತ ಕಡೆ ಥಟ್ಟನೆ ಹೊರಟು ಬಂದರೆಂದ. 'ಮುಂಬಯಿ ಕ್ರೊನಿಕಲ್' ಪತ್ರಿಕೆಗೆ ಲಂಡನಿನಿಂದ ಕಳಿಸಿದ ಸುದ್ದಿ ನಿರಾಧಾರವಾದದ್ದೆಂದೂ, ಸುದ್ದಿಗಾರರ ಪತ್ರೆಯಾಗಿ ಅವರಿಗೆ ತಕ್ಕ ಶಾಸನವಾಗಬೇಕೆಂದೂ ಲಂಡನಿನೊಳಗಿನ ಪತ್ರಿಕಾ ಪ್ರತಿನಿಧಿಗಳ ಸಂಘದ ಕಡೆ ದೂರು ಹೋಗಿತ್ತು. ಸುದ್ದಿಗೆ ತಕ್ಕಷ್ಟು ಆಧಾರವಿರುವದಾಗಿ ಸಂಘದವರು ಅಭಿಪ್ರಾಯಪಟ್ಟು ಸುದ್ದಿಗಾರರು ನಿರಪರಾಧಿಗಳೆಂದು ಅಭಿಪ್ರಾಯ ಪಟ್ಟು ಅವರ ಹೆಸರು ಕೊಡಲಿಕ್ಕೆ ಒಪ್ಪಲಿಲ್ಲ. ತತ್ಪರತೆಯಿಂದ ತಮ್ಮ ಪತ್ರಿಕೆಗೆ ಸುದ್ದಿ ಕಳುಹಿದ ಬಗ್ಗೆ ಅವರಿಗೆ ಸಂಘವು ಪ್ರಶಂಸೆ ಮಾಡಿದೆ. ಹಿಂದೀ ರಾಜ್ಯಘಟನೆಯ ನಿರ್ಣಯವನ್ನು ಮಹಾತ್ಮರ ಮನವೊಲಿಕೆಯಿಂದ ಸಾಧಿಸಬೇಕೆಂಬ ಬ್ರಿಟಿಶರ ರಾಜಕಾರಣಧುರಂಧರರ ವಿಚಾರ ಅಭಿನಂದನೀಯವಿದೆ.

* * *

ಸೇಕ ನಾಮದಾರ ಆಗಾಖಾನರವರ ಮುಸಲ್ಮಾನರ ಪುರಸ್ಕಾರವನ್ನು ಹೊಸ ರಾಜ್ಯಘಟನೆಗೆ ಸಂಗ್ರಹಿಸುವದಕ್ಕಾಗಿ ಇದೇ ಸಮಯ ಹಿಂದುಸ್ಥಾನಕ್ಕೆ ಅನಪೇಕ್ಷಿತವಾಗಿ ಕಳೆದ ಏಕಪ್ರಕಾರ ತಾವು ಸೇಗ ಬಂದಿಳಿದಿದ್ದಾರೆ. ರಾಷ್ಟ್ರೀಯ ಮುಸಲ್ಮಾನರೂ, ಅಖಿಲ ಮುಸಲ್ಮಾನೀಯ ಐಕ್ಯವಂಡಳವೂ ಹೊಸ ರಾಜ್ಯಘಟನೆಯನ್ನು ಅಂಗೀಕರಿಸಬಾರದಾಗಿ ಈ ಮೊದಲೇ ಠರಾವ ಮಾಡಿವೆ. ಮಿ| ಜಿನ್ನಾರವರ ಅಭಿಪ್ರಾಯವು ಇದೇ ಪ್ರಕಾರ ಇರುತ್ತದೆ. "ಇಂದಲ್ಲಿ ನೇಕ ನಾಮದಾರ ಆಗಾಖಾನರವರಿಗೆ ಬೇಕೆಂಬುದು ದೊಡ್ಡಕೆಲಸ. ನೇಮಸ್ತರಿಗೂ ನೇಕ ನಾಮದಾರ ಆಗಾಖಾನರವರಿಗೂ ಸಮಾಧಾನಪಡಿಸುವದಕ್ಕಾಗಿ ಹಿಂದೀ ರಾಜ್ಯಘಟನೆಯಲ್ಲಿ "ಹಿಂದೀ ರಾಜ್ಯ ಸುಧಾರಣೆಯ ಉದ್ದೇಶವು ವಸಾಹತು ಸ್ವರಾಜ್ಯ" ವೆಂದು ನಮೂದಿಸಲಿಕ್ಕೆ ಸಾಮ್ರಾಜ್ಯ ಸರಕಾರವು ಸಿದ್ಧವಿರುತ್ತದಾಗಿ ತಿಳಿಯುತ್ತದೆ. ಆ ಶಬ್ದ ಲೋಪ ಮಾಡಿದ್ದು ತಪ್ಪೆಂದು ಮುಂಬಯಿಯ 'ಟೈಮ್ಸ' ಪತ್ರಿಕೆ ನಮೂದಿಸಿ ಅದನ್ನು ಸೇರಿಸುವದು ಯುಕ್ತವೆಂದು ಶಿಫಾರಸು ಮಾಡಿದೆ. ಶಬ್ದ ಸೇರಿಕೆಯಿಂದ ರಾಜ್ಯ ಸುಧಾರಣೆಯ ಯೋಜನೆಗೆ ಬಾಧೆ ತಟ್ಟದ ಬಳಿಕ 'ವಸಾಹತು ಸ್ವರಾಜ್ಯ'ವೆಂಬ ಶಬ್ದ ಸೇರಿಸಲ್ಪಡುವದೆಂದು ಎಣಿಸಬಹುದು. ಆದರೆ ಅದರಿಂದ ಯೋಜನೆಯ ವಿವರದಲ್ಲಿ ತಿದ್ದುಪಡಿಯಾಗದಿದ್ದರೆ ಶಾಬ್ದಿಕ ದೊಡ್ಡಸ್ತನದಿಂದ ಹೇಗೆ ಸಮಾಧಾನವಾಗಬೇಕೆಂದು ತಿಳಿಯದು.

* * *

'ಡೇಲಿ ಟೆಲಿಗ್ರಾಫ' ಮತ್ತು 'ಮೊರ್ನಿಂಗ ಪೋಸ್ಟ' ಪತ್ರಿಕೆಯಲ್ಲಿ ಮಿ| ಕೆಲವ್ಹರ್ಟ ಮತ್ತು ಸರ್ ಕಾಡೂರ ರವರು ಪತ್ರಗಳನ್ನು ಬರೆದು ಹೊಸ ರಾಜ್ಯಘಟನೆಯ ಖರ್ಚನ್ನು ಸಹಿಸಲಿಕ್ಕೆ ಹಿಂದೀವಾಸಿಗಳು ಅಸಮರ್ಥರೆಂದು ಪ್ರತಿಪಾದಿಸಿದ್ದಾರೆ. ಹಿಂದುಸ್ಥಾನದಲ್ಲಿ ಪ್ರಾಪ್ತಿ ಕರ ಕೊಡುವವರ ಸಂಖ್ಯೆ ಹೆಚ್ಚುಕಡಿಮೆ ೫ ಲಕ್ಷವಿದೆ. ಅವರಲ್ಲಿ ಮೂರನೇ ಒಂದು ಪಾಲು ಜನರು ಸರಕಾರಿ ಮತ್ತು ಸರಕಾರದ ಆಶ್ರಯದ ಕ್ಲಿಷ್ಟ ಮ್ಯುನಿಸಿಪಾಲಿಟಿ ಬೋರ್ಡು ಮೊದಲಾದ ಸಂಸ್ಥೆಗಳೊಳಗಿನ ಅಧಿಕಾರಿಗಳು. ಇನ್ನು ಹೊಸ ತೆರಿಗೆ ಹೇರುವದಾದರೆ ಜನಸಾಮಾನ್ಯರ ನಿತ್ಯಾವಶ್ಯ ಖರ್ಚ

(೧೦ನೇ ಪಾನಿನ ಮೇಲೆ ಮುಂದರಿಸಿದೆ)

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ದ್ರಾಕ್ಷಾಸವ (ನಿಶ್ಯಕ್ತಿಗಳಿಗೆ ಅತ್ಯಂತ ಗುಣಕಾರಿ).
ಮಹಾಭುವನೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ)
ಮಹಾರಾಜಪ್ರಸಾರಣಿ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಕೋಶ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಕ್ಷಯರೋಗಗಳಿಗೆ ಅತ್ಯುತ್ತಮ)
ಕೃಷ್ಣಾರಿಷ್ಟ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ಪಕ್ಷವಾತ ಅರ್ಧಾಂಗವಾಯು, ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಕಣ್ಣಿನ ನೋವುಗಳಿಗೆ ಅತ್ಯಂತ ಗುಣಕಾರಿ)
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:—
ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ, ನಾಯಕ್ ಬ್ರದರ್ಸ ಇವರ ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬಾ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಗುಣಸೀಮರಾಗಿಯೂ ಇರುವ ಶ್ರೀಯುಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಅವು ಶಾಸ್ತ್ರಸಿದ್ಧವಾಗಿ ಅನುಭವಕ್ರಮವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಚಯವೂ ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶೆ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ನಡೆಸಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ವೇಷಣೆಯಿರುವಾಗಲೇ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯು ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ ೧೦–೧೧–೧೯೩೪

ವಿದ್ವಾನ್ ಕೇ ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ಯಾ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟು, ದ. ಕನ್ನಡ

ಪತ್ರಕರ್ತರ ನುಡಿಗನ್ನಡಿ.

೧ ಅಧಿಕಾರಿಗಳಿಗೆ ಗ್ರಾಮೋದ್ಧಾರದ ಉತ್ಸಾಹ ಇದೀಗಲೇ ಏಕೆ ಉಂಟಾಗಿದೆಂದು ನಮಗೆ ತಿಳಿದಿದ್ದಿಲ್ಲ ಗ್ರಾಮದವರ ಹಿತಚಿಂತನೆಯಿಂದಲೇ ಅಧಿಕಾರಿಗಳು ಗ್ರಾಮೋದ್ಧಾರದ ಪ್ರಯತ್ನ ನಡಿಸಿದ್ದಾರಾಗಿ ನಮ್ಮದೊಂದು ತಿಳುವಳಿಕೆ ಇತ್ತು. ಆದರೆ ಒಳಗುಟ್ಟನ್ನು ದಿಲ್ಲಿಯ 'ಹಿಂದುಸ್ಥಾನ ಟೈಮ್ಸ' ಪತ್ರಕರ್ತರು ಹೊರಹಾಕಿದ್ದಾರೆ. ಮಹಾತ್ಮರು ಅಖಿಲ ಭಾರತೀಯ ಗ್ರಾಮೋದ್ಯೋಗ ಸಂಘ ಸ್ಥಾಪಿಸಿದ್ದೇ ಅಧಿಕಾರಿಗಳ ಗ್ರಾಮೋದ್ಧಾರದ ಉತ್ಸಾಹಕ್ಕೆ ಕಾರಣ. ಗ್ರಾಮೋದ್ಯೋಗಿಕ ಸಂಘವು ರಾಜಕಾರಣದಿಂದ ಅಲಿಪ್ತವಾಗಿದೆ. ಹೀಗಿದ್ದಾಗ್ಯೂ ಹಿಂದುಸ್ಥಾನ ಸರಕಾರವು ಆ ಸಂಘ ಸ್ಥಾಪನೆಯಲ್ಲಿ ರಾಜಕಾರಣವನ್ನೇ ಕಾಣುತ್ತಿದೆ "ಸತ್ಯಾಗ್ರಹದಲ್ಲಿ ಮಹಾತ್ಮರು ಸೋತಿದ್ದಾರೆ, ಗ್ರಾಮೋದ್ಯೋಗಿಕ ಸಂಘ ಸ್ಥಾಪಿಸಿ ಪುನಃ ಗ್ರಾಮದವರ ಮನವೊಲಿಕೆ ಮಾಡಲು ಯತ್ನಿಸುತ್ತಿದ್ದಾರೆ ಮುಂದಿನ ಸತ್ಯಾಗ್ರಹದ ಪೂರ್ವತಯಾರಿಯಿದು. ಅದರಿಂದ ಸರಕಾರಿ ಅಧಿಕಾರಿಗಳು ಕಾರ್ಯಕರ್ತರ ಮೇಲೆ ಕಠಿಣ ಕಾವಲಿಟ್ಟು ರಾಜದ್ರೋಹದ ಕಲಮಿನನ್ವಯ ಶಾಸನವಾಗಬಲ್ಲವರನ್ನೆಲ್ಲ ಹಿಡಿಹಿಡಿದು ಜೈಲಿಗೊಯ್ಯಬೇಕು ಅಧಿಕಾರಿಗಳು ಗ್ರಾಮೋದ್ಧಾರದ ಪ್ರಯತ್ನ ನಡಿಸಬೇಕು " ಈ ಪ್ರಕಾರ ಹಿಂದುಸ್ಥಾನ ಸರಕಾರವು ಪ್ರಾಂತಿಕ ಸರಕಾರಗಳಿಗೆಲ್ಲ ಗುಪ್ತ ಸರ್ಕಿಲಾರನ್ನು ಹೊರಡಿಸಿರುವದಾಗಿ 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯ ಗುಪ್ತ ಚಾರರ ಗುಪ್ತ ವಾರ್ತೆ 'ಮುಂಬಯಿ ಕ್ರಾನಿಕಲ್' ಮೊದಲಾದ ಪತ್ರಿಕೆಗಳು ಈ ಸರ್ಕಿಲಾರನ್ನು ಪ್ರಕಟಿಸಬೇಕಾಗಿ ಸರಕಾರಕ್ಕೆ ಒತ್ತಾಯಪಡಿಸುತ್ತಿವೆ. ಬುದ್ಧಿಪೂರ್ವಕವಾಗಿ ರಾಜಕಾರಣದಿಂದ ಅಲಿಪ್ತರಾದ ವರ ಮೇಲೆ ಹಿಂದುಸ್ಥಾನ ಸರಕಾರವು ಇಂಥ ಆರೋಪ ಹೊರಿಸುವದೆಂದು ಯಾರಿಗೂ ನಂಬಿಗೆ ಉಂಟಾಗುವದಿಲ್ಲ. ಅದರಿಂದ ಸದರ ಸರ್ಕಿಲಾರನ್ನು ಪ್ರಕಟಿಸಿದಲ್ಲಿ ಸರಕಾರದ ಅಂತರಂಗ ಸ್ಪಷ್ಟವಾಗಿ, 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯ ಸುದ್ದಿಯ ಮೇಲಿಂದ ಉಂಟಾದ ತರ್ಕ-ವಿತರ್ಕಗಳು ಬಯಲಾಗುವದಿಲ್ಲವೇ ?

೨ ಗ್ರಾಮೋದ್ಧಾರದ ಯೋಜನೆಗಳ ಕುರಿತ ಮುಂಬಯಿ ಸಹಕಾರಿ ಸಂಘದ ತ್ರೈಮಾಸಿಕ ಪತ್ರಿಕೆಯಲ್ಲಿ ಖಾನದೇಶದ ಕಲೆಕ್ಟರರಾದ ರಾ| ಭಿಡೆ, ಆಯ್. ಸಿ. ಎಸ್., ಇವರು ಒಂದು ಲೇಖ ಬರೆದಿದ್ದಾರೆ. ಈ ಲೇಖದಲ್ಲಿ ಸರಕಾರಿ ಗ್ರಾಮೋದ್ಧಾರದ ಯೋಜನೆಗಳ ಸ್ವರೂಪವನ್ನು ಅವರು ಅರುಹಿದ್ದಾರೆ ಸರಕಾರಿ ಯೋಜನೆಗಳಲ್ಲಿ ನೂತನವಾದದ್ದೇನಿಲ್ಲ. ಸಹಕಾರಿ ಸಂಘ, ಗ್ರಾಮ ಪಂಚಾಯತು ಮೊದಲಾದ ಯೋಜನೆಗಳನ್ನೆಲ್ಲ ಜಿಲ್ಲಾಧಿಪರಾದ ಕಲೆಕ್ಟರರ ಹತೋಟಿಯಲ್ಲಿ ಒಟ್ಟುಗೂಡಿಸಿ ಗ್ರಾಮೋದ್ಧಾರ ಸಾಧಿಸುವದು ಈಗಿನ ಧೋರಣವಾಗಿದೆ. ಅಂದರೆ ಯಾವತ್ತು ಗ್ರಾಮೋದ್ಧಾರದ ಯೋಜನೆಗಳ ಕಲೆಕ್ಟರರಿಗೆ ಅಧೀನವಾದವುಗಳು. ಕಲೆಕ್ಟರರ ಅನುಗ್ರಹವನ್ನೇ ಸಮಸ್ತರೂ ಹಾರೈಸುತ್ತಿರಬೇಕು ಗ್ರಾಮಾಂತರದೊಳಗಿನ ಮುಖ್ಯಸ್ಥರನ್ನು ಸ್ವಾಧೀನಪಡಿಸಿಕೊಳ್ಳುವ ಉಪಾಯವಿದೆಂದು ರಾಜಕಾರಣ ಬಲ್ಲ ವ್ಯವಹಾರ ಚತುರರು ಉದ್ಗರಿಸಿದರೆ ಅಯಥಾರ್ಥವಾಗದು ಗ್ರಾಮೋದ್ಧಾರ ಯೋಜನೆಗಳಿಂದ ಗ್ರಾಮದವರಿಗೆ ಶಿಕ್ಷಣ ಕೊಡುವ ಕಲೆಕ್ಟರರಿಗೆ ಅಧೀನತ ಎಂಬದಾಗಿ ಟೀಕಿಸಿದರೆ ವಸ್ತುಸ್ಥಿತಿಯ ವಿಪರ್ಯಾಸವಾಗದು. ಮುಂದಿನ ಸತ್ಯಾಗ್ರಹದಲ್ಲಿ ಮಹಾತ್ಮರಿಗೆ ಇದಿರಾಗುವ ಪೂರ್ವತಯಾರಿ ಇದೆಂದು ಕೆಲವರು ಈಗ ಊಹಿಸಲಾರಂಭಿಸಿದರೂ ತಪ್ಪಾಗದು ಜನಸಾಮಾನ್ಯರು ಗ್ರಾಮೋದ್ಧಾರದ ಯೋಜನೆಗಳ ಮರ್ಮವನ್ನು ಆಳವಾಗಿ ಪರಾಂಬರಿಸಿ ಇಷ್ಟಪ್ರಾಪ್ತಿಯಾಗುವದಿದ್ದರೆ ಮಾತ್ರ ಅವನ್ನು ಒರವಾಡಿಕೊಳ್ಳಬೇಕಾಗಿ ಒಂದು ಮುಂಜಾಗ್ರತೆಯ ಸೂಚನೆ

೩ ಯಂತ್ರಗಳಿಗೆ ಆಶ್ರಯ ಕೊಡಬಾರದೆಂದು ಮಹಾತ್ಮರು ಪ್ರತಿಪಾದಿಸುವ ಸಂಗತಿ ಲೋಕವಿಶ್ರುತವಿದೆ ಯಂತ್ರಗಳಿಂದ ಜನರು ನಿರ್ಗತಿಕರಾದರು, ಅವುಗಳಿಗೆ ಆಶ್ರಯ ಕೊಡಲಾಗದು, ಮೇಲಾಗಿ ಯಂತ್ರಗಳ ಮೇಲೆ ತಯಾರಾಗುವ ಜಿನಸು ಹಿತಕರವಾದದ್ದಲ್ಲ, ಎಂಬದಾಗಿ ಮಹಾತ್ಮರು ಆಗಿಂದಾಗ ಹೇಳುತ್ತಿರುತ್ತಾರೆ. ಅಖಿಲ ಭಾರತೀಯ ಗ್ರಾಮೋದ್ಯೋಗಿಕ ಸಂಘದ ಸ್ಥಾಪನೆಯಾಗಲಿಕ್ಕೆ ಯಂತ್ರಸಾಮಗ್ರಿಗಳ ಮೇಲಿನ ಅಪ್ರೀತಿಯೇ ಕಾರಣ ಈ ಧೋರಣಕ್ಕೆ ಫೋರ್ಡ ಕಂಪನಿಯ ಪ್ರಚಾರಕರು ಬೆಂಬಲ ಕೊಟ್ಟಿದ್ದಾರೆಂದು ತಿಳಿಸಲಿಕ್ಕೆ ತೀರ ಸಂತೋಷವಾಗುತ್ತದೆ ಮದ್ರಾಸದ 'ಹರಿಜನ' ಪತ್ರಿಕೆಯಲ್ಲಿ ದೀನಬಂಧು ಎಂಡ್ರ್ಯೂಸರವರು ತಮಗೂ ಫೋರ್ಡ ನೇಗಿಲುಗಳನ್ನು ಪ್ರಚಾರ ಮಾಡಬಂದ ಏಜಂಟರಿಗೂ ಹಡಗದ ಮೇಲೆ ನಡೆದ ಸಂಭಾಷಣವನ್ನು ವರ್ಣಿಸಿದ್ದಾರೆ ಇಬ್ಬರಿಗೂ ಕುಶಲ ಪ್ರಶ್ನೆಗಳಾದ ಬಳಿಕ ಸಹಜ ಮಾತು ನಡೆಯಿತು. ಉತ್ತರ ಬಂಗಾಲ ದೇಶದಲ್ಲಿ ನೆರೆಕಟ್ಟೆ ದನಕರುಗಳೆಲ್ಲ ಸತ್ತುಹೋಗಿದ್ದವು, ೩೫೦೦ ಎಕರೆ ಭೂಮಿ ಬಂಜರು ಬಿದ್ದಿತ್ತು ಅದು ಸಾಗುವಳಿ ಆಗದಿದ್ದಲ್ಲಿ, ಆಗ ಜನರು ಉಪವಾಸ ಸಾಯುವದೇ. ಇದನ್ನು ಸಾಗುಮಾಡುವದಕ್ಕಾಗಿ ಜನ-ಜಾನುವಾರಗಳ ಬಲವಿರಲಿಲ್ಲ ಕಲಕತ್ತೆಯಿಂದ ಫೋರ್ಡ ರೆಂಟರು ತಾವು ಆ ಪ್ರದೇಶವನ್ನು ಸಾಗುವಳಿ ಮಾಡಿಸಿದವಾಗಿ ದೀನಬಂಧು ಎಂಡ್ರ್ಯೂಸರವರು ನುಡಿಯಲು, ಫೋರ್ಡ ಏಜಂಟರು ಆ ಪ್ರದೇಶವನ್ನು ತಮಗ ತಿಳಿಸಬೇಕಾಗಿ ಆಗ್ರಹದಿಂದ ಬಿನ್ನೈಸಿಕೊಂಡರು "ನಾನು ಹಾಗ ತಿಳಿಸಲಾರೆ. ಫೋರ್ಡ ರೆಂಟಿ ಈ ಪ್ರದೇಶದಲ್ಲಿ ನೆಲಿಸಿದರೆ ೫೦ ವ ನೆತನಗಳು ನಿರ್ಗತಿಕರಾಗಿ, ನೆರೆಯ ನಾಡಿನ ಗಿರಣಿಗಳಿಗೆ ಹೋಗಿ, ಕಷ್ಟಪಡಬೇಕಾಗುವದು ಇದಕ್ಕೂ ಯೋಚನೀಯವಾದದ್ದೇನಿದೆ " ಎಂಬದಾಗಿ ದೀನಬಂಧು ಎಂಡ್ರ್ಯೂಸರವರು ಉದ್ಗರಿಸಲು, ಫೋರ್ಡ ರೆಂಟಿಯ ಏಜಂಟರು ಸಹೃದಯ ನುಡಿದದ್ದೇನಂದರೆ:— "ನನಗೂ ಸದಸದ್ವಿವೇಕಬುದ್ಧಿ ಇದೇ ಕೆಲವಿನಗಳ ಹಿಂದೆ ನಾನು ಚೀನ ದೇಶಕ್ಕೆ ಹೋಗಿದ್ದೆ ಯಾಂಗಟ್ಸೆ ಕ್ಯಾಂಗ ನದಿಯಗುಂಟ ವಾಸ ಮಾಡಿಕೊಂಡಿದ್ದ ಚೀನಿಯರು ಭತ್ತ ಬೇಳೆಕೊಂಡು ನಿರ್ವಾಹ ಮಾಡುತ್ತಾರೆ ಅಲ್ಲಿ ಫೋರ್ಡ ರೆಂಟಿಯನ್ನು ಉಪಯೋಗಿಸಲು ಮನವೊಲಿಸುವದು ಅಪರಾಧವೆಂದು ನನ್ನ ಭಾವನೆಯಾಯಿತು. " ಏಜಂಟರ ಮಾತುಗಳನ್ನು ದೀನಬಂಧು ಎಂಡ್ರ್ಯೂಸರು ಮುಂದರಿಸಿ ಮಾತಾಡಿದ್ದೇನಂದರೆ:— 'ಗಂಗಾನದಿಗುಂಟದ ಪ್ರದೇಶವೂ ಯಾಂಗಟ್ಸೆಕ್ಯಾಂಗ ನದಿಯ ಪ್ರದೇಶದಂತೆ ದಟ್ಟ ಜನವಸ್ತಿಯದು. ಇಂಥಲ್ಲಿ ಫೋರ್ಡ ರೆಂಟಿಗಳನ್ನು ಪ್ರವೇಶಿಸಲು ನೀವು ಬಿಡುವಿರೇನು ?" ಎಂದು ದೀನಬಂಧುಗಳು ಕೇಳಲು, "ಛೇ ! ನೀವು ನನಗೆ ಖಾತ್ರಿಮಾಡಿಕೊಟ್ಟುಬಿಟ್ಟಿರಿ. ನಾನು ರಶಿಯಾ ದೇಶದಲ್ಲಿ ಸಂಚರಿಸಿದ್ದೇನೆ ಸೈಬೇರಿಯಾ ಪ್ರಾಂತಕೂ ಹೋಗಿದ್ದೇನೆ ಜನರ ಅಭಾವದಲ್ಲಿ ಹೇರಳ ಭೂಮಿ ಅತ್ತ ಬಂಜರು ಬೀಳುತ್ತದೆ ಅಲ್ಲಿ ಇಂಥ ರೆಂಟಿಗಳ ಉಪಯೋಗವಿದೆ. ಆದರೆ ಚೀನ-ಹಿಂದುಸ್ಥಾನ ದೇಶಗಳೊಳಗೆ ನಡಿಸುವ ನಾಗ್ಗಳ್ಳಿಗೆ ಸರಿಯಾದದ್ದು ಬೇರೆ ಯಾವದೂ ಇಲ್ಲ. ಅನೇಕ ಶತಮಾನಗಳಿಂದ ಅವರು ಈ ಉದ್ದಿಮೆಯಿಂದ ನಿರ್ವಾಹ ಮಾಡಿಕೊಂಡು ಬಂದಿದ್ದಾರೆ. ಅಂಥಲ್ಲಿ ಫೋರ್ಡ ರೆಂಟಿಗೆ ಪ್ರವೇಶ ಕೊಟ್ಟು ಅವರನ್ನೆಲ್ಲ ನಿರ್ಗತಿಕರನ್ನಾಗಿ ಪರಿಣಮಿಸುವದು ಘೋರ ಅಪರಾಧ " ಈ ಪ್ರಕಾರ ಫೋರ್ಡ ರೆಂಟಿಯ ಏಜಂಟರು ದೀನಬಂಧುಗಳ ಕಡೆ ಉದ್ಗರಿಸಿದರು. ಇದರ ಮೇಲಿಂದ ಒಂದು ಮಾತು ಸ್ಪಷ್ಟವಿದೆ ಮನುಷ್ಯಬಲದ ಅಭಾವದಲ್ಲಿ ಯಂತ್ರಗಳಿಗೆ ಆಶ್ರಯ ಕೊಡಬೇಕು ಹಿಂದುಸ್ಥಾನದಲ್ಲಿ ಬೇಕಷ್ಟು ಜನಬಲವಿದೆ, ಅವರಿಗೆ ಕೆಲಸವಿಲ್ಲ, ಕೆಲಸವನ್ನು ಪೂರೈಸುವದೇ ಮೊದ್ದ ಪಕ್ಷ ಇಂಥ ಪ್ರಸಕ್ತಿಯಲ್ಲಿ ಯಂತ್ರಗಳಿಗೆ ಆಶ್ರಯ ಕೊಡದೆ ಗ್ರಾಮೋದ್ಯೋಗಿಕ ಸಂಘದ ಸಂಕಲ್ಪದಂತೆ ಜನರಿಂದ ತಯಾರಾಗುವ ಸಾಮಗ್ರಿಗಳಿಗೇ ಎಲ್ಲೆಲ್ಲಿಯೂ ಆಶ್ರಯ ಕೊಟ್ಟು ಸಮಸ್ತರೂ ಸ್ವಪರಹಿತ ಸಾಧಿಸಬೇಕಾಗಿ ಬಿನ್ನಹ.

೪ ಶಿರ್ಸಿ, ಸಿದ್ಧಾಪುರ ಮತ್ತು ಯಲ್ಲಾಪುರಗಳ ಕಡೆ ಶೀಘ್ರ ಸಿದ್ಧ-ಪಡಿಗಾಗಿ ನಡೆದ ಚೌಕಶಿಯ ಸಂಬಂಧ ಕಳೆದ ವಾರ ಬರೆದ ಲೇಖದಲ್ಲಿ ಒಂದೆರಡು ಮಾತುಗಳನ್ನು ನಾವು ನಮೂದಿಸ ಮರತೆವು ಘಟ್ಟದ ಮೇಲಿನ ತಾಲೂಕುಗಳಲ್ಲಿ ಒಂದು ವಿಶಿಷ್ಟ ಪರಿಸ್ಥಿತಿಯ ದ ನರೆಹೊರೆಯಲ್ಲಿ ದಟ್ಟದ ಬೆಟ್ಟ ಬೆಳೆದದ್ದರಿಂದ ಕಾಡು ಹಂದಿಗಳ ಉಪದ್ರವ ವಿಶೇಷ. ಬೆಳೆದ ಬೆಳೆ ಜನರ ಕೈಸೇರದು ಹಂದಿಗಳ ಹಾವಳಿಯಿಂದ ಜನರು ಗತಿಗೆಟ್ಟಿದ್ದಾರೆ ಮೇಲಾಗಿ ಹುಲಿಗಳು ದನ-ಕರುಗಳನ್ನು ಫಲಾಹಾರ ಮಾಡುತ್ತಿವೆ. ಇವೆಲ್ಲ ಕಾರಣಗಳ ಮೂಲಕ ಪ್ರತಿ ವರ್ಷ ನೂರಾರು ಎಕರೆ ಭೂಮಿ ಬಂಜರು ಬೀಳುತ್ತದ ಸೆಟ್ಲಮೆಂಟ ಆಫೀಸರರು. ಈ ಸಂಗತಿಯನ್ನು ಆಯಾ ಹಳ್ಳಿಗಳಿಗೆ ಹೋಗಿ ಸ್ವಂತ ಚೌಕಶಿ ಮಾಡಿ ಈ ಉಪದ್ರವದಿಂದ ಬೇಸಾಯಗಾರರಿಗೊದಗುವ ಕಷ್ಟಗಳನ್ನು ಪರಿಹರಿಸುವ ಆಲೋಚನೆ ಮಾಡಬೇಕು, ರಾಜಮಾರ್ಗಗಳ ಅನುಕೂಲತೆ ಇದ್ದಲ್ಲಿ ಮೋಟಾರಿನಿಂದ ಪ್ರಯಾಣ ಮಾಡಿ, ಹಾಗ ಅನುಕೂಲತೆಗಳಿಲ್ಲದಿದ್ದಲ್ಲಿ ಕಾಲುನಡಿಗೆಯಿಂದ ಹೋಗಿ ಒಕ್ಕಲಿಗರ ದೈನ್ಯಾವಸ್ಥೆಯನ್ನು ಕಣ್ಣಾರೆ ಕಂಡು ಒಕ್ಕಲಿಗರ ಹೇಳಿಕೆಯ ಸತ್ಯಾಸತ್ಯತೆಯನ್ನು ತಿಳಕೊಳ್ಳಬೇಕು ಪ್ರತ್ಯಕ್ಷ ಸ್ಥಳ ನೋಡದವನಿಗೆ ಜನರ ಸ್ಥಿತಿ-ಗತಿಯ ಕಲ್ಪನೆ ಬರುವದಿಲ್ಲ ತೀರ್ಪು ಆಕರಿಸಬೇಕಾದರೆ ಒಕ್ಕಲಿಗರ ಸ್ಥಿತಿಯ ಗ್ರಹಿಕೆ ಪಡಕೊಳ್ಳುವದು ಅತ್ಯವಶ್ಯವಿದೆ ವಸ್ತುಸ್ಥಿತಿಯು ಗ್ರಹಿಕೆಯಾದವನಿಗೆ ಅದನ್ನು ದೂರಪಡಿಸಲಿಕ್ಕಾಗಲಿ, ಅದಕ್ಕೆ ತಕ್ಕದ್ದಾಗಿ ರಾಜಾರ್ಥವನ್ನು ಆಕರಿಸಲಿಕ್ಕಾಗಲಿ ಸಾಧ್ಯವಾಗುವದಿಲ್ಲ ಸೆಟ್ಲಮೆಂಟ ಆಫೀಸರರ ಈ ವಿಚಾರಮಾಡಿ ಬಂಗಲ ಹಳ್ಳಿಗಳಿಗೆ ಸ್ವತಃ ಹೋಗಿ ಅಲ್ಲಿಯ ಸ್ಥಿತಿಯನ್ನು ಕಣ್ಣಾರೆ ಕಾಣಬೇಕಾಗಿ ನಮ್ಮ ಆಗ್ರಹದ ಸೂಚನೆ

೩. ಕುಮಟಾ ಮ್ಯುನಿಸಿಪಾಲಿಟಿಯ ಮನೇಜ ಮೆಂಟ ಕಮಿಟಿಯ ಠರಾವಿನಂತೆ ನೇಮಿಸಲ್ಪಟ್ಟ ರಿವ್ಹಿಜನ ಆಫೀಸರರಾದ ರಾ| ಬಾಪಟರವರು ಆಕರಿಸಿದ ತೆರಿಗೆಯ ಕುಂಜೋಕ್ಷಿಗಳನ್ನು ಒಪ್ಪಿಸಿ ದಷ್ಟು ಕಡಿಮೆ. ಯಾವ ಭಾಡಿಗೆಯ ಮಾಸ ಇವರು ಹಿಡಿದರೆಂದು ಪತ್ತೆಯಾಗದು. ಕೆಲವರಿಗೆ ಶಿಕ್ಷೆ ಯಾಗೆ ಭಾಡಿಗೆ ಹಿಡಿದು ತೆರಿಗೆ ಆಕರಿಸಿದ್ದಾರೆ. ಊರೊ ಳಗ ವಾಸ್ತವ್ಯದ ಮನೆಗಳು ಕೆಲವು ತೋರುತ್ತ ದಷ್ಟು ಇವೆ. ಭಾಡಿಗೆಗೆ ಹಚ್ಚುವ ಮನೆಗಳು ತೀರ ಕಡಿಮೆ. ಕೂಲಿಕೆ ಮಾಡಿಕೊಂಡು ಉಳಿಯ ಲಾಗದ ಹುಲ್ಲು ಛಾವಣಿಯ ಕೆಲ ಗುಡಿಸಲುಗಳಿಗೆ ಸಹ ರಾ| ಬಾಪಟರವರು ರೂ. ೧-೪-೬ ರೂ ೧-೬-೯ ಏರಿಸಿದ್ದಾರೆ. ಇನ್ನು ೧೧ ಆಣೆ ಏರಿಸಿದ್ದರೆ ಮತಾಧಿಕಾರ ವಾದರೂ ಅವರಿಗೆ ಸಿಕ್ಕಿ ಸಮಾಧಾನವಾಗಬಹುದಿತ್ತು. ಅನ್ಯೇ ತೆರಿಸಿ ಇದ್ದ ಹಲವರಿಗೆ ೦-೯-೦ ಆಣೆಗೆ ಏರಿಸಿ ಮತಾಧಿಕಾರ ಕಟ್ಟಿರುತ್ತಾರೆ. ಪಕ್ಷಪಾತ ಮಾಡಿದ ರೆಂದು ಹೇಳುವದಕ್ಕಾಗಿ ಈ ಮಾತು ಬರೆದಿಲ್ಲ. ಒಕ್ಕ ಲುಗಳ ಗುಡಿಸಲುಗಳಿಗೆ ನಾಲ್ಕಾಣೆ ಸಹ ತೆರಿಗೆ ತೆರುವ ಷ್ಟು ಭಾಡಿಗೆ ಪ್ರಮಾಣವಿರುವದಿಲ್ಲ. ಪೆಕ್ಕಸೆಕ್ಕ, ಗುಂದ ಮೊದಲಾದ ಕೇರಿಗಳಲ್ಲಿ ಭಾಡಿಗೆ ಪ್ರಮಾಣ ಹಿಡಿಯು ವದೇ ತಪ್ಪು. ಆ ಗುಡಿಸಲುಗಳಿಗೆ ಭಾಡಿಗೆ ಬರುವಂತಿಲ್ಲ. ಊರೊಳಗಿನ ಸಾಂಪತ್ತಿಕ ಸ್ಥಿತಿಯೂ, ವ್ಯಾಪಾರದ ಸ್ಥಿತಿಯೂ ತೀರ ಕಂಗೆಟ್ಟಿದೆ. ಜನರ ಸಾಂಪತ್ತಿಕಸ್ಥಿತಿ ಯಾನೆ ಕ್ರಯಶಕ್ತಿ (Purchasing Power) ೧೯೩೪ನೇ ಇಸ್ವಿಗಿಂತ ಕಡಿಮೆಯಾಗಿರುವದಾಗಿ ಯೂ, ಅದನ್ನು ಬೆಳೆಸಲು ಪ್ರಯತ್ನಿಸಬೇಕಾ ಗಿಯೂ ಲೆಂಕಶಾಯರದ ವರ್ತಕರು ಸರಕಾರಕ್ಕೆ ಸೂಚಿಸುತ್ತಿದ್ದಾರೆ. ನಮ್ಮ ಕುಮಟೆ ಪಟ್ಟಣದ ಸ್ಥಿತಿ ಇದಕ್ಕೆ ಅಪವಾದವಲ್ಲ. ವಾಸ್ತವ್ಯ ಮಾಡಿಕೊಂಡಿದ್ದ ಮನೆಗಳನ್ನು ಅವರು ಎಷ್ಟು ಭಾಡಿಗೆ ಹಿಡಿದಾಗ್ಯೂ ಬಿಡಲಿಕ್ಕಿಲ್ಲವೆಂದು ಎಣಿಸಿ ರಿವ್ಹಿಜನ್ ಆಫೀಸರರು ಅಧಿಕಾರದ ದುರುಪಯೋಗ ಮಾಡಿರುತ್ತಾರೆ. ತೆರಿಗೆ ಆಕರಿಸಲಿಕ್ಕೆ ಇವರು ತೀರ ನಾಲಾಯಖರೆಂದು ಸಿದ್ಧ ವಾಗಿದೆ. ಹೊಟ್ಟೆಹೊಟ್ಟೆಗೆ ತಂದು ಹೇಗೂ ಊಟ ಮಾಡುವವರಿಗ್ಯೆ ೬-೭ ಆಣೆ ಮನೆ ತೆರಿಗೆ ಇದ್ದವರಿ ಗೆ ಈ ಪುಣ್ಯಾತ್ಮರು ೩-೪ ರೂಪಾಯಿ ಮನೆ ತೆರಿಗೆ ಆಕರಿಸಿದ್ದಾರೆ. ಕೆಲ ಗುಡಿಗಳಿಗೆ ಹಿಡಿದ ಭಾಡಿಗೆಯ ರಕಮು ಮನೆ ಸಾಮಾನು ಮಾರಿದರೂ ಹುಟ್ಟುವಂತಿ ಲ್ಲ. ರಾ| ಬಾಪಟರವರು ಹೇಗೆ ವಿಚಾರಹೀನರಾದ ರೆಂಬುದು ಸ್ಪಷ್ಟ. ಮೆನೆಜಮೆಂಟ ಕಮಿಟಿಯವರ ಕಡೆ ತಕ್ರಾರ ಅರ್ಜಿಗಳು ದಾಖಲಾಗುವವು. ಅವನ್ನು ಮೆನೆಜಮೆಂಟ ಕಮಿಟಿಯವರು ಪರಾಂಬರಿಸಿ ತೆರಿ ಗೆಯ ಮಾನವನ್ನು ಇಳಿಸಿ, ರಾ| ಬಾಪಟರು ಎಬ್ಬಿಸಿ ದ ಆಪತ್ತಿನಿಂದ ಜನರನ್ನು ಕಾಯಬೇಕಾಗಿ ಸೂಚನೆ. ಇಲ್ಲದಿದ್ದರೆ ಬಹು ಜನರು ದೇಶಾಂತರ ಮಾಡುವ ಪ್ರಸಂಗ ಬಂದೀತು. ಮ್ಯುನಿಸಿಪಾಲಿಟಿ ನಡಿಸಲಿಕ್ಕೆ ಖರ್ಚು ತಗಲುತ್ತದೆಂದು, ನೆವ ಮುಂದೊಡ್ಡುವದು ಸರಿಯಲ್ಲ. ಪಂಜಾಬದ ಗವ್ಹರ್ನರರು ನುಡಿದಂತೆ, "ಮೊಟ್ಟಮೊದಲು ಜನರ ಹಿತ ನೋಡಬೇಕು. ಅವರ ಶಕ್ತಿಗೆ ಉಚಿತವಾಗಿ ತೆರಿಗೆಯ ಭಾರವನ್ನು ಹಂ ಚಬೇಕು. (*adjusting their burdens to their capacity to pay*)" ಮ್ಯುನಿಸಿಪಾಲಿ ಟಿಯ ಸಂಪತ್ತು ಬೆಳೆಸುವದು ಮುಖ್ಯ ಧ್ಯೇಯವಲ್ಲ; ಜನಸೌಕರ್ಯಕ್ಕಾಗಿ ಮ್ಯುನಿಸಿಪಾಲಿಟಿಯ ಏರ್ಪಾ ಟು, ಹೊರತು ಮ್ಯುನಿಸಿಪಾಲಿಟಿಗಾಗಿ ಜನರಲ್ಲ. ತೆರಿ ಗೆ ಎತ್ತುವದಾದರೂ ಜನರ ಶಕ್ತಿಗೆ ತಕ್ಕದ್ದಾಗಿರಬೇಕು. ಈ ತತ್ವವನ್ನು ಮೆನೆಜಮೆಂಟ ಕಮಿಟಿಯವರು ಗ್ರಹಿಸಿ ತಕ್ರಾರು ಅರ್ಜಿಗಳನ್ನು ನಿರ್ಣಯಿಸಬೇಕಾಗಿ ವಿನಂತಿ.

---

೬. ಇಷ್ಟರಲ್ಲಿ ಮಾಮಲೇದಾರರಾದ ಮಿ| ಬಿಡ್ಕಿ ಹಾಳರವರು ಇಂದಿಗೆ ಸೇವಾನಿವೃತ್ತರಾಗುತ್ತಾರೆ. ಇದ ನ್ನು ತಿಳಿಸಲು ತುಂಬಾ ವ್ಯಸನವಾಗುತ್ತದೆ. ಮಿ| ಬಿಡ್ಕಿ ಹಾಳರವರು ಮಾಮಲೇದಾರರಾಗಿಯೂ, ಮೆಜಿಸ್ಟ್ರೇಟ ರಾಗಿಯೂ, ಮ್ಯುನಿಸಿಪಲ್ ಮೆನೆಜಮೆಂಟ ಕಮಿಟಿ ಯ ವ್ಹಾಯಿಸ್-ಚೆಯರಮನ್ನರಾಗಿಯೂ ದುಡಿ ದ್ದಾರೆ. ಇವರ ತರುವಾಯ ಬಂದ ಮಿ| ಅಬ್ದುಲಬಕ್ಕರರವ ರು ಈ ಕೆಲಸಗಳನ್ನು ನಡೆಸುವರು. ಆದರೆ ಈ ಕೆಲಸ ಗಳ ಒಗ್ಗೆ ಕುಮಟೆಯವರು ವ್ಯಸನಪಡುವದಿಲ್ಲ. ಮಿ| ಬಿಡ್ಕಿಹಾಳರವರು ಕುಮಟೆಯವರ ಮೇಲ್-ಪರ್ಯಾ ಯದಿಂದ ರಾಷ್ಟ್ರದ ಮೇಲೆ. ಮಾಡಿದ ಉಪಕಾರವೇ ಬೇರೆ. ಹಿಂದುಸ್ಥಾನಕ್ಕೆ ರಿಪಾಸ್ ಮೇರೆಗೆ ದಯಪಾ ಲಿಸಿದ ಪ್ರಾಂತಿಕ ಸ್ವರಾಜ್ಯದ ಅಧಿಕಾರವು ಗೌಣವೆ ಯಾಗಿದೆಯೆಂದು ಇವರ ಕಾರಕೀರ್ದಿಯಲ್ಲಿ ಸಿದ್ಧವಾ ಯಿತು. ಅಂಥ ಅಧಿಕಾರಕ್ಕಾಗಿ ಊರೊಳಗಿನ ಪ್ಲಾ—ಹಣವರು ಸ್ವತಃ ಹೆಣಗಾಡುವರು, ಒಡ ಮತದಾರರಿಗೆ ಪೀಡಿಸುವದೂ ವ್ಯರ್ಥತನವೆಂದು ಈ ಮ್ಯುನಿಸಿಪಾಲಿಟಿಯನ್ನು ರದ್ದುಪಡಿಸಲು ಕಾರಣ ರಾಗಿ ಮಿ. ಬಿಡ್ಕಿಹಾಳರವರು ಸರಕಾರಕ್ಕೆ ಸೂಚಿಸಿ ದ್ದಾರೆ. ಮಾಮಲೇದಾರರೆಂದು ಚಿಕ್ಕ ಹುದ್ದೇದಾರರ ಮೇಲೆ ಕಾಯುತ್ತಿದ್ದು ಮ್ಯುನಿಸಿಪಾಲಿಟಿಯ ಅಸ್ತಿತ್ವ ಕ್ಕೆ ಸಹ ಭಂಗ ಬರುತ್ತದೆಂದೂ, ಮ್ಯುನಿಸಿಪಾಲಿಟಿಯ ವರು ಮಾಮಲೇದಾರ, ಕಲೆಕ್ಟರ ಮೊದಲಾದ ಮುಲ್ಕಿ ಅಧಿಕಾರಿಗಳ ಕೈಗೊಂಬೆಯಾಗಿರಬೇಕೆಂದೂ ಮಿ| ಬಿಡ್ಕಿಹಾಳರವರ ಕಾರಕೀರ್ದಿಯಲ್ಲಿ ಸಿದ್ಧವಾಗಿದೆ ಮೇಲಾಗಿ ಮ್ಯುನಿಸಿಪಾಲಿಟಿಯ ಕಾರಭಾರವನ್ನು ದೂರ್ವದಲ್ಲಿ; ನಾಲ್ಕು ಮಂದಿ ಅಧಿಕಾರಿಗಳು ಸಹಜ ಸಮಯ ಸಿಕ್ಕಿದಾಗ ಇಷ್ಟು ಕಾರಭಾರ ನಡೆಸಬಹುದೆಂದೂ ಇವರ ಕಾರಕೀರ್ದಿಯಲ್ಲಿ ಪ್ರತ್ಯಕ್ಷ ಊರವ ರು ಕಂಡರು. ಇದು ಸಾಮಾನ್ಯ ಉಪಕಾರವಲ್ಲ. ಮ್ಯುನಿಸಿಪಾಲಿಟಿ ರದ್ದುಪಡಿಸಿ ಮೆನೇಜಮೆಂಟ ಕಮಿಟಿ ನಂಥವರ ಕಾರಕೀರ್ದಿಯಲ್ಲಿ ಇದೇ ಮೆನೇ ಜಮೆಂಟ ಕಮಿಟಿಯೂ ರದ್ದಾಗಿ ಕುಮಟೆಯವರು ಮ್ಯುನಿಸಿಪಾಲಿಟಿಯ ಉಪದ್ರವದಿಂದ ಬಿಡುಗಡೆಯಾ ಗಿದ್ದರೆ ಊರವರೆಲ್ಲರೂ ಕೃತಜ್ಞರಾಗಿ ಮಿ| ಬಿಡ್ಕಿಹಾ ಳರವರಿಗೆ ಚಿರಕಾಲ ಹರಸುತ್ತಿದ್ದರು. ಜನಸೌಕ ರ್ಯಕ್ಕಾಗಿ ಏರ್ಪಡಿಸಿದ ಮ್ಯುನಿಸಿಪಾಲಿಟಿಯಿಂದ ಜನರಿಗೆ ಉಪದ್ರವವಾಗಿದೆ. ಟರ್ಮಿನಲ್ ಟೆಕ್ಸಿನ ಉಪಟಳದ ಮೂಲಕ ಊರ ವ್ಯಾಪಾರ ಕ್ರಮವಾಗಿ ಅವನತಿಗೆ ಬಂತು. ಇದ್ದ ಮನೆ ತೆರಿಗೆ ತೆರುವ ಬಗೆ ಹೇಗೆಂದು ಜನರು ಆಲೋಚಿಸುತ್ತಿರುವಲ್ಲಿ ರಾ| ಬಾಪ ಟರವರ ಭೂದಂಡ ಕೊರಳಸುತ್ತು ಬಂದಿದೆ. ಮತ ಸಂಗ್ರಹಕ್ಕಾಗಿ ಮತದಾರರಿಗೊದಗುವ ಎಳೆದಾಟ ಬೇರೆ; ಮತದಾನವಾದ ಬಳಿಕ ವಿಶಿಷ್ಟ ಉಮೇದ್ವಾರ ರಿಗೆ ಮತ ಕೊಟ್ಟ ಬಗ್ಗೆ ಸೇಡು ತೀರಿಸುವ ಸಂಕಟ ಬೇರೆ. ಮ್ಯುನಿಸಿಪಾಲಿಟಿ ತಹಕೂಬ ಆದ್ದರಿಂದ ಮತ ದಾರರ ಉಪಟಳ ತಪ್ಪಿತು. ಸಂಪೂರ್ಣವಾಗಿ ಮ್ಯು ನಿಸಿಪಾಲಿಟಿ ರದ್ದಾಗಿದ್ದರೆ ಯಾವತ್ತೂ ಉಪದ್ರವಗಳು ತಪ್ಪುತ್ತಿದ್ದವು. ಮ್ಯುನಿಸಿಪಾಲಿಟಿ ರದ್ದಾಯತಿಯ ಕೆಲಸವನ್ನು ಪೂರ್ಣಪಡಿಸುವ ಮುಂಚೆಯೇ ಮಿ| ಬಿಡ್ಕಿಹಾಳರವರು ಸೇವಾನಿವೃತ್ತರಾಗುವದು ಕುಮಟೆ ಯವರ ದುರ್ದೈವ. ಈ ಕಾರ್ಯದ ಪೆಸೆಯಿಂದಾದರೂ ಇವರ ಸೇವಾವಧಿಯನ್ನು ಬೆಳೆಸಬಹುದೆಂತ ಕೆಲ ಭಾಬಿಕರ ಎಣಿಕೆ ಇತ್ತು. ಆದರೆ ನಿರುಪಾಯದಿಂದ ಇಂದಿಗೇನೇ ಅವರು ಸೇವಾನಿವೃತ್ತರಾಗಬೇಕಾಗಿದೆ. ಊರವರ ಪರವಾಗಿ ಪಶ್ಚಾತ್ತಾಪ ಪ್ರದರ್ಶಿಸಿ ನಾವು ಮಿ| ಬಿಡ್ಕಿಹಾಳರವರಿಗೆ ಅಪ್ರಿಯ ಸಲಾಮು ಹೊಡೆಯು ತ್ತೇವೆ. ಅವರಿದನ್ನು ಮನ್ನಿಸಿಕೊಳ್ಳಬೇಕಾಗಿ ವಿನಂತಿ.

---

೭. ಜಿಲ್ಲಾ ಬೋರ್ಡಿನ ಅಧ್ಯಕ್ಷರಿಗೂ, ಕಾರವಾ ರ ತಾಲೂಕ ಬೋರ್ಡಿನ ಅಧ್ಯಕ್ಷರಿಗೂ ನಡೆದ ಪತ್ರ ವ್ಯವಹಾರದ ಸಾರಾಂಶ ಬೇರೊಂದೆಡೆ ಪ್ರಕಟಿಸಿದ್ದೇ ವೆ. ಜಿಲ್ಲಾ ಬೋರ್ಡಿನ ಅಧ್ಯಕ್ಷರಿಗೆ ದಿವಾಣರ ಕಾರ್ಯಕ್ರಮ ನಿಶ್ಚಯಿಸುವಲ್ಲಿ ಏನಾದರೊಂದು ಅಧಿಕಾರವಿದ್ದರೆ ಘಟ್ಟದ ಮೇಲಿನ ಹಾಗು ಕೆಳಗಿನ ಒಂದೆರಡು ಮಾದರಿಯ ಹಳ್ಳಿಗಳಲ್ಲಾದರೂ ಅಲ್ಲಿಯ ಪರಿಸ್ಥಿತಿಯನ್ನು ತೋರಿಸಿದರೆ ಏನಾದರೊಂದು ಪರಿ ಣಾಮವಾಗುವದು. ಮಾನಪತ್ರಾರ್ಪಣ, ಶಿಷ್ಟಾಯಿ ಮೊದಲಾದ ವಾಙ್ಮಯದಿಂದ ಪ್ರಯೋಜನವಿಲ್ಲ. ದಿವಾಣರಿಗೆ ನಮ್ಮ ಜಂಗಲ ಕಷ್ಟಗಳನ್ನು ನಿವಾರಿಸು ವ ಅಧಿಕಾರವಿರುವದೆಂಬ ಗ್ರಹಿಕೆಯಿಂದ ಈ ಮಾತು ಬರೆದಿಲ್ಲ; ಸ್ಥಿತಿ ತಿಳಿಸಿದಬಹುದೆಂಬ ವಿಚಾರದಿಂದ ಈ ಸೂಚನೆ ಬರೆದಿದೆ. ಹಸ್ತಪತ್ರಿಕೆ ಹಂಚಿದ ಜಿಲ್ಲಾ ಬೋರ್ಡಿನ ಅಧ್ಯಕ್ಷರು ಆಲೋಚನೆ ಮಾಡಬಹುದು.

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: **1908.**

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents -
D. K. Nayak Bros.
D. S. Pai.
K. N. Nayak.
Honavar Agent.-
R. V. Prabhu Esq.

K. Padmanabha Rao & Sons
BELGAUM
Chief Agents for
Karnatak Districts & S. M. States

ಯುದ್ಧ ಪರಿಣತಿ ಇನ್ನೂ ಆಗಲಿಕ್ಕಿದೆ!

[ನಿರೀಕ್ಷಕನು ಬರೆದುದು.]

ಲಂಡನಿನ 'ಕ್ರಿಶ್ಚನ್ ಸಾಯನ್ಸ ಮೊನಿಟೊರ' ಎಂಬ ವಾರಪತ್ರಿಕೆಯಲ್ಲಿ ಸಿಸ್ಲಿ ಹಡ್ಲಸ್ಟನ್‌ರವರು ವಿದೇಶದ ರಾಜಕಾರಣದ ಕುರಿತು ಲೇಖ ಬರೆಯುತ್ತಾರೆ. ಸದ್ಯಕ್ಕವರು ಬರೆದ ಲೇಖದಲ್ಲಿ ಇನ್ನೂ ಯುದ್ಧಕ್ಕೆ ತಕ್ಕ ಪರಿಣತಿ ಉಂಟಾಗಲಿಲ್ಲ (The troups are not lined up) ವಾಗಿ ಅಭಿಪ್ರಾಯಪಟ್ಟಿದ್ದಾರೆ. ಯುದ್ಧಕ್ಕೆ ಪ್ರೋಪಕವಾದ ಒಳಸೂತ್ರಗಳು ಇನ್ನೂ ಸರಿದಾಡುತ್ತಿವೆ. ಹಡ್ಲಸ್ಟನ್‌ರವರು ಜನಿವಾಕ್ಕೆ ಹೋಗಿದ್ದರು. ಅಲ್ಲಿ ಸಂಧಿ-ಸಮರಗಳ ಚರ್ಚೆ ದಿನಾ ನಡೆಯುತ್ತಿದೆ. ಸಂಧಿ ಬೇಕೆಂದು ಎಲ್ಲರೂ ಹಾರೈಸುತ್ತಾರೆ; ಸಮರವಾಗುವದೆಂದೆಲ್ಲರೂ ಹೇಳುತ್ತಾರೆ! ಸ್ವಸ್ವತೆಯ ``ಸಿಲ್ಲಿ ಆತ್ಮರಕ್ಷಣೆಗೆಂದು ಅವರು ಹೇಳಿದರಂತೆ, ಒಬ್ಬರೂ ಸಂಧಿಗಾಗಿ ಒಂದು ಇಂಚು ಭೂಮಿ ಬಿಡತಯಾರಿಲ್ಲ. ಯುದ್ಧಪ್ರಸಂಗಕ್ಕೆ ಸಿದ್ಧರಿದ್ದಾರೆ. ಈಗ ನಡೆಯುವ ಒಪ್ಪಂದ-ಒಡಂಬಡಿಕೆಗಳೆಲ್ಲ ಶಾಶ್ವತವಾದವುಗಳಲ್ಲ; ಕ್ಷಣಭಂಗುರವಾದವುಗಳು. ಪ್ರಸಂಗ ಬದಲಿದರೆ ಅವೂ ಬದಲುತ್ತವೆ.

ಸಾರ ಪ್ರದೇಶದ ಮತಸಂಗ್ರಹದ ಗಲಾಟೆ ನಿನ್ನೆ ಮುಗಿಯುವದಿತ್ತು. ಈ ಹೊತ್ತು ಮಧ್ಯರಾತ್ರಿ ಮತಗಳ ಎಣಿಕೆಯಾಗಿ ಪರಿಣಾಮ ಪ್ರಕಟವಾಗುವದಿದೆ. ಮೂರೇ ಪ್ರಶ್ನೆಗಳಿಗೆ ಮತದಾರರು ಉತ್ತರ ಕೊಡಬೇಕು: (೧) ಜರ್ಮನಿಗೆ ಸೇರುವದಾದರೆ ಹಾಗೆ; (೨) ಫ್ರಾನ್ಸಕ್ಕೆ ಸೇರುವದಾದರೆ ಹಾಗೆ; (೩) ರಾಷ್ಟ್ರಸಂಘದ ಆಡಳಿತೆಯಲ್ಲಿರುವದಾದರೆ ಹಾಗೆ. ಈ ಮತದಾನದ ಕುರಿತು ಸಾರ ಪ್ರದೇಶದಲ್ಲಿಯೂ ಯುರೋಪ ಖಂಡದಲ್ಲಿಯೂ ಹೇಳಲಾರದಷ್ಟು ಉತ್ಸಾಹ ಹಬ್ಬಿಕೊಂಡಿದೆ. ಜಪಾನ—ಅಮೆರಿಕಾ ದೇಶಗಳಿಂದ ಮತದಾರರು ಸಾರಕ್ಕೆ ಲಗಬಗೆಯಿಂದ ಉತ್ಸಾಹದಿಂದ ಹೋಗಿರುತ್ತಾರೆ. ಮತದಾನದ ಕಾಲದಲ್ಲಿ ಯಾವದೇ ಪ್ರಕಾರ ಮತದಾರರಿಗೆ ಹುರಿದುಂಬಿಸಬಾರದೆಂದು ಪ್ರತಿಪಾದಿಸುತ್ತಿರುವ ಫ್ರೆಂಚರು ಥಕ್ಕನೆ ಗುರುವಾರ ಸಾರ ಪ್ರಾಂತದ ಮುಖ್ಯ ಮುಖ್ಯ ಮಾರ್ಗಗಳಲ್ಲಿ ಈಗಿನ ಆಡಳಿತೆಯನ್ನೇ ಮುಂದರಿಸುವಂತೆ ಮತದಾನವಾಗಬೇಕಾಗಿ ಉತ್ತೇಜಿಸುವಂಥ ದೊಡ್ಡ ದೊಡ್ಡ ಜಾಹೀರಾತುಗಳನ್ನು ರಾತ್ರಿ ಬೆಳಗಾಗುವದರೊಳಗಾಗಿಯೇ ಹಚ್ಚಿಬಿಟ್ಟಿದ್ದಾರೆ. ಅವನ್ನು ಪೋಲೀಸರು ಕಿತ್ತು ನಾಶಮಾಡಿದರಂತೆ. "ನಾನು ಜರ್ಮನಿಯಲ್ಲಿ ಹುಟ್ಟಿದ್ದೇ; ಜರ್ಮನ್ ರಾಷ್ಟ್ರದಲ್ಲಿಯೇ ನಾನು ಸಾಯಬೇಕು." ಎಂಬದಾಗಿ ಒಬ್ಬ ಜರ್ಮನ್ ಮುದುಕಿ ಮಾತಾಡಿದ್ದಳು. ಆದರಿಂದ ಜರ್ಮನಿಗೆ ಮತ ಕೊಡಲು ಉತ್ತೇಜನ ಕೊಟ್ಟಂತಾಯಿತೆಂದು, ಅವಳಿಗೆ ಮತ ಕೊಡಗೊಡಬಾರದೆಂಬ ನಿರ್ಣಯವಾಗಿದೆ. ಕಳೆದವಾರ ಉಲ್ಲೇಖಿಸಿದಂತೆ, ಹಿಟ್ಲರರು ನಾಝಿ ಪಕ್ಷದ ಸಭೆಯನ್ನು ಬರ್ಲಿನ್‌ಪಟ್ಟಣದಲ್ಲಿ ಸೇರಿಸಿ, ಸಾರ ಪ್ರದೇಶದವರು ಜರ್ಮನಿಗೆ ಸೇರಲು ಮತ ಕೊಡಬೇಕಾಗಿ ಸಂದೇಶ ಕೊರಡಿಸಿದ್ದಾರೆ. ಈ ಪ್ರಕರಣವು ಎಲ್ಲಿಗೆ ಮುಟ್ಟೀತೆಂದು ಇದೀಗಲೇ ಹೇಳಬರದು. ಸಾರ ಪ್ರಾಂತ ಜರ್ಮನಿಗೆ ಸೇರಿದ್ದಲ್ಲಿ ಫ್ರೆಂಚರು ಸುಮ್ಮಗುಳಿದಾರೆಂದು ನಾ ಹೇಳಲಾರೆ. ತನ್ಮಧ್ಯದಲ್ಲಿಯೇ ಫ್ರೆಂಚರಿಗೂ ಇಟಾಲಿಯವರಿಗೂ ಒಡಂಬಡಿಕೆಯಾದ ವಾರ್ತೆ ಬಂದಿದೆ. ಈ ಒಡಂಬಡಿಕೆಯ ವ್ಯಾಪ್ತಿ ದೊಡ್ಡದು. ಆಸ್ಟ್ರಿಯಾ ದೇಶದ ಸ್ವಾತಂತ್ರ್ಯ ಪಾಲನೆಕ್ಕಾಗಿ ಬ್ರಿಟಿಶ, ಫ್ರಾನ್ಸ, ಇಟಾಲಿ, ರುಮಾನಿಯಾ, ಯುಗೋಸ್ಲಾವಿಯಾ, ಝೆಕೋಸ್ಲೋವಾಕಿಯಾ ಮೊದಲಾದ ರಾಷ್ಟ್ರಗಳೆಲ್ಲ ಸೇರಬೇಕೆಂದು ಗೊತ್ತಾಗಿದೆ. ಜರ್ಮನಿಗೆ ವಿರೋಧ ಮಾಡುವ ಗುಪ್ತ ಕರಾರುಯಾದ ವಾರ್ತೆಯೂ ಹಬ್ಬಿದೆ. ಫ್ರೆಂಚ-ಇಟಾಲಿ ಕರಾರಿಯ ಬಗ್ಗೆ ಮುಸೋಲಿನಿಯವರಿಗೂ, ಫ್ರೆಂಚ ರಾಯಭಾರಿಯಾದ ಎಮ್. ಲಾವಲ್‌ರವರಿಗೂ ಸಮಸ್ತರು ಅಭಿನಂದಿಸುತ್ತಾರೆ. ಒಳಗುಟ್ಟು ಇನ್ನೂ ಹೊರಬೀಳಲಿಲ್ಲ. ಒಂದು ಮಾನ್ನು ನಾನು ಇಲ್ಲಿಯೇ ಹೇಳಿಬಿಡುತ್ತೇನೆ. ಜರ್ಮನಿಗೆ ನೆರೆಹೊರೆಯ ರಾಷ್ಟ್ರಗಳ ಸಹಾನುಭೂತಿ ಸಿಗದಂತೆ ಮಾಡುವದೇ ಫ್ರೆಂಚರ ಧೋರಣ. ಜರ್ಮನಿಯು ಫ್ರೆಂಚರಿಗೆ ವಿರೋಧವಾಗಿ ಇಟಾಲಿಯ ಇಲ್ಲವೇ ಯುಗೋಸ್ಲಾವಿಯಾದ ಸಹಾನುಭೂತಿ ಪಡಕೊಳ್ಳಲು ಕಾಂಕ್ಷಿಸುತ್ತದೆ. ಇಟಾಲಿ–ಯುಗೋಸ್ಲಾವಿಯಾ ದೇಶಗಳೊಳಗೆ ಮತ್ಸರವಿದ್ದ ಸಂಗತಿ ಲೋಕವಿಶ್ರುತವಾದುದು. ಆಸ್ಟ್ರಿಯಾ ದೇಶದಲ್ಲಿ ಜರ್ಮನಿಯ ಪ್ರತಿಷ್ಠೆ ಬೆಳೆದರೆ ಯುಗೋಸ್ಲಾವಿಯಾಕ್ಕೆ ಅಪ್ರೀತಿ ಇಲ್ಲ; ಪ್ರೀತಿಯೇ ಸರಿ. ಆಸ್ಟ್ರಿಯಾ ದೇಶವು ಜರ್ಮನ್ ಪರಂಪರೆಯದು. ಆಸ್ಟ್ರಿಯಾ ದೇಶದ ಸ್ವಾತಂತ್ರ್ಯಪಾಲನದಿಂದ ಜರ್ಮನಿಗೆ ಹಿತವೇ. ಆಸ್ಟ್ರಿಯಾ ದೇಶದ ಪ್ರಜೆಗಳು ಮಹಾಯುದ್ಧದಲ್ಲಿ ಪದಚ್ಯುತರಾದ ಹೆಪ್ಸಬರ್ಗ ಮನೆತನದ ರಾಜಪುತ್ರ ಓಟ್ಟೋರವರಿಗೆ ಪಟ್ಟಾಭಿಷೇಕ ಮಾಡಬಯಸುತ್ತಾರೆ. ಹೆಪ್ಸಬರ್ಗ ಮನೆತನದವರು ಜರ್ಮನ್ ಪಕ್ಷಪಾತಿಗಳು. ಅವರಿಗೆ ಪಟ್ಟಾಭಿಷೇಕ ಮಾಡಲು ಇಟಾಲಿಗೆ ಒಪ್ಪಿಗೆಯಿಲ್ಲ; ಯುಗೋಸ್ಲಾವಿಯಾ-ಹಂಗೇರಿ ಮೊದಲಾದ ಬಾಲ್ಕನ್ ಪ್ರದೇಶಗಳಲ್ಲಿಯೂ ಅಸಂತೋಷ ಹಬ್ಬುವ ಭೀತಿ ಇದೆ. ಇಂಥ ಸಂದರ್ಭದಲ್ಲಿ ಯುರೋಪೀಯ ರಾಜಕಾರಣದ ರೂಪ ಯಾವ ಸ್ಥಿತ್ಯಂತರವನ್ನು ಹೊಂದೀತೆಂದು ಹೇಳಕಠಿಣ. ಮಿ|| ಹಡ್ಲಸ್ಟನ್‌ರವರು ನುಡಿದಂತೆ, ಶತ್ರು-ಮಿತ್ರರ ಮನೋನಿಶ್ಚಯ ಇನ್ನೂ ಆಗಲಿಕ್ಕಿದೆ.

ಅಬಿಸೀನಿಯಾ ಪ್ರದೇಶದಲ್ಲಿ ನಡೆದ ಬಲಾತ್ಕಾರಗಳ ಕುರಿತು ಇನ್ನೂ ರಾಷ್ಟ್ರಸಂಘದಲ್ಲಿ ವಿಚಾರ ನಡೆದಿದೆ. ಅಬಿಸೀನಿಯಾ ದೇಶದವರು ರಾಷ್ಟ್ರಸಂಘದ ಕಡೆ ಮೊರೆಯಿಕೊಳ್ಳುತ್ತಿದ್ದಾರೆ. ಬ್ರಿಟಿಶ ರಾಯಭಾರಿಗಳು ಮಧ್ಯಸ್ಥಿಕೆ ಮಾಡಿ ಈ ಪ್ರಕರಣವನ್ನು ಇತ್ಯರ್ಥಗೊಳಿಸುವ ವಿಚಾರದಲ್ಲಿದ್ದಾರೆ. ಇಟಾಲಿ-ಫ್ರೆಂಚ ಕರಾರಿಯಲ್ಲಿ ಈ ಕುರಿತು ವ್ಯವಸ್ಥೆಯಾಗಿರಬೇಕು. ಈ ವಿಷಯವು ಜಾಗತಿಕ ರಾಜಕಾರಣದಲ್ಲಿ ಸದ್ಯಕ್ಕೆ ಸೇರುವ ಲಕ್ಷಣಗಳಿಲ್ಲದ್ದರಿಂದ ಇದನ್ನು ಇಷ್ಟಕ್ಕೇ ಬಿಟ್ಟು ಜಪಾನದ ಕಾರಸ್ಥಾನವನ್ನು ಸಂಕ್ಷಿಪ್ತವಾಗಿ ಪರಾಂಬರಿಸುತ್ತೇನೆ.

ಜಪಾನ ದೇಶಕ್ಕೆ ಹುಬ್ಬಾತಿ ಹುಟ್ಟಿದೆ. ಇಡಿ ಚೀನ ದೇಶವನ್ನು ಪಾದಾಕ್ರಾಂತ ಮಾಡಿ ಅಲ್ಲಿ ಜಪಾನದ ಪ್ರಾಬಲ್ಯ ಬೆಳೆಸಬೇಕೆಂಬ ಹಬ್ಬಾಕೆ ಹಿಡಿದು ಜಪಾನದ ರಾಜಕಾರಣಧುರಂಧರರು. ಇತ್ತ ಅಂವರುಪ ಗಳಿಂದ ಪ್ರಯತ್ನಪಡುತ್ತಿದ್ದಾರೆ. ಅಮೇರಿಕೆಯವರೂ ರುಶ್ಯರೂ ಈ ಮಹತ್ವಾಕಾಂಕ್ಷೆಯಲ್ಲಿ ಅಡ್ಡಬರುವವರು. ಆದರಿಂದ ಅವರಿಗೂ ಚೀನಿಯರಿಗೂ ಭೀತಿಯಲ್ಲಿಡುವವಕ್ಕಾಗಿ ಜಪಾನ ಸರಕಾರವು ಸೈನ್ಯಬಲವನ್ನು ವಿಪರೀತವಾಗಿ ಬೆಳಸಿದೆ. ಜಪಾನ ದೇಶವು ಸ್ವಾರ್ಥ ಸಾಧನೆಯಾಗುವದಿದ್ದಲ್ಲಿ ಲೋಕದಲ್ಲಿ ಯಾರ ಪರಿವೆಯನ್ನೂ ಹಿಡಿಯದು. "ಪೌರ್ವಾತ್ಯ ದೇಶಗಳಲ್ಲಿ ಕಾರುಬಾರು ನಡೆಸುವ ಸಂಪೂರ್ಣ ಅಧಿಕಾರ ನಮ್ಮದು. ಅದಕ್ಕೆ ಅಮೇರಿಕೆಯವರಾಗಲಿ, ಬ್ರಿಟಿಶರಾಗಲಿ ಅಡ್ಡಗಟ್ಟಿದರೆ ಜಪಾನಿಯರು ಸಾಯುವ ವರೆಗೆ ಹೋರಾಡುವರು." (*Japan would*

(ಒನೇ ಕಾಲಮಿನ ಮೇಲೆ ಮುಂದರಿಸಿದೆ.)

ದ್ವಿಗುಣವಾದ ಲಾಭವನ್ನು ಹೊಂದಿರಿ!

ರೋಗದಿಂದ ನರಳುವವರಿಗೆ ಗುಣ ಮತ್ತು ಆ ನಮಾನ ಸಂದರ್ಭದಲ್ಲಿ ರಕ್ಷೆ!!

ಮಕ್ಕಳ ಲಿವರ್ ಕಂಪ್ಲೈಂಟು (ಕಾಮಿಣವ್ಯಾಧಿ, ಪಿತ್ತ ಜ್ವರಗಳಿಗೆ

ಜಮ್ಮಿ ವೆಂಕಟರಮಣಯ್ಯನವರ

'ಲಿವರ್ ಕ್ಯೂರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಿರಿ!

ಹೆಚ್ಚಿನ ಮಾಹಿತಿಗೆ ಬರೆಯಿರಿ,

ಉತ್ತರ ಕನ್ನಡ ಮತ್ತು ಪೋರ್ತುಗೀಜರ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ.)

ಕಾನಡಾವೃತ್ತ.

ಮಿತಿ ಭಾವ ಸಂ। ಪುಷ್ಯ ಶು। ೧೦ಮಿ ಸೋಮವಾರ

ಗೌಪ್ಯ ಸ್ಫೋಟ!

ಹಿಂದುಸ್ಥಾನ ಸರಕಾರದ ಗುಪ್ತ ಸರ್ಕ್ಯುಲರು

ಕೇವಲ ಗ್ರಾಮನಿವಾಸಿಗಳ ಕಲ್ಯಾಣವನ್ನೇ ಬಯಸಿ ಗ್ರಾಮೋದ್ಧಾರ ಮಾಡುವ ಸತ್ಸಂಕಲ್ಪದಿಂದಲೂ ನಿಸ್ಪೃಹಬುದ್ಧಿಯಿಂದಲೂ ಮಹಾತ್ಮರು ಸ್ಥಾಪಿಸಿದ ಅಖಿಲ ಭಾರತೀಯ ಗ್ರಾಮೋದ್ಧಾರ ಸಂಘವನ್ನು ಹಿಂದುಸ್ಥಾನ ಸರಕಾರವು ದ್ವೇಷಿಸುತ್ತದೆಂಬುದಾಗಿ ದಿಲ್ಲಿಯ ಹಿಂದುಸ್ಥಾನ ಟೈಮ್ಸ ಪತ್ರಕರ್ತರು ಒಂದು ವಾರ್ತೆ ಪ್ರಕಟಿಸಿದ ಸಂಗತಿ ಸಮಸ್ತರೂ ಬಲ್ಲ ವಿಷಯ. ಅಂದಿನಿಂದ ಆ ಸರ್ಕ್ಯುಲರಿನ ವಿವರವನ್ನು ತಿಳಕೊಳ್ಳಲು ಸಮಸ್ತರೂ ಕುತೂಹಲಪಟ್ಟಿದ್ದರು. ಮುಂಬಯಿಯ ಫ್ರೀ ಪ್ರೆಸ್ ಪತ್ರಿಕೆಯ ದಿಲ್ಲಿಯ ಸುದ್ದಿಗಾರರು ಇಡೀ ಸರ್ಕ್ಯುಲರಿನ ಯಥಾಪ್ರತಿಯನ್ನು ಹೇಗೋ ಸಂಪಾದಿಸಿ ಅದನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಹೋಮ್ ಡಿಪಾರ್ಟಮೆಂಟ ಯಾನೆ ಸ್ವದೇಶದಾಡಳಿತೆಯ ರಾಜಕೀಯ ಖಾತೆಯ ಕಾರ್ಯದರ್ಶಿಗಳಾದ ಮಿ| ಹೆಲೆಟ್‌ರವರು ನವೆಂಬರ ೨೩ನೇ ತಾರೀಖಿಗೆ ಇದನ್ನು ಪ್ರಾಂತಿಕ ಸರಕಾರಗಳಿಗೆ ಕಳುಹಿದ್ದಾರೆ. ಈ ಸರ್ಕ್ಯುಲರಿನಲ್ಲಿ ರಾಷ್ಟ್ರೀಯ ಸಭೆಯ ಮುಂಬಯಿಯ ಅಧಿವೇಶನದಿಂದ ಸರಕಾರದ ಮನಸ್ಸಿನ ಮೇಲೆ ಉಂಟಾದ ಅವಸ್ಥಾಂತರಗಳು ನಮೂದಿವೆ. ಇದರ ವಾಚನದಿಂದ ಜನರು ಹೇಗೆ ನಡಕೊಳ್ಳಬೇಕು, ಅಧಿಕಾರಿಗಳ ಅಪೇಕ್ಷೆ ಏನಿದೆ ಎಂಬ ಸಂಗತಿಗಳು ಸ್ಫುಟವಾಗುತ್ತವೆ. ಆದರಿಂದ ಆ ಸರ್ಕ್ಯುಲರಿನ ವಿವರವನ್ನು ಇಂದಿಗೆ ವಿವರಿಸಬಯಸಿದ್ದೇನೆ.

ಮಿ| ಹೆಲೆಟ್‌ರವರು ಬರೆಯುವದೇನಂದರೆ—

"ಸದ್ಯಕ್ಕೆ ಜರುಗಿದ ಮುಂಬಯಿಯ ರಾಷ್ಟ್ರಸಭೆಯ ಅಧಿವೇಶನದಲ್ಲಿ ಕೈಕೊಂಡ ನಿರ್ಣಯಗಳಿಂದ ಉಂಟಾದ ಸ್ಥಿತ್ಯಂತರವನ್ನು ನಿಮಗೆ ತಿಳಿಸಬೇಕಾಗಿ ನನಗೆ ಅಪ್ಪಣೆಯಾಗಿದೆ. ರಾಷ್ಟ್ರೀಯ ಸಭೆ ಸೇರುವ ಮುಂಚೆ ರಾಷ್ಟ್ರೀಯ ಸಭಾಭಿಮಾನಿಗಳಲ್ಲಿ ಐಕ್ಯಭಂಗವಾಗುವದೆಂದು ಪ್ರಾಂತಿಕ ಸರಕಾರಗಳು ಅಂಬೋಣವಿತ್ತು. ಸತ್ಯಾಗ್ರಹವನ್ನು ಮುರಿಯುವದಕ್ಕಾಗಿ ಸರಕಾರವು ಕೈಕೊಂಡ ಉಪಾಯಗಳಿಂದ ರಾಷ್ಟ್ರೀಯ ಸಭೆಯವರಲ್ಲಿ ಗೊಂದಲ ಉಂಟಾಗಿತ್ತು. ಕೊಂಗ್ರೆಸಿನ ಮೇಲಿನ ಸರಕಾರಿ ಪ್ರತಿಬಂಧ ದೂರವಾದ ಬಳಿಕ ಕೌನ್ಸಿಲು ಪ್ರವೇಶ, ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ರಚನ ಈ ವಿಷಯಗಳ ಮೇಲೆ ವಾದವಿವಾದ ನಡೆದಿತ್ತು. ಮಾಲವೀಯ-ಅಣೆ ಪಕ್ಷದವರಿಗೂ ಪಾರ್ಲಿಮೆಂಟರಿ ಬೋರ್ಡಿನವರಿಗೂ ತೀಕ್ಷ್ಣ ಮತಭೇದ ಉಂಟಾಗಿತ್ತು. ನೂತನವಾಗಿ ಜನ್ಮವನ್ನೆತ್ತಿದ ಕಾಂಗ್ರೆಸ ಸಮಾಜಸತ್ತಾವಾದಿ ಪಕ್ಷಕ್ಕೂ ರಾಷ್ಟ್ರೀಯ ಸಭೆಯವರಿಗೂ ವಿರೋಧ ಉಂಟಾಗಿತ್ತು. ರಾಷ್ಟ್ರೀಯ ಸಭೆಯ ಸಂಘಟನೆಯಬಗ್ಗೆ, ಖಾದಿ ಧರಿಸುವ ಒತ್ತಾಯದ ಬಗ್ಗೆ, ಮಹಾತ್ಮರ ಪಾರುಪತ್ಯಾಧಿಕಾರದ ಬಗ್ಗೆ ರಾಷ್ಟ್ರ ಸಭೆಯವರಲ್ಲಿ ಘನಘೋರ ಚರ್ಚೆ ನಡೆದಿತ್ತು. ಮುಂಬಯಿಯ ರಾಷ್ಟ್ರೀಯ ಸಭೆಯ ಅಧಿವೇಶನದ ಪೂರ್ವರಂಗವಿದು.

"ಮುಂಬಯಿಯ ರಾಷ್ಟ್ರೀಯ ಸಭೆಯ ಅಧಿವೇಶನದಲ್ಲಿ ಎರಡು ಮಹತ್ವದ ಸಂಗತಿಗಳಾದವು—(೧) ರಾಷ್ಟ್ರೀಯ ಸಭೆ ಮತ್ತು ಕಾರ್ಯಕಾರಿ ಮಂಡಳದ ಪುನರ್ಘಟನೆ, (೨) ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಸ್ಥಾಪನೆ. ಗಾಂಧೀಜಿಯವರ ರಾಜಿನಾಮೆ ಇವೆರಡಕ್ಕೂ ಸಂಬಂಧಪಟ್ಟಿದ್ದಿದೆ. ರಾಷ್ಟ್ರಸಂಸ್ಥೆಗಳಲ್ಲಿ ಸತ್ಯಾಗ್ರಹದಿಂದ ಉಂಟಾದ ಗೊಂದಲವನ್ನು ಪರಿಹರಿಸಿ ರಾಷ್ಟ್ರಸಂಸ್ಥೆಗಳ ಕಾರ್ಯಪದ್ಧತಿಯನ್ನು ಬೆಳೆಸುವದಕ್ಕಾಗಿ ಈ ತಿದ್ದುಪಾಟು ಕೈಕೊಂಡಿದೆ. ಅವುಗಳಲ್ಲಿ ಮುಖ್ಯವಾದವು ಪ್ರತಿನಿಧಿಗಳ ಸಂಖ್ಯೆ ೬೦೦೦ದಿಂದ ೨೦೦೦ಕ್ಕೆ ಇಳಿಸಲ್ಪಟ್ಟಿದೆ. ಅಖಿಲ ಭಾರತೀಯ ಕಮಿಟಿಯ ಸಭಾಸದರ ಸಂಖ್ಯೆ ಅರ್ಧಕ್ಕಿಂತ ಕಡಿಮೆಗಿಳಿಸಿದೆ. ಪ್ರಾಂತಿಕ ಕೊಂಗ್ರೆಸ ಕಮಿಟಿಗಳಲ್ಲಿ ೦ ಕ್ಕೆ ... ಸಭಾಸದರಿರಕೂಡದೆಂದು ವಿಧಿಸಲಾಗಿದೆ. ಎಲ್ಲಕ್ಕೂ ಮಹತ್ವದ ನಿಯಮ ಯಾವದೆಂದರೆ ೨೦೦೦ ಪ್ರತಿನಿಧಿಗಳಲ್ಲಿ ... ಮಂದಿಗಳು ಮಾತ್ರ ಪಟ್ಟಣಿಗರಿರಬೇಕು. ಉಳಿದವರೆಲ್ಲರೂ ಗ್ರಾಮನಿವಾಸಿಗಳ ಪ್ರತಿನಿಧಿಗಳಿರಬೇಕು. ಪ್ರತಿನಿಧಿಗಳನ್ನು ಜನರೇ ಆರಿಸಿಕೊಡಬೇಕು. ಪ್ರತಿನಿಧಿಗಳು ಖಾದಿಯನ್ನೇ ಧರಿಸುವವರಿರಬೇಕು. ಕಾಯಕವ ಮಾಡಬಲ್ಲವರು ಮಾತ್ರ ಕೊಂಗ್ರೆಸ ಸಂಸ್ಥೆಗಳಲ್ಲಿ ಅಧಿಕಾರ ಪಡೆಯಲು ಪಾತ್ರರು. ಈ ಯೋಜನೆಯಿಂದ ರಾಷ್ಟ್ರೀಯ ಸಭೆಗೂ ಗ್ರಾಮಗಳಿಗೂ ಅತ್ಯಂತ ಸಂಬಂಧ ಹೆಚ್ಚಾಗುವದು. ಪ್ರತಿನಿಧಿಗಳ ಸಂಖ್ಯೆ ಇಳಿದದ್ದರಿಂದ ರಾಷ್ಟ್ರೀಯ ಸಭೆಯ ಅಧಿವೇಶನವನ್ನು ಗ್ರಾಮಾಂತರಗಳಲ್ಲಿ ಸಹ ಸೇರಿಸಲು ಅನುಕೂಲತೆಯುಂಟಾಗಿದೆ. ಈ ವಿಧಾಯಕದಿಂದ ರಾಷ್ಟ್ರೀಯ ಸಭೆಯು ರಾಜಕೀಯ ಕೆಲಸ ನಡಿಸಲು ಹೊಸ ಸಾಮರ್ಥ್ಯ ಗಳಿಸಿದೆ. ಇದರಿಂದ ಹಿಂದುಸ್ಥಾನ ಸರಕಾರಕ್ಕೆ ಅನಿಸಲಾರಂಭಿಸಿದೆ. ರಾಷ್ಟ್ರೀಯ ಸಭೆಯು ಗ್ರಾಮನಿವಾಸಿಗಳ ಪ್ರಾತಿನಿಧಿಕ ಸಂಸ್ಥೆಯೆಂದು ಲೋಕದಲ್ಲಿ ಮೆರೆಯಲು ಅನುಕೂಲವಾಗಿದೆ. ಗಾಂಧೀಜಿಯವರು ಕೊಂಗ್ರೆಸಿಗೆ ಪ್ರಜಾಪ್ರತಿನಿಧಿ ಸಂಸ್ಥೆಯೆಂದು ಬೊಟ್ಟು ತೋರಿಸಿ ರಾಜ್ಯಸೂತ್ರಧಾರಣೆಯ ಕಾರ್ಯವನ್ನು ಕೈಕೊಳ್ಳಲು ತಾವು ಸಿದ್ಧರಿದ್ದೇವೆಂದು ಹೇಳಲನುಕೂಲವಾಗಿದೆ.

"ರಾಷ್ಟ್ರೀಯ ಸಭೆಯ ಸಾಮಾನ್ಯ ಧೋರಣದಲ್ಲಿ ಹೆಚ್ಚು-ಕಡಿಮೆಯಾಗಿಲ್ಲ. ಅಸಹಕಾರದ ಪ್ರವೃತ್ತಿ ಇನ್ನೂ ಉಂಟು. ಸತ್ಯಾಗ್ರಹದ ಸಾಮಾನ್ಯ ಯೋಜನೆಯ ಅಭಾವದಲ್ಲಿ ಪಾರ್ಲಿಮೆಂಟರಿ ಬೋರ್ಡಿನ ರಚನೆಯಾಗಿದೆ. ಅಖಿಲ ಭಾರತೀಯ ಗ್ರಾಮೋದ್ಯೋಗಿಕ ಸಂಘದ ರಚನೆ ನಿರ್ದೋಷವೆಂದು ಎಣಿಸಬಾರದು. ಈ ಸಂಘವನ್ನು ರಾಷ್ಟ್ರೀಯ ಸಭೆಯವರು ತಮ್ಮ ಪ್ರತಿಷ್ಠೆ ಪುನಃ ಸ್ಥಾಪಿಸಿಕೊಳ್ಳುವದಕ್ಕಾಗಿ ಕಲ್ಪಿಸಿದ್ದಾರೆ. ಸತ್ಯಾಗ್ರಹದಲ್ಲಿ ನಿರುದ್ಯೋಗಿಗಳಾದ ಕಾರ್ಯಕರ್ತರಿಗೆ ಉದ್ಯೋಗ ಕಲ್ಪಿಸಿ ಕೊಟ್ಟಿರುತ್ತಾರೆ. ಈ ಸಂಘವು ಅಖಿಲ ಭಾರತೀಯ ನೂಲುಗಾರರ ಸಂಘದಂತೆ ರಾಷ್ಟ್ರೀಯ ಸಭೆಗೆ ಅನುಕೂಲವಾಗಿ ವರ್ತಿಸುವದು. ಸಮಾಜಸತ್ತಾವಾದಿಗಳು ಇನ್ನೂ ರಾಷ್ಟ್ರೀಯ ಸಭೆಯಲ್ಲಿದ್ದು ಅವರಿಗೆ ಮಹಾತ್ಮರ ಆಶೀರ್ವಾದವಿದೆ. ಮಹಾತ್ಮರು ದೀರ್ಘದರ್ಶಿ ರಾಜಕಾರಣಧುರಂಧರರೆಂದು ಈ ಅಧಿವೇಶನದಿಂದ ಸಿದ್ಧಪಡಿಸಿದ್ದಾರೆ. ಭಿನ್ನ ಭಿನ್ನ ಮತದ ಜನರನ್ನು ಅವರು ತಮ್ಮ ಆಧಿಪತ್ಯದಲ್ಲಿ ಕಾಪಾಡಿಕೊಂಡಿದ್ದಾರೆ. ಮಹಾತ್ಮರಿಗೂ ಕೊಂಗ್ರೆಸ ಕಾರ್ಯಕರ್ತರಿಗೂ ಉಂಟಾದ ಮತಭೇದ ಹೇಳತಕ್ಕಂಥಾದ್ದಲ್ಲ. ಮಹಾತ್ಮರು ರಾಷ್ಟ್ರೀಯ ಸಭೆಯಿಂದ ಹೊರಬಿದ್ದು ಸತ್ಯಾಗ್ರಹದ ಯಾವತ್ತೂ ಅಧಿಕಾರವನ್ನು ತಮ್ಮ ಕೈಯಲ್ಲಿಟ್ಟುಕೊಂಡಿದ್ದಾರೆ. ಇದರಿಂದ ಅವರು ಬೇಕಾದಾಗ ಸತ್ಯಾಗ್ರಹ ಹೂಡಲು ಸ್ವತಂತ್ರರಾಗಿದ್ದಾರೆ.

"ದೀರ್ಘ ವಿಚಾರ ಮಾಡಿದರೆ ಗ್ರಾಮನಿವಾಸಿಗಳ ಬೆಂಬಲದಿಂದ ಪ್ರಚಂಡ ಸತ್ಯಾಗ್ರಹ ಹೂಡುವ ತಯಾರಿ ಇದೆಂದು ತೋರಬಹುದು. ಈ ಅಭಿಪ್ರಾಯ ಸಟಿಯಾಗಲಿ, ದಿಟವಾಗಲಿ, ಅಧಿಕಾರಿಗಳು ಜಾಗ್ರತೆ ಕೊಳ್ಳಬೇಕಾದದ್ದೇನೋ ನಿಜ. ಪ್ರಾಂತಿಕ ಸರಕಾರಗಳು ಯಾವತ್ತೂ ಪರಿಸ್ಥಿತಿಯನ್ನು ಕಣ್ಣಲ್ಲಿ ಎಣ್ಣೆ ಇಟ್ಟು ಕಾಯುತ್ತಿರಬೇಕು. ಅಬಕಾರಿ ಉತ್ಪನ್ನ ಕುಗ್ಗಿಸುವದಕ್ಕಾಗಿ ಮದ್ಯನಿಷೇಧದ ಉಪದೇಶವಾಗುತ್ತದೆ. ಆದರಿಂದ ಕಾಯಿದೆಯನ್ನು ಉಲ್ಲಂಘಿಸುವವರ ಮೇಲೆ ತತ್ಪರತೆಯಿಂದ ಖಟ್ಲೆ ಮಾಡಿಕೊಡಬೇಕು.

"ಸರಕಾರವು ಜನಸಾಮಾನ್ಯರ ಆರ್ಥಿಕ ಪರಿಸ್ಥಿತಿಯನ್ನು ಬೆಳೆಸುವದಕ್ಕಾಗಿ ಪ್ರಯತ್ನ ಮಾಡಬೇಕು. ಸರಕಾರವು ಕೈಕೊಂಡ ಗ್ರಾಮೋದ್ಧಾರದ ಯೋಜನೆಗಳನ್ನು ಜನರಿಗೆ ತಿಳಿಸಿಹೇಳಬೇಕು. ಗಾಂಧಿಯವರ ಯೋಜನೆಯನ್ನು ಟೀಕಿಸಬೇಕು. ಆಸ್ಪತ್ರೆ, ಶಾಲೆ, ಮಾರ್ಗ, ಕಾಲುವೆ, ಪೇಟೆ ಮೊದಲಾದವುಗಳನ್ನು ಸ್ಥಾಪಿಸಿ ಲೋಕಕಲ್ಯಾಣ ಮಾಡಬೇಕು. ಪ್ರಾಂತಿಕ ಸರಕಾರಗಳು ಕೈಕೊಳ್ಳಬಹುದಾದ ಗ್ರಾಮೋದ್ಧಾರ ಯೋಜನೆಗಳಿಗೆ ಹಿಂದುಸ್ಥಾನ ಸರಕಾರವು ಬೆಂಬಲ ಕೊಡಲೊಪ್ಪುತ್ತದೆ. ಜಿಲ್ಹಾಧಿಕಾರಿಗಳೂ ರಾಷ್ಟ್ರೀಯ ಸಭೆಯವರ ಪ್ರಚಾರ ಕಾರ್ಯಕ್ಕೆ ಇದಿರಾಗಬೇಕು. ಸಂಚಾರದ ಸಮಯ ಜನರಿಗೆ ಗ್ರಹಿಕೆ ಹೇಳಬೇಕು. ಮಾರ್ಗಗಳ ನೆರೆಹೊರೆಯಲ್ಲಿದ್ದ ಗ್ರಾಮಗಳಲ್ಲಿ ಮಾತ್ರ ಸಂಚರಿಸದೆ ಗ್ರಾಮಾಂತರಗಳಲ್ಲಿ ಪ್ರವೇಶಿಸಿ ಗ್ರಾಮದವರೊಡನೆ ಸ್ನೇಹ ಬೆಳೆಸಬೇಕು. ಗ್ರಾಮಗಳೊಳಗಿನ ಚಿಕ್ಕ-ಪುಟ್ಟ ಅಡಚಣೆಗಳನ್ನು ದೂರಪಡಿಸುವದಕ್ಕಾಗಿ ಕೆಲ ಹಣ ಸರಕಾರವು ಜಿಲ್ಹಾಧಿಕಾರಿಗಳ ಕಡೆ ಕೊಟ್ಟು ವಿನಿಯೋಗಿಸಬೇಕು.

"ರಾಷ್ಟ್ರೀಯ ಸಭೆಯ ವಿದ್ಯಮಾನ ನಡೆಯುವ ಪ್ರದರ್ಶನ—ಜಾತ್ರೆಗಳಿಗೆ ಸರಕಾರಿ ಅಧಿಕಾರಿಗಳು ಆಶ್ರಯ ಕೊಡಕೂಡದು. ಉದ್ಯೋಗಿಕ ಸಂಘದ ಕಾರ್ಯಕರ್ತರು ಭೆಟ್ಟಿಯಾ ಮಾಹಿತಿ ಕೇಳಿದ್ದಲ್ಲಿ ಪೂರೈಸಬೇಕು. ಇದಕ್ಕೆ ವಿಶೇಷ ನೆರವಾಗಕೂಡದು. ಇವಕ್ಕೆ ಸರಕಾರಿ ಇಮಾರತುಗಳನ್ನು ಕೊಡಕೂಡದು. ಪಟ್ಟಿ ಎತ್ತುವಳಿ ಮಾಡುವಲ್ಲಿ ನೆರವಾಗಬಾರದು. ಗ್ರಾಮೋದ್ಧಾರದ ಕೃತ್ಯ ದಿವಾಣರ ಅಧಿಕಾರಕಕ್ಷೆಯೊಳಗಿನದು. ಆದಾಗ್ಯೂ ದಿವಾಣರು ಈ ಸೂಚನೆಗಳಂತೆ ನಡಕೊಳ್ಳುವಂತಾಗಿ ಕೋರಿಕೆ.

'ಈ ಸರ್ಕ್ಯುಲರನ್ನು ಜಿಲ್ಹಾಧಿಕಾರಿಗಳಿಗೂ ಇತರರಿಗೂ ಹಂಚಬೇಕು. ಪ್ರಾಂತಿಕ ಸರಕಾರಗಳು ತಮ್ಮ ಅಭಿಪ್ರಾಯವನ್ನು ತಿಳಿಸಬೇಕು."

ಸರ್ಕ್ಯುಲರಿನ ಪರ್ಯಾಲೋಚನೆ ಮಹಾತ್ಮರಿಗೆ ಆತ್ಮಾನಂದವಾಗಿದೆ. ಈ ವಿವರ ಈ ಮುಂದೆ

ಯುದ್ಧ ಪರಿಣಾತಿ ಇನ್ನೂ ಆಗಲಿಕ್ಕಿದೆ!

(೫ನೇ ಪಾನಿನಿಂದ ಮುಂದರಿಸಿದ್ದು)

resist to the utmost even to national suicide any attempt by the U S A and Britain forcibly to prevent her from carrying out her aim of maintaining peace and order in the Far East] ಎಂಬದಾಗಿ ಜಪಾನದ ರಾಯಭಾರಿಗಳಾದ ಮಿ| ಸೈಟೋರವರ ಅಮೇರಿಕೆಯ ಫಿಲಿಡೆಲ್ಫಿಯಾ ಸಭೆಯಲ್ಲಿ ಉದ್ಗರಿಸಿದರು ರಾಷ್ಟ್ರಸಂಘದಿಂದ ಚೀನ ಪ್ರದೇಶ ಆಕ್ರಮಣ ಮಾಡಿಕೊಳ್ಳಲಿಕ್ಕೆ ಅಡ್ಡಿಯಾದೊಡನೆ ಜಪಾನ ದೇಶವು ರಾಷ್ಟ್ರಸಂಘಕ್ಕೆ ಒಮ್ಮೆಲೇ ರಾಜಿನಾಮೆ ಕೊಟ್ಟು ಹೊರಬಿತ್ತು ಜಪಾನ ದೇಶವು ಸೈನ್ಯಬಲ ನಿಯಂತ್ರಣ ಮಾಡುವಂಥ ಯಾವದೇ ಪ್ರತಿಬಂಧ ಹಾಕಿಕೊಳ್ಳಲು ತಯಾರಿಲ್ಲ ಸೈನ್ಯ ಖರ್ಚನ್ನು ಕಳೆದ ೧೨ ವರುಷಗಳಲ್ಲಿ ಇಮ್ಮಡಿ ಮಾಡಿಬಿಟ್ಟಿದೆ ೧೯೩೨ನೇ ಇಸ್ವಿಯ ೧೯೩೪ರ ವರೆಗೆ ೬೫ ಕೋಟಿ ಯೇನು (೫೫ ರೂಪಾಯಿ) ಖರ್ಚು ಮಾಡಿತು ಮುಂದಿನ ಸಾಲಿನಲ್ಲಿ ಒಂದು ಅಬ್ಜ ಯೇನು ಖರ್ಚು ಮಾಡಬೇಕೆಂದು ಸಂಕಲ್ಪಿಸಿದ ಜಪಾನ ದೇಶದಲ್ಲಿ ಜನರು ತೆರಿಗೆ ತೆತ್ತು ತೆತ್ತು ಹಣ್ಣಾಗಿದ್ದಾರೆ ನೂರಾರು ಜನರು ಕೂಳಿಗೆ ಗತಿ ಇಲ್ಲದೆ ಉಪವಾಸ ಸಾಯುವ ಪ್ರಸಂಗ ಬಂದಿದೆ ಅನೇಕರು ಹೆಣ್ಣು ಮಕ್ಕಳನ್ನು ಮಾರಿ ನಿರ್ವಹ ಮಾಡುವ ಪ್ರಸಂಗ ಬಂದಿದೆಂದು ಮುಂಬಯಿಯ 'ಟೈಮ್ಸ' ಪತ್ರಿಕೆಯ ಟೋಕಿಯೋ ಸುದ್ದಿಗಾರರು ಬರೆಯುತ್ತಾರೆ ಆದಾಗ್ಯೂ ಸರಕಾರವು ಸೈನ್ಯ ಖರ್ಚನ್ನು ಇಳಿಸಲು ಒಪ್ಪದು ಮಂಚೂರಿಯಾ ದೇಶದಲ್ಲಿ ಮಾರ್ಗ, ಉಗಿಬಂಡಿ, ವಿಮಾನು ಠಾಣ್ಯಗಳನ್ನು ಕಟ್ಟಿಸುವ ರಭಸ ನಡೆದಿದೆ ಮುಂದಿನ ಯುದ್ಧದ ತಯಾರಿಯನ್ನು ಜಪಾನ ಸರಕಾರವು ನಡಿಸುತ್ತದಾಗಿ ದಿ ನ್ಯೂ ಸ್ಟೇಟ್ಸಮನ್ ಎಂಡ ನೇಶನ್ ಪತ್ರಿಕೆಯು ಜಪಾನ ದೇಶದ ಮುತ್ಸದ್ದಿಗಳ ವಚನಾಧಾರ ಕೊಟ್ಟು ಪ್ರತಿಪಾದಿಸಿದೆ ಜಪಾನ ದೇಶದಲ್ಲಿ ಲಷ್ಕರಿ ಪಕ್ಷವು ಸರ್ವಾಧಿಕಾರ ಸಳಕೊಂಡಿದೆ ಪೌರ್ವಾತ್ಯ ದೇಶಗಳಲ್ಲಿ ಪ್ರಭುತ್ವವನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಇವರು ಪ್ರಯತ್ನ ನಡಿಸುತ್ತಿದ್ದಾರೆ ಮಂಚೂರಿಯಾ ದೇಶದಲ್ಲಂತು ರಕ್ಕಸ ದ್ವೇಷಭಾಂಡಾರವೇ ನಿರ್ಮಾಣವಾಗಿದೆಂದು ಮಂಚೂರಿಯಾ ದೇಶದೊಳಗಿನ 'ಹರಬಿನ್ ಟಿಂಬುನ್' ಪತ್ರಿಕೆಯಲ್ಲಿ ಉಲ್ಲೇಖಿಸಿದೆ "೧೮ರಲ್ಲಿ ೯ ಪಾಲು ಜಪಾನಿಯರು ಯುದ್ಧಕಾಂಕ್ಷಿಸುತ್ತಾರೆ ಎಲ್ಲರೂ ತ್ಯಾಗ ಮಾಡಲು ತಯಾರಾಗಬೇಕು ೩ ವರ್ಷದ ಚಿಕ್ಕಮಕ್ಕಳಿಗೆ ಸಹ ಯುದ್ಧದ ಆಟಗಳನ್ನೇ ಕಲಿಸಬೇಕು ತುಬಾಕಿ ಹೊಡೆಯುವದು ಹೇಗೆ, ಖಡ್ಗ ಪ್ರಯೋಗ ಮಾಡುವ ಬಗೆ ಹೇಗೆ ಎಂಬದನ್ನು ಮಕ್ಕಳಿಗೆ ಕಲಿಸಬೇಕು ಯುದ್ಧದಲ್ಲಿಯೇ ಸುಖವಿದೆ, ಯುದ್ಧದಲ್ಲಿ ಪ್ರೀತಿ ಇಡಬೇಕು, ಎಂಬದಾಗಿಯೂ ಹುಡುಗರಿಗೆ ಕಲಿಸಬೇಕು" ಈ ಪ್ರಕಾರ ಸದರಿ ಪತ್ರಿಕೆಯಲ್ಲಿ ಬರೆದದೆ ಜಪಾನದ ಮನಸ್ಥಿತಿಯ ಕಲ್ಪನೆ ಈ ಉಲ್ಲೇಖಗಳಿಂದ ಬಂದೀತು ಇದು ಬ್ರಿಟಿಶರಿಗೆ ಸಮ್ಮತವಿಲ್ಲ ಜಪಾನಿಯರು ತಕ್ಕಷ್ಟು ಸಾಮರ್ಥ್ಯ ಸಂಗ್ರಹ ಮಾಡಿದೊಡನೆ ಬ್ರಿಟಿಶರಿಗೂ ಎದುರಾಳಿಯಾಗಲು ಹಿಂಜರಿಯುವವರಲ್ಲವಾಗಿ 'ಜಪಾನ ಕ್ರೋನಿಕಲ್' ಪತ್ರಿಕೆಯಲ್ಲಿ ಸುಪ್ರಸಿದ್ಧ ಸೈನ್ಯ ಬಾಬತಿನ ತಜ್ಞರಾದ ಮಿ| ಹೆರೊಟಾ ಕಿಂಸಾಕೂರವರು ಸೂಚಿಸಿದ್ದಾರೆ ಮೇಲ್ಕಾಣಿಸಿದ ಸೈಟೋರವರಂತು ಸ್ಪಷ್ಟವಾಗಿ ಈ ಸಂಗತಿ ಒಪ್ಪುತ್ತಾರೆ ಬ್ರಿಟಿಶರು ಸಿಂಗಾಪುರದ ಬಂದರದಲ್ಲಿ ಕಳೆದ ೬ ವರುಷದಿಂದ ಸೈನ್ಯ ಠಾಣ್ಯಗಳನ್ನು ಭದ್ರಪಡಿಸಿ [illegible] ಸೈನಿಕರನ್ನಿಡಲು ಜಪಾನಿಯರ ಹೆಬ್ಬಯಕೆಯ ರಣ ಪ್ರಸಂಗದಲ್ಲಿ ಪರತಕ್ಕಕ್ಕೆ ಇದಿರಾಗಬೇಕು ಹೀಗೆ ಇಕ್ಕಟ್ಟಿನಲ್ಲಿ ಅಪನಂಬಿಗೆ ಇದ್ದಾಗ್ಯೂ ಬ್ರಿಟಿಶರು ಸ್ವಾರ್ಥ ಪರಾಯಣರಾಗಿ ಜಪಾನಿಯರೊಡನೆ ಗೆಳೆತನ ಬೆಳಸುತ್ತಿದ್ದಾರೆ ಮಂಚೂರಿಯಾ ದೊಳಗಿನ ವ್ಯಾಪಾರದ ಪಾಲುಗಾರಿಕೆಗಾಗಿ ಬ್ರಿಟಿಶರು ಜಪಾನಿಯರ ಮರ್ಜಿ ಕಾಯುತ್ತಿದ್ದಾರೆ ಇದು ಕ್ಷೇಮಕರವಲ್ಲವಾಗಿ ಮೇಲ್ಕಾಣಿಸಿದ 'ನ್ಯೂ ಸ್ಟೇಟ್ಸಮನ್ ಎಂಡ್ ನೇಶನ್' ಪತ್ರಿಕರ್ತರ ಮುಂಜಾಗ್ರತೆ

ಅಮೇರಿಕೆಯ ಮತ್ತು ಜಪಾನಿಯರ ವಿರೋಧಗಳೆಂದು ಈ ಮುಂಚೆಯೇ ನಾನು ಹೇಳುತ್ತೇನೆ ಸೈಟೋರವರ ಉದ್ಗಾರಗಳ ಮೇಲಿಂದಲೂ ಈ ಸಂಗತಿ ಸ್ಪಷ್ಟವಾಗುತ್ತದೆ ಬ್ರಿಟಿಶರಿಗೂ ಅಮೇರಿಕೆಯವರಿಗೂ ಮನಸ್ಸು ನಟ್ಟಿಗಿಲ್ಲ ಬ್ರಿಟಿಶರ ನೌಕಾಪ್ರಭುತ್ವ ನೋಡಿ ಅಮೇರಿಕೆಯವರಿಗೆ ಅಸೂಯೆ ಮಹಾಯುದ್ಧ ಕಾಲದಲ್ಲಿ ಬ್ರಿಟಿಶರು ಅಮೇರಿಕೆಯ ಹಡಗುಗಳನ್ನು ಝಡತಿ ಮಾಡಿ ಜರ್ಮನಿಯ ಕಡೆ ಬಿಡುತ್ತಿದ್ದರ ಇದು ಅಪಮಾನಾಸ್ಪದವೆಂದು ಅಮೇರಿಕೆಯ ಸರಕಾರವು ಆ ಕಾಲದಲ್ಲಿ ಮಾಡಿಕೊಂಡಿತ್ತು ಅಪಮಾನವನ್ನು ಅಳ್ಳಿ ತೊಳಕೊಳ್ಳುವದಕ್ಕಾಗಿಯೂ, ಅಮೇರಿಕೆಯವರು ಬ್ರಿಟಿಶರ ಸಮುದ್ರ ಪ್ರಾಬಲ್ಯವನ್ನು ಮುರಿಯುವದಕ್ಕಾಗಿ ಕೋಟ್ಯಾವಧಿ ರೂಪಾಯಿಗಳನ್ನು ಖರ್ಚು ಮಾಡಿ ಹಡಗುಪಡಗಳನ್ನು ಕಟ್ಟಲಾರಂಭಿಸಿದ್ದಾರೆ ವಿಮಾನುಗಳಲ್ಲಿ ಅಮೇರಿಕೆಯವರೂ ವಿಶೇಷ ಮುಂದಾಗಿದ್ದಾರೆ, ತಾಸಿಗೆ ೩೦೦ ಮೈಲು ಹಾರಿಹೋಗುವ ವಿಮಾನುಗಳನ್ನು ಅವರು ರಚಿಸಿದ್ದಾರಾಗಿ ಅಮೇರಿಕೆಯ ವೈಮಾನಿಕ ಪ್ರಮುಖರಾದ ಕ್ಯಾಪ್ಟನ್ ಈಡಿ ರಿಕೆನ್ ಬೇಕರರವರು ಮುಂಬಯಿ 'ಫ್ರೀ ಪ್ರೆಸ್' ಪತ್ರಿಕೆಯ ಪ್ರತಿನಿಧಿಗಳ ಬಳಿ ಉದ್ಗರಿಸಿದರು ಶಾಂತಿ ಕಾಲದಲ್ಲಿ ಪಯಣ ಮಾಡುವ ವಿಮಾನುಗಳು ಯುದ್ಧ ಪ್ರಸಂಗಕ್ಕೆ ತಕ್ಕದ್ದಾಗಿ ಸ್ಥಿತ್ಯಂತರವಾಗುವಂತೆ ಏರ್ಪಾಟಾಗಿದೆಂದು ಕೆಪ್ಟನ್ ಈಡಿಯವರ ಅಭಿಪ್ರಾಯ ಮೇಲಾಗಿ ಯುದ್ಧವಾಗಿದ್ದಲ್ಲಿ ಔದ್ಯೋಗಿಕ ಕಾರಖಾನೆಗಳ ಪ್ರಯೋಜನವಾಗುವಂತೆ ಏರ್ಪಾಟು ಮಾಡಲಿಕ್ಕಾಗಿ ಮೂರು ಕಾಸುವ ಗೇಲಾಗಲಿಕ್ಕಿವೆ ವಿಮಾನುಗಳಿಂದ ಅಲ್ಪ ಕಾಲದಲ್ಲಿ ಭಯಂಕರವಾದ ನಷ್ಟಪಡಿಸಬರುತ್ತದಂತೆ ಮುಂದಿನ ಯುದ್ಧವು ಬಹುತರವಾಗಿ ಆಕಾಶ ಮಾರ್ಗಗಳಲ್ಲಿಯೇ ನಡೆಯುವದು ಕಲಕತ್ತೆಯ ಅಮೃತಬಝಾರ ಪತ್ರಿಕೆಯಲ್ಲಿ ಅಮೇರಿಕೆಯ ಆಲ್ಬನ್ ಆರ್ಮಾಗನೊಕರವರು ಒಂದು ಲೇಖ ಬರೆದು ವಿಮಾನುಗಳ ವರ್ಣನೆ ಮಾಡಿದ್ದಾರೆ ನಿಮಿಷಕ್ಕೆ ೪೦೦ ಗುಂಡು ಹೊಡೆಯುವ ವಿಮಾನುಗಳು ಫ್ರಾನ್ಸದಲ್ಲಿ ಸಿದ್ಧವಿವೆ ಅಮೇರಿಕೆಯವರು ಇಂಥ ವಿಮಾನುಗಳನ್ನು ಗುಪ್ತವಾಗಿ ತಯಾರಿಸುತ್ತಿರಬಹುದೆಂದು ಮಿ| ಆಲ್ಬನ್‌ರವರು ಸೂಚಿಸುತ್ತಾರೆ ಕರಾಚಿಯಲ್ಲಿ ವಿಮಾನಿಗೂ ಬಲೂಚಿ ಸೈನ್ಯಪಥಕ್ಕೂ ಮಂಗಳವಾರ ಯುದ್ಧದ ತಾಲೀಮು ನಡೆಯಿತು ಸೈನಿಕರ ಮೇಲೆ ಸಾಗಿಹೋದ ವಿಮಾನು ಎದ್ದು ಹಾರಲಾರದೆ, ಮುರಿದು ಚೂರುಚೂರಾಯಿತು ೧೫ ಮಂದಿ ಸೈನಿಕರು ತಾಲೀಮಿನಲ್ಲಿ ತೀರಿ ಗೊಂದಲ! ಪ್ರತ್ಯಕ್ಷ ಯುದ್ಧವಾಗುವ ಮುಂಚೆ ತಾಲೀಮಿನಲ್ಲಿ ಎಷ್ಟು ಜನರ ಅಪಘಾತವಾಗಲಿಕ್ಕಿದೆಯೋ ಏನೋ! ಯಾರಿಗೂ ಯುದ್ಧ ಬೇಡ ಆದಾಗ್ಯೂ ಎಲ್ಲರೂ ಯುದ್ಧದ ಕಡೆಗೋಡುತ್ತಿದ್ದಾರೆ ಯಾರು ಯಾವ ಪಕ್ಷಕ್ಕೆಂಬ ಸಂಗತಿ ಕಾಲಚಕ್ರವೇ ನಿರ್ಣಯಿಸಬೇಕು ಆಯಾ ಕಾಲದಲ್ಲಿ ಪ್ರಾದುರ್ಭೂತವಾದ ಆಕಸ್ಮಿಕ ಕಾರಣಗಳ ಮೇಲೆ ಅದು ಅವಲಂಬಿಸಿದೆ ಇದಕ್ಕಾಗಿಯೇ ಮಿ| ಹಡಲ್ಸ್ಟನ್‌ರವರು ಯುದ್ಧದ ಪರಿಣಾತಿ ಇನ್ನೂ ಆಗಲಿಕ್ಕಿದೆ ಎಂದು ಹೇಳಿದುದು!

ಒಂದು ಸಣ್ಣ ಸಂಗತಿಯನ್ನು ಉಲ್ಲೇಖಿಸಿ ಇಂದಿನ ನಿರೀಕ್ಷಣವನ್ನು ಮುಗಿಸಿಬಿಡುತ್ತೇನೆ ಶಾಂತಿಕಾಲದ ಔದ್ಯೋಗಿಕ ಯಂತ್ರಗಳು ಯುದ್ಧ ಕಾಲದಲ್ಲಿ ಹೇಗೆ ಪ್ರಯೋಜನಕ್ಕೆ ಬೀಳುತ್ತವೆಂದು ಸದ್ಯಕ್ಕೆ ಆಯರ್ಲಂಡದಲ್ಲಿ ನಡೆದ ಒಂದು ವ್ಯಾಜ್ಯದಲ್ಲಿ ತೋರಬಿದ್ದಿದೆ ಆಯರ್ಲಂಡದೊಳಗಿನ ಲೋಕಸತ್ತಾವಾದಿ ಸ್ವಾತಂತ್ರ್ಯವಾದಿಗಳು (Irish Republican Army) ದೊಂಬಿಯನ್ನೆಬ್ಬಿಸಿ, ಬ್ರಿಟಿಶರಿಗೆ ಕೊಲೆ ಮಾಡಿ ಸ್ವಾತಂತ್ರ್ಯದ ಹೋರಾಟ ನಡಿಸುವಾಗ, ವಿಲಿಯಮ್ ಎಂಬ ಮಿಠಾಯಿಗಾರನು ಬಾಂಬುಗಳನ್ನು ಪೂರೈಸುತ್ತಿದ್ದನಂತೆ! ಅವನ ಕಡೆ ಒಂದು ಯಂತ್ರವಿತ್ತು ಹಗಲಿಗೆ ಆ ಯಂತ್ರದ ಮೇಲೆ ಮಾಂಸ ಪದಾರ್ಥ (Sausage) ವಾಗುತ್ತಿತ್ತು ರಾತ್ರಿ ಅವನ ಯಂತ್ರ ರಚನೆಯಲ್ಲಿ ಸ್ವಲ್ಪ ಹೆಚ್ಚು-ಕಡಿಮೆ ಮಾಡಿ ಅವನು ಅದರ ಮೇಲೆ ಬಾಂಬು ತಯಾರಿಸಿ ದೊಂಬಿಗಾರರಿಗೆ ಪೂರೈಸುತ್ತಿದ್ದನು ಬಾಂಬುಗಳ ಕ್ರಯ ಪವನು ೩೫೦ ಕ್ಕಾಗಿಯೇ ಈ ವ್ಯಾಜ್ಯ. ದೊಂಬಿನಡೆದಾಗ ವಿಲಿಯಮ್‌ರವರವೇ ಮೇಲೆ ಪೋಲೀಸರಿಗೆ ಸಂಶಯ ಬಂದು ೩-೩ ಬಾರಿ ತಪಾಸು ಮಾಡಿದಾಗ್ಯೂ ಪೋಲೀಸರಿಗೆ ಬಾಂಬಿನ ಪತ್ತೆ ಹತ್ತಲಿಲ್ಲ

ಇಂಥಸ್ಥಿತಿಯಲ್ಲಿ ನನಗೆ ಏನೂ ನಂಬಿಗೆ ಹುಟ್ಟದು

ಮಂಗಳೂರ ಶ್ರೀ ಅಂಬಾ ಪ್ರಸಾದಿಕ
ಕರ್ನಾಟಕ ಸಂಗೀತ ನಾಟಕ ಸಂಘದವರು
ಕುಮಟಾ ಬಿಡ್ಡಿಬೈಲಿನಲ್ಲಿ ಇಲೆಕ್ಟ್ರಿಕ್ ದೀಪಗಳಿಂದ ಅಲಂಕೃತವಾದ ಅಂಬಾ ಥಿಯೇಟರಿನಲ್ಲಿ
ತಾ. 15-1-35ನೇ ಮಂಗಳವಾರ

ರಾಯರ ಸೊಸೆ,

ತಾ. 17--1--35ನೇ ಗುರುವಾರ

ಮಿಸ್ ಮಾಧುರಿ,

ತಾ. 20--1--35ನೇ ಭಾನುವಾರ

ಭಕ್ತ ತುಳಸೀದಾಸ

ಎಂಬ ಲೋಕಪ್ರಿಯ ನಾಟಕಗಳನ್ನಾಡಿ ಜನಮನರಂಜನಗೊಳಿಸುವರು !! ದೇಶಾಭಿಮಾನಿಗಳು ಬಂದು ಪ್ರೋತ್ಸಾಹಿಸಬೇಕು !

ವ್ಯವಸ್ಥಾಪಕರು - ಬಿ ಶ್ಯಾಮರಾವ್.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಸಾಮಾನ್ಯ ಜ್ವರ ಮೈಲಿ ಮೊದಲಾದವ್ರುಗಳ ಉಪದ್ರವ ಎಂದಿನಂತೆ ಚಾಲು

ಪ್ರಾಂತ ಸಾಹೇಬರಾದ ಮಿ| ಅಲೆಕ್ಝಾಂಡರರವರ ಮುಕ್ಕಾಮು ಈ ತಾಲೂಕಿನ ಮುಗಿಯಿತು ಮಿ ಅಲೆಕ್ಝಾಂಡರರವರು ತಮ್ಮ ಮುಕ್ಕಾಮಿನಲ್ಲಿ ನೆರೆಹೊರೆಯ ಗ್ರಾಮಗಳಿಗೆ ಹೋಗಿ [illegible] ಮಾಡಿದರು ಪ್ರಾಂತ ಸಾಹೇಬರಿಗೆ ಕನ್ನಡ ಭಾಷೆಯು ಒಳ್ಳೇ ಜ್ಞಾನವಿದೆ ಕನ್ನಡ ಮಾತನ್ನಾಡುವ ಪ್ರೀತಿಯೂ ಉಂಟು ಗ್ರಾಮಾಧಿಕಾರಿಗಳ ಕಡೆಗೂ ನೆರೆದ ರೈತರ ಕಡೆಗೂ ಅವರು ಕನ್ನಡದಿಂದ ಮಾತಾಡುತ್ತಾರೆ ಜನರೊಳಗೆ ಒಂದು ಪ್ರಕಾರದ ಮಮತೆಯುಂಟಾಗಿದೆ

ಸಿದ್ದಾಪುರದ ಕ್ರಾಂತಿಕಾರಿ ಶ್ರೀ| ನಾಗೇಶ ಗಣೇಶ ಹೆಗಡೆ [illegible] [illegible] ಬೆಳಗಿನ [illegible] [illegible] ಜನ [illegible] ನಡೆದ [illegible] ಜಿಲ್ಲಾ [illegible] ಮಿ| ಅಲೆಕ್ಝಾಂಡರರವರು [illegible] ಶ್ರೀ| ನಾಗೇಶ ಹೆಗಡೆಯವರು [illegible] ಅಧಿಕಾರಿಗಳಿಂದ [illegible] ಮಾಡಿದ್ದಾರೆ ಮ್ಯಾಜಿಸ್ಟ್ರೇಟರ [illegible] ಹೆಗಡೆಯವರಿಗೆ [illegible]

ಬೆಂಗಳೂರಿನ ಎಸ್ಸೆಸ್ಸೆಲ್ಸಿ ಶ್ರೀ| ಎಸ್. ವೆಂಕಟರಮಣಯ್ಯನವರು ಕಳೆದ [illegible] ಕಾರವಾರ ಜೈಲಿನಿಂದ ಬಿಡುಗಡೆಯಾದರು [illegible] [illegible] ಜೀವನ ಮಾಡಿದ [illegible] ಅವರು [illegible] ಗೋಕರ್ಣ ಕ್ಷೇತ್ರಕ್ಕೆ ಹೋದರು ಅಲ್ಲಿ ಕ್ಷೇತ್ರದಿ [illegible] ಸೋಮವಾರ ದಿನ [illegible] ಮಾರ್ಗವಾಗಿ ಮುಂದೆ ಬೆಂಗಳೂರಿಗೆ ತೆರಳಿದರು ಶ್ರೀ| ವೆಂಕಟರಮಣಯ್ಯನವರ ಜೊತೆಗೆ ಪೋಲೀಸ ಪೇದೆ ಇದ್ದನು [illegible] ಈ ಜಿಲ್ಲೆಯಲ್ಲಿ ಕೆಲವು ಕಾಲ ಉಳಿದು [illegible] ಹೋಗಬೇಕೆಂದು ಒಳ್ಳೇ [illegible] ಇತ್ತು [illegible] [illegible] ಅವರ [illegible] ಜೈಲಿನಲ್ಲಿರುವಾಗಲೇ ಅವರು ಸರಕಾರದ ಕಡೆ ಕಾಯುತ್ತಿದ್ದರು ಕೆಲ ದಿನ ಈ ಜಿಲ್ಲೆಯಲ್ಲಿ ಉಳಿದು [illegible] ರಕ್ಷೆ [illegible] ಮ್ಯಾಜಿಸ್ಟ್ರೇಟರು ಕಾರ್ಯಕ್ರಮವು [illegible] ಕಳಿಸಿಕೊಂಡಿದ್ದರು [illegible] [illegible] ಮೊದಲಾದ ಕಡೆ ಒಂದೊಂದು ವಾರ ಉಳಿಯುವ ಕಾರ್ಯಕ್ರಮವು ಸಹ ಅವರು ಕಳಿಸಿದ್ದರು ಆದರೆ ಬಿಡುಗಡೆಯಾಗುವ ತನಕ ಡಿ| ಮ್ಯಾಜಿಸ್ಟ್ರೇಟರಿಂದ ಅವರಿಗೆ ಉತ್ತರವೇ ಬರಲಿಲ್ಲ ಶ್ರೀ| ವೆಂಕಟರಮಣಯ್ಯನವರು ಒಳ್ಳೇ ಸತ್ಯಾಗ್ರಹಿ ಮನಸಿಗಳು ಜೈಲಿನಲ್ಲಿ ಅವರು ಒಂದು ಸಾಧಾರಣ ಮಾಡಿದ್ದಾರೆ [illegible] ಬ್ರಿಟಿಶ ದೇಶ [illegible] [illegible] ಕೊಡಬೇಕಾಗಿ ಒಂದು ನಿಯಮ [illegible] [illegible] ಸರಕಾರದ ತನಕ ಒಬ್ಬ [illegible] ಕಡೆಯಿಂದ ಅರ್ಜಿ ಮಾಡಿ [illegible] ಮೇಲಿನ ಪ್ರತಿ [illegible] [illegible] ಸತ್ಯಾಗ್ರಹಿ ಜನರ ಮೇಲೆ ಇವರಿಗೆ [illegible] ಬಹಳ ಪ್ರೀತಿಯು [illegible] ಮ್ಯಾಜಿಸ್ಟ್ರೇಟರು ಅನೇ ಸಂಗತಿ ಕೊಟ್ಟಿದ್ದಾರೆ [illegible] ಅರಿತಿಯು ಆದಾರ ಕೇಳುತ್ತಿದ್ದರು, ಅವರಂತೆಯೇ ಉಳಕೊಳ್ಳುತ್ತಿದ್ದರು ಮುಂಬಯಿ 'ಟೈಮ್ಸ' ಪತ್ರಿಕೆ ಯನ್ನೊಂದು ಮಾತ್ರ ಅವರು ಕೇಳುತ್ತಿದ್ದರು ಕಳೆದ ಆಗಸ್ಟ ತಿಂಗಳಲ್ಲಿ ಅವರ ಪ್ರಕೃತಿ ಕೆಟ್ಟಿತು ಆಗ ಸತ್ಯಾಗ್ರಹ ಅಕ್ಕಾಗ್ರಹದ ಮೇರೆಗೆ ಅನೇ ತರಗತಿಯ ಆಹಾರ ತೆಗೆದು ಕೊಳ್ಳಲೊಪ್ಪಿದರು ಜೈಲಿನಲ್ಲಿ ಒಳ್ಳೇ ವ್ಯವಸ್ಥೆಯನ್ನಿಟ್ಟು ಈ ದೇಶಭಕ್ತರ [illegible] ಅಧಿಕಾರಿಗಳಿಗೆ ನಮಸ್ಕರಿಸಿ ಅವರು ಹೊರಟರು ಬಿಡುಗಡೆಯಾದ ಬಳಿಕ ಸರಕಾರದಿಂದ ಅವರಿಗೆ ಪ್ರವಾಸದ ಖರ್ಚ ದೊರೆಯಲಿಲ್ಲ ಯಾಕೆಂದರೆ ಪ್ರಯಾಣ ಖರ್ಚಿಗ ತಕ್ಕಷ್ಟು ರಕಮು ಅವರ ಕಡೆ ಇದ್ದದರಿಂದ ಜೈಲಿನವರು [illegible] ಕೊಡಲಿಲ್ಲವಾಗಿ ತಿಳಿಯುತ್ತದೆ ಶ್ರೀ| ವೆಂಕಟರಮಣಯ್ಯನವರು ಈ ಜಿಲ್ಲೆಯೊಳಗಿನ ಚಳವಳಿಯ ಬಗ್ಗೆ ಕಷ್ಟ ಸಹಿಸಿದವರು ಅಂಥವರಿಗೆ ಈ ಜಿಲ್ಲೆಯಲ್ಲಿ ಉಳಿಯಲು ಜಿಲ್ಲಾಧಿಕಾರಿಗಳು ಅವಕಾಶ ಕೊಡಬಹುದಿತ್ತು

ಕೆಲ ತಿಂಗಳುಗಳಿಂದ ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ [illegible] ಸೇರಿರುತ್ತಿದ್ದ [illegible] ದೇವಸ್ಥಾನದ ಮಾನೇಜರಿಗೆ ವಿರೋಧವಾಗಿದ್ದೆಂದು ಆಪಾದಿತರಾದ ಆದನ್ನು ತಗ್ಗಿಸಿಕೊಳ್ಳುವದಕ್ಕಾಗಿ ಸಾಲ್ವರಿಗೆ [illegible]

ಇಲ್ಲಿಯ ಶ್ರೀ ವಾಸುದೇವ ದೇವಸ್ಥಾನದಲ್ಲಿ ಕಳವಾದ ದೇವರ [illegible] ಬೆಳ್ಳಿಯ ಮಾಣಿ [illegible] ರೂಪಾಯಿ ಬೆಲೆಯ ಬೆಳ್ಳಿಯ ಕವಚ ಕಳವಾಗಿದೆ

ಒಂದು ಆಶ್ಚರ್ಯ ಹೇಳುವದೇನೆಂದರೆ — ಇಲ್ಲಿಯ ಶ್ರೀ [illegible] ಈ ಮಾಹಿತಿ ದೇವಸ್ಥಾನದ ಅರ್ಚಕರಾಗಿದ್ದ [illegible] [illegible] [illegible] ಅವರು [illegible] [illegible] [illegible] ದೇವಸ್ಥಾನದ [illegible] ಮುಖ್ಯ [illegible] [illegible] ಅವರ ಧನದಿಂದ ಶ್ರೀ [illegible] ದೇವಸ್ಥಾನವಕ್ಕೆ ಬಹಳ ನಷ್ಟವಾಗಿದೆ [illegible] ಮೂಲಕ ದೊಡ್ಡ [illegible] ಸ್ಥಳಗ [illegible] ಪ್ರಾರಂಭವಾಗಲಿ!

ಗೋಕರ್ಣದವರು ಹೇಳುವದೇನೆಂದರೆ — ಈ ಊರಿನಲ್ಲಿ ಮುಖ್ಯವಾಗಿ ಮಹಾಬಲೇಶ್ವರ ಮೈಲಿ, ಬಹಳ ಗೊಂದಲ ಉಂಟಾಗಿ [illegible] [illegible] [illegible] [illegible] [illegible] ಊರಿನಲ್ಲಿ [illegible] [illegible] [illegible] [illegible] ದೇವಸ್ಥಾನದಲ್ಲಿ [illegible] [illegible] [illegible] [illegible] ಮೈಲಿ [illegible] [illegible] [illegible] ಆದರೆ, ವೈದಿಕರ [illegible] ಕಾಯಲು [illegible] [illegible] [illegible] ಊರವರು [illegible] [illegible] ದೇವತೆಗಳ [illegible] ವರ್ಗದ [illegible] [illegible] ವರ್ಗದವರಿಂದ ಈ ರೋಗ ನಡೆಸಿದ [illegible] [illegible] ವೈದಿಕರಿಗೆ [illegible] [illegible] ಯಾಗದಿಂದ ಶ್ರೀ [illegible] [illegible] ಸಂತಾಪದಾಗಿ ಮೈಲಿ ಆದಷ್ಟು [illegible] ಜನರಿಗೆ ಕ್ಷೇಮ ಮಾಡಲೆಂದು ಪ್ರಾರ್ಥನೆ

ಮಂಗಳೂರಿನ ಶ್ರೀ [illegible] ಪ್ರಾಸಾದಿಕ ಮಂಡಳಿಯವರು ಸಾಗಿನಿಂದ 'ಮಯೂರ ಸಾಹಿ' ನಾಟಕವನ್ನಾಡುತ್ತಾರೆ!

ಹೊಸ ಮಾಮಲೇದಾರರಾದ ಮಿ| ಅಲ್ಲಾಬಕ್ಷನವರು ಈ ಹೊತ್ತು ಅಧಿಕಾರ ಸ್ವೀಕರಿಸುವರು

ಶಿರಸಿ— ಶ್ರೀ| ವೆಂಕಟರಮಣಯ್ಯನವರು ಸೋಮವಾರ ಇಲ್ಲಿ ಒಂದು ದಿವಸ ಹೆಚ್ಚಿಗೆ ವಸ್ತವ್ಯವಾಗಿ ಹೊರಟರು ಮೋಟರ ಸ್ಟ್ಯಾಂಡಿನ ಮೇಲೆ ಪೋಲೀಸರಿಗೂ ಶ್ರೀ| ವೆಂಕಟರಮಣಯ್ಯನವರಿಗೂ ಸ್ವಲ್ಪ ತಿಕ್ಕಾಟವಾಯಿತು ವೆಂಕಟರಮಣಯ್ಯನವರ ಕಡೆ ಪೋಲೀಸರು ಹೆಸರು ಕೇಳುತ್ತಿರುವಾಗ ಹೇಳಿದರು ಕೊನೆ ತನಕ [illegible] ಹೆಸರು ಕೇಳಿ [illegible] ಕೊಡಲಿಲ್ಲ [illegible] ಜೊತೆಗಿದ್ದ ಪೋಲೀಸನ ಕಡೆ ಹೆಸರು ಕೇಳಿಕೊಳ್ಳಬೇಕಾಗಿ [illegible] ಸೂಚಿಸಿದರು

ಮುಂಬಯಿ ಇಲಾಖೆಯ ಸ್ಥಾನಿಕ ಸ್ವರಾಜ್ಯ ಖಾತೆಯ ಮಂತ್ರಿಗಳಾದ ಸರ್ ಕೇಶವ ಸಾಮ್ರಾಜ ಘುಟೋಕರರು ಇದೇ ತಿಂಗಳ ೩೦ ಕ್ಕೆ ಇಲ್ಲಿಗೆ ಬರತಕ್ಕವರಿದ್ದು ಆ ಕಾಲಕ್ಕೆ ಅವರಿಗೆ ಮ್ಯುನಿಸಿಪಾಲಿಟಿಯವರು ಮಾನಪತ್ರವನ್ನು ಅರ್ಪಿಸುವವರಿದ್ದು ಆ ಕಾಲಕ್ಕೆ [illegible] ೧೦೦ ರೂ ಮಂ[illegible] ಜೂರ ಮಾಡಿರುವರು ಅದೇ ದಿವಸ ಅವರ ಹಸ್ತದಿಂದ ಇಲ್ಲಿಯ "ಶ್ರೀ ಮಾರಿಕಾಂಬಾ ಮೆಟರ್ನಿಟಿ ಹೋಮ" ದ ಉದ್ಘಾಟನ ಸಮಾರಂಭವೂ ಜರಗುವದು ಸದರ ಮೆಟರ್ನಿಟಿ ಹೋಮಿಗೆ ಅಜಮಾಸ ರೂ ೧೫೦೦೦ ತಗಲಿದ್ದು ಅದರ ಪೈಕಿ ೫೦೦೦ ಶ್ರೀ ಮಾರಿಕಾಂಬಾ ದೇವಸ್ಥಾನದಿಂದ ೩೦ ರೂ ೧೦೦೦೦ ಲೋಕಲ ಬೋರ್ಡಿನಿಂದಲೂ, ದೊರೆತಿದ್ದು ಉಳಿದದ್ದನ್ನು [illegible] ಮಾಡುವರು ಸಹಿಸುವರು

ಇಲ್ಲಿಯ ಜಿಲ್ಲಾ ಹರಿಜನ ಬೋರ್ಡಿನ ಮೂಲಕ ಭಟಕಳದಲ್ಲಿ ಹರಿಜನ ಶಾಲೆಯೂ ಅಂಕೋಲಾ ತಾಲೂಕ ಹೈಸ್ಕೂಲಿನಲ್ಲಿ ಹರಿಜನ ಬೋರ್ಡಿಂಗ ಮತ್ತು ಶಿರಸಿಯಲ್ಲಿ ಹರಿಜನ ರಾತ್ರಿ ಶಾಲೆಯ ವ್ಯವಸ್ಥೆಯಾಗಿದ್ದು, ಜಿಲ್ಲೆಯೊಳಗಿನ ಎಷ್ಟೋ ಹರಿಜನ ವಿದ್ಯಾರ್ಥಿಗಳಿಗೆ ಸಹಾಯವಾಗಿದೆ

ಪೋಲೀಸರು ಊರ ಗಸ್ತು ಪ್ರತಿ ದಿನ ಪಡೆಗಳನ್ನು ದೊಡ್ಡಗೊಳಿಸುತ್ತಿದ್ದಾರೆ ಜನರು ಭಯಂಕರ ಗೋಳಿನೀಡು ಗಿದ್ದಾರೆ ಇನ್ನು ದಿನಗಳನ್ನು ಕಳೆಯುವ ದಿನಗಳು ಉಳಿಯಲಿಲ್ಲವೆಂದು ಜನರು ಉದ್ವೇಗದಿಂದ ಹೇಳುತ್ತಾರೆ

ಯಲ್ಲಾಪುರ— ಈ ತಾಲೂಕಿನ ಸತ್ಯಾಗ್ರಹಿ ಕೈದಿಗಳಾದ ಶ್ರೀ| ಗಣಪತಿ ಗಿಂಡಕಾರ ಇವರು ವಿಸಾಪುರ ಜೈಲಿನಿಂದ ತಾ ೧೫ನೇ ಬಿಡುಗಡೆ ಹೊಂದಿರುತ್ತಾರೆ ಇವರಿಗೆ ೨ ವರ್ಷಗಳ ಶಿಕ್ಷೆಯಾಗಿತ್ತು ವಿಸಾಪುರ ಜೈಲಿನಲ್ಲಿ ಕರ್ನಾಟಕದ ಇನ್ನು ೩ ಮಂದಿ ಕೈದಿಗಳುಳಿದಿರುವರಾಗಿ ತಿಳಿಯುತ್ತದೆ ೨ ವರ್ಷದ ಒಳಗಿನ ಶಿಕ್ಷೆಯಾದವರ ಹೆಸರುಗಳನ್ನು ಸರಕಾರವು ಕೇಳಿಕೊಳ್ಳುತ್ತದಂತೆ ಈ ಅವಧಿಯೊಳಗಿನ ಕೈದಿಗಳು ಬಿಡುಗಡೆಯಾಗಲಿರುವರಂತೆ!

ಇಲ್ಲಿಯ ಶಾಲೆಯ ಶಿಕ್ಷಕರಾದ ರಾ| ವೈದ್ಯರವರ ವಿಷಯ ಸ್ಕೂಲು ಬೋರ್ಡಿನ ಚೇರಮನ್ನರಾದ ರಾ| ಅಡಕೋಳಿಯವರು ಬರೆದ ಉತ್ತರ ನೋಡಿ ನನಗೆ ಒಳ್ಳೇ ವಿನೋದವಾಯಿತು ರಾ| ವೈದ್ಯರು ಆಪೀಲ ಮಾಡ ಬೇಕಿತ್ತೆಂದು ರಾ| ಅಡಕೋಳಿಯವರು ಬರೆಯುತ್ತಾರೆ ರಾ| ವೈದ್ಯ ಮಾಸ್ತರರು ನಾಲ್ಕಾರು ತಿಂಗಳುಗಳ ತನಕ ಎಲ್ಲ ಖಟಪಟಿ ಮಾಡಿ ಸೋತರು ಈಗ ನಾನು ಮಾಡಿದ್ದು ಜನರ ಕಡೆ ಆಪೀಲು ಅದು ರಾ| ವೈದ್ಯರ ಬಗ್ಗೆ ಅಲ್ಲ ರಾ| ಶಕ್ತಿ ಇಡುವದಕ್ಕಾಗಿ ಮಾಡಿದ [illegible] ಬಗ್ಗೆ, ಅಧಿಕಾರ ನಡೆಸುವ ಬಗ್ಗೆ ಸರಕಾರದ ಕಮಿಶನರ ಮಾಡಿದ ಆದೇಶಗಳಿಗೆ ಸ್ಕೂಲು ಬೋರ್ಡಿನ ಕೆಲಸ ಕೊಡಬಹುದೇ ನೆಂಬ ಪ್ರಶ್ನೆ ಚೇರಮನ್ನರು ಹೇಳುವ ಪ್ರಶ್ನೆ [illegible] ಮನೋಭಾವ ರದ್ದು ಮಾಡಬಹುದೇನೆಂಬ ಪ್ರಶ್ನೆ ಹೆರಿಯದ ಶಿಕ್ಷಕರನ್ನು ಬಿಟ್ಟು ಇನ್ನುಳಿದ ರಾ| ರಾಮಭಟ್ಟರಿಗೆ ಕೆಲಸ ಕೊಡುವ ಕಾರಣವೇನೆಂಬುದು ಪ್ರಶ್ನೆ ಈ ಪ್ರಶ್ನೆಗಳು ರಾ| ವೈದ್ಯರ ಅಪೀಲಿನ ಸಂಬಂಧದಲ್ಲಿದ್ದವುಗಳಲ್ಲ ಸ್ಕೂಲು ಬೋರ್ಡಿನ ಆಡಳಿತದ ಸಂಬಂಧದಲ್ಲಿದ್ದವು ಇವುಗಳಿಗೆ ಉತ್ತರವನ್ನು ರಾ| ಅಡಕೋಳಿಯವರು ಉತ್ತರ ಕೊಡಬಹುದು ಇತ್ಯಾದಿ" ಈ ಹಿಂದೆ ಬರೆದ ಒಬ್ಬರು ಬರೆಯುತ್ತಾರೆ

ಕಾರವಾರ— ಇಲ್ಲಿಯ ರಾ| ಬಿ ಎಸ್ ನಾಗವೇಕರ ಶಿಕ್ಷಣ ಪ್ರಯೋಗಗಳ ಗುಣಮಾನ [illegible] ದ ನಾಗವೇಕರವರು ಒಪ್ಪಿಸಿದ [illegible] ಮೇಲೆ ಭಾರವಾದ ಕಲ್ಲು ಇಟ್ಟುಕೊಳ್ಳುವದು, ಸ್ನಾಯುಗಳನ್ನು ಉಬ್ಬಿಸಿ ಸ್ಪರ್ಧೆಯಿಂದ ಚಲಿಸುವದು ಮೊದಲಾದ ಪ್ರಯೋಗಗಳನ್ನು ಮಾಡಿ ತೋರಿಸಿದರು ಶಾಂತಿಗೆ ಹಾಗೂ ಶಕ್ತಿಗೆ [illegible] ಇದ [illegible] ಇವರಿಗೆ ಇನ್ನೂ ಬಿರುದಾಗಲಿಲ್ಲ ಈ ಪ್ರಯೋಗ ನೋಡಲು ಡಿ| ಜಡ್ಜರಾದ ರಾ| ಗೋ ಎಂದಿನಂತೆ ಸಾಳವಿ ಮೊದಲಾದ ಅಧಿಕಾರಿ ವರ್ಗದವರು ಹಾಜರಿದ್ದು ಶರ ಅಧ್ಯಕ್ಷರಾದ ಪಾಂಗೇಕರಾದ ತೀಲಂಗ ಮೊದಲಾದ ಊರ ಪ್ರಮುಖರೂ ಹಾಜರಿದ್ದರು ರಾ| ಕಾರದ ಸಿದ್ದಿ ರಾ| ನಾಗವೇಕರ ವರಿಗೆ ಅರ್ಪಿಸಲ್ಪಟ್ಟಿತು ರಾ| ಬಿ ಎಸ್ ನಾಗವೇಕರವರು ಬೇಲೂರ ಸಹ್ಯಾದ್ರಿ ಶಾಲೆಯಲ್ಲಿ ೩ ವರ್ಷದಲ್ಲಿ ೫ ನಾಗವೇಕರರು ಅಭ್ಯಾಸ ಕೊಟ್ಟರುವರು [illegible] ಒಳ್ಳೇ ಕೀರ್ತಿ ಪಡೆದದ್ದು

ಬಸ್ಸಿರು ತಿಳಿಸುವದೇನಂದರೆ — ಹಾರಿ ಮುಕ್ತಿಯು ಲಿಲಾಂವಿನ ಜಾಹೀರ ನಾಮೆಗಳು ಹೊರಟಿವೆ. ಇರಿಗಳು ಇದೇ ಜನವರಿ ತಿಂಗಳಲ್ಲಿ ಲಿಲಾಂವಾಗುವವು. ಲಿಲಾಂವಿನಲ್ಲಿ ಒಟ್ಟು ಉಳವರೆ ಮತ್ತು ಸಧ್ಯೋವಿಗೆ ಈ ವಾಹನ ಸೇರಿಸುವದಿಲ್ಲ. ಒಟ್ಟಿಗೆ ಹಾರಿಯು ಹಲ ಹೇರಳ ಬಾಕಿ ಇದ್ದರೆ ಉಳವರೆ ಹಾರಿಯ ಹಣವೂ ಬಾಕಿಯುಳ್ಳದ ಪ್ರತಿ ಒಂದು ಹಾರಿಯ ಸಂಬಂಧ ಸಾವಿರಕ್ಕೆ ಮಿಕ್ಕಿ ಹಣ ಬಾಕಿಯುಳ್ಳದೆ. ಇವುಗಳ ಹಾರಿಯವರು ಜಿಲ್ಲಾ ಬೋರ್ಡಿನ ಮೆಂಬರರಂತೆ ಉಳವರೆ ಹಾರಿಯವರು ಸರಕಾರದಿಂದ ಕಿತಾಬು ಪಡೆದವರಂತೆ ಅವರಿಂದ ಹಣ ವಸೂಲ ಪಡೆಯುದೆಕಾರಿ ನಡಿಸಗೊಡುವದು ಸೂವರ್ನಮೆಂಟ ಹಿತವಲ್ಲ. ಬಾಕಿ ಹಣವನ್ನು ವಸೂಲ ಪಡೆಯದೆ ಅವರಿಗೆ ಮುಂದಿನ ವರುಷ ಹಾರಿ ನಡಿಸಗೊಡುವದು ಸಂಕ್ಷಿತವಲ್ಲ. ಸಧ್ಯೋವಗಳ ಹಾರಿಗೆ ಲೆಂಚ ಇಟ್ಟು ಹಾರಿ ನಡಿಸಲಿಕ್ಕೆ ಬೇರೆಯವರು ತಯಾರಿರುತ್ತಾರೆ. ಅದನ್ನು ವಾಲಿಗೆ ಅಡವಿಡುವದು ಯೋಗ್ಯವಲ್ಲ. ಎಗ್ಜಿಕ್ಯೂಟಿವ್ ಇಂಜಿನೀಯರರ ವಿಚಾರ ಮಾತಿರ್ಯಾವರು ಇದನ್ನೆಲ್ಲ ವಿಚಾರ ಮಾಡಿ ಈ ಹಾರಿಗಳನ್ನು ಜಾಹೀರನಾಮೆ ಸೇರಿಸಿ ಒಂದೇ ಸರತಿ ಲಿಲಾಂವ ಮಾಡಿಸುವದು ಪ್ರಶಸ್ತ. ಪ್ರತಿ ವರ್ಷ ಹಾರಿಗಳು ಫೆಬ್ರುವರಿ ತಿಂಗಳಲ್ಲಿ ಲಿಲಾಂವಾಗುತ್ತಿದ್ದವು. ಈ ವರ್ಷವೂ ಅದೇ ತಿಂಗಳಲ್ಲಿ ಲಿಲಾಂವು ಕರೆಯಬಹುದು ಒಂದು ವಿನಂತಿಯಿದೆ. ಈಗ ೞ್ರಯಿಂದ ವೋಟಾರಿನಿಂದ ಬಂದ ಜನರು ಮಾಣಿಕ ಹಾರಿ ಬಿಟ್ಟು ನಿರ್ಜನ ಮಾರ್ಗವಾಗಿ ಮುಂದೆ ಗೋಕರ್ಣ ಕಾರವಾರ ಕಡೆ ಹೋಗಬೇಕಾಗುತ್ತದೆ. ಇದು ಸರಿಯಲ್ಲ. ಅನಾವಶ್ಯಕವಾದ ಖರ್ಚು ಮತ್ತು ತೊಂದರೆ ಇವುಗಳಿಂದ ನಿರ್ಜನ ಮಾರ್ಗವಾಗಿ ಮಾಣಿಕ—ಹೆಗಡೆ ಎರಡೂ ಹಾರಿ ತಪ್ಪಿಸಿಕೊಂಡು ಅತ್ತ ಕಡೆ ಪಯಣ ಮಾಡಲು ಅನುಕೂಲವಿದೆ. ಈ ಮಾರ್ಗ ಮೋಟಾರ ಓಡ್ಯಾಟಕ್ಕೆ ಯೋಗ್ಯವಿದೆ. ಈಗಿನ ಎಗ್ಜಿಕ್ಯೂಟಿವ್ ಇಂಜಿನೀಯರರ ಕಾರಕೀರ್ದಿಯಲ್ಲಿ ಮಾರ್ಗಗಳ ಸ್ಥಿತಿ ಬಹಳೇ ಸುಧಾರಿಸಿದೆ. ಗೋಕರ್ಣ—ಕಾರವಾರಗಳ ಮಾರ್ಗಕ್ಕಿಂತ ಈ ಮಾರ್ಗ ಒಳ್ಳೇದಿದೆ. ಮೇಲಾಗಿ ಈ ಮಾರ್ಗದಿಂದ ಕಿವರಾತ್ರಿಯ ಗಡಬಡಿಯ ದಿನಗಳಲ್ಲಿ ಮೋಟಾರು ನಡಿಸಲು ಕೊಡುತ್ತಾರೆ. ಇದೇ ವರ್ಷ ಈ ಅನುಕೂಲತೆ ಕೊಡಬಹುದು. ಹಾರೀ ಲಿಲಾಂವಿನ ಜಾಹೀರನಾಮೆ ಹೊರಡಿಸುವ ಮುಂಚೆಯೇ ಈ ಮಾರ್ಗದಿಂದ ಮೋಟಾರ ನಡೆಯಲು ಅಪ್ಪಣೆ ಕೊಡುವದಾಗಿ ಪ್ರಕಟಗೊಂಡರೆ ಮುಂದೆ ಹಾರಿಯವರಿಗೆ ದೋರಲು ಅಸ್ಪದವಿರದು ಇತ್ಯಾದಿ.

ಕಾರವಾರ ಮ್ಯುನಿಸಿಪಾಲಿಟಿಯ ಕೆಲವು ಕಾರಭಾರದ ಕುರಿತು ಕಳೆದ ಸಂಚಿಕೆಯಲ್ಲಿ “ನಾಗರಿಕ” ನು ಮಾಡಿದ ಟೀಕೆಗೆ ಪ್ರತ್ಯುತ್ತರವಾಗಿ ಮೊನಡಿಂಗ ಕಮಿಟಿಯ ಚೇರಮನ್ನರಾದ ರಾ| ಸಿಲ್ವಾ ಮತ್ತು ಸನಿಟರಿ ಕಮಿಟಿಯ ಚೇರಮನ್ನರಾದ ರಾ| ವಾಮನಶಾನ್ಬಾಗ ಅವರು ತಾರೀಖು ೧೧—೧—೩೫ ನೇಗೆ ಪತ್ರ ಬರೆದು ತಿಳಿಸುವದೇನಂದರೆ — “ನಾಗರಿಕನು ಕಾರವಾರದ ನಿಜವಾದ “ನಾಗರಿಕ” ನೋ? ಒಡಪಿದ ಕ್ಷೇಮಾರಿಯೆಂದು ಕಾಣಿಸಿಕೊಳ್ಳಲು ಹವಣಿಸುವ ಕುಯುಕ್ತಿಗಾರನೋ ತಿಳಿಯದು! ಅವನ ಟೀಕೆಯು ಅವಿಚಾರಗ್ರ ವಿಚಾರಸರಣಿಯಿಂದ ತುಂಬಿ ತುಳುಕುತ್ತಿದೆ. ಕಾರವಾರ ಮ್ಯುನಿಸಿಪಲ್ ಮಾರ್ಕೇಟದಲ್ಲಿ ೧೩ ಸ್ಟೋಲುಗಳನ್ನು ಕಟ್ಟುವ ಯೋಜನೆಯು ತಯಾರಾಗಿದ್ದು ಈ ವರ್ಷ ೮ ಸ್ಟೋಲುಗಳನ್ನು ಕಟ್ಟಲಿಕ್ಕೆ ಮ್ಯುನಿಸಿಪಾಲಿಟಿಯವರು ರೂ ೩೦೦೦ ಮಂಜೂರ ಮಾಡಿರುತ್ತಾರೆ. ೫ ಸ್ಟೋಲುಗಳ ನೆಲಗಟ್ಟು ಸಹ ತಯಾರಾಗಿದೆ. ಇದೆಲ್ಲ “ನಾಗರಿಕನು” ಅರಿಯನೋ? ಅಥವಾ ಅರಿತು ಬುದ್ಧ್ಯಾ “ವಕೀಲ ಮೆಂಬರರ” ಮೇಲೆ ತನ್ನ ವಿಷವನ್ನು ಕಾರುತ್ತಿರುವನೋ?

“ಮಾರ್ಕೇಟದೊಳಗಿನ ಜಾಗೆಯನ್ನು ಆಕ್ರಮಿಸುವ ವೊದಲು ಫೀ ಕೆಟ್ಟು ಪರವಾನಿಗಿ ಪಡೆಯಬೇಕಾಗಿ ಮ್ಯುನಿಸಿಪಲ್ ನಿಯಮವಿದೆ. ಹಿಂದೆ ಕೆಲವರು ತಮ್ಮ ಸರಕು ಮಾರಾಟ ಮಾಡ ಮೇಲೆ ಫೀ ಹಣ ತೆರುತ್ತಿದ್ದರು. ಕೆಲವರು ಕೊಡದೇ ಹೋಗುತ್ತಿದ್ದರು. ಇದನ್ನು ಕಂಡು ಮ್ಯು| ಮಂಡಲ ಕೆಲವು ವರ್ಷಗಳ ಹಿಂದೆ ಇದ್ದಂತೆ ನಾಲ್ಕು ದಿಕ್ಕಿಗೆ ೪ ಬಾಗಿಲುಗಳನ್ನ ಇಟ್ಟು, ಬಾಗಿಲುಗಳಿಂದ ಒಳಗೆ ಹೋಗಬೇಕಾದರೆ ವ್ಯಾಪಾರಿಗಳು ಫೀ ಹಣ ಕೆಟ್ಟು ಹೋಗಬೇಕೆಂದು ನಿಯಮ ಮಾಡಬೇಕಾಯಿತು. ಈ ಹೊಸ ಪದ್ಧತಿಯು ಸರಿಯಾಗಿ ಅಮಲಿನಲ್ಲಿ ಬರುತ್ತದೋ ಇಲ್ಲವೋ ಎಂದು ನೋಡುವ ಬಗ್ಗೆ ಮೊದಮೊದಲು ೨-೩ ವಾರ “ವಕೀಲ ಮೆಂಬರ”ರು ಸ್ವತಃ ಬಾಗಿಲಲ್ಲಿ ನಿಲ್ಲಬೇಕಾಯಿತು. ಮಾರ್ಕೇಟ ಕಂಪೌಂಡಿಗೆ ಇಟ್ಟ ಬಾಗಿಲುಗಳು ೮ ಫೂಟ ೬ ಇಂಚ ಅಗಲವಾದವೂ ಇರುತ್ತವೆ. ಇದರಿಂದ ಯಾರಿಗೂ ತ್ರಾಸು ಆದದ್ದು ಕಂಡುಬರಲಿಲ್ಲ. ಪೂರ್ವದ ಬಾಗಿಲದೊಳಗಿಂದ ಗಾಡಿಗಳು ಸಹ ಮಾರ್ಕೇಟದಲ್ಲಿ ಬರುವಂತೆ ಏರ್ಪಾಟು ಮಾಡಿದೆ.

“ಅಂಗಡಿಗಳಲ್ಲಿ ಚೀಲಗಳ ಧೂಳಿ ಹಾಕುವಾಗ ನಡುವೆ ಬಂದರೆ ಆದ ಅಂತರ ಆಡಬೇಕಾಗಿ ಹುಳುಗಳು ಕೊಟ್ಟದ್ದು ಸುಳ್ಳು. ಹಿಂದೆ ಊರಲ್ಲಿ ಪ್ಲೇಗಿನ ಪಿಡುಗು ಇದ್ದಾಗ ಮತ್ತು ಇಲಿಗಳು ಸಾಯುತ್ತಿದ್ದಾಗ ಹೊಸ ಕಮಿಟಿಯವರು ಪಟ್ಟಣದೊಳಗಿನ ಭಂಡಸಾಲೆಗಳನ್ನು ತಪಾಸ ಮಾಡಲಿಕ್ಕೆ ಹೋಗಿದ್ದರು. ಕೆಲವು ಭಂಡಸಾಲೆಗಳಲ್ಲಿ ಗಾಡಿತುಂಬ ಕಸದ ರಾಶಿಗಳು ಕೊಳೆತ ಬಟಾಟೆ-ಉಳ್ಳಿಗಡ್ಡೆಗಳ ರಾಶಿಗಳು ಕಮಿಟಿಯವರ ಕಣ್ಣಿಗೆ ಬಿದ್ದವು. ಇದರಿಂದ ಭಂಡಸಾಲೆಗಳೊಳಗಿನ ಕೊಳೆತ ಸಾಮಾನುಗಳನ್ನು, ಕಸ ಕಡ್ಡಿಗಳನ್ನು, ರದ್ದಿ ಚಿಲ್ಲಾಲನ್ನು ತೆಗೆದುಹಾಕಿ ಸ್ವಚ್ಛತೆ ಇಡಬೇಕಾಗಿ ಆಯಾ ವರ್ತಕರಿಗೆ ನೋಟೀಸು ಕೊಡಲಾಯಿತು. ಭಂಡಸಾಲೆಗಳಲ್ಲಿ ಸುಣ್ಣವನ್ನು ಹಚ್ಚುವ ಮುನಿದಾವಾಗ ಎಲ್ಲಾ ದರೂ ಇಲಿಗಳು ಸತ್ತು ಬಿದ್ದರೆ ಅವು ಕಾಣದೆ ಇರುವಂತೆ ಚೀಲಗಳ ಸಾಲುಗಳ ನಡುವೆ ಬುಲ್ಲಾ ಜಾಗು ಬಿಡುವದು ಪ್ರಶಸ್ತವೆಂದು ಕಮಿಟಿಯವರು ತಮ್ಮ ನೋಟೀಸಿನಲ್ಲಿ ಒಂದು ವಿಶ್ವಳ ಸೂಚನೆಯನ್ನು ಮಾಡಿದ್ದರಷ್ಟೆ! ಈ ರೀತಿ ಸ್ವಚ್ಛತೆಯನ್ನು ಕಾದು ತಿಂಕೊಂಡಲ್ಲಿ ಧಾನ್ಯ ದವಸುಗಳು ಸ್ವಚ್ಛವಾಗುಳಿದು ಜೀವಕ್ಕೆ ಅಪಾಯವಾಗುವ ಸಂಭವ ದೂರವಾಗುತ್ತದೆಂಬುದನ್ನು ವರ್ತಕರು ಸಹ ನಗಂಡು ಅತ್ಯಂತ ಸಂತೋಷದಿಂದ ಅವರು ಕಮಿಟಿಯವರ ಕೂಡ ಸಹಕಾರ ಮಾಡಿ ಪ್ಲೇಗಿನ ಬಾಧೆಯನ್ನು ನಿವಾರಿಸಲಿಕ್ಕೆ ಸಹಾಯ ಮಾಡಿರುತ್ತಾರೆ. ಕಾರವಾರದ ವರ್ತಕರು ಸಕ್ಷಿತರಿದ್ದು ತಮಗೆ ಅನ್ಯಾಯ ಯಾ ಕಷ್ಟವಾಗುತ್ತಿದ್ದರೆ ಸುಮ್ಮಗೆ ಕೂತ್ರುತ್ತಿದ್ದಿಲ್ಲ. ಯಾವ ವರ್ತಕನೂ ಈ ತನಕ ಮ್ಯುನಿ ಕಡೆಗೆ ತಕ್ರಾರು ಮಾಡಿದ್ದು ಇರುವದಿಲ್ಲ.

“ಕಾರವಾರದ ಜಲಾವ ಕಟ್ಟೆಗೆ ಮಸ್ತಾನ ದರ್ಗಾದ ಜಾಗೆಯು ಮ್ಯುನಿಯದು. ಅಲ್ಲಿ ಅತ್ತಲಾಗಿ ಹಗ್ಗಗಳನ್ನು ಬಿಡಾರು ಎರಡಿಕೊಂಡಿರುವದರಿಂದ ಮಾರ್ಕೇಟಿಗೆ ಬರುವ ಬೇಗರ ಬಹಳ ತೊಂದರೆಯಾಗುತ್ತದೆ. ದಕ್ಷಿಣದಿಂದಲೂ ಮಾರ್ಕೇಟು ವೆಳೆಸಲಿಕ್ಕೆ ಸ್ಥಳ ಬೇಕಾದ್ದರಿಂದಲೂ ಮ್ಯು| ಮಂಡಲ ಜಲಾವ ಕಟ್ಟೆಗೆಯ ಸಂಗ್ರಹವನ್ನು ಕೋರಿತು. ಗ ರಸ್ತೆಯ ಬದಿಗಿರುವ ಮ್ಯು ಯ ಗದ್ದೆಯಲ್ಲಿ ಮಾಡಿಸುವ ಯೋಜನೆಯನ್ನು ಕೈಕೊಂಡಿದ್ದಾರೆ. ಆ ಗದ್ದೆಯು ತಗ್ಗಿದ್ದರಿಂದ ಮ್ಯು| ಮಂಡಲ ಈ ತಿಂಗಳ ಕೊನೆಯೊಳಗೆ ಅದನ್ನು ತುಂಬಿಕೊಡುವ ಏರ್ಪಾಟು ಮಾಡಿದ್ದಾರೆ. ಗದ್ದೆಯಲ್ಲಿ ಬುಡಕ್ಕೆ ಒಂದು ಥರ ಕಚರಾ, ಆ ಮೇಲೆ ಒಂದು ಥರ ಉಸುಕು ಮತ್ತು ಆ ಮೇಲೆ ಮಣ್ಣು ಹೀಗೆ ಹಾಕಬೇಕಾಗಿ ವ್ಯವಸ್ಥೆಯಾಗಿದೆ. ಗದ್ದೆಯಲ್ಲಿ ಕಚರಾ ಹಾಕಿದ ದಿವಸವೇ ಸಂಜೆಗೆ ಅದರ ಮೇಲೆ ಉಸುಕು ಒಂದು ಬೀಳುತ್ತದಾದ್ದರಿಂದ ಕಚರಾದ ತ್ರಾಸು ಯಾರಿಗೂ ಆಗುವಂತಿಲ್ಲ, ಆಗುವದಿಲ್ಲ. ಈಗಿನ ದಿನಮಾನದಲ್ಲಿ ಕಚರಾ ಕೊಳೆಯಲಿಕ್ಕಂತೂ ಕಾರಣವೇ ಇರುವದಿಲ್ಲ. ಯಾರೋ ಒಬ್ಬ ಬೇಜವಾಬದಾರ ಮನುಷ್ಯನು ೧ ತಿಂಗಳ ಹಿಂದೆ ಸತ್ತ ಎಮ್ಮೆ ಕರವನ್ನು ಕೊಡನಲ್ಲಾವಲ್ಲಿ ಹುಗಿದದ್ದರಿಂದ ದುರ್ಗಂಧ ಹೊರಬರಂಭಿಸಿತು. ಮ್ಯುನಿಯವರು ಕೂಡಲೆ ಅದನ್ನು ದೂರಪಡಿಸಿದರು. ಆ ದುರ್ಗಂಧಿಯು “ನಾಗರಿಕ” ನನ್ನು ಅಷ್ಟು ಬಿಡದಿದ್ದರೆ ನಮ್ಮ ಉಪಾಯ ವಿಲ್ಲ! “ವಕೀಲ ಮೆಂಬರ”ರು ಹೊಸ ಸುಧಾರಣೆಗಳನ್ನು ಜನರ ಹಿತದ ಬಗ್ಗೆ ಮಾಡಿರುತ್ತಾರೆ. ತಮ್ಮ ಸ್ವಾರ್ಥಕ್ಕಾಗಿ ಮಾಡಿಲ್ಲ. ಕೆಲವು ಸ್ವಾರ್ಥಿಗಳು ಈ ಬಗ್ಗೆ ಅವರನ್ನು ಹಳಿಯುವದು ಸಹಜವಿದೆ. ವಕೀಲ ಮೆಂಬರರು ಮಾಡಿದ ಕೆಲಸವು ಸರಿಯಲ್ಲದಿದ್ದರೆ “ನಾಗರಿಕ”ನು ಬರದೆಯೊಳಗಿಂದ ಹೊರಗೆ ಬಂದು ಆ ಕೆಲಸ ಕೈಕೊಳ್ಳಬಹುದಲ್ಲವೇ?”

ಇಲ್ಲಿಯ ಬಾಜಾರದಲ್ಲಿ ಕಳವು ಆಗಲಿಕ್ಕೆ ಪ್ರಾರಂಭವಾಗಿದೆ. ಒಬ್ಬನಿಗೆ ತಕ್ಕಡಿ-ತೂಕದ ಕಲ್ಲು ಬೇಕಾಗಿದ್ದವು. ಆತನು ವರದು ಕಡೆ ಕಳವುಮಾಡಿ ಈ ಸಾಮಾನುಗಳನ್ನು ಒಟ್ಟುಗೂಡಿಸಿದ್ದನು. ಕಳವಾದ ಒಂದು ಅಂಗಡಿ ಪೋಲೀಸ ಸ್ಟೇಶನ ಬಯಲಿದ್ದ ಕೊಂಕಣಿ ಪಟ್ಟಣ ಸ್ಪೋರು ಪೋಲೀಸರು ತಪಾಸ ಮಾಡಿ ಪತ್ತೆ ಹಚ್ಚಿದ್ದರಷ್ಟೆ.

ಗೋಕರ್ಣಂತರದಲ್ಲಿ ವಗನ ಮದುವೆ ಮಾಡಿ ಕಾರದು ಕಾನೂನಿನ ಭಂಗ ಮಾಡಿದ ಒಟ್ಟೆಯ ಪ್ರಕರಣ ೫ ೬ ತಿಂಗಳಗಳ ತನಕ ನಡೆದು ಕಳೆದ ವಾರ ಅಂಡೆ—ಕ್ಟಿಯಗಳಿಗೆ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಅಂತೂ ರೂಪಾಯಿ ೧೦೦ ದಂಡ ವಿಧಿಸಿದ್ದಾರೆ. ವಧುವರಿಗೆ ಮದುವೆಯ ಕಾಲದಲ್ಲಿ ೩ ತಿಂಗಳು ಕಡಿಮೆ ಪ್ರಾಯವಿತ್ತು.

ಸುಳಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಸ್ಯದ ಪುಡಿ. ಸುಳಭ ಕ್ರಯ!

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿಕಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ತಲೆಗೆಕ್ಕೆ ಬೇಳ್ಪಟ್ಟಿರ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನ ಮಿಶ್ರಯಿಸಿದರೆ ಬಹಳ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಫುಕ್ಕಟೆ ಕಳಿಸಲಾರೆವು. ಬುದ್ದಿ ಒಂದಕ್ಕೆ ಕ್ರಯ ರೂ. ೦-೪ ೦. ಪ್ಲಿ ಪ ಚಾರ್ಜ ಡಜನ್ ೧ ಕ್ಕೆ ರೂ ೩-೮-೦. ವಿ ಪಿ ೦ ಆರ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟಡ್ ಪೋ. ಬಾ. ೫೧೦, ಮಾರ್ಕೆಟ್ ನ ಮದರಾಸ.

ಅಲ್ಲಲ್ಲಿ ಇಷ್ಟಿಷ್ಟು!

(೨ನೇ ಪಾನಿನಿಂದ ಮುಂದರಿಸಿದ್ದು)

ನ ಜೀನಸುಗಳ ಮೇಲೆ ಹೇರಬೇಕು, ಅವನ್ನು ಜನರು ತೆರಲಾರರು ಹೀಗೆ ಕೆಲವ್ಹರ್ಟರವರ ಪ್ರತಿಪಾದನೆ. ಹೊಸ ರಾಜ್ಯಘಟನೆಗ ೪೮|| ಲಕ್ಷ ಪವನಿನ ಹೆಚ್ಚಿನ ಖರ್ಚು ತಗಲುತ್ತದೆಂದು ಲೆಕ್ಕ, ಕತ್ತರಿಯೆಂದು ಈಗ ೧ ಕೋಟಿ ೨೦ ಲಕ್ಷ ಪವನು ಖರ್ಚು ತಗ್ಗಿಸಲಾಗಿದೆ ಇದು ನಿಶ್ಚಿತ ಸಂಬಳದಲ್ಲಿ ಮಾಡಿದ ಕತ್ತರಿ ಈ ಖರ್ಚನ್ನು ಪೂರೈಸಿ ಹೊಸ ರಾಜ್ಯಘಟನೆಯ ಖರ್ಚನ್ನು ತೆರಬೇಕೆಂದರೆ ವರ್ಷಾಸನ ೧ ಕೋಟಿ ೬೮||ಲಕ್ಷ ಉತ್ಪನ್ನ ಬೆಳಸಬೇಕು ಇಷ್ಟು ಹಣ ಸಾಲದೆಂದು ಸುಧಾರಣೆಯು ಖರ್ಚುಬಲ್ಲಾದ ಸರ್ ಮಾಲ್ಕಮ್ ಹೇಲೀಯವರ ಅಭಿಪ್ರಾಯ ಇಷ್ಟು ಉತ್ಪನ್ನ ಹಿಂದುಸ್ಥಾನದಲ್ಲಿ ಹುಟ್ಟುವಹಾಗಿಲ್ಲ ಅದನ್ನು ಹ್ಯಾಗ ಎತ್ತುವಳಿ ಮಾಡಬೇಕೆಂಬದರ ಕುರಿತು ಪಾರ್ಲಿಮೆಂಟರಿ ಕಮಿಟಿಯವರು ಸೂಚನೆ ಸಹ ಮಾಡಲಿಲ್ಲ. ಸರ್ ಕಾರ್ಡರವರೂ, ಕೆಲವ್ಹರ್ಟರವರೂ ಹಿಂದುಸ್ಥಾನದಲ್ಲಿ ರಾಜ್ಯಾಡಳಿತೆ ನಡಿಸಿ ಪೆನ್ಶನು ಪಡೆದವ ಅನುಭವವೃದ್ಧ ಮಹಾನುಭಾವರು. ಮಿ ಕೆಲ್ವ್ಹರ್ಟರವರು ಪಂಜಾಬ ಪ್ರಾಂತದಲ್ಲಿ ಅರ್ಥಸಚಿವರಾಗಿದ್ದರು ಇವರಿಗೆ ಸಿ ಎಸ್ ಆಯ್ ಎಂಬ ಕಿತಾಬು ಬಾದಶಹರಿಂದ ಅರ್ಪಿಸಲ್ಪಟ್ಟಿದೆ ಯಾವ ದೃಷ್ಟಿಯಿಂದ ವಿಚಾರ ಮಾಡಿದಾಗ್ಯೂ ಹೊಸ ರಾಜ್ಯಘಟನೆ ಬಡ ಹಿಂದುಸ್ಥಾನಕ್ಕೆ ಹೇಳಿದ್ದಲ್ಲ.

***

ಲಂಡನಿನೊಳಗಿನ 'ಸಂಡೇ ರಿಪರಿ' ಮತ್ತು 'ರೇನಾಲ್ಡ್ಸ ಇಲ್ಲಸ್ಟ್ರೇಟೆಡ್ ವೀಕ್ಲಿ' ಪತ್ರಿಕೆಯಲ್ಲಿ ಪ್ರಕಟವಾದ ಆಶ್ಚರ್ಯಜನಕ ವರ್ತಮಾನ ಕೇಳತಕ್ಕಂಥಾದ್ದಿದೆ ದಕ್ಷಿಣ ಆಫ್ರಿಕೆಯ ಮುಂದಾಳುಗಳಾದ ಸೇನಾಪತಿ ಸ್ಮಟ್ಸರವರು ಹಿಂದೀ ರಾಜ್ಯಘಟನೆಯ ಕಾನೂನಿನ ಕುರಿತು ಸಾಮ್ರಾಜ್ಯ ಸರಕಾರದ ಪ್ರಧಾನ ಮಂಡಳದೊಡನೆ ಆಲೋಚನೆ ಮಾಡಿ ಒಡಂಬಡಿಕೆಯಾಗುವಂಥಾದ್ದೊಂದು ಪತ್ರವನ್ನು ಮಹಾತ್ಮರ ಗೆಳೆಯರಾದ ದೀನಬಂಧು ಎಂಡ್ರ್ಯೂಸರವರ ಕಡೆ ಕೊಟ್ಟು ಕಳುಹಿದ್ದಾರೆ ಮಹಾತ್ಮರು ರಾಷ್ಟ್ರೀಯ ಸಭೆಯಲ್ಲಿ ಸೇರಿ ರಾಷ್ಟ್ರೀಯ ಸಭೆಯ ಬೆಂಬಲವನ್ನು ಹೊಸ ರಾಜ್ಯಘಟನೆಗೆ ಕೊಡಮಾಡಿದ್ದಲ್ಲಿ ಬ್ರಿಟಿಶ ಪ್ರಧಾನ ಮಂಡಳದವರೂ, ರಾಷ್ಟ್ರೀಯ ಸಭೆಯವರೂ ಗೃಹಸ್ಥವಳಿಕೆಯ ಮಾತು ನಡೆಯುತ್ತದೆ. ಮಹಾತ್ಮರ ಒಪ್ಪಿಗೆಯಿದ್ದರೆ ಸಾಮ್ರಾಜ್ಯ ಸರಕಾರದೊಡನೆ ಚರ್ಚೆ ಮಾಡುವದಕ್ಕಾಗಿ ಸೇನಾಪತಿ ಸ್ಮಟ್ಸರವರು ಮಧ್ಯಸ್ಥರಾಗಬಹುದು. ಈ ಪತ್ರವನ್ನು ಕಳುಹುವ ಮುಂಚೆ ಹಿಂದಪಕ್ಷಪಾತಿ ಸಂಘಗಳ ಗುಪ್ತ ಸಭೆಯಾಗಿ ಚರ್ಚೆಯಾಗಿತ್ತು ಮಹಾತ್ಮರು ಅನುಕೂಲ ಅಭಿಪ್ರಾಯಪಟ್ಟಲ್ಲಿ ಮಹಾತ್ಮರಿಗೆ ಬ್ರಿಟಿಶ ಸರಕಾರದ ಅತಿಥಿಗಳಾಗಿ ಲಂಡನಿಗೆ ನಿಮಂತ್ರಿಸಿಕೊಳ್ಳುವರ ಬ್ರಿಟಿಶ ಪ್ರಧಾನ ಮಂಡಳದ ಪೂರ್ವ ಸಮ್ಮತಿ ಪಡೆದು ದೀನಬಂಧು ಎಂಡ್ರ್ಯೂಸರವರಿಗೆ ಹಿಂದುಸ್ಥಾನಕ್ಕೆ ಕಳಿಸಿತ್ತು. ಈ ಯಾವತ್ತೂ ಸುದ್ದಿ ನಿರಾಧಾರವಾದದ್ದೆಂದು ದೀನಬಂಧು ಎಂಡ್ರ್ಯೂಸರವರು ನಿರಾಕರಿಸಿದ್ದಾರೆ ಆದಾಗ್ಯೂ ಇಂಥ ಜವಾಬದಾರೀ ಪತ್ರಿಕೆಗಳು ಏಕೆ ಹೀಗೆ ಈ ಸುದ್ದಿ ಪ್ರಕಟಿಸಿವೆಯೆಂದು ತಿಳಿಯುವದಿಲ್ಲ ಸೇನಾಪತಿ ಸ್ಮಟ್ಸರವರಿಗೂ ಮಹಾತ್ಮರಿಗೂ ಪತ್ರವ್ಯವಹಾರ ನಡೆಯುತ್ತದೆಂಬ ಸಂಗತಿ ನಿಜವೆಂದು, ಪ್ರಕಟವಾದ್ದರಿಂದ ಆಶ್ಚರ್ಯಜನಕ ವಾರ್ತೆ ಸಾಧಾರವೆಂದು ಎಣಿಸಬಹುದೇ!

***

ಲಂಡನಿನ 'ಡೇಲಿ ಹೆರಲ್ಡ' ಪತ್ರಿಕೆಯಲ್ಲಿ ಮಿ|| ಡಬ್ಲ್ಯು ಎನ್ ಈವ್ಹರರವರು ಪಾರ್ಲಿಮೆಂಟರಿ ವರದಿಯೊಳಗಿನ ಹಾಸ್ಯಾಸ್ಪದ ಪ್ರಕಾರಗಳನ್ನು ಸಮರ್ಪಿಸಿದ್ದಾರೆ "ನಾನು ಹಿಂದೀಯನಿದ್ದರೆ ವರದಿಯ ಘೋರಣವನ್ನು ನೋಡಿ ಸಂತಪ್ತನಾಗುತ್ತಿದ್ದೆ ಬ್ರಿಟಿಶರು ಹಿಂದೀಯರಿಗಿಂತ ಶ್ರೇಷ್ಠರು, ಹಿಂದೀಯರ ಆಶ್ರಯದಾತರು" ಎಂಬ ದರ್ಪೋಕ್ತಿಗಳು ಅಲ್ಲಲ್ಲಿ ಕಾಣಬಹುದು ನಿರ್ಬಂಧಗಳನ್ನಿಡಲು ಕಾರಣವೇ ಇದ 'ಹಿಂದೀಯರಿಗ ಈ ಅಧಿಕಾರ ಕೊಡಲು ನಂಬಿಗೆಯಿಲ್ಲ. ಅದನ್ನು ಇಂಗ್ಲೀಷರೇ ನಡಿಸಬೇಕು' ಹೀಗೆ ಈ ನಿರ್ಬಂಧಗಳ ಅರ್ಥ 'ಬ್ರಿಟಿಶ ಪರಂಪರೆಯನ್ನು ಈಗಿನಂತೆಯೇ ಮುಂದರಿಸುವದಕ್ಕಾಗಿ ಬ್ರಿಟಿಶ ದೇಶದ ಬೆರಿಸ್ಟರರಿಗೆ ಹೈಕೋರ್ಟುಗಳಲ್ಲಿ ನ್ಯಾಯಮೂರ್ತಿಗಳಾಗಿ ನೇಮಿಸಬೇಕು' 'ಕಾಯಿದೆ ಕೌನ್ಸಿಲುಗಳಲ್ಲಿ ಇಂಗ್ಲೀಷ ಭಾಷೆಯಿಂದಲೇ ವ್ಯವಹಾರ ನಡಿಸಬೇಕು" ಹೀಗೆ ಉಲ್ಲೇಖಗಳಿವೆ ಈ ಉಲ್ಲೇಖಗಳಿಂದ ಸಂತಪ್ತರಾಗದ ಸ್ವಾಭಿಮಾನಿ ಯಾರು?" ಈ ಪ್ರಕಾರ ಮಿ|| ಈವ್ಹರರವರು ಬರೆದು ಪಾರ್ಲಿಮೆಂಟರಿ ವರದಿಯು ನಿರರ್ಥಕವಾದದ್ದೆಂದೂ, ಸ್ವಾಭಿಮಾನದ ಲೇಶವಿದ್ದವರು ಅಂಗೀಕರಿಸಲಾರರೆಂದೂ ಸ್ಪಷ್ಟವಾಗಿ ಹೇಳಿದ್ದಾರೆ

***

ತ್ರಿಚಿನಾಪಳ್ಳಿಯ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಹೊರಡಿಸಿದ ಪ್ರಕಟಣೆಯಲ್ಲಿ ಬರೆಯುವದೇನೆಂದರೆ — ಹೊಸ ರಾಜ್ಯಘಟನೆಯಂತೆ ಹಿಂದುಸ್ಥಾನದ ನ್ಯಾಯವಿಧಾಯಕ ಸಭೆಗಳು ಎರಡು ಒಂದು ಮೇಲ್ಸಭೆ, ಒಂದು ಕೆಳಸಭೆ ಮೇಲ್ಸಭೆಯಲ್ಲಿ ಅಂತು ೨೬೦ ಸಭಿಕರು ಅವರಲ್ಲಿ ೧೦೪ ಜನರು ಸಂಸ್ಥಾನಿಕರಿಂದ ನೇಮಿಸಲ್ಪಟ್ಟವರು, ೬ ಜನರು ಗವ್ಹರ್ನರ-ಜನರಲ್‌ರಿಂದ ನೇಮಿಸಲ್ಪಟ್ಟವರು ಕೆಳ ಸಭೆಯಲ್ಲಿ ಅಂತು ೩೭೫ ಸಭಿಕರು ಅವರಲ್ಲಿ ೧೨೫ ಸಂಸ್ಥಾನಿಕರ ಸಭಿಕರು ಉಳಿದ ೨೫೦ ಜನರು ಪ್ರಾಂತಿಕ ಕಾಯಿದೆ ಕೌನ್ಸಿಲುಗಳಿಂದ ನೇಮಿಸಲ್ಪಡತಕ್ಕವರು ಮೇಲ್ಸಭೆ, ಕೆಳಸಭೆಗಳಲ್ಲಿ ವಿವಾದ ಉಂಟಾದರೆ ಎರಡೂ ಸಭೆಗಳ ಸಂಯುಕ್ತ ಸಭೆಯಾಗಿ ನಿರ್ಣಯವಾಗಬೇಕು ಸಂಯುಕ್ತ ಸಭೆಯಲ್ಲಿ ೨೨೯ ಜನರು ಸಂಸ್ಥಾನಿಕರ ಪ್ರತಿನಿಧಿಗಳಾದರು. ಯುರೋಪಿಯನ್ ಮೊದಲಾದ ಇತರ ಸಭಾಸದರ ಬೆಂಬಲ ನೀಡಿದರೆ ಸಂಯುಕ್ತ ಸಭೆಯಲ್ಲಿ ಲೋಕಪ್ರತಿನಿಧಿಗಳು ಒಕ್ಕಟ್ಟಾದಾಗ್ಯೂ ದಿಗ್ವಿಜಯವಾಗುವದು ದುಸ್ತರವಾದದ್ದು. ಹೊಸ ರಾಜ್ಯಘಟನೆಯೊಳಗಿನ ಮರ್ಮವನ್ನು ಶ್ರೀ ರಾಜಗೋಪಾಲಾಚಾರ್ಯರು ಚೊಕ್ಕ ಲೆಕ್ಕ ಮಾಡಿ ಪ್ರತಿಪಾದಿಸಿದ್ದಾರೆ ಸಂಸ್ಥಾನಿಕರ ಪ್ರತಿನಿಧಿಗಳು ಸಂಸ್ಥಾನಿ ಪ್ರಜೆಗಳ ಪ್ರತಿನಿಧಿಗಳಲ್ಲವಾಗಿ ಹೇಳಬೇಕಾಗಿಲ್ಲ ಮೈಸೂರ ಪ್ರಜಾಪ್ರತಿನಿಧಿ ಸಭೆಯ ಬೆಂಗಳೂರಿನ ಅಧಿವೇಶನದಲ್ಲಿ ಹೊಸ ರಾಜ್ಯಘಟನೆಯ ವಿಚಾರ ಮಾಡಲಿಕ್ಕೆ ಅಧ್ಯಕ್ಷರಾದ ದಿವಾಣರು ಅವಸರ ಕೊಡಲಿಲ್ಲ ಸಾರ್ವಭೌಮ ಹಾಗು ಮಾಂಡಲೀಕ ಸರಕಾರಗಳ ಹಿತಸಂಬಂಧಗಳ ಚರ್ಚೆಯಲ್ಲಿ ಪ್ರಜೆಗಳಿಗೆ ಸಂಬಂಧವಿಲ್ಲವಾಗಿ ದಿವಾಣರು ನಿರ್ದಾಕ್ಷಿಣ್ಯದಿಂದ ನಿರ್ಣಯ ಕೊಟ್ಟು ಪ್ರಜಾಪ್ರತಿನಿಧಿಗಳಿಗೆ ಸುಮ್ಮಗಿರಿಸಿದರು ಈ ಪ್ರವೃತ್ತಿಯು ಸಂಸ್ಥಾನಿಕರ ಮುಂದಿನ ಧೋರಣದ ಲಕ್ಷಣ ಸಂಸ್ಥಾನಿಕರು ಈಗ ಸಂಸ್ಥಾನದ ಪ್ರಜೆಗಳಿಗೆ ಮಾತ್ರ ದಣಿಸುತ್ತಾರೆ ಹೊಸ ಘಟನೆಯಲ್ಲಿ ಸಂಸ್ಥಾನೇತರ ಪ್ರಜೆಗಳ ಮೇಲೂ ಪ್ರಭುತ್ವ ನಡಿಸುವರು ಹೊಸ ರಾಜ್ಯಘಟನೆಯೊಳಗಿನ ಹೊಸ ಆಪತ್ತು ಇದು

***

ಹಿಂದುಸ್ಥಾನದಲ್ಲಿ ನೌಕರಿ ನಡಿಸಿ ಪೆನ್ಶನ್ ತಿನ್ನುವವರ ಸಂಖ್ಯೆ ೬೬೭೪, ಅವರಿಗೆ ವರ್ಷಾಸನ ೨೮,೫೮೨೭೭ ಪವನು ಪೆನ್ಶನು ಸಿಗುತ್ತದೆ. ಈ ಮಾಹಿತಿಯನ್ನು ಪಾರ್ಲಿಮೆಂಟಿನಲ್ಲಿ ಭಾರತ ಮಂತ್ರಿಗಳು ಹೇಳಿದರು ಈ ಅಂಕಗಳು ತಾರೀಖು ೩೧-೩-೧೯೩೪ರ ವರೆಗಿನವು ಆವೆ

***

ಯುಗೋಸ್ಲಾವಿಯಾದ ರಾಜಪುತ್ರರ ನಡಾವಳಿ ನಿಜವಾಗಿಯೂ ಅನುಕರಣೀಯವಿದೆ ಚಿಕ್ಕಮಕ್ಕಳಿಗೆ ಒಂದು ಮಾದರಿ ಪೀಟರ ರಾಜಪುತ್ರರ ವಯಸ್ಸು ಒಟ್ಟು ೧೧ ವರುಷ, ತಂದೆ ಅಲೆಕ್ಝಾಂಡರರ ಕ್ರೂರ ಕೊಲೆಯಾದ ಬಳಿಕ ಅವರು ಯುಗೋಸ್ಲಾವಿಯಾದ ಅರಸರಾಗಿದ್ದಾರೆ ಪೀಟರರು ಸರಿಯಾಗಿ ಬೆಳಗಿನ ೬ ಘಂಟೆಗೆ ಏಳುತ್ತಾರೆ ಉಡಿಗೆ-ತೊಡಿಗೆ ಹಾಕಿಕೊಂಡು, ಈಶಪ್ರಾರ್ಥನೆ ನಡಿಸಿ ಒಂದು ಬಟ್ಟಲು ಹಾಲು ಕುಡಿಯುತ್ತಾರೆ ಆ ಮೇಲೆ ಅವರು ಅಭ್ಯಾಸ ಮಾಡುತ್ತಾರ ಕ್ಲುಪ್ತ ಕಾಲದಲ್ಲಿ ಅವರು ಕ್ಲುಪ್ತ ಕೆಲಸವನ್ನು ಮಾಡೇ ತೀರುತ್ತಾರೆ ನಿಮಿಷ ಹೆಚ್ಚು ಕಡಿಮೆಯಾಗಗೊಡುವದಿಲ್ಲ. ಅದರಿಂದ ಅವರಿಗೆ (*Punctual Peter*) ನಿಯಮಿತ ಪೀಟರ ಎಂಬ ಮಮತೆಯಿಂದ ಎಲ್ಲರೂ ಕರೆಯುತ್ತಾರೆ ಪಿಡ ಗ್ರಹಣಶಕ್ತಿ ಅದ್ಭುತವಾದದ್ದು, ಶಿಕ್ಷಕರ ಕಡೆ ಒಳ್ಳೇ ಚರ್ಚೆ ನಡಿಸುತ್ತಾರೆ ನಿತ್ಯಪಾಠ ಮುಗಿದು ಐದು ನಿಮಿಷ ಉಳಿದಾಗ್ಯೂ ಆ ಅವಧಿಯಲ್ಲಿ ಶಿಕ್ಷಕರೊಡನೆ ಚರ್ಚೆ ಮಾಡುವದೇ ಹೊರತು ಆಟಕ್ಕೆ ಓಡಿಹೋಗುವದಿಲ್ಲ "ಮಗನೇ, ಆಸಕ್ತಿಯಿಂದ ಅಭ್ಯಾಸ ಮಾಡು" ಎಂದು ತಾಯಿ ಹೇಳಿಯವರು ಹೇಳಿದ ವಚನವನ್ನು ಭಕ್ತಿಯಿಂದ ಪೀಟರರು ಪಾಲಿಸುತ್ತಿದ್ದಾರೆ ಪ್ರಜೆಗಳಮೇಲೆ ಪೀಟರರಿಗೆ ಬಹುಪ್ರೀತಿ. ಪೀಟರರು ತಾಯಿಯಿಂದಿರೊಡನೆ ಗ್ರಾಮಾಂತರಗಳಲ್ಲಿ ಸಂಚಾರಕ್ಕೆ ಹೋಗುತ್ತಾರೆ ಅಲ್ಲಿ ರಾಜಪುತ್ರರಿಗೆ ಕಾಣಬಂದ ಒಕ್ಕಲಿಗರಿಗೆಲ್ಲ ತಮ್ಮ ಕಡೆಗಿದ್ದ ಹಣ್ಣು-ಹಂಪಲ, ರೊಟ್ಟಿ ಮೊದಲಾದವುಗಳನ್ನು ಹಂಚುತ್ತಾರೆ ಚಿಕ್ಕ ಮಕ್ಕಳಿಗೆ ಮಾತಾಡಿಸುತ್ತಾರೆ ಸ್ತ್ರೀ-ಪುರುಷರ ನಿತ್ಯ ಜೀವನಕ್ರಮವನ್ನು ಕೇಳಿಕೊಳ್ಳುತ್ತಾರೆ ಮುಂಚಿನಿಂದಲೂ ಪೀಟರರಿಗೆ ದಾನ ಮಾಡುವದೇ ಚಟ. ತಂದೆಯವರ ಕಾಲದಲ್ಲಿ ಕಂಡ ಕಂಡ ಬಡವರಿಗೆ ಇವರು ದುಡ್ಡು ಹಂಚುತ್ತಿದ್ದರು ಈ ಸಂಗತಿ ತಂದೆಯವರಿಗೆ ತಿಳಿದ ಬಳಿಕ ಅಲೆಕ್ಝಾಂಡರ ಅರಸರು ಪೀಟರರಿಗೆ ಕೇಳಿದಷ್ಟು ಹಣ ಕೊಡಬೇಕೆಂದು ಆಜ್ಞೆ ಹೊರಡಿಸಿದ್ದರಂತೆ. ಪೀಟರರು ಕುಸ್ತಿ ಆಡುತ್ತಾರೆ, ಒಳ್ಳೇ ಈಸಬಲ್ಲರು ಕುದುರೆ ಸವಾರಿ ಮಾಡಲಿಕ್ಕೂ ಕಲಿತಿದ್ದಾರೆ ಪೀಟರರ ನಡಾವಳಿಯು ನಿಜವಾಗಿಯೂ ಅನುಕರಣೀಯವಿರುವದಲ್ಲವೇ?

***

ಕಲಕತ್ತೆಯಲ್ಲಿ ಹಿಂದೀ ರಸಾಯನ ಸಂಘದ ಸಭೆ ಕಳೆದ ಶುಕ್ರವಾರ ತಾರೀಕು ೪ನೇಗೆ ಅಲಹಾಬಾದ ವಿಶ್ವವಿದ್ಯಾಲಯದ ರಸಾಯನ ಇಲಾಖೆಯ ಮುಖ್ಯಸ್ಥರಾದ ಪ್ರೊ| ಧಾರಲವರ ಅಧ್ಯಕ್ಷತೆಯಲ್ಲಿ ಸೇರಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮನುಷ್ಯನ ಆಹಾರ ಸಾಮಗ್ರಿಗಳ ಕುರಿತು ವಿಚಾರಿಸಿದರು. ಸೂರ್ಯ ಪ್ರಕಾಶವು ಅತ್ಯಂತ ಮಹತ್ವದ್ದಿದೆ. ಸೂರ್ಯಪ್ರಕಾಶದ ಮಧ್ಯಸ್ಥಿಕೆಯಿಂದ ಆಹಾರಸಾಮಗ್ರಿಗಳಿಗೂ ಹವೆಯೊಳಗಿನ ಪ್ರಾಣವಾಯುವಿಗೂ ಸಂಯೋಗವಾಗಿ ಶರೀರದ ಹಿತವಾಗುತ್ತದೆ. ಕಾಯಿ-ಪಲ್ಲೆಗಳನ್ನು ನಿತ್ಯ ಆಹಾರದಲ್ಲಿ ಕೊಳ್ಳಬೇಕು ಅದರಿಂದ ಶರೀರದ ಬೆಳವಣಿಗೆಗೆ ಅವಶ್ಯವುಳ್ಳ ಕಬ್ಬಿಣ ಅಂಶದ ಪೂರೈಕೆಯಾಗುತ್ತದೆ ಹಾಲು-ಮೊಸರುಗಳನ್ನು ಉಣ್ಣಬೇಕು ಟೊಮೆಟೊ(ಚಪ್ಪರ ಬದನೆಕಾಯಿ), ಲಿಂಬೆಹಣ್ಣು ಇವನ್ನು ಬೇಯಿಸದೇ ತಿನ್ನಬೇಕು ಅಕ್ಕಿ, ಗೋಧಿ, ಮೊಳಕೆ ಇವುಗಳನ್ನೂ, ಹಣ್ಣು-ಹಂಪಲಗಳನ್ನೂ ತಿಂದಲ್ಲಿ ಆರೋಗ್ಯಪಾಲನವಾಗುತ್ತದೆ ಹೀಗೆಲ್ಲ ಡಾ| ಧಾರರವರು ನುಡಿದರು

•.•

ಸಕ್ಕರೆ ಕಾರಖಾನೆಗಳಲ್ಲಿ ಕಾಕಂಬಿಯನ್ನು ಒಗೆಯುವ ಪದ್ಧತಿಯಿದೆ. ಇದು ಹಡ್ಡತನ ಅವನ್ನು ಹೊಲಗಳಿಗೆ ಹಾಕಿ ಹೊಡಬೇಕು ಮತ್ತು ಬಿಸಿಲಿಗೆ ಕಾಯಗೊಡಬೇಕು. ಇದರಿಂದ ಭೂಮಿಗೆ ಒಳ್ಳೇ ಗೊಬ್ಬರಕೊಪ್ಪು ಹಾಕಿದಂತಾಗುತ್ತದೆ. ಒಳ್ಳೇ ಬೆಳೆಯೂ ಬಿಗುತ್ತದೆ. ಹೀಗೆ ಸಹ ಡಾ| ಧಾರರವರು ಉದ್ಗರಿಸಿ ಒಳ್ಳೇ ಗೊಬ್ಬರವನ್ನು ಹಾಳುಮಾಡಿ ನಷ್ಟಪಡಬಾರದೆಂದು ಸೂಚಿಸಿರುತ್ತಾರೆ.

ಚಕ್ಷುರ್ವೈ ಸತ್ಯಂ!

ವಾಗ್ಜಾಲ ಬೇಡ! ಹಾಳಾದ ಹಳ್ಳಿಗೆ ಒಯ್ಯಿರಿ.

ಮುಂಬಯಿ ಇಲಾಖೆಯ ಸ್ಥಾನಿಕ ಸ್ವರಾಜ್ಯ, ಜಂಗಲ, ದವಾಖಾನೆ ಮುಂತಾದ ಖಾತೆಗಳ ಮಂತ್ರಿಗಳಾದ ಸರ್ ಶಹಾ ನವಾಜ ಭುಟ್ಟೋರವರು ಇದೇ ತಿಂಗಳಲ್ಲಿ ನಮ್ಮ ಜಿಲ್ಲೆಗೆ ಚಿತ್ತೈಸುವವರಿದ್ದಾರೆ ಒಂದಲ್ಲ ನೆಟ್ಟಗೆ ಗೇರಸೊಪ್ಪೆಯ ಧಬಧಬೆಯನ್ನು ನೋಡಹೋಗುವರು, ಅಲ್ಲಿಂದ ತಾ. ೨೦ಕ್ಕೆ ಸಿರ್ಸಿಗೆ ಬಂದು, ಅಲ್ಲಿ ಒಂದು ದಿನ ಉಳಿದು ಯಲ್ಲಾಪೂರ ಮಾರ್ಗವಾಗಿ ತಾ ೨೨ಕ್ಕೆ ಕಾರವಾರಕ್ಕೆ ತಲ್ಪುವರು. ಕಾರವಾರದಲ್ಲಿ ದಿವಾನ ಸಾಹೇಬರ ಸ್ವಾರಿಯು ೨ ದಿನ ಉಳಿಯುವರು ಅಲ್ಲಿ ಅವರಿಗೆ ಕಾರವಾರ ಮ್ಯುನಿಸಿಪಾಲಿಟಿಯವರೂ, ಜಿಲ್ಲಾ ಲೋಕಲ್ ಬೋರ್ಡಿನವರೂ ಮಾನಪತ್ರಗಳನ್ನು ಕೊಡುವವರಿದ್ದಾರೆ

ದಿವಾನ ಸಾಹೇಬರು ಸಿಂಧ ಪ್ರಾಂತದ ದೊಡ್ಡ ಜಮೀನದಾರರು. ರೈತರ ಹಿತಚಿಂತಕರಂತೆ! ನಮ್ಮ ಕೈಕೆಳಗಿನ ... ತೆಗಳ ಸಂಗತಿಗಳಲ್ಲಿ, ವಿಶೇಷತಃ ಜಂಗಲ ಕಾಂಭಾರದ ಬಗ್ಗೆ ಜನರ ದೂರುಗಳಿದ್ದರೆ ಅವುಗಳನ್ನು ತಿಳಕೊಂಡು ಹೋಗಲು ಅವರು ಇರುವರಂತೆ! ಆದ್ದರಿಂದ ಈ ಸಂಧಿಯು ಲಾಭ ತಕ್ಕೊಂಡು ರೈತರು ಅವರಿಗೆ ಬೆಟ್ಟಿಯಾಗಿ ತಮ್ಮ ದೂರುಗಳನ್ನು ಹೇಳಿಕೊಳ್ಳಬೇಕಾಗಿ ಜಿಲ್ಹಾ ಲೋಕಲ್ ಬೋರ್ಡಿನ ಅಧ್ಯಕ್ಷರಾದ ರಾ| ಗಂಗೊಳ್ಳಿಯ ವರು ಸೂಚಿಸುತ್ತಾರೆ. ಪ್ರತಿ ತಾಲೂಕಿನಿಂದ ಐದಾರು ಮುಂದಾಳುಗಳು ಕೂಡಿ ಒಂದು ದೊಡ್ಡ ನಿಯೋಗದೊಂದಿಗೆ ದಿವಾನ ಸಾಹೇಬರ ಕಡೆ ಒಯ್ದು ಜಂಗಲ ವಿಷಯದಲ್ಲಿ ರೈತರು ದೂರುಗಳನ್ನು ಹೇಳಿಕೊಂಡರೆ ಯೋಗ್ಯ ವಿಚಾರವಾದೀತಾಗಿ ಡಾ|| ಕಲೆಕ್ಟರ ಸಾಹೇಬರೂ ಸೂಚಿಸಿದ್ದಾರಂತೆ! ನಿಯೋಗಗಳ ಅಭಾವದಿಂದಲೇ ಜಂಗಲ ಕಷ್ಟಗಳಲ್ಲಿ ಜನರು ನರಳುತ್ತಿದ್ದಾರೇನು? ಆದ್ದರಿಂದ ತಮ್ಮ ತಮ್ಮ ತಾಲೂಕಿನಿಂದ ಐದೈದು ಮುಂದಾಳುಗಳಿಗೆ ನಿಯೋಗದಲ್ಲಿ ಕಾಣಲಿಕ್ಕೆ ಅವರಂತೆ ಹೇಳಿದಂತೆ ರಾ| ಗಂಗೊಳ್ಳಿಯವರು ಎಲ್ಲ ತಾಲೂಕ ಬೋರ್ಡುಗಳ ಅಧ್ಯಕ್ಷರಿಗೆ ತಿಳಿಸಿದ್ದಾರೆ ದಿವಾನ ಸಾಹೇಬರು ಈಗ ಮುಖ್ಯವಾಗಿ ನೆಲೆಯಾದಾಗಲೇ ನಿಯೋಗದವರ ಆವರನ್ನು ಕಾಣುವದು ಉತ್ತಮವೆಂದು ರಾ| ಗಂಗೊಳ್ಳಿಯವರ ಅಭಿಪ್ರಾಯವಿದೆ!

ರಾ ಗಂಗೊಳ್ಳಿಯವರ ಪತ್ರ ನೋಡಿ ಕಾರವಾರ ತಾಲೂಕ ಬೋರ್ಡಿನ ಅಧ್ಯಕ್ಷರಾದ ರಾ| ದತ್ತ ನಾಯ್ಕರು ಆನಂದಿತರಾದರು. ಅಷ್ಟು ಅವರಿಗೆ ಈ ಕೆಳಗಿನಂತೆ ಸೂಚನೆಗಳನ್ನು ಮಾಡಿದ್ದಾರೆ (೧) ದಿವಾನ ಸಾಹೇಬರು ಕಾರವಾರದಲ್ಲಿ ೨—೩|| ದಿನ ಉಳಿಯುತ್ತಿದ್ದು, ಮಾನಪತ್ರದಾನದ ಸಂಬಂಧವಾಗಿ ಇಡೀ ಜಿಲ್ಹೆಯ ಪ್ರತಿನಿಧಿಗಳು ಕಾರವಾರದಲ್ಲಿ ಕೂಡುವವರಿದ್ದದರಿಂದ ನಿಯೋಗ ಕಾರವಾರದಲ್ಲೇ ದಿವಾನರ ಭೆಟ್ಟಿ ಕೊಳ್ಳುವದು ಯೋಗ್ಯವಾದದ್ದು. (೨) ರಾ| ಗಂಗೊಳ್ಳಿಯವರು ನಮ್ಮ ಜಿಲ್ಹೆಯ ಪರವಾಗಿ ಆರಿಸಿಕೊಟ್ಟ ಕೌನ್ಸಿಲ ಮೆಂಬರರಿದ್ದು ಅವರು ಕೌನ್ಸಿಲಿನಲ್ಲಿ ಹೇಳಿಕೊಂಡದ್ದು ಸಾಕಾಗುವದಿಲ್ಲಂತ ಈ ನಿಯೋಗದ ಕಳಿಸ ನಿಪ್ರಾಯಿ ಎಂತ ಹೇಳಬಹುದು ನಿಪ್ರಾಯಿ ಮಾಡಿದೊಡನೆ ಜಂಗಲ ಕಷ್ಟ ದೂರವಾಗುವದೆಂದು ತಿಳಿಯುವದು ಒಂದೇ ದಡ್ಡತನ ಇಂಥ ನಿಯೋಗಗಳನ್ನು ಭೆಟ್ಟಿ ಮಾಡಿಸುವದಕ್ಕಿಂತ ರಾ| ಗಂಗೊಳ್ಳಿಯವರು ಮಾನ್ಯದಾರ ದಿವಾನ ಸಾಹೇಬರನ್ನು ಜಂಗಲ ಉಪದ್ರವದಿಂದ ಹಾಳುಬಿದ್ದ ಯಾವದಾದರೂ ಒಂದು ಹಳ್ಳಿಗೆ ಕರಕೊಂಡು ಹೋಗಿ ಅವರಿಗೆ ಪ್ರತ್ಯಕ್ಷ ಜ್ಞಾನ ಮಾಡಿ ಕೊಡುವದು ಉತ್ತಮ. ಅಂಥ ಕಾರ್ಯಕ್ರಮ ನಿಶ್ಚಯಿಸಬೇಕು ಹಳ್ಳಿಯೊಳಗಿನ ನಿಪ್ಪರೇ ತಮ್ಮ ಸಂಕಷ್ಟಗಳನ್ನು ದಿವಾನ ಸಾಹೇಬರ ಮುಂದೆ ಸರಿಯಾಗಿಯೂ ಸ್ಪಷ್ಟವಾಗಿಯೂ ಆಡಬಹುದು. ರಾ| ದತ್ತನಾಯ್ಕರು ತಮ್ಮ ಪತ್ರದಲ್ಲಿ ಕಾರವಾರ ತಾಲೂಕಿನ ಕೆಲವು ಹಳ್ಳಿಗಳ ನಿರ್ದೇಶ ಮಾಡಿದ್ದಾರೆ

— ಮುಂಬಯಿಯ ಶಿಕ್ಷಣ ಪರಿಷತ್ತಿನ ಕಾಲಕ್ಕೆ ಫೆಡರಲ್ ಸ್ಟ್ರಕ್ಚರ ಕಮಿಟಿಯ ಅಧ್ಯಕ್ಷರಾದ ಸರ ಕಿಡೋರಿಗಳು ವಿಲಿಂಗಡನ್ ದೊರೆಗಳ ಕಾಯಿದೆಯು ಹಿಂದುಸ್ತಾನದ ಸಮಾಧಿ ಪತಿಗಳಾಗುವದೆಂದು ಅನ್ನಿಸಿದ ವಾರ್ತೆ ಹಬ್ಬಿದೆ.

ಮುಂಬಯಿ ಸ್ವದೇಶೀ ವಸ್ತುಪ್ರದರ್ಶನದಲ್ಲಿ ಉಚ್ಚ ತರಗತಿಯ ಪಾರಿತೋಷಕ ಪಡೆದ,



ವೆಜಿಟೆಬಲ್ ಸೋಪ ವರ್ಕ್ಸ, ಕಲ್ಲಿಕೋಟೆ.

ಡಿಸ್ಟ್ರಿಬ್ಯೂಟರರು:— ಬಸ್ತಿಹಿತ್ತಲ ಮಹಮೂದ ಸಾಹೇಬ, ಕುಮಟಾ. (ಉ ಕನ್ನಡ)

ಕ್ಷೇಮ

ಅಲ್ಲಲ್ಲಿ 'ಇಷ್ಟಿಷ್ಟು'

ಈಗ ಒಂದು ಪ್ರಕಾರದ ಶೀತವಾಯು ಪ್ರವಾಹವು ದೇಶತುಂಬ ಹಬ್ಬಿದೆ. ಪ್ರತಿಯೊಂದೆಡೆಯಲ್ಲಿಯೂ ವಿಲಕ್ಷಣವಾದ ಥಂಡಿ ಈ ತನಕ ಇಷ್ಟು ತಂಗಾಳಿ ಇರಲಿಲ್ಲವಾಗಿ ಮುಂಬಯಿಯೊಳಗಿನ ಕುಲಾಬಾ ಪ್ರಯೋಗ ಶಾಲೆಯ ಆಕಾಶ ನಿರೀಕ್ಷಕರಾದ ಡಾ| ಎಸ್. ಸಿ. ರೋಯ್‌ರವರು ಉದ್ಗರಿಸುತ್ತಾರೆ. ಎಲ್ಲೆಲ್ಲಿಯೂ ಶೀತ ಗುಜರಾಥ, ಪಂಜಾಬ, ಬಡೋದಾ, ಕರಾಚಿ, ರತ್ನಾಗಿರಿ, ಖಾಂಡವಾ ಮೊದಲಾದ ಕಡೆ ಶೀತವಾಯು ಸಂಚಾರವಾಗಿ ಜನ ಜಾನುವಾರಗಳಿಗೆ, ಬೆಳೆಗೆ ಭಯಂಕರ ನಷ್ಟ, ಕರಾಚಿಯಲ್ಲಿ ನೂರಾರು ದನಗಳು ತೀರಿಕೊಂಡವು. ನೂರಾರು ಎಕ್ರೆ ಭೂಮಿಯ ಬೆಳೆ ನಷ್ಟ. ಪಂಚಮಹಾಲ ಜಿಲ್ಲೆಯಲ್ಲಿ ಬೆಳೆ ವಿಪರೀತ ನಷ್ಟವಾಯಿತಾಗಿ ತಂತಿ ಕಳಿಸಿವೆ. ಪ್ರದೇಶದಲ್ಲಿ ನೀರು ಹೆಪ್ಪುಗಟ್ಟಿದೆ. ಹತ್ತಿಯ ಬೆಳೆ ಕೆಟ್ಟು ಹೋಯಿತು. ಬಡೋದಾ, ಭಡೋಚ ಪ್ರದೇಶಗಳಲ್ಲಿ ಇದೇ ಅವಸ್ಥೆ. ಹೊಗೆಸೊಪ್ಪು, ಮೆಣಸು ಸಂಪೂರ್ಣ ನಷ್ಟವಾಯಿತು. ಮಿಂಡೋಲಾ ನದಿಯ ನೀರು ಸರಿದಾಡುವದಿಲ್ಲ. ಸಿಂಧ ಪ್ರಾಂತದ ಹೈದರಾಬಾದದ ಸ್ಟೇಶನಿನಲ್ಲಿ ಚಹಾ ಕುಡಿಯಲು ಒಬ್ಬನು ಇಳಿದನು. ಆತನ ಕೈ ಕಾಲು ಶೀತದಿಂದ ಗಟ್ಟಿಯಾಗಿ ಫಕ್ಕನೆ ಪ್ಲಾಟಫಾರ್ಮಿನ ಮೇಲೆ ಬಿದ್ದು ತೀರಿಕೊಂಡನು. ಲಾಹೋರದಲ್ಲಿ ಜ್ವರ ಹಬ್ಬಿದೆ. ೧-೨ ದಿನಗಳಲ್ಲಿ ೨೦ ಜನರು ಇದ್ದಲಿಯಿಂದ ತೀರಿಕೊಂಡರು. ಮಾರ್ಗದ ಮೇಲೆ ಕಾವಲಿಗನಿಂತ ಪೋಲೀಸರಿಬ್ಬರು ಥಂಡಿಯಿಂದಲೇ ತೀರಿಕೊಂಡರು. ಉತ್ತರ ಹಿಂದುಸ್ಥಾನದ ಪ್ರದೇಶದಲ್ಲೆಲ್ಲ ಇದೇ ದೊಡ್ಡ ಗದ್ದಲವಾಗಿದೆ. ಕಳೆದ ವರುಷ ಇದೇ ಸಮಯ ಭೂಕಂಪವಾಗಿದ್ದಿತು. ಪುನಃ ಭೂಕಂಪವಾಗುತ್ತದೇನೆಂಬ ಭೀತಿಯುಂಟಾಗಿದೆ. ಸಂಯುಕ್ತ ಪ್ರಾಂತ ಬಂಗಾಲ ಛೋಟಾನಾಗಪುರ ಮೊದಲಾದ ಪ್ರದೇಶಗಳಲ್ಲಿ ಮಳೆ ಹನಿಸುತ್ತದೆ. ಕಾಶ್ಮೀರ, ಪಂಜಾಬ ಮೊದಲಾದವುಗಳ ಕಡೆ ಮಂಜು ಬೀಳುತ್ತಿದೆ. ಡಾ| ರೋಯ್‌ರವರು ಈ ಸೃಷ್ಟಿ ಚಮತ್ಕಾರದ ಕಾರಣಗಳನ್ನು ವಿವರಿಸುತ್ತಾರೆ. ಅದೇನಂದರೆ— ಇರಾಣ ದೇಶದೊಳಗಿನ ವಾತಾವರಣದಲ್ಲಿ ಕಲ್ಲೋಲ ಉಂಟಾಗಿದೆ. ಆ ವಾಯುಪ್ರವಾಹವು ವಾಯುವ್ಯ ಸರಹದ್ದಿನ ಮೇಲಿಂದ ಹಿಂದುಸ್ಥಾನದೊಳಗೆ ಸಾರಿ ಹಿಮಾಲಯದ ಮೇಲಿನ ಮಂಜಿನ ಮೋಡಗಳಿಗೆ ಬಾಧೆ ಮಾಡಿದ್ದರಿಂದ ಅಲ್ಲಿಂದ ತಂಗಾಳಿಯ ಪ್ರವಾಹವು ದೇಶತುಂಬ ಹಬ್ಬಿದೆ. ಈ ಗಾಳಿ ಇನ್ನು ಕೆಲ ದಿನಗಳ ತನಕ ಹೀಗೆಯೇ ಬೀಸಿದರೆ ಮೈಲಿ ಮೊದಲಾದ ಸಾಂಸರ್ಗಿಕ ಬೇನೆಗಳು ಹಬ್ಬುವವು. ಡಾ| ರೋಯ್‌ರವರ ಇರಾಣದೊಳಗಿನ ಹವೆಯಲ್ಲಿ ತಿದ್ದುಪಾಟಗಳು ಕಾರಣವೇನೆಂದು ವಿವರಿಸಲಿಲ್ಲ. ದೈವೀ ಚಮತ್ಕಾರದ ಪತ್ತೆ ಹಚ್ಚುವ ಬಗೆ ಹೇಗೆ?

***

ಪಂಜಾಬ ಪ್ರಾಂತದ ಕೇಮುಪುರಾ ಗ್ರಾಮದ ಒಳಿ ಜಂಡಿಯಾಲಾ-ಶೇರಖಾನವೆಂಬದೊಂದು ಗ್ರಾಮ. ಅಲ್ಲೊಂದು ಅಶ್ವತ್ಥ ಮರವಿತ್ತು. ದೊಡ್ಡ ಮರ. ಅದು ಒಬ್ಬ ಬ್ರಾಹ್ಮಣನದು. ಅದನ್ನು ಬ್ರಾಹ್ಮಣನು ಮುಸಲ್ಮಾನ ಜಾತಿಯ ಕಮ್ಮಾರನಿಗೆ ಮಾರಿದನು. ಕಮ್ಮಾರನು ತನ್ನ ಕಟ್ಟಿಗೋಸುಗ ಆ ಮರ ಕಡಿದನು. ಫಕ್ಕನೆ ಆ ಮರದೊಳಗಿಂದ ಸುಮಾರು ೮ ಇಂಚು ಉದ್ದ ೪ ಇಂಚು ಅಗಲವಾದ ಒಂದು ಮೂರ್ತಿಯು ರುಂಡ ಹೊರಬಿತ್ತು. ತಕ್ಕ ಮಟ್ಟಿಗೆ ದುರ್ಗಾದೇವಿಯಂತೆ ಆ ಮೂರ್ತಿ ಕಾಣುತ್ತದೆ. ಹಣೆಯ ಮೇಲೆ ಕುಂಕುಮವಿದೆ. ಬ್ರಾಹ್ಮಣನು ಇದನ್ನು ನೋಡಿ ತೀರ ಬೆರಗಾಗಿದ್ದಾನೆ, ಮರ ಮಾರಿದ ಬಗ್ಗೆ ಪಶ್ಚಾತ್ತಾಪ ಬಡುತ್ತಿದ್ದಾನೆ. ಆ ಮರ ಮಾರಿದಂದಿನಿಂದ ಅವನ ಹೆಂಡತಿಗೆ ಅಸ್ವಾಸ್ಥ್ಯ, ಕನಸಿನಲ್ಲಿ ತರತರದ ಸ್ವಪ್ನಗಳ ಬೀಳುತ್ತವೆ. ಮುಸಲ್ಮಾನ ಕಮ್ಮಾರನೂ ವ್ಯಸನಪಡುತ್ತಿದ್ದಾನೆ. ಆ ಮರ ಕೊಂಡಂದಿನಿಂದ ಆತನ ಮಗನಿಗೆ ಭಯಂಕರ ಜ್ವರ ಬಂದು ಸ್ಮೃತಿ ತಪ್ಪಿದೆ. ನೂರಾರು ಜನರು ಈ ಮೂರ್ತಿ ನೋಡಲು ತಂಡುಗಟ್ಟಿ ಹೋಗುತ್ತಿದ್ದಾರೆ. ಬ್ರಾಹ್ಮಣನು ಆ ಮೂರ್ತಿಯನ್ನು ಕಾಪಾಡಿಕೊಂಡಿದ್ದಾನೆ. ಆ ಮೂರ್ತಿಯ ಕುತ್ತಿಗೆಗೆ ನೆತ್ತರಗೆಂಪು ಗುರುತಾಗಿದೆ. ಇದೇನೆಂದು ಯಾರಿಗೂ ತಿಳಿಯದು!

***

ಸಿಂಧ ಪ್ರಾಂತದ ರೋಹರಿ ಗ್ರಾಮದ ವರ್ತಮಾನ: ಇಲ್ಲಿಯ ಒಬ್ಬ ಎಳೆಪ್ರಾಯದ ಸಿಂಧಿ ಹುಡುಗನು ಒಂದು ಪ್ರಕಾರದ ಸ್ಯಾಕಲ್ ಮಾಡಿದ್ದಾನೆ. ಇದನ್ನು ಹತ್ತಿ ಜಲಪರ್ಯಟನ ಮಾಡಬಹುದು. ಕೆಲ ಗೆಳೆಯರಿಗೆ ಕರಸಿ ಸಿಂಧು ನದಿಯ ನೀರಿನ ಮೇಲಿಂದ ಆತನು ಸ್ಯಾಕಲನ್ನು ನಡಿಸಿಕೊಂಡು ಹೋದನಂತೆ. ಚಮತ್ಕಾರಿಕ ಶೋಧ!

***

ಬ್ರಹ್ಮದೇಶದ ಮಿಂಗ್ಯಾನ ಗ್ರಾಮದಲ್ಲಿ ಹಳೇ ಕಗಿಂಪಿನ ಮರ ಒಂದಿದೆ. ಈ ಮರದೊಳಗಿಂದ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

- ವೃದ್ಧಿಶಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).
- ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
- ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ)
- ಮಹಾಮಾಷ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
- ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
- ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ)
- ಕೃಷ್ಣಾರಕ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ)
- ಅಮೃತ ಪ್ರಾಶ (ರಕ್ತವಾತ ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ)
- ಭುವನಾಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ)
- ಮಹಾಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:—

ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬಾ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ ಗಣನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಇವು ಶಾಸ್ತ್ರಸಿದ್ಧವಾಗಿ ಅನುಭವಪ್ರಮಾಣವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ನಡಿಸಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ವೇಷಣೀಯರಾದಾಗಲೇ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿವಸವೂ ಅಭಿವೃದ್ಧಿಗೆ ಬರುವಂತಾಗಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ ೧೦-೧೧-೧೯೩೪

ವಿದ್ವಾನ್ ಕೇ. ಶೇಷಶಾಸ್ತ್ರಿ ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ

ದಿನಾ ೨ ೩ ಶಿದ್ದ ಸರ ಹೊರಬೀಳಲಾರಂಭಿಸಿದೆ ಈ ರಸಕ್ಕೆ ಅಮಲಿದೆ. ಹೆಚ್ಚು ಸೇವಿಸಿದರೆ ಮಾತ್ರ ಅಮಲೇರುತ್ತದೆ ಇಲ್ಲದಿದ್ದರೆ ಶರೀರಕ್ಕೆ ಒಳ್ಳೇ ಚೈತನ್ಯ ಕೊಡುತ್ತದಂತೆ ನೆರೆಹೊರೆಯ ಗ್ರಾಮದವರು ಗುಂಪು ಗುಂಪಾಗಿ ಬಂದು ಈ ರಸ ಕುಡಿದು ಕ್ಷೇಮ ಹೊಂದುತ್ತಿದ್ದಾರೆ ಈ ಮರದಲ್ಲಿ ವನದೇವತೆಗಳಿವೆ, ಆ ಕಾರಣದಿಂದ ಈ ರಸ ಬರುತ್ತಿದೆ ಇದು ಆ ದೇವತೆಗಳ ಪ್ರಸಾದ. ಹೀಗೆ ಬಾವಿಕರು ಕಲ್ಪಿಸುತ್ತಾರೆ.

***

ಮುಂಬಯಿಯ 'ಟಾಯ್ಮ್ಸ' ಪತ್ರಿಕೆಯ ತಾ ೩ನೇ ಸಚಿತ್ರ ಸಂಚಿಕೆಯಲ್ಲಿ ಒಂದು ಸಂಗತಿ ಬಂದಿದೆ ಸಿಮ್ಲಾದೊಳಗಿನ ಒಂದು ಮರದ ಮೇಲೆ ಒಂದು ಮಂಗ ತನ್ನ ಮರಿಯೊಡನೆ ಮುದದಿಂದ ಹಾರ್‍ಯಾಡುತ್ತಿತ್ತು ಒಬ್ಬ ಬೇಟೆಗಾರನು ಬೇಟೆ-ನಾಯಿಗನ್ನು ಜೊತೆಗೆ ಕರಕೊಂಡು ಬೇಟೆಯಾಡಹೋದಾಗ ಸಹಜ ಗುಂಡು ಹಾಕಿ ಮಂಗನಿಗೆ ಹೊಡೆದನು ಮಂಗವು ನೆಲಕ್ಕುರುಳಿ ಬಿತ್ತು ತಾಯಿಗೆ ಅಪ್ಪಿಕೊಂಡಿದ್ದ ಚಿಕ್ಕ ಮರಿಯೂ ನೆಲಕ್ಕುರುಳಿತು ಬಳಿಯಲ್ಲಿಯೇ ದುಷ್ಟ ಬೇಟೆನಾಯಿ ಇತ್ತು ಅದು ಆ ಮರಿಗ ಏಗಿದು ತಿನ್ನುವದೆಂದು ಆ ಬೇಟೆಗಾರನ ತಿಳುವಳಿಕೆ. ಆದರ ನಾಯಿಯು ಆ ಮಂಗನ ಮರಿಗೆ ಮುಟ್ಟಿಟ್ಟು ಅದರೊಡನೆ ಆಡಲಾರಂಭಿಸಿತು. ಮಂಗನ ಮರಿ ನಾಯಿಗೆ ತಾಯಿಯಂತೆ ಬಿಗಿದಪ್ಪಿಕೊಂಡಿತು ಈಗ ನಾಯಿಯು ಪ್ರೀತಿನಿಂದ ಮಂಗನಮರಿಯನ್ನು ಬೆನ್ನಮೇಲೆ ಕುಳ್ಳಿರಿಸಿಕೊಂಡು ಊರೊಳಗಿನ ಕೇರಿ ಕೇರಿಗಳಲ್ಲಿ ತಿರುಗುತ್ತಿದೆ ತನಗೆ ತಿನಸು ಕೊಟ್ಟರೆ ತಿನ್ನುವದಿಲ್ಲ, ಮಂಗನ ಮರಿಗೆ ತಿನಸು ಕೊಟ್ಟು, ಅದು ತಿಂದು ಸಂತೋಷಪಟ್ಟ ಬಳಿಕ. ಆ ನಾಯಿಯು ತಿಂಡಿ ತಿನ್ನುತ್ತದೆ ಊರತುಂಬ ಇದೊಂದು ಕೌತುಕದ ಸಂಗತಿಯಾಗಿದೆ. ಮಕ್ಕಳೂ ಹೆಂಗಸರೂ ನಾಯಿಗೂ-ಮಂಗನ ಮರಿಗೂ ತಿನಸು ಕೊಟ್ಟು ಮನೋರಂಜನ ಮಾಡಿಕೊಳ್ಳುತ್ತಾರೆ

***

ಮಿದ್ನಾಪುರದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ತಮಲೂಕದಲ್ಲಿ ದರಬಾರವನ್ನ ನೆರಿಸಿದ್ದರು ಆ ಕಾಲದಲ್ಲಿ 'ಅಹಿಂಸಾ ಪರಮೋಧರ್ಮಃ' ಎಂಬ ವಚನದ ಮೇಲೆ ಪ್ರವಚನ ಮಾಡಿದರು ಅಹಿಂಸೆಯು ಹಿಂದು ಧರ್ಮದ ಮೂಲಾಧಾರವೆಂದೂ, ಕ್ರಾಂತಿಕಾರಕರು ಕೊಲೆಪಾತಕ ಮಾಡಿ ಹಿಂದು ಧರ್ಮದ ಘಾತ ಮಾಡುತ್ತಾರೆಂದೂ ಪ್ರತಿಪಾದಿಸಿದರು. ಶಾಲೆಯೊಳಗಿನ ಒಬ್ಬ ಶಿಕ್ಷಕರು "ಕೊಲೆಪಾತಕವು, ಅದನ್ನು ಅಭಿವೃದ್ಧಿಗೊಳಿಸುವ ಉಪಾಯವು" ಎಂಬ ವಿಷಯದ ಮೇಲೆ ಲೇಖ ಬರೆಯಲು ವಿದ್ಯಾರ್ಥಿಗಳಿಗೆ ಹೇಳಿದ್ದರಂತೆ ಇಂಥ ಪ್ರವೃತ್ತಿಯನ್ನು ಮಕ್ಕಳಲ್ಲಿ ಹುಟ್ಟಿಸುವದರಿಂದ ಧರ್ಮಭ್ರಷ್ಟವಾಗುತ್ತದೆ, ಅದರಿಂದ ಜನರು ಶಿಕ್ಷಕರ ಮೇಲೆ ಕಣ್ಣಿಟ್ಟಿರಲು ಇಡಬೇಕು ಮಕ್ಕಳು ದುರ್ಮಾರ್ಗ ಹಿಡಿಯದಂತೆ ಜಾಗರೂಕರಾಗಿರಬೇಕು ಮಹಾತ್ಮರ ಬೋಧವನ್ನು ಡಿ। ಮೆಜಿಸ್ಟ್ರೇಟರ ಬಾಯಿಯಿಂದ ಕೇಳುವದು ನಿಜವಾಗಿಯೂ ಭಾಗ್ಯಪ್ರದವಿದೆ

***

'ನ್ಯಾಶ್ನಲಿಂಥ ಸೆಂಚುರಿ ಎಂಡ್ ಆಫ್ಟರ' ಎಂಬ ಮಾಸ ಪತ್ರಿಕೆಯಲ್ಲಿ ಪ್ರೊ। ರೆಮ್ಸೇ ಮ್ಯೂರ ಎಂಬವರು ಪಾಶ್ಚಾತ್ಯ ಸಂಸ್ಕೃತಿಯ ಈಗಿನ ಅವಸ್ಥೆಯನ್ನು ವರ್ಣಿಸಿ ಮರುಗುತ್ತಾರೆ. ಅವರು ಬರೆಯುವದೇನಂದರೆ — "ದೊಡ್ಡ ದೊಡ್ಡ ದೇಶಗಳಲ್ಲಿ ನಿಷ್ಕಾರಣವಾಗಿ ಜನರಿಗ ಸೆರೆಹಿಡಿಯುತ್ತಾರೆ. ವಿಚಾರ ಮಾಡದೆ ಶಿಕ್ಷೆ ಮಾಡುತ್ತಾರೆ ಜನರಿಗೆ ಭಾಷಣಸ್ವಾತಂತ್ರ್ಯವಿಲ್ಲ, ವರ್ತಮಾನಪತ್ರಸ್ವಾತಂತ್ರ್ಯವಿಲ್ಲ ರಾಜಕೀಯ ಸ್ವಾತಂತ್ರ್ಯವೂ ಅಪಹರಿಸಲ್ಪಟ್ಟಿದೆ ಅಮದು ತೆರಿಗೆ ಮೊದಲಾದ ನಿರ್ಬಂಧಗಳನ್ನೇರ್ಪಡಿಸಿ ಜಗತ್ತಿನೊಳಗಿನ ಸರಕಾರಗಳು ಸ್ವಾತಂತ್ರ್ಯವನ್ನು ಪ್ರತಿಬಂಧಿಸಲಾರಂಭಿಸಿವೆ ಆಧುನಿಕ ಜಗತ್ತಿನ ಮೂಲಾಧಾರವಾದ ಸಾಹಸ ಸ್ವಾತಂತ್ರ್ಯಕ್ಕೆ ಈಗಿನ ಸರಕಾರಗಳು ಪೋಷಕವಾಗಿರುವದಿಲ್ಲ" ಈ ಪ್ರಕಾರ ಮ್ಯೂರರವರು ಬರೆದು ಇಂಥ ಸಂಸ್ಕೃತಿ ಬಾಳಬಲ್ಲದೇನೆಂಬ ಪ್ರಶ್ನೆ ಮಾಡುತ್ತಾರೆ

***

ಮದ್ರಾಸದೊಳಗಿನ 'ಹರಿಜನ' ಪತ್ರಿಕೆಯಲ್ಲಿ ಶ್ರೀ। ಅಮೃತಲಾಲ ಠಕ್ಕರರವರು ಶ್ರೀ। ಜೆ ಪಿ ಭನಸಾಲಿಯವರ ವರ್ಣನೆ ಮಾಡಿದ್ದಾರೆ "ಇವರು ಮಹಾತ್ಮರ ಸಾಬರಮತಿ ಆಶ್ರಮದಲ್ಲಿದ್ದರು ಮುಂಬಯಿ ವಿಶ್ವವಿದ್ಯಾಲಯದ ಪದವೀಧರರು ಆತ್ಮಕ್ಲೇಶವು ಇವರ ಧ್ಯೇಯ. ಆಶ್ರಮದಲ್ಲಿರುವಾಗ ೫೫ ದಿನಗಳ ತನಕ ಇವರು ಉಪೋಷಣ ಮಾಡಿದ್ದರು ಕಠಿಣ ತಪಶ್ಚರ್ಯ ಪುರುಷರು ನಾರಿನಕೌಪೀನವನ್ನು ಉಡುತ್ತಾರೆ ಮತ್ತೇನೂ ಅರಿವೆಯ ತುಂಡು ಇವರ ಮೈಮೇಲಿಲ್ಲ ಕೈಯಲ್ಲೊಂದು ಕಮಂಡಲು ಇವರು ಮೌನವ್ರತಸ್ಥರು ತಪ್ಪಿ ಮಾತು. ಮೊರೆವೀಳಬಾರದೆಂದು ತುಟಿಗಳನ್ನು ದಭೆಯಿಂದ ಹೊಲಿಕೊಳ್ಳುತ್ತಿದ್ದರು ಈಗ ಮಾತಾಡದ ಅಭ್ಯಾಸ ನಿಂತಿದ್ದರಿಂದ ಈಗ ಅವರು ಹೊಲಿದುಕೊಳ್ಳುವದಿಲ್ಲ ಬಾಜರಿ ಹಿಟ್ಟಿಗೆ ನೀರು ಕಲಿಸಿ ಉಣ್ಣುತ್ತಾರೆ ಎಲ್ಲಿಯಾದರೂ ಕಹಿಬೇವಿನ ಎಲೆಗಳನ್ನು ತಿನ್ನುತ್ತಾರೆ ಆಹಾರವನ್ನು ಎಂದೂ ಬೇಯಿಸುವದಿಲ್ಲ ಹಿಟ್ಟಿಗೆ ನೀರು ಕೂಡಿಸಿ ಅರ್ಧಪಾಕದ್ದೆ, ಗೋದಿ ನೆನಿಸಿ ಇವರು ಕೊಳ್ಳುತ್ತಾರೆ ಉಗಿಬಂಡಿಯಲ್ಲಿ ಹತ್ತುವದಿಲ್ಲ ಗಾಡಿಯ ಗೊಡವೆ ಹೋಗುವದಿಲ್ಲ, ಪಾದಚಾರಿಗಳಾಗಿ ಸಂಚರಿಸುತ್ತಾರೆ ಇವರು ಸುಮಾರು ೪೦ ವರುಷ ಪ್ರಾಯದವರು ಯುರೋಪ ಖಂಡದಲ್ಲಿ ಅಡ್ಡಾಡಿದ್ದಾರೆ. ಸಂಪನ್ನ ಸ್ಥಿತಿಯವರು ಆದರೆ ಸರ್ವಸ್ವವನ್ನೂ ದಾನ ಮಾಡಿ ನಿರ್ಧನರಾಗಿ ಅಡ್ಡಾಡುತ್ತಿದ್ದಾರೆ.

***

ಲಂಡನಿನೊಳಗೆ 'ರೊಯಲ್ ಪೊಟರಲು ಹಾಸ್ಪಿಟಲ್' ದಲ್ಲಿ ಸಂಧಿವಾತದ ಮೇಲೆ ಹೊಸ ಔಷಧೋಪಚಾರ ಶೋಧಿಸಲಾಗಿದೆ ೫ ದಿನಗಳ ಅಂತರದಲ್ಲಿ ಚಿನ್ನದ ಇಂಜೆಕ್ಷನ ಕೊಟ್ಟಲ್ಲಿ ಸಂಧಿವಾತದ ಪರಿಹಾರವಾಗುತ್ತದೆಂದು ಡಾಕ್ಟರರು ಹೇಳುತ್ತಾರೆ. ಈ ಪ್ರಯೋಗದಿಂದ ಅದೆ ಬಿಟ್ಟ ಸಂಧಿವಾತದ ರೋಗಿಗಳು ಅಡ್ಡಾಡುವ ಸ್ಥಿತಿಯಲ್ಲಿ ಒಂದರಾಗಿ ತಿಳಿಯುತ್ತದೆ

***

ಮಿದ್ನಾಪುರದ ಶ್ರೀ। ವಿಮಲೇಂದು ಬೋಸ ಎಂಬ ೨೫ ವರ್ಷದವನು ಸ್ಕೈಕಲ್ ಸ್ವಾರನಾಗಿ ಭೂಪ್ರದಕ್ಷಿಣ ಮಾಡಲಾರಂಭಿಸಿದ್ದಾನೆ ಯುರೋಪ ಮೊದಲಾದ ಪರದೇಶಗಳಲ್ಲಿ ಈತನು ಸ್ಕೈಕಲ್‌ದಿಂದಲೂ, ಕಾಲ್ನಡಿಗಯಿಂದಲೂ ೩೬,೦೦೦ ಮೈಲು ಅಡ್ಡಾಡಿದನು ಮದ್ರಾಸ ಇಲಾಖೆಯಲ್ಲಿ ಈಗ ಸಂಚರಿಸುತ್ತಿದ್ದಾನೆ ಪುರಾತನ ಹಿಂದು ದೇವಾಲಯಗಳೊಳಗಿನ ಕಲಾ ಕೌಶಲ್ಯವನ್ನು ಅಭ್ಯಾಸ ಮಾಡುವದೇ ಇತ್ತ ಕಡೆ ಸಂಚರಿಸುವ ಕಾರಣವಂತೆ ಈತನು ಒಳ್ಳೇ ನರ್ತಕನು ಹಿಂದು ನರ್ತನಶಾಸ್ತ್ರದಂತೆ ನರ್ತನ ಮಾಡಬಲ್ಲನು

***

ಕಲ ಅಂಕಿಗಳು ಬೋಧಪ್ರದವಿವೆ. ೧೯೩೬-೩೭ನೇ ಇಸ್ವಿಯಲ್ಲಿ ಇಡೀ ಹಿಂದುಸ್ಥಾನದಲ್ಲಿ ೧ ಅಬ್ಜ ೧೬ ಕೋಟಿ ೭೦ ಲಕ್ಷ ಎಕರೆ ಭೂಮಿ ಬೇಸಾಯ ಯೋಗ್ಯವಾದದ್ದು, ಅವುಗಳಲ್ಲಿ ೬೬ ಕೋಟಿ ೭೦ ಲಕ್ಷ ಎಕರೆ ಭೂಮಿ ಬ್ರಿಟಿಶ ಹಿಂದುಸ್ಥಾನದಲ್ಲಿದೆ ಇದರೊಳಗೆ ೧೪॥ ಕೋಟಿ ಎಕರೆ ಬಂಜರು ಇತ್ತು ೬ ಕೋಟಿ ೨೦ ಲಕ್ಷ ಎಕರೆ ಭೂಮಿಯಲ್ಲಿ

[೧೦ನೇ ಪುಟದ ನೋಡಿ ಮುಂದುವರಿಸಿದೆ]

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!

ಪೊಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಘ.

ಪೊಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವನವನ್ನೂ ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ. ಸೂ 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ]

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು!

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು —

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು - ಮೆಸರ್ಸ ಜೀವನ ಏಜನ್ಸಿ, ಕಾರವಾರ.

ಇನ್ನೂ ಕಾರಸ್ಥಾನಗಳೇ!

[ನಿರೀಕ್ಷಕನು ಬರೆದುದು]

ಜರ್ಮನಿ ಫ್ರಾನ್ಸ ದೇಶಗಳೊಳಗೆ ವಿವಾದಭೂಮಿಯಾದ ಸಾರ ಪ್ರಾಂತದಲ್ಲಿ ರವಿವಾರ ತಾರೀಖು ೧೩ನೇಗೆ 'ಪ್ಲೆಬಿಸೈಟ' ಯಾನೆ ಮತಗಣನೆ ಆಗಿ ಜರ್ಮನಿಯು ಗಳಿಸಿತು. ಜರ್ಮನಿಯ ಪಕ್ಷಕ್ಕೆ ಪ್ರತಿಶತ ಬಹುಮತ ಜರ್ಮನಿಗೆ ೯೦ ಕ್ಕೂ ಮಿಕ್ಕ ಮತಗಳು ದೊರಕಿದವು. ಈಗಿದ್ದ ಸ್ಥಿತಿಯನ್ನೇ ಮುಂದೆಯೂ ಕಾಪಾಡಬೇಕೆಂದ ೪೬ ಸಾವಿರ ಜನರು ಮತ ಕೊಟ್ಟರು. ಫ್ರಾನ್ಸ ಪಕ್ಷಪಾತಿಯಾಗಿ ೨೦೦೦ ಮತಗಳು ಬರಲು, ೧೯೧೯ರ ಈ ಮತಪ್ರಾಬಲ್ಯ ಸಾರ್ವರಾಷ್ಟ್ರಸಂಘದವರು ದಿಗಿಲುಬಿದ್ದರು. ಆದಾಗ್ಯೂ ನಿರ್ಣಯವಾಗಿ ಸಾರ ಪ್ರದೇಶವನ್ನು ಜರ್ಮನಿಗೆ ಒಪ್ಪಿಸತಕ್ಕದ್ದಾಗಿ ನಿರ್ಧಾರವಾಗಿದೆ. ಮಾರ್ಚ ೧ನೇ ತಾರೀಖಿಗೆ ಸಾರ ಪ್ರಾಂತದಲ್ಲಿ ಜರ್ಮನ್ ಸರಕಾರವು ಸ್ವಾಧೀನ ಪಡಿಸಿಕೊಳ್ಳುವದು. ಪಡಿಸಿಕೊಂಡ ಮೇಲೆ ಫ್ರಾನ್ಸ ದೇಶದ ಜಪ್ರತೆಗೆ ಭಂಗ ಬರದಂತೆ ಜರ್ಮನ್‌ರು ಈ ಪ್ರದೇಶದ ಕಡೆ ಸೈನ್ಯವನ್ನು ಸಾಗಿಸ ಮಾಡಬಾರದೆಂದೂ, ಸ್ವಸ್ತ್ರೀಸಂರಕ್ಷಣೆಗಾಗಿ ಒಂದಿಗಳನ್ನಾಗಲಿ ರಾಜ್ಯಗಳನ್ನಾಗಲಿ ರಚಿಸಬಾರದೆಂದೂ ತಹನಾಮೆಯಾಗಿದೆ. ಇದಕ್ಕೆ ಸಮ್ಮತಿ ಮೊದಲು ಜರ್ಮನಿಯು ಒಪ್ಪಿಕೊಂಡಿರಲಿಲ್ಲ. ಒಳಕೆ ಒಪ್ಪಿಗೆಯನ್ನಿತ್ತು ಶುಭವರ್ತಮಾನ ಒಂದಿದೆ. ಇದರ ಮೇಲಿಂದ ಸಾರ ಪ್ರದೇಶದ ವಿವಾದವು ತಿಷ್ಟಾಯಿತು ಎಂದು ಒಗೆದಿರಿ ಎಂದು ಸದ್ಯಕ್ಕೆ ನಾನು ಎಣಿಸುತ್ತೇನೆ. ಮಹಾಯುದ್ಧದ ಮುಗಿದ ಬಳಿಕ ಮಿತ್ರರಾಷ್ಟ್ರಗಳಿಗೂ ಶತ್ರುರಾಷ್ಟ್ರಗಳಿಗೂ ಆದ ವರ್ಸೇಲಿಸ ತಹನಾಮೆಯ ಇತಿಹಾಸವನ್ನು ಪರಾಂಬರಿಸಿದರೆ, ಸಾರ ಪ್ರದೇಶವನ್ನು ಅಪಹರಿಸುವದಕ್ಕಾಗಿ ಫ್ರೆಂಚ ಮುತ್ಸದ್ದಿಗಳು ನಡಿಸಿದ ಕಾರಸ್ಥಾನಗಳನ್ನಲ್ಲಿ ಆಳವಾಗಿ ಆಲೋಚಿಸಿದರೆ ಸಾರ ಪ್ರಾಂತದ ಪ್ರಶ್ನೆ ಸಮಾಧಾನದಿಂದ ನಿರ್ಣಯವಾದದ್ದು ಪರಮಾಶ್ಚರ್ಯ. ಆದಾಗ್ಯೂ ಈ ಸಂಗತಿ ಘಟಿಸಿಹೋಗಿದೆ. ಪ್ರತ್ಯಕ್ಷ ಸಾರ ಪ್ರಾಂತವು ಜರ್ಮನಿಯ ಸ್ವಾಧೀನವಾಗದಿದ್ದರೂ ನಿರಾತಂಕವಾಗಿ ಮಾರ್ಚ ೧ನೇ ತಾರೀಖಿಗೆ ಸ್ವಾಧೀನವಾಗಲಿಕ್ಕಿದೆ. ಜರ್ಮನಿಯು ಫ್ರಾನ್ಸ ದೇಶದ ಮೇಲಿನ ಪರಂಪರಾಗತ ಹಗೆಯನ್ನು ತೊರೆದು ಸ್ನೇಹಸಂಗ್ರಹ ಮಾಡುವ ಧೋರಣವನ್ನಿಟ್ಟಿರುವದಾಗಿ ಒಳ್ಳಿದರ ಆಂಬೋಣ ನಿರುಪ ಯದಿಂದಲೋ, ದೀರ್ಘಾಲೋಚನೆಯಿಂದಲೋ, ಧೂರ್ತತನದಿಂದಲೋ ನಂಸರಿಯು ಅಂತಃಕರಣಪೂರ್ವಕವಾಗಿ ಜರ್ಮನ್-ಫ್ರೆಂಚ ಸರಕಾರಗಳು ಸ್ನೇಹಭಾವವನ್ನು ತಳೆದರೆ ಅದೊಂದು ಲೋಕಕ್ಷೇಮ ವಾರ್ತೆ ಇನ್ನೊಂದು ನಾನು ಸದ್ಯಕ್ಕೆ ಮೇಲಿಲ್ಲಿ ಒಂದು ಮಾತು ಮಾತ್ರ ಇನ್ನೂ ನನಗೆ ಸಂದೇಹವನ್ನುಂಟು ಮಾಡುತ್ತಿದೆ. ಜರ್ಮನಿಯಲ್ಲಿ ಇನ್ನೂ ಯುದ್ಧ ತಯಾರಿಗಾಗಿ ಗುಪ್ತವಾಗಿ ಯುದ್ಧ ವಿಮಾನಗಳು ತಯಾರಾಗುತ್ತಿವೆ. ಸಾಮಾನ್ಯ ವ್ಯಾಪಾರದ ಸಲುವಾಗಿ ಹಾರ್‍ಯಾಡುವ ವಿಮಾನಗಳ ಲೆಕ್ಕ ಸಹ ಜರ್ಮನ್‌ರು ಪ್ರಸಿದ್ಧಿಸಲೊಪ್ಪುವದಿಲ್ಲ. ಪ್ರತಿಯೊಂದು ವಿಮಾನು ಯುದ್ಧ ಕಾಲಕ್ಕೆ ತಕ್ಕದ್ದಾಗಿ ಶತ್ರುಗಳ ಮೇಲೆ ಸದ್ದಿಲ್ಲದೆ ಹಲ್ಲೆ ಮಾಡಿ ನಾಶ ಮಾಡಲು ಸಿದ್ಧವೆಂದು 'ಜೇನ್ಸ ಆಲ್ಬಲ್ಡ್ ಎರಕ್ರಾಫ್ಟ' ಎಂಬ ಜಗತ್ತಿನ ವಿಮಾನಪತ್ರಿಕರ್ತರ ಅಭಿಪ್ರಾಯ. ಬ್ರಿಟಿಶರಂತು ಈ ಯುದ್ಧ ವಿಮಾನುಗಳನ್ನು ಹೇರಳವಾಗಿ ತಯಾರಿಸಿದ್ದಾರೆ. ಯುರೋಪ ಖಂಡದಲ್ಲಿ ವಿಮಾನುಗಳ ಮೇಲಿಂದ ಕ್ಷಣಾರ್ಧದಲ್ಲಿ ಬಾಂಬುಗಳನ್ನು ಹಾರಿಸುವ ಸಿದ್ಧತೆಯನ್ನಿಡುವದು ಆತ್ಮಸಂರಕ್ಷಣೆಯ ಶ್ರೇಷ್ಠ ಉಪಾಯವೆಂದು ಲಂಡನಿನ 'ಸಂಡೇ ಡಿಸ್ಪೆಚ್' ಪತ್ರಿಕೆಯಲ್ಲಿ ಕೆಪ್ಟನ್ ನೋರ್ಮನ್‌ಮ್ಯಾಕಮಿಲನ್‌ರವರು ಬರೆಯುತ್ತಾರೆ. ಬ್ರಿಟಿಶರ ಸಾಮ್ರಾಜ್ಯ ಲೋಕದಲ್ಲಿ ಹಬ್ಬಿದೆ, ಅಲ್ಲೆಲ್ಲ ಅಂಕೆಯಿಡಲು ಬಾಂಬುಗಳನ್ನು ೩ ದಿನದಲ್ಲಿ ಯುದ್ಧ ವಿಮಾನು ಸಿದ್ಧವಾಗದಬೇಕು, ಇಲ್ಲವಿದ್ದರೆ ಸಂರಕ್ಷಿತತೆ ಇಲ್ಲ, ಎಂಬದಾಗಿ ಕ್ಯಾಪ್ಟನ್ ಮ್ಯಾಕಮಿಲನ್‌ರವರ ವಕೀಲಿ ರಾಷ್ಟ್ರಗಳೊಳಗೆ ಸಮಾಧಾನವಿದ್ದರೆ ಯುದ್ಧ ಸಾಹಿತ್ಯಗಳ ಸಂಗ್ರಹವೇಕೆ? ಈ ಕೂಟ ಪ್ರಶ್ನೆ ಎಷ್ಟೂ ವಿಚಾರ ಮಾಡಿದರೂ ಬಗೆಹರಿಯದು.

ಅಬಿಸೀನಿಯಾ ಪ್ರಕರಣ ನಾನು ಈ ಹಿಂದೆ ಬರೆದಷ್ಟು ಸುಲಭವಾದದ್ದಲ್ಲ. ಈ ಪ್ರಕರಣದ ಒಳಸೂತ್ರಗಳು ಬಲಾಢ್ಯವಿವೆ. ಜಗತ್ತಿನ ರಾಜಕಾರಣದಲ್ಲಿ ಅಬಿಸೀನಿಯಾ ದೇಶವು ಸೇರಿಕೊಂಡಿದೆ. ಕಳೆದ ಜನವರಿ ೭ನೇ ತಾರೀಖಿಗೆ ರೋಮ ಪಟ್ಟಣದಲ್ಲಿ ಇಟಲಿಗೂ ಫ್ರಾನ್ಸಕ್ಕೂ ನಡೆದ ತಹನಾಮೆಯಲ್ಲಿ ಈ ಪ್ರದೇಶದ ಉಲ್ಲೇಖವಿರುವದಂತೆ. ಮಹಾಯುದ್ಧ ಕಾಲದಲ್ಲಿ ಇಟಲಿಗೆ ವಚನ ಕೊಟ್ಟಂತೆ ಪ್ರದೇಶ ಕೊಡಲಾಗಲಿಲ್ಲ. ಅದಕ್ಕಾಗಿ ಫ್ರೆಂಚ ಸೋಮಾಲಿ ಪ್ರಾಂತದಲ್ಲಿ ಕೆಲ ಭಾಗವನ್ನು ಇಟಾಲಿಗೆ ಕೊಡಬೇಕೆಂದು ಕರಾರಾಗಿರುವದಂತೆ. ಫ್ರಾನ್ಸದೇಶದ ಆಫ್ರಿಕೆಯೊಳಗಿನ ಇತರ ವಸಾಹತುಗಳಲ್ಲಿಯೂ, ಕೆಲ ಪಾಲು ಕೊಡಲಾಗಿದೆ. ಆದರೆ ಈ ಪ್ರಕರಣದಲ್ಲಿ ಇನ್ನೂ ಇಬ್ಬರು ರಹಸ್ಯದ ಪಾಲುಗಾರರಿದ್ದಾರೆ. ಜಪಾನಿಯರೂ, ಜರ್ಮನ್‌ರೂ ಈ ಪಾಲುಗಾರರು. ಜಪಾನಿಯರು ಅಬಿಸೀನಿಯಾದಲ್ಲಿ ಹಿಂಚು ಪ್ರವೇಶ ಮಾಡಲು ಪ್ರಯತ್ನಪಡುತ್ತಿದ್ದಾರೆ. ಜಪಾನಿಯರ ಕಾರಸ್ಥಾನ ಇಟಾಲಿಗೆ ವಿರೋಧವಾದುದು. ಜರ್ಮನ್‌ರು ತಮ್ಮ ಪ್ರಾಬಲ್ಯವನ್ನು ಅಬಿಸೀನಿಯಾದಲ್ಲಿ ಪಸರಿಸುವದಕ್ಕಾಗಿ ಸದ್ದಿಲ್ಲದೆ ದುಡಿಯುತ್ತಿದ್ದಾರೆ. ಅಬಿಸೀನಿಯಾದಲ್ಲಿ ಆಡಿಸ ಅಬಾಬಾದವರು ಸ್ಥಾಪಿಸಿದ ರಾಷ್ಟ್ರೀಯ ವಾಚನಾಲಯಕ್ಕೆ ಹಿಟ್ಲರರ ಮುಖ್ಯ ಸಲ್ಲಾಗಾರರಾದ ಗೋಬೆಲ್‌ರವರು ಜರ್ಮನ್ ಕಲ್ಯಾಣ ವರ್ಣನೆಯುಳ್ಳ ೧೫೦೦೦ ಗ್ರಂಥಗಳನ್ನರ್ಪಿಸಿದರು. ಜರ್ಮನ್ ಪ್ರಜೆಗಳಿಗೆ ಈಗಿನ ರಾಜ್ಯಭಾರದಲ್ಲಿ ಪ್ರಾಪ್ತಿಯಾದ ಕಲ್ಯಾಣವನ್ನು ಅಬಿಸೀನಿಯಾದವರು ಗ್ರಹಿಸಿ ಜರ್ಮನಿಗೆ ತಮ್ಮಲ್ಲಿ ಮಮತೆಯಿಂದ ಬರಮಾಡಿಕೊಳ್ಳಬೇಕೆಂಬದೇ ಈ ಗ್ರಂಥಾರ್ಪಣದ ಉದ್ದೇಶ. ಜರ್ಮನ್ ಜಪಾನ ರಾಷ್ಟ್ರಗಳಿಗೂ ಇಟಾಲಿಗೂ ಅಬಿಸೀನಿಯಾ ಪ್ರಕರಣದಲ್ಲಿ ಗುದ್ದಾಟವಾಗಬಹುದೆಂದು ಸಾಮಾನ್ಯವಾದ ಗ್ರಹಿಕೆ. ಜಪಾನದ ಸೀಮೆ ದಿನೇ ದಿನೇ ಬೆಳೆಯುತ್ತಿದೆ. ವ್ಯಾಪಾರದ ಮಹತ್ವಾಕಾಂಕ್ಷೆಗೆ ಸೀಮೆಯೇ ಇಲ್ಲ. ಅತ್ಯಾಶೆಯಿಂದ ಜಪಾನಿಯರು ಗತಿಗೇಡಾಗದಿದ್ದರೆ ಸಾಕು.

ಜಪಾನಿಯರ ಕಾರಸ್ಥಾನವನ್ನು ಸಂಪೂರ್ಣವಾಗಿ ತಿಳಕೊಳ್ಳುವದು ಕಠಿಣ ಮಾತು. ಜಪಾನ ಸರಕಾರವು ಎಲ್ಲರಂತೆ ಗುಪ್ತವಾಗಿ ಯಾವತ್ತೂ ತಯಾರಿ ನಡಿಸುತ್ತಿದೆ. ಫ್ರೆಂಚ ದೇಶದ ನೌಕಾಧಿಪತಿಯೊಬ್ಬನು ಟೋಕಿಯೋ ಪಟ್ಟಣಕ್ಕೆ ಹೋಗಿ ಕೆಲ ಸ್ತ್ರೀಯರಿಗೆ ವಶ ಮಾಡಿಕೊಂಡು ಜಪಾನದೊಳಗಿನ ಕೆಲ ಸೈನ್ಯ ಠಾಣ್ಯಗಳಲ್ಲಿ ಸಂಚರಿಸಿ ಒಳಗುಟ್ಟನ್ನು ತಿಳಕೊಂಡು ಪಾರಾದನಂತೆ. ಟೋಕಿಯೋದೊಳಗಿನ 'ನಿಚಿ ನಿಚಿ' ಪತ್ರಿಕೆಯು ಸ್ತ್ರೀಯರ ಚಿತ್ರಗಳನ್ನೂ ಹೆಸರುಗಳನ್ನೂ ಪ್ರಕಟಿಸಿದೆ. ಫ್ರೆಂಚ ನೌಕಾಧಿಪತಿಯು ಈ ಸ್ತ್ರೀಯರಿಗೆ ಲಂಚ ಕೊಟ್ಟು ರಹಸ್ಯ ತಿಳಕೊಂಡನಂತೆ. ಯುದ್ಧ ಪ್ರವೃತ್ತಿ ಜಪಾನ ದೇಶದಲ್ಲಿ ಎಲ್ಲೆಲ್ಲಿಯೂ ಹರಡಿಕೊಂಡಿದೆ. ಓಸಾಕಾದೊಳಗಿನ ನಾವಿಕನೊಬ್ಬನು ದಿನಾ ಅರ್ಧ ಬಿಲ್ಲಿಯಂತೆ ಪಟ್ಟಿ ಕೂಡಿಸಿ ಜಪಾನಿನ ನೌಕಾದಲಕ್ಕೆ ಒಂದು ಹಡಗ ಕಟ್ಟಿಸಿಕೊಡುವ ಸಂಕಲ್ಪ ಮಾಡಿದ್ದಾನೆ. ಜಪಾನದವರು ಚೀನ ದೇಶವನ್ನು ಪಾದಾಕ್ರಾಂತ ಮಾಡಲು ಯಾವತ್ತೂ ತಯಾರಿ ನಡಿಸಿದ್ದಾರೆ. "ನಾವು ಶಾಂತತಾಭಂಗ ಮಾಡು

ದ್ವಿಗುಣವಾದ ಲಾಭವನ್ನು ಹೊಂದಿರಿ!

ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ"

ಮಕ್ಕಳ ಲಿವರ್ ಕಂಪ್ಲೈಂಟು (ಕಾಮಾಲೆ ವಗೈರೆ) ಮತ್ತು ಜ್ವರಗಳಿಗೆ

ಜಕ್ಕಿ ವೆಂಕಟರಮಣಯ್ಯನವರ

'ಲಿವರ್ ಕ್ಯೂರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನನ್ನ ಹೆಸರನ್ನು ಸರಿಯಾಗಿ ನೋಡಿ ತೆಗದುಕೊಳ್ಳಿರಿ!

ಹೆಚ್ಚಿನ ಮಾಹಿತಿಗೆ ಬರೆಯಿರಿ

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ. ಕ.)

ವವರಲ್ಲ. ಪರದೇಶದವರು ಅಂಜಿಕೆಪಡುವ ಕಾರಣವಿಲ್ಲ ಶಾಂತತಾಭಂಗ ಮಾಡುವವರು ಚೀನ ದೇಶದವರು ನಮಗೆ ಆಗದವರೊಡನೆ ಇವರು ಗೆಳೆತನ ಬೆಳೆಸುತ್ತಾರೆ, ಮತ್ತು ನಮಗೆ ಉಪದ್ರವ ಕೊಡುತ್ತಾರೆ. ಪೂರ್ವ ಪ್ರದೇಶದಲ್ಲಿ ಶಾಂತತೆಯನ್ನು ಪಾಲಿಸುವದಕ್ಕಾಗಿಯೇ ನಾವು ಈ ತನಕ ಹೋರಾಡಿದ್ದೇವೆ, ನ್ಯಾಯಪಕ್ಷಪಾತಿಗಳು ನಾವು" ಎಂಬದಾಗಿ ಜಪಾನದ ಯುದ್ಧ ಇಲಾಖೆಯ ಪ್ರಧಾನರಾದ ಸೇನಾಪತಿ ಹಯಾಶಿಯವರು ಚೀನ ದೇಶದ ಮೇಲೆ ಹಾರಿಬೀಳುತ್ತಾರೆ ಕಳ್ಳನೆದ್ದು ಕೋತವಾಲನಿಗೆ ಹೊಡೆಯುವ ಪ್ರಸಂಗಕ್ಕಿಂತ ಇದು ಕಾರಣವಾಯಿತು "೧೯೩೫ನೇ ಇಸವಿಯಲ್ಲಿ ಚೀನ ದೇಶದ ಮೇಲೆ ಗಂಡಾಂತರವಿದೆ ೧೯೩೫ನೇ ಇಸವಿಯಲ್ಲಿ ಯುದ್ಧವಾಗುವದು ಚೀನಿಯರು ಯುದ್ಧದಲ್ಲಿ ಸೇರಲಿ ಬಿಡಲಿ ರಣಭೂಮಿಯು ಚೀನ ದೇಶದಲ್ಲಿಯೇ ಸ್ಥಾಪನೆಯಾಗುವದು ರುಶ್ಯದೂ, ಜಪಾನಿಯರೂ ಹೋರಾಡುವದು ಜಪಾನಿಯರು ಮುಂಚುಕೋ ಮಾರ್ಗವಾಗಿ ರುಶ್ಯರ ಪ್ರದೇಶವನ್ನು ಪ್ರವೇಶಿಸಲಾರಂಭಿಸಿದ್ದಾರೆ ರಶ್ಯರು ಜಪಾನಿಯರಿಗೆ ಇದಿರಾಗುವರು ಇದರೊಳಗೆ ಚೀನಿಯರು ಜಪಾನಿಯರಿಗೆ ಪಕ್ಷಪಾತಿಯಾಗಿ ಸೇರಿದರೂ ಕಷ್ಟ, ಸೇರದಿದ್ದರೂ ಕಷ್ಟ" ಈ ಪ್ರಕಾರ ೧೯೩೫ನೇ ವರ್ಷಾರಂಭ ಕಾಲದಲ್ಲಿ ಚೀನೀ ವರ್ತಮಾನ ಪತ್ರಗಳು ಭೀತಿಗೊಂಡು ಬರೆಯುತ್ತಿವೆ ಜಪಾನಿಯರು ಕಾಲುಕೆದರಿ ಜಗಳ ಹುಡುಕುತ್ತಾರಾಗಿ ಈ ಪತ್ರಿಕೆಗಳ ಅಂಬೋಣ ಜಪಾನಿಯರ ಹೆಬ್ಬಯಕೆಗೆ ಸೀಮೆಯೇ ಇಲ್ಲ ಚೀನದೇಶಕ್ಕೊಪ್ಪಿದ ಮಂಚೂರಿಯಾ ಪ್ರದೇಶವನ್ನು ಜಪಾನಿಯರು ತಿಂದರು. ಆ ಮೇಲೆ 'ಚ್ಯಾನೀಸ ಈಸ್ಟರ್ನ ರೇಲ್ವೆ' ಉಗಿಬಂಡಿಯ ವಿವಾದ ಉಂಟಾಯಿತು. ರುಶ್ಯರು ಜಪಾನದ ಉಪಟಳ ಬೇಡವೆಂದು ಅದನ್ನು ಅವರಿಗೆ ಮಾರಿದರು. ಈಗ ಆ ಉಗಿಬಂಡಿಯ ಪರ್ಯವಸಾನ ಸೈಬೇರಿಯಾ ಪ್ರದೇಶದಲ್ಲಿ ಜಪಾನವು ಆಕ್ರಮಣ ಮಾಡಲಾರಂಭಿಸಿದೆ

ವಾಶಿಂಗ್ಟನ್ ತಹನಾಮೆಯನ್ನು ಧಿಕ್ಕರಿಸಿದ್ದರಿಂದ ಅಮೇರಿಕೆಯವರೂ ಜಪಾನ ದೇಶದ ಕಿಡಿಗೇಡಿತನ ದಬ್ಬುವದಕ್ಕಾಗಿ ತಮ್ಮ ತಯಾರಿ ನಡೆಸುತ್ತಿದ್ದಾರೆ. ವ್ಯಾಪಾರದ ಸವ ಮಾಡಿ ನಿಕಾರಾಗ್ವಾ ಪಟ್ಟಣದ ಬಳಿ ೧೭೦ ಮೈಲು ಉದ್ದವಾದ ಕಾಲುವೆಯನ್ನು ಅಗೆದು ದೊಡ್ಡ ದೊಡ್ಡ ಹಡಗಗಳ ಓಡಾಟಕ್ಕೆ ಅನುಕೂಲತೆ ಮಾಡಿಕೊಳ್ಳುವ ವಿಚಾರ ನಡೆದಿದೆ ಈ ಕಾಲುವೆಗೆ ೧೪ ಕೋಟಿ ೪೭ ಲಕ್ಷ ಪವನು ಖರ್ಚು ಬಂದೀತು ಈ ಕಾಲುವೆಯಾದ್ದಲ್ಲಿ ಅಟ್ಲಾಂಟಿಕ ಮಹಾಸಾಗರದೊಳಗಿಂದ ದೊಡ್ಡ ಹಡುಗುಪಡೆಗಳನ್ನು ಪ್ಯಾಸಿಫಿಕ ಮಹಾಸಾಗರದಲ್ಲೊಯ್ಯಲು ಅನುಕೂಲವಾಗುತ್ತದೆ. ಈಗ ಪಾನಾಮಾ ಕಾಲುವೆಯಿದೆ. ಆ ಕಾಲುವೆಯೊಳಗಿಂದ ಹಡಗುಪಡೆಗಳು ಓಡ್ಯಾಡುತ್ತಿವೆ ಆದರೆ ಅದರೊಳಗಿಂದ ದೊಡ್ಡ ದೊಡ್ಡ ಹಡಗುಗಳನ್ನು ಒಯ್ಯಲು ಅನುಕೂಲತೆ ಇಲ್ಲವಾಗಿ ನೌಕಾ ಮಂಡಳದ ಅಧ್ಯಕ್ಷರಾದ ಕಾರ್ಲ ವಿನ್ಸನ್‌ರವರ ಅಂಬೋಣ. ಈ ಕಾಲುವೆಯನ್ನು ಕಟ್ಟಿಸಿದರೆ ಅಮೇರಿಕೆಯವರಿಗೆ ಅಟ್ಲಾಂಟಿಕ ಮಹಾಸಾಗರದೊಳಗಿಂದ ತಮ್ಮ ಹಡಗುಪಡೆಗಳನ್ನು ಪ್ಯಾಸಿಫಿಕ ಮಹಾಸಾಗರವಲ್ಲೊಯ್ದು ಜಪಾನದ ಮೇಲೆ ಸಾಗಿಹೋಗಲು ಅನುಕೂಲತೆಯಾಗುತ್ತದೆ " ಜಪಾನಕ್ಕೆ ದಬ್ಬುವದಕ್ಕಾಗಿಯೇ ಅಮೇರಿಕೆಯವರು ಈ ಕಾಲುವೆಯನ್ನು ಕಡಿಸಲುದ್ಯುಕ್ತರಾಗಿದ್ದಾರೆ" ಹೀಗೆ ಜಪಾನ ಸರಕಾರದ ಪರರಾಷ್ಟ್ರೀಯ ಇಲಾಖೆಯವರು ಪ್ರಕಟಿಸುತ್ತಾರೆ ಅಮೇರಿಕೆಯಲ್ಲಿ ಜಪಾನಿಯರ ದ್ವೇಷ ಬೆಳೆಯಲಾರಂಭಿಸಿದೆ. ವಾಶಿಂಗ್ಟನ್ ತಹನಾಮೆಯನ್ನು ರದ್ದುಪಡಿಸಿ ಜಪಾನಿಯರು ದೊಡ್ಡ ಹಡಗುಪಡೆಗಳನ್ನು ಕಟ್ಟಿಸಿ ಪ್ರಬಲರಾದ್ದರಿಂದ ಅಮೇರಿಕೆಯವರು ತಮ್ಮ ರಾಜ್ಯಧೋರಣವನ್ನು ಪುನರಾಲೋಚಿಸುವ ಪ್ರಸಂಗ ಒಂದಿರುವದಾಗಿ ನ್ಯೂಯೋರ್ಕದೊಳಗಿನ 'ಹೆರೊಲ್ಡ ಟ್ರಿಬ್ಯೂನ' ಪತ್ರಿಕೆಯು ಅಭಿಪ್ರಾಯಪಡುತ್ತದೆ. ಇದೇ ಬರುವ ವಸಂತ ಋತುವಿನಲ್ಲಿ ಪ್ಯಾಸಿಫಿಕ್ ಮಹಾಸಾಗರದೊಳಗಿನ ೫೦ ಲಕ್ಷ ಚೌ. ಕಿ. ಮೈಲು ಪ್ರದೇಶದಲ್ಲಿ ಅಂದರೆ ಕರ್ಕವೃತ್ತ, ಸೈಬೇರಿಯಾ ದೇಶದೊಳಗಿನ ಎಲ್ಯೂಶಿಯನ್ ನಡುಗಡ್ಡೆ, ಕೆಲಿಫೋರ್ನಿಯಾ, ಮಿಡ್ವೆ ನಡುಗಡ್ಡೆ ಈ ಚತುಸ್ಸೀಮೆಯೊಳಗಿನ ಪ್ರದೇಶದಲ್ಲಿ ಅಭೂತಪೂರ್ವವಾದ ನೌಕಾದಲದ ತಾಲೀಮುಗಳು ನಡೆಯಲಿಕ್ಕಿವೆ ಹಡಗುಪಡೆಗಳು ಶತ್ರುಗಳ ಮೇಲೆ ಸಾಗಿಹೋಗುವಬಗೆ ಹೇಗೆ? ಅವುಗಳನ್ನು ತಪ್ಪಿಸಿಕೊಳ್ಳುವ ಬಗೆಹೇಗೆ? ಆತ್ಮರಕ್ಷಣೆ ಮಾಡಿಕೊಂಡು ಶತ್ರುವಿನಾಶ ಮಾಡುವ ಬಗೆ ಹೇಗೆ? ಎಂಬ ನೌಕಾ ನಾಟಕವೆಲ್ಲ ಈ ಪ್ರದೇಶದಲ್ಲಿ ನಡೆಯಲಿಕ್ಕಿದೆ. " ಅಮೇರಿಕೆಯ ನೌಕಾದಲದ ಇತಿಹಾಸದಲ್ಲಿ ಇಷ್ಟು ಪ್ರಚಂಡ ತಾಲೀಮು ಹಿಂದೆಂದೂ ಆಗಿಲ್ಲವಾಗಿ ಎಡ್ಮಿರಲ್ ಜೋಸೆಫ ರೀವ್ಸರವರು ಉದ್ಗರಿಸುತ್ತಾರೆ ಅಮೇರಿಕೆಯೊಳಗಿನ ಯಾವತ್ತೂ ಹಡಗುಪಡೆಗಳು ಈ ಪ್ರದೇಶದಲ್ಲಿ ಒಕ್ಕಟ್ಟಾಗುವವು ಈ ನೌಕಾದಲದ ನಾಟಕದ ರಂಗಭೂಮಿ ಪ್ಯಾಸಿಫಿಕ್ ಮಹಾಸಾಗರ ಸಾಮಾನ್ಯವಾಗಿ ಜಪಾನ-ಅಮೇರಿಕೆಯ ನಡುವಿನ ಪ್ರದೇಶ. ಈ ತಾಲೀಮು ಕೆಲ ತಿಂಗಳ ತನಕ ನಡೆಯುವದಂತೆ ಜಪಾನದ ಸಮೀಪದನೇ ನೌಕಾದಲದ ಪ್ರದರ್ಶನವಾಗಿದ್ದದರಿಂದ ಜಪಾನ ಸರಕಾರಕ್ಕೆ ಮತ್ತೂ ಸಿಟ್ಟು ಬಂದೀತು ಅಮೇರಿಕೆಯವರಿಗೂ ಜಪಾನಿಯವರಿಗೂ ತೀಕ್ಷ್ಣ ಮತಭೇದ ಉಂಟಾಗುವದು ಪ್ಯಾಸಿಫಿಕ್ ಮಹಾಸಾಗರದೊಳಗೆ ಜಪಾನ-ಅಮೇರಿಕಾ ದೇಶಗಳು ಬಡಿದಾಡಿಕೊಳ್ಳುವವೇನೆಂಬದೊಂದು ಭೀತಿಯುಂಟಾಗುತ್ತದೆ ಈ ಧೋರಣವನ್ನು ಬ್ರಿಟಿಶರು ಮುಂದಾಗಿಯೇ ಎಣಿಸಿ ಸಿಂಗಾಪುರದಲ್ಲಿ ಪ್ರಚಂಡ ಕೋಟೆ-ಕೊತ್ತಳಗಳನ್ನು ನಿರ್ಮಿಸಿದ್ದಾರಾಗಿ 'ನೋ-ಫ್ರಂಟಿಯರನ್ಯೂಸ ಏಜನ್ಸಿ' ಎಂಬ ವಾರ್ತಾವಾಹಕರ ಅಂಬೋಣ ಸಿಂಗಾಪುರದಲ್ಲಿ ದಿನಾ ಹಡಗ ತುಂಬ ಮದ್ದುಗುಂಡು ಬರುತ್ತದೆ, ವಿಮಾನುಗಳ ಸಾಮಾನು ಬರುತ್ತದೆ ಇಲ್ಲಿರುವ ಬ್ರಿಟಿಶ ನಾಗರಿಕರೆಲ್ಲ ಸೈನ್ಯಶಿಕ್ಷಣ ಹೊಂದಲೇಬೇಕು ಈ ಪ್ರದೇಶದಲ್ಲಿಯೂ ಗುಪ್ತವಾಗಿ ಜಪಾನಿಯರು ಕಾರಸ್ಥಾನ ನಡೆಸುತ್ತಿದ್ದಾರೆ ಸಿಂಗಾಪುರವು ಒಂದು ನಡುಗಡ್ಡೆ ಮಲಾಯಾ ದ್ವೀಪಕಲ್ಪಕ್ಕೂ ಸಿಂಗಾಪುರಕ್ಕೂ ಅಡ್ಡಾಡಲು ಮಧ್ಯದಲ್ಲಿ ಒಂದು ಸಂಕವಿದೆ. ಸಂಕದ ಆಚೆ ಜೊಹೋರ ಸಂಸ್ಥಾನವಿದೆ ಇಲ್ಲಿ ಸುಲ್ತಾನರಿದ್ದಾರೆ ಈ ಸುಲ್ತಾನರ ಬಳಿ ಅಗಣಿತ, ಅಪರಿಮಿತ ದ್ರವ್ಯವಿರುತ್ತದಂತೆ ಇವರು ಸ್ವೇಚ್ಛಾಚಾರಿಗಳು ಇತ್ತಲಾಗಿ ಇವರಿಗೆ ಜಪಾನಿ ಸ್ತ್ರೀಯರ ಮೋಹ ಜಪಾನಿ ಸ್ತ್ರೀಯರೊಡನೆ 'ಬೋಲ್' ಕುಣಿತವನ್ನಾಡುತ್ತಾರೆ ಈ ಮೋಹಪಾಶದಲ್ಲಿ ಸಿಲುಕಿ ಅನೇಕ ಅನುಕೂಲತೆಗಳನ್ನು ತಮ್ಮ ರಾಜ್ಯದಲ್ಲಿ ಜಪಾನಿಯರಿಗೆ ಸುಲ್ತಾನರು ಅನುಗ್ರಹಿಸಿದ್ದಾರೆ ಕಬ್ಬಿಣ ಗಣಿಯ ಹಕ್ಕನ್ನೂ ಕೊಟ್ಟಿರುತ್ತಾರೆ ಈ ಗಣಿಗಳಿಗೂ ಸಿಂಗಾಪುರಕ್ಕೂ ಒಂದು ಕೂಗಳತೆ. ಜಪಾನಿಯರು ಗಣಿಯೊಳಗಿನ ಕಬ್ಬಿಣ ತುಂಬಿ ೩೪ ಹಡಗಗಳನ್ನು ಸಿಂಗಾಪುರದ ಒಳ ಹಡಗ ಓಡಾಡುವ ಸಮುದ್ರದ ಭಾಗದಲ್ಲಿ ಜಲಸಮಾಧಿ ಕೊಟ್ಟರೆ ಬ್ರಿಟಿಶ ಹಡಗುಪಡೆಗಳು ಸಮುದ್ರದೊಳಗಿಂದ ಸಿಂದಾಡಲು ಸಾಧ್ಯ! ಸಿಂಗಾಪುರದಲ್ಲಿಟ್ಟ ಸಮಸ್ತ ಯುದ್ಧಸಾಮಗ್ರಿ ಇದ್ದಲ್ಲಿ ಇರುವದೇ ಸಿಂಗಾಪುರದಿಂದ ಜೊಹೋರಕ್ಕೆ ಹೋಗುವ ಸಂಕದ ಬಳಿಯಲ್ಲಿಯೇ ಒಬ್ಬ ಜಪಾನಿ ಗೃಹಸ್ಥರಿದ್ದಾರೆ ತೋರಗಾಣಿಕೆಗೆ ಕೋಳಿ ಸಾಕುತ್ತಾರೆ ಈತನ ವಿಲಾಸ ನೋಡಿದರೆ ದಿಕ್ಕಿಲ್ಲ. ಕೋಳಿಗಳು ಚಿನ್ನದ ತತ್ತಿಗಳನ್ನೇ ಇಟ್ಟು ಈ ಮಹಾರಾಯನಿಗೆ ಸಾಕುತ್ತವೇನೆಂದು ಎಲ್ಲರೂ ಪ್ರಶ್ನಿಸುತ್ತಾರೆ ಈತನು ಜಪಾನ ಸರಕಾರದ ಗುಪ್ತಚಾರನಿರಬೇಕು. ಯುದ್ಧವೆಸಗಿದ್ದಲ್ಲಿ ಸಂಕವನ್ನು ಪಕ್ಕನೆ ಗುಂಡುಹಾಕಿ ಹಾರಿಸುವ ಉಪಾಯದಲ್ಲಿರಬೇಕು ಎಂಬದಾಗಿ 'ನೋ-ಫ್ರಂಟಿಯರ ನ್ಯೂಸ ಸರ್ವಿಸ' ವಾರ್ತಾವಾಹಕರ ಊಹೆ. ಜಪಾನಿಯರ ಕಾರಸ್ಥಾನ ಕೂಲಂಕಷವಾಗಿ ನನ್ನಿಂದ ಹೇಳಬರದು ನಾನು ಕೈಬಿಟ್ಟೆ

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ಕರ್ನಾಟಕದ ಪ್ರತಿನಿಧಿಗಳು

ಕೆಲವು ದಿವಸಗಳ ಹಿಂದೆ ಮಾಡಿದ ಚುನಾವಣೆಯಲ್ಲಿ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ಕರ್ನಾಟಕದಿಂದ ಈ ಕೆಳಗೆ ಕಾಣಿಸಿದ ಗೃಹಸ್ಥರು ಆರಿಸಿ ಬಂದಿರುತ್ತಾರೆ:-

೧ ಶ್ರೀ| ರಂಗರಾವ ದಿವಾಕರ,
೨ ಶ್ರೀ| ಗಂಗಾಧರರಾವ ದೇಶಪಾಂಡೇ,
೩ ಶ್ರೀ| ವೀರನಗೌಡಾ ಪಾಟೀಲ,
೪ ಡಾ| ಎನ್ ಎಸ್. ಹರ್ಡೀಕರ,
೫ ಶ್ರೀ| ಗುದ್ಲೆಪ್ಪಾ ಹಳ್ಳೀಕೇರಿ,
೬ ಶ್ರೀ| ಸಂಪಿಗೆ ವೆಂಕಟಪತಯ್ಯಾ,
೭ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ.

ಮಂಗಳೂರ ಶ್ರೀ ಅಂಬಾಪ್ರಸಾದಿಕ ಕರ್ನಾಟಕ ಸಂಗೀತ ನಾಟಕ ಸಂಘದವರು
ಕುಸುಮಾ ಬಿಲ್ಡಿಂಗಿನಲ್ಲಿ ಇಲೆಕ್ಟ್ರಿಕ್ ದೀಪಗಳಿಂದ ಅಲಂಕೃತವಾದ ಅಂಬಾ ಥಿಯೇಟರಿನಲ್ಲಿ
ತಾ. 22-1-35ನೇ ಮಂಗಳವಾರ
ಶ್ರೀಕೃಷ್ಣಲೀಲೆ,
ತಾ. 24-1-35ನೇ ಗುರುವಾರ
ರಾಯರ ಸೊಸೆ,
ತಾ. 26-1-35ನೇ ಶನಿವಾರ
ಆಜನ್ಮಕುಮಾರಿ,
ಅಥವಾ ಶ್ ಚಂದ್ರರಾವ್ ಮೋಹರೆ.
ಎಂಬ ಲೋಕಪ್ರಿಯ ನಾಟಕಗಳನ್ನಾಡಿ ಜನಮನರಂಜನಗೊಳಿಸುವರು!! ದೇಶಾಭಿಮಾನಿಗಳು ಬಂದು ಪ್ರೋತ್ಸಾಹಿಸಬೇಕಾಗಿ ವಿನಂತಿ
ವ್ಯವಸ್ಥಾಪಕರು,- ಬಿ ಶ್ಯಾಮರಾವ್.

ಕಾನಡಾವೃತ್ತ.

೨೧-೧ ಭಾವ ಸಂ| ಪುಷ್ಯ ಬ| ೩ಗೆ ಸೋಮವಾರ

ಗ್ರಾಮ್ಯಸ್ಫೋಟ !

ಬದಲುತ್ತಿರುವ ಸರಕಾರಿ ಧೋರಣ

ಹಿಂದುಸ್ಥಾನ ಸರಕಾರವು ಪ್ರಾಂತಿಕ ಸರಕಾರಗಳಿಗೆ ಹೊರಡಿಸಿದ ಗುಪ್ತ ಸರ್ಕ್ಯುಲರನ್ನು ಓದಿ ನಮಗೆ ಒಂದು ಪ್ರಕಾರದಿಂದ ಬಹಳ ಸಂತೋಷವಾಯಿತು. ಸರಕಾರಿ ಅಧಿಕಾರಿಗಳಿಗೆ ಗ್ರಾಮಾಂತರಗಳಲ್ಲಿ ವಾಸಿಸುವ ಒಡಹುಟ್ಟಿರ ಬಗ್ಗೆ ಪರಿವೆ ಮ ಅವಶ್ಯಕತೆ ತೋರಿದ್ದೇನು ಸಾಮಾನ್ಯ ಕೆಲಸವಲ್ಲ. ಈಗಿನ ರಾಜ್ಯಭಾರದಲ್ಲಿ ... ಗ್ರಾಮದವರ ಕಡೆ ಕಿವಿಗೊಡ ... ಮಹಾತ್ಮರ ಗ್ರಾಮದವರ ಕಲ್ಯಾಣವನ್ನು ಬಯಸಿ ... ಜನಗಳ ಈಚೆ ... ದ್ವಾರೆ ಸರಕಾರಕ್ಕೆ ... ದದ್ದು ನಿಜವಾಗಿಯೂ ಅಭಿನಂದನೀಯ ... ರದ ಮನಸ್ಥಿತಿಯಲ್ಲಿ ಇಷ್ಟು ... ಗಿಸಿತೆಂದ ರಾಷ್ಟ್ರೀಯ ಸಭೆಯು ... ವೇಶನವು ... ಗ್ರಾಮೋದ್ಧಾರದ ಇತಿಹಾಸದಲ್ಲಿ ... ಣೀಯವಾಗಿರುವದು.

ಜಿಲ್ಹಾಧಿಕಾರಿಗಳು ಗ್ರಾಮಾಂತರಗಳಲ್ಲಿ ... ಅಲ್ಲಿಯ ಪರಿಸ್ಥಿತಿಯನ್ನು ... ಹೊರತಿಸಿದ ... ಜಿಲ್ಹಾಧಿಕಾರಿಗ ... ಯಿಂದ ಮನ್ನಿಸಬೇಕಾಗಿ ನಾವು ಸೂಚಿಸುತ್ತೇವೆ. ದೀರ್ಘಾಲೋಚನೆ ಮಾಡಿದರೆ, ... ಗ್ರಾಮನಿವಾಸಿಗಳ ಸುಖಸಮೃದ್ಧಿಯು ... ಅಧಿಕಾರಿಗಳ ದುರ್ಲಕ್ಷದಿಂದ ಕ್ರಮವಾಗಿ ಅವನತಿ ಹೊಂದಿದವು. ದಿನೇ ದಿನೇ ಲೋಕಸಂಖ್ಯೆ ಕುಗ್ಗಿತು, ಭೂಮಿಗಳು ಬಂಜರು ಬಿದ್ದವು, ದನಕರು ಸತ್ತುಹೋದವು. ಇದರಿಂದ ಗ್ರಾಮದವರಿಗೆ ಹೊಟ್ಟೆ ಹೊರಕೊಳ್ಳಲಾಗದೆ ಪಟ್ಟಣಗಳ ಕಡೆ ದೇಶಾಂತರ ಮಾಡಬೇಕಾಯಿತು. ಪಟ್ಟಣಗಳಲ್ಲಿ ಇವರಿಗೊದಗುವ ಕಷ್ಟಗಳನ್ನು ಹೇಳತೀರದು. ಮಹಾತ್ಮರು ಈ ಅವಸ್ಥೆಯನ್ನು ಹೋಗಲಾಡಿಸಲು ಮೊಟ್ಟಮೊದಲು ಖಾದಿಯ ಪ್ರಚಾರ ಮಾಡಿದರು. ಅದೇ ಧೋರಣದಿಂದ ಅಖಿಲ ಭಾರತೀಯ ಗ್ರಾಮೋದ್ಯೋಗಿಕ ಸಂಘವನ್ನು ಸ್ಥಾಪಿಸಿದ್ದಾರೆ. ಸರಕಾರವು ಈ ಉದ್ಧಾರ ಕಾರ್ಯದಲ್ಲಿ ಮುಂದಾಗಿ ಬಂದರೆ, ಮಹಾತ್ಮರಿಗೆ ಸಂತೋಷ, ಸಮಸ್ತರಿಗೂ ಕಲ್ಯಾಣ. ರಾಷ್ಟ್ರೀಯ ಸಭೆಯವರೂ ಸರಕಾರವೂ ಒಕ್ಕಟ್ಟಾಗಿ ಗ್ರಾಮೋದ್ಧಾರ ಕಾರ್ಯದಲ್ಲಿ ದುಡಿಯಹತ್ತಿದರೆ, ಮಹಾತ್ಮರು ಉದ್ಗರಿಸಿದಂತೆ, ಹಿಂದಭೂಮಿಯಲ್ಲಿ ಹೇಳ ಕೇಳಲಾಗದ ಚಮತ್ಕಾರ ತೋರಿಬಂದೀತು. ದಾರಿದ್ರ್ಯಸಂಕಟದಲ್ಲಿ ತೊಳಲಿ ಬಳಲುವ ಹಿಂದನಿವಾಸಿಗಳು ಸಂಪತ್ತಿನ ಶಿಖರವನ್ನೇರಿ ಸಂಭ್ರಮದಿಂದ ಲೋಕದಲ್ಲಿ ಮೆರೆಯುವರು. ಆದರೆ ಮಹಾತ್ಮರು ನುಡಿದಂತೆ ಹಿಂದುಸ್ಥಾನ ಸರಕಾರವು ಸತ್ಸಂಕಲ್ಪದಿಂದ ಸದಿಚ್ಛೆಯಿಂದ ಕಲ್ಯಾಣ ಕಾರ್ಯದಲ್ಲಿ ಮುಂದಾಗಬೇಕು. ಆ ಪ್ರವೃತ್ತಿಯ ಅಭಾವ ನೋಡಿ ಸಮಸ್ತರಿಗೂ ವ್ಯಸನ.

ಸರಕಾರಕ್ಕೆ ಮಹಾತ್ಮರ ಮೇಲೆ, ಗ್ರಾಮೋದ್ಯೋಗಿಕ ಸಂಘದ ಮೇಲೆ ಅನಾವಶ್ಯಕವಾದ ಸಂದೇಹ. ಆತ್ಮಗೌರವಸ್ಥಾಪನೆಗಾಗಿ, ಮುಂದಿನ ಸತ್ಯಾಗ್ರಹದ ಪೂರ್ವತಯಾರಿಗೆಂದು, ಮಹಾತ್ಮರಿಂದ ಗ್ರಾಮೋದ್ಯೋಗಿಕ ಸಂಘದ ಸ್ಥಾಪನೆಯಾಗಿದೆ" ಎಂಬವಾಗಿ ಸರಕಾರದ ಗ್ರಹಿಕೆ. ಮಹಾತ್ಮರು ಸತ್ಯಸಂಧರು, ನಿಸ್ಪೃಹರು, ನಿಷ್ಕಪಟರು, ಈಗಿನ ರಾಜಕಾರಣದೊಳಗಿನ ಸೂಕ್ಷ್ಮತನವನ್ನೇ ಅವರು ಅರಿಯರು. ... ಹಿಂದುಸ್ಥಾನದೊಳಗಿನ ಗ್ರಾಮಗಳನ್ನು ಉದ್ಧರಿಸುವ ಯೋಜನೆ ಇಷ್ಟವಾದುದೆಂದು ಮಹಾತ್ಮರು ... ರಾಷ್ಟ್ರೀಯ ಸಭೆಯ ವಿಶೇಷ ಅಧಿವೇಶನ ... ಸಮಸ್ತರ ಸಹಕಾರದ ... ಈ ಸಂಘವನ್ನು ಅವರು ಕಲ್ಪಿಸಿದ್ದಾರೆ. ... ಗುಪ್ತ ಕಾರಸ್ಥಾನವೇನಿಲ್ಲ. ಹೀಗಿದ್ದು ಸರಕಾರವು ಸತ್ಯಾಗ್ರಹದ ಪೂರ್ವರಂಗವೆಂದು ಎಣಿಸಿ, ... ದ್ವೇಷಿಸುವದು, ಸಂಘದ ಪುರಸ್ಕರ್ತರಿಗೆ ... ಹಿಡಿದು ಕಾರಾಗೃಹಕ್ಕಟ್ಟಬೇಕೆಂದು ಪ್ರಾಂತಿಕ ಸರಕಾರಗಳಿಗೂ ಜಿಲ್ಹಾಧಿಕಾರಿಗಳಿಗೂ ... ಮಾಡಿ, ದಿನ ಏರಿಗಿರುವ ಸ್ವತಂತ್ರ ಅಧಿಕಾರವನ್ನು ... ಅಪಹರಿಸಲುದ್ಯುಕ್ತವಾಗುವದು ... ರಾಜ್ಯಾಧಿಕಾರಿಗಳೇ ಪ್ರಜೆಗಳ ... ದಣಿಸುವ ಸಂಕಲ್ಪ ಮಾಡಿದರೆ ಪ್ರಜೆಗಳು ಮೊರೆಹೊಕ್ಕುವದ್ಯಾರಿಗೆ? ಸರಕಾರಕ್ಕೆ ... ಬೇಕೆಂದು ... ತೋರುವದಿಂದಲೇ ... ಸರಕಾರವು ... ಹಿಂದಿನ ... ದ್ವೇಷ ಸರಕಾರಕ್ಕೆ ... ಪಡಿಸುವ ಆಲೋಚನ ಹಿಡಿಯದೆ ಲೋಕೋದ್ಧಾರ ಮಾಡುವ ಸದ್ಭಾವನೆಯನ್ನಾದರೂ ಸರಕಾರವು ವಿವರಿಸಿದ್ದರೆ ಅದನ್ನಾದರೂ ಆಲೋಚಿಸಬಹುದಿತ್ತು. ಇಂಥ ಸಂಶಯ ಪ್ರವೃತ್ತಿಯಿಂದ ಅಧಿಕಾರಿಗಳಿಗಾಗಲಿ ಪ್ರಜೆಗಳಿಗಾಗಲಿ ಕ್ಷೇಮವಾಗಲಾರದು. ಈ ಪ್ರವೃತ್ತಿಯನ್ನು ಹಿಂದುಸ್ಥಾನ ಸರಕಾರವು ತ್ಯಜಿಸಿ ಗ್ರಾಮೋದ್ಧಾರ ಕಾರ್ಯದಲ್ಲಿ ಸಹಕಾರ ಮಾಡಬೇಕಾಗಿ ಕಳಕಳಿಪೂರ್ವಕ ವಿನಂತಿ.

ರಾಷ್ಟ್ರೀಯ ಸಭೆಯನ್ನು ಪುನಃ ಕಟ್ಟುವದರಲ್ಲಿಯೂ ಮಹಾತ್ಮರ ದೃಷ್ಟಿ ಗ್ರಾಮೋದ್ಧಾರದ ಮೇಲೆಯೇ ಹೊರತು ಸತ್ಯಾಗ್ರಹದ ಮೇಲಲ್ಲ. ರಾಷ್ಟ್ರೀಯ ಸಭೆಯಲ್ಲಿ ಹೆಚ್ಚುಹೆಚ್ಚಾಗಿ ಗ್ರಾಮ ಪ್ರತಿನಿಧಿಗಳು ಸೇರಿದರೆ ಸರಕಾರಕ್ಕೆ ಗ್ರಾಮದ ಅಂತರಂಗ ಗ್ರಾಮಾಂತರಗಳಲ್ಲಿ ವಾಸಿಸುವ ... ಪ್ರತಿನಿಧಿಗಳಿಂದಲೇ ಸ್ಪಷ್ಟವಾಗುವದು. ಸರಕಾರವು ಕೈಕೊಳ್ಳಬಹುದಾದ ರಾಜ್ಯಸುಧಾರಣೆ, ಈ ತನಕ ಪುರಸ್ಕರಿಸಿದ ಕಲ್ಯಾಣ ಯೋಜನೆ ಇವುಗಳ ವಿಚಾರವು ಗ್ರಾಮದವರ ದೃಷ್ಟಿಯಿಂದಲೇ ನಡೆದು ಸರಕಾರಕ್ಕೆ ರಾಜ್ಯಧೋರಣದಲ್ಲಿ ಅವಶ್ಯವುಳ್ಳ ತಿದ್ದುಪಾಟುಗಳನ್ನು ಕೈಕೊಳ್ಳಲು ಅನಕೂಲವಾಗಬೇಕೆಂದು ಮಹಾತ್ಮರು ರಾಷ್ಟ್ರೀಯ ಸಭೆಯ ಘಟನೆಯಲ್ಲಿ ತಿದ್ದುಪಾಟುಗಳನ್ನು ಕಲ್ಪಿಸಿದರು. ಬ್ರಿಟಿಶರು ಲೋಕಮತವನ್ನು ಮನ್ನಿಸಿ ನಡಕೊಳ್ಳುವ ಜನಾಂಗದವರು. ಲೋಕಮತದ ಪ್ರವಾಹವು ಅವರಿಗೆ ಸರಿಯಾಗಿ ತಿಳಿದರೆ, ಅದಕ್ಕನುವಾಗಿ ನಡಕೊಳ್ಳಲು ಅವರು ಯಾವಾಗಲೂ ಸಿದ್ಧರೇ. ಬ್ರಿಟಿಶರ ಪರಂಪರೆಯೇ ಹಾಗೆ. ರಾಷ್ಟ್ರೀಯ ಸಭೆಯು ಲೋಕಮತದ ದರ್ಶಕವೇನೋ ನಿಜ. ಆದರೆ ದೇಶತುಂಬ ಇರುವ ಗ್ರಾಮಗಳ ಪ್ರತಿನಿಧಿಗಳು ರಾಷ್ಟ್ರೀಯ ಸಭೆಯಲ್ಲಿ ಇಲ್ಲದ್ದರಿಂದ ರಾಷ್ಟ್ರೀಯ ಸಭೆಯೊಳಗೆ ವ್ಯಕ್ತವಾಗುವ ಲೋಕಮತಕ್ಕೆ ಒಂದು ತರದ ಕುಂದು ಬರುತ್ತಿದೆ. ಈ ಕೊರತೆಯನ್ನು ಹೋಗಲಾಡಿಸಿ, ಇದ್ದ ಲೋಕಮತವನ್ನು ಇದ್ದಂತೆಯೇ ವ್ಯಕ್ತಪಡಿಸುವದಕ್ಕಾಗಿ ಮಹಾತ್ಮರು ರಾಷ್ಟ್ರೀಯ ಸಭೆಯನ್ನು ಪುನರ್ಘಟಿಸಿದ್ದಾರೆ. ಗ್ರಾಮ ಪ್ರತಿನಿಗಳ ಪ್ರಾಬಲ್ಯವಿದ್ದ ರಾಷ್ಟ್ರೀಯಸಭೆಯು ಕೈಕೊಂಡ ನಿರ್ಧಾರಗಳನ್ನು ಸರಕಾರವು ಖಂಡಿತವಾಗಿ ಮನ್ನಿಸುವದು, ಮನ್ನಿಸಲೇ ಬೇಕು, ಮನ್ನಿಸಲಿಕ್ಕಿಲ್ಲವೆಂಬ ವಿಚಾರವು ಮಹಾತ್ಮರಿಗೆ ಸೋಂಕಲಿಲ್ಲ. ಇಂಥ ಪ್ರಸಕ್ತಿಯಲ್ಲಿ ಮುಂದೆ ಸತ್ಯಾಗ್ರಹದ ತಯಾರಿಯೆಂದು ಸರಕಾರವು ಎಣಿಸುವದು, ಅದಕ್ಕಾಗಿ ರಾಷ್ಟ್ರೀಯ ಸಭೆಯ ಕಾರ್ಯಕರ್ತರ ಮೇಲೆ ಕಠಿಣ ಕಾವಲಿಟ್ಟು ಅವರಿಗೆ ದಣಿಸಲು ಉದ್ಯುಕ್ತವಾಗುವದು ತೀರ ಶೋಚನೀಯವಾದುದು !

ಸರಕಾರವು ಈ ಪ್ರಕಾರ ಸಂಶಯವನ್ನು ಹಿಡಿಯಲಾಗದು. ನಿರ್ಮಲ ಅಂತಃಕರಣದಿಂದ ಗ್ರಾಮೋದ್ಧಾರವನ್ನು ಪುರಸ್ಕರಿಸಬೇಕು. ರಾಷ್ಟ್ರೀಯ ಸಭೆಯವರು ಪವಿತ್ರ ಸಂಕಲ್ಪ ಹಿಡಿದು ಪುರಸ್ಕರಿಸುವ ಗ್ರಾಮೋದ್ಧಾರ ಕಾರ್ಯದಲ್ಲಿ ನಿಷ್ಕಾರಣವಾಗಿ ಆತಂಕ ಉತ್ಪನ್ನ ಮಾಡಿಸಿದರೆ ಸರಕಾರವು ದೇಶ-ವಿದೇಶಗಳಲ್ಲಿ ಅಪ್ರೀತಿಯನ್ನು ಪಡೆಯಬೇಕಾಗುವದು. ಗ್ರಾಮನಿವಾಸಿಗಳು ಸರಕಾರದ ಯೋಜನೆಗಳನ್ನು ಅಂತಃಕರಣಪೂರ್ವಕ ಅಂಗೀಕರಿಸಲಿಕ್ಕಿಲ್ಲ, ರಾಷ್ಟ್ರೀಯಸಭೆಯವರಿಗೆ ವಿರೋಧ ಬಗೆಯುವದಕ್ಕಾಗಿಯೇ ಸರಕಾರವು ಗ್ರಾಮೋದ್ಧಾರ ಯೋಜನೆಗಳ ನಾಟಕ ನಡಿಸುತ್ತಿದೆಂಬ ಪೂರ್ವಗ್ರಹಿಕೆ ಮಾಡಿಕೊಳ್ಳುವರು. ಅದರಿಂದ ಸರಕಾರಿ ಯೋಜನೆಗಳು ನಿಷ್ಫಲವಾಗುವವು. ಸರಕಾರಿ ಯೋಜನೆಗಳನ್ನು ಪುರಸ್ಕರಿಸುವವರು ಸರಕಾರದ ಸ್ತುತಿಪಾಠಕರೆಂದೂ, ಮಹಾತ್ಮರ ವಿರೋಧಿಗಳೆಂದೂ ಲೋಕಾಪವಾದ ಹಬ್ಬಿ ಸರಕಾರದ ಯೋಜನೆಗಳ ಪುರಸ್ಕರ್ತರ ಗೋಜಿಗೆ ಯಾರೂ ಹೋಗರು. ಗ್ರಾಮಾಂತರಗಳಲ್ಲಿಲ್ಲ ಮತ್ಸರಭರಿತವಾದ ವಾತಾವರಣವೇ ಹುಟ್ಟಿಕೊಳ್ಳುವದು. ರಾಷ್ಟ್ರೀಯ ಸಭೆಯು ಕೈಕೊಂಡ ಕಾರ್ಯಕ್ಕಾದರೂ ಸರಕಾರದ ದ್ವೇಷದಿಂದ ತಕ್ಕ ಫಲ ಸಿಗದು. ಇಂಥ ಪ್ರಕಾರಗಳಲ್ಲಿ ಪ್ರಜಾಕ್ಷೇಮವಾಗುವ ಬಗೆ ಹೇಗೆ? ಹಿಂದುಸ್ಥಾನ ಸರಕಾರವು ಯಾವತ್ತೂ ಪರಿಸ್ಥಿತಿಯನ್ನು ಕೂಲಂಕುಷವಾಗಿ ಪರ್ಯಾಲೋಚಿಸಿ ಸಂಶಯಪ್ರವೃತ್ತಿಯನ್ನು ಸಂಪೂರ್ಣವಾಗಿ ತೊರೆದು ರಾಷ್ಟ್ರೀಯ ಸಭೆಯವರೊಡನೆ ಸಹಕಾರ ಮಾಡಬೇಕಾಗಿ ನಾವು ಅಂತಃಕರಣಪೂರ್ವಕ ಸೂಚಿಸುತ್ತೇವೆ. ರಾಷ್ಟ್ರೀಯ ಸಭೆಯವರೊಡನೆ ಸಹಕರಿಸಿದರೆ ಸರಕಾರದ ಗೌರವಭಂಗವಾಗದು. ಆ ಎಣಿಕೆಯೇ ತಪ್ಪು. ಮೇಲಾಗಿ ಕೇಳಿದರೆ, ರಾಷ್ಟ್ರೀಯ ಸಭೆಯ ಸಹಕಾರದಿಂದ ಸರಕಾರದ ಗೌರವ ಹೆಗ್ಗಳಿಕೆ(?)... ಸರಕಾರಕ್ಕೆ ಹಿಂದಭೂಮಿಯಲ್ಲಿ ಒಳ್ಳೇ ಮಾನ್ಯತೆ ದೊರೆಯುವದು. ಸರಕಾರಿ ಅಧಿಕಾರಿಗಳೂ ಜನರು ಮಮತೆಯಿಂದ ಬರಮಾಡಿಕೊಳ್ಳುವರು. ಮತ್ಸರದಿಂದ ಮತ್ಸರ ಹುಟ್ಟುತ್ತದೆ, ಪ್ರೀತಿಯಿಂದ ಪ್ರೀತಿ ಹುಟ್ಟುತ್ತದೆ, ಇದು

ತ್ರಿಕಾಲಾಬಾಧಿತ ತತ್ವ ರಾಜ್ಯಾಧಿಕಾರಿಗಳು ಸಜ್ಜರಿದ್ದಾರೆ. ಅವರು ಈ ತತ್ವಗಳನ್ನನುಸರಿಸಿ ರಾಷ್ಟ್ರೀಯ ಸಭೆಯ ಮೇಲೆ ನಿಷ್ಕಾರಣ ಮತ್ಸರ ಹಿಡಿಯಬಾರದಾಗಿ ನಾವು ಪುನಃ ಬಿನ್ನೈಸಿಕೊಳ್ಳುತ್ತೇವೆ.

ಏನೇ ಇರಲಿ ಒಂದು ಸಂಗತಿ ಮಾತ್ರ ಅತ್ಯಾನಂದಕರವಾದುದು ಗ್ರಾಮಗಳ ಉದ್ಧಾರದ ಕಡೆ ಹಿಂದುಸ್ಥಾನ ಸರಕಾರದ ಲಕ್ಷ ಸೆಳೆದದ್ದು. ಜಿಲ್ಲಾಧಿಕಾರಿಗಳು ಗ್ರಾಮಸಂಚಾರ ನಡಿಸಿ, ಗ್ರಾಮ ಪರಿಸ್ಥಿತಿ ಕಣ್ಣಾರೆ ಕಾಣದೆ, ಸರಕಾರಕ್ಕೆ ಗ್ರಾಮೋದ್ಧಾರ ಯೋಜನ ಸಂಕಲ್ಪಿಸಲು ತಕ್ಕ ಏರಿಕೆ ಪೂರೈಸಲಿಲ್ಲ. ಈಗಿನ ರಾಜ್ಯಭಾರದೊಳಗಿನ ಒಂದು ದೊಡ್ಡ ದೋಷವಿದು. ಆ ದೋಷವನ್ನು ಪರಿಹರಿಸಿಕೊಳ್ಳುವದಕ್ಕಾಗಿ ಹಿಂದುಸ್ಥಾನ ಸರಕಾರವು ಗುಪ್ತ ಸರ್ಕಲಾರನ್ನು ಹೊರಡಿಸಿ ಪ್ರಯತ್ನ ಪಡುತ್ತಿರುವದೆ ಈ ಅವಸ್ಥಾಂತರ ಅಭಿನಂದನೀಯವಿದೆ. ಮುಂಬಯಿಯ ರಾಷ್ಟ್ರೀಯ ಸಭೆಯ ಅಧಿವೇಶನದಿಂದ ಸರಕಾರದ ಮನೋಭೂಮಿಯಲ್ಲಿ ಈ ಅವಸ್ಥಾಂತರವನ್ನು ಘಟಿಸಿದ ಬಗ್ಗೆ ನಾವು ಮುಂಬಯಿ ರಾಷ್ಟ್ರೀಯ ಸಭೆಗೆ ಅಂತಃಕರಣಪೂರ್ವಕ ಹರಸುತ್ತೇವೆ. ಸಕಲ ಸೂತ್ರಗಳನ್ನು ಕೌಶಲ್ಯದಿಂದ ನಡಿಸಿ ರಾಷ್ಟ್ರೀಯ ಸಭೆಯ ಕಾರ್ಯಕ್ಷಮತೆ ಬೆಳೆಸಿ ಲೋಕಕಲ್ಯಾಣಕ್ಕೆ ಹುಟ್ಟಿಸಿದ ಉಗ್ರ ಮಹಾತ್ಮರಿಗೂ ನಾವು ಅಂತಃಕರಣಪೂರ್ವಕವಾಗಿ ಅಭಿವಾದಿಸುತ್ತೇವೆ. ಸರಕಾರವು ಲೋಕಮತ ಪ್ರವಾಹದ ಎಣಿಕೆಯನ್ನು ಮುಂದಾಗಿ ಆಲೋಚಿಸಿ, ಗ್ರಾಮೋದ್ಧಾರ ಕಾರ್ಯದ ಸಂಕಲ್ಪ ಮಾಡಿದ್ದು ಅಭಿನಂದನೀಯವಿದ್ದ ಸಂಕಲ್ಪಕ್ಕೆ ತಕ್ಕದ್ದಾಗಿ ಕಾರ್ಯಕ್ಷಮ ಯೋಜನಗಳಿಲ್ಲದಿದ್ದಾಗ್ಯೂ ಕಾಲಾನುಕ್ರಮದಿಂದ ಯೋಜನಗಳು ತಾವಾಗಿಯೇ ಉಂಟಾಗ ವವು. ಗ್ರಾಮಗಳ ಪರಿಸ್ಥಿತಿ ಜಿಲ್ಲಾಧಿಕಾರಿಗಳಿಗೆ ಹೊಳೆದ ಹಾಗೆ, ಅವುಗಳನ್ನು ಪರಿಹರಿಸಲೋಸುಗ ಸರಕಾರವು ತಕ್ಕ ಯೋಜನೆಗಳನ್ನೇ ಕಲ್ಪಿಸುವದು, ಕಲ್ಪಿಸಬೇಕಾಗುವದು. ರಾಜ್ಯಧೋರಣದಲ್ಲಿ ಇಷ್ಟು ಮಾರ್ಪಾಟು ಮಾಡುವ ಸಂಕಲ್ಪ ಮಾಡಿದ ಬಗ್ಗೆ ಸರಕಾರಕ್ಕೂ ನಾವು ಅಂತಃಕರಣಪೂರ್ವಕವಾಗಿ ಅಭಿನಂದಿಸಿ ಸಂಶಯ ಪ್ರವೃತ್ತಿ ತೀವ್ರವೇ ಒಯ್ದಾಗಿ ರಾಷ್ಟ್ರೀಯ ಸಭೆ-ಸರಕಾರಗಳೊಳಗೆ ಅನ್ಯೋನ್ಯ ಪ್ರೀತಿಯುಂಟಾಗಿ, ಮಹಾತ್ಮರು ನುಡಿದಂತೆ ಗ್ರಾಮೋದ್ಧಾರದ ಚಮತ್ಕಾರವು (Miracle) ಕ್ಷಣಾರ್ಧವೇ ಒದಗಿ ಬರಲೆಂದು ಹಾರೈಸುತ್ತೇವೆ.

ಸ್ಫುಟ ಸೂಚನೆಗಳು.

೧ ಸಾಮೋಪಚಾರದಿಂದಲೇ ಹಿಂದೀ ರಾಜ್ಯ ಸುಧಾರಣೆಯ ಪ್ರಶ್ನೆ ಇತ್ಯರ್ಥವಾಗಬಹುದಾಗಿ ಒಂದು ಆಶೆ ಉಂಟಾಗಿದೆ ಜನರಲ್ ಒಂದು ಎಂಪ್ರೈಸ ಮತ್ತು ದಕ್ಷಿಣ ಆಫ್ರಿಕೆಯ ಸೇನಾಪತಿ ಸ್ಮಟ್ಸ ಇವರ ವಿದ್ಯಮಾನ ಬ್ರಿಟಿಶ ಪ್ರಧಾನ ಮಂಡಳವು ಮಹಾತ್ಮರೊಡನೆ ಸಂಧಿ ಪ್ರಸ್ತಾಪವನ್ನು ನಡಿಸಲಾರಂಭಿಸಿದೆಂದು ಈಗ ನಿಸ್ಸಂದೇಹವಾಗಿ ಹೇಳಬಹುದು ಕಳೆದ ಅಕ್ಟೋಬರ ತಿಂಗಳಲ್ಲಿ ಮ್ಯಾಸಚೂಸೆಟ್ಸ ಎಂಬವರು ದಕ್ಷಿಣ ಆಫ್ರಿಕೆಯಿಂದ ಬಂದು ಮಹಾತ್ಮರಿಗೆ ವರ್ಧಾಗಂಜದಲ್ಲಿ ಭೆಟ್ಟಿಯಾಗಿ ಲಂಡನಿಗೆ ತೆರಳಿದರಂತೆ! ಹಿಂದೀ ರಾಜ್ಯಸುಧಾರಣೆಯ ಪ್ರಶ್ನೆಯನ್ನು ಮಹಾತ್ಮರಿಗೆ ತಕ್ಕ ಗ್ರಹಿಕೆ ಕೊಡದೆ ಮಮತೆಯ ಮಾತುಗಳನ್ನಾಡಿ ಮೋಸಪಡಿಸಿ ಇತ್ಯರ್ಥಪಡಿಸಿಕೊಳ್ಳಬೇಕಾರಣಸ್ಥಾನ ನಡೆದದೆಂದು ಲಂಡನ್ನಿನೊಳಗಿನ 'ಹಿಂದೀ ಸ್ವಾತಂತ್ರ್ಯ ಸಂಘ' ದವರು ದೂರುತ್ತಾರೆ "My Dear Mr Gandhi," (ನನ್ನ ಪ್ರಿಯ ಗಾಂಧಿಯವರೇ!) ಎಂಬದಾಗಿ ಸೇನಾಪತಿ ಸ್ಮಟ್ಸರವರು ಮಹಾತ್ಮರಿಗೆ ಪತ್ರ ಬರೆದಿರುವರಂತೆ. ರಾಷ್ಟ್ರೀಯ ಸಭೆಯವರು ಸರಕಾರಿ ಅಧಿಕಾರಿಗಳಿಗೆ ಯಾವ ಪ್ರಕಾರದಿಂದ ಪಿತೂರಿ ಮಾಡಬಾರದೆಂಬ ಧೋರಣವನ್ನು ಬುದ್ಧಿ ಪೂರ್ವಕವಾಗಿ ಅನುಸರಿಸುತ್ತಿದ್ದಾರೆ. ಸರಕಾರವು ಹೊರಡಿಸುವ ಯಾವತ್ತೂ ಅಪ್ಪಣೆಗಳನ್ನು ಅಕ್ಷರಶಃ ಪಾಲಿಸಿ ಕಾಯಿದೆ ತಾವೇ ಹಿಂದುಸ್ವಾತಂತ್ರ್ಯೋತ್ಸವವನ್ನು ಜರಗಿಸಬೇಕೆಂಬದಾಗಿ ಕಳೆದ ವಾರ ದಿಲ್ಲಿಯಲ್ಲಿ ಕೂಡಿದ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳ ಆಜ್ಞೆ ಮಾಡಿದೆ. ಸ್ಥಳೀಕ ಅಧಿಕಾರಿಗಳು ಸಾರ್ವಜನಿಕ ಸಭೆ ಸೇರಲು ಪ್ರತಿಬಂಧಿಸಿದ್ದಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಜನರು ಒಟ್ಟುಗೂಡಿ ಸ್ವಾತಂತ್ರ್ಯೋತ್ಸವವನ್ನು ಜರಗಿಸತಕ್ಕದ್ದಾಗಿಯೂ ಮುಂಜಾಗ್ರತೆ ಕೊಡಲಾಗಿದೆ. ನೇಮಸ್ತರೂ, ರಾಷ್ಟ್ರೀಯರೂ, ಸಮಸ್ತರೂ ಒಕ್ಕಟ್ಟಾಗಿ ರಾಜ್ಯಸುಧಾರಣೆಯ ಪ್ರಶ್ನೆಯನ್ನು ಬಿಡಿಸಬೇಕೆಂದು ಒಳಗಿಂದೊಳಗೆ ಚರ್ಚಿಸುತ್ತಿದ್ದಾರೆ. ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಪುಣೆ, ಮುಂಬಯಿ ಕಡೆ ನೇಮಸ್ತ ಪ್ರಮುಖರೊಡನೆ ಮಾತನಾಡಿದರಂತೆ, ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದ ಮತ್ತು ಶ್ರೀ| ರಾಜಗೋಪಾಲಾಚಾರ್ಯರೊಡನೆ ಸಂಭಾಷಣ ನಡಿಸಿದರಂತೆ. ನೇಕ ನಾಮದಾರ ಆಗಾಖಾನರವರೊಡನೆ ಚರ್ಚೆಯಾಯಿತು. ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಮುಂಬಯಿ ಗವ್ಹರ್ನರರಾದ ಬ್ರೆಬರ್ನ ದೊರೆಗಳೊಡನೆ ಪುಣೆಯಲ್ಲಿ ರವಿವಾರ ಮಧ್ಯಾಹ್ನ ೧ ಘಂಟೆಯ ತನಕ ರಾಜ್ಯಸುಧಾರಣೆಯ ಪ್ರಶ್ನೆಯನ್ನೇ ಚರ್ಚಿಸಿದರಾಗಿ 'ಮುಂಬಯಿ ಕ್ರೋನಿಕಲ್' ಪತ್ರಿಕೆಯ ಪುಣೆಯೊಳಗಿನ ಸ್ವಂತ ಸುದ್ದಿಗಾರರ ವಾರ್ತೆ. ಸರ್ವಪಕ್ಷೀಯ ಒಂದು ಪತ್ರವನ್ನು ಸೇರಿಸಿಕೊಂಡು ಸಂಪೂರ್ಣ ವಿಚಾರ ಮಾಡಿ ಮುಂದಿನ ಮಾರ್ಗದ ಯೋಜನೆಯಾಗಬೇಕೆಂಬ ವಿಚಾರ ನಡೆದಿರುವದಂತೆ. ಶ್ರೀಯುತ ರಾಜಗೋಪಾಲಾಚಾರ್ಯರು ಇಂಥ ವಿಚಾರ ನಡೆದಿರುವದಿಲ್ಲವಾಗಿ ಹೇಳುತ್ತಾರೆ. ಅಂತು ಗುಪ್ತವಾಗಿ ಹಿಂದೀ ರಾಜ್ಯಸುಧಾರಣೆಯ ವಿಷಯ ಆಪ್ತಾಲೋಚನೆ ನಡೆಯುತ್ತಿದೆ. ಸಾಮ್ರಾಜ್ಯ ಸರಕಾರಕ್ಕೆ ಮಹಾತ್ಮರ ಪ್ರಭುತ್ವದ ಜ್ಞಾನ ಒಂದಿದ ಮಧ್ಯಸ್ಥಿಕೆ ಮಾಡಿಕೊಳ್ಳುವ ಅವಶ್ಯಕತೆ ಉಂಟಾಗಿದೆ. ಮುಂಬಯಿಯ ರಾಷ್ಟ್ರೀಯ ಸಭೆಯ ಅಧಿವೇಶನದಲ್ಲಿ ಕಂಡುಬಂದ ಮಹಾತ್ಮರ ಕಾರ್ಯಕೌಶಲ್ಯವನ್ನೂ, ಸರ್ವಮಾನ್ಯತೆಯನ್ನೂ ನೋಡಿ ಹಿಂದುಸ್ಥಾನ ಸರಕಾರಕ್ಕೂ ಮಹಾತ್ಮರೊಡನೆ ಸಂಧಿ ಮಾಡಿಕೊಳ್ಳುವ ಆಲೋಚನೆಯಾಗಿರಬೇಕು. ರಾಷ್ಟ್ರೀಯ ಸಭೆಯ ಕಾರ್ಯಕ್ರಮವನ್ನು ಸಮಸ್ತರೂ ಅಂತಃಕರಣಪೂರ್ವಕವಾಗಿ ನಿಷ್ಠೆಯಿಂದ ಪುರಸ್ಕರಿಸಿ ದುಡಿದಲ್ಲಿ ಸಾಮೋಪಚಾರದಿಂದಲೇ ಪೂರ್ಣ ಸ್ವರಾಜ್ಯಸಂಗ್ರಹವಾಗ ಬಹುದು. ದೇಶೋದ್ಧಾರವನ್ನು ಬಯಸುವ ಪ್ರಜೆಗಳೆಲ್ಲರೂ ದೀರ್ಘದೃಷ್ಟಿಯಿಂದ ವಿಚಾರ ಮಾಡಿ ರಾಷ್ಟ್ರೀಯ ಸಭೆಯ ವಿದ್ಯಮಾನ ಹೊರಡುವ ಯಾವತ್ತೂ ಆಜ್ಞೆಗಳನ್ನು ಪಾಲಿಸಬೇಕಾಗಿ ನಾವು ಅಂತಃಕರಣಪೂರ್ವಕ ಬಿನ್ನೈಸಿಕೊಳ್ಳುತ್ತೇವೆ.

---

೨ ಮುಂಬಾಪುರಸ್ಥರಿಗೆ ನಮ್ಮ ಅನಂತ ಉಪಕಾರಗಳು. ಸತ್ಯಾಗ್ರಹದಲ್ಲಿ ಸರ್ವಸ್ವವನ್ನು ಕಳಕೊಂಡು ನಿರಾಶ್ರಿತರಾದ ನಮ್ಮಲ್ಲಿಯ ದೇಶಾಭಿಮಾನಿಗಳಿಗಾಗಿ ಮುಂಬಯಿ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಅಭಿಮಾನದಿಂದ, ವಾತ್ಸಲ್ಯದಿಂದ ನಿಧಿಸಂಗ್ರಹ ಮಾಡುತ್ತಿದ್ದಾರೆ. ನಮ್ಮ ಕರ್ನಾಟಕದ ಮುಂದಾಳುಗಳಾದ ಶ್ರೀ| ಹೊಸಮನಿ ಸಿದ್ದಪ್ಪನವರು ನುಡಿದಂತೆ, ಮುಂಬಾಪುರಿಯು ನಿರಾಶ್ರಿತರ ತಾಯಿ. ಹಿಂದುಸ್ಥಾನದೊಳಗಿನ ಯಾವದೇ ಭಾಗದಲ್ಲಿ ಆಪತ್ತು ಒದಗಲಿ ಮುಂಬಾಪುರಿಯು ಮಮತೆಯಿಂದ ಸಂಕಟಗ್ರಸ್ತರಿಗೆ ನೆರವಾಗಿದೆ. ಬಿಹಾರದಲ್ಲಿ ಭೂಕಂಪವಾಗಿ ಹಾಳ - ಕೇಳಲಾರದಷ್ಟು ಕಷ್ಟ - ನಷ್ಟವಾಯಿತು. ಮುಂಬಯಿಯೊಳಗಿನ ಔದಾರ್ಯವಂತ ಐಶ್ವರ್ಯವಂತರು ಲಕ್ಷಾವಧಿ ರೂಪಾಯಿಗಳನ್ನು ಒಟ್ಟುಗೂಡಿಸಿಕೊಟ್ಟರು. 'ಮುಂಬಯಿ ಕ್ರೋನಿಕಲ್' ಪತ್ರಿಕೆಯ ವಿದ್ಯಮಾನ ಹೊರಟ 'ತ್ರಿಪತ್ರನಿಧಿ' (Three Papers Fund) ಬಿಹಾರ ಭೂಕಂಪಗ್ರಸ್ತ ನಿಧಿಗೆ ರೂ ೩ ಲಕ್ಷಕ್ಕೆ ಮಿಕ್ಕಿ ಧನ ಸಹಾಯವಾಗಿದೆ. ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರಪ್ರಸಾದರವರು ನಮ್ಮ ಜಿಲ್ಲೆಯೊಳಗಿನ ರೈತರ ಕಷ್ಟ ನಿವಾರಣಾ ನಿಧಿಗೆ ಸಹಾಯ ಮಾಡುವಂತೆ ಮುಂಬಾಪುರಸ್ಥರಿಗೆ ಬಿನ್ನೈಸಿಕೊಂಡಿದ್ದಾರೆ. ತಕ್ಕ ಮಟ್ಟಿಗೆ ೧ ಲಕ್ಷಕ್ಕೆ ಮಿಕ್ಕಿ ನಿಧಿಸಂಗ್ರಹವಾಗುವದೆಂದು ತಿಳಿದು ನಮಗೆ ತುಂಬಾ ಸಂತೋಷ. ಈ ಕಾರ್ಯದಲ್ಲಿ ಕರ್ನಾಟಕದ ಶ್ರೀ| ದಿವಾಕರ ರಂಗನಾಥರಾಯರು ಬಹಳೇ ಪರಿಶ್ರಮಪಟ್ಟಿದ್ದಾರೆ. ಅವರಿಗೂ, ಮುಂಬಯಿಯ ಶ್ರೀ| ನರಿಮಾನ, ಎಸ್ ಕೇ ಪಾಟೀಲ ಮೊದಲಾದವರಿಗೂ, ದ್ರವ್ಯಸಂಚಯ ಮಾಡಹೋದ ಗಾಂಧಿ ಸೇವಾ ಸೇನೆಯವರಿಗೂ, ನೂರಾರು ಸ್ವಯಂಸೇವಕರಿಗೂ ನಾವು ತುಂಬಾ ಉಪಕೃತರಾಗಿದ್ದೇವೆ. ಸತ್ಯಾಗ್ರಹಿಗಳ ಕಷ್ಟ ಅಪಾರವಾದದ್ದು. ಈಗಿನ ಕಾಲಮಾನದಲ್ಲಿ ಅವರು ಮತ್ತೂ ಗತಿಗೆಟ್ಟಿದ್ದಾರೆ. ಇಂಥ ಸಂಕಟಕಾಲದಲ್ಲಿ ಮುಂಬಾಪುರಸ್ಥರು ವಿಪದ್ಗ್ರಸ್ತರಿಗೆ ನೆರವಾದ ಸಂಗತಿ ಚಿರಸ್ಮರಣೀಯವಾದದು.

---

೩ ಈ ಹೊತ್ತಿನಿಂದ ದಿಲ್ಲಿಯಲ್ಲಿ ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನಕ್ಕೆ ಪ್ರಾರಂಭ. ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನವರೂ, ಕೊಂಗ್ರೆಸಿನ ಪರವಾಗಿ ಆರಿಸಿಹೋದ ಸಭಾಸದರೂ, ಮಹಾತ್ಮರಾದಿ ರಾಷ್ಟ್ರೀಯ ಸಭೆಯ ಸೂತ್ರಚಾಲಕರೂ, ಪಂಡಿತ ಮದನಮೋಹನ ಮಾಲವೀಯರವರೂ, ಬೆರಿಸ್ಟರ ಜಿನ್ನಾ ಪ್ರಭೃತಿ ಮುಸಲ್ಮಾನ ಪ್ರಮುಖರೂ ಈಗ ಒಕ್ಕಟ್ಟಿಗೆ ಸೇರಿರುತ್ತಾರೆ. ರಾಷ್ಟ್ರೀಯ ಸಭೆಯ ಪರವಾಗಿ ಕಾಯಿದೆ-ಕೌನ್ಸಿಲಿನ ವಿದ್ಯಮಾನ ರಾಷ್ಟ್ರಘಾತಕವಾದ ಕಾನೂನುಗಳನ್ನು ರದ್ದುಪಡಿಸಿಕೊಳ್ಳಲು ಪ್ರಯತ್ನ ನಡೆಯಲಾರಂಭಿಸಿವೆ ೧೯೩೧, ೧೯೩೨, ೧೯೩೩ನೇ ಇಸ್ವಿಗಳಲ್ಲಿ ವರಿಷ್ಠ ಕಾಯಿದೆ ಕೌನ್ಸಿಲಿನೊಳಗೆ ಕೈಕೊಂಡ ವರ್ತಮಾನಪತ್ರಗಳ ಮೇಲಿನ ನಿರ್ಬಂಧ ಕಾನೂನು, ಬೇಕಾಯಿದೇಶೀರ ಸಭೆಯ ಕಾನೂನು, ಬಂಗಾಲ ಕ್ರಾಂತಿಕಾರಕರ ನಿರ್ಮೂಲನ ಕಾನೂನುಗಳನ್ನೂ, ೧೯೧೮ನೇ ಇಸ್ವಿಯ ಸಭಾ ನಿರ್ಬಂಧಕ ಕಾನೂನನ್ನೂ, ೧೮೨೭ನೇ ಇಸ್ವಿಯ ಪಂಜಾಬ ಕೊಲೆಪಾತಕ ಕಾನೂನನ್ನೂ, ೧೮೧೮ನೇ ಇಸ್ವಿಯ ರಾಜಬಂದಿಗಳ ಕಟ್ಟಳೆಯನ್ನೂ ರದ್ದುಪಡಿಸ

ಬೇಕಾಗಿ ಶ್ರೀ| ಸತ್ಯಮೂರ್ತಿಗಳವರ ಆಗ್ರಹ. ರಾಜದ್ರೋಹದ ಕಾನೂನು ಹಾಗು ಕ್ರಿಮಿನಲ್ ಪ್ರೊಸೀಜರ ಕೋಡಿನ ೧೪೪ನೇ ಕಲಮಿನ ವ್ಯಾಪ್ತಿಯನ್ನು ನಿಯಂತ್ರಿಸಬೇಕಾಗಿಯೂ ಅವರದೇ ಹೇಳಿಕೆ. ಮುಂಬಯಿ ರಾಷ್ಟ್ರೀಯ ಸಭೆಯ ಅಧಿವೇಶನದ ಫಲಿತಾಂಶಗಳನ್ನು ಸಮಾಲೋಚಿಸಿ ಹಿಂದುಸ್ಥಾನ ಸರಕಾರವು ತಾ. ೩೧-೧೧-೩೪ ನೇಗೆ ಹೊರಡಿಸಿದ ಗುಪ್ತ ಸರ್ಕ್ಯುಲರನ್ನು ನಿಷೇಧಿಸುವ ಠರಾವನ್ನೂ ಶ್ರೀ| ಸತ್ಯಮೂರ್ತಿಗಳು ಈ ಹೊತ್ತೇ ಸೂಚಿಸಿ ಹಿಂದುಸ್ಥಾನ ಸರಕಾರದ ಕೃತ್ಯವನ್ನು ಮನದಣಿ ಹಳಿಯುವರು. ಪಂಡಿತ ಜವಾಹಿರಲಾಲರ ಬಿಡುಗಡೆಯಾಗಬೇಕು; ಬಂಗಾಲದೊಳಗಿನ ದಬ್ಬಾಳಿಕೆಯನ್ನು ದೂರಪಡಿಸಬೇಕು; ಗುಜರಾಥ-ಕರ್ನಾಟಕ ಪ್ರಾಂತಗಳೊಳಗಿನ ಪರಿಸ್ಥಿತಿಯನ್ನು ಸಮಾಲೋಚಿಸಿ ಸತ್ಯಾಗ್ರಹದಲ್ಲಿ ಮನೆಮಾರು ಕಳಕೊಂಡವರ ಕುರಿತು ನ್ಯಾಯಮೂರ್ತಿಗಳನ್ನು ನೇಮಿಸಿ ನ್ಯಾಯಾನ್ಯಾಯಗಳ ವಿಚಾರವಾಗಬೇಕು; ಹೀಗೆಲ್ಲ ಶ್ರೀ| ಸತ್ಯಮೂರ್ತಿಗಳು ಠರಾವುಗಳನ್ನೂ, ಪ್ರಶ್ನೆಗಳನ್ನೂ ಹಿಂದುಸ್ಥಾನ ಸರಕಾರಕ್ಕೆ ಕಳುಹಿದ್ದಾರೆ ನಾಗರಿಕರ ಮೂಲ ಹಕ್ಕುಗಳಿಗೆ ಬಾಧಕವಾದ ಅಧಿಕಾರದ ದುರುಪಯೋಗವನ್ನೆಲ್ಲ ರಾಷ್ಟ್ರೀಯ ಸಭೆಯವರು ಈ ಅಧಿವೇಶನದಲ್ಲಿ ಮರೆಮಾಚದೆ ಬೈಲಿಗೆಳೆದು ದೇಶದಲ್ಲಿ ನಡೆಯುತ್ತಿರುವ ಅನ್ಯಾಯದ ಪರಂಪರೆಯನ್ನು ಕಾಯಿದೆ ಕೌನ್ಸಿಲಿನಲ್ಲಿ ಬಹಿರಂಗಪಡಿಸುವರು. ಈ ಪರಾಕ್ರಮದ ವಾರ್ತೆ ಕೇಳಿ ನಮಗೆ ಪರಮ ಸಂತೋಷವಾಗಿದೆ. ಮುಂಬಯಿಯ ಪ್ರಖ್ಯಾತ ಬೆರಿಸ್ಟರರಾದ ಶ್ರೀ| ಭುಲಾಭಾಯಿ ದೇಸಾಯಿಯವರು ರಾಷ್ಟ್ರೀಯ ಸಭೆಯ ಸಭಾಸದರ ಪಕ್ಷದ ಅಗ್ರೇಸರತ್ವವನ್ನು ವಹಿಸಿಕೊಂಡಿದ್ದಾರೆ. ಡಾ| ಅನ್ಸಾರಿಯವರು ಸಭಾಸದರಿಲ್ಲದಿದ್ದಾಗ್ಯೂ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾಗಿ ಮಾರ್ಗದರ್ಶಕರಾಗಬೇಕೆಂದು ಸಭಾಸದರು ಮಾಡಿಕೊಂಡ ಬಿನ್ನಹವನ್ನು ಮನ್ನಿಸಿದ್ದಾರೆ. ಇವರೀರ್ವರ ಮಾರ್ಗದರ್ಶಕತ್ವದಲ್ಲಿ ರಾಷ್ಟ್ರೀಯ ಸಭೆಯವರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ರಾಷ್ಟ್ರೀಯ ವಿಕಾಸಕ್ಕೆ ಬಾಧೆ ಬರುವಂಥ ಯಾವತ್ತೂ ನಿರ್ಬಂಧಗಳನ್ನು ಪರಿಹರಿಸಿಕೊಳ್ಳುವರೆಂದು ನಾವು ತುಂಬಾ ಕೋರುತ್ತೇವೆ.

---

೪. ಮುಂಬಯಿ ಸರಕಾರಕ್ಕೆ ರೈತರ ಸಾಲ ಪರಿಹರಿಸುವ ಅರಿವಾಗಿದೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ಮುಂಬಯಿ ಸರಕಾರವು ‘ ಲೆಂಡ್ ಮೋರ್ಗೇಜ ಕಮಿಟಿ ’ ಯಾನೆ ಭೂಭದ್ರತೆ ಮಂಡಳ ಎಂಬ ಮಂಡಳವನ್ನೇರ್ಪಡಿಸಿ ರೈತರ ಋಣವಿಮೋಚನೆಯ ವಿಚಾರ ಮಾಡಹೇಳಿತ್ತು. ಅದರಂತೆ ಮಂಡಳವು ವಿಚಾರಿಸಿ ಸರಕಾರಕ್ಕೆ ರಿಪೋರ್ಟು ಮಾಡಿರುವದಾಗಿ ‘ ಯುನೈಟೆಡ್ ಪ್ರೆಸ್ ’ ವಾರ್ತಾವಾಹಕ ಸಂಸ್ಥೆಯ ಮುಂಬಯಿ ಸುದ್ದಿಗಾರರು ತಿಳಿಸುತ್ತಾರೆ. ಪ್ರಯೋಗಾರ್ಥವಾಗಿ ಈಗ ಸ್ಥಾಪಿಸಲಾದ ‘ ಲೆಂಡ್ ಮೋರ್ಗೇಜ ಬೇಂಕು ’ ಗಳಿಂದ ಋಣವಿಮೋಚನೆಯ ಕಾರ್ಯವಾಗದು. ಕಾಳು-ಕಡಿಗಳ ದರ ಹೇರಳವಾಗಿ ಇಳಿದದ್ದರಿಂದ ರೈತರಿಗೆ ಋಣವಿಮೋಚನ ಮಾಡಬಯಸುವದಾದರೆ, ಸಾಲವನ್ನು ದೀರ್ಘಾವಧಿಯ ತನಕ ಹಂಚಿಹಾಕಬೇಕು. ಕಾಳು-ಕಡಿಗಳ ದರ ಇಳಿದದ್ದರಿಂದ ರೋಖ ಹಣ ಸಿಗುವದು ದುಃಸಾಧ್ಯವಾಗಿದೆ, ಆದರಿಂದ ರೈತರಿಗೆ ಮಾತಿನಂತೆ ಹಣ ವಸೂಲ ಕೊಡಲಾಗದೆ ತೀರ ತೊಂದರೆಯಾಗಿದೆ. ರೈತರು ಒಳಗಿಂದೊಳಗೆ ಕೊರಗುತ್ತಿದ್ದಾರೆ ಅಸಂತೋಷ ಸಾಮ್ರಾಜ್ಯವು ಗ್ರಾಮಾಂತರಗಳಲ್ಲಿ ಹಬ್ಬಿಕೊಂಡಿದೆ. ಗ್ರಾಮ ನಿವಾಸಿಗಳ ಬೆಂಬಲ ಪಡೆಯುವದಕ್ಕಾಗಿ ಋಣ ವಿಮೋಚನೆಯ ಕಾರ್ಯಕ್ರಮವನ್ನು ರಾಜಕೀಯ ಪಕ್ಷಗಳು ಪ್ರಸ್ತಾಪಿಸಲಾರಂಭಿಸಿವೆ ಸರಕಾರಿ ಸಹಾಯದಿಂದ ‘ ಲೇಂಡ್ ಮೋರ್ಗೇಜ ಬೇಂಕು ’ಗಳನ್ನು ಸ್ಥಾಪಿಸುವ ಪ್ರಯತ್ನ ಮಾಡಿದ್ದಲ್ಲಿ ಸುಲಭವಾಗಿ ಈ ಕಾರ್ಯ ನೆರವೇರುವದೆಂದು ಇವರ ಅಂಬೋಣ. ಕಡಿಮೆ ಬಡ್ಡಿ ದರದಿಂದ ಈಗ ಬೇಕಷ್ಟು ಹಣ ಒದಗುವಂತಿದೆ ಸಾವಕಾರರು ಈಗಿನ ಸ್ಥಿತಿಯಲ್ಲಿ ಕೆಲ ಹಣ ಸೂಟ ಬಿಟ್ಟು ತಮ್ಮ ಸಾಲ ಪರಿಹರಿಸಿಕೊಳ್ಳಲಿಕ್ಕೂ ತಯಾರಿದ್ದಾರೆ. ಸರಕಾರವು ಮುಂಜಾಗ್ರತೆ ವಹಿಸಿ ಸಾಲದ ಒಜ್ಜೆಯಿಂದ ರೈತರನ್ನು ಬಿಡುಗಡೆ ಮಾಡಲು ಇದೀಗಲೇ ಅನುಕೂಲವಾಗಿರುವ ಸಂದರ್ಭದಲ್ಲಿ ತಕ್ಕ ಉಪಾಯ ಮಾಡದಿದ್ದರೆ ಅಸಂತೋಷವು ತೀವ್ರವಾಗಿ ಮುಂದೆ ಕಠಿಣ ಪ್ರಸಂಗ ಬರುವಂತಿದೆ. ಸಹಕಾರ ಕಾಯಿದೆಯಂತೆ ಕೋಓಪರೇಟಿವ್ ಬೇಂಕುಗಳನ್ನು ಸ್ಥಾಪಿಸಿ ಋಣವಿಮೋಚನೆಯನ್ನು ಕೈಕೊಳ್ಳಬಹುದಾಗಿ ಮಂಡಳದವರು ಸೂಚಿಸುತ್ತಾರೆ ‘ ಭೂಭದ್ರತೆ ಮಂಡಳ ’ದ ವರದಿ ಇನ್ನೂ ಪ್ರಕಟಹೊಂದಿಲ್ಲ. ತಾತ್ಪರ್ಯವನ್ನಷ್ಟು ಸುದ್ದಿಗಾರರು ಪ್ರಕಟಿಸಿದ್ದಾರೆ ಮಂಡಳದ ಯೋಜನೆಯನ್ನು ವಿವರವಾಗಿ ತಿಳಕೊಂಡನಕ ಅದನ್ನು ಚರ್ಚಿಸುವದು ಕಠಿಣ ಮಾತು. ಋಣವಿಮೋಚನೆಯ ವಿಷಯವನ್ನು ನಾವು ಈ ಹಿಂದೆ ಚರ್ಚಿಸಿದ್ದೇವೆ. ಆದಾಗ್ಯೂ ಈ ಸೂಚನೆಗಳ ಕುರಿತು ಸಂಕ್ಷಿಪ್ತವಾಗಿ ನಾಲ್ಕು ಮಾತುಗಳನ್ನು ಬರೆಯಲಿಚ್ಛಿಸುತ್ತೇವೆ

---

೫. ಮಂಡಳದವರು ಗ್ರಾಮನಿವಾಸಿಗಳ ಅಸಂತೋಷವನ್ನು ಇದೀಗಲೇ ದೂರಪಡಿಸಬೇಕಾಗಿ ಎಚ್ಚರಿಕೆ ಕೊಟ್ಟಿದ್ದು ತೀರಿಯೋಗ್ಯವಿದೆ ರೈತರು ತೀರ ಗತಿಗೆಟ್ಟಿದ್ದಾರೆ. ಅವರಿಗೆ ಇದೀಗಲೇ ನೆರವಾಗದಿದ್ದರೆ ಮುಂದೆ ಭಯಂಕರ ಪರಿಣಾಮವಾಗುವಂತಿದೆ. ಆದರೆ, ಪರಸ್ಪರ ಸಹಕಾರದ ಪರಸ್ಪರ ಬೇಂಕು (Co-operative)ಗಳನ್ನು ಪರಸ್ಪರ ಸ್ಥಾಪಿಸಿ ಸರಕಾರವು ಪರಸ್ಪರ ಋಣ ವಿಮೋಚನೆ ಮಾಡಲೆಳಸುವದು ಅಸಾಧ್ಯ ಮಾತು. ಸಾವಕಾರರು ಸಾಲಗಾರರಿಗೆ ಸೂಟ ಬಿಡಲು ತಯಾರಿದ್ದಾರಾಗಿ ಮಂಡಳವು ನಮೂದಿಸುತ್ತದೆ ನಮಗಾದರೂ ಹಾಗೆಯೇ ಕಾಣುತ್ತದೆ ಬೇಸಾಯಗಾರರಿಗೆ ಯಾವಾಗಲೂ ದಣಿಸುವರೆಂದು ಅಧಿಕಾರಿಗಳು ಲೋಕಾಪವಾದಕ್ಕೀಡು ಮಾಡಿದ, ದುಷ್ಟರೆಂದು ಹಳಿದ ಸಾವಕಾರರೊಡನೆ ಲೋಕಕಲ್ಯಾಣಕ್ಕಾಗಿ ಸ್ಥಾಪನೆ ಹೊಂದಿದ ಸಹಕಾರ ಸಂಘಗಳು ಸಾಲದಲ್ಲಿ ಸೂಟ ಬಿಟ್ಟು ಋಣ ವಿಮೋಚನ ಕಾರ್ಯದಲ್ಲಿ ಸಹಕರಿಸಲು ಸಿದ್ಧವಿರುವವೋ ಹೇಗೆ? ಈ ಪ್ರಶ್ನೆಯನ್ನು ಮಂಡಳದವರು ಆಲೋಚಿಸಿರುವರೇನೆಂಬ ಸಂಗತಿ ತಿಳಿಯಲಿಲ್ಲ. ‘ ದುಷ್ಟ ’ ಸಾವಕಾರರಿಗಿಂತ ದಯಾಳು ಸಹಕಾರ ಸಂಘಗಳ ಉಪಟಳವೇ ಮಿಗಿಲಾಗಿದೆ. ಸಾವಕಾರರಿಗೆ ಸಲ್ಲುವ ರಕಮಿನಲ್ಲಿ ಕೆಲವೊಟ್ಟಿಗಾದರೂ ಸೂಟ ಪಡೆಯಬರುತ್ತದೆ; ಆದರೆ ಸಹಕಾರ ಸಂಘಗಳಿಗೆ ಸಲ್ಲತಕ್ಕ ರಕಮಿನಲ್ಲಿ ಕಾಸು ಕಡಿಮೆಯಾಗಬೊಲ್ಲದು ಸಂಘಗಳ ಹಣವಸೂಲಿಯ ಕ್ರಮ, ಮತ್ತು ಆರ್ಬಿಟ್ರೇಟರರ (ಪಂಚರ) ‘ ಆರ್ಬಿಟ್ರರಿ ’ (ನಿರಂಕುಶ) ನಿರ್ಣಯಗಳಿಂದ ರೈತರ ಸಾಲ ಹೇರಳ ಹಿಗ್ಗಿದೆ ಬಡ್ಡಿ, ದಂಡದ ಬಡ್ಡಿ; ಇವೆರಡೂ ಬಡ್ಡಿಗಳ ಮೇಲೆ ದಂಡದ ಬಡ್ಡಿ; ಹೀಗೆ ೩ ಪ್ರಕಾರದಿಂದ ಬಡ್ಡಿ ಕೂಡಿಸಿ ಪರಸ್ಪರ ಸಹಕಾರದಲ್ಲಿ ಸೇರಿದ ಜನರಿಗೆ ಸಂಘಗಳು ದುಷ್ಟತನದಿಂದ ಸುಲಿಯುತ್ತಿವೆ. ಸಾಲ ಕೊಂಡವರೂ, ಸಾಲಕ್ಕೆ ಹೊಣೆ ನಿಂತವರೂ ಎಲ್ಲರೂ ಸುಲಿಯಲ್ಪಡುತ್ತಾರೆ ಹೊಸದಾಗಿ ಕೋಓಪರೇಟಿವ ಬೇಂಕುಗಳನ್ನು ಸ್ಥಾಪಿಸುವ ಪೂರ್ವದಲ್ಲಿ ಈಗ ಸ್ಥಾಪನೆಯಾದ ಸಹಕಾರಿ ಬೇಂಕುಗಳ ಕಾಟದಿಂದ ತಪ್ಪಿಸಿಕೊಳ್ಳುವ ಉಪಾಯ ಪರಿಶೋಧಿಸುವದು ಅತ್ಯವಶ್ಯವಾದ ಮಾತು. ಸಾವಕಾರರ ಸಾಲದ ವ್ಯಾಖ್ಯೆಯಲ್ಲಿ ಸಹಕಾರಿ ಸಂಘಗಳ ಸಾಲ ಸೇರುತ್ತದೇನೆಂಬದೊಂದು ಪ್ರಶ್ನೆಯು ವಿಚಾರಿಸತಕ್ಕ ವಿಷಯ ಮುಂಬಯಿ ಸರಕಾರವು ವರದಿಯನ್ನು ಸಮಾಲೋಚಿಸುವಾಗ ಈ ವಿಷಯಗಳನ್ನು ಪರಿಸ್ಫುಟ ಮಾಡಬೇಕಾಗಿ ವಿನಂತಿ. ಇವುಗಳ ಸ್ಪಷ್ಟೀಕರಣವಾಗಿ ಪರಿಹಾರ ಯೋಜನೆಯಾಗದಿದ್ದರೆ ಸರಕಾರಿ ಋಣವಿಮೋಚನೆಯ ಕಾರ್ಯಸಾರ್ಥಕವಾಗದು

— ಬಂಗಾಲದ [illegible]ರರಾದ ಸರ್ ಜ್ಹೊನ್ ಎಂಡರಸನ್‌ರವರು ವಿಲಿಂಗಡನ್ ದೊರೆಗಳ ಉತ್ತರಾಧಿಕಾರಿಗಳಾಗಿ ಸರ್ವಾಧಿಪತಿಗಳಾಗುವರಂತೆ !

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ, ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಕೆಳಗಿನ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K. Nayak Bros.
D. S. Pai.
K. N. Nayak.
Honavar Agent:-
R. V. Prabhu Esq.

K. Padmanabha Rao & Sons
BELGAUM
Chief Agents for
Karnatak Districts & S. M. States

ಸ್ಥಾನಿಕ ವೃತ್ತಾಂತ.

ಕುಮಟಾ— ಕೆಲವು ದಿನ ಚಳಿ, ಕೆಲವು ದಿನ ಸೆಕೆ; ಹೀಗೆ ವಿಷಮ ಹವೆಯು. ವಾರ-ನಾಲ್ಕು ದಿವಸ ಮೋಡ ಕವಿದು ಮಳೆಯ ಹನಿ ಸಹ ಬಿದ್ದಿತು. ಆಗಾಗ್ಗೆ ಗಾಳಿಯೂ ಜೋರಿನಿಂದ ಬೀಸುತ್ತಿದೆ.

ರಾ| ಬಾಪಟರ ಮನೆ ತೆರಿಗೆ ತಿದ್ದುಪಡಿಯ ವಿರುದ್ಧ ತಕ್ರಾರ-ಅರ್ಜಿಗಳ ವಿಚಾರಣೆಗೆ ಪ್ರಾರಂಭವಾಗಿದೆ. ತಕ್ರಾರ-ಅರ್ಜಿಗಳ ಸಂಖ್ಯೆಯು ೧೧ ನೂರಕ್ಕೂ ಮಿಕ್ಕಿವೆ. ಇಷ್ಟೆಲ್ಲ ಅರ್ಜಿಗಳ ಯೋಗ್ಯ ಟೀಕೆಯಿಂದ ನಿಕಾಲ ಮಾಡಲಿಕ್ಕೆ ೩-೪ ಜನರನ್ನು ನೇಮಿಸಬೇಕಾಗುವದು. ಅದಕ್ಕಿಂತ ರಾ| ಬಾಪಟರ ತಿದ್ದುಪಡಿಯನ್ನೇ ರದ್ದುಪಡಿಸಿ ಮ್ಯುನಿಸಿಪಾಲಿಟಿಯು ಪೂರ್ಣ ಅರಿವುಳ್ಳ ಹೊಸಬರನ್ನು ನೇಮಿಸಿಕೊಂಡು ಹೊಸ ತೆರಿಗೆ ಯಾದಿಯನ್ನು ತಯಾರಿಸುವದುತ್ತಮ. ಟೌನ ಮ್ಯುನಿಸಿಪಾಲಿಟಿಯು ಜಿಲ್ಲಾ ಲೋಕಲ್ ಬೋರ್ಡಿನಂತೆ ಬಳಿಯ ಸಹಾನುಭೂತಿಯಿಂದ ದೀರ್ಘ ವಿಚಾರ ಮಾಡಿ ತೆರಿಗೆದಾರರನ್ನು ಕಾಯ ಬೇಕಾಗಿ ಸೂಚನೆ.

ಮಿ| ಚಿದ್ಮಹಾಳರವರು ಕಳೆದ ಸೋಮವಾರ ೧೦ ನೆ ತಾರೀಖು ಕೆಲಸ್ಟು ಸೇವಾನಿವೃತ್ತರಾಗಿ ಬುಧವಾರ ತಮ್ಮ ಊರಿಗೆ ತೆರಳಿ ಹೋದರು. ತಾಲೂಕ ಕಚೇರಿಯವರೂ, ತಾಲೂಕ ಬೋರ್ಡಿನ ಅಧ್ಯಕ್ಷ ರಾ| ಟಿಮ್ಮಯ್ಯ ನಾಯ್ಕರೂ, ಮ್ಯುನಿಸಿಪಲ್ ಆಫೀಸಿನವರೂ ಮಿ| ಚಿದ್ಮಹಾಳರಿಗೆ ಪಾನಸುಪಾರಿ, ಚಹಾಪಾನಗಳಿಂದ ಸತ್ಕರಿಸಿದರು.

ದೈವಜ್ಞಬ್ರಾಹ್ಮಣರು ಶ್ರೀ ಕ್ಷೇತ್ರ ಗೋಕರ್ಣದ ಉಪಾಧಿವಂತರ ಮೇಲೆ ಮಾಡಿದ ದಾವೆಯು "ದೈವಜ್ಞರು ಬ್ರಾಹ್ಮಣರೋ ಹ್ಯಾಗೆ" ಎಂಬ ಹೊಸ ಮುದ್ದೆಯು ಬಗೆಹರಿಯುವದಕ್ಕಾಗಿ ಇಲ್ಲಿಯ ಮೂಲ ಕೋರ್ಟಿಗೆ ರಿಮಾಂಡ ಆಗಿ ಬಂದಿತ್ತು, ಕಳೆದ ಸೋಮವಾರದಿಂದ ದಾವೆಯ ವಿಚಾರ ನಡೆಯುತ್ತಲಿದೆ. ಸಾಕ್ಷಿ— ಪುರಾವೆ ಹೇರಳವಿರುವದರಿಂದ ಈ ದಾವೆಯು ವಿಚಾರ ತನ್ನ ಎರಡು ವಾರ ನಡೆಯಬಹುದು.

ಮಂಗಳೂರಿನ ಶ್ರೀ ಅಂಬಾ ಪ್ರಸಾದಿಕ ನಾಟಕ ಮಂಡಳಿಯವರು ಇಲ್ಲಿಗೆ ಬಂದಿದ್ದು 'ಮಾಯಾ ಸೊಸೆ,' 'ವಿಮಲ ಮಾಧುರಿ' ಮತ್ತು 'ಭಕ್ತ ತುಲಸೀದಾಸ' ಹೀಗೆ ಈ ತನಕ ೩ ಆಟಗಳನ್ನಾಡಿದರು. ನಾಟಕಗಳು ಪ್ರೇಕ್ಷಣೀಯವಿವೆ.

ಗೋಕರ್ಣದಲ್ಲಿ ಮೈಲಿ ಬೇನೆಯು ಪರಿಹಾರವಾಯಿತು ಹಳ್ಳಿಗಳಲ್ಲೂ ಹಬ್ಬಲಾರಂಭಿಸಿದೆ. ಜನರು ಜಾಗ್ರತೆಯಿಂದ ಮನೆಯಲ್ಲೂ ಮನೆಯ ಸುತ್ತುಮುತ್ತಲೂ ಸಂಪೂರ್ಣ ಸ್ವಚ್ಛತೆ ಕಾಪಾಡಿ ಪಥ್ಯಕರ ಆಹಾರವನ್ನೇ ತಕ್ಕೊಳ್ಳತಕ್ಕದ್ದು.

ಹಿರೇಗುತ್ತಿಯಲ್ಲಿ ಕಳೆದ ತಾ ೫ಕ್ಕೆ ಒಂದು ರೇಶಿ ಪ್ರದರ್ಶನ ಜರುಗಿತು. ಜಿಲ್ಲಾ ಕೃಷಿ ಇಲಾಖೆಯ ರಾ| ಹುಬ್ಬಳ್ಳಿಕರರು ಹಿರೇಗುತ್ತಿಯಲ್ಲಿ "ಎಚ್. ಎಮ್. ೫೫೫" ನೇ ಜಾತಿಯ ಕಬ್ಬು ಬೆಳೆಸುವದು ಉತ್ತಮವೆಂತಲೂ, "ಮಸೂರಿ ೧೧೫" ನೇ ಜಾತಿಯ ಭತ್ತ ಉಪಯೋಗಿಸಿದರೆ ವಿಶೇಷ ಲಾಭವುಂಟಾಗುವದೆಂತಲೂ ನೆರೆದ ಜನರಿಗೆ ತಿಳಿಸಿ ಹೇಳಿದರು. ಬೆಳೆಗಳ ಮೇಲೆ ಮದ್ದು, ಮಾವು ಬೆಳೆಸಿ ಉದ್ಧರಿಸುವ ಮಾಹಿತಿಯನ್ನು ರೈತರಿಗೆ ಉಪದೇಶ ಮಾಡಿದರು. ಹನೇಹಳ್ಳಿಯಲ್ಲೂ ಇಂಥದೊಂದು ಪ್ರದರ್ಶನವಾಯಿತು.

ಹೊನ್ನಾವರ— ಪೂರ್ವದ ಗಾಳಿ ವಿಶೇಷ ರಭಸದಿಂದ ಬೀಸುತ್ತಿದೆ, ಚಳಿಯ ಬಾಧೆ ಹೆಚ್ಚು. ತೆಂಗಿನ ಕಾಯಿಯ ದರ ಇಳಿಯಿತು; ಆದರೆ ಎರಡು ವಾರದಿಂದ ತೆಂಗಿನ ಎಣ್ಣೆಯ ದರವೇರಿತು !

ಮ್ಯುನಿಸಿಪಾಲಿಟಿಯವರು ನಗರಗಳ ಮೇಲೆ ನೀರು ಹಾಕಕೊಟ್ಟ ಕಂಟ್ರ್ಯಾಕ್ಟದಾರರು ನಳಕ್ಕೆ ಹರಿಯುವ ರಿಲಿಗೆ ನೀರು ಬಳಸಿ ಹೋಗುತ್ತಾರೆ. ಈ ಪೈಪಿನೊಳಗೆ ಎಂದಿನಂತೆ ಧೂಳು ಹಾರುತ್ತದೆ. ಮ್ಯುನಿಸಿಪಾಲಿಟಿಯವರು ಇತ್ತ ಜಾಗ್ರತೆ ವಹಿಸಬೇಕು.

ಮ್ಯುನಿಸಿಪಾಲಿಟಿಯು ನಗರಗಳ ಎರಡೂ ಪಕ್ಕಗಳ ತೋಡುಗಳಲ್ಲಿ ಹೊಲಸು ತುಂಬಿರುತ್ತದೆ. ಅದನ್ನು ಸ್ವಚ್ಛ ಮಾಡಿಸದಿದ್ದರೆ ಪಟ್ಟಣಿಗರ ಆರೋಗ್ಯಕ್ಕೆ ಹಾನಿ.

ದಾಮಶೀರ್ಷದ ಕಡೆ ಹೋಗುವ ದಾರಿಯ ಮೇಲೆ ದೀಪಸ್ತಂಭಗಳನ್ನಿಡಬೇಕು, ಇಲ್ಲದಿದ್ದರೆ ಮೆಟ್ಟಲು ಇಳಿದು ಸ್ನಾನಕ್ಕೆ ಹೋಗುವ ಜನರು ಬೀಳುವ ಸಂಭವವುಂಟು. ಸುಮಾರು ೧೦೦ ಮೆಟ್ಟಲು ಏರಬೇಕಾಗಿ ಇಳಿದು ಹೋಗುವದಿದೆ.

ಬಘೇಲಿಯಲ್ಲಿ ಶ್ರೀ ವೆಂಕಟರಮಣ ದೇವಸ್ಥಾನದ ಮುಂಭಾಗದಲ್ಲಿರುವ ಶ್ರೀ ಮಾರುತಿ ದೇವರ ಗುಡಿಯು ಚಂದ್ರಶಾಲೆ ಶೀರ್ಣ ಜೀರ್ಣವಾಗಿದೆ, ಮುಖ್ಯವಾಗಿ ದೇವರ ಛಾವಣಿ ಸಂಪೂರ್ಣ ಹೋಗಿರುವದು. ಭಕ್ತ ಪ್ರಮುಖರು ಮುಂದಾಗಿ ಈ ಕಾರ್ಯ ಮಾಡಿ ಶ್ರೇಯ ಹೊಂದಬೇಕು.

ಇಲ್ಲಿಯ ಸಬ್‌ಜಡ್ಜ ರಾ| ಬಿ. ವಿ. ನಾಡಕರ್ಣಿಯವರಿಗೆ ಬಾಗಲಕೋಟೆಗೆ ವರ್ಗವಾಗಿದೆ. ರಾ| ನಾಡಕರ್ಣಿಯವರು ತಮ್ಮ ಕೆಲಸವನ್ನು ಚೊಕ್ಕ ರೀತಿಯಿಂದ ನಡಿಸಿ ಒಳ್ಳೇ ಹೆಸರು ಸಂಪಾದಿಸಿದ್ದಾರೆ. ಅವರಿಗೆ ವರ್ಗವಾದ ವಾರ್ತೆಯಿಂದ ಇಲ್ಲಿನ ಜನರಿಗೆ ವ್ಯಸನವಾಗಿದೆ.

ಒಂದು ಹೊಸ ಸುದ್ದಿ! ಇಲ್ಲಿಯ ಕೋರ್ಟ ಕಂಪೌಂಡಿನಲ್ಲಿ ಜನಸ್ತೋಮ ಬರದ ದನ-ಕರಗಳನ್ನಿಡಲು ಕೊಟ್ಟಿಗೆ ಕಟ್ಟಿಸಿದ್ದಾರೆ. ಸೊಗಸಾದ ಕೊಟ್ಟಿಗೆ. ಸಾಕ್ಷಿದಾರರು ತಂಗುವ ಕೊಟ್ಟಿಗೆಗಿಂತ ಈ ದನದ ಕೊಟ್ಟಿಗೆ ಮೇಲಿನದಾಗಿದೆ! ಅದಕ್ಕಾಗಿ ಸಾಕ್ಷಿದಾರರ ಅಸೂಯೆ !

ಶಿರಸಿ— (ತಾ. ೬-೧-೩೫) ಚಳಿಯ ಮಾನ ಕಡಿಮೆಯಾಗುವ ಲಕ್ಷಣಗಳು ಕಂಡುಬರುತ್ತಿವೆ.

ಭತ್ತದ ದರ ಇಳಿಯಲಾರಂಭಿಸಿದೆ. ಈ ವರ್ಷ ಭತ್ತದ ಬೆಳೆ ಸರಿಯಾಗಿ ಬರಲಿಲ್ಲ. ಅಡಿಕೆ ಬೆಳೆಯೂ ಬಹಳ ಕಡಿಮೆ ಮೇಲಾಗಿ ಅಡಿಕೆಗೆ ದರವಿಲ್ಲ ! ರೈತರಿಗೆ ಕಷ್ಟಕಾಲ ಬಂದಿದೆ, ಮುಂದೆಗೋತ್ರ ಕೇರೆಯಲ್ಲಿಂತೂ ಭತ್ತದ ಸ್ಥಿತಿ ತೀರ ನಿಕೃಷ್ಟವಾಗಿದೆ. ಸೆಟ್ಲಮೆಂಟ ಆಫೀಸರರಾದ ರಾ| ದೇಸಾಯಿಯವರು ಸೂಕ್ಷ್ಮ ರೀತಿಯಿಂದ ರೈತರ ಅವಸ್ಥೆಯನ್ನು ನೋಡಿಕೊಳ್ಳಬೇಕು.

ಇಲ್ಲಿಂದ ಸುಮಾರು ೧೬—೧೭ ಮೈಲು ದೂರ ಇರುವ ಕುಮಟಾ ಮಾರ್ಗದ ಮೇಲಿನ ಕಸಗೆ ಗ್ರಾಮದಲ್ಲಿ ೬—೮ ದಿನಗಳ ಹಿಂದೆ ಬೆಂಕಿಬಿದ್ದು ೩೦೦—೪೦೦ ರೂಪಾಯಿಗಳ ನಷ್ಟ. ರಾತ್ರಿ ನೀರು ಕಾಯಿಸಲು ಬಚ್ಚಲು ಮನೆಯಲ್ಲಿ ಮಾಡಿದ ಬೆಂಕಿಯೇ ಈ ಅಪಘಾತಕ್ಕೆ ಕಾರಣ. ರಾ| ಪಾಂಡುರಂಗ ಮಂಜಯ್ಯ ಹೆಗಡೆ ಭಾಗವತರ ಎರಡೂ ಕಾಲುಗಳು ಊನವಾಗಿವೆ; ಅವರ ಮನೆ-ಅಂಗಡಿ ಸುಟ್ಟು ಹೋಯಿತು. ೩ ಭತ್ತದ ಗೊಣಬೆಗಳು ಸುಟ್ಟು ಹೋದವು. ರಾ| ಕೃಷ್ಣ ವಿಠೋಬ ನಾಯ್ಕ ಇವರ ಮನೆ-ಅಂಗಡಿಗಳೂ ಸುಟ್ಟು ಹೋದವು. ಗಂಗು ಶೆಟ್ಟಿ, ಪೋಮ್ಲು ಮೊಗೇರ; ಈ ಇಬ್ಬರು ನಾರಾಯಣರ ೬ ಗೊಣಬೆ ಭತ್ತ ಸುಟ್ಟು ಬೂದಿ. ನಾಲ್ಕು ಮನೆಯವರೂ ನಿರ್ಗತಿಕರಾಗಿದ್ದಾರೆ. ಔದಾರ್ಯವಂತರು ನೆರವಾಗದಿದ್ದರೆ ಎಲ್ಲರೂ ಉಪವಾಸ ಸಾಯುವರೇ !

ಸೆಟ್ಲಮೆಂಟ ಆಫೀಸರರಾಗಿದ್ದ ರಾ| ಎಮ್. ಜೇ. ದೇಸಾಯಿಯವರಿಗೆ ಸೆಟ್ಲಮೆಂಟ ಕೆಲಸ ಮುಗಿದ ಬಳಿಕ ಧಾರವಾಡದ ಕಲೆಕ್ಟರರಾಗಿ ನೇಮಿಸಲಾಗಿದೆ.

ಅಂಕೋಲಾ— ರಾ| ಯಶವಂತ ಬಾಳು ಕಿಣಿ, ವಕೀಲ ಇವರು ತಿಳಿಸುವದೇನಂದರೆ:— "ಅವರ್ಸೆಯ ಶ್ರೀ ಕಾತ್ಯಾಯನೀ ಬಾಣೇಶ್ವರ ದೇವಸ್ಥಾನದಲ್ಲಿ ಹೊಸ ಮೊಕ್ತೇಸರರು ನಾನಾ ವಿಧದ ಸುಧಾರಣೆಗಳನ್ನು ಮಾಡಿದ್ದಾರೆ. ಕೆಲವು ಸುಧಾರಣೆಗಳ ಬಗ್ಗೆ ಅವರು ಹೊಗಳಿಕೆಗೆ ಪಾತ್ರರಿದ್ದಾರೆ. ಆದರೆ ಅವರ ಕಾರಭಾರವು ಪೂರ್ಣ ನಿರ್ದೋಷವಿರುತ್ತದೆಂದು ತಿಳಿಯಕೂಡದು, ಮೊಕ್ತೇಸರರು ಬಂದ ಭಕ್ತರಿಗೆಲ್ಲ ತಮ್ಮ ಸುಧಾರಣೆಗಳ ಬಗ್ಗೆ ನೋಟುಗಳನ್ನು ತೋರಿಸಿ ಮರುಳು ಮಾಡುತ್ತಾರೆ. ಅಂತಃಸ್ಥಿತಿಯನ್ನು ಯಾರೂ ನೋಡುವದಿಲ್ಲ. ಭಕ್ತರು ಇತ್ತ ಲಕ್ಷ್ಯ ಕೊಡಬೇಕು.

"ಹಿಂದಿನ ಮೊಕ್ತೇಸರರು ದೇವರ ಹೊಲ-ಭೂಮಿಗಳ ಕಡೆಗೆ ವಿಶೇಷ ಲಕ್ಷ್ಯ ಪೂರೈಸಿ ಆಗಾಗ್ಗೆ ದುರಸ್ತಿ ಮಾಡುತ್ತಿದ್ದರು, ಉಪ್ಪು ನೀರು ಬರುವ ಭೂಮಿಗಳಿಗೆ ಕರೇಕಲ್ಲಿನ ಕಟ್ಟು ಹಾಕಿಸಿ, ಅಲ್ಲಿಯ ಉತ್ಪನ್ನ ಹೆಚ್ಚು ಮಾಡಿದ್ದರು. ಹೊಸ ಅಧಿಕಾರಿಗಳಿಗೆ ಆ ಕಡೆಗೆ ಲಕ್ಷ್ಯವಿಲ್ಲ. ಕೆಲವು ಹೊಲಗಳಲ್ಲಿ ಕಟ್ಟು ಒಡೆದು ಉಪ್ಪು-ನೀರು ಒಳಗೆ ಬರಲಾರಂಭಿಸಿದೆ. ಇದೇ ಸ್ಥಿತಿ ಕೆಲವು ವರ್ಷ ನಡೆದರೆ ಹೊಲ-ಭೂಮಿಗಳೆಲ್ಲ ಹಾಳು ಬಿದ್ದು ಸ್ಥಿರ-ಉತ್ಪನ್ನವು ಇಳಿದು ಹೋಗುವದು. ಹೊಸ ಮೊಕ್ತೇಸರರು ದೇವಸ್ಥಾನದ ಇಮಾರತುಗಳಿಗೆ ಗಿಲಾಯಿ ತೆಗೆದು ಸಿಂಗರಿಸುವದರಲ್ಲೇ ತಮ್ಮ ಹಣ ಮತ್ತು ಶ್ರಮಗಳನ್ನು ವೆಚ್ಚ ಮಾಡಿ ಹೊಲ-ಭೂಮಿಗಳ ಕಡೆ ನೋಡುವದೇ ಇಲ್ಲ.

" ಹೊಸ ಮೊಕ್ತೇಸರರು ಹಬ್ಬಿಯನ್ನು ಅರುವದಲ್ಲಿ ೩-೪ ಸಾರೆ ಒಡೆದು ಹಬ್ಬಿ ಹೊಂಡವನ್ನು ಕಾಣಿಕೆಯ ಉತ್ಪನ್ನವನ್ನು ಲೆಕ್ಕದಲ್ಲಿ ಜಮಾ ಬರೆದು ಆಧಾವನ್ನು ತಯಾರಿಸುತ್ತಾರೆ. ಹಬ್ಬಿ ಹಣ ಬೇರೆ ತೆಗೆದಿಟ್ಟರೆ ದೇವಸ್ಥಾನದ ಜಮಾ-ಖರ್ಚಿನ ಸ್ವರೂಪವೇ ಬೇರೆ ಕಾಣುವಂತಿದೆ.

" ಕಳೆದ ಅಕ್ಟೋಬರ ಮಾಸದಲ್ಲಿ ದೇವಸ್ಥಾನದ ಮುಂಭಾಗದ ಕಿಡಕಿ-ಬಾಗಿಲಿಗೆ ಕಟ್ಟಿಸಲಿಕ್ಕೆಂದು ಮಾಯಾ ಸಹ ತೆಗೆಸಿಟ್ಟಿದ್ದರು. ಬಂದ ಬಂದ ಭಕ್ತ ಜನರಿಗೆ ಬಾಗಿಲಿಗೆಯು ಕಲ್ಪನೆ ಮಾಡಿಕೊಟ್ಟು, ರಂಗಸೆ ಮಾಡಿ ಸಂತೋಷಿಸುತ್ತಿದ್ದರು! ಮುಂದೆ ದಾನದ ಅಡಚಣಿ ಉಂಟಾಯಿತೋ ಏನೋ! ಈಗ ಪಾಯಾ-ಪಂಚಾಂಗ ಮುಚ್ಚಿ ಹಾಕಿ ಮುಚ್ಚಿದ್ದಾರೆ. ರೂ. ೪। ರಂತೆ ಕೊಂಡ ಚರೆಕಲ್ಲುಗಳನ್ನು ರೂ. ೩।, ೩।। ರಂತೆ ಮಾರಾಟ ಮಾಡುತ್ತಿದ್ದಾರೆ. ಇಮಾರತು ಕಟ್ಟಿಗೆಯನ್ನು ಸಹ ಕೊಂಡ ಬೆಲೆಗಿಂತ ಕಡಿಮೆ ಬೆಲೆಗೆ ಮಾರುತ್ತಿದ್ದಾರೆ. ಈ ರೀತಿ ಶ್ರೀ ದೇವರಿಗೆ ಹಾನಿ ಮಾಡುವದೇಕೆ ? ಕಲ್ಲು-ಕಟ್ಟಿಗೆಗಳನ್ನು ಹಾಗೇ ಇಟ್ಟರೆ ಆಗದೇ ?

" ಭಕ್ತರು ದೇವಸ್ಥಾನದಲ್ಲಿ ಶಾಶ್ವತ ವಿನಿಯೋಗಗಳನ್ನು ಕಟ್ಟುವರೆ ಕೊಟ್ಟ ಮೂಲಧನವನ್ನು ಮೊಕ್ತೇಸರರು ಇಮಾರತು ಕಟ್ಟಿಸಲಿಕ್ಕೆ ವಿನಿಯೋಗಿಸುವದರಿಂದ ಮುಂದೆ ತೊಂದರೆಯಾಗಬಹುದು. ಶಾಶ್ವತ ಉತ್ಪನ್ನ ಸಿಗುವಂಥ ಆಸ್ತಿಯ ಮೇಲೆ ಆ ಹಣ ಹಾಕಬೇಕಲ್ಲದೆ ಅನುತ್ಪಾದಕ ಇಮಾರತುಗಳ ಮೇಲೆ ಹಾಕಕೂಡದಲ್ಲ. ವಿನಿಯೋಗಗಳನ್ನು ಇಡುವ ಭಕ್ತರು ಇತ್ತ ಲಕ್ಷ್ಯಗೊಟ್ಟು ಚೌಕಸಿ ಮಾಡಬೇಕು. ಮಹಿಮಾಟ ಮಾಡಿಗೊಂಡು ಸೂಚನೆ. ಬರೇ ಉದ್ದುದ್ದ ಜಮಾ-ಖರ್ಚು ಬರೆದು, ಇಮಾರತುಗಳನ್ನು ಸಿಂಗರಿಸುತ್ತ ನಾಟಕವಾಡಿ ಉಪಯೋಗವಿಲ್ಲ. ಎಲ್ಲ ಕಡೆಗೆ ಲಕ್ಷ್ಯಗೊಟ್ಟು ಸರ್ವಾಂಗೀಣ ಸುಧಾರಣೆ ಮಾಡಿದರೇ ಉಪಯೋಗ." ಇತ್ಯಾದಿ.

ಕಾರವಾರ—"ಪ್ರಾಥಮಿಕ ಶಿಕ್ಷಣ ಡಿಪಾರ್ಟಮೆಂಟದ ಸಂಬಳಗಳಲ್ಲಿ ಮುಂದಿನ ವರ್ಷದಿಂದ ಶೇಕಡಾ ೧೪ ರಂತೆ ೩೫೦ ಸಾವಿರ ಕಡಿತ ಮಾಡಬೇಕೆಂದು ಜಿಲ್ಲಾ ಲೋಕಲ್ ಬೋರ್ಡಿನವರು ತೀರ್ಮಾನ ಮಾಡಿರುತ್ತಾರೆ. ಸದರ ಡಿಪಾರ್ಟಮೆಂಟಿಗೆ ಕೊಡಲಿಕ್ಕೆಂತ ಸರಕಾರದಿಂದ ಸಿಗುತ್ತಿರುವ ಹಾಜರಿ ಪಟ್ಟಿಯ ರಕಮನ್ನು ಬೋರ್ಡಿನವರು ಮೊದಲಿನಿಂದಲೇ ತಮ್ಮ ಬೊಕ್ಕಸದಲ್ಲಿ ಹಾಕುತ್ತಿದ್ದು ಈಗ ಉಳಿದ ಸಂಬಳದಲ್ಲೂ ಕಡಿತ ! ಆದರೂ ಕಾಲ ಎಲ್ಲೆಲ್ಲೂ ಆಗದ ಪ್ರಮಾಣದಲ್ಲಿ! ಜಿಲ್ಲಾ ಬೋರ್ಡಿನ ಈ ಹಠವಾದ ಕತ್ತರಿಯ ಪ್ರಭಾವ ನೋಡಿ ಬಡ ಶಾಲಾ ಶಿಕ್ಷಕರು ಹೆದರಿಕೆ ಹತ್ತಿದ್ದಾರೆ. ದೀನವದನರಾಗಿ ಸ್ಕೂ| ಡೆಪ್ಯುಟಿ ಸಾಹೇಬರ ಕಡೆಗೆ ನೋಡಹತ್ತಿದ್ದಾರೆ. ಮಹದಯರು ಬಡವರ ಬಗ್ಗೆ ಕನಿಕರಪಟ್ಟು ನೆರವಾಗುವರೇ" ಹೀಗೆ ಶಾಲಾ ಶಿಕ್ಷಕರ ಮಿತ್ರನೊಬ್ಬನು ಬರೆಯುತ್ತಾನೆ.

— ಬಂಗಾಲ ಪ್ರಾಂತದೊಳಗಿನ ದಬ್ಬಿಳಿಕೆಯ ಬಂದು ಉದಾಹರಣೆ ಇತ್ತೀಚೆಗೆ ನಡೆಯಿತು ಕೈದುಖಾನೆಯಲ್ಲಿಟ್ಟಿದ್ದರು. ಅಲ್ಲಿ ಅವರು ಸಹಜ ಮಾತಾಡಿದರು, ಆದರಿಂದ ಅವರ ಮೇಲೆ ಹೊರಿಸಿದ ಭಾವನಾಬಂದಿಯ ಹುಕುಮಿನ ಭಂಗವಾಯಿತೆಂದು ರೂ ೫೦-೫೦ ದಂಡ ! !

ಅಲ್ಲಲ್ಲಿ ಇಷ್ಟಿಷ್ಟು!

[೩ನೇ ಪಾನಿನಿಂದ ಮುಂದರಿಸಿದ್ದು

ಭತ್ತ ಬೆಳೆಯಿತು. ಇಷ್ಟು ಭೂಮಿಯಲ್ಲಿ ೩ ಕೋಟಿ ೬ ಲಕ್ಷ ೫೫ ಸಾವಿರ ಟನ್ನು ಅಕ್ಕಿಯಾಯಿತು. ಮುಂಚಿನ ವರುಷ ಅಂದರೆ ೧೯೩೦—೩೧ನೇ ಸಾಲಿನಲ್ಲಿ ೮ ಕೋಟಿ ೪೦ ಲಕ್ಷ ಎಕರೆ ಭೂಮಿಯಲ್ಲಿ ೩ ಕೋಟಿ ೨೯ ಲಕ್ಷ ೮೮ ಸಾವಿರ ಟನ್ನು ಅಕ್ಕಿಯಾಗಿತ್ತು. ೧೮ ಲಕ್ಷ ೮೭ ಸಾವಿರ ಟನ್ನು ಅಕ್ಕಿ ರಫ್ತಾಯಿತು. ಈ ರಕಮಿನಲ್ಲಿ ೧೬ ಲಕ್ಷ ೫೭ ಸಾವಿರ ಟನ್ನು ಬ್ರಹ್ಮದೇಶದಿಂದ ರಫ್ತಾಯಿತು. ಬ್ರಹ್ಮದೇಶವನ್ನು ಬಿಟ್ಟರೆ ಹಿಂದುಸ್ಥಾನದಲ್ಲಿ ಹುಟ್ಟುವ ಅಕ್ಕಿ ಹಿಂದುಸ್ಥಾನಕ್ಕೆ ಸಾಕಾಗುವದಿಲ್ಲ. ೧೯೩೨—೩೩ನೇ ಸಾಲಿನಲ್ಲಿ ಬ್ರಹ್ಮದೇಶದಿಂದ ೯ ಲಕ್ಷ ೩೬ ಸಾವಿರ ಟನ್ನು ಅಕ್ಕಿ ಆಮದಾಯಿತು. ಜೋಳ, ಸಜ್ಜೆ, ರಾಗಿ ಇವು ಬೆಳೆದ ಕ್ಷೇತ್ರ ೩ ಕೋಟಿ ೯೭ ಲಕ್ಷ ಎಕರೆ, ಗೋಧಿಯ ಕ್ಷೇತ್ರ ೩ ಕೋಟಿ ೩೦ ಲಕ್ಷ ಅಂತು ೯೪ ಲಕ್ಷ ೫೬ ಸಾವಿರ ಟನ್ನು ಗೋಧಿ ಬೆಳೆಯಿತು. ೨| ಕೋಟಿ ಎಕರೆ ಭೂಮಿಯಲ್ಲಿ ೫೫ ಲಕ್ಷ ಗಂಟು ಅರಳೆ ಹುಟ್ಟಿತು ೧ ಅಬ್ಜ ೩೩ ಕೋಟಿ ಸಾಮಾನು ವಿದೇಶದಿಂದ ಆಮದಾಯಿತು. ಅಂದರೆ ಮುಂಚಿನ ವರ್ಷಕ್ಕಿಂತ ಈ ವರ್ಷದಲ್ಲಿ ೭ ಕೋಟಿ ರೂಪಾಯಿಗಳ ಸಾಮಾನು ಹೆಚ್ಚು. ಬ್ರಿಟಿಶ ದೇಶದಿಂದ ೪ ಕೋಟಿ ರೂಪಾಯಿಗಳ ಸಾಮಾನು ಹೆಚ್ಚು ಬಂತು. ಉಳಿದ ದೇಶಗಳಿಂದ ೪ ಕೋಟಿ ರೂಪಾಯಿಗಳ ಸಾಮಾನು ಬಂತು. ಇನ್ನೂ ಹೆಚ್ಚಿಗೆ ಸಾಮಾನು ಇತ್ತ ಕಡೆ ಆಮದಾಗುತ್ತಿತ್ತು. ಆದರೆ ಕಾಳು-ಕಡಿಗಳ ದರ ವಿಪರೀತ ಕುಗ್ಗಿದ್ದರಿಂದ ಜನರ ಕಡೆ ಹಣ ಉಳಿಯದೆ ಸಾಮಾನು ಖರೀದಿಗಳು ತೊಂದರೆಯಾಯಿತು. ಹೆಚ್ಚಾಗಿ ಆಮದಾದ ಸಾಮಾನು ವಿದೇಶಿ ಅರಿವೆ. ೧೨ ಕೋಟಿ ರೂಪಾಯಿಗಳ ಅರಿವೆ ಹೆಚ್ಚಿಗೆ ಬಂತು. ಹಿಂದುಸ್ಥಾನ ದೇಶದಿಂದ ರಫ್ತಾದ ಸಾಮಾನುಗಳ ಕ್ರಯ ೧೨೮ ಕೋಟಿ. ಇದಲ್ಲದೆ ೬೫ ಕೋಟಿ ರೂಪಾಯಿಗಳ ಚಿನ್ನ ರಫ್ತಾಯಿತು. ಈ ಪ್ರಕಾರ ಹಿಂದುಸ್ಥಾನಕ್ಕೆ ೪೩ ಕೋಟಿ ರೂಪಾಯಿ ಸಲ್ಲುವದಾಯಿತು. ವಿದೇಶದಿಂದ ಆಮದಾದ ಸಾಮಗ್ರಿಗಳಲ್ಲಿ ಈ ಕೆಳಗಿನ ಸಾಮಗ್ರಿಗಳಿವೆ. ಹಾಲು ೬೮ ಲಕ್ಷ ರೂಪಾಯಿ. ಬೆಣ್ಣೆ ೨೮ ಲಕ್ಷ ರೂಪಾಯಿ; ಚಿಕ್ಕ ಮಕ್ಕಳ ತಿನಸು ೨೬ ಲಕ್ಷ ರೂಪಾಯಿ., ತುಪ್ಪ ೨೫ ಸಾವಿರ ರೂ ಬಿಸ್ಕಿಟ ಮೊದಲಾದ ಸವಿಸವಿ ತಿಂಡಿ ೫೨|| ಲಕ್ಷ ರೂ; ಕುಂಕುಮ ೨೯ ಲಕ್ಷ ರೂಪಾಯಿ, ಕರ್ಪೂರ ೨೬ ಲಕ್ಷ ರೂಪಾಯಿ. ಕೇಶರ ೧೦ ಲಕ್ಷ ರೂಪಾಯಿ, ಖರ್ಜೂರ ೬೦ ಲಕ್ಷ ರೂಪಾಯಿ, ೯ ಲಕ್ಷ ರೂಪಾಯಿಯ ತೆಂಗು ಬರುತ್ತಿದೆ. ಒಟ್ಟಾವಾ ಕರಾರಿನಿಂದ ಹಿಂದುಸ್ಥಾನದಲ್ಲಿ ವಿದೇಶಿ ಸಾಮಾನುಗಳು ಹೆಚ್ಚೆಚ್ಚಾಗಿ ಬೀಸೇರಲು ಕಾರಣವಾಯಿತು ಅದೇನಿದ್ದಾಗ್ಯೂ ಹಿಂದವಾಸಿಗಳು ಕಲಿಯಬೇಕಾದದ್ದೇನು? ಹಾಲು, ಬೆಣ್ಣೆ, ತುಪ್ಪ, ಕುಂಕುಮ, ಕರ್ಪೂರ ಮೊದಲಾದ ಜೀನಸುಗಳೂ, ಚಿಕ್ಕ ಮಕ್ಕಳ ತಿಂಡಿ-ತಿನಸುಗಳೂ ವಿದೇಶದಿಂದ ಬರಗೊಡುವದು ಹಿಂದುಸ್ಥಾನಕ್ಕೆ ಭೂಷಣವಲ್ಲ, ಅವುಗಳನ್ನು ಉಪಯೋಗಿಸುವದು ದೇಶಾಭಿಮಾನವಲ್ಲ.

— ಬಿಹಾರದಲ್ಲಿ ಒದಗಿದ ಭೂಕಂಪದಿಂದ ಒಂದು ಪ್ರಕಾರದ ಹುಲ್ಲು ಬೆಳೆದದೆ. ಆ ಹುಲ್ಲು ತಿಂದ ಸಾವಿರಾರು ದನಗಳು ಸತ್ತುಹೋದವು.

— ಮೊನ್ನೆ ಆದ ಚಂದ್ರಗ್ರಹಣದಿಂದ ದೇಶ-ವಿದೇಶಗಳಲ್ಲಿ ಭಯಂಕರ ಕಷ್ಟ ಎರುವದಾಗಿ ಕಾವೇರಿಯ ಪಂಡಿತ ಹೊಸರಿತ್ತಿ ಶಾಸ್ತ್ರಿಗಳು ಬರೆಯುತ್ತಾರೆ. ಯುದ್ಧವಾಗುವದಾಗಿಯೂ ಅವರು ಅಭಿಪ್ರಾಯಪಡುತ್ತಾರೆ. ಭಗವಂತನ ಅಗಾದ ಲೀಲೆ!

ಹೈಗುಂದ ಕುರ್ವೆ ಬೆಲ್ಲ!

ಸುಧಾರಿಸಿದ ಪದ್ಧತಿಯಿಂದ ತಯಾರಿಸಿದ

ಮುಡಕೆ ಬೆಲ್ಲ.

ಹೊನ್ನಾವರ— ರಾ|| ಕೂಡ್ಲ ವಾಸುದೇವ ಶಾನಭಾಗ.
ಕುಮಟಾ— ರಾ|| ಮೂಲಜಿ ದೇವಜಿ ಶೇಟ.
ಕಾರವಾರ— ರಾ|| ನಾಗಪ್ಪಾ ರವಳ ಮಹಾಲೇ.

ಇವರಲ್ಲಿ ಮಾರುವದಕ್ಕೆ ವ್ಯವಸ್ಥೆ ಮಾಡಿರುತ್ತೇವೆ. ಮುಡೆ-ಬೆಲ್ಲ ಬೇಕಾದರೆ ಆರ್ಡರ ಕೊಟ್ಟಲ್ಲಿ ತಯಾರಿಸಿ ಕೊಡುವೆವು. ಕೆಂಪು ಮೊರಿಶಸ್ ಮತ್ತು ದಾಸ ಕಬ್ಬಿನ ಬೀಜ ನಮ್ಮಲ್ಲಿ ಸೋಯಿ ದರದಿಂದ ಸಿಗುತ್ತದೆ. ತಾ. 15—1—1935.

ಎಮ್. ಪಿ. ನಾಡಕರ್ಣಿ, ಹೇರಂಗಡಿ,
ತಾಲೂಕ— **ಹೊನ್ನಾವರ.**

ಕಾರವಾರ ಸಿವ್ಹಿಲ್ ಅಸ್ಪತ್ರಿಯ ಎದುರಿಗೆ ಇರುವ

ನಮ್ಮ ದಂತಚಿಕಿತ್ಸಾಲಯ

ದಲ್ಲಿ ಎಲ್ಲ ತರದ ದಂತಚಿಕಿತ್ಸೆ ಮಾಡಲ್ಪಡುತ್ತದೆ! ಉತ್ಕೃಷ್ಟವಾದ ಶಸ್ತ್ರಸಂಭಾರವಿದೆ. ನೋವಿಲ್ಲದೆ ಹಲ್ಲು ತೆಗೆಯುವೆವು. ಹೊಸ ಕೃತ್ರಿಮ ದಂತಪಂಕ್ತಿಯನ್ನು ಅಚ್ಚುಕಟ್ಟಾಗಿ ಕೂಡ್ರಿಸಿಕೊಡುವೆವು. ನಮ್ಮ ಫಾಸಲುಗಳು ಮಿತವಾಗಿವೆ!

ಡಾ|| ಎಚ್. ಎಲ್. ಎ. ಡಿಸೋಜಾ,
ಡಿ. ಡಿ. ಎಸ್. ಸಿ., **ಕಾರವಾರ.**

ಮುಂಬಯಿ ಸ್ವದೇಶೀ ವಸ್ತುಪ್ರದರ್ಶನದಲ್ಲಿ ಉಚ್ಚ ತರಗತಿಯ ಪಾರಿತೋಷಕ ಪಡೆದ,

ವೆಜಿಟೆಬಲ್ ಸೋಪ ವರ್ಕ್ಸ, ಕಲ್ಲಿಕೋಟೆ.

ಡಿಸ್ಟ್ರಿಬ್ಯೂಟರರು:— **ಬಸ್ತಿಹಿತ್ತಲ ಮಾಹಮೂದ ಸಾಹೇಬ, ಕುಮಟಾ.** (ಉ. ಕನ್ನಡ.)

ಕೊಂಗ್ರೆಸ ಕಾರ್ಯಕಾರಿ ಮಂಡಳದ ಸುದ್ದಿ.

ಮಹತ್ವದ ಠರಾವು— ಬುಧವಾರದ ವೃತ್ತಾಂತ.

ಹೊಸ ವರಿಷ್ಠ ಕಾಯಿದೆ ಕೌನ್ಸಿಲಿನ ಪ್ರಥಮ ಅಧಿವೇಶನವು ಇಂದು ಪ್ರಾರಂಭವಾಗುವದು. ಹೊಸ ಅಧ್ಯಕ್ಷರ ಚುನಾವಣೆ, ಜ್ಯೊಂಟ್ ಪಾರ್ಲಿಮೆಂಟರಿ ಕಮೀಟಿಯ ವರದಿಯ ಬಗ್ಗೆ ಲೋಕನಿಯುಕ್ತ ರಾಷ್ಟ್ರೀಯ ಸಭಾಸದರು ಅನುಸರಿಸಬೇಕಾದ ಧೋರಣ, ಸಾಮಾಜಿಕ ಕಾರ್ಯಕ್ರಮಗಳಲ್ಲಿ ಕೊಂಗ್ರೆಸ ಪ್ರತಿನಿಧಿಗಳ ನಡಾವಳಿ, ಸರ್ವಾಧಿಪತಿಗಳ ಭಾಷಣ ಸಮಾರಂಭದ ಕಾಲಕ್ಕೆ ಕೊಂಗ್ರೆಸಿನವರ ವೃತ್ತಿ, ರಾಷ್ಟ್ರೀಯ ಸಭೆಯವರು ಇತರ ಸಂಗಡದವರೊಡನೆ ಮಾಡಬಹುದಾದ ಸಹಕಾರ ಮೊದಲಾದ ಮಹತ್ವದ ಪ್ರಶ್ನೆಗಳ ಮೇಲೆ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳವು ತನ್ನ ಮನೋಗತವನ್ನು ಸ್ಪಷ್ಟಗೊಳಿಸಿ ಪಾರ್ಲಿಮೆಂಟರಿ ಬೋರ್ಡಿಗೆ ಸ್ಥೂಲ ರೂಪದಿಂದ ಕಾರ್ಯಕ್ರಮವನ್ನು ಹಾಕಿಕೊಡುವದು ಅವಶ್ಯವಿರುವದರಿಂದ, ಕಳೆದ ಬುಧವಾರ ದಿನ ದಿಲ್ಲಿ ಶಹರದಲ್ಲಿ ಕೂಡಿದ ಕಾರ್ಯಕಾರಿ ಮಂಡಳದ ಸಭೆಗೆ ಒಂದು ತರದ ವಿಶೇಷ ಮಹತ್ವವಿತ್ತು. ಸುದೈವದಿಂದ ಮಹಾತ್ಮಾಜಿಯವರ ಮುಕ್ಕಾಮು ಪ್ರಸ್ತುತಕ್ಕೆ ದಿಲ್ಲಿಯಲ್ಲೇ ಇರುವದರಿಂದ, ಕಾರ್ಯಕಾರಿ ಮಂಡಳದವರಿಗೆ ಪ್ರತಿಯೊಂದು ಮಹತ್ವದ ಸಂಗತಿಯಲ್ಲಿ ಅವರ ಸಲಹೆ ಪಡೆಯಲಿಕ್ಕೆ ಅನುಕೂಲವಾಗಿತ್ತು. ಮಂಡಳದ ಸಭಾಸದರೆಲ್ಲರೂ ಮೇಲಿಂದ ಮೇಲೆ ಮಹಾತ್ಮರನ್ನು ಕಂಡು ಅವರ ಕೂಡ ಚರ್ಚೆಯನ್ನು ಮಾಡಿರುತ್ತಾರೆ.

ಕಾರ್ಯಕಾರಿ ಮಂಡಳದ ಸಭೆಯು ಬುಧವಾರ ಮಧ್ಯಾಹ್ನಕ್ಕೆ ಡಾ|| ಅನ್ಸಾರಿಯವರ ಮನೆಯಲ್ಲಿ ಕೂಡಿತು. ೧೯೩೧ನೇ ಇಸ್ವಿಯ ಮಾರ್ಚ ತಿಂಗಳಲ್ಲಿ ಗಾಂಧಿ-ಇರ್ವಿನ್ ಒಪ್ಪಂದದ ಕಾಲಕ್ಕೆ ಇದೇ ಸ್ಥಳದಲ್ಲಿ ಕಾರ್ಯಕಾರಿ ಮಂಡಳದ ಸಭೆ ಕೂಡಿತ್ತು. ೪ ವರ್ಷಗಳ ಮೇಲೆ ಪುನಃ ಅದೇ ಸ್ಥಳದಲ್ಲಿ ಅಷ್ಟೇ ಮಹತ್ವದ ಸಭೆಯು ಕೂಡುತ್ತಿದ್ದುದು ಒಂದು ಯೋಗವೇ ಸರಿ!

ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಮಂಗಳವಾರ ದಿನವೇ ದಿಲ್ಲಿಗೆ ಬಂದು ತಲ್ಪಿದರು. ದಿಲ್ಲಿಯ ನಾಗರಿಕರು ಅವರಿಗೆ ಸಂಭ್ರಮದಿಂದ ಬರಮಾಡಿಕೊಂಡು ಊರಲ್ಲೆಲ್ಲ ಮೆರವಣಿಗೆ ಮಾಡಿದರು. ಅಧ್ಯಕ್ಷರ ಹೊರತು ಮಂಡಳದ ಸಭೆಗೆ ಸರದಾರ ವಲ್ಲಭಭಾಯಿ ಪಟೇಲ, ಸರದಾರ ಶಾರ್ದೂಲ ಸಿಂಗ ಕವೀಶ್ವರ, ಡಾ|| ಸಯ್ಯದ ಮಹಮೂದ, ಸೌ|| ಸರೋಜಿನಿ ನಾಯುಡು, ದೇ|| ಭ|| ಗಂಗಾಧರರಾವ ದೇಶಪಾಂಡೇ, ಡಾ|| ಅನ್ಸಾರಿ, ದೇ|| ಭ|| ರಾಜಗೋಪಾಲಾಚಾರ್ಯ, ದೇ|| ಭ|| ಜಯರಾಮದಾಸ ದೌಲತರಾಮ ಮತ್ತು ಆಚಾರ್ಯ ಕೃಪಾಲಾನಿ ಇವರು ಉಪಸ್ಥಿತರಿದ್ದರು. ಮೌಲಾನಾ ಅಬುಲ್ ಕಲಮ್ ಆಝಾದ ಮತ್ತು ಶೇಟ ಜಮನಾಲಾಲ ಬಜಾಜರವರು ಅಸ್ವಸ್ಥರಿದ್ದುದರಿಂದ ಸಭೆಗೆ ಬರಲಿಲ್ಲ. ಡಾ|| ಪಟ್ಟಾಭಿಸೀತಾರಾಮಯ್ಯನವರೂ, ಶ್ರೀ|| ಖುರ್ಷೀದ ನರೀಮಾನರು ಕೆಲವೊಂದು ಅಡಚಣಿಯ ಮೂಲಕ ಬರಲಿಲ್ಲ. ಗಡಿನಾಡಿನ ಗಾಂಧಿಗಳಂತೂ ಸೆರೆಮನೆಯಲ್ಲಿದ್ದಾರೆ. ಪಾರ್ಲಿಮೆಂಟರಿ ಬೋರ್ಡಿನ ಕಾರ್ಯದರ್ಶಿಗಳೂ ಎಸೆಂಬ್ಲಿಯೊಳಗಿನ ಕೊಂಗ್ರೆಸ ಪಕ್ಷದ ಅಧ್ವರ್ಯುಗಳಾಗಿರುವ ಶ್ರೀ|| ಭುಲಾಭಾಯಿ ದೇಸಾಯಿಯವರೂ ವಿಶೇಷ ನಿಮಂತ್ರಣೆಯ ಮೂಲಕ ಸಭೆಯಲ್ಲಿ ಸನ್ನಿಧರಾಗಿದ್ದರು.

ಪ್ರಾರಂಭಕ್ಕೆ, ಇತ್ತೀಚಿಗೆ ದಿವಂಗತರಾದ ನಾಗಪೂರದ ಡಾ|| ಅಭ್ಯಂಕರ ಮತ್ತು ಆಚಾರ್ಯ ಗಿಡವಾನಿಯವರ ಅಕಾಲಿಕ ನಿಧನದಿಂದ ರಾಷ್ಟ್ರೀಯ ಸಭೆಯ ಹಾಗೂ ರಾಷ್ಟ್ರದ ಹಾನಿಯಾದ ಬಗ್ಗೆ ದುಃಖ ಪ್ರದರ್ಶಿಸಲಾಯಿತು.

ಆಮೇಲೆ ಹೊಸ ರಾಷ್ಟ್ರೀಯ ಸಭೆಯ ಘಟನೆಯ ಬಗ್ಗೆ ಬೇರೆ ಬೇರೆ ಪ್ರಾಂತಿಕ ಕಮಿಟಿಗಳು ಬರೆದು ಕಳಿಸಿದ ಅಭಿಪ್ರಾಯಗಳು ಪರಾಂಬರಿಸಲಾದವು. "ಕನಿಷ್ಠ ೬ ತಿಂಗಳಾದರೂ ಕಾರ್ಯಕ್ರಮದ ಕೆಲಸ ಮಾಡದಿದ್ದವನು (ಕೊಂಗ್ರೆಸ ಕಮಿಟಿಗಳ) ಚುನಾವಣೆಗೆ ನಿಲ್ಲಲು ಅರ್ಹನಾಗಲಾರನು" ಎಂದು ಹೊಸ ಘಟನೆಯಲ್ಲಿ ನಿಯಮವುಂಟು. ಈ ನಿಯಮದಿಂದ ಕೆಲವೊಂದು ತೊಡಕುಗಳುಂಟಾಗಿವೆ. ಇದರ ವಿಚಾರವೂ ಸಭೆಯಲ್ಲಿ ನಡೆಯಿತು. ಕೊಂಗ್ರೆಸ ಮೀಟಿಗಳೂ, ಕೊಂಗ್ರೆಸ ಕಮಿಟಿಗಳಲ್ಲಿ ಆರಿಸಿ ಬಂದವರೂ ಶಿಸ್ತಿನ ಭಂಗ ಮಾಡಿದಲ್ಲಿ ಆ ಕಮಿಟಿಗಳಿಗೆ ಹಾಗೂ ಸಭಾಸದರಿಗೆ ಶಾಸನ ಮಾಡುವ ಕುರಿತು ಕೆಲ ನಿಯಮಗಳು ಮಾಡಲ್ಪಟ್ಟಿವೆ. ಕೊಂಗ್ರೆಸ ಕಾರ್ಯಕ್ರಮಕ್ಕೆ ವಿರುದ್ಧವಾಗಿ ವರ್ತಿಸುವ ಕಮಿಟಿಯನ್ನು ಕಿತ್ತೊಗೆಯುವ ಅಧಿಕಾರವು ಕಾರ್ಯಕಾರಿ ಮಂಡಳಕ್ಕೆ ದೆ. ರಾಷ್ಟ್ರೀಯ ಸಭೆಯ ಆಜ್ಞೆಯ ಉಲ್ಲಂಘನೆ ಮಾಡಿ ವಿರುದ್ಧ ಪ್ರಚಾರ ಮಾಡುವ ಕಮಿಟಿಯ ಸಭಾಸದರಿಗೆ ಕಮಿಟಿಯಿಂದ ಹೊರತಳ್ಳಲಿಕ್ಕೂ, ಕೆಲವೊಂದು ಅವಧಿಯ ತನಕ ಪುನಃ ಚುನಾಯಿಸಿ ಬರಲಿಕ್ಕೆ ಅನರ್ಹರೆಂದು ಠರಾಯಿಸಲಿಕ್ಕೂ ನಿಯಮದಿಂದ ಅಧಿಕಾರ ಕೊಡಲಾಗಿದೆ. ರಾಷ್ಟ್ರೀಯ ಸಭೆಯ ಸಾಮಾನ್ಯ ಸಭಾಸದರು ಸಹ ಶಿಸ್ತುಪಾಲನೆ ಮಾಡದಿದ್ದಲ್ಲಿ ಅವರು ಯಾವದೇ ಚುನಾವಣೆಯಲ್ಲಿ ನಿಲ್ಲಲಿಕ್ಕೆ ಅರ್ಹರಲ್ಲೆಂತಲೂ ಠರಾಯಿಸಲಿಕ್ಕೂ ಅವರ ಸಭಾಸದತ್ವ ರದ್ದುಪಡಿಸಲಿಕ್ಕೂ ಅಧಿಕಾರ ಕೊಡಲಾಗಿದೆ.

ಶೀತವಾಯು ಪ್ರವಾಹ.

ಶೀತವಾಯು ಪ್ರವಾಹದಿಂದ ಅಜಮೀರದಲ್ಲಿ ನೀರು ಪೂರೈಸುವ ಹೌದುಗಳು ಘನವಾಗಿವೆ. ಜಯಪುರದಲ್ಲಿ ಚಿಕ್ಕ ಭೂಕಂಪವಾಯಿತು. ಜನವರಿ ೧೬ನೇ ತಾರೀಖಿನ ಮಧ್ಯರಾತ್ರಿ ಸುಮಾರಿಗೆ ಭದ್ರವಾಗಿ ಕಟ್ಟಿದ ಬಾವಿ ಕುಸಿಯಿತು. ಬಹು ದೊಡ್ಡ ಸಪ್ಪಳವಾಯಿತು. ಜನರು ಭೀತಿಪಟ್ಟು ಗಾಬರಿಯಿಂದ ಹೊರ ಬಂದರು. ಗ್ವಾಲ್ಹೇರ ಸಂಸ್ಥಾನದ ಚಂಚೋಲಾ ಗ್ರಾಮದಲ್ಲಿ ಜ್ವಾಲಾಮುಖಿ ಉತ್ಪನ್ನವಾಗಿದೆ. ಜ್ವಾಲಾದೇವಿಯ ದರ್ಶನ ಪಡೆಯುವದಕ್ಕಾಗಿ ಸಾವಿರಾರು ಜನರು ಚಂಚೋಲಾ ಗ್ರಾಮಕ್ಕೆ ಹೋಗುತ್ತಾರಾಗಿ ಗ್ವಾಲ್ಹೇರ ಸಂಸ್ಥಾನದ 'ಜಯಾಜಿಪ್ರತಾಪ' ಪತ್ರಿಕೆಯ ಸ್ವಂತ ಸುದ್ದಿಗಾರರು ಪ್ರಕಟಿಸುತ್ತಾರೆ. ರತ್ನಾಗಿರಿ ಮೊದಲಾದ ಕೊಂಕಣಪಟ್ಟಿಯಲ್ಲಿ ಬಿರುಗಾಳಿಯಿಂದ ತುಫಾನಾಗಿದೆ. ಹಡಗಗಳ ಓಡಾಟಕ್ಕೂ ಪ್ರತಿಬಂಧ.. ಇತ್ತ ೮-೧೦ ದಿನಗಳಲ್ಲಿ ವಿಮಾನುಗಾರರಿಗೆ ವಿಮಾನ ಹಿಡಿಯಲಿಕ್ಕೆ ಸಹ ಪ್ರತಿಬಂಧವಾಗಿವೆ. ಸಿಂತಳವ್ಹೀಪದ ಪ್ರದೇಶದಲ್ಲಿ ಚಳಿಜ್ವರದಿಂದ ಸಾವಿರಾರು ಜನರು ಸಾಯುತ್ತಿದ್ದಾರೆ. ಒಬ್ಬನಿಗೆ ಇಬ್ಬರು ಮಗಂದಿರಿದ್ದು ಇಬ್ಬರೂ ಚಳಿಜ್ವರದಿಂದ ತೀರಿಕೊಂಡರು. ಪುತ್ರಶೋಕದಿಂದ ತಂದೆಯು ಓಡುತ್ತಿರುವ ಉಗಿಬಂಡಿಯಡಿ ಬಿದ್ದು ಆತ್ಮಹತ್ಯ ಮಾಡಿಕೊಂಡನು. ಸಿಂಧ ಪ್ರಾಂತದ ಶಿಕಾರಪುರ, ಶಹದಾದಪೂರ, ನವಶಾರಾವ ಗ್ರಾಮಗಳಲ್ಲಿ ಮೂವರು ಚಳಿಯಿಂದ ಸತ್ತುಹೋದರು. ಇನ್ನೊಬ್ಬ ಮುಸಲ್ಮಾನ ಮುದುಕನು ಮದ್ದು ತರಲು ಆಸ್ಪತ್ರೆಗೆ ಹೋಗುತ್ತಿದ್ದನು. ಚಳಿಯಿಂದ ಹಾದಿಯಲ್ಲಿಯೇ ತೀರಿಕೊಂಡನು. ಶೀತವಾಯು ಪ್ರವಾಹವು ಸಂಯುಕ್ತಪ್ರಾಂತ, ಮಧ್ಯಪ್ರಾಂತಗಳೊಳಗಿಂದ ವಾಯವ್ಯ ಪ್ರದೇಶದಲ್ಲಿಯೂ ದಕ್ಷಿಣ ಭಾಗದಲ್ಲಿಯೂ ಹಬ್ಬುವದಾಗಿ ಪುಣೆಯೊಳಗಿನ ಆಕಾಶ ನಿರೀಕ್ಷಕರು ಅಭಿಪ್ರಾಯಪಡುತ್ತಾರೆ. ಇಷ್ಟು ಶೀತವಾಯು ಈ ತನಕ ಬೀಸಲಿಲ್ಲವಾಗಿ ಅಲ್ಲಿಯವರ ಅಭಿಪ್ರಾಯ. ಇದರಿಂದ ಕಾರಬೆಳೆಗೆ ಬಹಳ ನಷ್ಟವಾಗುವದಾಗಿ ಅವರು ಅಭಿಪ್ರಾಯಪಡುತ್ತಾರೆ. ಗುಜರಾಥದ ಪಾಟಣ ತಾಲೂಕಿನಲ್ಲಿ ಚಳಿಯಿಂದ ೫೦-೬೦ ಜನರು ತೀರಿಕೊಂಡರು. ಬಡೋದಾ ಸಂಸ್ಥಾನದ ಕುಂಭಾರವಾಡೆಯಲ್ಲಿ ಮೂವರು ಮಕ್ಕಳು ಹೊರಕ್ಕೆ ಆಡುತ್ತಿದ್ದರು; ಕೂಡಲೆಯೇ ಚಳಿಯಿಂದ ಜುಮ್ಮು ಹಿಡಿದು ಗತಪ್ರಾಣರಾದರು!

ಸುಲಭ ಕ್ರಯ! ಡಾಕ್ಟರ ಜೇ. ಬೀ. ಯುವರ ಸುಗಂಧಿ ನಸ್ಯದ ಪುಡಿ. ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ - ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುತವಲ್ಲದೆ, ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮತ್ತು ಬೆಟ್ಟದ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಯಿಸಿದರೆ ಬಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ


(Registered Trade Mark.)

ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ. ಪಿ. ೪ ಆಣೆ ಡಜನ್ ಗೆ ಕ್ರಯ ರೂ. ೩-೦-೦, ವಿ. ಪಿ. ೦-೫-೦.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ-ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ. ಬಾ. ೫೧೧, ಪಾರ್ಕ್‌ಟೌನ ಮದರಾಸ.

ರೌಪ್ಯ ಮಹೋತ್ಸವದಲ್ಲಿ ರಾಷ್ಟ್ರೀಯ ಸಭೆಯವರು ಸೇರದೆ ಅಲಿಪ್ತರಿರಬೇಕು.

ಕಳೆದ [illegible] ಯಲ್ಲಿ ಕೂಡಿದ ಕೊಂಗ್ರೆಸ [illegible] ದಲ್ಲಿ ಈ ಕೆಳಗಿನ ಠರಾವನ್ನು [illegible]

೧ ಒಪ್ಪಿಸ್ಪರ ಅಲ್ಪಂಕರ ಮತ್ತು ಅಸಾಯರ್ ಗಿಡನ ಸಿ ಇವರ ಅಕ ಒಕ ನಿಧನದ ಬಗ್ಗೆ ಈ ಸಭೆಗೆ ವ್ಯಸನ [illegible] ವು ಅವರು [illegible] ಮಾಡಿದ ಕಾರ್ಯ [illegible] ಯಾದ ಬಗ್ಗೆ ಮತ್ತು [illegible] ಆದರಣೀಯವಿವೆ ಅವರ ಕುಟುಂಬದವರ [illegible] ಲ್ಲ ಈ ಸಭೆಯು ಸಹಾನುಭೂತಿ [illegible]

[illegible] ರಾಷ್ಟ್ರೀಯ ಸಭೆಯ [illegible] ಕಾರ್ಯ, ಅಥವಾ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳದ ಯಾವನು [illegible] ಸದಸ್ಯನು ಅವ [illegible] ರಾಷ್ಟ್ರೀಯ ಸಭೆಯ ಸಾಕ್ಷ್ಯದಿಂದ [illegible] ಮೇಲೆ ಆರಿಸಿ ಬಂದ ಸಭಾಸದನು ಒಮ್ಮೆ [illegible] ಯ ಸಭೆಯ ಕಾರ್ಯಕ್ರಮ [illegible] ಠರಾವುಗಳ ವಿರುದ್ಧ ನಡೆದರೆ, ಅಂಥ [illegible] ಯು ಆ ಸಭಾಸದನ ವಿರುದ್ಧ ಶಿಸ್ತಿನ ದೃಷ್ಟಿಯಿಂದ ಠರಾವು ಮಾಡುವ ಅಧಿಕಾರ ಈ ಕಾರ್ಯಕಾರಿ ಮಂಡಳಕ್ಕೆ ಇದೆ ಈ ಗೊತ್ತುವಳಿಯಿಂದ ಕಾರ್ಯಕಾರಿ ಮಂಡಳವು ಆ [illegible] ಯನ್ನೇ ಶಿಕ್ಷೆಗೆ ಒಳಪಡಿಸುವ ಸಭಾಸದನನ್ನು ಪದಚ್ಯುತ ಮಾಡಬಹುದು. [illegible] ಮುರಿಯುವ ಸಭಾಸದನು [illegible] ಸಿದ್ಧನಿದ್ದ ಅವನು ಕೇಳಿದ್ದು [illegible] ಯಾವ ಚುನಾವಣೆಯಲ್ಲಿಯೂ ಸಿಲ್ಲಲು ಅಪಾತ್ರನೆಂದು ಠರಾಯಿಸಲ್ಪಡಬಹುದು ಇಲ್ಲವೆ ಯಾರೆ [illegible] ಹಣದ ವಂಚನೆ ಮಾಡಿದರೆ [illegible] ಮಾಡಿ ಕೆಲ್ಸವಲ್ಲ ಅನ್ಯಾಯ ಮಾಡಿದರೆ ನೈತಿಕ ಅಪರಾಧ ಮಾಡಿದರೆ ಅಂಥವನನ್ನು [illegible] ಸಭೆಯಿಂದ ಹೊರತಳ್ಳುವ ಅಧಿಕಾರವೂ ಕಾರ್ಯಕಾರಿ ಮಂಡಳಕ್ಕುಂಟು [illegible] ಹಾಗೂ ಪ್ರಾಂತಿಕ ಸಮಿತಿಗಳ ನಿರ್ಣಯದ ವಿರುದ್ಧ ಅಪೀಲು ಮಾಡುವ ಅಧಿಕಾರವು [illegible] ದ [illegible] ಸದನಿಗೂ ಇರುವದ ಮತ್ತು ಆಯಾ ಜನರ ಅಂದಾಗಿನ ಕೇಳಿಕೊಂಡೇ ಅವರವ ಪ್ರಕರಣ ನಿಕಾಲೆ ಮಾಡಲಾದೀತು

೩ ಒಪ್ಪಿಯ ಗಿರಣಿಕಾರರು ರಾಷ್ಟ್ರೀಯ ಸಭೆಗೆ ಕೊಟ್ಟ ವಚನವನ್ನು ಮುರಿದಿರುವ ಕಾರಣ ಕೆಲವೊಂದು ಗಿರಣಿಯವರು ರಾಷ್ಟ್ರೀಯ ಸಭೆಯವರು ಕೊಟ್ಟ "[illegible] ಪತ್ರ"ಗಳನ್ನು [illegible] ವದು ಅವಶ್ಯವಿರುವದಿಲ್ಲವೆಂದು ಮುಂದೆ [illegible] ಯವು ಹಿಂದಿನ ಎಲ್ಲ '[illegible] ಪತ್ರ'ಗಳು [illegible] ರದ್ದೆಂದು ತಿಳಿಯತಕ್ಕದ್ದು ಈ ಮುಂದೆ ರಾಷ್ಟ್ರೀಯ ಸಭಾಭಿಮಾನಿಗಳು ಕೈನೂಲಿನಿಂದ ಕೈಮಗ್ಗಗಳ ಮೇಲೆ ನೇಯ್ದ ಬಟ್ಟೆಗಳನ್ನೇ ಉಪಯೋಗಿಸತಕ್ಕದ್ದು

ಸ್ವಾತಂತ್ರ್ಯ ದಿನ.

೪ ಲಾಹೋರದ ರಾಷ್ಟ್ರೀಯ ಸಭೆಯಾದಂದಿನಿಂದ ಪ್ರತಿ ವರ್ಷ ಜನವರಿ ತಾ ೨೬ಕ್ಕೆ ರಾಷ್ಟ್ರವು "ಸ್ವಾತಂತ್ರ್ಯ ದಿನ" ನೆರವೇರಿಸುತ್ತಿದೆ ಈಗ ಕಾನೂನು ಭಂಗವು ತಡೆಯಲ್ಪಟ್ಟಿರುವದರಿಂದ ಈ ದಿನದ ಆಚರಣೆ ಮಾಡುವಾಗ ಯಾರೂ ರಾಜಶಾಸನ, ಕಾನೂನು ಅಥವಾ ಸ್ಥಾನಿಕ ಅಧಿಕಾರಿಗಳ ಹುಕುಮು ಇವನ್ನು ಉಲ್ಲಂಘಿಸಕೂಡದು ಜನರು ಮುಂಚಿತವಾಗಿ ಜಾಹೀರ ಮಾಡಿದ ಸ್ಥಳಕ್ಕೆ ಸಂಪೂರ್ಣ ಶಾಂತತೆಯಿಂದ ಮೆರವಣಿಗೆಯಿಂದ ಹೋಗಿ ಸಭೆ ಸೇರಬೇಕು, ಸಭೆಯಲ್ಲಿ ಅಧ್ಯಕ್ಷರು ಈ ಕೆಳಗೆ ಕೊಟ್ಟ ಠರಾವನ್ನು ಓದಿ ಹೇಳಬೇಕು. ಠರಾವನ್ನು ಅಂದಿನ ಆಯಾ ಸ್ಥಾನಿಕ ಭಾಷೆಯಲ್ಲಿರಬೇಕು ಯಾರೂ [illegible] ಸಣ ಮಾಡಬಾರದು ಸಭೆಯ ಮುಂಚೆ ರಾಷ್ಟ್ರಧ್ವಜವನ್ನು ಹಾರ್‍ಯಾಡಿಸಬೇಕು. ಸಭೆ ಸೇರಲಿಕ್ಕೆ ಪ್ರತಿಬಂಧವಾದಲ್ಲಿ ಜನರು ಮನೆ-ಮನೆಗಳಲ್ಲೇ ಒಟ್ಟಾಗಿ ಸೇರಿ, ರಾಷ್ಟ್ರಧ್ವಜ ನಿಲ್ಲಿಸಿ ಸ್ವಾತಂತ್ರ್ಯದ ಗೊತ್ತುವಳಿಯನ್ನು ಸ್ವೀಕರಿಸಬೇಕು ಮತ್ತು ನಡೆದ ಕಾರ್ಯಕ್ರಮದ ಸುದ್ದಿಯನ್ನು ತಮ್ಮ ತಮ್ಮ ಕೊಂಗ್ರೆಸ ಸಮಿತಿಗೆ [illegible] ಸಬೇಕು

ಸ್ವಾತಂತ್ರ್ಯದ ಠರಾವು

ಅದು ಈ ಕೆಳಗಿನಂತಿದೆ —

"ಸಂಪೂರ್ಣ ಸ್ವಾತಂತ್ರ್ಯವು ನಮ್ಮ ಜನ್ಮಸಿದ್ಧ ಹಕ್ಕು. ಅದನ್ನು ಸಂಪಾದಿಸಿದನಕ ನಾವು ಸುಮ್ಮಗುಳಿಯೆವು, ಎಂಬ ಸಂಗತಿಯನ್ನು ಈ ಪವಿತ್ರವಾದ ದಿನದಲ್ಲಿ ನಾವು ನೆನೆಸುತ್ತೇವೆ ಈ ಧ್ಯೇಯದ ಸಾಧನೆಗಾಗಿ ನಾವು ನಮ್ಮ ಬಲವನ್ನೆಲ್ಲ ವೆಚ್ಚ ಮಾಡಲು ಸಿದ್ಧರಿದ್ದೇವೆ ಹಾಗೂ ನಮ್ಮ ವಿಚಾರ, ಉಚ್ಚಾರ ಮತ್ತು ಆಚಾರಗಳಲ್ಲಿ ಎಂದೆಂದಿಗೂ ಸತ್ಯ ಮತ್ತು ಅಹಿಂಸೆಯನ್ನು ಪಾಲಿಸಿ ಬೇಕಷ್ಟು ಸ್ವಾರ್ಥತ್ಯಾಗ ಮಾಡಲು ತಯಾರಿದ್ದೇವೆ ಸತ್ಯ ಮತ್ತು ಅಹಿಂಸೆಯ ಪಾಲನೆಯ ಗುರುತು ಎಂದು ನಾವು (೧) ಜಾತಿ-ಜಾತಿಗಳಲ್ಲಿ ಐಕ್ಯವನ್ನುಂಟುಮಾಡುವ ಯತ್ನ ನಡಿಸುವೆವು, ಜಾತಿ, ವಂಶ, ಧರ್ಮ ಮೊದಲಾದ ಭೇದ ಭಾವಗಳನ್ನು ಲಕ್ಷಿಸದೆ ಎಲ್ಲ ಜನರು ಒಂದೇ ತರನೆಯವರೆಂದು ಭಾವಿಸುವೆವು, (೨) ಮಾದಕ ವಸ್ತುಗಳನ್ನೂ, ಔಷಧಗಳನ್ನೂ ತ್ಯಜಿಸುವೆವು, (೩) ಕೈನೂಲಿಗೆ ಉತ್ತೇಜನ ಕೊಡುವೆವು, ಸ್ವತಃ ಖಾದಿಯನ್ನೇ ತೊಟ್ಟುಕೊಳ್ಳುವೆವು, ಹಳ್ಳಿಗಳೊಳಗಿನ ಕೈಗಾರಿಕೆಗಳಿಗೆ ಪ್ರೋತ್ಸಾಹನ ಕೊಟ್ಟು ಹಳ್ಳಿಗಳಲ್ಲಿ ತಯಾರಾಗುವ ಜಿನಸುಗಳನ್ನೇ ಕೊಂಡುಕೊಳ್ಳುವೆವು, (೪) ಅಸ್ಪೃಶ್ಯತೆಯನ್ನು ಹೋಗಲಾಡಿಸುವೆವು, (೫) ಕೂಲಿಲ್ಲದೆ ಬಳಲಿ ಸಾಯುವ ಅತ್ಯಂತ ದೀನ ದೇಶಬಾಂಧವರಿಗೆ ಎಲ್ಲ ಬಗೆಗಳಿಂದ ನೆರವಾಗುವೆವು, ಮತ್ತು (೬) ಎಲ್ಲ ಪ್ರಕಾರಗಳಿಂದ ರಾಷ್ಟ್ರೀಯ ವಿಧಾಯಕ ಕಾರ್ಯಕ್ಕೆ [illegible] ಯ ಮಾಡುವೆವು"

ಸಮ್ರಾಟರ ರೌಪ್ಯಮಹೋತ್ಸವ

[illegible] ಸಮ್ರಾಟ್ ಜೋರ್ಜ ಬಾದಶಹರ [illegible] ರೋಹಣದ ರೌಪ್ಯ ಜುಬಿಲಿ ಮಹೋತ್ಸವವನ್ನು ಹಿಂದುಸ್ಥಾನದಲ್ಲೂ ನೆರವೇರಿಸಬೇಕಾಗಿ ಸರಕಾರಿ ಪ್ರಕಟಣೆ ಹೊರಬಿದ್ದಿದೆ ಈ ಉತ್ಸವದಲ್ಲಿ ಜನರು ಯಾವ ರೀತಿ ನಡೆಯಬೇಕೆಂದು ಸೂಚನೆ ಕೊಡುವದು ಅವಶ್ಯವೆಂದು ಕಾರ್ಯಕಾರಿ ಮಂಡಳದ ಅಭಿಪ್ರಾಯವಿದೆ ವ್ಯಕ್ತಿಶಃ ಸಮ್ರಾಟರ ಬಗ್ಗೆ ರಾಷ್ಟ್ರೀಯ ಸಭೆಯು ಸದ್ಭಾವನೆಯನ್ನೇ ತಾಳುತ್ತಿದ್ದು, ಬೇರೆ ಭಾವನೆಗೆ ಅವಕಾಶವೇ ಇರುವದಿಲ್ಲ ಆದಾಗ್ಯೂ ಸಮ್ರಾಟರು ಈಗ ನಡೆಯುತ್ತಿರುವ ರಾಜ್ಯಯಂತ್ರದಲ್ಲಿ ತಾದಾತ್ಮ್ಯ ಹೊಂದಿರುತ್ತಾರೆಂಬದನ್ನು, ಆ ರಾಜ್ಯಯಂತ್ರವು ರಾಷ್ಟ್ರದ ರಾಜಕೀಯ, ನೈತಿಕ ಮತ್ತು ಆರ್ಥಿಕ ವಿಕಾಸಕ್ಕೆ ಬಲು ತೊಂದರೆಯನ್ನುಂಟು ಮಾಡುತ್ತಿರುವದನ್ನೂ ಮರೆಯಲಾಗುವದಿಲ್ಲ ಈಗ ನಿರ್ಮಾಣವಾಗಲಿಕ್ಕಿದ್ದ ನೂತನ ರಾಜ್ಯಘಟನೆ ಅಮಲಿನಲ್ಲಿ ಬಂದರೆ ರಾಷ್ಟ್ರವು ಹಿಂಡಲ್ಪಟ್ಟು, ಅದರಲ್ಲಿದ್ದ ಅಲ್ಪಸ್ವಲ್ಪ ಸಂಪತ್ತಿಯು ಸಹ ಬೇರೆಡೆಗೆ ಹರಿದು ಹೋಗುವದು. ಈ ಮೊದಲು ಎಂದೆಂದೂ ಆಗದಷ್ಟು ಹಿಂದುಸ್ಥಾನದ ಪಾರತಂತ್ರ್ಯದ ಶೃಂಖಲೆಗಳು ದೃಢವಾಗುವವು. ಈ ಕಾರಣಗಳ ಮೂಲಕ ಮುಂದೆ ಜರಗಲಿಕ್ಕಿರುವ ಜುಬಿಲಿ-ಮಹೋತ್ಸವದಲ್ಲಿ ಸೇರಿರೆಂದು ಜನತೆಗೆ ಬೋಧ ಮಾಡಲು ಮಂಡಳವು ಒಪ್ಪಿಗೆಯಿಲ್ಲ

ಈ ಸಮಾರಂಭದಲ್ಲಿ ಸೇರುವ ಇಂಗ್ಲಿಷ ಯಾ ಬೇರೆ ಜನರ ಮನೋಭಾವನೆಗಳನ್ನು ನೋಯಿಸಬಹುದಾದ ವಿರೋಧಕ ಕಾರ್ಯವನ್ನು ಮಾಡಲಿಕ್ಕೂ ಕಾರ್ಯಕಾರಿ ಮಂಡಳದ ಇಚ್ಛೆಯಿರುವದಿಲ್ಲ ಆದ್ದರಿಂದ ರಾಷ್ಟ್ರೀಯ ಸಭೆಯ ಸಭಾಸದರೂ ಕಾರ್ಯಕರ್ತರೂ ಜುಬಿಲಿ-ಮಹೋತ್ಸವದಲ್ಲಿ ಸೇರಕೂಡದಂತೆ ಸ್ಟೇ ಕಾರ್ಯಕಾರಿ ಮಂಡಳದ ಹೇಳಿಕೆಯಾಗಿದೆ

ಸರಕಾರಿ ಅಧಿಕಾರಿಗಳೂ, ಜವಾಬದಾರ ಇಂಗ್ಲಿಷ ಗೃಹಸ್ಥರೂ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳವು ಅಪರಿಹಾರ್ಯ ಕಾರಣಗಳ ಮೂಲಕ ಪ್ರಾಮಾಣಿಕ ಬುದ್ಧಿಯಿಂದ ಈ ಧೋರಣವನ್ನು ಕೈಕೊಳ್ಳಬೇಕಾಗಿದೆಯೆಂದು ಒಪ್ಪುವರೆಂತ ನಾವು ನಂಬಿದ್ದೇವೆ ಅವರ ಪ್ರತ್ಯಕ್ಷ ಯಾ ಅಪ್ರತ್ಯಕ್ಷ ರೀತಿಯಿಂದ ಜನರಿಗೆ ಈ ಉತ್ಸವದಲ್ಲಿ ಸೇರಿಸಿಕೊಳ್ಳಲು ಒತ್ತಾಯಪಡಿಸಿ ಯಾರೊಬ್ಬರ ಭಾವನೆಗಳನ್ನು ನೋಯಿಸಬಾರದೆಂತಲೂ ಮಂಡಳದ ಅಪೇಕ್ಷೆಯುಂಟು

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ. 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಶಂಕಿನ ದರಗಳೂ, ಶರ್ತುಗಳೂ ಒಳ್ಳೆ ಸೋಯಿಯುಳ್ಳವು ಇವೆ, ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟೀಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಕೆಳಗಿನ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ತಿಳಿವದು.

Kumta Agents.
D. K. Nayak Bros.
D. S. Pai.
K. N. Nayak.
Honavar Agents
R. V. Prabhu Esq

K. Padmanabha Rao & Sons,
BELGAUM
Chief Agents for
Karnatak Districts & S. M. States

ಪತ್ರಕರ್ತರ ನುಡಿಗನ್ನಡಿ.

೧ ಮಹಾತ್ಮರು ಹೊರಡಿಸಿದ ಅಖಿಲ ಭಾರತೀಯ ಗ್ರಾಮೋದ್ಯೋಗಿಕ ಸಂಘದ ಮೇಲೆ ಹಿಂದುಸ್ಥಾನ ಸರಕಾರವು ಸತ್ಯಾಗ್ರಹ ತಯಾರಿಯ ಆರೋಪ ಹೊರಿಸಿ ಆ ಸಂಘಕ್ಕೆ ಅಧಿಕಾರಿಗಳು ಎಷ್ಟಕ್ಕೂ ಪ್ರೋತ್ಸಾಹ ಕೊಡಬಾರದೆಂಬುದಾಗಿಯೂ, ಆದಷ್ಟರ ಮಟ್ಟಿಗೆ ಅದನ್ನು ಹಳಿಯಬೇಕಾಗಿಯೂ ಹೊರಡಿಸಿದ ಗುಪ್ತ ಸರ್ಕ್ಯುಲರಿನ ವಿಷಯವನ್ನು ನಾವು ಈ ಹಿಂದೆ ಪರಾಂಬರಿಸಿದ್ದೇವೆ. ಸರಕಾರವು ಗುಪ್ತ ಸರ್ಕ್ಯುಲರು ಹೊರಡಿಸಿದ್ದು ದಿಟವೆಂತ ಕಳೆದ ವಾರ ಜರಗಿದ ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಗೃಹಮಂತ್ರಿಗಳಾದ ಸರ್ ಹೇನ್ರಿ ಕ್ರೇಕರವರು ಒಪ್ಪಿಕೊಂಡರು ಈ ಬಗ್ಗೆ ಸರಕಾರಕ್ಕೆ ನಾಚಿಕೆಯೆನಿಸುವದಿಲ್ಲವಾಗಿಯೂ ಉದ್ಗರಿಸಿದರು. ಈ ಮಾತನ್ನು ಕೇಳಿ "ಸರಕಾರವು ಇಷ್ಟು ನಾಚಿಕೆಗೇಡಿಯಾಗಿರುವದೇನು?" ಎಂದು ಒಬ್ಬ ಕಾಂಗ್ರೆಸ ಸಭಾಸದರು ಉದ್ಗರಿಸಿದರಂತೆ! ಅದೇನೂ ಇರಲಿ, ಸರಕಾರದ ಭಾವನ ವಿಚಾರ ವಿಷಯವಲ್ಲ ಮಹಾತ್ಮರ ಪ್ರವೃತ್ತಿಯೇ ಮುಖ್ಯ ವಿಷಯವಾಗಿದೆ ಮದ್ರಾಸದ 'ಹರಿಜನ' ಪತ್ರಿಕೆಯಲ್ಲಿ ಮಹಾತ್ಮರ ಕಾರ್ಯದರ್ಶಿಗಳಾದ ಶ್ರೀ| ಮಹಾದೇವಭಾಯಿ ದೇಸಾಯಿಯವರು ಈ ಕುರಿತು ಮಹಾತ್ಮರು ಕೊಟ್ಟ ಅಭಿಪ್ರಾಯವನ್ನು ವಿವರಪೂರ್ವಕವಾಗಿ ವರ್ಣಿಸಿದ್ದಾರೆ ಪ್ರತಿಯೊಂದು ಶಬ್ದವೂ ಮುತ್ತಿನಂತಿದೆ. ಮಹಾತ್ಮರು ಹೇಳುವದೇನೆಂದರೆ— "ಸರಕಾರವು ನನಗೆ ಸಿಗುವ ಲೋಕಾಶ್ರಯವನ್ನು ಅಪಹರಿಸಿದರೆ ನನಗೆ ಆನಂದವಾಗುವದು. ಸರಕಾರವು ಮಾಡತಕ್ಕ ಕರ್ತವ್ಯವನ್ನೇ ನಾನು ಮಾಡಬಯಸಿದ್ದೇನೆ ಸರಕಾರವು ಶಕ್ಯವಿದ್ದಷ್ಟು ಕಾರ್ಯಭಾಗ ಮಾಡಲಿ, ನನ್ನ ಆಕ್ಷೇಪವಿಲ್ಲ. ಜನರ ಮೇಲೆ ಬಲಾತ್ಕಾರವಾಗದಿದ್ದರಾಯಿತು ಸರಕಾರವು ನನಗೆ ನೆರವಾದರೆ ನಾನು ಅದ್ಭುತ ಚಮತ್ಕಾರ ಮಾಡಿ ತೋರಿಸುವೆ ಆದರೆ ಸರಕಾರವು ಭಕ್ತಿಯಿಂದ ನೆರವಾದರೆ ಮಾತ್ರ ಪ್ರಯೋಜನವಿದೆ. ಸರಕಾರವು ನನಗೆ ವಿವಿಧವಾಗಿ ಸಹಾಯ ಮಾಡಬಹುದು ಅವಶ್ಯವುಳ್ಳ ಕಾಯಿದೆಗಳನ್ನೇ ಪಾಸಿಸಿ ನೆರವಾಗಬಹುದು. ಆದರೆ, ಸರಕಾರವು ಈಗ ನಡಿಸುತ್ತಿರುವ ಕ್ರಮದ ಕುರಿತು ನನ್ನ ಅಭಿಪ್ರಾಯ ಕೇಳಕೂಡದು ಸರಕಾರದ ಮೇಲೆ ಟೀಕೆ ಮಾಡಲು ನಾನು ಬಯಸುವದಿಲ್ಲ ಅವಶ್ಯ ಕಂಡರೆ ನಾನು ಅವರಿಗೆ ಪತ್ರ ಬರೆದು ತಿಳಿಸುತ್ತೇನೆ ನನ್ನಲ್ಲಿ ಗೌಪ್ಯವೇನಿಲ್ಲ. ಸರಕಾರಕ್ಕೆ ತಿಳಿಸದೆ ಒಟ್ಟಿಡಲು ನಾನು ಬಯಸುವದಿಲ್ಲ, ಬಚ್ಚಿಡುವಂಥಾದ್ದೇನಿಲ್ಲ ಈ ತನಕ ಯಾರಿಗೂ ಹೊಳೆಯದ ಹೊಸ ಕಾರ್ಯಕ್ರಮವನ್ನೇ ನಾನು ಬುದ್ಧಿಪೂರ್ವಕವಾಗಿ ಕೈಕೊಂಡಿದ್ದೇನೆ. ಪಾಲಿಸಿಲ್ಲದ ಅಕ್ಕಿ, ಬೀಸುಗಲ್ಲಿನ ಮೇಲೆ ಬೀಸಿದ ಹಿಟ್ಟು, ಕಬ್ಬಿನ-ಗಾಣದ ಮೇಲೆ ತಯಾರಿಸಿದ ಬೆಲ್ಲ, ಇವನ್ನು ಉಪಯೋಗಿಸ ಹೇಳಿ, ಜನರಿಗೆ ಆರೋಗ್ಯಹಾನಿ ಮಾಡಿಕೊಳ್ಳಲು ಹಣ ಖರ್ಚು ಮಾಡಬಾರದೆಂದು ನಾನು ತಿಳಿಸುತ್ತೇನೆ. ಜನರು ಈಗ ಮಾಡಬೇಕಾದ್ದೇ ಹೀಗೆ. ದೇಶದೊಳಗಿನ ತಜ್ಞರು ಸಹ ನನ್ನಂತೆಯೇ ಅಭಿಪ್ರಾಯಪಟ್ಟು ಬೆಂಬಲ ಕೊಟ್ಟಿದ್ದಾರೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ ಭೂ-ಸುಧಾರಣೆ, ಕೃಷಿ-ಸುಧಾರಣೆಗಳನ್ನು ವಿಚಾರಿಸಲು ನನಗೆ ಧೈರ್ಯ ಬರದು. ಅಷ್ಟು ಸಾಮರ್ಥ್ಯ ನನ್ನಲ್ಲಿಲ್ಲ. ಪರರ ಸಹಾಯವನ್ನಪೇಕ್ಷಿಸದೆ ಸ್ವಕಲ್ಯಾಣ ಸಾಧಿಸಬಹುದಾದ ಯೋಜನೆಗಳನ್ನೇ ಜನರು ಅನುಸರಿಸಬೇಕೆಂದು ನನ್ನ ಹಂಬಲವಿದೆ ನನ್ನ ಕಾರ್ಯಕ್ರಮದ ಧ್ಯೇಯವೆಂದರೆ ಸೋಮಾರಿತನವನ್ನು ಹೋಗಲಾಡಿಸುವದ; ಪ್ರಯೋಜನವಾಗುವಂತೆ ಜನರಿಗಿರುವ ಸಮಯವನ್ನು ಉಪಯೋಗಿಸಿಕೊಳ್ಳಹಚ್ಚುವದು, ಅನಾರೋಗ್ಯಕರ ಆಹಾರಸೇವನವಾಗದಂತೆ ಜಾಗ್ರತೆ ಕೊಳ್ಳುವದು ಮತ್ತು ಯಾವತ್ತೂ ಪ್ರಕಾರದ ಆರ್ಥಿಕ ಅಪವ್ಯಯವನ್ನು ಪ್ರತಿಬಂಧಿಸುವದು ಈ ದೃಷ್ಟಿಯಿಂದ ನಾನು ಕೈಕೊಂಡ ಕಾರ್ಯಕ್ರಮವನ್ನು ಪರಾಂಬರಿಸತಕ್ಕದ್ದು." ಮಹಾತ್ಮರು ತಮ್ಮ ಅಂತರಂಗವನ್ನು ಈ ಪ್ರಕಾರ ಸ್ಪಷ್ಟಗೊಳಿಸಿದ್ದಾರೆ ಕಾಸು ಖರ್ಚಿಲ್ಲದೆ ಜನರಿಗೆ ಸದಾಚಾರ ತಿಳಿಸಿ ಲೋಕಕಲ್ಯಾಣ ಸಾಧಿಸಲು ಮಹಾತ್ಮರು ಪ್ರಯತ್ನಪಡುವ ಸಂದರ್ಭದಲ್ಲಿ ಪ್ರಜಾಪರಿಪಾಲನೆಯನ್ನು ಕೈಕೊಂಡ ಸರಕಾರವು ಮಹಾತ್ಮರಿಗೆ ಯಾವತ್ತೂ ಬೆಂಬಲವನ್ನಿತ್ತು ಸಹಕರಿಸಬೇಕಾಗಿತ್ತು, ಅದು ಒತ್ತಟ್ಟಿಗೇ ಉಳಿಯಿತು. ಗುಪ್ತ ಸರ್ಕ್ಯುಲರನ್ನು ಹೊರಡಿಸಿ ಅದಕ್ಕೆ ಪ್ರತಿಬಂಧ ಮಾಡಲಾರಂಭಿಸಿದೆ. ಗೌಪ್ಯ ಸ್ಫೋಟವಾದ್ದರಿಂದ ಸರಕಾರದ ಅಂತರಂಗ ಬಯಲಾಯಿತು. ಗೌಪ್ಯ ಹೇಗ ಹೊರಬಿತ್ತೆಂದು ಈಗ ಹಿಂದುಸ್ಥಾನ ಸರಕಾರವು ಚೌಕಶಿ ನಡಿಸಿರುವದಂತೆ ನಾಚಿಕೆಪಡುವದೆಂದಾ ಪ್ರಸಂಗವಿಲ್ಲದಿರುವಾಗ, ಈ ಚೌಕಶಿಯೇಕೆ? ಗೌಪ್ಯವೇಕೆ? ನಮಗೆ ತಿಳಿಯದ ಮಾತು. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಚರ್ಚೆ ಬಹಳಿಯಾದಾಗ್ಯೂ ಸರಕಾರವು ಆ ಸರ್ಕ್ಯುಲರನ್ನು ಹಿಂತೆಗೆದುಕೊಳ್ಳಬಯಸುವದಿಲ್ಲ ಪ್ರಜೆಗಳು ಆಳವಾಗಿ ವಿಚಾರ ಮಾಡಬೇಕು. ಮಹಾತ್ಮರ ಸತ್ಸಂಕಲ್ಪವನ್ನು ನೆನಸಿ ಅವರು ಪುರಸ್ಕರಿಸಿದ ಗ್ರಾಮೋದ್ಧಾರ ಕಾರ್ಯದಲ್ಲಿ ನೆರವಾಗಿ ಆತ್ಮೋದ್ಧಾರ ದೇಶೋದ್ಧಾರವೆರಡನ್ನೂ ಸಾಧಿಸಬಹುದಾಗಿ ಸೂಚನೆ

---

೨ ಈ ವರ್ಷ ಸಿದ್ದಾಪುರದ ಕಡೆ ರೈತರ ಸ್ಥಿತಿ ಕಂಗೆಟ್ಟಿರುವದಾಗಿ ತಿಳಿಯುತ್ತದೆ ಅತ್ತ ಬಹುತರವಾಗಿ ತೋಟಗಳೇ ಹೆಚ್ಚು ತೋಟಗಳ ಸ್ಥಿತಿ ಏಕೆ ಬಲ್ಲಾದವರಿಗೆ ಆ ಬಗ್ಗೆ ತಗಲುವ ಕಷ್ಟ ಮತ್ತು ಖರ್ಚು ವಿವರವಾಗಿ ತಿಳಿಸುವ ಅಗತ್ಯವಿಲ್ಲ ಘಟ್ಟದ ಮೇಲಿನ ಗ್ರಾಮಗಳಲ್ಲಿ ಸ್ಥಳಿಕ ಕೂಲಿಯಾಳುಗಳು ದೊರಕುವದಿಲ್ಲ, ಘಟ್ಟದ ಕೆಳಗಿನಿಂದ ಕೂಲಿಯಾಳುಗಳು ಹೋದರೇನೇ ಅಲ್ಲಿಯ ವೈಭವ ಈ ಆಳುಗಳಿಗೆ ಹಣ ಕೊಡಲು ತೋಟಗರ ಕಡೆ ಅಡಚಣೆಯಾಗಿ ತೋಟಗಳು ಹಾಳುಬೀಳುವ ಪ್ರಸಂಗ ಒಂದಿದೆ ಹಲವೆಡೆ ತೋಟಗಳಲ್ಲಿ ತುಂಬ ಗಿಡಗಂಟೆ ಬೆಳೆದು ಸ್ವಸ್ತಿಯಿಲ್ಲ ನೆರೆಹೊರೆಯಲ್ಲೇ ಬೆಳೆದ ದಟ್ಟ ಅಡವಿಯಿಂದ ತೋಟಗಳು ಅಡವಿಪಾಲಾಗುವದೊಂದು ಬಾಕಿಯುಳಿದೆ. ಮೇಲಾಗಿ ಅಡಿಕೆ, ಮೆಣಸು, ಯಾಲಕ್ಕಿ ಜಿನಸುಗಳಿಗೆ ತಕ್ಕ ದರ ಸಿಗದೆ ತೋಟಗರ ಗೋಳು. ಹಿಂದಿಗೆ ರೂ. ೩೦೦-೩೫೦ ತನಕ ದರವೆಲ್ಲಿ? ಈಗಿನ ರೂ ೬೦-೭೦ ರ ದರವೆಲ್ಲಿ? ತೋಟಗರಿಗೆ ಖರ್ಚು ಹುಟ್ಟದೆ ತೋಟಗರು ಗತಿಗೆಟ್ಟಿದ್ದಾರೆ. ಅನೇಕರ ಕಡೆ ಊಟಕ್ಕೆ ಅಕ್ಕಿ ಸಹ ಇರುವದಿಲ್ಲವಂತೆ ಹಲವರು ಸೆಟ್ಲಮೆಂಟ ಆಫೀಸರರಾದ ರಾ| ದೇಸಾಯಿಯವರ ಕಡೆ ಅರ್ಜಿ ಕೊಟ್ಟು ತೋಟ-ಭೂಮಿಯನ್ನು ಖರಿ ಭೂಮಿಯಲ್ಲಿ ರೂಪಾಂತರಿಸಲು ಅಪ್ಪಣೆ ಪಡಕೊಂಡರಾಗಿಯೂ, ತರಿ ಆಕಾರ ಕಡಿತಗೊಳಿಸಿಕೊಡಬೇಕಾಗಿ ಕೇಳಿಕೊಂಡರಾಗಿಯೂ ತಿಳಿಯುತ್ತದೆ ಇದರ ಮೇಲಿಂದ ತೋಟಗರ ಅವಸ್ಥೆಯು ಅರಿವಾಗುವಂತಿದೆ. ಒಂದು ಕಾಲದಲ್ಲಿ ತೋಟಗರ ಸಮೃದ್ಧಾವಸ್ಥೆಗೆ ಕಾರಣವಾದ ತೋಟಗಳು ಈಗ ಕೊರಳ ಕುಂಟೆಗಳಾಗಿವೆ ಅವುಗಳಿಂದ ತೋಟಗರಿಗೆ ಹೀರ ಕಷ್ಟವಾಗಿದೆ ಈ ವರ್ಷದಲ್ಲಂತು ತೀರ್ವೆ ಕೊಡುವ ಮಾತು ಅದಂತಿರಲಿ, ಅವರ ಕಡೆ ಉದರ ನಿರ್ವಾಹ ಸಾಗಿಸುವದು ಕಠಿಣವಾಗಿದೆ ಸರಕಾರವು ದಯಾಘನವಾಗಿ ಈ ವರ್ಷದ ತೀರ್ವೆಯನ್ನಾದರೂ ಅವರಿಗೆ ಸೂಟ ಮಾಡಬೇಕಾಗಿ ನಾವು ಅರಿಕೆ ಮಾಡಿಕೊಳ್ಳುತ್ತೇವೆ ನಮ್ಮ ಪ್ರಾಂತ ಆಫೀಸರರಾದ ಮಿ| ಅಲೆಕ್ಝಾಂಡರರವರು ಸಜ್ಜನರಂತೆ, ಹಳ್ಳಿಗರೊಡನೆ ಹಳ್ಳಿಗರ ಕನ್ನಡ ಭಾಷೆಯಲ್ಲಿ ಮಾತಾಡಲು ಅವರಿಗೆ ಪ್ರೀತಿಯಿದೆ. ಅವರು ಸ್ವತಃ ಸಿದ್ದಾಪುರದ-ಬಿಳಗಿ ಸೀಮೆಯೊಳಗಿನ ಕೆಲ ಹಳ್ಳಿಗಳಿಗೆ ಹೋಗಿ ಅಲ್ಲಿಯ ಜನರ ಸ್ಥಿತಿ-ಗತಿಯನ್ನು ಪರಾಂಬರಿಸಿದ್ದಲ್ಲಿ ನಮ್ಮ ಹೇಳಿಕೆಯು ಅವರಿಗೆ ಸ್ಪಷ್ಟವಾಗಿ ಹೊಳೆಯುವದು ಪ್ರಾಂತ ಆಫೀಸರರ ಮುಕ್ಕಾಮು ಅತ್ತ ಕಡೆ ಇರುವಾಗಲೇ ರೈತರ ಪರಿಸ್ಥಿತಿಯು ಪರಾಂಬರಿಕೆಯಾಗಬಹುದೆಂದು ಕೋರುತ್ತೇವೆ.

---

೩ ಇನ್ನೂ ಒಂದು ಮಾತಿದೆ ತೀರ್ವೆ ಸೂಟ ಬಿಟ್ಟರೆ ಸರಕಾರಕ್ಕೂ ನಷ್ಟವಿಲ್ಲ. ೧೯೨೪ನೇ ಇಸ್ವಿಯಲ್ಲಿ ಸೆಟ್ಲಮೆಂಟ ಆಫೀಸರರಾದ ಮಿ| ಕೊಲಿನ್ಸರವರು ಶಿರ್ಶಿ-ಸಿದ್ದಾಪುರ ಕಡೆ ತೀರ್ವೆ ಪುನರಾಲೋಚನೆ ಮಾಡಿದ್ದರು ಆ ಕಾಲದಲ್ಲಿ ತೋಟಗಳ ತೀರ್ವೆಯನ್ನು ಸರಾಸರಿ ಎಕ್ರೆಗೆ ರೂ ೩ರಂತೆ ಇಳಿಸಬೇಕಾಗಿ ಅವರು ಸೂಚಿಸಿದ್ದರು. ಆ ಸೂಚನೆಗಳನ್ನು ಸರಕಾರವು ಆಗಲೇ ಮನ್ನಿಸಲು ಕರ್ತವ್ಯಬದ್ಧವಿತ್ತು. ಆದರೆ ಸರಕಾರವು ಆ ಸೂಚನೆಯನ್ನು ಆಗ ಅಮಲಿನಲ್ಲಿ ತರಲಿಲ್ಲ, ೧೯೩೧ನೇ ಇಸ್ವಿಯಿಂದ ಆ ಶಿಫಾರಸು ಜಾರಿಯಲ್ಲಿ ಬಂದವು ಅಂದರೆ ಸಾಧಾರಣ ೭ ವರ್ಷಗಳ ತನಕ ಸರಕಾರವು ರೈತರಿಂದ ಹೆಚ್ಚಿನ ತೀರ್ವೆಯನ್ನು ವಸೂಲ ಮಾಡಿದೆ. ೧ ಎಕ್ರೆ ತೋಟಕ್ಕೆ ಆಗ ರೂ ೧೪ರಂತೆ ತೀರ್ವೆ ಇತ್ತು, ಮಿ| ಕೊಲಿನ್ಸರವರು ಅದನ್ನು ರೂ ೧೧ಕ್ಕೆ ಇಳಿಸಬೇಕಾಗಿ ಶಿಫಾರಸು ಮಾಡಿದ್ದರು ೭ ವರ್ಷಗಳ ತನಕ ಸರಕಾರವು ಪ್ರತಿ ಎಕ್ರೆಗೆ ರೂ ೧೪ರಂತೇ ತೀರ್ವೆ ವಸೂಲ ಮಾಡಿರುತ್ತದೆ, ಅಂದರೆ ತೋಟಗರ ಲೆಕ್ಕಕ್ಕೆ ಸರಕಾರದ ತಿಜೋರಿಯಲ್ಲಿ ೧ ವರ್ಷಕ್ಕಿಂತ ಹೆಚ್ಚಿನ ತೀರ್ವೆ ಜಮೆಯಿದೆ. ಅದೊಂದು ಆಪದ್ಧನವೆಂದು ತೋಟಗರೂ, ಸರಕಾರವೂ ಎಣಿಸಿ, ಈ ವರ್ಷದ ತೀರ್ವೆಯನ್ನು ಸೂಟ ಬಿಟ್ಟಲ್ಲಿ ಸರಕಾರವು ಉಪಕಾರ ಮಾಡಿದಂತಾಗಲಾರದು. ಆಪತ್ಕಾಲದಲ್ಲಿ ನೆರವಾದಂತಾಗುವದು, ಈ ವಿಚಾರವನ್ನಾದರೂ ಸರಕಾರವು ಗ್ರಹಿಸಿ ರೈತರಿಗೆ ಆಪತ್ಕಾಲದಲ್ಲಿ ರಕ್ಷಿಸಬೇಕಾಗಿ ನಾವು ವಿನಯಪೂರ್ವಕವಾಗಿ ಬಿನ್ನೈಸಿಕೊಳ್ಳುತ್ತೇವೆ ರೈತರಿಗೆ ಈಗ ಸಂಸಾರ ಸಾಗಿಸಿಕೊಂಡು ಹೋಗುವದೇ ಕಠಿಣವಾದಾಗ, ತೀರ್ವೆ ತೆರುವ ವ್ಯಥೆಯನ್ನು ಈ ವರ್ಷದ ಮಟ್ಟಿಗಾದರೂ ತಪ್ಪಿಸಿದರೆ ತೋಟಗರು ಸರಕಾರಕ್ಕೆ ಹಾಡಿ ಹರಸುವರು.

ಚೀನ-ಜಪಾನ ಯುದ್ಧ?

[ನಿರೀಕ್ಷಕನು ಬರೆದುದು.]

ಅನಪೇಕ್ಷಿತವಾಗಿ ಚೀನ-ಜಪಾನ ದೇಶಗಳೊಳಗೆ ಯುದ್ಧವಾದ ವಾರ್ತೆ ಹಬ್ಬಿದೆ. ಬುಧವಾರ ೧ ಸಾವಿರ ಜಪಾನ ಸೈನಿಕರೂ, ಇನ್ನೊಂದು ಸಾವಿರ ಜಪಾನದ ಮಾಂಡಲಿಕ ಮುಂಚುಕೋ ರಾಜ್ಯದ ಸೈನಿಕರೂ, ಚೀನ ದೇಶದ ಕುಯೊನ, ತುಮರಾಟಜೆ, ತುಶಿಕೋ ಪ್ರದೇಶಗಳ ಮೇಲೆ ಒಮ್ಮೆಲೇ ಸಾಗಿ ಹೋದರಂತೆ. ವಿಮಾನುಗಳ ಮೇಲಿಂದ ಬಾಂಬು ಗಳು ಎಸೆಯಲ್ಪಟ್ಟವು, ತೋಫು-ತುಬಾಕಿಗಳೂ ಹಾರಿದವು. ಜಪಾನ ಸೈನಿಕರು ಬಲಾತ್ಕಾರದಿಂದ ಸಾಗಿಹೋಗಿ ಕುಯೊನ ಗ್ರಾಮವನ್ನು ಹಸ್ತಗತ ಮಾಡಿಕೊಂಡರು ಈ ಬಲಾತ್ಕಾರದಿಂದ ೩೦ ಮೈಲು ಚಚೌಕು ಪ್ರದೇಶ ಜಪಾನದ ಹಸ್ತಗತವಾಯಿತಂತೆ. ನೂರಾರು ಮಂದಿಗಳು ಇತ್ತಕಡೆಯ ಹೋರಾಟದಲ್ಲಿ ಸ್ವರ್ಗಸ್ಥರಾಗಿದ್ದಾರೆ ಈ ಕಾದಾಟದ ಸಂಪೂರ್ಣ ವಿವರ ಇನ್ನೂ ತಿಳಿದು ಬಂದಿಲ್ಲ. ಗಡಿನಾಡಿನ ಪ್ರದೇಶದ ವಿವಾದವೆಂದು ಹೇಳುತ್ತಾರೆ ಕುಯೊನ ಮೊದಲಾದ ಪ್ರದೇಶವು ಗಡಿನಾಡಿಗೆ ಒಪ್ಪಿದ್ದೆಂದು ಅದನ್ನು ಭದ್ರಪಡಿಸುವದಕ್ಕಾಗಿ ಜಪಾನಿಯರು ಸಾಗಿಹೋಗಬೇಕಾಯಿತಂತೆ. ಜಪಾನದ ವಕೀಲಿ ನಡೆಯುತ್ತದೆ. ಮುಂಚುಕೋ ಮಂಗೋಲಿಯಾದೊಳಗಿನ ಗಡಿ ಸೀಮೆಯ ನಿರ್ಣಯ ಈ ಮೊದಲೇ ಆಗಿರುತ್ತದೆ ಜಪಾನಿಯರು ಈಗ ಆಕ್ರಮಣ ಮಾಡುತ್ತಿರುವ ಸೀಮೆ ಮುಂಚುಕೋ ರಾಜ್ಯಕ್ಕೆ ಒಪ್ಪಿದ್ದಲ್ಲ. ಹೀಗಿದ್ದು ಈ ವಿವಾದವೇಕೆ? ಇದೇ ಯಾರಿಗೂ ತಿಳಿಯದ ಮಾತು. ಮುನ್ನಾಣ ದಿನವೇ ಜಪಾನ ಸರಕಾರದ ಪರರಾಷ್ಟ್ರೀಯ ಪ್ರಧಾನರಾದ ಮಿ| ಕೋಕಿ ಹಿರೋಟಾರವರು ಶಾಂತಿಪರದ ಜಾಹೀರನಾಮೆಯನ್ನು ಟೋಕಿಯೊದೊಳಗಿನ 'ಡಾಯೆಟ್' ಯಾನೆ ಲೋಕಪ್ರತಿನಿಧಿಯ ಸಭೆಯಲ್ಲಿ ಉದ್ಗರಿಸಿದ್ದರು. "ಜಪಾನ ಸರಕಾರಕ್ಕೆ ಶಸ್ತ್ರಾಸ್ತ್ರ ಬೆಳಸಬೇಕೆಂಬ ಲವಲವಿಕೆ ಇಲ್ಲ, ಬ್ರಿಟಿಶ-ಅಮೇರಿಕೆಯ ರಾಷ್ಟ್ರಗಳಿಗೆ ಇದಿರಾಗುವ ಆಲೋಚನೆಯೂ ಇಲ್ಲ; ಸಮಸ್ತರೂ ಯುದ್ಧ ಸಾಹಿತ್ಯಗಳನ್ನು ತಗ್ಗಿಸಬೇಕೆಂದೇ ಜಪಾನಿಯರು ಅಭಿಪ್ರಾಯ ಪಡುತ್ತಾರೆ. ಅಮೇರಿಕೆಯೊಡನೆ ಹೋರಾಡಬೇಕೆಂಬ ಕಲ್ಪನೆ ಜಪಾನ ಸರಕಾರಕ್ಕೆ ಸ್ವಲ್ಪವೂ ಇಲ್ಲ ಬ್ರಿಟಿಶರು ಪರಂಪರಾಗತ ಮಿತ್ರರು, ಅವರೊಡನೆ ಸಂಗ್ರಾಮ ಮಾಡಲು ಎಷ್ಟಕ್ಕೂ ನಾವು ಬಯಸುವದಿಲ್ಲ. ರುಶ್ಯರೊಡನೆ ವಿವಾದ ವಿಷಯಗಳನ್ನು ಬಗೆಹರಿಸಿಕೊಳ್ಳಲು ನಾವು ಯತ್ನಿಸುತ್ತಿದ್ದೇವೆ. ಚೀನಿಯರು ತಕ್ಕ ಗ್ರಹಿಕೆ ಪಡೆಯಬೇಕು. ಜಪಾನದ ನ್ಯಾಯ್ಯ ಆಕಾಂಕ್ಷೆಗಳನ್ನು ತಿಳಕೊಂಡು ಅದಕ್ಕೆ ತಕ್ಕದ್ದಾಗಿ ತಮ್ಮ ನಡಾವಳಿಯನ್ನಿಡಬೇಕು." ಇತ್ಯಾದಿ ಶಾಂತಿಪರ ಹೇಳಿದ ಮರುದಿನವೇ ಈ ಹಿಂದೆ ನಿರ್ಣಯಿಸಲಾದ ಸೀಮೆಯ ಪ್ರದೇಶವನ್ನು ಉಲ್ಲಂಘಿಸಿ ಬಲಾತ್ಕಾರ ನಡಿಸಿದ್ದು ವಿಪರೀತವೆನಿಸುತ್ತದೆ. ಈ ಕಲಹದ ಪೂರ್ವಾಪರವೇನೆಂಬ ಸಂಗತಿ ತಿಳಿಯದ್ದರಿಂದ ಈ ವಿಷಯವನ್ನು ಅಷ್ಟಕ್ಕೇ ಬಿಡಬೇಕಾಗಿದೆ. ಈಗ ರಣಭೂಮಿಯೊಳಗೆ ಹವಾಮಾನವು ಯುದ್ಧ ನಡಿಸಲಿಕ್ಕೆ ಅನುಕೂಲವಿಲ್ಲವಂತೆ. ಅದರಿಂದ ಯುದ್ಧ ನಡೆದಾಗ್ಯೂ ಅದು ಬಹು ಕಾಲ ಬಾಳದೆಂದು ಹೇಳುತ್ತಾರೆ; ಹಾಗೆಯೇ ಆಗಲೆಂದು ನಾನೂ ಬಯಸುತ್ತೇನೆ.

ಅದರ ಮಂಗೋಲಿಯಾ ಪ್ರದೇಶದಲ್ಲಿ ಚೀನಿ ಸರಕಾರಕ್ಕೂ, ಜಪಾನ ಸರಕಾರಕ್ಕೂ ಮೇಲಾಟವಿದೆ. ಚೀನ ದೇಶದ ಚೌಂಗ-ಕಿಶೇಕರವರು ಆ ಪ್ರದೇಶದಲ್ಲಿ ಚೀನಿಯರಿಗೆ ಮನವೊಲಿಸಿಕೊಂಡು ತಮ್ಮ ಆಧಿಪತ್ಯದಲ್ಲಿ ಅವರಿಗೆ ಸೇರಿಸಿಕೊಳ್ಳಬೇಕೆಂದು ಹಂಬಲಿಸುತ್ತಿದ್ದಾರೆ. ಮಂಗೋಲಿಯಾ ದೇಶ ಚೀನ ದೇಶಕ್ಕೊಪ್ಪಿದ ಪ್ರದೇಶ. ಚೀನ ದೇಶದಲ್ಲಿ ಉಂಟಾದ ರಾಜ್ಯಕ್ರಾಂತಿಯಿಂದಲೂ, ಮುಂಚುಕೋ ಯಾನೆ ಮೆಂಚೂರಿಯಾ ಪ್ರದೇಶದ ಸಂಬಂಧ ಜಪಾನ ದೇಶದೊಡನೆ ನಡಿಸಿದ ಸಂಗ್ರಾಮದಿಂದಲೂ ಚೀನ ಸರಕಾರವು ದುರ್ಬಲವಾಗಿದೆ. ರಾಜಧಾನಿಯನ್ನು ಪೇಕಿಂಗ ಪಟ್ಟಣದಿಂದ ನಾನಕಿಂಗ ಪಟ್ಟಣಕ್ಕೆ ಸ್ಥಲಾಂತರ ಮಾಡಬೇಕಾಯಿತು. ಸೇನಾಧಿಪತಿಗಳಾದ ಚಾಂಗ-ಕಿಶೇಕರವರು ಚೀನ ರಾಷ್ಟ್ರವನ್ನು ಪುನರ್ಘಟಿಸಲು ವಿಶ್ವಪ್ರಯತ್ನ ಮಾಡುತ್ತಿದ್ದಾರೆ. ಚಾಂಗ-ಕಿಶೇಕರವರಿಗೆ ಜಪಾನದ ಹಗೆ ಹಿಡಿಯುವಷ್ಟು ಪ್ರಚಂಡ ಸಾಮರ್ಥ್ಯವಿಲ್ಲ; ಪ್ರೀತಿ ಹಿಡಿದರೆ ಚೀನಿ ಪ್ರಜೆಗಳು ಮುನಿಯುತ್ತಾರೆ ಹಾವು ಸಾಯದಂತೆ, ಕೋಲು ಮುರಿಯದಂತೆ ಮಧ್ಯ ಮಾರ್ಗ ಹಿಡಿದು, ಅವರು ಚೀನ ರಾಷ್ಟ್ರ ಪುನರ್ಘಟಿಸುವ ಉದ್ಯೋಗದಲ್ಲಿ ತೊಡಗಿದ್ದಾರೆ ಸದ್ಯಕ್ಕೆ ಅವರು ಮಂಗೋಲಿಯಾ ಪ್ರಾಂತಕ್ಕೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಪರಾಂಬರಿಸಿ, ಪ್ರಮುಖರೊಡನೆ ಮಾತು-ಕಥೆ ನಡಿಸಿ ಚೀನ ರಾಷ್ಟ್ರಕ್ಕೆ ಅನುಕೂಲವಾಗುವಂತೆ ಆ ಪ್ರಾಂತ ಭದ್ರಪಡಿಸಲು ವಿಚಾರ ನಡಿಸಿದರಂತೆ:

THE AGRICULTURAL & INDUSTRIAL BANK LIMITED,
COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
ಕುಂದಾಪುರ.

ಕಾಯಂ ಠೇವಣಾತಿಗಳು.

3	ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ	$3\frac{1}{2}$ ರಂತೆ,
6	ತಿಂಗಳಿಗೆ	$4\frac{1}{2}$ ರಂತೆ,
12	ತಿಂಗಳಿಗೆ	$5\frac{1}{2}$,,
24	ತಿಂಗಳಿಗೆ	6 ,,
3	ವರ್ಷ ಯಾ ಹೆಚ್ಚಿನ ಅವಧಿಗೆ ...	$6\frac{1}{2}$ ರಂತೆ

ಬಡ್ಡಿದರದಿಂದ ಅಂಗೀಕರಿಸಲ್ಪಡುತ್ತವೆ.

ಚಿನ್ನ ವ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್—ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲ್ಲುಗಳು, ದರ್ಶನಿ ಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಕರೆಂಟ್, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಂದಾಪುರ,
ತಾ. 21—1—1935.

K. Vaman Shenai &
G. Balakrishna S. Nayak.
Managing Directors.

ಮಂಗೋಲಿಯಾ ಪ್ರದೇಶದ ಮೇಲೆ ಜಪಾನ ದೇಶ ಕಣ್ಣಿಟ್ಟಿದೆ. ಮಂಗೋಲಿಯಾ ಪ್ರಾಂತವನ್ನು ಮಂಚೂರಿಯಾ ಪ್ರದೇಶಕ್ಕೆ ಸೇರಿಸಿ ಕಾರುಬಾರು ನಡಿಸಬೇಕೆಂದು ಜಪಾನಿಯರು ಹೊಂಚು ಹಾಕಿದ್ದಾರೆ. ಕಿಂಗಾನ ಪ್ರದೇಶದಲ್ಲಿ ಎಳೆ ಮಂಗೋಲರ ಪ್ರೀತಿ ಸಂಪಾದಿಸುವದಕ್ಕಾಗಿ ಒಂದು ಕೊಲೇಜನ್ನು ಜಪಾನಿಯರು ಸ್ಥಾಪಿಸಿದ್ದಾರೆ. ಈ ಕಾಲೇಜು ಸ್ಥಾಪನೆಯ ಉದ್ದೇಶವನ್ನು ಮೇಜರ ಹಿಷೋಸಿಯಾ ಎಂಬವರು ಜಪಾನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅದು ಬೋಧಪ್ರದವಿದೆ. "೪೦ ಲಕ್ಷ ಮಂಗೋಲರನ್ನು ನಾವು ದುರ್ಲಕ್ಷ ಮಾಡಿದ್ದಲ್ಲಿ ಚೀನಿಯರೂ, ರುಶ್ಯರೂ ಅವರಿಗೆ ವಶ ಮಾಡಿಕೊಳ್ಳುವರು. ಈ ಹಿಂದೆ ಅವರ ಪೂರ್ವಜ ಚೆಂಗಿಝಖಾನರು ಮಾಡಿದ ಪರಾಕ್ರಮಗಳನ್ನೆಲ್ಲ ಅವರು ಮರೆಯುವರು. ಅವರೊಳಗೆ ದೇಶಾಭಿಮಾನವನ್ನು ನಾವು ಜಾಗೃತಗೊಳಿಸಬೇಕು. ಚೀನ ದೇಶದೊಡನೆ ಮಂಗೋಲಿಯಾ ಪ್ರಾಂತ ಸೇರಿದರೆ ಮಂಗೋಲಿಯಾದ ಪ್ರತ್ಯೇಕ ಅಸ್ತಿತ್ವ ಬಯಲಾಗುವ ಭೀತಿಯಿದೆ. ಅದಕ್ಕಾಗಿ ಮಂಗೋಲರಿಗೆಲ್ಲ ಸೈನ್ಯಶಿಕ್ಷಣ ಕೊಟ್ಟಿಟ್ಟು ತಯಾರಿಯಲ್ಲಿಡಬೇಕು." ಇದರ ಮೇಲಿಂದ ಒಂದು ಮಾತು ಸ್ಪಷ್ಟವಾಗುತ್ತದೆ: ಜಪಾನ ಸರಕಾರಕ್ಕೆ ಚೀನ ದೇಶದೊಳಗಿನ ಪ್ರಾಂತಾಭಿಮಾನ ಕಾಪಾಡುವ ನೆವದಿಂದ ಒಂದೊಂದಾಗಿ ಚೀನ ಪ್ರಾಂತಗಳನ್ನು ಅಪಹರಿಸುವ ದುರಾಶೆಯುಂಟಾಗಿದೆ. ಈ ದುರಾಶೆಯೇ ಮೊನ್ನೆ ಜರುಗಿಸಿದ ಬಲಾತ್ಕಾರಕ್ಕೆ ಕಾರಣವೆಂದು ನಾನು ತಿಳಿಯುತ್ತೇನೆ. ಯಾವತ್ತೂ ಸಂಗತಿಗಳ ವಿವರ ಇನ್ನೂ ತಿಳಿಯಲಿಲ್ಲ. ಆದರೆ ಚೀನ ಪ್ರಾಂತದಲ್ಲಿ ಜಪಾನಿಯರು ನಡಿಸುವ ಆಕ್ರಮಣಗಳಿಂದ ಕ್ಷೇಮವಿಲ್ಲವಾಗಿ ನಾ ಹೇಳಬಲ್ಲೆ.

ಅಮೇರಿಕೆಯವರಿಗೂ, ಜಪಾನಿಯರಿಗೂ ಮನಸ್ಸು ಸೆಟ್ಟಗಿಲ್ಲ. ಬ್ರಿಟಿಶ-ಅಮೇರಿಕೆಯವರೊಳಗೂ ಐಕ್ಯಮತ್ಯ ಉಂಟಾಗಲಿಲ್ಲ. ಚೀನ ದೇಶವನ್ನು ಜಪಾನ ಸರಕಾರವು ಪಾದಾಕ್ರಾಂತ ಮಾಡಿಕೊಂಡರೆ ಜಪಾನವು ಮುಂದೆ ಪ್ರಬಲವಾಗಿ ಅಕ್ಷೇಮ ಕಾರಣವಾಗುವದೆಂದು ಮುತ್ಸದ್ದಿಗಳ ಅಭಿಮತವಿದೆ. ಚಾಂಗ ಕಿಶೇಕರವರು 'ಸೆಂಟ್ರಲ್ ಮಿಲಿಟರಿ ಎಕೆಡೆಮಿ' ಎಂಬ ಸೈನ್ಯ ಶಾಲೆಯಲ್ಲಿ ಹುಡುಗರಿಗೆ ದೇಶಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣ ಮಾಡಲು ಬೋಧಿಸುತ್ತಾರೆ. 'ದೇಶಕ್ಕಾಗಿ ಪೈಪುರಿದು ದುಡಿಯಿರಿ; ಇದ್ದ-ಇಲ್ಲದ ಸಾಮರ್ಥ್ಯವನ್ನು ದೇಶೋದ್ಧಾರಕ್ಕಾಗಿ ಅರ್ಪಿಸಿರಿ. ಪ್ರಾಣಾರ್ಪಣ ಮಾಡುವ ಪ್ರಸಂಗ ಬಂದರೂ ಹಿಂದೆ ಸರಿಯಬೇಡಿ" (Toil yourself and exhaust your energy for the country until you reach your death.) ಈ ಪ್ರಕಾರ ಹನ ರಾಜಮನೆತನದ ಚೂಕೊಲ್ಯಾಂಗರವರು ನುಡಿದ ವಚನವನ್ನು ಚಾಂಗ ಕಿಶೇಕರವರು ವಿದ್ಯಾರ್ಥಿಗಳಿಗೆ ನೆನಪು ಮಾಡಿಕೊಟ್ಟರು. ಇದರ ಮೇಲಿಂದ ಚೀನ ಸರಕಾರವು ಯುದ್ಧ ತಯಾರಿಯಲ್ಲಿಯೇ ಇರುತ್ತದಾಗಿ ನಾನೆಣಿಸುತ್ತೇನೆ. ಕ್ರೈಸ್ತ ಯುಗಾದಿಯ ಪ್ರಾರಂಭ ಕಾಲದಲ್ಲಿ ಚೀನಿ ವರ್ತಮಾನ ಪತ್ರಿಕೆಗಳು ಭವಿಷ್ಯ ಮಾಡಿದ ಯುದ್ಧ ಬಾಗಿಲಿಗೆ ಬಂತೇನು ? ನನಗೇನೂ ತಿಳಿಯದು.

ಅಬಿಸೀನಿಯಾ ಪ್ರಕರಣ ಇನ್ನೂ ಶಾಂತವಾಗಲಿಲ್ಲ. ಹಲವು ಫ್ರೆಂಚ ಸೈನ್ಯಾಧಿಕಾರಿಗಳಿಗೆ ಅಬಿಸೀನಿಯಾ ಸರಕಾರವು ಕೊಂದುಹಾಕಿತೆಂಬ ಆರೋಪವು ಅಬಿಸೀನಿಯಾ ಸರಕಾರದ ಮೇಲೆ ಹೊರಿಸಲಾಗಿದೆ. ಫ್ರೆಂಚರಿಗೂ ಇಟಾಲಿಯರಿಗೂ ಸೋಮಾಲಿ ಪ್ರಾಂತದ ಕುರಿತು ತಹನಾಮೆಯಾಗಿ ಇಟಾಲಿಗೆ ಸರ್ವಸ್ವಾತಂತ್ರ್ಯ ಕೊಟ್ಟದ್ದರಿಂದಲೂ, ಜಪಾನದ ಪ್ರವೇಶದಿಂದಲೂ ಈ ಪ್ರಕರಣವು ಎಲ್ಲಿಗೆ ಮುಟ್ಟೀತೆಂದು ಹೇಳುವದು ಕಠಿಣ.

ಮುಖ್ಯ ಸಂಗತಿಗಳನ್ನಷ್ಟೇ ಇಂದಿಗೆ ನಿರೀಕ್ಷಿಸಿದ್ದೇನೆ. ಯಾವ ಪ್ರಕರಣಕ್ಕೆ ಯಾವ ಮಹತ್ವ ಬಂದೀತೆಂದು ಇದೀಗಲೇ ನಾ ಹೇಳಲಾರೆ. ಯುರೋಪ ಖಂಡದಲ್ಲಿ ತೋರಗಾಣಿಕೆಗೆ ಪ್ರಶಾಂತಿ ಇದೆ; ಆದರೆ ಈ ಶಾಂತಿ ಸ್ಥಿರವಾದದ್ದಲ್ಲ; ಚಂಚಲವಾದುದು. ಪ್ರತಿಯೊಬ್ಬರೂ ಯುದ್ಧದ ತಯಾರಿಯನ್ನೇ ನಡಿಸುತ್ತಿದ್ದಾರೆ. ಯಾವ ಕಾಲದಲ್ಲಿ, ಯಾವ ರೂಪವನ್ನು ಯುರೋಪ ಖಂಡದೊಳಗಿನ ರಾಷ್ಟ್ರಗಳು ಧರಿಸುವವೆಂದು ಹೇಳುವದು ಕಠಿಣ. ಚೀನ-ಜಪಾನ ದೇಶದೊಳಗಿನ ರಣಯಜ್ಞವು ಬೇಗನೆ ತಣಿಯದಿದ್ದರೆ, ಆತ್ತ ಕಡೆ ಯಾವ ಯಾವ ರಾಷ್ಟ್ರಗಳು ಯಾವ ಯಾವ ಪಕ್ಷದಿಂದ ಹೋರಾಡಬಹುದೆಂದು ಹೇಳಬರದು. ಚೀನ ದೇಶವನ್ನು ಆಕ್ರಮಿಸಿಕೊಳ್ಳುವಲ್ಲಿ ಅಮೇರಿಕೆಯವರಾಗಲಿ, ರುಶ್ಯರಾಗಲಿ ಮಿಕಿ ಮಿಕಿ ನೋಡುತ್ತಿರುವರೆಂದು ನಾ ಹೇಳಲಾರೆ. ಜಪಾನ ದೇಶದ ರಣಸೊಕ್ಕಿಗೆ ಮಂಚೂರಿಯಾ ಪ್ರದೇಶವನ್ನು ಅಪಹರಿಸುವಾಗ ಬ್ರಿಟಿಶ-ಅಮೇರಿಕಾ ಮೊದಲಾದ ರಾಷ್ಟ್ರಗಳು ಕೈಕೊಂಡ ತಟಸ್ಥವೃತ್ತಿಯೇ ಕಾರಣವೆಂದು ಧಾರಾಳವಾಗಿ ಹೇಳಬಹುದು. ನೋಡುವಾ, ಏನೇನಾಗುತ್ತದೆಂದು !

ವೃತ್ತಸಾರ.

— ಮುಂಬಯಿಯ ಶ್ರೀ| ಖುರ್ಶೇದ ನರಿಮಾನರು ತಮ್ಮ ಮೋಟಾರಿನ ರಿಜಿಸ್ಟ್ರೇಶನ್ ಫೀಯನ್ನು, ಸರಕಾರಕ್ಕೆ ತೆರಲಿಲ್ಲ. ಆದರಿಂದ ಅವರ ಮೇಲೆ ಖಟ್ಲೆಯಾಗಿದೆ. ಬರೇ ಜಾಹೀರನಾಮೆಯನ್ನು ಹೊರಡಿಸಿ ರಿಜಿಸ್ಟೇಶನ್ ಫೀ ಎತ್ತುವಳಿ ಮಾಡಬರುವದಿಲ್ಲವಾಗಿ ಅವರ ಆಗ್ರಹ. ಈ ಪ್ರಕರಣ ಮುಂಬಯಿ ಹೈಕೋರ್ಟಿನ ತನಕ ವಿಚಾರಕ್ಕೆ ಹೋಗಬಹುದು.

— ಸಿಂಹಳ ದ್ವೀಪದಲ್ಲಿ ಚಳಿಜ್ವರದ ಹಾವಳಿ. ಸಾವಿರಾರು ಜನರು ತೀರಿಕೊಂಡರು ಕೆಲ ಮನೆತನಗಳು ನಾಮಶೇಷವಾಗಿವೆ. ಜನರು ನೊಣಗಳಂತೆ ಸಾಯುತ್ತಿದ್ದಾರಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅಲ್ಲಿಯ ಜನರು ಮಾಂಸಭಕ್ಷಣ ಮಾಡುವದರಿಂದ ಈ ರೋಗವು ಉಂಟಾಗಿದಯೆಂದು ಭಾವಿಕರ ಅಂಬೋಣ. ಗೋಮಾಂಸವನ್ನು ಅಲ್ಲಿ ಹೆಚ್ಚಾಗಿ ಭಕ್ಷಿಸುತ್ತಿದ್ದರಂತೆ. ಚಳಿಜ್ವರದ ಉಪಹತಿಯಿಂದ ಗೋಮಾಂಸ ಭಕ್ಷಣ ಮಾಡಬಾರದೆಂಬ ಚಳವಳಿಯುಂಟಾಗಿದೆ. ಆದರಿಂದ ಗೋಮಾಂಸ ವಿಕ್ರಯಕಾರರಿಗೆ ಗಿರಾಕಿ ಸಿಗದೆ ನಷ್ಟವಂತೆ. ಈ ಚಳಿಜ್ವರದ ಮೇಲೆ ನಾನಾ ಪ್ರಕಾರದ ಉಪಾಯ ಮಾಡಿದಾಗ್ಯೂ ಪಿಡುಗು ಶಾಂತವಾಗಲಿಲ್ಲ. ಜ್ವರಗ್ರಸ್ತರಿಗೆ ಬದುಕಿಸಿಕೊಳ್ಳುವದಾಗಲಿಲ್ಲ. ಇತ್ತ ಕಡೆ ಒಂದು ಗಿಡಮೂಲಿಕೆಯ ಶೋಧವಾಗಿದೆ. ಆ ಗಿಡಮೂಲಿಕೆಯ ಕಷಾಯ ಮಾಡಿಕೊಟ್ಟಲ್ಲಿ ಜ್ವರಗ್ರಸ್ತರು ಗುಣ ಹೊಂದುತ್ತಾರಂತೆ. ಈ ಗಿಡಮೂಲಿಕೆ ಸಿಂಹಳ ದ್ವೀಪದಲ್ಲಿ ಹೇರಳ ಬೆಳೆಯುತ್ತದೆ. ಈ ತನಕ ಆ ಕಡೆ ಯಾರೂ ಲಕ್ಷ ಕೊಟ್ಟದ್ದಿಲ್ಲ.

— ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ದೊಡ್ಡ ಚಳವಳಿ. ತಿರ್ವೆ ತಿದ್ದುಪಡಿಯಾಗಿದೆ. ಶೇಕಡಾ ೧೨|| ಯಂತೆ ತೀರ್ವೆ ಏರಿಸಲ್ಪಟ್ಟಿದೆ. ಕಾಳು-ಕಡಿಗಳ ದರ ಇಳಿದದ್ದರಿಂದ ಇದ್ದ ತೀರ್ವೆ ಕೊಡಲಾಗುವದಿಲ್ಲ. ಹೀಗಿದ್ದು ತೀರ್ವೆ ಏರಿಸುವದು ಮಹದನ್ಯಾಯವೆಂದು ಮುದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ಚರ್ಚೆಯಾಗಿ ನಿಷೇಧಪರ ಠರಾವು ಮಂಜೂರಾಯಿತು. ಶೇಕಡಾ ೧೨|| ರಂತೆ ತೀರ್ವೆ ಏರಿಸಬೇಕಾಗಿತ್ತು; ಸರಕಾರವು ಶೇಕಡಾ ೬|| ಯಂತೆ ಮಾತ್ರ ಏರಿಸಿದೆ. ಇತರೇ ಜಿಲ್ಲೆಗಳಲ್ಲಿ ತೀರ್ವೆಯ ಮಾನ ಇದಕ್ಕೂ ಹೆಚ್ಚಾಗಿದೆ; ಮುಂತಾದ ವಕೀಲಿ ನಡಿಸಿದಾಗ್ಯೂ ಸರಕಾರವು ನೋಡಿತು ಪ್ರತಿ ಬಾರಿಗೆ ತೀರ್ವೆಯನ್ನು ಏರಿಸುತ್ತ ಹೋದರೆ ಮೂಬಲಗು ಒಂದೆರಡು ಶತಮಾನಗಳಲ್ಲಿ ಉತ್ಪನ್ನಕ್ಕೆ ಮಿಕ್ಕಿಹೋಗುವದು. ಡಾಕ್ಟರ ಯು. ರಾಮರಾಯ ಪ್ರಭೃತಿ ಪ್ರಮುಖರು ದಕ್ಷಿಣ ಕನ್ನಡ ಜಿಲ್ಲೆಯ ರೈತರ ಪರವಾಗಿ ದುಡಿಯುತ್ತಿದ್ದಾರೆ. ಉಡುಪಿಯಲ್ಲಿ ರೈತರ ಸಭೆ ಸೇರಿ ನಿಷೇಧಪರ ಠರಾವುಗಳಾದವು.

— ಗಡಿನಾಡಿನ ಗಾಂಧಿಗಳಿಗೆ ಸಾಬರಮತಿಯ ಜೈಲಿನಲ್ಲಿ ಇಟ್ಟಿದ್ದಾರೆ. ಅವರ ಪ್ರಕೃತಿ ನೆಟ್ಟಗಿಲ್ಲ. ತೂಕ ಕುಗ್ಗಿದೆ. ಸುಮಾರು ೧೩ ರತ್ತಲು ಕುಗ್ಗಿತಂತೆ. ಅವರಿಗೆ ರಾಣಾಲು ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾದ ಅವರ ತಮ್ಮಂದಿರಾದ ಡಾಕ್ಟರ ಖಾನಸಾಹೇಬರು ಅವೇಕ್ಷಿಸಿ ಸರಕಾರದ ಅಪ್ಪಣೆ ಬೇಡಿದ್ದರು. ಸರಕಾರವು ಅವರಿಗೆ ಅಪ್ಪಣೆ ಕೊಡಲೊಪ್ಪಲಿಲ್ಲ.

ವಿಕ್ರಿಗೆ ತಯಾರಾಗಿದೆ!

ವೇ|| ಮೊಗೇರಿ ಭಾಸ್ಕರ ಅಡಿಗಳಿಂದ

ಸೂರ್ಯಸಿದ್ಧಾಂತರೀತ್ಯಾ ತಯಾರಿಸಲ್ಪಟ್ಟ,

ಕೆಕ್ಕಾರ ಶ್ರೀ ಧರ್ಮವಿದ್ಯಾಪರಿಷತ್ತಿನ ಆಶ್ರಯ ಪಡೆದ

ಯುವ ಸಂ|| ಪಂಚಾಂಗವು

ಮಾರಾಟಕ್ಕೆ ಸಿದ್ಧವಾಗಿದೆ!

ನಿಯಮಿತ ಪ್ರತಿಗಳು ತೆಗೆದಿರುವದರಿಂದ,

ಬೇಕಾದವರು ತೀವ್ರ ಬರೆಕೊಳ್ಳಬೇಕು.

ಪತ್ತೆ:—

"ಸ್ಟಾರ ಆಫ್ ಕೆನರಾ ಪ್ರೆಸ್," ಕುಮಟಾ.

"ಗೋಲ್ಡಸ್ಟಾರ" ಬ್ರೆಂಡ ಚಹಾಗಳು (ಲೀಫ ಮತ್ತು ಪೌಡರ)

ನಮ್ಮಲ್ಲಿ ರೋಖ ಮತ್ತು ಕಿಫಾಯತಶೀರ ವಿಕ್ರಯಿಸಲ್ಪಡುತ್ತವೆ. ಅತ್ಯುನ್ನತ ಪ್ರದೇಶದೊಳಗಿನ ಚಹಾ ಮಾಳೆಯಲ್ಲಿ ಈ ಚಹಾವು ಸಕ್ರಿಯವಾಗಿ ತಯಾರಿಸಲ್ಪಡುವದರಿಂದ ನಿರ್ಭೇಳ ಮತ್ತು ಮಧುರವಿರುತ್ತವೆ. ನಮೂನೆ ವ ದರವಾರ ಪಸ್ತೆರೆ ಕುರಿತು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ. ಅಲ್ಲಲ್ಲಿ ವಿಕ್ರೇತರು ಬೇಕು !

ಹೊನ್ನಾವರ, 27—1—1935 } **ದಿ ನ್ಯೂ ಎಂಪೋರಿಯಮ್,** **ಹೊನ್ನಾವರ** (ಕೆನರಾ)

ಕಾನಡಾವೃತ್ತ.

ಮಿತಿ ಭಾವ ಸಂ|| ಪುಷ್ಯ ಬ|| ೮, ಸೋಮವಾರ

ಈಗಿನ ರಾಷ್ಟ್ರಧೋರಣ.

ಈಗಿನ ರಾಜ್ಯಧೋರಣಾ ಸಂಬಂಧ ಸಂಗತಿ ಗುಪ್ತ ಸರ್ಕಲಾರಿನ ಮೇಲಿಂದ ಗ್ರಹಿಕೆಯಾಗುವಂತಿದೆ. ಇಂಥ ಪ್ರಸಕ್ತಿಯಲ್ಲಿ ರಾಷ್ಟ್ರಧೋರಣಾ ಸಂಬಂಧವನ್ನು ನಾವು ತಿಳಿಕೊಳ್ಳುವದವಶ್ಯ. ಆದ್ದರಿಂದಲೇ ಕಾಂಗ್ರೆಸ ಕಾರ್ಯಕಾರಿ ಮಂಡಳದ ಠರಾವನ್ನು ಕೊಟ್ಟಿರುತ್ತೇವೆ, ಕಾಂಗ್ರೆಸ ಸಭಾಸದರು ಸ್ವೀಕರಿಸುವ ಧೋರಣವನ್ನು ಇನ್ನೊಂದೆಡೆ ಕೊಟ್ಟಿದ್ದೇವೆ, ಮಹಾತ್ಮರು ಸ್ಥಾಪಿಸಿದ ಅಖಿಲ ಭಾರತೀಯ ಗ್ರಾಮೋದ್ಯೋಗಿಕ ಸಂಘದ ಕುರಿತು ಹಿಂದುಸ್ಥಾನ ಸರಕಾರವು ಹೊರಡಿಸಿದ ಗುಪ್ತ ಸರ್ಕ್ಯುಲರಿನ ವಿಷಯವು ಮಹಾತ್ಮರ ವಿಚಾರಗಳನ್ನು ಸುದ್ದಿಗಳಲ್ಲಿ ಪ್ರಕಟಿಸಿದ್ದೇವೆ. ಇವೆಲ್ಲವುಗಳ ಮೇಲಿಂದ ಜನಸಾಮಾನ್ಯರಿಗೆ ತಮ್ಮ ಸದ್ಯದ ಕರ್ತವ್ಯ ತಿಳಿಯಬಹುದು.

ಸರಕಾರಿ ಅಧಿಕಾರಿಗಳ ಸದಾ ಮನಸ್ಸನ್ನು ನೋಯಿಸಲಾಗದು. ಅಧಿಕಾರಿಗಳು ಕಾಲಕಾಲಕ್ಕೆ ಹೊರಡಿಸುವ ಆಜ್ಞೆಗಳನ್ನು ವಿಶೇಷ ತರದಿಂದ ಪಾಲಿಸಬೇಕು. ಅವನ್ನು ಎಷ್ಟರಮಟ್ಟಿಗೂ ಮುರಿಯಲಾಗದು. ಸರಕಾರದ ಆಶ್ರಯದಲ್ಲಿ ನಡೆಯುವ ಸಮಾರಂಭಗಳನ್ನು ಬಹಿಷ್ಕರಿಸಕೂಡದು. ತಿರಸ್ಕರಿಸಲಿಕ್ಕೆ ಕೂಡದು. ಸಮಾರಂಭಗಳ ಪ್ರಶಸ್ತತೆಗೆ ಮನೋವ್ಯಥೆ ಮಾಡಲಿಕ್ಕೆ ಸಕೂಡದು. ಪ್ರಭುಗಳು ನಡಿಸುವ ಯಾವತ್ತೂ ಉತ್ಸವ ಕಾರ್ಯಕ್ರಮವನ್ನು ನಿರಾತಂಕವಾಗಿ ಸಾಂಗಪಡಿಸುವಲ್ಲಿ ಯಾವದೇ ಪ್ರತಿಬಂಧವನ್ನು ಪ್ರತ್ಯಕ್ಷವಾಗಲಿ, ಅಪ್ರತ್ಯಕ್ಷವಾಗಲಿ ತಂದೊಡ್ಡಕೂಡದು. ಆದರೆ ಅವುಗಳಲ್ಲಿ ಸೇರದೆ ಅಲಿಪ್ತರಾಗಿರಬೇಕು. ಅಲಿಪ್ತತೆಯೇ ರಾಷ್ಟ್ರೀಯ ಸಭೆಯ ನಿಶ್ಚಯವು. ಸಾರ್ವಭೌಮ ಪಂಚಮ ಜಾರ್ಜರ ರೌಪ್ಯ ಮಹೋತ್ಸವದ ನಿರ್ಣಯದಿಂದ ಈ ಮಾತು ಸಿದ್ಧವಾಗಿದೆ. ಸಾರ್ವಭೌಮ ಪಂಚಮ ಜಾರ್ಜ ಭೂಪಾಲರು ಪ್ರಜಾವತ್ಸಲರು ಎಂಬ ಮಾತು ಸ್ಪಷ್ಟವಿದೆ. ಭೂಪಾಲರು ದೀರ್ಘಾಯುರಾರೋಗ್ಯದಿಂದ ಉಳಿಯಬೇಕೆಂದು ಜನರು ಹಂಬಲಿಸುವರು. ರೌಪ್ಯಮಹೋತ್ಸವದ ಕಾರ್ಯಕ್ರಮಗಳಲ್ಲಿ ರಾಜಭಕ್ತಿಯನ್ನು ಪ್ರದರ್ಶಿಸಲಿಕ್ಕೆ ಜನರು ಹಂಬಲಿಸುತ್ತಾರೆ. ಆದರೆ ಉತ್ಸವದಲ್ಲಿ ಸೇರಿದ್ದರಿಂದ ಈಗಿನ ರಾಜ್ಯಪದ್ಧತಿಗೆ ಲೋಕಮಾನ್ಯತೆಯು ಅಂಕಿತವಾದಂತಿದೆ. ಹಾಗೆ ಅಂಕಿತ ಬೀಳುವದು ಹಿಂದುಸ್ಥಾನದ ಹಿತಕ್ಕೆ ಘಾತಕವಾದುದು. ಆದರಿಂದ ನಿರುಪಾಯವಾಗಿ ಕಾಂಗ್ರೆಸ ಕಾರ್ಯಕಾರಿ ಮಂಡಳವು ರೌಪ್ಯ ಮಹೋತ್ಸವದಲ್ಲಿ ಜನಸಾಮಾನ್ಯರು ಯಾವದೇ ಪ್ರಕಾರ ಸೇರಬಾರದಾಗಿ ರಾಷ್ಟ್ರಾಜ್ಞೆ ಹೊರಡಿಸಿದೆ. ಕಾಂಗ್ರೆಸ ಪಕ್ಷದ ಸಭಾಸದರು ಸರಕಾರಿ ಅಧಿಕಾರಸ್ಥಾನಗಳನ್ನು ಸ್ವೀಕರಿಸದಿರುವ ಕಾರಣವಾದರೂ ಇದೇ. ಅಧಿಕಾರಿಗಳ ಆಶ್ರಯದಲ್ಲಿ ನಡೆಯುವ ಮೇಜವಾನಿಗಳಿಗಾಗಲಿ, ಸತ್ಕಾರ ಸಮಾರಂಭಗಳಿಗಾಗಲಿ ಸೇರಕೂಡದೆಂದು ನಿರ್ಣಯಿಸುವ ಮರ್ಮವೂ ಇದೇ. ದಕ್ಷಿಣ ಆಫ್ರಿಕೆಯ ಏಜಂಟ-ಜನರಲ್‌ರಾಗಿ ನೇಮಿಸಲ್ಪಟ್ಟ ಸ್ವಯ್ಯದ ರೇಝಾ ಅಲ್ಲಿಯವರು ತಮ್ಮ ನೇಮಣೂಕಿಯ ಪ್ರೀತ್ಯರ್ಥ ಸರ್ವಾಧಿಪತಿ ವಿಲಿಂಗಡನ್ ದೊರೆ ಪ್ರಭೃತಿ ಅಧಿಕಾರಿಗಳಿಗೆ ದಿಲ್ಲಿಯಲ್ಲಿ ಮೇಜವಾನಿ ಕೊಟ್ಟರು. ಆ ಸಮಯ ಮಹಾತ್ಮರಿಗೂ ನಿಮಂತ್ರಣ ಬಂದಿತ್ತು. "ತಾವು ನಿಮಂತ್ರಣ ಕಳಿಸಿದ್ದು ಯೋಗ್ಯವೇ, ಆದರೆ ನಾನದನ್ನು ಸ್ವೀಕರಿಸಲಾರೆ, ತಾವು ಬೇಸರಪಡಲಾಗದು. ಬೇಸರಪಡದಂತೆ ಸರ್ವಾಧಿಪತಿಗಳಿಗೂ ನನ್ನ ಪರವಾಗಿ ವಿನಂತಿ ಮಾಡಬೇಕು." ಇಷ್ಟು ಸೌಜನ್ಯಪೂರ್ವಕವಾಗಿ ಮಹಾತ್ಮರು ಸಯ್ಯದ ರೇಝಾ ಅಲ್ಲಿಯವರಿಗೆ ಬರೆದು ನಿಮಂತ್ರಣವನ್ನು ನಿರಾಕರಿಸಿದರು. ಈ ಪ್ರಕಾರ ಅಲಿಪ್ತವಾಗಿರುವದು ಸಂತೋಷದ ಸಂಗತಿಯಲ್ಲ. ಆದರೆ ರಾಷ್ಟ್ರೋದ್ಧಾರಕ್ಕಾಗಿ ಈ ಪ್ರವೃತ್ತಿಯನ್ನು ಸಮಸ್ತ ಪ್ರಜಾಜನರು ತಳೆಯಬೇಕಾಗಿದೆ. ಈಗಿನ ರಾಜ್ಯಪದ್ಧತಿಗೆ ಲೋಕಸಮ್ಮತಿ ಇಲ್ಲ, ಎಂಬದನ್ನು ಪ್ರದರ್ಶಿಸುವದಕ್ಕಾಗಿ ಈ ಪ್ರಕಾರ ಜನರು ನಡೆಕೊಳ್ಳಬೇಕಾಗಿದೆ. ಅಲಿಪ್ತತೆಯು ಈಗಿನ ರಾಷ್ಟ್ರಧೋರಣದೊಳಗಿನ ಒಂದು ಅಂಗ.

ಒಳೆ ಅಲಿಪ್ತತೆಯಿಂದಲೇ ರಾಷ್ಟ್ರಕಾರ್ಯಭಾಗವಾಗದು. ರಾಷ್ಟ್ರಪೋಷಕರಾದ ಕಾರ್ಯಕ್ರಮವನ್ನು ನಾವು ಅನುಸರಿಸಬೇಕು. ಸ್ವರಾಜ್ಯವನ್ನು ಪಡೆಯಕೂಡದ ದರಿದ್ರ್ಯ ಗ್ರಾಮ ಕಳೆದ ಹಸಿವ ರಾಷ್ಟ್ರ ಸ್ವಾತಂತ್ರ್ಯವು ವಿನೋದವನ್ನು ಜನರು ಸರಕಾರಿ ಪ್ರತಿಬಂಧಗಳಲ್ಲಿ ತಮ್ಮ ತಮ್ಮ ಮನಗಳಲ್ಲಿ ಪಾಲಿಸಬೇಕೆಂದು ರಾಷ್ಟ್ರಾಜ್ಞೆ ಹೊರಡಿಸಿದ್ದು ದಬ್ಬಾಳಿಕೆಯಿಂದ ಜನರು ದಬ್ಬಿಹೋಗಲಿಲ್ಲ, ರಾಷ್ಟ್ರನಿರ್ಧಾರದಿಂದ ಅವರು ಬದಲಾಗಲಿಲ್ಲ, ರಾಷ್ಟ್ರೋದ್ಧಾರ ಅವರ ಕಣ್ಮರೆಯಾಗಲಿಲ್ಲ, ಪೂರ್ಣ ಸ್ವರಾಜ್ಯಕ್ಕಾಗಿ ಜನರು ಇನ್ನೂ ಹಂಬಲಿಸುತ್ತಿದ್ದಾರೆ ಎಂಬ ಸಂಗತಿ ಸಮಸ್ತರಿಗೆ ಗೊತ್ತಾಗಬೇಕು, ಜನರಿಗೂ ಆಗಿಂದಾಗ ತಮ್ಮ ಕರ್ತವ್ಯದ ಕಲ್ಪನೆಯಾಗುತ್ತಿರಬೇಕು, ಜನರು ಕರ್ತವ್ಯಪರಾಙ್ಮುಖರಾಗಕೂಡದು ಎಂಬದೇ ರಾಷ್ಟ್ರೀಯ ಸಭೆಯ ಉದ್ದೇಶವಿದೆ. ಬೇರೆ ಬೇರೆ ಪ್ರಾಂತಗಳಿಂದ ಆರಿಸಿಹೋದ ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರು ಪ್ರಾಂತವಿಶಿಷ್ಟ ಶಿರೋಭೂಷಣಗಳನ್ನು ಕಾಯಿದೆ ಕೌನ್ಸಿಲಿನ ಸಭಾಮಂದಿರಗಳ ಹೊರತೆಗೆದಿಟ್ಟು ಗಾಂಧಿ ಟೊಪ್ಪಿಗೆಯನ್ನು ಧರಿಸಿ ಸಭಾಮಂದಿರದಲ್ಲಿ ಸೇರಬೇಕಾಗಿ ಕಾಂಗ್ರೆಸ ಸಭಾಸದರು ಕೈಕೊಂಡ ನಿರ್ಣಯವಾದರೂ ಕಾಂಗ್ರೆಸ ಸಭಾಸದರಿಗೆ ರಾಷ್ಟ್ರೀಯ ಕರ್ತವ್ಯ ಎಂದಿಗೂ ಕಣ್ಮರೆಯಾಗಬಾರದೆಂಬುದೇ ಮೇಲಾಗಿ ಸಮಸ್ತರೂ ಒಂದೇ ಒಂದು ಹಿಂದರಾಷ್ಟ್ರದ ಪ್ರತಿನಿಧಿಗಳೆಂಬ ಭಾವನೆ ಉಂಟಾಗಬೇಕು. ಏಕರಾಷ್ಟ್ರೀಯ ಭಾವನೆಗೆ ಪೋಷಕವಾಗಬೇಕೆಂಬದೇ ಈ ನಿರ್ಣಯದ ಉದ್ದೇಶ. ಸ್ವತ್ವ ಮರೆಯಕೂಡದು. ಸರಕಾರಿ ಅಧಿಕಾರಿಗಳು ನೀಡುವ ಮೇಜವಾನಿಗಳಿಗೆ ಚಿತ್ತೈಸಬಾರದೆಂದು ನಿರ್ಣಯ ಕೊಳ್ಳುವ ಕಾರಣವಾದರೂ ಇದೇ. ಅಖಿಲ ಭಾರತೀಯ ಗ್ರಾಮೋದ್ಯೋಗಿಕ ಸಂಘಕ್ಕೆ ಆಶ್ರಯ ಕೊಟ್ಟು ಆ ಸಂಘದ ಕಾರ್ಯಕ್ರಮವನ್ನು ಪುರಸ್ಕರಿಸಬೇಕಾಗಿ ರಾಷ್ಟ್ರೀಯ ಸಭೆಯವರು ಅಪೇಕ್ಷಿಸುವ ಕಾರಣ ಸಹ ಇದೇ. ಮಹಾತ್ಮರು ನುಡಿದಂತೆ, ಊರ ಅಕ್ಕಿ, ಊರ ಎಣ್ಣೆ, ಊರ ಹಿಟ್ಟು, ಊರ ಬೆಲ್ಲ ಮೊದಲಾದ ಗ್ರಾಮಗಳಲ್ಲಿ ತಯಾರಾಗುವ ಸಾಮಗ್ರಿಗಳನ್ನು ಪುರಸ್ಕಾರ ಮಾಡುವದರಿಂದ ಗ್ರಾಮಾಂತರಗಳಲ್ಲಿ ವಾಸಿಸುವ ಸಾವಿರಾರು ದೇಶಬಾಂಧವರಿಗೆ ಉದ್ಯೋಗ ಸಿಕ್ಕಿ ಜನರ ಆರೋಗ್ಯ ಸುಧಾರಿಸುವಂತಿದೆ. ವಿದೇಶಕ್ಕೆ ಹರಿದು ಹೋಗುವ ದ್ರವ್ಯಪ್ರವಾಹಕ್ಕೆ ತಾನಾಗಿಯೇ ತಡೆಬೀಳುತ್ತದೆ. ಸರಕಾರದ ಯಾವದೇ ಹುಕುಮನ್ನು ಉಲ್ಲಂಘಿಸದೆ, ಅಧಿಕಾರಿಗಳ ಅಭಿಮಾನಿಗಳಿಗೆ ಯಾವದೇ ಪ್ರಕಾರ ಮನೋವ್ಯಥೆ ಮಾಡದೆ ಈ ಕಾರ್ಯಕ್ರಮ ಪುರಸ್ಕರಿಸಬಹುದು. ಬೇರೆ ಬೇರೆ ಉದ್ದಿಮೆಯ ಗ್ರಾಮನಿವಾಸಿಗಳಲ್ಲಿ ಸಂಘಟನೆಯೂ, ಸಹಕಾರವೂ, ಬಂಧುಪ್ರೇಮವೂ ಒಮ್ಮೆಲೇ ಉಂಟಾಗುತ್ತವೆ. ಗ್ರಾಮಗಳಲ್ಲಿ ನೆಲೆಮಾಡಿಕೊಂಡಿದ್ದ ದಾರಿದ್ರ್ಯ ಒಯಲಾಗುತ್ತದೆ. ಮೇಲಾಗಿ ಗ್ರಾಮನಿವಾಸಿಗಳಲ್ಲಿ ಯಂತ್ರ ಸಾಹಿತ್ಯಗಳ ಉಪಯೋಗದಿಂದ ಹಬ್ಬಿದ ವಿಲಾಸವೃತ್ತಿಯೂ, ಕಾಯ-ಕಷ್ಟ ಪರಾಙ್ಮುಖತೆಯೂ ಬಯಲಾಗುತ್ತವೆ, ಸ್ವಾವಲಂಬನವೂ ನೆಲೆಸುತ್ತದೆ, ಸ್ವತ್ವದ ಕಲ್ಪನೆಯಾಗುತ್ತದೆ. ಸ್ವಂತ ಪರಾಕ್ರಮದಿಂದ ಗ್ರಾಮೋದ್ಧಾರ ಸಾಧಿಸಿದ ಶ್ರೇಯಸ್ಸು ಪ್ರಾಪ್ತಿಯಾಗುತ್ತದೆ. ಈ ಪ್ರಕಾರ ಸರ್ವಮಾನ್ಯವಾಗುವಂಥ ನಿರ್ವಿವಾದ ಕಾರ್ಯಕ್ರಮವನ್ನು ಜನರು ಅನುಸರಿಸಬೇಕು. ಸರಕಾರಿ ಅಧಿಕಾರಿಗಳ ಕಡೆ ದೀನ ಮೋರೆ ಮಾಡಿ ಹಗಲಿರುಳು ಪ್ರಾರ್ಥಿಸಿಕೊಳ್ಳುತ್ತಿರುವದು ವ್ಯಕ್ತಿಗೂ, ರಾಷ್ಟ್ರಕ್ಕೂ ಎಂದಿಗೂ ಭೂಷಣವಲ್ಲ. ಅದರಿಂದ ವ್ಯಕ್ತಿ ದುರ್ಬಲವಾಗುತ್ತದೆ, ರಾಷ್ಟ್ರವು ದುರ್ಬಲವಾಗಿ ಪರಾಕ್ರಮ ಹೀನವಾಗುತ್ತದೆ, ಮೆಟ್ಟು ಮಟ್ಟಿಗೆ ಸರಕಾರದ ಸಹಾಯವನ್ನಪೇಕ್ಷಿಸುವದರಿಂದ ಸ್ವತ್ವವನ್ನೇ ಜನರು ಮರೆಯುತ್ತಾರೆ. ಮೇಲಾಗಿ ಸರಕಾರಕ್ಕೆ ಯಾವಾಗಲೂ ಹಣದ ಅಡಚಣಿ. ಹಂಗಾಮಿಯಾಗಿ ಒಮ್ಮೆ ಹೇರಿದ ಕರವನ್ನು ಇಳಿಸಲಿಕ್ಕೆ ಜಮಾ ಖರ್ಚು ಬಾಯಿಗೂಡದ್ದರಿಂದ ಸರಕಾರಕ್ಕೆ ಶಕ್ಯವಾಗುವದಿಲ್ಲ. ಮುಂಬಯಿ ಸರಕಾರದ ಮುಂದಿನ ವರ್ಷದ ಜಮಾ ಖರ್ಚಿನ ಪತ್ರಿಕೆಯಲ್ಲಿ ಹಂಗಾಮಿಯಿಂದ ಹೇರಿದ ಹೊಸ ಕರಗಳೆಲ್ಲ ಉಳಿಯುವವಾಗಿಯೂ, ಇನ್ನೂ ಹೊಸ ಕರ ಹೇರುವ ವಿಚಾರ ನಡೆಯುವದಾಗಿಯೂ ಪತ್ರಿಕೆಗಳು ಈಗಲೇ ಭವಿಷ್ಯ ಹೇಳಲಾರಂಭಿಸಿವೆ. ಇಂಥ ಪ್ರಸಕ್ತಿಯಲ್ಲಿ ರಾಷ್ಟ್ರೋದ್ಧಾರದ ಕಾರ್ಯಕ್ಕಾಗಿ ಸರಕಾರದ ಕಡೆಯಿಂದ ದ್ರವ್ಯಸಹಾಯವಾಗುವದೆಂಬ ಕಲ್ಪನೆಯನ್ನು ಸರ್ವಥಾ ಹಿಡಿಯಲಾಗದೆಂದು ಬಲ್ಲಿದರು ಅಭಿಪ್ರಾಯಪಡುವದು ಸಹಜ. 'ಆತ್ಮೈವ ಹ್ಯಾತ್ಮನೋ ಬಂಧುಃ' ಎಂಬ ಭಗವದುಕ್ತಿಯಂತೆ ಜನರು ನಡಕೊಳ್ಳಬೇಕಾಗಿ ಗ್ರಾಮೋದ್ಯೋಗಿಕ ಸಂಘದ ಅಪೇಕ್ಷೆ. ಜನರು ಒಡಕತನದಲ್ಲಿ ಸಿಲುಕಿ ಹೋರಾಡುತ್ತಿದ್ದಾರೆ. ಅವರ ಕಡೆಯಿಂದ ಒಮ್ಮೆಲೇ ಬೇಸಾಯ ಸುಧಾರಣ, ಭೂಸುಧಾರಣ ಮೊದಲಾದ ಖರ್ಚಿನ ಕಾರ್ಯಕ್ರಮಗಳನ್ನು ನೆರವೇರಿಸಿಕೊಳ್ಳುವದು ಅಶಕ್ಯದ ಮಾತು. ಆದರಿಂದ ಮಹಾತ್ಮರು ಆ ಗೋಜಿಗೆ ಹೋಗಲಿಲ್ಲ. ಖರ್ಚಿಲ್ಲದೆ ಸಾಧ್ಯವಾಗುವಂಥ ದೇಶೋದ್ಧಾರ ಕಾರ್ಯಕ್ರಮವನ್ನೇ ರಾಷ್ಟ್ರೀಯ ಸಭೆಯವರೂ, ಗ್ರಾಮೋದ್ಯೋಗಿಕ ಸಂಘದವರೂ ಪ್ರದರ್ಶಿಸ ಬಯಸುತ್ತಾರೆ. ಸರಕಾರದ ಆಜ್ಞೆಗಳನ್ನು ಮುರಿಯದೆ, ಸ್ವತ್ವವನ್ನು ಸರ್ವದಾ ನೆನಸಿ, ಸ್ವಾವಲಂಬನದ

ಉಪಾಯದಿಂದ ಗ್ರಾಮೋದ್ಧಾರ ಕಲ್ಪಿಸುವದು ಈಗಿನ ರಾಷ್ಟ್ರಧೋರಣದೊಳಗಿನ ಎರಡನೇ ಅಂಗ.

ಇವೆರಡೂ ಅಂಗಗಳು ಒಂದಕ್ಕೊಂದು ಪೋಷಕವಿವೆ. ಇವನ್ನು ಭಕ್ತಿಯಿಂದ ರಾಷ್ಟ್ರವು ಪುರಸ್ಕರಿಸಿ ನಡಕೊಂಡರೆ ರಾಷ್ಟ್ರೋದ್ಧಾರವು ನಿಸ್ಸಂಶಯವಾಗಿ ನೆರವೇರುವಂತಿದೆ. ಸತ್ಯಾಗ್ರಹದ ಕಲ್ಪನೆಯೇ ಅವಶ್ಯವಿಲ್ಲ, ಆ ತಯಾರಿಯ ಮಾತಂತು ಒತ್ತಟ್ಟಿಗೇ ಉಳಿಯಿತು. ರಾಷ್ಟ್ರೀಯ ಸಭೆಯು ಅಭಿಪ್ರಾಯಪಟ್ಟಂತೆ ಗ್ರಾಮಗಳ ಸಂಘಟನೆಯೇ ಸ್ವರಾಜ್ಯದಪ್ರಶ್ನೆ. ಗ್ರಾಮಗಳು ಸಮೃದ್ಧವಾದರೆ, ಪೂರ್ಣಸ್ವರಾಜ್ಯ ಹಸ್ತಗತವಾದಂತೆಯೇ. ಗ್ರಾಮನಿವಾಸಿಗಳು ಸ್ವತ್ವ ಮರೆತು, ಗ್ರಾಮಗಳಲ್ಲಿರುವ ಉದ್ದಿಮೆದಾರರ ಪರಿವೆ ಹಿಡಿಯದೆ, ಗ್ರಾಮಗಳಲ್ಲಿ ತಯಾರಾಗುವ ಸಾಮಗ್ರಿಗಳ ರಾಷ್ಟ್ರೀಯ, ಆರ್ಥಿಕ ಪ್ರಯೋಜನದ ವಿಚಾರ ಮಾಡದೆ ವಿದೇಶದಿಂದ ಆಮದಾದ, ಯಂತ್ರಗಳ ಮೇಲೆ ತಯಾರಾಗಿಬಂದ ಅಂದ-ಚಂದ ವಸ್ತುಗಳಿಗೆ ಮನಸೋತದ್ದರಿಂದಲೇ ಗ್ರಾಮಗಳು ಕ್ರಮವಾಗಿ ದರಿದ್ರವಾದವು, ಜನರು ಪರಾವಲಂಬಿಗಳಾದರು, [illegible]ಯಾದರು ಮೆಟ್ಟು-ಮೆಟ್ಟಿಗೆ ಪರಸಹಾಯವನ್ನೇ ಅಪೇಕ್ಷಿಸತೊಡಗಿದರು. ಈ ಪ್ರವೃತ್ತಿ ರಾಷ್ಟ್ರಘಾತಕವಾದುದು. ಅದನ್ನು ಹೋಗಲಾಡಿಸಲೋಸುಗ ರಾಷ್ಟ್ರೀಯ ಸಭೆಯವರೂ ಮಹಾತ್ಮರೂ ಹೊಸ ಧೋರಣವನ್ನು ಪುರಸ್ಕರಿಸಿದ್ದಾರೆ. ಜನಸಾಮಾನ್ಯರು ನೂತನ ರಾಷ್ಟ್ರಧೋರಣದ ಮರ್ಮ ತಿಳಿದು ಬುದ್ಧಿಪೂರ್ವಕವಾಗಿ ಅದನ್ನು ಅನುಸರಿಸಿ, ರಾಷ್ಟ್ರೋದ್ಧಾರ ಕಾರ್ಯದಲ್ಲಿ ನೆರವಾಗಬೇಕಾಗಿ ವಿನಂತಿ. ಆತ್ಮೋದ್ಧಾರವಾದರೂ ಇದರಿಂದಲೇ ಸಾಧ್ಯವಾಗುವಂತಿದೆ. ಯಾವದೇ ಪ್ರಕಾರ ತ್ಯಾಗ ಮಾಡುವದನವಶ್ಯಕ

ಸ್ಫುಟ ಸೂಚನೆಗಳು.

೧. ಮುಂಬಯಿ ಸರಕಾರವು ನೇಮಿಸಿದ ಭೂಪದ್ರತೆ ಮಂಡಳದವರು ರೈತರನ್ನು ಸಾಲದಿಂದ ಶೀಘ್ರವೇ ಬಿಡುಗಡೆ ಮಾಡಲು ಉಪಾಯಯೋಜನೆ ಮಾಡದಿದ್ದರೆ ಅನರ್ಥವೊದಗುವದಾಗಿ ಸರಕಾರಕ್ಕೆ ಗಾಂಭೀರ್ಯದಿಂದ ಮಾಡಿದ ಸೂಚನೆಯನ್ನು ನಾವು ಈ ಹಿಂದೆಯೇ ಸಮಾಲೋಚಿಸಿದ್ದೇವೆ. ಬೇಸಾಯಗಾರರು ಸಂಪೂರ್ಣವಾಗಿ ಸೋತುಹೋಗಿದ್ದಾರೆ, ನಿರಾಶರಾಗಿದ್ದಾರೆ, ಅವರಿಗೆ ಮೇಲಕ್ಕೇಳಿಯಲು ಶೀಘ್ರವೇ ತಕ್ಕ ಯೋಜನೆಯಾಗಬೇಕು. ಔಂಧ ಸಂಸ್ಥಾನಾಧಿಪತಿಗಳು ತಮ್ಮ ರೌಪ್ಯ ರಾಜ್ಯಾರೋಹಣೋತ್ಸವದ ಸಮಯ ಕೈಕೊಂಡ ಉಪಕ್ರಮವನ್ನು ಪ್ರಜಾವತ್ಸಲ ಸಾರ್ವಭೌಮ ಪಂಚಮ ಜೋರ್ಜ ಭೂಪಾಲರೂ, ಸಾರ್ವಭೌಮರ ಆಧಿಪತ್ಯದಲ್ಲಿ ನಮ್ಮ ಹಿಂದಭೂಮಿಯಲ್ಲಿ ಆಡಳಿತೆ ನಡಿಸುವ ಸರಕಾರದವರೂ, ಸಾರ್ವಭೌಮರ ಅಪೇಕ್ಷೆಯಂತೆ ರೌಪ್ಯ ಮಹೋತ್ಸವವನ್ನು ನೆರವೇರಿಸುವ ಕಾರ್ಯನಿರ್ವಾಹಕರೂ ವಿಚಾರ ಮಾಡಬಹುದು. ಔಂಧ ಸಂಸ್ಥಾನಾಧಿಪತಿಗಳು ಸ್ವಂತ ಕೋಶದೊಳಗಿಂದ ೨೦ ಸಾವಿರ ರೂಪಾಯಿಗಳನ್ನು ಅರ್ಪಿಸಿ ಒಂದು ನಿಧಿಯನ್ನೇರ್ಪಡಿಸಿದ್ದಾರೆ. ಆ ನಿಧಿಯೊಳಗಿಂದ ಪ್ರಜೆಗಳಿಗೆ ಸಾಲ ಕೊಟ್ಟು ಸಾಲದಿಂದ ಪ್ರಜೆಗಳಿಗೆ ಸಾಲದಿಂದ ಬಿಡುಗಡೆ ಮಾಡಬೇಕಾಗಿ ಸಂಕಲ್ಪಿಸಿದ್ದಾರೆ. ಇದಕ್ಕೆ ಬಡ್ಡಿಯಿಲ್ಲ. ಸಂಸ್ಥಾನಿಕರು ೨ ಲಕ್ಷದ ತನಕ ಈ ನಿಧಿಗೆ ದ್ರವ್ಯಾರ್ಪಣ ಮಾಡುವ ಸದಿಚ್ಛೆಯನ್ನು ಉತ್ಸವದ ಸಮಯ ಪ್ರದರ್ಶಿಸಿದ್ದಾರೆ. ಈ ಬಗ್ಗೆ ಔಂಧ ಸಂಸ್ಥಾನಾಧಿಪತಿಗಳಿಗೆ ಸಮಸ್ತರೂ ಹರಸುತ್ತಾರೆ, ನಾವೂ ಹರಸುತ್ತೇವೆ. ಔಂಧ ಸಂಸ್ಥಾನ ದೊಡ್ಡದಲ್ಲ, ತೀರ ಚಿಕ್ಕ ಸಂಸ್ಥಾನ; ವಾರ್ಷಿಕ ಉತ್ಪನ್ನ ಒರೇ ೫ ಲಕ್ಷ ರೂಪಾಯಿಗಳೊಳಗಿನದು. ಸಮ್ರಾಟ್ ಪಂಚಮ ಜೋರ್ಜರು ಅಬ್ಜಾಧೀಶರೆಂದು ಲೋಕದಲ್ಲಿ ಖ್ಯಾತಿಯಿದೆ. ಸಮ್ರಾಟರ ಐಶ್ವರ್ಯದ ಗಣತಿಯನ್ನು ಮಾಡುವದೇ ಕಠಿಣವೆಂದು ಒಂದೆಡೆ ಪ್ರಕಟವಾಗಿದೆ. ಬ್ರಿಟಿಶ ಸಾಮ್ರಾಜ್ಯವು ಲೋಕತುಂಬ ಹಬ್ಬಿಕೊಂಡಿದೆ. ಇಂಥ ಭಾಗ್ಯವಂತ, ಐಶ್ವರ್ಯವಂತ ರಾಜ್ಯವಿಸ್ತಾರವುಳ್ಳ ಸಮ್ರಾಟರು ರೌಪ್ಯ ರಾಜ್ಯಾರೋಹಣದ ಸಮಯ ೧-೨ ಅಬ್ಜ ರೂಪಾಯಿಗಳನ್ನು ಬಡಬಿದ್ದ ಹಿಂದೀ ಪ್ರಜೆಗಳ ಉದ್ಧಾರಕ್ಕಾಗಿ ಅರ್ಪಿಸಿ, ಹಿಂದೀ ಪ್ರಜೆಗಳ ಋಣವಿಮೋಚನ ನಿಧಿಯನ್ನೇರ್ಪಡಿಸಿ, ಪ್ರಜಾವಾತ್ಸಲ್ಯವನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿ ಅನುಗ್ರಹಿಸಬೇಕಾಗಿ ನಾವು ವಿನಯಪೂರ್ವಕವಾಗಿ ಸೂಚಿಸುತ್ತೇವೆ. ಹಿಂದಭೂಮಿ ಸಮ್ರಾಟರ ರಾಜಮುಕುಟದೊಳಗಿನ ಶ್ರೇಷ್ಠ ರತ್ನವೆಂದು ಹೇಳಲ್ಪಡುತ್ತದೆ. ಪುರಾತನ ಕಾಲದಲ್ಲಿ ಸುವರ್ಣ ಭೂಮಿಯೆಂದು ಮೆರೆದ ಭೂಪ್ರದೇಶವಿದು, ಅಂಥ ಸಮೃದ್ಧ ದೇಶದ ಈಗಿನ ಸಂಕಟಗ್ರಸ್ತ ಪರಿಸ್ಥಿತಿಯನ್ನು ಹೋಗಲಾಡಿಸುವದಕ್ಕಾಗಿ ಸ್ವತಃ ಸಮ್ರಾಟರು ಮುಂದಾದರೆ, ಸಾಮ್ರಾಜ್ಯದೊಳಗಿನ ಕೋಟ್ಯಾಧೀಶರೂ, ಹಿಂದದೇಶದೊಳಗಿನ ಸಂಸ್ಥಾನಿಕರೂ, ದ್ರವ್ಯವಂತರೂ ಶಕ್ತಿಮೀರಿ ನೆರವಾಗುವರು. ಸಾಲದ ಮೊಬಲಗು ೮೦೦ ಕೋಟಿ ರೂಪಾಯಿ ಸಹಜವಾಗಿ ಒಟ್ಟಾಗುವದು. ಸಮ್ರಾಟರ ರೌಪ್ಯ ರಾಜ್ಯಾರೋಹಣೋತ್ಸವ ಹಿಂದುಸ್ಥಾನದ ಇತಿಹಾಸದಲ್ಲಿಯೂ, ಬ್ರಿಟಿಶ ಸಾಮ್ರಾಜ್ಯದ ಇತಿಹಾಸದಲ್ಲಿಯೂ ಚಿರಸ್ಮರಣೀಯವಾಗುವದು. ಹಿಂದೀ ಪ್ರಜೆಗಳ ಸಂಪತ್ತು ಯಾನೆ ಕ್ರಯ ಶಕ್ತಿಯನ್ನು ಬೆಳೆಸಬೇಕಾಗಿ ಲೆಂಕೆಶಾಯರದ ವರ್ತಕರಿಗೂ ಅನಿಸಲಾರಂಭಿಸಿದೆ. ಸಮ್ರಾಟರು ಹೊರಡಿಸಬಹುದಾದ ನಿಧಿಗೆ ಈ ವರ್ತಕರೂ ಸಹಾಯ ಮಾಡಬಹುದು. ಜವಳಿ ವ್ಯಾಪಾರದಿಂದ ಖರ್ವಾವಧಿ ರೂಪಾಯಿಗಳ ಲಾಭವನ್ನು ಅವರು ಹಿಂದುಸ್ಥಾನದಿಂದ ಪಡೆದ್ದಾರೆ; ಇನ್ನೂ ಪಡೆಯುತ್ತಲಿದ್ದಾರೆ. ಹಿಂದೀ ಗಿರಾಕಿಯೇ ಲೆಂಕೆಶಾಯರದ ವೈಭವದ ಮೂಲಾಧಾರ. ಅದಕ್ಕಾಗಿ ಅವರೂ ವಿಪನ್ನ ಹಿಂದೀಯರ ಋಣವಿಮೋಚನ ನಿಧಿಗೆ ಶಕ್ತಿಮೀರಿ ನೆರವಾಗುವದು ಉಚಿತ. ‘ ರಾಜಾ ಬೋಲೇ ಮುಲೂಖ ಹಾಲೇ ! ’ ಎಂಬಂತೆ ಸಮ್ರಾಟರು ಮುಂದಾದರೆ ಇಡೀ ಸಾಮ್ರಾಜ್ಯವು ಲಗಬಗೆಯಿಂದ, ಉತ್ಸಾಹದಿಂದ, ಮುಂದಾಗುವದು, ಸುಲಭವಾಗಿ ಈ ಮಹಾಕಾರ್ಯವು ನೆರವೇರುವಂತಿದೆ. ಸಂಕಟಗ್ರಸ್ತ ಹಿಂದೀ ಪ್ರಜೆಗಳನ್ನು ಪಾರಗಾಣಿಸಿದ ಶ್ರೇಯಸ್ಸು ಸಮ್ರಾಟರಿಗೆ ದೊರೆಯುವದು. ಬಾದಶಹರ ಸಲಹೆಗಾರರೂ, ಉತ್ಸವದ ಕಾರ್ಯಕರ್ತರೂ ಈ ಸೂಚನೆಯನ್ನು ಸಹಾನುಭೂತಿಯಿಂದ ವಿಚಾರಿಸಿ ಸಮ್ರಾಟರಿಗೆ ಪ್ರಜಾಕ್ಷೇಮಪ್ರದ ಸಲಹೆ ಕೊಟ್ಟು ಪುಣ್ಯಭಾಗಿಗಳಾಗುವರೇ ?

---

೨. ನಮ್ಮ ಮುಂಬಯಿ ಸರಕಾರವು ಕೈಕೆಳಗಿನ ಅಧಿಕಾರಿಗಳಿಗೆ ನಡಾವಳಿಯ ಕೆಲ ನಿಯಮಗಳನ್ನು ಗುಪ್ತವಾಗಿ ತಿಳಿಸಿರುವದಂತೆ- “ ‘ ವಂದೇ ಮಾತರಮ್ ’ ಗೀತವು ರಾಷ್ಟ್ರಗೀತವಲ್ಲ. ಬಂಕಿಮಚಂದ್ರ ಚಟರ್ಜಿ ಎಂಬ ಒಬ್ಬ ಹಿಂದು ಧರ್ಮಾಂಧನು ಇದನ್ನು ತಯಾರಿಸಿದ್ದನು. ಅದರಲ್ಲಿ ರಾಷ್ಟ್ರಪ್ರೇಮವಿಲ್ಲ, ಬ್ರಿಟಿಶರ ದ್ವೇಷವಿದೆ. ಬ್ರಿಟಿಶ ದ್ವೇಷಿಗಳು ಇದನ್ನು ಪ್ರಚುರಗೊಳಿಸಿದ್ದಾರೆ. ಬ್ರಿಟಿಶ ದ್ವೇಷಭಾವನೆಯೇ ಈ ಗೀತದ ಲೋಕಪ್ರಿಯತೆಗೆ ಕಾರಣ. ಇದನ್ನು ಬ್ರಿಟಿಶ ರಾಷ್ಟ್ರಗೀತದೊಡನೆ ಸಮಾರಂಭಗಳಲ್ಲಿ ಹಾಡುವ ಪದ್ಧತಿಯಿದೆ. ಬ್ರಿಟಿಶ ರಾಷ್ಟ್ರಗೀತದ ಬದಲಿಗೆ ಇದನ್ನು ಹಾಡುವ ಪದ್ಧತಿಯೂ ಇದೆ. ಈ ಗೀತವು ಜಾತಿವೈಷಮ್ಯಕಾರಕವಿದೆ. ಅದರಿಂದ ಸರಕಾರಿ ಅಧಿಕಾರಿಗಳು ಇದನ್ನು ಹಾಡುವಾಗ ಎದ್ದು ನಿಲ್ಲಕೂಡದು. ಕೂತುಕೊಳ್ಳಲಾಗದಿದ್ದಲ್ಲಿ ಹಾಡುವ ಕಾರ್ಯಕ್ರಮದ ಪೂರ್ವದಲ್ಲಿಯೇ ಸಭಾಸ್ಥಾನದಿಂದ ಎದ್ದುಹೋಗಬೇಕು. ರಾಷ್ಟ್ರಧ್ವಜವು ಬ್ರಿಟಿಶ ರಾಷ್ಟ್ರಧ್ವಜಕ್ಕೆ ಪ್ರತಿಸ್ಪರ್ಧಿಯಾಗಿ ಕಲ್ಪಿಸಲ್ಪಟ್ಟಿದೆ. ಅದಕ್ಕೆ ಮನ್ನಣೆಯನ್ನೀಯುವದು ಜಾತಿವೈಷಮ್ಯಕಾರಕ (!)ವಿದೆ. ಅದರಿಂದ ಪ್ರದರ್ಶಿತ ರಾಷ್ಟ್ರಧ್ವಜಕ್ಕೆ ಮಾನ್ಯತೆ ಸಿಗುವಂಥ ಸಮಾರಂಭಗಳಿಗೆ ಸರಕಾರಿ ಅಧಿಕಾರಿಗಳು ಚಿತ್ತೈಸಕೂಡದು.” ಈ ವಿವರ ಕೊಟ್ಟು ಪತ್ರಿಕೆಗಳು ಸರಕಾರಕ್ಕೆ ಜಾತಿವೈಷಮ್ಯದ ಮರುಳು ಹತ್ತಿರುವದಾಗಿ ಟೀಕಿಸುತ್ತಿವೆ. ಇಂಥ ಸೂಚನೆಗಳಿಂದ ರಾಷ್ಟ್ರಪ್ರವೃತ್ತಿಗೆ ತಡಹಾಕಲೆಳಸುವದ. ಬರೀ ದಡ್ಡತನ. ಭೋರ್ಗರೆದು ಉಕ್ಕೇರಿ ಒದಗುತ್ತಿರುವ ಕಡಲಿಗೆ ಹಿಂದೆ ನೂಕುವದಕ್ಕಾಗಿ ಮುದುಕಿಯೊಬ್ಬಳು ಕಸಬರಿಗೆಯಿಂದ ತೂರುತ್ತಿದ್ದಳಂತೆ, ಅಂತೆಯೇ ಮುಂಬಯಿ ಸರಕಾರದ ಅವಸ್ಥೆಯಾಗಿದೆ. ಪುರಂದರದಾಸರ ಉಕ್ತಿಯಂತೆ, ‘ ಈ ಹಗರಣವ ನೋಡಿ ನಮಗೆ ನಗಯು ಬರುತಿದೆ ! ’

— ಗುರುವಾರ ಅಪರಾಹ್ನ ಮಧ್ಯವರ್ತಿ ಕಾಯಿದೆ ಕೌನ್ಸಿಲಿನ ಸಭಾಮಂದಿರದಲ್ಲಿ ಸರ್ವಾಧಿಪತಿ ವಿಲಿಂಗಡನ್ ದೊರೆಗಳ ಭಾಷಣವಾಯಿತು. ಈ ಸಮಾರಂಭಕ್ಕೆ ಕೊಂಗ್ರೆಸ ಸಭಾಸದರು ಹಾಜರಿರಬಾರದೆಂದು ಆಲೋಚಿಸಿದ್ದರು; ಆದರೆ ಹಾಜರಾಗಬೇಕಾಗಿ ಮಹಾತ್ಮರು ವಿಧಿಸಿದ್ದರಿಂದ ಕೊಂಗ್ರೆಸ ಸಭಾಸದರು ಹಾಜರಿದ್ದರು. ಸರ್ವಾಧಿಪತಿ ವಿಲಿಂಗಡನ್ ದೊರೆಗಳ ಭಾಷಣದಲ್ಲಿ ವಿಶೇಷವೇನಿದ್ದಿಲ್ಲ. ಪಾರ್ಲಿಮೆಂಟರಿ ಕಮಿಟಿಯ ವರದಿಯನ್ನು ದೊರೆಗಳು ಪುರಸ್ಕರಿಸಿದರು, ಹಳ್ಳಿಗರ ಕಲ್ಯಾಣಕ್ಕಾಗಿ ಸರಕಾರವು ದುಡಿಯುವದೆಂದರು. ರೌಪ್ಯ ಮಹೋತ್ಸವ ಸಮಾರಂಭದಲ್ಲಿ ಯಾವತ್ತೂ ಸಭಾಸದರು ರಾಜಕೀಯ ಮತಭೇದಗಳನ್ನು ಮರೆತು ಐಕ್ಯಮತ್ಯದಿಂದ ದುಡಿಯಬೇಕೆಂದು ಉಪದೇಶ ಮಾಡಿದರು.

— ಹೊಸ ರಾಜ್ಯಘಟನೆಯ ಕಾನೂನು ಮಂಗಳವಾರ ಇಂಗ್ಲಂಡದಲ್ಲಿ ಪ್ರಕಟವಾಯಿತು. ಇಲ್ಲಿ ಬರುವ ಬುಧವಾರ ಪ್ರಕಟವಾಗುವದು. ಈ ಕಾಯಿದೆಯಲ್ಲಿ ೪೫೧ ಕಲಮುಗಳಿವೆ, ೧೫ ಪರಿಶಿಷ್ಟಗಳಿವೆ. ೩೨೦ ಪುಟಗಳುಳ್ಳ ಒಂದು ಗ್ರಂಥವಾಗಿದೆ ! ಪಾರ್ಲಿಮೆಂಟರಿ ಕಮಿಟಿಯ ವರದಿಗನುಗುಣವಾಗಿ ಈ ಕಾಯಿದೆ ತಯಾರಿಸಲಾಗಿದೆ. ಇದರೊಳಗೆ ನೂತನತನವಾವದ್ದೇ ನಿಲ್ಲ. ಇಷ್ಟು ವಿಸ್ತಾರವುಳ್ಳ ಕಾಯಿದೆ ಈ ತನಕ ಪಾರ್ಲಿಮೆಂಟಿನಲ್ಲಿ ಸೂಚಿಸಲ್ಪಡಲಿಲ್ಲವಂತೆ! ೨೦೦ ಕಲಮುಗಳ ಕಾಯಿದೆಯೆಂದರೆ ಅತಿ ದೊಡ್ಡದಾಯಿತಂತೆ! ಹಿಂದುಸ್ಥಾನ ದೊಡ್ಡ ದೇಶ, ಮೇಲಾಗಿ ಅಧಿಕಾರಶೂನ್ಯ ಘಟನೆ, ಅಂದ ಮೇಲೆ ಕಾಯಿದೆ ಕುಂಬಳಕಾಯಿಗೂ ದೊಡ್ಡದಾದಲ್ಲಿ ವಿನಾಶ್ಚರ್ಯ !! ಇದರಿಂದಾದರೂ ಸಮಾಧಾನ ಪಡಬಹುದಲ್ಲವೇ !

ಸ್ಥಾನಿಕ ವೃತ್ತಾಂತ.

ಕುಮಟಾ— ಹವೆಯು ಯಾವ ಬಗೆಯದ್ದೇ ಎಂದು ಹೇಳುವದು ಅಸಾಧ್ಯ. ಕೆಲವು ಹೊತ್ತು ಶೆಕೆ, ಕೆಲ ಕಾಲ ಚಳಿ, ಬೆಳಗು-ಮುಂಜಾನೆ ಮೋಡಗಳು ಕವಿಯುತ್ತಿವೆ. ಊರಲ್ಲಿ ಜ್ವರ, ಸಿಡುಬು ಮುಂತಾದ ಬೇನೆಗಳಿವೆ.

ಭತ್ತ, ಅಡಿಕೆ, ತೆಂಗಿನಕಾಯಿ, ತೆಂಗಿನೆಣ್ಣೆ, ಮೆಣಸು ಇವುಗಳ ಧಾರಣೆ ಒಮ್ಮೆಲೇ ಏರಿತು. ಇನ್ನೂ ಏರುವದೆಂದು ವರ್ತಕರು ಹೇಳುತ್ತಾರೆ. ಘಟ್ಟದ ಮೇಲಿನ ಕಾಳುಕಡಿಯ ಧಾರಣೆಯು ಘಟ್ಟದ ಕೆಳಗಿನ ಧಾರಣೆಗಿಂತ ಏರಿದ್ದರಿಂದ ಅಲ್ಲಿಂದ ಸರಕು ಇತ್ತ ಬರುವದಿಲ್ಲ.

ನೆರೆಯ ಧಾರೇಶ್ವರ ಗ್ರಾಮದಲ್ಲಿ ಶ್ರೀ ಧಾರಾನಾಥ ದೇವರ ರಥೋತ್ಸವವು ರೀತಿಯಂತೆ ನಡೆಯಲಿಲ್ಲ. ರಥವು ಜೀರ್ಣವಾದ್ದರಿಂದ ರಥ ಎಳೆಯಲಿಲ್ಲ. ಶ್ರೀ ದೇವಸ್ಥಾನದ ಪ್ರಾಕಾರದಲ್ಲಿ ಕಟ್ಟ ನೀರು ನಿಲ್ಲುತ್ತದೆ. ದೇವಸ್ಥಾನದ ಕೆಲ ಭಾಗ ಜೀರ್ಣವಾಗಿ ಕೆಳಗೆ ಬೀಳುವ ಭೀತಿಯಿದೆ. ಶ್ರೀ ದೇವಸ್ಥಾನಕ್ಕೆ ಸರಕಾರದಿಂದ ಸುಮಾರಕ್ಕೆ ನಿಶ್ಚಿತ ತಸ್ತೀಕು ಸಿಗುತ್ತದೆ. ಮೊಕ್ತೇಸರರು ಶ್ರೀ ದೇವಸ್ಥಾನವನ್ನು ಕಾಪಾಡುವಷ್ಟು ಜಾಗ್ರತೆ ಕೊಳ್ಳುವದಿಲ್ಲ. ದೇವಲ್ ಕಮಿಟಿಯವರು ಈಕಡೆ ಲಕ್ಷಕೊಟ್ಟು ವ್ಯವಸ್ಥೆ ಮಾಡಿಸಬೇಕು. ಇತ್ಯಾದಿ ಒಬ್ಬರು ತಿಳಿಸುತ್ತಾರೆ.

ರಾ| ಜಜ್ಜರಾಜ ರಾ| ಗೋವಿಂದರಾವ ಶಾಳವಿಯವರು ಇಲ್ಲಿಯ ಕೋರ್ಟ ಹವಾಸಿಗಾಗಿ ಫ್ರೆಬ್ರವರಿ ತಾ. ೨ನೇಗೆ ಬರುವವರಿದ್ದಾರೆ.

ಹೊನ್ನಾವರ— ವೈ| ವಾ| ಸುಬ್ರಾಯ ಬಾಬುರಾಯ ಕಾಮತ ಇವರು ತನ್ನ ಮರಣಶಾಸನದಲ್ಲಿ ವಿಧಿಸಿದಂತೆ, ಅವರ ಅನುಜ ರಾ| ವಾಸುದೇವ ಕಾಮತರು ಇಲ್ಲಿಯ ಶ್ರೀ ಗಣಪತಿ ದೇವರ ಬಗ್ಗೆ ಒಂದು ಸುವರ್ಣ ಕವಚವನ್ನು ತಯಾರಿಸಿದ್ದಾರೆ. ಇಂದು ವೈಕುಂಠವಾಸಿಗಳ ಶ್ರಾದ್ಧದಿವಸವಾದ್ದರಿಂದ ಈ ಹೊತ್ತು ಸದರ ಕವಚವು ದೇವರಿಗೆ ಸಮಾರಂಭದಿಂದ ಒಪ್ಪಿಸಲ್ಪಡುವದು.

ಭಟಕಳ— ರಸ್ತೆಯ ಮೇಲಿನ ದನಗಳನ್ನು ದೊಡ್ಡಿಗೆ ಹಾಕುವ ಕ್ರಮ ಇನ್ನೂ ನಡೆಂದಿದೆ. ಈ ಕ್ರಮದಲ್ಲಿಯೂ ವಂಚ್ತ್ರ-ಪ್ರಪಂಚ ಕಂಡುಬರುತ್ತಿದೆ. ಒಂದೇ ದಿವಸ ಇಪ್ಪತ್ತರ ದನಗಳು ದೊಡ್ಡಿಗೆ ಒಯ್ಯಲ್ಪಟ್ಟವು. ಪೋಲೀಸರು ಒಬ್ಬರ ಮೇಲೆ ಮಾತ್ರ ಖಟ್ಲೆ ಮಾಡಿ, ಇನ್ನೊಬ್ಬರಿಗೆ ಬಿಟ್ಟುಕೊಟ್ಟರೆಂತಾಗಿ ತಿಳಿಯುತ್ತದೆ.

೨ ವಾರಗಳ ಹಿಂದೆ ನಾಗು ಕಿಂಬವನ ಗಾಡಿಯಲ್ಲಿ ಕದ್ದ ಕಳವಿನ ಕಥೆಯು ಪ್ರಕಟವಾಗಿತ್ತಷ್ಟೇ! ಮುಂದೆ ಪೋಲೀಸರು ನಾಗುನ ವಿಚಾರವೆಂದು ವ್ಯವಸ್ಥೆ ಏನು ಮಾಡಿದರೆಂದು ತಿಳಿಯಲಿಲ್ಲ. ಸರೆಹಿಡಿಯಲ್ಪಟ್ಟ ಕಳ್ಳನಿಗೆ ಬಿಟ್ಟುಕೊಟ್ಟರೆಂದರೆ, ಫೌಜದಾರರು ತನ್ನ ಫಿರ್ಯಾದಿಯ ಬಂದವಸ್ತು ಮಾಡಿದರೆಂದು ನಾಗುನು ಕುಮಟೆಯ ತನಕ ಹೋಗಿ ಮೆ| ಪ್ರಾಂತ ಸಾಹೇಬರ ಕಡೆ ದೂರು ಕೊಂಡಿರುವದಾಗಿ ಊರಲ್ಲೆಲ್ಲ ಸುದ್ದಿ!

ಅಂಕೋಲಾ— ಕಳೆದ ಸಂಚಿಕೆಯಲ್ಲಿ ಪ್ರಕಟವಾದ ರಾ| ಯಶವಂತ ಬಾಳು ಶೆಣ್ವಿ, ಅರ್ಜಿ ಇವರ ಪತ್ರವನ್ನುಲಕ್ಷಿಸಿ ರಾ| ದತ್ತಾತ್ರಯ ರಾಮಕೃಷ್ಣ ಪ್ರಭು, ಅವರ್ಸೀ ಇವರು ಬರೆದು ತಿಳಿಸುವದೇನೆಂದರೆ:—

“ಶ್ರೀ ಶಾಂತ್ಯಾಯನೀ ದೇವಸ್ಥಾನದ ಕಾರಭಾರದ ಬಗ್ಗೆ ರಾ| ಶೆಣ್ವಿಯವರು ಬರೆದ ಮಜಕೂರು ನೋಡಿ ಆಶ್ಚರ್ಯವಾಯಿತು. ಹಗಲು ನೆತ್ತಿಯ ಮೇಲೆ ಸೂರ್ಯನು ಪ್ರಕಾಶಿಸುತ್ತಿರುವಾಗ, ರಾ| ಶೆಣ್ವಿಯವರು ಅಮಾವಾಸ್ಯೆಯ ರಾತ್ರಿಯು, ಕಗ್ಗತ್ತಲೆ ಹಬ್ಬಿದೆಯೆಂದು ಹೇಳುತ್ತಾರೆ! ಈಗಿನ ಹೊಸ ಮೊಕ್ತೇಸರರು ದೇವಸ್ಥಾನದಲ್ಲಿ ಹಬ್ಬಿದ ಅವ್ಯವಸ್ಥೆಯ ಗೊಂದಲವನ್ನು ದೂರಪಡಿಸಿ ಹಲವು ತರದ ಸುಧಾರಣೆಗಳನ್ನು ಮಾಡಿ ತಂದದ್ದು ನೋಡಿ ದೇವರ ಭಕ್ತರೆಲ್ಲ ಅವರಿಗೆ ಹರಸುತ್ತಾರೆ. ಇಂಥ ನಿಃಸ್ವಾರ್ಥ ಕಾರ್ಯಕರ್ತರ ವಿರುದ್ಧ ರಾ| ಶೆಣ್ವಿಯವರು ಹೊಲಸು ಟೀಕೆ ಮಾಡುವದು ತೀರ ಅನುಚಿತವಾದದ್ದು.

“ಶ್ರೀ ದೇವರ ಗಜನಿ-ಭೂಮಿಗಳ ಉತ್ಪನ್ನದಲ್ಲಿ ಈಗ ಬಂದು ಕಾಳು ಸಹ ಕಡಿಮೆಯಾದದ್ದು ಇಲ್ಲ. ಯಾವ ಭೂಮಿಯ ಉತ್ಪನ್ನ ಕಡಿಮೆಯಾಯಿತು, ಎಲ್ಲಿ ಕಟ್ಟು ಮುರಿದು ನೀರು ಒಳಸೇರಿತು? ಎಂಬುದನ್ನು ರಾ| ಶೆಣ್ವಿಯವರು ತಿಳಿಸುವರೇನು?

“ದೇವರ ಪಲ್ಲಕ್ಕಿಯನ್ನು ವರ್ಷದಲ್ಲಿ ೨-೩ಸಾರೆ ತೆಗೆಯುತ್ತಾರೆಂಬುದು ಸುಳ್ಳು. ರಾ| ಶೆಣ್ವಿಯವರು ತಾರೀಖುವಾರ ಪುರಾವೆ ಕೊಡುವರೇನು? ಹಳೇ ಕಾಲದ ವ್ಯವಸ್ಥೆ ರಾ| ಶೆಣ್ವಿಯವರಿಗೇ ಗೊತ್ತು! ಈಗಿನ ವಹಿವಾಟದಾರರು ವರ್ಷದಲ್ಲಿ ಒಂದು ದಿನ ಊರ ಪಂಚರ ಮತ್ತು ಮಹಾಜನರ ಮುಂದೆ ಪೆಟ್ಟಿ ಒಡೆಯುತ್ತಾರೆ. ಪೆಟ್ಟಿ ಒಡೆಯುವ ಮುಂಚೆ ಎಲ್ಲರಿಗೂ ತಿಳಿಸುತ್ತಾರೆ. ದೇವರ ಹಣವನ್ನು ದೇವರ ಕೆಲಸಕ್ಕೇನೇ ಖರ್ಚುಮಾಡುತ್ತಾರೆ.

“ಬೇರೂರಿನ ಭಕ್ತರು ಶ್ರೀ ದೇವರ ಭೆಟ್ಟಿಗೆ ಬಂದಾಗ ಅವರಿಗೆ ಉಳಕೊಳ್ಳುವ ವಗೈರೆ ಸೋಯಿಗಳಿದ್ದಿಲ್ಲ. ಆದ್ದರಿಂದ ಹೊಸ ಮೊಕ್ತೇಸರರು ಮೊದಲು ದೇವಸ್ಥಾನದ ಚಂದ್ರಶಾಲೆಗಳ ಕಟ್ಟೋಣದ ಕಡೆಗೇನೇ ಮೊದಲು ತಮ್ಮ ಲಕ್ಷ ಕೊಡಬೇಕಾಯಿತು. ಅಲ್ಪಾವಧಿಯಲ್ಲಿ ಇಷ್ಟು ದೊಡ್ಡ ಕಾರ್ಯಭಾಗವನ್ನು ಕೈಕೊಂಡಿದ್ದ ಬಗ್ಗೆ ಅವರ ಸ್ತುತಿಗೆ ಪಾತ್ರರಿದ್ದಾರೆ.

“ಚಂದ್ರಶಾಲೆಗಳ ಕೆಲಸ ಮುಗಿದ ಮೇಲೆ ಇಟ್ಟು ಉಳಿದ ೫೦-೬೦ ಖಂಡಿ ಇಮಾರತು-ಕಟ್ಟಿಗೆ ಮತ್ತು ಕಲ್ಲುಗಳ ಈಗ ತುರ್ತ ಆವಶ್ಯವಿಲ್ಲದ್ದರಿಂದ ಬಾಜಾರ ಧಾರಣೆಯಂತೆ ಅವನ್ನು ಮಾರಿದರೆ ಮೊಕ್ತೇಸರರ ತಪ್ಪೇನು? ಹಳೇ ಮೊಕ್ತೇಸರರು ದುರಸ್ತಿ ಮಾಡಿಟ್ಟ ರಾತ್ರೀ ನಾಟಕಗಳ ಕಟ್ಟು ಹೋಗಿ ಬಿದ್ದ ಹಾನಿಯು ಸಾಕಿಲ್ಲವೆಂತ ಈ ಕಲ್ಲು-ಕಟ್ಟಿಗೆಗಳನ್ನು ದುರಸ್ತಿ ಮಾಡಿಡಬೇಕಿತ್ತೆಂತ ರಾ| ಶೆಣ್ವಿಯವರ ಅಭಿಪ್ರಾಯವೇ?

“ಹಿಂದಿನ ಮೊಕ್ತೇಸರರೊಬ್ಬ ೭ ಬಾರಿ ಮೊಕ್ತೇಸರರಿಗೆ ಮುಖೋದ್ಧಾರ ಕೊಟ್ಟು, ಕಾನಗಿಲ ಗ್ರಾಮದೊಳಗಿನ ಶ್ರೀ ದೇವರ ಧನದಾಡಿ ಭೂಮಿಯನ್ನು ಅಗ್ಗದಲ್ಲಿ ಮೂಲಗೇಣಿಗೆ ಮಾಡಿಕೊಂಡಿದ್ದನು. ಹೊಸ ಮೊಕ್ತೇಸರರು ಈ ಮೂಲಗೇಣಿ ರದ್ದುಗೊಳಿಸುವ ಬಗ್ಗೆ ದಾವೆ ಮಾಡಿದ್ದರು. ದಾವೆಯಲ್ಲಿ ಮೂಲಗೇಣಿದಾರರು ಅರ್ಜಿ ಹಾಕಿ ೪೦ ವರ್ಷ ಗೇಣಿಯ ಮಾನವನ್ನು ಸಲಿಸಿಕೊಳ್ಳಲಿಕ್ಕೆ ಕಬೂಲ ಮಾಡಿ ರಾಜೀ ಮಾಡಿಕೊಂಡಿದ್ದಾರೆ. ಹಳೇ ಮೊಕ್ತೇಸರರ ಕಾರಭಾರದ ನಮೂನೆ ನೋಡಿರಿ. ಇಂಥ ಬಹಳ ಪ್ರಕರಣಗಳಿವೆ. ಅವನ್ನೆಲ್ಲ ಒಮ್ಮೆಗೇ ಸುಧಾರಿಸುವದು ಅಸಾಧ್ಯ. ಹೊಸ ಮೊಕ್ತೇಸರರು ಒಂದೊಂದೇ ಕೈಕೊಂಡು ಸುಧಾರಿಸುತ್ತಿದ್ದಾರೆ. ಶ್ರೀ ದೇವರ ಮೇಲೆ ಭಕ್ತಿ-ವಿಶ್ವಾಸಗಳನ್ನಿಟ್ಟು ಸೇವೆ ಮಾಡುವ ಸೇವಕರ ಮೇಲೆ ರಾ| ಶೆಣ್ವಿಯಂಥವರು ನಿರಾಧಾರ ಆರೋಪಗಳನ್ನು ಹಾಕುವದು ಸರಿಯಲ್ಲ!” ಇತ್ಯಾದಿ.

ಸಂಕೇರಿ— ಸಂಕೇರಿ-ಕಡಿವಾಡೋಣಿ ಸಹಕಾರಿ ಸಂಘದಲ್ಲಿ ಬಹಳ ಅವ್ಯವಸ್ಥೆ ಕಾಣುತ್ತಿರುವುದರಿಂದ ಚೌಕಶಿ ಬಗ್ಗೆ ಕಾರವಾರದ ವಕೀಲ ರಾ| ವಾಳ್ಕೆಕರರಿಗೆ ನೇಮಿಸಿತ್ತು. ಅವರ ವರದಿಯನ್ನು ಪರಾಂಬರಿಸಿ ಮೆ| ಅಸಿಸ್ಟಂಟ ರಜಿಸ್ಟ್ರಾರ ಸಾಹೇಬರು ಈ ಕೆಳಗಿನಂತೆ ಹುಕುಮುಗಳನ್ನು ದಯಪಾಲಿಸಿದ್ದಾರೆ:— (೧) ಈಗಿನ ಮನೇಜಿಂಗ ಕಮಿಟಿಯನ್ನು ತೆಗೆದು ಹೊಸ ಕಮಿಟಿ ಆರಿಸಬೇಕು (೨) ಈಗಿದ್ದ ದೊಡ್ಡ ಸಂಘವನ್ನು ಒಡೆದು ಸಾಂಕೇರಿಗೆ ೧, ಕಡಿವಾಡೋಣಿಕ್ಕೆ ೧ ಹೀಗೆ ೨ ಸಂಘ ಮಾಡಬೇಕು. ಸಂಕೇರಿ ಸಂಘದ ಅಧ್ಯಕ್ಷರು ಮೆ| ರಜಿಸ್ಟ್ರಾರರಿಂದ ನೇಮಿಸಲ್ಪಟ್ಟವರು ಇರಬೇಕು. (೩) ಮೆ| ವಾಂಡುರಂಗ ಭಟ್ಟ, ರಾ| ಜನಾರ್ದನ ಶೆಣ್ವಿ, ಖುಪಕಾರ, ರಾ| ಕೃಷ್ಣ ನಾರಾಯಣ ನಾಯ್ಕ ಮತ್ತು ಮೆ| ಕೇಶವ ಉಸ್ಮಾನ ಇವರನ್ನು ೩ ವರ್ಷಗಳ ತನಕ ಮೆ| ಕಮಿಟಿಯಲ್ಲಿ ತೆಕ್ಕೊಳ್ಳಬಾರದು. (೪) ಚೌಕಶಿಯ ಖರ್ಚ ಹಳೆಯ ಚೆರಮನ್ ಮೆ| ಭಟ್ಟರೂ, ಹಳೆಯ ಕಾರ್ಯದರ್ಶಿ ರಾ| ಗೋಪಾಲ ಶೆಣ್ವಿಯವರೂ ತೆರಬೇಕು. (೫) ಆರು ತಿಂಗಳಲ್ಲಿ ಈ ವ್ಯವಸ್ಥೆಯಾಗದಿದ್ದರೆ ಸಂಘವು ರದ್ದು ಮಾಡಲಾಗುವದು.

ಸಂಘದ ಜಾಬು ಸಾಧಾರಣ ಸಭೆಯಲ್ಲಿ ಮೆ| ಅ| ರಜಿಸ್ಟ್ರಾರರ ಪತ್ರದ ವಿಚಾರವಾಗಿ, ಮಹತ್ವದ ಎಲ್ಲ ಹುಕುಮುಗಳು ತಿರಸ್ಕರಿಸಲಾಗಿವೆ! ರಾ| ಜನಾರ್ದನ ಶೆಣ್ವಿ ಸಾವಕಾರರು ಆಗ್ರಹ ಮಾಡಿದ್ದರಿಂದ ಸಭೆಯಲ್ಲಿ ಈ ಬಗೆಯ ನಿರ್ಣಯವಾಯಿತು! ರಾ| ಹಬ್ಬು ಮತ್ತು ರಾ| ಕೃಷ್ಣ ನಾಯ್ಕರು ಹುಕುಮು ಮನ್ನಿಸಬೇಕಾಗಿ ಎಷ್ಟು ಹೇಳಿಕೊಂಡರೂ ಉಪಯೋಗವಾಗಲಿಲ್ಲ! ಮುಂದೇನಾಗುತ್ತದೆಂದು ನೋಡಬೇಕು.

ಮನೇಜಿಂಗ ಕಮಿಟಿಯ ಅವ್ಯವಸ್ಥೆಯ ಬಗ್ಗೆ ಕಮಿಟಿಯಲ್ಲಿದ್ದ ರಾ| ಕೃಷ್ಣ ನಾಯ್ಕ ಮತ್ತು ರಾ| ಸಾವಕಾರ ಇವರಿಗೆ ಏಕೆ ಶಾಸನವೆಂಬುದೊಂದು ಗೂಢವೇ!

ಗೌ| ಸಾ| ಬ್ರಾಹ್ಮಣ ಸ್ಕೊಲರಶಿಪ್ ಲೀಗ, ಮುಂಬಯಿ.

ಮೇಲಿನ ಸಂಸ್ಥೆಯು ೧೮ನೇ ವಾರ್ಷಿಕ ಸಾಧಾರಣ ಸಭೆಯು ತಾ ೧೩-೧-೧೯೩೫ ನೇ ದಿವಸ ಮುಂಬಯಿಯ ಮರಾಠಾ ಹೈಸ್ಕೂಲಿನ ಕಟ್ಟಡದಲ್ಲಿ ಶ್ರೀ| ಮತೋರ್ಡಿಕರ ಗಾಯತೊಂಡೆ ಇವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಕರ್ನಾಟಕದ ಮುಂದಾಳುಗಳಾದ ಶ್ರೀ ರಂಗನಾಥ ದಿವಾಕರ್, ಶ್ರೀ| ಹುಕ್ಕೇರಿಕರರೂ ಪ್ರೇಕ್ಷಕರಾಗಿ ಕುಳಿತುಕೊಂಡಿದ್ದರು. ಸಂಸ್ಥೆಯ ಉಪಾಧ್ಯಕ್ಷ ಶ್ರೀ| ರಾಮಚಂದ್ರ ಕೃಷ್ಣ ಪ್ರಭುರವರು ವಾರ್ಷಿಕ ವರದಿಯನ್ನು ಓದಿದರು, ಮಂಜೂರಿಯ ಬಗ್ಗೆ ಸಭೆಯು ಮುಂದಿಟ್ಟರು. ಸಂಸ್ಥೆಯು ಪ್ರಗತಿ ಹೊಂದುತ್ತಿದೆ; ಆದರೆ ಸಂಸ್ಥೆಯಿಂದ ಸಹಾಯಪಡೆದು ಸುಸ್ಥಿತಿಗೆ ಮುಟ್ಟಿದ ಅನೇಕ ಹಳೇ ವಿದ್ಯಾರ್ಥಿಗಳು ಸಂಸ್ಥೆಯ ಹಣ ತಿರುಗಿ ಕೊಡದಿದ್ದದ್ದು ಖೇದ ನೀಯುವದೆ, ಎಂದು ಅವರು ನುಡಿದರು. ಸಂಸ್ಥೆಯು ಉತ್ತರ ಕಾನಡಾ ಜಿಲ್ಲೆಯ ವಿದ್ಯಾರ್ಥಿಗಳಿಗೆ ಪಕ್ಷಪಾತ ತೋರಿಸುತ್ತಿದೆಯೆಂಬ ಕೆಲವರ ಆರೋಪವು ನಿರಾಧಾರವಿದ್ದು, ಅವರು ಅಂಕಿಗಳನ್ನು ಕೊಟ್ಟು ಸಿದ್ಧಮಾಡಿ ಕೊಟ್ಟರು. ವಾರ್ಷಿಕ ವರದಿಯು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು. ಈ ವರ್ಷದ ಬಗ್ಗೆ ಡಾ| ವಿ. ಪಿ. ಬಾಳಿಗಾ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಕಾರ್ಯಕಾರಿ ಮಂಡಳ, ಸ್ಥಾನಿಕ ಪ್ರತಿನಿಧಿಗಳು, ಲೆಕ್ಕಪರಿಶೋಧಕರು ಮೊದಲಾದ ಅಧಿಕಾರಿ ಚುನಾವಣೆಯಾದ ಮೇಲೆ, ಅಧ್ಯಕ್ಷ ರಾ| ಗಾಯತೊಂಡೆಯವರು ತಮ್ಮ ಸಮಾರೋಪದ ಭಾಷಣದಲ್ಲಿ, “ ಮೊದಲಿನ ಅಧ್ಯಕ್ಷರಾದ ರಾ| ಕಸ್ತೂರಿ ನಾಗ ( ) ಆಗ್ರಹ ಮಾಡಿದ್ದರಿಂದ ನಾನು ಅಧ್ಯಕ್ಷನಾಗಿದ್ದು, ಸಹಕಾರಿ ಕಾರ್ಯಕರ್ತರು ನೆರವಾದ್ದರಿಂದ ನಾನು ತಮ್ಮ ಸೇವೆ ಮಾಡಲು ಶಕ್ತನಾದೆ; ಕಾರ್ಯದ ಶ್ರೇಯವೆಲ್ಲ ಅವರಿಗೇ ಸಲ್ಲತಕ್ಕದ್ದು; ಸಂಸ್ಥೆಯ ಸಾಂಪತ್ತಿಕ ಸ್ಥಿತಿ ಸುಧಾರಿಸುವದು ಅಗತ್ಯವಿದೆ,” ಇತ್ಯಾದಿ ಹೇಳಿದರು. ಬಳಿಕ ಅಧ್ಯಕ್ಷ ಮೊದಲಾದವರ ಆಭಾರವನ್ನು ಮನ್ನಿಸಿ ಸಭೆ ಕೊನೆಗೊಂಡಿತು.

ಸಂಸ್ಥೆಯ ಹೊಸ ಕಾರ್ಯಕಾರಿ ಮಂಡಳ.

ಚೆಅರಮನ್:— ರಾ| ರಾಮಚಂದ್ರ ಕೃಷ್ಣ ಪ್ರಭು. ಕೋಶಾಧ್ಯಕ್ಷರು:— ರಾ| ಸುಬ್ರಾಯ ರಂಗ ಪೈ ಮತ್ತು ರಾ| ದಿವಾಕರ ಗ್ರಾ|ತೊಂಡೆ. ಕಾರ್ಯದರ್ಶಿಗಳು:— ರಾ| ಗೋವಿಂದ ಗುಡಾಳ ಮತ್ತು ರಾ| ರಾಮಚಂದ್ರ ಎನ್. ಪ್ರಭು. ಸಭಾಸದರು:— ರಾ| ಗುಂಡಾ ಕಾಮತ, ಕೇಶವ ವಾಮನ ನಾಯ್ಕ, ಶ್ರೀಧರ ಗೋವಿಂದ ಕಾಸಭಾಗ, ಕೃಷ್ಣಾಜಿ ಜನಾರ್ದನ ಪೋವಳ್ಕರ, ಉಕ್ತರಾಂ ಲಕ್ಷ್ಮಣ ಖ್ಯಾನಭಾಗ

ಮೀನುಕಣ್ಣಿಗೆ (Corn) ಮದ್ದು.

ಪತ್ರಾಣೆ ಬಿಲ್ಲಿ ಸ್ಟ್ಯಾಂಪು ಕಳಿಸಿದರೆ ಕಳಿಸುತ್ತೇವೆ. ವ್ಹಿ. ಪಿ.ಯಿಂದ ಖರ್ಚು ಹೆಚ್ಚು.

ಕೆಳಬಾಗ ಗಂಗಾಧರ ಎಂಡ್. ಸನ್ಸ್, ಕುಮಟಾ. (ಕಾರವಾರ)

ಕೆನರಾ ಬೇಂಕ, ಲಿ., ಮಂಗಳೂರು.

ವೈ| ವಾ| ಅಮ್ಮೆಂಬಳ ಸುಬ್ರಾಯ ಪೈ ಇವರು ಸ್ವಜನೋದ್ಧಾರಕ್ಕಾಗಿ ಸ್ಥಾಪನೆ ಮಾಡಿದ ಹಲವು ಸಂಸ್ಥೆಗಳಲ್ಲಿ 'ಕೆನರಾ ಬೇಂಕು' ಒಂದಾಗಿರುತ್ತದೆ. ಈ ೩೯ ವರ್ಷಗಳಲ್ಲಿ ಬೇಂಕು ದಿನೇ ದಿನೇ ಪ್ರಗತಿ ಹೊಂದುತ್ತಲಿದ್ದು, ಬೇರೆ ಬೇರೆ ಕಡೆಗೆ ಅದರ ೧೬ ಶಾಖೆಗಳಿವೆ. ಕರ್ನಾಟಕದಲ್ಲಿ ಇನ್ನು ಮೂರು ಶಾಖೆಗಳನ್ನು ತೆರೆಯಬೇಕೆಂದು ಚಾಲಕರು ಸಂಕಲ್ಪ ಮಾಡಿದ್ದಾರೆ, ಕುಮಟೆಯಲ್ಲಿ ಒಂದು ಶಾಖೆ ತೆರೆಯುವ ವಿಚಾರ ನಡೆದಿದೆ.

ಬೇಂಕಿನ ಆಡಳಿತೆಯ ಖರ್ಚು ಕಡಿಮೆಯಿರುವದರಿಂದ ಠೇವುದಾರರಿಗೆ ಹೆಚ್ಚಿನ ಬಡ್ಡಿ ಕೊಡಲಿಕ್ಕೆ ಚಾಲಕರಿಗೆ ಅನುಕೂಲವಾಗಿರುತ್ತದೆ. ಚಾಲಕರು ಆಗಾಗ್ಗೆ ಸೂಚನೆಗಳನ್ನು ಕೊಡುತ್ತಿರುವದರಿಂದ ಠೇವುದಾರರಿಗೆ ತಮ್ಮ ಠೇವು ತಿರುಗಿ ಕೊಳ್ಳಲಿಕ್ಕೂ, ಅವಧಿ ಬೆಳೆಸಲಿಕ್ಕೂ, ಬಡ್ಡಿ ವಸೂಲ ಮಾಡಲಿಕ್ಕೂ ಕೂಡ ಒಳ್ಳೇ ಸೋಯಿಯುಂಟೆಂದು ತಿಳಿಯುತ್ತದೆ.

ಬೇಂಕಿನ ಮುಖ್ಯ ಕಚೇರಿಯಲ್ಲೂ, ಶಾಖೆಗಳಲ್ಲೂ ಕೆಲಸ ಮಾಡುವವರು ಸಚ್ಛೀಲರೂ, ಮಾನವಂತರೂ ಇರುವದರಿಂದ ಬೇಂಕು ಲೋಕಾದರಕ್ಕೆ ಪಾತ್ರವಾಗಿದೆ. ಡೈರೆಕ್ಟರ ಮಂಡಳದಲ್ಲಿ ಒಳ್ಳೇ ವ್ಯವಹಾರಪಟುಗಳಾದ ಸದ್ಗೃಹಸ್ಥರು ಇರುವ ಕಾರಣ ಬೇಂಕಿನ ಪ್ರಗತಿಯು ಅವ್ಯಾಹತವಾಗಿ ನಡೆಯುವದೆಂಬದರಲ್ಲಿ ಸಂದೇಹವಿಲ್ಲ.

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪೊಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪೊಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!.

[ವಿ. ಸೂ. 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.]

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು !

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು:- **ಮೆಸರ್ಸ ಜೀವನ ಏಜನ್ಸಿ, ಕಾರವಾರ.**

ದ್ವಿಗುಣವಾದ ಲಾಭವನ್ನು ಹೊಂದಿರಿ!

ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ !!

ಮಕ್ಕಳ ಲಿವರ್ ಕಂಪ್ಲೇಂಟು (ಕೂರ್ಮವ್ಯಾಧಿ) ಮತ್ತು ಜ್ವರಗಡ್ಡೆಗೆ,

ಜಮ್ಮಿ ವೆಂಕಟರಮಣಯ್ಯನವರ

'ಲಿವರ್ ಕ್ಯೂಅರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಿರಿ !

ಹೆಚ್ಚಿನ ಮಾಹಿತಿಗೆ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ.

ಹೈಗುಂದ ಕುರ್ವೆ ಬೆಲ್ಲ!

ಸುಧಾರಿಸಿದ ಪದ್ಧತಿಯಿಂದ ತಯಾರಿಸಿದ

ಮಡಕೆ ಬೆಲ್ಲ.

ಹೊನ್ನಾವರ- ರಾ| ಕೂಡ್ಲ ವಾಸುದೇವ ಶಾನಭಾಗ.
ಕುಮಟಾ- ರಾ| ಮೂಲಜಿ ದೇವಜಿ ಶೇಟ.
ಕಾರವಾರ- ರಾ| ನಾಗಪ್ಪಾ ರವಳ ಮಹಾಲೇ.

ಇವರಲ್ಲಿ ಮಾರುವದಕ್ಕೆ ವ್ಯವಸ್ಥೆ ಮಾಡಿರುತ್ತೇವೆ. ಮುಡೆ-ಬೆಲ್ಲ ಬೇಕಾದರೆ ಆರ್ಡರ ಕೊಟ್ಟಲ್ಲಿ ತಯಾರಿಸಿ ಕೊಡುವೆವು. ಕೆಂಪು ಮೋರಿಶಸ್ ಮತ್ತು ದಾಸ ಕಬ್ಬಿನ ಬೀಜ ನಮ್ಮಲ್ಲಿ ಸೋಯಿ ದರದಿಂದ ಸಿಗುತ್ತದೆ. ತಾ. 15—1—1935.

ಎಮ್. ಪಿ. ನಾಡಕರ್ಣಿ, ಹೇರಂಗಡಿ,

ತಾಲೂಕ— **ಹೊನ್ನಾವರ.**

Siromani Udipi Narayanacharya,
CHAUKHAMBA, BENARES CITY.

S.U.N. & CO. BENARES CITY

ಮಾಹೀಶಮುಖೀ, ರುದ್ರನೇತ್ರೀ ಪ್ರಸ್ಥಮಾತಾ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಕ್ರಿ. 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಿದ್ಧವಾಗುತ್ತ ಅಗುತ್ತ ಕ್ರಯ ಹೆಚ್ಚುವದು. ಕಂಠಿ ಸರ 32 ಪರ1ಕ್ಕೆ ರೂ.0-3-0ಯಿಂದ ರೂ. 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8-0ರಿಂದ 50 ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0 ಸ್ಟಾಂಪು ಕಳಿಸಿದರೆ, 1 ಕಾಶೀ ಪತ್ರ, 1 ವಿಶ್ವೇಶ್ವರನ ಚಿತ್ರ ನಮ್ಮ ಕೆಟಲಾಗು ಸಹ ಇನಾಂ ಕಳಿಸಲಾದೀತು.

ಪತ್ತೆ:- **ಶಿರೋಮಣಿ ನಾರಾಯಣಾಚಾರ್ಯ,**
ಚೌಕಾಂಬಾ, ಕಾಶೀ ಕ್ಷೇತ್ರ.

ಸುಲಭ ಕ್ರಯ! ಡಾಕ್ಟರ ಜೇ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿದಂದಿನಿಂದ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆಸೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಕಾಣಬರತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಿವಿಗಳ ಕ್ರಿಮಿವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ, ಮಾದರಿ ಸೀಸೆ ಉಚಿತ ಕಳಿಸಲಾದೀತು.

(Registered Trade Mark.)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೯-೦, ಪ್ಯಾ.ಪಿ. ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವಿ. ಪಿ. ೦-೨-೦.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:-ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ.ಬಾ. ೫೧೦, ಬೇಕರ್‌ಟೌನ, ಮದರಾಸ.

ಅಲ್ಲಲ್ಲಿ ಇಷ್ಟಿಷ್ಟು!

ಮಹಾತ್ಮರ ಮಹಿಮೆ ಬಣ್ಣಿಸಿದಷ್ಟು ಕಡಿಮೆ! ವಿಶ್ರಾಂತಿಗಾಗಿ ಈಗ ಅವರು ದಿಲ್ಲಿಗೆ ಹೋಗಿರುತ್ತಾರೆ. ಅಲ್ಲಿ ಒಂದು ಹರಿಜನ ಬಸ್ತಿಯ ಒಳ ಪರ್ಣಕುಟಿಯನ್ನು ಕಟ್ಟಿಸಿಕೊಂಡು ಉಳಕೊಳ್ಳುತ್ತಾರೆ. ಮೋಟು ಗಡಿಯಲ್ಲಿ ರಾಷ್ಟ್ರಧ್ವಜವು ಮುದದಿಂದ ಹಾರಾಡುತ್ತಿದೆ. ಸುತ್ತುಮುತ್ತು ಮಹಾತ್ಮರ ಪರಿವಾರದವರು. ದರ್ಶನಕಾಂಕ್ಷಿಗಳೂ ಗುಂಪು ಕೂಡಿದ್ದಾರೆ. ಅದನ್ನು ನೋಡಿದರೆ ಸ್ವರ್ಗ ಶಾಂತ್ಯಾಶ್ರಮವೆಂಬಂತೆ ಭಾಸವಾಗುತ್ತದೆ. ಮಹಾತ್ಮರು ಬೆಳಗಿನ ೩ ಘಂಟೆಗೆ ಎದ್ದು ಬಂದು ಬಿದ್ದ ಕಾಗದ ಪತ್ರಗಳಿಗೆ ಉತ್ತರ ಬರೆಯತೊಡಗುತ್ತಾರೆ. ೪ ಘಂಟೆಗೆ ಬಸ್ತಿಯಲ್ಲಿರುವ ಹರಿಜನ ಆಶ್ರಿತರೆಲ್ಲರು ಎದ್ದ ಬಳಿಕ ಅಲ್ಲಿ ನಿಯಮದಂತೆ ಪ್ರಾರ್ಥನೆ ಮೊದಲಾದ ಕೃತ್ಯಗಳು ನಡೆಯುತ್ತವೆ. ದಿಲ್ಲಿಯಲ್ಲೀಗ ವಿಪರೀತ ಚಳಿ ಇದ್ದಾಗ್ಯೂ ಮಹಾತ್ಮರು ನಿತ್ಯ ನಿಯಮದಂತೆ ಪಂಚೆಯನ್ನು ಮಾತ್ರ ಉಟ್ಟುಕೊಳ್ಳುತ್ತಾರೆ. ಚಿಕ್ಕ ಅಂಗವಸ್ತ್ರದ ತುಂಡನ್ನು ಮಾತ್ರವೂ ಧರಿಸುವದಿಲ್ಲ. ಮಹಾತ್ಮರಿಗೆ ಕಾಣಬಂದ ಮಹನೀಯರು ಹೊದಿಕೆಯ ಮೇಲೆ ಹೊದಿಕೆ ಹಾಕಿಕೊಂಡು ಹೋಗುತ್ತಾರೆ. ಮಹಾತ್ಮರಿಗೆ ಗಳಿಗೆ ವಿಶ್ರಾಂತಿ ದೊರೆಯದು. ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರಿಗೆ ಮಾರ್ಗ ತೋರಿಸಿಕೊಡಬೇಕು; ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿಗೆ ಕೌನ್ಸಿಲಿನೊಳಗಿನ ರಾಜಕಾರಣವನ್ನು ತೋರಿಸಬೇಕು; ಪತ್ರಿಕಾ ಪ್ರತಿನಿಧಿಗಳಿಗೆ ಅಭಿಪ್ರಾಯ ಹೇಳಬೇಕು, ವಿದೇಶಗಳಿಂದ ಮಹಾತ್ಮರಿಗೆ ಕಾಣಲು ಮಹನೀಯರು ಬಂದಿರುತ್ತಾರೆ, ಅವರಿಗೆ ಹಿಂದುಸ್ಥಾನದ ಅಂತರಂಗವನ್ನು ಸ್ಫುಟ ಮಾಡಿ ಹೇಳಬೇಕು, ಇಷ್ಟೆಲ್ಲ ವ್ಯಾಪಾರ ನಡೆಸುತ್ತಿದ್ದಾಗ್ಯೂ ಮಹಾತ್ಮರು ರಾಜಕಾರಣದಿಂದ ಅಲಿಪ್ತರೇ! ಭಾರತೀಯ ಯುದ್ಧವನ್ನು ನಡಿಸಿದ ಶ್ರೀ ಕೃಷ್ಣ ಪರಮಾತ್ಮನು ನಿಃಸ್ಸಂಗನಿದ್ದಂತೆಯೇ!

* *

ಕೊಂಗ್ರೆಸಿನ ಪರವಾಗಿ ಆರಿಸಿಹೋದ ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರು ಒಳ್ಳೇ ಪರಂಪರೆಯನ್ನು ಆರಂಭಿಸಿದ್ದಾರೆ: ಸಭಾಸದರ್ಯಾರೂ ಸರಕಾರಿ ಮೇಜವಾನಿಗಳಲ್ಲಾಗಲಿ, ದರ್ಬಾರ ಸಮಾರಂಭಗಳಲ್ಲಾಗಲಿ ಸೇರಕೂಡದು; ಸರಕಾರಿ ಹುದ್ದೆಗಳನ್ನು ಸ್ವೀಕರಿಸಕೂಡದು, ಕಾಯಿದೆ ಕೌನ್ಸಿಲಿನ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳ ಹೊರತು. ಸಭಾಸದರು ಸ್ವಪಕ್ಷದ ಪರವಾಗಿ ಕೊಂಡ ನಿರ್ಣಯವನ್ನು ಪಾಲಿಸತಕ್ಕದ್ದು. ಕಾಯಿದೆ ಕೌನ್ಸಿಲಿನಲ್ಲಿ ಗಾಂಧಿ-ಟೊಪ್ಪಿಗೆಗಳನ್ನು ಧರಿಸಿ ಹಾಜರಾಗಬೇಕು. ಬೇರೆ ಬೇರೆ ಪ್ರಾಂತದವರು ಅಲ್ಲಲ್ಲಿಯ ರೂಢಿಯಂತೆ ಧರಿಸುವ ಪಗಡಿ ಮುಂತಾದ ತೊಡವುಗಳನ್ನೆಲ್ಲ ತೆಗೆದಿಟ್ಟು ಗಾಂಧಿ ಟೊಪ್ಪಿಗೆಗಳನ್ನು ಧರಿಸಿ ಸಭಾಸ್ಥಾನವನ್ನು ಸೇರತಕ್ಕದ್ದು. ಈ ನಿಯಮದಂತೆ ಕಳೆದ ಸೋಮವಾರ ಕೊಂಗ್ರೆಸ ಸಭಾಸದರು ಒಳಸೇರಲು ಸಭಾಗೃಹದಲ್ಲಿ ಒಂದು ಪ್ರಕಾರದ ಗಾಂಭೀರ್ಯವೂ ರಾಷ್ಟ್ರನಿಷ್ಠೆಯೂ ಒಡಮೂಡಿತಂತೆ. ಸಭಾಸದರಿಗೆ ಸಭೆ ನಡೆದ ದಿನ ಒಂದಕ್ಕೆ ರೂಪಾಯಿ ೩೦ರಂತೆ ಭತ್ಯ ಸಿಗುತ್ತದೆ. ಆ ಭತ್ಯ ರಕಮಿನೊಳಗಿಂದ ಪ್ರತಿ ಅಧಿವೇಶನಕ್ಕೆ ಪ್ರತಿ ಒಬ್ಬ ಕೊಂಗ್ರೆಸ ಸಭಾಸದರು ರೂಪಾಯಿ ೧೫ರಂತೆ ಕೊಂಗ್ರೆಸಿಗೆ ಕೊಟ್ಟುಕೊಡಬೇಕೆಂದು ಗೊತ್ತಾಗಿದೆ. ರಾಷ್ಟ್ರೀಯ ಸಭಾಸದರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಹೆಚ್ಚುಮೆಟ್ಟಿಗೂ ರಾಷ್ಟ್ರವಿರೋಧವನ್ನು ಸರಕಾರಕ್ಕೆ ಸ್ಪಷ್ಟಪಡಿಸಿದರು. ಇದಕ್ಕೆ ಎದುರಾಗುವದಕ್ಕಾಗಿ ಸರಕಾರದವರು ಒಳ್ಳೊಳ್ಳೇ ನಾಜೂಕ ಸರಕಾರಿ ಅಧಿಕಾರಿಗಳನ್ನು ನೇಮಿಸಿಕೊಂಡಿರುವರು. ಮುಂಬಯಿಯ ಪ್ರಖ್ಯಾತ ಬ್ಯಾರಿಸ್ಟರರಾದ ಶ್ರೀ|| ಭೂಲಾಭಾಯಿ ದೇಸಾಯಿ ಯವರು ಕಾಯಿದೆ ಕೌನ್ಸಿಲಿನೊಳಗಿನ ಕೊಂಗ್ರೆಸ ಪಕ್ಷದ ನಾಯಕರು.

* *

ರಾಷ್ಟ್ರದ ಕೋಟ್ಯವಧಿ ದೀನಬಡವರನ್ನು ಉದ್ಧರಿಸಲು ಅಗ್ರಸ್ಥಳವು ದೊರೆಯುತ್ತದೆಂದು ತಿಳಿಕೆಯಾಗುತ್ತಿದೆ. ಅದೇ ಈಗ ಸಂಭವಿಸಲಾರಂಭಿಸಿದೆ. ಮಹಾತ್ಮರು ಹೊರಡಿಸಿದ ಗ್ರಾಮೋದ್ಯೋಗಿಕ ಸಂಘ ಬೆಳೆಯಲಿಕ್ಕೆ ಅಡೆತಡೆಗಳನ್ನು ಹಿಡಿದುಕೊಳ್ಳಬೇಕೆಂಬ ಹುಚ್ಚು ಮಧ್ಯಪ್ರಾಂತದೊಳಗಿನ ಸಾಗರ ಜಿಲ್ಲೆಗೊಳಪಟ್ಟಿದ ಅನಂತಪುರದೊಳಗಿನ ಪೋಲೀಸರು ಹೇಗ ಪಾಲಿಸುತ್ತಾರೆ ನೋಡಿರಿ! "ಖಾದಿಯ ಕ್ರಾಂತಿಯ ಮೇಲೆ ನಂಬಿಕೆಯದು; ನೂಲುವ ಕೈರಾಟಗಳು ಹೊರಾಗುವವು; ಹುಟ್ಟು ಬೀಡಿದೊಡ್ಡುವವು, ಮೇಲೆ ಬಟ್ಟೆಯಾಗುವದು" ಈ ಸಂಗತಿಯನ್ನು ಅನಂತಪುರದೊಳಗಿನ ಶ್ರೀ|| ಜಮಾಲಭಾಯಿಯವರು ತಮ್ಮ ವ ಕಾರ್ಯಾಲಯದಲ್ಲಿ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಪಂಡಿತ ರವಿಶಂಕರ ಶುಕ್ಲರವರಿಗೆ ತಿಳಿಸಿದರು. ಶ್ರೀ|| ಜಮಾಲಭಾಯಿಯವರು ಸತ ಕೋಷ್ಟಿಗಳು; ನಿಷ್ಠೆಯಿಂದ ನೂಲುವ-ನೇಯ್ಗೆಯ ಉದ್ಯೋಗವನ್ನು ನೆರೆಹೊರೆಯ ಹಳ್ಳಿಗಳಲ್ಲಿ ಪ್ರಚಾರ ಮಾಡಿ ನೂರಾರು ಜನರಿಗೆ ಉದ್ಯೋಗ ತೋರಿಸಿಕೊಟ್ಟು ನಿರ್ವಾಹದ ವ್ಯವಸ್ಥೆ ಮಾಡಿದ್ದಾರೆ. ಪಂಡಿತ ರವಿಶಂಕರರು ಖಾದಿ ಕೆಲಸ ನೋಡುವದಕ್ಕಾಗಿ ಕಾರ್ಯದರ್ಶಿಗಳು ಅನಂತಪುರಕ್ಕೆ ದಯಮಾಡಿಸಿದ್ದರು. ಸತ್ಯಸ್ಥಿತಿ ಸರ್ವರಿಗೆ ತಿಳಿಯಲಾಗುವದು.

* *

ಕಳೆದ ವಾರ ದಿಲ್ಲಿಯಲ್ಲಿ ನಡೆದ ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನದ ಕಾರ್ಯಭಾಗವೇನೆಂದರೆ:— ಮೊದಲನೇ ದಿನ ಅಖಿಲ ಭಾರತೀಯ ಗ್ರಾಮೋದ್ಯೋಗಿಕ ಸಂಘದ ಕುರಿತು ಹಿಂದುಸ್ಥಾನ ಸರಕಾರವು ಹೊರಡಿಸಿದ ಗುಪ್ತ ಸರ್ಕ್ಯುಲರದ ವಿಷಯ ಚರ್ಚೆ ನಡೆಯಿತು. ಶ್ರೀ|| ಸತ್ಯಮೂರ್ತಿ ಪ್ರಭೃತಿ ಕೊಂಗ್ರೆಸ ಸಭಾಸದರು ಸರಕಾರದ ಕೃತ್ಯವನ್ನು ನಿಷೇಧಿಸಿದರು. ಕಂಪನಿ ಸರಕಾರದ ಕೃತ್ಯವನ್ನು ನಿಷೇಧಿಸಿದರು. ಕಂಪನಿ ಸರಕಾರದ ಕಾರಕೀರ್ದಿಯಲ್ಲಿ ಜೇಡಗು ನೂಲು ನೂಲುವ-ನೇಯುವ ನೂಲುಗಾರರ— ನೇಕಾರರ ಕೈಬೆರಳುಗಳು ಕೊಯ್ಯಲ್ಪಟ್ಟದ್ದವಾಗಿ ಪಂಡಿತ ಗೋವಿಂದ ವಲ್ಲಭ ಪಂತರವರು ಉಲ್ಲೇಖಿಸಿದರು. ಮರುದಿನ ಸತ್ಯಾಗ್ರಹದ ತಯಾರಿಯೆಂದು ಕೆಲ ಪತ್ರಿಕಾ ಪ್ರತಿನಿಧಿಗಳು ಮಾಡುವ ರಾಷ್ಟ್ರೀಯ ಸಭೆಯ ಅಧಿವೇಶನದ ಕಾರ್ಯಕಲಾಪಗಳನ್ನು ವರದಿ

ಮುಂಬಯಿ ಸ್ವದೇಶೀ ವಸ್ತುಪ್ರದರ್ಶನದಲ್ಲಿ ಉಚ್ಚ ತರಗತಿಯ ಪಾರಿತೋಷಕ ಪಡೆದ,



ವೆಜಿಟೆಬಲ್ ಸೋಪ ವರ್ಕ್ಸ, ಕಲ್ಲಿಕೋಟೆ.

ಡಿಸ್ಟ್ರಿಬ್ಯೂಟರರು:— ಬಸ್ತಿಹಿತ್ತಲ ಮಹಮೂದ ಸಾಹೇಬ, ಕುಮಟಾ. (ಉ. ಕನ್ನಡ.)

ಮಾಗ ಆರಿಸಲ್ಪಟ್ಟದ್ದಾಗ ಸರಕಾರ ತರ್ಫೆಸಿಂದ ವಕೀಲಿ ಮಾಡಿಯಿತು. ಆ ಚರ್ಚೆಯು ಮರು ದಿನದ ಸಮಯ ೪.೧೫ರಿಂದ ಮಾತಗಳ ವಿಶೇಷವೇನೂ ಗಳಿಲ್ಲ. ಮಾರನೇ ದಿನ ಅಂದರೆ ಬುಧವಾರ ವರಿಷ್ಠ ಶಾಸನ ಕೌನ್ಸಿಲಿಗೆ ಆರಿಸಲ್ಪಟ್ಟ ಕಲಕತ್ತೆಯ ಸಭಾಸದರಾದ ಶ್ರೀ ಶರಚ್ಚಂದ್ರ ಬೋಸರಿಗೆ ರಾಜಕೈದಿಯಾಗಿ ಸೆರೆಯಲ್ಲಿಟ್ಟು ಶಾಸನ ಕೌನ್ಸಿಲಿಗೆ ಹಾಜರಾಗಲು ಪ್ರತಿಬಂಧಿಸಿದ ಬಗ್ಗೆ ಸರಕಾರದ ನಿಷೇಧ ಮಾಡುವ ಠರಾವಿನ ಮೇಲೆ ಚರ್ಚೆ ನಡೆಯಿತು. ದುರ್ದೈವದಿಂದ ಅವರು ಸೆರೆಮನೆಯಲ್ಲಿರುವದು ೨-೩ ವರ್ಷಗಳಾದವು; ಅವರ ಮೇಲೆ ಖಟ್ಲೆಯಿಲ್ಲ; ಅಪರಾಧದ ವಿಚಾರವಿಲ್ಲ; ಶಾಸನ ಕೌನ್ಸಿಲಿನ ಉಮೇದವಾರರಾಗಿ ನಿಲ್ಲಲು ಪರ್ಮಿಶನ್ ಕೊಟ್ಟು, ಆರಿಸಿ ಬಂದ ಬಳಿಕ, ಕೌನ್ಸಿಲಿಗೆ ಹಾಜರಾಗಗೊಡದಿರುವದು ಬ್ರಿಟಿಶ ಪರಂಪರೆಗೆ ಅನುಚಿತವಾದದ್ದೆಂದು ಕಾಂಗ್ರೆಸ ಸಭಾಸದರು ವಾದಿಸಿದರು. ಶ್ರೀ ಭುಲಾಭಾಯಿಯವರು ೧೦ ನಿಮಿಷಗಳಲ್ಲಿ ರಾಜ್ಯಶಾಸನೆಯ ಮೂಲ ತತ್ವಗಳನ್ನು, ಸಭಾಸದರ ಅಧಿಕಾರವನ್ನು, ಸರಕಾರದ ಒಲುಹ್ಮಕಾರವನ್ನು ಚಿತ್ತವೇಧಕವಾಗಿ ವಿಶದಪಡಿಸಿದರು. ಬೆರಿಸ್ಟರ ಜಿನ್ನಾ ಪ್ರಭೃತಿ "ಸ್ವತಂತ್ರ" ಪಕ್ಷದವರೂ ಸರಕಾರದ ಕೃತ್ಯವನ್ನು ನಿಷೇಧಿಸಿದರು. ಮತದಾನದ ಸಮಯ ಅವರು ತಟಸ್ಥರಾದರು. ಆದಾಗ್ಯೂ ಠರಾವು ಸೋತಿತು; ರಾಷ್ಟ್ರೀಯ ಸಭೆಯವರು ಗೆದ್ದರು. ಬುಧವಾರ ದಿ. ಗುರುವಾರ ಅಧ್ಯಕ್ಷರ ಚುನಾವಣೆ. ರಾಷ್ಟ್ರೀಯ ಸಭೆಯವರು ಸಂಯುಕ್ತ ಪ್ರಾಂತದ ಬೆರಿಸ್ಟರ ಶೇರವಾಣಿಯವರಿಗೆ ಅಧ್ಯಕ್ಷಸ್ಥಾನಕ್ಕೆ ಉಮೇದವಾರರಾಗಿ ನಿಲ್ಲಿಸಿದ್ದರು. ಬೆರಿಸ್ಟರ ಜಿನ್ನಾ ಪ್ರಭೃತಿ ಮುಸಲ್ಮಾನರು ಸರ್ ಅಬ್ದುರ್ ರಹೀಮರವರಿಗೆ ಉಮೇದವಾರರಾಗಿ ನಿಲ್ಲಿಸಿದ್ದರು. ಸರಕಾರಿ ಸಭಾಸದರು ಸರ್ ಅಬ್ದುರ್ ರಹೀಮರವರಿಗೆ ಬೆಂಬಲ ಕೊಟ್ಟದ್ದರಿಂದ ಅವರೇ ಅಧ್ಯಕ್ಷರಾಗಿ ಆರಿಸಿಬಂದರು. ಸರ್ ಅಬ್ದುರ್ ರಹೀಮರಿಗೆ ೭೦ ಮತ, ಶ್ರೀ ಶೇರವಾಣಿಯವರಿಗೆ ೬೨ ಮತ; ಹೀಗೆ ಮತವಿಭಾಗವಾಯಿತು. ಬೆರಿಸ್ಟರ ಜಿನ್ನಾ ಪ್ರಭೃತಿ ಸ್ವತಂತ್ರರು ಕಾಂಗ್ರೆಸ ಸಭಾಸದರೊಡನೆ ಸರಕಾರದ ವಿರೋಧ ಮಾಡಲು ಉತ್ಸುಕರಾದರು; ಮತದಾನದ ಸಮಯ ಮಾತ್ರ ಒಂದೇ ಅಭಿಪ್ರಾಯ; ಇಲ್ಲವೆ ಸರಕಾರ ಪಕ್ಷದವರು. ಬೆರಿಸ್ಟರ ಜಿನ್ನಾರವರಂಥ ವಿಚಾರವಂತರ ಮತ ಹೀಗಾದ ಬಳಿಕ, ಸ್ವರಾಜ್ಯ ಸಂಗ್ರಹವಾಗಲು ಕೆಲ ವಿಳಂಬವಾದರೆ ಆಶ್ಚರ್ಯವಿಲ್ಲ.

***

ಮುಂಬಯಿ, ಮದ್ರಾಸ ಮೊದಲಾದ ಪ್ರಾಂತಿಕ ಸರಕಾರಗಳೂ ಗತ ಸರ್ಕ್ಯುಲರನ್ನು ಹೊರಡಿಸಿ ರಾಷ್ಟ್ರೀಯ ಸಭೆಯವರ ಮೇಲೆ ಕಣ್ಣು ಇಡಲು ತಿಳಿಸಿದ ಮೇಲೆ ರಾಷ್ಟ್ರಧ್ವಜ ಹಚ್ಚುವವರ ಮೇಲೆ ಕಣ್ಣಿಡಬೇಕು; ಅದನ್ನು ಹಚ್ಚುವದರಿಂದ ಬ್ರಿಟಿಶ ಸಾಮ್ರಾಜ್ಯಕ್ಕೆ ಅವಮಾನವಿದೆ; ಬ್ರಿಟಿಶ ರಾಷ್ಟ್ರಧ್ವಜವನ್ನೇ ಅಲ್ಲಲ್ಲಿ ಹಚ್ಚಬೇಕು; "ವಂದೇ ಮಾತರಮ್" ಪದ್ಯವನ್ನು ಹಾಡಗೊಡಬಾರದು; ಅದನ್ನು ಹಾಡಗೊಟ್ಟಲ್ಲಿ ಬ್ರಿಟಿಶ ರಾಷ್ಟ್ರಗೀತದ ಗೌರವಕ್ಕೆ ಹಾನಿ ಬರುತ್ತದೆ; ಇವೇ ಮೊದಲಾದ ರಾಜಾಜ್ಞೆಗಳು ಹೊರಟಿರುವವಂತೆ. ಸರಕಾರವು ಅನಾವಶ್ಯಕವಾಗಿ ಸಂದೇಹಪಡುತ್ತಿದೆ. ದೇಶಾಭಿಮಾನವನ್ನು ಅಳೆಯುವದು ರಾಜದ್ರೋಹವಲ್ಲ; ರಾಜ್ಯಕ್ರಾಂತಿಯು ಘೋಷಕವಲ್ಲ. ಬ್ರಿಟಿಶರು ದೇಶಾಭಿಮಾನಿಗಳು; ತದ್ವತ್ತಲೇ ಹಿಂದಿಯರು ದೇಶಾಭಿಮಾನಿಗಳಾಗುತ್ತಿದ್ದರೆ ಬ್ರಿಟಿಶರು ಆನಂದಪಡಬೇಕು; ಅಲ್ಲದೆ ದೇಶಾಭಿಮಾನವನ್ನು ದಬ್ಬಲು ಯತ್ನಿಸಕೂಡದು.

***

ಬಂಗಾಲ ದೇಶದಲ್ಲಿ ನವದ್ವೀಪವು ಹೆಸರಾದ ಕ್ಷೇತ್ರವಿದೆ. ಅಲ್ಲಿ ಪಂಡಿತರ ಪ್ರಸ್ತ ಹೆಚ್ಚು. ಪ್ರಾಂತಾಧಿಪರಾದ ಸರ್ ಜಾನ್ ಎ-ಡರಸನ್‌ರವರು ಅತ್ತ ಕಡೆ ಚಿತ್ತೈಸಿದ್ದಾಗ ಪಂಡಿತರು ಸಭೆಸೇರಿ 'ಜ್ಞಾನಸಾಗರ' ವೆಂಬ ಬಿರುದನ್ನು ಗವ್ಹರ್ನರರಿಗೆ ಅರ್ಪಿಸಿ ಸಂಸ್ಕೃತವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವದಕ್ಕಾಗಿ ಅಲ್ಲಲ್ಲಿ ಸಂಸ್ಕೃತ ವಿದ್ಯಾಲಯವನ್ನಾಗಲಿ, ಕಾಲೇಜನ್ನಾಗಲಿ ಸ್ಥಾಪಿಸಬೇಕೆಂದು ಪ್ರಾರ್ಥಿಸಿಕೊಂಡರು. "ಸಂಸ್ಕೃತ ಭಾಷೆಗೆ ಈಗ ತಕ್ಕಷ್ಟು ಅನುಕೂಲತೆಯಿದೆ; ಮಾತ್ರ ಅನುಕೂಲತೆ ಪಡಿಕೊಳ್ಳಲು ಸರಕಾರದ ಕಡೆ ದ್ರವ್ಯಾನುಕೂಲತೆಯಿಲ್ಲ," ಹೀಗೆ ಹೇಳಿ ಪ್ರಾಂತಾಧಿಪರು ಸತ್ಕಾರವನ್ನು ಸ್ವೀಕರಿಸಿ 'ಜ್ಞಾನಸಾಗರ' ಕಿತಾಬನ್ನು ಜೇಬಿನಲ್ಲಿ ಸೇರಿಸಿ ಸ್ವಸ್ಥಾನಕ್ಕೆ ತೆರಳಿದರು! ಸರಕಾರಿ ಕಿತಾಬುಗಳಿಗೆ ಜನರು ಹಂಬಲಿಸುವಂತೆ, ಜನರ ಕಿತಾಬುಗಳಿಗೆ ಅಧಿಕಾರಿಗಳು ಹಂಬಲಿಸುವದಿಲ್ಲ!

—ಶ್ರೀಕಾಶೀ ಕ್ಷೇತ್ರದಲ್ಲಿ ಜಲೋದರ ರೋಗಕ್ಕೆ ಪ್ರಾರಂಭವಾಗಿದೆ; ಅನೇಕರು ತೀರಿಕೊಂಡರು. ಹೊಟ್ಟೆನೋವು, ಕೈಕಾಲುಗಳಲ್ಲಿ ಅಶಕ್ತಿ, ದೃಷ್ಟಿಮಾಂದ್ಯ, ಆ ಮೇಲೆ ಹೃದ್ರೋಗ; ಈ ಕ್ರಮದಿಂದ ಈ ರೋಗ ಹಬ್ಬುತ್ತಿದೆ. ಇದೂ ಒಂದು ಸಾಂಸರ್ಗಿಕ ರೋಗವೇ. ಮನೆಯಲ್ಲಿ ಒಬ್ಬರಿಗೆ ಬರೆ ಎಲ್ಲರಿಗೂ ಆಗುತ್ತದೆ.

—ಹೈದರಾಬಾದದ ನಿಜಾಮ ಸಾಹೇಬರು ಸಾರ್ವಭೌಮರ ರೌಪ್ಯ ಮಹೋತ್ಸವಕ್ಕೆ ೫ ಲಕ್ಷ ರೂಪಾಯಿಗಳನ್ನು ಪಿರ್ಸಿದ್ದಾರೆ.

— ಕಾರವಾರ ರೈತ ಸಹಾಯಕ ನಿಧಿಗೆ ಮುಂಬಯಿಯ ಬೆರಿಸ್ಟರರಾದ ಶ್ರೀ ಭುಲಾಭಾಯಿ ದೇಸಾಯಿಯವರೂ, ಸಾವಕಾರರಾದ ಶ್ರೀ ಶಾಂತಿವಿ ಮುಸರ್ಜಿವರೂ ಪ್ರತ್ಯೇಕವಾಗಿ ರೂ. ೧೦೦೦ ಅರ್ಪಿಸಿದ್ದಾರೆ. ಶ್ರೀ ದಿವಾಕರ ರಂಗನಾಥ ರಾಯರೂ, ದೇಶಪಾಂಡೆ ಗಂಗಾಧರರಾಯರೂ ದಿಲ್ಲಿಗೆ ಹೋಗಿ ಮಹಾತ್ಮರ ಕಡೆ ಈ ನಿಧಿಯ ಕುರಿತು ಮಾತಾಡಿಕೊಂಡು ಮರಳಿ ಮುಂಬಯಿಗೆ ಬಂದಿರುತ್ತಾರೆ. ಮುಂಬಯಿಯಲ್ಲಿ ಇನ್ನೂ ನಿಧಿಸಂಗ್ರಹ ಮಾಡುವ ಕೆಲಸ ನಡೆದದೆ.

—ತ್ರಾವಣಕೋರ ಸಂಸ್ಥಾನದ ದಕ್ಷಿಣ ಭಾಗದಲ್ಲಿ ಮಳೆ ಬರಾಯ ಹೊಲದಲ್ಲಿ ನೀರಿಲ್ಲದೆ ಬೇಸಾಯಗಾರರ ಗೋಳು. ೫೪ ಸಾವಿರ ಎಕ್ರೆ ಭೂಮಿ ಬಂಜರು ಬೀಳುವ ಪ್ರಸಂಗ ಬಂದಿದೆ. ಸರಕಾರವು ಪ್ರಕಟಣೆಯನ್ನು ಹೊರಡಿಸಿ ೨೩ ಸಾವಿರ ಎಕ್ರೆ ಭೂಮಿಯನ್ನು ಮಾತ್ರ ಈ ಬಾರಿ ಸಾಗುವಳಿ ಮಾಡಬೇಕಾಗಿ ಹುಕುಮು ಹೊರಡಿಸಿದೆ.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ವೃದ್ಧಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).
ಮಾಕ್ಷಿಕಮದದ ರಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ್ಯ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾಮಾಷ ತೈಲ್ಯ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ).
ಕೃಷ್ಣಾಲೋಶ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಭಲ್ಲಾತ (ಪಕ್ಷವಾತ, ಅರ್ಧಾಂಗವಾತ, ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಕಣ್ಣಿನ ನೋವುಗಳಿಗೆ ಅತ್ಯಂತ ಗುಣಕಾರಿ).
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಸಿದ್ಧ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:—

ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ್ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬಾ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯ ಮನೆತನಕ್ಕೆ ಸೇರಿದವರಾಗಿಯೂ, ಗುಣನಿಧಿಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಇವು ಶಾಸ್ತ್ರಸಿದ್ಧವಾಗಿ ಅನುಭವಸ್ವರೂಪವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಚಾರ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ಬೆಳೆಸಲು ಇದರ ವ್ಯವಸ್ಥಾಪಕರು ಯತ್ನಿಸಿರುವುದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ವೇಷಕರಾಗಿದ್ದರೆ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ. ೧೦-೧೧-೧೯೩೩.

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಅಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ.

ಜಾಹೀರ ನೋಟೀಸು.

ಭ. ಜ. ತಾ. ೩೦—೧—೩೫.

ಕುಮಟಾ ಸಬಜಜ್ಜ ಕೋರ್ಟಿನಲ್ಲಿ

ಮುಕ್ಕಾಮು ಕುಮಟಾ ಇಲ್ಲಿ. ನಿ [illegible]

ದಿವಾಣಿ ಮುಕದಮೆ ನಂ. [illegible] ಸನ್ ೧೯೩೪ ನೈಕಂ.

ನಾರ್ಣಪ್ಪ ರಾಮ ಕಾಮತ, ಪ್ರಾಯ ೪೮, ಜಾತಿ ಗೌಡಸಾರಸ್ವತ, ಕಸಬು ವ್ಯಾಪಾರ, ಸಾ| ಕುಮಟಾ ತಾಲೂಕ ಹಿರೇಗುತ್ತಿ ನಿವಾಸಿಕನು } ವಾದಿ

ವ| ಮಿ ಎಸ್. ಜಿ. ಶಾನಭಾಗ.

ವಿರುದ್ಧ

ಮೆ| ರಾಮಚಂದ್ರ ಕೇಣಿ ಶೆಟ್ಟಿ, ಪ್ರಾಯ ೪೫, ಜಾತಿ ವೈಶ್ಯ, ಕಸಬು ಚಿನಿವಾರಿಕೆ, ಸಾ| ಕುಮಟಾ ತಾಲೂಕ ಹಿರೇಗುತ್ತಿ ನಿವಾಸಿ ಇವನಿಗೆ } ಪ್ರತಿವಾದಿ

ಸದರಿ ವಾದಿ ಇವನು, ನಿನ್ನ ಮೇಲೆ ನೀನು ವಾದಿಗೆ ತಾ. ೨೫-೪-೩೧ನೇಗೆ ರೂ. [illegible] ಬಗ್ಗೆ ಬರೆಕೊಟ್ಟ ಪ್ರಾಮಿಸರಿ ನೋಟಿನ ಅಸಲು, ಬಡ್ಡಿ ರೂ. [illegible] ಮತ್ತು ಕೋರ್ಟ ಖರ್ಚು, ಭವಿಷ್ಯದ ಬಡ್ಡಿ ಕೂಡಾ ವಸೂಲ ಪಡೆಯುವ ಸಲುವಾಗಿ ನಾಲಿಶಿಯನ್ನು ಮಾಡಿರುವ ಕಾರಣ, ಸದರಿ ದಾವೆಗೆ ಜವಾಬು ಕೊಡಲಿಕ್ಕೆ ಈ ಲೇಖದಿಂದ ನಿನಗೆ ಸಮನು ಮಾಡಲ್ಪಟ್ಟಿದೆ. ನೀನು ಸ್ವತಃ ಯಾ ವ್ಯಾಜ್ಯವನ್ನು ಪೂರಾ ತಿಳಿಸಿಕೊಂಡಂಥ ವಕೀಲನ ಮುಖಾಂತರವಾಗಿ **ಸನ್ ೧೯೩೫ನೇ ಮಾರ್ಚ ತಿಂಗಳಿನ ೭ನೇ ತಾರೀಖಿನಲ್ಲಿ** ಬೆಳಗಿನ ೧೧ ಘಂಟೆಗೆ ಈ ಕೋರ್ಟಿನಲ್ಲಿ ಹಾಜರಾಗಬೇಕು. ವಕೀಲನ ಮುಖಾಂತರವಾಗಿ ಹಾಜರಾದರೆ, ಈ ದಾವೆಗೆ ಸಂಬಂಧಿಸಿದ ಯಾವತ್ತೂ ಮಹತ್ವದ ಸವಾಲುಗಳಿಗೆ ಜವಾಬು ಕೊಡಲಿಕ್ಕೆ ಅವನು ಶಕ್ತನಾಗಿರಬೇಕು; ಅಥವ ಅಂಥ ಸವಾಲುಗಳಿಗೆಲ್ಲ ಜವಾಬು ಕೊಡಲಿಕ್ಕೆ ಸಮರ್ಥನಾದ ಮತ್ತೊಬ್ಬನು ಆ ವಕೀಲನ ಕೂಡ ಇರಬೇಕು. ನೀನು ಹಾಜರಾಗುವ ಬಗ್ಗೆ ಗೊತ್ತುಪಡಿಸಿದ ದಿವಸವೇ ದಾವೆಯ ಅಖೈರಿನ ನಿರ್ಣಯಕ್ಕೆ ಗೊತ್ತುಪಡಿಸಿರುವ ಕಾರಣ, ಆ ದಿವಸ ನಿನ್ನ ಜವಾಬಿನ ಪುರಾವೆಗಾಗಿ ನೀನು ಆಶ್ರಯಿಸಲಿಕ್ಕೆ ಅಪೇಕ್ಷಿಸುವಂಥ ಯಾವತ್ತೂ ಸಾಕ್ಷಿದಾರರನ್ನು ಮತ್ತು ಎಲ್ಲ ದಸ್ತೈವಜುಗಳನ್ನು ಹಾಜರುಪಡಿಸಲಿಕ್ಕೆ ನೀನು ಸಿದ್ಧನಾಗಿರಬೇಕು.

ಈ ಲೇಖದಿಂದ ನಿನಗೆ ತಿಳಿಯಪಡಿಸುವದೇನಂದರೆ— ಸದರಿ ಬರೆದ ದಿವಸ ನೀನು ಹಾಜರಾಗದಿದ್ದರೆ ನಿನ್ನ ಪರೋಕ್ಷದಲ್ಲಿ ದಾವೆಯು ಚೌಕಶಿಯಾಗಿ ಅದು ನಿರ್ಣಯಿಸಲ್ಪಡುವದು.

ಮತ್ತು ನಿನಗೆ ನೋಟೀಸು ಕೊಡುವದೇನಂದರೆ, ಒಜ್ಜಾವಣೆಯ ಸಲುವಾಗಿ ನಿನ್ನ ಪತ್ರೆಯನ್ನು ನಿರ್ದಿಷ್ಟ ಮಾಡಿದ ತಾರೀಖಿನೊಳಗಾಗಿ ತಂದುಕೊಡಲಿಕ್ಕೆ ತಪ್ಪಿದರೆ, ಪ್ರತಿವಾದಿಯೆಂಬ ನಿಮ್ಮ ಪಕ್ಷವನ್ನು ತೆಗೆದು ಹಾಕಲಾದೀತು.

ಈಹೊತ್ತು ಸನ್ ೧೯೩೫ ಜನವರಿ ತಿಂಗಳ ೩೦ ನೇ ತಾರೀಖಿನಲ್ಲಿ ನನ್ನ ಸಹಿ ಮಾಡಿ ಮತ್ತು ಕೋರ್ಟಿನ ಮೊಹರು ಮಾಡಿ ಕೊಡಲ್ಪಟ್ಟಿದೆ.

(ಕೋರ್ಟಿನ ಮೊಹರು)

M. V. Shrinivas.

ಕ್ಲಾರ್ಕ ಆಫ್ ದಿ ಕೋರ್ಟ.

ವಿಕ್ರಿಗೆ ತಯಾರಾಗಿದೆ!

ವೇ|| ಮೊಗೇರಿ ಭಾಸ್ಕರ ಅಡಿಗಳಿಂದ

ಸೂರ್ಯಸಿದ್ಧಾಂತರೀತ್ಯಾ ತಯಾರಿಸಲ್ಪಟ್ಟ,

ಕೆಕ್ಕಾರ ಶ್ರೀ ಧರ್ಮವಿದ್ಯಾಪರಿಷತ್ತಿನ ಆಶ್ರಯ ಪಡೆದ

ಯುವ ಸಂ|| ಪಂಚಾಂಗವು

ಮಾರಾಟಕ್ಕೆ ಸಿದ್ಧವಾಗಿದೆ!

ನಿಯಮಿತ ಪ್ರತಿಗಳು ತೆಗೆದಿರುವದರಿಂದ,

ಬೇಕಾದವರು ತೀವ್ರ ಬರೆಕೊಳ್ಳಬೇಕು.

ಪತ್ತೆ:—

"ಸ್ಟಾರ ಆಫ್ ಕೆನರಾ ಪ್ರೆಸ್," ಕುಮಟಾ.

Siromani Udipi Narayanacharya,

CHAUKHAMBA, BENARES CITY.

ಮಹೇಶನೂರೇ, ರುದ್ರನೇತ್ರೋದ್ಭವವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿಕೊಳ್ಳಿರಿ. 108ರ ಸರ 1ಕ್ಕೆ 0–6–0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ಸರ 32 ಪದ 1ಕ್ಕೆ ರೂ.0-8-0ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8-0ರಿಂದ ೨೦ ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ಸ್ಟಾಂಪು ಕಳಿಸಿದರೆ, 1 ಕಾಶೀ ಪತ್ರೆ, 1 ವಿಶ್ವೇಶ್ವರನ ಪಟ ಸಮ್ಮ ಕಟಿಗಾಗಿ ಸಹ ಇನಾಂ ಕಳಿಸಲಾಗುವದು.

ಪತ್ತೆ:– ಶಿರೋಮಣಿ ನಾರಾಯಣಾಚಾರ್ಯ,

ಚೌಕಾಂಬಾ, ಕಾಶೀ ಕ್ಷೇತ್ರ.

ನಾಯಕ್ ಬ್ರದರ್ಸರ
ಶ್ರೀಮಧ್ವುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ವೃದ್ಧಿಕಷಾಯ (ವಿಷ್ಣ್ವರಕ್ಕೆ ಅತ್ಯಂತ ಗುಣಕಾರಿ).
ಮಹಾಪದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾವಿಷಗರ್ಭ ತೈಲ್ಯ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾಕರ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ [illegible] (ಪಕ್ಷವಾತ ಅಪತಂತ್ರಕ, ಅಪಸ್ಮಾರಗಳಿಗೆ [illegible])
ಭುವನ [illegible] (ಸರ್ವ ತರದ ಶಾರೀರಿಕ ನೋವುಗಳಿಗೆ ಅತ್ಯಂತ ಗುಣಕಾರಿ).
ವಿಜಯ [illegible] (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಸಿದ್ಧ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ ಗಳು, ಭಸ್ಮಗಳು, ತೈಲ್ಯಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:–

ಹೆಚ್ಚಿನ ವಿವರಗಳಿಗೂ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ

ಉಡುಪಿ ತಾಲೂಕು ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮಧ್ವುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬಾ ಆನಂದಪಟ್ಟೆನು. ಈ ವೈದ್ಯಶಾಲೆ [illegible] ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಗಣನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಅವು ಶಾಸ್ತ್ರಸಿದ್ಧವಾಗಿ ಅನುಭವಪೂರ್ಣವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಚಯವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಸರ್ವಮಾನ್ಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸಕ್ತರಾದರೆ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ. ೧೦–೧೧–೧೯೩೪

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,

ಅಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮಧ್ವುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ.

ಅಲ್ಲಲ್ಲಿ ಇಷ್ಟಿಷ್ಟು!

ಸಿಂಹಲ ದ್ವೀಪದೊಳಗಿನ ಚಳಿಜ್ವರದ ಉಪಹತಿ ಭಯಂಕರವಾಯಿತು. ಕೆಗಾಲಿ ಎಂಬ ಒಂದೇ ಒಂದು ಜಿಲ್ಲೆಯಲ್ಲಿ ಡಿಸೆಂಬರ ತಿಂಗಳಲ್ಲಿ ೩ ಸಾವಿರಕ್ಕೆ ಮಿಕ್ಕಿ ಜನರು ತೀರಿಕೊಂಡರು. ಜನವರಿ ಮೊದಲನೆಯ ಪಕ್ಷದಲ್ಲಿ ೧೯೭೬ ಜನರು ಮೃತರಾದರು. ಇವರಲ್ಲಿ ೧೪೭೩ ಜನರು ಚಿಕ್ಕ ಮಕ್ಕಳು. ಮಕ್ಕಳ ಮೇಲೆಯೇ ಸಂಕ್ರಾಂತಿ ಬಂದಿದೆ. ವೈದ್ಯ ಇಲಾಖೆಯವರಿಂದ ಔಷಧೋಪಚಾರ ಮಾಡಲಶಕ್ಯ. ಅದಕ್ಕಾಗಿ ನೆರೆಹೊರೆಯ ಹಿಂದುಸ್ಥಾನ ದೇಶದಿಂದ ಡಾಕ್ಟರರನ್ನಾದರೂ ತರಿಸಿಕೊಳ್ಳಬೇಕೆಂದು ರಾ| ವಿಜಯರತ್ನೆ ಎಂಬ ಕೌನ್ಸಿಲ ಪ್ರತಿನಿಧಿಗಳು ಪ್ರಕಟಿಸುತ್ತಾರೆ. ಸುಮಾರು ೫ ಲಕ್ಷ ಜನರು ಚಳಿಜ್ವರದಿಂದ ಬೇನೆ ಬಿದ್ದಿದ್ದಾರೆ. ಸಿಂಹಲದ್ವೀಪದ ಲೋಕಸಂಖ್ಯೆ ೫೦ ಲಕ್ಷ. ಅಂದರೆ ಸರಾಸರಿ ದಶಾಂಶ ಜನರು ಚಳಿಜ್ವರದಲ್ಲಿ ನರಳುತ್ತಾರೆಂದು ಸ್ಪಷ್ಟವಾಯಿತು. ಸತ್ತವರಿಗೆ ಉತ್ತರಕ್ರಿಯೆ ಮಾಡಲು ಅನುಕೂಲತೆ ಇಲ್ಲ. ಒಬ್ಬ ವಿಧವೆ ತಾಯಿಗೆ ೧೫ ವರ್ಷದ ಒಬ್ಬೊಂಟಿಗ ಮಗಳು. ಮಗಳು ಜ್ವರದಿಂದ ತೀರಿಕೊಂಡಳು. ಅವಳಿಗೆ ದಹನ ಮಾಡಲು ಅಶಕ್ಯವಾಯಿತು; ಮನೆಯಲ್ಲಿದ್ದ ಸಾಮಾನನ್ನು ಅವಳ ಮೈಮೇಲೆ ಹಾಕಿ ಇಡೀ ಗುಡಿಸಲಿಗೆ ಬೆಂಕಿ ಕೊಟ್ಟುಬಿಟ್ಟಳು. ಚಳಿಜ್ವರದ ಚಳಿ ಬಾಧೆಯನ್ನು ನಿವಾರಿಸಿಕೊಳ್ಳುವದಕ್ಕಾಗಿ ಒಬ್ಬ ಮುದುಕಿ ಒಲೆ ಬಳಿ ಕುಳಿತುಕೊಂಡಿದ್ದಳು; ಫಕ್ಕನೆ ಬೆಂಕಿಯಲ್ಲಿ ಬಿದ್ದು ತೀರಿಕೊಂಡಳು! ತಾಯಂದಿರ ನಿಧನದಿಂದ ಅನಾಥರಾದ ಮಕ್ಕಳಿಗೆ ಶುಶ್ರೂಷೆ ಮಾಡಲಸಾಧ್ಯವಾಗಿದೆ. ಸರಕಾರವು ಪ್ರಯತ್ನಮಾಡುತ್ತಿದೆ. ಒಂದೆಡೆ ಒಬ್ಬ ಹೆಂಗಸು ತೀರಿಕೊಂಡಿದ್ದಳು. ೨ ದಿನಗಳ ತನಕ ಅವಳ ದಹನವಿಧಿಯಾಗಲಿಲ್ಲ. ಚಿಕ್ಕ ಶಿಶುವು ಎರಡು ದಿನಗಳ ತನಕ ತಾಯಿಯ ಮೊಲೆಯನ್ನು ಕುಡಿಯುತ್ತಿತ್ತು. ಏನವಸ್ಥೆಯಿದು! ಇತ್ತ ಮಲೇರಿಯ ಪಿಡುಗು ಪ್ರಾದುರ್ಭಾವವಾಗಿದೆ. ಕರಿನೀರಿನ ಜ್ವರವೆಂಬ ಹೊಸ ಜ್ವರವೂ ಹಬ್ಬಲಾರಂಭಿಸಿದೆ. ಕೆರೆಬಾವಿಗಳು ಬತ್ತಿ ಹೋಗಲಾರಂಭಿಸಿವೆ. ಇದರಿಂದ ಮತ್ತೂ ಕಷ್ಟವಾಗಿದೆ. ಸಿಂಹಲದ್ವೀಪದ ಮೇಲೆ ಪರಮಾತ್ಮನು ಮುನಿದಿರುವನೇ?

***

ವಿಜಾಪುರ ಜಿಲ್ಹೆಯಲ್ಲಿ ರೈತರಿಗೆ ಬಹಳ ಕಷ್ಟವಾಗಿದೆ. ಮುದ್ದೇಬಿಹಾಳ, ಬಾಗೇವಾಡಿ, ಬಾಗಲಕೋಟೆ, ಬಾದಾಮಿ, ವಿಜಾಪುರ ತಾಲೂಕುಗಳಲ್ಲಿ ರೈತರ ಕಷ್ಟ ಹೇಳಬಾರದಲ್ಲ. ಬೆಳೆ ಇಲ್ಲ. ಗೌಳಿಗರ ಉದ್ದಿಮೆ ನಾಮಶೇಷವಾಯಿತು. ದನಗಳಿಗೆ ಅಸ್ಥಿಪಂಜರ ಮಾತ್ರವಿದೆ. ಅವನ್ನು ಕಟುಕರಿಗೆ ಮಾರಿ ಹೊಟ್ಟೆ ಹೊರೆಕೊಳ್ಳುವ ಪ್ರಸಂಗ ಬಂದಿದೆ. ದಿನಾ ೧|| ಆಣೆಯ ಮೇಲೆ ಕೂಲಿ ಮಾಡುವ ಜನರಿದ್ದಾರೆ. ಆದರೆ ಕೂಲಿ ಕೊಡುವವರು ಇಲ್ಲ. ನೇಯ್ಗೆಯ ಉದ್ದಿಮೆಗೆ ಪ್ರೋತ್ಸಾಹವಿಲ್ಲ. ಆದರಿಂದ ರೈತರು ದೇಶಾಂತರ ಮಾಡುತ್ತಿದ್ದಾರೆ. ಹಲವರು ನಮ್ಮ ಜಿಲ್ಹೆಯ ಮುಂಡಗೋಡ ಪೇಟೆಗೆ ಬಂದಿರುತ್ತಾರೆಂದಾಗಿ ಶ್ರೀ| ಕೌಜಲಗಿ ಹಣಮಂತರಾಯರು ಪ್ರಕಟಿಸುತ್ತಾರೆ. ಈ ತೆರನ ಕಷ್ಟವಾದರೂ ಸರಕಾರಿ ತೀರ್ವೆ ವಸೂಲಿ ನಡೆದದೆ; ಸಾವಕಾರರ ಸಾಲದ ವಸೂಲಿ ನಡೆದದೆ; ಸಹಕಾರಿ ಸಂಘಗಳು ತಮ್ಮ ತಮ್ಮ ಹಣದ ವಸೂಲಿಯ ಬಗ್ಗೆ ಕ್ರಮ ನಡಿಸಿ ಹಲವು ಭೂಮಿಗಳನ್ನು ಪಡಕೊಂಡಿವೆ. ಹಲವು ಭೂಮಿಗಳು ತೀರ್ವೆಯ ಬಗ್ಗೆ ಸರಕಾರ ಜಪ್ತಾಗಿವೆ. ಇಂಥ ಪ್ರಸಕ್ತಿಯಲ್ಲಿ ರೈತರ ಕಷ್ಟವನ್ನು ನಿವಾರಿಸಲೋಸುಗ ಸರಕಾರವು ಕೂಡಲೆ ತೀರ್ವೆ ವಸೂಲಿಗೆ ತಡೆಹಾಕಿ, ಸಂಕಟಗ್ರಸ್ತರಿಗೆ ಸಹಾಯವಾಗುವಂತೆ ಸರಕಾರವು ಮಾರ್ಗರಚನೆ, ಬಾವಿ ತೆಗೆಯುವದು ಮೊದಲಾದ ಕಷ್ಟನಿವಾರಣ ಕಾರ್ಯಗಳನ್ನು ಕೈಕೊಂಡು ಉಪಕರಿಸಬೇಕಾಗಿ ನಲಗಲಿಯಲ್ಲಿ ಸೇರಿದ ರೈತರ ಪರಿಷತ್ತು ನಿರ್ಧರಿಸಿದೆ. ಎಲ್ಲಿ ನೋಡಿದಡಲ್ಲಿ ಕಷ್ಟವೇ ಹೊರತು ಸುಖವಿಲ್ಲ!

***

ದಬ್ಬಾಳಿಕೆಯ ಒಂದು ಮಾದರಿ! ಮಧ್ಯಪ್ರಾಂತದೊಳಗಿನ ಬಿಲಾಸಪುರದಲ್ಲಿ ಶ್ರೀ| ಶ್ರಾಂತಿಕುಮಾರ ಎಂಬ ನಿಸ್ವಾರ್ಥ ಕೊಂಗ್ರೆಸ ಕಾರ್ಯಕರ್ತರಿದ್ದಾರೆ. ಅವರಿಗೆ ರಾಮಾಯಣದ ಮೇಲೆ ಭಕ್ತಿ. ರಾಮಾಯಣವನ್ನು ತನ್ಮಯ ಚಿತ್ತದಿಂದ ಹಾಡುವದು, ಅದನ್ನು ಬೋಧಿಸುವದು ಅವರಿಗೊಂದು ವ್ಯಸನವಾಗಿದೆ. ಹೀಗೆ ರಾಮಾಯಣವನ್ನು ಹಾಡಿ ಬೋಧಿಸಿದ ಬಗ್ಗೆ ಬಿಲಾಸಪುರದ ಮ್ಯಾಜಿಸ್ಟ್ರೇಟರು ಅವರ ಮೇಲೆ ಕ್ರಿಮಿನಲ್ ಪ್ರೊಸೀಜರ ಕೋಡಿನ ೧೦೮ನೇ ಕಲಮಿನನ್ವಯ ರಾಜದ್ರೋಹ ಪ್ರಚಾರದ ಆರೋಪ ಹೊರಿಸಿ ಹಿಡತರಿಸಿದ್ದಾರೆ. ಇದೊಂದು ಹೊಸ ಮಾದರಿ!

***

ಈಗಿನ ಶಿಕ್ಷಣಕ್ರಮ ದೋಷಪೂರ್ಣವಿರುವದೆಂದೂ, ಅದನ್ನು ಪುನರ್ಘಟಿಸಬೇಕಾಗಿರುವದೆಂದೂ

THE AGRICULTURAL & INDUSTRIAL BANK LIMITED, COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್, ಕುಂದಾಪುರ.

ಕಾಯಂ ಠೇವಣಾತಿಗಳು.

3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ 3½ರಂತೆ,
6 ತಿಂಗಳಿಗೆ ... ... 4½ರಂತೆ,
12 ತಿಂಗಳಿಗೆ ... ... 5½ ,,
24 ತಿಂಗಳಿಗೆ ... ... 6 ,,
3 ವರ್ಷ ಯಾ ಹೆಚ್ಚಿನ ಅವಧಿಗೆ ... 6½ರಂತೆ

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ.

ಚಿನ್ನ ವ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ಪರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು, ಚಕ್ಕುಗಳು ವಸೂಲಿ ವಟಾಯಿಸಲ್ಪಡುವವು.

ಕರೆಂಟ, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟೀವ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಂದಾಪುರ.
ತಾ. 21—1—1935.

K. Vaman Shenai &
G. Balakrishna S. Nayak.
Managing Directors.

ಅನೇಕ ವಿದ್ಯಾಪ್ರಸಾರಕರು ನುಡಿಯುತ್ತಿದ್ದಾರೆ ಪುಣೆಯಲ್ಲಿ ಸದ್ಯಕ್ಕೆ ನವೀನ ಮರಾಠಿ ಶಾಲೆಯ ವಾರ್ಷಿಕ ಉತ್ಸವು ಸಮಾರಂಭವಾಯಿತು; ಆ ಸಮಯ ಬಾಬಾಸಾಹೇಬ ಇಚಲಕರಂಜೀಕರ ಸಂಸ್ಥಾನಿಕರು ನುಡಿದದ್ದೇನಂದರೆ :— "ನಾನು ಯುರೋಪ ಖಂಡಕ್ಕೆ ಹೋಗಿದ್ದೆ, ಅಲ್ಲಿ ವಿದ್ಯಾರ್ಥಿಗಳೊಳಗೆ ಧರ್ಮಜಾಗೃತಿಯಾಗುವಂತೆ ವಿಶೇಷ ಲಕ್ಷ್ಯ ಕೊಡುತ್ತಿದೆ. ಬೇರೆಬೇರೆ ಸಂಪ್ರದಾಯದವರು ಪ್ರತ್ಯೇಕ ಶಾಲೆಗಳನ್ನು ನಡಿಸುತ್ತಾರೆ ಆ ಆ ಸಂಪ್ರದಾಯದವರೇ ಆಯಾ ಶಾಲೆಗಳಿಗೆ ಹೋಗುತ್ತಾರೆ ಒಂದು ಸಂಪ್ರದಾಯದ ವಿದ್ಯಾರ್ಥಿಗಳು ಬೇರೆ ಸಂಪ್ರದಾಯದ ಶಾಲೆಗಳಿಗೆ ಹೋಗುವದಿಲ್ಲ ಚಿಕ್ಕ ಮಕ್ಕಳಿಗೆ ಮಮತೆಯಿಂದ ನಡಿಸಿಕೊಳ್ಳುತ್ತಾರೆ ಆದರಿಂದ ಶಿಕ್ಷಕರ ಮೇಲೆ ವಿದ್ಯಾರ್ಥಿಗಳಿಗೆ ಪೂಜ್ಯತೆಯುಂಟು ಮುಖ್ಯವಾಗಿ ಅಲ್ಲಿ ಯಾವದೊಂದು ಉದ್ದಿಮೆಯ ಧ್ಯೇಯ ಹಿಡಿದು, ಅದಕ್ಕೆ ತಕ್ಕದ್ದಾಗಿ ಶಿಕ್ಷಣ ಕೊಡುತ್ತಾರೆ ಇಲ್ಲಿ ಒಂದೇ ನೌಕರಿಯೇ ಧ್ಯೇಯವಾಗಿದೆ ಇದರಿಂದ ಕ್ಷೇಮವಿಲ್ಲ ಮನೆ ನಡಿಸಿಕೊಳ್ಳುವ ಯೋಜನೆಯಿದು. ಅತ್ತ ಕಡೆ ದೇಶಾಭಿಮಾನವನ್ನು ಕಲಿಸುತ್ತಾರೆ ಒಡಿಗ ಅಡಿಗೆಭಟ್ಟ ಮೊದಲಾದವರಿಗೆ ಶಿಕ್ಷಣ ಕೊಡುವ ಶಾಲೆಗಳವೆ ಯುರೋಪ ಖಂಡದಲ್ಲಿ ನಾನು ಬಹಳ ಕಡೆ ನೋಡಿದ್ದೇನೆ ಆದರೆ ಎಲ್ಲಿಯೂ ಮಧ್ಯಾಹ್ನ(?) ೧೧ರಿಂದ ೫ರ ತನಕ ಶಾಲೆಗಳಲ್ಲಿ ಎರಡು ಬಾರಿ ಶಾಲೆಗಳನ್ನು ನೆರಿಸಬೇಕು ಚಿಕ್ಕಂದಿನಲ್ಲಿ ನಾವು ನಾಲ್ಕು ಬಾರಿ ಊಟ ಮಾಡುತ್ತಿದ್ದೆವು, ಈಗ ಹುಡುಗರಿಗೆ ಬೆಳಗ್ಗೆ ಚಹ, ಬಿಸ್ಕಿಟ ತುಂಡು, ಎರಡು ಹೊತ್ತು ಊಟ, ಇಂಥ ಜೀವನ ಕ್ರಮದ ಮೇಲೆ ತಯಾರಾದ ಪದವೀಧರರು ಶೀಘ್ರವೇ ಸಾಯುತ್ತಾರೆ ೩೫ ವರ್ಷಗಳಾದ ಬಳಿಕ ನಮ್ಮತ್ತ ಕಡೆ ಜನರು ಮುದುಕರಾಗುತ್ತಾರೆ, ಅತ್ತ ಕಡೆ ೬೦ ವರ್ಷಗಳಾದ ಬಳಿಕ ಕಾರ್ಯ ಕೈಕೊಳ್ಳಲು ಪಾತ್ರತೆ ಬರುತ್ತದೆ ಶಾಲೆಗಳಲ್ಲಿ ಬಡ ವಿದ್ಯಾರ್ಥಿಗಳಿಗೆ ತಿಂಡಿ ಕೊಡುತ್ತಾರೆ. ಬರಿ ಹೊಟ್ಟೆಯ ಮೇಲೆ ಅಭ್ಯಾಸ ಮಾಡಗೊಡುವದಿಲ್ಲ. ಹುಡುಗರ ಕಡೆಯಿಂದ ಪಾಠಗಳನ್ನು ಹೇಳಿಸಿಕೊಳ್ಳಬೇಕು, ಪಾಠಾಂತರ ಮಾಡಿಸಿಕೊಳ್ಳಬೇಕು. ಪಾಠ ಹೇಳುವದರಿಂದ ಶಬ್ದೋಚ್ಚಾರ ಮಾಡಲು ನಾಲಿಗೆಗೆ ತಕ್ಕ ಶಿಸ್ತು ದೊರೆಯುತ್ತದೆ ಪಾಠಾಂತರದಿಂದ ಮಕ್ಕಳು ಸಮಯಸೂಚಕರಾಗುತ್ತಾರೆ ಈಗಿನ ವಿದ್ಯಾರ್ಥಿಗಳ ಹಸ್ತಾಕ್ಷರ ನೆಟ್ಟಗಿಲ್ಲ" ಇಚಲಕರಂಜಿಯ ಸಂಸ್ಥಾನಿಕರ ವಿಚಾರಗಳನ್ನು ಚಿಕ್ಕ ಮಕ್ಕಳ ತಾಯಿ-ತಂದೆಗಳೂ, ಸರಕಾರಿ ಅಧಿಕಾರಿಗಳೂ ವಿಚಾರ ಮಾಡತಕ್ಕ ವಿಷಯ ವಿದ್ಯಾರ್ಥಿಗಳ ದೇಹಸಂಪತ್ತು ಕುಗ್ಗಲು ಸುಧಾರಿಸಿದ ಜೀವನಕ್ರಮವೇ ಬಹುಮಟ್ಟಿಗೆ ಕಾರಣವಿದೆ

⁂

ನೌಕರಿಯ ಮಹಿಮೆಯ ಒಂದು ಉದಾಹರಣೆ ಪಂಜಾಬ ಪ್ರಾಂತದ ಜಲಂಧರ ಜಿಲ್ಹೆಯಲ್ಲಿ ಎರಡು ಪೋಲೀಸ ಪೇದೆಗಳ ಇಸಮು ಬೇಕಾಗಿದ್ದಿತು ಪೋಲೀಸ ಸಾಹೇಬರು ಜಾಹೀರಾತು ಕೊಟ್ಟರು ೩೦ ಅರ್ಜಿಗಳು ಸಾಹೇಬರ ಕಡೆ ಬಂದವು ಅವುಗಳಲ್ಲಿ ಬಿ.ಎ., ಎಮ್.ಎ. ಪಾಸಾದ ಪದವೀಧರರೂ ಇದ್ದರು. ಸಾಹೇಬರು ಎಲ್ಲ ಅರ್ಜಿದಾರರಿಗೂ ಕರೆಸಿದರು ಒಂದೇ ಹುಕುಮು. "ಎಲ್ಲರೂ ಓಡಬೇಕು ಮುಂದೆ ಓಡಿದವರಿಗೆ ಸ್ಥಳ" ಬಿ.ಎ., ಎಮ್.ಎ., ಅಂದರೆ ಖುರ್ಚಿಯ ಮೇಲೆ ಕೂತುಕೊಳ್ಳುವ ಇಸಮು ಓಡುವ ಶಕ್ತಿ ಅವರಿಗೆಲ್ಲಿ? ಹಿಂದೆ ಹಿಂದೆ ಬಿದ್ದರು ಗಟ್ಟಿಗರು, ವಿಶೇಷ ಕಲಿಯದಿದ್ದವರು ಮುಂದಕ್ಕೆ ಓಡಿದರು ಪೋಲೀಸ ಪೇದೆಯಾಗುವ ಯೋಗ್ಯತೆ ಸಹ ಈಗಿನ ರಾಜ್ಯಪದ್ಧತಿಯಲ್ಲಿ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯಗಳ ಪದವೀಧರರಿಗಿಲ್ಲವೆಂದು ಜಲಂಧರದೊಳಗಿನ ಪೋಲೀಸ ಸುಪರಿಂಟೆಂಡೆಂಟರ ಓಡುವ ಶರ್ಯತ್ತಿನ ಪರೀಕ್ಷೆ ನಡಿಸಿ ಸಿದ್ಧ ಮಾಡಿದರಲ್ಲವೇ?

⁂

ಗುಂಟೂರ ಜಿಲ್ಹೆಯೊಳಗಿನ ಬತ್ತ ಮುರಿಯುವ ಸಂಘದ ಮುಖ್ಯಸ್ಥರಾದ ಶ್ರೀ| ಸೀತಾರಾಮ ಶಾಸ್ತ್ರಿಗಳವರು ಬೂತ ಅಕ್ಕಿ-ಗಿರಣಿ ಅಕ್ಕಿ ಇವುಗಳ ಗುಣದೋಷಗಳನ್ನು ವರ್ಣಿಸಿದ್ದಾರೆ ಅಮ್ಮವ್ವಾ ಎಂಬ ಹೆಂಗಸಿನ ಕಡೆಯಿಂದ ೫೭ ತೊಲೆ(?) ಬತ್ತವನ್ನು ಅವರು ಕುಟ್ಟಿಸಿದರು(?) ಇದಕ್ಕೆ ೫ ತಾಸು ತಗಲಿತು ಕೂಲಿ ೩-೯ ಅಷ್ಟಕ್ಕೆ ೧೭ ತೊಲೆ(?) [illegible] ಒಂದು ಆಣೆ ಸುಮಾರು ಇಷ್ಟು ಶಿಕ್ಷಿತ ಅಕ್ಕಿಯ ತೂಕ ೫೭ ಕ್ಕಿ ರತ್ತಲು, ನುಚ್ಚಿನ ತೂಕ ೬ ಕ್ಕಿ ರತ್ತಲು ಅಂತು ೬೩ ಕ್ಕಿ ಅಂದರೆ ೫೦ ಕ್ಕಿ ರತ್ತಲು ಅಕ್ಕಿ ಆಯಿತು ಗಿರಣಿಗೆ ಕೊಟ್ಟ ಬತ್ತದಿಂದ ೧೭ ಕ್ಕಿ ಅಂತೆ (೫೦ ಕ್ಕಿ ರತ್ತಲು) ಪಾಲೀಸ ಅಕ್ಕಿ, ೫ ಕ್ಕಿ ಅಂತೆ (೫ ಕ್ಕಿ ರತ್ತಲು) ನುಚ್ಚು ಅಂದರೆ ೧೭ ಕ್ಕಿ ಅಂತೆ (೫೫ ಕ್ಕಿ ರತ್ತಲು) ಅಕ್ಕಿ ಸಿಕ್ಕಿತು [illegible] ಅಂದರೆ ೧೫ ಕ್ಕಿ ಬರಲೇ ಇಲ್ಲ. ಪಾಲೀಸ ಅಕ್ಕಿ ತೂಕ ನವಂಬರಕ್ಕೆ ಬೇಯಿಸಿತು. ಅನ್ನ ೩೦ ಕ್ಕಿ ರತ್ತಲು ಆಯಿತು ಈ ಅನ್ನವನ್ನು ೧೮ ಜನ ಒಬ್ಬ ಹುಡುಗನಿಗೆ ಬಡಿಸಿತು ಇಷ್ಟಕ್ಕಾಗಿ ಸಾಲುವಷ್ಟು ಅನ್ನ ಉಳಿಯಿತು ಅಷ್ಟೇ ಅದರ ತೂಕವು ಮುರಿದ ಅಕ್ಕಿ ಮಾರನೇ ದಿನ ಬೇಯಿಸಿತು. ಈ ಅಕ್ಕಿಯ ತೂಕ ೧೧ ಕ್ಕಿ ರತ್ತಲು. ಅನ್ನ ೩೩ ಕ್ಕಿ ರತ್ತಲು ಆಯಿತು ೨೦ ಮಂದಿಗಳೂ, ಇಬ್ಬರು ಹುಡುಗರೂ ಹೊಟ್ಟೆ ತುಂಬ ಉಂಡರು, ಇನ್ನೊಬ್ಬನಿಗೆ ಸಾಲುವಷ್ಟು ಅನ್ನವಿತ್ತು ಈ ಲೆಕ್ಕದಂತೆ ಗಿರಣಿ ಅಕ್ಕಿಯ ಅನ್ನ ೩೦|| ಜನರಿಗೆ, ಮುರಿದ ಅಕ್ಕಿಯ ಅನ್ನ ೨೩ ಜನರಿಗೆ ಸಾಕಾಯಿತು. ಇಷ್ಟು ಹುಡುಗರು ಒಬ್ಬನ ಆಹಾರ ಉಣ್ಣುತ್ತಾರೆಂದು ತಿಳಿದರೂ ಪ್ರತಿ ೩೦ ಜನರಿಗೆ ೭|| ಇಸಮುನಂತೆ ಅಂತರ ಅಂದರೆ ಶೇಕಡಾ ೩೩ ರಂತೆ ಪ್ರಮಾಣ ಬಿತ್ತು ಗಿರಣಿ ಅಕ್ಕಿಯ ಅನ್ನ ಬೆಚ್ಚಿಂದರೆ ೩ ೪ ತಾಸು ಉಳಿಯುತ್ತದೆ ಮುರಿದ ಅಕ್ಕಿಯ ಅನ್ನ ೨೪ ತಾಸು ಉಳಿಯುತ್ತದೆ ಇನ್ನೊಂದು ಮಾತು, ಮುರಿದ ಅಕ್ಕಿಯ ಅನ್ನಕ್ಕೆ ಹೆಚ್ಚಿನ ರುಚಿ, ಜನರು ಹೆಚ್ಚಿನ ಅನ್ನ ಉಂಡರು

⁂

ಸಂಸ್ಥಾನಿಕರಿಗೆ ಬಹುಶಃ ಕಾಂಗ್ರೆಸಿನ ದ್ವೇಷ ಹುಟ್ಟಲಾರಂಭಿಸಿದೆ ಸಾಂಗಲಿ ಸಂಸ್ಥಾನಿಕರು ಸ್ವಾತಂತ್ರ್ಯ ದಿನೋತ್ಸವವನ್ನು ಜರಗಿಸಬಾರದಾಗಿ ಪ್ರತಿಬಂಧಕ ಹುಕುಮನ್ನು ಹೊರಡಿಸಿದ್ದಾರೆ ಮೈಸೂರ ದರಬಾರರು ರಾಷ್ಟ್ರಧ್ವಜವನ್ನು ಮೈಸೂರಿನ ೫ ಮೈಲು ಪ್ರಾಕಾರದಲ್ಲಿ ಹಾರಿಸಬಾರದಾಗಿ ಹುಕುಮು ಮಾಡಿದೆ ರಾಷ್ಟ್ರಧ್ವಜವನ್ನು ಹಾರಿಸುವದರಿಂದ ಮೈಸೂರ ಸರಕಾರದ ಸಾರ್ವಭೌಮ ಅಧಿಕಾರಕ್ಕೆ ಭಂಗ ಬರುತ್ತದಾಗಿ ಮೈಸೂರ ದರಬಾರದ ಅಂಬೋಣ ಈ ವಿಚಾರ ನೋಡಿದರೆ ಸಂಸ್ಥಾನದೊಳಗಿನ ಅಧಿಕಾರಿಗಳು ವಿವೇಕಶೂನ್ಯರಾದವರೆಂದು ಹೇಳಬೇಕಾಗಿದೆ

⁂

ನಿಜಾಮ ಸರಕಾರಕ್ಕೊಂದು ಅಭಿನಂದನೆ. ನಿಜಾಮ ರಾಜ್ಯದಲ್ಲಿ ಮದ್ಯದಂಗಡಿಗಳ ಮುಂದೆ ಕಾವಲು ಮಾಡಲು ಪ್ರತಿಬಂಧವಿಲ್ಲ ಸರಕಾರಕ್ಕೆ ಕೆಲಮಟ್ಟಿಗೆ ಈ ಪ್ರಕಾರ ಸಮ್ಮತವಾದದ್ದಿದೆ, ಅದರಿಂದ ತಮ್ಮ ಉತ್ಪನ್ನ ಹೇರಳ ಕುಗ್ಗಿತೆಂದು ಅಂಗಡಿಕಾರರು ಮೊರೆಯಿಡುತ್ತಿದ್ದಾಗ್ಯೂ ನಿಜಾಮ ಸರಕಾರವು ಆ ಕಡೆ ಲಕ್ಷ್ಯಗೊಡುವದಿಲ್ಲ ಶೇಕಡಾ ೯೦ರಷ್ಟು ಗಿರಾಕಿ ಕುಗ್ಗಿದೆ ಸರಕಾರಕ್ಕೆ ನಷ್ಟವಾದಾಗ್ಯೂ ಅದನ್ನು ಸಹಿಸಲು ತಯಾರಾಗಿದೆ ಮಾಂಡಲಿಕ ಸರಕಾರದ ಧೋರಣವನ್ನು ಸಾರ್ವಭೌಮ ಹಿಂದುಸ್ಥಾನ ಸರಕಾರವು ಅನುಸರಿಸಬಹುದಾಗಿದೆ ⁂

ಗುಜರಾಥ ದೇಶದಲ್ಲಿ ಶೀತವಾಯುಪ್ರವಾಹದಿಂದ ಕೋಟ್ಯಾವಧಿ ರೂಪಾಯಿಗಳ ನಷ್ಟ ಅತ್ತ ಕಡೆ ಸರಕಾರದ ಪರವಾಗಿ ಸತ್ಯಸ್ಥಿತಿಯನ್ನು ಕಣ್ಣಾರೆ ಕಾಣಲು ದಿವಾಣ ಬಹದ್ದೂರ ಕೂಪರರವರು ಹೋಗಿರುವರಂತೆ ಗುಜರಾಥ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಚೌಕಶಿ ಮಾಡಿ ತ್ವರ್ಯವೇ ಕಷ್ಟನಿವಾರಣೆಯ ಉಪಾಯ ಕೈಕೊಳ್ಳಬೇಕಾಗಿ ಅಭಿಪ್ರಾಯಪಟ್ಟಿದ್ದಾರೆ ಭೂಕಂದಾಯವನ್ನು ಸೂಟ ಬಿಡಬೇಕು, ಅಗ್ಗದರದಿಂದ ಕಾಳುಕಡಿಗಳ ಪೂರೈಕೆಯಾಗುವಂತೆ ಸರ್ಕಾರದ ಅಂಗಡಿಗಳನ್ನಿಡಬೇಕು, ಕಾರ್ಪೊರೇಶನ(?) ಕೂಲಿ ಸಿಗುವಂತೆ ಕೆಲಸ ಪೂರೈಸಬೇಕು ಅಹಮದಾಬಾದದಲ್ಲಿ ಮಾಮಲೇದಾರರ ಸಭೆ ಆಯಿತು ಮಾಮಲೇದಾರರು ಭೂಕಂದಾಯವನ್ನು ಸೂಟ ಬಿಡಬೇಕಾಗಿ ಅಭಿಪ್ರಾಯಪಟ್ಟಿದ್ದರಂತೆ, ಎಲ್ಲಿ ನೋಡಿದಡಲ್ಲಿ ಕಷ್ಟವೇ! ಹೇಗೆ ನಿವಾರಣೆಯಾಗಿ ಸುಖವಾಗುವದೋ ಪರಮಾತ್ಮನಿಗೇ ಗೊತ್ತು!

ಮೀನುಕಣ್ಣಿಗೆ (Corn) ಮದ್ದು.

ಹತ್ತು ಪೈಸೆ(?) ಸ್ಟ್ಯಾಂಪು ಕಳಿಸಿದರೆ ಕಳಿಸುತ್ತೇವೆ ವ್ಹಿ. ಪಿ. ಯಿಂದ ಖರ್ಚು ಹೆಚ್ಚು.

ಕಲಭಾಗ ಗಂಗಾಧರ ಎಂಡ್ ಸನ್ಸ,
ಕುಮಟಾ (ಕಾರವಾರ)

"ಗೋಲ್ಡಸ್ಟಾರ" ಬ್ರೆಂಡ ಚಹಾಗಳು (ಲೀಫ ಮತ್ತು ಪಾವಡರ)

ನಮ್ಮಲ್ಲಿ ರೋಖ ಮತ್ತು ಕಿಫಾಯತಶೀರ ವಿಕ್ರಯಿಸಲ್ಪಡುತ್ತವೆ. ಅತ್ಯುನ್ನತ ಪ್ರದೇಶದೊಳಗಿನ ಚಹಾ ಮಾಳೆಯಲ್ಲಿ ಈ ಚಹಾವು ಶಾಸ್ತ್ರೀಯವಾಗಿ ತಯಾರಿಸಲ್ಪಡುವದರಿಂದ ಸಿಫೀಕ್ ಮತ್ತು ಮಧುರವಿರುತ್ತದೆ. ನಮೂನೆ ವ ದರಪಾರ ಪತ್ರಿಕೆ ಕುರಿತು ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ. ಅಲ್ಲಲ್ಲಿ ವಿಕ್ರೇತರು ಬೇಕು!

ಹೊನ್ನಾವರ,
27—1—1935.

ದಿ ನ್ಯೂ ಎಂಪೋರಿಯಮ್,
ಹೊನ್ನಾವರ. (ಕೆನರಾ)

ಯುದ್ಧ ಬಾಗಿಲಿಗೆ ಬಂತೇ?

[ನಿರೀಕ್ಷಕನು ಬರೆದುದು]

ಮೊಂಗೋಲಿಯಾ ಪ್ರಾಂತದಲ್ಲಿ ಸೀಮೆಯ ನಿರ್ಣಯದ ಕುರಿತು ಜಪಾನಿಯರು ನಡಿಸಿದ ಬಲಾತ್ಕಾರವನ್ನು ಪರಾಂಬರಿಸುವಾಗ, ರುಶ್ಯರಿಗೂ ಜಪಾನಿಯರಿಗೂ ತಿಕ್ಕಾಟ ಬೀಳಬಹುದೆಂದು ನಾ ಸೂಚಿಸಿದ್ದೆ. ಮೊಂಗೋಲಿಯಾ ಪ್ರಾಂತದಲ್ಲಿ ಒಂದೆಡೆ ಚೀನಿಯರು, ಮತ್ತೊಂದೆಡೆ ರುಶ್ಯರು, ಇನ್ನೊಂದೆಡೆ ಜಪಾನಿಯರು ಎಳೆಯುತ್ತಿದ್ದಾರೆ. ಚೀನಿಯರು ದುರ್ಬಲರು. ಚೀನಿಯರ ಏಕರಾಷ್ಟ್ರೀಯ ಭಾವನೆಯೇ ಚೀನಿಯರ ಬಂಡುವಲು. ಆದರೆ ರುಶ್ಯರಿಗಾಗಲಿ, ಜಪಾನಿಯರಿಗಾಗಲಿ ಅಂಥ ಕುಳಗಳಿಲ್ಲ, ಪ್ರಚಂಡ ಪ್ರಸ್ಥಗಳಿವು. ಸೀಮೆ ನಿರ್ಣಯದ ವಿವಾದವು ಬಗೆಹರಿಯಿತೆಂಬ ಭಾವನೆಯಾಗುವಷ್ಟರಲ್ಲಿ, ಜಪಾನಿಯರು ರುಶ್ಯರ ಹಿತಸಂಬಂಧವಿದ್ದ ಮೊಂಗೋಲಿಯಾ ಪ್ರದೇಶದ ಕಡೆ ಸೈನ್ಯ ನೆರೆಸುತ್ತಾರೆಂಬ ವಾರ್ತೆ ಡೇರಿನ್ ಬಂದರದಿಂದ ಪ್ರಕಟಗೊಂಡಿತು. ಜಪಾನದ ಮಾಂಡಲಿಕ ರಾಜ್ಯವಾದ ಮಂಚುಕೋ ಸೈನ್ಯದವರ ಮೇಲೆ ರುಶ್ಯರು ಸಾಗಿಹೋದರಂತೆ. ಅದರಿಂದ ಜಪಾನಿಯರು ಸೈನ್ಯ ನೆರೆಸುವ ಪ್ರಸಂಗಬಂತಂತೆ ಇದೇನೆಂದು ವಿಚಾರ ಮಾಡುತ್ತಿರುವಷ್ಟರಲ್ಲಿ ಕಳೆದ ಬುಧವಾರ ಜಪಾನಿಯರು ಬೋರ್ನಾರ್ ಸರೋವರದ ... ಸಾಗಿಹೋಗಿ ಹಾಲಕಾಯಿಯೋ ಪ್ರದೇಶವನ್ನು ಕೈವಶಮಾಡಿಕೊಂಡರೆಂಬ ವಾರ್ತೆ ಸಿಂಕಿಂ ಪಟ್ಟಣದಿಂದಲೂ ಟೋಕಿಯೋ ಪಟ್ಟಣದಿಂದಲೂ ಪ್ರಕಟವಾ ಒಂದೇ ರಾತ್ರಿ ೩ ತಾಸುಗಳ ತನಕ ಮೊಂಗೋಲರಿಗೂ ಜಪಾನಿಯರಿಗೂ ಮೂಂಪರ್ತಿ ಘೋರ ಕದನವಾಯಿತಂತೆ. ಅನೇಕರು ರಣಭೂಮಿಯಲ್ಲಿ ಮಡಿದು ಸ್ವರ್ಗಸ್ಥರಾದರು. ಈ ವಾರ್ತೆ ಚಿಂತಾಜನಕವಿದೆ. ಜಪಾನಿಯರು ದಂಡೆತ್ತಿಹೋದ ಮೊಂಗೋಲಿಯಾ ಪ್ರದೇಶವು ರುಶ್ಯರ ಅಧಿಕಾರಿಯೊಳಗಿನದು. ೧೯೨೪ನೇ ಇಸ್ವಿಯಲ್ಲಿ 'ಮೊಂಗೋಲಿಯನ್ ಪೀಪಲ್ಸ ರಿಪಬ್ಲಿಕನ್ ಗವರ್ನಮೆಂಟ' ಯಾನೆ ರಾಜ್ಯಕ್ರಾಂತಿ ಪಕ್ಷವು ಅಧಿಕಾರಾರೂಢವಾಗಿ ಈ ಪ್ರದೇಶವು ರುಶ್ಯದ ಅಧೀನಕ್ಕೆ ಒಳಪಟ್ಟಿದೆ. ಪ್ರತ್ಯಕ್ಷ ಸರಕಾರವು ಮೊಂಗೋಲರದಾದಾಗ್ಯೂ ಸಾರುಪತ್ಯವೆಲ್ಲ ರುಶ್ಯರದೇ. ವ್ಯಾಪಾರವೆಲ್ಲ ರುಶ್ಯರ ಸ್ವಾಧೀನದಲ್ಲಿದೆ. ಇಲ್ಲಿಯ ಸರಕಾರಕ್ಕೂ ರುಶ್ಯರಿಗೂ ಉರ್ಗಾ-ಚಿತಾ ಪಟ್ಟಣಗಳೊಳಗೆ ಕೂಗಿಬಂದಿ ರಚಿಸುವ ತಹನಾಮೆಯಾಗಿದೆ. ಈ ಮೊಂಗೋಲಿಯಾ ಪ್ರದೇಶವನ್ನು ರುಶ್ಯರು ಕಾಪಾಡುವದರಲ್ಲಿ ಒಂದು ಮರ್ಮವಿದೆ. ರುಶ್ಯರ ಮುಖ್ಯ ಬಂದರ ವ್ಲಾಡಿವೊಸ್ಟಾಕ್. ಇಲ್ಲಿ ಯಾವತ್ತೂ ಯುದ್ಧಸಾಮುಗ್ರಿ ಸಿದ್ಧವಿದೆ. ಈ ಬಂದರಕ್ಕೂ ರಶಿಯಾ ದೇಶಕ್ಕೂ ಅಪ್ರತಿಹತವಾದ ದಾರಿ ಅವಶ್ಯವಿದೆ. ಈಗಿನ ವಿವಾದ ಭೂಮಿಯಾದ ಮೊಂಗೋಲಿಯಾ ದೇಶವು ಜಪಾನಿಯರ ಹಸ್ತಗತವಾದರೆ, ವ್ಲಾಡಿವೊಸ್ಟಾಕ್ ಬಂದರಕ್ಕೂ ರಶಿಯಾ ದೇಶಕ್ಕೂ ಇರುವ ದಾರಿ ಕಟ್ಟಾದಂತೆಯೇ. ವ್ಲಾಡಿವೊಸ್ಟಾಕ್ ಬಂದರ ಹೋದರೆ, ರಶಿಯಾ ದೇಶದ ಏಶಿಯಾ ಖಂಡದೊಳಗಿನ ಪ್ರಾಬಲ್ಯವೆಲ್ಲ ನಷ್ಟಪ್ರಾಯವಾಯಿತು! ಆದರಿಂದ ರುಶ್ಯರು ಈ ಯುದ್ಧದಲ್ಲಿ ಬೀಳುವರೆಂದು, ಬೀಳಬೇಕಾಯಿತೆಂದು ನಾನು ಹೇಳುವದನವಶ್ಯಕ.

ರುಶ್ಯರೂ ಜಪಾನಿಯರೂ ಕಾದಾಡಲಾರಂಭಿಸಿದರೆ ಮತ್ತ್ಯಾರ್ಯಾರು ಈ ರಣಯಜ್ಞದಲ್ಲಿ ಬೀಳುವರೆಂದು ಹೇಳುವದು ಕಠಿಣ. ಬ್ರಿಟಿಶರು ಈಗಾಗಲೇ ದಿಗಿಲು ಬಿದ್ದಿದ್ದಾರೆ. ಪಾರ್ಲಿಮೆಂಟಿನಲ್ಲಿ ಗುರುವಾರ ಪ್ರಶ್ನೋತ್ತರಗಳಾದವು. ಆ ಕಾಲದಲ್ಲಿ ಬುಧವಾರದ ವಾರ್ತೆ ಅಲ್ಲಿ ಗೊತ್ತಿದ್ದಿಲ್ಲ. ಸ್ಥಳಿಕ ವಿವಾದವೆಂದು ಪರರಾಷ್ಟ್ರೀಯ ಪ್ರಧಾನರಾದ ಸರ್ ಜ್ಹಾನ್ ಸ್ಯಾಮನ್‌ರು ಸಭಾಸದರಿಗೆ ತಿಳಿಸಿ, ಬ್ರಿಟಿಶ ಸರಕಾರಕ್ಕೆ ಸಂಬಂಧವಿಲ್ಲೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಆ ಅಭಿಪ್ರಾಯದಿಂದ ನನಗೆ ಏನೂ ಸಮಾಧಾನವಾಗಲೊಲ್ಲದು. ಸ್ಯಾಮನ್‌ರು ಇದ್ದ ಸ್ಥಿತಿಯನ್ನು ಇದ್ದಕ್ಕಿದ್ದ ಹಾಗೆ ಪಾರ್ಲಿಮೆಂಟಿಗೆ ಅರುಹಲಿಲ್ಲವಾಗಿ ನನ್ನ ಆರೋಪ. ಸಿಂಗಾಪುರದಲ್ಲಿ ಇನ್ನು ಬ್ರಿಟಿಶ ಸರಕಾರವು ಭೂಮಿ ಪಡೆದು ಬಂದರವನ್ನು ರಕ್ಷಿಸುವ ಯೋಜನೆಗಳನ್ನು ಕೈಕೊಳ್ಳುತ್ತಿದೆ. ಚೀನ-ತುರ್ಕಸ್ಥಾನದ ಸೀಮೆಯ ಪ್ರದೇಶದಲ್ಲಿ ಗಿಲಗಿಟ ಎಂಬ ಪಟ್ಟಣವಿದೆ. ಈ ಪಟ್ಟಣ ಕಾಶ್ಮೀರ ಮಹಾರಾಜರದು. ಇದರ ಕೆಲ ಭಾಗವನ್ನು ಹಿಂದುಸ್ಥಾನ ಸರಕಾರದ ಸೈನ್ಯ ಇಲಾಖೆಯವರು ಪಡೆದು ಅಲ್ಲಿ ಸೈನ್ಯ ನೆರೆಸುವ ಯೋಜನೆ ಮಾಡಿರುತ್ತಾರೆ. ಜಪಾನಕ್ಕೆ ಎದುರಾಗುವದಕ್ಕಾಗಿಯೇ ಈ ಮುಂಜಾಗ್ರತೆ. ಮಂಚೂರಿಯಾ ದೇಶದಿಂದ ಜಪಾನವು ಚೀನ, ತುರ್ಕಸ್ಥಾನದ ಕಡೆ ದಂಡೆತ್ತಿ ಬರಬಾರದೆಂದು ಹಿಂದುಸ್ಥಾನದ ರಕ್ಷಣೆಗಾಗಿ ಈ ಮುಂಜಾಗ್ರತೆ ಕೈಕೊಳ್ಳಲಾಗಿದೆ.

ಪೇಶಾವರದೊಳಗೆ ಇದೇ ತಿಂಗಳಲ್ಲಿ ರೇಡಿಯೋ ಯಾನೆ ವಾಯುವಾಹಕ ಯಂತ್ರ ಠಾಣ್ಯ ಸ್ಥಾಪನೆಯ ಸಮಾರಂಭವನ್ನು ಸರ್ವಾಧಿಪತಿಗಳು ಜರುಗಿಸುವವರಿದ್ದಾರೆ. ಗ್ರಾಮ-ಗ್ರಾಮಗಳಲ್ಲಿ ಈ ಯಂತ್ರಗಳನ್ನಿಟ್ಟು ಪೇಶಾವರದಿಂದ ರಾಜಸಂದೇಶ ತಿಳಿಸುವ ವ್ಯವಸ್ಥೆಯಾಗುವದು. ಗ್ರಾಮೋದ್ಧಾರಕ್ಕಾಗಿಯೇ

ಮುಂಬಯಿ ಸ್ವದೇಶಿ ವಸ್ತುಪ್ರದರ್ಶನದಲ್ಲಿ ಉಚ್ಚ ತರಗತಿಯ ಪಾರಿತೋಷಕ ಪಡೆದ,



ವೆಜಿಟೆಬಲ್ ಸೋಪ ವರ್ಕ್ಸ, ಕಲ್ಲಿಕೋಟೆ.

ಡಿಸ್ಟ್ರಿಬ್ಯುಟರರು:— ಬಸ್ತಿಹಿತ್ತಲ ಮಹಮೂದ ಸಾಹೇಬ, ಕುಮಟಾ. (ಉ ಕನ್ನಡ.)

ಕಾನಡಾವೃತ್ತ.

೨೩ ಭಾವ ಸಂ। ಮಾಘ ಶು। ೧೭, ಸೋಮವಾರ

ಸಾಲವೇ ಶೂಲ.

ಋಣ-ವಿಮೋಚನೆಯ ಚರ್ಚೆ

ಸಾಲದಲ್ಲಿ ಮುಳುಗಿದ ಬಡ ಪ್ರಜೆಗಳನ್ನು ಸಾಲದಿಂದ ಬಿಡುಗಡೆ ಮಾಡಿ ಕಾಯುವದು ರಾಜನ ಕರ್ತವ್ಯ. ಯಾವತ್ತು ಸಂಕಷ್ಟಗಳಿಂದ ಪ್ರಜೆಗಳನ್ನು ರಕ್ಷಿಸಲೋಸುಗ ರಾಜ ಸಂಸ್ಥೆಯು ಏರ್ಪಟ್ಟಿತು. ಆದರಿಂದ ಋಣ-ವಿಮೋಚನೆಯ ಕಾರ್ಯವನ್ನಾದರೂ ರಾಜನು ಕೈಕೊಳ್ಳುವದು ಯೋಗ್ಯ. ಈ ಕರ್ತವ್ಯವನ್ನು ನೆನಿಸಿ ಪಂಜಾಬ, ಬಂಗಾಲ, ಮಧ್ಯಪ್ರಾಂತ ಮೊದಲಾದ ಸರಕಾರಗಳು ಋಣ ವಿಮೋಚನೆಯ ಯೋಜನೆಯನ್ನು ಕೈಕೊಳ್ಳಲಾರಂಭಿಸಿವೆ. ಪಂಜಾಬ ಪ್ರಾಂತದಲ್ಲಿ ಮನ್ನಿಸಲಾದ ಕಾಯಿದೆಯಿಂದ ಸಾಲಗಾರರಿಗೂ ಸಾವಕಾರರಿಗೂ ಶಾಶ್ವತವಾದ ಹಿತವುಂಟಾಗುವ ಭೀತಿಯುಂಟಾಗಿದೆ. ಸಾವಕಾರರ ಸಾಲವನ್ನು ಮುಳುಗಿಸುವ ಕಾಯಿದೆಯು ಇಂಥ ಕಾಯಿದೆಗಳಿಂದ ಕ್ಷೇಮವಾಗಲಾರದು. ಕಳೆದ ವಾರ ಮಧ್ಯಪ್ರಾಂತದ ಕ್ಯಾಬಿನೆಟ್ ಕೌನ್ಸಿಲಿನಲ್ಲಿ ಸಾಲಗಾರರ ಕಷ್ಟನಿವಾರಣೆಗಾಗಿ ೩ ವರುಷಗಳ ತನಕ ಸಾವಕಾರರು ವಸೂಲಿಯ ಕ್ರಮಕ್ಕೆ ತಡೆಹಾಕಬೇಕೆಂಬ ಕಾಯಿದೆ ಸೂಚಿಸಲಾಗಿದೆ. ಈ ಕುರಿತು ಜೋರ ಚರ್ಚೆ ನಡೆದಿದೆ. ಬಂಗಾಲ ಪ್ರಾಂತಿಕ ಸರಕಾರವು ಸವಿಸ್ತರ ಕಾಯಿದೆಯನ್ನು ಸೂಚಿಸಲಿಕ್ಕಿದೆ. ಆ ಪ್ರಾಂತದೊಳಗೆ ೯೭ ಕೋಟಿ ರೂಪಾಯಿ ಸಾಲವಿದೆ. ಅಂತು ೫೦ ಲಕ್ಷ ಮನೆತನಗಳಲ್ಲಿ ೧೧॥ ಲಕ್ಷ ಮನೆಗಳಿಗೆ ಸಾಲವಿಲ್ಲ. ಉಳಿದ ೩೮॥ ಲಕ್ಷ ಮನೆಗಳು ಸಾಲಗಾರ ಕುಟುಂಬಗಳು. ಇವರಲ್ಲಿ ೨೧॥ ಲಕ್ಷ ಮನೆಯವರಿಗೆ ೨೩ ಕೋಟಿ ರೂಪಾಯಿ ಸಾಲ, ಸರಾಸರಿ ೨ ವರ್ಷದ ಉತ್ಪನ್ನ ಸಾಲವೆಂದು ಹೇಳಬಹುದು. ೮। ಲಕ್ಷ ಮನೆಯವರಿಗೆ ೨೩ ಕೋಟಿ ರೂಪಾಯಿ ಸಾಲ ಸರಾಸರಿ ೪ ವರ್ಷದ ಉತ್ಪನ್ನ ಸಾಲ ತೀರಿಸಲು ಬೇಕು. ಉಳಿದ ೮॥। ಲಕ್ಷ ಮನೆಯವರು ಸಾಲದಲ್ಲಿ ಮುಳುಗಿದ್ದಾರೆ. ಅವರಿಂದ ಸಾಲ ತೀರಿಸಲಸಾಧ್ಯ. ಬಂಗಾಲ ಸರಕಾರವು ಚೌಕಶಿ ಮಂಡಳ ನೇಮಿಸಿ ಸಂಗ್ರಹಿಸಿದ ಮಾಹಿತಿಯಿಂದ ಮುಂಬಯಿ ಸರಕಾರವು ಭೂ-ಭದ್ರತೆಯ ಮಂಡಳದ ವಿದ್ಯಮಾನ ಸಂಗ್ರಹಿಸಿದ ಮಾಹಿತಿಯನ್ನು ನಾವು ಈ ಹಿಂದೆ ಸಂಕ್ಷಿಪ್ತವಾಗಿ ಪ್ರಕಾಶಿಸಿದ್ದೇವೆ. ಪ್ರಾಂತಿಕ ಸರಕಾರಗಳು ಇತ್ತ ತಮ್ಮ ಕರ್ತವ್ಯಕ್ಕೆ ಎಚ್ಚತ್ತಿವೆ. ಇದೊಂದು ಶುಭ ಸೂಚನೆ.

ಬಂಗಾಲ ಸರಕಾರದ ಚೌಕಶಿ ಮಂಡಳವಾಗಲಿ, ನಮ್ಮ ಮುಂಬಯಿ ಸರಕಾರದ ಚೌಕಶಿ ಮಂಡಳವಾಗಲಿ ಎಲ್ಲರೂ ಹೇಳುವ ಮಾತು ಒಂದೇ. ಬೇಸಾಯಗಾರರ ಜಮಾ ಖರ್ಚು ಹೊಂದಿಕೊಳ್ಳುವದಿಲ್ಲ. ಆಯಕ್ಕೆ ಮಿಕ್ಕಿ ವ್ಯಯವಾಗುತ್ತದೆ. ಬೇಸಾಯ ಖರ್ಚಿಗೆ ತಕ್ಕಷ್ಟು ಹುಟ್ಟುವಳಿಯಾಗುವದಿಲ್ಲ. ಹುಟ್ಟಿದ ಹುಟ್ಟುವಳಿಗೆ ತಕ್ಕಷ್ಟು ದರ ಸಿಗುವದಿಲ್ಲ. ಆದರಿಂದ ಬೇಸಾಯಗಾರರಿಗೆ ಸಾಲ ತೀರಿಸುವದು ಅಶಕ್ಯವಾಗಿದೆ. ಬೇಸಾಯಗಾರರ ಪತ್ತು ಲೋಕದಲ್ಲಿ ಕುಗ್ಗಿದೆ. ಬೇಸಾಯಗಾರರಿಗೆ ಸಾಲ ಕೊಡಲು ಇತ್ತ ಯಾರೂ ಒಪ್ಪುವದಿಲ್ಲ. ಕೊಟ್ಟ ಸಾಲವನ್ನು ತಿರುಗಿ ಪಡಕೊಳ್ಳುವ ಹಂಚಿಕೆಯನ್ನೇ ಸಾವಕಾರರೆಲ್ಲರೂ ಮಾಡಲಾರಂಭಿಸಿದ್ದಾರೆ. ಬಡ್ಡಿಯ ಮಾತು ಒತ್ತಟ್ಟಿಗಿರಲಿ ಅಸಲು ಮೊಬಲಗು ಸುಸೂತ್ರವಾಗಿ ಸಿಕ್ಕರೆ ಭಾಗ್ಯವೆಂತ ಬಗೆಯುವ ಹಂಬಲದಲ್ಲಿ ಸಾವಕಾರರೂ ಇದ್ದಾರೆ. ಬಂಗಾಲ ಪ್ರಾಂತದಲ್ಲಿ ದಿವಾಣಿ ಕೋರ್ಟುಗಳ ವಿದ್ಯಮಾನ ನಡಿಸಿದ ವಸೂಲಿಯ ಕ್ರಮದಿಂದ ಶೇಕಡಾ ೧೦ರಷ್ಟು ಜನರ ಕಡೆಯಿಂದ ಹಣ ವಸೂಲ ಬಂತೆಂದು ಚೌಕಶಿ ಮಂಡಳದ ಅಭಿಪ್ರಾಯ. ಆದರಿಂದ ಸಾವಕಾರರ ಪಹ ಸಂಕಟದಲ್ಲಿ ಸಿಲುಕಿಕೊಂಡಿದ್ದಾರೆ. ಕೊಟ್ಟ ಸಾಲ ತಿರುಗಿ ಬರದಿದ್ದರೆ ಸಾವಕಾರರು ಸಾಲಗಾರರಿಗಿಂತಲೂ ಕಡೆ. ಇಂಥ ಪರಿಸ್ಥಿತಿಯಲ್ಲಿ ಮಾಡಬೇಕಾದುದೇನು? ಈ ಸ್ಥಿತಿಯೊಳಗಿಂದ ಸಾಲಗಾರರಿಗೂ ಸಾವಕಾರರಿಗೂ ಪಾರಗಾಣಿಸುವ ಬಗೆ ಹೇಗೆ?

ಬಂಗಾಲ ಸರಕಾರದ ಅಭಿಪ್ರಾಯ ಹೀಗಿದೆ. ಸಾವಕಾರರು ಬಡ್ಡಿ ಸೂಟಿ ಬಿಡಲು 'ದರಿದ್ರರಿಂದ ಸಂಪೂರ್ಣ ಗೃಹೀತ ಹಿಡಿಯುತ್ತೇನೆ' ಅಸಲು ಪಡೂ ಅದರಿಗೆ ಸುಸೂತ್ರವಾಗಿ ತಿರುಗಿ ಸಿಗಬೇಕಲ್ಲ?' ಇಲ್ಲದಿದ್ದರೆ 'ಎರಡು ಕೊಡುತ್ತೇನೆ, ಎರಡು ಕೊಡಿಸುತ್ತೇನೆ, ಇನ್ನೆರಡರ ಮಾತು ಬೇಡ' ಎಂಬಂತೆ ಸ್ಥಿತಿಯಾಗುವದು. ಸಾಲತಂದ ರೈತರು ದೀಪದ ದಾರಿಗ್ಯಾಸ ಪತರಿಗೆ ದೋಷಮಾಡಿ ಸಿದ್ಧರಿಲ್ಲ. ಈ ಸಂಗತಿಯನ್ನು ಮುಂಬಯಿ ಭೂ-ಭದ್ರತೆಯ ಮಂಡಳದವರು ತಮ್ಮ ರಿಪೋರ್ಟಿನಲ್ಲಿ ಸಂತೋಷದಿಂದ ಸಮರ್ಥಿಸಿದ್ದಾರೆ. ಈ ಸಂಗತಿ ಬಹಳ ಅಭಿನಂದನೀಯ. ಸಾಲಕ್ಕೆ ಮೋಸ ಮಾಡಿ ಋಣದಲ್ಲಿ ಸಾಯಬೇಕೆಂದು ಸಾಲಗಾರರ ಸಮಾಜಕ್ಕೆ ಅನಿಸುವದಿಲ್ಲ. ಹುಟ್ಟುವಳಿಯಿಲ್ಲ, ಪ್ರತಿಷ್ಠೆಯಿಲ್ಲ, ಬೇರೆ ಉದ್ದಿಮೆಯಿಲ್ಲ, ಹಗಲಿರುಳು ಮೈಮುರಿದು ದುಡಿದಾಗ್ಯೂ ಹೊಟ್ಟೆ ಸಂಸಾರ ಸಾಗಿಸಿಕೊಂಡು ಹೋಗುವದೇ ಕಷ್ಟವಾಗುತ್ತದೆ. ಇಂಥಲ್ಲಿ ಸಾಲ ತೀರಿಸುವ ಬಗೆ ಹೇಗೆ? ಎಂಬುದೇ ಬೇಸಾಯಗಾರರ ಚಿಂತೆ. ಮೈಸೂರ ಪ್ರಾಂತದ ದಿವಾಣರಾಗಿದ್ದ ಅರ್ಥಶಾಸ್ತ್ರಜ್ಞರೆಂದು ಖ್ಯಾತಿಗೊಂಡ ವ್ಯವಹಾರಕುಶಲ ಸರ ಎಮ್. ವಿಶ್ವೇಶ್ವರಯ್ಯನವರು ಸಹ ಇದೇ ಪ್ರಕಾರ ಅಭಿಪ್ರಾಯಪಡುತ್ತಾರೆ. ವಿಶ್ವೇಶ್ವರಯ್ಯನವರು ಸದ್ಯಕ್ಕೆ (Planned Economy for India) ಯಾನೆ 'ಹಿಂದುಸ್ಥಾನದ ಉದ್ಧಾರಕ್ಕಾಗಿ ಕೈಕೊಳ್ಳಬೇಕಾದ ಸಂಪದಭ್ಯುದಯದ ಯೋಜನೆ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಹಿಂದೀ ಪ್ರಜೆಗಳು ಕ್ರಮವಾಗಿ ಬಡವರಾದರೆಂದೂ ಅವರಿಗೆ ಹೊಟ್ಟೆತುಂಬ ಉಣ್ಣಲು ಅಸಾಧ್ಯವೆಂದೂ ಅವರು ಅಂಕಿಗಳಿಂದ ಸಿದ್ಧಪಡಿಸಿದ್ದಾರೆ. ೧೮೮೧ ನೇ ಇಸ್ವಿಯಲ್ಲಿ ೧೦೦ಕ್ಕೆ ೬೦ ಜನರು ಬೇಸಾಯವನ್ನು ಹೊಂದಿಕೊಂಡಿದ್ದರು. ೧೯೩೧ನೇ ಇಸ್ವಿಯಲ್ಲಿ ಈ ಪ್ರಮಾಣವು ೭೩ಕ್ಕೇರಿತು. ಜನಬಲದ ಪ್ರಮಾಣ ಮಿಗಿಲಾದಂತೆ ಹುಟ್ಟುವಳಿಯ ಪ್ರಮಾಣ ಏರಲಿಲ್ಲ. ದೇಶದವರ ನಿರ್ವಾಹಕ್ಕೆ ಸಾಲುವಷ್ಟು ಧಾನ್ಯಗಳೂ ಬೆಳೆಯಲಿಲ್ಲ. ಜನರ ನಿರ್ವಾಹಕ್ಕೆ ೮॥ ಕೋಟಿಯಿಂದ ೯ ಕೋಟಿ ಟನ್ನಿನ ತನಕ ಆಹಾರ ಸಾಮಗ್ರಿ ಬೇಕು. ೭ ಕೋಟಿ ಟನ್ನಿಗೆ ಮಿಕ್ಕಿ ಆಹಾರ ಹುಟ್ಟುವದಿಲ್ಲ. ಬೀಜ, ಜಾನುವಾರ, ರಫ್ತು ಮೊದಲಾದ ಖರ್ಚಿನ ಬಾಬುಗಳನ್ನು ತೆಗೆದರೆ ೫ ಕೋಟಿ ಟನ್ನು ಆಹಾರ ಸಾಮಗ್ರಿಗಳಿಂದ ಜನರ ನಿರ್ವಾಹವಾಗಬೇಕು. ೯ ಕೋಟಿಯೆಲ್ಲಿ? ೫ ಕೋಟಿಯೆಲ್ಲಿ? ಎಲ್ಲರಿಗೂ ಅರೆಹೊಟ್ಟೆ. ಕೆಲವರು ಹೊಟ್ಟೆತುಂಬ ಉಣ್ಣುವವರಿದ್ದರೆ, ಅದರ ಬದಲಾಗಿ ಕೆಲವರು ಉಪವಾಸ ಸಾಯುತ್ತಾರೆಂಬದು ಸಹಜ ಮಾತು. ಇಂಥ ಸ್ಥಿತಿಯಲ್ಲಿ ಸಾಲ ತೀರಿಸುವ ಬಗೆ ಹೇಗೆ? ನಾತಾಳ ಹಬ್ಬದಲ್ಲಿ ಪಾಟಣಾ ಪಟ್ಟಣದಲ್ಲಿ ಸೇರಿದ ಅರ್ಥಶಾಸ್ತ್ರಜ್ಞರ ಪರಿಷತ್ತಿನಲ್ಲಿಯೂ ತಕ್ಕಮಟ್ಟಿಗೆ ಇದೇ ಅಭಿಪ್ರಾಯವಾಗಿದೆ. ಬೇಸಾಯಗಾರರಿಗೆ ಹೊಟ್ಟೆ ಹೊರಕೊಳ್ಳುವದೇ ಕಠಿಣವಾಗಿದೆ. ಸಾಲ ತೆರುವ ಮಾತು ಎತ್ತಕೂಡದು.

ಜಬರದಸ್ತಿಯಿಂದ ಸಾವಕಾರರ ಸಾಲವನ್ನು ಸಂಪೂರ್ಣವಾಗಿ ಮುಳುಗಿಸಬೇಕೆಂಬ ವಿಚಾರವಲ್ಲ. ಸಾವಕಾರರ ಸಾಲ ಸಂಪೂರ್ಣವಾಗಿ ಮುಳುಗಿಸ ಹೇಳುವದು ಸುಲಭ ಮಾತು. ಹಾಗೆ ಮಾಡಿದ್ದಲ್ಲಿ ಸಮಾಜದ ವ್ಯವಸ್ಥೆಯೇ ಭಂಗ ಹೊಂದುವದು. ಗ್ರಾಮದವರಿಗೂ ಬೇಸಾಯಗಾರರಿಗೂ, ಕಲ ಕೋವಿದರಿಗೂ ಅತ್ಯವಶ್ಯವಾದ ಸಾವಕಾರ ಸಂಸ್ಥೆಯೇ ನಿರ್ನಾಮವಾಗುವದು. ಇದರಿಂದ ದೇಶಕ್ಕೆ ಕ್ಷೇಮವಿಲ್ಲ. ಸಾವಕಾರರೂ ಸಾಯಬಾರದು, ಸಾಲಗಾರರೂ ಬದುಕಿ ಉಳಿಯಬೇಕು. ಆದರೆ ಸಾವಕಾರ-ಸಾಲಗಾರರಿಗೆ ಪರಸ್ಪರ ಹೊಂದಿಕೆ ಹತ್ತಿಸಿ ಸರಕಾರವು ತ್ರಯಸ್ಥ ಪ್ರವೃತ್ತಿಯನ್ನು ತಳೆಯಕೂಡದು. ರಾಜ್ಯಧೋರಣದಲ್ಲಿ ತಿದ್ದುಪಡಿಯಾಗಿ ಬೇರೆ ಬೇರೆ ಉದ್ದಿಮೆಗಳನ್ನು ದೇಶತುಂಬ ಏರ್ಪಡಿಸಿದರೆ ಮಾತ್ರ ಈರ್ವರೂ ಬದುಕಬಲ್ಲರು. ಬೇಸಾಯಗಾರರ ಉತ್ಪನ್ನ ಬೆಳೆಸಬೇಕಾದರೆ, ಮಹಾತ್ಮರು ನುಡಿದಂತೆ, ಬೇಸಾಯಗಾರರ ಸೋಮಾರಿತನವನ್ನು ಹೋಗಲಾಡಿಸ ಕೂತಲ್ಲಿ ಅವರಿಗೆ ಉದ್ದಿಮೆ ಹಚ್ಚಿಕೊಡಬೇಕು. ಅಂದರೆ ಮಾತ್ರ ಯಾವದೊಂದು ಯೋಜನೆಯಿಂದ ಪರಿಣಾಮ ದೊರೆದೀತು. ವಿಶ್ವೇಶ್ವರಯ್ಯನವರಂಥ ವಿಚಾರವಂತರು ಸಹ ಹೀಗೆಯೇ ಪ್ರತಿಪಾದಿಸುತ್ತಾರೆ. ಉದ್ದಿಮೆಗಳು ನಷ್ಟವಾದ್ದರಿಂದ ಬೇಸಾಯಗಾರರ ಉತ್ಪಾದನೆಯು ... ನೇ ಕಟ್ಟಿತು. ಹೀಗೆ ಸಹ ವಿಶ್ವೇಶ್ವರಯ್ಯನವರ ಅಭಿಪ್ರಾಯ.

ರಾಜ್ಯಧೋರಣವನ್ನು ಬದಲಿಸಿದನಕ ಸಾಲ ಪರಿಹಾರವಾಗದು. ಭೂ-ಭದ್ರತೆಯ ಬೆಂಕುಗಳನ್ನು ಸ್ಥಾಪಿಸಿ ಸಾಲದ ಮೊಬಲಗಿಗೆ ೩೦ ವಾರ್ಷಿಕ ಕಂತು ಮಾಡಿ ಕೊಡುವದರಿಂದ ಪ್ರಯೋಜನ ದೊರೆಯದು. ಕಂತಿನ ರಕಮನ್ನು ಸಾಲಗಾರನು ಪ್ರತಿ ವರ್ಷ ತೆರಬೇಕು, ಹುಟ್ಟುವಳಿಯೊಳಗಿಂದ ತೆರಬೇಕು, ಉದರ ನಿರ್ವಹ ಸಾಗಿಸಿಕೊಂಡು ತೆರಬೇಕು. ಉತ್ಪನ್ನದ ಉಪಾಯಗಳು ಈಗಿನಷ್ಟೇ ಇದ್ದಲ್ಲಿ ಉಣ್ಣುವದೇನು? ಸಾಲದ ಕಂತು ತುಂಬುವದೇನು? ಉಣ್ಣದೆ, ತಿನ್ನದೆ ಸಾಲತುಂಬ ಹೋಗುವದು ಧರ್ಮವಲ್ಲ. ಉಂಡರೆ ಸಾಲಕ್ಕಿಲ್ಲ, ಸಾಲ ತುಂಬಹೋದರೆ ಊಟಕ್ಕಿಲ್ಲ. ಇಂಥ ಸಂದರ್ಭದಲ್ಲಿ ಬರೇ ಭೂ ಭದ್ರತೆ ಬೆಂಕೆಗಳಿಂದ ಕಾರ್ಯಭಾಗವಾಗದು. ಸರಕಾರವು ಈ ಯೋಜನೆಗಳನ್ನು ಕೈಕೊಳ್ಳುವ ಪೂರ್ವದಲ್ಲಿ ಬೇಸಾಯಗಾರರಿಗೆ ಉಪ-ಉದ್ದಿಮೆಗಳನ್ನು ಕಲ್ಪಿಸಿಕೊಡಬೇಕು. ಅಂದರೆ ಮಾತ್ರ ಸಾಲಗಾರರು ಋಣ-ವಿಮುಕ್ತರಾಗಬಲ್ಲರು.

ಇಲ್ಲದಿದ್ದರೆ ಯಾವತ್ತೂ ಋಣವಿಮೋಚನೆಯ ಉಪಾಯಗಳು ನಿರರ್ಥಕವಿವೆ ಸಾವಕಾರರು ಅನುಕೂಲತೆಗಳನ್ನು ಪೂರೈಸದ್ದರಿಂದ ಬೇಸಾಯಗಾರರ ಸಾಲ ಬೆಳೆದಿದೆ ಎಷ್ಟು ಅನುಕೂಲತೆಗಳನ್ನು ಪೂರೈಸಿದಾಗ್ಯೂ ಸಾಲಗಾರರಿಗೆ ಸಾಲ ತೀರಿಸುವದು ಅಸಾಧ್ಯವಾಗಿದೆ, ಅಶಕ್ಯವಾಗಿದೆ ತಕ್ಕಷ್ಟು ಹುಟ್ಟುವಳಿಯ ಅಭಾವ, ಕುಗ್ಗಿದ ದರ, ಬೇರೆ ಜೀವನೋಪಾಯಗಳ ಹ್ರಾಸ ಇವುಗಳಿಂದ ಬೇಸಾಯಗಾರರು ಗತಿಗೆಟ್ಟಿದ್ದಾರೆ ಋಣವಿಮೋಚನೆಯ ಯೋಜನೆ ಮಾಡುವ ಸರಕಾರವು ಈ ಪರಿಸ್ಥಿತಿಯನ್ನು ದೀರ್ಘವಾಗಿ ಪರ್ಯಾಲೋಚಿಸಬೇಕು ಅದನ್ನು ಉಪೇಕ್ಷಿಸಿ ಯಾವದೇ ಉಪಾಯ ಕೈಕೊಂಡಾಗ್ಯೂ ಕ್ಷೀಣವಾಗದು ಋಣವಿಮೋಚನ ಯೋಜನೆಯ ಮೂಲತತ್ವವಿದು!

ಯುದ್ಧ ಬಾಗಿಲಿಗೆ ಬಂತೇ?

[ನಿರೀಕ್ಷಕನು ಬರೆದುದು.]

(೫ ನೇ ಪಾನಿನಿಂದ ಮುಂದರಿಸಿದ್ದು)

ಹಿಂದುಸ್ಥಾನ ಸರಕಾರವು ಈ ಉಪಕ್ರಮವನ್ನು ಕೈಕೊಂಡಿತೆಂದು ಪ್ರಕಟಿಸಿ ಆದರೆ ವಿಶಾಲ ಹಿಂದುಸ್ಥಾನ ದೇಶ ಬಿಟ್ಟು ಗದಿನಾಡಿನಲ್ಲಿಯೇ ಗ್ರಾಮೋದ್ಧಾರದ ಈ ಯೋಜನೆಯೇಕೆ? ವಿಮಾನಗಳಿಂದ ಹಳ್ಳಿಯಾದ್ದಲ್ಲಿ ಅವಕ್ಕೆ ಎದುರಾಗಲು, ಅವುಗಳಿಂದ ರಕ್ಷಿಸಿಕೊಳ್ಳಲು, ಕಾಲ ಕಾಲಕ್ಕೆ ಪ್ರಜೆಗಳಿಗೆ ಸೂಚಿಸಿಕೊಡಲು ಅನುಕೂಲವಾಗಬೇಕೆಂದೇ ಈ ಯಂತ್ರಗಳ ಕಲ್ಪನೆಯಾಗಿದೆಯೆಂದು ನಾ ನಿಶ್ಚಯವಾಗಿ ಹೇಳಬಲ್ಲೆ ಜರ್ಮನಿಯಲ್ಲಿಯೂ ಇದೇ ಪ್ರಕಾರ ನಡೆಯುತ್ತಿದೆ ಜರ್ಮನಿಯ ಪ್ರಚಾರ ಇಲಾಖೆಯ ಪ್ರಧಾನರಾದ ಡಾಕ್ಟರ ಗೋಬೆಲ್‌ರವರು ಊರೂರು ಸಂಚರಿಸಿ ಮನೆ ಮನೆಗೆ ಒಂದೊಂದು ರೇಡಿಯೋ ಯಾನೆ ವಾಯುಸಂದೇಶವಾಹಕ ಯಂತ್ರವನ್ನು ಪೂರೈಸುತ್ತಿದ್ದಾರೆ ವಿಮಾನಗಳಿಂದ ಹಳ್ಳಿಯವರೆಲ್ಲ ಹ್ಯಾಗೆ ನಡಕೊಳ್ಳಬೇಕು ಎಂಬುದನ್ನು ತಿಳಿಸುತ್ತಾರೆ ಬರ್ಲಿನದಲ್ಲಿ ೩೦೦ ಮಂದಿ ಬಡ ಹುಡುಗರಿಗೆ ಮುಖ್ಯ ಪ್ರಧಾನರಾದ ಸೇನಾಪತಿ ಗೋರಿಂಗರವರು ಮೇಜವಾನಿ ಕೊಟ್ಟರು ಆ ಸಮಯ ವಿಮಾನ ಹಾರಿಸುವ ಕೆಲಸವನ್ನು ವಿದ್ಯಾರ್ಥಿಗಳಿಗೆಲ್ಲ ಸಪ್ರಯೋಗ ತಿಳಿಸಿ ಹೇಳಿದರೆಂಬಾಗಿ ಪ್ರಕಟವಾಗಿದೆ ಜರ್ಮನಿಯು ಯುದ್ಧ ತಯಾರಿಯನ್ನೇ ನಡೆಸುತ್ತಿದ್ದಾಗಿ ಸದ್ಯಕ್ಕೆ ಮುಂಬಯಿಗೆ ಬಂದ ಹಿಟ್ಲರ ಪಕ್ಷದ ನಾಝಿ ಆಫೀಸರರೊಬ್ಬರು 'ಮುಂಬಯಿ ಸೆಂಟಿನಲ್' ಪತ್ರದ ಪ್ರತಿನಿಧಿಗಳ ಕಡೆ ಹೇಳಿದರೆಂಬಾಗಿ ಪ್ರಕಟವಾಗಿದೆ ಜರ್ಮನಿಯ ಸಿದ್ಧತೆಗಳನ್ನು ನೋಡಿ ಯುರೋಪ ಖಂಡದೊಳಗಿನ ರಾಷ್ಟ್ರಗಳು ಚಿಂತಾಕ್ರಾಂತವಾಗಿವೆ ಪ್ಯಾರೀಸದೊಳಗಿನ 'ಇಕೊಡಿ ಪಾರಿಸ' ಪತ್ರಿಕೆಯು ಜರ್ಮನಿಯ ಮೇಲೆ ನಂಬಿಗೆ ಇಡುವದು ಅಸಾಧ್ಯವೆಂದು ಅಭಿಪ್ರಾಯಪಟ್ಟು, ಬ್ರಿಟಿಶರು ಇನ್ನೂ ಕಲ್ಪನಾಸೃಷ್ಟಿಯಲ್ಲಿಯೇ ಇರುವರೆಂದು ಆಕ್ಷೇಪಿಸುತ್ತದೆ "ಜರ್ಮನಿಗೆ ಮನವೊಲಿಸಿಕೊಳ್ಳುವದು ಅಸಾಧ್ಯ, ಆ ಗೊಡವೆಗೆ ಯಾರೂ ಹೋಗಲಾಗದು' ಎಂಬುದೇ 'ಇಕೊಡಿ ಪಾರೀಸ' ಪತ್ರಿಕೆಯ ಅಂಬೋಣ ಬ್ರಿಟಿಶ-ಫ್ರೆಂಚ ರಾಜ್ಯಭಾರಿಗಳೊಳಗೆ ಅಂತರಂಗದಿಂದ ಮುಂದಿನ ಕಾರ್ಯಕ್ರಮದ ಕುರಿತು ವಿಚಾರ ನಡೆದದೆ. ಜರ್ಮನಿಯ ಪ್ರಶ್ನೆಯನ್ನು ಹೇಗೆ ಬಿಡಿಸಬೇಕೆಂಬುದೇ ಮುತ್ಸದ್ದಿಗಳ ಚಿಂತೆ ಇದೇ ಸಮಯ ಜಪಾನ ದೇಶಕ್ಕೂ, ಜರ್ಮನ್ ದೇಶಕ್ಕೂ ಗುಪ್ತ ತಹನಾಮೆಯಾಗಲಿಕ್ಕಿದೆಯೆಂದು ಹೇಳುತ್ತಾರೆ ಇಂಥಲ್ಲಿ ಬ್ರಿಟಿಶರು ಕಣ್ಮುಚ್ಚಿಕೊಂಡು ಚೀನದೊಳಗಿನ ಪ್ರಕಾರಗಳನ್ನು ನೋಡುತ್ತಿರುವರೆಂದು ನಾ ಹೇಗ ಹೇಳಲಿ? ಎಲ್ಲಿಯೂ ರಣಯಜ್ಞದಲ್ಲಿ ಒಬ್ಬೊಬ್ಬರಾಗಿ ಒಂದೊಂದು ನೆವದಿಂದ ಬೀಳಬಹುದೆಂದೇ ನನಗೆ ತೋರುತ್ತದೆ "ಜಪಾನಿಯರು ಚೀನ ಪ್ರದೇಶವನ್ನು ಕೈವಶ ಮಾಡಿಕೊಳ್ಳದೆ ಎಂದಿಗೂ ಬಿಡರು ಚೀನ ಪ್ರದೇಶ ಸಂಘಟಿಸಿದರೆ ಜಪಾನದೇಶಕ್ಕೆ ಸುರಕ್ಷಿತತೆ ಇಲ್ಲವಂತೆ ಚೀನದೇಶವನ್ನು ಪಾದಾಕ್ರಾಂತ ಮಾಡಿಕೊಂಡರೆ ಮಾತ್ರ ಜಪಾನ ದೇಶವು ಕೈಕೊಂಡ ಜಗಚ್ಛಾಂತಿಯ ಕಾರ್ಯಗಳು ನೆರವೇರುವವು ಜಪಾನದೇಶಕ್ಕೆ ಯುದ್ಧ ಮಾಡಬೇಕೆಂಬ ಅಭಿಲಾಷೆಯಿಲ್ಲವಂತೆ! ಆದರೆ ಪ್ರಸಂಗ ಬಿದ್ದಲ್ಲಿ ಯುದ್ಧ ಮಾತಲು ಜಪಾನಿಯರು ಹಿಂಜರಿಯುವವರಲ್ಲವಂತೆ! ಹೀಗೆ ಲಂಡನಿಗೆ ಹೋದ ದಕ್ಷಿಣ ಟೋಕಿಯೋದೊಳಗಿನ ಧರ್ಮೋಪದೇಶಕರಾದ ಡಾಕ್ಟರ ಹೆಜಲೆಟ್‌ರವರು ಉದ್ಗರಿಸುತ್ತಾರೆ

ಜಪಾನ-ಅಮೇರಿಕಾ ದೇಶಗಳೊಳಗ ಇರುವ ವೈಮನಸ್ಸನ್ನು ನಾನು ಈ ಮುಂಚೆಯೇ ವಿವರಿಸಿದ್ದೇನ ಬ್ರಿಟಿಶರು ಸ್ವಾರ್ಥಪರಾಯಣರಾಗಿ ಜಪಾನಿಯರ ಆಶ್ರಯಕ್ಕೆ ಸೇರಿ ವ್ಯಾಪಾರ ಶಿಕ್ಕಿ ಲಾಭವಾಗುವದೆಂದು ತಟಸ್ಥ ವೃತ್ತಿಯನ್ನು ಕೈಕೊಂಡಿದ್ದಾರೆ ಆದರೆ ಬ್ರಿಟಿಶರು ಈ ಪ್ರಕಾರ ಜಪಾನ ದೇಶಕ್ಕೆ ಬೆಂಬಲ ಕೊಟ್ಟರೆ, ಮುಂದೆ ಬ್ರಿಟಿಶರಿಗೆ ಅಪಾಯವಿರುವದಾಗಿ ಮಿ| ಪ್ರೀಲ್ಲಫರ್ಡರವರು 'ರೇನಾಲ್ಡ್ಸ ವೀಕ್ಲಿ' ಪತ್ರಿಕೆಯಲ್ಲಿ ಬರೆದು ದೇಶಬಾಂಧವರಿಗೆ ಮುಂಜಾಗ್ರತ ಕೊಡುತ್ತಾರೆ "ಜಪಾನಿಗ ಹೆದರಬೇಡಿ, ವರ್ಸೇಲೀಸ ತಹನಾಮೆಯಿಂದ ಆ ರಾಷ್ಟ್ರಕ್ಕಾದ ಅನ್ಯಾಯವನ್ನು ದೂರಪಡಿಸಿರಿ, ಮತ್ತು ಎಲ್ಲರೂ ಕೂಡಿ ಜಪಾನದ ಮಹತ್ವಾಕಾಂಕ್ಷೆಗೆ ಇದಿರಾಗಿರಿ" ಎಂಬದಾಗಿ ದಕ್ಷಿಣ ಆಫ್ರಿಕೆಯ ಸೇನಾಪತಿ ಸ್ಮಟ್ಸರವರು ರಾಷ್ಟ್ರಗಳಿಗಲ್ಲ ಬೋಧಿಸುತ್ತಿದ್ದಾರೆ ಇದರ ಮೇಲಿಂದ ಜಪಾನದ ಬಲಾತ್ಕಾರವೂ, ಆ ಬಲಾತ್ಕಾರಕ್ಕೆ ವಿರುದ್ಧವಾಗಿ ಸಿದ್ಧವಾಗಿರುವ ಲೋಕಮತವೂ ವಾಚಕರಿಗೆ ತಿಳಿಯುವಂತಿದೆ ಜಪಾನ ದೇಶವು ತನ್ನ ಹಟವನ್ನೇ ಮುಂದರಿಸಿ ಮೊಂಗೋಲಿಯಾ ಪ್ರಾಂತವನ್ನು ಕೈವಶ ಮಾಡಿಕೊಳ್ಳುವ ಮಾತಿಗೆ ಹಿಡಿದಲ್ಲಿ ಖಂಡಿತವಾಗಿಯೂ ಯುದ್ಧವೆಸಗದೆ ನಿಲ್ಲದು. ಚೀನದೊಳಗಿನ ಶಾಂಘಾಯ, ಕೆಂಟನ್ ಮೊದಲಾದ ಬಂದರಗಳೂ, ಮುಖ್ಯ ಮುಖ್ಯ ಪ್ರದೇಶಗಳೂ ಬೇರೆ ಬೇರೆ ರಾಷ್ಟ್ರಗಳಿಗೆ ಅಧೀನವಾಗಿವೆ ಬ್ರಿಟಿಶ, ಫ್ರಾನ್ಸ, ಅಮೇರಿಕಾ, ಜಪಾನ ಈ ನಾಲ್ಕು ದೇಶಗಳೊಳಗೆ ಮುಖ್ಯ ಮುಖ್ಯ ಭಾಗಗಳೆಲ್ಲ ಹಂಚಿಹೋಗಿವೆ ಜಪಾನವು ಈ ಹಂಚುವಿಕೆಗೆ ಉಪದ್ರವ ಕೊಡಬಾರದೆಂದು ೧೯೨೨ ನೇ ಇಸ್ವಿಯಲ್ಲಾದ ವಾಶಿಂಗ್ಟನ್ ತಹನಾಮೆಯಲ್ಲಿ 'ಚೀನ ದೇಶದ ಸ್ವಾತಂತ್ರ್ಯ ರಕ್ಷಣೆಯ' ಒಂದು ಶರ್ತವಿತ್ತು ಈ ವ್ಯಾಖ್ಯೆಯ ಅರ್ಥದ ಕುರಿತು ಜಪಾನ-ಅಮೇರಿಕೆಗಳೊಳಗೆ ಮತಭೇದ ಜಪಾನಿಯರು ಚೀನ ದೇಶದೊಳಗಿನ ಕಾರಭಾರದಲ್ಲಿ ಕೈ ಹಾಕಿ ಅದನ್ನು ತುಂಡರಿಸಬಾರದೆಂದು ಅಮೇರಿಕೆಯವರ ಅರ್ಥ ಚೀನ ದೇಶದ ಬೇರೆ ಬೇರೆ ಪ್ರಾಂತಗಳು ಪೃಥಕ್ಕರಣ ಬೇಡಿದರೆ ಅವರಿಗೆ ಪೃಥಕ್ಕರಣಕ್ಕೆ ಆಗಗೊಡಬೇಕೆಂದು ಜಪಾನದ ಅರ್ಥ! ಚೀನ ದೇಶವು ಒಕ್ಕಟ್ಟಾಗಿದ್ದರೆ ಜಪಾನಕ್ಕೆ ಚಂಚುಪ್ರವೇಶ ದೊರೆಯದು ಪ್ರತ್ಯೇಕವಾದರೆ ಜಪಾನಕ್ಕೆ ಪಾರುಪತ್ಯಾಧಿಕಾರ ದೊರೆಯುತ್ತದೆ ವಾಶಿಂಗಟನ್ ತಹನಾಮೆ ಈಗ ರದ್ದಾದ್ದರಿಂದ ಜಪಾನಿಯರಿಗೆ ಯಾವದೇ ಅಂಜಿಕೆಯಿಲ್ಲ ಚೀನ ದೇಶವಲ್ಲಂತು ಜಪಾನದ್ವೇಷವು ಮತ್ತೂ ಹಬ್ಬಲಾರಂಭಿಸಿದೆ ಜಪಾನಿ ಸ್ತ್ರೀಯರನ್ನು ಸೈನಿಕರು, ನೌಕಾದಳದವರು, ರಾಜಕಾರಣ ಧುರಂಧರರು ಮದುವೆ ಮಾಡಿಕೊಳ್ಳಲಾಗದು ನಿಯಮದಲ್ಲಿ ವಿದೇಶಿ ಸ್ತ್ರೀ ಎಂಬ ಸಾಮಾನ್ಯ ಉಲ್ಲೇಖವಿರುವದೇನೋ ನಿಜ ವಿದೇಶಿ ಸ್ತ್ರೀಯರೆಂದರೆ ಜಪಾನಿ ಸ್ತ್ರೀಯರೇ ಯಾಕೆಂದರೆ ಇತರ ವಿದೇಶಿ ಸ್ತ್ರೀಯರಿಗೆ ಅತ್ತ ಮದುವೆಯಾಗುವವರಾರೂ. ವಿದೇಶಿ ಸ್ತ್ರೀಯರಿಗೆ ಮದುವೆಮಾಡಿಕೊಂಡವರು ಸರಕಾರದ ಅಪ್ಪಣೆ ಪಡೆದು ಸರಕಾರಿ ನೌಕರಿಯಲ್ಲಿರಬೇಕು ಇವರಿಗೆ ಗುಪ್ತ ಆಪ್ತಾಲೋಚನೆ ಸಭೆಗಳಲ್ಲಿ ಪ್ರವೇಶ ಸಿಗದು. ಸ್ವಸ್ತ್ರೀದೇಶದಲ್ಲಿ ಇವರಿಗೆ ದಾಯಭಾರ ಸಿಗದು ಈ ಪ್ರಕಾರ ಹೊಸ ನಿಯಮಗಳಿಂದಾಗಿ ಜಪಾನದ್ವೇಷ ಸಾಮ್ರಾಜ್ಯ ಲೋಕದಲ್ಲಿ ಹಬ್ಬಿಕೊಂಡಿರುವಾಗ, ಮೊಂಗೋಲಿಯಾದೊಳಗಿನ ಬಲಾತ್ಕಾರವು ಅಲ್ಲಿಂದಲೇ ತಣಿಯುವದೆಂದು ಹೇಳಲು ನನಗೆ ಧೈರ್ಯ ಬರಲೊಲ್ಲದು ಪಾಟಣಾದೊಳಗಿನ 'ಸರ್ಚಲೈಟ' ಪತ್ರಿಕೆಯಲ್ಲಿ ಪ್ರಕಟವಾದ ಒಂದು ಗುಪ್ತ ವಾರ್ತೆಯಂತು ಯುದ್ಧವನ್ನೇ ಸೂಚಿಸುತ್ತದೆ "ಯುದ್ಧವೆಸಗಿದ್ದಲ್ಲಿ, ಇಲ್ಲವೆ ರಾಷ್ಟ್ರದ ಮೇಲೆ ಆಪತ್ತು ಬಂದೊದಗಿದ್ದಲ್ಲಿ ನೀವು ಕೆಲಸ ಕೈಕೊಳ್ಳಲು ಸಿದ್ಧವಿರುವಿರೇ"ನೆಂದು ಸಿವಿಲ್ ಸರ್ಜನರು ಬಿಹಾರ ಪ್ರಾಂತದೊಳಗಿನ ಡಾಕ್ಟರರಿಗೆಲ್ಲ ಪ್ರಶ್ನೆ ಕೇಳಿ ತ್ವರ್ಯವೇ ಉತ್ತರ ಕಳುಹಬಯಸಿದ್ದಾರಂತೆ ಮಹಾಯುದ್ಧ ಕಾಲದಲ್ಲಿ ಹಿಂದುಸ್ಥಾನದಿಂದ ೩ ಸಾವಿರ ಡಾಕ್ಟರರು ರಣಾಂಗಣಕ್ಕೆ ಶುಶ್ರೂಷೆ ಮಾಡಹೋಗಿದ್ದರು ಇಂಥ ಚೌಕಶಿ ಬೇರೆ ಬೇರೆ ಪ್ರಾಂತಗಳಲ್ಲಿಯೂ ನಡೆದಿರಬೇಕು ಯುದ್ಧ ನಿರೀಕ್ಷಣೆ ಇಲ್ಲದಿದ್ದರೆ ಈ ಚೌಕಶಿಯೇಕೆ? ಉತ್ತರಪಡಕೊಳ್ಳುವ ಗಾಬರಿಯೇಕೆ? ಯುದ್ಧ ಬಾಗಿಲಿಗೆ ಬಂತೇ?

೭—೨—೧೯೩೫.

ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಜನರ ಅಪೇಕ್ಷೆಯಂತೆ ತಾ. ೭-೨ ಇಸವೀಗೆ ಸಮಸ್ತರು ಸಭೆ ಸೇರಿ ಪಾರ್ಲಿಮೆಂಟರಿ ಕಮಿಟಿಯ ವರದಿಯನ್ನು ನಿಷೇಧಿಸ ವಿಧಿಸಿದ್ದಾರೆ. ಆ ದಿನ ನಿಷೇಧಪರ ಮೆರವಣಿಗೆ ಮೊದಲಾದ ಕಾರ್ಯಕ್ರಮ ನಡೆಯಬೇಕು ಈ ಕೆಳಗಿನ ಠರಾವನ್ನು ಕೈಕೊಳ್ಳಬೇಕು.

"..... ಗ್ರಾಮದೊಳಗಿನ ನಾಗರಿಕರು ಸಭೆಸೇರಿ ಈಗ ಸೂಚಿಸಲಾದ ರಾಜ್ಯಸುಧಾರಣೆಯನ್ನು ಧಿಕ್ಕರಿಸುತ್ತಾರೆ ಇದು ಅರಸೊತ್ತಿಗೆಯನ್ನು ಸ್ಥಿರಪಡಿಸುವದಕ್ಕಾಗಿ, ದೇಶದ ಸಂಪತ್ತನ್ನು ಸೂರೆ ಮಾಡುವದಕ್ಕಾಗಿ, ಕಲ್ಪಿಸಲಾಗಿದೆ ಸಾಮಾನ್ಯ ಪ್ರಜೆಗಳಿಗೆ ರಾಜ್ಯಾಧಿಕಾರವನ್ನು ಒಪ್ಪಿಸುವ ಇರಾದೆ ಈ ಸುಧಾರಣೆಗಳಲ್ಲಿಲ್ಲ ಈಗಿನ ರಾಜ್ಯಭಾರದಲ್ಲಿಯೇ ಸ್ವರಾಜ್ಯ ಸಂಗ್ರಾಮವನ್ನು ಮುಂದರಿಸುವದು ಹಿತಕರವೆಂದು ಈ ಸಭೆಯ ನಿಶ್ಚಿತಾಭಿಪ್ರಾಯವಿದೆ ಮತ್ತು ಈ ರಾಜ್ಯಸುಧಾರಣೆಯ ಯೋಜನೆಯನ್ನು ಒಮ್ಮೆಲೇ ತಿರಸ್ಕರಿಸಬೇಕಾಗಿ ಕಾಯಿದೆ ಕೌನ್ಸಿಲಿನೊಳಗಿನ ಲೋಕನಿಯುಕ್ತ ಪ್ರತಿನಿಧಿಗಳಿಗೆ ಈ ಮೂಲಕ ಆಜ್ಞಾಪಿಸುತ್ತದೆ"

ಸ್ಥಾನಿಕ ವೃತ್ತಾಂತ.

ಕುಮಟಾ— ಹವೆ ಏನನ್ನೂ ನೆಟ್ಟಗೆ ಕಾಣದು ನಿಲ್ಲುತ್ತಿದೆ. ಜ್ವರ, ಅತಿಸಾರ, ಮೈಲಿ, ಸಿಡುಬು ಮೊದಲಾದ ರೋಗಗಳಾಯಿಯಿದೆ. ಹಳ್ಳಿಗಳಲ್ಲಿಯೂ ಇದೇ ಬೇನೆಗಳಿವೆ.

ತೀರ್ವೆ ತೆರುವ ಹಂಗಾಮು ಬಂತು. ರೈತರು ಕಷ್ಟಪಡುತ್ತಿದ್ದಾರೆ. ಸರಕಾರವು ಮುಂದಾಗಿ [illegible] ತೀರ್ವೆ ದರವನ್ನು ಅರ್ಧಾಂಶಕ್ಕಾದರೂ ಇಳಿಸಿದರೆ ಬಹು ಉಪಕಾರವಾಗುತ್ತಿತ್ತು. ಕಾಳು-ಕಡಿಗಳ ದರ ಅರ್ಧಕ್ಕಿಳಿದಿದೆ; ಹುಟ್ಟುವಳಿಯು ಮಾತ್ರ ಕುಗ್ಗಿದೆ. ಗ್ರಾಮೋದ್ಧಾರವನ್ನು ಪುರಸ್ಕರಿಸಿ ರೈತರ ಹಿತ ಕಾಯಬಯಸುವ ಜಿಲ್ಹಾಧಿಕಾರಿಗಳು ಈ ಸಂಕಟ ಕಾಲದಲ್ಲಿ ಪ್ರಜೆಗಳಿಗೆ ನೆರವಾಗಬೇಕಾಗಿ ಆಗ್ರಹದ ಬಿನ್ನಹ.

ಇಲ್ಲಿಯ ರಹಿವಾಸಿಗಳಾದ ರಾ| ಶೇಷಗಿರಿ ಹರಿ ಕಾಸಭಾಗಿ ಇವರು ಇಲ್ಲಿಯ ಮ್ಯುನಿಸಿಪಲ್ ಡಿಸ್ಟ್ರಿಕ್ಟಿನ ಮ್ಯಾನೆಜಮೆಂಟ ಕಮಿಟಿಯ ಕಾರ್ಯದರ್ಶಿ ರಾ| ಬಂಟವಾಳ ವೆಂಕಟ್ರಾಯ ಪ್ರಭು ಇವರ ಮೇಲೆ ತಾ. ೨೯-೮-೩೪ ನೇಗೆ ಕೂಡಿದ ಮ್ಯಾನೆಜಮೆಂಟ ಕಮಿಟಿಯ ಠರಾವನ್ನು ತಮಗೆ ತೋರಿಸುವಂತೆ ಹುಕುಮು ಬೇಡಿ ಇಲ್ಲಿಯ ಸಬ ಜಜ್ಜ ಕೋರ್ಟಿನಲ್ಲಿ ಮಾಡಿದ ದಾವೆಯನ್ನು ಸಬಜಜ್ಜರಾದ ರಾ| ಘೋರ್ಪಡೆಯವರು ಮನ್ನಿಸಿ ಕಾರ್ಯದರ್ಶಿಗಳಿಗೆ ಸದರ ಠರಾವನ್ನು ತೋರಿಸುವಂತೆ ಹುಕುಮು ಮಾಡಿದ್ದಾರೆ. ಮ್ಯುನಿಸಿಪಾಲಿಟಿ ರದ್ದಾದ್ದರಿಂದ ಕಮಿಟಿಯ ಠರಾವು ನೋಡುವ ರಹಿವಾಸಿಗಳ ಹಕ್ಕು ರದ್ದಾಯಿತೆಂದು ಕಾರ್ಯದರ್ಶಿಗಳ ಅಂಬೋಣವಿತ್ತು. ಮ್ಯುನಿಸಿಪಾಲಿಟಿಯು ರದ್ದಾದರೆ ಮ್ಯುನಿಸಿಪಾಲಿಟಿಗಿರುವ ಯಾವತ್ತೂ ಅಧಿಕಾರಗಳೂ, ಜಬಾಬದಾರಿಗಳೂ ಸರಕಾರದಿಂದ ನೇಮಿಸಲ್ಪಟ್ಟ ಮ್ಯಾನೆಜಮೆಂಟ ಕಮಿಟಿಗೆ ಬರುತ್ತವೆ, ಮ್ಯುನಿಸಿಪಲ್ ಕಾಯಿದೆಯ ಕಲಮು ನಾಗಿಯೇ ಉಂಟು, ಸೆಕ್ರೆಟರಿಯ ವರ್ತನ ಕಾಯಿದೆಗೆ ಮಿಕ್ಕಿದೆ; ಸೆಕ್ರೆಟರಿಯವರು ಹಾಜರ ಪಡಿಸಿದ ಉದಾಹರಣೆಯಲ್ಲಿ ಮಾಡಿದ ಕೆಲ ವಿಧಾನಗಳು ನಿರರ್ಥಕವಿವೆ; ಹೀಗೆ ಸಬ ಸಬಜಜ್ಜರು ತೀರ್ಪಿನಲ್ಲಿ ನಮೂದಿಸುತ್ತಾರೆ. ತಾವು ಮ್ಯುನಿಸಿಪಾಲಿಟಿಯ ಸೆಕ್ರೆಟರಿ ಅಲ್ಲವಾಗಿ ರಾ| ಪ್ರಭುರು ಹೇಳುತ್ತಾರೆ; ಆದರೆ ಆ ಸೆಕ್ರೆಟರಿ ನಾತೆಯಿಂದಲೇ ಮ್ಯುನಿಸಿಪಾಲಿಟಿ ರದ್ದಾದ ಬಳಿಕ ಇವರೇ ಕಾರವಾರದ ಸಬಜಜ್ಜ ಕೋರ್ಟಿಗೆ ತಂತಿ ಮಾಡಿದ್ದುಂಟು; ಹೀಗೆ ಸಬ ಸಬಜಜ್ಜರು ಅಭಿಪ್ರಾಯಪಟ್ಟು ವಾದಿಯ ಖರ್ಚನ್ನು ಸಹ ತೆರುವಂತೆ ಫೈಸಲ ಮಾಡಿದ್ದಾರೆ. ದಾವೆ ನೋಡುವ ರಹಿವಾಸಿಗಳ ಹಕ್ಕು ರದ್ದಾದಂತೆ ಮನೆ ತೆರಿಗೆ ತೆರುವ ಜವಾಬದಾರಿಯೂ ರದ್ದಾದ್ದಕ್ಕೆ ಸೆಕ್ರೆಟರಿಗಳು ಬಂಟವಾಳದಿಂದ ಕುಮಟೆಯ ತನಕ ಬಂದದ್ದು ಸಾರ್ಥಕವಾಗುತ್ತಿತ್ತೆಂದು ಸೆಕ್ರೆಟರಿಗಳ ಮೇಲ್ಮನೆಯ ನಿಧಾನ ಕೇಳಿದವರೆಲ್ಲರು ಬರೆಯುತ್ತಾರೆ. ಸೆಕ್ರೆಟರಿಗಳು ಮನೆ ತೆರಿಗೆ ವಸೂಲ ಮಾಡುವ ಹಕ್ಕನ್ನು ರದ್ದುಪಡಿಸುವ ಕುರಿತು ಮೇಲಧಿಕಾರಿಗಳ ಕಡೆ ರಿಪೋರ್ಟು ಮಾಡಬೇಕೆಂದು ಮನೆತೆರಿಗೆ ತೆರಲಾರದ ಬಡವರೆಲ್ಲರು ವಿನಂತಿ ಮಾಡಿಕೊಳ್ಳುತ್ತಾರೆ.

ಸೋಮವಾರ ಇಲ್ಲಿನ ಇಂಜಿನಿಯರ ಆಫೀಸಿನಲ್ಲಿ ತಾರಿಗಳ ಲಿಲಾಂವಾಯಿತು. ಹೊನ್ನಾವರ ತಾ॥ ಮಾತ್ರ ರಸ್ತೆಯ ೬೯೦೦ಕ್ಕೆ ಕಿ. ಸಂ. ಸವಾಲಾಯಿತು. [illegible] ರೀವಾಗಿ ತಾರಿಗಳಿಗೆ ಮೊದಲು ಸವಾಲಾಗಲಿಲ್ಲ. ನಿಜಾರ್ಥ ಸ ತಾರಿ ನಮಾಲಿಗೆ ಇದಾಬಾರದೆಂದು ಕಲೆಕ್ಟರಿಂದ ಹುಕುಮು ಬಂದಿತ್ತಂತೆ. ರೈತರು ತಾರಿಗಳ ಮೇಲಿಂದ ಹೊಲಗಳಿಗೆ ಹೋಗುವಾಗ ತಾರಿಯ ಹಾಸಲು ಎತ್ತಾಳಿ ಯಾಗಬಾರದಾಗಿ ಬಿನ್ನೈಸಿಕೊಂಡಿದ್ದರಂತೆ. ಈ ಸಾಲಿನ ಲಿಲಾಂವಿನಲ್ಲಿ ಈ ಕುರಿತು ಪ್ರತ್ಯೇಕ ಕಲಮಿದೆ. ಆದರೆ ಬಂಧ ರೈತರು ಕಲೆಕ್ಟರ ಕಡೆಯಿಂದ ಸರ್ಟಿಫಿಕೇಟು ತರ ಕೊಳ್ಳಬೇಕೆಂಬ ಕರಾರಿದೆ. ಕಲೆಕ್ಟರರು ಅಲ್ಲದಿದ್ದರೂ ಗ್ರಾಮಾಧಿಕಾರಿಗಳಿಗೆ ಸರ್ಟಿಫಿಕೇಟು ಕೊಡುವ ಅಧಿಕಾರ ಕೊಡಬಹುದು. ಈ ಕರಾರನ್ನು ತಿಳಿಸಿ ಎಲ್ಲ ತಾರಿಗಳನ್ನು ಒಕ್ಕಲೇ ಲಿಲಾಂವು ಮಾಡಬಹುದಿತ್ತು.

ಹುಸ್ಕೇರಿ ಗ್ರಾಮದ ಕನ್ನೆಮತದಲ್ಲಿ ಕಲ್ಲಸಂಕ ಶಿವಪ್ಪನೆಂಬುವನಿದ್ದನು. ಜನವರಿ ೩ನೇ ತಾರೀಖಿನ ಸುಮಾರಿಗೆ ಇವನು ರಾತ್ರಿ ಕಂಬಳಿ ಹೊದ್ದುಕೊಂಡು ಮಲಗಿದ್ದನು. ಹುಲಿ ಬಂದು ಕಂಬಳಿ ಎಳಕೊಂಡು ಸುಮಾರು ಅರ್ಧ ಫರ್ಲಾಂಗಿನ ತನಕ ಅದನ್ನು ಒಯ್ದು ಹರಿದು ಚೂರು ಚೂರು ಮಾಡಿಹಾಕಿತು. ಜನವರಿ ೧೫ನೇ ತಾರೀಖಿಗೆ ನಡೆದ ಸಂಗತಿ ಮಾತ್ರ ಭಯಂಕರವಿದೆ. ಶಿವಪ್ಪನಿಗೆ ೧ ವರ್ಷ ಪ್ರಾಯದ ಹುಡುಗನಿದ್ದನು. ಆತನನ್ನು ಮಗ್ಗುಲಲ್ಲಿ ಕೊಂಡು ತಾಯಿಯು ಒಳಗೆ ಮಲಗಿದ್ದಳು. ತಂದೆಯು ಪಡಸಾಲೆಯೊಳಗೆ ಮಲಗಿದ್ದನು. ಮಧ್ಯರಾತ್ರಿಯ ಸಮಯ ಹುಲಿ ಬಂತು, ಆ ಬಿಡಾರದ ಗೋಡೆಗೆ ೧ ಫೂಟು ಪರಿಘದ ಗಂಡಿ ಇತ್ತು. ಅದಕ್ಕೆ ತಟ್ಟಿ ಮುಚ್ಚಿತ್ತು. ಅದು ನೆಲದಿಂದ ಸುಮಾರು ಒಂದು ಕೈ ಎತ್ತರವಿದೆ. ಹುಲಿಯು ತಟ್ಟಿ ತೆಗೆದು ಒಳಹೊಕ್ಕು ತಾಯಿಯ ಮಗ್ಗುಲಲ್ಲಿ ಸುರಕ್ಷಿತ ಮಲಗಿಕೊಂಡಿದ್ದ ಬಾಲಕನನ್ನು ಕೊಂಡು ಪಾರಾಯಿತು! ತಾಯಿಗೆ ೨-೩ ಉಗುರು ತಾಗಿದವು. ಎದ್ದು ನೋಡುತ್ತಾಳೆ! ಹುಡುಗನಿಲ್ಲ, ಬೊಬ್ಬೆ ಹೊಡೆದಳು. ಆ ಬೆಟ್ಟದಲ್ಲಿ ತಾಯಿಯ ಮೊರೆ ಕೇಳುವವರು ಪರಮಾತ್ಮನಲ್ಲದೆ ಮತ್ತಾರು! ನಸುಕು ಹರಿಯುವದರೊಳಗೆ ತುಂಡು ತುಂಡುಗಳು [illegible] ಬಿಟ್ಟು ಹುಡುಕಿದರು. ಒಂದೆಡೆ ಕಾಲ ತುಂಡು ಸಿಕ್ಕಿತು! ಅವೇ ತಾಯಿಯ ಕರುಳಿನ ಕಾಲು!

ಹೊಲವಳ್ಳಿ ಗ್ರಾಮದ ಕ್ರಿಶ್ಚನ್ ಜಾತಿಯ ಪಂಬಾಡಿ ಸಾವೇರನ ಮನೆಯಲ್ಲಿ ಇದೇ ಕಳೆದ ಜನವರಿ ತಾ. ೬-೭ನೇ ರಾತ್ರಿ ಮನೆಯೊಳಗೆ ಮಲಗಿದ್ದ ಆತನ ಚಿಕ್ಕ ತಾಯಿಯನ್ನು ಒಂದು ಹುಲಿಯು ಘಾಯ ಮಾಡಿತು. ಮಾರನೇ ದಿನ ಆವಳು ತೀರಿಕೊಂಡಳು. ತಾ. ೨೫ನೇಗೆ ಕೊಳಗೇರಿಯಲ್ಲಿ ಇನ್ನೊಬ್ಬ ಕ್ರಿಶ್ಚನ್ ಜಾತಿಯವನ ಮನೆ ಹೊಕ್ಕು ಹೊದ್ದುಕೊಂಡ ಕಂಬಳಿ ಎಳಕೊಂಡು ಹೋಯಿತು. ಆತನ ಕಾಲಿಗೆ ಹುಲಿಯ ಉಗುರು ತಾಗಿ ಘಾಯವಾಗಿದೆ. ಮೇಲಧಿಕಾರಿಗಳು ಇತ್ತ ಕಡೆ ಲಕ್ಷಗೊಟ್ಟು ಪ್ರಜೆಗಳನ್ನು ಕಾಯಬೇಕು.

ಹಳದೀಪುರದ ಗಣಪತಿ ವೆಂಕಟರ ಭಟ್ಟ ಎಂಬ ೩೬ ವರ್ಷದ ಹರೆಯದವರು ಮೊನ್ನೆ ತಾ. ೨೦ರಂದು ಇಲ್ಲಿ ಔಷಧೋಪಚಾರಕ್ಕೆ ಬಂದಿದ್ದರು. ಆಕಸ್ಮಿಕ ಹೃದಯಕ್ರಿಯೆ ನಿಂತು ನಿನ್ನೆ ತೀರಿಕೊಂಡರು. ವಾರ ವೆರಡಾಗಿ ಇವರ [illegible] ಮಂಗಳಾಗಿದ್ದವಂತೆ! ಹರಿ ಇಚ್ಛೆಯ ಗೋಚರ!

ಭಟಕಳ— ತಾ. ೨೬ನೇಗೆ ಇಲ್ಲಿಯ ಶ್ರೀ ಹನುಮಂತ ದೇವಸ್ಥಾನದಲ್ಲಿ ಸ್ಥಾನಿಕ ಕೊಂಗ್ರೆಸ ಕಮಿಟಿಯ ಪರವಾಗಿ ರಾಷ್ಟ್ರೀಯ ಸಭೆಯು ಜರುಗಿತು. ಅಖಿಲ ಭಾರತೀಯ ಸ್ವಾತಂತ್ರ್ಯ ದಿನವು ಸಂಭ್ರಮದಿಂದ ಆಚರಿಸಲ್ಪಟ್ಟಿತು. ಕೊಂಗ್ರೆಸ ಕಾರ್ಯಕಾರಿ ಮಂಡಳದ ಅಪ್ಪಣೆಯಂತೆ ಕೊಂಗ್ರೆಸ ಕಾರ್ಯಕಾರಿ ಮಂಡಳವು ಸಿದ್ಧಪಡಿಸಿದ ಪೂರ್ಣ ಸ್ವರಾಜ್ಯದ ಠರಾವೂ, ಸ್ವಾತಂತ್ರ್ಯ ಸಂಗ್ರಾಮದ ನಿರ್ಧಾರವೂ ಜಾಹೀರ ಮಾಡಲ್ಪಟ್ಟವು.

ಶಿರಸಿ— (ತಾ. ೨೬—೧—೧೯೩೫) ರಾಯರಪೇಟೆಯ ಗಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಮೂರ್ತಿಯ ಕೊರಳಿಗಿದ್ದ ಚಿನ್ನದ ಗುಂಡುಗಳ ಮಾಲೆಯೊಂದು ಕಳವಾಗಿದೆ. ಮಧ್ಯಾಹ್ನ ಬಂದು ಬವನಿಗ್ನ, ಬೆಲೆ ೫೦-೬೦ ರೂಪಾಯಿ.

ತಾ. ೨೫ನೇ ದಿನ ಕಲ್ಲು ಬಂಡಿಯ ಮೇಲೆ ಕೆಲಸ ಮಾಡುತ್ತಿದ್ದ ಗ. ಹ. [illegible] ಗಡಿಗೆನ್ನ ಇವರೀರ್ವರೊಳಗೆ ಏನೋ ಒಂದು ಜಗಳವಾಯಿತು. ಗಡಿಗೆನ್ನನಿಗೆ ಸಿಟ್ಟು ಬಂದು ಕೈಲಿದ್ದ ಕೋಲಿನಿಂದ ಆತನು ಗುದ್ದಲಿಯವನಿಗೆ ತಲೆಯ ಮೇಲೆ ಹೊಡೆದನಂತೆ. ರಕ್ತ ಸುರಿಯಲಾರಂಭಿಸಿತು. ಹಾಗೆಯೇ ಕಚೇರಿಗೆ ಹೋಗಿ ಪೋಲೀಸರಿಗೆ ತಿಳಿಸಿ ಆಸ್ಪತ್ರೆ ಕಡೆ ಹೊರಟನು. ದಾರಿಯಲ್ಲಿ ಕಣ್ಣು ಕತ್ತಲೆ ಬಂದು ಸ್ಮೃತಿ ತಪ್ಪಿಬಿದ್ದನು. ಜನರು ಆಸ್ಪತ್ರೆಯಲ್ಲಿ ಒಯ್ದು ಹಾಕಿದರು. ಸ್ಥಿತಿ ಭಯಂಕರ!

ಸ್ಥಾನಿಕ ಸ್ವರಾಜ್ಯದ ದಿವಾನರಾದ ಸರ್ ಶಹಾ ನವಾಜ ಭುಟ್ಟೋರವರು ತಾ. ೨೫ನೇಗೆ ಇಲ್ಲಿ ಬಂದರು. ಹಾಗೆಯೇ ಗೆರಸೊಪ್ಪೆಗೆ ಜಲಪಾತ ನೋಡಹೋದರು. ಮಾರನೇ ದಿನ ಇಲ್ಲಿ ಬಂದು ಇಲ್ಲಿಯ ಮ್ಯುನಿಸಿಪಾಲಿಟಿಯ ಪರವಾಗಿ ಅಧ್ಯಕ್ಷರಾದ ರಾ| ಮೋಟನಸರ ತಿಮ್ಮಯ್ಯ ಹೆಗಡೆಯವರು ಕೊಟ್ಟ ಮಾನಪತ್ರ ಸ್ವೀಕರಿಸಿದರು. ಮ್ಯುನಿಸಿಪಾಲಿಟಿಯವರು ಸ್ಥಾಪಿಸಿದ ಪ್ರಸೂತಿಗೃಹವನ್ನು ತೆರೆದರು. ಸರ್ ಭುಟ್ಟೋರವರಿಗೆ ಕಾಣಲು ಕೆಲ ಜನರೂ ಹೋಗಿ ಜಂಗಲ ಕಷ್ಟಗಳನ್ನು ನಿವೇದಿಸಿಕೊಂಡರು. ಆಲೋಚಿಸ ನೋಡಾಗುತ್ತದೆಂಬ ವಾಡಿಕೆಯ ದೊಡ್ಡಸ್ತನದ ಮಾತು ಹೇಳಿ ದಿವಾನರು ಇಲ್ಲಿಂದ ಮುಂದೆ ಹೊರಟರು. ದಿವಾನರ ಕಡೆ ದೂರು ಹೇಳಿಕೊಂಡದ್ದೆಂದು ಜನರಿಗೆ ಸಮಾಧಾನ. ದೂರು ಕೇಳಿಕೊಂಡಿದ್ದೆಂದು ದಿವಾನರಿಗೆ ಸಮಾಧಾನ!

ಬನವಾಸಿ ಶ್ರೀ ಮಧುಕೇಶ್ವರ ದೇವಸ್ಥಾನದ ಮೊಕ್ತೇಸರರಿಗೂ, ರಾ| ಪಡೆಯಂದವರಿಗೂ ನಡೆದ ವಿವಾದವು ಕಳೆದ ಗುರುವಾರ ಮುಂಬಯಿ ಹೈಕೋರ್ಟಿನಲ್ಲಿ ವಿಚಾರವಾಗಿ ಕೆಳಕೋರ್ಟುಗಳ ತೀರ್ಪು ಮಾನ್ಯವಾಯಿತು, ರಾ| ಪಡೆಯಂದವರ ಪುನರಾಲೋಚನೆಯ ಅರ್ಜಿಯನ್ನು ನ್ಯಾ। ಮೂ। ರಂಗನೇಕರ-ದಿವಾಟಿಯಾರವರು ತಿರಸ್ಕರಿಸಿದ್ದಾಗಿ ಮೊನ್ನೆ ಶುಕ್ರವಾರ ಇಲ್ಲಿ ತಂತಿ ಬಂದಿದೆ. ರಾ| ಪಡೆಯಂದರ ಪರವಾಗಿ ಬೆರಿಸ್ಟರ ಮುಕುಂದರಾವ ಜಯಕರರವರು ೩-೪ ದಿನಗಳ ತನಕ ವಾದಿಸಿದಾಗ್ಯೂ ನ್ಯಾಯಮೂರ್ತಿಗಳಿಗೆ ಸಮಾಧಾನವಾಗಲಿಲ್ಲ. ಮೊಕ್ತೇಸರರ ಪರವಾಗಿ ಹೈಕೋರ್ಟ ವಕೀಲರಾದ ರಾ| ಮುರ್ಡೇಶ್ವರರವರು ಕೆಲಸ ನಡಿಸಿದ್ದರು. ಮಾಹಿತಿ ಕೊಡುವದಕ್ಕಾಗಿ ಇಲ್ಲಿಯ ವಕೀಲ ರಾ| ಬಾಳಿಗಾರರವರು ಮುಂಬಯಿಗೆ ಹೋಗಿದ್ದರು.

ರಾ| ಜಜ್ಜರು ಬರುವ ಸೋಮವಾರ ಇಲ್ಲಿ ತಮಾಸಿಗೆ ಬರುತ್ತಾರೆ, ಒಂದು ಸೆಶನ್ಸ ಖಟ್ಲೆಯೂ ಉಂಟು, ಬನವಾಸಿಯ ಒಂದು ಖಟ್ಲೆಯಲ್ಲಿ ಸುಳ್ಳು ಸಾಕ್ಷಿ ಕೊಟ್ಟ ಬಗ್ಗೆ ಈ ಖಟ್ಲೆಯಾಗಿರುತ್ತದೆ.

ಕಾರವಾರ— (ತಾ. ೧-೨-೧೯೩೫) ಈ ವಾರದ ಮಹತ್ವದ ಸುದ್ದಿಯೆಂದರೆ ಸ್ಥಾನಿಕ ಸ್ವರಾಜ್ಯ ಇಲಾಖೆಯ ದಿವಾನರಾದ ಸರ್ ಶಹಾ ನವಾಜ ಭುಟ್ಟೋರವರು ಆಗಮಿಸಿದ್ದು. ದಿವಾನರು ಸೋಮವಾರ ಸಾಯಂಕಾಲ ಇಲ್ಲಿ ಬಂದು ಇಳಿದರು, ಅಧಿಕಾರಿಗಳು ಸ್ವಾಗತ ಮಾಡಿದರು. ಮಾರನೇ ದಿನ ಬೆಳಿಗ್ಗೆ 'ಮಿತ್ರ ಸಮಾಜ' ಸಭಾಮಂದಿರದಲ್ಲಿ ಮ್ಯುನಿಸಿಪಾಲಿಟಿಯವರು ಮಾನಪತ್ರವನ್ನು ನೀಡಿದರು. ಅದಕ್ಕೆ ದಿವಾನರು ಉತ್ತರ ಕೊಟ್ಟರು. [illegible] ಮುಸಲ್ಮಾನ ಶಿಕ್ಷಣ ಸಂಘದ ಪರವಾಗಿ ಜಿಲ್ಹಾ ಬೋರ್ಡಿನ ಸಭಾಮಂದಿರದಲ್ಲಿ ಮಾನಪತ್ರ ಸಮರ್ಪಣವಾಯಿತು. ದಿವಾನರು ವಿಶ್ವಬಂಧುತ್ವದ ಸದುಪದೇಶ ಮಾಡಿದರು. ಸಂಜೆ ಜಿಲ್ಹಾ ಬೋರ್ಡಿನವರು ಮಾನಪತ್ರ ಸಮರ್ಪಿಸಿದರು, ದಿವಾನರು ಒಂದೂ ಬೇಡಿಕೆಗೆ ಒಪ್ಪಲಿಲ್ಲ. ಸಂಜೆ ೬॥ ಘಂಟೆಗೆ ಮುಸ್ಲೀಂ ಶಿಕ್ಷಣ ಸಂಘದವರು ಜಿಲ್ಹಾ ಬೋರ್ಡಿನ ಸಭಾಮಂದಿರದಲ್ಲಿ ಮೇಜವಾನಿ ಕೊಟ್ಟು ಸತ್ಕರಿಸಿದರು. ಈ ಎಲ್ಲ ಸಮಾರಂಭ ಮುಗಿದು ಬಂಗ್ಲೆಗೆ ತೆರಳಿದ ಬಳಿಕ ಕೊಂಕಣ ಮರಾಠಾ ಜಾತಿಯ ಪ್ರಮುಖರು ಸರ್ ಭುಟ್ಟೋರವರಿಗೆ ಭೆಟ್ಟಿಯಾಗಿ ತಮ್ಮದೊಂದು ಮಾನಪತ್ರವನ್ನರ್ಪಿಸಿದರು, ಈ ಮಾನಪತ್ರಕ್ಕೆ ದಿವಾನರಿಂದ ಅಲ್ಲಿಂದಲ್ಲೇ ಉತ್ತರ ಕೊಡಲಾಗಲಿಲ್ಲ. ಉತ್ತರ ಕಳಿಸಿ ಕೊಡುತ್ತೇನಾಗಿ ಹೇಳಿ ಪ್ರಮುಖರೊಡನೆ ಕೆಲ ಪ್ರಶ್ನೆಗಳನ್ನಾಡಿ ಹಿಂತಿರುಗಿ ಕಳುಹಿದರು. ಮಾನಪತ್ರ ಸಮರ್ಪಣ ಸಮಾರಂಭಗಳಿಂದ ಮ್ಯುನಿಸಿಪಾಲಿಟಿಗೆ ರೂ. ೫೦, ಜಿಲ್ಹಾ ಬೋರ್ಡಿಗೆ ರೂ. ೧೫೦ ಖರ್ಚು ಬಂತು. ಸ್ಥಿತಿಯಿದ್ದು ಹೀಗೆ! ಮಾನಪತ್ರ ಕೊಡದಿದ್ದರೆ ಮಾತ್ರ ಚಲೋದಾಗುತ್ತಿತ್ತೆಂದು ಮಾನಪತ್ರ ಸಮಾರಂಭಗಳಿಗೆ ಹೋದವರೆಲ್ಲರು ತಿಳಿಸುತ್ತಾರೆ. ದಿವಾನರಿಗೆ ಈ ಜಿಲ್ಹೆ

ಯು ಜಂಗಲ ಜಿಲ್ಲೆಯಲ್ಲಿರುವ ಗ್ರಾಹಕರಿಗಾಗಿದೆ. ದಿವಾ ನರು ೮-೧೦ ಹಳ್ಳಿ ತಿರುಗಿರೆಂದು ಎನಿಸಿದ್ದರಂತೆ. ಬಂದ ಡೆ ನಡ ವ್ಯಾಪ್ರಿದರ್ಶನವಾಗಲಿಲ್ಲವಾಗಿ, ಹೇಳಿ, ಕೌನ್ಸಿಲಿ ನಲ್ಲಿ ಹೇಳುವ ಜಂಗಲ ಕಷ್ಟಗಳಲ್ಲ ಇಲ್ಲಿಯ ಇರುವ ಕೆಲವು ಅಭಿಪ್ರಾಯವಿಟ್ಟರು. ದಿವಾನರಿಗೆ ಕೆಲ ಜಂಗಲ ಗ್ರಾಮಗಳಲ್ಲಿ ಒಯ್ದು ತೋರಿಸಬೇಕೆಂಬ ಅಲ್ಲಿಯ ಜನರ ಆ ಬೇಡಿಕೆ ನ ನಡೆಸಿಯನ್ನು ಮನ್ನಿಸಿ ಅವರಿಗೆ ಬೆಟ್ಟ ಪ್ರದೇಶದಲ್ಲಿ ಒಬ್ಬರ ಪರಿಸ್ಥಿತಿ ತಿಳಿಯುತ್ತಿತ್ತು. ಕೋಟ ಹೋದಲ್ಲಿ ತಿಂಗಳಿ, ಮೇಜವಾನಿ, ಮಾನಪತ್ರ ಮುಂತಾದ ಸಂಭ್ರಮ ದೊರೆತ ಬಗೆಗೆ ಶಾನಿಯ ಜಿಲ್ಲೆಯ ಸಂಪತ್ತಿನಿಂದ ತುಂಬಿ ತುಳುಕುತ್ತದೆಂದು ಅವರು ಅಭಿಪ್ರಾಯಪಟ್ಟರೆ ಸೋಜಿಗವಿಲ್ಲ. ಪ್ಯಾಗತ ಸಮಾರಂಭ ಗಳ ಬಾಲಕರ ದಸ್ತಕದಿಂದ ಈ ದಣಿವಾಗಿದೆ. ಹಿಂದೆ ಸರ್ ಮಿರ್ಜಾ ಇಸ್ಮಾಯಿಲ್, ಡಾ. ರಘುನಾಥರಾವ ವರೊಂದಿಗೆಯವರಂಥ ದಿವಾನರು ಇತ್ತ ಬಂದಿದ್ದರು ಅವರಿಗೆ ಮಾನಪತ್ರ ಅರ್ಪಿಸಿದ್ದಿಲ್ಲ; ಅವರು ಅಲ್ಲಿಯ ಪ್ರಮುಖರೊಡನೆ ವಿಚಾರ ವಿನಿಮಯ ನಡೆಸಿದ್ದರು; ಭೂತೋರವರಿಗೆ ಈ ಸಮಾರಂಭಗಳ ಗಲಾಟೆ ಪ್ರಮುಖರೊಡನೆ ಸಂಭಾಷಣೆ ನಡೆಸಲು ಸಮಯ ದೊರೆಯಲಿಲ್ಲ ಸರ್ಕ್ಯೂಟ್ ... ಹೀಗಾದರೂ ಅವರು ಮಾಡುವ ಲೋಕಕಾರ್ಯ ಎಲ್ಲರಿಗೂ ಗೊತ್ತಿದೆಯೇ! ಮೊಂಟೆಗ್ಯ್ಯ ಸ್ವರಾಜ್ಯದೊಳಗಿನ ಸಾತ್ರಗೊಂಬೆಗಳಷ್ಟೆ. ಇದನ್ನೆಲ್ಲ ತಿಳಿದೂ ಮಾನಪತ್ರ ಕೊಡುವದು ತಿಳಿಗೇಡಿತನವೆಂದು ವಿಚಾರವಂತರ ಅಭಿಪ್ರಾಯ. ಮಾನಪತ್ರ ನಿಷ್ಪ್ರಯೋಜಕವೆಂದು ಜಿಲ್ಲಾ ಬೋರ್ಡಿನ ಸಭಾಸದರೊಬ್ಬರು ಅಧ್ಯಕ್ಷರಿಗೆ ಬರೆದು ವಿರೋಧ ಮಾಡಿದ್ದರಂತೆ, ದಿವಾನರು ಇಲ್ಲಿಯ ಕಾರ್ಯಕ್ರಮ ಮುಗಿಸಿಕೊಂಡು ಅದೇ ದಿನ ರಾತ್ರಿ ಕಾರವಾರಕ್ಕೆ ಹೋಗಲು ಶಿರಸಿಗೆ ತೆರಳಿದರು.

ಇಲ್ಲಿಯ ಕಲೆಕ್ಟರರಾದ ಮಿ| ಕೋಟಾವಾಲಾರವರಿಗೆ ಸಿಂಧ ಪ್ರಾಂತದ ಕಸ್ಟಮ ಜಿಲ್ಹೆಗೆ ವರ್ಗವಾಗಿದೆಯಂತೆ. ಇಲ್ಲಿ ಈ ಹಿಂದೆ ಕಲೆಕ್ಟರರಾಗಿದ್ದ ರಾ| ಆರ್. ಎಸ್. ಹಿರೇಮಠ ಇವರು ಬರುತ್ತಾರೆ. ಇದೇ ಬರುವ ತಾರೀಖು ೧೬ನೇ ತಾರೀಖಿಗೆ ಹೊಸ ಕಲೆಕ್ಟರರು ಬರುವರು.

ಹವೆ ನೆಟ್ಟಗಿಲ್ಲ. ಮೋಡ ಮುಸುಕಿಕೊಂಡಿರುತ್ತದೆ ಆದ್ದರಿಂದ ಮೈಲಿ ಪ್ರಾರಂಭವಾಗಲಾರಂಭಿಸಿದೆ. ಹಲವೆಡೆ ಅಲ್ಲಿ ಬೀಳುತ್ತಿವೆ.

ಸಿದ್ದಾಪುರದಲ್ಲಿ ತಾ. ೩ನೇಗೆ ಪಿ. ಎಸ್. ನಾಗಳೀಯವರು ಅದ್ಭುತ ಶಕ್ತಿಯ ಪ್ರಯೋಗ ಮಾಡಿ ತೋರಿಸಿದರು, ರಾ| ನಾಗಳೀಯವರ ಶಕ್ತಿಪ್ರಯೋಗ ನೋಡಿ ಎಲ್ಲರೂ ಪ್ರಶಂಸಿಸಿದರು.

ಸಾಂಕೇರಿಯಿಂದ ರಾ| ಪರಶುರಾಮ ರಾಮನಾಥ ಭಟ್ಟ ಇವರು ತಿಳಿಸುವದೇನಂದರೆ:- ನಾವು ಸಾಂಕೇರಿ ಕರಾವಳಿ ತಾಲೂಕ ಸಂಘದ ಜಾಡು ಸಾಧಾರಣ ಸಭೆಯಲ್ಲಿ ಹಾಜರಿದ್ದೆ. ರಾ| ಜನಾರ್ದನ ಕುಂಠೆ ವ್ಯಕ್ತಿನಾತರಿಂದ ಅಸಿಸ್ಟಂಟ ರಜಿಸ್ಟ್ರಾರ ಕುರಿತು ಶಾಂತ ಬಿಲುಸ ಮಾಡಿದ್ದರು. ಮುಕ್ತಸರ ಠರಾವುಗಳನ್ನು ಅವರು ಸೂಚಿಸಲಿಲ್ಲ, ಅನುಮೋದಿಸಲಿಲ್ಲ, ಇತ್ಯಾದಿ

ಹೊನ್ನಾವರ—

ಇಲ್ಲಿಂದು ಹೊಸ ವಿಷಯ. ಸ್ವಾಮಿ ನಿತ್ಯಾನಂದರ ಸ್ವಾರಿ ಬಂದು ಹೋಯಿತು. ಗುರುವಂತೆಯಿಂದ ಅತ್ತ ಇತ್ತ ಇವರ ಆಗಮನವಾಗಿತ್ತು. ಇವರು ಪ್ರಶ್ನೆಗಳಿಗೆ ಉತ್ತರ ಕೊಡುವಲ್ಲವಂತೆ. ಕೆಲವರಿಗೆ ೩ ತಿಂಗಳು ಆಯುಷ್ಯ, ಕೆಲವರಿಗೆ ೩ ತಿಂಗಳು ಆಯುಷ್ಯ, ಕೆಲವರಿಗೆ ಸಂತತಿ, ಹೀಗೆ ಅವರವರ ಹಣೆಬರಹ ದಲ್ಲಿದ್ದ ಸಂಗತಿಗಳನ್ನು ಹೇಳುತ್ತಾರಂತೆ! ಅವರಿಗೆ ಯಾನ ಅಪೇಕ್ಷೆಯೂ ಇಲ್ಲ. ಗುಣವಂತೆಯ ಶ್ರೀ ನರಸಿಂಹ ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ಒಂದು ಡಬ್ಬಿ ಮಾಡಿರುತ್ತಾರೆ. ಆ ಡಬ್ಬಿಗೆ ಇಷ್ಟವಿದ್ದವರು ಕಾಣಿಕೆ ಸಾಕಿದರಾಯಿತು. ಇದೇನೆಂದು ತಿಳಿಯುವದಿಲ್ಲ.

ಮ್ಯುನಿಸಿಪಾಲಿಟಿಯವರ ದುರ್ಲಕ್ಷ ವಿಷಾಗವೆಂದರೆ ಪ್ರ ಚನಮಗಾರ ಹಳ್ಳದ ಮತ್ತು ವಡಗೇರಿಹಳ್ಳದ ಸಂಕಗಳ ಎರಡೂ ಪಾರ್ಶ್ವಗಳಲ್ಲಿ ಕಟ್ಟಿದ ಕಟ್ಟೆಗಳು ಮೋಡಿಬಿಟ್ಟು ಜೀರ್ಣವಾಗಿವೆ. ಕತ್ತಲಾದ ರಾತ್ರಿ ಒಬ್ಬನು ಕೋಲನ್ನು ಹಿಡಿದು ಹೋಗುತ್ತಿದ್ದನು. ಮೋಡಿಬಿಟ್ಟ ಭಾಗದಲ್ಲಿ ಕೋಲನ್ನು ಸಂಕದ ಬಿದ್ದು ಪ್ರಾಣಾಂತಿಕ ಸ್ಥಿತಿಯಲ್ಲಿದೆ. ವಡಗೇರಿ ಸಂಕದಡಿ ೩-೪ ಜನಗಳು ಬಿದ್ದು ಸತ್ತು ಹೋದವು. ಮ್ಯುನಿಸಿಪಾಲಿಟಿಯವರು ಇದರ ಲಕ್ಷ ಕೊಡುವದಿಲ್ಲ.

ಜಾಹೀರ ನೋಟೀಸು.

ಹೊನ್ನಾವರ ತಾಲೂಕ ಜಲವಳ್ಳಿ ಗ್ರಾಮದ ನಾಗಪ್ಪ ಹನುಮಯ್ಯ ನಾಯ್ಕ ಇವನಿಗೆ ನಾವು ಮೂರು ಮಂದಿ ಮತ್ತು ಇನ್ನೊಬ್ಬ ರಾಮಾ ಎಂಬ ಹಿರೇ ಮಗನಿದ್ದು ನಮ್ಮ ಅವಿಭಕ್ತ ಕುಟುಂಬದ ಕರ್ತನು ನಮ್ಮ ತಂದೆಯಾಗಿರುತ್ತಾನೆ. ನಮ್ಮ ತಂದೆ ನಾಗಪ್ಪ ನಾಯ್ಕನು ತನ್ನ ಹಿರೇ ಮಗನ ದುರ್ಬೋಧನೆಗೊಳಪಟ್ಟು ಕುಟುಂಬದ ಹಣದಿಂದಾ ತನ್ನ ಹಿರೇ ಮಗನ ಅಪ್ರಾಯಸ್ತ ಮಗನ ಹೆಸರಿಗೆ ಆಸ್ತಿಯನ್ನು ಕೊಂಡದ್ದಲ್ಲದೆ, ಅದಕ್ಕೆ ನಾವು ಆಕ್ಷೇಪಿಸಲು ನಮಗೆ ಲುಕ್ಸಾನುಪಡಿಸುವ ಬಗ್ಗೆ ಪ್ರೋನೋಟ ಸಾಲದ ಕಾಗದ-ಪತ್ರಗಳು ಮತ್ತು ಸ್ಥಾವರಾಸ್ತಿಯ ಪ್ರೋಕಳ ಪರಾಧೀನತೆಗಳು ಮಾಡತೊಡಗಿರುತ್ತಾನೆ. ನಮ್ಮ ಕುಟುಂಬಕ್ಕೆ ಸಾಲವಿಲ್ಲಾ. ಮತ್ತು ಆಸ್ತಿ ಪರಾಧೀನತೆ ಮಾಡುವ ಗರಜು ಕೂಡಾ ಇಲ್ಲಾ. ಕಾರಣ, ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವದೇನೆಂದರೆ:- ನಮ್ಮ ತಂದೆ ನಾಗಪ್ಪಾ ಹನುಮಯ್ಯ ನಾಯ್ಕ ಇವನಿಂದಾ ಯಾರೂ ಯಾವದೇ ಸಾಲದ ಕಾಗದ-ಪತ್ರಗಳು ಮತ್ತು ಆಸ್ತಿ ಪರಾಧೀನ ತೆಗದು ದಸ್ತಗಳು ಮಾಡಿಕೊಳ್ಳಕೂಡದು. ಹಾಗೆ ಮಾಡಿದರೆ ಅವು ನಮ್ಮ ಹಿತಕ್ಕೆ ಬಾಧಿಸಲಾರವು ಎಂತಾ ತಿಳಿದಿರತಕ್ಕದ್ದು.

ಈ ಎಡಗೈ ಹೆಬ್ಬೆಟ್ಟಿನ ಗುರ್ತ
ಶಿವಾ ನಾಗಪ್ಪ ಇವನದಾಗಿರುತ್ತದೆ.
ನಾರಾಯಣ ನಾಗಪ್ಪ ನಾಯ್ಕ.
ವೆಂಕ್ಟಾ ನಾಗಪ್ಪ ನಾಯ್ಕ.

ತಾ. ೩—೨—೧೯೩೫.

Established 1900. | ಓಂ | FIXED RATE.

ದಾಸಪ್ಪ ಕೃಷ್ಣಪ್ಪ ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಶಿ.

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರೇಷ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರೀ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಷ್ಮೆ ಖದ್ದರ ಮಡಿಗಳೂ, ನಾರ ಮಡಿಗಳೂ, ಮುಂತಾದ ಎಲ್ಲ ತೆರದ ಜವಳಿಯೂ, ಕಬ್ಬಿಣದ ಮಜಭೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮ್ಹಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಸೋಯಿ ದರದಿಂದ ಸಿಗುವವು. ರೋಖ ವ್ಯಾಪಾರಕ್ಕೆ ಕಮಿಶನ್ ದೊರೆಯುವದು

Tel: "Honesty." | **D. K. DHAKAPPA BROS.,**

Cloth Merchants,
SIRSI. N. KANARA.

ಹೊಸ ಮ್ಹಾಲು ! | ದರ ಅಗ್ಗ !

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿವೆ.

ಮುಲ್ಟಿಪಲ್ ಬೆನಿಫಿಟ್ ಎಂಬ ಹಲವು ವಿಮೆದಾರರಿಗೆ ರಕಮು ಲಾಭಕರವಾಗಿದೆ ಸವಿಸ್ತರ ಮಾಹಿತಿ ಕೆಳಗಿನ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents -
D. K. Nayak Bros.
D. S. Pai.
K. N. Nayak.
Honavar Agents
R. V. Prabhu Esq.

K. Padmanabha Rao & Sons,
BELGAUM
Chief Agents for
Karnatak Districts & S. M. States

ರೈತರ ಹಾಡು.

(ಲೇಖಕ:- ಒಕ್ಕಲಿಗ, ಸಿರ್ಸಿ.)

ಈಗ ನಮ್ಮ ಕಡೆಗೆ ತೀರ್ವೆ-ತಿದ್ದುಪಡಿಯ ಬಗ್ಗೆ ಚೌಕಶಿ ನಡೆದದೆ. ಇಂಥ ಪ್ರಸಂಗದಲ್ಲಿ ಘಟ್ಟದ ಮೇಲಿನ ತಾಲೂಕುಗಳಲ್ಲಿ ರೈತ ಧಂದೆಯು ಯಾವ ಮಟ್ಟಿಗೆ ಮುಟ್ಟಿದೆ, ಯಾವ ಯಾವ ತೊಂದರೆಗಳು ಅವರನ್ನು ಕಾಡುತ್ತಿವೆ, ಮತ್ತು ಅವರ ಸ್ಥಿತಿ ಸುಧಾರಿಸಬೇಕಾದರೆ ಯಾವ ಉಪಾಯಯೋಜನೆ ಮಾಡಬೇಕು ಎಂಬದರ ದಿಗ್ದರ್ಶನ ಮಾಡುವದು ಅವಶ್ಯವಿದೆ. ಸೆಟ್ಲಮೆಂಟ ಅಧಿಕಾರಿಗಳಿಗೆ ರೈತರ ಕಷ್ಟಗಳನ್ನು ಪೂರ್ಣವಾಗಿ ಪರಿಹರಿಸುವ ಅಧಿಕಾರವಿಲ್ಲದಿದ್ದಾಗ್ಯೂ ಅವರು ತಮ್ಮ ವರದಿಯಲ್ಲಿ ಈ ಕಷ್ಟಗಳನ್ನು ಕೂಲಂಕುಷವಾಗಿ ವಿವರಿಸಿ ಆ ಕಡೆಗೆ ಸರಕಾರದವರ ಲಕ್ಷ ವೇಧಿಸಬಹುದು; ಮತ್ತು ಯೋಗ್ಯ ಉಪಾಯಗಳನ್ನು ಕೈಕೊಳ್ಳುವಂತೆ ಸೂಚನೆಗಳನ್ನೂ ಮಾಡಬಹುದು.

ರೈತರ ಮೊದಲನೇ ಕಷ್ಟಗಳೆಂದರೆ ಜಂಗಲ ಉಪದ್ರವಗಳು. ಕಾನಡಾ ಜಿಲ್ಲೆಯಲ್ಲಿ ಜಂಗಲ-ಬೆಳವಣಿಗೆಯು ಹೆಚ್ಚಾಗಿ ಜಂಗಲು ಸಾಗು ಭೂಮಿಯನ್ನು ಸುತ್ತುಗಟ್ಟಿದೆ. ಬೆಟ್ಟದಲ್ಲಿ ಕೊಳೆತುಬಿದ್ದ ಸೊಪ್ಪು ಮಲೇರಿಯಾ ಹವೆಯನ್ನು ನಿರ್ಮಾಣ ಮಾಡಿ ರೈತರನ್ನು ದಣಿಸುತ್ತಿದೆ. ಜಿಲ್ಲೆಯ ಬಹು ದೊಡ್ಡ ಭಾಗವು ಮಲೇರಿಯಾ ಜ್ವರದ ಬೀಡಾಗಿದೆ; ಜನಸಂಖ್ಯೆಯು ಕುಗ್ಗುತ್ತಿದೆ. ಬೆಟ್ಟಕ್ಕೆ ತಗಲಿರುವ ಭೂಮಿಯು ಬಂಜರು ಬೀಳುತ್ತಿವೆ. ಬಂಜರುಬಿದ್ದ ಭೂಮಿಯನ್ನು ಸರಕಾರದವರು ಬೆಟ್ಟದಲ್ಲಿ ಸೇರಿಸಿ, ಅಲ್ಲಿ ಪುನಃ ಬೆಟ್ಟ ಮಾಡುತ್ತಾರೆ. ಈ ಬೆಟ್ಟದಿಂದ ಇನ್ನಿಷ್ಟು ಭೂಮಿ ಬಂಜರು ಬೀಳುವದು; ಅದು ತಿರುಗಿ ಬೆಟ್ಟದಲ್ಲಿ ಸೇರುವದು! ಹೀಗೆ ಜಂಗಲ ಖಾತೆಯವರು ಬೆಟ್ಟವನ್ನು ಬೆಳಸಿದ್ದರಿಂದ ಸಾಗು ಕ್ಷೇತ್ರ ಕ್ರಮೇಣ ಕಡಿಮೆಯಾಗುತ್ತ ನಡೆದು ಒಂದು ದಿನ ಎಲ್ಲ ಕಡೆಯಲ್ಲಿ ಬೆಟ್ಟವೇ ಬೆಟ್ಟವಾಗುವದೆಂದು ತೋರುತ್ತದೆ!

ಮೇಲಾಗಿ ರೈತರು ಅನಾದಿ ಕಾಲದಿಂದ ಉಪಭೋಗಿಸುತ್ತಿದ್ದ ಜಂಗಲ ಸವಲತ್ತುಗಳು ಈಗ ಸಂಪುಷ್ಟವಲ್ಲಿ ಬಂದಿವೆ. ಬೇಸಾಯಕ್ಕೆ ಅವಶ್ಯವಿರುವ ಸೊಪ್ಪು, ಉರುವಲು, ಬೇಲಿಗುಟ್ಟ ಮುಂತಾದವು ಮೊದಲು ಪುಕ್ಕಟೆಯಾಗಿ ಸಿಗುತ್ತಿದ್ದವು; ಈಗ ಅವು ಸಿಗುವದು ಕಷ್ಟವಾಗಿದೆ. ಪರವಾನಾ ಪಡೆಯಬೇಕು! ಹಣ ತೆರಬೇಕು! ಗಾರ್ಡ-ಫಾರೆಸ್ಟರರ ಮರ್ಜಿ ಕಾಯಬೇಕು! ಎಲ್ಲಾದರೂ ಹೆಚ್ಚು-ಕಡಿಮೆಯಾದರೆ ಲಟ್ಟಿ-ಶಿಕ್ಷೆಗಳ ತಾಪಕ್ಕೆ ಗುರಿಯಾಗಬೇಕು! ಹೀಗೆಲ್ಲ ಬೆಟ್ಟದ ಕಾನೂನುಗಳು ಬಿಗುವಾದ್ದರಿಂದ ಬೇಸಾಯಗಾರರಿಗೆ ಬೇಸಾಯದ ವ್ಯವಸಾಯವೇ ಸಾಯುಂದು ಅನಿಸಹತ್ತಿದರೆ ಆಶ್ಚರ್ಯವುಂಟೇ?

ಆದರಲ್ಲೂ ಜಂಗಲ ಜನಾವರಗಳ ಕಾಟ ಬಣ್ಣಿಸಲಸದಳ! ಕಾಡು ಹಂದಿಗಳ ಉಪಟಳವಂತು ಸಾರ್ವತ್ರಿಕವಾಗಿದೆ. ಹೊಲದಲ್ಲಿ ಬೀಜ ಬಿತ್ತಿದಂದಿನಿಂದ ಪೈರು ಕೊಯ್ದು ಮನೆಗೆ ತರುವ ವರೆಗೆ ಹಂದಿಗಳು ಕಷ್ಟ ಕೊಡುತ್ತವೆ. ಮಳೆ ಸರಿಯಾಗಿ ಬೆಳೆ ಚನ್ನಾಗಿ ಬಂದರೂ ಈ ಹಂದಿಗಳ ಬಾಯಿಂದ ತಪ್ಪಿ ಅದು ಮನೆಗೆ ಬರುವದು ಕಷ್ಟ! ಜೊತೆಗೆ ಹುಲಿಗಳ ಪಿಡುಗು ಇದೆ. ವರ್ಷಾನವರ್ಷ ಸಾವಿರಗಟ್ಟಲೆ ದನಗಳು ಹುಲಿಯ ಪಾಲಾಗುತ್ತವೆ. ನಿರ್ಜನ ಹಳ್ಳಿಗಳಲ್ಲಿ ಒಬ್ಬಿಬ್ಬ ರೈತ ಮಕ್ಕಳಿಗೆ ಹೊಲ ಸಾಗುವಳಿ ಮಾಡಲಿಕ್ಕಾಗಲಿ, ಹೊಲ ಕಾಯಲಿಕ್ಕಾಗಲಿ ಹುಲಿ ಭೀತಿಯು ಅಡ್ಡಿ ಮಾಡುತ್ತಿದೆ. ಹೀಗಾಗಿ ಹೊಲಗಳು ಬಂಜರು ಬೀಳುತ್ತಿವೆ. ಹುಲಿರಾಯನ ಭೀತಿಯಿಂದ ಕಾವಲು ಇಡಲಾಗದೆ, ಬಿತ್ತಿದ ಹೊಲಗಳಲ್ಲಿ ಕಾಡು-ಮಿಕಗಳಿಗೂ ಹಂದಿಗಳಿಗೂ ಯಥೇಷ್ಟ ಹಾವಳಿ ಮಾಡಲಿಕ್ಕೆ ಅನುವಾಗುತ್ತಿದೆ. ಇಂಥಾ ಸ್ಥಿತಿಯಲ್ಲಿ ಮಾಡಿದ ಶ್ರಮವೆಲ್ಲ ನಿಷ್ಫಲವಾಗುವ ಸಂಭವವೇ ಹೆಚ್ಚಾಗಿರುವದರಿಂದ, ರೈತರು ತಮ್ಮ ಭೂಮಿಗಳನ್ನು ಸಾಗವಳಿ ಮಾಡಲು ಒಪ್ಪುವದಿಲ್ಲ. ಹಿರಿಯರ ಭೂಮಿಯೆಂತಲೂ, ಒಂದು ದಿನ ಪರಿಸ್ಥಿತಿ ಸುಧಾರಿಸಿ ಭೂಮಿ-ಸಾಗುವಳಿಗೆ ಅನುಕೂಲವಾಗುವದೆಂಬ ಆಶೆಯಿಂದಲೂ ತೀರ್ವೆ ದಂಡ ತೆರುತ್ತಿರುತ್ತಾರೆ. ಕೆಲವು ವರ್ಷ ಹೀಗೆ ದಂಡ ತೆತ್ತು, ಬಳಿಕ ಬೇಸತ್ತು ಕೊನೆಗೆ ರಾಜಿನಾಮೆ ಕೊಡುತ್ತಾರೆ. ಸರಕಾರಿ ಕಾಗದ-ಪತ್ರಗಳಲ್ಲಿ ಇಂಥ ಸಾವಿರಾರು ದಾಖಲೆಗಳು ಸಿಗುವಂತಿವೆ.

ಕಾಡು ಮೃಗಗಳ ಕಾಟಕ್ಕೂ ಜಂಗಲ ಕಾರಭಾರವೇ ಕಾರಣ. ಸಾಗು ಕ್ಷೇತ್ರದ ನೆರೆಯಲ್ಲೇ ಬೆಟ್ಟ ಬೆಳಸಿದ್ದರಿಂದ ಕಾಡು ಮೃಗಗಳಿಗೆ ಹಳ್ಳಿಯ ಹೊರಗೇ ವಾಸ್ತವ್ಯ ಮಾಡಿ, ದಿನಾಲು ಊಟ ಮಾಡಲಿಕ್ಕೆ ಅನುವು ಕೊಟ್ಟಂತಾಗಿದೆ. ಮೇಲಾಗಿ ಶಿಕಾರಿಯ ನಿರ್ಬಂಧಗಳು, ಹತ್ಯಾರ-ಕಾಯಿದೆಯ ಬಂಧನಗಳು, ಅರೆಹೊಟ್ಟೆ ಉಂಡು ನಾನಾ ತರದ ರೋಗಗಳಿಂದ ಗ್ರಸ್ತನಾದ ಒಕ್ಕಲಿಗನ ದೌರ್ಬಲ್ಯ, ಇವೆಲ್ಲ ಕಾಡು ಮೃಗಗಳಿಗೆ ನಿರ್ಭಯ ಮಾಡಿಬಿಟ್ಟಿವೆ. ಬಲಾಢ್ಯ ಸರಕಾರದ ಆಶ್ರಯದಲ್ಲಿರುವ ತಮ್ಮ ಗೋಜಿಗೆ ಬಲಹೀನರೂ ಶಸ್ತ್ರಾಸ್ತ್ರಹೀನರೂ ಆದ ರೈತರು ಬರುವದು ಅಸಾಧ್ಯವೆಂತ ಆ ಪಶುಗಳಿಗೂ ತಿಳಿದು ಬಂದಿದೆ! ಜಂಗಲ ಖಾತೆಯವರ ಸಹಕಾರದಿಂದಲೂ ಸಹಾಯದಿಂದಲೂ ಅವು ತಮ್ಮ ಜಂಗಲ ರಾಜ್ಯದ ವಿಸ್ತಾರ ಮಾಡಲಿಕ್ಕೆ ಪ್ರಯತ್ನಗಳನ್ನು ನಡಿಸಿವೆ! ನಮ್ಮ ಅರಸರು ಇನ್ನಾದರೂ ಕಣ್ತೆರೆದು ಪ್ರಜಾಪಕ್ಷಪಾತಿಗಳಾಗಿ ಬೆಟ್ಟದ ಪ್ರಜೆಗಳ ಸುಲಿಗೆಯಿಂದ ರೈತರನ್ನು ಕಾಪಾಡುವ ಆಲೋಚನೆ ಮಾಡುವರೇ? ನಿಃಶಸ್ತ್ರ ರೈತರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸಿ ಆತ್ಮರಕ್ಷಣೆಯ ಸಾಮರ್ಥ್ಯ ತಂದುಕೊಡುವರೇ?

ತೀರ್ವೆ ತಿದ್ದುಪಡಿಯ ಅಧಿಕಾರಿಗಳು ಭೂಮಿಗಳ ಗೇಣಿಯ ಮಾನವನ್ನು ಚೌಕಶಿ ಮಾಡಹತ್ತಿದ್ದಾರಾಗಿ ತಿಳಿಯುತ್ತಿದೆ. ಗೇಣಿಯ ಮಾನದಿಂದ ಉತ್ಪನ್ನ ನಿಶ್ಚಿತವಾಗಿ ಸಿಗುತ್ತಿದ್ದರೆ ಇದರಿಂದ ನಾವು ಅಂಜಿಕೆಪಡುವ ಕಾರಣವಿದ್ದಿಲ್ಲ. ಆದರೆ ಗೇಣಿಯ ಕರಾರುಗಳಲ್ಲಿ ಕಾಣುವಷ್ಟು ಗೇಣಿಯನ್ನು ವಸೂಲ ಮಾಡುವ ಭಾಗ್ಯವಂತರು ನಮ್ಮಲ್ಲಿ ಎಷ್ಟು ಜನರಿದ್ದಾರೆ? ರೈತನು ಕೆಲವೊಂದು ಅಡಚಣೆಯ ಬಗ್ಗೆ ಸಾವಕಾರನ ಕಡೆಯಿಂದ ಸಾಲ ತರುತ್ತಾನೆ; ಅವಧಿಯಲ್ಲಿ ಸಾಲ ತೆರಲಾಗದೆ ಅಸಲು-ಬಡ್ಡಿ ಹಣದ ಬಗ್ಗೆ ಭೂಮಿಯನ್ನು ಒತ್ತೀ ಕೊಟ್ಟು ಒತ್ತೀ-ದಸ್ತ ಬರಕೊಡುತ್ತಾನೆ. ಬಂದ ಉತ್ಪನ್ನ ಸಂಸಾರಕ್ಕೆ ಹೋಗುತ್ತದೆ. ಸಾವಕಾರನ ಬಡ್ಡಿ ತೆರಲಾಗುವದಿಲ್ಲ! ಕೊನೆಗೆ ಸಾವಕಾರನ ಸಾಲದ ನಿಕಾಲೆಗೆ ಹೊಲ-ಭೂಮಿಗಳನ್ನು ಸಾವಕಾರನಿಗೆ ಮಾರಿ ಅದನ್ನೇ ಗೇಣಿಗೆ ಮಾಡಿಕೊಳ್ಳುತ್ತಾನೆ. ಸಾವಕಾರನ ಮುದ್ದಿಗೆ ಬಡ್ಡಿಯೆಷ್ಟು ಸಲ್ಲಬೇಕು ಎಂಬದನ್ನು ಲೆಕ್ಕ ಹಾಕಿ ಆ ಗೇಣಿಯ ಮಾನ ನಿಗದಿಯಾಗುತ್ತದೆ. ಭೂಮಿಯ ದರ್ಜೆ, ಉತ್ಪನ್ನ, ಸಾಗುವಳಿ ಖರ್ಚು, ರೈತರ ಶ್ರಮದ ಫಲ, ರೈತರ ಪಾಲು ಇವುಗಳ ಲೆಕ್ಕದಿಂದ ಗೇಣಿ ರಕಮು ನಿಶ್ಚಯವಾದದ್ದು ತೀರ ಕಡಿಮೆ. ಇಂಥಲ್ಲಿ ಗ್ರಾಮ ರಿಕಾರ್ಡಿನಲ್ಲಾಗಲಿ, ಗೇಣಿ ಚೀಟುಗಳಲ್ಲಾಗಲಿ ಕಂಡು ಬರುವ ಗೇಣಿಯ ಮಾನ ಹಿಡಿದು ನಡೆದರೆ ಎಂದಾದರೂ ನ್ಯಾಯವಾದೀತೇ?

ಇನ್ನೊಂದು ಬಗೆಯ ಗೇಣಿ ಚೀಟುಗಳುಂಟು. ಕೆಲವರ ಬಂಜರ ಭೂಮಿಯ ಮಾಲಿಕರ ಕಡಿಗೆ ಬಂದು ಖರ್ಚಿಗೂ ಸಂಸಾರಕ್ಕೂ ಕೊಟ್ಟು ಸಹಾಯ ಮಾಡಿದರೆ ನಿಮ್ಮ ಭೂಮಿ ನಾವು ಸಾಗುಮಾಡುತ್ತೇವೆಂದು ಮರುಳು ಹಾಕಿ, ಜಮೀನದಾರರಿಂದ ಮುಂಗಡವಾಗಿ ಹಣ ತಕ್ಕೊಂಡು ಭೂಮಿಯನ್ನು ಗೇಣಿಗೆ ಮಾಡುತ್ತಾರೆ. ಒಂದೆರಡು ವರ್ಷ ಬೆಳೆ ಸರಿ ಬರುವ ವರೆಗೆ ಗೇಣಿ ಕೊಡತಕ್ಕದ್ದಿಲ್ಲವಾಗಿ ಮಾತು ಮಾಡುತ್ತಾರೆ. ತೀರ್ವೆದಂಡ ತೆತ್ತು ಬೇಸತ್ತ ಜಮೀನದಾರರು ಇವರ ಮಾತಿಗೆ ಮರುಳಾಗಿ ಒಪ್ಪುತ್ತಾರೆ. ರೈತನು ಜಮೀನದಾರನಿಗೆ ತನ್ನ ಬಲೆಯಲ್ಲಿ ಎಳೆಕೊಳ್ಳುವ ಇರಾದೆಯಿಂದ ಹೆಚ್ಚಿನ ಗೇಣಿಯನ್ನು ನಿಶ್ಚಯಿಸಿಕೊಳ್ಳಲಿಕ್ಕೆ ಅಡ್ಡಿ ಹೇಳುವದಿಲ್ಲ. ಆದರೆ ಮುಂದೆ ಒಂದೆರಡು ವರ್ಷ ಉತ್ಪನ್ನವನ್ನೆಲ್ಲ ನುಂಗಿ, ಕರಾರಿನಂತೆ ಗೇಣಿ ಕೊಡುವ ಕಾಲ ಬಂದ ಕೂಡಲೆ ಏನಾದರೂ ತಂಟೆ-ತಕರಾರು ಎಬ್ಬಿಸಿ ಓಡುತ್ತಾನೆ! ಮಾಲೀಕನು ಅಳುತ್ತ ಮನೆಯಲ್ಲಿ ಕೂತರಾಯಿತು!! ಇಂಥ ಎಷ್ಟೋ ಸಂಗತಿಗಳುಂಟು. ಇಂತಹ ವಸೂಲಾಗದ ಗೇಣಿಯ ಮಾನದಿಂದ ತೀರ್ವೆ ಆಕರಣೆಯಾದರೆ ಕೇಳುವದುಂಟೋ!

ಕ್ರಯ-ದಸ್ತೈವಜುಗಳ ಕಥೆಯೂ ಇದೇ! ಒಬ್ಬ ರೈತನಿಂದ ಸಾವಕಾರನಿಗೆ ರೂ. ೫೦೦ ಬರುವದಿದೆಯೆಂದು ತಿಳಿಯಿರಿ. ರೈತನ ಆಸ್ತಿಯ ಬೆಲೆ ರೂ. ೩೦೦ಕ್ಕೆ ಮಿಕ್ಕುವದಿಲ್ಲ. ಸಾವಕಾರನು ದಾವೆಗೆ ಹೋದರೆ ೬೦-೭೦ ರೂಪಾಯಿ ಖರ್ಚಿಗೆ ಬೇಕು. ಮೇಲಾಗಿ ತಕ್ಕೊಳ್ಳುವದೇನು? ಆಸ್ತಿಯ ಬೆಲೆಗೆ ಮಿಕ್ಕುಳಿಯುವ ಹಣ ಯಾರು ತೆರುವರು? ರೈತನಂತು ಋಣಮುಕ್ತ ಮಾಡಿದವನಿಗೆ ಭೂಮಿಯನ್ನು ಸಾವಕಾರನಿಗೆ ಕೊಡಲೊಪ್ಪನು. ಆಗ ಸಾವಕಾರನು ಬಂದಷ್ಟು ಹಣ ಬಂತೆಂದು ಕಲ್ಪಿಸಿ, ರೂಪಾಯಿ ೨೦೦ರ ಭೂಮಿಯನ್ನು ರೂ. ೫೦೦ಕ್ಕೆ ಕೊಂಡು ಕೊಳ್ಳುತ್ತಾನೆ. ಇಂಥ ಕ್ರಯ-ಪತ್ರಗಳೊಳಗಿನ ಕಿಮ್ಮತ್ತು ಲೆಕ್ಕದಲ್ಲಿ ಹಿಡಿದು ತೀರ್ವೆ ನಿಶ್ಚಯಿಸಲ್ಪಟ್ಟರೆ ಬಾಳುವದುಂಟೇ?

ಸಂಕ್ಷಿಪ್ತವಾಗಿ ಹೇಳಬೇಕಾದರೆ, ಬೇಸಾಯವು ಹಾಳಾಗಿದೆ. ಬೇಸಾಯಗಾರರು ತಮ್ಮ ವ್ಯವಸಾಯಕ್ಕೆ ಬೇಸತ್ತಿದ್ದಾರೆ. ಬೇಸಾಯದ ಕಷ್ಟಗಳೂ, ಅಡಚಣೆಗಳೂ, ತೊಂದರೆಗಳೂ ಮಿಗಿಲಾಗಿವೆ. ದೇಹ ದಣಿಸಿದಗೂ ಬೆಳೆ ಸಿಗುವದು ಕಷ್ಟ! ಸಿಕ್ಕ ಬೆಳೆಗೂ ದರವಿಲ್ಲ. ಬೇಸಾಯದ ಖರ್ಚು ಸಹ ಸಿಗುವದಿಲ್ಲೆಂದು ರೈತರ ಬೊಬ್ಬೆ! ರೈತರು ತಮ್ಮ ಹೊಟ್ಟೆಗಾಗಿಯೂ ತೀರ್ವೆಗಾಗಿಯೂ ಸಾಲ ತೆಗೆತೆಗೆದು ಸಾಲಂದಿಗರಾಗಿದ್ದಾರೆ! ಈಗಂತು ಸಾಲ ಕೊಡುವವರೇ ಇಲ್ಲ. ಇದ್ದ ಹೊಲ-ಭೂಮಿಗಳನ್ನು ತಕ್ಕೊಂಡು ಅವರಿಗೆ ಋಣಮುಕ್ತರಾಗಿ ಮಾಡಿ ಬಿಡುವವರು ಯಾರಾದರು ಸಿಕ್ಕರೆ ಸಾವಿರಾರು ರೈತರು ಆನಂದ

ದಿಂದ ಅಂಥವರ ಸ್ವಾಗತ ಮಾಡಲಿಕ್ಕೆ ತಯಾರಾದ್ದಾರೆ! ಸರಕಾರದವರು ಇತ್ತ ಕಡೆ ಲಕ್ಷ ಕೊಡುವರೇನು? ರೈತರಿಗೆ ನೆರವಾದಾರೇನು? ರೈತರಿಗೊದಗುವ ಕಷ್ಟ-ನಷ್ಟಗಳನ್ನು ಪರಿಹರಿಸಿ, ಅವರು ಮುದದಿಂದ ಬೇಸಾಯ ನಡಿಸಲಾಗುವಂತೆ ವ್ಯವಸ್ಥೆ ಮಾಡ್ಯಾರೇನು? ಸರಕಾರದವ್ರ ಕಣ್ದೆರೆಯದಿದ್ದರೆ ಭೂಮಿಯೆಲ್ಲ ಕ್ರಮೇಣ ಬಿಟ್ಟಿವಾಗಿ ಸರಕಾರದವರು ಬಿಟ್ಟದೊಡೆಯರಾದಾರೆಂಬುದಕ್ಕೆ ಸಂದೇಹವಿಲ್ಲ.

ರಾಜ್ಯತಂತ್ರಕ್ಕೆ ಹಣ ಬೇಕೆಂಬುದು ನಿಜ. ಆ ಬಗ್ಗೆ ತೀರ್ವೆ ಎತ್ತುವಳಿಯೂ ಆಗಬೇಕೆಂದು ನಾನು ಒಪ್ಪುತ್ತೇನೆ. ರಾಜಾ-ಪ್ರಜೆಗಳಿಗೆ ಬಿಟ್ಟಿ ಬೇಕೆಂಬದನ್ನೂ ನಾನು ಮಾನ್ಯ ಮಾಡುತ್ತೇನೆ. ಆದರೆ ಬಿಟ್ಟಿಗಳ ರಕ್ಷಣೆ ಮತ್ತು ತೀರ್ವೆಯ ಎತ್ತುವಳಿ ಇವೆರಡು ಮಾತ್ರ ಸರಕಾರದ ಕರ್ತವ್ಯಗಳಲ್ಲವಷ್ಟೇ? ತೀರ್ವೆ ಆಕರಣೆಯಿಂದಲೂ, ಬಿಟ್ಟಿದ ಜೋಪಾಸನೆಯಿಂದಲೂ ಪ್ರಜೆಗಳಿಗೆ ಬಾಧೆಯಾಗದಂತೆ ನೋಡುವದೂ ಸರಕಾರದ ಕರ್ತವ್ಯ! ಆದ್ಯ ಕರ್ತವ್ಯ! ಪ್ರಜೆಗಳಿಗೆ ಬಾಧೆಯಾಗಿ ಪ್ರಜೆಗಳ ...ಹರವಾಗಹತ್ತಿದರೆ, ಮುಂದೆ ರಾಜ್ಯವಾಳುವದು ಯಾರ ಮೇಲೆ!

ಸೆಟ್ಲಮೆಂಟ ಅಧಿಕಾರಿಗಳು ಈ ಎಲ್ಲ ಸಂಗತಿಗಳ ವಿಚಾರ ಮಾಡಬೇಕು. ಬೇಸಾಯದ ವ್ಯವಸಾಯದಲ್ಲಿ ಹಾನಿಯಿಲ್ಲ, ಲಾಭವುಂಟು ಎಂದು ಮನವರಿಕೆಯಾಗುವಂತೆ ತೀರ್ವೆಯು ಆಕರಣೆಯಾಗಬೇಕು. ಎಲ್ಲ ಬೇಸಾಯದ ಖರ್ಚು ಕಳೆದು ಬೇಸಾಯಗಾರನಿಗೆ ಎಳ್ಳಷ್ಟು ಲಾಭ ಉಳಿಯುವದಿಲ್ಲವೋ ಅಂಥ ಕಡೆಯಲ್ಲಿ ತೀರ್ವೆಯ ಮಾಫಿ ಕೊಡಬೇಕು; ರೈತರ ಕೋ-ಕಷ್ಟ, ಸಾವಕಾರನ ಯಾ ಜಮೀನದಾರನ ಹಣಕ್ಕೆ ಯೋಗ್ಯ ಪ್ರತಿಫಲ ಉಳಿಯುವಂತೆ ನೋಡಿಕೊಳ್ಳಬೇಕು; ಅಂದರೆ ಮಾತ್ರ ನ್ಯಾಯವಾದ ತಿದ್ದುಪಡಿಯಾಗುವದು ತೀರ್ವೆ ತಿದ್ದುಪಡಿಯೆಂದರೆ ಅಲ್ಲಿ ಯಾ ಒಟ್ಟಿನ ಮೇಲೆ ತೀರ್ವೆಯನ್ನು ಏರಿಸುವದಲ್ಲ! ತಿದ್ದುಪಡಿಯಲ್ಲಿ ಇಳಿಸುವದೂ ಬರುತ್ತದೆ! ನಾಲ್ಕೆಂಟು ವರ್ಷಗಳ ಹಿಂದೆ ಇದ್ದ ಭೂಮಿಗಳ ಬೆಲೆಯು ಈಗ ನೂರಕ್ಕೆ ೪೦-೪೫ಕ್ಕೆ ಇಳಿದದೆ; ಇನ್ನೂ ಇಳಿಯುತ್ತಲಿದೆ. ಆ ಮಾನದಿಂದ ತೀರ್ವೆಯೂ ಇಳಿಯಬೇಕಲ್ಲವೇ?

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪಾಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ! ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ. ಸೂ. ' ಇಂಡಸ್ಟ್ರಿಯಲ್ ವಿಮೆ ' ಎಂಬ ' ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.]

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು:- ಮೆಸರ್ಸ್ ಜೀವನ ಏಜನ್ಸಿ, ಕಾರವಾರ.

ದ್ವಿಗುಣವಾದ ಲಾಭವನ್ನು ಹೊಂದಿರಿ!

ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ!!

ಮಕ್ಕಳ ಲಿವರ್ ಕಂಪ್ಲೈಂಟು (ಕೂರ್ಮವ್ಯಾಧಿ) ಮತ್ತು ಜ್ವರಗಡ್ಡೆಗೆ

ಜಮ್ಮಿ ವೆಂಕಟರಮಣಯ್ಯನವರ

'ಲಿವರ್ ಕ್ಯೂಅರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಿರಿ!

ಹೆಚ್ಚಿನ ಮಾಹಿತಿಗೆ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ.

ಹೈಗುಂದ ಕುರ್ವೆ ಬೆಲ್ಲ!

ಸುಧಾರಿಸಿದ ಪದ್ಧತಿಯಿಂದ ತಯಾರಿಸಿದ

ಮಡಕೆ ಬೆಲ್ಲ.

ಹೊನ್ನಾವರ— ರಾ| ಕೊಡ್ಲ ವಾಸುದೇವ ಶಾನಭಾಗ.
ಕುಮಟಾ— ರಾ| ಮೂಲಜಿ ದೇವಜಿ ಶೇಟ.
ಕಾರವಾರ— ರಾ| ನಾಗಪ್ಪಾ ರವಳ ಮಹಾಲೇ.

ಇವರಲ್ಲಿ ಮಾರುವದಕ್ಕೆ ವ್ಯವಸ್ಥೆ ಮಾಡಿರುತ್ತೇವೆ. ಮುಡೆಬೆಲ್ಲ ಬೇಕಾದರೆ ಆರ್ಡರ ಕೊಟ್ಟಲ್ಲಿ ತಯಾರಿಸಿ ಕೊಡುವೆವು. ಕೆಂಪು ಮೋರಿಶಸ್ ಮತ್ತು ದಾಸ-ಕಬ್ಬಿನ ಬೀಜ ನಮ್ಮಲ್ಲಿ ಸೋಯಿ ದರದಿಂದ ಸಿಗುತ್ತದೆ. ತಾ. 15—1—1935.

ಎಮ್. ಪಿ. ನಾಡಕರ್ಣಿ, ಹೇರಂಗಡಿ,

ತಾಲೂಕ— ಹೊನ್ನಾವರ.

ಸುಲಭ ಕ್ರಯ! **ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ.** ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿ

(Registered Trade Mark.)



ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಏರ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೨, ವ್ಹಿ. ಪಿ. ೪ ಆಣೆ ಡಜನ್ ೧ಕ್ಕೆ ರೂ. ೨-೮-೦. ವಿ. ಪಿ. ೦-೫-೦.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:—ಗುರುಬಸದ ಅಂಡ್ ಕಂಪನಿ ಲಿಮಿಟೆಡ್. ಪೋ. ಬಾ. ೫೧೦, ಪಾರ್ಕಟೌನ, ಮದರಾಸ.

ಓಂ

'दशमूलारिष्ट.'
'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆರ್ಯ ವೈದ್ಯರ ಕಡೆಗೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ ಆದರೆ ಇದರಲ್ಲಿ ಬರುವ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯ ಲ್ಲಿ ಸಿಗದೆ ಇರುವದು ದುರ್ಲಭವಾಗಿರುವದರಿಂದ ಅವರ ಗುಣಗಳು ಸರಿಯಾಗಿ ಕಂಡುಬರು ಇರುವುದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವತ್ತೊಂದು ವನಸ್ಪತಿಗಳ ನ್ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದ್ದು ಅಲ್ಲದೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನ ಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಕೋಗ ಲಾಡಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನೂ ಉಂಟು ಮಾಡಿ ಆನಂದಗೊಳಿಸುತ್ತದೆ.

ಜಾರೀಳ ಅರುಚಿ, ಕೆಮ್ಮು, ದಮ್ಮು ಗುಲ್ಮ (ವಾತ, ಕ್ಷಯ, ವಾಂತಿ) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಟವ್ಯಾಧಿ, ಮೂಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ತಟ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ನಂಜಿನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆ ಬೊಳಿವ ೦ ತಾದ ರೋಗಗಳಿಗೆ ಅತ್ಯುತ್ತಮವಾಗಿ ಉಪಯೋಗಿಸುತ್ತದೆ.

ವಿಶೇಷವಾಗಿ ಹೆಂಗಸರಿಗೆ.— ಪ್ರಸೂತಿ ಆದ ನಂತರ (ದಿನ ಎರಡಾದನೇ) ಒಂದೊಂದು ಔನ್ಸಿನಂತೆ ೧೨ ದಿನಗಳ ವರೆಗೆ ಕೊಟ್ಟರೆ ಪ್ರಸೂತಿಯ ನಂ ಬಿಂದನಾಪ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ಪೂರ್ವವತ್ ಆರೋಗ್ಯವುಳ್ಳವರಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಷನ್ ಕೊಡಲಾಗುವದು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿ ಒಕ್ಕೆ ರೂ ೧—೪—೦
,, ಬಾಟ್ಲಿ ಒಕ್ಕೆ ರೂ ೬ ೧೨—೦
, ಬಾಟ ಒಕ್ಕೆ ರೂ ೧೨—೦—೦

ಇದಲ್ಲದೆ ನಮ್ಮಲ್ಲಿ ಆಯುರ್ವೇದ ಪದ್ಧತಿಯ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ ಅಶ್ವಗಂಧಿಪಾಕ, ಕೂಷ್ಮಾಂಡಪಾಕ, ದ್ರಾಕ್ಷಾಸವ ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಔಷಧಗಳು ತಯಾರ ಸಿಗುತ್ತವೆ. ಪರೀಕ್ಷೆ ಮಾಡಿ ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ.—

ಪಿ. ಅಚ್ಯುತ ಪಂಡಿತ,

ಮಾಲಕ,
ಆರ್ಯಧನ್ವಂತರಿ ಔಷಧಾಲಯ,
ಪೋಸ್ಟ — ಕುಮಟಾ. (ಉ ಕನ್ನಡ)

ಶ್ರೀರಾಮ ಪ್ರಸನ್ನ

ಡಾ। ಅಂಕಲೀಕರ ಎಮ್.ಡಿ, (ಅಮೇರಿಕ) ಸಂಕೇಶ್ವರ ಆಸ್ಪತ್ರಿ ಇವರು ದಮ್ಮು ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ ರಾಮಬಾಣ ಔಷದವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ— ಮನೆತನದ ವೈದ್ಯ!

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ದೋಷಿ ಅಥವಾ ಸಾದಾ) ನಿಮೋನಿಯಾ (ವಾಯುವ್ಯಾಪಿಯ), ಟಾಯಿಫಾಯಿಡ (ವಿಷಮಜ್ವರ) ಹೊಟ್ಟೆಶೂಲಿ, ಕಾಲರಾ, ಪ್ಲೇಗ, ಇನ್‍ಫ್ಲುಎಂಝಾ, ಸಂಧಿವಾತ, ಬಾಣತಿ ರೋಗ, (ಹಡೆಯಂಗ ಇಲ್ಲದೆ ಹಿಂದಿನಿಂದ ಸಂಭವಿಸುವ ಬಾಣಂತಿ ರೋಗಗಳ ಮೇಲೆ) ಚಿಕ್ಕ ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ ಮಲಬದ್ಧತೆ, ಪ್ರಸವೋತ್ತ, ಧಂಟಿಯಿದ ಗಂಟಲು ಬೇನೆ ಮತ್ತು ಗಂಟಲು ಬಾವುಗೆ ಧ್ವನಿ ಬೀಳುವ ರಕ್ತಹೊರಡುವದು, ಪ್ರಸಾರ ಸಂಬಂಧ ಹಲೇರೋಗ, ವಾಂತಿಯಾಗೋಣ, ಯಾವದೇ ಕಾರಣದಿಂದ ಉಂಟಾದ ದೊಡ್ಡ ಲಿವ್ಹರ (ಸ್ಪ್ಲೀನ), ಹೊಟ್ಟೆಯೊಳಗಿನ ಗಂಟು ಪುಪ್ಪುಸದ ಹಾಗೂ ಹೊಟ್ಟೆಯೊಳಗಿನ ಯಾವದೇ ವಿಕಾರ, ಧಾತುಕ್ಷೀಣತೆ, ಸ್ವಪ್ನನಷ್ಟ, ಎಲ್ಲ ತರದ ಶಕ್ತಿ, ಸ್ತ್ರೀಯರ ಪ್ರದರ ಮೊದಲಾದ ಎಲ್ಲಾ ರೋಗಗಳ ಮೇಲೆ [illegible] ಈ ಔಷಧವು ತಕ್ಕೊಳ್ಳಲಿಕ್ಕೆ ಸ್ವಾದಿಷ್ಟ, ರುಚಿಕರವಿರುವದು. [illegible] ತಕ್ಕೊಳ್ಳುವದರಿಂದ ರಕ್ತಶುದ್ಧಿ ಹಾಗೂ ರಕ್ತವೃದ್ಧಿಯಾಗಿ ವೀರ್ಯವೃದ್ಧಿಯಾಗುವದು ಮತ್ತು ಯಾವದೇ ಕಾರಣದಿಂದ [illegible] ಮನುಷ್ಯನು ಆನಂದಿತನಾಗುವನು ಹಾಗೂ ಬಹಳ ದಿವಸ ಬಾಳುವನು.

ಈ ಔಷಧದಿಂದ ೨೦ ೨೫ ವರ್ಷಗಳಿಂದ ನಮ್ಮನ್ನ ರೋಗದಿಂದ ನರಳುತ್ತಿರುವ ರೋಗಿಗಳು ಪೂರ್ಣ ಗುಣ ಹೊಂದಿರುವರು. [illegible] ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗಗಳ ಮೇಲೆ ಔಷಧಿಗಳಿಲ್ಲ [illegible] ಈ ಔಷಧ [illegible] ಈ [illegible] ಜನರು ರೋಗಮುಕ್ತರಾಗಿರುವರು [illegible] ಗುಣಪಡೆ [illegible] ಈ ಔಷಧ [illegible] ಇದನ್ನು ಹಳ್ಳಿಗರು ಕೂಡ [illegible]

ನೆಗಡಿ, ಜ್ವರ, ಕೆಮ್ಮು [illegible] ಜನರು [illegible] ದೊಡ್ಡಿಯಾ [illegible] ಈ ಕಷಾಯ ತೆಗೆದುಕೊಳ್ಳುವದರಿಂದ ಮುಂದಿನ ತ್ರಾಸು ತಪ್ಪುವದು. [illegible] ಮತ್ತು [illegible] ತಿಂಗಳು [illegible] ಇರುವದು, ಹುಡುಗರಿಗೆ ಬೇರೆ ಔಷಧತ್ತ ಕೊಡುವ ಗರಜಿಲ್ಲ. ಚಿಕ್ಕಮಕ್ಕಳ ಕರಕರೆ ನಿಲ್ಲುತ್ತದೆ. ಗರ್ಭಿಣಿ ಹೆಂಗಸರಿಗೆ [illegible]

ಲಕ್ಷ್ಮೀಬಾಯಿ ಕೊಲ್ಹಾಪುರಕರ- ಸಂಸ್ಥಾನ ಒಡೆಯ ದಾ. ಅಸ್ಸಾ [illegible] ತಮ್ಮ "ಕಲ್ಪತರು ಕಷಾಯ" ಈ ಔಷಧದ [illegible] ಪ್ರಸಂಗ ಬಂತು [illegible] ಔಷಧ ತಕ್ಕೊಂಡ ಅರ್ಧ [illegible] ಇಲ್ಲ.
ತಾ ೧—೫—೧೯೩೩

ಶ್ರೀಯುತ ಪ್ರೊ. ಹ. ಶಿರಹಟ್ಟಿಕರ, ಪಾ.ಡೇಕರ ಬಿಲ್ಡಿಂಗ ಮುಂಬಯಿ. ತಾ ೧—೪—೩೪ ತಮ್ಮ "ಕಲ್ಪತರು ಕಷಾಯ"ದ ಮೇಲೆ [illegible] ನಮ್ಮ [illegible] ಬಾಟ್ಲಿಗಳನ್ನು [illegible] ಅರ್ಧ [illegible]

ನಟರತ್ನ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪುರಕರ ಮೊದಲಾದ [illegible] ಪ್ರಶಂಸಾ ಪತ್ರಗಳನ್ನು ಕೊಟ್ಟಿರುತ್ತಾರೆ.

ಔಷಧೀ ದಂತಮಂಜನ

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು, ಕೀವು, ರಕ್ತ ಹಲ್ಲು [illegible] ಈ ಔಷಧವನ್ನು [illegible] ಸಾಲಿಗೆ [illegible]

ಇದಲ್ಲದೆ, ಥಂಡಿ ಜ್ವರ, (ಮಲೇರಿಯಾ) ದ ಮೇಲೆ ಮಿಶ್ರಣ, ಶೌಚಕ್ಕೆ ಸವಿ ಔಷಧ, ಜಂತುನಾಶಕ ಕಷಾಯ, ಕೊಲೆರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೆಶಲ್ ಔಷಧಗಳು ನಮ್ಮಲ್ಲಿ ಸಿಗುತ್ತವೆ.

ಶ್ರೀರಾಮ ಆಯುರ್ವೇದಿಕ ಫಾರ್ಮಸಿ. ಗಡಹಿಂಗ್ಲಜ. (ಕೊಲ್ಹಾಪುರ ಸಂ.)

☞ ಕುಮಟೆಯಲ್ಲಿ ಸಿಗುವ ಪತ್ತೆ— ಕಲಬ ಗಕರ ದುಕಾನ, ಕುಮಟಾ.

Reg No B 1270. Monday, 11th February, 1935

ವರ್ಷ ೧೭

ಪತ್ರದ ವರ್ಗಣಿ.

೧ ವರ್ಷದಲ್ಲಿ ಅಗಾವು ರೂಪಾಯಿ 2-4-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಆ ಖರ್ಚು ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಸಂಚಿಕೆ ೩೪

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಪ್ರಾಥ ಮ್ಯದ (೧೫ ಎಟ್ ಉದ್ದ) ೮ ಸಾಲುಗಳವರೆಗೆ ರೂ 1-0-0 ಆ ನಂತ್ರ ಪ್ರತಿಸಾಲಿಗೆ 0-1-0 ಹನ್ನೆರಡಗದ ಸಾಲು ಎಷ್ಟು ಕೊಟ್ಟಿರುವರೋ ಆ ದರಾ ದಿಂದ ಅಷ್ಟು ಸಾಲುಗಳು ಹಿಡಿ ಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿ ಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಸೋಮವಾರ ತಾರೀಖು ೧೧ ಮಾಹೆ ಫೇಬ್ರುವರಿ ಸನ್ ೧೯೩೫ ನೇ ಇಸವಿ.)—

1906ರಲ್ಲಿ

ಅಲ್ಪಾವಸ್ಥೆಯಲ್ಲಿ ಹುಟ್ಟಿ ಶೈಶವವನ್ನು ಮಂಗಳೂರಿನಲ್ಲಿಯೇ ಕಳೆದು, ಕೌಮಾರ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ, ಯೌವನದ ಆದಿಯಲ್ಲಿಯೇ ಮುಂಬಾಯಿ, ಕೊಚ್ಚಿ, ತಿರುವಾಂಕೂರು, ಮೈಸೂರು ಸಂಸ್ಥಾನಗಳಲ್ಲಿಯೂ ಪಸರಿಸಿ, ವಿಖ್ಯಾತಿ ಪಡೆದು, ಇನ್ನೂ ಅಭಿವೃದ್ಧಿಪಟ್ಟು, ದೇಶಸೇವೆಯನ್ನು ಮಾಡಲಿಚ್ಛಿಸುವ ಮುದ್ರಾಸ ಸಂಸ್ಥಾನದ ದೇಶೀಯ ಜೊಯಿಂಟ್ ಸ್ಟೊಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ ಲಿಮಿಟೆಡ್.

ತೆತ್ತ ಮೂಲಧನ: ರೂ. 330,900.

ಕ್ಷೇಮನಿಧಿಗಳು: ರೂ. 444,647

ಠೇವಣಾತಿಗಳು: ರೂ. 57,67,040.

ಆಫೀಸುಗಳು — ಮಂಗಳೂರು, ಮುಂಬಾಯಿ, ಆಲಪ್ಪೆ, ಕೊಚ್ಚಿ, ಎರ್ನಾಕುಲಂ, ಕಲ್ಲಿಕೋಟೆ, ಬೆಂಗಳೂರು, ಚಿಕ್ಕಮಗಳೂರು, ಪುತ್ತೂರು, ಕಾಸರಗೋಡು, ಕಾರ್ಕಳ, ಉಡುಪಿ, ಕುಂದಾಪುರ, ಗಂಗೊಳ್ಳಿ, ಮತ್ತು ಬಂಟವಾಳ

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

CANARA BANK LTD.

The Canara Industrial & Banking Syndicate, Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Head Office — Mukund Nivas, UDIPI

Branches — Udipi, Bangalore City, Mangalore, Kasaragod, Cannanore, Brahmavar, Honnavar, Karwar, Hubli, Belgaum, Sirsi, Kumta, Hangarkatta, Coondapur, Ankola, Kanhangad & Bellary

ಬಡ್ಡಿಯ ದರ.

(Current) ಚಾಲತಿ ಠೇವು. **(Savings Bank)** ಸೇವಿಂಗ್ಸ ಬೇಂಕ ಠೇವು

ಪ್ರತೀ ದಿನದ ಶಿಲ್ಕಿನ ಮೇಲೆ ಶೇಕಡಾ 2 ರೂಪಾಯಿ	6ನೇ ತಾರೀಕಿನಿಂದ ತಿಂಗಳ ಅಂತ್ಯದ ವರೆಗೆ, ಅತಿ ಕಡಿಮೆ ಶಿಲ್ಕಿನ ಮೇಲೆ ಶೇಕಡಾ 3½ ರೂಪಾಯಿ

[Fixed deposits] ಕಾಯಂ ಠೇವು.

3ರಿಂದ 5ತಿಂಗಳ ವರೆಗೆ ಶೇಕಡಾ 4	12ರಿಂದ 23 ತಿಂಗಳ ವರೆಗೆ ಶೇಕಡಾ 5
5 ,, 11 ,, ,, ,, 4½	24 ತಿಂಗಳಿಗೆ ಶೇಕಡಾ 5½

ಅಲ್ಪ ಅವಧಿಯ ಠೇವುಗಳು ಶೇಕಡಾ 3½ ರೂಪಾಯಿಯಂತೆ ಅಂಗೀಕರಿಸಲ್ಪಡುವವು

ಚಿನ್ನಾಭರಣಗಳ ಒಡಿನ ಮೇಲೆ ಸಾಲಗಳನ್ನು ಕೊಡುತ್ತದೆ

ಚೆಕ್ಕು, ಹುಂಡಿ, ಮತ್ತು ಡ್ರಾಫ್ಟುಗಳು ಇವೇ ಮೊದಲಾದ ಬೇಂಕಿನ ಎಲ್ಲಾ ತರದ ವ್ಯವಹಾರಗಳು ನಡಿಸಲಾಗುವವು

ಹೆಚ್ಚಿನ ಮಾಹಿತಿಗೆ ಪತ್ರದ್ವಾರಾ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು

Kumta,
2—12—1934

T. RANGA PAI,
Agent at KUMTA

|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||

ಬನ್ನಿರಿ ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, **ಕುಮಟಾ.** (ಉ. ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ ಬೆಳಗಾಂವ ಕಡೆಗೆ ಹೋಗುವ ಟ್ರಾವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

" ದಿ ಮೊಡರ್ನ ಹಿಂದೂ ಹೊಟೆಲ್ " ದಲ್ಲಿ ಬಂದು ಅನುಭವ ಪಡೆಯಿರಿ !

ಸೂಚನೆ - ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ.

ಜಿಲ್ಲಾ ಬೋರ್ಡಿನ ಬೇಡಿಕೆಗಳಿಗೆ ದಿವಾಣ ಸಾಹೇಬರ ನಕಾರ!

ನಿಮ್ಮ ಸ್ಥಿತಿ ಅಷ್ಟು ಹಾಳಿಲ್ಲ! ಸರಕಾರದ ಬಳಿ ದುಡ್ಡಿಲ್ಲ!!

ಸ್ಥಾನಿಕ ಸ್ವರಾಜ್ಯ, ಜಂಗಲು, ಆರೋಗ್ಯರಕ್ಷಣ ಮತ್ತು ರಸ್ತೆ ಈ ಇಲಾಖೆಗಳ ಸಚಿವರಾದ ನಾ। ಸರ್ ಕಸಾ ನವಾಜ ಭಾತೋರವರು ಕಳೆದ ತಿಂಗಳ ಕೊನೆಗೆ ಕಾರವಾರಕ್ಕೆ ಬಂದಾಗ, ಜಿಲ್ಲಾ ಲೋಕಲ್ ಬೋರ್ಡು, ಕಾರವಾರ ಮ್ಯುನಿಸಿಪಾಲಿಟಿ, ಮತ್ತು ಮುಸ್ಲಿಮ್ ಶಿಕ್ಷಣ ಸಂಘ ಈ ಸಂಸ್ಥೆಗಳೂ, ಕೊಂಕಣ ಮರಾಠಾ ಜಾತಿಯವರೂ ಮಾನಪತ್ರಗಳನ್ನರ್ಪಿಸಿ ಸತ್ಕರಿಸಿದರು. ಆಯಾ ಸಂಸ್ಥೆಗಳು ಕೊಟ್ಟ ಮಾನಪತ್ರಗಳ ಮತ್ತು ಅವಕ್ಕೆ ದೊರೆತ ಪ್ರತ್ಯುತ್ತರಗಳ ಸಾರಾಂಶಗಳು ಇದರಡಿ ಕೊಟ್ಟೆವು.

ಜಿಲ್ಲಾ ಬೋರ್ಡಿನ ಬೇಡಿಕೆಗಳು.

ತಮ್ಮ ಆಡಳಿತದ ಖಾತೆಗಳಿಗೂ, ನಮ್ಮ ಜಿಲ್ಲೆಗೂ ನಿಕಟ ಸಂಬಂಧ. ಮುಂಬಯಿ ಇಲಾಖೆಯ ಉತ್ತರ ತುದಿಯ ನಿವಾಸಿಕರಾದ ತಮಗ ದಕ್ಷಿಣ ತುದಿಯ ನಮ್ಮ ಜಿಲ್ಲೆಯು ವಿಲಕ್ಷಣವಾಗಿ ತೋರಬಹುದು. ಮಂತ್ರಿಪದಾರೂಢರಾದ ಕೆಲವು ದಿವಸಗಳಲ್ಲೇ ನಮ್ಮ ಕಷ್ಟಗಳ ಜ್ಞಾನ ಮಾಡಿಕೊಳ್ಳಲೋಸುಗ ನಮ್ಮಲ್ಲಿ ಚಿತ್ತೈಸಿದವರು ತಾವೇ ಮೊದಲು. ಈ ೫—೬ ದಿನಗಳಲ್ಲಿ ತಾವೇ ನಮ್ಮ ಅಡಚಣಿಗಳನ್ನು ಕಣ್ಣಾರೆ ಕಂಡಿದ್ದೀರಿ. ಕೆಲವು ದಿನಗಳ ಹಿಂದೆ ನಾ। ಗವ್ಹರ್ನರರು ನಮ್ಮ ಜಿಲ್ಲೆಗೆ ಭೆಟ್ಟಿ ಕೊಟ್ಟು ಹೋಗಿದ್ದಾರೆ. ಅವರಿಗೆ ಅರ್ಪಿಸಿದ ಮಾನಪತ್ರದ ನಕಲು ಒಂದು ಮಾಹಿತಿ ಬಗ್ಗೆ ತಮಗೆ ಅರ್ಪಿಸಿವೆ. ಈಗ ನಾವು ನಮ್ಮ ಸ್ಥಿತಿಗತಿಯನ್ನೂ ಆವಶ್ಯಕತೆಗಳನ್ನೂ ಅರುಹುವೆವು.

ಕಾನಡಾ ಜಿಲ್ಲೆಯು ಶೇಕಡಾ ೮೦ರಷ್ಟು ಕ್ಷೇತ್ರ ಬೆಟ್ಟದಲ್ಲಿ ಸೇರಿದೆ. ನಮ್ಮ ಮತದಾರರೂ, ರಸ್ತೆಗಳೂ, ಬೋರ್ಡಿನ ಆಸ್ತಿಯ ಬಹು ಭಾಗವೂ ಕೂಡ ದಟ್ಟವಾದ ಬೆಟ್ಟದ ಮಧ್ಯದಲ್ಲಿರುವವು. ಆದ್ದರಿಂದ ಜಂಗಲ ಖಾತೆಯು ಉತ್ಪನ್ನದೊಳಗಿಂದ ರಾಜ್ಯಾಡಳಿತ ನಮಗೆ ಪಟ್ಟಿ ಕೊಡಿಸಬೇಕು. ೫ ವರ್ಷಗಳ ಹಿಂದೆ ನಾ। ಸ್ಮಿತ್ ದೊರೆಗಳು ಇಲ್ಲಿ ಬಂದಾಗ ಅವರು ನುಡಿದದ್ದೇನಂದರೆ:— “ಜಂಗಲ ಖಾತೆಯು ಉತ್ಪನ್ನದೊಳಗಿಂದ ಪಟ್ಟಿ ಕೊಡಿಸುವದು ನ್ಯಾಯವೆಂತ ಕಾಣುತ್ತದೆ. ಹಾಗೆ ಮಾಡಲಿಕ್ಕೆ ಕಾಯಿದೆ-ಅಡಚಣಿಗಳು ಬಹಳ. ಮೇಲಾಗಿ ಈ ಪಟ್ಟಿ ಕೊಟ್ಟರೆ, ಜಂಗಲ ಖಾತೆಯವರು ನಿಮ್ಮ ರಸ್ತೆಗಳನ್ನು ಉಪಯೋಗಿಸಿದ ಬಗ್ಗೆಂದು ನಿಮಗೆ ಕೊಡಲಾಗುವ ವಿಶಿಷ್ಟ ಗ್ರಾಂಟು ಬಂದಾಗಬಹುದು!” ಜಂಗಲ ಖಾತೆಯವರು ಮುಂಚೆ ರೂ ೨೫೦೦೦ ಕೊಡುತ್ತಿದ್ದರು. ಈಗ ಈ ಹಣ ರಸ್ತೆಯನ್ನು ಇಲಾಖೆಯಿಂದ ಸಿಗುತ್ತದೆ. ಹೀಗೆಯೇ ನಡೆದರೆ ಜಂಗಲ ಖಾತೆಯವರು ನಮಗೆ ಏನೂ ಕೊಡ ತಕ್ಕದ್ದಿಲ್ಲವೆಂದು ಮುಂದೆ ಗ್ರಹಿಕೆಯಾದೀತು. ಆ ಪಟ್ಟಿಯನ್ನು ತಾವು ಕೊಡಿಸಬೇಕು.

ಈ ಜಿಲ್ಲೆಯಲ್ಲಿ ಇಂಜನಿಯರ ಖಾತೆಯ ರಸ್ತೆಗಳಿಗಿಂತ ನಮ್ಮ ಬೋರ್ಡಿನ ರಸ್ತೆಗಳೇ ಹೆಚ್ಚು. ನಮ್ಮ ರಸ್ತೆಗಳಲ್ಲದಿದ್ದರೆ, ರೈತರಿಗೂ ಜಂಗಲ ಖಾತೆಯವರಿಗೂ ತಮ್ಮ ಹುಟ್ಟುವಳಿಯನ್ನು ಪೇಟೆಗೆ ಒಯ್ಯಲು ಬಹು ಕಷ್ಟವಾಗುತ್ತಿತ್ತು. ಜಂಗಲು ಬೆಳೆದದ್ದರಿಂದ ಮಳೆ ವಿಪರೀತ ಬೀಳುತ್ತಿದೆ. ನಮ್ಮಲ್ಲಿದ್ದಷ್ಟು ಹೊಳೆ-ಹಳ್ಳಗಳು ಇನ್ನೆಲ್ಲೂ ಇಲ್ಲ. ಮಳೆಯಿಂದ ರಸ್ತೆಗಳು ಕೊಳೆದು ಹೋಗುತ್ತಿವೆ; ಅಲ್ಲಲ್ಲಿ ಹಾಳಾಗುತ್ತಿವೆ. ಪ್ರತಿ ವರುಷ ಅಲ್ಲಲ್ಲಿ ರಸ್ತೆ ದುರುಸ್ತಿ ಮಾಡಬೇಕಾಗುತ್ತಿದೆ. ಸಂಕಗಳನ್ನು ಕಟ್ಟಿಸಬೇಕಾಗುತ್ತಿವೆ. ಈ ಸಂಕಗಳಿಲ್ಲದಿದ್ದರೆ ಹಳ್ಳಿಗರಿಗೂ ಡಾಕ್ಟರ, ಪೋಲೀಸ, ಉಗ್ರಾಣಿ, ಟಪಾಲು ಪೇದೆಯೇ ಮೊದಲಾದ ಸರಕಾರಿ ನೌಕರರಿಗೂ ಸಹ ಮಳೆಗಾಲದಲ್ಲಿ ಹಳ್ಳಿ-ಹಳ್ಳಿಗಳೊಳಗೆ ತಿರುಗಾಡಲು ಸಾಧ್ಯವಾಗುತ್ತಿದ್ದಿಲ್ಲ. ಈ ಸಂಕಗಳು ಬಿದಿರು, ಅಡಿಕೆಮರ, ಕಾಟುಬಳ್ಳಿ ಮೊದಲಾದವುಗಳಿಂದ ಕಟ್ಟಲಾಗುತ್ತವೆ. ಮುಂಚೆ ಅವು ಪುಕ್ಕಟೆ ಸಿಗುತ್ತಿದ್ದವು; ಕಳೆದ ವರ್ಷದಿಂದ ಈ ಸಾಮಾನುಗಳಿಗೆ ದುಡ್ಡು ಕೊಡಬೇಕಾಗಿ ಜಂಗಲ ಖಾತೆಯವರು ಬೇಡಹತ್ತಿದ್ದಾರೆ. ದುಡ್ಡು ಕೊಡಲೇಬೇಕೆಂದು ಅವರು ಹಟ ತೊಟ್ಟರೆ ನಾವು ಸಂಕಗಳನ್ನು ಕಟ್ಟುವದನ್ನು ಬಿಡಬೇಕಾದೀತು! ಹಳ್ಳಿಗರು ವನವಾಸ ಅನುಭವಿಸಬೇಕಾದೀತು. ಇತ್ತೀಚೆಗೆ ರಸ್ತೆ ಅಗಲ ಮಾಡಲಿಕ್ಕೆ ಬೇಕಾದ ಸ್ಥಳ ಸಹ ಕೊಡಲಿಕ್ಕೆ ಜಂಗಲ ಖಾತೆಯು ತಕ್ರಾರು ಮಾಡುತ್ತಿದೆ. ರಸ್ತೆಯಿಂದ ೩೦ ಅಡಿ ಅಂತರದೊಳಗಿನ ಕಾಡು ಗಿಡಗಳನ್ನು ಕಡಿಸಬೇಕಾಗಿಯೂ, ಬೋರ್ಡಿಗೆ ಬೇಕಾದ ಬೆಟ್ಟದ ಸಾಮಾನು ಪುಕ್ಕಟೆಯಾಗಿ ಪೂರೈಸಬೇಕಾಗಿಯೂ ನಮ್ಮ ಬೇಡಿಕೆಯಿದೆ.

ನಮ್ಮ ಜಿಲ್ಲೆಯ ಸ್ಥಿತಿಯೇ ಬೇರೆ. ಜನರಲ್ಲಿ ಸಾಮುದಾಯಿಕ ಭಾವನೆಯ ಅಭಾವ. ಹೀಗಾಗಿ ಸಂಘಶಕ್ತಿಯಿಂದ ಹಳ್ಳಿಗಳ ಸುಧಾರಣೆ ಮಾಡಿಕೊಳ್ಳಬೇಕೆಂಬ ಹಂಬಲವೂ ನಮ್ಮಲ್ಲಿ ತೋರುವದಿಲ್ಲ. ಗ್ರಾಮ-ಪಂಚಾಯತಗಳಿಂದ ನಮ್ಮ ಹಳ್ಳಿಗಳ ಉದ್ಧಾರವಾಗುವಂತಿದೆ. ಸರಕಾರದವರು ಅವುಗಳನ್ನು ಬೇಗನೆ ಸ್ಥಾಪಿಸಿಕೊಡಬೇಕು. ಮೊದಮೊದಲು ಹಣದ ಪೂರೈಕೆ ಮಾಡಿಕೊಡಬೇಕು. ಈ ಬಗ್ಗೆ ಒಬ್ಬ ಕಾರ್ಯದರ್ಶಿಯಾದರೆ ಒಳ್ಳೆಯದು. ಈಗಿನ ಕಲೆಕ್ಟರರು ಪಂಚಾಯತು ಸ್ಥಾಪನೆ ಕಾರ್ಯವನ್ನು ಮನಮುಟ್ಟಿ ಮಾಡುತ್ತಿದ್ದಾರೆ.

ಲೋಕಲ್ ಬೋರ್ಡ ಕಾಯದೆಯ ಕಲಂ ೭೫ (೧) ರಂತೆ ಕರಗಳ ಮತ್ತು ಬೇಲಿಸು ಮೇಲಿನ ಉತ್ಪನ್ನ ತೆಗೆದುಕೊಂಡ ಬಗ್ಗೆ ಸಿಗುವ ಹಣವು ಬೋರ್ಡಿಗೆ ಸಲ್ಲತಕ್ಕದ್ದು. ಈ ಬಾಬುಗಳಿಂದ ಎಷ್ಟು ಹಣ ಸಿಗುತ್ತದೆಂದು ನಮ್ಮ ಕಡೆ ಲೆಕ್ಕವಿಲ್ಲ. ಆದು ಇಂಟಿಗಳ ದಂಡವನ್ನು ನಾವು ಒಲ್ಲೆವು. ಉಸುಬಿನ ಹಣ ಕಸ್ಟಮ್ ಖಾತೆಯವರು ಕೊಳ್ಳುತ್ತಾರೆ, ಕಣಿವಾಣ ತೆಗೆದದ್ದರ ಹಣ ಜಂಗಲ ಖಾತೆಯವರು ಕೊಳ್ಳುತ್ತಾರೆ. ಖಾಸಗಿ ಮಾಲಿಕರ ಕಡೆಯಿಂದ ಸಿಗುವ ಹಣ ರೆವಿನ್ಯೂ ಖಾತೆಗೆ ಹೋಗುತ್ತದೆ. ಎಷ್ಟರಮಟ್ಟಿಗೆ ಈ ಹಣ ಬೋರ್ಡಿಗೆ ಸಿಗುತ್ತದೆ ತಾವು ಅನುಭವಿಸಿದ್ದೀರಿ. ನಮ್ಮ ಹಕ್ಕು ಕಾಯಬೇಕು.

ಸನ್ ೧೮೭೭ರಲ್ಲಿ (ಉಪ್ಪಿನ ಸತ್ಯಾಗ್ರಹದ ಬಳಿ) ಸೊಂಡಿ ಹಿತ್ತಲಲ್ಲಿ ಗಾಡಿ-ಬಿಕ್ಕಿಯ ಬಗ್ಗೆ ಸರಕಾರದಿಂದ ೧೦ ಎಕರೆ ಸ್ಥಳ ನಮಗೆ ಕೊಟ್ಟಿತ್ತು. ಈ ತನಕ ನಾವೇ ತೀರ್ವೆ ತೆರುತ್ತ ಬಂದದ್ದೇವೆ. ೧೯೨೬ನೇ ಇಸ್ವಿಯ ಮಾರ್ಚ ತನಕ ಜಿಲ್ಲಾ ಬೋರ್ಡಿನ ಅಧ್ಯಕ್ಷರು ಕಲೆಕ್ಟರರಿದ್ದರು, ತಾಲೂಕ ಬೋರ್ಡುಗಳ ಅಧ್ಯಕ್ಷರು ಅಸಿಸ್ಟಂಟ ಕಲೆಕ್ಟರರಾಗಿದ್ದರು. ೧೯೩೩ನೇ ಇಸ್ವಿಯ ಆಡಳಿತದ ಜವಾಬದಾರಿ ಕಲೆಕ್ಟರರ ಮೇಲೆ ಇರುತ್ತದೆ. ಹೀಗಿದ್ದಾಗ್ಯೂ ಸದರಿ ೧೦ ಎಕರೆ ಸ್ಥಳದ ಬಗ್ಗೆ ೧೯೧೫ನೇ ಇಸ್ವಿಯಿಂದ ಈ ವರೆಗಿನ ಬಿನ್—ಶೇತಕಿ ಆಕಾರ ತುಂಬಬೇಕಾಗಿ ಹುಕುಮು ಬಂದಿದೆ! ಈ ಸ್ಥಳ ೧೯೨೬ರಲ್ಲಿ ನಮಗೆ ಗಾಡಿ-ಬಿಕ್ಕಿಯ ಬಗ್ಗನೇ ಸಿಕ್ಕಿದ್ದು. ಆಗ ಬಿನ್-ಶೇತಕಿ ಆಕಾರದ ಕಲ್ಪನೆ ಸಹ ಇದ್ದಿಲ್ಲ. ಈಗ ಆ ಆಕಾರ ಕೇಳಬಹುದೇ? ಈ ಅನ್ಯಾಯದ ಹುಕುಮು ತಾವು ರದ್ದುಪಡಿಸುವಿರಾಗಿ ನಾವು ಕೋರುತ್ತೇವೆ.

ಭಟಕಳ ಮತ್ತು ಮುಂಡಗೋಡ ಪೇಟೆಗಳಲ್ಲಿ ನಮ್ಮ ಕಚೇರಿಗಳಿಲ್ಲ. ರೆವಿನ್ಯೂ ಇಲಾಖೆಯ ಅಬ್ಕಾರಿ ಕಾರಕೂನರಿಂದ ನಮ್ಮ ಕೆಲಸ ಮಾಡುತ್ತಿದ್ದರು. ಆ ಬಗ್ಗೆ ನಾವೇನೂ ಕೊಡುತ್ತಿದ್ದಿಲ್ಲ. ಮುಂದೆ ಪ್ರತಿ ಕಾರಕೂನನಿಗೆ ದರ ಮಹಾ ರೂ. ೫ರಂತೆ ಪಗಾರ ಕೊಡಬೇಕೆಂದು ಸರಕಾರ ಆಜ್ಞಾಪಿಸಲಾಯಿತು. ಈ ವರ್ಷದಿಂದ ಈ ಕಾರಕೂನರಿಗೆ ವಿಶೇಷ ಕೆಲಸ ಬೀಳುವದಿಲ್ಲವಾದ್ದರಿಂದ ದರಮಹಾ ರೂ. ೨॥ ಯಂತೆ ಕೊಟ್ಟರೆ ಸಾಕೆಂತಲೂ, ಬಾಕಿ ಹಣ ಸರಕಾರಕ್ಕೆ ಜಮಾ ಮಾಡಬೇಕೆಂತಲೂ ಹುಕುಮವಾಗಿದೆ. ಈ ಸಂಬಳ ನಮ್ಮಿಂದ ಕೊಳ್ಳುವದು ನ್ಯಾಯವಲ್ಲ. ಕಚೇರಿಯೊಳಗೆ ಬೋರ್ಡಿನ ಧರ್ಮಶಾಲೆಯನ್ನು ಗ್ರಾಮಚಾವಡಿ ಬಗ್ಗೆ ಉಪಯೋಗಿಸುತ್ತಾರೆ; ಧರ್ಮಶಾಲೆಯ ದುರುಸ್ತಿ ಖರ್ಚು ನಾವೇ ತೆರುತ್ತೇವೆ. ಈ ಇಮಾರತನ್ನು ಗ್ರಾಮಪಂಚಾಯತಿಗಾಗಲಿ, ಸ್ಥಾನಿಕ ಶೇತಕಿ ಸಂಘಕ್ಕಾಗಲಿ ಹಂಗಾಮಿ ಉಪಯೋಗಕ್ಕೆ ಕೊಡದಮಾಡಿದಾಗ, ಅಧಿಕಾರಿಗಳು ತಕ್ರಾರು ಮಾಡಿ, ಅದನ್ನು ಗ್ರಾಮಸ್ಥರಿಗೆ ಬಿನ್-ಭಾಡಿಗೆಯಿಂದ ಕೊಡದಿದ್ದರೆ ಗ್ರಾಂಟು ಕೊಡಲಿಕ್ಕಿಲ್ಲವೆಂತ ಬೆದರಿಕೆ ಹಾಕಿದರು. ಅದೇ ಯಲ್ಲಾಪುರದ ಜಂಗಲ ಖಾತೆಯ ಅನೇಕ ಇಮಾರತುಗಳು ಖಾಲಿ ಬಿದ್ದಿರುವದಾಗ್ಯೂ, ತಾಲೂಕಾ ಲೋಕಲ್ ಬೋರ್ಡಿನ ಕಚೇರಿ ಬಗ್ಗೆ ನಮಗೊಂದು ಇಮಾರತು ಕೊಡಿರೆಂದು ಬೇಡಿದರೂ ಕೊಡುವದಿಲ್ಲ. ಇದ್ಯಾವ ನ್ಯಾಯ? ತಾವು ಚೌಕಸಿ ಮಾಡಿ ಜಂಗಲ ಖಾತೆ ಕಡೆಯಿಂದ ನಮಗೊಂದು ಖಾಲಿಯಿದ್ದ ಇಮಾರತು ಸಿಗುವಂತೆ ಮಾಡುವಿರಾಗಿ ನಂಬಿಗೆಯಿದೆ.

ಶಿಕ್ಷಣ, ದವಾಖಾನೆ, ಮೈಲಿ ಟೋಚ್ಚುವಿಕೆ, ದನಗಳ ದವಾಖಾನೆ ಇವುಗಳ ಮೇಲೆ ನಮ್ಮ ಖರ್ಚು ಬೆಳೆಯುತ ನಡೆದಿದೆ. ಆದರೆ ಸರಕಾರಿ ನಿಯಂತ್ರಣವು ದಿನೇ ದಿನೇ ಬಿಗಿಯಾಗುತ್ತಲಿದ್ದು ಗ್ರಾಂಟಿನ ರಕಮು ಮಾತ್ರ ಕುಗ್ಗುತ್ತ ಹೋಗಿದೆ. ಆಸ್ಪತ್ರೆಗಳಿಗೂ ಔಷಧಗಳ ಬೆಲೆಯ ಹಣ ಮತ್ತು ೧೦೦ಕ್ಕೆ ೪೦ರಂತೆ ಪಟ್ಟಿಗೆ ಹಣ ದುಂಗಡವಾಗಿ ಸರಕಾರದ ಕಡೆ ತೇವಿಡಬೇಕಾಗಿ ಆಜ್ಞೆ ಹೊರಟಿದೆ! ಇದರಿಂದ ಬೋರ್ಡಿಗೆ ಅಪಮಾನವಾಗುತ್ತದೆಂಬ ಕಲ್ಪನೆಯಿಲ್ಲ! ಈ ಸ್ಥಿತಿಯು ಮುಂದವರಿದರೆ ನಾವು ಕೆಲವು ದವಾಖಾನೆಗಳನ್ನು ಮುಚ್ಚುವ ದುರ್ಧರ ಪ್ರಸಂಗ ಒದಗಿಬರುವದು! ಆಸ್ಪತ್ರೆಗಳ ಬಗ್ಗೆ ನಾವು ವರುಷ ರೂ. ೩೪೦೦೦ದಷ್ಟು ಖರ್ಚು ಮಾಡುತ್ತೇವೆ. ಸರಕಾರದಿಂದ ಸಿಗುವದು ಬರೇ ೫೯೩೦ ರೂಪಾಯಿ. ದನಗಳ ಆಸ್ಪತ್ರೆಗೆ ನಾವು ೫೦೦೦ ರೂ. ವೆಚ್ಚ ಮಾಡಿದರೆ, ಸರಕಾರದವರು ೧೩೫೧ ರೂ. ಕೊಡುತ್ತಾರೆ. ಮೈಲಿ ಟೋಚ್ಚುವಿಕೆಗೆ ನಮ್ಮ ಖರ್ಚು ರೂ. ೧೩೦೦೦ಕ್ಕೆ ಬಂದರೆ, ಸರಕಾರದಿಂದ ರೂ. ೪೫೦ ಮಾತ್ರ ಸಿಗುತ್ತದೆ. ಸರಕಾರದಿಂದ ಸಿಗುವ ಹಣವು ಸರಕಾರಕ್ಕೆ ಪೂರೈಸಬೇಕಾದ ಮಾಹಿತಿಯನ್ನು ಒಟ್ಟುಗೂಡಿಸಿ ಪೂರೈಸುವ ಖರ್ಚಿಗೂ ಸಾಕಾಗದು! ಮೇಲಾಗಿ ನಮ್ಮ ಮೇಲೆ ಸರಕಾರದ ಅಧಿಕಾರ! ಸರಕಾರವು ನಮಗೀಯುವ ಸಹಾಯವಿದೇ ಏನು?

ಮಾರ್ಗಗಳ ರಚನೆ-ದುರುಸ್ತಿಗೋಸ್ಕರ ನಮಗೆ ಕೊಡಲಾಗುವ ಹಣವು ಇಂಜನಿಯರ ಖಾತೆಯ ರಸ್ತೆಗಳ ಖರ್ಚಿನ ದಶಾಂಶ ಸಹ ಇರುವದಿಲ್ಲ. ರೈತರಿಗೆ ನಮ್ಮ ರಸ್ತೆಗಳೆಂದರೇ ಉಪಯೋಗ; ಸರಕಾರಿ ರಸ್ತೆಗಳು ಉಪಯೋಗವಿಲ್ಲ. ಜಿಲ್ಲೆಯಲ್ಲಿ ಮಳೆ ಹೇರಳ ಬೀಳುತ್ತಿರುವದರಿಂದಲೂ, ಮೋಟಾರ ಗಾಡಿಗಳ ಸಂಚಾರವು ಹೆಚ್ಚಾದ್ದರಿಂದಲೂ ಹೊಸ ರಸ್ತೆಗಳನ್ನು ತಯಾರಿಸಬೇಕೆಂತಲೂ, ಇದ್ದವುಗಳನ್ನು ಸುಧಾರಿಸಬೇಕೆಂತಲೂ ಜನರು ಕೂಗುತ್ತಾರೆ. ಆದರೆ ನಮ್ಮ ಬೋರ್ಡಿಗೆ ತ್ರಾಣವಿಲ್ಲ. ಇತರ ಜಿಲ್ಲೆಗಳಲ್ಲಿ ರಸ್ತೆ-ಕಾರಗಾರ ಬಗ್ಗೆ ಬೋರ್ಡುಗಳಿಗೆ ಇಂಜನಿಯರ ಖಾತೆಯಿಂದ ಪೆಟ್ರೋಲ-ತೆರಿಗೆಯ ನಿಧಿಯಿಂದಲೂ ಹಣ ಸಿಗುತ್ತದೆ; ನಮ್ಮ ಜಿಲ್ಲೆಯಲ್ಲಿ ಅಂಕೋಲೆಯ ಬಳಿ ಪುಜಗೇರಿ ಸಂಕಕ್ಕೆ “ಹೊವಲ್ಲ, ಹೂವಿನ ಎಸಳಂ” ದಂತೆ ರೂ. ೫೦೦೦ ಕೊಡುತ್ತೇವಾಗಿ ವಚನ ಕೊಟ್ಟು ಕೊಡಲಿಲ್ಲ! ನೀರು ಪುರವಟೆ ಬಗ್ಗೆ ಸಿಗುವದು ಕ್ಷುಲ್ಲಕ ರಕಮು. ನಮಗಾಗುವ ಅನ್ಯಾಯ ನೋಡಿ ಸರಕಾರದವರು ಇನ್ನಾದರೂ ಈ ಬಡ ಜಿಲ್ಲೆಯ ಬಗ್ಗೆ ಕನಿಕರಪಡಬಾರದೇ?

ಕಾಲಿಗಳ ಕಾರಭಾರವನ್ನು ಬೋರ್ಡಿಗೆ ಕೊಡುವ ಮುಂಚೆ, ಸರಕಾರಕ್ಕೆ ಕಾಲು ಇಮಾರತುಗಳ ಭಾಡಿಗೆ ಬಗ್ಗೆ ರೂ. ೧೨೦೦ ಖರ್ಚು ಬರುತ್ತಿತ್ತು. ಬೋರ್ಡು ಈಗ ರೂ. ೩೬೦೦ ತೆರಬೇಕು! ಮುಂಚೆ ಕೆಲವು ಶಾಲೆಗಳು ದೇವಾಲಯಗಳಲ್ಲಿದ್ದವು. ಸರಕಾರ ಆಜ್ಞೆಯಂತೆ ಈ ದೇವಾಲಯದವರು ಎಲ್ಲ ಜಾತಿಯವರನ್ನು ಒಳಸೇರಗೊಡಲು ಒಪ್ಪುವದಿಲ್ಲವಾದ್ದರಿಂದ ಹೊಸ ಇಮಾರತುಗಳನ್ನು ಹೆಚ್ಚಿಗೆ ಭಾಡಿಗೆ ಕೊಟ್ಟು ನಾವು ಕೊಳ್ಳುವ ಪ್ರಸಂಗ ಬಂತು. ಈ ರೀತಿ ಸರಕಾರಿ ಹುಕುಮು ಪಾಲಿಸಲಿಕ್ಕಾಗಿ ನಮ್ಮ ಖರ್ಚು ಮುಮ್ಮಡಿ ಬೆಳೆದರೂ ಸರಕಾರವು

ದಿವಾಣರಿಗೆ ಪ್ರವಾಸ ಮಾಡುವಾಗ ಮಾರ್ಗದಮೇಲೆ ಹುಲಿ ಭೆಟ್ಟಿಯಾಗಲಿಲ್ಲ!

ಈ ಕಾರಿಕಾ ಕೊಡುವ ಗ್ರಾಂಟು ಕೇವಲ ಅರಷ್ಟೇ ಇದೆ. ಈ ವಿಷಯದಲ್ಲಿ ನಮಗೆ ನ್ಯಾಯ ಸಿಕ್ಕೀತೇ?

ಬೋರ್ಡಿಗೆ ಸಂಬಂಧಪಟ್ಟ ಶಾಲೆ ಹಾಗೂ ಮಾಸ್ತರರುಗಳ ಕೂಡಲು ಸರಕಾರದವರೇ ಕಂಟ್ರಾಕ್ಟರಿಂದ ಮಾಲ ಮಾಡಿ ಬೋರ್ಡಿನ ಲೆಕ್ಕಕ್ಕೆ ಹಾಕಿ ಕೊಳ್ಳುತ್ತಾರೆ. ಈ ಕಂಟ್ರಾಕ್ಟರರು ಜಾಮೀನು ಕೊಡುವದಿದೆ. ಬೋರ್ಡಿನ ನೌಕರರೂ, ಶಾಲಾ ಶಿಕ್ಷಕರೂ ಜಾಮೀನು ಕೊಡುವದುಂಟು. ಅವರು ಹೇಗೂ ಸರಕಾರಿ ನೌಕರರೇ. ಹೀಗಿದ್ದರೂ, ಕದೆಯಾವರ ಜಾಮೀನು ಕೊಳ್ಳುವಾಗ, ಜಾಮೀನದಾರರು ಸ್ಥಿತಿವಂತರೋ ಹ್ಯಾಗೆ ಎಂಬ ಬಗ್ಗೆ ಶಿಫಾರಸ ಪತ್ರ ಕೊಡಲಿಕ್ಕೆ ಸಹ ಅಧಿಕಾರಿಗಳು ತಯಾರಿಲ್ಲ! ಸರಕಾರದವರು ಸ್ಥಾನಿಕ ಸ್ವರಾಜ್ಯಕ್ಕೆ ಕೊಡುವ ಪ್ರೋತ್ಸಾಹ ಇದೇ ಬಗೆಯದೇನು?

ನಮ್ಮ ಜಿಲ್ಹೆಯ ದೊಡ್ಡ ಭಾಗ ಬೆಟ್ಟ. ಉಳಿದ ಭಾಗದಲ್ಲೂ ಹುಲ್ಲಿನ ಕ್ಷೇತ್ರ ಹೆಚ್ಚು ಭೂಮಿ, ಒಕ್ಕಲಿಗರ ಬಡತನವಂತೂ ಲೋಕವಿಖ್ಯಾತ ಸಂಗತಿ. ಎಂದ ಮೇಲೆ ಬೋರ್ಡಿನ ಉತ್ಪನ್ನ ತೀರ ಕಡಿಮೆಯೆಂದು ಹೇಳಬೇಕಿಲ್ಲ. ಆದರೆ ಬೋರ್ಡಿನ ಆಡಳಿತೆಯ ಕ್ಷೇತ್ರ ಮತ್ತು ಜವಾಬದಾರಿಗಳು ಮಾತ್ರ ಕಡಿಮೆಯಿಲ್ಲ. ಆದ್ದರಿಂದ ಜಿಲ್ಹೆಯಲ್ಲಿ ಕಮಾಯಗಾರರ ಮೇಲೆ ಕರ ಹೇರುವ ಪ್ರಸಂಗ ಬಂತು. ಈ ಕರವನ್ನು ಗ್ರಾಮಸ್ಥರ ಮುಖಾಂತರ ವಸೂಲ ಮಾಡಿಕೊಡಬೇಕಾಗಿ ನಾವು ಕಲೆಕ್ಟರರ ಕಡೆ ಬಿನ್ನವಿಸಿದೆವು. ಕಲೆಕ್ಟರರು ಮೊದಲು ಈ ಬಗ್ಗೆ ಏನು ಸಂಬಳ ಕೊಡುತ್ತೀರೆಂದು ಕೇಳಿದರು, ಮುಂದೆ ಈ ಕೆಲಸ ತಮ್ಮಿಂದ ಸಾಧ್ಯವಿಲ್ಲೆಂದು ಹೇಳಿಬಿಟ್ಟರು. ಇದರ ಮೇಲಿಂದ ಸರಕಾರದವರು ಸ್ಥಾನಿಕ ಸ್ವರಾಜ್ಯದ ಬೆಳವಣಿಗೆಗೆ ವಿರೋಧ ಬಗೆಯುತ್ತಾರೆಂದು ತಿಳಿಯಲಾಗದೇ? ಈ ಕುರಿತು ಆಲೋಚನೆ ಮಾಡಿ ತಾವು ಯೋಗ್ಯ ಹುಕುಮು ಕೊಡುವಿರಾ?

ಕಡೆಯದಾಗಿ ನಾವು ಬೇಡುವದಿಷ್ಟೇ: ಸಂಕಟ ಕಾಲದ ನೆವ ಹೇಳಿ ಮಾಡಿದ ಗ್ರಾಂಟು ಕಡಿತಗಳ ಕತ್ತರಿ ಹಾಕಿ. ಬಜೆಟ್ ಬೆಳೆದ ಮಾನದಿಂದ ಹೆಚ್ಚಿಗೆ ಗ್ರಾಂಟು ಕೊಡಿರಿ. ನಮ್ಮ ಎಸ್ಟಿಮೇಟುಗಳ ತಪಾಸಣೆಗೆ ಇಂಜನಿಯರ ಖಾತೆಯವರು ಆಕರಿಸುವ ತಪಾಸಣೆ-ಫೀ ರದ್ದುಪಡಿಸಿರಿ. ಜಂಗಲ ಖಾತೆಯು ನಮ್ಮ ಕಡೆ ಪ್ರೇಮದಿಂದ ಸಹಕಾರ ಮಾಡುವಂತೆ ಹೇಳಿರಿ. ನಮಗೆ ಸಿಗುವ ಹಣ ಒಂದೇ ಗಂಟಿನಿಂದ ದೊರೆಯುವಂತೆ ವ್ಯವಸ್ಥೆ ಮಾಡಿರಿ. ನಾವು ಏನೂ ಕಾಮಗಾರಿ ಮಾಡಿದ್ದಾಗ್ಯೂ ಮಾಸಿಕ ವರದಿ ಕಳಿಸಬೇಕಂತೆ! ಕಾಮಗಾರಿ ಇಲ್ಲದಿದ್ದರೂ ಮಾಸಿಕ ವರದಿ ಕಳಿಸಲು ತಪ್ಪು ಎನಿಸುವಾದರೆ ಗ್ರಾಂಟು ಕತ್ತರಿಸಲಿಕ್ಕೆ ಅದ್ದು ಕಾರಣವಾಗಬೇಕೇನು? ನಾವು ಬಯಸುವದು ಹಳ್ಳಿಯ ರಸ್ತೆಗಳು, ವೈದ್ಯಕ ಸಹಾಯ, ಸರಕಾರದಿಂದ ಸಹಾನುಭೂತಿಯ ಸಹಕಾರ. ನಮ್ಮ ಕಾರಕೀರ್ದಿಯಲ್ಲಿ ಜಂಗಲ ಖಾತೆಯು ರೈತರ ವ್ಯವಸಾಯಕ್ಕೆ ಸಹಾಯಕಾರಿಯಾಗುವದೆಂತಲೂ, ಎಲ್ಲರನ್ನೂ ಬಿಟ್ಟು ತಾನೇ ಸತ್ತಾಧೀಶವಾಗುವ ಹವಣಿಕೆ ಬಿಡುವದೆಂತಲೂ ನಂಬಿಕೊಂಡಿದ್ದೇವೆ. ಬೆಟ್ಟದೊಳಗಿನ ಕಾಡುಪ್ರಾಣಿಗಳು ನಮ್ಮ ದನ-ಕರುಗಳ ಸಂಹಾರ ನಡೆಸಿವೆ. ದನ-ಕರುಗಳಿಗೆ ಮೇಯಲು ಸ್ವತಂತ್ರ ಸ್ಥಳವಿಲ್ಲ. ಆದ್ದರಿಂದ ಹುಲ್ಲುಬನ್ನಿ ಹರಾಜ ಮಾಡುವದು ನ್ಯಾಯವಲ್ಲ. ಚಕ್ರವರ್ತಿಗಳ ರೌಪ್ಯ ಮಹೋತ್ಸವದ ಮಂಗಲ ಸಮಯದಲ್ಲಾದರೂ ಹುಲ್ಲುಬನ್ನಿ ಮಾಫಿಯಾದೀತೆಂದು ನಮಗೆ ಆಶೆಯಿದೆ. ತಮ್ಮ ದರ್ಶನದಿಂದ ನಮ್ಮ ಸಂಕಷ್ಟಗಳು ಪರಿಹಾರವಾಗುವವೆಂದು ನಾವು ನೆರೆ ನಂಬಿದ್ದೇವೆ.

ದಿವಾಣರ ಉತ್ತರ.

ಮೇಲಿನ ಮಾನಪತ್ರಕ್ಕೆ ಉತ್ತರ ಕೊಡುವಾಗ ಸರ್ ಸಾಹೇಬರು ನುಡಿದದ್ದೇನೆಂದರೆ:—

ಇಡೀ ಇಲಾಖೆಯಲ್ಲಿ ನಿಮ್ಮ ಜಿಲ್ಹೆಯಷ್ಟು ಸುಂದರ ಅನ್ಯ ಜಿಲ್ಹೆಯಿಲ್ಲ. ಹವಮಾನವಾದರೂ ಉತ್ತಮವಿದೆ; ನಿಮ್ಮಲ್ಲಿ ಬಂಗಾಲ ಖರಾಬ ಭೀತಿಯಿಲ್ಲ! ನಿಮ್ಮ ಮಾನಪತ್ರದಲ್ಲಿ ಹಲವೇ ಸಂಗತಿಗಳು ಅಡಕವಾಗಿವೆ. ಅವನ್ನೆಲ್ಲ ಚರ್ಚಿಸುವದು ಸಾಧ್ಯವಿಲ್ಲ. ಕೆಲವು ಸಂಗತಿಗಳನ್ನಷ್ಟೇ ಪರಿಶೀಲಿಸುವೆನು.

ಜಂಗಲ ಉತ್ಪನ್ನದೊಳಗಿಂದ ನೀವು ಪಾಲು ಬೇಡುತ್ತೀರಿ, ಆ ಕುರಿತು ಹಿಂದೆ ಬಹಳ ಚರ್ಚೆಯಾಗಿದೆ. ನಿಮ್ಮ ಬೇಡಿಕೆ ಮಾನ್ಯ ಮಾಡಲಾಗದು. ನಿಮಗೆ ಜಂಗಲ ಖಾತೆಯಿಂದ ಹೆಚ್ಚು ದೊಡ್ಡ ರಕಮು ಸಿಗುತ್ತದೆಂಬುದನ್ನು ಮರೆಯಬೇಡಿರಿ. ಸಂಕಟಗಳ ಕಟ್ಟೋಣಕ್ಕೆ ಅವಶ್ಯವಿರುವ ಬಿದಿರು, ಚಿತ್ತ ಮುಂತಾದವುಗಳ ಬಗ್ಗೆ ನಿಮ್ಮ ಕಡೆ ತಿಮ್ಮಪ್ಪ ಬೇಡಿ ಮಾಡಿದ ಹುಕುಮುಗಳ ವಿಚಾರ ನಾನು ಮಾಡುವೆನು. ಜಂಗಲ ಖಾತೆಯವರು ಉಪಯುಕ್ತ ಇಮಾರತು ಕಟ್ಟಿಗೆ, ಜಲಾವ ಕಟ್ಟಿಗೆ ನಿರರ್ಥಕವಾಗಿ ಸುಡುತ್ತಾರೆಂದು ನೀವು ಹೇಳುತ್ತೀರಿ. ಆ ಬಗ್ಗೆ ಸಜ್ಜನ ವಿಗತವಾದ ಮಾಹಿತಿ ಕೊಡಿರಿ. ನಾನು ಬೇಕಾದ ಮಾಡುವೆನು. ಹಾಗವಾನಿ ಗಿಡಗಳ ಬೆಳವಣಿಗೆಗಾಗಿ ಸ್ಥಳ ಸ್ವಚ್ಛಗೊಳಿಸುವ ಪ್ರಸಂಗಕ್ಕೆ ನಿಮ್ಮ ತಕ್ರಾರು ಸಂಬಂಧಿಸಿರುವದಾದರೆ ಅದು ಸರಕಾರ ಪದ್ಧತಿಯಿಂದಲೇ ನಡೆಯುತ್ತಿದೆ. ಮಾರಾಟಕ್ಕೆ ಯೋಗ್ಯವಾದ ಕಟ್ಟಿಗೆ ಎಂದೂ ಸುಡಲ್ಪಡುವದಿಲ್ಲ.

ಗ್ರಾಮ-ಪಂಚಾಯತಿಗಳ ಸಂಘಟನೆಯು ನಿಮ್ಮಲ್ಲಿ ಜಯಶಾಲಿಯಾಗುವದೆಂದು ಕೇಳಿ ನಾನು ಸಂತೋಷಪಡುತ್ತೇನೆ. ಸರಕಾರದವರು ಈ ಬಗ್ಗೆ ರೂ. ೧೦೦೦೦ ಮಂಜೂರ ಮಾಡಿದ್ದಾರೆ. ನಿಯಮಗಳು ತಯಾರಾಗಿವೆ. ಈ ಕಾರ್ಯದಲ್ಲಿ ಬೇಗನೇ ಪ್ರಗತಿಯಾಗುವದೆಂದು ನನಗೆ ಆಶೆಯಿದೆ. ಪಂಚಾಯತಿಗಳಿಂದ ನಿಮ್ಮ ಆರ್ಥಿಕ ಉನ್ನತಿಯಾಗುವದಷ್ಟೇ ಅಲ್ಲ, ರಾಜಕಾರಣದ ಶಿಕ್ಷಣವೂ ದೊರೆಯುವಂತಿದೆ. ಹೊಸ ರಾಜಕೀಯ ಸುಧಾರಣೆಗಳು ಬಾಗಿಲಲ್ಲಿ ಬಂದು ನಿಂತಿವೆ. ಭಾವೀ ಘಟನೆಯು ಯಾವ ಬಗೆಯದಿದ್ದಾಗ್ಯೂ ಅದು ಯಶಸ್ವಿಯಾಗಲಿಕ್ಕೆ ಮತದಾರರಿಗೆ ಶಿಕ್ಷಣ ಬೇಕು. ಓದು-ಬರೆಯುವ ಶಿಕ್ಷಣವಲ್ಲ; ಸ್ಥಾನಿಕ ಸ್ವರಾಜ್ಯ ನಡೆಸುವ ಶಿಕ್ಷಣ ಬೇಕು. ಗ್ರಾಮ ಪಂಚಾಯತಿಗಳೇ ಸ್ಥಾನಿಕ ಸ್ವರಾಜ್ಯದ ತಳಹದಿ. ಅವುಗಳ ಸ್ಥಾಪನೆಗೆ ನೀವು ಸಹಾಯ ಮಾಡತಕ್ಕದ್ದು.

ಗಾಡಿ ಬಿಸ್ಕಿಯ ಸ್ಥಳದ ಬಗ್ಗೆ ಬಿನ್-ಶೇತಕಿ ಆಕಾರ ಬೇಡುವರೆಂತ ನೀವು ಹೇಳುತ್ತೀರಿ. ಯಾವ ಉಪಯೋಗದ ಬಗ್ಗೆ ಸ್ಥಳ ಕೊಟ್ಟಿತ್ತೋ ಅದರ ಹೊರತು ಬೇರೆ ಉಪಯೋಗವಾದಲ್ಲಿ ಮಾತ್ರ ಬಿನ್-ಶೇತಕಿ ಆಕಾರ ಕೇಳುತ್ತೇವೆಂಬುದನ್ನು ಲಕ್ಷದಲ್ಲಿಡಿರಿ. ಕಲೆಕ್ಟರರು ನಿಮಗೆ ಎಂದೂ ಅನ್ಯಾಯ ಮಾಡರು.

ಶಿಕ್ಷಣ, ವೈದ್ಯಕೀಯ ಉಪಚಾರ ಮೊದಲಾದ ಲೋಕೋಪಕಾರ ಸಂಗತಿಗಳಿಗೋಸ್ಕರ ನಿಮಗೆ ಹೆಚ್ಚು ಖರ್ಚು ತಗಲುತ್ತದೆಂಬುದು ನಿಜ. ನಿಮ್ಮ ಅಡಚಣೆಗಳನ್ನು ನಾ ಬಲ್ಲೆ. ಆದರೆ ಸರಕಾರದ ಬಳಿ ಹಣದ ಕೊರತೆಯದ್ದರಿಂದ ಗ್ರಾಂಟು ತಗ್ಗಿಸಬೇಕಾಗಿದೆ. ಅದಕ್ಕೆ ಯಾರ ಉಪಾಯವಿದೆ? ನಿಮ್ಮ ಕಾಲುಗಳ ಮೇಲೆಯೇ ನೀವು ನಿಲ್ಲಬೇಕು. ಖರ್ಚು ತಗ್ಗಿಸಿರಿ. ಹೊಸ ಕರಗಳನ್ನು ಹೇರಿಕೊಳ್ಳಿರಿ. ಅವಶ್ಯವಿದ್ದ ನಿಧಿಯನ್ನು ಸಂಗ್ರಹಿಸಿ ಜನರಿಗೆ ಬೇಕಾದ ಸೌಕರ್ಯಗಳನ್ನು ಪೂರೈಸಿರಿ. ನೀವು ಕೊಟ್ಟ ಅಂಕಿಗಳನ್ನು ನಾನು ಟೀಕಿಸುವದಿಲ್ಲ. ಪ್ರೈಮರಿ ಶಿಕ್ಷಣಕ್ಕೆ ಸರಕಾರವು ಒಟ್ಟು ರೂ. ೪೬೦ ಕೊಡುತ್ತದೆಂಬುದು ತಪ್ಪು. ಸರಕಾರವು ರೂ. ೩೧೬೩ ಕೊಡುತ್ತದೆ.

ರಸ್ತೆಗಳ ಬಗ್ಗೆ ನಿಮ್ಮ ತೊಂದರೆಗಳನ್ನು ನಾನು ತಿಳಿದೆನು. ಈ ವಿಷಯವೆಲ್ಲ ನಾನು ಸರಿಕಾಣಿಸಿದ್ದೇನೆ. ರಸ್ತೆಗಳ ಅಭಾವದಲ್ಲಿ ರೈತರಿಗೆ ಲಾಭವಿಲ್ಲೆಂಬುದೂ ನಿಜ. ಆದರೆ ಮಾಡುವದೇನು? ಹಣಕ್ಕೆ ಸರಕಾರದ ಬಳಿ ದಾರಿಯಿಲ್ಲ! ಪ್ರಾಂತಿಕ ಸರಕಾರದ ಸಂಪತ್ತು ಬೆಳೆಯುತ್ತಲೇ ನಿಮ್ಮ ಅಡಚಣೆಗಳು ದೂರವಾಗುವವು.

ಕಮಾಯಗಾರರ ಮೇಲೆ ಕರ ಹೇರುವ ನಿಮ್ಮ ಯೋಜನೆ ಅಭಿನಂದನೀಯವಿದೆ. ಅದರ ವಸೂಲಿ ಮಾಡಲು ಕಲೆಕ್ಟರರು ಒಪ್ಪದಿದ್ದದು ಯೋಗ್ಯವೇ ಸರಿ. ನೀವೇ ಆ ಕೆಲಸ ಮಾಡಬೇಕು. ಜನರಿಗೆ ಬೇಕಾದ ದುಸ್ತು ವಸೂಲ ಮಾಡುವ ಜವಾಬದಾರಿ ಅವರದೇ ಇರುತ್ತದೆ. ಅದನ್ನು ಬೇರೆಯವರ ಮೇಲೆ ಹಾಕಲಾಗದು. ನೀವು ಹೇರಿದ ಕರ ನೀವು ಎತ್ತುವಳಿ ಮಾಡಲಾರಂಭಿಸಿದರೆ ನಿಮ್ಮ ಜನರಿಗೆ 'ಇದು ನಮ್ಮ ಪ್ರತಿನಿಧಿಗಳು ಹೇರಿದ ಕರ, ಪ್ರತಿನಿಧಿಗಳನ್ನು ಆರಿಸಿಕೊಟ್ಟ ನಾವೇ ಇದಕ್ಕೆ ಜವಾಬದಾರರು' ಎಂಬ ಗ್ರಹಿಕೆಯಾಗುವದು. ತಮ್ಮ ಪ್ರತಿನಿಧಿಗಳು ಎಂಥ ಕಾರಭಾರ ಮಾಡುತ್ತಾರೆಂಬುದು ಅವರಿಗೆ ತಿಳಿಯುವದು. ಈ ಉದ್ದೇಶದಿಂದಲೇ ಗ್ರಾಮಸ್ಥರ ಮುಖಾಂತರ ಕರ-ವಸೂಲಿಯನ್ನು ಮಾಡಲೊಪ್ಪಿಗೆಯಿಲ್ಲ. ನಿಮ್ಮ ಉತ್ಸಾಹಭಂಗ ಮಾಡುವ ಉದ್ದೇಶದಿಂದಲ್ಲ.

ಸರಕಾರದ ಸಾಂಪತ್ತಿಕ ಸ್ಥಿತಿ ಸರಿಯಿಲ್ಲ; ಆದ್ದರಿಂದ ಗ್ರಾಂಟುಗಳ ಕಡಿತವನ್ನು ತಡೆಯುವದು ಶಕ್ಯವಿಲ್ಲ. ಸ್ಥಾನಿಕ ಸ್ವರಾಜ್ಯದ ಖಾತೆಯು ನನ್ನ ಕಡೆ ಇರುವ ತನಕ ಅದರ ಹಿತಕ್ಕಾಗಿಯೇ ಕಾರಭಾರ ನಡೆಯುವಂತೆ ನಾನು ನೋಡಿಕೊಳ್ಳುವೆನು. ಆದರೆ ಕೆಲವೆಡೆ ಕಲಹಗಳು ನಡೆಯುತ್ತಿವೆ; ಕೆಲವೆಡೆ ಸ್ವಾರ್ಥಸಾಧುಗಳು ಅಲ್ಲಸಲ್ಲದ ಹಕ್ಕುಗಳನ್ನು ಮುಂದೊಡ್ಡುತ್ತಾರೆ. ಇಂಥಲ್ಲಿ ನಾವು ಯಾವದೊಂದು ನಿರ್ಣಯ ಕೈಕೊಳ್ಳಬೇಕಾಗುತ್ತದೆ. ನೀವು ಬೇಡಿದ್ದನ್ನೆಲ್ಲ ಕೊಡಲಾಗದ ಬಗ್ಗೆ ನೀವು ನನ್ನನ್ನು ಕ್ಷಮಿಸಬೇಕು.

ನಿಮ್ಮ ಅಧ್ಯಕ್ಷರು ನನ್ನ ಗೆಳೆಯರು. ಅವರು ಕ್ಯಾಬಿನೆಟ್ ಕೌನ್ಸಿಲಿನಲ್ಲಿ ಬಂದಂದಿನಿಂದ ಕಾನಡಾ ಜಿಲ್ಹೆಯ ಕುರಿತು ಬಹಳೇ ಚರ್ಚೆಯಾಗುತ್ತಿದೆ. ಅವರು ನಿಮ್ಮ ಬಗ್ಗೆ ಮನಮುಟ್ಟಿ ದುಡಿಯುತ್ತಾರೆ; ಉತ್ಸಾಹದ ಭರದಲ್ಲಿ ಅತಿಶಯೋಕ್ತಿ ಮಾಡುತ್ತಾರೆ. ಅವರು ಬಣ್ಣಿಸಿದ ನಿಮ್ಮ ದುಃಖಗಳ ಉದ್ಬುದ್ಧ ವರ್ಣನೆಯ ಮೇಲಿಂದ ಕಾನಡಾ ಜಿಲ್ಹೆಯು ಅತಿಮಾನುಷ ಜಿಲ್ಹೆ, ವ್ಯಾಘ್ರಾದಿ ಕಾಡು ಪಶುಗಳಿಂದ ತುಂಬಿ ತುಳುಕುವ ಜಿಲ್ಹೆ, ಬೆಟ್ಟದ ಬೆಳವಣಿಗೆಯ ಬಾಧೆಯಿಂದಲೂ, ರೋಗಗಳಿಂದ ಬಾಧೆಯಿಂದಲೂ ನಷ್ಟವಾದ ಊರುಗಳ ಮಸಣ ಭೂಮಿ, ಹೀಗೆ ಕಲ್ಪನೆಯಾಗಿದ್ದಿತು! ಈ ಜಿಲ್ಹೆಯಲ್ಲಿ ಪ್ರವಾಸ ಮಾಡುವಾಗ ಮಾರ್ಗದ ಮೇಲೆ ಒಂದಿಷ್ಟು ಹುಲಿಗಳು ಭೆಟ್ಟಿಯಾದಾವೆಂದು ನಾನು ತಿಳಿದಿದ್ದೆ. ಆದರೆ ದೈವಯೋಗದಿಂದ ಒಂದು ಹುಲಿ ಸಹ ಕಣ್ಣಿಗೆ ಬೀಳಲಿಲ್ಲ! ಈ ಜಿಲ್ಹೆಯಷ್ಟು ಮನೋಹರ ಭೂಮಿಯನ್ನು ನಾನು ಎಂದೂ ನೋಡಿಲ್ಲ. ನಿಮ್ಮ ಕೆಲವು ಅಂದವಾದ, ಫಲ-ಪುಷ್ಪಗಳಿಂದ ತುಂಬಿದ ತೋಟಗಳನ್ನು ನೋಡಿ ನಾನು ಹರುಷಭರಿತನಾದೆನು! ರಾಗಂಗೊಳ್ಳಿಯ ಪತ್ರಿಕಾಧ್ಯಕ್ಷರ ಅಧ್ಯಕ್ಷರು ನಿಮಗೆ ಸಿಕ್ಕ ಬಗ್ಗೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ.

ಕಾರವಾರ ಮುನಿಸಿಪಾಲಿಟಿಯ ಮಾನಪತ್ರ.

ಕಾರವಾರ ಮ್ಯುನಿಸಿಪಾಲಿಟಿಯವರು, ತಮ್ಮ ಮಾನಪತ್ರದಲ್ಲಿ ಜಿಲ್ಹೆಯಲ್ಲಿ ಉದ್ಯೋಗಗಳ ಅಭಾವವಿದ್ದುದರಿಂದಲೂ ಬೇಸಾಯದ ಉತ್ಪನ್ನದಿಂದ ಚರಿತಾರ್ಥ ಸಾಗುವಂತಿಲ್ಲದ್ದರಿಂದಲೂ ದಾರಿದ್ರ್ಯವೇ ನಮ್ಮ ಹಣೇಬರಹವಾಗಿದೆಯೆಂದು ಬಣ್ಣಿಸಿದ್ದರು. ಕಾರವಾರ ಸಿವ್ಹಿಲ ಆಸ್ಪತ್ರೆಯ ಮುಂದಿನ ಸರಕಾರಿ ರಸ್ತೆಯ ಮೇಲೆ ಡಾಂಬರದ ಮಾರ್ಗ ತಯಾರಿಸಬೇಕಾಗಿ ಸೂಚಿಸಿದ್ದರು. ವೆಕ್ಸಿನ್ ಔಷಧವನ್ನು ಪುಕ್ಕಟೆ ಪೂರೈಸಬೇಕಾಗಿ ಬೇಡಿದ್ದರು. ಅಸಿಸ್ಟಂಟ ಕಲೆಕ್ಟರ ಹೊಂದಿದ್ದ ಬಂಗಲೆಯು ಖಾಲಿಯುಳ್ಳ ಮೈದಾನವನ್ನು ಸಾರ್ವಜನಿಕ ಆಟ-ಪಾಟಗಳ ಉಪಯೋಗಕ್ಕೆ ದಯಪಾಲಿಸಬೇಕಾಗಿ ಹೇಳಿಕೊಂಡಿದ್ದರು. ಕಾರವಾರದಲ್ಲಿ ದನಗಳ ಆಸ್ಪತ್ರೆಯೊಂದು ಸ್ಥಾಪಿಸಬೇಕಾಗಿ ಪ್ರಾಂತಾಧಿಪರ ಕಡೆ ಮಾಡಿದ ಬೇಡಿಕೆಯನ್ನು ಇನ್ನೊಮ್ಮೆ ಮುಂದೊಡ್ಡಿದ್ದರು. ಕಾರವಾರ ಆಸ್ಪತ್ರೆಯಲ್ಲಿ ಸ್ತ್ರೀ ಡಾಕ್ಟರರ ನೇಮಣೂಕಿ ಮಾಡಿದ ಬಗ್ಗೆ ಪ್ರಾಂತಾಧಿಪರಿಗೆ ತಮ್ಮ ಕೃತಜ್ಞತೆಯನ್ನು ತಿಳಿಸಲಿಕ್ಕೆ ಬಿನ್ನೈಸಿದ್ದರು. ಪ್ಲೇಗು ಬೇನೆ ಕಾಯಂ ವಾಸ್ತವ್ಯಕ್ಕೆ ಬಂದು ನಾಶ ಕೊಟ್ಟ ಕಾರವಾರದೊಳಗಿನ ಹೊಲಸು ಕೇರಿಗಳ ಉಚ್ಚಾಟನ ಕಾರ್ಯಕ್ಕೆ ಸರಕಾರದ ಸಹಾಯ ಬೇಡಿದ್ದರು.

ಜಿಲ್ಲಾ ಬೋರ್ಡಿನ ಬೇಡಿಕೆಗಳಿಗೆ ದಿವಾಣ ಸಾಹೇಬರ ನಕಾರ!

ನಿಮ್ಮ ಸ್ಥಿತಿ ಅಷ್ಟು ಹಾಳಿಲ್ಲ! ಸರಕಾರದ ಬಳಿ ದುಡ್ಡಿಲ್ಲ!!

ಧಾರ್ಮಿಕ ಸ್ವರೂಪ್ಯ ಜಂಗಲ, ಆರೋಗ್ಯರಕ್ಷಣ ಮತ್ತು ರಸ್ತೆ ಈ ಇಲಾಖೆಗಳ ಸಚಿವರಾದ ನಾ| ಸರ್ ಕನಾ ನವಾಜ ಭುಕೋಲರವರು ಕಳೆದ ತಿಂಗಳ ಕೊನೆಗೆ ಕಾರವಾರಕ್ಕೆ ಬಂದಾಗ, ಜಿಲ್ಲಾ ಲೋಕಲ್ ಬೋರ್ಡ್, ಕಾರವಾರ ಮ್ಯುನಿಸಿಪಾಲಿಟಿ, ಮತ್ತು ಮುಸ್ಲಿಮ್ ಲೀಗ್ ಸಂಘ ಈ ಸಂಸ್ಥೆಗಳೂ, ಕೊಂಕಣ ಮರಾಠಾ ಜಾತಿಯವರೂ ಮಾನಪತ್ರಗಳನ್ನರ್ಪಿಸಿದರು. ಆಯಾ ಸಂಸ್ಥೆಗಳು ಕೊಟ್ಟ ಮಾನಪತ್ರಗಳ ಮತ್ತು ಅವಕ್ಕೆ ದಿವಾನ ಪ್ರತ್ಯುತ್ತರಗಳ ಸಾರಾಂಶಗಳು ಇದರಡಿ ಕೊಟ್ಟಿವೆ.

ಜಿಲ್ಲಾ ಬೋರ್ಡಿನ ಬೇಡಿಕೆಗಳು

ನಮ್ಮ ಅಧ್ಯಕ್ಷರು ... ನಮ್ಮ ಜಿಲ್ಲೆಗೂ ನಿಕಟ ಸಂಬಂಧ ಮುಂಬಯಿ ಇಲಾಖೆಯ ಉತ್ತರ ತುದಿಯ ನಿವಾಸಿಗಳಾದ ತಮಗೆ ದಕ್ಷಿಣ ತುದಿಯ ನಮ್ಮ ಜಿಲ್ಲೆಯು ವಿಲಕ್ಷಣವಾಗಿ ತೋರಬಹುದು ಎಂತ್ತಿದ್ದೇವೆ. ರಾಜ್ಯದ ಕೆಲವೇ ದಿನಗಳಲ್ಲಿ ನಿಮ್ಮ ಕಷ್ಟಗಳ ಜ್ಞಾನ ಮಾಡಿಕೊಳ್ಳಲಿಕ್ಕಾಗಿ ನಮ್ಮಲ್ಲಿ ಬಿತ್ತಯಿಸಿದವರು ತಾವೇ ಮೊದಲು. ಈ ೫-೬ ದಿನಗಳಲ್ಲಿ ತಾವು ನಮ್ಮ ಅಡಚಣೆಗಳನ್ನು ಕಣ್ಣಾರೆ ಕಂಡಿದ್ದೀರಿ. ಕೆಲವು ದಿವಸಗಳ ಹಿಂದೆ ನಾ| ಗವರ್ನರರು ನಮ್ಮ ಜಿಲ್ಲೆಗೆ ಭೆಟ್ಟಿ ಕೊಟ್ಟು ಹೋಗಿದ್ದಾರೆ. ಅವರಿಗೆ ಅರ್ಪಿಸಿದ ಮಾನಪತ್ರದ ನಕಲು ಒಂದು ಮಾಹಿತಿ ಬಗ್ಗೆ ತಮಗೆ ಅರ್ಪಿಸಿದೆ. ಈಗ ನಾವು ನಮ್ಮ ಸ್ಥಿತಿಗತಿಯನ್ನೂ ಆವಶ್ಯಕತೆಗಳನ್ನೂ ಅರುಹುವೆವು.

ಕಾನಡಾ ಜಿಲ್ಲೆಯು ಕೇವಲ ಅರಣ್ಯ ಕ್ಷೇತ್ರ ಬಿಟ್ಟರಲ್ಲಿ ಸೇರಿದೆ. ನಮ್ಮ ಮುಖ್ಯವಾದ ರಸ್ತೆಗಳೂ, ಬೋರ್ಡಿನ ಇಸ್ತಿಯ ಬಹು ಭಾಗವೂ ಕೂಡ ದಟ್ಟವಾದ ಬೆಟ್ಟದ ಮಧ್ಯದಲ್ಲಿರುವವು. ಅದ್ದರಿಂದ ಜಂಗಲ ಖಾತೆಯ ಉತ್ಪನ್ನದೊಳಗಿಂದ ರಾಜ್ಯದ ಹಾನಿಯಾಗಬಂದರೆ ನಮಗೆ ಪಟ್ಟಿ ಕೊಡಬೇಕು. ೨ ವರ್ಷಗಳ ಹಿಂದೆ ನಾ| ಸ್ಮಾರ್ಟ್ ದೊರೆಗಳು ಇಲ್ಲಿ ಬಂದಾಗ ಅವರು ನುಡಿದದ್ದೇನೆಂದರೆ «ಜಂಗಲ ಖಾತೆಯ ಉತ್ಪನ್ನದೊಳಗಿಂದ ಪಟ್ಟಿ ಕೊಡಿಸುವದು ನ್ಯಾಯವೆಂತ ಕಾಣುತ್ತದೆ. ಹಾಗೆ ಮಾಡಲಿಕ್ಕೆ ಕಾಯಿದೆ-ಅಡಚಣೆಗಳು ಬಹಳ ಮೇಲಾಗಿ ಉಂಟು ಕೊಟ್ಟರೆ, ಜಂಗಲ ಖಾತೆಯವರು ನಿಮ್ಮ ರಸ್ತೆಗಳನ್ನು ಉಪಯೋಗಿಸಿದ ಬಗ್ಗೆಂದು ನಿಮಗೆ ಕೊಡಲಾಗುವ ವಿಶಿಷ್ಟ ಗ್ರಾಂಟು ಬಂದಾಗಬಹುದು!» ಜಂಗಲ ಖಾತೆಯವರು ಮುಂಚೆ ರೂ ೨೫೦೦೦ ಕೊಡುತ್ತಿದ್ದರು. ಈಗ ಈ ಹಣ ರಸ್ತೆ ಇಲಾಖೆಯಿಂದ ಸಿಗುತ್ತದೆ. ಹೀಗೆಯೇ ನಡೆದರೆ ಜಂಗಲ ಖಾತೆಯವರು ನಮಗೆ ಏನೂ ಕೊಡತಕ್ಕದ್ದಿಲ್ಲವೆಂದು ಮುಂದೆ ಗ್ರಹಿಕೆಯಾದೀತು. ಅದಕ್ಕೆ ಪಟ್ಟಿಯನ್ನು ತಾವು ಕೊಡಿಸಬೇಕು.

ಈ ಜಿಲ್ಲೆಯಲ್ಲಿ ಇಂಜಿನಿಯರ ಖಾತೆಯ ರಸ್ತೆಗಳಿಗಿಂತ ನಮ್ಮ ಬೋರ್ಡಿನ ರಸ್ತೆಗಳೇ ಹೆಚ್ಚು. ನಮ್ಮ ರಸ್ತೆಗಳಲ್ಲಿ ರದ್ದಿ ರೈತರಿಗೂ ಜಂಗಲ ಖಾತೆಯವರಿಗೂ ಅತ್ಯ ಹುಟ್ಟಿ ಮೇಲಿಯನ್ನು [illegible] ಬಹು ಕಷ್ಟವಾಗುತ್ತಿತ್ತು. ಜಂಗಲು ಬೆಳೆದದ್ದರಿಂದ ಮಳೆ ವಿಪರೀತ ಬೀಳುತ್ತಿದೆ. ನಮ್ಮಲ್ಲಿದ್ದಷ್ಟು ಹೊಳೆ-ಹಳ್ಳಗಳು ಇನ್ನೆಲ್ಲೂ ಇಲ್ಲ. ಮಳೆಯಿಂದ ರಸ್ತೆಗಳು ತೊಳೆದು ಹೋಗುತ್ತಿವೆ, ಅಲ್ಲಲ್ಲಿ ಹಾಳಾಗುತ್ತಿವೆ. ಪ್ರತಿ ವರುಷ ಅಲ್ಲಲ್ಲಿ ರಸ್ತೆ ದುರುಸ್ತಿ ಮಾಡಬೇಕಾಗುತ್ತಿದೆ. ಸಂಕಗಳನ್ನು ಕಟ್ಟಿಸಬೇಕಾಗುತ್ತಿದೆ. ಈ ಸಂಕಗಳಿಲ್ಲದ್ದರಿಂದ ಹಳ್ಳಿಗರಿಗೂ [illegible] ಬೇಲೀಫ, ಉಗಾಡಿ [illegible] ಮೊದಲಾದ ಸರಕಾರಿ ನೌಕರರಿಗೂ ಸಹ ಮಳೆಗಾಲದಲ್ಲಿ ಹಳ್ಳಿ-ಹಳ್ಳಿಗಳೊಳಗೆ ತಿರುಗಾಡಲು ಸಾಧ್ಯವಾಗುತ್ತಿದ್ದಿಲ್ಲ. ಈ ಸಂಕಗಳು ಬಿದ್ದು, ಅತಿ ಕೆಮರ ಕಾಲುಸಂಕ ಮೊದಲಾದವುಗಳಿಂದ ಕಡಾರಿಸುತ್ತೇವೆ. ಮುಂಚೆ ಅವು ಫುಕ್ಕಟೆ ಸಿಗುತ್ತಿದ್ದವು, ಕಳೆದ ವರ್ಷದಿಂದ ಈ ಸಾಗವಾನಿಗಳಿಗೆ ದುಡ್ಡು ಕೊಡಬೇಕಾಗಿ ಜಂಗಲ ಖಾತೆಯ ದರ ಬೇಡಹತ್ತಿದ್ದಾರೆ. ದರ [illegible] ಕೊಡಬೇಕೆಂದು ಅವರ ಹಟ. ಹೀಗಾದ್ದರಿಂದ ನಾವು ಸಂಕಗಳನ್ನು ಕಟ್ಟುವದನ್ನು ಬಿಡಬೇಕಾದೀತು! ಇವುಗಳು ಮನವಿಗೆ ಅನುಭವಿಸಬೇಕಾದೀತು. ಇತ್ತೀಚೆಗೆ ರಸ್ತೆ ಅಗಲ ಮಾಡಲಿಕ್ಕೆ ಬೇಕಾದ ಸ್ಥಳ ಸಹ ಕೊಡಲಿಕ್ಕೆ ಜಂಗಲ ಖಾತೆಯು ತಕರಾರು ಮಾಡುತ್ತಿದೆ. ರಸ್ತೆಯಿಂದ ೩೦ ಅಡಿ ಅಂತರದೊಳಗಿನ ಕಾಡು ಗಿಡಗಳನ್ನು ಕಡಿಸಬೇಕಾಗಿಯೂ ಬೋರ್ಡಿಗೆ ಬೇಕಾದ ಪಟ್ಟದ ಸಾಮಾನು ಫುಕ್ಕಟೆಯಾಗಿ ಪೂರೈಸಬೇಕಾಗಿಯೂ ನಮ್ಮ ಬೇಡಿಕೆಯಿದೆ.

ನಮ್ಮ ಜಿಲ್ಲೆಯ ಸ್ಥಿತಿಯೇ ಅಪಾಯಕಾರಿ. ಜನರಲ್ಲಿ ಸಾಮುದಾಯಿಕ ಭಾವನೆಯ ಅಭಾವ. ಹೀಗಾಗಿ ಸಂಘಶಕ್ತಿಯಿಂದ ಹಳ್ಳಿಗಳ ಸುಧಾರಣೆ ಮಾಡಿಕೊಳ್ಳಬೇಕೆಂಬ ಬಯಕೆಯೂ ನಮ್ಮಲ್ಲಿ ತೋರುವದಿಲ್ಲ. ಗ್ರಾಮ ಪಂಚಾಯತಗಳಿಂದ ನಮ್ಮ ಹಳ್ಳಿಗಳ ಉದ್ಧಾರವಾಗುವಂತಿದೆ. ಸರಕಾರದವರು ಅವುಗಳನ್ನು ಬೇಗನೆ ಸ್ಥಾಪಿಸಿಕೊಡಬೇಕು. ಮೊದಮೊದಲು ಹಣದ ಪೂರೈಕೆ ಮಾಡಿಕೊಡಬೇಕು. ಈ ಬಗೆ ಒಟ್ಟು ಕಾರ್ಯಭಾರ ಮಾಡದೆ ಒಳ್ಳೆ [illegible] ಈಗಿನ ಕಲೆಕ್ಟರರು ಪಂಚಾಯತು ಸ್ಥಾಪನೆ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ.

ಲೋಕಲ್ ಬೋರ್ಡ್ ಕ್ಯಾಶೆಯ ಕಲಂ ೩೫ (೧) ರಂತೆ ಕರಗಳ ದರ [illegible] ಬೆಲೆಯ ಮೇಲಿನ ಉದ [illegible] ತೆರಿಗೆ [illegible] ಸಿಗುವ ಹಣವು ಬೋರ್ಡಿಗೆ ಎಲ್ಲಕ್ಕಿಂತ [illegible] ಈ ಬಾಬುಗಳಿಂದ ಎಷ್ಟು ಹಣ ಸಿಗುತ್ತದೆಂದು ನಮ್ಮ ಕರ ಲೆಕ್ಕವಿಲ್ಲ. ಆದ ಕಾರಣ ಕಾನೂಗಳನ್ನು ನಾವು ಹಲವು ಉದಾಹರಣೆ [illegible] ಖಾತೆಯವರು ಕೊಳ್ಳುತ್ತಿರದ ಕರವನ್ನು ತೆಗೆದದ್ದರೆ ಹಣ ಜಂಗಲ ಖಾತೆಯವರು ಕೊಳ್ಳುತ್ತಾರೆ. [illegible] ಗುತ್ತದೆ [illegible] ಸಿಗುತ್ತದೆ [illegible]

ಸನ್ ೧೯೩೫ರಲ್ಲಿ ([illegible]) ಹಿತ್ತಲಲ್ಲಿ ಗಾಡಿ-ಸಿದ್ಧಿಯ ಬಗ್ಗೆ ಸರಕಾರದಿಂದ ೧೦ ಎಕರ ಸ್ಥಳ ನಮಗೆ ಕೊಟ್ಟಿತ್ತು. ಈ ಕನಕ ನಾವು ತೀವ್ರ [illegible] ಜಿಲ್ಲಾ ಬೋರ್ಡಿನ ಅಧ್ಯಕ್ಷರು ಕಲೆಕ್ಟರರಿದ್ದರು. ತಾಲೂಕ ಬೋರ್ಡುಗಳ ಅಧ್ಯಕ್ಷರು ಅಸಿಸ್ಟಂಟ ಕಲೆಕ್ಟರರಾಗಿದ್ದರು. ೧೯೩೩ನೇ ಇಸ್ವಿಯ ಅವಳತೆಯ [illegible] ಕಲೆಕ್ಟರ ಮನೆ ಇರತ್ತದೆ. ಹೀಗಿದ್ದಾಗ್ಯೂ ನದರಿಗೆ [illegible] ಎಕರೆ ಸ್ಥಳದ ಬಗ್ಗೆ ೧೯೧೯ನೇ ಇಸ್ವಿಯಿಂದ ಈ ವರೆಗಿನ ಬಿನ್-ಶೇತಕಿ ಆಕಾರ ತುಂಬಬೇಕಾಗಿ ಹುಕುಮು ಬಂದಿದೆ. ಈ ಸ್ಥಳ ೧೯೩೭ರಲ್ಲಿ ನಮಗೆ ಗಾಡಿ-ಬಿಟ್ಟಿಯ ಬಗ್ಗೆ ಸಿಕ್ಕಿದ್ದು, ಅದಕ್ಕೆ ಬಿನ್ ಶೇತಕಿ ಆಕಾರದ ಕಾರಣ ಇದ್ದಿಲ್ಲ. ಈಗ ಆಕಾರ ಕೇಳಬಹುದೇ? ಈ ಅನ್ಯಾಯದ ಹುಕುಮು ತಾವು ರದ್ದುಪಡಿಸುವಿರಾಗಿ ನಾವು ಕೋರುತ್ತೇವೆ.

ಭಟಕಳ ಮತ್ತು ಹೊನ್ನಾವರ ಪೇಟೆಗಳಲ್ಲಿ ನಮ್ಮ ಕಚೇರಿಗಳಿಲ್ಲ. ರಸ್ತೆ ಇಲಾಖೆಯ ಇಷ್ಟು ಕಾರ್ಯಾಲಯದಿಂದ ನಮ್ಮ ಕೆಲಸ ಮಾಡುತ್ತಿದ್ದರು. ಆ ಬಗ್ಗೆ ನಾವೇನೂ ಕೊಡುತ್ತಿದ್ದಿಲ್ಲ. ಮುಂದೆ ಪ್ರತಿ ಕಾರಕೂನನಿಗೆ ವರ್ಷಕ್ಕೆ ರೂ ೫೦೦ರಂತೆ ಸಂಬಳ ಕೊಡಬೇಕೆಂದು ಸರಕಾರಿ ಅಪ್ಪಣೆಯಾಯಿತು. ಈ ವರ್ಷದಿಂದ ಈ ಕಾರಕೂನರಿಗೆ ವಿಶೇಷ ಕೆಲಸ ಬೀಳುವದಿಲ್ಲವಾದ್ದರಿಂದ ವರುಷಾ ರೂ ೫೦೦ರಂತೆ ಕೊಟ್ಟರೆ ಸಾಕೆಂತಲೂ, ಬಾಕಿ ಹಣ ಸರಕಾರಕ್ಕೆ ಜಮಾ ಮಾಡಬೇಕೆಂತಲೂ ಹುಕುಮವಾಗಿದೆ. ಈ ಸಂಬಳ ನಮ್ಮಿಂದ ಕೊಳ್ಳುವದು ನ್ಯಾಯವಲ್ಲ. ಕಾರ್ಯಾಲಯದ ಬೋರ್ಡಿನ ಧರ್ಮಶಾಲೆಯನ್ನು ಗ್ರಾಮಚಾವಡಿ ಬಗ್ಗೆ ಉಪಯೋಗಿಸುತ್ತಾರೆ. ಧರ್ಮಶಾಲೆಯ ದುರುಸ್ತಿ ಖರ್ಚ ನಾವು ತರುತ್ತೇವೆ. ಈ ಇಮಾರತನ್ನು ಗ್ರಾಮಪಂಚಾಯತಿಗಾಗಲಿ, ಸ್ಥಾನಿಕ ಶೇತಕಿ ಸಂಘಕ್ಕಾಗಲಿ ಹಂಗಾಮಿ ಉಪಯೋಗಕ್ಕೆ ಕೊಡಹೋದಾಗ, ಅಧಿಕಾರಿಗಳು ತಕ್ರಾರು ಮಾಡಿ, ಅದನ್ನು ಗ್ರಾಮಸ್ಥರಿಗೆ ಬಿನ್-ಭಾಡಿಗೆಯಿಂದ ಕೊಡಬಿದ್ದರೆ ಗ್ರಾಂಟು ಕೊಡಲಿಕ್ಕಿಲ್ಲವೆಂತ ಬೆದರಿಕೆ ಹಾಕಿದರು. ಅದೇ ಯಲ್ಲಾಪುರ ಜಂಗಲ ಖಾತೆಯ ಅನೇಕ ಇಮಾರತುಗಳು ಖಾಲಿ ಬಿದ್ದಿರುವದಾಗ್ಯೂ ತಾಲೂಕಾ ಲೋಕಲ್ ಬೋರ್ಡಿನ ಕಚೇರಿ ಬಗ್ಗೆ ನಮಗೆಂದು ಇಮಾರತು ಕೊಡಿರೆಂದು ಬೇಡಿದರೂ ಕೊಡುವದಿಲ್ಲ. ಇದ್ಯಾವ ನ್ಯಾಯ? ತಾವು ಟೀಕೆ ಮಾಡಿ ಜಂಗಲ ಖಾತೆ ಕಡೆಯಿಂದ ನಮಗೆಂದು ಖಾಲಿಯಿದ್ದ ಇಮಾರತು ಸಿಗುವಂತೆ ಮಾಡುವಿರಾಗಿ ನಂಬಿಗೆಯಿದೆ.

ಕ್ಷಯ ದವಾಖಾನೆ, ಮೈಲಿ ಹಾಕುವಿಕೆ, ದನಗಳ ಆಸ್ಪತ್ರೆ ಇವುಗಳ ಮೇಲೆ ನಮ್ಮ ಖರ್ಚು ಬೆಳೆಯುತ್ತ ನಡೆದಿದೆ. ಆದರೆ ಸರಕಾರಿ ಸಹಾಯಧನವು ದಿನೇ ದಿನೇ ಕಡಿಮೆಯಾಗುತ್ತಲಿದ್ದು ಗ್ರಾಂಟಿನ [illegible] ಮಾತ್ರ ಉಳಿದಿದೆ. [illegible] ಔಷಧಗಳ ಬೆಲೆಯೇರಿ ಹಣ [illegible] ೧೦೦ಕ್ಕೆ ೪೦ರಂತೆ ಪಟ್ಟಿಗೆ [illegible] ಸರಕಾರದ [illegible] ಇದರಿಂದ ಬೋರ್ಡಿಗೆ ಅವಮಾನವಾಗುತ್ತದೆಂಬ ಕಲ್ಪನೆಯಿಲ್ಲ! ಈ ಸ್ಥಿತಿಯು ಮುಂದುವರಿದರೆ ನಾವು ಕೆಲವು ದವಾಖಾನೆಗಳನ್ನು ಮುಚ್ಚುವ ದುರ್ಧರ ಪ್ರಸಂಗ ಒದಗಬಹುದು! ಆಸ್ಪತ್ರೆಗಳ ಬಗ್ಗೆ ನಾವು ವರುಷ ರೂ ೨೪೦೦೦ದಷ್ಟು ಖರ್ಚ ಮಾಡುತ್ತೇವೆ. ಸರಕಾರದಿಂದ ಸಿಗುವದು ಬರೇ ೫೯೩೦ ರೂಪಾಯಿ. ದನಗಳ ಉಪಚಾರಕ್ಕೆ ನಾವು ೫೦೦೦ ರೂ ವೆಚ್ಚ ಮಾಡಿದರೆ, ಸರಕಾರದವರು ೧೨೫೦ ರೂ ಕೊಡುತ್ತಾರೆ. [illegible] ನಮ್ಮ ಖರ್ಚ ರೂ ೧೨೦೦೦ಕ್ಕೆ ಬಂದರೆ ಸರಕಾರದಿಂದ ರೂ ೪೬೮ ಮಾತ್ರ ಸಿಗುತ್ತದೆ. ಸರಕಾರದಿಂದ ಸಿಗುವ ಹಣವು ಸಂಕಾರಕ್ಕೆ ಪೂರೈಸಬೇಕಾದ ಮಾಹಿತಿಯನ್ನು ಒಟ್ಟುಗೂಡಿಸಿ ಪೂರೈಸುವ ಕಾರ್ಯಗಳು ಸಾಕಾಗದು! ಮೇಲಾಗಿ ನಮ್ಮ ಮೇಲೆ ಸರಕಾರದ ಅಧಿಕಾರ! ಸರಕಾರವು ಮಾಡಿಯುವ ಸಹಾಯವಿದೇ ಏನು?

ಮಾರ್ಗಗಳ ರಚನೆ ದುರುಸ್ತಿಗೋಸ್ಕರ ನಮಗೆ ಕೊಡಬೇಕಾಗುವ ಹಣವು ಇಂಜಿನಿಯರ ಖಾತೆಯ ರಸ್ತೆಗಳ ಖರ್ಚಿನ ಪ್ರಮಾಣದ ಸಹ ಇರುವದಿಲ್ಲ. ಕೈಕರಿಗೆ ನಮ್ಮ ರಸ್ತೆಗಳಿಂದಲೇ ಉಪಯೋಗ. ಸರಕಾರಿ ರಸ್ತೆಗಳು ಉಪಯೋಗವಿಲ್ಲ. ಜಿಲ್ಲೆಯಲ್ಲಿ ಮಳೆ ಹೇರಳ ಬೀಳುತ್ತಿರುವದರಿಂದಲೂ, ಮೋಟಾರ ಗಾಡಿಗಳ ಸಂಚಾರವು ಸಾಗುವದ್ದರಿಂದಲೂ ಹೊಸ ರಸ್ತೆಗಳನ್ನು ನಿರ್ಮಿಸಬೇಕೆಂತಲೂ, ಇದ್ದ ರಸ್ತೆಗಳನ್ನು ಸುಧಾರಿಸಬೇಕೆಂತಲೂ [illegible] ಆದರೆ ನಮ್ಮ ಬೋರ್ಡಿಗೆ [illegible] ಇತರ ಜಿಲ್ಲೆಗಳಲ್ಲಿ ರಸ್ತೆ-ಕಾಮಗಾರಿ ಬಗ್ಗೆ ಬೋರ್ಡುಗಳಿಗೆ ಇಂಜಿನಿಯರ ಖಾತೆಯಿಂದ [illegible] ಪ್ರಾಂತಿಕ ನಿಧಿಯಿಂದಲೂ ಹಣ ಸಿಗುತ್ತದೆ; ನಮ್ಮ ಜಿಲ್ಲೆಯಲ್ಲಿ ಅಂಕೋಲೆಯ ಬಳಿ ಪೂಜಗೇರಿ ಸಂಕಕ್ಕೆ «ಹೊಸಲ್ಲ, ಹಳೆಯ ಎಸಳೆಂ» ದು ರೂ, ೫೦೦೦ ಕೊಡುತ್ತೇವಾಗಿ ವಚನ ಕೊಟ್ಟು ಕೊಡಲಿಲ್ಲ! ನೀರು ಪುರವಠೆ ಬಗ್ಗೆ ಸಿಗುವದು ಕ್ಷುಲ್ಲಕ ರಕಮು. ನಮಗಾಗುವ ಅನ್ಯಾಯ ನೋಡಿ ಸರಕಾರದವರು ಅನ್ಯಾರರೂ ಈ ಬಡ ಜಿಲ್ಲೆಯ ಬಗ್ಗೆ ಕನಿಕರಪಡಬಾರದೇ?

ಶಾಲೆಗಳ ಕಾರಭಾರವನ್ನು ಬೋರ್ಡಿಗೆ ಕೊಡುವ ಮುಂಚೆ ಸರಕಾರಕ್ಕೆ ಶಾಲಾ ಇಮಾರತುಗಳ ಭಾಡಿಗೆ ಬಗ್ಗೆ ರೂ ೧೨೦೦ ಖರ್ಚು ಬರುತ್ತಿತ್ತು. ಬೋರ್ಡು ಈಗ ರೂ ೩೬೦೦ ತೆರಬೇಕು! ಮುಂಚೆ ಕೆಲವು ಶಾಲೆಗಳು ದೇವಾಲಯಗಳಲ್ಲಿದ್ದವು. [illegible] ದೇವಾಲಯದವರು ಎಲ್ಲ ಜಾತಿಯವರ [illegible] ಬಳಸಗೊಡಲು ಇಚ್ಛಿಸುವದಿಲ್ಲದ್ದರಿಂದ ಹೊಸ ಇಮಾರತುಗಳನ್ನು ಹೆಚ್ಚಿಗೆ ಭಾಡಿಗೆ ಕೊಟ್ಟು ನಾವು ಕೊಳ್ಳುವ ಪ್ರಸಂಗ ಬಂತು. ಈ ರೀತಿ ಸರಕಾರಿ ಹುಕುಮದ [illegible] ನಮ್ಮ ಖರ್ಚ ಮುಮ್ಮಡಿ ಬೆಳೆದರೂ ಸರಕಾರವು

ದಿವಾಣರಿಗೆ ಪ್ರವಾಸ ಮಾಡುವಾಗ ಮಾರ್ಗದಮೇಲೆ ಹುಲಿ ಭೆಟ್ಟಿಯಾಗಲಿಲ್ಲ!

ಈ ಕಾರಿಖಾನೆ ಕೊಡುವ ಗ್ರಾಂಟು ಲೆಕ್ಕದ ... ಹಚ್ಚಿದೆ. ಈ ವಿಷಯದಲ್ಲಿ ನಮಗೆ ನ್ಯಾಯ ಸಿಕ್ಕೀತೇ?

ಬೋರ್ಡಿಗೆ ಸಂಬಂಧಪಟ್ಟ ಟೋಲ ನಾಕೆ ಮತ್ತು ... ಗಳ ನಾಕಲು ಸರಕಾರದವರೇ ಕಂಟ್ರಾಕ್ಟರಿಂದ ಹಣವನ್ನು ... ಬೋರ್ಡಿನ ಲೆಕ್ಕಕ್ಕೆ ಜಮಾ ಕೊಳ್ಳುತ್ತಾರೆ. ಈ ಕಂಟ್ರಾಕ್ಟರರು ಜಾಮೀನು ಕೊಡುವದಿದೆ. ... ಜಾಮೀನು ಕೊಡುವ ... ಸರಕಾರಿ ನೌಕರರೇ ... ಜಾಮೀನು ಕೊಳ್ಳುವಾಗ, ಜಾಮೀನದಾರರು ಸ್ಥಿತಿವಂತರೋ ಹ್ಯಾಗೆ ಎಂಬ ಬಗ್ಗೆ ... ಸರಕಾರದವರು ಸ್ಥಾನಿಕ ಸ್ವರಾಜ್ಯಕ್ಕೆ ಕೊಡುವ ಪ್ರೋತ್ಸಾಹ ಇದೇ ಬಗೆಯದೇನು?

[illegible]

ನಿಮ್ಮಲ್ಲಿ ... ಬೀತಿಯಿಲ್ಲ! ... ಸಂಗತಿಗಳು ... ಸಾಧ್ಯವಿಲ್ಲ. ಕೆಲವು ಸಂಗತಿಗಳ ...

ಜಂಗಲ ... [illegible]

... ಜನರಿಗೆ ಬೇಕಾದ ... ನಿಮ್ಮ ಪ್ರತಿನಿಧಿಗಳು ... [illegible]

ಸರಕಾರದ ಸಾಂಪತ್ತಿಕ ಸ್ಥಿತಿ ... ಗ್ರಾಂಟುಗಳ ... ಸ್ಥಾನಿಕ ಸ್ವರಾಜ್ಯದ ... [illegible]

ದಿವಾಣರ ಉತ್ತರ

[illegible]

ಕಾರವಾರ ಮುನಿಸಿಪಾಲಿಟಿಯ ಮಾನಪತ್ರ

[illegible]

ಮುಸಲ್ಮಾನ ಮತ್ತು ಕೊಂಕಣ ಮರಾಠಾ ಸಮಾಜದವರ ದೂರುಗಳು!

ದಿವಾನರು ಇದಕ್ಕೆ ಉತ್ತರದಲ್ಲಿ, ದೂರುಗಳಿಗೆ ತಾವು ಮಾನಪತ್ರ ಕೃತಜ್ಞತೆಯನ್ನು ಅರುಹಲು ಒಪ್ಪಿಕೊಂಡರು, ಸರಕಾರದ ಬಳಿ ಹಣವಿಲ್ಲದ್ದರಿಂದ ಜೋಲಸು ಕೇರಿಗಳ ಪುನರ್ಘಟನೆಗೆ ಸಹಾಯ ಮಾಡುವದು ಕೆಲವು ವರ್ಷಗಳ ತನಕ ಶಕ್ಯವಾಗದೆಂದು ತಿಳಿಸಿದರು, ವೆಕ್ಸಿನ್ ವಿಷಯ ಪ್ರತ್ಯೇಕ ಸಿಗಲಾರದೆಂದು ಹೇಳಿದರು, ಕೋಡಿಬಾಗ ರಸ್ತೆಯ ಮೇಲೆ ಹಾಂಬುರದ ಮಾರ್ಗ ಮಾಡಲಿಕ್ಕೆ ಇಂಜಿನಿಯರ ಖಾತೆಯವರ ಕಡೆ ವಿನಂತಿ ಮಾಡಿಕೊಳ್ಳಿರೆಂದು ತೋರಿಸಿಕೊಟ್ಟರು, ಮತ್ತು ಆಟ-ಪಾಟಗಳ ಮೈದಾನದ ಬಗ್ಗೆ ಕಲೆಕ್ಟರರ ಕಡೆ ಬೊಟ್ಟು ತೋರಿಸಿದರು!

ಮಾಹಮ್ಮದೀಯರ ಆಕಾಂಕ್ಷೆಗಳು

ಕಾನಡಾ ಜಿಲ್ಲಾ ಮುಸ್ಲಿಮ ಶಿಕ್ಷಣ ಸಂಘದವರು ತಮ್ಮ ಮಾನಪತ್ರದಲ್ಲಿ ತಮ್ಮ ಸಮಾಜದವರು ಶಿಕ್ಷಣದಲ್ಲಿ ತೀರ ಹಿಂದೆ ಬಿದ್ದಿರುವರೆಂದು ಹೇಳಿದರು. ೧೯೩೩ನೇ ಇಸ್ವಿಯಲ್ಲಿ ಸಂಘದ ಸ್ಥಾಪನೆಯಾಯಿತು. ಸಂಘವು ವಂತಿಗೆದಾರರಿಂದ ಹಣ ಕೂಡಿಸಿ ಪ್ರತಿ ವರುಷ ಸುಮಾರು ೩೦ ಮುಸಲ್ಮಾನ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದೆ. ಕಾಲೇಜಿನಲ್ಲಿ ಕಲಿಯುವವರಿಗೆ ಸಹಾಯ ಮಾಡುವ ಸಾಮರ್ಥ್ಯ ಸಂಘಕ್ಕಿರುವದಿಲ್ಲ. ಇತ್ತೀಚೆಗೆ ಜಗತ್ತಿನಲ್ಲಿ ವ್ಯಾಪಿಸಿಕೊಂಡ ಆರ್ಥಿಕ ಮುಗ್ಗಟ್ಟಿನ ಮೂಲಕ ಸಂಘದ ಉತ್ಪನ್ನ ಬೆಳೆಯುವದಿಲ್ಲ. ಸರಕಾರದವರು ಸಹಾಯ ಮಾಡಿದ್ದಲ್ಲಿ ಕಾಲೇಜು ಶಿಕ್ಷಣಕ್ಕೂ ಧನ ಸಹಾಯಗಳನ್ನು ಪ್ರಾರ್ಥಿಸುವ ವಿಚಾರವು ಸಂಘದವರಿಗೆ ಉಂಟು. ಕಾನಡಾ ಜಿಲ್ಲೆಯ ಮುಸಲ್ಮಾನರ ಶಿಕ್ಷಣದ ಉನ್ನತಿಗೋಸ್ಕರ ಕೆಲವು ರಕಮು ಸರಕಾರದವರು ಕೊಡಬೇಕಾಗಿ ಸಂಘದವರ ಪ್ರಾರ್ಥನೆಯು ಇದೆ. ಜಿಲ್ಲಾ ಲೋಕಲ್ ಬೋರ್ಡಿನಲ್ಲೂ, ತಾಲೂ ಬೋರ್ಡಿನಲ್ಲೂ, ಕಾರವಾರ ಮ್ಯುನಿಸಿಪಾಲಿಟಿಯಲ್ಲೂ ಮುಸಲ್ಮಾನ ಸಮಾಜಕ್ಕೆ ಈಗ ಒಂದೊಂದೇ ಸ್ಥಾನ ಕೊಟ್ಟಿದೆ. ಆ ಎಲ್ಲ ಸಂಸ್ಥೆಗಳಲ್ಲಿ ಕನಿಷ್ಠ ಪಕ್ಷಕ್ಕೆ ಎರಡು ಮೂರು ಸ್ಥಳಗಳನ್ನು ತಮ್ಮ ಪಾಲಿಗೆ ಕೊಡಬೇಕೆಂದು ಸಂಘದವರು ಬೇಡಿರುತ್ತಾರೆ. ಇಲ್ಲವಾದರೆ ಮುಸಲ್ಮಾನರ ಹಿತವಾಗುವಂತಿಲ್ಲವಂತೆ! ಸರಕಾರಿ ನೌಕರಿಗಳಲ್ಲಿ ಮುಸಲ್ಮಾನರ ಪ್ರಮಾಣ ಬೆಳಸಬೇಕಾಗಿಯೂ ಸಂಘವು ಪ್ರಾರ್ಥನೆ ಮಾಡಿತು. ಮುಸ್ಲಿಮರ ಎಂಗ್ಲೋ ಉರ್ದು ಸ್ಕೂಲನ್ನೂ, ವಿದ್ಯಾರ್ಥಿಗಳ ವಸತಿಗೃಹವನ್ನೂ ಹಾಲಿ ಇರುವ ದಟ್ಟ ವಸ್ತಿಯ ಅನಾರೋಗ್ಯಕರ ಸ್ಥಳದಿಂದ ತೆಗೆದು, ಆರೋಗ್ಯ ಸ್ಥಳದಲ್ಲಿ ತೆರೆಯಬೇಕಾಗಿಯೂ ವಿನಂತಿ ಮಾಡಿತು.

ಕೊಂಕಣ ಮರಾಠಾ ಜಾತಿಯ ಬೇಡಿಕೆ.

ಕೊಂಕಣ ಮರಾಠಾ ಜಾತಿಯ ಪರ್ಫನಿಂದಲೂ ದಿವಾನರಿಗೆ ಒಂದು ಮಾನಪತ್ರ ಕೊಡಲಾಯಿತು. ಅದರ ಸಾರಾಂಶ ಹೀಗೆ — "ನಾವು ಶಿಕ್ಷಣದಲ್ಲಿ ತೀರ ಹಿಂದುಳಿದವರು. ನಮ್ಮ ಮುಖ್ಯ ಕಸಬು ಬೇಸಾಯ. ನಮಗೆ ಸರಕಾರ ನೌಕರಿಗಳು ಸಿಗುವದು ಅಪರೂಪ. ಕಳೆದ ಮಹಾಯುದ್ಧದಲ್ಲಿ ನಮ್ಮ ಜಾತಿಯವರು ಸರಕಾರಕ್ಕೆ ಸಹಾಯ ಮಾಡಿದರು. ಅದನ್ನು ನೆನೆಸಿ, ನಮ್ಮ ಹುಡುಗರಿಗೆ ಶಾಲೆಗಳಲ್ಲಿ ಮಾಫಿ ಕೊಡಬೇಕೆಂದು ಸರಕಾರವು ಹುಕುಮು ಹೊರಡಿಸಿತು. ಜಿಲ್ಲಾ ಬೋರ್ಡಿನವರೂ ತಾಲೂ ಬೋರ್ಡಿನವರೂ ಈಗ ಪ್ರಾಥಮಿಕ ಶಾಲೆಗಳಲ್ಲಿ ನಮಗೆ ಮಾಫಿ ಕೊಡುವದಿಲ್ಲ. ನಮ್ಮ ಸಮಾಜದ ವಿದ್ಯಾರ್ಥಿಗಳಿಂದ ಫೀ ವಸೂಲ ಮಾಡದಂತೆ ಬೋರ್ಡುಗಳಿಗೆ ಹುಕುಮಾಗಬೇಕು.

ಹಿಂದುಳಿದ ಜಾತಿಯವರಿಗೆ ಎಲ್ಲ ಖಾತೆಗಳಲ್ಲಿ ಶೇಕಡಾ ೬೦ ರಷ್ಟು ನೌಕರಿಗಳನ್ನು ಕೊಡಬೇಕಾಗಿ ಸರಕಾರವು ನಿಯಮ ಮಾಡಿದೆ. ಅದೇ ನಿಯಮವನ್ನು ಜಿಲ್ಲಾ ಬೋರ್ಡಿನವರೂ ಅನುಸರಿಸಬೇಕೆಂದು ಹಿಂದೆ ಠರಾವಾದದ್ದುಂಟು. ಆದರೆ ಈಗಿನ ಬೋರ್ಡಿನ ಅಧ್ಯಕ್ಷರು ಆ ಠರಾವಿಗೆ ವಿರುದ್ಧವಾಗಿ ಬ್ರಾಹ್ಮಣರನ್ನೇ ನೇಮಿಸುತ್ತಾರೆ. ತಾಲೂ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಸಹ ಸರಕಾರಿ ಠರಾವಿನ ಕಡೆ ದುರ್ಲಕ್ಷ ಮಾಡುತ್ತಿವೆ. ಹೀಗಾಗದಂತೆ ವ್ಯವಸ್ಥೆ ಮಾಡಬೇಕು.

ಮೇಲೆ ಹೇಳಿದ ನಿಯಮಕ್ಕನುಸಾರವಾಗಿ ಜಂಗಲ ಖಾತೆಯಲ್ಲಿ ೬ ಹವೀಕ ಬ್ರಾಹ್ಮಣರು ಸೇರುವಂತೆ ಕೊಡಿಕ ಕಾರಕೂನರ ನೇಮಣೂಕಿಗಳಾಗಬೇಕಾಗಿ ಜಂಗಲ ಖಾತೆಯ ಮೇಲಧಿಕಾರಿಗಳ ಹುಕುಮಾಗಿದೆಯೆಂದು ಕೇಳುತ್ತೇವೆ, ಇದರಿಂದ ಹಿಂದುಳಿದವರ ಹಿತಕ್ಕೆ ಬಾಧೆಯಾಗುತ್ತದೆ. ಹವೀಕರು ಶಿಕ್ಷಣದಲ್ಲಿ ಹಿಂದುಳಿದವರಲ್ಲ. ಜಂಗಲ ಖಾತೆಯಲ್ಲಿ ಹವೀಕರಿಲ್ಲದಿದ್ದರೂ ಬಾಕಿ ಖಾತೆಗಳಲ್ಲಿ ಅವರು ತುಂಬಿಕೊಂಡಿದ್ದಾರೆ. ಹವೀಕರಲ್ಲಿ ಅನೇಕ ಪದವೀಧರರಿದ್ದಾರೆ. ಮಹತ್ವದ ಅಧಿಕಾರ ಸ್ಥಾನಗಳು ಹವೀಕರ ಕೈವಶವಾಗಿವೆ. ಜಿಲ್ಲಾ ಬೋರ್ಡಿನ ಅಧ್ಯಕ್ಷರು, ತಾಲೂ ಬೋರ್ಡಿನ ಅಧ್ಯಕ್ಷೋಪಾಧ್ಯಕ್ಷರೂ ನಮ್ಮ ಜಿಲ್ಲೆಯ ಕಾಯಿದೆ ಕೌನ್ಸಿಲ ಮೆಂಬರರು ಎಲ್ಲರೂ ಹವೀಕರೇ! ಇದ್ದರಿಂದ ಹವೀಕ ಬ್ರಾಹ್ಮಣರ ಬಗ್ಗೆ ಚೀಫ ಕನ್ಸರ್ವೇಟರರು ಕಾದಿಟ್ಟ ೬ ಜಾಗೆಗಳನ್ನು ಸರ್ವಸಾಧಾರಣ ಹಿಂದುಳಿದ ಜಾತಿಯವರಿಗೋಸ್ಕರ ಕಾದಿಡುವಂತೆ ತಾವು ಅಪ್ಪಣೆ ದಯಪಾಲಿಸಬೇಕು. ಹವೀಕರಿಗೆ ಬೇಕಾದರೆ ಮುಂದರಿದ ವರ್ಗದವರ ಪಾಲಿನ ಕೆಲವು ಸ್ಥಳಗಳನ್ನು ಕೊಡಲಡ್ಡಿಯಿಲ್ಲ.

ಕಾರವಾರ ತಾಲೂಕು ಹಟ್ಟಾಗಿ ಒಕ್ಕಲತನದ ತಾಲೂಕು. ನಮ್ಮ ಜಾತಿಯವರೇ ಮುಖ್ಯ ರೈತರು. ಸುಲ್ಯಾಂಡೆ ಹಾಕಲು ಕಟ್ಟಿ ಪಡೆದು ಗಾಡಿಯಿಂದ ಕಟ್ಟಿಗೆ ತರಲು ರೈತರಿಗೆ ಸವಲತ್ತಿದೆ. ಈ ಸವಲತ್ತು ಸಾರ್ವತ್ರಿಕವಾಗಿ ಸಿಗುವಂತೆ ವ್ಯವಸ್ಥೆ ಮಾಡಬೇಕು.

ನಾವು ಬಡ ಹಳ್ಳಿಗರು ಕಷ್ಟಪಟ್ಟು ಕೈಯಿಂದ ಹಣ ಖರ್ಚು ಮಾಡಿ ಕೆಲವು ರಸ್ತೆಗಳನ್ನು ತಯಾರಿಸಿದ್ದೇವೆ. ಅವನ್ನು ಬೋರ್ಡಿನ ತಾಬೆದಲ್ಲಿ ಕೊಳ್ಳಹೋದರೆ ಬೋರ್ಡು ಸ್ವೀಕರಿಸುವದಿಲ್ಲ! ಸದರಿ ರಸ್ತೆಗಳನ್ನು ಒಪ್ಪಿಸಿಕೊಳ್ಳಲಿಕ್ಕೆ ಬೋರ್ಡಿಗೆ ಅಪ್ಪಣೆಯಾಗಬೇಕು." ದಿವಾನರು ಈ ಮಾನಪತ್ರಕ್ಕೆ ಉತ್ತರವನ್ನು ಹಿಂದಿನಿಂದ ಬರೆದು ಕಳಿಸುತ್ತೇವಾಗಿ ಹೇಳಿದ್ದಾರೆ.

THE AGRICULTURAL & INDUSTRIAL BANK LIMITED,
COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
ಕುಂದಾಪುರ.

ಕಾಯಂ ಠೇವಣಾತಿಗಳು.

3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ				3½ ರಂತೆ,
6 ತಿಂಗಳಿಗೆ	...	...	...	4½ ರಂತೆ,
12 ತಿಂಗಳಿಗೆ	...	...	...	5½ ,,
24 ತಿಂಗಳಿಗೆ	..	...	...	6 ,,
3 ವರ್ಷ ಯಾ ಹೆಚ್ಚಿನ ಅವಧಿಗೆ	...			6½ ರಂತೆ

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ.

ಚಿನ್ನ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಕರೆಂಟ್, ಸೇವಿಂಗ್ಸ ಬೇಂಕ್ ಮತ್ತು ಕ್ಯೂಮ್ಯುಲೆಟೀವ್ ಠೇವಣಾತಿಗಳು ಅಂಗೀಕರಿಸಲ್ಪಡುವವು

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಂದಾಪುರ,
ತಾ॥ 21—1—1935.

K. Vaman Shenai &
G. Balakrishna S. Nayak.
Managing Directors

ಜಾಹೀರ ನೋಟೀಸು.

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಯ ಪಡಿಸುವದೇನಂದರೆ—

ನನ್ನ ಹಿರೇ ಮಗನಾದ ಚನ್ನಮಲ್ಲಯ್ಯಾ ಶಾಂತಯ್ಯಾ ಇವನು ಐಲೀ ಕಡೆಗೆ ಕೆಟ್ಟ ಜನರ ಸಹವಾಸಕ್ಕೆ ಬಿದ್ದು ನನ್ನ ಸಂಗಡ ೮-೯ ತಿಂಗಳ ಲಾಗಾಯ್ತು ವೈಮನಸ್ಸು ಮಾಡುತ್ತಾ ಬಂದು ಮನೆಬಿಟ್ಟು ಬೇರೆ ಕಡಗೆ ಉಳಕೊಂಡಿರುತ್ತಾನೆ ನಾನು ವಾಸ್ತವ್ಯ ಮಾಡಿಕೊಂಡಿರುವ ಇಸಳೂರ ಊರಲ್ಲಿ ಇರುವ ಚರ. ಸ್ಥಿರಾಸ್ತಿಗಳು ನನ್ನ ಸ್ವಂತ ಸಂಪಾದನೆಯ ಆಸ್ತಿಗಳಾಗಿರುತ್ತವೆ ಅವುಗಳ ಮೇಲೆ ಸದ್ರಿ ಚನ್ನಮಲ್ಲಯ್ಯನಿಗೆ ಏನೊಂದೂ ಹಕ್ಕು ಇರುವದಿಲ್ಲ. ಹೀಗಿರುತ್ತಾ, ಅವನು ನನ್ನ ವಹಿವಾಟಿಯಲ್ಲಿ ಅನೇಕ ತರದಿಂದಾ ತೊಂದರೆ ಕೊಡಲಿಕ್ಕೆ ಹತ್ತಿದ್ದಲ್ಲದೆ ನನ್ನ ಆಸ್ತಿಯನ್ನು ಏನೂ ಹಕ್ಕಿಲ್ಲದೆ ಸ್ವಾಧೀನ ಮಾಡುವ ಪ್ರಯತ್ನ ನಡಿಸಿರುತ್ತಾನೆ ಮತ್ತು ಸಾಲ-ಕಡ ಗಸ್ತ್ಯರೆ ಮಾಡಿ ಋಣಭಾರ ಹೊರಿಸುವ ಪ್ರಯತ್ನ ಮಾಡಹತ್ತಿದ್ದಾನೆ. ಈ ಪ್ರಕಾರ ಅವನು ನಡಿಸುವ ಕೃತ್ಯವು ನನ್ನ ವ ನನ್ನ ಚರ-ಸ್ಥಿರಾಸ್ತಿಯ ಮೇಲೆ ಲಾಗು ಇಲ್ಲಾ ಆದ್ದರಿಂದಾ ಸದರಿ ಚನ್ನಮಲ್ಲಯ್ಯನಿಗೆ ಯಾರೂ ಸಾಲ ಕೊಡಬಾರದು. ಮತ್ತು ಅವನ ಕಡೆಯಿಂದ ನನ್ನ ಚರ-ಸ್ಥಿರಾಸ್ತಿಯನ್ನು ಯಾವದೇ ವಿಧದಿಂದ ಬರಿಸಿಕೊಳ್ಳಬಾರದು ಅವನಿಗೆ ಸಾಲ ಕೊಟ್ಟರೆ ಯಾ ಆಸ್ತಿ ಬರಿಸಿಕೊಂಡರೆ ಅದಕ್ಕೆ ನಾನು ಯಾ ನನ್ನ ಆಸ್ತಿ ಜವಾಬದಾರ ಅಲ್ಲ. ತಿಳಿಯುವದು. ತಾರೀಕು ೮—೨—೧೯೩೫.

ಶಾಂತಯ್ಯಾ ವೀರಯ್ಯಾ ಹಿರೇಮಠ,

ಸಾ|ಇಸಳೂರ ಪೋ. ಇಸಳೂರ. ತಾಲೂಕ ಶಿರ್ಶಿ.

ಮೀನುಕಣ್ಣಿಗೆ (Corn) ಮದ್ದು

ಹತ್ತಾಣೆ ಬಿಲ್ಲೆ ಸ್ಟ್ಯಾಂಪು ಕಳಿಸಿದರೆ ಕಳಿಸುತ್ತೇವೆ. ವ್ಹಿ. ಪಿ. ಯಿಂದ ಖರ್ಚು ಹೆಚ್ಚು

ಕೆಲಬಾಗ ಗಂಗಾಧರ ಎಂಡ್ ಸನ್ಸ್,
ಕುಮಟಾ, (ಕಾರವಾರ)

Siromani Udipi Narayanacharya,
Chaukhamba, Benares City.

SUNBCO BENARES CITY

ಮಹಾಶಯರೇ, ಮಧ್ಯವೇತ್ರೋಕ್ತವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ೧ಂ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸನ್ನದಾಗುತ್ತ ಅಗುತ್ತ ಕ್ರಯ ಹೆಚ್ಚುವದು ಕಂಠಿ ಸರ 32 ಮಣಿ1ಕ್ಕೆ ರೂ.0-8-0ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8-0ರಿಂದ 5೦ ವರೆಗೆ ಮತ್ತು ದೇವ ಮಾಲಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ರ ಸ್ಟಾಂಪು ಕಳಿಸಿದರೆ, 1 ಕಾಶೀ ನಕ್ಷೆ, 1 ವಿಶ್ವೇಶ್ವರನ ಫೋಟೋ ಕೆಟಲಾಗು ಸಹ ಇನಾಂ ಕಳಿಸಲಾದೀತು.

ಪತ್ರ:- ಶಿರೋಮಣಿ ನಾರಾಯಣಾಚಾರ್ಯ,
ಚೌಕಾಂಬಾ, ಕಾಶೀ ಕ್ಷೇತ್ರ.

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪೋಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯಃ ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಘ.

ಪೋಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ. ಸೂ. ' ಇಂಡಸ್ಟ್ರಿಯಲ್ ವಿಮೆ 'ಎಂಬ 'ರೂಪಾಯಿ ಪೋಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ]

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು !

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಯತಕ್ಕದ್ದು.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು.—

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು:- ಮೆಸರ್ಸ ಜೀವನ ಏಜನ್ಸಿ, ಕಾರವಾರ.

ದ್ವಿಗುಣವಾದ ಲಾಭವನ್ನು ಹೊಂದಿರಿ !

ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ !!

ಮಕ್ಕಳ ಲಿವರ್ ಕಂಪ್ಲೈಂಟು (ಕೂರ್ಮವ್ಯಾಧಿ) ಮತ್ತು ಜ್ವರಗಳಿಗೆ

ಜಮ್ಮಿ ವೆಂಕಟರಮಣಯ್ಯನವರ

'ಲಿವರ್ ಕ್ಯೂರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಿ !

ಹೆಚ್ಚಿನ ಮಾಹಿತಿಗೆ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ. ಕ.)

ಸುಲಭ ಕ್ರಯ! **ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ.** ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಿಟ್ಟು ಸಾವಿರಾರು ಮಂದಿ

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ. ಕಂಠಕ್ಕೆ ಸಂಬಂಧಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ, ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು ಬುದ್ಧಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ.ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವಿ. ಪಿ. ೦-೬-೦. ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ-ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ.ಬಾ. ೫೧೦, ಜಾರ್ಜಟೌನ್,ಮದರಾಸ.

ಕಾನಡಾವೃತ್ತ.

[illegible] ಸೋಮವಾರ

ವಿಷಾದದ ವಿಷಯ.

28. It was the practice formerly for the Societies to send the parties' fees in arbitration cases in advance to the Assistant Registrar, who used to pay them to the Arbitrators after their work was done. Now about two years ago, these fees amounting to Rs. 59-8-0 from different parties to arbitration cases had been remitted by the Sunkeri Society to the Asst. Registrar. But the cases having been disposed of before the arbitration proceedings were held, the money lay with the Asst. Registrar for a long time. Then the Society applied to him to return the money. The application was not replied to. After waiting long, some of the parties themselves to whom the money was to go wrote to the said officer, to send them their money. They too are said not to have received any reply. They then wrote to the Registrar protesting against these ways of his subordinate. The Asst. Registrar then, it appears, sent down the money, neither to the Society nor to the parties, but to the Supervising Union; it is not known why. But the Union people kept the money with themselves, without forwarding it either to the Society or to the parties to whom it was to go. At length, it seems, the Union was moved by the higher authorities in this connection, and it then too did not forward it to the Society. It passed a resolution in its meeting held on 24-11-1934, declaring that the money had been credited to the Society in part payment of the contribution due from the Society to itself. Why did the Asst. Registrar send themoney to theUnion, and when? Why did the Union not inform the Society of the fact of the receipt of this money? What right had the Union to appropriate the amount without consulting the Society? Was it not misappropriation to withhold the money for so long (without interest) without informing the claimant Society or the parties? If the Supervising Union, which is meant to Supervise the Societies treats the Societies in this fashion, is it not a case of the watchman himself turnig a thief? What punishment has been meeted out to the Supervisor for his remissnesses so far?

29. For the information of impartial readers some figures about the sound financial condition of the Society are worth mentioning:—

On 26th November 1934 (the date of the Asst. Registrar's order) members' deposits amounted to Rs. 9-10-2; the non-members'deposits amounted to Rs, 8009-4-2; the share capital was Rs. 5105/-; and the Reserve Fund was about Rs. 4800/-.

Subsequent to the order, non-members began to withdraw their deposits fast and the figures now are:—

Non-members' deposits: about Rs. 4600/-. This is about 32% of the whole capital.

The amount of overdues as it stood on 31-12-1934 was Rs. 3816-9-6, which is about 21% of the working capital. Out of this, awards for Rs. 1975-6-10 have already been passed.

30. This shows how sound the credit of the Society is, and who are responsible, and how, for the discredit sought to be brought on the Society.

31. Recently the Government Auditor of the Co-operaive Department conducted the audit of the Society very closely for more than 4 days and the Sub-Auditor and the clerk for more than 3 days and it is understood that all of them have been satisfied with the sound financial condition of the Society.

32. The Society has been abiding by the just and useful instructions of the Co-operative Audit Departmant, issued from time to time in the best interest of the Societies and they will be followed hereafter also. With all this to the credit of the Society rumours are afloat that the Co-operative Department is bent on winding up the Society. God alone knows the truth of it. Whatever be the state of things underlying the rumours, the actual facts as they are, are brought to the notice of thePublic and Departmental officers, lest justice may not be miscarried by mere default.

1—2—1935.

Siromani Udipi Narayanacharya,
CHAUKHAMBA, BENARES CITY.

S.U.N.&Co. BENARES CITY

ಮುಖಶಯಂದೇ, ಉಪ್ರನೇತಕ್ರೈ ತ್ತನ್ನವಾಣ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ೧೦೮ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ. ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ನಂ 32 ದರ 1ಕ್ಕೆ ರೂ.0-8-0ಯಿಂದ ರೂ. 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8-0ರಿಂದ 50 ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ಸ್ಟ್ಯಾಂಪು ಕಳಿಸಿದರೆ, 1 ಕಾಶೀ ಪತ್ರೆ, 1 ವಿಶ್ವೇಶ್ವರನ ಪಠ ನಮೂನೆಗಳೊಂದಿಗೆ ಸಹ ಉಚಿತ ಕಳಿಸಲಾದೀತು.

ಪತ್ತೆ:- ಶಿರೋಮಣಿ ನಾರಾಯಣಾಚಾರ್ಯ,
ಚೌಖಂಬಾ, ಕಾಶೀ ಕ್ಷೇತ್ರ.

ಮೀನು ಕಣ್ಣಿಗೆ (Corn) ಮದ್ದು.

ಹತ್ತಾಣೆ ಬಿಲ್ಲಿ ಸ್ಟ್ಯಾಂಪು ಕಳಿಸಿದರೆ ಕಳಿಸುತ್ತೇವೆ. ವ್ಹಿ. ಪಿ. ಯಿಂದ ಖರ್ಚು ಹೆಚ್ಚು.

ಕಲಬಾಗ ಗಂಗಾಧರ ಎಂಡ್ ಸನ್ಸ್,
ಕುಮಟಾ. (ಕಾರವಾರ)

ಮುಂಬಯಿ ಕೌನ್ಸಿಲು.

ಅರ್ಥ ಶಾಸನದಲ್ಲಿ ಪಾರ್ಲಿಮೆಂಟರಿ ಪದ್ಧತಿಯ ಆವಾಹನ-ವಿಸರ್ಜನ.

ಮುಂದಿನ ವರ್ಷದ ಜಮಾ-ಖರ್ಚು ಪತ್ರಿಕೆ ಗುರುವಾರ ಮುಂಬಯಿ ಕಾಯಿದೆಕೌನ್ಸಿಲಿನಲ್ಲಿ ಪ್ರಕಟವಾಯಿತು. ಹೊಸ ಕರಗಳ ಹೇರಿಕೆಯಿಲ್ಲ. ಆಪತ್ಕಾಲವೆಂದು ಹೇರಿದ ಕೋರ್ಟ್ ಫೀ, ಹೊಗೆಸೊಪ್ಪಿನ ಸುಂಕ ಮೊದಲಾದವುಗಳನ್ನು ತಗ್ಗಿಸುವ ವಿಚಾರವಿಲ್ಲ. ಹೊಗೆಸೊಪ್ಪಿನ ಸುಂಕದಿಂದ ೫ ಲಕ್ಷ ರೂ. ಪ್ರಾಪ್ತಿ, ಕೋರ್ಟ್ ಫೀ ಮೊದಲಾದ ಆಪತ್ಕಾಲದ ಕರಗಳಿಂದ ರೂ. ೩೦ ಲಕ್ಷ ಪ್ರಾಪ್ತಿಯಾಗುತ್ತದೆ. ೧೯೩೫ನೇ ಇಸ್ವಿಯಲ್ಲಿ ೧೫ ಕೋಟಿ, ೬೧ ಲಕ್ಷ ರೂ. ಉತ್ಪನ್ನ; ೧೫ ಕೋಟಿ ೬೩ ಲಕ್ಷ ರೂ. ಖರ್ಚು. ಅಂದರೆ ೨ ಲಕ್ಷ ರೂಪಾಯಿ ತುಟ್ಟಿ. ಖರ್ಚಿನ ರಕಮುಗಳಲ್ಲಿ ಈ ಬಾರಿ ಏರಿಕೆಯಾಗಿದೆ. ರೌಪ್ಯ ಮಹೋತ್ಸವಕ್ಕಾಗಿ ೩ ಲಕ್ಷ, ಸಂಬಳದಲ್ಲಿ ಮಾಡಿದ ಕತ್ತರಿಯನ್ನು ಕಡಿಮೆ ಮಾಡುವದಕ್ಕಾಗಿ ೧೫ ಲಕ್ಷ, ಹಿಂದುಸ್ಥಾನ ಸರಕಾರದ ೨೦ ಲ, ಸಕ್ಕರ ಒಡ್ಡಿನ ಖರ್ಚು, ಬಡ್ಡಿ ಮೊದಲಾದ ವಿವಿಧ ಬಾಬುಗಳಿವೆ. ಸರಕಾರದ ಸಾಂಪತ್ತಿಕ ಸ್ಥಿತಿ ಸುಧಾರಿಸಿದ ಬಳಿಕ, ಸರಕಾರಿ ನೌಕರರ ಸಂಬಳದ ಕತ್ತರಿ ದೂರವಾಗುವದಾಗಿ ಸರಕಾರದ ಅಭಿವಚನವಿತ್ತು; ಆಪತ್ಕಾಲವೆಂದು ಹೇರಿದ ಕರಗಳನ್ನು ರದ್ದುಪಡಿಸಲಿಕ್ಕೂ ಸರಕಾರವು ವಚನಬದ್ಧವಿತ್ತು. ಹೀಗಿದ್ದು ಕರಹೇರಿಕೆಯನ್ನು ಹಾಗೆಯೇ ಇಟ್ಟು ನೌಕರರ ಸಂಬಳವನ್ನು ಮಾತ್ರ ಏರಿಸಿದ್ದು ಅಪ್ರಶಸ್ತವಾಯಿತೆಂದೂ, ಪ್ರಜಾವಾತ್ಸಲ್ಯದ ಲಕ್ಷಣವಲ್ಲವೆಂದೂ ಹಲವು ಸಭಾಸದರು ಟೀಕಿಸುತ್ತಾರೆ. ಜಮಾ-ಖರ್ಚು ಪತ್ರಿಕೆಯ ಮೇಲೆ ಈ ಹೊತ್ತಿನಿಂದ ಚರ್ಚೆಗೆ ಪ್ರಾರಂಭವಾಗುವದು.

ಅದೇ ದಿನ ಮಧ್ಯಾಹ್ನ ನೇಕ ನಾ। ಗವ್ಹರ್ನರರ ಭಾಷಣವಾಯಿತು. ಗವ್ಹರ್ನರರು ಜಮಾ-ಖರ್ಚು ಪತ್ರಿಕೆಯ ಕುರಿತು ನಾಲ್ಕು ಮಾತನಾಡಿದರು. ಶಿಕ್ಷಣಕ್ಕಾಗಿ, ಒಕ್ಕಲತನಕ್ಕಾಗಿ ಹೆಚ್ಚಿನ ಗ್ರೆಂಟು ಕೊಡುವ ಯೋಜನೆಯಾಗಿದೆಂದರು. ಹಿಂದುಸ್ಥಾನ ಸರಕಾರವು ಸಂಬಳದ ಕತ್ತರಿ ನಿಲ್ಲಿಸಿದ್ದರಿಂದ ತಾವು ನಿಲ್ಲಿಸಬೇಕಾಯಿತೆಂದರು. ಮದ್ರಾಸ ಸರಕಾರವು ಹಿಂದುಸ್ಥಾನ ಸರಕಾರದ ಧೋರಣವನ್ನು ಅನುಸರಿಸದಿದ್ದಾಗ್ಯೂ ಇತರ ಪ್ರಾಂ। ಸರಕಾರಗಳು ಅನುಸರಿಸಿದ್ದರಿಂದ ತಾವೂ ಅನುಸರಿಸಿದ್ದೇವೆಂದರು. ಮೋಟರ ತೆರಿಗೆಗಳ ಕುರಿತು ಬಂದ ಆಕ್ಷೇಪಗಳನ್ನು ಸರಕಾರವು ವಿಚಾರಿಸಿ ಶೀಘ್ರವೇ ನಿರ್ಣಯ ಹೊರಡಿಸುವದೆಂದರು. ಚಳಿಗಾಳಿಗಳಿಂದ ನಷ್ಟಪಟ್ಟ ಒಕ್ಕಲಿಗರ ಬಗ್ಗೆ ಸರಕಾರವು ಆಲೋಚಿಸಿ ವ್ಯವಸ್ಥೆ ಮಾಡುವದೆಂದರು. ಒಕ್ಕಲಿಗರ ಸಾಂಪತ್ತಿಕ ಸ್ಥಿತಿ ತೀರ ಕೆಟ್ಟಿದೆ. ಭೂಭದ್ರತೆ ಬೇಂಕುಗಳನ್ನು ಸ್ಥಾಪಿಸಿ ಸರಕಾರವು ರೈತರ ಕಷ್ಟ ಪರಿಹರಿಸುವ ಆಲೋಚನೆ ಮಾಡುವದೆಂದರು. ಗ್ರಾಮ-ಪಂಚಾಯತುಗಳಿಂದ ಹಳ್ಳಿಗರಿಗೆ ಸ್ವತಂತ್ರ ರಾಜ್ಯಭಾರದ ಶಿಕ್ಷಣ ಕೊಡುವ ಏರ್ಪಾಟು ಮಾಡಲಾಗಿರುವದೆಂದರು. ಕೆಲ ಜಿಲ್ಲೆಗಳಲ್ಲಿ ಔದ್ಯೋಗಿಕ ಸಂಘಗಳನ್ನು ಸ್ಥಾಪಿಸಿ ಕೈಮಗ್ಗದ ವ್ಯವಸಾಯಕ್ಕೆ ಉತ್ತೇಜನ ಕೊಡಲು ಸರಕಾರದ ಸಂಕಲ್ಪವಾಗಿದೆಂದರು. ಚಿಕ್ಕ ಪುಟ್ಟ ಕೈಗಾರಿಕೆಯ ಉದ್ದಿಮೆಗಳಿಗೆ ದ್ರವ್ಯ ಸಹಾಯ ಮಾಡುವದಕ್ಕಾಗಿ ಸರಕಾರವು ನಿಯಮಾವಲಿ ಮಾಡಿರುವದಾಗಿಯೂ ಕೆಲ ಹಣ ಮಂಜೂರ ಮಾಡಿರುವದಾಗಿಯೂ ತಿಳಿಸಿದರು. ಇಡೀ ಇಲಾಖೆಯಲ್ಲಿ ಒಂದೇ ಕರದ ತೂಕ ಮತ್ತು ಅಳತೆಯಾಗುವಂತೆ ಈ ಹಿಂದೆ ಏರ್ಪಡಿಸಿದ ಕಾಯಿದೆಯನ್ನು ಈ ವರ್ಷ ಮುಂಬಯಿ ಮತ್ತು ೧೦ ಜಿಲ್ಲೆಗಳಲ್ಲಿ ಅಮಲಿನಲ್ಲಿ ತಂದು ಮುಂದಿನ ವರ್ಷ ಇಡೀ ಇಲಾಖೆಯಲ್ಲಿ ಪ್ರಚುರಗೊಳಿಸುವೆವಾಗಿ ನುಡಿದರು. ಗವ್ಹರ್ನರರ ಭಾಷಣವಾದ ಬಳಿಕ ಅಂದಿನ ಸಭೆ ತೀರಿತು.

ಮಾರನೇ ದಿನದ ಸಂಗತಿ ತೀರ ಚಿತ್ತವೇಧಕವಿದೆ. ಶುಕ್ರ-ಶನಿವಾರ ಪಾರ್ಲಿಮೆಂಟರಿ ಪದ್ಧತಿಯ ಚರ್ಚೆ ಇಟ್ಟಿತ್ತು. ಗೃಹಮಂತ್ರಿಗಳಾದ ಮಿ। ಬೆಲ್‌ರವರು ಪಾರ್ಲಿಮೆಂಟಿನ ಪದ್ಧತಿಯನ್ನು ವಿಚಾರಿಸಬೇಕಾಗಿ ಸರಕಾರದ ಪರವಾಗಿ ಒಂದು ಮಾಮೂಲ ಸೂಚನೆ ಮಾಡಿದರು. ಚರ್ಚೆ ಮಾಡಲು ಈ ಸಭೆಯು ತಯಾರಿಲ್ಲವಾಗಿ ಸಭಾಸದರಾದ ರಾ। ಬ। ಕಾಳೇಯವರು ಒಂದು ಆಕ್ಷೇಪ ಮಾಡಿದರು. ಅಧ್ಯಕ್ಷರು ಸಭಾಸದರಿಗೆ ನೆಟ್ಟಗೆ ಒಂದು ಸವಾಲು ಕೇಳಿದರು: ಚರ್ಚೆ ಮಾಡಲು ಸಭಿಕರು ಸಿದ್ಧರಿದ್ದಾರೇನೆಂದು ಕೇಳಿದರು. "No, No, No" ಇಲ್ಲ, ಇಲ್ಲವೆಂಬ ಒಂದೇ ಗಲಾಟೆ ಕೌನ್ಸಿಲು ಸಭಾಮಂದಿರದಲ್ಲಿ ಘೋಷಿಸಿತು. ಅಧ್ಯಕ್ಷರು ಸಭಾಸದರ ಸೂಚನೆಯನ್ನು ಮತ ಎಣಿಕೆಗೆ ಹಾಕಿದರು. ಮತ ಎಣಿಸಲು ೨೧ ಅನುಕೂಲ, ೩೮ ಪ್ರತಿಕೂಲ ಬಿದ್ದು ಸರಕಾರಿ ಸೂಚನೆ ಬಿದ್ದುಹೋಯಿತು. ಅರ್ಥ ಶಾಸನದಲ್ಲಿ ಆವಾಹನ-ವಿಸರ್ಜನ ಮೊದಲಾದ ಯಾವತ್ತೂ ವಿಧಿ ಮುಗಿದು ಸಭಾಸದರು ಎದ್ದು ನಡೆದರು. ಪಾರ್ಲಿಮೆಂಟರಿ ಪದ್ಧತಿಯ

[ಮುಂದೆ ೯ನೇ ಪಾನು ನೋಡಿರಿ.]

THE AGRICULTURAL & INDUSTRIAL BANK LIMITED, COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಕುಂದಾಪುರ.

ಕಾಯಂ ಠೇವಣಾತಿಗಳು.

3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ 3½ರಂತೆ,
6 ತಿಂಗಳಿಗೆ ... ... 4½ರಂತೆ,
12 ತಿಂಗಳಿಗೆ ... ... 5½ ,,
24 ತಿಂಗಳಿಗೆ ... ... 6 ,,
3 ವರ್ಷ ಯಾ ಹೆಚ್ಚಿನ ಅವಧಿಗೆ ... 6½ರಂತೆ

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ.

ಚಿನ್ನ ಬೆಳ್ಳಿಯ ಆಭರಣಗಳ ಆಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು, ಚಕ್ಕುಗಳು ವಸೂಲಿಗೆ ವಟಾಯಿಸಲ್ಪಡುವವು,

ಕರೆಂಟ್, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಂದಾಪುರ,
ತಾ. 21—1—1935.

K. Vaman Shenai &
G. Balakrishna S. Nayak.
Managing Directors.

ರಣಗರ್ಜನೆ?

[ನಿರೀಕ್ಷಕನು ಬರೆದುದು]

ಅಬಿಸೀನಿಯಾದೊಳಗಿನ ಗಡಿನಾಡಿನ ವಾದಕ್ಕೆ ಕಳೆದ ವಾರ ಒಮ್ಮೆಲೇ ಕಳೆ ಏರಿದೆ. ಇಟಾಲಿಯ ಸೋಮಾಲಿ ಪ್ರಾಂತ ಮತ್ತು ಅಬಿಸೀನಿಯಾ ದೇಶದ ಗಡಿನಾಡಿನ ಪ್ರದೇಶದಲ್ಲಿ ಅಬಿಸೀನಿಯಾದವರು ನುಗ್ಗಿ ಹೋಗಿ ಇಟಾಲಿ ಕಡೆಯ ಐವರನ್ನು ಕೊಂದರು; ಇರು ಜನರಿಗೆ ಘಾಯಪಡಿಸಿದರಂತೆ. ಈ ಕಾದಾಟ ನಡದದ್ದು ಜನವರಿ ೨೯ ನೇ ತಾರೀಖಿಗೆ, ಸದ್ದಿ ತಿಳಿದದ್ದು ಫೆಬ್ರುವರಿ ೧೦ ನೇ ತಾರೀಖಿಗೆ. ಕಾಲು ಕೆದರಿ ಅಬಿಸೀನಿಯಾದವರು ದಂಡೆತ್ತಿಕೊಂಡು ಹೋದರಾಗಿ ಇಟಾಲಿಯವರ ಅಂಬೋಣ. ಮುಸೊಲಿನಿಯವರು ಈ ಒಗ್ಗ ಅಬಿಸೀನಿಯಾದ ರಾಜಧಾನಿಯಾದ ಅಡಿಸ ಅಬಾಬಾ ಪಟ್ಟಣದಲ್ಲಿದ್ದ ಇಟಾಲಿಯ ರಾಯಭಾರಿಗೆ ವಿದ್ಯಮಾನ ನಿವೇದ ಮಾಡಿದ್ದಾರೆ. ಇಟಾಲಿ ಅಬಿಸೀನಿಯಾದೇಶಗಳಲ್ಲಿ ಈಗ ಒಳ್ಳೆ ಗಲಾಟೆ. ಅಬಿಸೀನಿಯಾ ದೇಶದವರು ಗಡಿನಾಡಿನ ಕಡೆ ೩೦ ಸಾವಿರ ಸೈನಿಕರನ್ನು ರವಾನಿಸಿದ್ದಾರೆ. ಇಟಾಲಿ ಕಡೆಯಿಂದಲೂ ಸೈನಿಕರು ಗುಪ್ತವಾಗಿ ರವಾನೆಯಾಗುತ್ತಾರೆ. ವಿಮಾನಗಳೂ, ಸಿರುದ್ಯೋಗಿ ಕೂಲಿಕಾರರೂ ಮೊದಲಾದವರನ್ನು ಹೊರಡಿಸಿ ಅಬಿಸೀನಿಯಾದವರ ಮೇಲೆ ಹೋಗಲೆಂದು ಬೀದಿ-ಬೀದಿಗಳಲ್ಲಿ ಬೊಬ್ಬೆ ಹೊಡೆಯುತ್ತಿದ್ದಾರೆ. ನಾಲ್ಕು ಉಗಿಬಂಡಿ ತುಂಬ ತೋಫುಖಾನೆಯ ಸಹಿತ ಬೆಲೋನಾ ಬಂದರದಿಂದ ಸೈನಿಕರು ಸೋಮಾಲಿ ಪ್ರಾಂತಕ್ಕೆ ರವಾನೆಯಾದರೆಂದು. ಪರಿಸ್ದ ತಂತಿ. ಇಟಾಲಿಯ ಸರ್ವಸತ್ತಾಧಾರಿಗಳಾದ ಮುಸೊಲಿನಿಯವರು ಸೈನ್ಯ ಮಂಡಳದ ಸಭೆ ಸೇರಿಸಿ ವಿಚಾರ ಮಾಡಿದರಂತೆ. ... ಜೋನೋರವರು ಅತ್ತ ಕಡೆ ಇಟಾಲಿಯ ಪರವಾಗಿ ರವಾನೆಯಾಗುವರಂತೆ. ಸ್ವಯಂಸೇವಕರಿಗೆ ಸೈನ್ಯದಲ್ಲಿ ಸೇರಿಸಿಕೊಳ್ಳುವ ರಭಸ ನಡೆದಿದ ಒಕ್ಕಲಿಗರು ಹೊಲಮನೆ ಬಿಟ್ಟು ಸೈನಿಕರಾಗಲಾರಂಭಿಸಿದ್ದರು. ರೋಗಿಗಳಗ ದವಾಖಾನೆಯಲ್ಲಿಯೇ ಬಿಟ್ಟು ಡಾಕ್ಟರರು ಸೈನ್ಯ ರಾಜ್ಯಗಳಿಗೆ ಹೊರಟಿದ್ದರಂತೆ. ಕಾರಕೂನರಿಗೆ ಲೆಕ್ಕಣಿಕೆಯನ್ನು ಮೇಜಿನ ಮೇಲೆ ಬಿಟ್ಟು ಸೈನಿಕರಾಗಲು ಅಪ್ಪಣೆಯಾಗಿರುವದಂತೆ. ಅಬಿಸೀನಿಯಾದವರು ಬಲಾತ್ಕಾರ ಮಾಡಿದ್ದರಿಂದ ೧೦ ಲಕ್ಷ ಹಣವನ್ನು ಭರಪಾಯಿ ಕೊಡಬೇಕು, ಕ್ಷಮಾಯಾಚನ ಮಾಡಬೇಕು, ಬೊಕ್ಕ ತಲೆಯಿಂದ ಇಟಾಲಿಯ ರಾಷ್ಟ್ರಧ್ವಜಕ್ಕೆ ಸಲಾಮು ಮಾಡಬೇಕು. ವಿಚಾರ ಮಂಡಳವನ್ನು ನೇಮಿಸಿಕೊಂಡು ಗಡಿನಾಡಿನ ವಿವಾದವನ್ನು ಬಗೆಹರಿಸಿಕೊಳ್ಳಬೇಕು. ಹೀಗೆ ಇಟಾಲಿಯ ಸರಕಾರವು ಅಬಿಸೀನಿಯಾ ರಾಷ್ಟ್ರಕ್ಕೆ ಸವಾಲು ಹಾಕಿದೆ. "ನಮಗೆ ಯುದ್ಧ ಮಾಡುವ ಅಪೇಕ್ಷೆಯಿಲ್ಲ, ಅದನ್ನು ಪ್ರತಿಬಂಧಿಸುವದಕ್ಕಾಗಿಯೇ ನಮ್ಮ ಪ್ರಯತ್ನ, ಅಬಿಸೀನಿಯಾದವರು ಸೈನಿಕರನ್ನು ಕಳುಹಿಸಿದ್ದರಿಂದ ಆತ್ಮರಕ್ಷಣೆಗಾಗಿಯೇ ನಾವು ತಯಾರಿ ಮಾಡಬೇಕಾಗಿದೆ. ಇನ್ನೂ ೬೦ ಸಾವಿರ ಜನರು ಅಬಿಸೀನಿಯಾಕ್ಕೆ ಹೋಗಲು ಸಿದ್ಧರಿದ್ದಾರೆ" ಈ ಪ್ರಕಾರ ಇಟಾಲಿ ಸರಕಾರದ ಅಂಬೋಣ. "ನಾವೇನೂ ಅಪರಾಧ ಮಾಡಿಲ್ಲ. ಅಬಿಸೀನಿಯಾದೊಳಗಿನ ಸೈನಿಕರು ತಮ್ಮ ಸೀಮೆ ಉಲ್ಲಂಘನ ಮಾಡಿಲ್ಲ. ಇಟಾಲಿಯವರು ನಮ್ಮ ಮೇಲೆ ಯುದ್ಧ ಮಾಡಬಂದರೆ ನಾವೇನೂ ಹೆದರಿಯೆವು. ೮ ಲಕ್ಷ ಸೈನಿಕರು ಇದೀಗಲೇ ಸಿದ್ಧರಿದ್ದಾರೆ. ಇನ್ನೆರಡು ಲಕ್ಷ ಸೈನಿಕರನ್ನು ನಾವು ... ದ್ಯಕ್ಕೆ ... ಬಳಿಯಲ್ಲಿ ನಮ್ಮ ಕಡೆ ತೋಫುಗಳಿವೆ, ವಿಮಾನುಗಳಿವೆ. ದೇಶರಕ್ಷಣೆಗಾಗಿ ಜೀವವಿರುವ ವರೆಗೆ ಸಮಸ್ತರೂ ಕಾದಾಡಲು ಸಿದ್ಧರಿದ್ದಾರೆ. ಆಧುನಿಕ ಶಸ್ತ್ರಾಸ್ತ್ರಗಳ ಕೊರತೆ ನಮಗಿಲ್ಲ" ಈ ಪ್ರಕಾರ ರೋಮದೊಳಗಿನ ಅಬಿಸೀನಿಯಾದ ರಾಯಭಾರಿಗಳು 'ರ್ಯೂಟರ' ವಾರ್ತಾವಾಹಕ ಪ್ರತಿನಿಧಿಗಳ ಬಳಿ ನುಡಿದರು. ಇದೀಗಲೇ ೪೦ ಸಾವಿರ ಇಟಾಲಿಯ ಸೈನಿಕರು ಸೋಮಾಲಿ ಪ್ರದೇಶದ ಎರಟ್ರಿಯಾ ಪಟ್ಟಣಕ್ಕೆ ತಲ್ಪಿದ್ದಾರೆ. ಈ ಪ್ರಕಾರ ಅಬಿಸೀನಿಯಾ ಪ್ರಕರಣವು ಭಯಂಕರ ಪ್ರಜ್ವಲಿತವಾಗಿದೆ. ಅಬಿಸೀನಿಯಾ ದೇಶದ ಸ್ವಾತಂತ್ರ್ಯ ಹರಣ ಮಾಡಹೋದಾಗ ಇಟಾಲಿ ಮೊದಲಾದ ಯುರೋಪ್ಯ ರಾಷ್ಟ್ರಗಳು ಪ್ರಯತ್ನ ಮಾಡುತ್ತಿರಾಗ ಸವಸ್ತ ಅಬಿಸೀನಿಯಾದವರ ಗ್ರಹಿಕೆಯಾಗಿಬಿಟ್ಟಿದೆ. ಪ್ರತಿ ಒಬ್ಬರೂ ರಣಯಜ್ಞದಲ್ಲಿ ಪ್ರಾಣಾಹುತಿ ಕೊಡಲು ಸಿದ್ಧರಾಗಿದ್ದಾರೆ. ಇವರಡೂ ರಾಷ್ಟ್ರಗಳು ಲೋಕದಲ್ಲಿ ಶಾಂತತೆ ಸ್ಥಾಪಿಸಲು ನಿರ್ಮಾಣವಾದ ರಾಷ್ಟ್ರಸಂಘದ ಸಭಾಸದರು. ಹೀಗೆ ಬಲಾತ್ಕಾರ ನಡಿಸಲು ಸಂಘದ ನಿಯಮಗಳಲ್ಲಿ ಪ್ರತಿಬಂಧವಿದೆ. ಆದರಿಂದ ರಾಷ್ಟ್ರಸಂಘವು ಚಿಂತಾಕ್ರಾಂತವಾಗಿರುವದು. ಅಡಿಸ ಅಬಾಬದೊಳಗಿನ ಬ್ರಿಟಿಶ ರಾಯಭಾರಿಗಳು ಅಬಿಸೀನಿಯಾದ ಬಾದಶಹರಿಗೆ ಭೆಟ್ಟಿಯಾಗಿ ಇಟಾಲಿಯೊಡನೆ ಸಂಧಿ ಪ್ರಸ್ತಾಪ ನಡಿಸ ಹಿತೋಪದೇಶ ಮಾಡಿದ್ದಾರೆ. ಸಂಧಿಯಿಂದ ... ಈ ವಿಷಯ ಬಗೆಹರಿಯುವದಾಗಿ ಕೆಲವರ ಅಂಬೋಣ. ಸಂಧಿಯಾಗದಿದ್ದಾಗ್ಯೂ ಯುದ್ಧ ಒಹು ಕಾಲ ಬಾಳದೆಂದ ಸ್ಥಳೀಕ ಪರಿಸ್ಥಿತಿ ಬಲ್ಲವರು ಅಭಿಪ್ರಾಯಪಡುತ್ತಾರೆ. ಇನ್ನೊಂದು ಸಂಗತಿ: ಅಬಿಸೀನಿಯಾದೊಳಗೆ ಮಳೆ ಪ್ರಾರಂಭವಾಗಿದ್ದು. ಮಳೆಗಾಲ ಆರಂಭಿಸಿದರೆ ರಣಯಜ್ಞದ ಆರಂಭ ಯೋಗ್ಯವಿಲ್ಲ. ನವಂಬರ ತಿಂಗಳ ತನಕ ಇದೇ ಅವಸ್ಥೆ ಆದರಿಂದ ಶೀಘ್ರವೇ ಈ ಪ್ರಕರಣ ನಿಕಾಲಿಯಾಗಬಹುದಂತೆ. ಆದರ ಇಟಾಲಿಯವರು ಒಮ್ಮೆ ಹಟತೊಟ್ಟರೆ ಅವರಿಗೆ ಸಮಾಧಾನ ಮಾಡುವದು ಕಠಿಣವೆಂದು ಮುಂಬಯಿಯ 'ಟೈಮ್ಸ' ಕರ್ತರ ಅಂಬೋಣ. ಯಥಾರ್ಥ ವಾರ್ತೆ ಕೂಲಂಕುಷವಾಗಿ ಹೊರಬೀಳುವದಿಲ್ಲ. ಇದರಿಂದ ಅಲ್ಲಿಯ ಸ್ಥಿತಿ ಏನೆಂದು ಹೇಳಲಸಾಧ್ಯ. ಒಂದು ಮಾತನ್ನು ಮಾತ್ರ ಹೇಳಬಲ್ಲೆ. ಅಬಿಸೀನಿಯಾದೊಳಗಿನ ಬಲಾತ್ಕಾರಕ್ಕೆ ಬ್ರಿಟಿಶ-ಫ್ರಾನ್ಸ ದೇಶಗಳು ಅನುಕೂಲಿಸಿವೆ. ಸದ್ಯಕ್ಕೆ ಇಟಾಲಿ-ಫ್ರೆಂಚ ದೇಶಗಳೊಳಗಾದ ತಹನಾಮೆಯಂತೆ ಇಟಾಲಿಗೆ ಸೋಮಾಲಿ ಪ್ರದೇಶದಲ್ಲಿ ಬೇಕಾದ ಹಾಗೆ ಬಲಾತ್ಕಾರ ನಡಿಸಲು ಒಳ್ಳೇ ಪ್ರಸಂಗ ದೊರಕಿದೆ. ಬ್ರಿಟಿಶ-ಫ್ರಾನ್ಸ ದೇಶಗಳು ರಾಷ್ಟ್ರಸಂಘದ ಪ್ರಮುಖ ರಾಷ್ಟ್ರಗಳಾಗಿದ್ದರಿಂದ ಅಬಿಸೀನಿಯಾ ಪ್ರಕರಣ ನಿರ್ಮಲ ಚಿತ್ರದಿಂದ ಇತ್ಯರ್ಥವಾಗುವದು ಕಠಿಣ. ನನಗೆ ತೋರುವದು ಯುರೋಪ್ಯ ರಾಷ್ಟ್ರಗಳು ಅಬಿಸೀನಿಯಾದ ಮೇಲೆ ಸಾಗಿಬಂದರೆ ಅನರ್ಥವೇ.

ಮೇಲಾಗಿ ಯುರೋಪ್ಯ ರಾಜಕಾರಣವು ಸಂಕೀರ್ಣವಾದುದು. ತೋರಿಕೆಗೆ ಪ್ರಶಾಂತಿ. ಒಳಗಿಂದೊಳಗೆ ಯುದ್ಧ ತಯಾರಿ. ಫ್ರೆಂಚರು ಉತ್ತರ ಪೂರ್ವ ಪಾರ್ಶ್ವದೊಳಗಿನ ಕೋಟೆ-ಕೊತ್ತಳಗಳಲ್ಲಿ ಭದ್ರವಾದ ತಯಾರಿ ನಡಿಸಿದ್ದಾರೆ. ಫ್ರಾನ್ಸ ದೇಶದಲ್ಲಿ ಇಂಗ್ಲಂಡ ಮೊದಲಾದ ದೇಶಗಳಲ್ಲಿರುವಂತೆ ಸೈನಿಕರಿಲ್ಲ. ಪ್ರಾಯಕ್ಕೆ ಬಂದ ಪ್ರತಿಯೊಬ್ಬ ಫ್ರೆಂಚನು ಒಂದು ವರ್ಷದ ತನಕ ಸೈನ್ಯ ಶಿಕ್ಷಣವನ್ನು ಪಡೆಯಲೇಬೇಕೆಂಬ ಕಟ್ಟಳೆಯಿದೆ. ಒಂದು ವರ್ಷದ ಶಿಕ್ಷಣ ಕ್ರಮದಿಂದ ಈಗಿನ ಯಾಂತ್ರಿಕ ತೋಫುಗಳನ್ನೂ, ವಿಮಾನುಗಳನ್ನೂ ನಡಿಸಲು ತಕ್ಕಷ್ಟು ಸಾಮರ್ಥ್ಯ ಬರುವದಿಲ್ಲಾದ್ದರಿಂದ ಪ್ರತ್ಯೇಕವಾಗಿ ಸೈನಿಕರ ದಂಡುಗಳನ್ನಿಟ್ಟು ವ್ಯವಸ್ಥೆ ಮಾಡಬೇಕಾಗಿ ಈಗಿನ ಫ್ರೆಂಚ ಸೇನಾಪತಿಗಳಾದ ಮೇರಿಗುಸ್ತಾವ ಗೆಮಲಿನ್‌ರವರು ಅಭಿಪ್ರಾಯಪಟ್ಟು ಅವರಂತೆ ಏರ್ಪಾಟು ಮಾಡಲಾರಂಭಿಸಿದ್ದಾರೆ. ಇದಕ್ಕಾಗಿ ೧೦ ಲಕ್ಷ ಹಣಗಳನ್ನು ಫ್ರೆಂಚ ಲೋಕಪ್ರತಿನಿಧಿ ಸಭೆಯಲ್ಲಿ ಮಂಜೂರ ಮಾಡಿಕೊಂಡಿದ್ದಾರೆ. ಶಸ್ತ್ರಾಸ್ತ್ರಗಳನ್ನು ಹೆಚ್ಚಿಸುವದೇ ಶಾಂತಿಸ್ಥಾಪನೆಯ ರಾಜಮಾರ್ಗವೆಂದು ಜರ್ಮನಿಯ ಸೇನಾಪತಿಗಳಾದ ಗೋರಿಂಗರವರು ಒಬ್ಬ ಇಂಗ್ಲಿಷ ಅಧಿಕಾರಿಗಳ ಕಡೆ ಹೇಳಿ, ಇದೇ ಶಾಂತಿಸ್ಥಾಪನೆಗಾಗಿ ಜರ್ಮನಿಯು ಕೂಡುವ ಪಟ್ಟಿಯೆಂದು ಬೆನ್ನು ತಟ್ಟಿಕೊಂಡರು. ಶಸ್ತ್ರಾಸ್ತ್ರಗಳನ್ನು ಹೆಚ್ಚಿಸಿಕೊಂಡು ಪ್ರಬಲವಾಗುವದೇ ಶಾಂತತಾಪಾಲನೆಯ ಉಪಾಯವಾದರೆ ಶಸ್ತ್ರಸನ್ನ್ಯಸಪರಿಷತ್ತು ಯಾಕೆ? ರಾಷ್ಟ್ರಸಂಘದ ಮಧ್ಯಸ್ಥಿಕೆ ಏಕೆ? ಶಸ್ತ್ರಾಸ್ತ್ರಗಳ ಏರ್ಪಾಟಿನಿಂದ ರಾಷ್ಟ್ರಗಳಿಗೆ ಸೊಕ್ಕು ಬಂದು ಅವು ಕಾಲು ಕೆದರಿ ಜಗಳ ಹೂಡಿ ಲೋಕದಲ್ಲಿ ಶಾಂತತಾಭಂಗ ಮಾಡುತ್ತವೆಂದು ಈ ವರೆಗಿನ ಸ್ಥಿತಿ. ಯುರೋಪ ಖಂಡದೊಳಗಿನ ಬ್ರಿಟಿಶಾದಿ ರಾಷ್ಟ್ರಗಳು ಶಸ್ತ್ರಸನ್ನ್ಯಸದ ವೇಷ ನಡಿಸುತ್ತಿದ್ದಾಗ್ಯೂ ಶಸ್ತ್ರಾಸ್ತ್ರಗಳನ್ನೇ ಸಂಗ್ರಹಿಸುತ್ತಿದ್ದರು. ಜರ್ಮನಿಯ ಸೇನಾಧಿಪತಿಗಳಾದ ಗೋರಿಂಗರವರು ಆ ಪ್ರವೃತ್ತಿಯನ್ನು ಸ್ಪುಟ ಮಾಡಿದ್ದಾರೆ. ಇನ್ನೇ ಫ್ರೆಂಚ ಸೇನಾಪತಿಗಳಾಗಲಿ ಜರ್ಮನ್ ಸೇನಾಪತಿಗಳಾಗಲಿ ಮುಂದಿನ ಯುದ್ಧದ ತಯಾರಿಯನ್ನೇ ನಡಿಸತ್ತಾರಾಗಿ ಯಾರೂ ಹೇಳಬಲ್ಲರು. ಲಂಡನಿನೊಳಗಿನ 'ಕ್ರಿಶ್ಚನ್ ಸಾಯನ್ಸ ಮೋನಿಟೊರ' ಪತ್ರಿಕೆಯಲ್ಲಿ ಪ್ಯಾರೀಸದೊಳಗಿನ ವರ್ತಮಾನ ಪತ್ರಿಕೆಗಳ ಅಭಿಪ್ರಾಯ ಕೊಟ್ಟು ಇದೇ ಪ್ರಕಾರ ಮತ ಪ್ರದರ್ಶಿಸಲಾಗಿದೆ.

ಅಮೇರಿಕೆಯವರೂ ಯುದ್ಧವನ್ನೇ ಹಾರೈಸುತ್ತಿದ್ದಾರೆ. ಕಳೆದ ವಾರ ವಾಶಿಂಗ್ಟನ್‌ದಲ್ಲಿ ಸೇರಿದ ನೌಕಾ ದಳದ ಪ್ರಾತಿನಿಧಿಕ ಪರಿಷತ್ತಿನ ಅಧ್ಯಕ್ಷರಾದ ಮಿ| ವಿನ್‌ಸ್ಟನ್‌ರವರು ಹವಾಯಿ ನಡುಗಡ್ಡೆಯ ಪರ್ಲ ಹಾರ್ಬರ ಬಂದರದಲ್ಲಿ ೧½ ಕೋಟಿ ಡಾಲರು ಖರ್ಚು ಮಾಡಿ ನೌಕಾ ದಾಣ್ಯವನ್ನು ಭದ್ರಪಡಿಸುವ ಯೋಜನೆ ಜಾಹೀರಪಡಿಸಿದರು. ತೇಲುವ ದಂಡೆ (Floating dock) ತಯಾರಿಸುವದಕ್ಕಾಗಿ ಒಂದು ಕೋಟಿ ಡಾಲರು ಖರ್ಚಾಗುವದಂತೆ. ವಿಮಾನ ಕಾಲುವೆಯ ಪ್ರವಾಸಕ್ಕೆ ೨೦ ಲಕ್ಷ ಡಾಲರು ಬಿಲಿಯ ... ಮಂಜೂರ ... ಸಲ್ಪಡುವದು ನೋಟವಾಗಿ ... ಈ ಹಿಂದೆ ಹೇಳಿದಂತೆ, ವಾಕ ನಡುಗಡ್ಡೆಯನ್ನು ಭದ್ರಪಡಿಸಲು ಅಮೇರಿಕೆಯ ಸರಕಾರವು ... ಒಪ್ಪಿಸಿದೆ. ಈ ನಡುಗಡ್ಡೆ ದೇಶದಲ್ಲಿ ... ಒಂದು ... ವ್ಯಾಪಾರ ... ಸ್ಥಾಪಿತ ... ಪ್ರದೇಶ ಆದರೆ ಪೈಮಾಸಿಕ ದಾಣ್ಯಗಳು ... ಇಲ್ಲಿ ...

ಅಮೇರಿಕೆಯ ಸ್ಯಾನ್‌ಫ್ರಾನ್ಸಿಸ್ಕೋ ಪಟ್ಟಣದಿಂದ ಅಮೇರಿಕೆಯ ವಶದಲ್ಲಿರುವ ಫಿಲಿಪ್ಪೈನ ದೇಶಕ್ಕೆ ಹೋಗಬೇಕಾದರೆ ಹೊನೊಲುಲು, ಮಿಡ್ವೇ ದ್ವೀಪ, ವೇಕ ನಡುಗಡ್ಡೆ, ಗುವಾಮ ನಡುಗಡ್ಡೆ ಸಿಗಲುತ್ತವೆ. ಸ್ಯಾನ್‌ಫ್ರಾನ್ಸಿಸ್ಕೋದಿಂದ ಹೊನೊಲುಲು, ೨೧೦೦ ಮೈಲು. ಹೊನೊಲುಲುದಿಂದ ಮಿಡ್ವೇ ನಡುಗಡ್ಡೆ ೧೧೦೦ ಮೈಲು. ಮಿಡ್ವೇ ದ್ವೀಪದಿಂದ ವೇಕ ನಡುಗಡ್ಡೆ ೧೦೦೦ ಮೈಲು, ವೇಕದಿಂದ ಗುವಾಮ ೧೫೦೦ ಮೈಲು. ಈ ಪ್ರಕಾರ ಅಂತರಗಳಿವೆ. ವೇಕ ನಡುಗಡ್ಡೆಯ ಮೂಲಕ ಸ್ಯಾನ್‌ಫ್ರಾನ್ಸಿಸ್ಕೋದಿಂದ ವಿಮಾನಗಳನ್ನು ಪ್ಯಾಸಿಫಿಕ್ ಮಹಾಸಾಗರದಲ್ಲಿ ಹಾರಿಸಲು ಅಮೇರಿಕೆಯವರಿಗೆ ಬಹಳ ಅನುಕೂಲತೆಯುಂಟಾಗಿದೆ. ಇನ್ನೂ ಒಂದು ಮರ್ಮವಿದೆ. ವೇಕ ನಡುಗಡ್ಡೆಯು ಜಪಾನ ದೇಶದ ಸ್ವಾಧೀನವಿದ್ದ ಮಾರ್ಶಲ್ ಮತ್ತು ಕೆರೊಲಿನ ನಡುಗಡ್ಡೆಗಳ ಉತ್ತರ ಪಾರ್ಶ್ವದಲ್ಲಿದೆ. ಈ ನಡುಗಡ್ಡೆಗಳು ಜರ್ಮನ್ ರಾಷ್ಟ್ರದವು. ಮಹಾಯುದ್ಧದಲ್ಲಿ ಜರ್ಮನರು ಸೋತ ಬಳಿಕ ಅವುಗಳ ಬಗ್ಗೆ ರಾಷ್ಟ್ರಸಂಘದವರು ಅವನ್ನು ಜಪಾನದ ಕಡೆ ಒಪ್ಪಿಸಿದ್ದರು. ರಾಷ್ಟ್ರಸಂಘವು ಚೀನ ದೇಶದೊಳಗೆ ಜಪಾನದ ಸಂಹಾರವು ನಡಿಸಿದ ಬಲಾತ್ಕಾರವನ್ನೂ, ಮಂಚೂರಿಯಾ ದೇಶದ ಅಪಹಾರವನ್ನೂ ಮನ್ನಿಸಲಿಲ್ಲ. ಆದರಿಂದ ಜಪಾನಿಯರು ರಾಷ್ಟ್ರಸಂಘಕ್ಕೆ ರಾಜೀನಾಮೆ ಕೊಟ್ಟರು. ರಾಷ್ಟ್ರಸಂಘದ ಸಭಾಸದತ್ವ ಅಂತ್ಯವಾದ್ದರಿಂದ ಈ ನಡುಗಡ್ಡೆಯ ಕಾರುಭಾರ ನಡಿಸಲು ಜಪಾನ ಸರಕಾರಕ್ಕೆ ಹಕ್ಕಿಲ್ಲ. ಅವನ್ನು ರಾಷ್ಟ್ರಸಂಘಕ್ಕೆ ಜಪಾನಿಯರು ಒಪ್ಪಿಸಲೇಬೇಕು. ಆದರೆ ಜಪಾನಿಯರು ಪ್ರಬಲರಿದ್ದುದರಿಂದ, ರಾಷ್ಟ್ರಸಂಘ ಬಲಹೀನವಿದ್ದುದರಿಂದ ಈ ನಡುಗಡ್ಡೆಗಳನ್ನು ಜಪಾನ ಸರಕಾರವು ಒಪ್ಪಿಸಬಯಸುವದಿಲ್ಲ. ಅವನ್ನು ತಮ್ಮವೇ ಎಂತ ಎಣಿಸಿ ಜಪಾನಿಯರು ಅಲ್ಲಿ ಭದ್ರವಾದ ಸೈನ್ಯ ಠಾಣ್ಯಗಳನ್ನು ರಚಿಸಿದ್ದಾರೆ. ವೇಕ ದ್ವೀಪದ ವಿಮಾನಕ್ಷೇತ್ರದಿಂದ ಮಾರ್ಶಲ್-ಕೆರೊಲಿನ ನಡುಗಡ್ಡೆಗಳೊಳಗಿನ ಭದ್ರತೆಯೆಲ್ಲ ನಿರರ್ಥಕವಾಗುತ್ತದೆ. ಜಪಾನಿಯರು ತಮ್ಮ ಪ್ರಯತ್ನವೆಲ್ಲ ನಿರರ್ಥಕವಾಯಿತೆಂದು ವ್ಯಸನಪಡುತ್ತಾರೆ. ಅಮೇರಿಕೆಯಲ್ಲಿ ಜಪಾನದೊಡನೆ ಯುದ್ಧವೆಸಗುವ ಪ್ರಸಂಗ ಬಂದೀತೆಂದು ಬಹುಬಹುವಾಗಿ ಒಂದು ಕಲ್ಪನೆ ರೂಢವಾಗಿದೆ. ಅದಕ್ಕಾಗಿ ಅಮೇರಿಕದ ಜಪಾನ ದೇಶದೊಡನೆ ವ್ಯವಹಾರ ನಡಿಸುವವರಿಗೆ ನಷ್ಟ ಒದಗಬಾರದೆಂದು ಸ್ಯಾನ್‌ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಯುದ್ಧವಿಮೆ ಇಳಿಸುವ ದೊಡ್ಡ ವಿಮೆ ಕಂಪನಿಯೊಂದು ಸ್ಥಾಪಿತವಾಗಿದೆ. ಈ ಕಂಪನಿಯಲ್ಲಿ ವಿಮೆ ಇಳಿಸಿದರೆ ಯುದ್ಧವೆಸಗಿ ನಷ್ಟ ಒದಗಿದ್ದಲ್ಲಿ ಸಂಹಾರದ್ರವ್ಯ ದೊರಕುತ್ತದೆ. ಇದೆಲ್ಲ ಯಾವುದರ ದ್ಯೋತಕ? ರಣಸೂಚನೆಯದಲ್ಲವೇ?

ಇನ್ನು ಒಂದು ಮಾತನ್ನು ಹೇಳಿ ಬಿಡುತ್ತೇನೆ. ಜಪಾನದ ದೊಡ್ಡ ಮುತ್ಸದ್ದಿಗಳು ಹೇಳಿದಂತೆ, "ಯಾರಿಗೂ ಯುದ್ಧ ಬೇಕಾಗಿಲ್ಲ; ಆದರೆ ಈರ್ಷ್ಯೆಯೂ ಯುದ್ಧ ಅಪರಿಹಾರ್ಯ [illegible] ಈ ಭಾವನೆಯನ್ನು ನಾವು ನಿರ್ಮೂಲಿಸಬೇಕು." [illegible] ಯಾ ಮತ್ತು ಜಪಾನ [illegible] ಜಪಾನದ ಪರದೇಶ ಇಲಾಖೆಯ ಪ್ರಧಾನ [illegible] ವರು ನುಡಿದಂತೆ, ಅವರ [illegible] ಲಿಕ್ಕಿಲ್ಲವಾಗಿ ನಾನು [illegible] ಆದರೆ ಹಿರೋಟಾರವರು [illegible]

ಜಪಾನದ ಸೈನ್ಯ ಇಟ್ಟುಕೊಳ್ಳುವವರು ಮಾಡುವದು ಮತ್ತೊಂದು. ಲಂಡನ್ನಿನೊಳಗಿನ 'ಟೈಮ್ಸ್' ಪತ್ರಿಕೆಯ ಜಪಾನದ ಸುದ್ದಿಗಾರರು ಈ ವಿಸಂಗತ ಧೋರಣವನ್ನು ಬೈಲಿಗೆಳೆದು ಹಿರೋಟಾರವರ ಶಾಂತಿವಾರ್ತೆಗಳಿಗನುಸಾರವಾಗಿ ಸೈನ್ಯ ಇಟ್ಟುಕೊಳ್ಳುವವರು ನಡೆಯುವದಿಲ್ಲವಾಗಿಯೂ, ಬಲಾತ್ಕಾರವನ್ನೇ ನಡಿಸುತ್ತಾರಾಗಿಯೂ, ಈ ಹಿಂದೆ ಆದ ಪ್ರೋಟೋಕೋಲದ ಒಪ್ಪಂದದ ಕರಾರನ್ನು ಹಾರಿಸಿ ಮಂಚೂರಿಯಾ ಪ್ರದೇಶದಲ್ಲಿ ಜಪಾನಿಯರು ಸೈನ್ಯ ಕಳಿಸುತ್ತಾರಾಗಿಯೂ ಅಭಿಪ್ರಾಯಪಡುತ್ತಾರೆ. ಪ್ರೋಟೋಕೋಲಿನ ಒಪ್ಪಂದದಂತೆ ರುಶ್ಯರೂ, ಜಪಾನಿಯರೂ ನಡಕೊಂಡು ಗಡಿ ಪ್ರದೇಶದಲ್ಲಿ ಸೈನ್ಯ ಕಳಿಸಬಾರದೆಂದು ಹಿರೋಟಾರವರ ಅಂಬೋಣ. ಯಾವತ್ತು ಗಡಿಪ್ರದೇಶದಲ್ಲಿ ರುಶ್ಯರು ಇದೇ ಪ್ರಕಾರ ನಡೆಯುತಕ್ಕದ್ದೆಂದೂ, ಇದರಂತೆ ನಡಕೊಂಡಲ್ಲಿ ಯುದ್ಧದ ಭೀತಿಯಿಲ್ಲವಾಗಿಯೂ ಹಿರೋಟಾರವರು ವೇದಾಂತ ಹೇಳುತ್ತಾರೆ. ಪ್ರತ್ಯಕ್ಷ ಜಪಾನ ಸರಕಾರದ ಸೈನ್ಯ ಇಟ್ಟುಕೊಳ್ಳುವವರೇ ಜಪಾನದ ಹಿರೋಟಾರವರ ಅಂಬೋಣದಂತೆ ನಡೆಯದ ಬಳಿಕ ರುಶ್ಯರು ಈ ಮಾತಿಗೆ ನಂಬಿ ತಮ್ಮ ತಯಾರಿಯಲ್ಲಿ ಹೆಚ್ಚು-ಕಡಿಮೆ ಮಾಡಲೊಳಿಸುವರೆಂದು ತಿಳಿಯುವದು ತೀರ ದಡ್ಡತನ. ರುಶ್ಯರು ಗಡಿನಾಡಿನಲ್ಲಿ ಸೈನ್ಯವನ್ನು ಕಳಿಸಲಾರಂಭಿಸಿದ್ದಾರೆ. ಮೇಲೆ ಹೇಳಿದಂತೆ ಯಾರಿಗೂ ಯುದ್ಧ ಬೇಡ; ಯುದ್ಧ ಅಪರಿಹಾರ್ಯವಿದೆ, ಎಂಬ ಮಾತು ಸ್ಪಷ್ಟವಿದೆ.

ಪ್ಯಾಸಿಫಿಕ್ ಮಹಾಸಾಗರದೊಳಗೂ, ಏಸಿಯಾದೊಳಗೂ ರಣಗರ್ಜನ ಕೇಳಬರುತ್ತದೆಂದು ನಾನು ಹೇಳಿದರೆ ವಸ್ತುಸ್ಥಿತಿಯ ನಿದರ್ಶಕನಾಗದೇ?

ಮುಂಬಯಿ ಕೌನ್ಸಿಲು.

[ಖಾಸ ಬಾತಮೀದಾರನ ಮುಂದುವರಿಸಿದ್ದು]

ಚರ್ಚೆ ಕೇಳಲಿ. ಗವರ್ನರರು ಪ್ರಾಪ್ತ-ಸಂಕೇತದಂತೆ ಕೌನ್ಸಿಲು ಸಭಾಸ್ಥಾನಕ್ಕೆ ಒಂದಾದರೂ ಭೇಟಿ ಕೊಟ್ಟಿಲ್ಲ. ಏನಾದರೂ ಇಲ್ಲಿ ಕೇಳುತ್ತಾರೆ! ಸರಕಾರಿ ಸಭಾಸದರು ತಟಸ್ಥ ಕುಳಿತರು. ಮುಂಬಯಿಯ ಕಾಯದೆ ಕೌನ್ಸಿಲಿನಲ್ಲಿ ಪಾರ್ಲಮೆಂಟರಿ ಪದ್ಧತಿಯನ್ನು ಚರ್ಚೆ ಮಾಡುವದು ಸರಿ ಅನರ್ಥವೆಂದು ಧಿಕ್ಕರಿಸಿ ಅಧ್ಯಕ್ಷ ಚಮತ್ಕಾರ ಮಾಡಿತೋರಿಸಿದ ಬಗ್ಗೆ ಸಭಾಸದರಿಗೆ ಎಲ್ಲರೂ ಅಭಿನಂದಿಸುತ್ತಾರೆ.

ಸುಭದ್ರತೆಯ ಬೆಂಕಿಗಳನ್ನು ಸ್ಥಾಪಿಸುವದಕ್ಕಾಗಿ ದಿವಾನರಾದ ರಾ. ಬ. ಕಂಬಳಿಯವರು ೧೦ ಲಕ್ಷ ರೂಪಾಯಿಗಳನ್ನು ಬೇಡಿ ಇದೇ ಅಧಿವೇಶನದಲ್ಲಿ ಠರಾವನ್ನು ಸೂಚಿಸುವವರಿದ್ದಾರೆ.

ವೃತ್ತಸಾರ.

ಪಾರ್ಲಮೆಂಟಿನ ಸಭೆಯಲ್ಲಿ ಮುಖ್ಯ ಪ್ರಧಾನರಾದ ಮಾಕಡೊನಲ್ಡರವರಿಗೆ 'ಹಂದಿ', ನಾಯಿ', ಹೇಡಿ' ಎಂದು ಸಭಾಸದರಾದ ಬುಚಾನನರವರು ಸಂಬೋಧಿಸಿದರು. ಪಾರ್ಲಮೆಂಟೆಂದರೆ ಲೋಕಪ್ರತಿನಿಧಿ ಸಭೆಯು ಒಂದು ಆದರ್ಶ. ಅಲ್ಲಿ ಆಡುವ ನುಡಿಗಳು ಲೋಕಪ್ರತಿನಿಧಿ ಸಭೆಗಳಿಗೆ ಯೋಗ್ಯವಾದವುಗಳೆಂದು ಹೇಳಲಾಗುತ್ತವೆ. ಸ್ವರಾಜ್ಯ ಪಾಠ ಕಲಿಸುವದಕ್ಕಾಗಿ ಹಿಂದುಸ್ಥಾನದಲ್ಲೇರ್ಪಾಟಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಲಕ್ಷದಲ್ಲಿಟ್ಟು ನಡಕೊಳ್ಳಬೇಕು.

— ತಾಶ್ಕಂದದಲ್ಲಿ ಸೈನಿಕರಿಗೆ ಉಳಕೊಳ್ಳುವದಕ್ಕಾಗಿ ವಿಶ್ವವಿದ್ಯಾಲಯದ ಇಮಾರತುಗಳನ್ನು ಖಾಲಿ ಮಾಡಿಕೊಡುವಂತೆ ಸ್ಥಾನಿಕ ಸರಕಾರದ ಹುಕುಮು ಹೊರಟಿದೆ.

— ಪಂಡಿತ ಜವಾಹಿರಲಾಲರು ಲಖನೌದ ಬಲ ಭೇಟಿವಾಳಿಯಲ್ಲಿ ಸುಖದಿಂದಿದ್ದಾರೆ. ಅ ರಕ್ತಲು ಶೋಕ ಹೆಚ್ಚಿದೆ. ಸೌ|| ಕಮಲಾ ನೆಹರೂರವರು ಅಲ್ಲಿಯ 'ಆರೋಗ್ಯಧಾಮ'ದಲ್ಲಿ ಕ್ಷೇಮ ಹೊಂದುತ್ತಿದ್ದಾರೆ. ಜ್ವರ ಇನ್ನೂ ಪೂರ್ಣ ಬಿಟ್ಟಿಲ್ಲ. ಒಮ್ಮೆ ಮತ್ತೆ ಬರುತ್ತಿದೆ. ಶುಕ್ರವಾರ ತಾ [illegible] ಜವಾಹಿರಲಾಲರಿಗೆ ಸೌ|| ಯವರನ್ನು ಕಾಣಬಿಟ್ಟಿದ್ದರು.

— ಅಮೇರಿಕೆಯ 'ನೋರ್ದರ್ನ ಮಂಥ್ಲಿ' ಎಂಬದೊಂದು ಮಾಸಪತ್ರಿಕೆಯ ಪ್ರತಿನಿಧಿಗಳಾದ ಡಾ. ಕಿಶೋರ ಲೋಟೋವಾಲಾರವರು, ವರ್ಧಾಗಂಜದಲ್ಲಿ ಮಹಾತ್ಮರ ಮುಲಾಖತನ್ನು ಪಡೆದರು. ಮಹಾತ್ಮರು ಕೂತುಕೊಂಡ ಸ್ಥಳವು ಪವಿತ್ರವಾಗಿತ್ತು; ದೇವಸ್ಥಾನವೆಂಬಂತೆ ತಮಗೆ ಭಾಸವಾಯಿತು, ಹೀಗವರು ಬರೆಯುತ್ತಾರೆ. ಮಹಾತ್ಮರೊಡನೆ ನಡೆದ ಸಂಭಾಷಣದ ತಾತ್ಪರ್ಯವಿನಂದರೆ:— "ಸತ್ಯಾಗ್ರಹದ ಮೇಲೆ ನನಗೆ ಶ್ರದ್ಧೆಯಿದೆ. ಸ್ವಾತಂತ್ರ್ಯ ಸಂಗ್ರಹ ಮಾಡಲು ಅದೊಂದು ಸಾಧನ. ಯುರೋಪ ಖಂಡದೊಳಗೆ ಹೊಸ ಯುದ್ಧವೆಸಗಿದ್ದಲ್ಲಿ ನಾನು ನಿರಂಕುಶ ರಾಜಸತ್ತೆಯ ಬಲಾತ್ಕಾರಕ್ಕೆ ನೆರವಾಗಲಾರೆ. ಆತ್ಮಶುದ್ಧಿಗಾಗಿ, ಆತ್ಮಸಾಕ್ಷಾತ್ಕಾರಕ್ಕಾಗಿ, ಆತ್ಮನ ಪೂರ್ಣ ವಿಕಾಸಕ್ಕಾಗಿ ನಾನು ರಾಜಕಾರಣದಲ್ಲಿ ಸೇರಿದ್ದೇನೆ. ರಾಜಕಾರಣದಲ್ಲಿ ಗುಪ್ತ ಕಾರಸ್ಥಾನ, ಕಪಟ ನಾಟಕ, ಸುಳ್ಳುತನ, ಇವು ಅವಶ್ಯವಿಲ್ಲ. ಅವನ್ನು ಆಶ್ರಯಿಸುವದು ರಾಜಕಾರಣವಲ್ಲ. ಸಮಾಜಸತ್ತಾವಾದಿಗಳಂತೆ ಪರದ್ರವ್ಯಾಪಹಾರ ಮಾಡುವದು ನನಗೆ ಎಷ್ಟಕ್ಕೂ ಸಮ್ಮತವಿಲ್ಲ. ಆದರೆ ನನ್ನಂತೆ ಸಮಸ್ತರೂ ವಿಚಾರ ಮಾಡಿ ನಡಕೊಂಡರೆ ಸಮಸ್ತರೂ ತ್ಯಾಗಿಯೋ ಸ್ವಾಸ್ಥ್ಯದ ಅಪೇಕ್ಷೆ ಹಿಡಿಯದೆ ಯಾವತ್ತು ಆಸ್ತಿಯನ್ನು ಸಮಾಜಕ್ಕೆ ಅರ್ಪಿಸುವರು" ಇತ್ಯಾದಿ ಮಹಾತ್ಮರ ವಿಶಾಲ ವಿಚಾರ ಕೇಳಿದರೆ ಮನಸ್ಸು ಪ್ರಫುಲ್ಲಿತವಾಗುತ್ತದೆ.

ಜಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡುವವರು ಈ ಮೂಲಕ ತಿಳಿಸುವದೇನಂದರೆ— ನನ್ನ ಅಣ್ಣನ ಮಗನಾದ ವೆಂಕಟರಮಣ ಗಣಪ ಭಟ್ಟ ಈತನು ನನ್ನ ಮನೆಯಿಂದ ಈಗ ೬-೭ ತಿಂಗಳುಗಳಿಂದ ಹೊರಬಿದ್ದು ಮನಸ್ಸಿನಂತೆ ನಡೆಯುತ್ತಿದ್ದಾನೆ. ಈತನು ದುರ್ವ್ಯಸನಗಳ ಸಹವಾಸದಲ್ಲಿ ಬಿದ್ದು ಹೇರಾ ಹಣ ಅಪವ್ಯಯ ಮಾಡುತ್ತಿದ್ದಾನೆ. ಮನೆಯ ಒಟ್ಟು ಯಾವತ್ತು ಆಸ್ತಿ ಈ ಕೆಳಗೆ ಸಹಿ ಮಾಡಿದ ನನ್ನ ಹೆಸರಲ್ಲಿಯೂ ಕಬಜೆಯಲ್ಲಿಯೂ ಉಂಟು. ಕುಟುಂಬಕ್ಕೆ ಬರತಕ್ಕ ಗೇಣಿ-ಬಡ್ಡಿ ವಗೈರೆ ಯಾವತ್ತು ವಸೂಲು ಪಡೆಯಲಿಕ್ಕೆ ನಾನೇ ಹಕ್ಕುದಾರನಿದ್ದೇನೆ. ನನ್ನ ಹಿಪ್ಪಾ ಬೇರೆ ಯಾರಿಗೂ ವಸೂಲಕೊಟ್ಟಲ್ಲಿ ಸಾರೀಕತ ಒಗಲಾರದು. ಸಮಸ್ತರ ತಿಳುವಳಿಕೆಯ ಬಗ್ಗೆ ಈ ನೋಟೀಸು ಕೊಟ್ಟಿರುತ್ತದೆ. ತಿಳಿಯುವದು [ತಾ: [illegible]

ಮಹಾಬಲೇಶ್ವರ ಮಂಜಭಟ್ಟ ವಿಶಾಳಮನ

ಅಚವೆ, ತಾಲೂಕ ಅಂಕೋಲಾ

ಜಾಹೀರ ನೋಟೀಸು.

ಜೈನ ಬಸ್ತಿ, ಕುಮಟಾ

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಸುವ ದರಲ್ಲಿ ಬರುತ್ತದಲ್ಲಾ—

ಇಲ್ಲಿಯ ಬಸ್ತಿ ನೌಕರಿಯಲ್ಲಿದ್ದ ಧಾಕಸಿ ನಸಿ ಇವರಿಗೆ ಈ ಹೊತ್ತಿನಿಂದ ಕುಮಟಾ ಬಸ್ತಿಯ ನೌಕರಿಯಿಂದ ಕಡಿಮೆ ಮಾಡಿದೆ (ಕುಮಟಾ ಜೈನ ದೆರಾಸರ ಎಂಡ್ ಸಾಧಾರಣ ಚೇರಿಟೇಬಲ್ ಟ್ರಸ್ಟ)

ದಾಮಜಿ ಶಾಮಜಿ,

ಮೆನೆಜಿಂಗ ಟ್ರಸ್ಟಿ,

The Kumta J. D. & S. C. Trust.

ಕುಮಟಾ, ತಾ. 7—2—'35

ಸ್ಥಾನಿಕ ವೃತ್ತಾಂತ.

ಕುಮಟಾ— ಹನೆ ಇನ್ನೂ ನೆಟ್ಟಗಾಗದ ಊರಲ್ಲಿ ಸಿಡುಬು, ಮೈಲಿ ಮೊದಲಾದ ಬೇನೆಗಳವೆ. ಗೋಕರ್ಣ, ಬೆಟ್ಕುಳಿ, ವಾಗಳ್‌ಶ್ವರ ಮೊದಲಾದ ಗ್ರಾಮಗಳಲ್ಲಿ ಮೈಲಿಯು ಪ್ರಸಾರ ಹೇಳತೀರದು ಪ್ರತಿನಿತ್ಯ ರೋಗಿ ಎಂಬಂತೆ ಮೈಲಿಯ ಬಾಧೆ. ಚಿಕ್ಕ ಮಕ್ಕಳಿಗೆ ಕಷ್ಟ ಹೆಚ್ಚು. ಒಕ್ಕಲಿಗರ ಗೋಳು ಒಳ್ಳೆ ಬಲವಾದಳ. ಹಲವೆಡೆ ಛತ್ರದ ಗೋಡೆಗಳನ್ನು ಸಹ ಒಡೆಸಲಾಗದೆ ಕಾಳಿಗೆ ಕಷ್ಟವಾಗಿರುವದಂತೆ.

ಹೊನ್ನಾವರಕಾಂತ ಮಾರ್ಗ ಕಟ್ಟಿದಲು ಇಲ್ಲಿಯ ಮೆನೆಜಮೆಂಟ ಕಮಿಟಿಯುವರು ರಾ। ಶ್ರೀಣಿವಾಸ ರಾಮಚಂದ್ರ ಪೈ ಇವರ ಕಡೆ ಸ್ಥಳ ಕೇಳಿದ್ದರು. ರಾ। ಪೈ. ಸ್ಥಳ ಕೊಡಲು ಒಪ್ಪಿಗೆ ಕೊಡುವಾಗ ಹಾಕಿದ ನಿರ್ಬಂಧಗಳಿಂದ ಮ್ಯುನಿಸಿಪಾಲಿಟಿಗೆ ಮಾರ್ಗ ಕಟ್ಟದಲು ಕಠಿಣವಾಗುವದಾಗಿ ಮೆನೆಜಮೆಂಟ ಕಮಿಟಿಯ ಅಭಿಪ್ರಾಯವಾದ್ದರಿಂದ ಅವಶ್ಯವಿದ್ದಷ್ಟು ಸ್ಥಳವನ್ನು 'ಲೆಂಡ ಎಕ್ವಿಝಿಶನ್' ಕಾಯಿದೆಯಂತೆ ಸರಕಾರದವರು ಪಡೆದು ಮ್ಯುನಿಸಿಪಾಲಿಟಿಗೆ ಒಪ್ಪಿಸಬೇಕಾಗಿ ಮೆನೆಜಮೆಂಟ ಕಮಿಟಿಯ ಠರಾವಾಗಿರುವದಾಗಿ ತಿಳಿಯುತ್ತದೆ.

ಮನೆ ತೆರಿಗೆ ಆಕರಣೆಯ ವಿಷಯ ಸುಮಾರು ೧॥ ಸಾವಿರ ಅರ್ಜಿಗಳು ಮ್ಯುನಿಸಿಪಾಲಿಟಿಯಲ್ಲಿ ದಾಖಲಾಗಿವೆ. ಅವುಗಳ ವಿಚಾರ ತಾ. ೨ನೇಯಿಂದ ಪ್ರಾರಂಭವಾಗುತ್ತದೆ. ವ್ಹಾ.-ಚೇರಮನ್‌ರಾದ ಮಾಮಲೇದಾರರು ಊರ ಪರಿಸ್ಥಿತಿಯನ್ನೂ, ಜನರ ಒಡಕನವನ್ನೂ ಪರಾಂಬರಿಸಿ ಈ ಅರ್ಜಿಗಳನ್ನು ನಿರ್ಣಯಿಸುವದಾಗಿ ಕೇಳಿಕೆ.

ಸಾರ್ವಭೌಮ ಪಂಚಮ ಜಾರ್ಜ ಭೂಪತಿಗಳ ರೌಪ್ಯ ಮಹೋತ್ಸವದ ಸರಕಾರಿ ಕಾರ್ಯಕ್ರಮ ಪತ್ರಿಕೆ ಇಲ್ಲಿಯ ರಾಷ್ಟ್ರ ಮಹೋತ್ಸವ ಮಂಡಳಕ್ಕೆ ಬಂದಿದೆ. ಅದರ ತಾತ್ಪರ್ಯವೇನಂದರೆ— ತಾ. ೬—೫—೩೫ನೇಗೆ ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿ ದರ್ಬಾರು, ಆ ದಿನ ರಜೆ, ಬಡವರಿಗೆ ಭಿಕ್ಷೆ, ಮಕ್ಕಳಿಗೆ ಮಿಠಾಯಿ ಆ ದಿನ ಸರಕಾರವು ತಮ್ಮ ತಮ್ಮ ಮುಖ್ಯ ಇಮಾರತುಗಳಿಗೆ ದೀಪ ಹಚ್ಚಿ ಸಿಂಗರಿಸುವದು. ಸಹಕಾರಿ ಸಂಘ, ಮ್ಯುನಿಸಿಪಾಲಿಟಿಯವರು ತಮ್ಮ ತಮ್ಮ ಖರ್ಚಿನಿಂದ ತಮ್ಮ ತಮ್ಮ ಇಮಾರತುಗಳಿಗೆ ಇದರಂತೆ ದೀಪ ಹಚ್ಚಿ ಉತ್ಸವ ಮಾಡಬೇಕು. ಅಲ್ಲಲ್ಲಿ ಎತ್ತರವಾದ ಮಹಡಿಯ ಜಾಗದ ಅಂಚನ್ನು 'ಲೈಟ್ ಹೌಸ' ಮೊದಲಾದ ಮುಖ್ಯವಸ್ತು ವಿಧದ ಬೇರೆ ಬೇರೆ ಬಣ್ಣಗಳಿಗೆ ಕೊಡಲು ಕಳಿಸಬೇಕು. ಸ್ಥಳಿಕ ಉತ್ಸವ ಖರ್ಚಿನ ನಿಧಿ ಬೇಕಾದಲ್ಲಿ ಪ್ರತ್ಯೇಕವಾಗಿ ನಿಧಿ ಸಂಗ್ರಹಿಸಬೇಕು. ೨೫ ರೂಪಾಯಿಗೆ ನಿಂತ್ರ ಪ್ರಮಾಣದ ಮಾಡುವ ಔದಾರ್ಯ ಮಹಾಜನಗಳ ಹೆಸರುಗಳನ್ನು ಸರಕಾರಕ್ಕೆ ತಿಳಿಸಬೇಕು. ಹೀಗೆ ಎತ್ತರವಾದ ಮಾಡುವ ವಿವರ— (೧) ಧ್ವಜ ದಿನವನ್ನು ನಿಶ್ಚಯಿಸಿ ಆ ದಿನ ಬ್ರಿಟಿಶ ರಾಷ್ಟ್ರಧ್ವಜಗಳನ್ನು ಮಾರಬೇಕು. ಈ ಧ್ವಜಗಳನ್ನು ಸರಕಾರವು ಪೂರೈಸುತ್ತದೆ ಜನರು ಸಹ ಉತ್ಸವದಲ್ಲಿ ಸೇರಲನುಕೂಲವಾಗುವಂತೆ ಈ ಧ್ವಜಗಳನ್ನು ಬಿಲ್ಲೆಯಿದ್ದಿಗೆ ಸಹ ಮಾರಬಹುದು, ಅದಕ್ಕೆ ಬೆಲೆಗೆ ಹಣ ಪಡೆಯಲೂ ಬಹುದು. (೨) ನಾಟಕಗಳನ್ನು ಏರ್ಪಡಿಸುವದು. (೩) ಶಾಲಾ-ಕಾಲೇಜು ವಿದ್ಯಾರ್ಥಿಗಳ ಆಟಗಳನ್ನೇರ್ಪಡಿಸಿ ಟಿಕೀಟಿಟ್ಟು ಹಣ ಕೂಡಿಸುವದು. ಪಟ್ಟಿ ಕೂಡಿಸುವದು. ಇತ್ಯಾದಿ ಕಲೆಕ್ಟರರೂ, ಜಿಲ್ಲೆಯೊಳಗಿನ ಯಾವತ್ತು ಸಂಸ್ಥೆಗಳ ಸಹಕಾರ್ಯ ಪಡೆದು ಈ ಸಮಾರಂಭವನ್ನು ಸಡಗರದಿಂದ ನೆರವೇರಿಸಿಕೊಳ್ಳಬೇಕು. ತಾ. ೧೮—೫—೩೫ನೇಗೆ ಈ ಉತ್ಸವ ಮುಗಿಯುತ್ತದೆ. ಸಮಾರಂಭ ಮುಗಿಯುವ ಮುಂಚೆ ಇಪ್ಪತ್ತೊಂದು ದಿನ ರಜೆ ಕೊಡಲ್ಪಡುವದು.

ಮಿಠಾರ್ನ ತಾರಿಖನ್ನು ಉಳವಿ ತಾರಿ ಮಾಡಿದ ಖಾನಸಾಹೇಬ ಶಿರೂರಕರ ಖಾನರಿಗೇ ಮುಂದಿನ ವರ್ಷದಿಂದ ಕೊಡಬೇಕೆಂಬ ವಿಚಾರ ನಡೆದಿರುವದಂತೆ. ಉಳವಿ ತಾರಿಯು ಹಣ ಬಾಕಿಯುಳ್ಳವನಾಗ ಮಿಠಾರ್ನ ತಾರಿಯನ್ನೂ ಅವರಿಗೆ ಕೊಡುವದು ವಿಚಿತ್ರ. ತಾರಿಗಳು ಜಿಲ್ಹಾ ಬೋರ್ಡಿನ ಮಾಲ್ಕಿಯವು. ಇಂಜನಿಯರ ಖಾತೆಯವರು ಮಾರಾಟಗಾರರು, ಜಿಲ್ಹಾ ಬೋರ್ಡಿನವರು ಮುಂಜಾಗ್ರತೆ ವಹಿಸುವದು ಲೇಸು.

ಹುಬ್ಬಳ್ಳಿಯ ಷಟ್‌ಸ್ಥಲ ಬ್ರಹ್ಮ ಮಡಿವಾಳಸ್ವಾಮಿ ಚರಮೂರ್ತಿಗಳು, ಹನ್ನೆರಡು ವಾರ ಅವರು ಶ್ರೀಗೋಕರ್ಣ ಕ್ಷೇತ್ರದಲ್ಲಿ ತಮ್ಮ ಮಠ ಕಟ್ಟಿಸುವ ಬಗ್ಗೆ ಸರಕಾರದ ಕಡೆಯಿಂದ ತಾ. ೪—೨—೩೫ನೇಗೆ ಸ್ಥಳ ಪಡೆದಿರುತ್ತಾರೆ. ಇದು ಧರ್ಮಕಾರ್ಯವಿದ್ದು ಇದಕ್ಕೆ ಯಾವತ್ತೂ ವೀರಶೈವರು ತನು-ಮನ-ಧನದಿಂದ ಸಹಾಯ ಮಾಡಬೇಕಾಗಿ ಕೇರಿಯ ರಾ॥ ಲಿಂಗಪ್ಪ ಘಟಿಕಪ್ಪ ಧುಂಡಿ ಇವರು ವಿನಂತಿ ಮಾಡಿಕೊಳ್ಳುತ್ತಾರೆ.

ಗೋವಾಂತಕದ ಪ್ರೊಫೆಸರ ಕೇಶವರಾವ ಭೋಳೆ ಇವರು, ಗಾಯನಾಚಾರ್ಯ ವಝೇಬುವಾ, ಪ್ರಸಿದ್ಧ ನಟ ವ್ಯಂಕಟರಾವ, ಟೆಂಬೇಕರ ಮೊದಲಾದವರ ನಕಲುಗಳನ್ನೂ, ಪ್ರೋವಾಸಿಗಳನ್ನೂ ಸರಸವಾಗಿ ಅಭಿನಯಿಸಿ ಜನಮನರಂಜನ ಮಾಡಿದರು.

ಭಟಕಳ— (ತಾ. ೧೪-೨-೩೫) ತಾ. ೩ನೇಗೆ ಇಲ್ಲಿಯ ಶ್ರೀಹನುಮಂತದೇವಸ್ಥಾನದಲ್ಲಿ ನಾಗರಿಕರು ಸಭೆಸೇರಿ ಪಾರ್ಲಿಮೆಂಟಿನ ಜೆ. ಪಿ. ಸಿ. ವರದಿಯನ್ನು ನಿಷೇಧಿಸುವ ಠರಾವನ್ನು ಸರ್ವಾನುಮತದಿಂದ ಮಂಜೂರ ಮಾಡಿದರು.

ತಾ. ೧೧ನೇಗೆ ರಾ। ವೆಂಕಟೇಶ ವಾಮನ ನಾಯ್ಕ ಇವರ ಅಧ್ಯಕ್ಷತೆಯಲ್ಲಿ ನಾಗರಿಕರು ಸಭೆಸೇರಿ ಕರ್ನಾಟಕ ಏಕೀಕರಣದ ಬಗ್ಗೆ ಬಂದ ಠರಾವಿಗೆ ಬೆಂಬಲ ಕೊಟ್ಟರುತ್ತಾರೆ ಮತ್ತು ಈ ಸಂಗತಿಯನ್ನು ಅದೇ ದಿನ ತಂತಿ ಮೂಲಕವಾಗಿ ಸರ್ವಾಧಿಪತಿಗಳಿಗೆ, ಗೃಹ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಿಗೂ, ಶ್ರೀ। ಭೂಲಾಭಾಯಿ ದೇಸಾಯಿಯವರಿಗೂ, ಶ್ರೀ। ಜಮ್ನಾದಾಸರಿಗೂ, ಹೊಸಮನಿ ಸಿದ್ದಪ್ಪನವರಿಗೂ ತಿಳಿಸಿದ್ದಾರೆ. [ಕರ್ನಾಟಕ ಏಕೀಕರಣ ವಿಷಯಕ ಠರಾವು ತಾ. ೧೪ನೇಗೆ ಸರಿದ್ದ ಕಾಯಿದೆ ಕೌನ್ಸಿಲಿನಲ್ಲಿ ಸಮಯ ಸಿಗದ್ದರಿಂದ ಸೂಚಿಸಲ್ಪಡಲಿಲ್ಲವಾಗಿ ಪ್ರಕಟವಾಗಿದೆ. ಸಂ.]

ಶಿರಸಿ— (ತಾ. ೯-೨-೩೫) ಈ ತಾಲೂಕಿನ ಕಾಗಿಲಕಾಳಿ ಗ್ರಾಮದಲ್ಲಿ ಆನೆಗಳು ತೋಟ ಹೊಕ್ಕು ತೋಟಗಳನ್ನೆಲ್ಲ ಹಾಳುಮಾಡಿಬಿಟ್ಟವೆ. ದಿನಗಳಕ್ಕೆ ಪ್ರಿಯಾಇದೇ ಕಥೆ. ಆನೆಯ ಬೇಟೆಗಾರರನ್ನು ಸರಕಾರವು ಇನ್ನೂ ನೇಮಿಸಿಲ್ಲ ನೇಮಿಸುವ ವಿಚಾರ ಸಹ ಇದ್ದದ್ದು ಕಂಡುಬರುವದಿಲ್ಲ ಹೀಗೆ ತೋಟ ಹಾಳುಬಿದ್ದಲ್ಲಿ ರೈತರು ಬದುಕಿ ಉಳಿಯುವ ಬಗೆ ಹೇಗೆ? ತೋಟ ಮಾಡಲು ಶೇರಳ ಖರ್ಚು ಬೇಕು: ಕೆಲ ವರ್ಷಗಳ ಬೆಳೆ ಬರುವದಿಲ್ಲ, ಮುಂದೆ ಇಂಥ ವಿಪತ್ತು ಎಂತು ಬರಬಹುದು? ಕೊಡಗಿನ ರೈತರ ಶಿಸ್ತಿಯನ್ನು ನಾಶ ಮಾಡುತ್ತಿವೆ. ಜಿಲ್ಹಾ ವಿಭಾಗಗಳು ಉಪಾಯ ಮಾಡದಿದ್ದರೆ ತೋಟಗಳಲ್ಲ ಹಾಳುಬಿದ್ದು ಬೆಟ್ಟದ ಪಾಲಾಗುವವು. ರೈತರು ಅತ್ತ ಕಡೆ ಒಂದಿಗೆ ಕೆಲವರು ಜಂಗಲ ಕಷ್ಟಗಳನ್ನು ಅರುಹಿಕೊಂಡರಂತೆ. ಬೇಕಾದ ಮಾಹಿತಿಯನ್ನು ಕಲೆಹಾಕಿ ಸೇರಿಸುವಮಾಗಿ ರೈತರು ಬಂದು ಮಾತು ಹೇಳಿ ಕೊಟ್ಟರಿಗೆ ಹಿಂತಿರುಗಿ ಕಳಿಸಿಬಿಟ್ಟರು. ಬೇಕಾದ ಮೇಲೆ ಬೇಕಾ ನಡೆಯುತ್ತಿದ್ದಾಗ್ಯೂ ಈ ಕಸಬ ಜಂಗಲ ಕಷ್ಟಗಳೇನೂ ಪರಿಹಾರವಾಗಲಿಲ್ಲ.

ಶ್ರೀ ಕ್ಷೇತ್ರ ಬನವಾಸಿ ನಗರಜ್ಯೇಷ್ಠ ಶ್ರೀ ಮಧುಕೇಶ್ವರ ದೇವಸ್ಥಾನದ ಕರ್ಮದಿಂದ ಶೊಕ್ಕೇಸದರು ರಾ। ಎಸ್. ಕೆ. ವಡೆಯರ ಮೇಲೆ ಮಾಡಿದ ದಾವೆಯಲ್ಲಿ ಮುಂಬಯಿ ಹೈಕೋರ್ಟನಲ್ಲಿ ಮಾಡಿದ ಅಪೀಲ ನಿರ್ಣಯದ ವಿವರ:— ವೀರಶೈವರು ಬ್ರಾಹ್ಮಣರೋ, ಶೂದ್ರರೋ? ಎಂಬ ನಿರ್ಣಯವಾಗಲಿಲ್ಲ. ಅವರು ಶ್ರೀ ಮಧುಕೇಶ್ವರ, ಶ್ರೀ ಗಣಪತಿ ದೇವಾಲಯಗಳ ಬಿಂಬ ಮಂಟಪ, ಅರ್ಧ ಮಂಟಪಗಳಲ್ಲಿ ಪ್ರವೇಶ ಮಾಡಿದರಿಂದ ಅಪವಿತ್ರತೆಯುಂಟಾಗುತ್ತದೆಂಬ ಪ್ರಶ್ನೆಯೂ ನಿರ್ಣಯಿಸಲ್ಪಡಲಿಲ್ಲ. ಈ ಪ್ರಶ್ನೆಗಳಮೇಲೆ ನಿರ್ಣಯ ಕೊಡುವ ಅವಶ್ಯವಿಲ್ಲವಾಗಿ ಇತ್ತಟ್ಟಿನಿಂದ ರುಜು ಅರ್ಜಿ ದಾಖಲಾದ ಮೇಲೆಗೆ ನ್ಯಾಯಮೂರ್ತಿಗಳು ಅದನ್ನು ಬಿಸಿಸಿದ್ದಾರೆ. ಪುರಾತನ ಕಾಲದಿಂದ ಪಂಚಗೌಡ, ಪಂಚ ದ್ರಾವಿಡ ಬ್ರಾಹ್ಮಣರು ಮಾತ್ರ ಮಹಾದ್ವಾರದ ಒಳಗೆ ಪ್ರವೇಶಿಸುವ ಪುರಾತನ ರೂಢಿಯಿದೆ, ಅದಕ್ಕೆ ವಿಕ್ಕ ರಾ। ವಡೆಯರರು ನಡಕೊಂಡದ್ದರಿಂದ ರೂ. ೧೦ ದಂಡ ಮತ್ತು ದೇವಸ್ಥಾನದ ಕಡೆ ಎರಡು ಕೋರ್ಟುಗಳ ಖರ್ಚು ಕೊಡಲಿಕ್ಕೆ ರಾ। ವಡೆಯರರು ಒಪ್ಪಿದಂತೆ ನ್ಯಾ। ಮೂರ್ತಿಗಳು ಹುಕುಮನಾಮೆ ಕೆಳಕೋರ್ಟಿನ ತೀರ್ಪನ್ನು ಇಷ್ಟರ ಮಟ್ಟಿಗೆ ತಿದ್ದುಪಡಿ ಮಾಡಿರುತ್ತಾರೆ. ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಕೊಟ್ಟು ಜನರ ಮೇಲೆ ಖಟ್ಲೆ ಮಾಡುವ ಉದ್ದಿಷ್ಟ ಆ ಹಿಂದೆಯೇ ವಾದಿ ಕಡೆಯಿಂದ ಅರ್ಜಿ ದಾಖಲಾಗಿರುತ್ತದೆ. ಅವುಗಳ ವಿಚಾರ ಈ ಮುಂದೆ ಆಗುವದಿದೆ. ಈ ಪ್ರಕಾರ ಶ್ರೀ ಮಧುಕೇಶ್ವರ ದೇವಸ್ಥಾನದ ಪ್ರಕರಣ ತ್ರಿಶಂಕು ರೂಪದಲ್ಲಿ ತೀರ್ಗಡೆಯಾದಂತಾಯಿತು! ಹೈಕೋರ್ಟಿನಲ್ಲಿ ಅದೇ ರುಜುವೇ ಮೂಲ ಕೋರ್ಟಿನಲ್ಲಿ ಆಗಿದ್ದರೆ ಇತ್ತಟ್ಟಿನವರಿಗೂ ಬದಿಗಿರ ಖರ್ಚು, ಪರಿಶ್ರಮ, ಅನಾವಶ್ಯಕವಾದ ವೈಷಮ್ಯ ತಪ್ಪುತ್ತಿತ್ತು. ಈ ವ್ಯವಹಾರದ ಬಗ್ಗೆ ಇತ್ತಟ್ಟಿನಲ್ಲಿ ಸುಮಾರು ೧೫—೨೦ ಸಾವಿರ ರೂಪಾಯಿ ಮಟ್ಟಿಗೆ ಖರ್ಚು ಬಂದಿರಬಹುದಾಗಿ ಹೇಳುತ್ತಾರೆ.

ಕಾರವಾರ— ಇಲ್ಲಿ ಮೈಲಿ ತೆಗೆಯುವ ಉಪಕ್ರಮ ಜೋರಿನಿಂದ ನಡೆದರೆ ಮಾಮಲೇದಾರರ ಕೂಸಿಗೆ ಮೈಲಿ ತೆಗೆದ ಕೂಡಲೆ ಭಯಂಕರ ಜ್ವರಬಂದು ೧ ದಿವಸ ತನಕ ಅಪಸ್ಮಾರದ ನಮೂನೆಯಾಯಿತು. ೧೦ ದಿನಗಳ ಅವಕ ಉಪಚಾರ ನಡಿಸಿದ ಬಳಿಕ, ಆ ಕೂಸು ಸ್ವಸ್ಥವಾಗಿದೆ. ಇನ್ನೊಂದು ಕೂಸಿಗೆ ಹೀಗೆ ಮೈಲಿ ತೆಗೆದ ಬಳಿಕ ಅತಿಸಾರದ ಬೇನೆಯಾಯಿತಾಗಿ ತಿಳಿಯುತ್ತದೆ. ಒಡಬಗ್ಗರಲ್ಲಿ ಏನೇನು ಕಷ್ಟವಾಗುತ್ತದೆಂಬ ಹೊರತಿಳಿಯುವದು ಕಠಿಣ. ಪೆಕ್ಷನೇಟರರೂ, ಸಂಬಂಧಪಟ್ಟ ಅಧಿಕಾರಿಗಳೂ ಮೈಲಿ ತೆಗೆದ ಆವರಲ್ಲಿ ಉಂಟಾಗುವ ಪರಿಣಾಮಗಳ ಬಗ್ಗೆ ಕಾಳಜಿ ಮಾಡಿ ಅವುಗಳನ್ನು ಪರಿಹರಿಸಲು ಉಪಾಯ ಯೋಜನೆ ಮಾಡದಿದ್ದರೆ ಮೈಲಿ ಚುಚ್ಚಿಸಿಕೊಳ್ಳಲು ಜನರು ಒಪ್ಪಲಿಕ್ಕಿಲ್ಲ.

ಕಲೆಕ್ಟರರಾದ ಮಿ। ಕೋಲಾಪಾಲಾರವರು ಕೃಷಿಕಾರವಾರ ಪ್ರಾಂತ ಅಧಿಕಾರಿಯಾದ ಶ್ರೀ। ವೆಂಕಟಪ್ಪಯ್ಯನವರ ಕಡೆ ಚಾರ್ಜ ಕೊಟ್ಟು ರಜೆ ಮೇಲೆ ಹೋಗಿರುತ್ತಾರೆ. ರಾ। ಓಲೇಕಾರರವರು ಇಲ್ಲಿ ಕಲೆಕ್ಟರರಾಗಿ ಬರುವದಿಲ್ಲ. ಅವರಿಗೆ ಬೆಳಗಾವಿಗೆ ವರ್ಗವಾಗಿರುವದಂತೆ. ಇಲ್ಲಿ ಮಿ। ದೀಕ್ಷಿತ ಎಂಬವರು ಕಲೆಕ್ಟರರಾಗಿ ಬರುವವರಿದ್ದಾರಾಗಿ ತಿಳಿಯುತ್ತದೆ.

ನೇಕ ನಾಮದಾರ ಗವರ್ನರರ ಆಸ್ಥಾನದ ಸಂಕೇತವಾದ ಕೊಂಡಿದ ಪ್ರಕಾಶಿತ್ಯವನ್ನು ಆ ಜನಿಯರ ಮತ್ತೆ ಯಂತರ, ಸಿಲ್ಪ ಆಸ್ಪತ್ರಿಯವರೂ ಹ್ಯಾಸ್ಪಿಟಲಿನ ಬಳಿಯ ಸ್ಥಳಿಯೇ ಕಟ್ಟಬೇಕೆಂದು ಆಲೋಚಿಸಿದ್ದಾರೆ. ಈ ಸಲ

ರಾಜವರ್ಗಗಳಿಗೆ [illegible], ಇದರಿಂದ [illegible] ರೋಗಗಳು [illegible] ಬರುತ್ತವೆ [illegible]. ಬರಬೇಕಾದ ರೋಗಿಗಳ ಬಗ್ಗೆ [illegible] ಅಸಮಾಧಾನವುಂಟಾಗಿದೆ.

ಇಲ್ಲಿಯ ಜಿಲ್ಹಾ ಬೋರ್ಡಿನ ಅಧ್ಯಕ್ಷರಿಗೆಯೂ [illegible] ತಾ. ೧೩ನೇ ರವಿವಾರ ದತ್ತಾತ್ರೇಯ [illegible] ಅವರ ಅಧ್ಯಕ್ಷತೆಯಲ್ಲಿ ಸಭೆ ನೆರೆದು [illegible] ಕೊಡಬೇಕೆಂದು [illegible] ಮಾಡಲಾಯಿತು. [illegible] ಕೌನ್ಸಿಲಿನ ಪ್ರಮುಖರು, [illegible] ಇದ್ದವರು ಅದೇ ದಿನ [illegible] ಈ ಸಭೆಯನ್ನು ಹಿಂದು-ಮುಸಲ್ಮಾನ-ಕ್ರಿಶ್ಚನ್ ಇವರೆಲ್ಲರೂ ಕೂಡಿ ನಿರ್ವಹಿಸಿದ್ದರು.

[illegible] ಉಪ್ಪಿನ ಸಂಬಂಧದಿಂದ ಇಲ್ಲಿ ಇರುವ [illegible] ಜನರಿಗೆ ಬಹಳ ತೊಂದರೆ ಅಸಹ್ಯವಾದದ್ದೆಂದು ಇಲ್ಲಿಯ ಮ್ಯುನಿಸಿಪಾಲಿಟಿಯ ಆರೋಗ್ಯ ಮಂಡಳದ ಅಭಿಪ್ರಾಯವಾಗಿದೆ. ಸಿವಿಲ್ ಸರ್ಜನರ ಈ ಅಭಿಪ್ರಾಯ [illegible]. ಅವರು ಅಭಿಪ್ರಾಯ ಕೊಡಲಿಲ್ಲ. [illegible] ಅಭಿಪ್ರಾಯ ಕೇಳಬೇಕಾಗಿ ಮ್ಯುನಿಸಿಪಾಲಿಟಿಗೆ ತಿಳಿಸಿದರು. ಆ ಮೇಲೆ ಇಂಥ ಉಪ್ಪನ್ನು [illegible] ಮ್ಯುನಿಸಿಪಲ್ ಹದ್ದಿನಲ್ಲಿ ಮಾರದಂತೆ ಪ್ರತಿಬಂಧಿಸಬೇಕೆಂದು [illegible], ಉಪ್ಪಿನ [illegible] ಈ ರೀತಿಯಾಗಿ ಮ್ಯುನಿಸಿಪಾಲಿಟಿಯ [illegible] ನಡೆಯಲಿಲ್ಲ. ಅಧ್ಯಕ್ಷರ [illegible] ಆರೋಗ್ಯ ಮಂಡಳದ ಅಭಿಪ್ರಾಯ [illegible] ಮ್ಯುನಿಸಿಪಾಲಿಟಿಯ [illegible], [illegible] ಈಗ ಸಂತೆಪೇಟೆಯಲ್ಲಿ ಇಂಥ ಉಪ್ಪು ಮಾರುವ [illegible] ಜನರ [illegible] ಮ್ಯುನಿಸಿಪಾಲಿಟಿ ಆಫೀಸರರು [illegible] ಹೋಗುತ್ತಾರೆ. ಮ್ಯುನಿಸಿ-[illegible]ರಲ್ ಆಫೀಸರವರ ಈ ವರ್ತನದಿಂದ ಆರೋಗ್ಯ ಮಂಡಳದವರು ತೀರ ಅಸಮಾಧಾನಪಟ್ಟಿರುತ್ತಾರೆ.

ಪೋಲೀಸ ಲೈನಿನ ಒಳಿಯಲ್ಲಿದ್ದ ಕಾಲುವೆಯೊಳಗಿನ [illegible] ಹಳ್ಳದಲ್ಲಿ ಬಂಗಿಗಳು [illegible] ಇದರಿಂದ ಹಳ್ಳದ ನೀರು [illegible], [illegible] ದುರ್ಗಂಧ. [illegible] ಜನರ [illegible] ಸಾಧ್ಯವಿದೆ. ಸನಿಟರಿ [illegible] ಈ ಹೊಲಸು [illegible] ಬಗ್ಗೆ ವಿಚಾರಿಸಬೇಕಾಗಿದೆ.

[illegible] ೮-೯ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟ ಸಾರ್ವಜನಿಕ ವಾಚನಾಲಯದಿಂದ ಜನರಿಗೆ ಒಳ್ಳೇ ಪ್ರಯೋಜನವಾಗಲಾರಂಭಿಸಿದೆ. ಜನಸಾಮಾನ್ಯರೂ, ಮ್ಯುನಿಸಿಪಾಲಿಟಿಯವರೂ ಇದಕ್ಕೆ ಸಹಾಯ ಮಾಡಬೇಕು.

ತಿದ್ದುಪಡಿ— ಕಳೆದ ಸಂಚಿಕೆಯಲ್ಲಿ ಪ್ರಕಟವಾದ [illegible] ಸ್ಥಾನಿಕ ವೃತ್ತಾಂತದ ೧೦ನೇ ಪಂಕ್ತಿಯಲ್ಲಿ 'ಜ್ಯೋತಿಷಿ [illegible] ಮಂಡಳ' ಎಂಬುದರ ಬದಲು 'ಜ್ಯೋತಿರ್ವಿದ ಮಂಡಳ' ಎಂತಲೂ, ೧೩-೧೫ನೇ ಪಂಕ್ತಿಗಳಲ್ಲಿ 'ಎಚ್. ಎಮ್. ಸ್ವಾಮಿ' ಇದರ ಬದಲು 'ಎನ್. ಎಚ್. ಸ್ವಾಮಿ' ಎಂತಲೂ, ೨೩-೨೪ನೇ ಪಂಕ್ತಿಗಳಲ್ಲಿ '೧-೨-೩೪' ಇದರ ಬದಲು '೧-೨-೩೫' ಎಂತಲೂ ತಿದ್ದಿ ಓದಬೇಕು.

“ಗೋಲ್ಡಸ್ಟಾರ” ಬ್ರೆಂಡ ಚಹಾಗಳು (ಲೀಫ ಮತ್ತು ಪೌಡರ)

ನಮ್ಮಲ್ಲಿ ಥೋಕ ಮತ್ತು ಕಿಫಾಯತಶೀರ ವಿಕ್ರಯಿಸಲ್ಪಡುತ್ತವೆ. ಅತ್ಯುನ್ನತ ಪ್ರದೇಶದೊಳಗಿನ ಚಹಾ ಮಾಳೆಯಲ್ಲಿ ಈ ಚಹಾವು ಸಕ್ರಿಯವಾಗಿ ತಯಾರಿಸಲ್ಪಡುವದರಿಂದ ಸಿಘ್ರೆಳ ಮತ್ತು ಮಧುರವಿರುತ್ತದೆ. ನಮೂನೆ ವ ದರವಾರ ವಗೈರೆ ಕುರಿತು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ. ಅಲ್ಲಲ್ಲಿ ವಿಕ್ರೇತರು ಬೇಕು !

ಹೊನ್ನಾವರ,
27—1—1935.

ದಿ ನ್ಯೂ ಎಂಪೋರಿಯಮ್,
ಹೊನ್ನಾವರ. (ಕೆನರಾ.)

Established 1900 | ॐ | FIXED RATE.

ದಾಸಪ್ಪಾ ಕೃಷ್ಣಪ್ಪಾ
ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಸಿ.

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪತ್ತಾರೇಶ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಶ್ಮೆ ಖಿದ್ದರ ಮಡಿಗಳೂ, ಕಾರ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಅಟಲವೃದ್ಧರಿಗೂ ಮೋಸ ಹೋಗುವ ಹೆದರಿಕೆಯೂ ಭಯವಿಲ್ಲದೆ ಸೋಯಿ. ದರದಿಂದ ಸಿಗುವದು ಹೋಲು ವ್ಯಾಪಾರಕ್ಕೆ ಕಮಿಶನ್ ಕೊಡಲಾಗುವದು.

Tel:- "Honesty"] D. K. DHAKAPPA BROS.,
Cloth Merchants,
SIRSI. N. KANARA.

ಹೊಸ ಮಾಲು. | ದರ ಅಗ್ಗ.

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಶಾಖೆಗಳು [illegible], [illegible] ಇವೆ. ಕಂಪನಿಯ ಹಣವು ಸರಕಾರಿ [illegible], [illegible], ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಹೊಸ ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ [illegible] ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆಯಬೇಕು.

Kumta Agents
D. K. Nayak Bros.
D. S. Pai.
K. N. Nayak.
Honavar Agents
R. V. Prabhu Esq.

K. Padmanabha Rao & Sons,
BELGAUM
Chief Agents for
Karnatak Districts & S. M. States

ಬೇಕು !

ಜಾಹೀರ ಸೂಚನೆ.

ಈ ಸಂಸ್ಥೆಯ ಪ್ರಚಾರ ಕಾರ್ಯವನ್ನು ಮಾಡಲಿಕ್ಕೆ ಪೋಸ್ಟ ಗ್ರಾಜ್ಯುಏಟರೊಳಗಿನ ಶೇತಕೀ ಶಾಲೆಯಲ್ಲಿ ಶಿಕ್ಷಣ ಹೊಂದಿದ ಹಾಗೂ ಶೇತಕಿ ಸುಧಾರಣಾ ವಿಷಯಕ್ಕೆ ಪ್ರತ್ಯಕ್ಷ ಅನುಭವವುಳ್ಳ ಉತ್ಸಾಹಿಯೂ, ಪ್ರಾಮಾಣಿಕನೂ ಆದ ಒಬ್ಬ ಕಾಮಗಾರನು ಬೇಕಾಗಿದೆ. ವೇತನವು ಯೋಗ್ಯತೆಯಂತೆ ನಿರ್ಣಯಿಸಲ್ಪಡುವದು. ಅರ್ಜದಾರರು ತಮ್ಮ ದಾಖಲೆಗಳನ್ನೂ, ಶಿಫಾರಸಪತ್ರಗಳನ್ನೂ ತಮ್ಮ ಅರ್ಜಿಗಳಿಗೆ ಜೋಡಿಸಿ, ಅವುಗಳನ್ನು ಬರುವ ತಾ. ೧೫ನೇ ಮಾರ್ಚ ೧೯೩೫ರೊಳಗಾಗಿ ಈ ಸಂಸ್ಥೆಯ ಕಚೇರಿಯಲ್ಲಿ ಕಳಿಸಿಕೊಡಬೇಕಾಗಿ ವಿನಂತಿ.

ಕಾರವಾರ,
ತಾ. ೧೪-೨-೩೫.

D. B. Nadkarni.
ಪ್ರೆಸಿಡೆಂಟ,
ಕಾರವಾರ ತಾಲೂಕಾ ಡೆವ್ಹಲಪ್‌ಮೆಂಟ ಎಸೋಸಿಯೇಶನ್ ಲಿಮಿಟೆಡ್.

ಜಾಹೀರ ನೋಟೀಸು.

ಸಿರ್ಸಿಯಲ್ಲಿ ರಾಯರಪೇಟೆಯಲ್ಲಿ ನ. ನಂ 45ನೇ ದಲ್ಲಿರುವ ನನ್ನ ಮಾಲ್ಕಿಯ ಎರಡು ಮನೆಗಳು ಮಾರುವದಿರುವದರಿಂದ ಬೇಕಾದವರು ಕೆಳಗಿನ ಪತ್ತೆಗೆ ಎರಿಸ ಸೂಚನೆಯ ಬಗ್ಗೆ ಬರೆಕೊಳ್ಳಬೇಕು

S. N. Keshavain, or G. D. Malgikar,
Sirsi. Ankola.

14-2-35.

ಪತ್ರಕರ್ತರ ಸುಡಿಗನ್ನಡಿ.

೧. ಚಕ್ರವರ್ತಿ ಪಂಚಮ ಜೋರ್ಜ ಭೂಪಾಲರು ಉದಾರಮನಸ್ಕರೆಂದು ಸಮೋದಿಸಲು ನಮಗೆ ಮಹದಾನಂದವಾಗುತ್ತದೆ. ಆಯರ್ಲಂಡ ದೇಶಕ್ಕೂ ಬ್ರಿಟಿಶ ದೇಶಕ್ಕೂ ವ್ಯಾಪಾರ ವ್ಯವಸ್ಥೆಯ ಕುರಿತು ವಿವಾದವೆದ್ದಿದೆ. ಆಯರ್ಲಂಡ ದೇಶದಲ್ಲಿ ಬ್ರಿಟಿಶ ಸರಕುಗಳನ್ನು ಬಹಿಷ್ಕರಿಸಬೇಕೆಂಬ ವಿಚಾರ ಸಹ ನಡೆದಿರುವದಂತೆ. ಆಯರ್ಲಂಡವು ಬ್ರಿಟಿಶ ಸಾಮ್ರಾಜ್ಯಾಂತರ್ಗತ ಪ್ರದೇಶವಾದಾಗ್ಯೂ ಇತ್ತಿಟ್ಟಿನಲ್ಲಿ ಅಹಿ–ನಕುಲರಂತೆ ದ್ವೇಷವಿದೆ. ಆಯರ್ಲಂಡ ದೇಶದವರು ನ್ಯಾಯನಿರ್ಣಯಕ್ಕಾಗಿ ಇಂಗ್ಲಂಡ ದೇಶದೊಳಗಿನ ಪ್ರಿವ್ಹಿ ಕೌನ್ಸಿಲಿಗೆ ಹೋಗಬಾರದೆಂಬ ಕಾನೂನಾಗಿದೆ. ಈ ಕಟ್ಟಳೆ ಕಾಯಿದೆಗೆ ಸಮ್ಮತವೋ ಹೇಗೆ? ಕಾಯಿದೆಬಾಹ್ಯವಿದ್ದರೆ ಪ್ರಿವ್ಹಿ ಕೌನ್ಸಿಲು ತೀರ್ಪು ಕೊಟ್ಟು ಹುಕುಮು ಮಾಡಿದ್ದಲ್ಲಿ ಆಯರ್ಲಂಡ ಸರಕಾರವು ಅದನ್ನು ಅಮಲಬಜಾವಣೆ ಮಾಡದಿದ್ದಲ್ಲಿ ಮುಂದೇನವಸ್ಥೆ? ಎಂಬ ಸಂಗತಿಗಳನ್ನು ಬ್ರಿಟಿಶ ಸರಕಾರವು ಆಲೋಚಿಸುತ್ತಿದೆ. ವ್ಯಾಪಾರ ವ್ಯವಸ್ಥೆ ಆಯರ್ಲಂಡದ ಅಂಬೋಣದಂತೆ ನಿರ್ಣಯವಾಗದಿದ್ದಲ್ಲಿ ಅಲ್ಲಿಯ ಪ್ರಮುಖರು ಬಾದಶಹರ ರೌಪ್ಯ ಮಹೋತ್ಸವದ ಸಮಾರಂಭಗಳಿಗಾಗಿ ಲಂಡನ್ನಿಗೆ ಚಿತ್ತೈಸರು. ಇದನ್ನು ಶ್ರೀಮ. ಚಕ್ರವರ್ತಿ ಜೋರ್ಜ ಭೂಪಾಲರು ಚಿಂತಾಕ್ರಾಂತರಾಗಿದ್ದಾರಂತೆ. ಚಕ್ರವರ್ತಿಗಳು ಈ ವಿಷಯವನ್ನು ಶೀಘ್ರವೇ ಮಧ್ಯಸ್ಥಿಕೆಯಿಂದ ಇತ್ಯರ್ಥಪಡಿಸಬೇಕಾಗಿ ಅಪೇಕ್ಷಿಸಿ ಸ್ವತಃ ಮಧ್ಯಸ್ಥಿಕೆ ಮಾಡತೊಡಗಿದ್ದಾರಂತೆ. ಈ ವಾರ್ತೆ ಕೇಳಿ ನಮಗೆ ಹರುಷವಾಗುತ್ತದೆ. ಹಿಂದುಸ್ಥಾನದೊಳಗೂ ಅಸಮಾಧಾನ ತುಂಬ ಹಬ್ಬಿಕೊಂಡಿದೆ. ನೂತನ ರಾಜ್ಯಘಟನೆಯನ್ನು ಒಬ್ಬರೂ ಮನ್ನಿಸುವದಿಲ್ಲ. ಅದರಿಂದ ದೇಶಕ್ಕೆ ಕಲ್ಯಾಣವಾದೀತೆಂದು ಯಾರೂ ಎಣಿಸುವದಿಲ್ಲ. ಇದ್ದ ಸ್ಥಿತಿಯೇ ಶ್ರೇಯಸ್ಕರವಾದುದೆಂದು ಸರ್ವರೂ ಅಭಿಪ್ರಾಯಪಡುತ್ತಾರೆ. ಈಗಿನ ಸ್ಥಿತಿಯಲ್ಲಿ ರಾಜ್ಯಾಧಿಕಾರವಿಲ್ಲವೆಂಬ ಸಂಗತಿ ಲೋಕವಿಸ್ತೃತವಾದುದು. ಹಿಂದುಸ್ಥಾನ–ಬ್ರಿಟಿಶ ಸರಕಾರಗಳೊಳಗೆ ಆದ ತಹನಾಮೆಯನ್ನು ವರಿಷ್ಠ ಕಾಯಿದೆ ಕೌನ್ಸಿಲು ಧಿಕ್ಕರಿಸಿದಾಗ್ಯೂ ಅದನ್ನು ಮನ್ನಿಸಿ ಆ ಕರಾರನ್ನು ರದ್ದುಪಡಿಸಲು ಹಿಂದುಸ್ಥಾನ ಸರಕಾರವು ತಯಾರಿಲ್ಲ. ಇದರಿಂದ ಸಭಾಸದರು ಪ್ರಕ್ಷುಬ್ಧರಾಗಿ ಸರಕಾರದ ಮೇಲೆ ಅವಿನಂಬಿಗೆಯ ಠರಾವನ್ನು ಸೂಚಿಸಿದರು. ಸರಕಾರವು ವರಿಷ್ಠ ಕಾಯಿದೆ ಕೌನ್ಸಿಲಿಗೆ ಜವಾಬದಾರ ಅಲ್ಲದ್ದರಿಂದ ಈ ಕುರಿತು ನಿಷೇಧ ಪ್ರದರ್ಶನ ಮಾಡಬರುವದಿಲ್ಲವಾಗಿ ಹಿಂದುಸ್ಥಾನ ಸರಕಾರವು ಮಾಡಿದ ಆಕ್ಷೇಪವನ್ನು ಅಧ್ಯಕ್ಷರು ಎತ್ತಿಹಿಡಿದು ನಿಷೇಧ ಸೂಚನೆಯನ್ನು ಚರ್ಚೆ ಮಾಡಗೊಡಲಿಲ್ಲ. ಮಹಾತ್ಮರು ಇನ್ನೂ ಸತ್ಯಾಗ್ರಹದ ಅಭಿಲಾಷೆಯನ್ನು ತೊರೆಯಲಿಲ್ಲ. ಮಹಾತ್ಮರಿಗೆ ಗಡಿನಾಡಿಗೆ ಹೋಗಲು ಪ್ರತಿಬಂಧವಿದೆ. ಅದಕ್ಕಾಗಿ ಮಹಾತ್ಮರು ಸದ್ಯದಲ್ಲಿಯೇ ಸತ್ಯಾಗ್ರಹ ಮಾಡಿ ಸೆರೆಮನೆಯನ್ನು ಸೇರಬಹುದಾಗಿ ಕಲಕತ್ತೆಯ 'ಅಮೃತಬಝಾರ ಪತ್ರಿಕೆ'ಯ ಅಲಹಾಬಾದದ ಸುದ್ದಿಗಾರರು ತಮ್ಮ ಪತ್ರಿಕೆಗೆ ತಿಳಿಸುತ್ತಾರೆ. ಇದಲ್ಲದೆ ಪಂಡಿತ ಜವಾಹಿರಲಾಲ ನೆಹರು, ಖಾನ ಅಬ್ದುಲ್ಲ ಗಫ್ಫಾರಖಾನ, ಶರತ್ಚಂದ್ರ ಬೋಸ, ಡಾ| ಸತ್ಯಪಾಲ ಪ್ರಭೃತಿ ದೇಶಾಭಿಮಾನಿಗಳು ಕಾರಾಗೃಹವಾಸದಲ್ಲಿ ನರಳುತ್ತಿದ್ದಾರೆ. ರೌಪ್ಯ ಮಹೋತ್ಸವದ ಸಮಯದಲ್ಲಿ ಈ ಪ್ರಕಾರ ಪ್ರಜೆಗಳು ಕಷ್ಟದಲ್ಲಿ ಇರುವದು ಯುಕ್ತವಲ್ಲ. ಆದಕಾರಣ ಚಕ್ರವರ್ತಿ ಪಂಚಮ ಜೋರ್ಜ ಭೂಪಾಲರು ಆಯರ್ಲಂಡದಂತೆಯೇ ಹಿಂದುಸ್ಥಾನದ ಪ್ರಶ್ನೆಯನ್ನು ಸ್ವತಃ ಕೈಯಲ್ಲಿ ಕೊಂಡು ನಿರ್ಣಯಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇವೆ.

೨. ನೇಕ ನಾಮದಾರ ಆಗಾಖಾನರವರು ಹಿಂದುಸ್ಥಾನದ ರಾಜಕೀಯ ಉನ್ನತಿಯ ವಿಷಯದಲ್ಲಿ ಯಾವಾಗಲೂ ವಿರೋಧಕರು, ಬ್ರಿಟಿಶ ಸರಕಾರದ ಪಕ್ಷಪಾತಿಗಳು. ನೂತನ ರಾಜ್ಯಸುಧಾರಣೆಯಲ್ಲಿ ಅಧಿಕಾರದ ಲೇಶವಿಲ್ಲವಿದ್ದಾಗ್ಯೂ ಅದನ್ನು ಅಂಗೀಕರಿಸಬೇಕಾಗಿ ಅನುಯಾಯಿಗಳಾದ ಮುಸಲ್ಮಾನರಿಗೆ ಆಜ್ಞಾಪಿಸಿದ್ದಾರೆ. ಮುಸಲ್ಮಾನರಿಗೆ ಬೇಕಾದಷ್ಟು ರಾಜಕೀಯ ಹಕ್ಕು ದೊರೆತಿರುವದಾಗಿ ಆಗಾಖಾನರ ಅಂಬೋಣ. ಕಾಯಿದೆ ಕೌನ್ಸಿಲುಗಳಲ್ಲಿ ಹೆಚ್ಚಿನ ಸಭಾಸದರ ಪ್ರಾಪ್ತಿ, ಸರಕಾರಿ ನೌಕರಿಯಲ್ಲಿ ಹೆಚ್ಚಿನ ಸ್ಥಾನಗಳ ಸಂಪಾದನೆ ಇವುಗಳಿಂದಲೇ ಆಗಾಖಾನರಿಗೆ ಸಂತೋಷವಾಗಿದೆ. ನಾ| ಆಗಾಖಾನರ ಈ ಧೋರಣೆ ಜಿನ್ನಾರವರಂಥ ಮುಸಲ್ಮಾನರಿಗೆ ಮಾನ್ಯವಿಲ್ಲ. ಎಲ್ಲಿಯೂ ಮುಸಲ್ಮಾನರು ನಾ| ಆಗಾಖಾನರಿಗೆ ಕೊಟ್ಟ ಔತಣ ಸಮಾರಂಭದಲ್ಲಿ ಇವರು ಸೇರಲಿಲ್ಲ. ಆದರೆ, ಈ ಪ್ರಕಾರ ಆಗಾಖಾನರು ಸಂಕುಚಿತ ವೃತ್ತಿಯನ್ನು ತಳೆದಾಗ್ಯೂ ಅವರ ಒಂದು ಮಾತನ್ನು ನಾವು ಸ್ವಾತ್ಮಾರ್ಪಕವಾಗಿ ಅಂಗೀಕರಿಸಿ ಅದರಂತೆ ಅವರ ಮುಸಲ್ಮಾನ ಅನುಯಾಯಿಗಳೂ, ಹಿಂದು ಬಾಂಧವರೂ ನಡೆಯಬೇಕಾಗಿ ಅಪೇಕ್ಷಿಸುತ್ತೇವೆ. ಈಗ ಹಿಂದುಸ್ಥಾನದೊಳಗಿನ ಪ್ರಶ್ನೆ ಆರ್ಥಿಕ ಕಕ್ಷೆಯೊಳಗಿನದು. ಅಂದರೆ ಜನಸಾಮಾನ್ಯ ಮುಸಲ್ಮಾನರ ಸಂಪತ್ತನ್ನು ಅಭಿವೃದ್ಧಿಗೈಯ್ಯುವದು. ಅದಕ್ಕಾಗಿ ಬೇರೆ ಬೇರೆ ಉದ್ದಿಮೆಗಳನ್ನೂ, ಕೈಗಾರಿಕೆಗಳನ್ನೂ ಸ್ಥಾಪಿಸಿ ಮುಸಲ್ಮಾನ ಸಮಾಜದ ಉದ್ಧಾರ ಮಾಡಬೇಕು. ಜಾತಿವಾತ್ಸಲ್ಯದಿಂದ ಸಂಕುಚಿತ ಪ್ರವೃತ್ತಿಯಿಂದ ಮುಸಲ್ಮಾನ ಸಮಾಜದ ಪ್ರೀತ್ಯರ್ಥ ಈ ಉಪದೇಶ ಮಾಡಿರುತ್ತಿದ್ದಾಗ್ಯೂ ನಾ| ಆಗಾಖಾನರ ಧೋರಣೆ ನಮಗೆ ಮಾನ್ಯವಿದೆ. ಮುಸಲ್ಮಾನ ಪ್ರಮುಖರು ಜಾತಿವಾತ್ಸಲ್ಯದಿಂದ ಈ ಕುರಿತು ದುಡಿದಾಗ್ಯೂ ಇದರಿಂದ ದೇಶಕ್ಕೆ ಕ್ಷೇಮವಿದೆ. ಗ್ರಾಮಗಳಲ್ಲಿ ಮನೆ ಮಾಡಿಕೊಂಡಿದ್ದ ಕೈಗಾರಿಕೆಗಳು [illegible]ತರಗಳಿಂದ ನಷ್ಟವಾದದ್ದರಿಂದಲೇ ಹಿಂದುಸ್ಥಾನಕ್ಕೆ ಈ ಅವಸ್ಥೆ ಪ್ರಾಪ್ತವಾಗಿದೆ. ಮಹಾತ್ಮರು ಅದಕ್ಕಾಗಿಯೇ ಸಮಸ್ತ ಪ್ರಜಾಹಿತದ ವಿಶಾಲ ದೃಷ್ಟಿ ಹಿಡಿದು ಗ್ರಾಮೋದ್ಯೋಗಿಕ ಸಂಘ ಸ್ಥಾಪಿಸಿ ಅದನ್ನು ಪುರಸ್ಕರಿಸುತ್ತಿದ್ದಾರೆ. ಹಿಂದುಸ್ಥಾನ ಸರಕಾರಕ್ಕೆ ಇದರೊಳಗೆ ಸತ್ಯಾಗ್ರಹದ ತಯಾರಿಯ ಸಂದೇಹ ಬರುತ್ತದೆ. ನಾ| ಆಗಾಖಾನರ, ಸರಕಾರದ ಅಭಿಮಾನಿಗಳು. ಅವರ ಯೋಜನೆಗಾದರೂ ಸರಕಾರವು ಬೆಂಬಲ ಕೊಟ್ಟು ಪುರಸ್ಕರಿಸುತ್ತದೇನೆಂದು ನೋಡಬೇಕಾಗಿದೆ.

೩. ದಿವಾಣರಾದ ಸರ್ ಶಹಾ ನವಾಜ ಭುತ್ತೋರವರು ನಮ್ಮ ಜಿಲ್ಹೆಯಲ್ಲಿ ಸಂಚರಿಸಿ ಸ್ವಸ್ಥಾನಕ್ಕೆ ತೆರಳಿದ ವಾರ್ತೆ ಈ ಹಿಂದೆ ಪ್ರಕಟವಾಗಿದೆ. ಜಿಲ್ಹಾ ಬೋರ್ಡಿನ ಅಧ್ಯಕ್ಷರೂ, ಶಿರ್ಶಿ-ಕಾರವಾರ ಕಡೆಯ ಮ್ಯುನಿಸಿಪಾಲಿಟಿಯವರೂ ದಿವಾಣರಿಗೆ ಮಾನಪತ್ರಗಳನ್ನಿತ್ತು ಸತ್ಕರಿಸಿದ ಸಂಗತಿ ಸಹ ಈ ಹಿಂದೆ ಪ್ರಕಟವಾಗಿದೆ. ಮಾನಪತ್ರಾರ್ಪಣದಿಂದ ಯಾರಿಗೂ ಏನೂ ಸಿಗಲಿಲ್ಲ. ಮಾನಪತ್ರದ ಖರ್ಚು ಮೈಮೇಲೆ ಬಂತು. ಮೇಲಾಗಿ ದಿವಾಣರು ಜಿಲ್ಹಾ ಬೋರ್ಡಿನ ಅಧ್ಯಕ್ಷರಿಗೆ ಒಳ್ಳೇ ಶಿಫಾರಸು (!) ಕೊಟ್ಟರು. 'ದಕ್ಷ' ಅಧ್ಯಕ್ಷರು ಲಭಿಸಿದ ಬಗ್ಗೆ ಜಿಲ್ಹೆಗೆ ಅಭಿನಂದಿಸಿದರು. ದಕ್ಷ-ಅಧ್ಯಕ್ಷರು ಕಾಯಿದೆ ಕೌನ್ಸಿಲಿನ ಸಭಾಸದರಿದ್ದು ಕಾಯಿದೆ ಕೌನ್ಸಿಲಿನಲ್ಲಿ ಅವರು ಮಾಡಿದ ಭಾಷಣಗಳೆಲ್ಲ ಸುಳ್ಳೆಂದೂ, ಅವುಗಳೊಳಗಿನ ವಿಧಾನಗಳು ವಿಪರೀತವಾದವುಗಳೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಇದರಿಂದ ಇಂಥ ಅಧ್ಯಕ್ಷರು ಬೋರ್ಡಿಗೆ ಲಭಿಸಿದ ಬಗ್ಗೆ ದಿವಾಣರು ವ್ಯಾಜೋಕ್ತಿಯಿಂದ ಜಿಲ್ಹೆಯವರಿಗೆ ಹೇಳಿದಿದ್ದಾರೆ. ಅಧ್ಯಕ್ಷರಾದ ರಾ| ಗಂಗೊಳ್ಳಿಯವರು ಅಧಿಕಪ್ರಸಂಗತನದಿಂದ ಮಾನಪತ್ರದ ಏರ್ಪಾಟು ಮಾಡಿ ಪಡಕೊಂಡ ಪ್ರಶಸ್ತಿಪತ್ರಿಕೆಯಿದು. ದಿವಾಣರಿಗೆ ನಮ್ಮ ಜಿಲ್ಹೆಯಲ್ಲಿ ದಟ್ಟ ಬೆಟ್ಟ ಬೆಳೆದಿದೆಂಬ ಸಂಗತಿಯಾಗಲಿ, ಅದರಿಂದ ಬೇಸಾಯವೂ, ಜನಸಂಖ್ಯೆಯೂ ಕ್ರಮವಾಗಿ ಕಳೆಗುಂದಿದೆಂಬ ಸಂಗತಿಯಾಗಲಿ ಮಾನ್ಯವಿಲ್ಲ. ಸೊಬಗಿನ ಜಿಲ್ಹೆ, ದೈವುಳ್ಳ ಜನರು; ಎಂಬ ಕಲ್ಪನೆಯನ್ನು ಅವರು ತಳೆದಿದ್ದಾರೆ. ಹುಲಿಗಳು ಹಾದಿಯ ಮೇಲೆ ನೋಡಸಿಗುವವೆಂದು ಮಹಾನುಭಾವರು ನಿರೀಕ್ಷಿಸಿದ್ದರೋ ಏನೋ! ಅವರಿಗೆ ಒಂದೂ ಹುಲಿ ಹಾದಿಯಲ್ಲಿ ಭೆಟ್ಟಿಯಾಗಲಿಲ್ಲವಂತೆ! ಈ ದುಷ್ಟತನ ನೋಡಿ ನಮಗೆ ವ್ಯಸನವಾಗಿದೆ. ಜಂಗಲ ಜಿಲ್ಹೆಯಲ್ಲಿ ಯಾವತ್ತೂ ಗ್ರಾಮಗಳು ನಿರ್ಜನವಾಗಿರುವವೆಂಬುದು ಯಾರಿಂದೂ ಅಂಬೋಣವಿಲ್ಲ. ಗ್ರಾಮಗಳ ಅಭಾವದಲ್ಲಿ ದಿವಾಣರಿಗೆ ಮೇಜವಾನಿಗಳಾಗಲಿ, ಮಾನಪತ್ರಗಳಾಗಲಿ ದೊರೆಕುತ್ತಿದ್ದಿಲ್ಲ. ಕಾರವಾರ, ಶಿರ್ಶಿ ಮೊದಲಾದ ಊರುಗಳಲ್ಲಿ ಹುಲಿಯು ಸಂಚರಿಸಲಾರಂಭಿಸಿದರೆ ಅಲ್ಲಿ ಜನವಸ್ತಿಯಿರದು. ಜಂಗಲ ಖಾತೆಯವರ ಅನುಗ್ರಹದಿಂದ ಈ ಸ್ಥಿತಿ ಇನ್ನೂ ಪ್ರಾಪ್ತವಾಗಿಲ್ಲ. ಈಗಿನ ಧೋರಣೆ ಹೀಗೆಯೇ ಮುಂದರಿದಲ್ಲಿ ಆ ಸ್ಥಿತಿ ಶೀಘ್ರವೇ ಪ್ರಾಪ್ತಿಯಾದೀತು. ಜಿ| ಬೋ| ಅಧ್ಯಕ್ಷರಿಗೆ ಕಾರವಾರ ತಾ| ಬೋ| ಅಧ್ಯಕ್ಷರಾದ ರಾ| ನಾಯ್ಕರು ಸೂಚಿಸಿದಂತೆ, ದಿವಾಣರಿಗೆ ಜಂಗಲುಗಳಲ್ಲೊಯ್ದು ೧-೨ ದಿವಸ ಅಲ್ಲಿಯ ಜೀವನಕ್ರಮದ ಆದರಾತಿಥ್ಯವನ್ನಿತ್ತು ಸತ್ಕರಿಸಿದ್ದರೆ ದಿವಾಣರಿಗೆ ಹುಲಿಗಳು ಭೆಟ್ಟಿಯಾಗುತ್ತಿದ್ದವು. ಹುಲಿಗಳ ಬಾಯೊಳಗಿಂದ ಪಾರಾಗಿಬಂದ ಬಳಿಕ, ಗ್ರಾಮದವರ ಕಷ್ಟಗಳು ಸಂಪೂರ್ಣ ಹೊಳೆಯುತ್ತಿದ್ದವು. ಚಾಲಕರು ಆ ಪ್ರಕಾರ ಮಾಡದೆ ಕಷ್ಟಗಳನ್ನು ಮಾನಪತ್ರಗಳಲ್ಲಿ ವರ್ಣಿಸಿ ಮೇಜವಾನಿ ಕೊಟ್ಟದ್ದರ ಫಲವಿದು! ಜಿಲ್ಹೆಯೊಳಗಿನ ಪ್ರಮುಖರು ಇದರಿಂದ ತಕ್ಕ ಬೋಧ ಪಡೆಯಬೇಕು. ಇನ್ನು ಮುಂದೆ ಜಿಲ್ಹೆ ನೋಡಬಂದವರಿಗೆ ಮಾದರಿಯ ಕುಗ್ರಾಮಗಳಲ್ಲಿ ಒಯ್ದು ತೋರಿಸಿ ಪ್ರತ್ಯಕ್ಷ ಪರಿಸ್ಥಿತಿಯನ್ನು ಅನುಭವಿಸಹಚ್ಚಿದ್ದಲ್ಲಿ ಅವರಿಗೆ ಇಲ್ಲಿಯ ಜನಸಾಮಾನ್ಯರ ಜೀವನಕ್ರಮದ ಗ್ರಹಿಕೆ ಬಂದೀತು. ದಿವಾಣರಂಥ ದೊಡ್ಡ ದೊಡ್ಡ ಅಧಿಕಾರಿಗಳ ಅನುಗ್ರಹದಿಂದ ಲೋಕದಲ್ಲಿ ಬಡಬಗ್ಗರಿಗೆ ಲಾಭವಾಗುವ ಮಾತು ಗೊತ್ತಿದ್ದದ್ದೇ. ಬಡಬಗ್ಗರು ಶಿಷ್ಟಾಚಾರಕ್ಕಾಗಿ ವಿಶೇಷ ಸತ್ಕಾರ ಮಾಡುವದು ಸಂಕಟಪ್ರದವೆಂದು ಸರ್ ಶಹಾ ನವಾಜ ಭುತ್ತೋರವರ ಸಂಚಾರದಿಂದ ಬೋಧ ಪಡೆದರೆ ಸ್ವಾಗತಕ್ಕಾಗಿ ಖರ್ಚು ಮಾಡಿದ ಹಣದ ಪ್ರತಿಫಲ ಸಿಕ್ಕಿತೆಂದು ನಾವು ಎಣಿಸುತ್ತೇವೆ. ದಿವಾಣರು ಈ ಜಿಲ್ಹೆಯಲ್ಲಿ ಬಂದದ್ದು ಒಂದು ಪರಿಯಿಂದ ಒಪ್ಪವೇ; ಬಾರದಿದ್ದರೆ ಮತ್ತೂ ಒಳಿತಾಗುತ್ತಿತ್ತು.

ಮತ್ತಿಷ್ಟು !

— ಮೈಸೂರ ಸಂಸ್ಥಾನದಲ್ಲಿ ಬೇಸಾಯಗಾರರಿಗೆ ೩೫ ಕೋಟಿ ರೂಪಾಯಿಗಳ ಸಾಲವಿದೆ. ಬೇಸಾಯಗಾರರಿಗೆ ಋಣವಿಮೋಚನ ಮಾಡುವದಕ್ಕಾಗಿ ಮೈಸೂರ ಸರಕಾರವು ಉಪಾಯಯೋಜನೆ ಮಾಡಲು ನಿರ್ಧಾರ ಮಾಡಿದೆ.

— ನೇಪಾಳದ ಮಹಾರಾಜರು ಈಗ ಹಿಂದುಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. ಹಿಂದು ಧರ್ಮದ ಸ್ವತಂತ್ರ ರಾಜ್ಯ ಅದೊಂದೇ. ನೇಪಾಳ ಅರಸರಿಗೆ ಸರ್ವಾಧಿಪತಿ ವಿಲಿಂಗ್ಡನ್, ದೊರೆಗಳೂ, ಹಿಂದುಸ್ಥಾನ ಸರಕಾರವೂ ರಾಜವೈಭವದಿಂದ ಸತ್ಕಾರ ಮಾಡುತ್ತಿದ್ದದ್ದನ್ನು ಕಂಡು ಸನಾತನಿಯರಿಗೆ ಆನಂದವಾಗುತ್ತಿದೆ. ಮಹಾರಾಜರಿಗೆ ಸರ್ವಾಧಿಪತಿಗಳು 'ಓಜಸ್ವಿ ರಾಜನ್ಯ' 'ಮಾನ್ಯವರ ನೇಪಾಳ ತಾರಾ' ಎಂಬ ಕಿತಾಬುಗಳನ್ನು ಅರ್ಪಿಸಿದ್ದಾರೆ. 'ವ್ಹಾೃಸ-ರೀಗಲ್ ಲೊಜ್' ನಲ್ಲಿ ಮಹಾ .ರಿಗೆ ಮೇಜವಾನಿಯಾಯಿತು. ಪಂಡಿತ ಮಾಲವೀಯರವರ ಯಜಮಾನತ್ವದಲ್ಲಿ ಬಾಬು ರಾಜೇಂದ್ರ ಪ್ರಸಾದ, ಶ್ರೀ| ಮಾಧವರಾವಜ ಅಣೇ, ಚಕ್ರವರ್ತಿ ರಾಜಗೋಪಾಲಾಚಾರ್ಯ, ಸರದಾರ ವಲ್ಲಭಭಾಯಿ ಪಟೇಲ, ಡಾ| ಅನ್ಸಾರಿ ಮೊದಲಾದವರು ದಿಲ್ಲಿಯಲ್ಲಿ ತಾ. ೩೧ ನೇಗೆ ಮಹಾರಾಜರಿಗೆ ಅಲ್ಪೋಪಹಾರವನ್ನ ಕೊಟ್ಟು ಸತ್ಕರಿಸಿದರು. ಹಿಮಾಚಲದ ಪವಿತ್ರವಾದ ಸಾನ್ನಿಧ್ಯದಲ್ಲಿ ಮೂರ್ತಿಮಂತ ಸನಾತನ ಧರ್ಮರಾಜ್ಯ ನಡೆದಬಗ್ಗೆ ಸಮಸ್ತರೂ ಸಂತೋಷಪ್ರದರ್ಶನ ಮಾಡಿದರು. ಮಹಾರಾಜರು ಸಾರ್ವಭೌಮ ಪಂಚಮ ಜೊರ್ಜ ಭೂಪಾಲರ ಸ್ನೇಹಿತರು. ಮಹಾಯುದ್ಧ ಕಾಲದಲ್ಲಿ ನೇಪಾಳ ಮಹಾರಾಜರು ಬ್ರಿಟಿಶ ಸರಕಾರಕ್ಕೆ ೫೫ ಸಾವಿರ ಗುರ್ಖಾ ಸೈನಿಕರನ್ನು ಪೂರೈಸಿದ್ದಾರೆ. ಆ ಕಾಲದಲ್ಲಿ ಅಷ್ಟು ಸೈನಿಕರ ಪೂರೈಕೆಯಾಗದಿದ್ದರೆ ಬ್ರಿಟಿಶ ಸರಕಾರಕ್ಕೆ ಮುಂದೆ ವಿಜಯವಾಗುವದು ಕಠಿಣವಿತ್ತು. ಸೈತರಿಗೆ ಆಶ್ಚರ್ಯವಾದ ಮಾಡಿದಂತೆ ನೇಪಾಳ ಮಹಾರಾಜರು ಬ್ರಿಟಿಶ ಸರಕಾರಕ್ಕೆ ನೆರವಾದರೆಂದು ಆ ಕಾಲದಲ್ಲಿ ಬ್ರಿಟಿಶ ಸೈನ್ಯಾಧಿಕಾರಿಯಾಗಿದ್ದ ಬ್ರೂಸರವರು ಒಂದು ಗ್ರಂಥ ಬರೆದು ಹೊಗಳಿದ್ದಾರೆ. ಈಗ ಮಹಾರಾಜರು ದ್ವಾರಕಾ ಯಾತ್ರೆ ಮುಗಿಸಿಕೊಂಡು ನೇಪಾಳ ರಾಜ್ಯಕ್ಕೆ ಹಿಂತಿರುಗಿದರು.

— ಜರ್ಮನಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಚಿಕ್ಕ ಬಾಲಕರಿಗೆ ಮನೋರಂಜನವಾಗುವಂತೆ ಕಲಿಸುವ ಹೊಸ ಏರ್ಪಾಟಾಗಿದೆ. ಪ್ರತಿ ಶಾಲೆಯಲ್ಲಿ ಒಂದು ಮಾತಾಡುವ ಚಿತ್ರಪಟವನ್ನು ಜರ್ಮನ್ ಸರಕಾರವು ಪೂರೈಸಬೇಕೆಂದು ಫರ್ಮಾನು ಹೊರಡಿಸಿದೆ. ಇದರಂತೆ ಸುಮಾರು ೩೦೦೦ ಕ್ಕೆ ಮಿಕ್ಕಿ ಶಾಲೆಗಳಲ್ಲಿ ಮಾತಾಡುವ ಚಿತ್ರಪಟಗಳ ಪೂರೈಕೆಯಾಗಿದೆ.

— ವಿಜಾಪುರ, ನವಲಗುಂದ, ದಕ್ಷಿಣ ಹೈದರಾಬಾದ ಮೊದಲಾದ ಬೈಲುಸೀಮೆಯ ಪ್ರದೇಶಗಳಲ್ಲಿ ಬಿರುಗಾಳಿ-ಆಣೆಕಲ್ಲುಗಳಿಂದ ಭಯಂಕರ ಕಷ್ಟನಷ್ಟ. ವಿಜಾಪುರದ ನಾಗಠಾಣೆ ಗ್ರಾಮದಲ್ಲಿ ಪ್ರಚಂಡ ಆಣೆಕಲ್ಲಿನ ಮಳೆ. ಕೆಲ ಆಣೆಕಲ್ಲುಗಳು ಅದ್ಭುತವಿದ್ದವು. ೨ ಫೂಟು ದಪ್ಪ, ೧೦-೧೨ ಫೂಟು ಅಗಲ ಆಣೆಕಲ್ಲುಗಳು ಬಿದ್ದವು. ೪ ದಿನಗಳ ತನಕ ಅವು ಕರಗಲಿಲ್ಲ. ಮಾವಿನ ಗಿಡ, ಬೇಸಿನ ಗಿಡ, ಹುಣಸೆಗಿಡಗಳೆಲ್ಲ ಬಿದ್ದುಹೋಗಿವೆ. ಬಕ್ಕಿ ಸೇದಲು ಗಿಡಗಳಲ್ಲಿ ಒಂದು ಎಲೆ ಸಹ ಇಲ್ಲವಂತೆ! ಜೋಳದ ಹೊಲದಲ್ಲಿ ಕುರಿ ಹೊಕ್ಕಿದಂತೆ ಆಗಿದೆ; ಒಂದು ತೆನೆ ಸಹ ಸಿಗದು! ಕಡ್ಲೆ-ಹೊಲಗಳಲ್ಲಿ ಬೇಟೆ ಇಲ್ಲ. ಗುಬ್ಬಿಗಳೂ ಸತ್ತುಬಿದ್ದಿವೆ; ಮೀನುಗಳೂ ಸತ್ತುಬಿದ್ದಿವೆ. ನವಲಗುಂದದಲ್ಲಿಯೂ ಇದೇ ಅವಸ್ಥೆ. ಕುಡಿಯಲಿಕ್ಕೆ ತಿಳಿ ನೀರು ಸಿಗುವದು ಸಹ ಕಠಿಣವಾಗಿದೆ.

— ಒಂದು ಸಣ್ಣ ಉಪಚಾರ. ಸಾಸಿವೆಯನ್ನು ಅರೆದು ತಣ್ಣೀರಿನಲ್ಲಿ ಕದಡಿ ೧೦ ನಿಮಿಷಗಳ ವರೆಗೆ ಹಾಗೆಯೇ ಬಿಟ್ಟರೆ ಎಣ್ಣೆ ಮೇಲೆ ಬರುತ್ತದೆ. ಇದು ಸಾಸಿವೆಯ ಸಾರ. ಸ್ನಾನಜಲದಲ್ಲಿ ಕದಡಿ ಸ್ನಾನ ಮಾಡಿದರೆ ನಿದ್ರೆಯ ಅಭಾವದಿಂದ ಕಷ್ಟಪಡುವವರಿಗೆ ಸುಖವಾಗುತ್ತದಾಗಿ 'ಹೆಲ್ಥ ಎಂಡ್ ಸ್ಟ್ರೆಂಗ್ಥ' ಎಂಬ ಆರೋಗ್ಯಪತ್ರಿಕೆಯಲ್ಲಿ ಬರೆದಿದೆ.

— ದಕ್ಷಿಣ ಕನ್ನಡ ಜಿಲ್ಹೆಯ ಕಿನ್ನಿಗೋಳಿಯ ಸಮೀಪ ಕೆಲಿಂಡಿಪಲ್ಕೆ ಎಂಬ ಗ್ರಾಮದಲ್ಲಿ ಒಂದು ಅದ್ಭುತ ಸುರಂಗ! ಒಬ್ಬ ಕ್ರೈಸ್ತರವನು ಬಾವಿ ತೋಡುತ್ತಿದ್ದನಂತೆ. ೨ ಆಳು ತಗ್ಗ ಕಡಿದನು; ಆತನಿಗೊಂದು ಸುರಂಗ ಕಾಣಿಸಿತು. ಇದರೊಳಗೆ ೧೦೦೦ ಮಂದಿ ಸಹಜ ಕೂತುಕೊಳ್ಳಬಹುದಂತೆ. ಈ ಸುರಂಗ ಸುಮಾರು ಅರ್ಧಮೈಲು ದೂರದ ವರೆಗೆ ಇರುತ್ತದಂತೆ. ಈ ಅದ್ಭುತ ಸುರಂಗ ನೋಡಲು ಜನರು ತಂಡುಗಟ್ಟಿ ಹೋಗುತ್ತಿರುವರು

— ಉಡುಪಿಯ ಶ್ರೀ ಪಲಿಮಾರು ಮಠಾಧೀಶರಾದ ಶ್ರೀ ರಘುಮಾನ್ಯತೀರ್ಥ ಶ್ರೀಪಾದಂಗಳವರು ಕೆಪ್ಟನ್ ರಾವ. ಚಂದ್ರರಾವ್, ಎಮ್. ಬಿ. ಬಿ. ಎಸ್. ಸಿ ಎಚ್. ಡಿ. ರವರಿಗೆ ಸಹಪಂಕ್ತಿ ಭೋಜನವನ್ನಿತ್ತು ಸತ್ಕರಿಸಿ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು !

ಬುದ್ಧಿಕೌಮುದ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ್ಯ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾನಾರಾಯಣ ತೈಲ್ಯ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪಲಿ (ಪೈಲ್ಸ್ ರೋಗಕ್ಕೆ ಅತ್ಯುತ್ತಮ).
ಕೃಷ್ಣಾಂಜನ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ರಕ್ತನಾಶ, ಅಧಿಕ ಶ್ರಮ, ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಶಾರೀರಿಕ ನೋವುಗಳಿಗೆ ಅತ್ಯಂತ ಗುಣಕಾರಿ)
ಮಹಾಶುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-

ಹೆಚ್ಚಿನ ವಿವರಕ್ಕಾಗಿಯೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು !

ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾವಕಾಶ ನೋಡಿ ತುಂಬ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಹೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಗುಣಸಂಪನ್ನರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಅವು ಶಾಸ್ತ್ರಸಿದ್ಧವಾಗಿ ಅನುಭವಯುಕ್ತವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗಿಡ ಮೊದಲಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಹೆಯಲ್ಲಿ ಆದರ್ಶಪ್ರಾಯವಾಗಿ ನಡೆಸಲು ಇದರ ವ್ಯವಸ್ಥಾಪಕರು ಯತ್ನಿಸುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸಕ್ತಿಯುಳ್ಳವರಾಗಲೇ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯು ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿವಸ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ, ೧೦-೧೧-೧೯೩೩.

ವಿದ್ವಾನ್ ಶೀ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ಸಿದ್ಧ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ.

ದರು. ಕೆಪ್ಟನ್ ರಾಮಚಂದ್ರರಾಯರು ವಿಶೇಷ ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ ಹೋಗಿ ಮರಳಿ ಬಂದವರು. ವಿದೇಶ ಗಮನದ ಪ್ರತಿಬಂಧವನ್ನು ಪಲಿಮಾರ ಮಠಾಧೀಶರು ಈ ಕ್ರಮದಿಂದ ದೂರಪಡಿಸಿದರಾಗಿ ಸುಧಾರಕರು ಆನಂದಪಡುತ್ತಿದ್ದಾರೆ.

— ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಂಥವರು ಒಳ್ಳೇ ಜವಾಬದಾರ ಮನುಷ್ಯರು, ವಿಚಾರವಂತರು, ವ್ಯವಹಾರಿಕರು. ಅವರಿಗೆ ಮುಂಚೆ ಖಾದಿಯಲ್ಲಿ ಭಕ್ತಿಯಿರಲಿಲ್ಲ. ಅದರಿಂದ ದೇಶಕ್ಕೆ ಪ್ರಯೋಜನವಿಲ್ಲವಾಗಿ ಅವರು ಮುಂಚೆ ಅಭಿಪ್ರಾಯಪಡುತ್ತಿದ್ದರು. ದೇಶತುಂಬ ಹಬ್ಬಿಕೊಂಡಿರುವ ನಿರುದ್ಯೋಗವನ್ನು ನಿವಾರಿಸಲು ಖಾದಿ ಪ್ರಚಾರದಂಥ ರಚನಾತ್ಮಕ ಕಾರ್ಯಕ್ರಮವೇ ಇಷ್ಟ, ಖಾದಿ ಪ್ರಸಾರಕ್ಕಾಗಿ ಮಹಾಪುರುಷರಾದ ಮಹಾತ್ಮರು ರಾಷ್ಟ್ರೀಯ ಸಭೆಯ ವಿದ್ಯಮಾನ ನಡಿಸುವ ಪ್ರಯತ್ನಗಳು ಸರ್ವಸಮ್ಮತವಾಗಲೇಬೇಕು; ಈ ಪ್ರಕಾರ ಈಗ ಅವರು ಅಭಿಪ್ರಾಯಪಡುತ್ತಾರೆ.

— ಬಳ್ಳಾರಿ ಜಿಲ್ಲೆಯಲ್ಲಿ ಬರಗಾಲ. ಜನರ ಜೀವನೋಪಾಯವಾಗುವದು ಕಠಿಣ. ಈ ಜಿಲ್ಲೆಯ ೧೫ ತಾಲೂಕುಗಳಲ್ಲಿ ಉಪ್ಪು ಬೆಳಸಲು ಅವಕಾಶವಿದೆ. ಅದರಿಂದ ಉಪ್ಪು ಬೆಳಸಲಪ್ಪಣೆ ಕೊಡಬೇಕಾಗಿ ಈ ತಾಲೂಕಿನ ಜನರು ಕಲೆಕ್ಟರರಿಗೆ ಅರ್ಜಿ ಮಾಡಿದರು. ಕಲೆಕ್ಟರರು ಅಪ್ಪಣೆ ಕೊಡಲಿಲ್ಲ. ಗಾಂಧಿ ಇರ್ವಿನ್ ಒಡಂಬಡಿಕೆಯಂತೆ ಉಪ್ಪು ಬೆಳಸಲು ಹಿಂದುಸ್ಥಾನ ಸರಕಾರದ ಆಕ್ಷೇಪವಿಲ್ಲ; ಅಲ್ಲಲ್ಲಿಯ ಕಲೆಕ್ಟರರ ಕಡೆ ಅಪ್ಪಣೆ ಪಡೆದರಾಯಿತು. ತಿನೆವೆಲ್ಲಿಯ ಡಿ| ಕೊಂಗ್ರೆಸ ಕಮಿಟೆಯವರು ಉಪ್ಪು ಬೆಳಸುವ ಕುರಿತು ಕಲೆಕ್ಟರರಿಗೆ ಅರ್ಜಿ ಮಾಡಿಕೊಂಡಿದ್ದರು. ಸ್ಥಳಿಕ ಉಪ್ಪಿನ ಇಲಾಖೆಯ ಅಧಿಕಾರಿಗಳ ಕಡೆ ಅಪ್ಪಣೆ ಪಡಕೊಳ್ಳಹುಕುಮಾಗಿದೆ. ಅಪ್ಪಣೆ ಎಲ್ಲಿ ಪಡಕೊಳ್ಳಬೇಕು? ಎಂಬುದನ್ನು ತಿಳಕೊಳ್ಳುವದೇ ಕೂಟ ಪ್ರಶ್ನೆ.

ದೀನಬಂಧು ಎಂಡ್ರ್ಯೂಸರವರು ಲಂಡನ್ನಿನೊಳಗಿನ 'ನ್ಯೂಸ್ ಕ್ರೋನಿಕಲ್' ಪತ್ರಿಕೆಯಲ್ಲಿ ಒಂದು ಲೇಖ ಬರೆದಿದ್ದಾರೆ: ಬಂಗಾಲ ಪ್ರಾಂತದೊಳಗೆ ರಾಜಬಂದಿಗಳಿಗೆ ಕೊಡುವ ಕಷ್ಟಗಳನ್ನು ಅವರು ವರ್ಣಿಸಿದ್ದಾರೆ. ೬-೭ ವರ್ಷಗಳ ತನಕ ವಿಚಾರವಾಗದೆ ಸೆರೆಮನೆಯಲ್ಲಿ ನರಳುವ ದೌರ್ಭಾಗ್ಯವಾಸಿಗಳಿದ್ದಾರೆ. ಅನೇಕರು ಭ್ರಾಂತರಾದರು. ಕೆಲವರು ಆತ್ಮಹತ್ಯ ಮಾಡಿಕೊಂಡರು. ಚಳಿ ಜ್ವರದ ಗ್ರಾಮಗಳಲ್ಲಿ ಒಬ್ಬ ಕಾಲೇಜ ವಿದ್ಯಾರ್ಥಿಗೆ ಬಂಧಿಸಿಟ್ಟು ಈಗ ೫ ವರ್ಷಗಳಾದವು. ಆತನು ಗಾನಪ್ರವೀಣನು; ಈಸಬಲ್ಲನು. ಕ್ರಿಕೆಟ್ ಮೊದಲಾದ ಆಟಗಳಲ್ಲಿ ನಿಪುಣನು. ಇಂಥವನು ರಾಜ್ಯಕ್ರಾಂತಿಯ ಒಳಸಂಚಿನ ಸಂಶಯದ ಮೇಲೆ ಕಾರಾಗೃಹದಲ್ಲಿ ನರಳುತ್ತಿದ್ದಾನೆ. ಈಗ ಆತನಿಗೆ ಅಸ್ಥಿಪಂಜರಪ್ರಾಯವಾಗಿದೆ. ಒಂದು ಶಾಲೆಯ ಅಧ್ಯಾಪಕನಿಗೆ ಇಂಥ ಸಂದೇಹದ ಮೇಲೆ ಸೆರೆಹಿಡಿದಿಟ್ಟು ೪ ವರ್ಷಗಳಾದವು. ಅವನೂ ತೀರ ರೋಗಿಯಾಗಿದ್ದಾನೆ. ಕಾಲೇಜ ಪ್ರೊಫೆಸರರೊಬ್ಬರು ರಾಜಬಂದಿಯಾಗಿ ಅನೇಕ ವರ್ಷಗಳ ವಸ್ತ. ಬಂಗಾಲ ಪ್ರಾಂತದಲ್ಲಿ ೩ ಸಾವಿರಕ್ಕೆ ಮಿಕ್ಕಿ ಜನ ರಾಜಬಂದಿಗಳಿದ್ದಾರೆ. ಪೋಲೀಸರು ಪ್ರಮಾಣಿಕರಲ್ಲ; ಭ್ರಷ್ಟರು. ಹೀಗೆ ಸಹ ದೀನಬಂಧು ಎಂಡ್ರ್ಯೂಸರು ಬರೆದು ಈ ಅನ್ಯಾಯವನ್ನು ದೂರಪಡಿಸಲು ಬ್ರಿಟಿಶ ಪ್ರಜೆಗಳು ಪ್ರಯತ್ನಪಡಬೇಕಾಗಿ ವಿನಂತಿ ಮಾಡಿದ್ದಾರೆ.

— ಸಂಯುಕ್ತ ಪ್ರಾಂತದ ಔದ್ಯೋಗಿಕ ಇಲಾಖೆಯವರು ಫೌಂಟನ್ ಪೆನ್ ನಿಬ್ಬ ತಯಾರಿಸುವ ಕಾರಖಾನೆಯವರಿಗೆ ೨೦೦೦ ರೂಪಾಯಿ ದ್ರವ್ಯಸಹಾಯ ಮಾಡಿರುತ್ತಾರೆ. ರಾಸಾಯನಿಕ ದ್ರವ್ಯ ತಯಾರಿಸುವ ಕಾರಖಾನೆಯವರಿಗೆ ರೂ. ೪೦೦೦ ಸಹಾಯ ಮಾಡಲಾಗಿದೆ. ಪ್ರಾದೇಶಿಕ ಸರಕಾರಗಳು ಔದ್ಯೋಗಿಕ ಅಭಿವೃದ್ಧಿಯ ಕಡೆ ಲಕ್ಷ್ಯ ಹಾಕಲಾರಂಭಿಸಿದ್ದು ಅಭಿನಂದನೀಯವಿದೆ.

— ರೌಪ್ಯ ಮಹೋತ್ಸವದ ಸಮಯ ಸಾರ್ವಭೌಮ ಪಂಚಮ ಜೋರ್ಜ ಭೂಪಾಲರು ಸಾಮ್ರಾಜ್ಯದೊಳಗಿನ ರಾಜಕೀಯ ಬಂದಿಗಳಿಗೂ, ಇತರ ಕೈದಿಗಳಿಗೂ ಬಿಡುಗಡೆ ಮಾಡಬಯಸುತ್ತಾರಂತೆ. ಕೆಲವರಿಗೆ ಬಿನ್‌ಶರ್ತ ಬಿಡುಗಡೆಯಾಗುವದಂತೆ; ಕೆಲವರಿಗೆ ಶರ್ತ ಹಾಕಿ ಬಿಡುಗಡೆ ಮಾಡುವರಂತೆ. ಮೇ ತಾ. ೪ ನೇ ಶನಿವಾರಕ್ಕೆ ಬಿಡುಗಡೆಯಾಗುವದಂತೆ. ಹಿಂದುಸ್ಥಾನದೊಳಗೂ ಇದೇ ಪ್ರಕಾರ ಬಿಡುಗಡೆಯಾಗುವದಾಗಿ ಲಂಡನಿನ 'ಡೇಲಿ ಎಕ್ಸಪ್ರೆಸ್' ಪತ್ರಿಕೆಯ ವಾರ್ತೆ. ಆದರೆ, ಈ ಕುರಿತು ಇನ್ನೂ ನಿರ್ಧಾರವಾಗದಿದ್ದಾಗ್ಯೂ ಒಂದು ಸಂಗತಿ ನಿಶ್ಚಿತವಿದೆ. ರೌಪ್ಯ ಮಹೋತ್ಸವದ ಸಮಯ ಬಿರುದುಗಳು ಅರ್ಪಿಸಲ್ಪಡುವವು. ಮತ್ತು ಬಿರುದುಗಳ ಸಂಖ್ಯೆ ೧½ ಪಟ್ಟಿಗೆ ಏರಿಸಬೇಕಾಗಿ ಸಾರ್ವಭೌಮರು ಔದಾರ್ಯದಿಂದ ಅನುಗ್ರಹಿಸಿದ್ದಾರಂತೆ. ಅದರಂತೆ ಪ್ರಾಂತಿಕ ಸರಕಾರಗಳು ಶಿಫಾರಸು ಮಾಡುವ ಅಧಿಕಾರಿಗಳಿಗೆ ಬಿರುದಾಪೇಕ್ಷಿಗಳ ಶಿಫಾರಸು ಮಾಡಬೇಕಾಗಿ ವಿಧಿಸಿದ್ದಾರಂತೆ. ಉತ್ಸವ ಮಂಡಳದವರು ಉತ್ಸಾಹದಿಂದ ದುಡಿದು ಬಿರುದುಗಳನ್ನು ಸಂಗ್ರಹಿಸಿ ಭೂಪಾಲರ ಅನುಗ್ರಹಕ್ಕೆ ಪಾತ್ರರಾಗಲು ಈಗಿನಿಂದಲೇ ತಕ್ಕ ತಯಾರಿ ಮಾಡುವದು ಲೇಸು!

— ಸಂಸ್ಥಾನಿಕರ ಮುಂದುಗಾರಿಕೆ. ಪತಿಯಾಳಾ ಮಹಾರಾಜರ ಕಡೆ ೩೦೦ ಮೋಟರುಗಳಿವೆ. ಅವುಗಳಲ್ಲಿ ೪೩ 'ರೋಲ್ಸರೊಯ್ಸ' ಗಾಡಿಗಳು. ಅಂದರೆ ೪೦-೪೨ ಸಾವಿರ ರೂಪಾಯಿ ಬೆಲೆಯುಳ್ಳವು. ಕಪ್ಪು

ಮುಂಬಯಿ ಸ್ವದೇಶಿ ವಸ್ತುಪ್ರದರ್ಶನದಲ್ಲಿ ಉಚ್ಚ ತರಗತಿಯ ಪಾರಿತೋಷಕ ಪಡೆದ,



ವೆಜಿಟೆಬಲ್ ಸೋಪ ವರ್ಕ್ಸ, ಕಲ್ಲಿಕೋಟೆ.

ಡಿಸ್ಟ್ರಿಬ್ಯೂಟರರು:— ಬಸ್ತಿಹಿತ್ತಲ ಮಹಮೂದ ಸಾಹೇಬ, ಕುಮಟಾ. (ಉ. ಕನ್ನಡ

ರಥಾಲಾಮಹಾರಾಜರಿಗೆ ಮಂಚ-ಮಂಚ ಇವುಗಳ ಛಂದ. ಫ್ರಾನ್ಸ ದೇಶದ ಸಾಮ್ರಾಜ್ಯಯೇ ಬೇಕು. ಈ ಸಾಮಾನು ಇಲ್ಲಿ ಬೇಸಿಗೆಯಲ್ಲಿ ಕೆಡುತ್ತದೆ. ಅದಕ್ಕಾಗಿ ಬೇಸಿಗೆ ಕಾಲದಲ್ಲಿ ಈ ಸಾಮಾನುಗಳನ್ನು ತಂಪಾದ ಬೆಟ್ಟದ ಹವೆಗೆ ಒಯ್ಯುತ್ತಾರೆ. ಸಾವಿರಾರು ರೂಪಾಯಿ ತರ-ಬಯ್ಯಲಿಕ್ಕೆ ಖರ್ಚು. ಕಚ್ಛ ಮಹಾರಾಜರಿಗೆ ನೌಕಾವಿಹಾರದ ಛಂದ! ಒಂದು ವಿಹಾರ ನೌಕೆಯಿದೆ. ಚಿನ್ನ-ಬೆಳ್ಳಿಯದು. ಈ ಹಡಗದಲ್ಲಿ ರಾಜವಿಲಾಸದ ಯಾವತ್ತೂ ಸಾಹಿತ್ಯಗಳಿವೆ. ಜಯಪುರದ ಮಹಾರಾಜರು ಚಿನ್ನ-ಬೆಳ್ಳಿಯ ರಥವನ್ನು ತಯಾರಿಸಿ ಬೆಚ್ಚಗಿಡುವ ಪಹರಿಯಲ್ಲಿ ಅದನ್ನು ಕಾಪಾಡಿಕೊಂಡಿದ್ದಾರೆ. ಇಂದೂರಿನ ಹೋಳಕರ ತುಕೋಜಿರಾಯರ ವಿಲಾಸವೂ, ಅದಕ್ಕಾಗಿ ಅವರು ಕೈಕೊಂಡ ಕಪಟ ಕಾರಸ್ಥಾನಗಳೂ ಮಮತಾಜ-ಬೇಗಮಳ ಪ್ರಕರಣದಲ್ಲಿ ಬೈಲಿಗೆ ಬಂದಿವೆ. ಈಗ ಪಟ್ಟದ ಮೇಲೆ ಅವರ ಮಗಂದಿರಾದ ಯಶವಂತರಾಯರಿದ್ದಾರೆ. ಇವರು ಪ್ರತಿಸೃಷ್ಟಿಕರ್ತರು. ಅರಮನೆಯಲ್ಲಿ ಬೇಕಾದ ಹಾಗೆ ಗಾಳಿ-ಬೆಳಕು, ಚಳಿ-ಸೆಕೆಗಳನ್ನು ನಿರ್ಮಿಸಬಲ್ಲರು. ಒಂದೇ ಸಮಯಕ್ಕೆ ಒಂದು ಕೋಣೆಯಲ್ಲಿ ಚಳಿ, ಒಂದು ಕೋಣೆಯಲ್ಲಿ ಸೆಕೆ, ಇನ್ನೊಂದು ಕೋಣೆಯಲ್ಲಿ ನಡುಹಗಲಿನ ಉರಿಬಿಸಿಲುಗಳನ್ನು ನಿರ್ಮಿಸುವ ಏರ್ಪಾಡು ಮಾಡಿದ್ದಾರೆ. ಬಡಬಗ್ಗರು ಹೊಟ್ಟೆಯ ಪಾಡಿಗಾಗಿ ಗೋಳಿಡುತ್ತಿದ್ದಾಗ ಈ ತರದ ವಿಲಾಸ ಕೇಳಿದರೆ ಮನಸ್ಸು ಬೇಸರಗೊಳ್ಳುತ್ತಿದೆ.

— ಅಮೇರಿಕೆಯ ಡಾಕ್ಟರರದೊಂದು ಅಭಿಪ್ರಾಯ: ಕೃಶ ಪ್ರಕೃತಿಯ ಜನರು ಕುಶಾಗ್ರ ಬುದ್ಧಿಯವರು; ಸ್ಥೂಲದೇಹಿಗಳು ಸುಖಜೀವಿಗಳು. ಆದರೆ ಹಲವು ಸ್ಥೂಲದೇಹಿಗಳು ಮೈಯೊಳಗಿನ ಬೊಜ್ಜು ದೂರಪಡಿಸುವದಕ್ಕಾಗಿ ಕೃತ್ರಿಮ ಉಪಾಯ ಕೈಕೊಳ್ಳುತ್ತಾರೆ. ಇದು ತರವಲ್ಲ. ಸ್ವಾಭಾವಿಕ ಬೆಳವಣಿಗೆಗೆ ಅಡ್ಡಗಟ್ಟ ಕೂಡದೆಂದು ಡಾಕ್ಟರರ ಅಭಿಪ್ರಾಯ.

— ೬ ವರ್ಷಗಳ ಹಿಂದೆ ಅರಬಸ್ತಾನದ ಇಬ್ನ ಸೂದರ ರಾಜ್ಯದಲ್ಲಿ ದೊಂಬಿಯಾಗಿತ್ತು. ಇಬ್ನ ಸೂದರಿಗೆ ಮದ್ದು-ಗುಂಡು ಬೇಕಾಗಿತ್ತು. ಹಿಂದುಸ್ಥಾನ ಸರಕಾರದ ಕಡೆ ಮದ್ದುಗುಂಡು ಸಿದ್ಧವಿತ್ತು. ೩೧೪೬೭ ಪವನು ಬೆಲೆಯ ಮದ್ದುಗುಂಡುಗಳನ್ನು ಇಬ್ನ ಸೂದರಿಗೆ ಪೂರೈಸಬೇಕಾಗಿ ಬ್ರಿಟಿಶ ಸರಕಾರವು ಹಿಂದುಸ್ಥಾನ ಸರಕಾರಕ್ಕೆ ಆಜ್ಞೆ ಮಾಡಿತು. ಅದರಂತೆ ಹಿಂದುಸ್ಥಾನ ಸರಕಾರವು ಮದ್ದುಗುಂಡುಗಳನ್ನು ಪೂರೈಸಿತು. ಈ ಹಣ ಇಬ್ನ ಸೂದರು ಕೊಡಲಿಲ್ಲ. ಒತ್ತಾಯ ಮಾಡಲಿಕ್ಕೆ ಬ್ರಿಟಿಶ ಸರಕಾರಕ್ಕೆ ಮನಸ್ಸಿಲ್ಲ. ಯಾಕಂದರೆ ಬ್ರಿಟಿಶ ಸರಕಾರಕ್ಕೆ ಇಬ್ನ ಸೂದರ ಗೆಳೆತನ ಬೇಕು. ಆದರಿಂದ ಈ ರಕಮು ಹಿಂದುಸ್ಥಾನ ಸರಕಾರವು ಸೊಸಬೇಕಾಗಿಯೂ, ಈ ರಕಮನ್ನು ಬ್ರಿಟಿಶ ಸರಕಾರವು ಕೊಡದಿರುವುದಾಗಿಯೂ ಸಾಮ್ರಾಜ್ಯ ಸರಕಾರದ ಆಜ್ಞೆ. ರಾಜಕಾರಣ ಬ್ರಿಟಿಶರದು! ಬೊಜ್ಜಿಗೆ ಹಿಂದುಸ್ಥಾನಕ್ಕೆ!! ಬ್ರಿಟಿಶರು ಧರ್ಮರಾಯರು; ಧರ್ಮದ ಪೆಟ್ಟು ಬಡ ಹಿಂದುಸ್ಥಾನಕ್ಕೆ! ಪರಾಧೀನತೆಯ ಫಲ!!

— ಗ್ವಾಲ್ಹೇರ ಸಂಸ್ಥಾನದವರು ಬಡ ಬೇಸಾಯಗಾರರ ಕಷ್ಟನಿವಾರಣೆಗಾಗಿ ೧೩|| ಲಕ್ಷ ರೂಪಾಯಿಗಳ ಹೀರ್ವ ಸೂಟ ಬಿಟ್ಟಿದ್ದಾರೆ. ಕಳೆದ ವರ್ಷ ೧೩ ಲಕ್ಷ ರೂಪಾಯಿಗಳನ್ನು ಸೂಟ ಬಿಟ್ಟಿದ್ದರು.

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪೊಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ! ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ!
ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ.!!
[ವಿ. ಸೂ. ' ಇಂಡಸ್ಟ್ರಿಯಲ್ ವಿಮೆ ' ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.]
ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು !
ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾಗುವದು,
ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು.
ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—
ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.
ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು:- ಮೆಸರ್ಸ ಜೀವನ ಏಜನ್ಸಿ, ಕಾರವಾರ.

ದ್ವಿಗುಣವಾದ ಲಾಭವನ್ನು ಹೊಂದಿರಿ !
ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ !!
ಮಕ್ಕಳ ಲಿವರ್ ಕಂಪ್ಲೇಂಟು (ಕಾಮಾಲೆ ವ್ಯಾಧಿ) ಮತ್ತು ಜ್ವರಗಳಿಗೆ
ಜಮ್ಮಿ ವೆಂಕಟರಮಣಯ್ಯನವರ
'ಲಿವರ್ ಕ್ಯೂರ್' ಎಂಬುದು ದಿವ್ಯೌಷಧ!
ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,
ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ಕೊಳ್ಳಿರಿ !
ಹೆಚ್ಚಿನ ಮಾಹಿತಿಗೆ ಬರೆಯಿರಿ.
ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು:—
ಡಿ ಎಸ್. ಜೋಳಿವಾಡಕರ್, ಕುಮಟಾ. (ಉ. ಕ.)

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಗಂಧ ಕ್ರ...!
ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರು ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳ ಯಾವವೆಂದರೆ— ಪೀನಸಿ, ಒಂಟೆತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಗಂಟಾಗತಕ್ಕ ನರ್ವ ವ್ಯಾಧಿಗಳು, ಉಲಡೋಸ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ. ಕಂಠಕ್ಕೆ ಸೇರಿಬಿಟ್ಟ ವ್ಯಾಧಿಗಳನ್ನು ... ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಯಿಸಿದರೆ ಬಹಳ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ೧೬ ಪ್ಯಾಕೆಟ ಕಳಿಸಲಾಗದೀಕು.
ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ.ಪಿ. ೪ ಆಣೆ ಡಜನ್ ಗಳಿಗೆ ರೂ. ೩-೮-೦. ವಿ. ಪಿ. ೦-೬-೦.
ದಯವಾಡಿ ನಿಮ್ಮ ಹೆಸರನ್ನೂ, ವಿಳಾಸವೂ ಸರಿಯಾಗಿ ತಿಳಿಯುವಂತೆ ಬರೆಯಿರಿ.
ವರ್ತಿ –ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ.ಬಾ. ೫೧೦, ಮಾರ್ಕೆಟ್‌ನ ಮದರಾಸ.

ಜಾಹೀರ ವಿನಂತಿ.

ರೂ. ೧೦—೦—೦ ಇನಾಮು!

ನಾನು ಗೋಕರ್ಣದಿಂದ ತಾ. ೧೫ನೇಗೆ ಕುಮಟೆಗೆ ಬಂದು ಮೋಟರು ಇಳಿಯುವಾಗ ಎಲ್ಲೋ ಗಡಬಡಿಯಲ್ಲಿ ನನ್ನದೊಂದು ಗಂಟು ಕಾಣೆಯಾಗಿದೆ. ಅದರಲ್ಲಿ ರೂ. ೫೦ರ ಕರೆನ್ಸಿ ನೋಟು ೧, ೧೦ರ ೧, ೧೦ರ ೧, ೦-೬-೦ ರೊಕ್ಕ, ೨ ದಸ್ತೈವಜಿನ ನಕ್ಲುಗಳು ಮತ್ತು ಸಿರ್ಸಿ ತಾಲೂಕ ಮಳೇಕಲ್ಲಿ ಫಿರ್ಕಾ ಒಕ್ಕಳ ಗ್ರಾಮದ ತಲ್ಲಿನಮನೆ ಕುಟುಂಬದ ಮ್ಯಾನೇಜರ ಗಣಪಯ್ಯ ಶಿವರಾಮ ಹೆಗಡೆಯವರು ನನ್ನ ತಂದೆ ಗಣಪತಿ ನರಸಿಂಹ ಜೋಶಿ ಇವರಿಗೆ ತಾ. ೨೦-೫-೧೯೩೪ರಲ್ಲು ಬರಕೊಟ್ಟ ರೂ. ೭೦೦-೦-೦ಗಳ ಪ್ರೊ! ನೋಟು ೧ ಕೂಡಾ ಇತ್ತು. ಅದನ್ನು ಜಾಹೀರ ತಂದುಕೊಟ್ಟವರಿಗೆ ರೂ. ೧೦-೦-೦ ಇನಾಮು ಕೊಡುವೆನು.

ಕುಮಟಾ, ತಾ. ೧೯-೨-೧೯೩೫.

ತಿಮ್ಮಪ್ಪಾ ಗಣಪತಿ ಜೋಶಿ ಮಳೆಯಾಳಮಠ,
ಗೋಕರ್ಣ

ಜಾಹೀರ ನೋಟೀಸು.

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ:- ನನ್ನ ತಿನ್ ತಮ್ಮ ಗಣಪತಿ ಪರಮೇಶ್ವರ ಭಟ್ಟ ಪ್ರಾಯ ಅಜಮಾಸ ೩೦ ವರುಷ ಈತನು ೧೦ ವರ್ಷದಿಂದ ಭ್ರಾಂತಸಿದ್ಧ ಮೂಲಕ ಅವನ ಕಡೆಯಿಂದ ಯಾರಾದರೂ ಆಸ್ತಿ ಸಂಬಂಧಿತ ವಸ್ತು ಯಾವದೇ ತರದ ಕಾಗದಪತ್ರ ಮಾಡಿಸಿಕೊಂಡಲ್ಲಿ ಅದು ಸಿಂಧು ಆಗಲಾರದು.

ತಾರೀಕು ೨೧-೨-೧೯೩೫ನೇ ಇಸ್ವಿ.

ರಾಮಾ ಪರಮೇಶ್ವರ ಭಟ್ಟ ದಂಭದಿ,
ಗುಡೇಅಂಗಡಿ, ತಾಲೂಕ ಕುಮಟಾ.

ಬೇಕು!

ಜಾಹೀರ ಸೂಚನೆ.

ಈ ಸಂಸ್ಥೆಯ ಪ್ರಚಾರ ಕಾರ್ಯವನ್ನು ಮಾಡಲಿಕ್ಕೆ ದೇಶೀಯೋಪಕಾರದೊಳಗಿನ ಶೇತಕೀ ಶಾಲೆಯಲ್ಲಿ ಶಿಕ್ಷಣ ಹೊಂದಿದ ನಾಗೂ ಶೇತಕಿ ಸುಧಾರಣಾ ವಿಷಯಕ್ಕೆ ಪ್ರತ್ಯಕ್ಷ ಅನುಭವವುಳ್ಳ ಉತ್ಸಾಹಿಯೂ, ಪ್ರಾಮಾಣಿಕನೂ ಆದ ಒಬ್ಬ ಕಾಮಗಾರನು ಬೇಕಾಗಿದೆ. ವೇತನವು ಯೋಗ್ಯತೆಯಂತೆ ನಿರ್ಣಯಿಸಲ್ಪಡುವದು. ಅರ್ಜದಾರರು ತಮ್ಮ ದಾಖಲೆಗಳನ್ನೂ ಶಿಫಾರಸಪತ್ರಗಳನ್ನೂ ತಮ್ಮ ಅರ್ಜಿಗಳಿಗೆ ಜೋಡಿಸಿ, ಅವುಗಳನ್ನು ಬರುವ ತಾ. ೧೫ನೇ ಮಾರ್ಚ ೧೯೩೫ರೊಳಗಾಗಿ ಈ ಸಂಸ್ಥೆಯ ಕಚೇರಿಯಲ್ಲಿ ಕಳಿಸಿಕೊಡಬೇಕಾಗಿ ವಿನಂತಿ.

ಕಾರವಾರ,) **D. B. Nadkarni,**
ತಾ. ೧೯-೨-೩೫) ಪ್ರೆಸಿಡೆಂಟ,
ಕಾರವಾರ ತಾಲೂಕಾ ಡೆವ್ಹಲಪ್‌ಮೆಂಟ
ಎಸೋಸಿಯೇಶನ್ ಲಿಮಿಟೆಡ್.

ಜಾಹೀರ ನೋಟೀಸು.

ಡಿಸ್ಟ್ರಿಬ್ಯೂಟರರು:—

ಬಸ್ತಿಹಿತ್ತಲ ಮಹಮೂದ ಸಾಹೇಬ, ಕುಮಟಾ. [ಉತ್ತರ ಕನ್ನಡ]

ಪತ್ರಕರ್ತರ ನುಡಿಗನ್ನಡಿ.

೧. ಭಾವನಗರದೊಳಗಿನ ಪ್ರಜೆಗಳಿಗೆ ಸಂಸ್ಥಾನಿಕರು ಋಣಮುಕ್ತರಾಗಿ ಮಾಡಿರುವರೆಂದು ತಿಳಿಸಲು ತುಂಬಾ ಸಂತೋಷ. ಈ ಸಂಸ್ಥಾನದಲ್ಲಿ ಋಣವಿಮೋಚನೆಯ ವಿಚಾರ ಮಾಡುವದಕ್ಕಾಗಿ ದಿ| ಬ| ತ್ರಿಭುವನದಾಸ ತ್ರಿವೇದಿ ಇವರ ಅಧ್ಯಕ್ಷತೆಯಲ್ಲಿ ವಿಚಾರ ನಡೆಸಿದ ಸಂಗತಿ ಈ ಹಿಂದೆಯೇ ನಾವು ಪರಾಂಬರಿಸಿದ್ದೇವೆ. ೮೬ ಲಕ್ಷ ರೂಪಾಯಿ ಒಟ್ಟು ಸಾಲವಿತ್ತು. ಸಾಲದ ಇತಿಹಾಸವನ್ನೂ, ಅಸಲು-ಬಡ್ಡಿಯ ಪ್ರತ್ಯೇಕ ಲೆಕ್ಕವನ್ನೂ ಸಾಲಗಾರರು ಕೊಟ್ಟ ಸಂದಾಯತವನ್ನೂ ಭಾವನಗರದ ಸಂಸ್ಥಾನಿಕರು ವಿಚಾರ ಮಂಡಳವನ್ನು ನೇಮಿಸಿ ನಿಜವಾಗಿ ಸಲ್ಲತಕ್ಕ ರಕಮು ೪೫ ಲಕ್ಷವೆಂದು ನಿರ್ಣಯಿಸಿದರು. ಬಡ್ಡಿಯ ದರ ವರಸಾಲ ದರ ಶೇಕಡಾ ರೂಪಾಯಿ ೧೨ಕ್ಕೆ ಕಡಿಮೆ ಹಿಡಿದು ಲೆಕ್ಕ ಮಾಡಲಿಲ್ಲ. ಒಕ್ಕಲಿಗರ ವಿಪನ್ನಾವಸ್ಥೆಯನ್ನು ವಿಚಾರಿಸಿ ಸಾವಕಾರರಿಗೆ ಸಲ್ಲತಕ್ಕ ಯಾವತ್ತೂ ರಕಮನ್ನು ೨೦|| ಲಕ್ಷ ರೂಪಾಯಿಗಳೊಳಗೆ ತೀರಿಸಿಕೊಳ್ಳಬೇಕಾಗಿ ಸರಕಾರದ ವಿಚಾರ ಮಂಡಳವು ಅಭಿಪ್ರಾಯಪಟ್ಟಿತು. ಸಾವಕಾರರು ಒಪ್ಪಿಕೊಂಡರು; ಉಪಾಯವಿಲ್ಲದೆ ಒಪ್ಪಿಕೊಂಡರು. ಪೂರ್ಣ ರಕಮು ಸಿಗಬೇಕಾಗಿ ಹಟ ಹಿಡಿದರೆ ಇದೂ ಸಿಗುವದಿಲ್ಲ. ಸರಕಾರವು ಆ ಯಾವತ್ತೂ ರಕಮನ್ನು ಸರಕಾರಿ ತ್ರಿಜೋರಿಯೊಳಗಿಂದ ತುಂಬಿ ಸಾವಕಾರರ ಕಡೆಯಿಂದ ಸಾಲಗಾರರಿಗೆ ಋಣವಿಮೋಚನೆ ಮಾಡಿದ ಪಾವತಿಗಳನ್ನು ಕೊಡಿಸಿದೆ. ಸರಕಾರವು ಈ ಹಣವನ್ನು ಸಾಲಗಾರ ಒಕ್ಕಲಿಗರ ಕಡೆಯಿಂದ ೪ ಸಲ ಬಡ್ಡಿಯಿಂದ ವಸೂಲ ಮಾಡುವದು. ಸರಕಾರವು ಈ ಪ್ರಕಾರ ಮುಂದಾದದ್ದು ನಿಜವಾಗಿಯೂ ಅನುಕರಣೀಯವಿದೆ. ಭಾವನಗರ ಸಂಸ್ಥಾನವು ದೊಡ್ಡದಲ್ಲ. ೨೮೬೦ ಚಚೌರಸ ಮೈಲು ವಿಸ್ತೀರ್ಣವಾದದ್ದು; ೪| ಲಕ್ಷ ಲೋಕವಸತಿ ಇದೆ. ಇವರಲ್ಲಿ ೧| ಲಕ್ಷ ಪಟ್ಟಣನಿವಾಸಿಗಳು; ೩ ಲಕ್ಷ ಗ್ರಾಮನಿವಾಸಿಗಳು. ಭೂಕಂದಾಯದಿಂದ ಸಂಸ್ಥಾನಿಕರಿಗೆ ೨೬|| ಲಕ್ಷ ಉತ್ಪನ್ನವಿದೆ. ೧೩||| ಲಕ್ಷ ತೀರ್ವೆ ತೆರುವ ಒಕ್ಕಲಿಗರು ಸಾಲದಲ್ಲಿ ಮುಳುಗಿದ್ದರು. ಅವರ ಬಗ್ಗೆ ಸರಕಾರವು ೨೦ ಲಕ್ಷ ರೂಪಾಯಿ ತೆತ್ತಿದೆ. ಸರಕಾರವೇ ಮುಂದಾದ್ದರಿಂದ ೮೬ ಲಕ್ಷದ ಸಾಲವು ೨೦ ಲಕ್ಷಗಳೊಳಗೆ ಪಾವತಿಯಾಗಿದೆ. ರೋಖ ಹಣ ಸಿಗುತ್ತಿದ್ದಲ್ಲಿ ಸಾವಕಾರರು ಕುಳಗಳಿಗೆ ಸೂಟಬಿಡಲು ಸಿದ್ಧರಿದ್ದಾರೆಂಬ ಸಂಗತಿ ಈ ಉದಾಹರಣೆಯ ಮೇಲಿಂದ ತಿಳಿಯುವಂತಿದೆ. ಮುಂಬಯಿ ಸರಕಾರವೂ, ಹಿಂದುಸ್ಥಾನ ಸರಕಾರವೂ ಈ ವಿಷಯವನ್ನು ಆಳವಾಗಿ ಪರಾಂಬರಿಸಿ ಉಪಾಯಯೋಜನೆ ಮಾಡಿದರೆ ಮಾತ್ರ ಒಕ್ಕಲಿಗರ ಬಾಳ್ವೆ. ಸರಕಾರಿ ತ್ರಿಜೋರಿಯನ್ನು ಔದಾರ್ಯದಿಂದ ತೆರೆದು ಋಣವಿಮೋಚನೆಯ ಕಾರ್ಯದಲ್ಲಿ ಧಾರೆ ಎರೆದ ಒಕ್ಕಲಿಗರು ಬಾಳಬದುಕುವರು. ಇಲ್ಲದಿದ್ದರೆ ಜರ್ಮನಿಯ ಅರ್ಥಸಚಿವರಾದ ಡಾ| ಶಾಸ್ತ್ರರವರು ಲಿಪ್ಜಿಗ್ ಜಾತ್ರೆಯಲ್ಲಿ ನುಡಿದಂತೆ, "ನಿಮಗೆ ಸಾಲ ಸಲ್ಲುವದು ನಿಜ; ಆದರೆ ಸಾಲಗಾರನು ಸತ್ತುಬಿದ್ದಿದ್ದಾನೆ" (your bill holds good, but the debtor is dead!) ಎಂಬಂತೆ ಪ್ರಸಂಗ ಬಂದೀತು.

---

೨. ಭಾವನಗರದ ಸಂಸ್ಥಾನಿಕರು ಋಣವಿಮೋಚನೆಗಾಗಿ ಕೊಟ್ಟ ಸಾಲವನ್ನು ಪರಿತುಂಬಿಸಿಕೊಳ್ಳುವ ಯೋಜನೆಯು ಅನುಕರಣೀಯವಿದೆ. ಸಂಸ್ಥಾನ ಸರಕಾರವು ಸಾಲಗಾರ ಒಕ್ಕಲಿಗರ ಭೂಮಿಯ ಸಂಪೂರ್ಣ ಉತ್ಪನ್ನವನ್ನು ಸ್ವಾಧೀನ ಮಾಡಿಕೊಳ್ಳುವದು. ಮತ್ತು ಒಕ್ಕಲಿಗರಿಗೆ ವರ್ಷಕ್ಕೆ ತಗಲಬಹುದಾದ ನಿರ್ವಾಹ ಖರ್ಚಿಗೆ ಸಾಲುವಷ್ಟು ಉತ್ಪನ್ನವನ್ನು ಅವರಿಗೆ ಒಪ್ಪಿಸಿ ಉಳಿದ ಉತ್ಪನ್ನದೊಳಗಿಂದ ಸರಕಾರ ತೀರ್ವೆ, ಋಣವಿಮೋಚನೆಯ ಸಾಲದ ಬಡ್ಡಿ, ಸಾಲದ ಕಂತು ಇವನ್ನು ತುಂಬಿಕೊಳ್ಳುವದು. ಈ ವ್ಯವಸ್ಥೆಯಿಂದ ಸರಕಾರಕ್ಕೆ ಬೇಸಾಯಗಾರರ ಸಂಪೂರ್ಣ ಸ್ಥಿತಿಯ ಗ್ರಹಿಕೆಯಾಗಿ ಆಯಕ್ಕಿಂತ ವ್ಯಯ ಮಿಕ್ಕುವಲ್ಲಿ ಸರಕಾರವು ಅದನ್ನು ಪರಿಹರಿಸಲು ಯಾವ ಉಪಾಯ ಕೈಕೊಳ್ಳಬೇಕೆಂಬ ಸೂಚನೆಯಾಗುವದು. ಬೇಸಾಯದಿಂದ ಉದರನಿರ್ವಾಹವಾಗಿ ಸರಕಾರಿ ಸಾಲ ತುಂಬದಿದ್ದಲ್ಲಿ ಸರಕಾರವು ಬೇರೆ ಬೇರೆ ಉದ್ದಿಮೆಗಳನ್ನು ಕಲ್ಪಿಸಿಕೊಡಬೇಕಾದೀತು. ರಾಜಭಾಗದ ಪರಿಮಾಣವನ್ನು ತಗ್ಗಿಸಬೇಕಾದೀತು; ಉತ್ಪತ್ತಿಯ ಲೆಕ್ಕ ಸರಕಾರಕ್ಕೆ ಸಿಗುತ್ತಿದ್ದದರಿಂದ ಬೇಸಾಯಗಾರರು ದುಂದುಗಾರರೇನೆಂಬ ವಿಚಾರವೂ ಸರಕಾರಕ್ಕೆ ಹೊಳೆಯುವಂತಿದೆ. ಸಂಸ್ಥಾನಿಕರು ಪ್ರಜಾಕ್ಷೇಮಕ್ಕಾಗಿ ಎಷ್ಟು ಜವಾಬದಾರಿ ಹೊತ್ತುಕೊಂಡಿದೆ ನೋಡಿ! ಸಾರ್ವಭೌಮ ಸರಕಾರಕ್ಕೆ ಭಾವನಗರದ ಸಂಸ್ಥಾನಿಕರು ಮಾದರಿ ಹಾಕಿಕೊಟ್ಟಿರುತ್ತಾರೆ. ಸರಕಾರವು ಆ ಯೋಜನೆಯನ್ನು ದೀರ್ಘವಾಗಿ ಆಲೋಚಿಸಿ ದೇಶಕಾಲ-ಪರಿಸ್ಥಿತಿಗನುಸಾರವಾದ ತಿದ್ದುಪಾಟುಗಳಿಂದ ನಮ್ಮ ಪ್ರಾಂತದೊಳಗೆ ಕೈಕೊಂಡರೆ ಪ್ರಯೋಜನವಿದೆ. ಬರೇ ಭೂಭದ್ರತೆಯ ಬೇಂಕುಗಳನ್ನು ಸ್ಥಾಪಿಸಿ ಸಾಲ ಕೊಡುವದರಿಂದ ಪ್ರಯೋಜನವಿಲ್ಲ. ಸಾಲ ಕೊಡುವ ಸರಕಾರವು ಸಾಲ ತೀರಿಸುವ ಬಗೆಯನ್ನು ಯೋಜಿಸತಕ್ಕದ್ದು. ಇಲ್ಲದಿದ್ದರೆ ಸಾವಕಾರರ ಬದಲಿಗೆ ಭೂಭದ್ರತೆಯ ಬೇಂಕುಗಳು ಒಕ್ಕಲಿಗರನ್ನು ದಣಿಸುವವು. ಮೇಲಾಗಿ ಭೂಭದ್ರತೆಯ ಬೇಂಕುಗಳ ಪ್ರಯೋಜನ ಸಾಮಾನ್ಯ ಒಕ್ಕಲಿಗರಿಗೆ ಸಿಗದು. ಬೇಂಕುಗಳಿಂದ ಪಡೆಯುವ ಸಾಲದ ರಕಮಿಗೆ ತಕ್ಕಷ್ಟು ಭೂಮಿ ಇಲ್ಲದ ಬಡ ರೈತರಿಗೆ ಈ ಯೋಜನೆಯಿಂದ ಪ್ರಯೋಜನವಿಲ್ಲ. ಮುಂಬಯಿ ಸರಕಾರವು ಈ ದೃಷ್ಟಿಯನ್ನು ಸಹ ವಿಚಾರಿಸಬೇಕಾಗಿ ವಿನಂತಿಯಿದೆ. ಸದ್ಯಕ್ಕೇ ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ದಿವಾಣರಾವ ದಿ| ಬ| ಕಂಬಳಿಯವರು ಭೂಭದ್ರತೆಯ ಬೇಂಕುಗಳನ್ನು ಸ್ಥಾಪಿಸಲು ೧೦ ಲಕ್ಷ ರೂಪಾಯಿಗಳನ್ನು ಕೌನ್ಸಿಲಿನ ಬಳಿ ಕೇಳುವವರಿದ್ದಾರೆ. ಕೋಟ್ಯಾವಧಿ ರೂಪಾಯಿಗಳ ಋಣ ಸಮುದ್ರವನ್ನು ತುಂಬಲು ೧೦ ಲಕ್ಷ ರೂಪಾಯಿಗಳೆಂದರೆ ಜಾಜಕಾಯಿಗಿಂತ ಚಿಕ್ಕ ರಕಮು. ಕೌನ್ಸಿಲು ಸಭಾಸದರು ಚರ್ಚೆಯಲ್ಲಿ ಸತ್ಯಸ್ಥಿತಿಯನ್ನು ಸರಕಾರದ ಬಳಿ ನಿವೇದಿಸಿ ಕಾರ್ಯಕ್ಷಮ ಯೋಜನೆಯನ್ನು ಕಲ್ಪಿಸಬೇಕಾಗಿ ಸೂಚನೆ

ಭೂಕಂದಾಯದ ಪದ್ಧತಿಯನ್ನು ಸರಕಾರವು ಪುನರಾಲೋಚಿಸಬಯಸುತ್ತದಾಗಿ ಅಲೀಬಾಗದಲ್ಲಿ ಕಮಿಶನರರು ಹೇಳಿದ ಮಾತನ್ನು ನಾವು ಈ ಹಿಂದೆಯೇ ಪರಾಂಬರಿಸಿದ್ದೇವೆ. ಕಳೆದ ಸೋಮವಾರ ಜಮಾ-ಖರ್ಚು ಪತ್ರಿಕೆಯ ಚರ್ಚೆ ನಡೆದಾಗ ಉತ್ತರ ಭಾಗದ ಕಮಿಶನರರಾದ ಮಿ| ಮೆಕ್ಕೆಯವರು ಇದೇ ಸಂಗತಿಯನ್ನು ನಿವೇದಿಸಿದರು. ಪುನರಾಲೋಚನೆಯ ವಾರ್ತೆ ಶುಭವಾದದ್ದು. ಆದರೆ ತಕ್ಕ ತಿದ್ದುಪಡಿಯಾಗದಿದ್ದರೆ ಬರೇ ಕರ್ಣಸಂತೋಷದ ವಾರ್ತೆಯಿಂದ ಒಕ್ಕಲಿಗರ ಸ್ಥಿತಿ ಸುಧಾರಿಸದು. ಕಾಲು-ಕಡಿಗಳ ವರದ ಮಾಸದಂತೆ ತೀರ್ವೆಯಲ್ಲಿ ಹೆಚ್ಚು-ಕಡಿಮೆ ಮಾಡಿದ್ದರಿಂದ ಒಕ್ಕಲಿಗರ ಪರಿಣಾಮವಿಲ್ಲ. ಸರಕಾರವು ಒಕ್ಕಲಿಗರಿಗೆ ಉಳಿಯುವ ಲಾಭದ ಮೇಲೆ ತೆರಿಗೆಯನ್ನು ವಸೂಲ ಮಾಡಬೇಕು. ಬೇಸಾಯಕ್ಕೆ ತಗಲುವ ಖರ್ಚೆಷ್ಟು? ಅದರಿಂದ ಉಳಿಯುವ ಮುನಾಫೆ ಎಷ್ಟು? ಎಂಬ ಆದಾಯ-ವೆಚ್ಚ ತಿಳಕೊಂಡನಕ ಕರ ಆಕರಿಸಲಾಗದು. ಲಾಭದ ಮೇಲೆ ಭೂತೆರಿಗೆ ಆಕರಿಸುವ ಪದ್ಧತಿ ಬ್ರಿಟಿಶ ಪರಂಪರೆಗೆ ನೂತನವಾದದ್ದಲ್ಲ. ಇಂಗ್ಲಂಡ, ವೇಲ್ಸ ದೇಶಗಳಲ್ಲಿ ಪದ್ಧತಿಯಿದೆ. ಇನಕಮ್ ಟೆಕ್ಸ ಆಕರಿಸುವಂತೆ ಬೇಸಾಯಗಾರರ ಹಿಂದಿನ ವರ್ಷದ ಜಮಾ-ಖರ್ಚು ಪತ್ರಿಕೆಯನ್ನು ತರಿಸಿ ಉಳಿಯುವ ಮುನಾಫೆ ರಕಮಿನ ಮೇಲೆ ಸರಕಾರವು ಭೂಕಂದಾಯವನ್ನು ವಸೂಲ ಮಾಡುತ್ತದೆ. ಅಮೇರಿಕೆಯಲ್ಲಿಯೂ ಇದೇ ಪ್ರಕಾರ ವಿಚಾರ ನಡೆದದೆ. ಅಮೇರಿಕೆಯ ದಕ್ಷಿಣ ಕೆರೋಲಿನಾ ಕ್ಲೆಮ್ಸನ್ ಬೇಸಾಯ ಕಾಲೇಜಿನ ಪ್ರಯೋಗ ಸಂಸ್ಥೆಯವರು ಲಾಭದ ವಿಚಾರ ಮಾಡದೆ ಕರ ಆಕರಿಸುವದು ತಪ್ಪೆಂದು ತಮ್ಮ ೨೮೬ನೇ ಹಸ್ತಪತ್ರಿಕೆಯಲ್ಲಿ ನಮೂದಿಸಿದ್ದಾರೆ. "ತೆರಿಗೆಗಳು ಕುಗ್ಗಿದಾಗ್ಯೂ ವೈಯಕ್ತಿಕ ಜಿನಸಿನ ವಿಚಾರ ಮಾಡದೆ ಎಷ್ಟೋ ಕರ ಆಕರಿಸುವದು ತೀರ ಅನ್ಯಾಯವಾದದ್ದು." ಎಂಬದಾಗಿ ಹಸ್ತಪತ್ರಿಕೆಯಲ್ಲಿ ಕರ ಹೇರಿಕೆಯ ಮೂಲತತ್ವ ನಮೂದಿಸಲಾಗಿದೆ. ಲಾಭದ ಅಭಾವದಲ್ಲಿ ಒಂದು ಪೈ ಸಹ ಕರ ತೆರುವದು ಭಾರವಾದದ್ದು. ಯುಗೋಸ್ಲಾವಿಯಾದಲ್ಲಿ ತೀರ್ವೆ ತೆರಲಾಗದೆ ಕ್ರೋಶಿಯನ್ ಒಕ್ಕಲಿಗರು ಕಷ್ಟಪಡುತ್ತಿದ್ದಾಗ ಸರಕಾರಿ ಅಧಿಕಾರಿಗಳು ವಸೂಲಿಗೆ ಹೋಗಿದ್ದರು. ಒಕ್ಕಲಿಗರು ಅವರಿಗೆ ಹೊಡೆದರು. ಸರಕಾರದ ಪರವಾಗಿ ಒಕ್ಕಲಿಗರ ಮೇಲೆ ಗುಂಡು ಹಾರಿಸಲ್ಪಟ್ಟವು. ಕೆಲವರು ಮಡಿದರು. ಹಲವರು ಗಾಯಪಟ್ಟರು. ದೊಂಬಿಗಾರರಿಗೆ ಸೆರೆಹಿಡಿಯುವದಕ್ಕಾಗಿ ಸಶಸ್ತ್ರ ಪೋಲೀಸರು ಗ್ರಾಮಕ್ಕೆ ಹೋಗಿದ್ದರು. ಆಗ ಊರಲ್ಲಿ ಒಬ್ಬ ಗಂಡಸು ಸಹ ಇದ್ದಿಲ್ಲ. ಇದ್ದ ೩ ಸಾವಿರ ಮಂದಿ ಗಂಡಸರೆಲ್ಲರೂ ಹೆಂಡರು-ಮಕ್ಕಳನ್ನೆಲ್ಲ ತ್ಯಜಿಸಿ ಗುಡ್ಡಗಾಡು ಸೀಮೆಗೆ ದೇಶಾಂತರ ಮಾಡುತ್ತಿದ್ದರು. ನಿರಾಶೆಯಲ್ಲಿ ಉಂಟಾಗುವ ಪರಿಸ್ಥಿತಿಯಿದು! ಸರಕಾರವು ಬೇಸಾಯಗಾರರಿಗೆ ನಿರಾಶೆ ಮಾಡಲಾಗದು. ಇದೀಗಲೇ ಕಷ್ಟನಿವಾರಣೆಗಾಗಿ ಉಪಾಯಯೋಜನೆ ಮಾಡಬೇಕಾಗಿ ಸೂಚನೆ.

— ಪಂಡಿತ ಜವಾಹಿರಲಾಲರಿಗೆ ಸರಕಾರವು ಬಿಡುಗಡೆ ಮಾಡಲು ಸಿದ್ಧವಿರುವದಂತೆ. ಆದರೆ, ಅವರು ಸೌ| ಕಮಲಾ ನೆಹರೂರವರಿಗೆ ಕರಕೊಂಡು ಕೂಡಲೆ ಪರದೇಶ ಪ್ರಯಾಣ ಬೆಳೆಸಬೇಕು. ಈ ಶರ್ತಿಗೆ ಒಪ್ಪಿದ್ದಲ್ಲಿ ಮಾತ್ರ ಅವರಿಗೆ ಬಿಡುಗಡೆಯಾಗುವದಂತೆ.

ಕಾನಡಾವೃತ್ತ.

ವಿ೩ ಭಾಗ ಸಂ೧ ಫಾಲ್ಗುನ ಶು॥ ೭ ಮಿ॥ ಸೋಮವಾರ

ಗ್ರಾಮೋದ್ಧಾರ ಸೀಠಿಕೆ.

ಇತ್ತಲಾಗಿ ಗ್ರಾಮೋದ್ಧಾರದ ಮಾತುಗಳನ್ನೇ ಎಲ್ಲರೂ ಆಡುತ್ತಿದ್ದಾರೆ. ರಾಷ್ಟ್ರೀಯ ಸಭೆಯವರೂ, ಸರಕಾರವೂ ಗ್ರಾಮೋದ್ಧಾರ ಮಾಡಲು ಕ್ರಮವಾಗಿ ದ್ದಾರೆ. ಗ್ರಾಮೋದ್ಧಾರ ಕಾರ್ಯಕ್ಕಾಗಿ ಹಿಂದುಸ್ಥಾನ ಸರಕಾರವು ೧ ಕೋಟಿ ರೂಪಾಯಿಗಳನ್ನು ಮಂಜೂರ ಮಾಡಿ ಪ್ರಾಂತಿಕ ಸರಕಾರಗಳಿಗೆ ಗ್ರಾಮಾಂತರಗಳಲ್ಲಿ ಕೈಗಾರಿಕೆಗಳನ್ನು ಊರ್ಜಿತಗೊಳಿಸಿ ಗ್ರಾಮನಿವಾಸಿಗಳ ಸಂಪದಭ್ಯುದಯ ಮಾಡಲು ವಿಧಿಸಿದೆ. ರಾಷ್ಟ್ರೀಯ ಸಭೆಯವರು ಅಖಿಲ ಭಾರತೀಯ ಗ್ರಾಮ-ಕೈಗಾರಿಕೆಯ ಸಂಘದ ನಿಮಿತ್ತವಾಗಿ ಅಲ್ಲಲ್ಲಿಯ ಗ್ರಾಮಗಳ ಕೈಗಾರಿಕೆಗಳನ್ನು ಪರಿಶೋಧಿಸಿ ಅವನ್ನು ಪ್ರಚಾರದಲ್ಲಿ ತರಲು ಪ್ರಯತ್ನಪಡುತ್ತಿದ್ದಾರೆ. ಅಖಿಲ ಭಾರತೀಯ ಗ್ರಾಮ-ಕೈಗಾರಿಕೆಯ ಸಂಘದ ಮುಖ್ಯ ಚಾಲಕರಾದ ಶ್ರೀ ಕುಮಾರಪ್ಪನವರು ನುಡಿದಂತೆ, ಗ್ರಾಮಾಂತರಗಳಲ್ಲಿ ಸಿಗುವ ಸಾಹಿತ್ಯಗಳಿಂದಲೇ ಗ್ರಾಮಗಳೊಳಗಿನ ಕೈಗಾರಿಕೆಗಳನ್ನು ಉದ್ಧರಿಸಲು ಸಂಘದವರು ಬಯಸಿದ್ದಾರೆ. ಉದಾಹರಣಾರ್ಥವಾಗಿ ಚರ್ಮಕ್ಕೆ ಹದ ಕೊಡಲು ರಾಸಾಯನಿಕ ದ್ರವ್ಯಗಳ ಉಪಯೋಗವನ್ನು ಸಂಪೂರ್ಣ ಬಿಟ್ಟು ಬಿಡುವದಕ್ಕಾಗಿ ಕಲಿಸದು, ಊರಲ್ಲಿ ಸಿಗುವ ತೊಗಟೆಗಳನ್ನು ಉಪಯೋಗಿಸಲು ಕಲಿಸುವದು. ಈ ಪ್ರಕಾರ ಲೋಕದ ತುಂಬ ಗ್ರಾಮೋದ್ಧಾರದ ಚಳವಳಿ ನಡೆದಿದೆ. ಇಂಥ ಸಂದರ್ಭದಲ್ಲಿ ಗ್ರಾಮೋದ್ಧಾರದ ಪ್ರಸ್ತಾವನೆಯನ್ನು ವಿವರಿಸುವದುಚಿತ.

ಗ್ರಾಮೋದ್ಧಾರ ಚಳವಳಿಯ ಮುಖ್ಯ ಕಟಾಕ್ಷವು ಗ್ರಾಮಗಳ, ಗ್ರಾಮನಿವಾಸಿಗಳ ಸಂಪದಭ್ಯುದಯ ಮಾಡುವದಿದೆ. ಗ್ರಾಮಸಂಪತ್ತು ಬೆಳೆಯಬೇಕಾದರೆ ಗ್ರಾಮದ ವ್ಯಯಕ್ಕಿಂತ ಆದಾಯ ಮಿಗಿಲಾಗಬೇಕು. ಆದಾಯಕ್ಕಿಂತ ವೆಚ್ಚ ಮಿಗಿಲಾದರೆ ಗ್ರಾಮಗಳಿಗೆ ದಾರಿದ್ರ್ಯ ಬಂತು. ವ್ಯಕ್ತಿಗೂ, ಗ್ರಾಮಕ್ಕೂ, ರಾಷ್ಟ್ರಕ್ಕೂ ಸಂಬಂಧಪಟ್ಟ ಒಂದೇ ಒಂದು ತತ್ವವಿದು. ಆದರಿಂದ ಗ್ರಾಮಗಳೊಳಗಿನ ಪ್ರಮುಖರೂ, ಗ್ರಾಮೋದ್ಧಾರಕರೂ, ಗ್ರಾಮಾಧಿಕಾರಿಗಳೂ ಅಲ್ಲಲ್ಲಿಯ ಗ್ರಾಮಗಳ, ಜಿಲ್ಲೆಯ ತಾಲೂಕುಗಳ, ಜಿಲ್ಲೆಗಳ, ಪ್ರಾಂತಗಳ ಆದಾಯ-ವೆಚ್ಚ ಪತ್ರಿಕೆಗಳನ್ನು ತಯಾರಿಸಬೇಕು. ಗ್ರಾಮಗಳಲ್ಲಿ ಹುಟ್ಟುವ ಜಿನಸುಗಳ ಪರಿಮಾಣವೆಷ್ಟು? ಅವುಗಳ ಬೆಲೆ ಎಷ್ಟು? ಗ್ರಾಮನಿವಾಸಿಗಳ ಕೂಲಿ, ಪಗಾರು, ಪರಊರಿನ ಸಾಲಗಾರರಿಂದ ಊರಲ್ಲಿ ಬರುವ ಒಡ್ಡಿ ಮೊದಲಾದವುಗಳಿಂದ ಆಗುವ ಸಂಪಾದನೆ ಎಷ್ಟು? ಇವೆಲ್ಲವನ್ನು ಕೂಲಂಕುಶವಾಗಿ ಬಾಂಧವರೊಡನೆ ವಿಚಾರಿಸಿಕೊಂಡು ಅವನ್ನು ಆದಾಯ ಸದರಿನಲ್ಲಿ ತೋರಿಸಬೇಕು. ಇವೆಲ್ಲ ಸ್ವಾಸ್ಥ್ಯ ಸದರುಗಳು. ಗ್ರಾಮನಿವಾಸಿಗಳು ಸಂಸಾರಕ್ಕಾಗಿ ವಿಲಾಸಕ್ಕಾಗಿ ಪರಊರಿನಿಂದ ತರುವ ಜಿನಸುಗಳು ಖರ್ಚಿನ ಸದರಿನಲ್ಲಿ ಸರಕಾರಕ್ಕೆ ತೆರುವ ತೀರ್ವೆ ಖರ್ಚಿನಲ್ಲಿ ಸೇರತಕ್ಕದ್ದು. ಪರಊರಿನ ಸಾವಕಾರರಿಗೆ ಸಲ್ಲತಕ್ಕ ಒಡ್ಡಿ ಖರ್ಚಿನ ಸದರಿನಲ್ಲಿ ಸೇರತಕ್ಕದ್ದು. ಆಯಾ ಮನೆತನಗಳೊಳಗಿನ ಸಾವಕಾರರಿಗೆ ಆಯಾಯ ಗ್ರಾಮದೊಳಗಿನ ಸಾಲಗಾರರು ಕೊಡುವ ಒಡ್ಡಿ ಗ್ರಾಮದ ಜಮಾ ಖರ್ಚಿನ ಕೋಷ್ಟಕದಲ್ಲಿ ಬಾರದು. ಯಾಕಂದರೆ ಗ್ರಾಮ ಸಂಪತ್ತಿನ ವಿಶಾಲ ವಿಚಾರದಲ್ಲಿ ಅದು ಆದಾಯವೂ ಅಲ್ಲ, ವೆಚ್ಚವೂ ಅಲ್ಲ. ಗ್ರಾಮನಿವಾಸಿ ವ್ಯಕ್ತಿಗಳೊಳಗೆ ಸ್ಥಳಾಂತರವಾದ ಸಂಪಾದನೆಯದು. ವ್ಯಕ್ತಿಗಳ ಜಮಾ ಖರ್ಚು ಪತ್ರಿಕೆಯಲ್ಲಿ ಮಾತ್ರ ಇವನ್ನು ಸೇರಿಸಬಹುದು. ಈ ಪ್ರಕಾರ ಗ್ರಾಮ ಜಮಾ-ಖರ್ಚು ಪತ್ರಿಕೆಯನ್ನು ತಯಾರಿಸಿದ ಒಳಕ ನಮಗೆ ಗ್ರಾಮ ಸ್ಥಿತಿಯ ಕಲ್ಪನೆ ಬರುತ್ತದೆ. ಗ್ರಾಮದ ಸದರುಗಳನ್ನು ನೋಡಿ ಅವುಗಳಲ್ಲಿ ಸುಧಾರಣೆ ಮಾಡುವ ಉಪಾಯಗಳನ್ನು ಕಲ್ಪಿಸಲು ಅನುಕೂಲವಾಗುತ್ತದೆ. ಖರ್ಚಿನ ಸದರುಗಳನ್ನು ಪರಿಶೋಧಿಸಿ ಅವುಗಳಲ್ಲಿ ಆವಶ್ಯಕ ಖರ್ಚು ಎಷ್ಟು? ಅನಾವಶ್ಯಕ ಖರ್ಚು ಎಷ್ಟು? ಗ್ರಾಮನಿವಾಸಿಗಳು ತಯಾರಿಸಿಕೊಳ್ಳಬಹುದಾದ ಜಿನಸುಗಳು ಯಾವವು? ಎಂಬದನ್ನೆಲ್ಲ ವಿಚಾರಿಸಬಹುದಾಗುತ್ತದೆ. ಜಮಾ-ಖರ್ಚಿನ ಪತ್ರಿಕೆಯಿಂದ ಗ್ರಾಮೋದ್ಧಾರದ ಪ್ರಯತ್ನಕ್ಕೆ ಒಂದು ತರದ ವ್ಯವಸ್ಥೆ ಪ್ರಾಪ್ತವಾಗುತ್ತದೆ. ಇದಕ್ಕೇ ನಾವು ಗ್ರಾಮೋದ್ಧಾರ ಸೀಠಿಕೆ ಎಂಬದಾಗಿ ಕರೆಯಿಸಿದೆವು.

ಒಂದು ಉದಾಹರಣೆ:— ಒಂದು ಗ್ರಾಮದಲ್ಲಿ ವರ್ಷಕ್ಕೆ ಬೇಸಾಯದ ಉತ್ಪನ್ನದ ಜರುಗಿತು. ಕಾರ್ಯಕರ್ತರು ಆ ಗ್ರಾಮದ ಗಳಿಕೆಯ ಸಾಲಿನ ಜಮಾ-ಖರ್ಚುಗಳನ್ನು ಒದಿದರು. ೧೯ ಸಾವಿರ ಜನರಿಗೆ ಗ್ರಾಮಕ್ಕೆ ರೂ. ೩೦೦೦ ಉತ್ಪನ್ನವಿತ್ತು, ರೂ ೪೦೦೦ ಖರ್ಚಾಯಿತು. ಅಂದರೆ ವರ್ಷದ ಸಾಲಿನಲ್ಲಿ ಆ ಗ್ರಾಮದ ಸಂಪತ್ತು ೬-೫ ಸಾವಿರ ಕರಗಿತು. ಜಮಾ ಖರ್ಚಿನ ಪತ್ರಿಕೆಯು ಈ ಮೇಲಿನಂತೆ ಇತ್ತು:— ಬೇಸಾಯದ ಜಿನಸು ಇವುಗಳಿಂದ ರೂ ೧೦೦೦, ಪಟ್ಟಣದ ಅಭಿವೃದ್ಧಿ ಮುಂಬಯಿಗೆ ಹೋದ ಕೂಲಿಕಾರರು ತರುವ ಕೂಲಿ ಇಪ್ಪತ್ತು ರೂ ೬೦೦೦. ಪರಊರಿನಿಂದ ಬರುವ ಒಡ್ಡಿ ರೂ ೩೦೦. ತತ್ತಿ, ಕುರಿ, ಶಿಕ್ಷಕರ ಪಗಾರು, ಪಟೇಲರ ಪಗಾರು, ನಾಡಿಗ, ಕಮ್ಮಾರ, ಕುಂಬಾರ ಅಕ್ಕಸಾಲಿ ಇವರ ಪರಊರಿನ ಉತ್ಪನ್ನ ಮೊದಲಾದ ಪ್ರಾಪ್ತಿಯಿಂದ ೧೯ ಸಾವಿರ ರೂಪಾಯಿ ಉತ್ಪನ್ನವಾಗುತ್ತದೆ. ಖರ್ಚಿನ ಅಂಗಗಳಲ್ಲಿ ಮುಖ್ಯ ರಕಮು, ಜವಳಿಯದು ೧೯ ಸಾವಿರ ಇಸ್ವಿಯಲ್ಲಿ ರೂ ೭೦೦೦ಗಳ ಜವಳಿ ಬಂತು. ಸಕ್ಕರೆ, ಚಹಾ ಕೂಡಿ ರೂ. ೫೦೦ ಖರ್ಚು, ಅಫು, ಗಾಂಜಾ, ಹೆಂಡ ಇವುಗಳಿಗೆ ರೂ ೪೫೦ ಖರ್ಚು. ಮೋಟಾರು—ಉಗಿಬಂಡಿಗಳಿಗೆ ರೂ ೬೦೦ ಖರ್ಚು, ದಿವಾಣಿ, ಫೌಜದಾರಿ ಮೊದಲಾದ ವ್ಯಾಜ್ಯಗಳಿಗಾಗಿ ರೂ ೫೦೦ ಖರ್ಚು, ತೀರ್ವೆಗೆ ರೂ ೧೯೦೦ ಖರ್ಚು, ಪರಊರ ಸಾವಕಾರರಿಗೆ ರೂ ೫೦೦ ಒಡ್ಡಿ ಕೊಟ್ಟಿತು, ರೂ ೧೫೦೦ ಗೇಣಿ ಕೊಟ್ಟಿತು. ಈ ಮೇಲಿನ ಗ್ರಾಮದ ಜಮಾ ಖರ್ಚಿನ ಪತ್ರಿಕೆಯನ್ನು ಪರಾಂಬರಿಸಿದರೆ ನಮಗೆ ಏನು ಸೂಚಿಸುತ್ತದೆ? ಗ್ರಾಮದಲ್ಲಿ ಮುಖ್ಯ ಪ್ರಾಪ್ತಿ ಎಂಬುದು ಮುಂಬಯಿ ಕಡೆ ಕೂಲಿ ಒಕ್ಕಲತನದ ಉತ್ಪನ್ನವಿಲ್ಲವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ೨೦ ಸಾವಿರ ರೂಪಾಯಿಗಳ ಉತ್ಪನ್ನದಲ್ಲಿ ೧-೨ ಸಾವಿರ ರೂಪಾಯಿಗಳ ಉತ್ಪತ್ತಿ ಒಕ್ಕಲತನದ್ದು. ಗ್ರಾಮನಿವಾಸಿಗಳಿಗೆ ಊರಲ್ಲಿ ಹೊಟ್ಟೆ ತುಂಬಿಕೊಳ್ಳಲಾಗದೆ ಅವರು ಮುಂಬಯಿ ಕಡೆ ಹೋಗಬೇಕಾಗುತ್ತದೆ. ಮೇಲಾಗಿ ರೂ. ೭೦೦೦ ಗಳ ಜವಳಿ ಆಮದಾಗುತ್ತದೆ. ಈ ಕೂಲಿಕಾರರಿಗೆ ಊರೊಳಗೆ ಉಳಿಯುವ ವ್ಯವಸ್ಥೆ ಮಾಡಿ ಕೈರಾಟಿ ಕೈಮಗ್ಗಗಳನ್ನು ಏರ್ಪಡಿಸಿ ಅರಿವೆ-ಬಂಚಡಿಗಳ ವ್ಯವಸ್ಥೆ ಮಾಡಿದರೆ ೭ ಸಾವಿರ ರೂಪಾಯಿಗಳು ಗ್ರಾಮಕ್ಕೆ ಉಳಿತಾಯವಾಗುತ್ತವೆ. ಚಹ ಬಿಟ್ಟರೆ, ಅಫು, ಗಾಂಜಾ, ಮದ್ಯಗಳನ್ನು ತ್ಯಜಿಸಿದರೆ ೩ ಸಾವಿರ ರೂಪಾಯಿ ಉಳಿಯಬಹುದು. ವ್ಯಾಜ್ಯಗಳನ್ನು ಊರೊಳಗೆ ನಿರ್ಣಯಿಸಿಕೊಂಡರೆ ರೂ ೫೦೦ಗಳ ಉಳಿತಾಯವಿದೆ. ಮುಂಬಯಿಗೆ ಕೂಲಿಗೆ ಹೋಗದೆ ಕೂಲಿಯ ಪ್ರಾಪ್ತಿ ಕಡಿಮೆಯಾದಾಗ್ಯೂ ತಕ್ಕ ಮಟ್ಟಿಗೆ ೮-೯ ಸದರುಗಳಿಂದಲೇ ವರ್ಷಕ್ಕೆ ೫-೬ ಸಾವಿರ ರೂಪಾಯಿ ಸಹಜ ಉಳಿಯಬಲ್ಲದು. ಅಂದರೆ ಗ್ರಾಮದ ಜಮಾ-ಖರ್ಚು ಪತ್ರಿಕೆಯಲ್ಲಿ ವೆಚ್ಚ ಹೋಗಿ ೧-೨ ಸಾವಿರ ರೂಪಾಯಿ ಶಿಲ್ಕು ಉಳಿಯಬಹುದು. ಇದಕ್ಕೆ ವಿಶೇಷ ಬಂಡವಲ ಬೇಡ. ಮನಸ್ಸಿನ ಪ್ರವೃತ್ತಿ ಬೇಕು. ಕಾಯಕಷ್ಟದ ಅಭಿರುಚಿ ಹುಟ್ಟಿಸಬೇಕು, ವಿಲಾಸ ಪ್ರವೃತ್ತಿಯನ್ನು ಗ್ರಾಮನಿವಾಸಿಗಳು ತ್ಯಜಿಸಬೇಕು. ಆತ್ಮಕಲ್ಯಾಣಕ್ಕಾಗಿ ಅವಸ್ಥಾಂತರ ಉಂಟಾಗಬೇಕು. ಒಮ್ಮೆ ಗ್ರಾಮಗಳಲ್ಲಿ ಈ ಪ್ರಕಾರ ವಾತಾವರಣವು ಹುಟ್ಟಿದರೆ ಪ್ರತಿಯೊಬ್ಬ ಮನೆಯವರೂ, ವ್ಯಕ್ತಿಯೂ ಇದೇ ಪ್ರಕಾರ ವಿಚಾರ ಮಾಡುವರು. ತಮ್ಮ ಸಂಪಾದನೆಯೇನು? ತಮ್ಮ ಖರ್ಚೇನು? ಎಂದು ತಿಳಿದು, ಸಂಪಾದನೆಗಿಂತ ಖರ್ಚು ಮಿಗಿಲಾಗುವಲ್ಲಿ ಅದನ್ನು ನಿಯಂತ್ರಿಸಲು ಯತ್ನಪಡುವರು. ಖರ್ಚು ನಿಯಂತ್ರಿಸಲಾಗದಿದ್ದಲ್ಲಿ ಖರ್ಚಿಗೆ ತಕ್ಕಷ್ಟು ಸಂಪಾದನೆ ಮಾಡತೊಡಗುವರು. ಈ ಪ್ರಕಾರ ವ್ಯಕ್ತಿಯೂ, ವ್ಯಕ್ತಿಗಳುಳ್ಳ ಗ್ರಾಮವೂ ಒಮ್ಮೆಲೇ ಉದ್ಧಾರವಾಗುವವು. ಜಮಾ-ಖರ್ಚು ಪತ್ರಿಕೆಯಿಂದ ಉಂಟಾಗುವ ಲಾಭಗಳಿವು.

ಗ್ರಾಮೋದ್ಧಾರಕರು ವಿಚಾರ ಮಾಡತಕ್ಕ ವಿಷಯವಿದು. ಸರಕಾರಿ ಅಧಿಕಾರಿಗಳೂ ಆಳವಾಗಿ ವಿಚಾರಿಸಿ ಈ ಕುರಿತು ಉಪಾಯಯೋಜನೆ ಮಾಡಿದರೆ ಹಿಂದುಸ್ಥಾನ ಸರಕಾರಕ್ಕೆ ಲೋಕಸ್ಥಿತಿಯ ಕಲ್ಪನೆ ಬಂದೀತು. ಗ್ರಾಮೋದ್ಧಾರಕ್ಕಾಗಿ ಎಲ್ಲೆಲ್ಲಿ ಯಾವ್ಯಾವ ಸ್ವರೂಪದ ಉಪಾಯ ಮಾಡಬೇಕೆಂಬ ಕಲ್ಪನೆಯು ಸರಕಾರಕ್ಕೂ ಪ್ರಜಾಪ್ರಮುಖರಿಗೂ ಗ್ರಹಿಕೆಯಾಗುವಂತಿದೆ. ಗ್ರಾಮಗಳಲ್ಲಿ ದಾರಿದ್ರ್ಯ ನೆಲೆಗೊಳ್ಳಲು ಕಾರಣವು ಜಮಾ-ಖರ್ಚಿನ ಗ್ರಹಿಕೆಯಿಲ್ಲದಿದ್ದದ್ದು. ಐಶ್ವರ್ಯವಂತರ ವಿಲಾಸ ನೋಡಿ ತಮ್ಮ ಸ್ಥಿತಿಗತಿಯ ವಿಚಾರ ಮಾಡದ ಬಡಬಗ್ಗರು ವಿಲಾಸಪ್ರವೃತ್ತಿ ಹಿಡಿದದ್ದರಿಂದಲೇ ಗ್ರಾಮಗಳ ಸಂಪತ್ತು ಕ್ರಮವಾಗಿ ಕುಗ್ಗಿ ಇಂದಿಗೆ ಗ್ರಾಮಗಳು ತೀರ ದರಿದ್ರವಾಗಿವೆ. ಗ್ರಾಮನಿವಾಸಿಗಳೊಳಗೆ ಗ್ರಾಮಗಳಲ್ಲಿ ಉಳಿಯಲು ಬೇಸರ ಹುಟ್ಟಿದೆ. ಎಲ್ಲರೂ ಪಟ್ಟಣಗಳ ವಿಲಾಸದ ಸ್ನೇಹ ಬಯಸುತ್ತಿದ್ದಾರೆ. ಪಟ್ಟಣಗಳಿಗೆ ಹೋಗುವ

' अस्पृश्य ' कोण व कसे?

सारडा कायद्याच्या तर्फे इकडील हिंदुसभेने जो खलिता प्रसिद्ध केला होता त्यावर श्री. नाडकर्ण्यांचें नांव कोठेंही नसतां, व तो सदर हिंदुसभेच्या कार्यकारी मंडळाच्या व पांचजण वैदिकांच्या नांवांवर प्रसिद्ध झालेला असतां त्यासंबंधींच्या वितंडवादांत श्री. नाडकर्ण्यांच्या नावानें खडे फोडणें म्हणजे त्यांची विरोधी भक्ति करणेंच होय.

'विचारी'च्या ता. १-२-१९३५च्या अंकांत 'सैलास पुढें करून टाळ पेटविणारास उत्तर' अशा मथळ्याखालीं गजानन विन कुप्पा याच्या नांवावर जो मजकूर आला आहे त्याच्या लेखकाची विद्वत्ता अगाध असली पाहिजे. बनावट श्लोकाबद्दल पैज मारण्यास निघालेल्यानें अगोदर आपण 'टळ पेटविणें' हा शब्दप्रयोग कोठल्या 'ज्योतिर्विदमंडळा'च्या भांडारांतून पैदा केला हें जाहीर करावे.

पण गजानन हें विचारी दुसऱ्याचें हस्तकपात्रच असून, त्याच्याकडून असें सुचविलें आहे कीं, उपरोक्त खलित्यांतील एक श्लोक श्री. नाडकर्ण्यांनीं दुसऱ्याकडून रचून घेतला आहे. पण तो श्लोक कोणी आधुनिकानें रचला असेल तर तो त्यांनीं स्वतः रचला असणें अशक्य नाहीं आठ वर्षांमागें येथील कोंकण मराठा समाजाच्या वतीनें छत्रपति श्रीशिवाजी महाराजांची जी पुण्यतिथि जाहीर रीतीनें साजरी करण्यांत आली होती त्या प्रसंगींच्या जाहीर सभेंत त्यांनीं आपण श्रीशिवरायांस संबोधून रचलेले कांहीं श्लोक वाचून दाखवून त्यांचें अर्थविवरण केल्याची बातमी **विचारी** ता. ११-९-१९२७च्या अंकांत पृ. ३वर इहवृत्तांत प्रसिद्ध झालेली आहे. ही गोष्ट **विचारी**-वाचकांस आठवत असेल. शिवाय इकडील एका जोइशानें दुसऱ्याशीं वाद करतांना कांहीं संस्कृत रचनेच्या बाबतींत श्री. नाडकर्ण्यांची मदत घेतल्याबद्दल त्यांनींच त्यांचे आभार मानले आहेत, असेंही माझ्या ऐकिवांत आहे.

आपल्याच प्रमाणें आपले गुरु पुढा फिरत आहेत असें भोळसट लोकांची डोकीं फिरवू पाहणाऱ्या 'ज्योतिर्विदमंडळा'च्या [illegible] दादाला आपण गोळा करून आणलेले बुरसट श्लोक दर्शनी लिहिल्यास उत्तर बरोबर झालें असें वाटत असेल तर, खचित त्याचेंच डोकें फिरत असलें पाहिजे या अरण्यपंडितानें मनूचा म्हणून मागितलेला आपला 'पञ्चत्वम्' इत्यादि श्लोक कोठल्या मनुस्मृतीतला आहे हें आधीं जाहीर करावें (नाहींपेक्षा मानसिक मनूचा म्हणून तरी कबूल करावें)'बालिश बहु बायकांत बडबडला ।' चुटीदाढी दमून बायकांत पुढाकारी मारण्याइतकें काम सोपें नव्हे हें त्यानें पक्कें समजून असावें किंवा, आपल्या [illegible] मारडलेल्या 'फिरंगणा'तील लोकांस परभारें समुद्राकांठावरून आणवून त्यांचें गुरुत्व क्षौर वगैरे, करवून त्याकडून धर्माच्या नांवावर कांहीं लुटपुट स्वाईन करून घेऊन, त्यांच्याकडे असेल-नसेल तें लुबाडून घेण्याइतकें हें वादविवादाचें काम सोपें नव्हे हें जाणूनच तो ता १ - २च्या **विचारीं**त एखाद्या भेकड कुत्र्याप्रमाणें आपलें शेपूट दुगणांत घालून पळून सुटलेला दिसतो. अशास साक्षी पुरावाची भरम का मानावी? त्यांच्या सत्यासत्यतेचा पुरावा [illegible] कोयर साईकांनीं 'विचारी'तूनच दिला आहे

भटभाई गजाननाच्या लेखांत 'देवस्थानाधिकारी नाडकर्ण्यांच्या विरुद्ध अग्निम [illegible]' चा कज्जाचा उल्लेख आहे, पण त्यांतील नाडकर्ण्यांशीं येथील श्री नाडकर्ण्यांचा कांहीं संबंध असेल तर तो बादरायण-संबंधच'

कुप्पाभटाच्या मुलाकडून त्याच्या बच्चपी शिकलेला सवाई कुप्पा हा श्री नाडकर्ण्यांनी अस्पृश्यांच्या संगतींत 'मेजवानी' घेतल्याचें वदवितो श्री नाडकर्ण्यांनीं अस्पृश्यांबरोबर भोजन केल्याचें मी अजून ऐकलें नाहीं तरी तसें त्यांनीं केलेंच असेल तर मी म्हणतो- अस्पृश्य मानलेल्याच्या संगतींत जेवल्यानें स्पृश्य ब्राह्मण न विटाळला, तो खरा असला तर त्याच्या संसर्गानें ते अस्पृश्यच स्पृश्य होतील, इतका आत्मविश्वास व 'ब्रह्मतेजो बलं बलम्' याची जागीव नाडकर्ण्यांना त्यांना असल्याविना ते तसें करतील काय? पण खरे अस्पृश्य कोण? ज्यांच्या संसर्गानें हरिजन देखील 'अस्पृश्य' होण्याची भीति आहे तसले इसमच. तसले इकडे कोणी असतील तर ते माझ्या मतें या गजानन-कुप्पा सारखे ओंगळ बुद्धि, ओंगळ आचरण, ओंगळ वृत्ति यांचीं जणू माहेरेंच असे इसम अशास आपला पंक्तिलाभ देऊन हरिजनांपैकी कोण बरें अधोगतीस जाईल'

जो आपणास 'धर्ममार्तंड' म्हणवून घेतो तो भ्रात्रागमनी कुठें करतो (येथे वडील बहूची बायको व चुलत बहूची बायको भावजय मानाव्या) ब्राह्मणाची बॅरोजी निरवित्यास त्यास भीक कोण बरें घालील? तो आपल्या [illegible] म्हणून झिणवितो. त्याची मान तरी वदी ठरलेली आहे. पण, ज्यांच्या आईस 'आवाडा फोडा'कडे घळविल्यानंतरच त्याचा जन्म झाला त्याची जात कोणती म्हणून ठरवावी?

आपल्या गावात कोणत्याही ठिकाणीच्या भुडाशी राहून भोळसट लोकांच्या अज्ञानपणाचा फायदा घेण्याकरिता आपण वडुलेल्या पेशानें धर्ममार्तंड बनून भेंडेजोगाच्या धंदा चालविणाऱ्या सार्थकास [illegible] **शिखंडी (? त्रिपांडी)** मीच किंवा रहलगाकडून **स्वार** असलेच गाळावें लागतात' अशा वेळी [illegible] रूप प्रगट करणेस कोणी भेटलास तो [illegible] (भवति होड़ [illegible]) आपल्या [illegible] जाऊन कुत्र्याप्रमाण त्याच्यावर भुंकत राहावं, हें निश्चित होय

आमच्या त्रिसाड-घनोबाच्या केवळ कार्यावरून त्यास 'कर्डी-चीग' (म्हणजे आस्वल वीर) असें नामांतर त्याच्या जाति बांधवांमध्यें असल्याचें इकडील बहुतेकांस माहीत आहे त्याशिवाय तो स्वतःस 'धर्म-मार्तंड' असें म्हणवून घेतो 'कर्डी-चीरा' हें नामांतर अन्वर्थक असेल पण 'धर्ममार्तंड' हें कसें? हा जर धर्ममार्तंड होय, तर याच्या कुळांत याच्या संमतीनें व यजमानपणानें दोघा सख्ख्या बहिणींचीं लग्नें दोन सख्ख्या भावांशीं लावून, ' न च सहोदरयोर्ऽपि भार्यो सहोदरकन्यके । ' या **मुहूर्तचिंतामणीं**तील वगैरे शास्त्रवचनाच्या विरुद्ध कर्म का केलें? दुसरें- ' पितृव्य स्त्रीभगिनी तत्सुता परिवर्जयेत् । ' या वचनाच्या विरुद्ध घनोबाच्या मारजमातेची बहीण त्याच्या चुलत्याच्या मुलास दिली खुद्द घनोबाची बायको तर त्याची आतेभगिनी आहे कारण ती घनोबाच्या सावत्रआईच्या बहिणीची मुलगी होय

सन्ध्यावंदनाचे उत्तम, मध्यम वगैरे काळ शास्त्रांत सांगितले आहेत त्याप्रमाणें हा जोइशी वागतो काय? त्यानें संध्या केल्यानंतर, कधीकधीं पेज जेवल्यानंतर देखील, हजामत करून घेतल्याचें मी ऐकलें आहे केव्हांही नसे आणि केलें नाहीं म्हणून जर हा जाहीरपणें शपथ वाहील तर मी गमनाथाच्या भांडारांत १००१ [illegible] टाकीन

' गार्धगिर पंचदिनानि वोध्य ' [' बुद्ध्या ' या ऐवजी] असें लिहिणाराचें व्याकरण-ज्ञान पहावें तर तें- वगैरे' शब्द 'क्रियापदानंतर आलेलें क्रियाविशेषण-अव्यय' असें म्हणणाऱ्याच्या व्याकरणज्ञानाच्या तोडींचेच दिसत असून, तें एखाद्यानें उकिरड्यावर वसून केलेल्या नपथ्येनें फळच असावें अशा मराठी ज्ञाला काय लिहिणें ' **किं मिथ्यमन्नं** **स्वर-सूकर णाम ।** '

कारवार, ता २५-२-३५.

शिवराम गेनू पवार.

' विचारी'चा अविचार.

'विचारी'च्या गेल्या जॅन्युअरी ता. २१च्या अंकांत 'भोळ्या धार्मिकांवर धर्ममार्तंडाची सक्ती' या मथळ्याखालील वादामध्यें, संबंध असलेल्यांपैकीं कारवार हिंदुसभेच्या उभयता चिटणिसांनीं प्रकटनास दिलेल्या आपल्या पत्रांत आपलीं नांवें संपूर्ण दिलेलीं होतीं, तरी सदर वृत्तपत्राच्या मुद्रकानें तीं संक्षिप्त रूपांत छापल्याचें समजतें- असें श्री. मुजुम [illegible] यांनीं त्याच वृत्तपत्रांतून प्रकटविलेल्या आपल्या पत्रांत म्ह[illegible] त्यास सदर वृत्तपत्राच्या मुद्रकानें (किंवा संपादकानें [illegible]) आहे कीं- सदर चिटणिसांनीं आपलीं नांवें [illegible] हें त्यांचें म्हणणें अयथार्थ असून छापा[illegible] त्यांचीं नावें संपूर्णच हातीं हें मला [illegible]

[illegible] (ಲ.ಶ.)

हिंदु पुरोहितांस इशारत.

आपल्यास ठाऊक असेलच कीं हल्लीं अमलात असलेल्या **बालविवाह-नियंत्रक उर्फ सारडा कायद्या**प्रमाणें अल्पवयी मुलामुलींचीं म्हणजे १४ वर्षांखालील मुलींचीं व १८ वर्षांखालील मुलांचीं लग्नें करणें किंवा करण्यात मदत करणें हा गुन्हा आहे. केवळ कायद्याच्या दृष्टीनेंच नव्हे पण नीति-दृष्ट्या व समाजहित-दृष्ट्या देखील हा एक गुन्हाच ठरतो किंबहुना अशा प्रकारचीं लग्नें समाजहिताचीं विघातक आहेत. म्हणूनच सुविचारी पुढाऱ्यांच्या आग्रहावरून सरकारनें हा कायदा केला आहे. म्हणून तो स्वतः पाळणें व लोकांकडून पाळविणें हें सुशिक्षित लोकांचें कर्तव्य ठरतें. याकरिता या गोष्टीत लक्ष घालून आपल्याकडून होईल तितकें कार्य करण्याचा कारवारच्या **हिंदु सभेनें** निश्चय केला आहे.

म्हणून सदर सभेच्या वतीनें आम्ही आपणास मित्रभावानें अशी इशारत देतों कीं आपण यापुढें अशा प्रकारच्या लग्नांत कोणत्याही प्रकारचा भाग घेऊं नये. कारण अल्पवयी वधू-वरांच्या आईबापांच्या किंवा पालकाच्या एवढाच त्यांच्या लग्नांत पौरोहित्य करणाराही गुन्हेगार ठरतो, व त्या लोकांस अशा गुन्ह्याबद्दल १००० रुपयांपर्यंत दंड किंवा १ महिन्यापर्यंत तुरुंगवास किंवा दोन्ही अशी शिक्षा कायद्यानें सांगितलेली आहे. आपल्यास इशारत देण्याचें कारण एवढेच कीं आपण सावध व्हावें, कारण ही इशारत मिळून देखील जर आपण अशा प्रकारचा गुन्हा कराल तर त्याविरुद्ध फिर्याद करून, [illegible] कायद्याप्रमाणें [illegible] शिक्षा होईल अशी काळजी सदर सभा यापुढें घेणार आहे. कळावें.

कार्यकारी मंडळ,

ता. २८-२-१९३५ **हिंदुसभा, कारवार.**

कुप्पाकुमाराची उलटी बोंब!

ता. १-३-१९३५च्या 'विचारांत' गजानन [illegible] कुप्पा यांच्या नांवावरच्या पत्रात पॅरे नंबर ३ मध्यें फळी चोरल्याचा उल्लेख केलेला आहे. तें कर्म सदर कुप्पाकुमार व त्याचा साथीदार गजानन यांचेच असल्याबद्दल त्यावेळीं दिलेली नोटीस पुरेसा पुरावा आहे. वरून कुप्पाकुमाराकडून मारविलेली ही जाहिरात चोराची उलटी बोंब होय.

माजाळी, }
६-३-३५ } [illegible]

ता. १-३-१९३५च्या **विचारां**त गजानन कुप्पा यांच्या नांवा-[illegible] फळी चोरल्याचा उल्लेख आला आहे त्या वेळीं सदर गजानन याने [illegible] गजानन याच्या मदतीनें तें फळी चोरल्यानंतर त्याच्या माल-[illegible] नंतर आपली चोरी मजपाशीं कबूल केल्यामुळे माल-[illegible] फळी सुद्धा मालकास दिली होती. आता ताच [illegible] गावातील कुटिलपणास अग्रेसर असलेल्या [illegible] जोशी म्हणे आमचे वडील पैलास-[illegible] विचारांत लिहून आमची एकदम बद-[illegible]

ಕೊಂಡು ಒವಸ್ಟು ಆದಾಯ ಸದರಿಸ್ಲ ತೆ...
[illegible]

वाट पाहून माझ्या अल्पवयीपणाचा पुरा फायदा घेऊन **माझी नासाडी** झाल्यानंतर आता सदर गजाननाच्या मदतीनें **जनतेची दिशाभूल करूं** पाहत आहे. पण विचारी वाचक **चोरास सोडून संन्याशास सुळावर** चढवणार नाहींत अशी खात्री आहे.

आपला,

अनंत बाबू जोशी, माजाळी.

घिसाड-घनोबाची घोडचूक!

(लि आ म)

बादरायण उवाच ।

'[illegible]' [illegible] हि दंडं शतमेव सार्धम् ।
[illegible]

[illegible] (उर्फ कुण्ठितमति आई सत्यवती [illegible] 'बकार वदी') [illegible]-[illegible] घिसाड-घनोबा [illegible] सवाई-शहाणा झाला [illegible] हळदीचा पत्ता लागला '

[illegible] ('बकार-बीरा, भकार-भगी, 'मकार महार' [illegible] (हें नवें?)

[illegible] – घिसाड-घनोबाच्या ज्योतिर्विद्मंडळाकडून जो ता [illegible] १९३४ [illegible] मुहूर्त निश्चित करण्यात आला होता, त्यात कोठें तरी घोडचूक [illegible] [illegible] शकणार नाहींत [illegible]

सारडा सावधान

अथवा

गणकपुराण

व ज्योतिर्विद्मंडळाची झडती

या नावाचें [illegible] लिहून छापाईस दिलेलें, छाप[illegible] लवकरच निघणार आहे. सारडा कायद्या[illegible] विनोदी पण विद्वत्तापूर्ण चर्चा व धर्मशास्त्रीय व व्यावहारिक दृष्टि[illegible] भरपूर भरलेलें, चटकदार पण मार्मिक, अशा या पुस्तकाच्या [illegible] किंमतीस मिळतील

पत्ता - **कर्नाटक बुक मार्ट,**

डी ले बोर्ड आफीसच्या समोर, **कारवार**

पोंच व अभिप्राय.

मराठी [illegible] याकरिता **भूगोलवर्णन, उत्तर कानडा जिल्हा** ([illegible] माहिती) व **मुंबई कर्नाटक** ([illegible] माहिती) ले – द. का. जोशी प्रकाशक [illegible] कारवार कि. ४ आणे '

मराठी भाषेत या जिल्ह्याचें वर्णन [illegible] पुस्तक आजवर उपलब्ध नव्हतें त्यामुळें या [illegible] मराठी शाळांतल्या मुलांची व शिक्षकांची भूगोलाच्या अभ्यासाविषयी कुचंबणा [illegible] ती उणीव या पुस्तकानें सहज काढली आहे. यातील माहिती बिनचूक व भरपूर [illegible] शिक्षकांस व मुलांस फार उपयोगी आहे. पुस्तकांत [illegible] थोडक्यात पण मार्मिक [illegible] केलें आहे. उदाहरणार्थ मराठी, कोंकणी व कानडा या भाषांचा परस्पर व इतर भाषांशी संबंध. या जिल्ह्यांतील मराठी शिकणाऱ्या मुलांची संख्या [illegible] प्रकाशकांनी हें [illegible] द्रव्यार्जनापेक्षा लोकोपयोगाच्या दृष्टीनें [illegible] शिक्षकांनी व पालकांनी या पुस्तकाचा उपयोग करून या नवीन [illegible] उत्तेजन द्यावें अशी आमची शिफारस आहे. दुसरी आवृत्ति प्रसि[illegible] सुयोग आल्यास पुस्तकांत आणखी सुधारणा करून [illegible] उत्तरहिंदुस्थानचें [illegible] प्रकाशक [illegible] पुस्तकाची [illegible], संकलन वगैरे बाबतींत कारवारचे श्री. जु. द. [illegible] त्यांतील माहितीवरून प्रकाशनेवरून दिसतें.

ಂಥಣವೇನು ? ಅಲ್ಲಿ ತಮಗೆ ಸಿಗುವ ಪ್ರಾಪ್ತಿ ಏನು? ಮಗೆ ತಗಲುವ ಖರ್ಚೇನು ? ಗ್ರಾಮಗಳಲ್ಲಿ ನ್ಯೂನ ಏನಿದೆ ? ಸಿರ್ವಾಹ ಸಾಧನಗಳಿಗೆ ಕೊರತೆ ಯಾವ ು ? ಪ್ರತಿಯೊಬ್ಬರೂ ಗ್ರಾಮತ್ಯಾಗ ಮಾಡಿ ಪಟ್ಟ ಣಲ್ಲಿ ಹೋಗತಾರಂಭಿಸಿದರೆ ಪಟ್ಟಣಗಳ ಅವಸ್ಥೆ ಲ್ಲಿಗೆ ಮುಟ್ಟೀತು? ಗ್ರಾಮ ಗಳ ಅಭಾವದಲ್ಲಿ ಪಟ್ಟಣ ಿಗರಿಗೆ ಪೋಷಿಸುವ ಸಾಧನೆಗಳೆಲ್ಲಿವೆ? ಎಂಬ ಯಾ ದೇವಿಚಾರವನ್ನು ಊರವರು ಹಿಡಿಯದೆ ವಿವೇಕ ಿನರಾಗಿ ಕುರಿಗಳಂತೆ ಒಬ್ಬರ ಹಿಂದೊಬ್ಬರಾಗಿ ಟ್ಟಣಗಳನ್ನು ಸೇರುತ್ತಿದ್ದಾರೆ, ಗ್ರಾಮಗಳನ್ನು ತಿರ ಸ್ಕರಿಸುತ್ತಿದ್ದಾರೆ ಗ್ರಾಮಗಳಲ್ಲಿಯೇ ಉಳಿದು ವ್ಯವ ಸಾಯ ಮಾಡಲು ಕಲ್ಪಿಸದಿಷ್ಟದರಿಂದ ಗ್ರಾಮಗಳ ಅವಸ್ಥೆ-ಪರ್ಯಾಯದಿಂದ ನಮ್ಮ ಹಿಂದದೇಶದ ಅ ಸ್ಥಿತೀರ ನಿಕೃಷ್ಟವಾಗಿದೆ. ೭ ಲಕ್ಷ ಗ್ರಾಮಗಳು ಮ್ಮಾ ಹಿಂದುಸ್ಥಾನದಲ್ಲಿನ ಈಗಿನ ಮನ್ವಂತರದಲ್ಲಿ ಗ್ರಾಮಗಳ ಆಧಿಪತ್ಯವು ನಷ್ಟವಾದದ್ದರಿಂದಲೇ ಂದುಸ್ಥಾನವು ಈ ದಶಗೆ ತಲ್ಪಿದೆ. ಪುರಾತನ ಾಲದಲ್ಲಿ ಗ್ರಾಮದ ಅಂತರ್ಗತ ಕಾರಭಾರವೆಲ್ಲ ಗ್ರಾಮನಿವಾಸಿಗಳಿಂದಲೇ ಸಾಗುತ್ತಿತ್ತು ಅದರೊಳ ಸರಕಾರವು ಕೈಹಾಕುತ್ತಿರಲಿಲ್ಲ ಈ ಪದ್ಧತಿಯ ಮೂಲಕ ಗ್ರಾಮಸರಕಾರವು ಗ್ರಾಮಸ್ಥರ ಸಂಪತ್ತು ಪತ್ತುಗಳನ್ನೆಲ್ಲ ಸರಾಂಬರಿಸಿ ಸಂಪದಭ್ಯುದಯ ಾಡಲಿಕ್ಕೂ ಉಪಾಯಯೋಜನೆ ಮಾಡುತ್ತಿತ್ತು ಈಗ ಗ್ರಾಮ-ವಿಚಾರವಿಲ್ಲ ಪೇಠವಿಚಾರ, ಅಂತರ್ ರಾಷ್ಟ್ರೀಯ ವಿಚಾರ, ವಿಶಾಲ ವಿಚಾರ ಲೋಕ ಲ್ಲಿ ಗ್ರಾಮಗಳು ಸಿಲುಕಿಕೊಂಡು ಸೇಚಾಡುತ್ತಿವೆ ಪ್ರತಿಯೊಬ್ಬರಿಗೆ ದೇಶದ ಆಮದು-ರಫ್ತಿನ ಅಂಕಿಗಳು ಗೊತ್ತಿವೆ ಆದರೆ ಗ್ರಾಮ ವ್ಯಾಪಾರದ ಮಾಹಿತಿ ಒಬ್ಬರಿಗೂ ಇಲ್ಲ ಇದರಿಂದಲೇ ಗ್ರಾಮ ಳು ಕಂಗೆಟ್ಟಿವೆ ಗ್ರಾಮಗಳ ಪರಿಸ್ಥಿತಿಯ ಅಕಲ ವಾಗಬೇಕಾದರೆ ಗ್ರಾಮದ ಆದಾಯ-ವೆಚ್ಚವನ್ನು ಿಳಕೊಳ್ಳಬೇಕು ಸವಿಸ್ತರ ಆದಾಯ-ವೆಚ್ಚ ಪತ್ರಿಕ ಯನ್ನು ತಯಾರಿಸಿದ್ದಲ್ಲಿ ಗ್ರಾಮಸ್ಥರ ಗ್ರಾಮಜೀವ ನವೂ, ಗ್ರಾಮ ವ್ಯವಹಾರವೂ ಅದರೊಳಗ ಪ್ರತಿಬಿಂ ಬಿತವಾಗಬಲ್ಲಿದು ಗ್ರಾಮದವರು ಈಗ ಏನು ಮಾ ಡುತ್ತಾರೆ. ಇವರೊಳಗೆ ಇಷ್ಟವ್ಯಾವದು ? ಅನಿಷ್ಟವ್ಯಾ ವದು? ಇಷ್ಟ ಗುಣವನ್ನು ವಿಕಾಸ ಮಾಡು ವ ಬಗೆ ಹೇಗೆ? ಅನಿಷ್ಟ ಪ್ರವೃತ್ತಿ ಯನ್ನು ಹೋಗಲಾಡಿಸುವ ಬಗೆ ಹೇಗೆ? ಎಂಬ ಸಂಗತಿಯೆಲ್ಲ ಆದಾಯ-ವೆಚ್ಚ ಪತ್ರಿಕೆಯ ಅಭ್ಯಾಸ ದಿಂದ ಯೋಜಕರಿಗೆ ಸ್ಪುಟವಾಗುವಂತಿದೆ ಇದೇ, ಮೂಲತಃ ಗ್ರಾಮೋದ್ಧಾರ ಯೋಜನೆಗಳ ತಳಹದಿ, ಇದಕ್ಕಾಗಿಯೇ ಗ್ರಾಮೋದ್ಧಾರ ಸೀರಿಕೆಯನ್ನು ಇಂದಿಗ ನಾವು ವಿವರಿಸಿದ್ದು

— ಗ್ರೀಸ ದೇಶದಲ್ಲಿ ದಂಗೆಯಾಗಿದೆ ಬಾಂಬಾಗ ಳನ್ನು ಹಾರಿಸಿ ಗ್ರೀಸ ಸರಕಾರವು ದೊಂಬಿಗಾರರೊ ಡನೆ ಹೋರಾಟ ಮಾಡುತ್ತಿದೆ ದೊಂಬಿಗಾರರು ಸರ ಕಾರದ ವಶವಾಗಲು ಒಪ್ಪುವದಿಲ್ಲ ಇನ್ನೂ ಸರಕಾ ರಕ್ಕೆ ಇದಿರಾಗುತ್ತಿದ್ದಾರೆ. ಗ್ರೀಸ ದೇಶದಲ್ಲಿ ಮುಂಚೆ ಸರ್ವಾಧಿಕಾರ ಪಡೆದ ವೆನಿಝುಲೂಸರವರು ಪುನಃ ಸರಕಾರವನ್ನು ಕೈವಶ ಮಾಡಿಕೊಳ್ಳುವದಕ್ಕಾಗಿ ಈ ಪ್ರಯತ್ನ ನಡಿಸಿದ್ದಾರೆ.

[ಈ ಹೊತ್ತಿನ ಪುರವಣಿ ನೋಡಿರಿ]

ವೃತ್ತಸಾರ.

— ದಿಲ್ಲಿ, ಆಗ್ರಾ, ಮೀರತ್, ರಾಯಬರೇಲಿ ಮೊದ ಲಾದ ಕಡೆ ಕಳೆದ ವಾರ ಭೂಕಂಪವಾಯಿತು ವಿಶೇಷ ಹಾನಿಯಾಗಲಿಲ್ಲ ರಾಯಬರೇಲಿಯಲ್ಲಿ ಮಣ್ಣಿನ ಗೋಡೆಯ ಮನೆಗಳು ಕುಸಿದುಬಿದ್ದವು. ಭೂ ಕಂಪದ ಭಾವನೆಯಾದ ಕೂಡಲೆ ಜನರು ಭಯಭೀತ ರಾಗಿ ಹೊರಬಂದರು

— ಬಂಗಾಲ ಪ್ರಾಂತದಲ್ಲಿ ಸರಕಾರವು ಕೊಮ್ಯುನಿ ಸ್ಟ ಪಂಥದ ಸಂಶಯದ ಮೇಲೆ ೧೩ ಸಂಸ್ಥೆಗಳನ್ನು ಬೇಕಾಯಿದೇಶೀರ ಎಂದು ಜಾಹೀರನಾಮ ಹೊರಡಿ ಸಿದೆ ಆ ಸಂಸ್ಥೆಗಳ ಕಚೇರಿಗಳ ಮೇಲೆ ಪೋಲೀಸರು ಸಾಗಿಹೋಗಿ ಝಡತಿ ಮಾಡಿದರು.

— ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಕಳೆದ ೭ನೇ ತಾರೀಖಿನಿಂದ ಜವಾ-ಖರ್ಚು ಪತ್ರಿಕೆಯ ಮೇಲೆ ವಿವರವಾಗಿ ಚರ್ಚೆಯಾಗಲಾರಂಭಿಸಿದೆ ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ಶ್ರೀ| ಬುಲಾಭಾಯಿಯ ವರು ತಂದ ಉಪಸೂಚನೆ ೨೨ ಮತಾಧಿಕ್ಯದಿಂದ ಕಡಿ ಮೆ ಬಿದ್ದು ಬಿದ್ದುಹೋಯಿತು

— ಪುನಃ ಚಿನ್ನದ ದರ ಏರಿದೆ ತೊಲೆಗೆ ರೂ ೩೬-೩-೦ ಕ್ಕ ಸಹ ದರ ತಲ್ಪಿತು. ಇಂಗ್ಲಂಡ ದೇಶದ ಬೇಂಕುಗಳಲ್ಲಿದ್ದ ತಮ್ಮ ಠೇವನ್ನು ವಿದೇಶೀಯರು ತಿರು ಗಿ ಕೊಳ್ಳಲಾರಂಭಿಸಿದ್ದರಿಂದ ಪವನು ನೋಟಿನ ದರ ಇಳಿಯಿತು ಆದರಿಂದ ಚಿನ್ನದ ದರ ಏರಿದೆ ಈ ಕ್ರಮ ಹೀಗೇ ನಡದಲ್ಲಿ ಚಿನ್ನದ ದರ ಇನ್ನೂ ಏರುವ ದಂತೆ ಈ ತನಕ ದುಡ್ಡಿನ ಆಶೆಗೆ ಚಿನ್ನ ಮಾರದೆ ಇಟ್ಟುಕೊಂಡವರು ಗಾಬರಿ ಮಾಡದೆ ಮತ್ತೂ ಸ್ವಲ್ಪ ನಿರೀ ಕ್ಷೆ ಮಾಡುವದು ಲೇಸು

— ಮಹಾತ್ಮರು ವರ್ಧಾದಿಂದ ತಮ್ಮ ಬಿಡಾರವ ನ್ನು ಕೇಂದ್ರ ಗ್ರಾಮಕ್ಕೆ ಒಯ್ದಿದ್ದಾರೆ. ಇದು ವರ್ಧಾ ದಿಂದ ೧೩ ಮೈಲು ದೂರವಿದ್ದ ಸೃಷ್ಟಿಸೌಂದರ್ಯ ಭರಿತವಾದ ಗ್ರಾಮವಿದು. ಒಳಯಲ್ಲಿ ಸಣ್ಣ ಬೆಟ್ಟ ವಿದೆ ಮಹಾತ್ಮರು ಈ ಸೃಷ್ಟಿಸೌಂದರ್ಯಕ್ಕೆ ಮನ ಸೋತು ಅಲ್ಲಿಯೇ ಉಳಿಯುವ ಸಂಕಲ್ಪ ಮಾಡಿ ರುತ್ತಾರೆ

— ಜರ್ಮನ್ ಸರಕಾರವು ಯಾರಿಗೂ ಕಿತಾಬು ಕೊಡಬಾರದೆಂದು ನಿರ್ಧರಿಸಿದೆ. ಸರಕಾರದ ಸ್ತುತಿ ಪಾಠಕರಿಗೆ ಕಿತಾಬಿನ ಬದಲು ಜರ್ಮನ್ ಸರಕಾರ ವು ಏನು ಕೊಟ್ಟು ಸಮಾಧಾನ ಮಾಡಬಯಸುತ್ತ ದೆಂದು ತಿಳಿಯಲಿಲ್ಲ ಪೂರ್ವಕಾಲದಲ್ಲಿ ಜಹಾಗೀರು, ಹಣ, ಉಡುಗರೆ ಕೊಟ್ಟು ಅರಸರು ಮನ್ನಿಸುತ್ತಿದ್ದ ರು, ಆದರಿಂದ ಸರಕಾರಕ್ಕೆ ಖರ್ಚು ಒದುತ್ತಿತ್ತು. ಈಗಿನ ಕಿತಾಬು ಅರ್ಪಣ ವ್ಯವಸ್ಥೆಯಲ್ಲಿ ಕಡ್ಡ ವ್ಯಯ ದಿಂದ ಸರಕಾರಕ್ಕೆ ಸ್ತುತಿಪಾಠಕರ ವ್ಯವಸ್ಥೆಯಾಗು ತ್ತಿತ್ತು ಇಷ್ಟು ವ್ಯಯ ಸಹ ಜರ್ಮನ್ ಸರಕಾರವು ಮಾಡಬಯಸುವದಿಲ್ಲ. ಇದಕ್ಕೂ ಕಡಿಮೆ ಖರ್ಚಿನ ಶೋಧ ನಡೆದಿರಬೇಕು. ಅದ್ಯಾವದೆಂದು ತಿಳಿಯಲಿಲ್ಲ

— ಮಹಾತ್ಮರಿಗೆ ಎಳೆ ಪ್ರಾಯದ ಒಬ್ಬ ಗಟ್ಟಿಗನು ವರ್ಧಾದಲ್ಲಿ ಭೆಟ್ಟಿಯಾದನು ಊಟದ ಹೊತ್ತಿಗೆ ಆಶ್ರಮಕ್ಕೆ ಹೋಗಿದ್ದನು. ಮಹಾತ್ಮರು ಆತನಿಗೆ ಬಡಿಸಿ ಕಾಯಕಷ್ಟ ಮಾಡದೆ ಉಣ್ಣುವದು ತರವಲ್ಲ ವಾಗಿ ಉಪದೇಶಿಸಿದರು "ಮುಂದೆ ನಾನು ಲೋ ಕೋಪಕಾರ ಮಾಡುವವನಿದ್ದೇನೆ. ಇದೇ ಪ್ರಕಾರ ನಾನು ಲೋಕೋಪಕಾರ ಮಾಡುತ್ತಬಂದಿದ್ದೇನೆ," ಹೀಗೆ ಆತನು ಹೇಳಿ ಆಶ್ರಮದಿಂದ ಹೊರಟುಹೋ ದನು. "ದುಡಿಯದೆ ಧರ್ಮದಿಂದ ಉಣ್ಣುವದು ನಾಚಿಕೆಗೇಡಿತನ" ಹೀಗೆ ಮಹಾತ್ಮರು 'ಹರಿಜನ' ಪತ್ರಿಕೆಯಲ್ಲಿ ಬರೆದು, ಈತನ್ಯಾರೆಂದು ತಮಗೆ ತಿಳಿ ಯಲಿಲ್ಲವಾಗಿ ಪ್ರಕಟಿಸಿದ್ದರು ಹಾಗೆಯೇ ೧ ವಾರ ದಲ್ಲಿ ಆತನು ಆಶ್ರಮಕ್ಕೆ ತಿರುಗಿ ಹೋಗಿ ಕಾಯ ಕಷ್ಟ ಮಾಡಿ ದಿನಾ ೮ ಆಣೆ ದುಡಿಯಹತ್ತಿದ್ದಾನೆ ಖರ್ಚಿಗೆ ತಕ್ಕಷ್ಟು ಹಣ ದುಡಿದ ಬಳಿಕ, ಆತನು ಆಶ್ರಮದಿಂದ ಹೊರಹೋಗಬಹುದಾಗಿ ಮಹಾತ್ಮ ರು ಆತನಿಗೆ ತಿಳಿಸಿದ್ದಾರ

— ಇಟಾಲಿ-ಅಬಿಸೀನಿಯಾ ದೇಶಗಳೊಳಗ ಏನಾ ಯಿತೆಂಬ ನಿಶ್ಚಿತ ವಾರ್ತೆಯೇ ತಿಳಿಯದು ಸಂಧಾ ನವಾಯಿತೆಂದು ಒಂದು ವಾರ್ತೆ, ಇನ್ನೂ ಸೈನ್ಯ ಕಳುಹಲ್ಪಡುತ್ತಿರುವದಾಗಿ ಇನ್ನೊಂದು ವಾರ್ತೆ

ದ್ವಿಗುಣವಾದ ಲಾಭವನ್ನು ಹೊಂದಿರಿ !

ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ !!

ಮಕ್ಕಳ ಲಿವರ ಕಂಪ್ಲೇಂಟು (ಕುರ್ಮುವ್ಯಾಧಿ) ಮತ್ತು ಜ್ವರಗಳಿಗೆ

ಜಮ್ಮಿ ವೆಂಕಟರಮಣಯ್ಯನವರ

ಲಿವರ್ ಕ್ಯೂರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗದುಕೊಳ್ಳಿರಿ !

ಹೆಚ್ಚಿನ ಮಾಹಿತಿಗೆ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು —

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ.)

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಜನವರಿ ತಿಂಗಳಿನಿಂದ ಸುಧಾರಿಕ ವಿಲ್ಲ ಹಳ್ಳಿಗಳಲ್ಲಿ ಮೈಲಿಯ ಉಪದ್ರವ ಒಂದೇ ಸಮನೆ ನಡೆದದೆ. ಮೊನ್ನೆ ಪೋಲೀಸ ಲೈನಿಯಲ್ಲಿ ಮೈಲಿ ಹುಟ್ಟಿದವ ನೊಬ್ಬನು ಕಾಹಿಲೆ ಬಿದ್ದು ತೀರಿಕೊಂಡನೆಂದು ತಿಳಿಯುತ್ತದೆ. ಈ ಕುರಿತು ಮೈಲಿ ಹುಟ್ಟುವ ಇಲಾಖೆಯವರು ಬೇಗನೆ ಮಾಡಬೇಕಾಗಿ ಸೂಚನೆ.

ಇಲ್ಲಿಯ ಡಾ। ಮಂಜ ರಾವ್ ಕಾನಡೆಗ ಇವರು ನಿನ್ನೆ ಮುಂಜಾನೆವಲ್ಲಿ ಅಲ್ಪೋದರ ವಿಕಾರದಿಂದ ತೀರಿಕೊಂಡರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ಎಳೆ ಪ್ರಾಯದವರು, ಸರಳ ಸ್ವಭಾವದವರು ಇಲ್ಲಿಯ ಮ್ಯುನಿಸಿಪಾಲಿಟಿಯ ಸಭಾಸದರಿದ್ದರು. ಇಂಥ ಒಬ್ಬ [illegible] ಅಕಾಲ ಮೃತ್ಯು ಬಂದದ್ದು ಬಹಳ ವಿಷಾದ. [illegible] ಆತ್ಮಕ್ಕೆ ಸದ್ಗತಿ ದೊರೆಯಲಿ!

ಹುಲಿದೇವರ ಗುಡಿಯ ಬಳಿಯ [illegible] ದಲ್ಲಿ ಕಾಲುವೆ ಕಟ್ಟೆಯನ್ನು ಕಟ್ಟಬೇಕೆಂದು ಸರಕಾರದ ನಿಶ್ಚಯವಾಗಿದೆ. ಈ ಕುರಿತು [illegible] ರೂಪಾಯಿ ಈ ವರ್ಷದ ಪ್ರಾಂತಿಕ ಜಮಾ ಖರ್ಚು ಪತ್ರಿಕೆಯಲ್ಲಿ ಮಂಜೂರಾಗಿ ರುವದಾಗಿ ತಿಳಿಯುತ್ತದೆ.

ಇಲ್ಲಿಯ ಕೆಲವು ತರಿಗೆದಾರರು ಮ್ಯುನಿಸಿಪಾಲಿಟಿಯ ಸಭಾಸದರ ಮೇಲೆ [illegible] ದಿಂದ ರೂ ೩೦೦ನ್ನು ಖರ್ಚು ಮಾಡಿದ ಬಗ್ಗೆ ಈ ಕೋರ್ಟಿನಲ್ಲಿ ದಾವೆ ಮಾಡಿದ್ದರು ಎಂದು [illegible] ನಡೆದಿದ್ದರು ಸದರ ಹುಕುಮಿನ ವಿರುದ್ಧ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ದಾಖಲಾದ ಅಪೀಲಿನ ವಿಚಾರವು ಮುಗಿದು [illegible] ಅಪೀಲಿನಲ್ಲಿ ಮ್ಯುನಿಸಿಪಾಲಿಟಿಗೆ ಪಕ್ಷಗಾರರಲ್ಲಿ ಸೇರಿಸದೆ ಇದ್ದ ವಕೀಲರ ಅಪೀಲನ್ನು ಡಿಸ್ಟ್ರಿಕ್ಟ ಜಡ್ಜರಾದ ಮಿ। [illegible] ರವರು ತಿರಸ್ಕರಿಸಿದ್ದಾರೆ. ದಾವೆಯ ಗುಣ ದೋಷಗಳನ್ನು ವಿಚಾರಿಸದೆ ಪ್ರಾಥಮಿಕ ಆಕ್ಷೇಪದ ಮೇಲೆಯೇ ನಿರ್ಣಯಿಸಿದ್ದಾರೆ.

ಮ್ಯುನಿಸಿಪಾಲಿಟಿಯು ತನ್ನ ಮೊದಲಿನ ಕಮಿಟಿಯನ್ನು [illegible] ಆ ಕಮಿಟಿಯ ಸಭೆಗಳಲ್ಲಿ [illegible] ಒಂದ ಬಳಿಕ ಯಾವತ್ತು ಅರ್ಜಿಗಳ ವಿಚಾರ ಸಭೆಯ ಮುಂದೆ ಬರಲು ಯಾವತ್ತೂ ಅರ್ಜಿಗಳು ನಿಕಾಲೆಯಲ್ಲಿ ಬಂದವು. ಈ ತಿದ್ದುಪಡಿಯಂತೆ ತರಿಗೆದಾರರಿಗೆಲ್ಲ [illegible] ಗಳು ಹೊರಡುವವು. [illegible] ದಾರರು ಮಾಡುವ [illegible] ದಾರರ ಕಡೆ ದೃಷ್ಟಿ [illegible] ಅರ್ಜಿಗಳನ್ನು [illegible] ಮಾಡಬೇಕಾಗುವದು. ಮುನಿಸಿಪಲ್ ಕಮಿಟಿಯ [illegible] ರವರು ಮಾಡಲೇ ಬೇಕಾಗಿದ್ದು ಅವರೇ ಈ ಅರ್ಜಿಗಳ ನಿರ್ಣಯ ಕೊಟ್ಟದ್ದರಿಂದ ಅರ್ಜಿದಾರರಿಗೆ ಈ ಅರ್ಜಿಗಳ ವಿಚಾರ ಮಾಡುವುದರಲ್ಲಿ [illegible] ಪ್ರಶ್ನೆ ಮಾಡಿದ್ದಲ್ಲಿ ಪ್ರಯೋಜನ ದೊರೆಯುವದೇನೆಂದು ನಮ್ಮಿಂದು ಪ್ರಶ್ನೆ ಬರಲಿದೆ. [illegible] ಪುನರಾಲೋಚನೆಯ ಅರ್ಜಿಗಳನ್ನು ವಿಚಾರ ಮಾಡಲು ನೇರೊಬ್ಬ ಅಧಿಕಾರಿಗೆ ಅಧಿಕಾರ ಕೊಡತಕ್ಕದು [illegible]

ಶ್ರೀ ಕ್ಷೇತ್ರ ಗೋಕರ್ಣದಲ್ಲಿ ಅಂಕಿತ ಮಹಾಶಿವರಾತ್ರಿ ಜಾತ್ರೆಯು ನೆರವೇರಿತು। ಊರವರಿಗೆ ಈ ಜಾತ್ರೆಯು ಬೇಗನೆ ಮುಗಿದರೆ ಸಾಕೆಂದು ಅನಿಸಿತು। ಊರೊಳಗಿನ ಮೈಲಿ ಬೇನೆಗೆ ಜನರು ಅಷ್ಟು ಹೆದರಲಿಲ್ಲ, ಒಂದ ಬಂದವರಿಗೆ ಜುಲುಮೆಯಿಂದ ಮೈಲಿ ಹಚ್ಚುವ ರಭಸ ನಡೆದದ್ದು ನೋಡಿ ಹಾದಿಯಿಂದಲೂ ಜನರು ಗೋಕರ್ಣಕ್ಕೆ ದೂರದಿಂದಲೇ ನಮಸ್ಕಾರ ಹಾಕಿದರು। ಅನೇಕ ಪರಸ್ಥರು ಮೇಟಾದ ಮೇಲೆ ಅಂಕೋಲೆ ತನಕ ಬಂದು ಹಿಂತಿರುಗಿದರು। ಕೆಲವರು ಬಾವಿಕಟ್ಟೆಯಿಂದ ತಿರುಗಿ ಹೋದರು. ಕೆಲವರಂತೂ ಗೋಕರ್ಣ ಮ್ಯುನಿ ಗಡಿಯವರ ಮುಂದಿನ ತನಕ ಬಂದು, ಅಲ್ಲಿ ನಡೆಯುವ ಗಡಿಬಿಡಿ ನೋಡಿ ಹಿಂದಕ್ಕೆ ತೆರಳಿದರು। ಈ ವರ್ಷ ಬಂದ ಪರಸ್ಥರ ಳಲ್ಲಿ ಹಾದಿಯಾಳುಗಳೇ ಹೆಚ್ಚು. ನೆರೆಹೊರೆಯ ಹಳ್ಳಿಗಳಿಂದ ಯಾರೂ ಗೋಕರ್ಣದ ಹಾದಿಗೆ ಹೋಗಿ ತೋರಿಸಲಿಲ್ಲ. ಇಷ್ಟು ನಿಕೃಷ್ಟ ಜಾತ್ರೆಯು ಹಿಂದೆಂದೂ ಆಗಿದ್ದಿಲ್ಲವೆಂದು ಗೋಕರ್ಣದೊಳಗಿನ ವೃದ್ಧರು ಹೇಳುತ್ತಾರೆ. ಊರವರ

ಗೂ ಯಾತ್ರಿಕರಿಗೂ ಮೈಲಿ ತೆಗೆಯುವದರ ೬–೭ ವರ್ಷದೀಚೆ ಟೀಕೆ ಒಬ್ಬ ಇನ್ಸಪೆಕ್ಟರರೂ ಆರೋಗ್ಯ ರಕ್ಷಣೆ ಇಲಾಖೆಯ ಅನೇಕ [illegible] ಯವರೂ ಆವಿರ್ಭವಿಸಿದ್ದರು. [illegible] ಒಮ್ಮೆಗೆ ಮೈಲಿ ಚುಚ್ಚಿದರು. ಯಾತ್ರಸ್ಥರಿಗೆ ಆದ ಕಷ್ಟಗಳನ್ನು ಬಣ್ಣಿಸುವದಶಕ್ಯ। ಮೈಲಿ ಚುಚ್ಚಿದ ನೋವಿನಿಂದ ನರಳಿಕೊಂಡು ಬೀಳುವ ಪ್ರಸಂಗ ಅನೇಕರಿಗೆ ಬಂತು. ಭಿಕ್ಷುಕರಂತೂ ವಿಕ್ರ ಬೀಡಲಿಕ್ಕೆ ಅಗದೆ ಉಪವಾಸ ಬೀಳಬೇಕಾಯಿತು. ಯಾತ್ರಿಕರ ಸಂಖ್ಯೆ ತೀರ ಕಡಿಮೆಯಾದ್ದರಿಂದ ವ್ಯಾಪಾರ ಕೆಟ್ಟಿತು. ಆದರೆ ಉತ್ಸವವು ಮೈಲಿ ತೆಗೆಯುವ ಹಿಕ್ಮತಿಗೇ ಸಾಕಾಗದೆಂದು ಹೇಳುತ್ತಾರೆ.

ಗೋಕರ್ಣದಿಂದ ಗೋಕರ್ಣ ಮ್ಯುನಿಸಿಪಾಲಿಟಿಯ ಕಾರಭಾರ ಎಂಬ ಲೇಖನವೊಂದು ಕೆಳಗೆ ನಾಗರಿಕರೊಬ್ಬರು ತಿಳಿಸುವದೇನೆಂದರೆ ಊರಲ್ಲಿ ಮೈಲಿ ಬೇನೆಗೆ ಪ್ರಾರಂಭವಾಗಿ ೩ [illegible] ತಿಂಗಳಾದವು. ಆಗ ಮ್ಯುನಿಸಿಪಾಲಿಟಿಯು [illegible] ದ ನಿವಾರಣೆ ಮಾಡಲು ಯತ್ನವನ್ನು ಮಾಡಿದರೆ [illegible] ಶಿವರಾತ್ರಿ [illegible] ಬಂದ ಕಾರಣ ಎಲ್ಲ ಜಾಗೆಗೆ ಬಂದಿದ್ದಾಗಿ ತಲೆದೋರಿ ಉತ್ಸವ ನಡೆಯುತ್ತದೋ ಎಂದು ಗಾಬರಿಪಟ್ಟು ೬–೮ ದಿನ ದಾರಿಗೆ ಬಂದವರನ್ನು [illegible] ಮತ್ತು ಎಲ್ಲ ಜನರಿಗೆ ಮೈಲಿ ತೆಗೆಯುವ ವ್ಯವಸ್ಥೆ ಮಾಡಿತು। ಮೈಲಿ ಬಂದವರನ್ನು ಬೇರೆಯೇ ಇಡುವ [illegible] ಆದರೆ [illegible] ಮ್ಯುನಿಸಿಪಾಲಿಟಿಯವರು ಮಾಡಿದ ವ್ಯವಸ್ಥೆಯು [illegible] ಬರಲಿಲ್ಲ. [illegible] ಅಪೇಕ್ಷೆಯು ಸಫಲವಾಗಲಿಲ್ಲವಂತೆ! ಶಿವರಾತ್ರಿಯ [illegible] ಬಹಳ [illegible] ರದ್ದಿಯಾಗಿ ಬಿದ್ದಿತು.

ಪ। ಕಳೆದ ವರ್ಷ [illegible] ಯಲ್ಲಿ [illegible] ಕಾರಣ ಸಾರ್ವಜನಿಕ ಸ್ಥಳಗಳಲ್ಲಿ [illegible] ಗಳನ್ನು ಹಾಕಬೇಕೆಂಬ ನಿಶ್ಚಯ [illegible] ಗಳನ್ನು ಜಗಳಕ್ಕೆ ಸಿದ್ಧರಾಗಿ [illegible] ಮನೆಗಳಲ್ಲಿ ನಮ್ಮ ಮ್ಯುನಿಸಿಪಾಲಿಟಿಯ ವ್ಯವಸ್ಥೆ [illegible]

ಈಗ ಮ್ಯುನಿ ದೀಪಗಳ ವ್ಯವಸ್ಥೆ [illegible] ದೀಪಗಳು ನಗೆಗೆ ದೊರಕದಂತಾದ [illegible] ಗಳಲ್ಲಿ ದಾರಿಯು [illegible] ಅಗ [illegible] ದಲ್ಲೂ ಕತ್ತಲೆಯ ಸಾಮ್ರಾಜ್ಯ [illegible] ಬರುತ್ತಿದ್ದೆ ಎಂದು [illegible]

ಸಾನಿಕಟ್ಟೆಯಿಂದ ಮೈಲಿ [illegible] ಹಳ್ಳಿಗಳೊಳಗಿನ ಉಪ್ಪಿನ [illegible] ಗಳನ್ನು [illegible] ಎಂಬ ಕಾರಣದಿಂದ ಹಿಂತೆಗೆದುಕೊಳ್ಳಬೇಕಾಯಿತೆಂಬರೂ, ಹಳ್ಳಿಗರು ಪುನಃ ಅರ್ಜಿ ಮಾಡಿದ್ದಲ್ಲಿ ಸ್ಥಾನಿಕ ಅಧಿಕಾರಿಗಳು ಆವು ಗಳ ವಿಚಾರದಿಂದ ನಿರ್ಬಂಧಗಳನ್ನು ತೆಗೆದು ಹಾಕುವ ರೆಂಬಲೂ ಹಿಂದೆ ಪ್ರಕಟವಾದ ಗಾಂಧಿ ಕೆಕ್ಕಾರ ಪತ್ರನ್ನದ ಹಾದಿಯಲ್ಲಿ ಪ್ರಕಟವಾಗಿತ್ತು. ಈ ಪ್ರಕಟಣೆಯ ಮೇರೆಗೆ ಬಾಡದ ಡಾ। ರಾಮ ನಾಯ್ಕರು ಕಾಗಾಲ ಗ್ರಾಮದ ಒಂದು ಸರ್ವೆ ನಂಬರದಲ್ಲಿ ಉಪ್ಪು ಬೇಳಲಿಕ್ಕೆ ಪರವಾನಗಿ ಕೊಡಬೇಕೆಂದು [illegible] ಕಲೆಕ್ಟರ, ಸಾಲ್ಟ ಖಾತೆಯ ಮೇಲಾಧಿಕಾರಿಗಳಿಗೂ ಅರ್ಜಿ ಮಾಡಿದರು. ಅಲ್ಲಿ ಒಪ್ಪಂದದ [illegible] ಗಳಿಗೆ ಯೋಗ್ಯವಾದ [illegible] ಉಪ್ಪು ಬೆಳೆಸಿದ ಬಳಿಕ ಅದಕ್ಕೆ ಕರ ಕೊಡಲೇಬೇಕೆಂದು ಅಪ್ಪಣೆಯಾದರೆ ಅದ ಕೊಡಲಿಕ್ಕೂ ಸಿದ್ಧರಿರುತ್ತೇವಾಗಿಯೂ ಡಾ। [illegible] ಅರಿಕೆ ಮಾಡಿಕೊಂಡಿದ್ದರು. ಪ। ಕಲೆಕ್ಟರರು ಈ ಅರ್ಜಿಗೆ ಕಾರಣದೇ ಉತ್ತರ ನಮೂದಿಸಿದ [illegible] ಕಾಗಾಲ ಗ್ರಾಮದ ಸಾನಿಕಟ್ಟು ಉಪ್ಪಿನ ಆಗರಗಳಿಂದ ಅ ಮೈಲು ಆ ತರ

ದೊಳಗಿರುವ ಕಾರಣ ಪರವಾನಗಿ ಕೊಡತಕ್ಕದ್ದಲ್ಲವೆಂದು ತಿಳಿಸಿದ್ದಾರೆ! ಸಾನಿಕಟ್ಟೆಯು ನೆರೆ ಹೊರೆಯಲ್ಲಿ ಉಪ್ಪು ಬೆಳೆಸಗೊಡಬಾರದೆಂದು ಬಿಲ್ಲಿಯು ಕರಾರದಲ್ಲಿ ಕಲಮಿಲ್ಲ.

ಸಿದ್ದಾಪುರ— ಕೋಂಡ್ಲಿ ಶ್ರೀ ಮಾರಿಯಮ್ಮನವರ ಜಾತ್ರೆಯು ತಾ। ೧೯ ೩–೩೫ ನೇಗೆ ಪ್ರಾರಂಭವಾಗಿ ೮ ದಿನಗಳ ವರೆಗೆ ವಿಜೃಂಭಣೆಯಿಂದ ಸಾಗುವದು.

ಜಾತ್ರೆಯ ವ್ಯವಸ್ಥಾಪಕರು ಶರೀರ ಬಲವರ್ಧನಕ್ಕೆ ಪ್ರೋತ್ಸಾಹನ ಕೊಡುವ ಉದ್ದೇಶದಿಂದ ಕುಸ್ತಿ ಆಡುವವರಿಗೆ ಬೆಳ್ಳಿಯ ಕಡೆ ಮುತ್ತು ಬಕ್ಷೀಸು ಇಟ್ಟಿರುತ್ತಾರೆ.

ಜಾತ್ರೆಯಲ್ಲಿ ಕೋಣ, ಹಂದಿ, ಕುರಿ ಕೋಳಿ ಮುಂತಾದ ಪ್ರಾಣಿಗಳ ವಧೆ ಆಗಬಾರದಾಗಿ ನಿಶ್ಚಯವಾಗಿರುತ್ತದೆಂದು ಜಾಹೀರಪಡಿಸಲಾಗಿದೆ.

ಕಾರವಾರ— ಇಲ್ಲಿಯ ತಾಲೂಕಾ ಪೋಲೀಸ ಲ್ಯಾಮುಗಳೊಳಗಿನ ಹೊಲಸು ನೀರು ಸಂತೆಪೇಟೆಯ ರಸ್ತೆ ಅಂಚಿಗೆ ಬರುವದರಿಂದ ದುರ್ಗಂಧ ಹುಟ್ಟಿ ಆರೋಗ್ಯ ಕೆಡುತ್ತದೆಂದು ಕಳೆದ ವರ್ಷ ಮ್ಯುನಿಸಿಪಾಲಿಟಿಯವರು ಹಾಗೆ ಮಾಡಲು ಪ್ರತಿಬಂಧ ಮಾಡಿದರು. ಅಂದಿನಿಂದ ಪೋಲೀಸ ಖಾತೆಯ ಭಂಗಿ ಇವರು ಆ ನೀರನ್ನು ಅಂಚೆಕಟ್ಟೆಯ ಹಿಂದಿನ ಖಾಡಿ ಕೇರಿಯ ಸಮೀಪ ಕೋಣನಾಲೆಯಲ್ಲಿ (ಹಳ್ಳದೊಳಗೆ) ಬಿಡುತ್ತಿದ್ದರು. ಈಗ ಆ ಹಳ್ಳದ ನೀರು ಹರಿದು ಸಮುದ್ರಕ್ಕೆ ಹೋಗುವ ದಿಲ್ಲ. ಹಳ್ಳದ ಕೊಳಕು ನೀರೊಳಗೆ ದಿನಾಲು ೫–೬ ಪೀಪಾಯಿ ಹೊಲಸು ಕೊಳಕು ನೀರು ಬಂದು ಬೀಳುವದರಿಂದ ದುರ್ಗಂಧವೆದ್ದು, ಹಳ ಕಟ್ಟು ನೆರೆ ಹೊರೆಯವರಿಗೆ ಬಾಧೆಯಾಗಹತ್ತಿತು. ಊರಲ್ಲಿ ಮೊದಲೇ ಜಿಗಟುಗೆಯ ವಿಷಜಂತುಗಳು ಬಹಳ. ಮಾಡಿದ ಅವಕ್ಕೆ ಈ ದುರ್ಗಂಧದ ಪುಟ ಸಿಕ್ಕರೆ ಕೇಳುವದೇನು? ಅದ್ದರಿಂದ ಈ ರೀತಿ ಹಳ್ಳದಲ್ಲಿ ಹೊಲಸು ನೀರು ಬಿಡುವದಂತೆ ಭಂಗಿ ಜನರಿಗೆ ತಿಳಿಸಲು ಪೋಲೀಸ ಫೌಜದಾರರಿಗೆ ತಿಳಿಸಲಾಯಿತು. ಅದಕ್ಕೆ ಫೌಜದಾರರು ಬಹಳ ದಿವಸಗಳಿಂದ ನೀವು ಅಲ್ಲೇ ಚೆಲ್ಲುತ್ತ ಬಂದಿದ್ದೀರಿ " ಅಲ್ಲ ಬೇರೆ ಎಲ್ಲಿ ಚೆಲ್ಲಬೇಕು ? " ಎಂದು ಕೇಳಿದರು. ಜನರಿಗೆ ಇದರಂಥ ಸ್ಥಳದಲ್ಲಿ ಒಯ್ದು ಒಗೆಯಿರಿ. ಹಿಂದೆ ಹಳ್ಳದ ನೀರು ಸಮುದ್ರಕ್ಕೆ ಹರಿದು ಹೋಗುತ್ತಿದ್ದದರಿಂದ ಈ ತನಕ ಜನರ ತಕ್ರಾರು ಇದ್ದಿಲ್ಲ. ಈಗ ನೀರು ಹರಿಯುವದಿಲ್ಲ, ಕಾರಣ ಈಗ ನೀವು ಹೊಲಸು ನೀರು ಆ ಹಳ್ಳದಲ್ಲಿ ಚೆಲ್ಲುವದು ಸರಿಯಲ್ಲ " ಎಂದು ಪುನಃ ಬರೆದು ತಿಳಿಸಲು ಪರಿಣಾಮ [illegible] ಅಧಿಕಾರಿಗಳ ಮುಖಾಂತರ ಹುಕುಮ [illegible] ಮಾಡಲಾಗದೆಂದು ಪತ್ರವನ್ನು [illegible] ತಿಳಿಸಿದರು. ನಂತರ ತಾ। ೩–೩–೧೯೩೫ಕ್ಕೆ ಮ್ಯುನಿಯ ಸನಿಟರಿ ಕಮಿಟಿಯು ಚೇರಮನ್ನರೂ ಮೊಂಕಿಂದ ಕೆಲವು ಗೃಹಸ್ಥರನ್ನು ಸಂಗಡ ಕರಕೊಂಡು ಹಳ್ಳಕ್ಕೆ ಹೋಗಿ, ನೀರ ಎಲ್ಲಿ ಚೆಲ್ಲುತ್ತಾರೆ? ಜನರಿಗೆ ಬಾಧೆಯಾಗುತ್ತದೋ ಹ್ಯಾಗೆ? ಎಂಬ ಬಗ್ಗೆ ಪಂಚನಾಮೆ ಮಾಡತಕ್ಕದೆಂದು ಹಟದಲ್ಲಿ ಫೌಜದಾರರು ಕ್ಯಾಂಪಿನಿಂದ ಅಲ್ಲಿಗೆ ಬಂದು ಅದ್ವಿತೀಯ ಮಾಹಿತಿ ನಡೆದರು। ನಡೆದ ಸಂಗತಿಗಳನ್ನು ಪಂಚನಾಮೆಯ ದಾಖಲೆಯನ್ನೂ ಮ್ಯುನಿಯವರು ಪೋಲೀಸ ಸೂಪರಿಂಟೆಂಡೆಂಟರಿಗೆ ಕಳಿಸಿದ್ದಾರೆ. ಅವರು ಏನು ಮಾಡುತ್ತಾರೆ ನೋಡಬೇಕು.

ರಕ್ತ ಹಿಡಿಗೆ ಮಲ ಮೂತ್ರ ವಿಸರ್ಜನೆ ಮಾಡಲು ಕಟ್ಟಿದ ಪಾಯಖಾನೆ [illegible] ಮಾಡುವ ಪೋಲೀಸರಿಗೆ, ಸಿಪಾಯಿಗಳಿಗೆ ಪ್ರಾಣ ಮೂತ್ರದ ನೀರಿನಿಂದ ಜನರಿಗೆ ಎಷ್ಟು ಬಾಧೆ ಪಡಬೇಕೆಂದು ಗೊತ್ತಿದೆಯೋ? ಮ್ಯುನಿಸಿಪಲ ಅಧಿಕಾರಿಗಳು ಸಾರ್ವಜನಿಕ ಹಿತದ ದೃಷ್ಟಿಯಿಂದ ತಮ್ಮ ಕರ್ತವ್ಯ ಮಾಡಹೋದರೆ ಅವರಿಗೆ ಪೋಲೀಸರ ಅಸಹ್ಯ ದೃಷ್ಟಿಯಿಂದ ನಡೆಯುತ್ತ ಹೋದರೆ ಮೇಲಧಿಕಾರಿಗಳು ಇದರ ಬಗ್ಗೆ ವಿಚಾರ ಮಾಡಬೇಕು.

—————

ಕರಾಚಿ ಪೇಟೆಯ ಧಾರಣೆ.

(ರಾ| ಘಿಂಚಾರ ಮುಕುಂದ ಶೈ, ಕಂಪೆನಿ ಸ್ಟ್ರೀಟ, ಕರಾಚಿ ಇವರಿಂದ)

ತಾ ೬—೩—೧೯೩೫

ಕಾರವಾರ ಜಿಲ್ಹೆಯ ಎಲ್ಲ ಬಂದರಗಳಲ್ಲಿ ಸಾರು, ಹಿಮೆ ಕೂಡ ಮುಟ್ಟ (C I F) ಕೊಡುವ ಧಾರಣೆಗಳು —

ಕಡ್ಲೆ ಹಿಟ್ಟು (೧೯೬ ಪೌಂಡಿನ ಚೀಲ ೧ಕ್ಕೆ) ಕ್ರೌನ ರೂ ೭ ೪—೦, ಸಿರ್ಸಿ ಸ್ಟಾ ರೂ ೬ ೧೪ ೦ ಲೈಟ ರೂ ೬—೯—೦, ಹೆಚ್ಟ ರೂ ೬—೩—೦, ಮಾತೃಭೂಮಿ ರೂ ೬—೫—೦, ಸೂರಜ ರೂಪಾಯಿ ೭—೭—೦, ಕಲವಾರ ರೂ ೬—೯—೦

ಗೋದಿಹಿಟ್ಟು (,,) ತಿಪ್ ರೂ ೯ ೧೩ ೦, ರೋಜ ರೂ ೯—೧೨ ೦, ಕ್ಲೋಟಿಸ್ ರೂ ೯—೭ ೦ ಮಜೂರಿ ರೂ ೯—೧೫—೦, ಮಾತೃಭೂಮಿ ರೂ ೯—೯—೦

ಕಡ್ಲೆ (೨೦೫ ಪೌಂಡಿನ ಚೀಲ ೧ಕ್ಕೆ) ಬ್ರಿಸ್ಟೋಂದ ಸ್ಟೈಕಿಂಗ ರೂ ೭ ೧೦, ಪಾಟ ರೂ ೭—೯ ೦ ಚುಕುಬಾದಿ ರೂ ೭ ೧೩—೦, ಪ್ರಾಯಿಟ ೬ ೦ ೦

ಕಡ್ಲೆ ಬೇಳೆ (,,) ಪಂಜಾಬಿ ರೂ ೬—೧—೦, ಇಸಾಬ ನ ರೂ ೬ ೭ ೦

ಹುಡ್ಡಿನಬೇಳೆ (,,) ರೂ ೧೧ ೧೩—೦

ಹೌಡು (,,) ರೂ ೪—೭—೦

ಸೋಜಾ (,,) ರೋಜ ರೂ ೧೦ ೩ ೦, ತಿಪ್ ರೂ ೧೦—೭—೦, ಕ್ಲೋಟಿಸ್ ರೂ ೯—೧೪ ೦, ಮಾತೃಭೂಮಿ ರೂ ೧೦—೭—೦

ಬಂಗಾರ- ತಯಾರ ೩೬—೬ ೯, ೧ನೇ ವ್ಯಾದೆ ೩೬ ೭ ೯, ೨ನೇ ವ್ಯಾದೆ ೩೬ ೯—೦

ಬೆಳ್ಳಿ ತಯಾರ ೬೪—೬—೦, ೧ನೇ ವ್ಯಾದೆ ೬೧—೧೩—೦, ೨ನೇ ವ್ಯಾದೆ ೬೨ ೨ ೦

Siromani Udipi Narayanacharya

CHAUKHAMBA, BENARES CITY

SUNSCO BENARES CITY

ಮಾಹಾಶಯರೇ, ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಕ್ರಿ. 108ರ ಸರ 1ಕ್ಕೆ 0–6–0 ಯಿಂದ 10 ರೂಪಾಯಿ ವರೆಗೆ ಇದೆ. ಸಣ್ಣದಾಗುತ್ತ ಆಗುತ್ತ, ಕ್ರಯ ಹೆಚ್ಚುವದು ಕಂಠಿ ಸರ 82 ದರ1ಕ್ಕೆ ರೂ 0 8 0ಯಿಂದ ರೂ 100 ವರೆಗೆ. ಗೌರಿಶಂಕರ 1ಕ್ಕೆ ರೂ 3 8 0ರಿಂದ ಆರ ವರೆಗೆ ಮುಟ್ಟ ಬೇರೆ ವಿಷಯಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0ರ ಸ್ಟಾಂಪು ಕಳಿಸಿದರೆ, 1 ಶಾಕಿ ಸಚಿತ್ರ, 1 ಪಿಕ್ಚರಿಸ್ತರ ಪತ ನಮ್ಮ ಶಿಬಿರಾಗದ ಕಳಿಸಲಾಗುವದು.

ಪತ್ತೆ – ಶಿರೋಮಣಿ ನಾರಾಯಣಾಚಾರ್ಯ

ಚೌಕಾಂಬಾ, ಕಾಶೀಕ್ಷೇತ್ರ

ಮಿಣಿಗೆಕಣ್ಣಿಗೆ (Corn) ಮದ್ದು.

ಹತ್ತಾಣೆ ಬಿಲ್ಲೆ ಸ್ಟಾಂಪು ಕಳಿಸಿದರೆ ಕಳಿಸುತ್ತೇವೆ ವ್ಹಿ. ಪಿ ಯಿಂದ ಖರ್ಚ ಹೆಚ್ಚು

ಕಲಬಾಗ ಗಂಗಾಧರ ಎಂಡ್ ಸನ್ಸ,

ಕುಮಟಾ. (ಕಾರವಾರ)

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೇ ಸಂಸ್ಥೆಗೆ ಉತ್ತೇಜನ ಕೊಡಿ!!!

ಪೊಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪೊಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಲಾಭಯೋಗಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ಏ ಸೂ ' ಇಂಡಸ್ಟ್ರಿಯಲ್ ವಿಮೆ ' ಎಂಬ ' ರೂಪಾಯಿ ಪೊಲಿಸಿ ಗಳ ಸುಲಭ ಕಂತಿನ ವಿಮೆಯ ವಿಷಯವ ಗಿ ವಿಚಾರಿಸಿರಿ]

' ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು !

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾಗುವದು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗ ಬರೆಯಬೇಕು ಅಥವಾ

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರ —

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು – ಮೆಸರ್ಸ ಜೀವನ ಏಜನ್ಸಿ, ಕಾರವಾರ

Established 1900 | ಶ್ರೀ | FIXED RATE

ದಾಸಪ್ಪಾ ಕೃಷ್ಣಪ್ಪಾ ಢಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಅರಿವೆ ಅಂಗಡಿ, ಶಿರ್ಸಿ

ನಮ್ಮಲ್ಲಿ ಜೀನ್ಸ್ ಬೇಕಾದ ಜಾತಿಯ ಹೊಸ ಹೊಸ ನಮೂನೆಯ ಸೀರೆಗಳೂ, ತರತರದ ಪತ್ತಲು ರೇಶ್ಮಿಯ ಖಣಗಳೂ ಕೋಟಿಂಗ ಮತ್ತು ಶರ್ಟಿಂಗ ಫ್ಯಾಶನೇಬಲ ಬಟ್ಟೆಗಳೂ ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು, ಅಪ್ಪರ್, ಟೊಪ್ಪಿಗಳೂ, ಪೋತರ ಜೋಡುಗಳೂ, ರೇಶ್ಮೆ ಜಿಲ್ಹರ ಮಡಿಗಳೂ, ನಾರ ಮಡಿಗಳೂ ಮುಂತಾದ ಎಲ್ಲ ತರದ ಜವಳಿಯೂ, ಕಟ್ಟಿಗದ ಮಜಬೂತ ಟ್ರಂಕುಗಳೂ, ಛತ್ರಿಗಳೂ ಮಾರಿ ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಸೂಯಿ ದರದಿಂದ ಸಿಗುವವು ಲೋಕು ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel "Honesty" **D. K DHAKAPPA BROS.,**

ಹೊಸ ಮಾಲು. | Cloth Merchants, SIRSI N KANARA | ದರ ಅಗ್ಗ.

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ. 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಸುವ ಇವೆ ಕಂಪನಿಯ ಹಣವು ಸರಕಾರಿ ಪ್ರೋ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಕೆಳಗಿನ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು

Kumta Agents
D K Nayak Bros
D S Pai
K N. Nayak.
Honavar Agent
R V Prabhu Esq

K. Padmanabha Rao & Sons,
BELGAUM
Chief Agents for
Karnatak Districts & S M States

ಅಲ್ಲಲ್ಲಿ ಇಷ್ಟಿಷ್ಟು !

[೩ನೇ ಪಾನಿನಿಂದ ಮುಂದರಿಸಿದ್ದು.]

ವರೇ ಲೇಸೆಂದು ತುಬಾಕಿಯಿಂದ ಗುಂಡು ಹೊಡ ಕೊಂಡು ಸ್ವರ್ಗಸ್ಥರಾದರು. ಪಠಾಣ [illegible]ರಿಗಿಂತ ಪಠಾಣ ಹೆಂಗಸರು ಮತ್ತೂ ಪ್ರಖರು. ೪ ಜನ ಹೆಂಗಸರು ಕಾದಾಟ ಮಾಡಲಾರಂಭಿಸಿ[illegible] ಗಂಡಸರು ಆ ಗೂಡವೆಗೇ ಹೋಗುವುದಿಲ್ಲ [illegible] ಪಠಾಣರು ಪುಕ್ಕರಲ್ಲ, [illegible], [illegible], ಕಾಲಭೈರವನಂತೆ ಇವರ [illegible]. [illegible]ನ್ಯವಾಗಿ ೬ ಪೂಟಿಗೆ ಕಡಿ[illegible] ಒಬ್ಬರೂ ಇಲ್ಲ. ೧೭೫ ರತ್ತಲು ತೂಕಕ್ಕೆ ಕಡಿಮೆಯಿದ್ದ ಪಠಾಣರಿಲ್ಲ. ಪಠಾಣರು ೧೮೫೭ನೇ ಇಸ್ವಿಯಲ್ಲಿ ಶಿಪಾಯಿ ದಂಗೆಯ ಕಾಲದಲ್ಲಿ ಬ್ರಿಟಿಶ ಸರಕಾರಕ್ಕೆ ಒಳ್ಳೇ ಸಹಾಯಮಾಡಿದ್ದಾರೆ. ಖಾನ ಅಬ್ದುಲ್ಲಗಫ್ಫಾರಖಾನರವರ ದೊಡ್ಡಪ್ಪನವರು ಬ್ರಿಟಿಶ ಸರಕಾರಕ್ಕೆ ಆ ಸಮಯ ಮಾಡಿದ ಉಪಕಾರ ಚಿರಸ್ಮರಣೀಯವಿದೆ. ಇದರ ಮೇಲಿಂದ ಪಠಾಣರ ಸ್ವಾಮಿನಿಷ್ಠೆ ಸಿದ್ಧವಾಗುತ್ತದೆ.

***

ಉತ್ತರ ಹಿಂದುಸ್ಥಾನದಲ್ಲಿ ಕಂಬಳಿ, ರತ್ನಗಂಬಳಿ ಇವು ಹೇರಳ ತಯಾರಾಗುತ್ತಿದ್ದವು. ಅವಕ್ಕೆ ಅವಶ್ಯವುಳ್ಳ ನೂಲನ್ನು ಕೈರಾಟೆಯ ಮೇಲೆಯೇ ನೂಲುತ್ತಿದ್ದರು. ಇವು ಭಾರವಾಗಿದ್ದು ಒಳ್ಳೇ ಬಾಳಿಕೆಯುಳ್ಳವು ಇರುತ್ತವೆ. ಇವನ್ನು ಹೊದ್ದುಕೊಂಡರೆ ಬೆಚ್ಚಗಾಗುತ್ತದೆ; ಚಳಿಯ ಬಾಧೆಯಾಗುವದಿಲ್ಲ. ಇತ್ತಲಾಗಿ ಜಪಾನದಿಂದಲೂ, ಇಟಾಲಿಯಿಂದಲೂ ಇವು ಆಮದಾಗುತ್ತವೆ. ಫ್ರಾನ್ಸ ದೇಶದಿಂದಲೂ, ಇರಾಣ ದೇಶದಿಂದಲೂ ತರತರದ ರತ್ನಗಂಬಳಿಗಳು ಬರುತ್ತವೆ. ಇವು ಅಷ್ಟು ಬಾಳಿಕೆಯುವಲ್ಲ. ತೂಕ ಕಡಿಮೆ. ಆದರೆ ನೋಟಕ್ಕೆ ಚಂದ; ಸ್ಪರ್ಶಕ್ಕೆ ಮಧುರ, ಮೌಲ್ಯ ಅಗ್ಗ ! ಆದರಿಂದ ಜನರು ಇವನ್ನೇ ಕೊಂಡುಕೊಳ್ಳುತ್ತಾರೆ. ಈ ಪ್ರಕಾರ ಉತ್ತರ ಹಿಂದುಸ್ಥಾನದೊಳಗಿನ ಕಂಬಳಿ ಕೈಗಾರಿಕೆಯು ನಾಮಶೇಷವಾಗತೊಡಗಿದೆ. ಇಲ್ಲಿಯ ರತ್ನಗಂಬಳಿಗಳು ರತ್ನಗಳಂತೆಯೇ ಅನೂಲ್ಯವಿವೆ. ಇದ್ದಕ್ಕೆ ಲಂಡನಿನಲ್ಲಿ ಕೂಡಿದ ಸಾಮ್ರಾಜ್ಯ ಕೈಗಾರಿಕೆಯ ಪ್ರದರ್ಶನಕ್ಕೆ ಮೇರಿ ಮಹಾರಾಣಿಯವರು ಆನುಗ್ರಹಿಸಿದ್ದರು. ಅಮೃತಸರದೊಳಗಿನ ಹಸ್ತಕೌಶಲ್ಯದ ಕಂಬಳಿಯನ್ನು ನೋಡಿ ಮನಸೋತು ಒಂದುವರೆ ಸಾವಿರ ರೂಪಾಯಿ ಕೊಟ್ಟು ಕೊಂಡುಕೊಂಡರು. ಭರತಭೂಮಿಯಲ್ಲಿ ಯಾಂತ್ರಿಕ ಯುಗದಲ್ಲಿಯೂ ಹಸ್ತಕೌಶಲ್ಯವು ಬಾಳಿಕೊಂಡಿದೆ ಇದೇ ಹಸ್ತಕೌಶಲ್ಯದ ಯೋಗ್ಯತೆ !

***

ಜಪಾನಿಯರು ಕೈಗಾರಿಕೆಗಳಲ್ಲಿ, ಯಾಂತ್ರಿಕ ಕಲೆಯಲ್ಲಿ ನಿಪುಣರಿದ್ದಾರೆ. ಮೋಟಾರುಗಳ ವ್ಯಾಪಾರವು ಇತ್ತಲಾಗಿ ಒಳ್ಳೇ ರಭಸದಿಂದ ನಡೆಯುತ್ತಿದೆ. ಅಮೇರಿಕಾ, ಬ್ರಿಟನ ಮತ್ತು ಕೆನಡಾ ಈ ಮೂರು ದೇಶಗಳಿಂದ ಮೋಟಾರುಗಳು ಹಿಂದುಸ್ಥಾನದಲ್ಲಿ ಆಮದಾಗುತ್ತವೆ. ಮೋಟಾರು ವ್ಯಾಪಾರದಲ್ಲಿ ಅಮೇರಿಕೆಯವರೇ ಮುಂದುವರಿದವರು. ಅಲ್ಲಿಯ ಮೋಟಾರುಗಳು ಅಗ್ಗವಾಗಿದ್ದು ಬೇಕಾದ ಚಿಕ್ಕ-ದೊಡ್ಡ ಆಕಾರದವು ಸಿಗುತ್ತವೆ. ಕಳೆದ ವರ್ಷ ಅಮೇರಿಕೆಯಿಂದ [illegible] ಮೋಟಾರುಗಳು ಬಂದವು. ಬ್ರಿಟನ್ನಿಂದ [illegible] ಮೋಟಾರುಗಳು ಬಂದವು. ಅಮೇರಿಕೆಯಿಂದ ಬಂದ ಮೋಟಾರುಗಳ ಬೆಲೆ ೩.೦| ಲಕ್ಷ. ಬ್ರಿಟನ್ ದೇಶದಿಂದ ಬಂದ ಮೋಟಾರುಗಳ ಬೆಲೆ ರೂಪಾಯಿ ೬೬||| ಲಕ್ಷ. ಇತ್ತ ಜಪಾನಿಯರೂ ಈ ವ್ಯಾಪಾರದಲ್ಲಿ ಸೇರತೊಡಗಿದಾರೆ. ಆದರೆ ವಿದೇಶಗಳಿಗೆ ರಫ್ತು ಮಾಡುವಷ್ಟು ಮೋಟಾರು ತಯಾರಾಗುವದಿಲ್ಲ. ಕಾರಖಾನೆಗಳನ್ನು ಬೆಳೆಸಿ ತಕ್ಕಷ್ಟು ಮೋಟಾರು ತಯಾರಿಸುವ ತಯಾರಿ ಮಾಡಿರುತ್ತಾರೆ. ಹೊಸ ನಮೂನೆಯ ಮೋಟಾರುಗಳನ್ನು ಅವರು ಕಲ್ಪಿಸಿದ್ದಾರಂತೆ. ಇವು ಗಾಳಿ ಮೋಟಾರುಗಳು. ಇವುಗಳಿಗೆ ಪೆಟ್ರೋಲು ಬೇಡ; ಗಾಳಿಯನ್ನೇ ಮೋಟಾರುಗಳು ಆಕರ್ಷಿಸಿಕೊಂಡು ಪ್ರವರೂಪವನ್ನಾಗಿ ಪರಿಣಮಿಸಿಕೊಳ್ಳುತ್ತವೆ. ಗಾಳಿಯ ದ್ರವವೇ ಗಾಳಿ ಮೋಟಾರಿನ ಪೆಟ್ರೋಲು. [illegible] ಮೋಟಾರುಗಳನ್ನು ನಡೆಸುವಂತೆ. ಗಾಳಿ ಮೋಟಾರುಗಳು ಪ್ರಚಾರದಲ್ಲಿ ಬಂದರೆ ಪೆಟ್ರೋಲು ಮೋಟಾರುಗಳೆಲ್ಲ ಗಾಳಿಗೆ ಬೀಳುತ್ತವೆ. ಯಾವ ಯಾವ ಶೋಧದಿಂದ ಜನರು ಎಲ್ಲೆಲ್ಲಿಗೆ ಮುಟ್ಟುವರೆಂದು ಹೇಳಲು ಸಾಧ್ಯವಿಲ್ಲ.

***

[illegible] ಹೈಕೋರ್ಟಿನಲ್ಲಿ ಸರಕಾರದ ಮೇಲೆ ~ ಲಕ್ಷ ರೂಪಾಯಿಗಳ ದಾವೆ ಹೂಡಿದೆ. ಕಂಟ್ರಾಕ್ಟರರಾಗಿದ್ದ ಅಮೃತಸರದ [illegible] [illegible] [illegible]. ಇವರು ೧೯೩೦ನೇ ಇಸ್ವಿಯಲ್ಲಿ [illegible] ಸರಕಾರದ [illegible]. 'ಸ್ವೈರ ಕಮಾಸಿಮ ಲೋಕ' ಎಂಬ [illegible] ಸಭೆಯ ಅಧ್ಯಕ್ಷರಾಗಿದ್ದರು. ಈ ಸಭೆ ಈಗ [illegible]ವಾಗಿದೆ. ಸ್ವೈರರವರು ದೊಡ್ಡ ಕಂಟ್ರಾಕ್ಟರರು. ಪಂಜಾಬ ಪ್ರಾಂತದ ಅಪ್ಪಲ್ಲಿ ಇವರ [illegible]. ಸರಕಾರದ ಆಜ್ಞೆಯಂತೆ ಡೆಪ್ಯುಟಿ ಕಮೀಶನರರಾದ [illegible] ಕ್ರೇಂಪರರವರು ಸತ್ಯಾಗ್ರಹವನ್ನು [illegible]ಕ್ಕಾಗಿ ಇವರ ಕಡೆ ಬಂದು ಕಂಟ್ರಾಕ್ಟ ಮಾಡಿದರು: "ಸರಕಾರದ ಹೆಸರು ಹಾಳು [illegible] ರಾಜನಿಷ್ಠ [illegible], ಅದಕ್ಕಾಗಿ ತಗಲುವ ಖರ್ಚನ್ನು ಸರಕಾರವು ತೆರಲು [illegible]." ಈ ಪ್ರಕಾರ ಡೆಪ್ಯುಟಿ ಕಮೀಶನರರು ಕೊಟ್ಟ ನಂಬಿಗೆಯಂತೆ 'ಸ್ವೈರ-ಕಮಾಸಿಮ ಲೋಕ' ಎಂಬ ಹಿಂದೀ ಯುವಕ ರಾಜನಿಷ್ಠ ಮಂಡಳವನ್ನು ಸ್ಥಾಪಿಸಿದರು. ಅವಕ್ಕೆ ತಾವೇ ಅಧ್ಯಕ್ಷರಾದರು. ಪಂಜಾಬದ ಗವ್ಹರ್ನರರಾದ ಸರ| ಜೆಂಟಮೋರೆನ್ಸಿಯವರೂ, ಚೀಫ ಸೆಕ್ರೆಟರಿಗಳಾದ ಮಿ| ಗಾರ್ಬೆಟ್‌ರವರೂ, ಡೆಪ್ಯುಟಿ ಕಮೀಶನರರಾದ ಪ್ರೇಡಕ್ರಡರ, ಮಿ| ಕ್ರೆಂಪರರವರೂ ತಿಳಿಸಿದ ಮೇರೆಗೆ ಕಂಟ್ರಾಕ್ಟರರು ಸತ್ಯಾಗ್ರಹ ವಿರೋಧಿ ಜಾಹೀರಾತುಗಳನ್ನೂ, ಜಾಹೀರನಾಮೆಗಳನ್ನೂ, ಹಸ್ತಪತ್ರಿಕೆಗಳನ್ನೂ ತಯಾರಿಸಿ ಅವರ ಅಪ್ಪಣೆಯಂತೆ ಪ್ರಾಂತ ತುಂಬಾ ಹಂಚಿದರು. ಇವುಗಳ ಖರ್ಚನ್ನೆಲ್ಲ ಕಂಟ್ರಾಕ್ಟರರು ಮೊಟ್ಟಮೊದಲು ತೆರಬೇಕೆಂದು ಕರಾರಿತ್ತು; ಅದರಂತೆ ಅವರು ತೆತ್ತಿದ್ದಾರೆ. ಇದಲ್ಲದೆ, ಕಂಟ್ರಾಕ್ಟರರಿಗೆ ದೇಶಬಾಂಧವ ಅಧಿಕಾರಿಗಳೊಡನೆ ಆಲೋಚನೆ ಮಾಡಬಾರದೆಂದೂ, ಅವರ ಗೋಜಿಗೆ ಹೋಗಬಾರದೆಂದೂ ಡೆಪ್ಯುಟಿ ಕಮೀಶನರರು [illegible] [illegible]. ಅದರಂತೆ ಕಂಟ್ರಾಕ್ಟರರು ಹಿಂದೀ ಅಧಿಕಾರಿಗಳಿಗೆ, ಅಷ್ಟು ಇಷ್ಟು- ವಿ ತ್ರು-ಬಂಧು [illegible]ಧವರಿಗೆ ಆದಷ್ಟರ ಮಟ್ಟಿಗೆ ದೂರ ಮಾಡಿ ವರ್ತಿಸಿದರು. ಹಿಂದೀ ಅಧಿಕಾರಿಗಳೂ, ದೇಶಬಾಂಧವರೂ ಇವರಿಗೆ ಪರಿಪರಿ ದಣಿಸಿದರು. ಇಷ್ಟು ಮಾಡಿಯೂ, ಸರಕಾರದ ನಿಷ್ಠೆಯಿಂದ ಕಂಟ್ರಾಕ್ಟರರು ನಡೆದಾಗ್ಯೂ ಪೋಲೀಸರು ಅವರ ಮೇಲೆ ಸಂಶಯ ಹಿಡಿದು ಫಕ್ಕನೆ ಇವರ ಮನೆ ಝಡತಿಮಾಡಿ ಸರಕಾರಿ ಅಧಿಕಾರಿಗಳ ಕೆಲ ಗುಪ್ತ ಪತ್ರಗಳಿದ್ದ ಗಂಟುಗಳನ್ನು ಜಪ್ತ ಮಾಡಿ ಒಯ್ದರು. ಈ ವರೆಗೆ ತಿರುಗಿ ಅವು ಕಂಟ್ರಾಕ್ಟರರ ಕೈಸೇರಲಿಲ್ಲ. ಸತ್ಯಾಗ್ರಹ ವಿರೋಧಕ್ಕಾಗಿ ನಡಿಸಿದ ಚಳವಳಿಯ ಖರ್ಚು ರೂ. ೧ ಲಕ್ಷ, ಅದಕ್ಕಾಗಿ ಈ ದಾವೆ. ಸರಕಾರಿ ಅಧಿಕಾರಿಗಳ ಬಂಡು ಈ ದಾವೆಯಿಂದ ಹೊರಬಿತ್ತೆಂದು ಪತ್ರಿಕೆಗಳು ಟೀಕಿಸುತ್ತವೆ.

***

ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಜಮಾ-ಖರ್ಚು ಪತ್ರಿಕೆಯ ಚರ್ಚೆ ನಡೆದಿದೆ. ಕೆಲವರು ಸರಕಾರದ ಸೈನ್ಯ ಖರ್ಚನ್ನು ಟೀಕಿಸುತ್ತಾರೆ. ಕೆಲವರು ಆಡಳಿತೆಯ ಖರ್ಚನ್ನು ಟೀಕಿಸುತ್ತಾರೆ; ಕೆಲವರು ಸರಕಾರಿ ಅಧಿಕಾರಿಗಳ ಸಂಬಳ-ಕತ್ತರಿಯನ್ನು ಮೂರಪಡಿಸಿ ಖರ್ಚು ಬೆಳೆಸಿ ಪ್ರಜೆಗಳ ಮೇಲಿನ ತೆರಿಗೆಯ ಹೊರೆಯನ್ನು ಇಳಿಸದಿದ್ದದ್ದಕ್ಕಾಗಿ ಸರಕಾರಕ್ಕೆ ಹಳಿಯುತ್ತಾರೆ. ಆದರೆ ಗಡಿನಾಡಿನ ಪರವಾಗಿ ಸಭಾಸದರಾದ ಡಾಕ್ಟರ ಖಾನ ಸಾಹೇಬರು ಕೆಲ ಸರಕಾರಿ ಅಧಿಕಾರಿಗಳ ಮೇಲೆ ಭಯಂಕರ ಆರೋಪ ಹೊರಿಸಿದರು: "ಗಡಿನಾಡಿನಲ್ಲಿ ನಡೆಯುತ್ತಿರುವ ನೀತಿಭ್ರಷ್ಟ ದುರಾಚಾರಗಳನ್ನೂ, ಅಧಿಕಾರಿಗಳ ಲಂಚಗೂಳತನವನ್ನೂ ನಾನು ಬೈಲಿಗೆ ಹಾಕಲೇಬೇಕು. ನನಗೆ ಈ ಕೌನ್ಸಿಲಿನೊಳಗಿಂದ ಆ ಬಗ್ಗೆ ಹೊರಹಾಕಿದರೂ ಪರವೆಯಿಲ್ಲ." ಈ ಪ್ರಕಾರ ಖಾನ ಸಾಹೇಬರು ಸಾತ್ವಿಕ ಸಂತಾಪದಿಂದ ನಿಷ್ಕಪಟರಾಗಿ ಧೈರ್ಯದಿಂದ ಹೇಳಿದರು. ಡಾ| ಖಾನ ಸಾಹೇಬರ ಆರೋಪವೇನಂದರೆ:— "ಗಡಿನಾಡಿನಲ್ಲಿ ಲಾಗಿಬಂಡಿಯು. ಅಧಿಕಾರಿಗಳು ಆರಳೆ ಗಂಟು ರಫ್ತು ಮಾಡಬೇಕಾದರೆ ಲಂಚ ಕೊಳ್ಳುತ್ತಾರೆ. ವಸೂಲಾದ ಲಂಚದ ರಕಮು ಲಾಗಿಬಂಡಿಯ ಅಧಿಕಾರಿಗಳೊಳಗೆ ಅವರವರ ಸಂಬಳದ ಮಾನದಿಂದ ಹಂಚಿ ಹೋಗುತ್ತದೆ; ಹೆಚ್ಚಿನ ಪಗಾರದವರಿಗೆ ಹೆಚ್ಚು, ಕಡಿಮೆ ಪಗಾರದವರಿಗೆ ಕಡಿಮೆ. ಚಿಕ್ಕ ಪುಟ್ಟ ಸ್ಟೇಶನ್ ಮಾಸ್ತರರು ವರ್ಷ-ವರ್ಷಕ್ಕೆ [illegible] ೧೦ಕ್ಕೆ ಕಡಿಮೆಯಾಗದಂತೆ ಸಂಪಾದನೆ ಮಾಡುತ್ತಾರೆ. ಲಂಚಿನ ಗಳಿಕೆ ಯಾವತ್ತೂ ಬ್ರಿಟಿಶ ಅಧಿಕಾರಿಗಳಿಗೆ ಗೊತ್ತಿದೆ. ಇಗ್ಗ ಜಿಲ್ಲೆಯಲ್ಲಿ ೫ ರೂಪಾಯಿ ಸಂಬಳದ ಮೇಲಿದ್ದ ಪೇದೆಯು ಗಡಿನಾಡಿನ ಪ್ರಾಂತಿಕ ಸರಕಾರದ ಪ್ರಚಾರ ಇಲಾಖೆಯ ಮುಖ್ಯಸ್ಥನಾಗಿದ್ದಾನೆ. ಬಹಾವಲಪುರ ಗ್ರಾಮದಲ್ಲಿ ಅಧಿಕಾರಿಗಳು ಭೂಮಿ ಕೊಂಡು ಅರಮನೆಗಳನ್ನು ಕಟ್ಟಿಸಿದ್ದಾರೆ. ಈ ಐಶ್ವರ್ಯವೆಲ್ಲ ಎಲ್ಲಿಂದ ಬಂತು? ದೊಡ್ಡ ಆಫೀಸರರಾದ ಸರ್ ಪಿಯರ್ಸನವರು ಮೋಟಾರ ಅಪಘಾತದಿಂದ ಸದ್ಯಕ್ಕೆ [illegible]. ಅವರ ಕಡೆಗಿದ್ದ ಕಾಗದ-ಪತ್ರಗಳ ಎರಡು ಫೈಲುಗಳು ಕಾಣೆ ! ಗಡಿನಾಡಿನೊಳಗಿನ ಸ್ಥಿತಿಯಿದು !" ಈ ಆರೋಪಗಳು ಸರಕಾರದಿಂದ ಅಲ್ಲಗಳೆಯಲ್ಪಡಲಿಲ್ಲ. ಈ ಸಂಗತಿಗಳನ್ನು ಕೇಳಿ ಎಲ್ಲರೂ ಚಕಿತರಾಗಿದ್ದಾರೆ. ಸರಕಾರವು ಪ್ರಕಟಣೆ ಹೊರಡಿಸಿ ತನ್ನ ಹೇಳಿಕೆಯನ್ನು ಜನರಿಗೆ ತಿಳಿಸುವದು ಉತ್ತಮ. ಇಲ್ಲದಿದ್ದರೆ ತಪ್ಪು ಗ್ರಹಿಕೆಗೆ ಕಾರಣವಾದೀತು.

***

ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸೈನ್ಯ ಇಲಾಖೆಯ ಕಾರ್ಯದರ್ಶಿಗಳಾದ ಮಿ|| ಟೋಟನ್‌ಹೆಮ್‌ರವರಿಗೆ ಮಂಗಳವಾರ ಒಳ್ಳೇ ಸಂಕಟವು ಬಂದು ಹೋಯಿತು !! ಹಿಂದುಸ್ಥಾನ ಸರಕಾರವು ಸೈನ್ಯ ಇಲಾಖೆಯಲ್ಲಿ ಹಿಂದೀಯರನ್ನು ಹೆಚ್ಚಾಗಿ ಸೇರಿಸಿಕೊಳ್ಳುತ್ತೇವೆ ಎಂದು ವಚನ ಮಾತ್ರ ಕೊಡುತ್ತದೆ, ವಚನದಂತೆ ಮಾತ್ರ ನಡೆಯುವದಿಲ್ಲ; ಹೀಗೆ ಸಭಾಸದರು ಸರಕಾರದ ಮೇಲೆ ಆರೋಪ ಹೊರಿಸಿ ಕಾರ್ಯದರ್ಶಿಗಳಿಗೆ ಒಂದರ ಹಿಂದೊಂದು ಪ್ರಶ್ನೆ ಕೇಳಲಾರಂಭಿಸಿದರು. ಕಾರ್ಯದರ್ಶಿಗಳಿಗೆ ಸಮರ್ಪಕ ಉತ್ತರ ಕೊಡಬರಲಿಲ್ಲ. ಕೊನೆಗೆ ರೇಗಿಗೆದ್ದು ನುಡಿದದ್ದೇನಂದರೆ:— ಸೈನ್ಯ ಇಲಾಖೆಯನ್ನು ಸಂಪೂರ್ಣವಾಗಿ ಹಿಂದೀಕರಿಸಲು ಎಷ್ಟಕ್ಕೂ ಸಾಧ್ಯವಿಲ್ಲ. ಈ ಸಂಗತಿ ಹುಟ್ಟು ಮೂರ್ಖರಿಗೆ ತಿಳಿಯದು. ಹಿಂದುಸ್ಥಾನದಲ್ಲಿ ಹಿಂದೀ ಸೈನ್ಯವಿಡಬರುವದಿಲ್ಲವಾಗಿ ವಾದಿಸುವ ಕಾರ್ಯದರ್ಶಿಗಳು ಹುಟ್ಟು ಮೂರ್ಖರೋ, ಹುಟ್ಟು ಶಕ್ಕರೋ ? ಬ್ರಿಟಿಶ ದೇಶದಲ್ಲಿ ಜರ್ಮನ್ ಸೈನ್ಯವಿಡಬರುತ್ತದೇನು ? ಬ್ರಿಟಿಶ ದೇಶದಲ್ಲಿ ಬ್ರಿಟಿಶ ಸೈನ್ಯವಿಡುವದು ಜಾಣತನವಾದರೆ, ದೇಶಾಭಿಮಾನವಾದರೆ ಹಿಂದುಸ್ಥಾನದಲ್ಲಿ ಹಿಂದೀ ಸೈನ್ಯವಿಡಹೋಗುವದು ದಡ್ಡತನವಾದೀತೇನು ? ಹಿಂದೀ ಸೈನ್ಯವಿಡುವದು ಅಶಕ್ಯವಾದರೆ, ಅನ್ಯವಹಾರ್ಯವಾದರೆ ಸರಕಾರವು ಹಿಂದೀ ಸೈನ್ಯವನ್ನು ಇಡಬಯಸುತ್ತವಾಗಿ ವಚನ ಕೊಟ್ಟದ್ದೇಕೆ ?

* * *

ಮುಂಬಯಿ ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ಸರಕಾರದ ಅಬಕಾರಿ ಧೋರಣವನ್ನು ಕೆಲ ಸಭಾಸದರು ಬಲವಾಗಿ ಟೀಕಿಸಿದರು. ಮದ್ಯಪಾನ ವ್ಯಾಪಾರವನ್ನು ಕ್ರಮವಾಗಿ ತಗ್ಗಿಸಬಯಸುತ್ತೇವೆಂದು ಸರಕಾರವು ಜಾಹೀರನಾಮೆ ಹೊರಡಿಸಿ ಕೆಲ ಕಾಲವಾಯಿತು. ಮದ್ಯಪಾನವನ್ನು ತಗ್ಗಿಸುವ ನೂತನ ಮನ್ವಂತರದಲ್ಲಿ ಅಂಗಡಿಗಳ ಸಂಖ್ಯೆಯೂ, ಮದ್ಯವಿಕ್ರಿಯ ಪರಿಮಾಣವೂ ಹೆಚ್ಚಿತೆಂದು ಸಭಾಸದರು ಆಕ್ಷೇಪಿಸಿದರು. ದೇವಸ್ಥಾನಗಳ ಬಳಿ, ಚಿಕ್ಕಮಕ್ಕಳ ಶಾಲೆಗಳ ಬಳಿ ಮದ್ಯದಂಗಡಿಗಳ ಸ್ಥಾಪನೆಯಾಯಿತೆಂದು ಸಭಾಸದರು ದೂರಿಕೊಂಡರು. "ಮದ್ಯದಿಂದ ಅಹಿತವಾಗುವದಿಲ್ಲ; ಮಿತಿಯಿಂದ ಮದ್ಯ ಕುಡಿದರೆ ಅದರಿಂದ ದೇಹಪುಷ್ಟಿಯಾಗುತ್ತದೆ;" ಎಂಬದಾಗಿ ಸಭಾಸದರಾದ ಡಾ|| ಡಿಸೋಜಾರವರು ಡಾಕ್ಟರಿ ಅಭಿಪ್ರಾಯ ಕೊಟ್ಟರು. ದಕ್ಷಿಣ ಭಾಗದ ಕಮಿಶನರರಾದ ಮಿ|| ಕ್ಲೇಟನ್‌ರವರು ದಣಿದು ಬಂದ ರೈತರಿಗೆ ಮದ್ಯಪಾನದಿಂದ ಉಪಕಾರವಾಗುತ್ತದೆಂದರು." ಮುಂಬಯಿಯ ನಾಮಾಂಕಿತ ಡಾಕ್ಟರರಾದ ಡಾ|| ಗಿಲ್ಡರರವರು ಸರಕಾರದ ವಕೀಲಿಯನ್ನು ಒಳಿತಾಗಿ ಖಂಡಿಸಿದರು ! " ಅಂಗಡಿಗಳನ್ನು ಮುಚ್ಚಹೇಳಿದರೆ ಸರಕಾರವು ಕಳ್ಳತನದಿಂದ ಮದ್ಯ ವ್ಯಾಪಾರವಾಗುತ್ತದಾಗಿ ದೂರು ಹೇಳುತ್ತದೆ; ಮದ್ಯವ್ಯಾಪಾರ ಬೆಳೆದರೆ ಬೇಸಾಯಗಾರರ ಸಂಪತ್ತು ಬೆಳೆಯಿತಾಗಿ ವಾದಿಸುತ್ತದೆ. ಮದ್ಯದ ವ್ಯಾಪಾರವು ೧೯೦೫ನೇ ಇಸ್ವಿಯಿಂದ ೧೯೩೩ನೇ ಇಸ್ವಿಯ ವರೆಗೆ ಕ್ರಮವಾಗಿ ಬೆಳೆಯುತ್ತಲಿದೆ. ಮದ್ಯಪಾನೋಚ್ಚಾಟನದ ಫಲವೆಂದರೆ, ಮದ್ಯದಂಗಡಿಗಳ ವಿಪುಲತೆ, ಕಳ್ಳತನದಿಂದ ಮದ್ಯವ್ಯಾಪಾರವಾಗುತ್ತದೆಂದು ಪ್ರತಿಪಾದಿಸುವದು ಅಬಕಾರಿ ಖಾತೆಗೆ ಭೂಷಣವಲ್ಲ. ಅಬಕಾರಿ ಖಾತೆಯವರು ಕರ್ತವ್ಯದಕ್ಷರಲ್ಲವಾಗಿ ಇದರಿಂದ ಸಿದ್ಧವಾಗುತ್ತದೆ. ಮದ್ಯ ಇಲಾಖೆಯವರು ಕೌನ್ಸಿಲು ಠರಾವುಗಳ ಪರಿವೆ ಹಿಡಿಯುವದಿಲ್ಲ, ತಮ್ಮ ಮೇಲಾಧಿಕಾರಿಗಳ ಹುಕುಮುಗಳನ್ನೂ ಲೆಕ್ಕಿಸುವದಿಲ್ಲ." ಈ ಪ್ರಕಾರ ಚರ್ಚೆ ನಡೆಯಿತು. ದಿವಾಣರಾದ ದಿವಾಣ ಬಹಾದ್ದೂರ ಕಾಂಬಳೆಯವರು ಸರಕಾರದ ವಕೀಲಿಯನ್ನು ನಡಿಸಿದರು. ಸರಕಾರವು ಕ್ಲಪ್ತ ಕಾಲದಲ್ಲಿ ಮದ್ಯಪಾನೋಚ್ಚಾಟನ ಮಾಡುತ್ತದಾಗಿ ವಚನ ಕೊಟ್ಟಿಲ್ಲವಾಗಿ ಹೇಳಿ, ಸರಕಾರವು ಕೊಟ್ಟ ವಚನದಂತೆ ನಡೆಯುತ್ತವಾಗಿ ಧ್ವನಿಸಿದರು. ನಮಿಸ್ಕಾ ಜಿಲ್ಹೆಯ ಮಾಸ್ಕೀರಿ ಗ್ರಾಮದ ಬ್ರಾಹ್ಮಣರೊಬ್ಬರು ಕಳ್ಳಾಟಿಕೆಯಿಂದ ಮದ್ಯ ವ್ಯಾಪಾರ ನಡಿಸಿದರಾಗಿ ಹೇಳಿ ಸರಕಾರದ ಮದ್ಯ ವ್ಯಾಪಾರವನ್ನು ಸಮರ್ಥಿಸಲೆಳಸಿದರು. ಮುಳುಗುವ ಮನುಷ್ಯನು ಹೊಳೆಯಲ್ಲಿ ತೇಲಿಹೋಗುವ ಕಸ-ಕಡ್ಡಿಗೆ ಕೈಯೊಡ್ಡುವಂತೆ ಈ ವಕೀಲಿ ನಡೆಯಿತು !!

* * *

ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಭೂಕಂದಾಯದ ಸರಕಾರಿ ಧೋರಣವನ್ನು ಟೀಕಿಸುವಾಗ ನಡೆದ ಪ್ರಕಾರಗಳನ್ನು ತಿಳಿಸುವದುತ್ತಮ. ಸರಕಾರಿ ಧೋರಣವನ್ನು ಟೀಕಿಸಿ ೪೧ ಉಪಸೂಚನೆಗಳು ಸೂಚಿಸಲ್ಪಟ್ಟಿದ್ದವು. ಯಾವತ್ತೂ ಸಭಾಸದರು ಆಲೋಚನೆ ಮಾಡಿ ಯಾವದೊಂದು ಸೂಚನೆಯನ್ನು ಸೂಚಿಸಬೇಕಾಗಿಯೂ, ಆ ಸೂಚನೆಗೆ ಎಲ್ಲರೂ ಬೆಂಬಲ ಕೊಡಬೇಕಾಗಿಯೂ ಆಲೋಚನೆಯಾದಂತೆ ಈ ಜಿಲ್ಹೆಯ ಸಭಾಸದರಾದ ರಾ|| ಗಂಗೊಳ್ಳಿಯವರ ಉಪಸೂಚನೆಯ ಮೇಲೆ ಚರ್ಚೆ ನಡೆಯಿತು. ಸರಕಾರವು ರೈತರಿಗೆ ತಕ್ಕಷ್ಟು ಅನುಕೂಲತೆಗಳನ್ನು ಪೂರೈಸುವದಿಲ್ಲ; ಪ್ರತಿ ವರ್ಷ ಅಪರಿಂದ ತೀರ್ವೆ ವಸೂಲಾಗುತ್ತದೆ; ಈ ತೀರ್ವೆ ವಸೂಲಿಯ ಧೋರಣ ಸರಿಯಲ್ಲ; ಈ ಇಲಾಖೆಯಲ್ಲಿ ತೀರ್ವೆಯ ಮಾನ ಹೆಚ್ಚಿದೆ; ಬಿಹಾರ ಪ್ರಾಂತದಲ್ಲಿ ಸರಾಸರಿ ಎಕರೆಗೆ ೮ ಆಣೆ ಬಿದ್ದರೆ ಈ ಇಲಾಖೆಯಲ್ಲಿ ೨|| ರೂಪಾಯಿ ಬೀಳುತ್ತದೆ. ಸರಕಾರದ ಖರ್ಚಿನ ಮಾನವು ವಿಪರೀತ. ಮದ್ರಾಸ ಪ್ರಾಂತದಲ್ಲಿ ಅರ್ಥಾಣೆಯೊಳಗೆ ಆಗುವ ಕೆಲಸಕ್ಕೆ ಮುಂಬಯಿ ಇಲಾಖೆಯಲ್ಲಿ ೨ ಆಣೆ ಖರ್ಚಾಗುತ್ತವೆ. ಪುಣೆಯೊಳಗಿನ 'ಬಂಡ ಉಪವನ'ದಲ್ಲಿ ಕಸದ ಚರಂಡಿಗಳನ್ನಿಡಲು ೧ ಲಕ್ಷ ರೂಪಾಯಿ ಮಂಜೂರಾಗಿವೆ. ಅದೇ ಸರಕಾರವು ಲೋಕಹಿತ ಕಾರ್ಯಕ್ಕೆ ತಗುಲುವ ೧೪೦೦ ರೂಪಾಯಿಗಳ ದ್ರವ್ಯಸಹಾಯವನ್ನು ಹಣದ ಅಡಚಣೆಯ ಮೂಲಕ ಕತ್ತರಿಸಿ ಬಿಟ್ಟಿದೆ. ಚಿನ್ನದ ಮೊಟ್ಟೆಯನ್ನಿಡುವ ಹೇಂಟೆಗೆ ಕೊಂದುಹಾಕಬೇಡಿರೆಂದು ಅವರು ಪ್ರತಿಪಾದಿಸಿದರು. ಆದಾಗ್ಯೂ ಠರಾವು ರದ್ದಾಯಿತು. ಸರಕಾರವು ಕೆಲ ಸಭಾಸದರಿಗೆ ಬುದ್ಧಿ ಹೇಳಿ ಈ ಉಪಸೂಚನೆಗೆ ಮತ ಕೊಡದಂತೆ ಮನವೊಲಿಸಿತಾಗಿ ಕಾಯಿದೆ ಕೌನ್ಸಿಲಿನ ಸಭಾಸದರಾದ ಸಿಂಧದ ರಾ|| ಗಜಧರರವರು 'ಮುಂಬಯಿ ಕ್ರೊನಿಕಲ್' ಪತ್ರಿಕೆಯಲ್ಲಿ ಬರೆಯುತ್ತಾರೆ. ಸರಕಾರವು ತೀರ್ವೆ ಆಕರಿಸುವ ನಮೂನೆಯನ್ನೂ ಅವರು ವರ್ಣಿಸಿದ್ದಾರೆ. ಸಿಂಧ ಪ್ರಾಂತದಲ್ಲಿ ಸರಕಾರವು ಉತ್ಪನ್ನದ ಶೇಕಡಾ ೪೦ರಷ್ಟು ಭಾಗವನ್ನು ಕೊಳ್ಳುತ್ತದಾಗಿ ಸರಕಾರವು ಹೇಳುತ್ತದೆ, ನಿಜವಾಗಿ ಇದು ೮೦ರಂತೆ ಬೀಳುತ್ತದೆ. ತೀರ್ವೆ ಆಕರಿಸುವಾಗ ೧೯೩೦ನೇ ಇಸ್ವಿಯಲ್ಲಿ ಸರಕಾರವು ಜವೆಗೋದಿ ಮತ್ತು ಗೋದಿ ಇವುಗಳ ದರವನ್ನು ಅನುಕ್ರಮವಾಗಿ ರೂ. ೩|-೪|| ಯಂತೆ ಹಿಡಿದು ತೀರ್ವೆ ಆಕರಿಸಿತು. ನಿಜವಾಗಿ ಆಗ ಅನುಕ್ರಮವಾಗಿ ರೂ. ೩-೫-೦ ಮತ್ತು ೩-೨-೨ ಹೀಗೆ ದರವಿತ್ತು; ಈಗ ಆ ದರವೂ ಇಲ್ಲ. ಅನುಕ್ರಮವಾಗಿ ರೂ. ೧||-೨ ದರವಿದೆ. ಪಂಜಾಬಸರಕಾರವು ಶೇಕಡಾ ೨೫ರಂತೆ ರಾಜಾರ್ಥ ಕೊಳ್ಳುತ್ತದೆ. ಅಷ್ಟೇ ಅನುಕೂಲತೆಗಳಿದ್ದ ಸಿಂಧ ಪ್ರಾಂತದಲ್ಲಿ ಸರಕಾರವು ಶೇಕಡಾ ೪೦ರಂತೆ ಕೊಳ್ಳುವದೂ, ಆ ಕಾಲದಲ್ಲಿ ಕಾಳು-ಕಡಿಯ ದರಗಳನ್ನು ಹೆಚ್ಚು ಹಿಡಿಯುವದೂ ಅನ್ಯಾಯವಿದೆ. ಒಂದು ಸಂಗತಿ ನಮೂದಿಸಲು ಆನಂದವಾಗುತ್ತದೆ: ಸರಕಾರವು ಸಹಾನುಭೂತಿಯಿಂದ ರೈತರ ಹಿತ ಮಾಡಬಯಸುತ್ತದೆ; ಭೂಕಂದಾಯದ ಧೋರಣವನ್ನು ತಿದ್ದುಪಡಿ ಮಾಡಬಯಸುತ್ತದೆ. ಕಾಳು-ಕಡಿಗಳ ದರದ ಏರಿಳಿತದಂತೆ, ತೀರ್ವೆಯಲ್ಲಿ ತಿದ್ದುಪಡಿಯಾಗುವಂತೆ ಏರ್ಪಾಟನ್ನು ಮಾಡುವ ಆಲೋಚನೆಯಲ್ಲಿರುವದಾಗಿ ಮಧ್ಯ ಭಾಗದ ಕಮಿಶನರರಾದ ಮಿ|| ಮೆಕ್ಕಿಯವರು ಉದ್ಗರಿಸಿದರು ! ಸರಕಾರವು ಶೀಘ್ರವೇ ಈ ಆಲೋಚನೆಯನ್ನು ಅಮಲಿನಲ್ಲಿ ತಂದು ರೈತರಿಗೆ ಉಪಕಾರ ಮಾಡಬೇಕು.

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿ

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಲಕ್ಷ್ಮೀ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಪಾವಡರ ಟೀಸೆ ಕ್ಷುಲ್ಲಕ ಕೇಳಲಾರದೇಕು.

ಬುದ್ಧಿ ಒಂದಕ್ಕೆ ಕ್ರಯ ರೂ. ०-४-०, ವ್ಹಿ.ಪಿ. ४ ಆಣೆ ಡಜನ್ ೧ ಕ್ಕೆ ರೂ. ३-०-०. ವಿ. ಪಿ. ०-८-०.

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:-ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ.ಬಾ. ೫೧೦, ಪಾರ್ಕಟೌನ, ಮದರಾಸ.

'दशमूलारिष्ट.'
'ದಶಮೂಲಾರಿಷ್ಟ'

ಇದ ಬಹುತರವಾಗಿ ಎಲ್ಲ ಆರ್ಯ ವೈದ್ಯರಿಗೂ ಹಾಗೂ ಎಲ್ಲಾ ಔಷಧಾಲಯಗಳಲ್ಲೂ ಸಿಗುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಾಣದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಅದರ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಹೋಗಲಾಡಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ (ವಾತ, ಕ್ಷಯ, ವಾಂತಿ,) ಕಾಮಿಲೆ ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಶ್ಮರಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಶುಚಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ಪಚನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆ ಶೂಲಿ ಮುಂತಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗುತ್ತದೆ.

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೫ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ಆರೋಗ್ಯವತಿಯಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೬ ಔನ್ಸ ಬಾಟ್ಲಿಗೆ ರೂ ೧—೪—೦
„ ಬಾಟ್ಲಿ ೬ಕ್ಕೆ ರೂ [illegible]—೦
„ ಬಾಟ್ಲಿ ೧೨ಕ್ಕೆ ರೂ ೧೪—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ.—

ಪಿ. ಅಚ್ಯುತ ಪಂಡಿತ,
ಮಾಲಕ,
ಆರ್ಯಧನ್ವಂತರಿ ಔಷಧಾಲಯ,
ಪೋಸ್ಟ — **ಕುಮಟಾ.** (ಉ. ಕನ್ನಡ)

॥ ಶ್ರೀರಾಮ ಪ್ರಸನ್ನ ॥

ಡಾ॥ ಅಂಕಲೀಕರ ಎಮ್ ಡಿ, (ಅಮೇರಿಕಾ) ಸಂಕೇಶ್ವರ ಆಸ್ಪತ್ರಿ ಇವರು
ದಮ್ಮು ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ
ರಾಮಬಾಣ ಔಷಧವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ— ಮನೆತನದ ವೈದ್ಯ!

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ರೋಜಿ ಅಥವಾ ಪಾಳಿ) ನಿಮೋನಿಯಾ (ವಾಯುಜ್ವರ), ಟಾಯಿಫಾಯಿಡ (ವಿಷಮಜ್ವರ) ಹೊಟ್ಟೆಶೂಲಿ, ಕಾಲರಾ, ಪ್ಲೇಗ, ಇನ್ಫ್ಲುಎಂಝಾ, ಸಂಧಿವಾತ, ಬಾಣಂತಿ ರೋಗ, (ಹಡೆದಾಗ ಇಲ್ಲವೆ ಹಿಂದಿನಿಂದ ಸಂಭವಿಸುವ ಬಾಣಂತ ರೋಗಗಳ ಮೇಲೆ) ಚಿಕ್ಕ ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ, ಮಲಬದ್ಧತೆ, ಮೈನೋವು, ಥಂಡಿಯಿಂದ ಗಂಟಲು ನೋವು ಮತ್ತು ಗಾಯಕ ಜನರಿಗೆ ಧ್ವನಿ ಬೀಳುವದು, ರಕ್ತಹೊರಕಡೆ, ಅತಿಸಾರ, ಕಾಮಾಲೆ, ಶೀತರೋಗ, ಮೂತ್ರಪಿಂಡರೋಗ, ಯಾವದೇ ಕಾರಣದಿಂದ ಉಂಟಾದ ದುರ್ಬಲತೆ, ಲಿವ್ಹರ (ಸ್ಪ್ಲೀನ), ಹೊಟ್ಟೆಯೊಳಗಿನ ಗಂಟು, ಪುಪ್ಪುಸದ ಹಾಗೂ ಹೊಟ್ಟೆಯೊಳಗಿನ ಯಾವದೇ ವಿಕಾರ, ಧಾತುಕ್ಷೀಣತೆ, ಸ್ವಪ್ನದೋಷ, ಎಲ್ಲ ತರದ ಕಡಕಿ, ಸ್ತ್ರೀಯರ ಮುಟ್ಟಿನ ದೋಷ ಮೊದಲಾದ ಎಲ್ಲಾ ರೋಗಗಳ ಮೇಲೆ ಅನುಭವಸಿದ್ಧ, ಖಾತ್ರಿದಾಯಕ ಸಿದ್ಧೌಷಧವಿರುತ್ತದೆ. ಈ ಔಷಧವು ತೆಗೆದುಕೊಳ್ಳಲಿಕ್ಕೆ ಸ್ವಾದಿಷ್ಟ, ರುಚಿಕರವಿರುವದು. ಸಣ್ಣ ಹುಡುಗರಂತೂ ಬಹಳ ಪ್ರೀತಿಯಿಂದ ತೆಗೆದುಕೊಳ್ಳುವರು. ಇದು ತೆಗೆದುಕೊಳ್ಳುವದರಿಂದ ರಕ್ತಶುದ್ಧಿ ಹಾಗೂ ರಕ್ತವೃದ್ಧಿಯಾಗಿ ವೀರ್ಯವೃದ್ಧಿಯಾಗುವದು ಮತ್ತು ಯಾವದೇ ಕಾರಣದಿಂದ ಉಂಟಾದ ಉದಾಸೀನತೆಯನ್ನು ಕಳೆದು ಮನಸ್ಸು ಆನಂದಿತ ಮಾಡುವದು ಹಾಗೂ ಜಗತ್ತು ರಮಣೀಯವಾಗಿ ತೋರುವದು.

ಈ ಔಷಧದಿಂದ ೨೦ ೩೦ ವರ್ಷಗಳಿಂದ ದಮ್ಮಿನ ರೋಗದಿಂದ ನರಳುತ್ತಿರುವ ರೋಗಿಗಳು ಪೂರ್ಣ ಗುಣ ಪಡೆದಿರುವರು. ಈಗ ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗಗಳ ಮೇಲೆ ಔಷಧವಿಲ್ಲೆಂದು ನಿರಾಶೆಪಡುವ ಕಾರಣವಿಲ್ಲದಂತಾಗಿದೆ. ಈ ಔಷಧ ಉಪಯೋಗ ಮಾಡಿಕೊಂಡು ರೋಗಮುಕ್ತರಾಗಿರಿ. ಈ ವರೆಗೆ ಸಾವಿರಾರು ಜನರು ರೋಗಮುಕ್ತರಾಗಿರುವರು. ನಿರಾಶೆಯಿಂದ ದಿನ ಕಳೆಯುತ್ತಿರುವ ಜನರಿಗೆ ಇದರ ಮಾಹಿತಿಯಾಗಿ ಗುಣಪಡೆಯಬೇಕೆಂದು ಈ ಔಷಧದ ಜಾಹೀರಾತು ಪ್ರಕಟಿಸಲ್ಪಟ್ಟಿರುವದು. ಇದನ್ನು ಹಳ್ಳಿಗರು ಹಾಗೂ ಶಹರವಾಸಿಗರು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಇಟ್ಟುಕೊಳ್ಳತಕ್ಕದ್ದು.

ನೆಗಡಿ ಜ್ವರ, ಕೆಮ್ಮು ಶುರು ಆದ ಕೂಡಲೇ ಜನರು ನಿಷ್ಕಾಳಜಿಯಿಂದ ೨ ೩ ದಿವಸ ಹಾಗೇ ಮೈಮೇಲೆ ತೆಗೆಯುತ್ತಾರೆ. ಹೀಗೆ ಮಾಡುವದರಿಂದ ಮುಂದೆ ಜ್ವರವು ರೋಜಿಯಾಗುವ ಸಂಭವವಿರುತ್ತದೆ. ಆ ಕಾರಣ ಶುರುವಾದ ಕೂಡಲೆ ಈ ಕಷಾಯ ತೆಗೆದುಕೊಳ್ಳುವದರಿಂದ ಮುಂದಿನ ತ್ರಾಸು ತಪ್ಪುವದು. ಇದೇ ರೀತಿ ಬಾಣಂತಿ ಮತ್ತು ಕೂಸು ಇವರಿಗೆ ಮೊದಲನೇ ದಿವಸದಿಂದ ಆರು ವಾರ ಮೂರು ತಿಂಗಳು ತನಕ ಚಾಲು ಇಡುವದು. ಹುಡುಗರಿಗೆ ಬೇರೆ ಔಷಧವು ಕೊಡುವ ಗರಜಿಲ್ಲ. ಚಿಕ್ಕಮಕ್ಕಳ ತಕರಾರು ನಿಲ್ಲುತ್ತವೆ. ಗರ್ಭಿಣಿ ಹೆಂಗಸರಿಗೆ ಸಹ ಇದನ್ನು ಕೊಡಲು ಅಡ್ಡಿಯಿಲ್ಲ. ಅನುಪಾನ ಪತ್ರಿಕೆಯು ಬಾಟ್ಲಿಯ ಸಂಗತ ಸಿಗುತ್ತದೆ.

ಲಕ್ಷ್ಮೀಬಾಯಿ ಕೊಲ್ಹಾಪೂರಕರ ಸಂಸ್ಥಾನ ಬಡೋದಾ, [illegible] ಗಾಯಕಿ— ತಮ್ಮ "ಕಲ್ಪತರು ಕಷಾಯ" ಈ ಔಷಧವನ್ನು ನನ್ನ ಧ್ವನಿ ಬಿದ್ದ ಹೊತ್ತಿನಲ್ಲಿ ತೆಗೆದುಕೊಳ್ಳುವ ಪ್ರಸಂಗ ಬಂತು. ತಿಳಿಸಲಿಕ್ಕೆ ಬಹಳ ಆನಂದವಾಗುತ್ತದೆ! ಔಷಧ ತೆಗೆದುಕೊಂಡ ಅರ್ಧ ತಾಸಿನಲ್ಲಿಯೇ ಮೊದಲಿನಂತೆ ಸ್ವರದಿಂದ ಹಾಡಲಿಕ್ಕೆ ಹತ್ತಿದೆ. ಧ್ವನಿ ಬಿದ್ದ ಕಲ್ಪನೆಯೇ ಉಳಿಯಲಿಲ್ಲ. ತಾ ೧—[illegible]—೧೯೩೩

ಶ್ರೀಯುತ ಪು. ಮ. ಕಿರಪೇಕರ, ಪಾಂಡೇಕರ ಬಿಲ್ಡಿಂಗ— ಮುಂಬಯಿ ತಾ ೧-೬-೩೪ ತಮ್ಮ "ಕಲ್ಪತರು ಕಷಾಯ"ವು ದಮ್ಮಿನ ಮೇಲೆ ಹೆಚ್ಚೇ ಗುಣಕಾರಿ ಇರುವದರಿಂದ ನನ್ನ ಅತ್ತೆಗೆ ದಮ್ಮು ಇರುವದು. ಅದಕ್ಕಾಗಿ ಅವರಿಗೆ ೨ ಕಷಾಯದ ಬಾಟ್ಲಿಗಳನ್ನು ರೇಲ್ವೆ ಪಾರ್ಸಲಿನಿಂದ ಕಳಿಸಿಕೊಡಿರಿ.
ಕಿಮ್ಮತ್ತು — ೧ ರತ್ತಲ ಬಾಟ್ಲಿಗೆ ರೂ. ೨। ಅರ್ಧ ರತ್ತಲ ಬಾಟ್ಲಿಗೆ ರೂ ೧। [illegible] ರತ್ತಲ ಬಾಟ್ಲಿಗೆ [illegible] ಆಣೆ

ನಟರತ್ನ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪೂರಕರ ಮೊದಲಾದ ಅನೇಕ ಮಹನೀಯರು ಉಪಯೋಗಿಸಿ ಪ್ರಶಂಸಾ ಪತ್ರಗಳನ್ನು ಕೊಟ್ಟಿರುತ್ತಾರೆ.

ಔಷಧೀ ದಂತಮಂಜನ

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು, ಕೀವು, ರಕ್ತ ಹಲ್ಲು ನೋವುಗಳ ರೋಗ ಮುಂತಾದವುಗಳು ನಾಶವಾಗುತ್ತವೆ. ಈ ಔಷಧವನ್ನು ದಿನಾ ಒಂದಾವರ್ತಿ ಯಾ ಎರಡಾವರ್ತಿ ಹಲ್ಲುಗಳಿಗೆ ತಿಕ್ಕುವದಲ್ಲದೆ ನಾಲಿಗೆಗೂ ತಿಕ್ಕಬೇಕು. ಬೆಲೆ ಆಣೆ ೫

ಇವಲ್ಲದೆ, ಥಂಡಿ ಜ್ವರ, (ಮಲೇರಿಯಾ) ದ ಮೇಲೆ ಮಿಶ್ರಣ, ಕೌಜಕ್ಕಿ ಸವಿ ಔಷಧ, ಜಂತುನಾಶಕ ಕಷಾಯ, ಕಾಲೆರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೆಶಲ್ ಔಷಧಗಳು ನಮ್ಮಲ್ಲಿ ಸಿಗುತ್ತವೆ.

ಶ್ರೀರಾಮ ಆಯುರ್ವೇದಿಕ ಫಾರ್ಮಸಿ. ಗಡಹಿಂಗ್ಲಜ. (ಕೊಲ್ಹಾಪುರ ಸಂ.)

g No. B. 1270. Monday, 18th March, 1935

ವರ್ಷ ೧೭ | ಸಂಚಿಕೆ ೪೯

ಕಾನಡಾವೃತ್ತ

THE KANARA NEWS.

ಪತ್ರದ ವರ್ಗಣಿ
ಕುಮಟೆಯಲ್ಲಿ ಆಗಾವು ರೂಪಾಯಿ 2-4-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ ಪಿ ಆ ಚಿವೆಚ್ಚ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಟೈಪಿನ (೧೫ ಎಮ್ ಉದ್ದ) ೫ ಸಾಲುಗಳವರೆಗೆ ರೂ. 1-0-0
ಆನಂತ್ರ ಪ್ರತಿಸಾಲಿಗೆ 0-2-0
ಹತ್ತಿಂಗದ ಸಾಲು ಎಷ್ಟು ಹೊತ್ತು ಇರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೧೮ ಮಾಹೆ ಮಾರ್ಚ ಸನ್ ೧೯೩೫ ನೇ ಇಸವಿ.)—

1906ರಲ್ಲಿ ಜನ್ಮವೆತ್ತ

ಕೆನರಾ ಬೇಂಕ್, ಲಿಮಿಟೆಡ್.

ಬ್ಯಾಹಟ್ಟಿಯವರ ಬಿಲ್ಡಿಂಗ, ಹುಬ್ಬಳ್ಳಿ.

ಈ ಕೆಳಗೆ ಕೊಟ್ಟ ಸಂಕ್ಷಿಪ್ತ ಮಾಹಿತಿ ತಕ್ತೆಯು ಮೇಲಿಂದ ಈ ಬ್ಯಾಂಕು ವರ್ಷ-ವರ್ಷಕ್ಕೂ ಮಾಡುತ್ತಿರುವ ಪ್ರಗತಿಯು ಸ್ಫುಟವಾಗಿ ಕಂಗೊಳಿಸುತ್ತಿದೆ ಬ್ಯಾಂಕಿನ ಕಾರ್ಯ ಪದ್ಧತಿಯು ಜನರ ಮೆಚ್ಚುಗೆಗೆ ಪಾತ್ರವಾಗಿ ಬ್ಯಾಂಕು ಜನರ ವಿಶ್ವಾಸನಿಧಿಯಾಗಿದೆ ಎಂಬುದಕ್ಕೆ ಅದರ ಸತತ ಪ್ರಗತಿಯೇ ಸಾಕ್ಷಿ!

ಬೆಳವಣಿಗೆಯ ಮಾಹಿತಿ ತಕ್ತೆ.

ವರ್ಷ	ಸಂಕಲ್ಪಿತ ಮೂಲಧನ	ತೆತ್ತ ಮೂಲಧನ	ಕ್ಷೇಮ ನಿಧಿ	ಠೇವಣಾತಿಗಳು	ವ್ಯವಹಾರದೊಳಗಿನ ಧನ
1916	2,25,000	2,00,000	89,000	3,60,000	6,83,000
1920	3,00,000	3,00 000	1,61,000	8,99,000	14,19,000
1924	3,00,000	3,00,000	2,62,000	18,10,000	24,69,000
1928	3,00,000	3,00,000	3,88,000	37,42,000	46,99,000
1932	6,00,000	3,30 000	4,31 000	55,46,000	65,62,000
1934	6,00,000	3,31,000	4,50,000	58,62,000	73,49,000

ಮುಂಬಯಿ ಫೋರ್ಟ, ಮುಂಬಯಿ-ಮಾಂಡವಿ, ಹುಬ್ಬಳ್ಳಿ, ಮಂಗಳೂರು ಕಲ್ಲಿಕೋಟೆ, ಕೊಚ್ಚಿ ಎರ್ನಾಕುಳಂ, ಅಲಪ್ಪೆ, ಬೆಂಗಳೂರು, ದಾವಣಗೆರೆ, ಚಿಕ್ಕಮಗಳೂರು ಮುಂತಾದ ೧೯ ನಗರಗಳಲ್ಲಿ ಬ್ಯಾಂಕಿನ ಶಾಖಾ-ಕಚೇರಿಗಳಿವೆ

ಅಲ್ಪ ವೇತನ ಕೊಂಡು ಬ್ಯಾಂಕು ಎಲ್ಲ ತರದ ಬ್ಯಾಂಕಿಂಗ ವ್ಯವಹಾರಗಳನ್ನು ಮಾಡುತ್ತದೆ

ಠೇವಣಾತಿಗಳ ಮೇಲೆ ವರಸಾಲ ಶೇಕಡಾ ೪ರ ತನಕ ಬಡ್ಡಿ ಕೊಡಲಾದೀತು

Siromani Udipi Narayanacharya
CHAUKHAMBA, BENARES CITY

SUN BED
BENARES CITY

ಮಹಾಶಯರೇ, ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಕೈರಿ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ಸರ ೩೨ ಮಣಿ(ಕ್ಕೆ ರೂ 0 8 0)ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ. 3 8 0ರಿಂದ 5ರ ವರೆಗೆ ಮತ್ತು ಬೇರೆ ಮಾಲಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0ಸ್ಟಾಂಪು ಕಳಿಸಿದರೆ, 1 ಕಾಶಿ ನಕ್ಷೆ, 1 ವಿಶ್ವೇಶ್ವರನ ಫೋಟೋ ನಮ್ಮ ಕಡೆಯಿಂದ ಬಹುಮಾನ ಕಳಿಸಲಾದೀತು

ಪತ್ತೆ - ಶಿರೋಮಣಿ ನಾರಾಯಣಾಚಾರ್ಯ,
ಚೌಖಾಂಬಾ, ಕಾಶೀ ಕ್ಷೇತ್ರ

ಬನ್ನಿರಿ! || ಶ್ರೀ ಚಂದ್ರಮೌಳೀಶ್ವರ ಪ್ರಸನ್ನ || ನೋಡಿರಿ!!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಕುಮಟಾ. (ಉ ಕನ್ನಡ)

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆವ್ಹಲರಿಗೂ ಊಟಕ್ಕೊಸ್ಕರಕ್ಕೂ ಇತರ ಊಟೋಪಚಾರಕ್ಕೂ ಒಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ:- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ.

ಅಲ್ಲಲ್ಲಿ ಇಷ್ಟಿಷ್ಟು

ರೌಪ್ಯ ಮಹೋತ್ಸವದ ಸಮಯ ಬಿಡುಗಡೆ ಮಾಡಬೇಕಾಂದಿರುವ ರಾಜಬಂದಿಗಳ ಯಾದಿ ತಯಾರಿಸಲ್ಪಡುತ್ತದಾಗಿ ಕಲಕತ್ತೆಯ 'ಅಮೃತ ಬಝಾರ ಪತ್ರಿಕೆ'ಯ ಲಂಡನದ ಸುದ್ದಿಗಾರರು ... ತ್ತಾರೆ ಪಂಡಿತ ಜವಾಹಿರಲಾಲ ನೆಹರು ... ಅಬ್ದುಲ್ ಗಫ್ಫಾರಖಾನ, ಶ್ರೀ ಶರತ್ಚಂದ್ರ ಬೋಸ ಇವರಿಗೆ ಬಹುಮಾನವಾಗಿ ಬಿಡುಗಡೆಯಾಗಬೇಕೆಂದು ಅವರ ಹೇಳಿಕೆ ಶ್ರೀ ಶರತ್ಚಂದ್ರ ಬೋಸರವರು ಕಲಕತ್ತೆಯ ಪರವಾಗಿ ವರಿಷ್ಠ ಕಾಯಿದೆ ಕೌನ್ಸಿಲಿಗೆ ಆರಿಸಿಕೊಂಡ ಪ್ರತಿನಿಧಿಗಳು ನೂತನ ರಾಜ್ಯಘಟನೆಯ ವಿಚಾರ ನಡೆ... ಕಲಕತ್ತೆ ... ಪ್ರಮುಖ ಪಕ್ಷಗಳ ಪ್ರತಿನಿಧಿ... ಹತಬಂದಿಗಳ ... ಡುವದು ಪ್ರಶಸ್ತವಲ್ಲವಾಗಿ ಪ್ರಮುಖರು ಅಧಿಕ ... ಯ ಪಡುತ್ತಾರೆಂತೆ ಭಾರತ ಮಂತ್ರಿಗಳಿಗೆ ಅವರನ್ನು ಬಿಡುಗಡೆ ಮಾಡಲು ಒತ್ತಾಯ ಮಾಡುತ್ತಾರಂತೆ ಹಿಂದುಸ್ಥಾನ ಸರಕಾರಕ್ಕೂ ಸಾಮ್ರಾಜ್ಯ ಸರಕಾರಕ್ಕೂ ತಂತಿಗಳ ಮೇಲೆ ತಂತಿಗಳು ನಡೆಯುತ್ತಿವೆ ಪ್ರಾಂತಿಕ ಸರಕಾರಗಳೊಡನೆ ಆಲೋಚನೆ ನಡೆಯುತ್ತದೆ ಭಾರತ ಮಂತ್ರಿಗಳು ಸ್ಥಳಿಕ ಸರಕಾರಗಳ ಅಭಿಪ್ರಾಯವನ್ನೇ ಪುರಸ್ಕರಿಸಿ ಅವರಿಗೆ ಬಿಡುಗಡೆ ಮಾಡಲಿಕ್ಕಿಲ್ಲವಾಗಿ ಒಂದು ಭೀತಿಯುಂಟಾಗಿರುವದಂತೆ ಪಂಡಿತ ಜವಾಹಿರಲಾಲರಿಗೆ ಸದ್ಯಕ್ಕೆ ಬಿಡುಗಡೆಯಾಗುವದಾಗಿ ಒಂದು ವಾರ್ತೆ ಹಬ್ಬಿತ್ತು. ಪಂ ಜವಾಹಿರಲಾಲರು ಪತ್ನಿಯರಾದ ಸೌ| ಕಮಲಾ ನೆಹರೂರವರಿಗೆ ಕಠಿಣ ರೋಗ ... ಪ್ರಕೃತಿ ... ರೋಗಗಳು ಒಪ್ಪಿದ್ದಲ್ಲಿ ಮಾತ್ರ ಹಿಂದುಸ್ಥಾನ ಸರಕಾರವು ಅವರ ಬಿಡುಗಡೆ ಮಾಡುವ ವಿಚಾರದಲ್ಲಿದ್ದೇವೆಂದು ... ಹಬ್ಬಿತ್ತು ವರಿಷ್ಠ ಕಾಯಿದೆ ಕೌನ್ಸಿಲ್ಲಿ ಈ ಕುರಿತು ಸಭಾಸದರು ಪ್ರಶ್ನೆ ಕೇಳಲು ಈ ... ಧಾರವ ದಷ್ಟೆಂದ ಉತ್ತರ ದೊರಕಿತು ಸೌ| ಕಮಲಾ ನೆಹರೂರವರ ಪ್ರಕೃತಿ ಇತ್ತಲಾಗಿ ... ಸರಕಾರ ... ಆ ವಿಷಯು ಸರಕಾರದ ಚೌಕಶಿ ನಡೆಯುತ್ತಿಲ್ಲವಾಗಿಯೂ ... ದೊರಕಿದ ಪ್ರಯಾಗದೊಳಗಿನ ಒಂದು ಪತ್ರಿಕೆಯಲ್ಲಿ ಪಂಡಿತ ಜವಾಹಿರಲಾಲರ ... ಪ್ರಕಟವಾಗಿದೆ ಪತ್ನಿಯರಿಗೆ ಕರೆತರಲು ... ವಿದೇಶಕ್ಕೆ ಹೋಗಲು ... ಕಳುಹಿಸಿಕೊಡುವ ... ಅವನ್ನು ... ಗದಯಾತ್ರೆಯಲ್ಲಿ ಆ ಕಾಲದ ಪರಿಸ್ಥಿತಿ ನೋಡಿ ವಿಚಾರ ಮಾಡುವೆನು ಈ ಪ್ರಕಾರ ಅವರ ಅಭಿಮತ ರೌಪ್ಯ ಮಹೋತ್ಸವದ ಸಮಯ ಸ್ವದೇಶ ಸ್ವಾತಂತ್ರ್ಯಕ್ಕಾಗಿ ಕಾರಾಗೃಹದ ವಾಸವನ್ನನುಭವಿಸುವ ದೇಶಭಕ್ತರೆಲ್ಲರೂ ಬಿಡುಗಡೆಯಾಗಬೇಕೆಂದು ದೇಶವೆಲ್ಲ ಹಾರೈಸುತ್ತದೆ ... ಅದರ ಆ ಪ್ರಕಾರ ಸಂಭವಿಸುವ ಲಕ್ಷಣಗಳು ಕಾಣುವದಿಲ್ಲ, ಲೋಕಮಾನ್ಯರು ... ದೇಶಭಕ್ತರ ... ಉತ್ಸವ ... ಲೋಕಮಾನ್ಯರ ಬಿಡುಗಡೆಯಾಗಲೆಂದು ಎಲ್ಲರದೂ ಆಸೆ, ಆದರೆ ಅವರ ಬಿಡುಗಡೆಯಾಗಲಿಲ್ಲವೆಂಬ ಸಂಗತಿ ಲೋಕ ಪ್ರಸಿದ್ಧ ಅಂತೆಯೇ ಈಗಿನ ರೌಪ್ಯ ಮಹೋತ್ಸವ ಸಮಯವು ಸಂಭವಿಸಿಹೋಗಬಹುದೆಂದೂ ಎಂದು ಸಾಮಾನ್ಯ ಪ್ರಜೆಗಳಿಗೆ ಭೀತಿ "ಆಶಾಸ್ನೇಹಃ ಪಾಪಶಂಕೀ" ಎಂಬ ಗಾದೆ ಮಾತಿದೆ 'ಅಮೃತ ಬಝಾರ ಪತ್ರಿಕೆ'ಯ ಲಂಡನ್ ಸುದ್ದಿಗಾರರು ಬರೆಯುವಂತೆ ಬ್ರಿಟಿಶ ಪ್ರಜಾಪ್ರಮುಖರ ಒತ್ತಾಯವಾದರೂ ಫಲಿಸುವದೇನೆಂದು ಕಾಣುವದು

***

ಮಹಾತ್ಮರ ವನ್ನಂತರದಲ್ಲಿ ತರತರದ ಲೋಕಸೇವಕ ತಪಸ್ವಿಗಳು ದೇಶತುಂಬ ಹಟ್ಟತೊಡಗಿದ್ದಾರೆ. ಅಲ್ಲಲ್ಲಿ ಆಶ್ರಮಗಳೂ ಏಳಲಾರಂಭಿಸಿವೆ ಬಿಹಾರ ಪ್ರಾಂತದ ತಳವಾಡಾ ಗ್ರಾಮದಲ್ಲಿ ಶ್ರೀ| ಕೋಕಿಲಾದೇವಿಯವರು ಒಂದು ಆಶ್ರಮ ತೆಗೆದು ಹರಿಜನರ ಸೇವ ಮಾಡುತ್ತಿದ್ದಾರೆ ಕೋಕಿಲಾದೇವಿಯವರು ಧನವಂತ ಮನೆತನದವರು ಬಿಹಾರ ಕಾಯಿದೆ ಕೌನ್ಸಿಲಿನ ಉಪಾಧ್ಯಕ್ಷರಾಗಿದ್ದ ರಾವ ಬಹದ್ದೂರ ... ವಂತ ಭಾರ್ಗವ ಪ್ರಸಾದ ಮಹಾಪಾತ್ರರವರ ಮಗಳೆಂದಿರು ವಿಧವೆಯರು ಸತ್ಯಾಗ್ರಹದಲ್ಲಿ ಸೇರಿ ಕಾರಾಗೃಹವಾಸವನ್ನನುಭವಿಸಿದವರು ತಂದೆಯವರ ಒಳ್ಳೆ ಅರಮನೆಗಳಲ್ಲಿ ವಾಸ ಮಾಡಿದವರು. ಅದೆಲ್ಲವನ್ನು ಬಿಟ್ಟು ತಳವಾಡದಂಥ ಗ್ರಾಮದಲ್ಲಿ ಗುಡಿಸಲು ಕಟ್ಟಿಕೊಂಡು ಉಳಿದಿದ್ದಾರೆ ಈ ಊರಲ್ಲಿ ಹಿಂದಿ ... ಜಾತಿಯ ಅಸ್ಪೃಶ್ಯರ ಮನೆಗಳಿವೆ ಅವರಿಗೆ ಶ್ರೀ| ಕೋಕಿಲಾದೇವಿಯವರು ತಾಯಿಯಂತೆ ಸ್ವಚ್ಛತೆಯ ಪಾಠಗಳನ್ನೂ, ಶುಚಿಜೀವನದ ಕ್ರಮಗಳನ್ನೂ ಕಲಿಸುತ್ತಾರೆ ಆಶ್ರಮದಲ್ಲಿ ೩೦ ವಿದ್ಯಾರ್ಥಿಗಳಿದ್ದಾರೆ ಅವರಲ್ಲಿ ೬ ಮಂದಿ ಹುಡುಗಿಯರು ಒಬ್ಬ ಬ್ರಾಹ್ಮಣ ಹುಡುಗನೂ ಇದ್ದಾನೆ. ಬೆಳಗಿನ ಸಮಯ ವಿದ್ಯಾದಾನ, ಸಾಯಂಕಾಲ ಕಾಯ-ಕಷ್ಟದ ಪ...ರ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ವೃದ್ಧಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣಗಳಿಗೆ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ)
ಮಹಾನಾರಾಯಣ ತೈಲ (ವಾತವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾರ್ಕ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ)
ಅಮೃತ ಗ್ರಾಸ (ರಕ್ತವಾತ, ಉಪದಂಶ, ಅಪಸ್ಮಾರಗಳಿಗೆ ರಾಮಬಾಣ
ಭವನ ಅಂಜನ (ಸರ್ವ ತರದ ಕಣ್ಣಿನ ರೋಗಗಳಿಗೆ ಅತ್ಯಂತ ಗುಣಕಾರಿ
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಸಿದ್ಧ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು, ಮಾತ್ರಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-

ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬಾ ಆನಂದಪಟ್ಟೆನು ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ... ದೆ ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯರ ಮನೆತನಕ್ಕೆ ಸೇರಿದವರಾಗಿಯೂ ಗೌರವನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ ಇವರು ಸಿದ್ಧಗೊಳಿಸಿದ ಔಷಧಗಳನ್ನು ಪರೀಕ್ಷಿಸಿದೆನು ಅವು ಶಾಸ್ತ್ರಸಿದ್ಧವಾಗಿ ... ಸ್ತವೆ ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ... ಅನೇಕ ವನಸ್ಪತಿಗಳ ಪರೀಲನವು ಇವರಿಗೆ ಇರುತ್ತದೆ ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಳದ ವನಸ್ಪತಿ ವಿಮರ್ಶ ಸಮಿತಿಗೆ ಅವಶ್ಯವೆಂದು ಸೂಚಿಸುತ್ತೇನೆ ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ಯೋನ್ಯರಾದಾಗಲೇ ಮಹಾಮಂಡಳದ ಉದ್ದೇಶವು ಸಫಲವಾಗುತ್ತದೆ ಈ ವೈದ್ಯಶಾಲೆಯು ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇನೆ

ಮೊಕ್ಕಾಂ ಉಡುಪಿ ೧೦-೧೧-೧೯೩೪

ವಿದ್ವಾನ್ ಕೇ ಶೇಷಶಾಸ್ತ್ರಿ ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ.

ತಂದರೆ ಬೊಗರಿಯ. ಪೇಲಿ ನೂಲುವದು, ಚಾಪೆ ನೇಯುವದು, ಹಗ್ಗ ಮಾಡುವದು ಶ್ರೀ| ಕೋಕಿಲಾ ದೇವಿಯವರು ಒಂದು ವರ್ಷದಿಂದ ಈ ಆಶ್ರಮವನ್ನು ಹೊರಡಿಸಿ ತಳಪಾದಾ ಗ್ರಾಮವನ್ನು ಮಾದರಿಯ ಗ್ರಾಮವಾಗಿ ಪರಿಣಮಿಸಿದ್ದಾರೆ

* * *

ಶ್ರೀ| ಮಹಾದೇವಭಾಯಿ ದೇಸಾಯಿಯವರು ಮಹಾತ್ಮರ ಜೊತೆಗಾರರು, ಕಾರ್ಯದರ್ಶಿಗಳು ಎಂಬ ಸಂಗತಿಯನ್ನು ಎಲ್ಲರೂ ಬಲ್ಲಾದ ವಿಷಯ. ಅವರು ' ಹರಿಜನ ' ಪತ್ರಿಕೆಯಲ್ಲಿ ವಾರ-ವಾರಕ್ಕೆ ಮಹಾತ್ಮರ ಆಶ್ರಮದೊಳಗಿನ ಘಟನೆಗಳನ್ನು ಪ್ರಕಟಿಸುತ್ತಾರೆ. ಕಳೆದ ಮಾರ್ಚ ೨ನೇ ತಾರೀಖಿನ ಸಂಚಿಕೆಯಲ್ಲಿ ಪ್ರಕಟಿಸಿದ ಒಂದು ಸಂಗತಿ ಚಿತ್ತವೇಧಕವಿದೆ. ಮಹಾತ್ಮರ ಆಶ್ರಮದಲ್ಲಿ ವಿವಿಧ ಪ್ರಕೃತಿಯ, ವಿವಿಧ ವ್ಯವಸಾಯಗಳ, ವಿವಿಧ ಪ್ರಾಂತಗಳ, ವಿವಿಧ ದೇಶಗಳ ಜನರು ವಿವಿಧ ಉದ್ದೇಶಗಳಿಂದ ಹೋಗುತ್ತಾರೆ. ನಾಶಿಕದಿಂದ ಸದ್ಯಕ್ಕೆ ಅಲ್ಲಿ ಒಬ್ಬರು ಹೋಗಿದ್ದರು. ಗೋರಕ್ಷಣೆ ಉಪಾಯ ವಿಚಾರ ಮಾಡುವದಕ್ಕಾಗಿ ಅವರು ಮಹಾತ್ಮರಲ್ಲಿಗೆ ಹೋಗಿದ್ದರು. ನಾಶಿಕದೊಳಗಿನ ಪಿಂಜರಾಪೋಳದ ಪ್ರಮುಖ ಕಾರ್ಯಕರ್ತರಿವರು. ನಾಶಿಕ ಪ್ರದೇಶದಲ್ಲ ಹೇರಳ ದನಗಳು ಸಾಯುತ್ತಿವೆ. ಅವನ್ನು ಹುಗಿಯುತ್ತಾರೆ, ಇಲ್ಲವೆ ರಣಹದ್ದುಗಳು ತಿಂದುಬಿಡುತ್ತವೆ. ಒಟ್ಟಿಗೆ ಪರಿಣಾಮವೊಂದೇ, ಚರ್ಮವೆಲ್ಲ ಹಾಳಾಗುತ್ತದೆ. ಆದಕ್ಕಾಗಿ ಮಹಾತ್ಮರ ಕಡೆ ಯಾರಾದರೊಬ್ಬರಿಗೆ ಅತ್ತ ಕಡೆ ಕಳುಹಬೇಕೆಂದಿದ್ದರು. ದನಗಳ ಚರ್ಮದ ವ್ಯವಸ್ಥೆಯಾಗುವಂತೆ ಏರ್ಪಾಟು ಮಾಡಬೇಕೆಂದು. ಇವರ ಅಂಬೋಣ. ಕಾರ್ಯಕರ್ತರ ಪ್ರವಾಸ ಖರ್ಚಿಗಾಗಿ ಮಹಾತ್ಮರ ಕಡೆ ಅವರು ಹಣವನ್ನು ಕೊಟ್ಟರು. ಮಹಾತ್ಮರು ಆಲೋಚನೆ ಮಾಡುತ್ತಿದ್ದಾಗ ಅವರಿಗೆ ಹೇಳಿ ಅವರ ಸಮಾಚಾರ ಕೇಳಿಕೊಂಡರು. ಇವರ ವಯಸ್ಸು ೬೦ ವರುಷಕ್ಕೆ ಮಿಕ್ಕಿದೆ. ಆದಾಗ್ಯೂ ಆನಂದ ಮೂರ್ತಿಗಳು. ಮೈಮೇಲೆ ತಕ್ಕಷ್ಟು ಅರಿವೆ ಅಂಚಡಿಗಳಿದ್ದಿಲ್ಲ. "ಇದೇ ನಿಮ್ಮ ವಾಡಿಕೆಯ ಪೋಷಾಕೇನು?" ಎಂಬದಾಗಿ ಮಹಾತ್ಮರು ಅವರಿಗೆ ಕೇಳಿದರು. "ಛೇ! ಈ ಪೋಷಾಕು ಸುಧಾರಿಸಿದ ಜನರಿಗೆ ಅಪ್ರಶಸ್ತ ತೋರಬಾರದೆಂದು ಹಾಕಿಕೊಂಡಿದ್ದೇನೆ. ನಾನು ಉಡುವದು ಲಂಗೋಟಿಯೊಂದೇ!" ಹೀಗೆ ಅವರು ಹೇಳಲು, "ನಾವು ಸುಧಾರಿಸಿದ ಜನರಲ್ಲ. ಇಷ್ಟವಿದ್ದರೆ ಲಂಗೋಟಿ ಧರಿಸಬಹುದು" ಎಂದು ಮಹಾತ್ಮರು ನುಡಿದದ್ದೇ ತಡ, ಅವರು ಲಂಗೋಟಿ ತೊಟ್ಟುಕೊಂಡು ಬಿಟ್ಟರಂತೆ. ಉಪಹಾರ ಕೊಳ್ಳಹೇಳಲು, ಉಪಹಾರಕ್ಕೆ ತಕ್ಕಷ್ಟು ದುಡಿವನಕ ಉಪಹಾರ ಕೊಳ್ಳಬರುವದಿಲ್ಲವಾಗಿ ಅವರು ಹೇಳಿ ಆಶ್ರಮದ ಬಂಗಲೆ ಬದಿಗಿದ್ದ ಕಸ-ಕಡ್ಡಿಗಳನ್ನು ತೆಗೆದುಹಾಕಿದರು. ಹಳ್ಳದಲ್ಲಿ ಬಿದ್ದ ಎಲೆಗಳನ್ನು ತೆಗೆದು ಸ್ವಚ್ಛ ಮಾಡಿ ಮಧ್ಯಾಹ್ನ ಊಟಕ್ಕೆ ಬಂದರು. ಸಾಯಂಕಾಲ ೪ ಮೈಲು ದೂರವಿರುವ ಗ್ರಾಮಕ್ಕೆ ಹೋಗಿ ಅಲ್ಲಿ ನಡೆಯುವ ಜಮಾದ ಕೆಲಸವನ್ನು ನೋಡಿಕೊಂಡು ರಾತ್ರಿ ಆಶ್ರಮಕ್ಕೆ ಬಂದರು. ಆ ಕಾಲದಲ್ಲಿ ಆಶ್ರಮವಾಸಿಗಳೆಲ್ಲರೂ ಊಟ ಮುಗಿಸಿಕೊಂಡು ಮಲಗತಯಾರಾಗಿದ್ದರು. ಗ್ರಾಮದಲ್ಲಿಯೇ ನಮ್ಮ ಊಟವಾಯಿತೆಂದು ಹೇಳಿ ಅವರು ಮಲಗಿಕೊಂಡರು. ನಸುಕು ಹರಿಯುವದರೊಳಗೆ ಎದ್ದು ಆಶ್ರಮದಲ್ಲಿ ಎಲ್ಲಿಯೋ ಒಂದು ಕಡೆ ಕೆಲಸ ಮಾಡುತ್ತಿದ್ದರು. ಮುಂಜಾವಿಗೂ ಉಪಹಾರ ಕೊಳ್ಳಲಿಲ್ಲ. ಮಧ್ಯಾಹ್ನ ಊಟಕ್ಕೆ ಬರಲಿಲ್ಲ. ಸಾಯಂಕಾಲ ಊಟಕ್ಕೆ ಬಂದರು. ನೀವು ಮುಂಜಾವಿನಿಂದ ಯಾಕೆ ಊಟಕ್ಕೆ ಬರಲಿಲ್ಲವಾಗಿ ಕೇಳಲು, ಅವರು ನುಡಿದದ್ದೇನಂದರೆ - "ನಾನು ೨೪ ತಾಸಿಗೊಮ್ಮೆ ಊಟ ಮಾಡುತ್ತೇನೆ, ೩೬ ತಾಸಿಗೊಮ್ಮೆ ಊಟ ಮಾಡುವದೂ ಉಂಟು, ಕೆಲ ಸರ್ತಿ ೪೮ ತಾಸಿಗೊಮ್ಮೆ ಊಟ ಮಾಡುತ್ತೇನೆ!" "ನಿನ್ನೆ ನೀವು ನಮ್ಮ ಸಂಗಡ ಮಧ್ಯಾಹ್ನ ಊಟ ಮಾಡಿದ್ದೀರಿ. ಸಾಯಂಕಾಲಕ್ಕೂ ಊಟ ಮಾಡಿದ್ದೀರಿ. ಇದು ಹೇಗೆ?" ಎಂದು ಪ್ರಶ್ನೆ ಮಾಡಿದ್ದಕ್ಕೆ ಅವರು ನುಡಿದದ್ದೇನಂದರೆ — "ಆ-ನೋ ಅಹುದು. ನಾನು ಆಶ್ರಮದಲ್ಲಿ ಪರಸ್ಥನಿದ್ದೆ. ಸ್ವಲ್ಪ ದಾಕ್ಷಿಣ್ಯವಾಯಿತು, ಹೊಟ್ಟೆತುಂಬ ಉಣ್ಣಲಿಲ್ಲ. ಊಟಕ್ಕೆ ಕುಳಿತುಕೊಂಡರೆ ೨೪ ತಾಸಿಗೆ ಬೇಕಾಗುವಷ್ಟು ಆಹಾರವನ್ನು ನಾನು ಕೊಳ್ಳುತ್ತೇನೆ. ಮರುದಿನ ವರೆಗೆ ನನಗೆ ಊಟದ ಗೊಡವೆ ಇಲ್ಲ" ಮಾರನೇ ದಿನ ಅವರು ಪುನಃ ಬಂದು ಹೊಟ್ಟೆತುಂಬ ಉಂಡರು. ಅವರ ಊಟ ನೋಡಿ ಆಶ್ರಮವಾಸಿಗಳಿಗೆಲ್ಲ ವಿನೋದವಾಯಿತು! "ನಿಮ್ಮ ಹಲ್ಲು ಗಟ್ಟಿ ಇರುತ್ತವೇನು?" ಎಂಬದಾಗಿ ಮಹಾತ್ಮರು ಸಹಜ ಪ್ರಶ್ನೆ ಮಾಡಿದರು. "ಅಹುದಹುದು ಯಾವತ್ತೂ ಹಲ್ಲುಗಳು ಗಟ್ಟಿಯಿವೆ, ನಾನು ಹುರಿಗಡ್ಲೆ ತಿನ್ನಬಲ್ಲೆ. ಏನೂ ಸಿಗದಿದ್ದರೆ ನೆನೆದ ಕಡ್ಲೆ-ಕಾಳನ್ನು ಜಗಿದು ತಿನ್ನುತ್ತೇನೆ." ಹೀಗೆ ಹೇಳಿ ಅವರು ತಮ್ಮ ಜೀವನಕ್ರಮದೊಳಗಿನ ಕೆಲ

[೧೦ ನೇ ಪಾನಿನ ಮೇಲೆ ನೋಡಿರಿ]

THE AGRICULTURAL & INDUSTRIAL BANK, LIMITED. COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್, ಕುಂದಾಪುರ.

ಕಾಯಂ ಠೇವಣಾತಿಗಳು.

3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ 3½ರಂತೆ,
6 ತಿಂಗಳಿಗೆ ... .. . 4½ರಂತೆ,
12 ತಿಂಗಳಿಗೆ .. .. 5½ ,,
24 ತಿಂಗಳಿಗೆ . ... 6 ,,
3 ವರ್ಷ ಯಾ ಹೆಚ್ಚಿನ ಅವಧಿಗೆ ... 6½ರಂತೆ

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ

ಚಿನ್ನ ವ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟಗಳೂ ಕೊಡಲ್ಪಡುವವು

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು, ಚಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಕರೆಂಟ್, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ —

K. Vaman Shenai &
G. Balakrishna S. Nayak.
Managing Directors

ಕುಂದಾಪುರ,
ತಾ 21—1—1935

ಪತ್ರಕರ್ತರ ನುಡಿಗನ್ನಡಿ.

೧. ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ತಾಲೂಕ ಲೋಕಲ್ ಬೋರ್ಡುಗಳನ್ನು ರದ್ದು ಮಾಡಬೇಕಾಗಿ ಕಾನೂನಾಗಿರುವದಷ್ಟೇ! ತಾಲೂಕ ಲೋಕಲ್‌ಬೋರ್ಡು, ಜಿಲ್ಲಾ ಲೋಕಲ್ ಬೋರ್ಡು ಮ್ಯುನಿಸಿಪಾಲಿಟಿಗಳಂಥ ಸಂಸ್ಥೆಗಳೆಲ್ಲ ಒಂದೇ ಸದರಿನವು. ಎಲ್ಲವೂ ಸರಕಾರಕ್ಕೆ ಅಂಕಿತವಾದವುಗಳು. ಯಾವತ್ತೂ ಪ್ರಕಾರದಿಂದ ಇವು ಜಿಲ್ಲಾಧಿಕಾರಿಗಳ ಪಾರುಪತ್ಯದಲ್ಲಿವೆ. ಹೆಸರೀಗೆ ಸ್ವರಾಜ್ಯವೆಂಬ! ನಡೆಯುವದೆಲ್ಲ ಪರರಾಜ್ಯವೇ!! ಸರಕಾರದ ದ್ರವ್ಯ ಸಹಾಯವಿಲ್ಲದಿದ್ದರೆ, ಸರಕಾರಿ ಅಧಿಕಾರಿಗಳು ಮುನಿದರೆ, ಅವರ ಸಹಾನುಭೂತಿ ಇಲ್ಲದಿದ್ದರೆ ಈ ಸಂಸ್ಥೆಗಳನ್ನು ನಡಿಸುವದು ದುರಾಪಾಸ್ತ ಕೆಲಸ. ಈ ಸಂಸ್ಥೆಗಳು ಮಾಡುವ ಕೆಲಸವು ಬಹುತರವಾಗಿ ಸರಕಾರದಿಂದ ನಡೆಯಬಹುದಾದಷ್ಟೇ. ಮಾರ್ಗಗಳ ರಚನೆ, ಔಷಧೋಪಚಾರ, ವಿದ್ಯಾದಾನ ಮೊದಲಾದ ಕಾರ್ಯಗಳನ್ನು ಇವು ನಡಿಸುತ್ತಿವೆ. ಈ ಕೆಲಸಗಳನ್ನು ನಡಿಸಲಿಕ್ಕೆ ಸರಕಾರದ ಕಡೆ ಪ್ರತ್ಯೇಕ ಖಾತೆಗಳಿವೆ. ಪಿ. ಡಬ್ಲ್ಯು. ಡಿ. ಖಾತೆಯವರು ಜಿಲ್ಲೆಯೊಳಗಿನ ದೊಡ್ಡ ದೊಡ್ಡ ಮಾರ್ಗಗಳನ್ನು ರಚಿಸುತ್ತಾರೆ. ಅಂಥವರಿಗೆ ಬೋರ್ಡು, ಮ್ಯುನಿಸಿಪಾಲಿಟಿಯವರ ಕೈಯ್ಯಲ್ಲಿರುವ ಮಾರ್ಗ ಮಾಡುವದೇನು ಕಠಿಣ ಕೆಲಸವಲ್ಲ. ಆರೋಗ್ಯ ಇಲಾಖೆಯವರೂ, ವೈದ್ಯ ಇಲಾಖೆಯವರೂ ಬೋರ್ಡು-ಮ್ಯುನಿಸಿಪಾಲಿಟಿಗಳ ಕೈಯೊಳಗಿನ ಕೆಲಸಗಳನ್ನು ನಡಿಸಬಹುದು. ವಿದ್ಯಾದಾನದ ಕಾರ್ಯವನ್ನು ವಿದ್ಯಾ ಇಲಾಖೆಯವರು ನಡಿಸಬಹುದು. ಇದರಿಂದ ಬೋರ್ಡು—ಮ್ಯುನಿಸಿಪಾಲಿಟಿಗಳ ಇಷ್ಟು ಶಿಬಂದಿಯ ಖರ್ಚು ಉಳಿತಾಯವಾಗುವಂತಿದೆ. ಪ್ರಾಂತಿಕ ಜಮಾ-ಖರ್ಚಿನ ಚರ್ಚೆ ನಡೆದಾಗ ಸೊಲ್ಲಾಪುರದ ಖಾನಬಹಾದ್ದೂರ ಅಬ್ದುಲ್ ಲತೀಫ ಹಾಜಿ ಹಜರತ್‌ಖಾನರವರು, ಪಿ. ಡಬ್ಲ್ಯು. ಡಿ. ಖಾತೆಯವರ ಸಹಕಾರ ದೊರೆತಲ್ಲಿ ಜಿ| ಬೋ| ಮಾರ್ಗರಚನೆಯ ಶಿಬಂದಿಯ ಖರ್ಚು ತಗ್ಗಿ ರೂಪಾಯಿ ೬೨ ಸಾವಿರ ಮಟ್ಟಿಗೆ ಲಾಭವಾಗುವದಾಗಿ ನುಡಿದರು. ಖಾನಬಹಾದ್ದೂರರವರು ಸೊಲ್ಲಾಪುರ ಜಿಲ್ಲಾ ಬೋರ್ಡಿನ ಅಧ್ಯಕ್ಷರಿದ್ದಾರೆ. ಸರಕಾರದ ಪಿ. ಡಬ್ಲ್ಯು. ಡಿ. ಖಾತೆಯವರು ಜಿಲ್ಲಾ ಬೋರ್ಡಿನ ಪಾರುಪತ್ಯದಲ್ಲಿ ಕೆಲಸ ಮಾಡಬೇಕೆಂದು ಅವರ ಅಂಬೋಣವಿದೆ. ಆದರೆ ಇದು ವ್ಯವಹಾರ್ಯವೆಂದು ನಮಗೆ ತೋರುವದಿಲ್ಲ. ಪಿ. ಡಬ್ಲ್ಯು. ಡಿ. ಖಾತೆ ಸರಕಾರಿ ಖಾತೆ. ಅವರು ಸರಕಾರಕ್ಕೆ ಅಂಕಿತರಾಗಿರುವರು. ಜಿಲ್ಲಾ ಬೋರ್ಡಿಗೆ ಅವರೆಷ್ಟಕ್ಕೂ ಅಂಕಿತರಾಗಿರರು. ಆದರಿಂದ ಜಿಲ್ಲಾ ಬೋರ್ಡಿನ ಮಾರ್ಗರಚನೆಯ ಇಲಾಖೆಯನ್ನು ರದ್ದುಪಡಿಸಿ ಸರಕಾರಕ್ಕೆ ಒಪ್ಪಿಸುವದು ಯೋಗ್ಯವೆಂದು ನಮ್ಮ ಸೂಚನೆ.

---

೨. ಪ್ರಯೋಗಾರ್ಥವಾಗಿ ಕುಮಟಾ ಮ್ಯುನಿಸಿಪಾಲಿಟಿಯನ್ನು ಸರಕಾರವು ರದ್ದು ಮಾಡುವ ವಿಚಾರ ಮಾಡಬಹುದು. ಹ್ಯಾಗೂ ಈಗ ಈ ಮ್ಯುನಿಸಿಪಾಲಿಟಿಯು ಸರಕಾರದ ಆಡಳಿತೆಯಲ್ಲಿದೆ. ಈಗಿನ ಕಾಲಮಾನದಲ್ಲಿ ಈ ಮ್ಯುನಿಸಿಪಾಲಿಟಿಯನ್ನು ನಡಿಸುವದು ಅಸಾಧ್ಯವಾಗಿದೆ. ಮ್ಯುನಿಸಿಪಾಲಿಟಿಗೆ ವರ್ಷಾಸನ ರೂಪಾಯಿ ೩೦ ಸಾವಿರ ಖರ್ಚಿಗೆ ಬೇಕು. ವ್ಯಾಪಾರದ ಅಭ್ಯುದಯ ಕಾಲದಲ್ಲಿ ಆಮದು ತೆರಿಗೆಯಿಂದ ಒಳ್ಳೇ ಉತ್ಪನ್ನವಿತ್ತು; ಆದರೆ ಕುಗ್ಗಿದ ಈಗ ವರ್ಷಕ್ಕೆ ೧೨-೧೩ ಸಾವಿರ ರೂಪಾಯಿಗಳ ಉತ್ಪನ್ನವಾದೀತು. ಮನೆ ತೆರಿಗೆಯಿಂದ ರೂ. ೪-೫ ಸಾವಿರ ಉತ್ಪನ್ನ. ಇವೆರಡೂ ಉತ್ಪನ್ನದ ಮುಖ್ಯ ಬಾಬುಗಳು. ಉಳಿದ ಹಣವೆಲ್ಲ ಸರಕಾರದಿಂದಲೇ ಸಿಗಬೇಕು. ಊರ ವ್ಯಾಪಾರವು ವರ್ಷ-ವರ್ಷಕ್ಕೆ ಕುಗ್ಗುತ್ತ ನಡೆದಿದೆ. ಇತ್ತ ೨-೧೦ ವರ್ಷಗಳ ಆಮದು ಉತ್ಪನ್ನವನ್ನು ಪರಾಂಬರಿಸಿದರೆ ಪರಿಸ್ಥಿತಿ ಹೊಳೆಯುವಂತಿದೆ. ಅಭ್ಯುದಯ ಕಾಲದಲ್ಲಿ ಮನೆ-ತೆರಿಗೆ ೬-೭ ಸಾವಿರ ರೂಪಾಯಿ. ಇತ್ತ, ಈಗ ಅದು ಏಕೀ ೪-೫ ಸಾವಿರಕ್ಕೆ ತಗ್ಗಿದೆ. ಇದನ್ನು ಏರಿಸುವದು ಅಸಾಧ್ಯ ಮಾತು. ಜಮಾ-ಖರ್ಚು ಬಾಯಿಗೂಡದಿದ್ದರೆ ಸಂಸ್ಥೆ ನಡೆಯಲಾರದು. ಇದರಿಂದ ಸರಕಾರವು ಪರಿಸ್ಥಿತಿಯನ್ನು ಮನಸ್ಸಿಗೆ ತಕ್ಕಷ್ಟು ಹಿಡಿಯುವಂತೆ ಆರೋಗ್ಯರಕ್ಷಣೆಯ ಒಂದು ಯೋಜನೆಯನ್ನು ತಯಾರಿಸಿ, ಒಬ್ಬ ಕಾರಕೂನರನ್ನೂ, ನಾಲ್ಕೈದು ಜವಾನರನ್ನು ಇಟ್ಟು ಮಾಮಲೇದಾರರಿಗೆ ಒಪ್ಪಿಸಿದಲ್ಲಿ ಕೆಲಸವು ಸುಸೂತ್ರವಾಗಿ ನಡೆಯುವಂತಿದೆ. ಮಾರ್ಗಗಳನ್ನು ಪಿ. ಡಬ್ಲ್ಯು. ಡಿ. ಖಾತೆಯವರು ವಹಿಸಿಕೊಳ್ಳುವರು. ಶಿಕ್ಷಣವಂತೂ ಸ್ಕೂಲ ಬೋರ್ಡಿಗೆ ಒಪ್ಪಿಸಿದ್ದು ಉಂಟು. ಈ ಪ್ರಯೋಗವು ಯಶಸ್ವಿಯಾದೆಂದು ಕಂಡರೆ ಸರಕಾರವು ಇತರ ಮ್ಯುನಿಸಿಪಾಲಿಟಿಗಳನ್ನು ರದ್ದು ಮಾಡುವ ವಿಚಾರಮಾಡಬಹುದು. ಮ್ಯುನಿಸಿಪಾಲಿಟಿಯು ಈಗಲೇ ಸರಕಾರದ ಕೈಯಲ್ಲಿದ್ದದರಿಂದ ಈ ಏರ್ಪಾಟು ಮಾಡಲು ಸುಲಭಸಾಧ್ಯವಿದೆ.

---

೩. ನಮ್ಮ ಜಿಲ್ಲೆಯೊಳಗಿನ ಭೂಕಂದಾಯ ಪೋಳಿಕೆಯ ಕುರಿತು ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ನಡೆದ ಪ್ರಶ್ನೋತ್ತರಗಳು ಮನನೀಯವಿವೆ. ಈ ಜಿಲ್ಲೆಯಲ್ಲಿ ಸಾಧಾರಣ ೧೦ ಲಕ್ಷ ರೂಪಾಯಿಗಳ ತೀರ್ವೆ ವಸೂಲಾಗುತ್ತದೆ. ಅವುಗಳಲ್ಲಿ ೧ ಲಕ್ಷ ೫ ಸಾವಿರ ರೂಪಾಯಿ ನೀರು ತೆರಿಗೆ ಎಂಬದಾಗಿ ಸರಕಾರದ ಪರವಾಗಿ ಮಿ| ಬೆಲ್‌ರವರು ಹೇಳುತ್ತಾರೆ. ನೀರು ತೆರಿಗೆ ಪ್ರತ್ಯೇಕವಾಗಿ ವಸೂಲಾಗುವದಿಲ್ಲ. ಭೂಕಂದಾಯದಲ್ಲಿ ಸೇರಿಸಿ ಅದನ್ನು ವಸೂಲ ಮಾಡುತ್ತಾರೆ. ಕೆರೆ-ಹಳ್ಳಗಳಿದ್ದಲ್ಲಿ ಸರಕಾರವು ಭೂಮಿಗಳಿಗೆ ತೀರ್ವೆ ಆಕರಿಸುವಾಗ ಇದರಲ್ಲಿ ೩ ಪಾಲು ತೀರ್ವೆ ೪ ಪಾಲು ನೀರು-ತೆರಿಗೆ ಆಕರಿಸುತ್ತವೆ. ಇಡೀ ಜಿಲ್ಲೆಯಲ್ಲಿ ೨೧೩೯ ಕೆರೆಗಳಿವೆ. ಸರಕಾರವು ಅವನ್ನು ಯಾವಾಗಲೂ ಒಳ್ಳೇ ಸ್ಥಿತಿಯಲ್ಲಿಡಲು ಕಾಯಿದೆಯಂತೆ ಒಪ್ಪಿದೆ. ಆದರೆ ಪ್ರತ್ಯಕ್ಷವಾಗಿ ಕೆರೆಗಳಲ್ಲಿ ಮಣ್ಣು ತುಂಬಿ, ಹೂತು, ನೀರಿನ ಪೂರೈಕೆ ಇಲ್ಲವಾಗಿದ್ದಾಗ್ಯೂ ಸರಕಾರವು ನೀರು ತೆರಿಗೆಯನ್ನು ವಸೂಲ ಮಾಡುತ್ತಿದೆ. ಹಣದ ಅನುಕೂಲತೆಯಂತೆ ಕೆರೆಗಳ ದುರುಸ್ತಿಯಾಗುತ್ತದಾಗಿ ಸರಕಾರದ ಅಂಬೋಣ. ಸರಕಾರಕ್ಕೆ ದ್ರವ್ಯಾನುಕೂಲತೆಯಾದಂತೆ ಕೆರೆಗಳ ದುರುಸ್ತಿ ಮಾಡುವ ಸಂದರ್ಭದಲ್ಲಿ ಜನರಿಂದ ನೀರು-ತೆರಿಗೆಯನ್ನು ಪಡೆಯಲು ಸರಕಾರಕ್ಕೆ ಹಕ್ಕು ಎಲ್ಲಿಂದ ಬರುತ್ತದಾಗಿ ಕೇಳಿದರೆ, ಕೆರೆ ಹೂತುಹೋದಾಗ್ಯೂ ಅದರೊಳಗಿಂದ ಕೆಲ ನೀರು ಸೋರಿಹೋಗುತ್ತದೆಂದು ಸರಕಾರದ ವಕೀಲಿಯಾಗುತ್ತಿದೆ. ಮಣ್ಣು ತುಂಬಿ ಹೂತುಹೋಗಿ ಸಿಗುವ ಸೋಸಿದ ನೀರಿನ ಅನುಕೂಲತೆಯ ದೃಷ್ಟಿಯಿಂದ ಸರಕಾರವು ನೀರುತೆರಿಗೆಯನ್ನು ಆಕರಿಸಲಿಲ್ಲ. ಕೆರೆಗಳು ಒಳ್ಳೇ ಸ್ಥಿತಿಯಲ್ಲಿದ್ದು ಅವುಗಳಿಂದ ಬೆಳೆಗೆ ತಕ್ಕಷ್ಟು ನೀರಿನ

The Canara Industrial & Banking Syndicate, Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Head Office:— **Mukund Nivas, UDIPI.**

Branches:— Udipi, Bangalore City, Mangalore, Payyanur, Cannanore, Brahmavar, Honnavar, Karwar, Hubli, Belgaum, Sirsi, Kumta, Hangarkatta, Coondapur, Ankola, Kanhangad & Bellary.

ಬಡ್ಡಿಯ ದರ.

(Current) ಚಾಲತಿ ಠೇವು. ***(Savings Bank)*** ಸೇವಿಂಗ್ಸ ಬೇಂಕ ಠೇವು.

ಪ್ರತೀ ದಿನದ ಶಿಲ್ಕಿನ ಮೇಲೆ ಶೇಕಡಾ 2 ರೂಪಾಯಿ. | 6ನೇ ತಾರೀಕಿನಿಂದ ತಿಂಗಳ ಅಂತ್ಯದ ವರೆಗೆ, ಅತಿ ಕಡಿಮೆ ಶಿಲ್ಕಿನ ಮೇಲೆ ಶೇಕಡಾ 3½ ರೂಪಾಯಿ.

[Fixed deposits] ಕಾಯಂ ಠೇವು.

3ರಿಂದ 5ತಿಂಗಳ ವರೆಗೆ ಶೇಕಡಾ 4 | 12ರಿಂದ 23 ತಿಂಗಳ ವರೆಗೆ ಶೇಕಡಾ 5

5 „ 11 „ „ „ 4½ | 24 ತಿಂಗಳಿಗೆ ಶೇಕಡಾ 5½

ಅಲ್ಪ ಅವಧಿಯ ಠೇವುಗಳು ಶೇಕಡಾ 3½ ರೂಪಾಯಿಯಂತೆ ಅಂಗೀಕರಿಸಲ್ಪಡುವವು.

ಚಿನ್ನಾಭರಣಗಳ ಈಡಿನ ಮೇಲೆ ಸಾಲಗಳನ್ನು ಕೊಡುತ್ತದೆ.

ಚೆಕ್ಕು, ಹುಂಡಿ, ಮತ್ತು ಡ್ರಾಫ್ಟುಗಳು ಇವೇ ಮೊದಲಾದ ಬೇಂಕಿನ ಎಲ್ಲಾ ತರದ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿಗೆ ಪತ್ರದ್ವಾರಾ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು.

Kumta, 2—12—1934.

T. RANGA PAI,
Agent at KUMTA.

ಪೂರ್ತಿಕೆಯಾಗುತ್ತದೆಂಬ ಗ್ರಹಿಕೆಯ ಮೇಲೆ ನೀರು-ತೆರಿಗೆ ಆಕರಿಸಲಾಗುತ್ತಿತ್ತು. ಸರಕಾರವು ನೀರು ಪೂರೈಸುವ ಕೆರೆಗಳನ್ನು ಕೈವಶ ಮಾಡಿಕೊಂಡು ಈಗ ೭೦ ವರ್ಷಗಳಾದವು. ಈ ಅವಧಿಯಲ್ಲಿ ಸರಕಾರವು ಯಾವ್ಯಾವ ಕೆರೆಗಳನ್ನು ಎಷ್ಟೆಷ್ಟು ಖರ್ಚು ಮಾಡಿ ದುರುಸ್ತಿ ಮಾಡಿತೆಂದು ಕೇಳುವದೆ ಅವಶ್ಯಕವಾದ ಪರಿಶ್ರಮವಾಗುತ್ತದೆಂದು ಸರಕಾರವು ನಮ ಹೇಳಬಹುದಾಗಿ ಬಕ್ಕಿದೆ. ದುರುಸ್ತಿಗೆ ತಗಲಿದ ಅಂಕಿಗಳನ್ನು ಕೊಟ್ಟಲ್ಲಿ ಸರಕಾರವು ನೀರು-ತೆರಿಗೆ ಪಡೆಯುವ ಕೆರೆಗಳಿಗಾಗಿ, ಜನಗಳಿಗಾಗಿ, ಎಷ್ಟು ಖರ್ಚು ಮಾಡುತ್ತದೆಂದು ತಿಳಿಯುವಂತಿತ್ತು; ಸರಕಾರವು ಎಷ್ಟರ ಮಟ್ಟಿಗೆ ಕರ್ತವ್ಯಪರಾಯಣವೆಂದು ತಿಳಿಯುತ್ತಿತ್ತು. ಕೆರೆಗಳನ್ನು ನೆಟ್ಟಗಿಡದೆ ನೀರು-ತೆರಿಗೆಯನ್ನು ವಸೂಲ ಮಾಡುವ ಅಧಿಕಾರವು ಸರಕಾರಕ್ಕಿಲ್ಲ; ಪ್ರತ್ಯಕ್ಷಾನುಕೂಲತೆಯ ನೆವವು ತೀರ ನಿರಾಧಾರವಾದದ್ದು. ಸರಕಾರವು ವರ್ಷಾವರ್ಷ ಲಕ್ಷಾವಧಿ ರೂಪಾಯಿಗಳನ್ನು ನೀರು-ತೆರಿಗೆಯೆಂದು ಜನರ ಕಡೆಯಿಂದ ಪಡೆಯುತ್ತಿರುವಾಗ ಆ ಕೆರೆಗಳನ್ನು ನೆಟ್ಟಗೆ ಮಾಡಲಿಕ್ಕೆ ದ್ರವ್ಯದ ಅಭಾವವೆಂದು ಹೇಳುವದು ಪ್ರಶಸ್ತವೇನು? ನೀರಿನ ಪೂರೈಕೆ ಮಾಡಿಕೊಡದೆ ನೀರು-ತೆರಿಗೆ ಕೇಳುವದು ನ್ಯಾಯವೇ? ನೀತಿಯೇ? ಬೇಸಾಯಗಾರರು ಹಣದ ಅಡಚಣೆಯಿಂದ ತೀರ್ವೆ ತೆರದೆ ಉಳಿಯ ಒದುತ್ತದೇನು! ಸರಕಾರಕ್ಕೆ ರಾಜಧರ್ಮದಂತೆ ತೀರ್ವೆ ಪಡೆಯಲಿಕ್ಕೆ ಮಾತ್ರ ಅಧಿಕಾರವಿದೆ. ಹೊರತು ನೀರು-ತೆರಿಗೆ ಪಡೆಯಲು ಅಧಿಕಾರವಿಲ್ಲ. ಸರಕಾರವು ವಿಚಾರ ಮಾಡಿ ಕೆರೆಗಳನ್ನು ನೆಟ್ಟಗಿಡಲು ಆಗದಿದ್ದರೆ ನೀರು-ತೆರಿಗೆಯನ್ನು ತೀರ್ವೆಯೊಳಗಿಂದ ಕಡಿಮೆ ಮಾಡಬೇಕು. ನೀರು-ತೆರಿಗೆಯನ್ನು ತೀರ್ವೆಯಲ್ಲಿ ಸೇರಿಸಿ ಜನಸಾಮಾನ್ಯರಿಗೆ ತಿಳಿಯುವಂತೆ ವಸೂಲ ಮಾಡುವ ಕ್ರಮವನ್ನು ನಿಲ್ಲಿಸಬೇಕು.

---

೪. ತೀರ್ವೆ ಆಕರಣೆಯ ವಿಚಾರ ಮಾಡುವಾಗ ಪ್ರಯೋಗಾರ್ಥವಾಗಿ ಸರಕಾರವು ಕೆಲ ಗ್ರಾಮಗಳನ್ನು ಹಿಡಿಸಿಕೊಂಡು ತೀರ್ವೆಯ ಅಂಶವಾರಿಯನ್ನು ನಿರ್ಧರಿಸಬಹುದಾಗಿ ನಾವು ಮುಂಬಯಿ ಕಾಯಿದೆ ಕೌನ್ಸಿಲಿನೊಳಗಿನ ಚರ್ಚೆಯನ್ನು ಉಲ್ಲೇಖಿಸಿ ಸೂಚಿಸಿದ್ದೆವು. ಸರಕಾರವು ಶೇಕಡಾ ಐವತ್ತರಂತೆ, ಆರರಂತೆ ತೀರ್ವೆ ಆಕರಿಸುತ್ತದಾಗಿ ಹೇಳುತ್ತದಲ್ಲವೇ? ಒಂದೆರಡು ವರುಷ ಆ ಗ್ರಾಮಗಳನ್ನು ಹಿಡಿಸಿಕೊಂಡು ಬೇಸಾಯಗಾರರಿಗೆ ತೀರ್ವೆ ಪ್ರಮಾಣಕ್ಕೆ ಸಿಕ್ಕುವ ಉತ್ಪತ್ತಿಯನ್ನು ಹಂಚಬಹುದೆಂದು ಸೂಚಿಸಿದ್ದೆವು. ಆದರೆ ಇಂಥ ಪ್ರಯೋಗ ಮಾಡುವ ಅವಶ್ಯಕತೆ ಸಹ ಇದ್ದಂತಿಲ್ಲ. ಸರಕಾರಕ್ಕೆ ಬೇಸಾಯಗಾರರ ಉತ್ಪತ್ತಿಯ ಪ್ರಮಾಣ ತಿಳಕೊಳ್ಳಲು ಇದೀಗಲೇ ಒಂದು ಸಾಧನವಿದೆ. ಸರಕಾರವು ಆಸ್ತಿವಂತ ಅಪ್ರಾಪ್ತವಯಸ್ಕರ ಆಡಳಿತೆಯನ್ನು ವಹಿಸಿಕೊಂಡು ನಡಿಸುತ್ತಿದೆ. ಪ್ರತಿಯೊಂದು ಜಿಲ್ಲೆಯಲ್ಲಿ ಸರಕಾರದ ಕಡೆ ಅಪ್ರಾಪ್ತವಯಸ್ಕರ ಆಸ್ತಿಯ ಆಡಳಿತೆಯಿದೆ. ಸರಕಾರವು ಆ ಆಸ್ತಿಗಳ ೧೦-೧೫ ವರುಷಗಳ ಉತ್ಪನ್ನವನ್ನು ಪರಾಂಬರಿಸಿ ತೀರ್ವೆಯು ಎಷ್ಟನೇಯ ಪಾಲು ಬೇಸಾಯಗಾರರಿಗೆ ಉಳಿಯುತ್ತದೆಂದು ಗಣಿತ ಹಾಕಬಹುದು. ಇವನ್ನು ಪರಾಂಬರಿಸಿದ್ದಲ್ಲಿ ಆಯಾ ಹಳ್ಳಿಗಳ ಪರಿಸ್ಥಿತಿಯು ಸರಕಾರಕ್ಕೆ ಪ್ರತ್ಯಕ್ಷೀಭೂತವಾಗುವದು. ಇವನ್ನಾದರೂ ಅಭ್ಯಾಸ ಮಾಡಿ ಸರಕಾರವು ಒಕ್ಕಲಿಗರ ಸ್ಥಿತಿಯನ್ನು ಗ್ರಹಿಸಿ ಧರಿಕಂದಾಯ ಪದ್ಧತಿಯನ್ನು ಆಮೂಲಾಗ್ರ ತಿದ್ದುಪಡಿ ಮಾಡಬೇಕಾಗಿ ಸೂಚನೆ.

---

೫. ಈ ವರ್ಷದ ತೀರ್ವೆ ವಸೂಲಿಯಲ್ಲಿ ಶೇಕಡಾ ೧೫ಯಂತೆ ಅಂದರೆ ರೂಪಾಯಿಗೆ ೩ ಆಣೆಯಂತೆ ಸೂಟ ಬಿಡಬೇಕಾಗಿ ಸರಕಾರದಿಂದ ಜಿಲ್ಹಾಧಿಪರಿಗೆ ಒಕ್ಕಿಬಂದಿರುತ್ತದಾಗಿ ಕಾರವಾರದಿಂದ ಸುದ್ದಿಗಾರರೊಬ್ಬರು ತಿಳಿಸುತ್ತಾರೆ. ಮೊದಲನೇ ಹಪ್ತೆಗೆ ಕೊಟ್ಟ ತೀರ್ವೆಯಲ್ಲಿಯೂ ರೂಪಾಯಿಗೆ ೩ ಆಣೆ ಸೂಟ ಸಿಗುವದಂತೆ. ಈ ಸುದ್ದಿ ನಿಜವಿದ್ದಲ್ಲಿ ಕೆಲ ಮಟ್ಟಿಗೆ ಸಮಾಧಾನವೆಂದು ಹೇಳಬಹುದು. ಇಂಥ ಉಪಾಯಗಳಿಂದ ಬೇಸಾಯಗಾರರ ಕಷ್ಟನಿವಾರಣೆಯಾಗದು. ನಮ್ಮ ಪ್ರಾಂತಿಕ ಸರಕಾರವು ಯಾವ ಪ್ರಮಾಣ ಹಿಡಿದು ಈ ಹುಕುಮು ಹೊರಡಿಸಿರುವದಾಗಿ ನಮಗೆ ತಿಳಿಯದು. ಕಾಳು-ಕಡಿಗಳ ದರದ ಪ್ರಮಾಣವನ್ನು ಹಿಡಿದಿದ್ದಲ್ಲಿ ರೂಪಾಯಿಗೆ ೪-೬ ಆಣೆ ಸಹಜವಾಗಿ ಸೂಟ ಆಗಬೇಕು. ಪಂಜಾಬದ ಗವ್ಹರ್ನರರು ಲಾಯಲ್‌ಪುರದಲ್ಲಿ ಆರಳೆಯ ... ಯ ಉದ್ಘಾಟನ ಸಮಾರಂಭದ ಕಾಲಕ್ಕೆ ಧಾನ್ಯಗಳ ದರ ವಿಚಾರ ಮಾಡಿದ್ದಲ್ಲಿ ರೂ.ಗೆ ಎಂಟಾಣೆಯಂತೆ ತೀರ್ವೆ ಕುಗ್ಗುವದಾಗಿ ಹೇಳಿದ್ದುಂಟು. ಪಂಜಾಬ ಪ್ರಾಂತದಲ್ಲಿ ಇದ್ದ ಕಾಳು-ಕಡಿಗಳ ದರಗಳೇ ಇಡೀ ಹಿಂದುಸ್ಥಾನದಲ್ಲಿವೆ. ಇಂಥ ಪ್ರಸಕ್ತಿಯಲ್ಲಿ ಬರೀ ಎರಡಾಣೆಯಿಂದ ಬೇಸಾಯಗಾರರಿಗೆ ಸಮಾಧಾನವಾಗದು. ಸರಕಾರವು ಮತ್ತೂ ವಿಚಾರ ಮಾಡಿ ಸೂಟಿನ ಪ್ರಮಾಣವನ್ನು ಶೇಕಡಾ ೩೦ರ ತನಕ ಏರಿಸಬೇಕಾಗಿ ನಮ್ಮ ವಿನಂತಿಯಿದೆ. ಬಂಜರು ಬಿದ್ದ ಭೂಮಿಗಳ ವಿಚಾರ ಮಾಡದೆ, ಉತ್ಪತ್ತಿಯ ಪ್ರಮಾಣವನ್ನು ಲೆಕ್ಕಕ್ಕೆ ಹಿಡಿಯದೆ ಬರೀ ದರಗಳ ಮೇಲಿಂದಲೇ ಬೇಸಾಯಗಾರರು ಈ ಪ್ರಮಾಣದಂತೆ ಸೂಟ ಪಡೆಯಲಿಕ್ಕೆ ಹಕ್ಕುದಾರರಿದ್ದಾರೆ. ಸರಕಾರವು ಈ ಪ್ರಮಾಣದಂತೆ ಸೂಟ ಕೊಡುವದು ಧರ್ಮಕ್ಕಲ್ಲ. ಧಾನ್ಯಗಳ ದರ ಇಳಿದಾಗ ಸರಕಾರಕ್ಕೆ ಹೆಚ್ಚಿನ ದರದಿಂದ ತೀರ್ವೆ ವಸೂಲ ಮಾಡಲಿಕ್ಕೆ ಹಕ್ಕೇ ಇಲ್ಲ. ಸರಕಾರವು ತ್ವರೆಯಿಂದ ಪುನರಾಲೋಚಿಸಿ ತಕ್ಕ ತಿದ್ದುಪಾಟ ಮಾಡಿ ಜಿಲ್ಹಾಧಿಪರಿಗೆ ಅಪ್ಪಣೆ ಹೊರಡಿಸಬೇಕಾಗಿ ವಿನಂತಿ.

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪ್ರೊಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಘ.

ಪೋಲಿಸಿದಾರರಿಗೆ ವಿಶೇಷ ರಿಯಾಯತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ
ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ
ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ. ಸೂ. 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪೋಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.]

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!
ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.
ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು:— ಮೆಸರ್ಸ್ ಜೀವನ ಏಜನ್ಸಿ, ಕಾರವಾರ.

ಸುಲಭ ಕ್ರಯ! **ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ.** ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಇಂತಹ ಮೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಬಲವೂ ಪರಿಮಳವೂ ಆಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ಪೋ.ವಿ. ೪ ಆಣೆ ಡಜನ್ ೧ಕ್ಕೆ ರೂ. ೩-೮-೦. ವಿ. ಪಿ. ೦-೫-೦.

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ.ಬಾ. ೫೧೦, ಪಾರ್ಕಟೌನ್, ಮದರಾಸ.

ಕಾನಡಾವೃತ್ತ.

ಶ್ರೀ ಭಾವ ಸಂ। ಫಾಲ್ಗುಣ ಕೃ ೧೩, ಸೋಮವಾರ.

ತೀರ ಸತ್ಯ ಮಾತು!

"Self-preservation was man's first Law."

—Sir James Grigg.

ಮೊನ್ನೆ ಶಾಯಿದೆ ಕೌನ್ಸಿಲಿನಲ್ಲಿ ಫಿನೆನ್ಸ ಬಿಲ್ಲಿನ ಮೇಲೆ ವಾರ್ಷಿಕ ಕರಹೇರಿಕೆಯ ಚರ್ಚೆ ನಡೆದಿತ್ತು. ಆ ಸಮಯ ಲೋಕಪಕ್ಷದ ಸಭಾಸದರು ರಾಜ್ಯಾಡಳಿತೆಯ ದುಂದುಗಾರಿಕೆಯನ್ನು ಬಲವಾಗಿ ಟೀಕಿಸಿ, ವಾರ್ಷಿಕ ಕರಹೇರಿಕೆಯ ಕಾನೂನನ್ನು ಸೂಚಿಸಿ ಆ ಕಾನೂನಿನ ಆಧಾರದಂತೆ ಕರಗಳನ್ನು ಎತ್ತುವಳಿ ಮಾಡಲು ಸರಕಾರಕ್ಕೆ ಅಧಿಕಾರವಿಲ್ಲವಾಗಿ ಪ್ರತಿಪಾದಿಸುತ್ತಿದ್ದಾರೆ. ಕೆಲವರು ಸೈನ್ಯ ಖರ್ಚನ್ನು ವಿರೋಧಿಸಿದರು; ಕೆಲವರು ರಾಜ್ಯಾಡಳಿತೆಯ ಖರ್ಚನ್ನು ಟೀಕಿಸಿದರು; ಕೆಲವರು ಆಮದು ತೆರಿಗೆ ಹೇರುವ ಧೋರಣವನ್ನು ಹಳಿದರು; ಹಲವರು ದೇಶತುಂಬ ನಡೆಯುವ ಪಕ್ಷಪಾತವನ್ನೂ, ಹಿಂದವಾಸಿಯರಿಗುಂಟಾಗುವ ಅನ್ಯಾಯವನ್ನೂ, ಬ್ರಿಟಿಶರು ಪಡಕೊಳ್ಳುವ ಪ್ರತ್ಯಕ್ಷಾಪ್ರತ್ಯಕ್ಷ ಪ್ರಯೋಜನವನ್ನೂ ತೋರಿಸಿ ಪರೋಪಕಾರಕ್ಕಾಗಿ ಸಾರ್ವಭೌಮ ಪಂಚಮ ಜೊರ್ಜ ಭೂಪಾಲರು ವಿಶ್ವಾಸದಿಂದ ಹಿಂದಭೂಮಿಗೆ ಕಳುಹಿದ ರಾಜ್ಯಕರ್ತರು ಈ ಪ್ರಕಾರ ವರ್ತಿಸಿ ಹಿಂದಭೂಮಿಯ ದ್ರೋಹ ಮಾಡುವದು ಅಪ್ರಶಸ್ತವೆಂದೂ ಕಡುತರವಾಗಿ ವಿರೋಧಿಸಿದರು. ಅರ್ಥಸಚಿವರಾದ ಸರ್ ಜೇಮ್ಸ ಗ್ರಿಗ್‌ರವರಿಗೂ, ಪಂಡಿತ ಗೋವಿಂದ ವಲ್ಲಭ ಪಂತರವರಿಗೂ ಒಳ್ಳೇ ತಿಕ್ಕಾಟ ನಡೆಯಿತು. ಚಿನ್ನವನ್ನು ದೇಶದೊಳಗಿಂದ ರಫ್ತಾಗಗೊಡಬಾರದಾಗಿ ಎಲ್ಲೆಲ್ಲಿಯೂ ರಾಜ್ಯಧೋರಣವಿದೆ. ಬ್ರಿಟಿಶ ಸಾಮ್ರಾಜ್ಯ ಸರಕಾರವು ಇಂಗ್ಲಂಡ ದೇಶದೊಳಗಿಂದ ಚಿನ್ನ ಹೊರಹೋಗದಂತೆ ಪ್ರತಿಬಂಧ ಮಾಡಿದೆ. ಹೀಗಿದ್ದು ಹಿಂದುಸ್ಥಾನದಲ್ಲಿ ಮಾತ್ರ ಹಾಗೆ ಯಾಕೆ ನಡೆಯುವದಿಲ್ಲ? ಚಿನ್ನವನ್ನು ರಫ್ತಾಗದಂತೆ ನಿರ್ಬಂಧಿಸಬೇಕೆಂದು ವರ್ತಕರೂ, ಲೋಕಪ್ರಮುಖರೂ ಸರಕಾರದ ಕಡೆ ಪರಿಪರಿಯಿಂದ ಬಿನ್ನೈಸಿಕೊಂಡಾಗ್ಯೂ ಸರಕಾರವು ಕೇಳದು. ಇಂಗ್ಲಂಡ–ಹಿಂದುಸ್ಥಾನ ದೇಶಗಳು ಭಿನ್ನ ಭಿನ್ನ ರಾಷ್ಟ್ರಗಳು. ಇಂಗ್ಲಂಡ ದೇಶದೊಳಗಿನ ನಾಣ್ಯ ಬೇರೆ; ಹಿಂದುಸ್ಥಾನದೊಳಗಿನ ನಾಣ್ಯ ಬೇರೆ. ಹೀಗಿದ್ದು ಪವನು-ನೋಟಿಗೂ, ರೂಪಾಯಿ-ನಾಣ್ಯಕ್ಕೂ ಗಂಡ-ಹೆಂಡರಂತೆ ನಿಶ್ಚಿತ ಪ್ರಮಾಣದ ಸೆರಗು ಕಟ್ಟಿ ಹಿಂದವಾಸಿಯರಿಗೆ ನಷ್ಟ ಪಡಿಸುವ ನೀತಿ ಎಲ್ಲಿಯದು? ಪವನು-ನೋಟಿನ ಬೆಲೆ ಇಂಗ್ಲಂಡ ದೇಶದೊಳಗಿನ ಸ್ಥಿತಿಯ ಮೇಲಿಂದ ಹೆಚ್ಚು-ಕಡಿಮೆಯಾಗುತ್ತದೆ. ರೂಪಾಯಿಯ ಬೆಲೆ ಹಿಂದುಸ್ಥಾನದ ಸ್ಥಿತಿಯ ಮೇಲಿಂದ ಹೆಚ್ಚು-ಕಡಿಮೆಯಾಗಬೇಕು. ಪವನು-ನೋಟಿಗೂ ರೂಪಾಯಿಗೂ ಗಂಟು-ಹಾಕಿದ್ದರಿಂದ ಇಂಗ್ಲಂಡದೊಳಗಿನ ಸ್ಥಿತಿಯ ಮೇಲಿಂದ ಅದಕ್ಕನುಸಾರವಾಗಿ, ಅದಕ್ಕಾಧೀನವಾಗಿ, ಅದಕ್ಕನುಕೂಲವಾಗಿ ಹಿಂದುಸ್ಥಾನದೊಳಗಿನ ವ್ಯವಹಾರವು ನಡೆಯಬೇಕಾಗುತ್ತದೆ. ಇದರಿಂದ ಹಿಂದುಸ್ಥಾನಕ್ಕೂ ವಿದೇಶಗಳಿಗೂ ಇರುವ ವ್ಯಾಪಾರ-ಸಂಬಂಧಗಳಲ್ಲಿ ಬ್ರಿಟಿಶ ಧೋರಣವನ್ನೇ ಹಿಂದವಾಸಿಯರು ಅನುಸರಿಸಬೇಕಾಗುತ್ತದೆ. ಬ್ರಿಟಿಶ ವ್ಯವಹಾರದ ಧೋರಣವು ಬ್ರಿಟಿಶರ ಹಿತಸಂಬಂಧದಿಂದ ಕಲ್ಪಿಸಲ್ಪಟ್ಟಿರುತ್ತದೆ. ಹಿಂದವಾಸಿಯರು ಅದೇ ಧೋರಣವನ್ನು ಅನುಸರಿಸಬೇಕಾದ ಬಳಿಕ ಹಿಂದುಸ್ಥಾನದ ಸ್ವತಂತ್ರ ಅಸ್ತಿತ್ವವೆಲ್ಲಿ ಉಳಿಯಿತು? ಹಿಂದುಸ್ಥಾನದ ಸ್ವತಂತ್ರ ವಿಕಾಸವಾಗುವ ಆಶೆಯುಂಟೇ? ಮೇಲಾಗಿ ಹಿಂದುಸ್ಥಾನದ ಸುವರ್ಣ ಸಂಗ್ರಹವೆಲ್ಲ ಇಂಗ್ಲಂಡ ದೇಶದಲ್ಲಿ; ಹಿಂದುಸ್ಥಾನದಲ್ಲಿಲ್ಲ. ಹಿಂದುಸ್ಥಾನದಲ್ಲಿ ನಡಿಸಿದ ವ್ಯಾಪಾರ-ಉದ್ದಿಮೆಗಳಿಂದ ಲಾಭ ಹೊಂದಿದವರು ಇಂಗ್ಲಂಡ ದೇಶಕ್ಕೆ ರಕಮು ಕಳಿಸಿದರೆ ಆ ರಕಮಿನ ಮೇಲೆ ಇನಕಮ್ ಟ್ಯಾಕ್ಸ ಇಲ್ಲ. ಅತ್ತ ಹರಿದುಹೋಗುವ ದೊಡ್ಡ ದೊಡ್ಡ ಸಂಬಳದ ರಕಮುಗಳ ಮೇಲೂ ಇನಕಮ್ ಟ್ಯಾಕ್ಸ ಇಲ್ಲ. ಇದು ರಾಷ್ಟ್ರರಕ್ಷಣವೇ? ರಾಷ್ಟ್ರಭಕ್ಷಣವೇ? ಸರಕಾರವು ಹಿಂದುಸ್ಥಾನದಲ್ಲಿ ಬೇರೆ ಬೇರೆ ಕೆಲಸಗಳಿಗೆ ಅವಶ್ಯವಿದ್ದ ಸಾಮಗ್ರಿಗಳನ್ನು ಇಂಗ್ಲಂಡ ದೇಶದಲ್ಲಿಯೇ ಖರೇದಿ ಮಾಡುತ್ತದೆ. ಪರದೇಶಗಳಲ್ಲಿ ಅಗ್ಗ ದರದಿಂದ ಸಿಗುತ್ತಿದ್ದಾಗ್ಯೂ ಖರೇದಿ ಮಾಡುವದಿಲ್ಲ. ಇದೇಕೆ? ವಿದೇಶಗಳಲ್ಲಿ ಅಗ್ಗವಾಗಿ ಸರಕು ಸಿಗುತ್ತಿದ್ದಾಗ ಇಂಗ್ಲಂಡ ದೇಶದಲ್ಲಿ ತುಟ್ಟಿಯಿಂದ ಸಾಮಗ್ರಿಗಳನ್ನು ಖರೇದಿ ಮಾಡುವ ಕಾರಣವೇನಿದೆ? ಇದರೊಳಗೆ ಹಿಂದುಸ್ಥಾನಕ್ಕೆ ಸಿಗುವ ಲಾಭವೇನು? ಸಾಲ ತೆಗೆಯುವ ಧೋರಣವಾದರೂ ಇದೇ. ಹಿಂದುಸ್ಥಾನದಲ್ಲಿ ಕೋಟ್ಯಾವಧಿ ರೂಪಾಯಿ ಸಾಲ ಸಿಗುವ ಅನುಕೂಲತೆ ಇದ್ದಾಗ ಸರಕಾರವು ಹೆಚ್ಚು ಬಡ್ಡಿ ತೆತ್ತು ಇಂಗ್ಲಂಡ ದೇಶದಲ್ಲಿ ಸಾಲ ತೆಗೆಯುತ್ತದೆ. ಇದರಿಂದ ಹಿಂದುಸ್ಥಾನಕ್ಕೇನು ಲಾಭವಾಗಿದೆ? ಇದರಿಂದ ಸಾಧಿಸುವ ಪರೋಪಕಾರವ್ಯಾವದು? ಸರಕಾರವು ಹೇಳಬಹುದೇ? ಎಂಬದಾಗಿ ಪಂಡಿತ ಗೋವಿಂದ ವಲ್ಲಭ ಪಂತರವರು ಪ್ರಶ್ನಿಸಿದರು. ಇದಕ್ಕೆಲ್ಲ ಒಂದೇ ಉತ್ತರವಿದೆ. ಅದ್ಯಾವದು?

ಸರ್ ಜೇಮ್ಸ ಗ್ರಿಗ್‌ರವರು ಅದೇ ಚರ್ಚೆಯ ಪೂರ್ವಭಾಗದಲ್ಲಿ ನುಡಿದಂತೆ, "Self-preservation was man's first Law." ಅಂದರೆ ಆತ್ಮರಕ್ಷಣೆಯು ಮಾನವನ ಮೊದಲನೇ ಕಾಯಿದೆಯಾಗಿತ್ತು. ಆತ್ಮರಕ್ಷಣೆಗಾಗಿಯೇ ಸರ್ ಜೇಮ್ಸ ಗ್ರಿಗ್ ಪ್ರಭೃತಿ ಬ್ರಿಟಿಶ ಅಧಿಕಾರಿಗಳು ಹಿಂದುಸ್ಥಾನದಲ್ಲಿ ವಿಪರೀತವಾಗಿ ನಡಕೊಳ್ಳುತ್ತಾರೆ. ಸರ್ ಜೇಮ್ಸರವರು ಅಜ್ಞಪುರುಷರಲ್ಲ, ತಜ್ಞ ಪುರುಷರು; ಅರ್ಥಶಾಸ್ತ್ರಕೋವಿದರು. ಅವರ ಅರ್ಥಶಾಸ್ತ್ರವಿಶಾರದತ್ವವನ್ನು ಕಂಡು ಇಂಗ್ಲಂಡ ದೇಶದಿಂದ ಸಾರ್ವಭೌಮರು ಅವರಿಗೆ ಹಿಂದದೇಶದ ಕಲ್ಯಾಣಕ್ಕಾಗಿ, ಹಿಂದದೇಶದ ಸಂಪದಭ್ಯುದಯಕ್ಕಾಗಿ, ಹಿಂದದೇಶದಲ್ಲಿ ತಳವೂರಿಕೊಂಡಿದ್ದ ದಾರಿದ್ರ್ಯಪರಿಹಾರಕ್ಕಾಗಿ ತಕ್ಕ ಉಪಾಯಗಳನ್ನು ಕಲ್ಪಿಸಲೋಸುಗ ಇತ್ತ ಕಡೆ ರವಾನೆಯಾದ ಮಹಾನುಭಾವರು. ಪಂಡಿತ ಗೋವಿಂದ ವಲ್ಲಭ ಪಂತರವರು ಈ ಉಲ್ಲೇಖ ಮಾಡಿ ಇಂಗ್ಲಂಡದಲ್ಲೊಂದು ನಿಮ್ಮ ಧೋರಣ; ಇಲ್ಲೊಂದು ಧೋರಣ; ಹೀಗೆ ಧೋರಣಭೇದ ಮಾಡುವ ಕಾರಣವೇನೆಂದು ಅರ್ಭಾಟಿಸಿ ಕೇಳಿದರು. ಇಂಗ್ಲಂಡಕ್ಕೆ ಹಿತವಾಗುವ ಯೋಜನೆಗಳಿಂದ ಹಿಂದುಸ್ಥಾನಕ್ಕೆ ಹಿತವಾಗಲಾರದೇ? ಹಿತವಾಗಬಾರದೇ? ಎಂಬದಾಗಿಯೂ ಪಂಡಿತ ಗೋವಿಂದ ವಲ್ಲಭ ಪಂತರವರು ಪ್ರತಿಭಟಿಸಿ, ಕೇಳಿ ನಿಷೇಧವೆಂದು ಕರತೆರಿಗೆಯ ಕಾನೂನನ್ನು ಧಿಕ್ಕರಿಸುವ ಮುಂಜಾಗ್ರತೆಯನ್ನೇ ಕೊಟ್ಟುಬಿಟ್ಟಿದ್ದಾರೆ. ಪಂಡಿತ ಗೋವಿಂದ ವಲ್ಲಭ ಪಂತರವರು ಇಷ್ಟು ಆವೇಶಪಡುವ ಕಾರಣವಿಲ್ಲ. ಸರ್ ಜೇಮ್ಸರವರು ಇದ್ದ ಸ್ಥಿತಿಯನ್ನು ಇದ್ದಕ್ಕಿದ್ದ ಹಾಗೆ ಹೇಳಿಬಿಟ್ಟಿದ್ದಾರೆ. ಆತ್ಮರಕ್ಷಣೆಗಾಗಿ, ಅಂದರೆ ಬ್ರಿಟಿಶರ ಪ್ರಯೋಜನಕ್ಕಾಗಿ, ಆ ಪ್ರಯೋಜನದ ಮೇಲೆ ಕಣ್ಣಿಟ್ಟು ಸರ್ ಜೇಮ್ಸರವರು ರಾಜ್ಯದಾಡಳಿತೆಯನ್ನು ನಡಿಸುತ್ತಿದ್ದಾರೆ. ಈ ದೃಷ್ಟಿಕೋನವನ್ನು ಗ್ರಹಿಸಿ ಪಂಡಿತ ಗೋವಿಂದ ವಲ್ಲಭ ಪಂತರವರು ಅವರ ಆಡಳಿತೆಯನ್ನು ಪರಾಂಬರಿಸಿದ್ದಾರೆ. ಸರ್ ಜೇಮ್ಸರವರ ಆಚಾರ-ವಿಚಾರಗಳ ಅವರಿಗೇನೂ ನ್ಯೂನತೆ ಕಂಡುಬರದು. ಬ್ರಿಟಿಶ ಹಿತಸಂಬಂಧಗಳನ್ನು ಸಾಧಿಸುವ ವಿಚಾರದಿಂದಲೇ ಅವರು ಯಾವತ್ತೂ ಆಡಳಿತೆಯನ್ನು ನಡಿಸುತ್ತಿದ್ದಾರೆ. ಅರ್ಥಶಾಸ್ತ್ರದ ವಿಚಾರವನ್ನು ಬ್ರಿಟಿಶ ದೇಶದ ದೃಷ್ಟಿಯಿಂದ ಅಭ್ಯಾಸ ಮಾಡಿದವರವರು; ಹಿಂದುಸ್ಥಾನ ದೇಶದ ಅರ್ಥಶಾಸ್ತ್ರವನ್ನು ಅವರು ಅರಿಯರು. ಹಿಂದುಸ್ಥಾನದ ಗುಣಗಳ್ಯಾವವು? ದೋಷಗಳ್ಯಾವವು? ಗುಣವಿಕಾಸ ಮಾಡುವ ಬಗೆ ಹೇಗೆ? ದೋಷಪರಿಹಾರ ಮಾಡುವ ಉಪಾಯವ್ಯಾವದು? ಎಂಬ ಯಾವದೇ ಸಂಗತಿಗಳನ್ನು ಅವರು ಅರಿಯರು. ಪ್ರಾಮಾಣಿಕತನದಿಂದ ಇಂಗ್ಲಂಡ ದೇಶದ ಅರ್ಥಶಾಸ್ತ್ರಪದ್ಧತಿಯನ್ನು ಇಲ್ಲಿ ಪ್ರಚಾರಗೊಳಿಸಬಯಸುತ್ತಾರೆ.

ಬಾದಶಹರು ಹಿಂದುಸ್ಥಾನದ ಕಲ್ಯಾಣವನ್ನಪೇಕ್ಷಿಸುವ ಪ್ರಜಾವತ್ಸಲ ಭೂಪಾಲರು. ತಮ್ಮ ರಾಜ್ಯದಾಡಳಿತೆಯಿಂದ ಹಿಂದವಾಸಿಯರಿಗೆ ಯಾವತ್ತೂ ಪ್ರಕಾರಗಳಿಂದ ಹಿತವಾಗಿ ಹಿಂದುಸ್ಥಾನ ದೇಶವು ದಿಗಂತ ಕೀರ್ತಿ ಪಡೆಯಬೇಕೆಂಬುದೇ ಸಾರ್ವಭೌಮರ ಉದ್ದೇಶವಿದೆ. ಹಿಂದುಸ್ಥಾನದೊಳಗೆ ಶಾಂತಿಯನ್ನು ಸ್ಥಾಪಿಸಿ ಹಿಂದದೇಶದ ಆಡಳಿತೆಯನ್ನು ಹಿಂದವಾಸಿಯರಿಗೆ ಒಪ್ಪಿಸಿಬಿಡಬೇಕೆಂಬುದೇ ಸಾರ್ವಭೌಮರ ಸತ್ಸಂಕಲ್ಪ. ಅದಕ್ಕಾಗಿ ಬ್ರಿಟಿಶ ದೇಶದಲ್ಲಿ ತಜ್ಞರೆಂದು, ನಿಪುಣರೆಂದು, ನಿಸ್ಣಾತರೆಂದು, ವಿಶಾರದರೆಂದು ಖ್ಯಾತಿಗೊಂಡ ಪುರುಷರನ್ನು ದೊಡ್ಡ ದೊಡ್ಡ ಅಧಿಕಾರಸ್ಥಾನಗಳಿಗೆ ನೇಮಿಸಿ ಇತ್ತ ಕಡೆ ರವಾನೆ ಮಾಡುತ್ತಾರೆ. ಈ ನಿಸ್ಣಾತರ ಜ್ಞಾನದ ಕಕ್ಷೆ ಇಂಗ್ಲಂಡ ದೇಶ. ಹಿಂದುಸ್ಥಾನ ದೇಶದ ಕಲ್ಪನೆಯೇ ಇವರಿಗೆ ಅಪರಿಚಿತವಾದುದು. ಆದರಿಂದ ಬಾದಶಹರು ಮಾನವ ಸ್ವಭಾವದ ಪರಿಮಿತಿಯನ್ನು ಲಕ್ಷಿಸಿ ಹಿಂದುಸ್ಥಾನದ ಪರಿಸ್ಥಿತಿ ಬಲ್ಲಾದ, ಹಿಂದವಾಸಿಯರ ಗುಣ ದೋಷವನ್ನರಿತ ಅರ್ಥಶಾಸ್ತ್ರಜ್ಞರನ್ನು ಅರ್ಥಸಚಿವರನ್ನಾಗಿ ನೇಮಿಸಿದರೆ ಹಿಂದವಾಸಿಯರು ಕಲ್ಯಾಣವಾಗಬಹುದು. ಯಾಕಂದರೆ ಸರ್ ಜೇಮ್ಸರವರು ನುಡಿದಂತೆ, ಆತ್ಮರಕ್ಷಣೆಯು ಮಾನವನ ಪ್ರಥಮ ವಿಚಾರ ವಿಷಯ. ಹಿಂದವಾಸಿ ಅರ್ಥಶಾಸ್ತ್ರಜ್ಞರು ಸ್ವದೇಶದ

ಅಸ್ಪೃಶ್ಯತಾ ನಿವಾರಣ ಪಾಠಮಾಲಾ.

'ಗತಾನುಗತಿಕೋ ಲೋಕಃ' ಎಂಬಂತೆ ನಮ್ಮ ಹಿಂದು ಸಮಾಜದಲ್ಲಿ ಅಜ್ಞಾನದ ಮೂಲಕ ರೂಢವಾಗಿರುವ ಅಸ್ಪೃಶ್ಯತೆ ಎಂಬ ಆಚರಣೆಯು ನೀತಿಗೂ, ನ್ಯಾಯಕ್ಕೂ, ಧರ್ಮಕ್ಕೂ ವಿರುದ್ಧವಾಗಿರುತ್ತದೆಂಬುವದು ಈ ಕೆಳಗಿನ ಪಾಠಗಳಿಂದ ಸಹಜವಾಗಿ ತಿಳಿಯುವಂತಿದೆ.

ಪಾಠ ೧.

ಅವ್ವಾ, ನನಗೆ ಮುಟ್ಟಬೇಡಾ.

ಹುಡುಗ.— ನಾವು ಹೊಲೆಯನಿಗೆ ಯಾಕೆ ಮುಟ್ಟಬಾರದು ?

ತಾಯಿ:— ಯಾಕಂದರೆ, ಅವನು ಹೊಲಸನ್ನು ತೆಗೆಯುತ್ತಾನೆ.

ಹುಡುಗ:— ಹಾಗಾದರೆ ನೀನು ಸಹ ನನ್ನ ಮಗುವಿನ ಮಲವನ್ನು ತೆಗೆಯುವದಿಲ್ಲವೇ ?

ತಾಯಿ:— ಹೌದು. ಆದರೆ ಅವನು ಹೊಲೆಯನು, ನಾನಲ್ಲ.

ಹುಡುಗ:— ಹೊಲೆಯ ಅಂದರೆ ಏನು ?

ತಾಯಿ:— ಯಾರು ಹೊಲಸನ್ನು ತೆಗೆಯುತ್ತಾನೋ ಅವನು.

ಹುಡುಗ:— ಹಾಗಾದರೆ ಅವ್ವಾ, ನೀನು ಹೊಲೆಯಳು, ನನಗೆ ಮುಟ್ಟಬೇಡ.

ತಾಯಿ:— (ನಗುತ್ತ) ಅದ್ಯಾಕೆ? ಹೊಲಸನ್ನು ತೆಗೆದರೂ ನಾನು ಸ್ವಚ್ಛ ಇದ್ದೇನೆ!

ಹುಡುಗ:— ಅವ್ವಾ, ಹೊಲೆಯನು ಸಹ ಸ್ವಚ್ಛನಾಗಲಾರನೇ ?

ತಾಯಿ:— ಸ್ನಾನ ಮಾಡಿ ಸ್ವಚ್ಛ ವಸ್ತ್ರಗಳನ್ನು ಹಾಕಿಕೊಂಡರೆ, ಅವನು ಸ್ವಚ್ಛನಾಗುವನು ಆದರೂ ನಾವು ಅವನನ್ನು ಮುಟ್ಟಬಾರದು.

ಹುಡುಗ:— ಅವ್ವಾ, ಅದ್ಯಾಕೆ? ನನಗೆ ತಿಳಿಯಲಿಲ್ಲ!

ತಾಯಿ:— ಇಂಥ ಅಲ್ಲದ ಪ್ರಶ್ನೆಗಳನ್ನು ಕೇಳಬೇಡ; ನಡೆ ಆಡಲಿಕ್ಕೆ!

ಪಾಠ ೨.

ಕೃತಜ್ಞತೆ.

ತಾಯಿಯು ಮಗುವಿನ ಮೈಯನ್ನು ಚೆನ್ನಾಗಿ ತೊಳೆದು ಸ್ವಚ್ಛ ಮಾಡುವಳು, ತಾಯಿಗೆ ಮಗುವಿನ ಮೇಲೆ, ಮಗುವಿಗೆ ತಾಯಿಯ ಮೇಲೆ ಪ್ರೀತಿ.

ಡಾಕ್ಟರನು ರೋಗಿಯ ಗಾಯವನ್ನು ತೊಳೆದು ಕಟ್ಟುವನು. ರೋಗಿಯು ಡಾಕ್ಟರನಿಗೆ ಕೃತಜ್ಞನಾಗಿರುವನು.

ಹೊಲೆಯನು ಬಂದು ಹೊಲಸನ್ನೆಲ್ಲ ತೆಗೆದು ಸ್ವಚ್ಛ ಮಾಡುವನು. ಆದರೆ, ಆ ಬಡವನ ಮೇಲೆ ಪ್ರೀತಿ ಇಟ್ಟು ಅವನ ಉಪಕಾರವನ್ನು ಸ್ಮರಿಸುವದರ ಬದಲಾಗಿ, ಜನರು ಅವನಿಗೆ ಹೇಳುವದೇನಂದರೆ.— ನೀನು ಅಸ್ಪೃಶ್ಯನಿದ್ದೀ!

ಈ ನಿಮ್ಮ ವರ್ತನವು ಪರಮೇಶ್ವರನಿಗೆ ಎಂದೂ ಸಮ್ಮತವಾಗಲಿಕ್ಕಿಲ್ಲ. ಅವನಿಗೆ ಕೃತಘ್ನರು ಸೇರುವದಿಲ್ಲ.

ಪಾಠ ೩.

ನಾನು ಅವಳಿಗೆ ಮುಟ್ಟುವವಳೇ!

ಹುಡುಗಿ:— ಅವ್ವಾ, ಆ ಝಾಡಮಾಲಿಗೆ ಮುಟ್ಟಲು ನೀನು ಅಷ್ಟೇಕೆ ಅಂಜುವಿ?

ತಾಯಿ:— ನನಗೆ ಮೈಲಿಗೆಯಾಗುವದಿಲ್ಲವೇ ?

ಹುಡುಗಿ:— ಆದರೆ ನಿನ್ನೆ ನಾನು ಅವಳಿಗೆ ಮುಟ್ಟಿದೆನು. ನನಗೆ ಮೈಲಿಗೆಯಾಗಲಿಲ್ಲವಲ್ಲ!

ತಾಯಿ:— (ಗಾಬರಿಯಾಗಿ) ಮೈಲಿಗೆಯಾಗಲಿಲ್ಲ? ಎಲೇ ಪಾಪಿಷ್ಟೇ, ನನಗೆ ಮುಟ್ಟಬೇಡ; ಕಣ್ಣು-ಕಿವಿ ಕೆಡಿಸಿಕೊಂಡೀ; ನಡೆ, ಸ್ನಾನ ಮಾಡು, ಹೋಗು.

ಹುಡುಗಿ:— ಅವ್ವಾ, ಮೈಲಿಗೆ ಅಂದರೆ ಏನು ?

ತಾಯಿ:— ಸುಮ್ಮನೆ ತಲೆ ಒಡೆಸ ಬೇಡ. ದೂರ ಸರಿ. ನನಗೆ ಮುಟ್ಟಬೇಡ.

ಹುಡುಗಿ:— ಸಿಟ್ಟು ಬಂತೆಂದರೆ ನೀನು ಯಾವಾಗಲೂ ನನಗೆ ಹೀಗೆಯೇ ಬಯ್ಯುತ್ತೀ. ಆದರೆ, ಅವ್ವಾ, ಮೈಲಿಗೆ ಅಂದರೆ ಏನೆಂಬುವದನ್ನು ನನಗೆ ಹೇಳಬಾರದೇ ?

ತಾಯಿ:— ನೀನು ಮೂರ್ಖಳಿದ್ದೀ! ನೀನು ಏನು ಇದ್ದೀ!

ಹುಡುಗಿ:— ಅವ್ವಾ, ಝಾಡಮಾಲಿಗೆ ಯಾಕೆ ಮುಟ್ಟಬಾರದೆಂಬದನ್ನು, ನನಗೆ ಹೇಳು. ಅವಳಿಗೆ ಮುಟ್ಟಿದರೆ, ಹ್ಯಾಗೆ ಮೈಲಿಗೆಯಾಗುತ್ತದೆ? ಅದನ್ನು ನನಗೆ ಹೇಳದಿದ್ದರೆ ನಾನು ತಿರುಗಿ ಅವಳಿಗೆ ಮುಟ್ಟುವವಳೇ!

ಪಾಠ ೪.

ಮನೆಗೆ ಮಾರಿ ಪರೋಪಕಾರಿ!

ನಿಮ್ಮ ಹೆಸರೇನು ?

ರಹೀಮಸಾಬ.

ಇಲ್ಲಿ ಒಳಗೆ ಬರ್ರಿ; ಹೀಗೆ ಕೂತುಕೊಳ್ಳಿರಿ.

ನೀನ್ಯಾರೋ ?

ನಾನು ರಾಮಾಸ್ವಾಮಿ.

ನಿನ್ನ ಜಾತಿ ಯಾವುದೋ ?

ಸಮಗಾರ ಜಾತಿಯವನ್ರೀ.

ನಡೆ, ದೂರ ನಿಲ್ಲು.

ಅದೇಕೆ? ರಹೀಮನೂ, ನಾನೂ ಅಣ್ಣ-ತಮ್ಮಂದಿರು. ರಹೀಮನು ನೊನ್ನೆ ಮುಸಲ್ಮಾನನಾಗಿರುವನಷ್ಟೇ. ಅದಕ್ಕಾಗಿಯೇ ಅವನ ಸತ್ಕಾರವೇ? ನಾನು ಮಾತ್ರ ಅಸ್ಪೃಶ್ಯನೇ? ಸ್ವಧರ್ಮನಿಷ್ಠೆಯ ಮೂಲಕ ನನಗೆ ತಿರಸ್ಕಾರವೇ?

ಆದರೆ, ರಹೀಮನು ಸಾಹೇಬನು, ನೀನು ಸಮಗಾರನು. ಅದಕ್ಕೆ ನಾವು ಮಾಡುವದೇನು ?

ರಹೀಮ ಸಾಹೇಬರೇ, ಸಲಾಮು.

ರಾಮಾ, ನಿಲ್ಲಬೇಡ, ನಡೆ ಅಲ್ಲಿಂದ!

ಪಾಠ ೫.

ಅನ್ಯಾಯ.

ನಿರ್ಮಲನು ಯಾರು ?

ಯಾರು ನಿಕ್ಕಲ್ಲಿ ಉಗುಳುವನೋ, ಅವನು. ಯಾರು ನಿಕ್ಕಲ್ಲಿ ಕಸ ಮತ್ತು ಹೊಲಸನ್ನು ಚೆಲ್ಲುವನೋ, ಅವನು.

ಮಲಿನರು ಯಾರು ?

ಯಾರು ಕಸ ಮತ್ತು ಹೊಲಸನ್ನು ತೆಗೆದು ಸ್ವಚ್ಛ ಮಾಡುವರೋ, ಅವರು; ಯಾರಿಂದ ನಮ್ಮ ಆರೋಗ್ಯದ ರಕ್ಷಣೆಯಾಗುವದೋ ಅವರು.

ಅಂದರೆ, ಮಲಿನರು ನಿರ್ಮಲರೆಂತಲೂ, ನಮ್ಮನ್ನು ನಿರ್ಮಲರನ್ನಾಗಿ ಮಾಡುವವರು ಮಲಿನರೆಂತಲೂ, ಅರ್ಥಾತ್ ಅಸ್ಪೃಶ್ಯರೆಂತಲೂ ಎಣಿಸಲ್ಪಡುತ್ತಾರೆ.

ಪಾಠ ೬.

ದೈವಾಧೀನಂ ಕುಲೇ ಜನ್ಮಂ.

ಮೊದಲನೇ ಹುಡುಗ:— ಎಲೋ, ನೀನು ಅಸ್ಪೃಶ್ಯನಿಗೆ ಮುಟ್ಟಿದಿ; ನನಗೆ ಮೈಲಿಗೆಯಾಗಿದೆ, ನನಗೆ ಮುಟ್ಟಬೇಡ.

ಎರಡನೇ ಹುಡುಗ:— ಅವನು ಅಸ್ಪೃಶ್ಯನಲ್ಲ; ಅಸ್ಪೃಶ್ಯನಂತೆ ಅವನು ಕಾಣುವದಿಲ್ಲ; ಅವನು ರಜಪೂತನಂತೆ ಕಾಣುತ್ತಾನೆ

ಮೊದಲನೇ ಹುಡುಗ:— ಆದರೇನಾಯಿತು? ಅವನು ಸ್ನಾನ ಮಾಡಿ ಹೊಸ ಅರಿವೆಗಳನ್ನು ಹಾಕಿಕೊಂಡಿರುವನಷ್ಟೇ.

ಎರಡನೇ ಹುಡುಗ:— ಹಾಗಿದ್ದ ಮೇಲೆ ನಾವು ಅವನಿಗೆ ಯಾಕೆ ಮುಟ್ಟಬಾರದು ?

ಮೊದಲನೇ ಹುಡುಗ:— ಯಾಕಂದರೆ, ಅವನ ಜನ್ಮವು ಹೊಲೆಯನ ಹೊಟ್ಟೆಯಲ್ಲಿ ಆಯಿತಂತೆ; ಅವನು ಹೊಲಸನ್ನು ತೆಗೆಯುತ್ತಾನೆ.

ಎರಡನೇ ಹುಡುಗ:— ಇಲ್ಲ. ಈಗ ಅವನು ಆ ಕೆಲಸ ಮಾಡುವದಿಲ್ಲ. ಈಗ ಅವನು ಹೊಲೆಯನಿರದೆ ರಜಪೂತನಿದ್ದಾನೆ

ಮೊದಲನೇ ಹುಡುಗ:— ನೀನು ಮೂರ್ಖನಿದ್ದೀ. ದೂರ ಸರಿ. ನನಗೆ ಮುಟ್ಟಬೇಡ.

ಎರಡನೇ ಹುಡುಗ:— ಒಳ್ಳೇದು. ಹಾಗಾದರೆ ನೀನು ಅಸ್ಪೃಶ್ಯನಿದ್ದಿ! ನಾನು ನಿನಗೆ ಮುಟ್ಟುವದಿಲ್ಲ.

ಪಾಠ ೭.

ಕುಡುಕನಾದರೂ ಬ್ರಾಹ್ಮಣನು ಸ್ಪೃಶ್ಯನೇ!

ಮಾಂಸಭಕ್ಷಕನಾದರೂ ವೈಷ್ಣವನು ಸ್ಪೃಶ್ಯನೇ!

ಬಡಬಗ್ಗರಿಗೆ ಯಮನಾಗಿದ್ದರೂ ಸ್ವಾರ್ಥಿ ಸಾಹುಕಾರನು ಸ್ಪೃಶ್ಯನೇ!

ಲಂಚ ತಿನ್ನುವವನಾದರೂ ಬ್ರಾಹ್ಮಣ ನ್ಯಾಯಾಧೀಶನು ಸ್ಪೃಶ್ಯನೇ!

ಮಲಿನನಿರಲಿ-ಮೋಸಗಾರನಿರಲಿ, ಕುಡುಕನಿರಲಿ-ಕಾಮುಕನಿರಲಿ, ಕಳ್ಳನಿರಲಿ-ಕೊಲೆಗಡುಕನಿರಲಿ, ಬ್ರಾಹ್ಮಣನು, ಕ್ಷತ್ರಿಯನು, ವೈಶ್ಯನು, ಶೂದ್ರನು ಎಲ್ಲರೂ ಸ್ಪೃಶ್ಯರೇ!

ಆದರೆ, ನಿರ್ಮಲನಿರಲಿ, ನಿರಪರಾಧಿಯಿರಲಿ, ನ್ಯಾಯಪ್ರಿಯನಿರಲಿ, ನಿರ್ವ್ಯಸನಿಯಿರಲಿ, ಸಾತ್ವಿಕನಿರಲಿ, ದೇವತಾಪುರುಷನೇ ಇರಲಿ, ಅಸ್ಪೃಶ್ಯನು ಅಸ್ಪೃಶ್ಯನೇ!

ಪರಮೇಶ್ವರನು ಸರ್ವವ್ಯಾಪಿಯೆಂದೆನ್ನುತ್ತಾರಲ್ಲವೇ? ಅಂದ ಮೇಲೆ ಇದೆಂಥ ಮೂರ್ಖತನ?

ಮೇಲಿನ ಪಾಠಗಳನ್ನು ಓದಿ ಮನನ ಮಾಡಿ ವಾಚಕ ಮಹಾಶಯರು ಮನಸ್ಸಿನಲ್ಲಿ ಬರುವ ವಿಚಾರಗಳನ್ನು ಆಚರಣೆಯಲ್ಲಿ ತಂದು, ನಮ್ಮ ಧರ್ಮಕ್ಕೂ, ರಾಷ್ಟ್ರಕ್ಕೂ ವಿಘಾತಕವಾಗಿರುವ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮನಃಪೂರ್ವಕವಾಗಿ ಯತ್ನಿಸುವರಾಗಿ ನಂಬಿದ್ದೇವೆ.

ವಿಠ್ಠಲ ಅನಂತ ಜೋಶಿ,
ಕಾರ್ಯದರ್ಶಿ, ಕಾನಡಾ ಜಿಲ್ಹಾ ಹರಿಜನ ಸೇವಕ ಸಂಘ, ಶಿರಸಿ.

ಎಸ್. ಎನ್. ಕೇಶವೈನ್,
ಅಧ್ಯಕ್ಷ.

ಕೆಲ ಕಾರಸ್ಥಾನಗಳು

[ನಿರೀಕ್ಷಕನು ಬರೆದುದು]

(೬ನೇ ಪಾನಿನಿಂದ ಮುಂದವರಿಸಿದ್ದು)

ಹಡಗ ಪಡೆಗಳನ್ನೂ ಬೆಳಸುತ್ತಿದ್ದಾರೆ. ನಮ್ಮ ಹಿಂದುಸ್ಥಾನದ ಗಡಿನಾಡಿನಲ್ಲಿಯೂ ಶಾಂತತೆಯಿಲ್ಲ ಲೋಳಿಗಾಪ್ರ ಪ್ರದೇಶದಲ್ಲಿ ಫಕೀರ ಅಲಂಗೀರ ಪಾಳೆಯಗಾರರು ದಂಡೆತ್ತಿ ಒಂದು ಹಾವಳಿ ಮಾಡುತ್ತಾರಂತೆ. ಆ ಪ್ರದೇಶದಲ್ಲಿ ಸೈನ್ಯ ಸಂಚಾರಕ್ಕಾಗಿ ಮಾರ್ಗ ಕಟ್ಟಿಸಲು ಅವರ ಆಕ್ಷೇಪವಿರುವದಾಗಿ ತಿಳಿಯುತ್ತದೆ ಚೀನ — ತುರ್ಕಸ್ಥಾನದ ಪಾರ್ಶ್ವದಲ್ಲಿಯೂ ತಿಬೇಟ ಪ್ರಾಂತದಲ್ಲಿಯೂ ಬ್ರಿಟಿಶರೂ, ರಶ್ಯರೂ ತಮ್ಮತಮ್ಮ ಸ್ವಾರ್ಥಕ್ಕಾಗಿ ಕಾರಸ್ಥಾನ ನಡಿಸುತ್ತಿದ್ದಾರ ಚೀನ ತುರ್ಕಸ್ಥಾನವು ಹಿಂದುಸ್ಥಾನದ ಬದಿಪಾರ್ಶ್ವದಲ್ಲಿರುವದರಿಂದ ಅಲ್ಲ ರುಶ್ಯರ ಪ ರುಪತ್ಯವ ಇದಂತೆ ಬ್ರಿಟಿಶರು ಪ್ರಯತ್ನಪಡುತ್ತಿದ್ದಾರೆ ಪ್ರಸಂಗದಲ್ಲಿ ಹಿಂದುಸ್ಥಾನದಿಂದ ಸೈನ್ಯ ಕಳುಹಿಸಲು ಅನುಕೂಲವಾಗಬೇಕೆಂದೇ ಮಾರ್ಗಗಳನ್ನು ಕಟ್ಟಿಸುವ ಸಂಕಲ್ಪ! ಮಾರ್ಗ ಕಟ್ಟಗೊಟ್ಟರೆ ಪಾಳೆಯಗಾರರ ಸ್ವಾತಂತ್ರ್ಯ ವಿಹಾರಕ್ಕೆ ನಿರ್ಬಂಧವಾಗುತ್ತದೆ. ಆದರಿಂದ ಫಕೀರ ಅಲಂಗೀರ ಮೊದಲಾದ ಪಾಳೆಯಗಾರರು ಹೀಗೆಗೈದಿದ್ದಾರೆ ಖೈಬರ ಘಟ್ಟದಿಂದ ಯಾರೂ ಹೋಗಬಾರದಂದು ಹಿಂದುಸ್ಥಾನ ಸರಕಾರದ ಅಪ್ಪಣೆ ಹೊರಬಿಡೆ ಈ ಪ್ರಕಾರ ಅಲ್ಲಲ್ಲಿ ನಡೆದ ಮುಖ್ಯ ಮುಖ್ಯ ಕಾರಸ್ಥಾನಗಳನ್ನಷ್ಟು ಸಂಕ್ಷಿಪ್ತವಾಗಿ ವಿವರಿಸಿದ್ದೇನೆ ಮುಂದಿನ ಘಟನೆಯೇನೆಂದು ನಾನೇನು ಹೇಳುವದು? ಮೂಲ ಸಿರಿಕೆಯನ್ನಷ್ಟು ನಿರೀಕ್ಷಿಸಿದ್ದೇನೆ ಮುಂದಿನಮಾತು ಮುಂದ

ವೃತ್ತಸಾರ

— ನಿಜಾಮ ಹೈದರಾಬಾದದೊಳಗಿನ ಶ್ರೀಮಂತ ರಾಜಾ ಬನಸೀಲಾಲ ಮೋತಿಲಾಲರವರು ಆಚಾರ ತೀರಿಕೊಂಡರು. ಇವರ ವಯಸ್ಸು ೭೩ ವರ್ಷ. ಇವರು ಒಳ್ಳೇ ಧರ್ಮಪರಾಯಣರು ೧೦ ಲಕ್ಷ ರೂಪಾಯಿಗಳನ್ನು ಹರಿದ್ವಾರ-ರಾಮೇಶ್ವರ ಮೊದಲಾದ ಕ್ಷೇತ್ರಗಳಲ್ಲಿ ವೆಚ್ಚ ಮಾಡಿ ಧರ್ಮಶಾಲೆಗಳನ್ನು ಕಟ್ಟಿಸಿದ್ದಾರೆ ಹರಿದ್ವಾರದಲ್ಲಿ ಧರ್ಮಶಾಲೆ ಕಟ್ಟಿಸಲಿಕ್ಕೆ ೫ ಲಕ್ಷ ರೂ ಖರ್ಚು.

— ಬಿರಸಿರದಲ್ಲಿ ಜಂಗಲ ಸತ್ಯಾಗ್ರಹದ ಸಮಯ ಪೋಲೀಸರು ಗುಂಡು ಹಾರಿಸಿದ್ದರಷ್ಟೇ! ಆ ಕಾಲದಲ್ಲಿ ತೀರಿಕೊಂಡ ಸತ್ಯಾಗ್ರಹಿಗಳ ಸ್ಮರಣಾರ್ಥ ಚಿರಸಿರ ಸ್ಮಾರಕ ಸ್ತಂಭ ಕಟ್ಟಿಸಿ ಅದರ ಮೇಲೆ ಸ್ಮಾರಕ ಕಾರಣವನ್ನು ಕೊರದಿದ್ದರು. ಅದು ವರ್ತಮಾನಪತ್ರದ ಕಾಯದೆಯಂತ ವರ್ತಮಾನಪತ್ರವಾಗುತ್ತದಾಗಿಯೂ, ಅವನ್ನು ವರ್ತಮಾನ ಪತ್ರದ ಕಾಯಿದೆಯಂತೆ ಪ್ರಕಟಿಸದ್ದರಿಂದ ಬೇಕಾಯಿದೆಶೀರ ಆಗುತ್ತದ ಗಯೂ ಸರಕಾರದ ಅಭಿಪ್ರಾಯವಾಗಿ ಆ ಸ್ತಂಭವನ್ನು ಪೋಲೀಸರು ಮುರಿದು ತೆಗೆದರು. ಈ ಒಗ್ಗ ಸ್ಮಾರಕ ಮಂಡಳದವರು ಠಾಣಾಯ ೧ನೇ ವರ್ಗ ಸಬಜಡ್ಜ ಕೋರ್ಟಿನಲ್ಲಿ ೧೦೨೦ ರೂಪಾಯಿಗಳ ನಷ್ಟದ ಬಗ್ಗೆ ದಾವೆ ಮಾಡಿದರು. ಆ ದಾವೆಯ ವಿಚಾರ ನಡೆದು ಸಬಜಡ್ಜರು ದಾವೆಯನ್ನು ನಿಕ್ಕೊಗೆದಿದ್ದಾರೆ ಸರಕಾರದ ಅಭಿಪ್ರಾಯದಂತೆಯೇ ಸಬಜಡ್ಜರು ಅಭಿಪ್ರಾಯ ಪಟ್ಟರು ಈ ದಾವೆಯನ್ನು ನಡೆಸಲಿಕ್ಕೆ ಮುಂಬಯಿ ಹೈಕೋರ್ಟಿನ ಸರಕಾರಿ ವಕೀಲರಾದ ರಾ. ಬ| ಠಿಂಗಣೇಯವರು ಸರಕಾರದ ಪರವಾಗಿ ಬಂದಿದ್ದರು

— ಪಂ| ಕಮಲಾ ನೆಹರೂರವರ ಪ್ರಕೃತಿ ಕಳೆದ ೩ ತಿಂಗಳುಗಳಿಂದ ಇದ್ದಕ್ಕಿದ್ದ ಹಾಗೆಯೇ ಉಂಟು ತೂಕ ಹೆಚ್ಚಾಗಿದೆ ಆದರೆ ಜ್ವರ ಪೂರ್ಣ ಬಿಟ್ಟು ಹೋಗಲಿಲ್ಲ. ಇನ್ನೂ ೧೦೦-೧೦೧ ಡಿಗ್ರಿ ತನಕ ಜ್ವರ ಬರುತ್ತದೆ. ಹೀಗೆಯೇ ಪ್ರಕೃತಿ ಉಳಿದಲ್ಲಿ ಉಪಚಾರಕ್ಕಾಗಿ ಯುರೋಪ ಖಂಡಕ್ಕೆ ಹೋಗಬೇಕಾದೀತಾಗಿ ಡಾಕ್ಟರರು ಪ್ರಕಟಣೆ ಹೊರಡಿಸಿದ್ದಾರೆ.

— ಮುಂಬಯಿ ಸರಕಾರವು ಜಿಲ್ಲಾಧಿಕಾರಿಗಳಿಗೆ ರಾಷ್ಟ್ರೀಯ ವಾದ್ಯ ಮತ್ತು ರಾಷ್ಟ್ರಧ್ವಜಗಳ ಕುರಿತು ಹೊರಡಿಸಿದ್ದ ಗುಪ್ತ ಸರ್ಕ್ಯುಲರನ್ನು ಕಾಯಿದೆಕೌನ್ಸಿಲಿನ ಸಭಾಸದರಿಗೆ ಪ್ರೂಫೈಸಬೇಕಾಗಿ ಸಭಾಸದರು ಕೇಳಿದ್ದಕ್ಕೆ ಅದನ್ನು ಪ್ರಕಟಿಸಬರುವದಿಲ್ಲವಾಗಿ ಮುಂಬಯಿ ಸರಕಾರದ ಪರವಾಗಿ ಮಿ| ಜೆಲ್ಲರವರು ಉತ್ತರ ಕೊಟ್ಟರು

— ಪಂ| ಮದನ ಮೋಹನ ಮಾಲವೀಯರವರು ಜಾತಿನಿರ್ಣಯವನ್ನು ರದ್ದುಪಡಿಸಿಕೊಳ್ಳುವದಕ್ಕಾಗಿ ಲಂಡನಿಗೆ ಶಿಷ್ಟಮಂಡಳವನ್ನು ಒಯ್ಯುವವರಿದ್ದಾರೆ. ಆ ಮಂಡಳದಲ್ಲಿ ಶ್ರೀ| ಮಾಧವರಾವ ಅಣೇಯವರೂ, ಶ್ರೀ|ಲಕ್ಷ್ಮಣರಾವ ಭೋಪಟಕರರೂ ಸೇರುವರಂತೆ.

— ಮುಂಬಯಿ ವಿಶ್ವವಿದ್ಯಾಲಯದ ಶಿಷ್ಟಮಂಡಳವು ಬೆಳಗಾವಿಗೆ ಬಂದು ಲಿಂಗರಾಜ ಕಾಲೇಜು ನೋಡಿ ಸಂತೋಷಪಟ್ಟಿತು ಕಾಲೇಜದವರು ಬಿ ಏ ತನಕ ಕಲಿಸಲಿಕ್ಕೆ ವಿಶ್ವವಿದ್ಯಾಲಯದವರ ಕಡೆ ಅಪ್ಪಣೆ ಬೇಡಿದ್ದಾರೆ ಶಿಷ್ಟಮಂಡಳ ಕೇಳಿಕೊಂಡು ವಿಶ್ವವಿದ್ಯಾಲಯದವರು ಈ ಅರ್ಜಿಯ ಇತ್ಯರ್ಥ ಮಾಡುವರು ಬಹುತರವಾಗಿ ಅಪ್ಪಣೆ ಸಿಕ್ಕೀತಾಗಿ ಬಲ್ಲವರ ಹೇಳಿಕೆ.

ವಿಕ್ರಿಗೆ ತಯಾರಾಗಿದೆ!

ವೇ|| ಮೊಗೇರಿ ಭಾಸ್ಕರ ಅಡಿಗಳಿಂದ

ಸೂರ್ಯಸಿದ್ಧಾಂತರೀತ್ಯಾ ತಯಾರಿಸಲ್ಪಟ್ಟ,

ಕೆಕ್ಕಾರ ಶ್ರೀ ಧರ್ಮವಿದ್ಯಾಪರಿಷತ್ತಿನ ಆಶ್ರಯ ಪಡೆದ

ಯುವಸಂ|| ಪಂಚಾಂಗವು

ಮಾರಾಟಕ್ಕೆ ಸಿದ್ಧವಾಗಿದೆ.

ನಿಯಮಿತ ಪ್ರತಿಗಳು ತೆಗೆದಿರುವದರಿಂದ,

ಬೇಕಾದವರು ತೀವ್ರ ಬರಕೊಳ್ಳಬೇಕು

ಪತ್ತೆ —

'ಸ್ಟಾರ ಆಫ್ ಕೆನರಾ ಪ್ರೆಸ್," ಕುಮಟಾ.

ಮುಂಬಯಿ ಸ್ವದೇಶಿ ವಸ್ತುಪ್ರದರ್ಶನದಲ್ಲಿ ಉಚ್ಚ ತರಗತಿಯ ಪಾರಿತೋಷಕ ಪಡೆದ,



ವೆಜಿಟೆಬಲ್ ಸೋಪ ವರ್ಕ್ಸ, ಕಲ್ಲಿಕೋಟೆ.

ಡಿಸ್ಟ್ರಿಬ್ಯೂಟರು:- ಬಸ್ಸಿ ಹಿತ್ತಲ ಮಹಮೂದ ಸಾಹೇಬ, ಕುಮಟಾ (ಉ. ಕನ್ನಡ)

ವಿಚಾರ ಮಾಡಿ ಸ್ವದೇಶೋದ್ಧಾರದ ಉಪಾಯಗಳನ್ನು ಬೂಪಾಲರ ಸತ್ಸಂಕಲ್ಪದಂತೆ ಈಡೇರಿಸಿ ದೇಶಕಾರ್ಯವನ್ನೂ, ರಾಜಕಾರ್ಯವನ್ನೂ, ಸ್ವಾಮಿಕಾರ್ಯವನ್ನೂ ಒಮ್ಮೆಲೇ ಸಾಧಿಸಿ ಕೀರ್ತಿ ಪಡೆಯುವರಲ್ಲವೇ? ಸರ್ ಜೇಮ್ಸರವರು ಸತ್ಯವಾದ ಮಾತನ್ನು ಘೂತ್ರರೂಪದಿಂದ ನುಡಿದು ಸತ್ಯಸ್ಥಿತಿಯನ್ನು ಸಂಕ್ಷಿಪ್ತವಾಗಿ ವರ್ಣಿಸಿದ ಬಗ್ಗೆ ನಾವು ಅವರಿಗೆ ಅಭಿನಂದಿಸಿ, ಅವರ ಮೇಲೆ ಅಭ್ಯರ್ಟ ಮಾಡಬಾರದೆಂದು ಪಂಡಿತ ಗೋವಿಂದ ವಲ್ಲಭ ಪಂತರವರಿಗೆಸ್ನೇಹಭಾವದಿಂದ ವಿನಂತಿಮಾಡಿಕೊಳ್ಳುತ್ತೇವೆ ಯಾಕೆಂದರೆ ಸರ್ ಜೇಮ್ಸರವರು ಸಾಮಾನ್ಯ ಮಾನವರು ಮಾನವ ಸ್ವಭಾವಕ್ಕೆ ಮಿಕ್ಕಿ ಅವರು ಹೇಗೆ ನಡಕೊಳ್ಳಬಲ್ಲರು?

ಕೆಲ ಕಾರಸ್ಥಾನಗಳು.

[ನಿರೀಕ್ಷಕನು ಬರೆದುದು.]

ಇತಾಲಿ-ಹಬಸಿ ದೇಶಗಳೊಳಗಿನ ಕಾರಸ್ಥಾನವನ್ನು ಪರಿಶೋಧಿಸಿದರೆ ನನಗಂತು ಪಕ್ಕೆಯೇ ಹತ್ತದು ವಿವಾದ ಪ್ರದೇಶವು ಇತಾಲಿಯ ಸೋಮಾಲಿ ಪ್ರಾಂತದ ಹೊರಸೀಮೆಯಲ್ಲಿದೆಂದು ಕುರುಡರಿಗೆ ಸಹ ಕಾಣಬಹುದು ಕಾಲು ಕೆದರಿ ಇತಾಲಿಯವರು ಈ ಜಗಳವನ್ನೆಬ್ಬಿಸಿದ್ದಾರೆ. ರೋಮ ಪಟ್ಟಣದಲ್ಲಿ ಫ್ರಾನ್ಸ-ಇತಾಲಿ ದೇಶಗಳೊಳಗೆ ಒಂದು ಗುಪ್ತ ಕರಾರನಾಮೆಯಾಗಿದೆ. ಅದರೊಳಗೆ ಹಬಸಿ ದೇಶದ ಸ್ವಾತಂತ್ರ್ಯ ಅಪಹಾರ ಮಾಡಬೇಕೆಂಬ ಕಾರಸ್ಥಾನ ನಿಶ್ಚಯವಾಗಿ ಅದರಂತೆ ಇತಾಲಿಗೆ ಅನುಕೂಲವಾದ ತಮ್ಮ ಪ್ರದೇಶವನ್ನು ಫ್ರೆಂಚರು ಬಿಟ್ಟುಕೊಟ್ಟಿರುತ್ತಾರೆ ಜಪಾನದ ಬೆಂಬಲವನ್ನು ಹಬಸಿ ಅರಸರು ಪಡೆಯುತ್ತಾರೆಂಬದನ್ನು ಒಂದು ಸಂಗತಿ ಮೇಲಿಂದ ನಾನು ಹೇಳಬಲ್ಲೆ ಹಬಸಿ ದೇಶದ ರಾಜಪುತ್ರರಿಗೆ ಜಪಾನ ದೇಶದ ವ್ಹೈಕೌಂಟ ಕುರೋಡಾರವರ ಮಗಳಿಗೆ ಕೊಡಮಾಡಿದ್ದರು, ವಾಙ್ನಿಶ್ಚಯವಾಗಿತ್ತು ಈ ವಿವಾಹವಾದ್ದರೆ ಹಬಸಿ ಸರಕಾರವು ಇತಾಲಿಯ ಶತ್ರುವೆಂದು ಣಿಸಲಾದೀತಾಗಿ ಇತಾಲಿಯ ಮುಸೋಲಿನಿಯವರು ಹಬಸಿ ಅರಸರಿಗೆ ಮುಂಜಾಗ್ರ ಕೊಟ್ಟರಂತೆ. ಅದರಿಂದ ಆ ವಿವಾಹ ಘಟಿಸಲಿ ಹಬಸಿ ಸರಕಾರವು ಇತಾಲಿಗೆ ರೇಗಿಸಲು ತಯಾಲ್ಲ ಇತ್ತಷ್ಟೆನವರೂ ಸ್ನೇಹಿತರಾಗಿಯೇ ಉಳಿಯಬೇಕೆಂದು ಅರಸರ ಬಯಕೆ. ಸಂಧಾನ ನಡೆವದೆಯೆಂದು ಹೇಳುತ್ತಾರೆ. ಪ್ರತ್ಯಕ್ಷ ಸಂಧಾನವಾದ ವಾರ್ತೆ ಮಾತ್ರ ಇನ್ನೂ ಪ್ರಕಟವಾಗಲಿಲ್ಲ. ಯಾವ್ಯಾವ ವಾದಗಳು ಇನ್ನೂ ಉಂಟಾಗಲಾರಂಭಿಸಿವೆಯೆಂದು ನಾನು ಹೇಳಲಾರೆ ಈ ವಿವಾದದಲ್ಲಿ ಬ್ರಿಟಿಶರಿಗೂ ಸಂಬಂಧವಿರುವದಾಗಿ ನಾನು ಈ ಮೊದಲೆ ಹೇಳಿದ್ದೆ. ಬ್ರಿಟಿಶ-ಸೋಮಾಲಿ ಪ್ರಾಂತದಲ್ಲಿ ಊರೂರು ದನ-ಕರುಗಳನ್ನು ಕೊಂಡು ಸಂಚರಿಸಿ ಹೊಟ್ಟೆ ಹೊರಕೊಳ್ಳುವ ದೇಶಸಂಚಾರಿಗಳಿರುವರಂತೆ! ಅವರ ದನಗಳಿಗೆ ಈ ವಿವಾದದಿಂದ ಮೇಯಿಸಲು ತೊಂದರೆಯಾಗಿರುವದಾಗಿ ಮುಂಬಯಿಯ 'ಟೈಮ್ಸ್' ಪತ್ರಿಕೆಯ ಅಂಬೋಣ. ವಿವಾದ ಭೂಮಿಯ ಭಾಗದಲ್ಲಿ ಮನೆಮಾರಿಲ್ಲದ, ದಿಕ್ಕಿಲ್ಲದ ದೇಶಸಂಚಾರಿಗಳು ಅನಾದಿ ಕಾಲದಿಂದ ತಮ್ಮ ದನಗಳನ್ನು ಮೇಯಿಸುತ್ತಿದ್ದರಂತೆ ಆ ಹಕ್ಕಿಗೆ ಬಾಧೆ ಬಂದಿರುವದಾಗಿ ಮುಂಬಯಿ 'ಟೈಮ್ಸ' ಕರ್ತರ ಅಂಬೋಣ ಬ್ರಿಟಿಶರ ಪರೋಪಕಾರ ಲೋಕಕ್ಕೇ ಗೊತ್ತಿದೆ. ದೇಶಸಂಚಾರಿಗಳ ಹಿತರಕ್ಷಣೆಯ ನೆವ ಮಾಡಿ ಬ್ರಿಟಿಶರು ವಿವಾದದಲ್ಲಿ ಸೇರಿ ಇತಾಲಿಯ ಗರ್ವಹರಣ ಮಾಡಲುದ್ಯುಕ್ತರಾಗಿದ್ದಾರೆ ಇತಾಲಿಯ ಪ್ರಾಬಲ್ಯ ಬ್ರಿಟಿಶರಿಗೆ ಸೇರದು ತಮಗೆ ಮುಂದೆ ಬಾಧೆಯಾಗುವದೆಂದು ಅವರಿಗೆ ಭೀತಿ ಅತ್ತ ಜಪಾನಿಯರೂ, ಹಬಸಿ ಸರಕಾರದ ಬೆಂಬಲಕ್ಕಿದ್ದು ಇತಾಲಿಗೆ ವಿರೋಧವಾಗಿ ಕಾರಸ್ಥಾನಗಳನ್ನು ರಚಿಸುತ್ತಿದ್ದಾರೆ. ಜಪಾನ ದೇಶದ ಮೇಲೆಯೂ ಬ್ರಿಟಿಶರ ಕಣ್ಣಿದೆ. ಸಿಂಗಾಪುರವನ್ನು ಭದ್ರಪಡಿಸುವದಕ್ಕಾಗಿ ಸಾಮ್ರಾಜ್ಯ ಸರಕಾರವು ವಿಶ್ವಪ್ರಯತ್ನ ಮಾಡುತ್ತಿರ ಇಂಗ್ಲಂಡದಿಂದ ಸೈನ್ಯ ಇಲಾಖೆಯವರೂ ವಿಮಾನ ಇಲಾಖೆಯವರೂನೌಕಾ ಇಲಾಖೆಯವರು ಸಿಂಗಾಪುರದಲ್ಲಿ ಸೇರಿ ಆ ಠಾಣ್ಯವನ್ನು ಸುರಕ್ಷಿತ ಮಾಡುವ ಆಲೋಚನೆ ನಡಿಸುತ್ತಿದ್ದಾರೆ ಸಿಂಗಾಪುರವು ಹಿಂದುಸ್ಥಾನದ ಪೂರ್ವ ಪಾರ್ಶ್ವದ ಹೆಬ್ಬಾಗಿಲು ಶತ್ರುವನ್ನು ಅಲ್ಲಿಯೇ ಅಡ್ಡಗಟ್ಟಿ ನಿಲ್ಲಿಸಬೇಕಾದ ಠಾಣ್ಯ ಪ್ರತಿಯಾಗಿ ಜಪಾನಿಯರೂ ಕಾರಸ್ಥಾನ ಹೂಡಿದ್ದಾರೆ. ಸಿಯಾಮ ದೇಶವು ಸಿಂಗಾಪುರಕ್ಕೆ ಹೊಂದಿಕೆಯಾಗಿ ಉತ್ತರ ಪಾರ್ಶ್ವದಲ್ಲಿದೆ. ಈ ದೇಶದಲ್ಲಿ ಬ್ರಿಟಿಶರೂ, ಜಪಾನಿಯರೂ ಕೆಲ ಕಾಲದಿಂದ ತಮ್ಮ ತಮ್ಮ ಪಕ್ಷಗಳ ಪರವಾಗಿ ಕಾರಸ್ಥಾನಗಳನ್ನು ನಡಿಸುತ್ತಿದ್ದಾರೆ ಸಿಯಾಮ. ದೇಶದ ಅರಸರಾದ ಪ್ರಜಾಧಿಪೋಕರವರು ಬ್ರಿಟಿಶ ಪಕ್ಷಪಾತಿಗಳು ಲೋಕಸಭೆಯವರು ಜಪಾನ ಪಕ್ಷಪಾತಿಗಳು, ಲೋಕಸಭೆಯವರ ಒಂದೊಂದಾಗಿ ಕಾನೂನನ್ನು ನಿರ್ಮಿಸಿ ರಾಜಾಧಿಕಾರವನ್ನು ಕ್ರಮವಾಗಿ ಸೆಳಕೊಂಡರು. ಘಾತಿ ಶಿಕ್ಷೆಯಾದವರಿಗೆ ರಾಜಕೃಪೆ ಮಾಡಿ ಪ್ರಜಾಪ್ರಾಣ ರಕ್ಷಿಸುವ ರಾಜಾಧಿಕಾರವನ್ನು ಲೋಕಸಭೆಯವರು ಸೆಳಕೊಂಡರು. ಅದರಿಂದ ಅರಸರು ಮುನಿದು ಈಗ ಲಂಡನಿನಲ್ಲಿ ಉಳಕೊಂಡಿದ್ದಾರೆ. ಅವರು ಲೋಕಸಭೆಯ ನಿಯಂತ್ರಣಕ್ಕೆ ಒಪ್ಪಲಿಲ್ಲ, ರಾಜ್ಯತ್ಯಾಗ ಮಾಡಿಬಿಟ್ಟಿದ್ದಾರೆ. ಅವರ ತರುವಾಯ ಅವರ ಅಣ್ಣನ ಮಗಂದಿರಾದ ೯ ವರ್ಷದ ಆನಂದ ಮಹಿದೋಲ ಎಂಬ ರಾಜಪುತ್ರರು ಅರಸರೆಂದು ಪ್ರಕಟಣೆ ಹೊರಟಿದೆ ಸಿಯಾಮದಲ್ಲಿ ಜಪಾನಿಯರ ಪ್ರಾಬಲ್ಯವೇ ಮಿಗಿಲಾದುದು. ಸಿಯಾಮ ದೇಶದ ನೌಕಾಧಿಕಾರಿಗಳೂ, ವಿಮಾನ ಇಲಾಖೆಯವರೂ ಜಪಾನಕ್ಕೆ ಹೋಗಿ ತಕ್ಕ ಶಿಕ್ಷಣ ಪಡೆದು ಬರುತ್ತಾರೆ ಜಪಾನ ದೇಶದಿಂದ ಸಿಯಾಮಕ್ಕೆ ಹೋಗಿ ಶಿಕ್ಷಣ ಕೊಡುವದೂ ಉಂಟು. ಸಿಯಾಮ ದೇಶದ ರಾಜಧಾನಿಯಾದ ಬಂಕೋಕದಲ್ಲಿ ವಿಮಾನ ಠಾಣ್ಯವನ್ನು ಕಟ್ಟಿಸುವದಕ್ಕಾಗಿ ಜಪಾನ ದೇಶದಿಂದ ದೊಡ್ಡ ದೊಡ್ಡ ಇಂಜನಿಯರರು ಹೋಗುವವರಿದ್ದಾರೆ ಜಪಾನ ದೇಶದ ರಾಜಧಾನಿಯಾದ ಟೋಕಿಯೋ ಪಟ್ಟಣಕ್ಕೂ, ಬಂಕೋಕ ಪಟ್ಟಣಕ್ಕೂ ವಿಮಾನ ರಹದಾರಿಯಾಗಲಿಕ್ಕಿದೆ. ಜಪಾನ ದೇಶಕ್ಕೆ ಅಹಿತವಾಗಬಾರದೆಂದು ಸಿಯಾಮದ ಸೇನಾಪತಿ ಮತ್ತು ಮುಖ್ಯ ಪ್ರಧಾನರಾದ ಫಿಯಾಪಹೋಲರವರು ಕ್ರಾ ಕಾಲುವೆ ಕಟ್ಟಿಸುವ ಕಾರ್ಯಕ್ರಮಕ್ಕೆ ತಡೆಹಾಕಿದ್ದಾರೆ ಈ ಕಾಲುವೆ ಕಟ್ಟಿದರೆ ಯುದ್ಧ ಪ್ರಸಂಗದಲ್ಲಿ ಬ್ರಿಟಿಶರಿಗೆ ಒಳ್ಳೇ ಅನುಕೂಲತೆಯಾಗುವಂತಿತ್ತು. ಇದರಮೇಲಿಂದ ಸಿಂಗಾಪುರದ ನೆರೆಯಲ್ಲಿಯೇ ಸಿಯಾಮ ಶತ್ರು ನಿರ್ಮಾಣ ಹೊಂದಿದ್ದಾನೆ. ಬ್ರಿಟಿಶರು ಆತ್ಮರಕ್ಷಣೆಯ ನೆವ ಮಾಡಿ ಸೈನ್ಯ ಇಲಾಖೆಯ ಖರ್ಚನ್ನು ಒಮ್ಮೆಲೇ ಬೆಳೆಸಿಬಿಟ್ಟಿದ್ದಾರೆ. ೩೯|| ಲಕ್ಷ ಪವನು ಖರ್ಚು ಕಳೆದ ವರ್ಷಕ್ಕಿಂತ ಮಿಕ್ಕಿದೆ. ಮುಂದಿನ ಸಾಲಿನಲ್ಲಿ ೪ ಕೋಟಿ ೩೫|| ಲಕ್ಷ ಪವನು ಖರ್ಚ ಮಾಡಲು ಬ್ರಿಟಿಶ ಸಾಮ್ರಾಜ್ಯ ಸರಕಾರದ ಕಾರ್ಯಕ್ರಮ. ಶಸ್ತ್ರಾಸ್ತ್ರಗಳನ್ನು ಕುಗ್ಗಿಸಿ ಲೋಕಹಿತ ಮಾಡಬೇಕೆಂದು ಬಯಸುವ ಬ್ರಿಟಿಶ ದೇಶವು ಶಸ್ತ್ರಾಸ್ತ್ರಗಳನ್ನೂ, ಮದ್ದು-ಗುಂಡುಗಳನ್ನೂ ಹೆಚ್ಚಿಸಬೇಕಾಗಿ ರಚಾಯಿಸಿದ್ದು ಫ್ರೆಂಚರ ದುರ್ಬೋಧನೆಯಿಂದೆಂದು ಜರ್ಮನಿಯ ಆಕ್ಷೇಪ ಜರ್ಮನರು ಅದರಿಂದ ಮುನಿದಿದ್ದಾರೆ ಜಪಾನ-ಅಮೇರಿಕೆಯವರು ತಮ್ಮತಮ್ಮಕ್ಕೆ ಶಸ್ತ್ರಾಸ್ತ್ರಗಳನ್ನೂ,

(ಮುಂದೆ ಪುರವಣಿ ನೋಡಿರಿ)

ದ್ವಿಗುಣವಾದ ಲಾಭವನ್ನು ಹೊಂದಿರಿ!

ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ !!

ಮಕ್ಕಳ ಲಿವರ್ ಕಂಪ್ಲೇಂಟು (ಕೂರ್ಮವ್ಯಾಧಿ) ಮತ್ತು ಜ್ವರಗಡ್ಡೆಗೆ

ಜಮ್ಮಿ ವೆಂಕಟರಮಣಯ್ಯನವರ

'ಲಿವರ್ ಕ್ಯುಅರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಿರಿ!

ಪಟ್ಟಿನ ಮಾಹಿತಿಗೆ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ.)

ಸ್ಥಾನಿಕ ವೃತ್ತಾಂತ.

ಕುಮಟಾ— ಹಗಲು ಬಿಸಿಲು ಬೆಳಗು ಮುಂಜಾನ ಚಳಿ ಬಗೆಗ ರೋಗಗಳು ಕವಿಯುತ್ತಿವೆ ಊರಿನ ಕೆಲವರ ಬೇರೆಗಳು ಇವ ಗುಡಗಾರ ಪೇಟೆಯಲ್ಲಿ ಇಲಿಗಳು ಬೀಳುತ್ತಿವೆ ಒಂದು ಪ್ಲೇಗ ಕೇಸು ಸಂಭವಿಸಿತು ಟೌನ ಮುನಸಿಪಾಲಿಟಿಯವರು ಹಸ್ತಪತ್ರಿಕೆಗಳನ್ನು ಹೊರಡಿಸಿ ಊರವರಿಗೆ ಎಚ್ಚರಿಕೆ ಕೊಟ್ಟಿರುತ್ತಾರೆ. ಇಲಿಗಳು ಪ್ಲೇಗ ಕ್ರಿಮಿಗಳ ಪ್ರಸಾರ ಮಾಡುತ್ತಿರುವದರಿಂದ ಅವುಗಳ ನಾಶ ಮಾಡುವಗೋಸ್ಕರ ಕಮಿಟಿಯವರು ಒಂದು ತರದ ಗುಳಿಗೆಗಳನ್ನು ಕಮಾಂಸಿಟ್ಟಿದ್ದಾರೆ ಗುಳಿಗೆಗಳು ಬೇಕಾದವರಿಗೆ ಪುಕ್ಕಟೆ ಸಿಗವವು ಇಲಿ ಬಿದ್ದ ಮನೆಗಳಲ್ಲಿ ಮ್ಯುನಿಸಿಪಾಲಿಟಿಯವರು "ಎಮುಲ್ಷನ" ಹೊಡೆದು ಸ್ವಚ್ಛ ಮಾಡುವರು ಬಸ್ತಿಯಲ್ಲಿ ಪ್ಲೇಗ ದಾಕು ತೆಗೆಯುವ ವ್ಯವಸ್ಥೆಯು ಮಾಡಲ್ಪಟ್ಟಿದೆ ಜನರೆಲ್ಲರೂ ತಮ್ಮ ತಮ್ಮ ಮನೆ ಮನೆ ಆವಾರುಗಳಲ್ಲಿ ಪೂರ್ಣ ಸ್ವಚ್ಛತೆಯಿಟ್ಟು ಜಾಗ್ರತೆಯಿಂದ ನಡೆಯಬೇಕು

ಮು| ಜಿಲ್ಲಾ ಕಲೆಕ್ಟರರ ಮುಕ್ಕಾಮು ತಾ ೧೩ರಿಂದ ೧೫ರ ವರೆಗೆ ಇಲ್ಲಿ ಇತ್ತು. ಕನಿಷ್ಠ ಬೆಳ್ಳ್ಯ ಪತ್ರಗಾಲಿಗೆ ಹೋಯಿತು

ಶ್ರೀ ಚಂದ್ರಕಲಾ ಕರ್ನಾಟಕ ನಾಟಕ ಮಂಡಳಿಯವರು ಹೋದ ಸೋಮವಾರ ಪ್ರೇಮ-ಲೀಲಾ ಮತ್ತು 'ಹೋಮ್-ರೂಲ' ಹೀಗೆ ಎರಡು ನಾಟಕಗಳನ್ನಾಡಿ ತೋರಿಸಿ ಆದಾಯದ ತಿಕೀಟು ದರಿಂದ ಬಂದದ್ದರಿಂದ ರೂ. ೧೦॥ ನ್ನು ಸವಾಸ್ಕೂಲ ರಚಕ ಫಂಡು ಕ್ಕೆ ಸಿಗೆ ಅರ್ಪಿಸಿದರು

ಪ್ಲೇಗಿನ ಗಂಟು ಬಂದವರಿಗೆ ನಾಗದಾಳಿ (ಮುಳ್ಳುಗಳ್ಳಿಯ ಎಲೆಗಳನ್ನು ತಂದು ವ ಳ್ಳಗಳನ್ನು ತರಿ ತೆಗೆದು ಆ ಮೇಲೆ ಅವುಗಳಿಗೆ ಕಾಡು ಅರಿಸಿನ (ಅಮ್ಮಾಸಳದಿ) ಪುಡಿ ಹಚ್ಚಿ, ಬೆಂಕಿಯ ಮೇಲೆ ಕಾಸಿ ಎಲೆಗಳನ್ನು ಗಂಟಿಗೆ ಕಟ್ಟಬೇಕಾಗಿದೆ. ೩-೪ ತಾಸುಗಳಿಗೊಮ್ಮೆ ಈ ಪ್ರಯೋಗ ಮಾಡಬೇಕಾಗಿದೆ ಒಬ್ಬರು ಹೇಳುತ್ತಾರೆ ಈ ಪ್ರಯೋಗದಿಂದ ಗಂಟುಗಳು ಕರಗಿ ಜ್ವರವು ಇಳಿಯುತ್ತದಂತೆ ಇದೇನು ಹೊಟ್ಟೆಯಲ್ಲಿ ಕೊಡತಕ್ಕ ಔಷಧವಲ್ಲ ಬಾಹ್ಯ ಉಪಚಾರವು ಪ್ಲೇಗು ಬಂದ ಮನೆಯವರು ಈ ಪ್ರಯೋಗ ಮಾಡಿ ಅನುಭವ ಕೊಳ್ಳಬಹುದು

ಊರಲ್ಲಿ ಕಳ್ಳ ಪ್ರವೃತ್ತಿ ಕಳವುಗಳು ಮಿತಿಲಾಗಿವೆ ೮-೧೦ ದಿನಗಳ ಹಿಂದೆ ತಾಂತ್ರಿಗಲ್ಲಿಯ ಒಳಿ ಬಳ ಮುಂಜೆ ಹಪ್ಪಂಡಲ್ಲಿ ಹೆಣ್ಣು-ಮಗಳೊಬ್ಬಳು ಎಬ್ಬಿಸಿದ್ದರಿಂದ ಹೊರ ಜಗಲಿಯ ಮೇಲೆ ಒಂದು ಬಿಗಿ ಮಲಗಿಕೊಂಡಿದ್ದಳು ಕಳ್ಳರು ಆಕೆಯ ಮೈಮೇಲೆ ಕೈಮಾಡಿ ಕೊರಳೊಳಗಿನ ಬೋರೀಸರವನ್ನು ಒಯ್ದರಂತೆ ಚಪ್ಪರದಲ್ಲಿ ಗ್ಯಾಸ ದೀಪ ಉರಿಯುತ್ತಿರುವಾಗ ಈ ಕಳವಾಯಿತಂತೆ! ಕಳ್ಳರು ಪೋಲೀಸರಿಗೆ ತಪ್ಪು ಒಡೆದು ಹೊರಟಿದ್ದಾಗಿ ತಿಳಿಯುತ್ತಿದೆ ಪೋಲೀಸರು ಪತ್ತೆ ಹಚ್ಚಿದ್ದರೆ ಕಳ್ಳರು ಗೊತ್ತಾಗುವರು

ನಿನ್ನೆ ಮಧ್ಯಾಹ್ನಕ್ಕೆ ತೆಂಕಣ ಒರಿಯಿಂದ ಒಂದು ವಿಮಾನು ಕಾರವಾರ ಬದಿಗೆ ಹಾರಿಹೋಯಿತು ವಿಮಾನ್ನು ಕೆಳಗಿನಿಂದಲೇ ಹೋಗುತ್ತಿದ್ದದರಿಂದ ಎಲ್ಲರಿಗೂ ಕಾಣುವಂತಿತ್ತು

ಗೋಕರ್ಣ—(ತಾ ೧೬-೩-೩೫) ಒಬ್ಬರು ತಿಳಿಸುವದೇನಂದರೆ —" ಈಗ ನಮ್ಮ ಊರಲ್ಲಿ ಇರುವ ಕಟ್ಟುವ ದೊಡ್ಡ ಕಾರ್ಯಕ್ರಮವೇ ನಡೆದಿದೆ ಶ್ರೀ ಮಹಾಬಳೇಶ್ವರ ದೇವಸ್ಥಾನದಲ್ಲಿ ಕಟ್ಟೋಣ ಕೆಲಸ ನಡೆದಿದೆ! ಶ್ರೀ ಅಮ್ಮನವರ ದೇವಸ್ಥಾನದಲ್ಲಿ ಕಟ್ಟೋಣ ಕೆಲಸಕ್ಕೆ ಪ್ರಾರಂಭವಾಗಿದೆ ಈ ಕಟ್ಟೋಣ ಕಟಸುವ ರಥದ ನೋಡಿ ಗೋಕರ್ಣಸ್ಥರು ದಿಗಿಲುಬಿದ್ದಿದ್ದರೆ ಇದೆಂಥ ನವ ನೂತನ ಯುಗ ತಿಳಿಯದಂತಿರಲ್ಲ ದೇವಾಲಯ ಕಮಿಟಿಯು ಪ್ರಾರಂಭಿಸಿ ಜೀರ್ಣೋದ್ಧಾರ ಮಾಡಿ ಕಟ್ಟೋಣದ ಕಾರ್ಯಕ್ರಮವನ್ನು ತಿಳಿಯಾಗುವ ವೆಂಕಟೇಶನರ ಮೇಲೆ ನಿರ್ಬಂಧಗಳನ್ನಿಡದಿದ್ದರೆ ದೇವರ ಭಂಡಾರದ ದುರುಪಯೋಗವಾಗುವಂತಿದೆ ದೇವಸ್ಥಾನದವರು ಎಷ್ಟೇನೂ ಇಲ್ಲದೆ ಊರ ಮಹಾಜನರ ಆಲೋಚನೆ ಪಡೆಯದೆ ತಮ್ಮ ಮನಸ್ಸು ಕಂಡಂತೆ ಇಂದಕ್ಕೆ ಏನೂ ಬೇಡವೆನಿಸದೆ ಮನಸ್ಸಿಗೆ ನಡೆಯುತ್ತಿದೆ ಇತ್ಯಾದಿ

ಭಟಕಳ— ತಾ ೧೩-೩-೧೯೩೫) ಕಾನಡಾ ಜಿಲ್ಲಾ ಹರಿಜನ ಸೇವಾ ಸಂಘದ ಕಾರ್ಯದರ್ಶಿಗಳಾದ ರಾ| ವಿಠ್ಠಲರಾವ ಹೊದ್ಕೆಯವರು ಕಳೆದ ರವಿವಾರ ಇಲ್ಲಿ ಒಂದು ಸ್ಥಾನಿಕ ಹರಿಜನ ಶಾಲೆಗೆ ಭೆಟ್ಟಿ ಕೊಟ್ಟು ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಿದರು ಅದೇ ದಿನ ರಾತ್ರಿ ೮ ಘಂಟೆಗೆ ಹರಿಜನರ ಸಭೆಸೇರಿತು ರಾ ಹೊದ್ಕೆಯವರು ನೆರೆದವರಿಗೆ ಶುಚಿತ್ವದ ಬಗ್ಗೆಯೂ ಮಕ್ಕಳಿಗೆ ಶಾಲೆಗೆ ಕಳಿಸಿಕೊಡಬೇಕೆಂಬಲೂ ಸ್ಪಷ್ಟತೆಯಿಂದ ನಡೆಯಬೇಕೆಂಬಲೂ ಬೋಧ ಮಾಡಿದರು ಹರಿಜನ ಶಾಲೆಯ ಶಿಕ್ಷಕ ಮೊದಲಾದವರು ತಾವು ಮಧ್ಯಪಾನ ಮಾಡಲಿಕ್ಕಿಲ್ಲವಾಗಿ ಒಪ್ಪಿ ಕೊಟ್ಟದ್ದರೆ ಶಾಲೆಯ ವಿದ್ಯಾರ್ಥಿಗಳು ಮದ್ಯಸ್ಪರ್ಶ ಮಾಡದಂತೆ ಅವರಿಗೆ ಕಲಿಸುವೆವಾಗಿ ವಚನ ಕೊಟ್ಟರು

ಕಳೆದ ೯ ನೇ ಮಂಗಳವಾರ ಭಟಕಳ ಮ್ಯುನಿಸಿಪಾಲಿಟಿಯ ಜನರಲ್ ಸಭೆಯಲ್ಲಿ ಆಗಾಮಿ ವರ್ಷದ ಜಮಾ ಖರ್ಚು ಪತ್ರಿಕೆಯು ಚರ್ಚೆಯಾಯಿತು ಸದ್ಯಕ್ಕೆ ಮ್ಯುನಿಸಿಪಾಲಿಟಿಯ ಸಾಂಪತ್ತಿಕ ಸ್ಥಿತಿಯು ನೆಟ್ಟಗಿಲ್ಲವಾದ್ದರಿಂದ ರಸ್ತೆಗಳ ಮೇಲೆ ಗ್ಯಾಸದೀಪಗಳ ಬೆಳಕು ಬೇಡವೆಂದು ಅಧ್ಯಕ್ಷರು ಯಾಚಿಸುವರು ಸೂಚಿಸಿದ್ದರು ಗ್ಯಾಸದೀಪಗಳ ಸೂಚನೆಗೆ ಅನುಕೂಲ ಪ್ರತಿಕೂಲ ಮತಗಳು ಸರಿಬಿದ್ದದರಿಂದ ಅಧ್ಯಕ್ಷರು ತಮ್ಮ ವಿಶೇಷ ಮತವನ್ನು ಪ್ರತಿಕೂಲ ಪಕ್ಷದಲ್ಲಿ ಗ್ಯಾಸದೀಪಗಳಿಗೆ ಕಾಟು ಹಾಕಿದರು ಪ್ರಧಾನ ಶಿಕ್ಷಣದ ಬಗ್ಗೆ ಮ್ಯುನಿಸಿಪಾಲಿಟಿಯವರು ಜಿಲ್ಲಾ ಲೋಕಲ್ ಬೋರ್ಡಿಗೆ ತರಬೇಕಾದ ಬಾಕಿಯಲ್ಲಿ ಬಿದ್ದಿದೆ ಆ ಕುರಿತು ಬೋರ್ಡಿನವರು ದಾವೆ ಹಾಕುವ ಯೋಚನೆಯಲ್ಲಿದ್ದಾರೆಂತ ಕೇಳುತ್ತದೆ! ಮೈಲಿ ದಾಕು ತೆಗೆಯುವ ಸಂಬಂಧವಾಗಿ ಮ್ಯುನಿಸಿಪಾಲಿಟಿಯವರು ರೂ ೧೦೦ಕ್ಕೆ ಮಿಕ್ಕಿ ಹಣ ಕೊಡುವದು ಉಂಟಂತೆ! ಹೀಗೆಲ್ಲ ಹೊರಗೆ ಸಾಲ ಕೊಡತಕ್ಕದ್ದು ಇರುವಾಗ ಮ್ಯುನಿಸಿಪಾಲಿಟಿಗೆ ಗ್ಯಾಸ ದೀಪಗಳ ಹಾವಳಿ ಯಾಕೆ?

ಸದರಿ ಮುಂಗಡ ಪತ್ರಿಕೆಯಲ್ಲಿ ಹರಿಜನ ಶಾಲೆಗೂ ಎಂಗ್ಲೋ ಉರ್ದು ಶಾಲೆಗೂ ಕೂಡಿ ರೂ ೩೦೦ ಮಂಜೂರ ಆಗಿವೆ ಈ ರಕಮಿನೊಳಗಿಂದ ಹರಿಜನ ಶಾಲೆಗೆಷ್ಟು? ಮತ್ತು ಎಂಗ್ಲೋ ಉರ್ದು ಶಾಲೆಗೆಷ್ಟು? ಎಂದು ಸ್ಪಷ್ಟವಾಗಿರುವದಿಲ್ಲ! ಬಹುಶಃ ಎಲ್ಲ ಎಂಗ್ಲೋ-ಉರ್ದು ಶಾಲೆಯ ಬುಟ್ಟಿಯಲ್ಲಿ ಬಿದ್ದು ಹರಿಜನ ಶಾಲೆಯು ಬಾಯಿಗೆ ಕೈ ಬಂದದಿದ್ದರೆ ಸಾಕು! ಮಾಧ್ಯಮಿಕ ಶಿಕ್ಷಣಕ್ಕಿಂತ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯೇ ಮ್ಯುನಿಸಿಪಾಲಿಟಿಗೆ ಹೊಂದಿದ್ದಾದ ಕಾರಣ ಮ್ಯುನಿಸಿಪಾಲಿಟಿಯವರು ಮೇಲಿನ ರಕಮಿನೊಳಗಿಂದ ದೊಡ್ಡ ಪಾಲನ್ನು ಹರಿಜನ ಶಾಲೆಗೆ ಕೊಡುವದು ಉಚಿತವಾಗಿರುತ್ತದೆ

ರಸ್ತೆಯ ಮೇಲೆ ನೀರು ಹಾಕಲಿಕ್ಕೆ ಮ್ಯುನಿಸಿಪಾಲಿಟಿಯವರು ಕಂಟ್ರಾಕ್ಟು ಕೊಟ್ಟಿದ್ದಾರೆ ದಿನಾ ರೂ ೩ ರಂತೆ ಕಂಟ್ರಾಕ್ಟರರಿಗೆ ತರುತ್ತಾರೆ. ಮ್ಯುನಿಸಿಪಾಲಿಟಿಯವರು ಸ್ವತಃ ೨ ಜನ ನೌಕರರಿಗೆ ಇಟ್ಟು ನೀರು ಹಾಕಿಸಿದ್ದರೆ ಮ್ಯುನಿಸಿಪಾಲಿಟಿಗೆ ದರ ಮಹಾ ರೂ ೩೦ ರಂತೆ ಉಳಿತಾಯವಾಗುತ್ತಿತ್ತೆಂತ ಒಬ್ಬರು ಸೂಚಿಸುತ್ತಾರೆ ೨ ಜನರ ಪಗಾರು ರೂ ೨೪ ೨ ಎತ್ತುಗಳ ಖರ್ಚು ೧೨ ಹೀಗೆ ದರ ಮಹಾ ಖರ್ಚು ರೂಪಾಯಿ ೩೬ ಬರುವದು ಎತ್ತುಗಳ ಕಿತಿಯು ಬೆಲೆ ರೂ ೫೦ ಬೀಳುವದು ಬಂಡಿ ಸರಂಜಾಮು ವಾರ್ಷಿಕ ಖರ್ಚು ರೂ ೪೦ ಕ್ಕೆ ಮಿಕ್ಕುವದಿಲ್ಲವಂತೆ ಮೇಲಾಗಿ ಎಲ್ಲ ಸರಂಜಾಮು ಮ್ಯುನಿಸಿಪಾಲಿಟಿಯವರದೇ ಆಗುವದರಿಂದ ಬೇಕಾದಷ್ಟು ರಸ್ತೆಗಳ ಮೇಲೆ ನೀರು ಹಾಕಿಸಲೂ ಬರುವದಂತೆ ಮ್ಯುನಿಸಿಪಾಲಿಟಿಯು ಈ ಸೂಚನೆ ವಿಚಾರ ಮಾಡಬಹುದು

ರಂಗಿ ಕಟ್ಟೆಯಲ್ಲಿ ಸಂತೆ ಕೂಡಿಸಲು ಪಿರಮಾರಿಗೆ ಬೇಡ ಜಾಗ ಮ್ಯುನಿಸಿಪಾಲಿಟಿಗೆ ಅರ್ಜಿ ಮಾಡಲಾಗಿ ಮ್ಯುನಿಸಿಪಾಲಿಟಿಯವರು ಮ್ಯುನಿಸಿಪಲ್ ಹದ್ದಿನೊಳಗೇ ಸಂತೆಯ ವ್ಯವಸ್ಥೆ ಮಾಡಿಕೊಡುತ್ತೇವಾಗಿ ಠರಾವು ಮಾಡಿದರು. ಹೀಗಾಗಿ ೩ ತಿಂಗಳಾದರೂ ವ್ಯವಸ್ಥೆಯಾಗಿಲ್ಲ ಸಂತೆಗೆ ಯೋಗ್ಯವಾದ ಸ್ಥಳ ಮ್ಯುನಿಸಿಪಲ್ ಚೆಕ್ಕುಬಂದಿಯಲ್ಲಿ ಇರುವದಿಲ್ಲವಾಗಿ ಮುಲ್ಕಿ ಅಧಿಕಾರಿಗಳ ಅಂಬೋಣ! ಇಂಥ ಸ್ಥಿತಿಯಲ್ಲಿ ಮ್ಯುನಿಸಿಪಾಲಿಟಿಯವರು ಎಂಥ ವ್ಯವಸ್ಥೆ ಮಾಡುವರೆಂದು ಅವರಿಗೇ ಗೊತ್ತು. ತಮ್ಮಿಂದ ಯೋಗ್ಯ ಪೇಟೆಯ ವ್ಯವಸ್ಥೆಯಾಗದಿದ್ದರೆ ರಂಗೀಕಟ್ಟೆಯಲ್ಲಿ ಸಂತೆ ಕೂಡಿಸುವರೆ ಅವರು ಯಾಕೆ ಅಪ್ಪಣೆ ಕೊಡಬಾರದು?

ಕಾರವಾರ— ತಾ| ೧೪-೩-೩೫ ಕ್ಕೆ ಜಿಲ್ಲಾ ಲೋಕಲ್ ಬೋರ್ಡಿನ ಸಭೆಯಾಯಿತು ಕಾರವಾರ ತಾಲೂಕಿನ ಸುಪರಿಂಟೆಂಡೆಂಟ ರಾ| ಕಸಬೆ ಕರೆಯಲು ಬರುವ ತಿಂಗಳಿಂದ ರಜೆಯ ಮೇಲೆ ಹೋಗುವವರಿದ್ದಾರಾದ್ದರಿಂದ ಅವರ ಸ್ಥಳದಲ್ಲಿ ಇನ್ನೊಬ್ಬರನ್ನು ನೇಮಿಸುವದು ಅವಶ್ಯವಿತ್ತು ಪ್ರಾಥಮಿಕ ಶಾಲಾ ಶಿಕ್ಷಕರೊಳಗಿನ ಸೀನಿಯರರನ್ನು ನೇಮಿಸಬೇಕೆಂಬ ಬೋರ್ಡಿನ ವಿಚಾರ ವಿತ್ತಂತೆ ಅನೇಕ ಶಿಕ್ಷಕರು ಅರ್ಜಿ ಮಾಡಿದ್ದರು ಕುಮಟಾ ಶಾಲೆಯ ಹೆಡ್ ಮಾಸ್ತರ ರಾ| ಪಾಕ್ಕಿಕೇರಿ ಮತ್ತು ಸಿದ್ದಾಪುರ ಇಂಗ್ಲೀಷ ವರ್ಗಗಳ ಮಾಸ್ತರ ರಾ| ಹೆಗಡೆಯವರ ಬಗ್ಗೆ ಸಭೆಯಲ್ಲಿ ಚರ್ಚೆಯಾಯಿತು! ಈ ತಿಕ್ಕಾಟದೊಳಗೆ ಸದಾಶಿವಗಡ ಶಾಲೆಯ ಮಾಸ್ತರರಾದ ರಾ| ಗುಡಿಕೇರಿ ಎಂಬವರು ಕಡಿಮೆ ಲಾಯಕಿಯವರಿದ್ದಾಗ್ಯೂ ಹೆಚ್ಚಿಗೆ ಮತಗಳನ್ನು ಸಂಪಾದಿಸಿ ಇದ್ದಿಲ್ಲದ ಅರಿಕೆ ಬಂದರು! ಇಬ್ಬರ ನ್ಯಾಯ ಮೂರನೇಯವನ ಲಾಭ' ಎಂಬ ನಾಣ್ಣುಡಿಯಂತೆ ಆಯಿತು! 'ಸೀನಿಯರ' ತತ್ವ ಬಿಟ್ಟು ಮತಬಲದ ಮೇಲೆ ಅವಲಂಬಿಸಿದ್ದರೆ, ಆಗುವ ಅನರ್ಥವಿದೇ!

ಇಲ್ಲಿ 'ಶ್ರೀ ರಾಮ ಸಿನೆಮಾ' ಎಂಬ ಹೆಸರಿನ ಚಲ-ಚ್ಚಿತ್ರಮಂದಿರವು ಮುಂಚೆಯಿಂದಲೇ ಇತ್ತು ಈಗ ಶ್ರೀ ಸರಸ್ವತಿ ಟಾಕೀ ಸಿನೆಮಾ' ಕಂಪನಿಯೊಂದು ನೂತನವಾಗಿ ಸ್ಥಾಪನವಾಗಿದೆ, ಕಳೆದ ತಾ ೧೩ ನೇಗೆ ಈ ಕಂಪನಿಯ ಮೊದಲನೇ ಪ್ರಯೋಗದ ಗಣಪತಿ ಪೂಜೆಯು ಡಿಸ್ಟ್ರಿಕ್ಟ ಜಡ್ಜರಾದ ರಾ|| ಕಾಳಪಿಯವರ ಕೈಯಿಂದ ನಡೆಯಿತು ನಗರದೊಳಗಿನ ಪ್ರತಿಷ್ಠಿತ ಗೃಹಸ್ಥರು ಮಾಲಕರ ನಿಮಂತ್ರಣೆಯ ಮೇರೆಗೆ ಪ್ರಥಮ ಪ್ರಯೋಗಕ್ಕೆ ಬಂದಿದ್ದರು ರಾ| ಕಾಳಪಿಯವರು ಚಿಕ್ಕದೊಂದು ಭಾಷಣ ಮಾಡಿ ಚಲಚ್ಚಿತ್ರಪಟಗಳು ಜನಸಾಮಾನ್ಯರಲ್ಲಿ ಶಿಕ್ಷಣ ಪ್ರಸಾರ ಮಾಡಲು ಉತ್ತಮ ಸಾಧನವಾಗಿವೆಯೆಂತಲೂ, ವ್ಯವಸ್ಥಾಪಕರು ಚಿತ್ರಪಟಗಳನ್ನು ಆರಿಸುವಾಗ ವಿಶೇಷ ಜಾಗ್ರತೆ ಕೊಳ್ಳಬೇಕೆಂತಲೂ ಹೇಳಿದರು ರಾ| ಕೃಷ್ಣರಾವ ಕಳದೀಪುರಕರ ಕಿಲಕಿ ಕಾರವಾರದ ಗಿರಿ ದಕೋರಕೆಯನ್ನು ಬಣ್ಣಿಸಿದ ಬಗ್ಗೆ ಕಂಪನಿಯ ಸಂಸ್ಥಾಪಕರನ್ನು ಹೊಗಳಿದರು

ಅಂಕೋಲೆಯ ರಾ| ನಾರಾಯಣ ಕಾಮತ ಮತ್ತು ಅವರ ಪತ್ನಿಯವರು ಶಾರದಾ ಕಾನೂನಿನನ್ವಯ ತಮಗಾದ ಶಿಕ್ಷೆಯ ವಿರುದ್ಧ ಸೆಶನ್ಸ ಜಜ್ಜರ ಕಡೆ ಮಾಡಿದ ಅಪೀಲಿನಲ್ಲಿ ಗುರುವಾರ ತೀರ್ಪಾಯಿತು. ರಾ| ಕಾಮತರ ಶಿಕ್ಷೆ ಕಾಯಂ ಆಯಿತು ತಂದೆಯ ಹಯಾತಿಯಲ್ಲಿ ಮಕ್ಕಳ ಲಗ್ನದ ಜವಾಬದಾರಿಯು ತಾಯಿಯ ಕಡೆ ಇರುತ್ತದೆಂಬದು ಕಾಯ್ದೆಯಲ್ಲಿ ಹೇಳಿರುವದಿಲ್ಲವಾಗಿ ಆಪಾದಿತ ಪತ್ನಿಯನ್ನು ಜಜ್ಜರು ದೋಷಮುಕ್ತ ಮಾಡಿದರು.

ಮುಂಬಯಿಯ ಗ್ರಂಟ ಮೆಡಿಕಲ್ ಕಾಲೇಜಿನ ಡಾ|| ಕಡಾರದರು ಕಳೆದ ವಾರ ಕಾರವಾರಕ್ಕೆ ಚಿತ್ತೈಸಿದ್ದರು

ಇವರು ಉಪದಂಶ ರೋಗದ ವಿಶೇಷ ಪರಿಚಯವುಳ್ಳವರಾಗಿದ್ದಾರೆ. ಇಲ್ಲಿಯ 'ಮಿತ್ರಸಮಾಜ'ದಲ್ಲಿ 'ಉಪದಂಶದ ಉತ್ಪತ್ತಿಯು ಮತ್ತು ಪರಿಣಾಮ' ಎಂಬ ವಿಷಯದ ಮೇಲೆ ಅವರದೊಂದು ವಿಚಾರಪರಿಪೂರ್ಣ ವ್ಯಾಖ್ಯಾನವಾಯಿತು. ಉಪದಂಶ ರೋಗಪೀಡಿತರಾದವರು ನಾಚಿಕೆಯಿಂದ ತಮ್ಮ ರೋಗವನ್ನು ಮುಚ್ಚಿಟ್ಟುಕೊಳ್ಳುವದರಿಂದ ರೋಗವು ಬಲಿತು ಹೋಗುತ್ತದೆಂಬುದಾಗಿ ಕೂಡಲೆ ತಜ್ಞರಲ್ಲಿಗೆ ಹೋಗಿ ಉಪಚಾರ ಪಡೆದರೆ ಅದು ಸುಲಭವಾಗಿ ವಾಸಿಯಾಗಬಹುದೆಂಬುದಾಗಿ ಡಾಕ್ಟರರು ವಿವರಿಸಿ ಹೇಳಿದರು. ಉಪದಂಶ ರೋಗದ ಪ್ರಸಾರವು ಸಾರ್ವಜನಿಕ ಹಿತಕ್ಕೆ ಬಾಧಕವಾಗಿರುತ್ತದಾದ್ದರಿಂದ ಆ ಬಗ್ಗೆ ಮೇಲಿನಿಂದ ಮೇಲೆ ಧರ್ಮ-ಯುವತಿಗಳ ಮುಂದೆ ಚರ್ಚೆಯಾಗುವದು ಹಿತಕರವೆಂಬುದಾಗಿ ಅವರು ಪ್ರತಿಪಾದಿಸಿದರು.

ಈ ವರ್ಷದ ಸರಕಾರ ತೀರ್ಪಿನಲ್ಲಿ ಶೇಕಡಾ ೧೨॥ ಯಂತೆ ಸೂಟು ಕೊಡಬೇಕೆಂದು ಪ್ರಾಂತಿಕ ಸರಕಾರದಿಂದ ಕಲೆಕ್ಟರರಿಗೆ ಒದೆದು ಬಂದಿರುವದಾಗಿ ತಿಳಿದುಬಂದಿದೆ. ಮೊದಲನೇ ಹಪ್ತೆಯ ತೀರ್ವೆಯಲ್ಲಿಯೂ ಇದೇ ಪ್ರಕಾರ ಸೂಟು ಹಿಡಿದು ಎರಡನೇ ಹಪ್ತೆಯ ತೀರ್ವೆ ವಸೂಲಾಗುವದೆಂತೆ.

(ತಾ ೧೬—೩—೩೫) ಪ್ಲೇಗ ಬೇನೆಯು ಪ್ರಸಾರವಾಗಹತ್ತಿದೆ. ಈ ತನಕ ೩೦ ಜನರಿಗೆ ಪ್ಲೇಗ ಬಂತು. ೬ ಮಂದಿ ಸತ್ತರು. ಮ್ಯು॥ ಯವರು ಮಾಕು ತೆಗೆಯುವ ವ್ಯವಸ್ಥೆ ಮಾಡಿದ್ದಲ್ಲದೆ ಮನೆ ಮನೆಗೆ ಹೋಗಿ ಮುಂಜಾಗ್ರತೆಯ ಉಪಾಯಗಳನ್ನು ಜನರಿಗೆ ಕಲಿಸುತ್ತಾರೆ. ಊರಲ್ಲಿ ಸಾಂಕ್ರಾಮಿಕ ರೋಗಗಳು ಹಬ್ಬುತ್ತಿರುವಾಗ ಮೆಜಿಸ್ಟ್ರೇಟರು ನಾಟಕ-ಸಿನೇಮಾಗಳಿಗೆ ಪರವಾನಗಿ ಕೊಡುವದೆಂತೆಂದು ತಿಳಿಯದು! ಊರೊಳಗಿನ ಉಪಹಾರಗೃಹಗಳಿಗೂ ಈ ಪರವಾನಿಗೆಗಳೂ ಸಂಬಂಧವಿಲ್ಲವಂತೆ! ಹಿಂದೆ ನಾಟಕಗಳಿಗೆ ಪರವಾನಗಿ ಕೊಡಬೇಕಾದರೆ ಮ್ಯು॥ ಯ ಸಲಹೆ ಕೇಳ್ಳುತ್ತಿದ್ದರು. ಈಗಿನ ಮೆಜಿಸ್ಟ್ರೇಟರು ಮ್ಯು॥ ಯವರಿಗೆ ಕೇಳುವದೇ ಇಲ್ಲ. ತಮಗೆ ಅಧಿಕಾರ ತಪ್ಪದೇ ಎಂದು ಮರಿಸುತ್ತಾರೆ!'

ಇಲ್ಲಿಯ ಪೋಲೀಸರು ಮ್ಯು॥ಗೆ ಸ್ಯಾಕಲ' ತರಿಗೆ ಕೊಡುತ್ತಿದ್ದಿಲ್ಲ. ಸರಕಾರಿ ಸ್ಯಾಕಲ್ಲುಗಳಿಗೆ ಮಾತ್ರ ನಿಯಮದಂತೆ ಮಾಫಿ ಸಿಗತಕ್ಕದ್ದು. ಆದರೆ ಪೋಲಿಸರು ಖಾಸಗಿ ಹಣದಿಂದ ಕೊಂಡ ಖಾಸಗಿ ಸ್ಯಾಕಲ್ಲುಗಳ ಬಗ್ಗೆ ಸಹ ತರಿಗೆ ಕೊಡುತ್ತಿದ್ದಿಲ್ಲ! ಮ್ಯು॥ ಯವರು ಬೇಸರ ಮಾಡಿ ಆಜವಾಸ ೩೦ ಸ್ಯಾಕಲ್ಲುಗಳನ್ನು ಹಿಡಿದು ತೆರಿಗೆ ವಸೂಲ ಮಾಡಿದರು. ಹೋದ ಇನ್ಸಪೆಕ್ಟರರೂ, ಫೌಜದಾರರೂ ತಮ್ಮ ಸ್ಯಾಕಲ್ಲುಗಳಿಗೆ ತರಿಗೆ ಮಾಫಿ ಸಿಗಬೇಕೆಂದು ವಾದಿಸುತ್ತಾರೆ! ಮ್ಯು॥ ಯವರು ಅದಕ್ಕೊಪ್ಪಿದಿಲ್ಲ. ಮುಂದೇನಾಗುತ್ತದೆಂದು ನೋಡಬೇಕು.

ಆರೋಗ್ಯ ಖಾತೆಯ ಅ॥ ಡೈರೆಕ್ಟರರು ಇಲ್ಲಿ ಬಂದು ಪ್ಲೇಗ ಬೇನೆಯ ಬಗ್ಗೆ ಜಾಗ್ರತೆ ಕೊಳ್ಳಲು ಉಪದೇಶಿಸಿದರು. ಪೋಲೀಸ ಸ್ಥಾನಗಳೊಳಗಿನ ಹೊಲಸನ್ನು ಹಳ್ಳದಲ್ಲಿ ಒಗೆಯುವದನ್ನು ಅವರು ನೋಡಿ ಹೋಗಿದ್ದಾಗ ಅವರ ಪ್ರಯತ್ನದಿಂದಾದರೂ ಈ ಹೊಲಸು ದೂರವಾಗಬಹುದೆಂದು ಕೋರಿಕೆ.

ಸ್ತುಂಕೇರಿ— ರಾ॥ ಜನಾರ್ದನ ಪಿ ಸಾವಕಾರರು ಹಿಂದೆ ೧೯೩೦ರಲ್ಲಿ ಸಾವರಮ್ಯಾಜಿಯಂಗ ಯೂನಿಯನ್ನಿನ ಅಧ್ಯಕ್ಷರಿರುವಾಗ ರೂ. ೨೩॥ ರಕಮನ್ನು ಖರ್ಚು ಮಾಡಿ ಆ ಬಗ್ಗೆ ಬಿಲು ಕೊಟ್ಟಿದ್ದರು. ಸಾವಕಾರರಿಗೂ ಯೂನಿಯನ್ನಿನ ಉಳಿದ ಸಭಾಸದರಿಗೂ ಮಾತಭೇದವುಂಟಾದ ಕಾಲದಲ್ಲಿ ರಾ॥ ಸಾವಕಾರರು ಬೋರ್ಡಿನ ಮುಂದಿನ ಜನರಿಗೆ ನೋಟೀಸು ಕೊಡುವದಕ್ಕೂ, ಬೋರ್ಡಿನ ಮುಂದಿನ ಕೆಲಸಗಳಿಗೆ ತಮ್ಮ ಲೆಕ್ಕ-ಪತ್ರಗಳನ್ನು ತೋರಿಸುವದಾಗಿ ಸರಕಾರಿ ಸಂಘಗಳಿಗೆ ಪತ್ರಗಳನ್ನು ಒದೆದು ತಿಳಿಸಿ ಲೆಕ್ಕ ಈ ರಕಮು ಖರ್ಚು ಮಾಡಿದ್ದರು. ರಾ॥ ಸಾವಕಾರರು ಮಾಡಿದ ಈ ಖರ್ಚು ಬೋರ್ಡಿನವರಿಗೆ ಮಾನ್ಯ

ವಾಗಲಿಲ್ಲ. ಸಾವಕಾರರ ಕಡೆಯಿಂದ ಈ ಹಣವಸೂಲ ಪಡೆಯುವದೆ ಬೋರ್ಡಿನವರ ಹೋಕಣ ಮುಂದೆ ದಾವೆ ಮಾಡಿದ್ದರು. ಪಂಚರಾದ ರಾ। ಶಿವಬೋಟಿದರು ರಾ॥ ಸಾವಕಾರರ ಕಡೆಯಿಂದ ನಿಕಾಲೆ ಕೊಟ್ಟಿದ್ದರು. ಈ ನಿಕಾಲೆ ವಿರುದ್ಧ ಮೇ। ಅಸಿಸ್ಟಂಟ ರಜಿಸ್ಟ್ರಾರ ಸಾಹೇಬರ ಕಡೆಗೆ ಅಪೀಲು ಮಾಡಿತ್ತು. ಅಪೀಲಿನಲ್ಲಿ ಅ॥ ರಜಿಸ್ಟ್ರಾರರು ಪಂಚರ ನಿಕಾಲೆಯನ್ನು ತಿರಗಿಸಿ ಸಧ್ಯ ರಕಮು ರಾ॥ ಸಾವಕಾರರ ಕಡೆ ವಸೂಲ ಕೊಳ್ಳಬೇಕಾಗಿ ಹುಕುಮು ಮಾಡಿದ್ದಾರೆ.

ತಿಕೋಟೆ— ಇಲ್ಲಿಯ 'ಶ್ರೀ ಲಕ್ಷ್ಮೀ ಗಿರಣಿಯು' ಒಡೆಯರು ಊರಲ್ಲಿ ವಿದ್ಯುದ್ದೀಪಗಳನ್ನು ಹಚ್ಚುವ ಪ್ರಯತ್ನ ನಡೆಸುತ್ತಾರೆಂದು ವಾರ್ತೆ. ಅವರ ಯೋಜನೆಗೆ ೫೦ ಸಾವಿರ ರೂಪಾಯಿಗಳ ಬಂಡವಲು ಬೇಕು. ಈ ಮ್ಯುನಿಸಿಪಾಲಿಟಿಯವರು ೫ ಭಂಡವಲು ಕೊಡಲೊಪ್ಪಿದ್ದಾರೆ. ಬಾಕಿ ಹಣ ಶೇರುಗಳ ರೂಪದಿಂದ ಎತ್ತುಗಡೆಯಾಗುವದು. ಯಂತ್ರವನ್ನಿಡಲು ಸ್ಥಳ ಸಹ ನಿಶ್ಚಿತವಾಗಿದೆ.

ಈ ಬಗ್ಗೆ ಬಲ್ಲವರು ತಿಳಿಸುವದೇನಂದರೆ— ಮೈಸೂರ ಸರಕಾರದವರು ನದಿಯ ಗೇರುಸಪ್ಪೆಯ ಜಲಪಾತದ ಪ್ರವಾಹ ಶಕ್ತಿಯನ್ನು ಉಪಯೋಗಿಸಿ ವಿದ್ಯುಚ್ಛಕ್ತಿ ಪಡೆಯುವ ಯೋಜನ ಮಾಡಿರುತ್ತಾರೆ. ಅದಕ್ಕೆ ಹಿಂದುಸ್ಥಾನ ಸರಕಾರದ ಸಮ್ಮತಿ ಸಹ ಸಿಕ್ಕಿದೆ. ಬೇಗನೆ ಯೋಜನೆಯು ಪೂರ್ತಗೊಂಡ ತರುವಾಯ ಮುಂಬಯಿ ಬೇಕಷ್ಟು ವಿದ್ಯುಚ್ಛಕ್ತಿಯನ್ನು ಪೂರೈಸುವದು. ಈ ವಿದ್ಯುಚ್ಛಕ್ತಿಯು ಅಗ್ಗವಾಗಿ ದೊರೆಯುವಂತಿದೆ. ಈ ಮ್ಯುನಿಸಿಪಾಲಿಟಿಯವರು ಅಲ್ಲಿಯತನಕ ಕಡೆಯದೆ ಪ್ರಸ್ತುತದ ಯೋಜನೆಯಲ್ಲಿ ಹಣ ಸಿಲುಕಿ ಹಾಕುವದು ಯುಕ್ತವಲ್ಲ.

ಮ್ಯು॥ ಯವರು ಇಂತಿಷ್ಟು ದೀಪಗಳನ್ನು ಹಚ್ಚಬೇಕೆಂದು ಹೇಳಿ ಹೊತ್ತಿದ್ದಾಗ ತಿಳಿಯುತ್ತಿದೆ. ಸಧ್ಯ ದೀಪಗಳಿಗೆ ಬೇಕಾಗುವ ಬಲ್ಬ ವಗೈರೆ ಸಾಮಾನುಗಳು ಕೊಟ್ಟವಿದ್ದ ಮುಟ್ಟಿಗೆ ದೇಣಿಗೆ ಬೇಕಾಗಿ ಕಾಗದ ನಾಶ ಮಾಡಬೇಕು. ದೇ। ಜಂಗಲಿ' ಒಲ್ಬ್ಗಳು ಉತ್ತಮವಿವೆ ಬ್ರಿಜ, ಮೈಸೂರ ಪ್ರದರ್ಶನಗಳಲ್ಲಿ ಅವು ಪ್ರಶಂಸೆಯನ್ನು ಪಡೆದಿರುತ್ತವೆ.

ಸಿದ್ದಾಪುರ ಕಡೆಯ ಕರ್ಬೂರಮಠ್ಠಲ್ಲ ಸಂಸಾರ ಹಾಳಪ್ಪ ಕೊಳಲುಂಡ ಮನೆಯೊಳಗಿನ ಕೆಲವು ದಾಗಿನಗಳನ್ನು ಊರಿಗೆ ತಂದು ರೂ ೧೦೦ಕ್ಕೆ ಮಾರಿದನು. ಹಣದ ಗಂಟನ್ನು ಜೊತೆಗೆ ಬಂದ ಸೋದರನ ಒಳಿ ಇಟ್ಟನು. ಮರುದಿನ ಹಣ ಕೇಳಿದರೆ ಮಾವನ ಮಗನ ಗಂಟಿಲ್ಲ ಮಧ್ಯಾನ ರಾತ್ರಿಯಲ್ಲಿ ಜಗಾರ ಆಡಿ ಎಲ್ಲ ಹಣವನ್ನು ಕಳಕೊಂಡಿದ್ದನು! ಮನೆಗೆ ಬಾ, ಕೊಡುತ್ತೇನೆ ಎಂದು ಹೇಳಿ ಅಳಿಯನಿಗೆ ಕರಕೊಂಡು ಹೋದನು! ಮುಂದೆ ಮನೆಗೆ ಹೋಗಿ ಹಣವಿಲ್ಲೆಂದು ಹೇಳಿದನು! ತರುಣನು ಮಾವನ ದುರುಳತನವನ್ನು ನೋಡಿ ದುಃಖಪಟ್ಟು, ಮನೆಗೆ ಹೋಗಿ ಉರುಲು ಹಾಕಿಕೊಂಡು ಪ್ರಾಣಕೊಟ್ಟನೆಂದು ವರ್ತಮಾನ ಬಂದಿದೆ!

ಈ ಪೋಲೀಸರಲ್ಲಿ ಒಂದು ಫಿರ್ಯಾದು ದಾಖಲಾಗಿದೆ. ಅದರ ವಿವರ ಹೀಗೆ— ಮುಸ್ಸಿ ಗ್ರಾಮದ ಕೃಷ್ಣಭಟ್ಟ ಎಂಬುವರಿಗೆ ಮಾನ್ಯಳ ಗಣಪ ಭಟ್ಟರಿಂದ ಪಗಾರ ಬಾಕಿ ರೂ ೩೦ ಬರುವದಿತ್ತು. ಕೃಷ್ಣಭಟ್ಟರು ತಮ್ಮ ಹಣ ಕೇಳಲಾಗಿ ಗಣಪಭಟ್ಟರು ದುಡಿಕ್ಕೆ ರೂ ೩॥ ಧಾರಣೆ ಹಿಡಿದು ಕೃಷ್ಣಭಟ್ಟರಿಗೆ ೫ ಮಣ ಅಡಿಕೆ ಕೊಟ್ಟರು. ಉಳಿದ ಬಾಕಿ ರೂಪಾಯಿಗಳನ್ನು ಕೆಲವು ದಿನಗಳಲ್ಲಿ ಕೊಡುತ್ತೇನೆಂದು ಹೇಳಿ ಕಳಿಸಿದರು. ಮಾರನೇದಿನ ಸದರಿ ಗಣಪ ಭಟ್ಟರು ತಮ್ಮೂರ ಪಟೇಲರ ಮತ್ತು ಚಾವಡಿ ಭಟ್ಟರಿಗೂ, ಗೋಣಸರ ಪಟೇಲರಿಗೂ ಕರಕೊಂಡು ಕೃಷ್ಣ ಭಟ್ಟರಲ್ಲಿ ಬಂದರು. ಮಾವನವರ ಕೃಷ್ಣ ಭಟ್ಟರ ಮೇಲೆ ೫ ಮಣ ಅಡಿಕೆ ಕದ್ದುಕೊಂಡು ಬಂದಿದ್ದಾನೆಂಬ ಆಪಾದನೆಯನ್ನು ಹೊರಿಸಿ ಅವರಿಗೆ ಹೆದರಿಸಿದರು. ಕೈಗೆ ಬೇಡಿ ಮತ್ತು ಸೊಂಟಕ್ಕೆ ಹಗ್ಗ ಹಾಕುತ್ತೇವೆಂದು ಧಮಕಿಯನ್ನು ಕೊಟ್ಟರು. ಬಂಧನದೊಳಗಿಂದ ತಪ್ಪಬೇಕಾದರೆ ರೂ ೫೦ ದಂಡ ಕೊಡಬೇಕೆಂದು ಹೇಳಿದರು. ಕೃಷ್ಣ ಭಟ್ಟರು ಹಣವಿಲ್ಲೆಂದು ಹೇಳಲು ಪಟೇಲರು ಸೊಂಟಕ್ಕಿರುವ ಬೆಳ್ಳಿಯ ದಾಗಿನಗಳನ್ನೂ, ಕೈ-ಬೆರಳಿಗಿರುವ ಉಂಗುರಗಳನ್ನೂ ಕೊಡಿರೆಂದು ಹೇಳಿ, ಧೈರ್ಯ ಹಾಕಿ ಅದನ್ನು ತೆಗೆದುಕೊಂಡರು. ಸಾಧು ಸ್ವಭಾವದ ಕೃಷ್ಣಭಟ್ಟರು ಬೆದರಿ ಮೈಮೇಲಿನ ದಾಗಿನಗಳನ್ನೂ, ಅಡಿಕೆಯನ್ನೂ ಕೊಟ್ಟರಂತೆ! ಕೃಷ್ಣಭಟ್ಟರ ಸಹೋದರರು ಬೇರೂರಲ್ಲಿದ್ದವರು ಈ ಎಲ್ಲಾ ವರ್ತಮಾನ ತಿಳಿದು ಊರಲ್ಲಿ ಪೋಲೀಸರಿಗೆ ವರದಿ ಕೊಟ್ಟಿದ್ದಾರಂತೆ.

ಕರಾಚಿ ಪೇಟೆಯ ಧಾರಣೆ.

(ರಾ॥ ವಿಜಾರ ಮುಕುಂದ ಶೈ,
ಕೆಂಬೆಲ್ ಸ್ಟ್ರೀಟ, ಕರಾಚಿ ಇವರಿಂದ)

(*Tel Add* '***Matribhumi Karachi***')

ತಾ ೧೩—೩—೧೯೩೫

ಪೇಟೆಯ ಧಾರಣೆಗಳು ಮಂದಿ, ಮದ್ರಾಸ ಬದಿಯವರು ಗೋಧಿ ಹಿಟ್ಟು ಮತ್ತು ಕಡ್ಲೆಹಿಟ್ಟು ಖರೀದಿ ಮಾಡುತ್ತಾರೆ. ಅರಳಿಯ ದರ ಒಮ್ಮೆಗೇ ಇಳಿದಿದೆ. ಗೋಧಿ ಖರೀದಿ ಮಾಡುವವರು ವಿರಳ. ಸ್ಥಾನಿಕ ಮಿಲ್ಲುಗಳ ಮಾಲಕರೇ ಖರೀದಿ ಮಾಡಿದ್ದು ಹೆಚ್ಚು.

ಕಾರವಾರ ಜಿಲ್ಹೆಯ ಎಲ್ಲ ಬಂದರಗಳಲ್ಲಿ ಸೋಪು-ವಿಮೆ ಕೂಡ ಹೊತ್ತು (C I F) ಕೊಡುವ ಧಾರಣೆಗಳು —

ಕಡ್ಲೆಹಿಟ್ಟು (೧೯೭ ಪೌಂಡಿನ ಚೀಲಕ್ಕೆ) ಕ್ರೌನ ರೂ ೭-೧೩-೦, ಸುಪ್ರೀಮ ರೂ ೯-೨-೦ ಲ್ಯಾಟಿ ರೂ ೮-೮-೦, ಡಬಲ್‌ಕೀ ರೂ ೯-೪-೦, ಮಾತೃಭೂಮಿ ರೂ ೬-೭-೦, ಟೂ ಸಿಗ್ನಲ್ ರೂ ೬-೯-೦,

ಗೋಧಿಹಿಟ್ಟು (,,) ತಿಪ್ ರೂ. ೯ ೧೨-೦, ರೋಜ ರೂ ೯-೧೦-೦, ಲೋಟಸ ರೂ ೯-_-೦, ಖಜಾರಿ ರೂ ೯-೧೪-೦

ಕಡ್ಲೆ (೨೦೫ ಪೌಂಡಿನ ಚೀಲಕ್ಕೆ) ಫ್ರೀಫೋರ್ಡ ಪ್ಯಾಕಿಂಗ ರೂ ೭ ೮ ೦ ಜಾಕೋಬಾಬಾದ ರೂ ೭ ೧೪-೦, ಪ್ಲಾಯಿಟ ೬-೦ ೦.

ಕಡ್ಲೆಬೇಳೆ (,,)ಪಂಜಾಬಿ ರೂ ೮ ೩ ೦, ಇಸ್ಪಾಬಾನಿ ರೂ ೬-೪-೦

ಕೌಡು (,,) ರೂ ೪ ೧೦ ೦

ಸೋಜಾ (,,) ರೋಜ ರೂ ೧೦-೪-೦, ತಿಪ್ ರೂ ೧೦-೬-೦, ಮಾತೃಭೂಮಿ ರೂ ೯-೧೫-೦

ಗೋಧಿ- ತಯಾರ ರೂ ೩೯-೦-೦, ವ್ಯಾದೆ ರೂ ೩೯—೪—೦

ಕಡ್ಲೆ- ತಯಾರ ರೂ ೧೯-೬-೦ ೩೬-೯-೦ ೨ನೇ ವ್ಯಾದೆ ರೂ ೩೬—೧೦—೬

ಬಂಗಾರ- ತಯಾರ ೩೩-೮ ೦, ೧ನೇ ವ್ಯಾದೆ ೩೩-೯-೦, ೨ನೇ ವ್ಯಾದೆ ೩೬-೧೦-೬

ಬೆಳ್ಳಿ ತಯಾರ ೬೫ ೨ ೦, ೧ನೇ ವ್ಯಾದೆ ೭೨-೧೪-೦ ೨ನೇ ವ್ಯಾದೆ ೭೨-೯-೦

ವಿಮಾನುಕಣ್ಣಿಗೆ (Corn) ಮದ್ದು.

ಹೆತ್ತಾಣೆ ಬೆಳ್ಳಿ ಸ್ಟಾಂಪು ಕಳಿಸಿದರೆ ಕಳಿಸುತ್ತೇವೆ. ವ್ಹಿ. ಪಿ ಯಿಂದ ಖರ್ಚ ಹೆಚ್ಚು.

ಕಲಬಾಗ ಗಂಗಾಧರ ಎಂಡ್ ಸನ್ಸ್,
ಕುಮಟಾ. (ಕಾರವಾರ)

ಅಲ್ಲಲ್ಲಿ ಇಷ್ಟಿಷ್ಟು!

[೩ನೇ ಪಾನಿನಿಂದ ಮುಂದರಿಸಿದ್ದು]

ಸಂಗತಿಗಳನ್ನು ಹೇಳಿ ಅಶ್ರುವುದವರಿಗೆಲ್ಲ ಮನೋರಂಜನ ಮಾಡಿದರಾಗಿ ಶ್ರೀ| ಮಹಾದೇವಭಾಯಿ ದೇಸಾಯಿಯವರು ಬರೆಯುತ್ತಾರ ಮಹಾತ್ಮರ ಮನ್ವಂತರದಲ್ಲಿ ಎಂಥೆಂಥ ತಪಸ್ವಿಗಳು ಹುಟ್ಟುತ್ತಾರೆ ನೋಡಿರಿ! ಆಹಾರ ಕ್ರಮದಲ್ಲಿ ಮನುಷ್ಯನು ಅಭ್ಯಾಸ ಮಾಡಿಕೊಂಡಂತೆ ವ್ಯವಸ್ಥೆಯಾಗಬಲ್ಲದು ದಿನಕ್ಕೊಮ್ಮೆ, ಎರಡು ದಿನಕ್ಕೊಮ್ಮೆ ಊಟ ಮಾಡಿ, ಉಳಿಯಬರುತ್ತದೆ ತಿಂಡಿ-ತಿನಸುಗಳನು ಕಾಲಕಾಲಕ್ಕೆ ತಿಂದ ಹೊರತು ಕೆಲಸ ಮಾಡಬರುವದಿಲ್ಲವಾಗಿ ಗ್ರಹಿಕೆ ಮಾಡಿಕೊಂಡವರು ಈ ಉದಾಹರಣೆಯಿಂದ ತಕ್ಕ ಬೋಧ ಪಡೆಯಬಹುದು

* * *

ಹೊಸ ಹೊಸ ನಮೂನೆಯ ಬ್ರಾಹ್ಮಣರು ನಿರ್ಮಾಣ ಹೊಂದಲಾರಂಭಿಸಿದ್ದಾರೆ ನಿಜಾಮ ರಾಜ್ಯದ ವಿದ್ಯಾ ಇಲಾಖೆಯವರು 'ಕುಲೀನ ಬ್ರಾಹ್ಮಣ'ರೆಂಬ ವಿಪ್ರವರ್ಗವನ್ನು ನಿರ್ಮಿಸಿದ್ದಾರೆ ಹರಿಜನರು, ಕ್ರೈಸ್ತರು ಇನ್ನು ಮುಂದೆ ನಿಜಾಮ ರಾಜ್ಯದಲ್ಲಿ "ಕುಲೀನ ಬ್ರಾಹ್ಮಣ"ರೆಂದು ಸಂಬೋಧಿಸಲ್ಪಡುವರು. ಕುಲೀನ ಬ್ರಾಹ್ಮಣರೆಂದರೆ ವಿಪ್ರೋತ್ತಮರು ಈ ಹುಕುಮಿನಿಂದ ಕುಲೀನ ಬ್ರಾಹ್ಮಣೇತರ ಬ್ರಾಹ್ಮಣರಲ್ಲಿ ದೊಡ್ಡ ಆಂದೋಲನ ಉಂಟಾಗಬಹುದು ಬ್ರಾಹ್ಮಣರೆಂದೆನ್ನಿಸಿಕೊಳ್ಳುವವರು ಬ್ರಾಹ್ಮಣ ಪರಂಪರೆಯಂತೆ ನಡಕೊಳ್ಳದೆ, ಬಾಹ್ಯ ವೇಷವನ್ನು ಮಾತ್ರ ಇಟ್ಟುಕೊಂಡದ್ದರಿಂದ ಬ್ರಾಹ್ಮಣ್ಯದ ಮಹಿಮೆಯು ಕಳೆಗುಂದಿದೆ. ಜಾತಿವಂತ ಬ್ರಾಹ್ಮಣರು ಇತ್ತ ಗಮನಿಸಿ ತಮ್ಮ ಪರಂಪರೆಯನ್ನು ಅನುಲಕ್ಷಿಸಿ ಜೀವನಕ್ರಮದಲ್ಲಿ ತಕ್ಕ ಮಾರ್ಪಾಟುಗಳನ್ನು ಮಾಡಿಕೊಳ್ಳದಿದ್ದರೆ ಬ್ರಾಹ್ಮಣರು ಅತಿಶೂದ್ರರೆಂದು ಸಂಬೋಧಿಸಲ್ಪಡುವ ಭೀತಿಯಿದೆ

* * *

ಹಿಂದುಸ್ಥಾನ ದೇಶವು ಕ್ರಮವಾಗಿ ದರಿದ್ರವಾಗುತ್ತ ನಡದಿದೆ. ಇದರ ಲಕ್ಷಣವನ್ನು ಸರಕಾರಿ ದಾಖಲೆಗಳ ಮೇಲಿಂದ ತಿಳಕೊಳ್ಳಬಹುದು. ಸದ್ಯಕ್ಕೆ ದಿಲ್ಲಿಯಲ್ಲಿ 'ಸ್ಟೆಂಡಿಂಗ ಫಿನೆನ್ಸ ಕಮಿಟಿ' ಎಂಬ ಸರಕಾರಿ ಕಂದಾಯ ಇಲಾಖೆಯ ಮಂಡಳವಾಯಿತು ಕಳೆದ ವರ್ಷ ತಾಮ್ರದ ಅರ್ಧಾಣೆ, ಬಿಲ್ಲಿ, ಪೈ ಇಂಥ ಚಿಕ್ಕ-ಚಿಕ್ಕ ನಾಣ್ಯಗಳೇ ಹೆಚ್ಚು ಖರ್ಚಾದವು. ಅವುಗಳಿಗೇ ಗಿರಾಕಿ ಹೆಚ್ಚು ಪ್ರತಿ ಒಂದು ಪ್ರಾಂತದಲ್ಲಿಯೂ ಈ ನಾಣ್ಯಗಳಿಗೆ ಹೆಚ್ಚೆಚ್ಚು ಗಿರಾಕಿಯೆಂದು ಬರದು ಬಂದಿದೆ ಸಂಯುಕ್ತ ಪ್ರಾಂತ, ಬಿಹಾರ, ಒಡಿಸಾ ಮೊದಲಾದ ಭೂಕಂಪಗ್ರಸ್ತ ಪ್ರದೇಶದಿಂದ ಈ ನಾಣ್ಯಗಳಿಗೆ ಅನಪೇಕ್ಷಿತವಾಗಿ ಮೀರಿದಷ್ಟು ಗಿರಾಕಿ ಬಂತು ಇದರ ಮೇಲಿಂದ ಇಂಥ ನಾಣ್ಯಗಳ ಗಿರಾಕಿ ಹೆಚ್ಚುವದೆಂದರೆ ದರಿದ್ರ ಲಕ್ಷಣವೆಂದು ಹೇಳಲಡ್ಡಿಯಿಲ್ಲ ಚಿನ್ನ ರಫ್ತಾಗುತ್ತಿದೆ ಚಿನ್ನದ ದರ ಏರಿದಂದಿನಿಂದ ಮುಡ್ಡಿನ ಆಸಗಾಗಿ ೨೦ ಅಬ್ಜ ರೂಪಾಯಿಗಳ ಚಿನ್ನ ರಫ್ತಾಯಿತು. ಕಳೆದ ೯ನೇ ತಾರೀಖಿಗೆ ಅಂತ್ಯವಾಗುವ ವಾರದಲ್ಲಿ ಮುಂಬಯಿ ಬಂದರದಿಂದ ೧| ಕೋಟಿ ರೂಪಾಯಿಗಳ ಚಿನ್ನ ರಫ್ತಾಯಿತು ಹೀಗೆ ಚಿನ್ನ ರಫ್ತಾಗುವದೂ ಬಡತನದ ಲಕ್ಷಣ ಬಡಬಗ್ಗರು ಹೊಟ್ಟೆಪಾಡಿಗಾಗಿ ಆಪದ್ಧನವನ್ನು ಸಹ ಮಾರಲಾರಂಭಿಸಿದ್ದಾರೆ ಅದನ್ನು ಪ್ರತಿಬಂಧಿಸುವದಕ್ಕಾಗಿ ಸರಕಾರವು ಯಾವದೇ ಉಪಾಯ-ಯೋಜನೆ ಮಾಡುವದಿಲ್ಲ. ಆದರಿಂದ ವರ್ತಕ ಸಂಘದವರು ಸರಕಾರದ ಮೇಲೆ ಮುನಿದಿದ್ದಾರೆ

* * *

ಪಾಟಣಾ ಪಟ್ಟಣದಲ್ಲಿ ಬಿಹಾರದ ಯೋಜನೆ ಸಂಸ್ಥೆಯಿದೆ ಅಲ್ಲಿ ಸಪ್ರಪತಿ ತಾರೀಖಿಗೆ ಡಾ| ಆರ್ ಎಸ್ ಅಗರವಾಲ ಇವರು ದೃಷ್ಟಿರಕ್ಷಣದ ವಿಷಯದ ಮೇಲೆ ಉಪನ್ಯಾಸ ಕೊಟ್ಟರು. ಡಾ| ಅಗರವಾಲರವರು ದಿಲ್ಲಿಯವರು ಕಣ್ಣಿನ ವಿಷಯದಲ್ಲಿ ಒಳ್ಳೇ ತಜ್ಞರೆಂದು ಕೀರ್ತಿ ಪಡೆದವರು ಡಾ| ಅಗರವಾಲರವರ ಉಪನ್ಯಾಸವು ಒಳ್ಳೇ ಬೋಧಪ್ರದವಿತ್ತು ಅವರು ನುಡಿದದ್ದೇನೆಂದರೆ ದೃಷ್ಟಿಯೆಂಬುದು ನಿಜವಾಗಿಯೂ ಒಂದು ಮಾನಸಿಕ ಕಾರ್ಯವಿದೆ. ಅಂದರೆ ಮಿದುಳಿನ [illegible] ಜ್ಞಾನ ಆದ್ದರಿಂದ ದೃಷ್ಟಿನ್ಯೂನತೆ ಎಂದರೆ ಮಿದುಳಿನ ನ್ಯೂನತೆ. [illegible] ದಿಂದ ಕಾಣುವ ದೃಶ್ಯದಿಂದ [illegible] ಮೂಡುವ ಪ್ರತಿಬಿಂಬದ ನ್ಯೂನತೆ ಮಿದುಳಿನ ನ್ಯೂನತೆಯಿಂದ ಪ್ರತಿಬಿಂಬದ ನ್ಯೂನತೆಯುಂಟಾಗುತ್ತದೆ. ದೃಷ್ಟಿ ಮಾಂದ್ಯವಾದಾಗ ಮಿದುಳನ್ನು ಉಪಚರಿಸುವದೇ ಮುಖ್ಯ ಉಪಾಯವಾಗಿರುತ್ತದೆ ಮಿದುಳನ್ನು ಉಪಚರಿಸುವ ಉಪಾಯವೆಂದರೆ ಮಾನಸಿಕ ವಿಶ್ರಾಂತಿ ಪಡೆಯುವದು ಕಣ್ಣಿನ ಮೇಲೆ ಗದರಿಷ್ಟೆಗಳನ್ನು . ಎಳೆದೊಯ್ಯುವದರಿಂದ ಮಿದುಳಿಗೆ ಪರಿಶ್ರಮವಾಗುತ್ತದೆ ಆ ರೆಪ್ಪೆಗಳನ್ನು ಕೆಳಮಾಡಿ ಇಡುವ ಅಭ್ಯಾಸ ಇಡಬೇಕು ಇನ್ನೊಂದು ಉಪಾಯವು ಉಂಟು. ಚಿಕ್ಕ ಮಕ್ಕಳು ಮಿಟಿಮಿಟಿ ನೋಡುವದನ್ನು ಜನರು ನೋಡಿರಬಹುದು ಇದರಿಂದ ಮಿದುಳಿಗೆ ವಿಶ್ರಾಂತಿ ದೊರೆಯುತ್ತದೆ ಚಿಕ್ಕ ಮಕ್ಕಳಿಂದ ಸ್ವಾಭಾವಿಕ ಪ್ರಕಾರವನ್ನು ಹಿರಿಯರು ಕಲಿಯಬಹುದು ಚಿಕ್ಕ ಅಕ್ಷರದ ಮುದ್ರಣವನ್ನು ದಿನ ಕಣ್ಣೇ ಓದಿದರೆ ದೃಷ್ಟಿನ್ಯೂನತೆಯು [illegible] ಈ ಉಪಾಯದಿಂದ ದೃಷ್ಟಿ ಮಾಂದ್ಯವು ಆಗುವದಿಲ್ಲ ಕಣ್ಣಿಗೆ ಹರೆ ಬರುವದಿಲ್ಲ [illegible] ದಿಂದಲೂ ಕಣ್ಣುಗಳು ದೃಢವಾ

Established 1900

ಶ್ರೀ

ದಾಸಪ್ಪಾ ಕೃಷ್ಣಪ್ಪಾ
ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರಸಿ

FIXED RATE

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರೇಶ್ಮೆಯ ಖಣಗಳೂ, ಕೋಕಿಂಗ ವ ಶಟಿಂಗ [illegible] ಒಟ್ಟಿಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು, [illegible] ಧೋತರ ಜೋಡುಗಳೂ, ರೇಶ್ಮೆ ಸಿದ್ಧದ ಮಡಿಗಳೂ, [illegible] ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಭೂತ ಟ್ರಂಕುಗಳೂ [illegible] ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಹಿನೊಂದು ಭಯವಿಲ್ಲದ ನ್ಯಾಯ ದರದಿಂದ [illegible] ರೂಪಾಯ ವ್ಯಾಪಾರಕ್ಕೆ ಕಮಿಶನ್ ದೊರೆಯುವದು

Tel "Honesty" D. K. DHAKAPPA BROS.,
Cloth Merchants,
SIRSI, N KANARA

ಹೊಸ ಮ್ಹಾಲು. | ದರ ಅಗ್ಗ.

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ ಶರತುಗಳೂ ಬಹಳ ಸೋಯಿಸ್ಕರ ಇವೆ. ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಬಹುಜ್ಞಾರಿಯ ಶೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳೀಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents
D. K. Nayak Bros
D. S. Pai.
K N. Nayak
Honavar Agent -
R. V. Prabhu Esq

K. PadmanabhaRao & Sons,
BELGAUM
Chief Agents for
Karnatak Districts & S M States

ಗುತ್ತಾನ ದಿನಾ ಪತ್ತಿಪ್ಪತ್ತು ನಿಮಿಷ ಬೆಳಗು-ಸಂಜೆ ಸೂರ್ಯನ ಕಡೆ ಮೋರೆ ತಿರುವಿ ಕಣ್ಮುಚ್ಚಿ ನಿಂತುಕೊಂಡರೆ ದೃಷ್ಟಿಮಾಂದ್ಯವು ಪರಿಹಾರ ಹೊಂದುತ್ತದೆ ಇಂಥ ಸಾಮಾನ್ಯ ಉಪಾಯಗಳಿಂದ ಹುಟ್ಟು ಕುರುಡರಿಗೆ ಸಹ ಕಣ್ಣು ಬಂದಿವೆ " ಸಚ್ಚ[illegible] ಅಧ್ಯಕ್ಷರಾಗಿದ್ದ ಶ್ರೀ| ಸಚ್ಚಿದಾನಂದ ಸಿಂಹರವ[illegible] ಡಾ| ಆಗರವಾಲರವರ ಉಪಚಾರದಿಂದ ತಮಗೆ ಉಂಟಾದ ದೃಷ್ಟಿಮಾಂದ್ಯವು ಬಯಲಾಗಿರುವದಾಗಿಯೂ, ಕನ್ನಡಕವಿಲ್ಲದೆ ತಾವು ಈಗ ಓದಸಮರ್ಥರಾಗಿರುವವಾಗಿಯೂ ನುಡಿವರು ಶ್ರೀ| ಸಚ್ಚಿದಾನಂದ ಸಿಂಹರವರು ಬಿಹಾರ ಪ್ರಾಂತದಲ್ಲಿ ರಾಜಮಾನ್ಯತೆಯನ್ನೂ, ಲೋಕಮಾನ್ಯತೆಯನ್ನೂ ಪಡೆದ ಲೋಕಸೇವಾತತ್ಪರ ಪುರುಷರು. ಕನ್ನಡಕವನ್ನು ಉಪಯೋಗಿಸುವ ಜನರು ಈ ಉಪಾಯಗಳನ್ನು ಕೈಕೊಂಡು ಲಾಭ ಹೊಂದಬಹುದು.

***

ಮಹಾತ್ಮರು ಗ್ರಾಮೋದ್ಧಾರದ ಪ್ರಶ್ನೆಯನ್ನು ಕೈಕೊಂಡಂದಿನಿಂದ ಸಾಮಾನ್ಯ ವಸ್ತುಗಳ ಉಪಯೋಗಕ್ಕೆ ಹೊಸ ಪ್ರಕಾರದ ಉತ್ತೇಜನ ದೊರಕಿತು ಗಿಡಮೂಲಿಕೆಗಳಿಂದ ಔಷಧೋಪಚಾರ ಪಡೆಯಬೇಕು, ಊರೊಳಗೆ ತಯಾರಾಗುವ ಸಾಮುಗ್ರಿಗಳಿಂದಲೇ ಸಂಸಾರ ಸಾಗಿಸಬೇಕು, ಎಂಬ ಕಲ್ಪನೆ ದೇಶತುಂಬ ಹಬ್ಬಿದೆ. ಖಾದಿ ಪ್ರತಿಷ್ಠಾನದ ಶ್ರೀ| ಸತೀಶಚಂದ್ರ ಬಾಬುಗಳವರು ಸುಂದರ ಬನದಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿಕೊಂಡು ಲೋಕಸೇವೆ ಮಾಡುತ್ತಿದ್ದಾರೆ ಇವರು ರಸಾಯನಶಾಸ್ತ್ರನಿಪುಣರು ' ಬಂಗಾಲ ಕೆಮಿಕಲ್ ಎಂಡ್ ಫಾರ್ಮಾಸ್ಯುಟಿಕಲ್ ವರ್ಕ್ಸ' ಎಂಬದಾಗಿ ಹಿಂದದೇಶದಲ್ಲಿ ಖ್ಯಾತಿಗೊಂಡ ಸಂಸ್ಥೆಯ ಪ್ರವರ್ತಕರಿವರು. ಅಗ್ಗವಾದ ಗಿಡಮೂಲಿಕೆಗಳಿಂದ ರೋಗ ಉಪಚಾರ ಮಾಡುವ ಪದ್ಧತಿಯನ್ನು ಇವರು ಕಂಡುಹಿಡಿದಿದ್ದಾರೆ. ಮತ್ತು 'cheap remedies' ಎಂಬ ಪುಸ್ತಕವನ್ನು ಬರೆದಿದ್ದಾರೆ. ಕಾಯಿ, ಚರ್ಮ ಹದಗೊಳಿಸುವದು ಮೊದಲಾದ ಉಪಾಯಗಳನ್ನು ಪರಿಶೋಧಿಸಿದ್ದಾರೆ ಆದರೆ ಎನ್. ಆರ್. ಎಮ್. ರವರು ಪ್ರಕಟಿಸಿದ ಅಗ್ಗ ಸಬಕಾರದ ನಮೂನೆ ಎಲ್ಲರಿಗೂ ಸಹಜಸಾಧ್ಯವಾದುದು. ಒಡಿಸಾ ಪ್ರಾಂತದಲ್ಲಿ ಸುಧಾರಿಸದೆ ಇದ್ದ ಮೂಲನಿವಾಸಿಗಳು ತಮ್ಮ ಅರಿವೆ-ಅಂಚಡಿಗಳನ್ನು ಈ ಉಪಾಯದಿಂದಲೇ ತೊಳೆದು ಸ್ವಚ್ಛಗೊಳಿಸುತ್ತಾರೆ ಆ ಉಪಾಯವೇನೆಂದರೆ— " ಬೆಟ್ಟದಲ್ಲಿ ಸಿಕ್ಕಿದ ಕಟ್ಟಿಗೆಯನ್ನು ಒಟ್ಟುಮಾಡಿ ಸುಡುವದು, ಬೂದಿ ತೆಗೆದು ಒಂದು ನೀರಿನ ಪಾತ್ರೆಯಲ್ಲಿ ಹಾಕಿ ಕುದಿಸುವದು, ಆ ನೀರನ್ನು ಒಂದು ಪಾತ್ರೆಯಲ್ಲಿ ಚನ್ನಾಗಿ ಸೋಸುವದು. ಈ ನೀರಿನಲ್ಲಿ ಅರಿವೆಗಳನ್ನು ಅದ್ದಿಸಿಟ್ಟು ತೊಳೆದರೆ ಅರಿವೆಗಳೆಲ್ಲವೂ ಸ್ವಚ್ಛವಾಗುತ್ತವೆ ಇದೇ ಪ್ರಕಾರ ಬೇರೆ-ಬೂದಿಯ ನೀರಿನಿಂದ ತೊಳೆದರೆ, ಅರಿವೆಗಳು ಮತ್ತೂ ಸ್ವಚ್ಛ ಹೊಂದುತ್ತವಾಗಿ ಹೇಳುತ್ತಾರೆ ಅಲ್ಲಲ್ಲಿಯ ಜನರು ಪ್ರಯೋಗ ಮಾಡಿ ನೋಡಬಹುದು. ಇದಕ್ಕೆ ಏನೂ ಖರ್ಚಿಲ್ಲ ಈ ಉಪಾಯವು ದೇಶತುಂಬ ಹಬ್ಬಿದರೆ ಸಬಕಾರದ ದೆಸೆಯಿಂದ ವಿದೇಶಕ್ಕೆ ಹರಿದು ಹೋಗುವ ಲಕ್ಷಾವಧಿ ರೂಪಾಯಿಗಳು ಉಳಿಯುವವು

***

ಮುಂಬಯಿಗೆ ಅಮೇರಿಕೆಯ ಐಶ್ವರ್ಯವಂತ ಕ್ರಾಮವೆಲ್ ದಂಪತಿಗಳು ಬಂದಿರುತ್ತಾರೆ. ಕ್ರಾಮವೆಲ್‌ರವರು ಕೋಟ್ಯಾಧೀಶರು. ಅವರ ಹೆಂಡತಿಯೂ ಕೋಟ್ಯಾಧೀಶಳೇ ಕ್ರಾಮವೆಲ್‌ರವರು ಅಮೇರಿಕೆಯ ವಿಖ್ಯಾತ ಮೋರ್ಗನ್ ಕಂಪನಿಯ ಪಾಲುಗಾರರು, ಫಿಲೆಡೆಲ್ಫಿಯಾದೊಳಗಿನ ಒಂದು ಬೇಂಕಿನ ವ್ಯವಸ್ಥಾಪಕರು. ಅವರ ಹೆಂಡತಿ ಡೋರೀಸ ಡ್ಯೂಕರವರ ರಾಜಮನೆತನದವರು ೩೦ ಲಕ್ಷ ಪವನಿನ ಆಸ್ತಿಯುಳ್ಳವರು ೨೨ ವರ್ಷ ಪ್ರಾಯ ಸದ್ಯಕ್ಕೇ ಇವರ ಮದುವೆಯಾಯಿತು ದಂಪತಿಗಳು ಲೋಕತುಂಬ ವಿಹಾರಕ್ಕೆ ಹೊರಟಿದ್ದಾರೆ ವಿಮಾನ ಮಾರ್ಗದಿಂದ ಕರಾಚಿಗೆ ಬಂದು ಸ್ಪೆಶಲ್ ಉಗಿಬಂಡಿಯನ್ನು ಮಾಡಿಕೊಂಡು ಈ ದೇಶದಲ್ಲಿ ಸಂಚರಿಸುತ್ತಿದ್ದಾರೆ ಜಯಪುರ, ಜೋಧಪುರ, ಉದಯಪುರ, ಬಡೋದೆಯ ಕಡೆ ಸಂಚರಿಸಿ ಕಳೆದ ೧೩ನೇ ತಾರೀಖಿಗೆ ಅವರು ಮುಂಬಯಿಗೆ ಬಂದು ತಲ್ಪಿದರು, ದಂಪತಿಗಳು ಐಶ್ವರ್ಯವಂತರಿದ್ದಾಗ್ಯೂ ಅವರಿಗೆ ಐಶ್ವರ್ಯವಂತರ ಗರ್ವವಿಲ್ಲ ಐಶ್ವರ್ಯವಂತರೆಲ್ಲರೂ [illegible]ರ ಸುಲಿಗೆಗಾರರೆಂದು ಅವರು ಹೇಳಿ ಸಮಸ್ತರೂ ತಮ್ಮ ಐಶ್ವರ್ಯದ ಪ್ರಯೋಜನವನ್ನು ಲೋಕಕ್ಕೆ ಕೊಡಬೇಕಾಗಿ ಅವರು ಹೇಳುತ್ತಾರೆ ಹಿಂದುಸ್ಥಾನ ನೋಡಿ ಅವರಿಗೆ ಒಳ್ಳೇ ಸಂತೋಷವಾಗಿದೆ ಸೃಷ್ಟಿಸೌಂದರ್ಯ ನೋಡಿ ಅವರು ಆನಂದಭರಿತರಾದರು, ಅರಮನೆಗಳನ್ನು ನೋಡಿದರು, ದಾರಿದ್ರ್ಯ ಪಂಕದಲ್ಲಿ ನರಳುವ ಬಡಜನರನ್ನೂ ನೋಡಿ ವ್ಯಸನಪಟ್ಟರು " ಹಿಂದುಸ್ಥಾನದೊಳಗಿನ ಬಡತನ ನೋಡಿದರೆ ಎದೆ ಹಾರುತ್ತದೆ, ಈ ದುರವಸ್ಥೆಗೆ ಇಂಗ್ಲಂಡದೊಳಗಿನ ಬೇಂಕಿನವರೇ ಕಾರಣರು, ಬರೇ ಸ್ವಾರ್ಥಪರಾಯಣರಾಗಿ ಈ ಬೇಂಕಿನವರು ಕುಟಿಲ ಕಾರಸ್ಥಾನಗಳನ್ನು ನಡಿಸಿ ಲೋಕದೊಳಗಿನ ಬಡ-ಬಡಿಗರ ಧನವನ್ನು ಹೇರಳವಾಗಿ ತಳಿಸಿ ಜನರಿಗೆ ನಷ್ಟಪಡಿಸಿದ್ದಾರೆ ಇವರು ನಡಿಸುವ ಕುಟಿಲ ಕಾರಸ್ಥಾನಗಳು ಕಾದಂಬರಿಯಲ್ಲಿ ಓದಸಿಗುವ ಕಲ್ಪನಾಚಿತ್ರಗಳಿಗೂ ಮಿಗಿಲಾದವು, ಇದರಿಂದ ಜಗತ್ತಿನೊಳಗಿನ ಪ್ರಜೆಗಳೆಲ್ಲರೂ ಸುಲಿಯಲ್ಪಟ್ಟಿದ್ದಾರೆ. ಅಮೇರಿಕೆಯವರಿಗೂ ಈ ಕಾರಸ್ಥಾನಗಳ ಪೆಟ್ಟು ತಗಲಿದೆ" ಎಂಬದಾಗಿ ಮಿ| ಕ್ರಾಮವೆಲ್‌ರವರು ಉದ್ಗರಿಸುತ್ತಾರೆ. ಜನಸಾಮಾನ್ಯರಿಗೆ ಹಿತ ಮಾಡುವ ದಯೆಯಿಂದ, ಅವರ ಸಂಪದಭ್ಯುದಯ ಮಾಡುವ ಉದ್ದೇಶದಿಂದ ಅವರು ಅಮೇರಿಕೆಯಲ್ಲಿ 'ರಾಷ್ಟ್ರೀಯ ಸಮಾಜ ನ್ಯಾಯ ಸಂಘ'ವೆಂಬದೊಂದು ಸಂಸ್ಥೆಯನ್ನು ಹೂಡಿಸಿದ್ದಾರೆ ೩ ತಿಂಗಳಲ್ಲಿ ಈ ಸಂಘಕ್ಕೆ ೭೦ ಲಕ್ಷ ಸಭಾಸದರಾದರು ಈ ಸಭೆಯ ಕಾರ್ಯದಲ್ಲಿ ಧರ್ಮೋಪದೇಶಕರಾದ ಕೊಫ್ಲಿನ್‌ರವರು ಕ್ರಾಮವೆಲ್‌ರ ಜೊತೆಗಾರರು ಕೊಫ್ಲಿನ್‌ರಿಗೆ 'ಅಮೇರಿಕೆಯ ಗಾಂಧಿ'ಯೆಂದು ಅಲ್ಲಿ ಕರೆಯುತ್ತಾರಂತೆ ಮಹಾತ್ಮರ ಹೆಸರು ಈಗ ಸಮಾಜಸೇವಕರ ರೂಢನಾಮವಾಗಿ ಪರಿಣಮಿಸಿದೆ ಮಹಾತ್ಮರ ಮಹಿಮೆಯೇ ಅಷ್ಟು ದೊಡ್ಡದು !

***

ಕಳೆದ ಮಾರ್ಚ ೧೦ನೇ ತಾರೀಖಿಗೆ ಪುಣೆಯಲ್ಲಿ ಪೈಸಾ ಫಂಡಿನ ರೌಪ್ಯ ಮಹೋತ್ಸವವಾಯಿತು ಈ ನಿಧಿಯು ೧೯೦೫ನೇ ಇಸ್ವಿಯಲ್ಲಿ ಮಹಾರಾಷ್ಟ್ರದಲ್ಲಿ ಉದ್ದಿಮೆಗಳನ್ನು ಹೊರಡಿಸುವದಕ್ಕಾಗಿ ಸ್ಥಾಪಿಸಲ್ಪಟ್ಟಿತು ಜನರು ವರ್ಷಕ್ಕೆ ಒಂದೊಂದು ಬಿಲ್ಲಿ ದುಡ್ಡನ್ನು ಕೊಟ್ಟಲ್ಲಿ ಅದರಿಂದ ದೊಡ್ಡ ನಿಧಿಯಾಗಿ ಹಿಂದುಸ್ಥಾನದಲ್ಲಿ ಉದ್ದಿಮೆಗಳನ್ನು ಸ್ಥಾಪಿಸಲು ಅನುಕೂಲವಾಗುವದಾಗಿ ಉತ್ಪಾದಕರಾದ ಶ್ರೀ| ಅಂತಾಜಿ ದಾಮೋದರ ಕಾಳೇ ಇವರ ಕಲ್ಪನೆಯಾಗಿತ್ತು ಅದರಂತೆ ಈ ನಿಧಿಯ ಸಂಗ್ರಹವಾಗಿ ಇದರ ವಿದ್ಯಮಾನ ತಳೇಗಾಂವದಲ್ಲಿ ಕಾಜಿನ ಕಾರಖಾನೆ ನಡೆದದೆ. ಈ ಕಾರಖಾನೆಯಲ್ಲಿ ಶಿಕ್ಷಣ ಪಡೆದವರು ಹಲವೆಡೆ ಕಾರಖಾನೆಗಳನ್ನು ಸ್ಥಾಪಿಸಿದ್ದಾರೆ ರೌಪ್ಯ ಮಹೋತ್ಸವದ ಸಮಯ ಅಧ್ಯಕ್ಷರಾದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಒಂದು ಸೂಚನೆ ಮಾಡಿದ್ದಾರೆ— ಗ್ರಾಮೋದ್ಧಾರ ಪ್ರವರ್ತಕರು ಇದನ್ನು ಮನನ ಮಾಡಬಹುದು. ಜಿಲ್ಹೆಯವರು ಒಂದು ಅರ್ಥಮಂಡಳವನ್ನು ಏರ್ಪಡಿಸಬೇಕು. ಅದರೊಳಗೆ ೧೨ ಮಂದಿ ಸಭಾಸದರಿರಬೇಕು ಜಿಲ್ಹೆಯೊಳಗಿನ ಉದ್ದಿಮೆದಾರರೂ, ವರ್ತಕರೂ, ಬೇಸಾಯಗಾರರೂ ಇವರನ್ನು ಆರಿಸಿ ನೇಮಿಸಬೇಕು. ಮೂವರದೊಂದು ಕಾರ್ಯಕಾರಿ ಮಂಡಳವಿರಬೇಕು ೧೨ ಜನರ ಮಂಡಳವು ನಿರ್ಧರಿಸಿದ ಯೋಜನೆಯನ್ನು ಈ ಮೂವರು ಕ್ಲುಪ್ತ ಕಾಲದಲ್ಲಿ ಅಮಲಿನಲ್ಲಿ ತರಬೇಕು ಕಾರ್ಯಕಾರಿ ಮಂಡಳದ ಸಭಿಕರು ಅರ್ಥಶಾಸ್ತ್ರಜ್ಞರಿರಬೇಕು, ಸಂಘಟನಾ ಶಕ್ತಿಯುಳ್ಳವರಿರಬೇಕು. ಇವರಿಗೆ ಬೇರೆ ಯಾವದೇ ತಾಪತ್ರಯವಿರಕೂಡದು ಇದೊಂದೇ ಕೆಲಸದಲ್ಲಿ ಅವರು ನಿರತರಾಗಿರಬೇಕು ಮಂಡಳದವರು ಇವರಿಗೆ ತಕ್ಕಷ್ಟು ಸಂಬಳ ಕೊಡಬೇಕು ಈಗಿನ ಸರಕಾರ ಆಡಳಿತೆಯು ಪುರಾತನ ಸ್ವರೂಪದ್ದಿದೆ ಸರಕಾರವು ಒಮ್ಮನಸ್ಸಿನಿಂದ ದುಡಿಯುವದಿಲ್ಲ, ಆದರಿಂದ ಸರಕಾರದ ಮೇಲೆ ಅವಲಂಬಿಸಿರಕೂಡದು; ಸ್ವತಃ ಮುಂದಾಗಬೇಕು ಹೀಗೆ ಸರ್ ವಿಶ್ವೇಶ್ವರಯ್ಯನವರು ರೌಪ್ಯ ಮಹೋತ್ಸವದ ಸಮಯ ನುಡಿದು ಪ್ರತಿಒಂದು ಜಿಲ್ಹೆಯೊಳಗಿನ ಪ್ರಮುಖರು ಸಭೆಸೇರಿ ಜಿಲ್ಹೆಯೊಳಗಿನ ಪರಿಸ್ಥಿತಿಯನ್ನು ಪರಾಂಬರಿಸಿ ೩ ವರ್ಷಗಳ ಬಗ್ಗೆ ಒಂದು ಕಾರ್ಯಕ್ರಮವನ್ನು ನಿರ್ಧರಿಸಿಕೊಂಡು ಅದನ್ನು ಮೂರು ಹಸ್ತೆಯಿಂದ ಕೊನೆಗಾಣಿಸಬೇಕೆಂದು ಉಪದೇಶಿಸಿದರು. ಸರ್ ವಿಶ್ವೇಶ್ವರಯ್ಯನವರು ವ್ಯವಹಾರಕುಶಲರು ಅವರ ಯೋಜನೆಯನ್ನು ಸರಕಾರವು ಸಹ ಕೈಕೊಂಡು ಪುರಸ್ಕರಿಸಬಹುದು ಯಾಕೆಂದರೆ ಸರಕಾರವೂ ಗ್ರಾಮೋದ್ಧಾರವನ್ನೇ ಬಯಸುತ್ತದಲ್ಲವೆ"

ಕನ್ನಡ ಕವಿಗಳಲ್ಲಿ ಅರಿಕೆ.

|| ಸಿರಿಗನ್ನಡಂ ಗೆಲ್ಗೆ ||

ಉತ್ತರ ಕನ್ನಡ ಜಿಲ್ಹೆಯ ಬರೆಹಗಾರರು ಕನ್ನಡದಲ್ಲಿ ಬರೆದಿರುವ ಕವಿತೆಗಳಲ್ಲಿ ಮೇಲಾದವುಗಳನ್ನು ಒಟ್ಟುಗೂಡಿಸಿ "ಕರ್ನಾಟಕ ಸಂಘ"ದ ಪರವಾಗಿ ಪುಸ್ತಕವೊಂದನ್ನು ಬೇಗನೆ ಪ್ರಚುರಪಡಿಸಬೇಕೆಂದು ಮಾಡಿದ್ದೇವೆ ಆದುದರಿಂದ ಕಾರವಾರ ಜಿಲ್ಹೆಯ ಕವಿಗಳು ತಾವು ಕಟ್ಟಿದ ಕವನಗಳಲ್ಲಿ ಸರಸವಾದವುಗಳನ್ನು ಆಯ್ದುಕೊಂಡು ನಮಗೆ ಮಾರ್ಚ ತಿಂಗಳ ಕೊನೆಯೊಳಗಾಗಿಯೇ ಕಳುಹಬೇಕೆಂದು ಬಯಸುತ್ತೇವೆ.

ಕರ್ನಾಟಕ ಸಂಘ,
ಕಾರವಾರ,
ತಾ ೧೫ ೩-೩೫.

ರಂಗಪ್ಪ ಭೀ. ಪೋತದಾರ
ವೆಂಕಟೇಶ ಪ್ರಭು
ಕಾರ್ಯದರ್ಶಿಗಳು

ಅಲ್ಲಲ್ಲಿ ಇಷ್ಟಿಷ್ಟು!

ಚಕ್ರವರ್ತಿ ಪಂಚಮ ಜೋರ್ಜ ಭೂಪಾಲರ ರೌಪ್ಯ ಮಹೋತ್ಸವದ ಪೂರ್ವ ತಯಾರಿ ಒಳ್ಳೇ ಅಭ್ಯಾಟದಿಂದ ನಡೆದಿದೆ. ಮಾಂಡಲಿಕ ಸಂಸ್ಥಾನಿಕರು ತಂಡುಗಟ್ಟಿ ಸಾರ್ವಭೌಮರಿಗೆ ರಾಜನಿಷ್ಠೆಯ ಪ್ರದರ್ಶನ ಮಾಡಿ ಕೃತಕೃತ್ಯರಾಗಲು ದಿಗ್ವಿಜಯ ಬೆಳೆಸುವರು. ಅರಸರಿಗೂ, ಅರಸಿಯರಿಗೂ ಕಾಣಿಕೆ ಮಾಡುವದಕ್ಕಾಗಿ ಈಗಿನಿಂದಲೇ ಅಮೂಲ್ಯ ರತ್ನ ಸಂಗ್ರಹ ಮಾಡುತ್ತಿದ್ದಾರೆ. ತರತರದ ರತ್ನಗಳು ಅರ್ಪಿಸಲ್ಪಡುವವು. ಸಂಸ್ಥಾನಿಕರು ತರುವ ರತ್ನಗಳನ್ನು ಸುರಕ್ಷಿತ ಕಾಯ್ದಿಡುವದಕ್ಕಾಗಿ ಸಾಮ್ರಾಜ್ಯ ಸರಕಾರವು ಚಿತ್ರಗುಪ್ತ ಪೋಲೀಸರನ್ನು ನೇಮಿಸುವ ನಿರ್ಧಾರ ಮಾಡಿರುವದಾಗಿ ಲಂಡನಿನ 'ಡೇಲಿ ಎಕ್ಸ್‌ಪ್ರೆಸ್' ಪತ್ರಿಕೆಯ ವಾರ್ತೆ. ಒಡೋಪೆಯ ನಾಯಕ ರಾಜ ಮಹಾರಾಜರು "ದಕ್ಷಿಣ ನಕ್ಷತ್ರ" ವೆಂಬ ಅಮೂಲ್ಯ ವಜ್ರವನ್ನು ಮಹಾರಾಣಿಯವರಿಗೆ ಅರ್ಪಿಸುವರೆಂಬುದೂ, ಕೊಹಿನೂರಾಂಕಿತ ರಾಜಮುಕುಟದಲ್ಲಿ ಅದು ಸೊಗಸಾಗಿ ಶೋಭಿಸುವದೆಂದೂ 'ಡೇಲಿ ಎಕ್ಸ್‌ಪ್ರೆಸ್' ಪತ್ರಿಕೆಯ ಸುದ್ದಿಗಾರರು ಈಗಲೇ ಕಲ್ಪನಾ ಚಿತ್ರವನ್ನು ಪ್ರಕಟಿಸಿದ್ದಾರೆ. ಇದಲ್ಲದೆ, ಬೇರೆ ಬೇರೆ ಸಂಸ್ಥಾನಿಕರು ತಮ್ಮ ತಮ್ಮ ಗೌರವಕ್ಕುಚಿತವಾಗಿ ಕಾಣಿಕೆ ಮಾಡುವರಂತೆ. ಸುಮಾರು ೬೦ ಕೋಟಿ ರೂಪಾಯಿಗಳ ರತ್ನಾದಿಗಳು ಸಾರ್ವಭೌಮರಿಗೆ ರಾಜಭಕ್ತ ಸಂಸ್ಥಾನಿಕರಿಂದ ಅರ್ಪಿಸಲ್ಪಡುವವಂತೆ. ಬಾದಶಹರು ಸುಪ್ರೀತರಾಗಿ ಸಂಸ್ಥಾನಿಕರಿಗೆ ಬಿರುದುಗಳನ್ನು ಅರ್ಪಿಸುವರು. ಇದಲ್ಲದೆ, ಈ ಶುಭ ಪ್ರಸಂಗದಲ್ಲಿ ಬಾದಶಹರು ಹಿಂದುಸ್ಥಾನದಲ್ಲಿ ಈರ್ವ ಹಿಂದೀಯರಿಗೆ ಗವ್ಹರ್ನರರಾಗಿ ನೇಮಿಸುವರು. ಆ ಭಾಗ್ಯವಂತ ವ್ಯಕ್ತಿಗಳ್ಯಾರೆಂದು ನಿಲ್ಲಿಯ 'ರೊಯ್ಸ್ ವೀಕ್ಲಿ' ಪತ್ರಿಕೆಯ ಲಂಡನಿನ ಸುದ್ದಿಗಾರರಿಗೆ ತಿಳಿಯಲಿಲ್ಲ. ರೌಪ್ಯ ಮಹೋತ್ಸವ ಸಮಯ ಹೊರಡುವ ಬಿರುದುಗಳ ಯಾದಿಯಿಂದಲೂ, ಹಾಗೆಯೇ ವರ್ಧಂತಿಯ ದಿನ ಅಂದರೆ ಜೂನ ೩ ನೇ ತಾರೀಖಿಗೆ ಹೊರಡುವ ಯಾದಿಯಿಂದಲೂ ಹಿಂದೀ ಪ್ರಮುಖರು ಆನಂದಪಡುವರಂತೆ! ಆಶ್ಚರ್ಯಪಡುವರಂತೆ! ಅದೆಂತಹದೆಂದು ಯಾರಿಗೂ ತಿಳಿಯದು. ಕಿತಾಬುಗಳಿಂದ ಜನಸಾಮಾನ್ಯರು ಆನಂದಪಡುವದೂ ಇಲ್ಲ, ಆಶ್ಚರ್ಯಪಡುವದೂ ಇಲ್ಲ. ಕಿತಾಬುಗಳನ್ನು ಹಾರೈಸುವ ಹಂಬಲಿಸುವವರಿಗೆ ಜನ್ಮಸಾರ್ಥಕವಾಯಿತೆಂದು ಆನಂದವಾಗಬಹುದು. ಕಿತಾಬು ಪಡೆಯುವ ಯೋಗ್ಯತೆ ಇಲ್ಲದವರಿಗೆ ಕಿತಾಬಿನ ಯಾದಿಯಲ್ಲಿ ತಮ್ಮ ಹೆಸರು ನೋಡಿ ಆಶ್ಚರ್ಯವಾಗಬಹುದು, ಇಷ್ಟೇ! 'ರೊಯ. ವಿಕ್ಲೀ' ಪತ್ರಿಕೆಯ ಲಂಡನಿನ ಸುದ್ದಿಗಾರರು ಹಾಗೇಕೆ ಬರೆಯುತ್ತಾರೆಂದು ತಿಳಿಯಲಿಲ್ಲ. ಮುಂಬಯಿ ಸರಕಾರವು ರೌಪ್ಯ ಮಹೋತ್ಸವಕ್ಕಾಗಿ ಮಂಜೂರ ಮಾಡಿದ ೨ ಲಕ್ಷ ರೂಪಾಯಿಗಳೊಳಗಿಂದ ವಿದ್ಯಾರ್ಥಿಗಳಿಗೆ ಮಿಠಾಯಿ ಸಹ ಕೊಡುವ ವ್ಯವಸ್ಥೆ ಇಲ್ಲವಾಗಿ ಕಾಯದೆ ಕೌನ್ಸಿಲಿನಲ್ಲಿ ನಡೆದ ಚರ್ಚೆಯ ಮೇಲಿಂದ ತಿಳಿಯುತ್ತದೆ. ಆ ಖರ್ಚನ್ನು ಅಲ್ಲಲ್ಲಿಯ ಜನರು ವಟ್ಟಿ ಕೂಡಿಸಿ ತಮ್ಮ ತಮ್ಮ ಮಕ್ಕಳಿಗೆ ಮಿಠಾಯಿ ಕೊಟ್ಟು, ಸಾರ್ವಭೌಮ ಪಂಚಮ ಜೋರ್ಜ ಭೂಪಾಲರ ರೌಪ್ಯ ಮಹೋತ್ಸವದ ಆನಂದಾತಿಶಯವನ್ನು ಅನುಭವಿಸತಕ್ಕದ್ದು. ಸರಕಾರಿ ಕಟ್ಟಡಗಳನ್ನು ಸಿಂಗರಿಸುವದಕ್ಕಾಗಿ ಸರಕಾರವು ೨ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುವ ಸಂಕಲ್ಪ ಮಾಡಿದೆ. ರೌಪ್ಯ ಮಹೋತ್ಸವಕ್ಕಾಗಿ ಸಂಗ್ರಹಿಸಿದ ನಿಧಿಯನ್ನು 'ಡಫರಿನ್ ಆಸ್ಪತ್ರೆ' ಮೊದಲಾದ ಯೂರೋಪಿಯನ್ ಚಿಕಿತ್ಸಾಲಯಗಳಿಗೆ ಅರ್ಪಿಸುವ ಯೋಜನೆಯಿಂದ ಜನಸಾಮಾನ್ಯರಿಗೆ ಏನೂ ಲಾಭವಿಲ್ಲವಾಗಿಯೂ, ಸ್ಥಳಿಕ ಸಂಸ್ಥೆಗಳಿಗೆ ಈ ನಿಧಿಯಿಂದ ದ್ರವ್ಯ ಸಹಾಯವಾಗಬೇಕಾಗಿಯೂ, ಅದೇ ವಿಹಿತವಾದದ್ದೆಂದೂ ನಾಗಪುರದ 'ಮಹಾರಾಷ್ಟ್ರ' ಪತ್ರಿಕೆಯು ಪ್ರತಿಪಾದಿಸುತ್ತಿದೆ. ರೌಪ್ಯ ಮಹೋತ್ಸವದ ಸಮಯ ವಟ್ಟಿಯನ್ನು ಎತ್ತುವಳಿ ಮಾಡುವವರು ಒಕ್ಕಲಿಗರಿಗೆ ಒತ್ತಾಯ ಮಾಡುತ್ತಾರಾಗಿಯೂ, ಹೊಟ್ಟೆಗಿಲ್ಲವೆಂದು ಗೋಳಿಡುವ ರೈತರ ಕಡೆಯಿಂದ ಉತ್ಸವ ವಟ್ಟಿಯನ್ನು ಬಲಾತ್ಕಾರದಿಂದ ವಸೂಲ ಮಾಡುತ್ತಾರಾಗಿಯೂ, ಆನಂದ ಸಮಾರಂಭಕ್ಕಾಗಿ ಹೀಗೆ ಒತ್ತಾಯ ಮಾಡುವದು ವಿಹಿತವಲ್ಲವಾಗಿಯೂ ನಾಗಪುರದ 'ಮಹಾರಾಷ್ಟ್ರ' ಪತ್ರಕರ್ತರ ಅಂಬೋಣ. ಅಲ್ಲಲ್ಲಿಯ ಉತ್ಸವ ಮಂಡಳದವರು ಈ ಸಂಗತಿಯನ್ನು ಲಕ್ಷ್ಯದಲ್ಲಿಟ್ಟು ಬಡಬಗ್ಗರ ಗೊಡವೆಗೆ ಹೋಗದಿದ್ದರೆ ಆನಂದವೇ. ಉತ್ಸವದ ಸಮಯಕ್ಕೆ ರಾಜಬಂದಿಗಳಿಗೆ ರಾಜದಯೆ ತೋರಿಸಿ ಬಿಡುಗಡೆ ಮಾಡುವದು ನಮ್ಮ ಕಾರ್ಯಕ್ರಮವಿರಬಾರದೆಂದು ಹಿಂದುಸ್ಥಾನ ಸರಕಾರವು ನಿರ್ಧರಿಸಿರುವದಾಗಿ 'ಫ್ರೀ ಪ್ರೆಸ' ವಾರ್ತಾವಾಹಕ ಸಂಸ್ಥೆಯ ದಿಲ್ಲಿಯ ಸುದ್ದಿಗಾರರು ಪ್ರಕಟಿಸುತ್ತಾರೆ. ಆದಾಗ್ಯೂ ಪೌರ್ವಾತ್ಯ ಪರಂಪರೆಯ ಜನಾಂಗದವರು ಉತ್ಸವ ಸಮಯ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ವೃದ್ಧಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ್ಯ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾಮಾಷ ತೈಲ್ಯ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾರಕ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ಪಕ್ಷವಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ)
ಭುವನರಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ.
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-

ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬಾ ಆನಂದಪಟ್ಟೆನು. ಈ ವೈದ್ಯಶಾಲೆ ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯು... ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯ ಮನೆತನಕ್ಕೆ ಸೇರಿದವರಾಗಿಯೂ, ಗಣನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಇವು ಶಾಸ್ತ್ರಸಿದ್ಧವಾಗಿ ಅನ ಭೌಮ್ಯವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಸರ್ವಪ್ರಿಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸ್ಥೆವಹಿಸುವರಾದರೆ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ

ಮೊಕ್ಕಾಂ, ಉಡುಪಿ. ೧೦-೧೧-೧೯೩೪.

ವಿದ್ವಾನ್ ಕೇ. ಕೇಶವಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ

ರಾಜಧರ್ಮದಂತೆ ಪ್ರಜೆಗಳಿಗೆ ಏನಾದರೂ ಲಭ್ಯಾಂಶ ದೊರಕದೆ ಉಳಿಯದೆಂದು ನಂಬಿಕೊಂಡಿದ್ದಾರೆ. ಔಂಧ, ಗೋಂಡಲ ಮೊದಲಾದ ಸಂಸ್ಥಾನಿಕರು ಸದ್ಯಕ್ಕೆ ರೌಪ್ಯ-ಸುವರ್ಣ ರಾಜ್ಯಾರೋಹಣಗಳ ಸಮಯ ಪ್ರಜೆಗಳಿಗೆ ಅನುಗ್ರಹಿಸಿದ್ದಾರೆ. ಅಂತೆಯೇ ಸಾರ್ವಭೌಮರು ಅನುಗ್ರಹಿಸದಿರರಾಗಿ ನಿಷ್ಪ್ರಯೋಜಕ ಪ್ರಜೆಗಳ [illegible]ಗೆ; ಶ್ರದ್ಧೆ.

***

ಮೈಸೂರು ಸಂಸ್ಥಾನವು ಸ್ತ್ರೀ-ಶಿಕ್ಷಣದ ವಿಚಾರ ಮಾಡುವದಕ್ಕಾಗಿ ಒಂದು ಮಂಡಳವನ್ನು ನೇಮಿಸಿತ್ತು. ಆ ಮಂಡಳದ ಅಧ್ಯಕ್ಷಿಣಿಯರು ಶ್ರೀಮತಿ ಇಂದಿರಮ್ಮನವರು. ಮಹಾರಾಣಿ ಸ್ತ್ರೀ[illegible] ವಿದ್ಯಾಲಯದ ಮುಖ್ಯಾಧ್ಯಾಪಿಕೆಯರು. ಆ ಮಂಡಳದ ವರದಿ ಸದ್ಯಕ್ಕೆ ಪ್ರಕಟವಾಗಿದೆ. ಅದರ ತಾತ್ಪರ್ಯವೇನಂದರೆ:— "ಈಗಿನ ಶಿಕ್ಷಣ ಪದ್ಧತಿಯಿಂದ ಸ್ತ್ರೀಯರು ಪ್ರಪಂಚ ನಡಿಸಲಿಕ್ಕೆ ಅನರ್ಹರಾಗಿದ್ದಾರೆ. ಅಂದರೆ ಪ್ರಪಂಚ ನಡಿಸುವ ಪಾತ್ರತೆ ಈಗಿನ ಶಿಕ್ಷಣಕ್ರಮದಿಂದ ಸ್ತ್ರೀ ವಿದ್ಯಾರ್ಥಿನಿಯರಿಗೆ ಪ್ರಾಪ್ತವಾಗುವದಿಲ್ಲ. ಈ ಶಿಕ್ಷಣದಿಂದ ಸ್ತ್ರೀ[illegible]ರಲ್ಲಿ ಒಂದು ಪ್ರಕಾರದ ಹೆಮ್ಮೆ ಹುಟ್ಟುತ್ತದೆ. ತಾವು ದೊಡ್ಡ ಯೋಗ್ಯತೆಯವರೆಂದು ಅವರು ಗ್ರಹಿಸಿಕೊಳ್ಳುತ್ತಾರೆ. ಮನೆಗೆಲಸ ಮಾಡಲು ಅವರಿಗೆ ನಾಚಿಕೆಯಾಗುತ್ತದೆ. ಪ್ರಪಂಚವೇ ಸ್ತ್ರೀ-ಶಿಕ್ಷಣದ ಧ್ಯೇಯ. ಅದನ್ನು ನಡಿಸಲು ಪಾತ್ರತೆಯನ್ನು ಉಂಟುಮಾಡಲು ಸ್ತ್ರೀ-ಶಿಕ್ಷಣ ಕ್ರಮವು ಸಮರ್ಥವಾಗಿರಬೇಕು. ಅದರಿಂದ ಅವರಿಗಾಗಿ ಪುರುಷರಿಗಿಂತ ಭಿನ್ನವಾದ ಶಿಕ್ಷಣ ಕ್ರಮವನ್ನು ಕಲ್ಪಿಸಬೇಕು. ಗೃಹಾರೋಗ್ಯ, ಸಂಗೀತ, ಚಿತ್ರಕಲೆಗಳನ್ನು ಕಲಿಸಬೇಕು. ಹಿಂದುಸ್ಥಾನದ ಇತಿಹಾಸವನ್ನೂ ಅದನ್ನು ತಿಳಕೊಳ್ಳಲು ಅವಶ್ಯವಿದ್ದಷ್ಟು ಜಗತ್ತಿನ ಇತಿಹಾಸವನ್ನೂ ಅವರಿಗೆ ಕಲಿಸಬೇಕು. ಮನೆ[illegible] ಲೆಖ್ಖವಿಡುವಷ್ಟು ಗಣಿತ ಕಲಿಸಬೇಕು. ಆರೋಗ್ಯರಕ್ಷಣಕ್ಕೆ ಅವಶ್ಯವಿದ್ದಷ್ಟೇ ಶಾಸ್ತ್ರೀಯ ಜ್ಞಾನ ಕಲಿಸಬೇಕು. ಶಿಶುಸಂಗೋಪನಕ್ಕಾಗಿ, ರೋಗಿಗಳ ಉಪಚಾರಕ್ಕಾಗಿ ಅವಶ್ಯವಿರುವಷ್ಟು ಚಿಕಿತ್ಸಾಶಾಸ್ತ್ರ ಕಲಿಸಬೇಕು. ನಾಗರಿಕರ ಸಾಮಾನ್ಯ ಕರ್ತವ್ಯಗಳನ್ನೂ, ಅಧಿಕಾರಗಳನ್ನೂ ತಿಳಿಸಿ ರಾಜ್ಯಾಡಳಿತೆಯ ಶಾಸ್ತ್ರದ ಮೂಲ ತತ್ವಗಳನ್ನು ಕಲಿಸಬೇಕು. ದೇಶಭಾಷೆಗಳಿಂದಲೇ ಯಾವತ್ತೂ ವಿದ್ಯಾದಾನವಾಗಬೇಕು."

[ವಿ]ದ್ಯಾರ್ಥಿಗಳು ಸಹ ತಕ್ಕಮಟ್ಟಿಗೆ ಇದೇ ಪ್ರಕಾರ ಅಭಿಪ್ರಾಯಪಡುತ್ತಿದ್ದಾರೆ. ಮದ್ರಾಸದೊಳಗಿನ ಕೋಲೇಜ ವಿದ್ಯಾರ್ಥಿಗಳ ಕೂಟದಲ್ಲಿ ಸದ್ಯಕ್ಕೊಂದು ಚರ್ಚೆ ನಡೆಯಿತು. "ಈಗಿನ ಉಚ್ಚಶಿಕ್ಷಣಕ್ರಮವನ್ನು ಸ್ತ್ರೀಯರು ಕೊಳ್ಳುವಂತೆ ಪ್ರೋತ್ಸಾಹಿಸಬೇಕೇನು ?" ಎಂಬ ವಿಷಯದ ಮೇಲೆ ಒಳ್ಳೇ ಚರ್ಚೆ ನಡೆಯಿತು. ಹಲ ಹುಡುಗಿಯರು ಈಗಿನ ಶಿಕ್ಷಣಕ್ರಮ ಹುಡುಗಿಯರಿಗೆ ಸಲ್ಲದೆಂದು ಪ್ರತಿಪಾದಿಸಿದರು. ಮತ ಎಣಿಕೆ ಮಾಡಲು "ಕೊಳ್ಳಬಾರದೆಂಬ" ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತಾಗಿ ತಿಳಿಯುತ್ತದೆ. ಜರ್ಮನಿಯಂಥ ಸುಧಾರಿಸಿದ ಪಾಶ್ಚಾತ್ಯ ರಾಷ್ಟ್ರದಲ್ಲಿಯೂ ಸ್ತ್ರೀ-ಶಿಕ್ಷಣದ ಕುರಿತು ವಿಚಾರಕ್ರಾಂತಿಯಾಗುತ್ತಿದೆ. ಕೋಲೇಜು-ಹೈಸ್ಕೂಲುಗಳಲ್ಲಿ ಹುಡುಗಿಯರಿಗೆ ಹುಡುಗರೊಡನೆ ಶಿಕ್ಷಣ ಕೊಡಬಾರದು. ಹುಡುಗಿಯರು ತಮಗಾಗಿ ಏರ್ಪಡಿಸಿದ ಪ್ರತ್ಯೇಕ ಶಿಕ್ಷಣ ಕ್ರಮದ ಶಾಲೆ-ಕೋಲೇಜುಗಳಲ್ಲಿಯೇ ಶಿಕ್ಷಣ ಹೊಂದಬೇಕು. ಈ ಪ್ರಕಾರ ಜರ್ಮನ್ ಸರಕಾರದ ವಿದ್ಯಾ ಇಲಾಖೆಯ ಪ್ರಧಾನರು ಕಟ್ಟಪ್ಪಣೆ ಹೊರಡಿಸಿದ್ದಾರೆ. ವಿದ್ಯಾರ್ಥಿಗಳಲ್ಲಿ ಸ್ತ್ರೀ-ಪುರುಷರೆಂಬ ಭೇದ ಮಾಡಿ ಎಲ್ಲರಿಗೂ ಒಟ್ಟುಗೂಡಿಸಿ ಒಂದೇ ಶಿಕ್ಷಣ ಕೊಡಬೇಕೆಂಬ ವಿಚಾರ ಪ್ರಾಮುಖ್ಯತೆಪಡೆದದ್ದು ಪಾಶ್ಚಿಮಾತ್ಯ ದೇಶಗಳಲ್ಲಿ. ಅಲ್ಲಿಯೇ ಈಗ ವಿಚಾರ ಕ್ರಾಂತಿಯಾಗಹತ್ತಿದೆ. ಹಿಂದೀ ಪ್ರಮುಖರು ಆಳವಾಗಿ ಪರ್ಯಾಲೋಚಿಸಿ ಶಿಕ್ಷಣಕ್ರಮದಲ್ಲಿ ತಕ್ಕ ಮಾರ್ಪಾಟುಗಳನ್ನು ಮಾಡಬೇಕಾಗಿ ಸೂಚನೆ.

***

ಮುಂಬಯಿಯ ಬಳಿ ದಹಿಸರ ಗ್ರಾಮದಲ್ಲಿ ಋಷಿಕುಲವೆಂಬದೊಂದು ಶಿಕ್ಷಣ ಸಂಸ್ಥೆ ಕಳೆದ ಮಾರ್ಗಶೀರ್ಷ ವದ್ಯ ೫ ಮಿ ಸುಮುಹೂರ್ತದಲ್ಲಿ ಸ್ಥಾಪಿಸಲ್ಪಟ್ಟಿದೆ. ಈ ಸಂಸ್ಥೆ ಪುರಾತನ, ಸನಾತನ ಪರಂಪರೆಯ ಮೇರೆಗೆ ವಿದ್ಯಾದಾನ ಮಾಡುವದು. ೧೩ ವರ್ಷ ಪ್ರಾಯದ ವಿದ್ಯಾರ್ಥಿಗಳಿಗೆ ಋಷಿಕುಲದಲ್ಲಿ ಸ್ವೀಕರಿಸಿ ೧೦ ವರುಷಗಳ ತನಕ ಪ್ರಾಚೀನ ಪದ್ಧತಿಯಮೇರೆಗೆ ಬ್ರಹ್ಮಚರ್ಯವ್ರತ ಪೂರ್ವಕವಾಗಿ ವೇದ, ಶಾಸ್ತ್ರ, ವ್ಯಾಕರಣ, ನ್ಯಾಯ, ಮೀಮಾಂಸಾ, ಧರ್ಮಸೂತ್ರ, ಸ್ಮೃತಿ, ಇತಿಹಾಸ, ತತ್ವಜ್ಞಾನ ಮೊದಲಾದ ಯಾವತ್ತೂ [illegible] ಕೊಡಲ್ಪಡುವದು. ಇಂಗ್ಲಿಷ, ಹಿಂದೀ ಈ ಭಾಷೆಗಳು ಕಲಿಸಲ್ಪಡುವವು. ಧರ್ಮಶಾಸ್ತ್ರಗಳ ವಿಚಾರವನ್ನು ಸಾಂಪ್ರದಾಯಿಕ ಪದ್ಧತಿಯಂತೆ ಮಾಡದೆ ತಾರತಮ್ಯ ಬುದ್ಧಿಯಿಂದ ನಡಿಸಲ್ಪಡುವದು. ಪ್ರಾಚೀನ ಸಂಸ್ಕೃತಿಯ ಪರಂಪರೆಯನ್ನು ಅಬಾಧಿ

[೧೦ ನೇ ಪಾನು ಮೇಲೆ ನೋಡಿರಿ.]

THE AGRICULTURAL & INDUSTRIAL BANK, LIMITED.
COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
ಕುಂದಾಪುರ.

ಕಾಯಂ ಠೇವಣಾತಿಗಳು.

3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ 3½ರಂತೆ,
6 ತಿಂಗಳಿಗೆ ... ... 4½ರಂತೆ,
12 ತಿಂಗಳಿಗೆ ... ... 5½ ,,
24 ತಿಂಗಳಿಗೆ ... ... 6 ,,
3 ವರ್ಷ ಯಾ ಹೆಚ್ಚಿನ ಅವಧಿಗೆ ... 6½ರಂತೆ

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ.

ಚಿನ್ನ ವ ಬೆಳ್ಳಿಯ ಆಭರಣಗಳ ಆಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ,
ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬೀಲುಗಳು, ದರ್ಶನಿ ಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಕರೆಂಟ್, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಂದಾಪುರ,
ತಾ. 21—1—1935.

K. Vaman Shenai &
G. Balakrishna S. Nayak.
Managing Directors.

ಯುದ್ಧಸ್ಫೋಟವಾದೀತೇ?

[ನಿರೀಕ್ಷಕನು ಬರೆದುದು]

ಯುದ್ಧಸ್ಫೋಟವಾದೀತೇ? ನಾನೇನು ಹೇಳಲಿ? ಹೇಗೆ ಹೇಳಲಿ? ನನಗೇನೂ ಸೂಚಿಸದು. ಯುರೋಪ ಖಂಡದ ರಾಜಸ್ಥಾನಗಳನ್ನು ನಾನು ಇಗಿಂದೀಗ ನಿರೀಕ್ಷಿಸುತ್ತಲಿದ್ದೇನೆ. ಎಲ್ಲೆಲ್ಲಿಯೂ ಯುದ್ಧ ತಯಾರಿಯೇ ಕಾಣುತ್ತಿದೆ. ಪ್ರತ್ಯಕ್ಷ ಯುದ್ಧ ಬಾಗಿಲಿಗೆ ಬಂತೆಂಬಂತೆ ಭಾಸವಾಗುತ್ತದೆ. ಪ್ರತ್ಯಕ್ಷ ಯುದ್ಧ ನೆಸಗದು ಸಮಾಧಾನದ ... ಫಕ್ಕನೆ ಸಿಡಿ ಯುದ್ಧವೊಂದು ಬಯಲಿಗೆ ಬಿಡುತ್ತದೆ. ಇಂಥ ಪ್ರಸಕ್ತಿಯಲ್ಲಿ ನಿಶ್ಚಯವಾಗಿ ಯುದ್ಧಸ್ಫೋಟವಾಗುವದೆಂದು ನಾ ಹೇಳಲಾರೆ, ಆಗಲಿಕ್ಕಿಲ್ಲವೆಂದೂ ಹೇಳಲಾರೆ. ಕಳೆದ ವಾರದ ಕಥೆಯನ್ನು ಪರ್ಯಾಲೋಚಿಸುವೆನು. ಜರ್ಮನಿಯ ಸರ್ವಸತ್ತಾಧಾರಿಗಳಾದ ಹಿಟ್ಲರ ಮಹಾಪುರುಷರು ವರ್ಸೇಲೀಸದಲ್ಲಿ ಆದ ಮಹಾಯುದ್ಧ ಒಪ್ಪಂದವನ್ನು ಒಮ್ಮೆಲೇ ತಿರಸ್ಕರಿಸಿ ಜರ್ಮನ್ ರಾಷ್ಟ್ರದಲ್ಲಿ ಸೇನಾ ಬಲ ಸಕ್ತಿಯಿಂದ ... ಕೊಟ್ಟು ಸೈನ್ಯಬಲವನ್ನು ಏರಿಸುವ ನಿರ್ಧಾರ ಮಾಡಿರುವದಾಗಿ ಬರ್ಲಿನ್ ಪಟ್ಟಣದಲ್ಲಿ ... ಜಾಹೀರನಾಮೆಯನ್ನು ಹೊರಡಿಸಿದರು. ವರ್ಸೇಲೀಸ ತಹನಾಮೆಯಂತೆ ಬ್ರಿಟಿಶ್, ಫ್ರಾನ್ಸ್, ಇಟಲಿ ದೇಶಗಳು ನಡೆಯಲಿಲ್ಲ. ಶಸ್ತ್ರಾಸ್ತ್ರಗಳನ್ನೂ ಹಡಗ ಪಡೆಗಳನ್ನೂ ಮದ್ದುಗುಂಡುಗಳನ್ನೂ ಮನಸ್ವೀ ಏರಿಸಿದರು. ಎಲ್ಲರೂ ಆತ್ಮರಕ್ಷಣೆಯ ನೆವ ಮಾಡಿ ಒಬ್ಬರಿಗೊಬ್ಬರು ಬೊಟ್ಟು ತೋರಿಸಿ ಯುದ್ಧಸಾಹಿತ್ಯ ಸಂಗ್ರಹ ಮಾಡುತ್ತಿದ್ದಾರೆ. ಜರ್ಮನಿಯು ಮಾತ್ರ ವರ್ಸೇಲೀಸ ತಹನಾಮೆಯಂತೆ ನಡಕೊಳ್ಳಬೇಕೆಂದು ಹೇಳುವದು ಒಣ ದುರಾಗ್ರಹ. ರಾಷ್ಟ್ರರಕ್ಷಣೆಗೆ ರಾಷ್ಟ್ರಗೌರವಕ್ಕೆ ಅದು ಉಚಿತವಾದದ್ದಲ್ಲ. ಆದರಿಂದ ಆ ತಹನಾಮೆಯನ್ನು ಹಿಟ್ಲರರು ಫಕ್ಕನೆ ಧಿಕ್ಕರಿಸಿ ಒಮ್ಮೆಲೇ ರಾಷ್ಟ್ರವನ್ನು ಭದ್ರಪಡಿಸುವ ಉದ್ಯೋಗದಲ್ಲಿ ತೊಡಗಿದ್ದಾರೆ. ಈ ಜಾಹೀರನಾಮೆಯ ವಾರ್ತೆ ಹಬ್ಬಿದೊಡನೆ ಯುರೋಪ ಖಂಡದಲ್ಲಿ ವಿಲಕ್ಷಣವಾದ ಆಂದೋಲನವುಂಟಾಯಿತು. ತಹನಾಮೆಯನ್ನು ಹೇಳದೆ ಕೇಳದೆ ಧಿಕ್ಕರಿಸಿದ ಬಳಿಕ ಯುದ್ಧಪ್ರಸಂಗ ಬಂತೆಂದು ಪೇಟೆಯಲ್ಲಿ ಚಿಂತಾಜನಕ ವಾತಾವರಣ ಹಬ್ಬಿತು. ಠೇವುದಾರರು ಬೇಂಕುಗಳೊಳಗಿಂದ ಠೇವುಗಳನ್ನು ತಿರುಗಿ ಪಡೆಯಲಾರಂಭಿಸಿದರಂತೆ. ವರ್ತಮಾನ ಪತ್ರಗಳಲ್ಲಿ ಯುದ್ಧವಾಯಿತೆಂಬ ದೊಡ್ಡ ಗಡಿಬಿಡಿಯಾಗಿತ್ತು. ಈಗ ಆ ಗಡಿಬಿಡಿ ಸ್ವಲ್ಪ ಶಾಂತವಾಗಿದೆ. ಫ್ರಾಂಚರೂ, ಬ್ರಿಟಿಶರೂ ಇಟಲಿಯವರೂ ಆಲೋಚನ ಮಾಡತೊಡಗಿದ್ದಾರೆ. ವರ್ಸೇಲೀಸ ತಹನಾಮೆಯನ್ನು ಮುರಿದ ಆರೋಪವನ್ನು ಜರ್ಮನಿಯ ಮೇಲೆ ಹೇರಿಸುವ ಪೂರ್ವದಲ್ಲಿ, ತಹನಾಮೆಯ ಪುರಸ್ಕಾರ ಮಾಡುವ ಆಕ್ಷೇಪಕ ರಾಷ್ಟ್ರಗಳು ಆತ್ಮನಿರೀಕ್ಷಣ ಮಾಡಲಾರಂಭಿಸಿವೆ. ... 'ಫ್ರೀ ಪ್ರೆಸ್' ಪತ್ರಿಕೆಯಲ್ಲಿ ಬರೆದಂತೆ, ವರ್ಸೇಲೀಸ ತಹನಾಮೆಯ ಕಲಮುಗಳನ್ನು ಬ್ರಿಟಿಶ ... ಇತರ ರಾಷ್ಟ್ರಗಳು ಮುರಿದು ತಮ್ಮ ತಮ್ಮ ಸ್ವಾರ್ಥಕ್ಕೆ ಬೇಕಾದಷ್ಟು ಹಡಗುಪಡೆಗಳನ್ನು ಕಟ್ಟಿಸಲಿಲ್ಲವೇನ? ಆ ಕಾಲದಲ್ಲಿ ವರ್ಸೇಲಿನ ತಹನಾಮೆಯ ವಚನ ಅವರ ನೆನಪಿಗೆ ಬರಲಿಲ್ಲ. ಶಸ್ತ್ರಸನ್ಯಾಸ ಪರಿಷತ್ತು ನಡೆಯುತ್ತಿರುವಾಗ ಬ್ರಿಟಿಶ ಜರ್ನಾ-ಯಲ್ ಪತ್ರಿಕೆಯಲ್ಲಿ ೬೫ ಲಕ್ಷ ಜನಗಳಿಂದ ಸೈನ್ಯ ಬಿಡಾರ ಬೆಳೆಸಲ್ಪಟ್ಟಿತು. ಜಗತ್ತಿನಲ್ಲಿ ಶಾಂತತೆಯನ್ನು ಸ್ಥಾಪಿಸಲು ಯುದ್ಧ ಕಾರಣವನ್ನು ಬಗಹರಿಸಲು ಐರೋಪ್ಯ ರಾಷ್ಟ್ರಗಳು ನಿರ್ಮಿಸಿದ ಸಂಸ್ಥೆಯೆಂದು ಅಭಿಮಾನದಿಂದ ಹೇಳುವ ರಾಷ್ಟ್ರಸಂಘವು ನಿರ್ಬಲವಾಗಿದೆ. ರಾಷ್ಟ್ರಸಂಘದ ಮೇಲೆ ನಂಬಿಗೆ ಇದ್ದಿದ್ದರೆ, ರಾಷ್ಟ್ರಸಂಘವು ಪ್ರಬಲವಾಗಿದ್ದರೆ, ಕಾರ್ಯದಕ್ಷವಾಗಿದ್ದರೆ ಫ್ರೆಂಚರಿಗೆ ಜರ್ಮನಿಯ ಭೀತಿಯೇಕೆ? ಬ್ರಿಟಿಶರು ಹಡಗುಪಡೆಗಳನ್ನು ಬೆಳೆಸುವದೇಕೆ? ಆಸ್ಟ್ರಿಯಾ ದೇಶದ ಸ್ವಾತಂತ್ರ್ಯದ ನೆವಮಾಡಿ ಜರ್ಮನಿಗೆ ಅಂಕೆಯಲ್ಲಿಡುವ ಪ್ರಯತ್ನ ಇಟಾಲಿಗೇಕೆ? ರಾಷ್ಟ್ರಸಂಘವು ನಿರ್ಬಲವಾದದ್ದರಿಂದಲೇ ಬ್ರಿಟಿಶ, ಫ್ರೆಂಚ, ಇಟಾಲಿ ಮೊದಲಾದ ರಾಷ್ಟ್ರಗಳು ಸೈನ್ಯಬಲವನ್ನು ಹೇರಳವಾಗಿ ಬೆಳೆಸಿವೆ. ವರ್ಸೇಲೀಸ ತಹನಾಮೆಯಂತೆ ಜರ್ಮನಿಯು ೧ ಲಕ್ಷ ಸೈನಿಕರನ್ನು ಇಡಬೇಕೆಂಬ ನಿರ್ಬಂಧವಿತ್ತು. ಈಗ ೬ ಲಕ್ಷ ಸೈನಿಕರು ಇಗಿಂದೀಗ ರಣರಂಗಕ್ಕೆ ಕೂಚು ಮಾಡಲು ತಯಾರಾಗಿದ್ದಾರೆ. ಪೋಲೀಸರಿಗೂ ಸೈನ್ಯಶಿಕ್ಷಣ ಕೊಡಲಾಗಿದೆ. ... ಸಾವಿರ ಸ್ವಯಂಸೇವಕರಿದ್ದಾರೆ, ಲಷ್ಕರಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಿದ್ದಾರೆ, ಇನ್ನೂ ಲಷ್ಕರಿ ಶಿಕ್ಷಣವನ್ನು ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ, ಸೈನ್ಯ ಇಲಾಖೆಯಿಂದ ನಿವೃತ್ತರಾದ ... ಇವರೆಲ್ಲರ ಲೆಕ್ಕ ... ೩೦ ಲಕ್ಷವಾದೀತಂತೆ. ವರುಷ-ವರುಷ ಸೈನ್ಯ ಶಿಕ್ಷಣ ಪಡೆದವರ ಸಂಖ್ಯೆ ಹೆಚ್ಚಾಗುತ್ತಿದೆ. ಮದ್ದುಗುಂಡು ತಯಾರಿಸುವ ಕಾರ್ಖಾನೆ ... ಕಾಲ ... ಆದರೆ ... ತೆರೆದಿಲ್ಲ. ತರತರದ ಸಾಮಗ್ರಿಗಳು, ಸಾಹಿತ್ಯಗಳು, ರಸಾಯನಗಳು ತಯಾರಿಸಲ್ಪಡುತ್ತವೆ. ಜರ್ಮನಿಯ ಯುದ್ಧೋತ್ಸಾಹವನ್ನು, ಯುದ್ಧ ತಯಾರಿಯನ್ನು ಸಮ್ಮತಿಸಿ ಹಿಟ್ಲರರು ಒಂದು ನವ ಮಾಡಿ ಪ್ರಾರ್ಥಿಸಿದರು. ಮಹಾಯುದ್ಧದಲ್ಲಿ ಮಡಿದ ರಣಧೀರರಿಗ ಮಾಸ್ಮೃತಿ ಕೊಡುವದಕ್ಕಾಗಿ ... ದೊಡ್ಡ ಮೆರವಣಿಗೆಯಾಗಿ ಭಾಷಣಗಳಾ...

Established 1900.

ಶ್ರೀ

FIXED RATE.

ದಾಸಪ್ಪಾ ಕೃಷ್ಣಪ್ಪಾ ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರಸಿ

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆಯ ಸೀರೆಗಳು, ತರತರದ ಪಕ್ಕಾ ರೇಶ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಸೋಲಾಪುರ ಚದ್ದರುಗಳೂ, ರೇಶ್ಮಿ ಪಿಟ್ಟರ ಮಡಿಗಳೂ, ನಾರ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಭೂತ ಟ್ರಂಕುಗಳೂ ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಭಯವಿಲ್ಲದೆ ನೇರಿಯ ದರದಿಂದ ಸಿಗುವದು. ರೂಪಾಯಕ್ಕೆ ಕಮಿಶನ್ ದೊರೆಯುವದು.

Tel. - "*Honesty.*"

D. K. DHAKAPPA BROS.,

Clot[h] [M]erchants,

SIRSI N KANARA

ಹೊಸ ಮಾಲು.

ದರ ಅಗ್ಗ.

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪ್ರೀಮಿಯಮ್ ಹಿಂದೆ ಅಷ್ಟು, ಇವರ ಕಂತಿನ ದರಗಳೂ ಶರ್ತುಗಳೂ ಬಹಳ ಸೋಯಿಯುಳ್ಳ ಇವೆ. ಕಂಪೆನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮ್ಯುಚ್ಯುವಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ವಿಸ್ತೃತ ಮಾಹಿತಿ ... ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು.

Kumta Agents

D K Nayak Bros
D S. Pai
K N Nayak

Honavar Agent

R. V Prabhu Esq

K. Padmanabha Rao & Sons,

BELGAUM

Chief Agents for

Karnatak Districts & S. M. States

ದವು ಯುದ್ಧ ಸ್ಮಾರಕಕ್ಕೆ ಪುಷ್ಪಮಾಲೆಗಳ ಅರ್ಪಣ ಯಿತು ಈ ಪ್ರಕಾರಗಳನ್ನೆಲ್ಲ ನೋಡಿ ಫ್ರೆಂಚರು ದಿಗಿಲುಬಿದ್ದಿದ್ದಾರೆ ತಮ್ಮ ಮೇಲೆ ಜರ್ಮನರು ಥಕ್ಕನೆ ನುಗ್ಗಿಬಂದು ಫ್ರಾನ್ಸ ದೇಶವನ್ನು ಅತ್ಯಾಕ್ರಾಂತ ಮಾಡಿಬಿಡುವರೆಂದು ಘಾಬರಿ ಸೈನ್ಯದ ಬಲವನ್ನು ಮತ್ತೆ ಬೆಳೆಸಲಾರಂಭಿಸಿದ್ದಾರೆ ಹೆಚ್ಚಿಗೆ ಜನರಿಗೆ ಲಷ್ಕರಿ ಶಿಕ್ಷಣ ಕೊಡುವ ಕಾಯಿದೆ ಪ್ರಾರಂಭಿಸಿದ್ದಾರೆ. ಬ್ರಿಟಿಶರಿಗೂ, ಇಟಾಲಿಯನರಿಗೂ ತಮಗೆ ನೆರವಾಗಬೇಕಾಗಿ ಫ್ರೆಂಚ ರಾಯಭಾರಿಗಳು ಕೂಟ ಮಾಡುತ್ತಿದ್ದಾರೆ ಸೈನಿಕರಿಗೆ ಹೆಚ್ಚಿಗಾಗಿ ಸೇರಿಸಿಕೊಳ್ಳಲು [illegible] ಪ್ರಾರಂಭಿಸಿದ್ದಾರೆ ರಶ್ಯರೂ ಫ್ರೆಂಚ ಪಕ್ಷಪಾತಿಗಳು. [illegible]ನರು ವರ್ಸಾಯಿಲ್ಸ ತಹನಾಮೆಯನ್ನು ಮುರಿದು ತಮ್ಮ ಸೈನ್ಯಬಲವನ್ನು ೯ ಲಕ್ಷ ೬೦ ಸಾವಿರಕ್ಕೆ ಏರಿಸಿದರು. ಆದನ್ನು ನೋಡಿ ಜರ್ಮನಿಗೆ ದೋಷಾರೋಪಿಸಿದ್ದಾರೆ "[illegible]ನಕ ಜರ್ಮನರು ಗುಪ್ತ ಕಾರಸ್ಥಾನ ನಡೆಸುತ್ತಿದ್ದರು ಈಗ ಆ ವೇಶ ಕಳಚಿದೆ" ಹೀಗೆ ಪ್ರಾನ್ಸದೊಳಗಿನ 'ಇನ್ಟ್ರಾನ್ಸಿಜಂಟ' ಪ್ರೌಢ ಪತ್ರಿಕೆಗಳು ಟೀಕಿಸುತ್ತಿವೆ "ರಶ್ಯದ ಸೈನಿಕರನ್ನು ಹೆಚ್ಚಿಸುತ್ತಿರಲಿಲ್ಲ ಜರ್ಮನರು ನ್ಯಾಯವಾಗಿ ರಶ್ಯ ಸರಕಾರದ ದ್ವೇಷ ಸಾಧಿಸ್ಥರಿಂದ ನಿರುಪಾಯವಾಗಿ ರಶ್ಯರು ಸೈನ್ಯಬಲವನ್ನು ಹೆಚ್ಚಿಸಬೇಕಾಯಿತು ಈ ಪ್ರಕಾರ ಸೋವಿಯೆಟ್ ಸರಕಾರವು ವಕೀಲಿ ಮಾಡುತ್ತಿದೆ ಮೇಲೆ ಹೇಳಿದಂತೆ ಎಲ್ಲರೂ ಹೇಳುವ ಮಾತು ಒಂದೇ ಫ್ರೆಂಚರು ಸೈನ್ಯಬಲ ಬೆಳೆಸಿದರು. ಅದರಿಂದ ಜರ್ಮನರು ಬೆಳೆಸಿದರು, ಅದರಿಂದ ರಶ್ಯರು ಬೆಳೆಸಿದರು. ಅದರಿಂದ ಇಟಾಲಿಯನರು ಬೆಳೆಸಿದರು, ಅದರಿಂದ ಬ್ರಿಟಿಶರು ಬೆಳೆಸಿದರು, ಅದರಿಂದ ಪುನಃ ಜರ್ಮನರು ಬೆಳೆಸಿದರು, ಹೀಗೆ ಈ ಶಸ್ತ್ರಬೆಳವಣಿಗೆಯ ಗಾಡಿ ಬೇಸು[illegible]ತ್ತಿದೆ ಪಾರ್ಲಮೆಂಟದೊಳಗಿನ ಪತ್ರಿಕೆಗಳು ನುಡಿದಂತೆ, ವರ್ಸಾಯಿಲ್ಸ ತಹನಾಮೆಯೊಳಗಿನ ಶರ್ತುಗಳು ಕಾಗದದ ಮೇಲೆ ಪ್ರತ್ಯಕ್ಷ ಆಚಾರದಲ್ಲಿ ಅದಕ್ಕೆ ವಿರುದ್ಧವಾದದ್ದೇ ಈ ಕಾರ್ಯಕ್ರಮ ಇತ್ತ ನಡೆಕೊಂಡು ಬಂದಿದೆ. ಜರ್ಮನಿಯ ಬಹಿರಂಗ ಘೋಷಣೆಯಿಂದ ಆಶ್ಚರ್ಯಪಡುವಂಥಾದ್ದೇನಿಲ್ಲ. ವಾರ್ಸಾ ಇದು ಪೋಲಂಡದ ರಾಜಧಾನಿ. ಪೋಲಂಡ ಸರಕಾರಕ್ಕೂ ಜರ್ಮನಿಗೂ ತಹನಾಮೆಯಾದ್ದರಿಂದ ವಾರ್ಸಾ ಪತ್ರಿಕೆಗಳು ಶಾಂತ ಚಿತ್ತದಿಂದ ಅಭಿಪ್ರಾಯಗಳನ್ನು ಪ್ರಕಟಿಸಲಾರಂಭಿಸಿವೆ ಮೊನ್ನೆ ಶನಿವಾರ ತಾ ೨೩ ರಂದು ಪಾರೀಸ ಪಟ್ಟಣದಲ್ಲಿ ಬ್ರಿಟಿಶ, ಫ್ರೆಂಚ, ಇಟಾಲಿಯನ ರಾಯಭಾರಿಗಳ ಗುಪ್ತಾಲೋಚನೆಯಾಗುವದಿತ್ತು ಬ್ರಿಟಿಶರ ಪರವಾಗಿ ಸಹಕಾರಿ ರಾಯಭಾರಿಗಳಾದ ಮಿ| ಈಡನ್‌ರವರೂ, ಇಟಾಲಿಯ ಸುವಿಚ್‌ರವರೂ, ಫ್ರಾನ್ಸದ ಎಮ್. ಲಾವಲ್‌ರವರೂ ಈ ಕೂಟದೊಳಗಿನ ತ್ರಿಮೂರ್ತಿಗಳು. ಪೂರ್ವಾಲೋಚನ ನಡೆದು ಈಡನ್‌ರವರು ಲಂಡನ ಪಟ್ಟಣಕ್ಕೆ ಹಾರಿಹೋಗಿ ಮುಖ್ಯ ಪರರಾಷ್ಟ್ರೀಯ ಪ್ರಧಾನರಾದ ಸರ್ ಜ್ಹಾನ್ ಸೈಮನ್‌ರವರೊಡನೆ ನಿನ್ನೆ ಬರ್ಲಿನ್ ಪಟ್ಟಣಕ್ಕೆ ಹೋಗುವವರಿದ್ದರು ಅಲ್ಲಿ ಹಿಟ್ಲರರೊಡನೆ ಸಂಭಾಷಣವಾಗುವದಿದೆ ವಿವಾದ ಕಾರಣಗಳನ್ನೆಲ್ಲ ಬಗೆಹರಿಸಿಕೊಂಡು ಪುನಃ ತ್ರಿಮೂರ್ತಿಗಳು ಸಭೆ ಸೇರಿಸುವವರಿದ್ದಾರೆ. ಎಲ್ಲವೂ ಬರ್ಲಿನ್ ಪಟ್ಟಣದೊಳಗಿನ ಸಂಭಾಷಣದ ಮೇಲೆ ಹೊಂದಿಕೊಂಡಿದೆ "ಜರ್ಮನಿಯು ಸೋತ ರಾಷ್ಟ್ರವೆಂದು ಬ್ರಿಟಿಶರಿಗೆ ತಲೆಬಗ್ಗಿಸಿ ನಡೆಕೊಳ್ಳಲು ಎನ್ನಕ್ಕೂ ತಯಾರಿಲ್ಲ ಜರ್ಮನಿಯು ಸ್ವತಂತ್ರ ರಾಷ್ಟ್ರ; ಸಮಾನ ಹಕ್ಕುಳ್ಳ ರಾಷ್ಟ್ರ, ಆತ್ಮಸಂರಕ್ಷಣ ಮಾಡಿಕೊಳ್ಳಲು ಬೇರೆ ರಾಷ್ಟ್ರಗಳಂತೆ ಜರ್ಮನಿಗೂ ಹಕ್ಕಿದೆ, ಶಸ್ತ್ರಾಸ್ತ್ರಗಳನ್ನು ಸ್ವೇಚ್ಛೆಯಂತೆ ಬೆಳೆಸಲು ಫ್ರೆಂಚರಿಗೆ ಸ್ವಾತಂತ್ರ್ಯವಿದ್ದರೆ ಜರ್ಮನಿಗೂ ಸ್ವಾತಂತ್ರ್ಯವಿದೆ. ಇದೆ ಜರ್ಮನಿಗೆ ಕೈ-ಕಾಲು ಕಟ್ಟಿ ಹಡಮುಂಗೆ ಕಟ್ಟಲು ಯಾರಿಗೂ ಅಸಾಧ್ಯ" ಎಂಬುದೇ ಹಿಟ್ಲರರ ಅಂಬೋಣ, ನೆರೆಹೊರೆಯವರು ಶಸ್ತ್ರಾಸ್ತ್ರಗಳನ್ನು ಬೆಳೆಸುತ್ತಿರುವಾಗ ಜರ್ಮನಿಯು ಕೈ-ಕಾಲು ಮುದುಡಿಕೊಂಡು ಸುಮ್ಮನೆ ಕೂಡುಕೊಳ್ಳಲಾರದು, ಜರ್ಮನಿಯ ಪರರಾಷ್ಟ್ರೀಯ ಪ್ರಧಾನರಾದ ಬ್ಯಾರನ್ ನ್ಯೂರಿಥ್‌ರವರು ನುಡಿದ ಮುತ್ಸದ್ದಿತನದ ಮಾತುಗಳು ಮನನೀಯವಿವೆ "ನಾವು ಪರ ಚಕ್ರದ ಅಭಿಲಾಷೆಯಿಂದ ಸೈನ್ಯ ಬೆಳೆಸಲು ಬಯಸುವದಿಲ್ಲ. ಲೋಕಶಾಂತಿಗಾಗಿಯೇ ನಾವು ಈ ಜಾಹೀರನಾಮೆ ಹೊರಡಿಸಿದ್ದೇವೆ ಪ್ರಸಂಗಬಿದ್ದಲ್ಲಿ ಪ್ರತಿಯೊಬ್ಬ ಶರೀರಬಲವುಳ್ಳ ಸಮರ್ಥ ಜರ್ಮನ್ ನಾಗರಿಕನು ಯುದ್ಧಕ್ಕೆ ತಯಾರಿರಬೇಕು. ರಾಷ್ಟ್ರಕರ್ತವ್ಯವನ್ನು ಆತ ಮಾಡಲು ಬದ್ಧನಿದ್ದಾನೆ ಇಷ್ಟೇ ಈ ಜಾಹೀರನಾಮೆಯ ಉದ್ದೇಶ. ವ್ಯವಹಾರಿಕ ಜ್ಞಾನವಿದ್ದವರಿಗೆ ಈ ಸಂಗತಿ ಸಹಜವಾಗಿ ತಿಳಿಯಬಲ್ಲದು ಯುದ್ಧ ಮಾಡಬೇಕೆಂಬ ಲವಲವಿಕೆಯಿಲ್ಲ ಇನ್ನೊಂದು ಯುದ್ಧವಾದರೆ ಯುರೋಪ ಖಂಡ ನಾಶವಾದೀತು." ಜ್ಹೆನರಲ ಬ್ಲೋಂಬರ್ಗರವರು ಕಳೆದ ಮಹಾ ಯುದ್ಧದಲ್ಲಿ ಮಡಿದ ರಣಶೂರರಿಗೆ ಮನ್ನಿಸುವ ಸಭೆಯಲ್ಲಿ ನುಡಿದರು:— "ಇನ್ನೊಂದು ಯುದ್ಧ ಹೂಡುವದು ಆತ್ಮಘಾತುಕವಾದುದು. ಸಮಾನ ಹಕ್ಕುಗಳೇ ಜರ್ಮನಿಯ ಕಾಂಕ್ಷೆ" ಇಂದ ಸಂದರ್ಭದಲ್ಲಿ ಹೇಳುವದೇನು ? ಬ್ರಿಟಿಶರಿಗಾಗಲಿ, ಫ್ರೆಂಚರಿಗಾಗಲಿ ಇಟಾಲಿಯನರಿಗಾಗಲಿ, ಯಾರಿಗೇ ಆಗಲಿ ಪರಚಕ್ರದ, ಪರದೇಶ ಪಾದಾಕ್ರಾಂತ ಮಾಡುವ ಅಭಿಲಾಷೆ ಇಲ್ಲ ಆತ್ಮರಕ್ಷಣೆಯೇ ಎಲ್ಲರದೂ ಹಂಬಲ, ಆದಾಗ್ಯೂ ಎಲ್ಲರಿಗೂ ಪರಚಕ್ರದ್ದೇ ಭೀತಿ. ಫ್ರೆಂಚರೂ, ಜರ್ಮ

[೭ನೇ ಪಾನು ನೋಡಿರಿ]

ಮುಂಬಯಿ ಸ್ವದೇಶಿ ವಸ್ತುಪ್ರದರ್ಶನದಲ್ಲಿ ಉಚ್ಚ ತರಗತಿಯ ಪಾರಿತೋಷಕ ಪಡೆದ,



ವೆಜಿಟೆಬಲ್ ಸೋಪ ವರ್ಕ್ಸ, ಕಲ್ಲಿಕೋಟೆ.

ಡಿಸ್ಟ್ರಿಬ್ಯೂಟರರು:- ಬಸ್ತಿ ಪಿತ್ತಲ ಮಹಮೂದ ಸಾಹೇಬ, ಕುಮಟಾ. (ಉ ಕನ್ನಡ)

ಕಾನಡಾವೃತ್ತ.

ಮಿತಿ ಭಾವ ಸಂ। ಫಾಲ್ಗುಣ ಬ। ೫ಮಿ ಸೋಮವಾರ

ಶೋಚನೀಯ!

ನಿಜವಾಗಿಯೂ ನಮಗೆ ಬಹಳ ವ್ಯಸನವಾಗಿದೆ. ಕರಾಚಿಯೊಳಗೆ ನಡೆದ ಪ್ರಕಾರ ಶೋಚನೀಯವಿದೆ ನಥೂರಾಮ ಎಂಬವರು ಇಸ್ಲಾಮ ದರ್ಮದ ಕುರಿತು ಬರೆದ ಗ್ರಂಥದಿಂದ ಇಸ್ಲಾಮ ಧರ್ಮಕ್ಕೆ ಅಪಮಾನವಾದ ಬಗ್ಗೆ ಅವರ ಮೇಲೆ ಖಟ್ಲೆ ನಡೆದು, ಅವರಿಗೆ ೧೮ ತಿಂಗಳ ಶಿಕ್ಷೆಯಾಗಿತ್ತು ಈ ಶಿಕ್ಷೆಯ ವಿರುದ್ಧ ಅವರು ಕರಾಚಿಯ ಜ್ಯುಡಿಶಿಯಲ್ ಕಮಿಶನರರ ಕೋರ್ಟಿನಲ್ಲಿ ಅಪೀಲು ಮಾಡಿದ್ದರು ಆ ಅಪೀಲಿನ ವಿಚಾರ ನಡೆಯುತ್ತಿರುವಾಗ [illegible] ಹಜಾರಾ ಜಿಲ್ಲೆಯ ಅಬ್ದುಲ್ ಕಾಯಮ್ ಎಂಬವರು ತುಂಬಿದ ಕೋರ್ಟಿನಲ್ಲಿ ನಥೂರಾಮರಿಗೆ ತಿವಿದು ಕೊಂದರು ಅಬ್ದುಲ್ ಕಾಯಮ್‌ರ ಮೇಲೆ ರೀತಿಯಂತೆ ಖಟ್ಲೆ ನಡೆದು ಅವರಿಗೆ ಗಲ್ಲಿಗೇರಿಸಬೇಕಾಗಿ ಶಿಕ್ಷೆ ವಿಧಿಸಲ್ಪಟ್ಟಿತು ನಿಜವಾಗಿ ಈ ಪ್ರಕಾರಗಳಿಗೆ ಸಾರ್ವಜನಿಕ ಮಹತ್ವವಿಲ್ಲ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ, ಅಪರಾಧಕ್ಕೆ ತಕ್ಕ ಶಿಕ್ಷೆ, ಎಂದು ಎಲ್ಲರೂ ಬಿಟ್ಟು ಮರೆಯಬೇಕಾದ ವಿಷಯಗಳಿವು ಆದರೆ ಕೆಲ ವಿಪರೀತವಾದಿ ಮುಸಲ್ಮಾನ ಬಾಂಧವರು ಧರ್ಮಾಭಿಮಾನ ಹಿಡಿದು ಅಬ್ದುಲ್ ಕಾಯಮ್‌ರು ಪೈಗಂಬರರ ದ್ವೇಷಕರಿಗೆ ಒಹು ಸಾಹಸದಿಂದ ಕೊಂದು ಪುಣ್ಯವಂತರಾದರಾಗಿಯೂ ಘಾಜಿ ಪದವಿಗೆ ಏರಿಹೋದರಾಗಿಯೂ ಅಭಿಪ್ರಾಯ ಪಟ್ಟು ಅಬ್ದುಲ್ ಕಾಯಮ್‌ರು ಇಸ್ಲಾಮ ದರ್ಮದ ಪುರಸ್ಕರ್ತರೆಂದು ಹೊಗಳಿ ಅವರನ್ನು ರಕ್ಷಿಸಿಕೊಳ್ಳಲೋಸುಗ ಅಕಟ-ವಿಕಟ ಪ್ರಯತ್ನ ಮಾಡಿದರು “ಈ ಚಳವಳಿಯಿಂದ ಕ್ಷೇಮವಿಲ್ಲ, ಇಸ್ಲಾಮ ಧರ್ಮಕ್ಕೆ ಇದರಿಂದ ಗೌರವವಿಲ್ಲ ಅಬ್ದುಲ್ ಕಾಯಮ್‌ರು ಮಾಡಿದ ಅಪರಾಧ ತಿರಸ್ಕಾರಾರ್ಹವಿದೆ, ಸಮಾಜಘಾತಕವಿದೆ,” ಎಂಬದಾಗಿ ಮುಂಬಯಿಯ ‘ಕ್ರಾನಿಕಲ್’ ಪತ್ರಿಕೆಯ ಸಂಪಾದಕರಾದ ಮಿ| ಸೈಯದ ಅಬ್ದುಲ್ಲಾ ಬ್ರೆಳ್ವಿಯವರು ಸ್ವದಸ್ತೂರಿನಿಂದ ಲೇಖ ಬರೆದು ಸ್ವಧರ್ಮಬಾಂಧವರಿಗೆ ಮುಂಜಾಗ್ರತೆ ಕೊಟ್ಟಾಗ್ಯೂ ವಿಕಾರವಶರಿಗೆ ವಿಚಾರ ಹುಟ್ಟಲಿಲ್ಲ ಅಬ್ದುಲ್ ಕಾಯಮ್‌ರ ಮೇಲಿನ ಭಕ್ತಿ ವಿಲಕ್ಷಣವಾಗಿ ಹಬ್ಬಿತು. ಕರಾಚಿಯಲ್ಲಿ ಮಂಗಳವಾರ ತಾ ೧೯ನೇ ಬೆಳಗಿನ ೫ ಘಂಟೆಯೊಳಗೆ ಅಬ್ದುಲ್ ಕಾಯಮ್‌ರಿಗೆ ರೀತಿಯಂತೆ ಗಲ್ಲಿಗೇರಿಸಲ್ಪಟ್ಟಿತು ಮತ್ತು ಅವರ ಶವವನ್ನು ಅವರ ಆಪ್ತೇಷ್ಟರಿಗೆ ಒಪ್ಪಿಸಿ ಅವರ ಕಡೆಯಿಂದ ಬೆಳಗಿನ ೮| ಘಂಟೆಗೆ ಇಸ್ಲಾಮ ವಿಧಿಯಂತೆ ಈದಸ್ಪಾರ್ಥನೆ ನಡಿಸಿ ದಫನ ವಿಧಿ ಮಾಡಲ್ಪಟ್ಟಿತು. ಈ ಸುದ್ದಿ ಊರಲ್ಲಿ ತಿಳಿಯೊಡನೆ ವೃಂದ ಮುಸಲ್ಮಾನರು ತಂಡುಗಟ್ಟಿ ಒಂದು ಕ್ಷಣಾರ್ಧದಲ್ಲಿ ವಿಲ್ಲಾಬಿ [illegible] ೧೦-೨೦ ಸಾವಿರ ಮುಸಲ್ಮಾನರು ಒಟ್ಟಾದರು, ಗೋರಿ ಅಗಿದರು, ಶವ ತೆಗೆದುಕೊಂಡು ಮೆರವಣಿಗೆ ಹೊರಡಿಸಲಾರಂಭಿಸಿದರು [illegible] ಪಿಸಲಾಗಲಿಲ್ಲ ಸೈನಿಕರಿಗೆ ಕರೆಕಳಿಸಲು [illegible] ೪೦೦ ಸೈನಿಕರು ಒಂದರು ಆದಾಗ್ಯೂ [illegible] ಕೇಳಲಿಲ್ಲ ಸೈನಿಕರು ಗುಂಡು ಹಾರಿಸಿದರು [illegible] ವಂದಿ ಸೈನಿಕರು [illegible] ಗುಂಡು ಹಾರಿಸಿದರಂತೆ ೩೦ ಮಂದಿ ಅಲ್ಲಿಂದಲೇ ತೀರಿಕೊಂಡರು [illegible] ರು ಜನರು ಘಾಯಹೊಂದಿ [illegible] ಈಗ ಕರಾಚಿಯಲ್ಲಿ ಶಾಂತತೆಯುಂಟಾಗಿದೆ ಹಣವನ್ನು [illegible] ಇದನ್ನು ಕೇಳಿ ಎಲ್ಲರಿಗೂ ವ್ಯಸನವಾಗದಿರದು ಇಸ್ಲಾಮ ಧರ್ಮವು [illegible] ಮಾಡಬೇಕಾಗಿ [illegible] ಸ್ವಾತಂತ್ರ್ಯವು ಇಸ್ಲಾಮ ಧರ್ಮಕ್ಕೆ [illegible] ಅಬ್ದುಲ್ ಕಾಯಮ್‌ರ [illegible] ತಾವೆಂದಿಗೂ ಮನ್ನಿಸುವದಿಲ್ಲವಾಗಿ [illegible] ಜಿನ್ನಾ ರವರು ವರಿಷ್ಠ ಕಾಯದ ಕೌನ್ಸಿಲಿನಲ್ಲಿ ಕರಾಚಿಯ ಪ್ರಕಾರಗಳ ಚರ್ಚೆ ನಡದಾಗ ಉದ್ಗರಿಸಿದ್ದಾರೆ ಅಬ್ದುಲ್ ಕಾಯಮ್‌ರ ಕೃತ್ಯವು ಈ ಪ್ರಕಾರ ಗರ್ಹಣೀಯವಾಗಿರುವ ಗ, ಅಪರಾಧಕ್ಕಾಗಿ ನೀತಿಯಂತೆ ಅವರು ಶಿಕ್ಷೆ ಪಡೆದಿರುವಾಗ ಮುಸಲ್ಮಾನ ಬಾಂಧವರು ಮೃತದೇಹದ ದೊಂಬಿಯನ್ನೆಬ್ಬಿಸಿದ್ದು ತೀರ ತಪ್ಪು ಸರಕಾರವು ಸಕಾಲದಲ್ಲಿ ಬಂದೋಬಸ್ತನ್ನಿಡದೆ [illegible] ಸಾವಿರ ಜನರು ಕೂಡುವ ತನಕ ಅಜಾಗ್ರತೆಯಿಂದಿದ್ದು ಜನಸಂದಣಿಯಲ್ಲಿ ಗುಂಡು ಹಾರಿಸಿ ಪ್ರಜೆಗಳ ಕೊಲೆ ಮಾಡಿದ್ದು ತೀರ ಅನ್ಯಾಯ ಗುಂಡು ತಗಿದ ಸತ್ತವನ್ನೂ ಘಾಯವನ್ನೂ ಸತಿಯು ಆಸ್ಪತ್ರೆಯಲ್ಲಿ ನೋಡಿ ಒಮ್ಮಲೇ ಮೂರ್ಛೆಯಿಂದ ಬಿದ್ದುಬಿಟ್ಟಳಂತೆ ಕಲ ಹುಡುಗರು ಗುಂಡಿಗೆ ತುತ್ತಾದರು ಇದು ನಿಜವಾಗಿಯೂ ಶೋಚನೀಯವಿದೆ ವರಿಷ್ಠ ಕಾಯದ ಕೌನ್ಸಿಲಿನಲ್ಲಿ ಬ್ಯಾರಿಸ್ಟರ ಜಿನ್ನಾ, ಮಿ ಗೌಬಾ, ಶ್ರೀ ಭೂಲಾಭಾಯಿ ಮೊದಲಾದವರು ನುಡಿದಂತೆ, ಅಬ್ದುಲ್ ಕಾಯಮ್‌ರಿಗೆ ಗಲ್ಲಿಗೇರಿಸಿದ ಒಗ್ಗ ಸಂಗತಿ ರಹಸ್ಯವಾಗಿ ಇಟ್ಟು ಪ್ರಯೋಜನವಿಲ್ಲ ಆದರೆ, ಸರಕಾರವು ಇಷ್ಟು ಪ್ರಾಣಹಾನಿ ಮಾಡುವ ಅವಶ್ಯಕತೆ ಇದ್ದಿಲ್ಲ ಅಬ್ದುಲ್ ಕಾಯಮ್‌ರ ವಿಷಯ ಸಕಾರಣವಿರಲಿ ನಿಷ್ಕಾರಣವಿರಲಿ ಪೂಜ್ಯಭಾವ ಊರತುಂಬ ಹಬ್ಬಿದ ಸಂಗತಿ ಸರಕಾರವು ಅರಿತುಕೊಂಡಿತ್ತು ಹೀಗೆ ಅರಿತುಕೊಂಡಾಗ್ಯೂ ದೊಂಬಿಯಾಗದಂತೆ, ಪುಂಡುಗಾರರಿಗೆ ಪ್ರೋತ್ಸಾಹ ದೊರಕದಂತೆ ತಕ್ಕ ಬಂದೋಬಸ್ತು ಇಡುವದು ಅಧಿಕಾರಿಗಳ ಕರ್ತವ್ಯವಿತ್ತು ಅದನ್ನು ಅಧಿಕಾರಿಗಳು ನಡಿಸಲಿಲ್ಲ, ಕರ್ತವ್ಯಪರಾಙ್ಮುಖರಾದರು ಕರ್ತವ್ಯಪರಾಙ್ಮುಖತೆಯ ಮೂಲಕವಾಗಿಯೇ ಪ್ರಾಣಹಾನಿಯಾಗಬೇಕಾಯಿತು ಈ ದೃಷ್ಟಿಯಿಂದ ಕಳೆದ ಗುರುವಾರ ವರಿಷ್ಠ ಕಾಯದ ಕೌನ್ಸಿಲಿನಲ್ಲಿ ಚರ್ಚೆ ನಡೆದು ಸರಕಾರದ ಮೇಲೆ ನಿಂದಾಪ್ರದರ್ಶಕ ನಿರ್ಣಯವು ಮಂಜೂರಾಗಿದೆ ಸರಕಾರವು ಸಭಿಕರ ಅಪೇಕ್ಷೆಯ ಮೇರೆಗೆ ಚೌಕಶಿ ಮಂಡಳವೊಂದನ್ನು ನೇಮಿಸಿಕೊಂಡು ಅಧಿಕಾರಿಗಳ ನಡತೆಯನ್ನು ಸಂಶೋಧಿಸಬೇಕು [illegible] ಬರಿಸುವದಾಗಿ ಕೋರಿಕೆ

ಮುಸಲ್ಮಾನ ಬಾಂಧವರು ಈ ಅನರ್ಥದಿಂದ ಬೋಧ ಪಡೆಯಬೇಕಾಗಿದೆ ಅಬ್ದುಲ್ಲ ಕಾಯಮ್‌ರಂಥ ಕೊಲೆಪಾತಕಿಗಳಿಗೆ ಘಾಜಿ ಪದವಿಯನ್ನಪಿಸಿ ಲೋಕಪೂಜ್ಯತೆಯನ್ನು ಕೃತ್ರಿಮವಾಗಿ ನಿರ್ಮಿಸುವದರಿಂದ ಸಮಾಜಕ್ಕೆ ಕ್ಷೇಮವಿಲ್ಲ ದೇಶಕ್ಕೆ [illegible] ವಿಲ್ಲ ಮೇಲಾಗಿ ಇಸ್ಲಾಮ ದರ್ಮದ ಲೋಕಖ್ಯಾತಿಗೆ [illegible] ಕಳಂಕಬರುತ್ತದೆ ಪರ್ಯಾಯದಿಂದ ಇಂದ ಅನ್ಯರಿಗೆ ವಿಚಾರಹೀನ ಪ್ರಮುಖರೇ ಕಾರಣರಾಗುತ್ತಾರೆ ಸುದೈವದಿಂದ ಮಿ. ಗೌಬಾರವರು [illegible] ಕರಾಚಿಯಲ್ಲಿ, ಸಿಂಧ ಪ್ರಾಂತಗಲ್ಲಿ ಹಿಂದು-ಮುಸಲ್ಮಾನರಿಗೆ ದ್ವೇಷವಿಲ್ಲ, ಪ್ರೀತಿಯಿದೆ, ಮಮತೆಯಿದೆ ಒಂದು ಭಾವವಿದೆ ದೊಂಬಿಯಿಂದ [illegible] [illegible] ಸಂಪಾದರಂತೆ ತಮ್ಮಿಂದಾದಷ್ಟು [illegible] ಅವರ ಸಂಕಷ್ಟಗಳನ್ನು ಪರಿಹರಿಸಲು ಪ್ರಯತ್ನಪಡುತ್ತಿರುತ್ತಾರೆ ಇನ್ನೂ ಅವರು [illegible] ಕ್ಕೆ ನೋಟ ನೋಡಿ, ಈ ವಾರ್ತೆ ಕೇಳಿ ನಮಗೆ ಅತ್ಯಾನಂದವಾಗಿದೆ ಈ ಪ್ರಕಾರ ಇತ್ತಕಡೆಯಲ್ಲಿ ಪ್ರೀತಿ ಇರುವಾಗ ಗುಂಡು ಹೊಡೆಯುವಂಥ ದಾರುಣ ದೊಂಬಿಯಾಗುವದು ನಿಜವಾಗಿಯೂ ಶೋಚನೀಯವಾದದು ಹಿಂದು-ಮುಸಲ್ಮಾನ ಪ್ರಮುಖರೂ, ಹಿಂದು-ಮುಸಲ್ಮಾನ ಜನಾಂಗದವರೂ ಈ ಪ್ರಕರಣದಿಂದ ತಕ್ಕ ಬೋಧ ಪಡೆದು ಸದ್ಭಾವನೆ ಮಾನವನ್ನು ಪ್ರಚುರಗೊಳಿಸಬೇಕಾಗಿಯೂ [illegible] ಸದ್ಧರ್ಮ ಬೋಧಿಸಿ ಅದ್ಭುತ [illegible] ಹೋಗಗೊಡದೆ ಸನ್ಮಾರ್ಗಕ್ಕೆ ಹಚ್ಚಬೇಕಾಗಿದೆ. ಅವರವರ ಬೇರೆ ಬೇರೆ ಧರ್ಮದವರಿದ್ದಾಗ್ಯೂ ಒಂದೇ ಹಿಂದರಾಷ್ಟ್ರದ ಪ್ರಜೆಗಳೆಂದೂ ಒಬ್ಬರೊಬ್ಬರ ಪ್ರೀತಿಯಿಂದ ನಡಕೊಂಡರೆ ಮಾತ್ರ ಇತ್ತಕಡೆ ಕ್ಷೇಮವಿರುವದಾಗಿಯೂ ಬೋಧಿಸಬೇಕು ಕರಾಚಿಯಲ್ಲಿ ನಡೆದ ಪುಂಡಾಟಿಕೆ ದೊಂಬಿಯ ವಾಯುವೇಗದಿಂದ ಹರಡಿ [illegible] ಸಿಂಧ ಪ್ರಾಂತದಲ್ಲಿಯೂ, [illegible] ಪಂಜಾಬದಲ್ಲಿಯೂ ಹಿಂದು ಮುಸಲ್ಮಾನರ ವೈಮನಸ್ಯ ಪ್ರಸಾರವಾಗಲು ಕಾರಣವಾದರೆ ಅದೊಂದು ದುರ್ದೈವದಿಂದ ಸಮಾಧಾನವಾಗದು.

—ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಮಾ॥ ತಿಂಗಳ ತಾ॥ ೩ರಿಂದ ೧೧ನೇ ತನಕ ೯ ವಾರ ಕರ್ನಾಟಕದಲ್ಲಿ ಸಂಚರಿಸುವವರಿದ್ದಾರೆ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಈ ಕಾರ್ಯಕ್ರಮವನ್ನು ಮೇ ೨೧ನೇ ತಾರೀಖಿನ ತನಕ ಬೆಳಸಬೇಕಾಗಿಯೂ ಮಂಗಳೂರಿನಲ್ಲಿ ಸೇರಲಿಕ್ಕಿದ್ದ ಕರ್ನಾಟಕ ಪ್ರಾಂತಿಕ ಪರಿಷತ್ತಿನ ೧೫ನೇ ಅಧಿವೇಶನದ ಅಧ್ಯಕ್ಷಸ್ಥಾನವನ್ನು ವಹಿಸಬೇಕಾಗಿಯೂ ವಿನಂತಿಸಿಕೊಂಡಿದ್ದಾರಾಗಿ ತಿಳಿಯುತ್ತದೆ.

— ಜಕಾತ ಕಟ್ಟೆಗಳನ್ನು ಮುಂದಿನ ವರುಷದ ಒಗ್ಗಲಿಲಾವ ಮಾಡಬೇಕಾಗಿ ಮುಂಬಯಿ ಸರಕಾರದಿಂದ ಪುನಃ ಹುಕುಮಾಗಿರುವದಾಗಿ ತಿಳಿಯುತ್ತದೆ ಜಕಾತ ಕಟ್ಟೆಗಳ ಉಪಾಧಿ ಇನ್ನೂ ತೀರಲೊಲ್ಲದು ಸರಕಾರವು ಒರೆ ಮೋಟಾರ ವಾಹನಗಳ ಪಟ್ಟಿ ಮಾತ್ರ ಒಕಾತ ವಸೂಲಾಗಬೇಕಾಗಿ, ಬಿಡಿಸಿ ಉಳಿದ ವಾಹನಗಳ ಮೇಲೆ ಜಕಾತ ವಸೂಲಾಗದಂತೆ ಕಟ್ಟಣೆ ಮಾಡಿ ಈ ಸಂಗತಿಯನ್ನು ಲಿಲಾವದಾರರಿಗೆ ತಿಳಿಸಿದರೆ ಅವರ ಮಟ್ಟಿಗೆ ಒಕಾತಕಟ್ಟೆಗಳನ್ನು ನಿಲ್ಲಿಸಿ ಸರಕಾರವು ವಚನ ಪಾಲಿಸಿದಂತಾದೀತು

ಯುದ್ಧಸ್ಫೋಟವಾದೀತೇ ?

[ನಿರೀಕ್ಷಕನು ಬರೆದುದು]

[ಹಿಂದಿನ ಸಂಚಿಕೆಯಿಂದ ಮುಂದುವರಿಸಿದೆ]

ನರೂ ವೈಮಾನಿಕ ದಳದ ಕುರಿತು ಒಂದು ಹೇಳಿಕೆಯನ್ನು ಮಾಡಿಕೊಳ್ಳುವವರಿದ್ದರಂತೆ. ಜರ್ಮನ ಕಡೆ ಹೇಳಿದ್ದೇನಂದರೆ, ವೈಮಾನಿಕ ಬಲವಾಗಲಿ, ನೌಕಾ ಬಲವಾಗಲಿ ಇರುವದಿಲ್ಲ ಆದರೆ ಜರ್ಮನ್-ಫ್ರೆಂಚ್ ರೊಳಗಿನ ವೈಮಾನಿಕ ತಹನಾಮೆಯು ಮಾತ್ರ [illegible] ಮುರಿದಂತಾಗಿ ಲಂಡನಿನ [illegible] ತ್ತಾರೆ. ಜರ್ಮನರು [illegible] ತಹನಾಮೆ ಮಾಡಿಕೊಳ್ಳಲು ಸಿದ್ಧರಿದ್ದರು [illegible] "ಪಶ್ಚಿಮ ಪಾರ್ಶ್ವದಲ್ಲಿ ವೈಮಾನಿಕ ದಳದ ತಹನಾಮೆಯಾದರ ಪೂರ್ವ ಪಾರ್ಶ್ವದಲ್ಲಿ [illegible] ಸಾಕ್ಷ್ಯವರು ಪಕ್ಕಾಂಗಿ ಕಠಿಣವಾಗುವದು." ಈ ಪ್ರಕಾರ ರುಶ್ಯರು ಹೇಳಿ ಫ್ರೆಂಚರ ಕಡೆಯಿಂದ ಈ ತಹನಾಮೆಯ ಮಾತುಕತೆ ವಿಘ್ನ ಮಾಡಿಸಿದ್ದರಿಂದ ಹಿಟ್ಲರರು ತಹನಾಮೆಯ ಗೊಡವೆಯನ್ನೇ ಬಿಟ್ಟು ನಿಜವಾದ ಜಾಹೀರನಾಮೆಯನ್ನು ಹೊರಡಿಸಿ ಬಿಟ್ಟಿರುತ್ತಾರೆ. ಜರ್ಮನಿಗೆ ಎಷ್ಟಕ್ಕೂ ಸೈನ್ಯ ಬೆಳಿಸಲು ಅನುವು ಕೊಡಬಾರದಾಗಿ ಬಾಲ್ಕನ್ ಪ್ರದೇಶದೊಳಗಿನ ಯುಗೋಸ್ಲಾವಿಯಾ, ರುಮಾನಿಯಾ ಮೊದಲಾದ (Little Entente) ಯಾನೆ ಚಿಕ್ಕ ರಾಷ್ಟ್ರಸಂಘದ ಅಭಿಪ್ರಾಯವಾಗಿದೆ. ಬಲ್ಗೇರಿಯಾ ರುಮಾನಿಯಾ, ಸರ್ವಿಯಾ ಮೊದಲಾದ ರಾಷ್ಟ್ರಗಳು ಯುರೋಪ ಖಂಡದ ಪೂರ್ವ ಭಾಗದ ಸ್ಥಾನಗಳು. ಸರ್ವಿಯಾ ದೇಶದ ರಾಜಪುತ್ರನ ಕೊಲೆಪಾತಕದಿಂದ ಇಡೀ ಯುರೋಪ ಖಂಡದಲ್ಲಿ ಉಂಟಾದ ರಣಯಜ್ಞವನ್ನು ಎಲ್ಲರೂ ಬಲ್ಲರೆ ವಿಷಯ. ಇಂಥ ಸಂದರ್ಭದಲ್ಲಿ ಈ ರಾಷ್ಟ್ರಗಳಿಗೆ ಅಸಮಾಧಾನ ಮಾಡಲು ಅಸಾಧ್ಯ. ಜರ್ಮನಿಗೆ ಮನವೊಲಿಸದಿದ್ದರೆ ಉಪಾಯವಿಲ್ಲ. ಇಂಥ ಪ್ರಸಕ್ತಿಯಲ್ಲಿ ಸ್ಯಾಮನ್ ಈಡನ್‌ರವರು ಯಾವ ಪ್ರಕಾರದಿಂದ ಮಧ್ಯಸ್ಥಿಕೆ ಮಾಡುತ್ತಾರೆಂಬುದು ನನಗೆ ತಿಳಿಯದ ಮಾತು. ಬ್ರಿಟಿಶರು ವ್ಯವಹಾರಕುಶಲರೆಂದು [illegible] ಜರ್ಮನ್ ಪತ್ರಿಕೆಗಳು ಬ್ರಿಟಿಶರಿಗೆ ಕೊಟ್ಟ ಪ್ರಶಸ್ತಿಪತ್ರಿಕೆಯನ್ನು ನಾನು ಗ್ರಹಿಸಿ ಬಿಡಿಯುತ್ತೇನೆ. ಆದರೆ ಪರಸ್ಪರವಿರೋಧ ಭಾವಗಳಲ್ಲಿ ಐಕ್ಯಮತ್ಯವನ್ನು ಅವರು ಹೇಗೆ ಉಂಟು ಮಾಡಬಲ್ಲರು? ಐಕ್ಯಮತ್ಯವಾಗದಿದ್ದರೆ ಮುಂದಿನ ಪರಿಣಾಮವೇನು? ಜರ್ಮನಿಯು ವರ್ಸಲೀಸ ತಹನಾಮೆಯನ್ನು ಮುರಿದಿದೆ. ಹಾಗೆಯೇ ಅಮೇರಿಕೆಯೊಡನೆ ವಾಶಿಂಗ್ಟನ್‌ದಲ್ಲಿ ಆದ [illegible] ತಹನಾಮೆಯನ್ನೂ ಜಪಾನ ಮುರಿದಂತಾಗಿ ಅಮೇರಿಕೆಯ ಸರಕಾರದ ವರದಿ. ತಹನಾಮೆಗಳನ್ನು ಮುರಿದರೂ ಜರ್ಮನಿಗೆ ಶಾಸನ ಮಾಡದಿದ್ದಲ್ಲಿ ತಹನಾಮೆಗಳೆಲ್ಲ ಬರೀ ಕಾಗದದ ತುಂಡುಗಳಾಗಿ ಪರಿಣಮಿಸುವವು. ಇಂಥ ಸಂದರ್ಭದಲ್ಲಿ ಯುದ್ಧವಾದೀತೋ, ವಾಗಲಿಕ್ಕಿಲ್ಲವೋ ನಾನಂತೂ ಹೇಳಲಾರೆ. ಯುದ್ಧಸ್ಫೋಟವಾಗಲಿಕ್ಕಿಲ್ಲವಾಗಿ ಅನಿಸುತ್ತಿದೆ. ಯುದ್ಧಸ್ಫೋಟವಾದಲ್ಲಿ ಪೌರಾಣಿಕರಾದವರಂತೆ ಯುರೋಪ್ಯ ರಾಷ್ಟ್ರಗಳು ತಮ್ಮ-ತಮ್ಮೊಳಗೆ ಬಡದಾಡಿಕೊಂಡು ಆತ್ಮಘಾತ ಮಾಡಿಕೊಳ್ಳುವವು. ಈ ವಿಚಾರ ಒಂದೊಡನೆ ಮುತ್ಸದ್ದಿಗಳು ಜಾಗೃತರಾಗಿ ಮತ್ಸರವನ್ನು ಮರೆತು ವಿಚಾರದಲ್ಲಿ ತೊಡಗಿದ್ದಾರೆ. ಪುನಃ ಸ್ವಾರ್ಥದ ಕಡೆಗೆ [illegible] ಇಂಥ ಪ್ರಸಕ್ತಿಯಲ್ಲಿ ವಿರೋಧ [illegible] ಭಾವದ ಭಾವನೆ ಪ್ರಬಲವಾಗುವದೋ ಸ್ವಾರ್ಥ ಪ್ರಬಲವಾಗುವದೋ ನಾ ಹೇಳುವದು ಹೇಗೆ? ಎಲ್ಲವೂ ಮಧ್ಯಸ್ಥ ಮುತ್ಸದ್ದಿಗಳ ವಿಚಾರ ವಿನಿಮಯಗಳ ಮೇಲೆ ಅವಲಂಬಿಸಿಕೊಂಡಿದೆ. ಇನ್ನೂ ಸಂಪೂರ್ಣವಾಗಿ ಅಲ್ಲಲ್ಲಿಯ ಮುತ್ಸದ್ದಿ ತಂತುಗಳು ಪ್ರಕಟವಾಗಿಲ್ಲ. ಯಾವತ್ತೂ ರಾಷ್ಟ್ರಗಳ ಸ್ವಾರ್ಥ ಸಾಧಿಸಿ ಪರಾರ್ಥವನ್ನು ಕಲ್ಪಿಸುವ ಕೆಲಸ ಅಸಾಮಾನ್ಯವಾದುದು. ಸದ್ಯಕ್ಕೆ ಇದರ ನಿರ್ಣಯವಾಗಲಿಕ್ಕಿದೆ. ಯುದ್ಧಸ್ಫೋಟವು ಈ ನಿರ್ಣಯದ ಮೇಲೆ ಸಂಪೂರ್ಣ ಅವಲಂಬಿಸಿಕೊಂಡಿದೆ. ಇದನ್ನೇ [illegible] ನಾನು ಹೇಳುತ್ತೇನೆ.

ಸ್ವಿಟ್ಝರ್ಲಂಡ [illegible] ಶಾಂತ ಪ್ರದೇಶ ಸ್ವಿಟ್ಝರ್ಲಂಡ ದೇಶದ [illegible] ಜನವಾ ಪಟ್ಟಣವು ರಾಷ್ಟ್ರಸಂಘದ ಮೂಲಸ್ಥಾನ. ರಾಷ್ಟ್ರಸಭ್ಯಾಸ ಪರಿಷತ್ತು ಇಲ್ಲಿಯೇ ಜರುಗುತ್ತ ಇಂದು [illegible] ದರೂ ನಿರ್ಭಯ ವಾತಾವರಣವಿರಬಹುದೆಂದು ಯಾರು ಎಣಿಸಬಹುದು? ಇಲ್ಲಿಯ ಜರ್ಮನಿಯ ಭೀತಿ. ಸ್ವಿಟ್ಝರ್ಲಂಡದಲ್ಲಿ [illegible] ಲಕ್ಷ ಜರ್ಮನ್ ಪ್ರಜೆಗಳಿದ್ದಾರೆ [illegible] ಜರ್ಮನ್ನರನ್ನೆಲ್ಲ ಏಕರಾಷ್ಟ್ರದಲ್ಲಿ ಕೂಡಿಸುವ ಸಂಕಲ್ಪವನ್ನು ಜಾಹೀರ ಮಾಡಿ [illegible] ಪ್ರದರ್ಶನವನ್ನು ರಾಷ್ಟ್ರಸಂಘದ [illegible] ಪತ್ರಿಕೆಗಳಿಂದ [illegible] ಪಡೆದಿದ್ದಾರೆ. ಆದೇ ಭಾವನೆ ಸ್ವಿಟ್ಝರ್ಲಂಡದೊಳಗಿನ ಜರ್ಮನ್ ಪ್ರಜೆಗಳಲ್ಲಿ ಒಡಮೂಡಿದರೆ ಸ್ವಿಟ್ಝರ್ಲಂಡ ದೇಶವು ಜರ್ಮನಿಗೆ ವಶವಾಗಬಹುದು. ಅಲ್ಲಿ ಎಲ್ಲೆಲ್ಲಿಯಂತೆ ಸೈನ್ಯ ಇಲಾಖೆಯಿರಲಿಲ್ಲ. ಸ್ವಯಂಸೇವಕತತ್ವದಮೇಲೆ (Territorial Force) ಎಂಬ ಸೈನ್ಯದಲವಿತ್ತು. ಈಗ ಅದನ್ನು ಪುನಃರಚಿಸಿ (Standing Army) ಸೈನ್ಯ ಇಲಾಖೆಯನ್ನೇ ಏರ್ಪಡಿಸಬೇಕಾಗಿ ನಿರ್ಣಯವಾಗಿದೆ. ಇದರ ಮೂಲಿಂದ ಯುರೋಪ ಖಂಡದೊಳಗಿನ ಅಂತರಂಗ ಸ್ಥಿತಿ ಗೋಚರವಾಗಬಹುದು. ಇಟಾಲಿ-ಹಬಸಿ ದೇಶದೊಳಗಿನ ಪ್ರಕರಣವು ಇನ್ನೂ ತೀರ್ಗಡೆಯಾಗಲಿಲ್ಲ. ಹಬಸಿ ದೇಶದೊಳಗಿನ ಕೆಲ ಪಾಳೆಯಗಾರರು ಇಟಾಲಿ ದೇಶದೊಳಗೆ ಪುಂಡಾಟಿಕೆ ಮಾಡಿದರಾಗಿ ಪ್ರಕಟವಾಗಿದೆ. ಇಟಾಲಿ ಪ್ರದೇಶವನ್ನು ನುಗ್ಗಿ ೧೦೦ ಒಂಟೆಗಳನ್ನೂ, ಇತರೇ ಸಾಹಿತ್ಯಗಳನ್ನೂ ಅವರು ಕೈವಶ ಮಾಡಿಕೊಂಡರಂತೆ. ಮುಸೊಲಿನಿಯವರು ನಿಷೇಧ ಮಾಡಿ ನಷ್ಟಭರಪಾಯಿ ಬೇಡಿರುವರಂತೆ ವಾರ್ತೆ. ಇದೇನು ಚಿಕ್ಕ ಕಲಹ ವಿಷಯವಲ್ಲವಾಗಿ ಮುಂಬಯಿಯ "ಟೈಮ್ಸ್" ಕರ್ತರು ಬರೆಯುತ್ತಾರೆ. ನಾನೂ ಹಾಗೆಯೇ ತಿಳಿದುಬಿಡುತ್ತೇನೆ.

ಅಮೇರಿಕೆಯವರು ಹಡಗುಪಡೆಗಳನ್ನು ಬೆಳೆಸುವ ಕಾರ್ಯಕ್ರಮವನ್ನು ಕೈಕೊಂಡಿದ್ದಾರೆ, ಸೈನ್ಯಬಲವನ್ನು ಬೆಳೆಸಲಾರಂಭಿಸಿದ್ದಾರೆ. ೪೬ ಸಾವಿರ ಸೈನಿಕರ ಒಳಗೆ ೧ ಲಕ್ಷ ೬೫ ಸಾವಿರ ಸೈನಿಕರಿಸಬೇಕೆಂದು ಗೊತ್ತಾಗಿದೆ. ಅಮೇರಿಕೆಯವರಿಗೆ ಜಪಾನ ಮತ್ತು ರಶಿಯಾ ದೇಶಗಳೊಳಗಿನ ಪ್ರಕಾರಗಳ [illegible] ದಿಂದ [illegible] ಲೋಕಸಭೆ [illegible] ವಿಷಯ ಚರ್ಚೆ ಕಾಲಕ್ಕೆ ನುಡಿದರು [illegible] ಕೊಳ್ಳುತ್ತಿರುವಾಗ ಯಾವ [illegible] ಲೋಕದಲ್ಲಿ ಹಚ್ಚಿತೋರದು. ಇಂಥ ಸಂದರ್ಭದಲ್ಲಿ ಸುರಕ್ಷಿತ [illegible] ದ ಆತ್ಮರಕ್ಷಣೆಯ ಪರಣ ಮಾಡುತ್ತ ಯುದ್ಧಸ್ಫೋಟವಾಗದಿದ್ದರೆ ಆಶ್ಚರ್ಯ. ಯುದ್ಧವನ್ನು ಯಾರೂ ಕಾಂಕ್ಷಿಸುವದಿಲ್ಲ. ಯುದ್ಧವಾದರೆ ಸರ್ವನಾಶವಾಗುವದೆಂದು ಎಲ್ಲರೂ ಮನಗಂಡ ವಿಷಯ. ಆತ್ಮರಕ್ಷಣೆಯ ವಿಪರೀತ ಜಾಗರೂಕತೆಯಿಂದ ಮೈಮರೆತು ಥಕ್ಕನೆ ಯುದ್ಧದಲ್ಲಿ ಬೀಳಬಹುದೇನೆಂದೊಂದು ಭೀತಿ ಮತ್ತೇನು ಹೇಳಲಿ?

ಏಶಿಯಾ ಖಂಡದೊಳಗಿನ ಕೆಲ ಕಾರಸ್ಥಾನಗಳನ್ನು ಈಗಲೇ ಹೇಳುವದುಚಿತ. ಚೀನಿ-ತುರ್ಕಸ್ಥಾನ ಪ್ರದೇಶದಲ್ಲಿ ರುಶ್ಯರೂ, ಬ್ರಿಟಿಶರೂ, ಜಪಾನಿಯರೂ ತಮ್ಮ ತಮ್ಮ ಕಾರಸ್ಥಾನಗಳನ್ನು ನಡಿಸುತ್ತಿದ್ದಾರೆಂಬ

INDIAN POSTS AND TELEGRAPHS DEPARTMENT.

NOTICE.

Sealed tenders are invited for the conveyance of Mails by Motor vehicles daily between Kumta and Bhatkal for up and down journeys throughout the year on a fixed subsidy for a period of three years commencing from the 1st October 1935 The form of tender and a copy or Schedule showing the number of timings and other details of the service required together with particulars regarding other conditions of the Contract may be obtained on application from the office of the undersigned in Bombay or the office of the Superintendent of Post Offices, Dharwar Division, Dharwar on payment of Rs 5/- in advance, which will not be refunded in any case Tenders must reach the undersigned on or before the 13th May 1935

Bombay,
Dated the 18th March 1935

A. BROKENSHAW.
Postmaster-General,
BOMBAY.

ಸಂಗತಿಯನ್ನು ನಾನು ಈ ಮುಂಚೆಯೇ ಹೇಳಿದ್ದೇನೆ ಕಾಶ್ಮೀರ ಸಂಸ್ಥಾನದಿಂದ [illegible]ಲ್ಪಿತ ಪ್ರಾಂತವನ್ನು ಹಿಂದುಸ್ಥಾನ ಸರಕಾರವು ಪಡೆದು ಸೈನ್ಯ ಇಟ್ಟಿರುವುದು ಸ್ವಾಧೀನ ಕೊಟ್ಟು ಚೀನಿ ತುರ್ಕಸ್ಥಾನದೊಳಗಿನ ರಾಜಕಾರಣದಲ್ಲಿ ಚಂಚು ಪ್ರವೇಶ ಮಾಡಿದೆ ಈ ಪ್ರದೇಶದಲ್ಲಿ ಮರುಭೂಮಿ ಬಹಳ ಆದರೆ ಜನವಸತಿಗೆ ಅನುಕೂಲವಿದ್ದಲ್ಲಿ ಸಮೃದ್ಧ ಭೂಮಿ ಸ್ವಾಭಾವಿಕವಾಗಿ ಈ ಪ್ರದೇಶಕ್ಕೂ ಹಿಂದುಸ್ಥಾನಕ್ಕೂ ಸಂಬಂಧವಿಲ್ಲ ಕಾರಾಕೋರಮ್, ಹಿಮಾಲಯ ಪರ್ವತಗಳಿಂದ ಈ ದೇಶವು ಹಿಂದುಸ್ಥಾನದಿಂದ ತುಂಡರಿಸಲ್ಪಟ್ಟಿದೆ ಆದರೆ ರಶಿಯಾ ದೇಶಕ್ಕೂ ಈ ಪ್ರದೇಶಕ್ಕೂ ಉಗಿಬಂಡಿಯ ಏರ್ಪಾಟಿನಿಂದ ಒಳ್ಳೇ ಅನುಕೂಲತೆಯುಂಟು ಆದದರಿಂದ ರಶ್ಯರ ಪ್ರಾಬಲ್ಯವೇ ಹೆಚ್ಚು ಈ ಪ್ರದೇಶದಲ್ಲಿ ಏನು ನಡೆಯುತ್ತದೆಂದು ತಿಳಿಯುವದಿಲ್ಲ ಎಲ್ಲಿಯಾದರೂ ಹಲ್ಲೆಯಾದ ವಾರ್ತೆ ಬರುತ್ತಿದೆ ಬ್ರಿಟಿಶ ರಾಯಭಾರಿಗಳ ಕಚೇರಿಯ ಮೇಲೆ ಕೆಲ ಸಾರೆಯೂ ದರೋಡೆಯಾಗಿಹೋದರು, ಎರಡು ವಾರ್ತೆ ಹ[illegible] ಇದುಂಟು [illegible]ರೆ ಅವುಗಳೊಳಗ ಅಂತಸ್ಥ ಸಂಬಂಧವೇ[illegible]ದು [illegible]ಯುವದಿಲ್ಲ ರಶ್ಯರೂ [illegible] [illegible]ಬದಾಗಿ ಸ್ಥೂಲವಾನದಿ ದ[illegible]ಡುತ್ತ [illegible] ರಶ್ಯರು ಬ್ರಿಟಿಶರ ವಿರೋಧವನ್ನು ಮುಂದಾಗಿ ಎಣಿಸಿ ಒಳ್ಳೇ ಸೈನ್ಯತಯಾರಿಯನ್ನು ನಡಿಸಿದ್ದಾರೆ ಹಿಟ್ಲರಗು ಆಕ್ರಮ ಮಾಡುವ ಕಾರಣವಿದರೂ ಇದೇ (Red Army) ಯಾನ ಕೆಂಪು ಸೈನ್ಯವೆಂಬವೊಂದು ಸೈನ್ಯ ಪಥಕವನ್ನು ನಿರ್ಮಿಸಿ ಪ್ರಜೆಗಳಿಗ ಪ್ರಬಲಸ್ಯನಿಕರನ್ನಾಗಿ ಸೋವಿಯಟ್ ಸರಕಾರವು ತಯಾರ ಮಾಡುತ್ತಲಿದೆ ಶಾರೀರಿಕ ಶಿಕ್ಷಣ ಕೊಟ್ಟು ಸ್ಪರ್ಧೆ ಹುಟ್ಟಿಸಿ ಬೆಳಸುವಲ್ಲಿ ಸೈನಿಕರನ್ನು ನಿರ್ಮಿಸಲೋಸುಗ ಈ ಕೆಂಪು ಸೈನ್ಯದ ಏರ್ಪಾಟಾಗಿದೆ ಸಹನಶಕ್ತಿಯನ್ನು ಬೆಳಸುವದಕ್ಕಾಗಿ ಸದ್ಯಕ್ಕೊಂದು ಸ್ಪರ್ಧೆ ನಡೆಯಿತು ನೀರಿನ ಕೂಗಳಿಂದ ಓಡಬೇಕು ಮಂಜುಗುಡ್ಡೆಗಳಿಂದ ಓಡಬೇಕು ಪ್ರಸಂಗವಲ್ಲಿ ಈ ರುವದೂ ಉಂಟು ಇಂಥ ಪ್ರದೇಶವನ್ನು ಕೆಂಪು ಸೈನ್ಯ ಸಂಸ್ಥೆಯವರು ಆಕ ಮಿಸಿ ತರತರದ ಇನಾಮು ಪಡೆದಿದ್ದಾರೆ ದಿನ ೪೦-೫೦ ಮೈಲು ಅವರು ಓಡಿದರಂತೆ ಈ ಸಂಸ್ಥೆಯಲ್ಲಿ ಸ್ತ್ರೀಯರೂ ಇದ್ದಾರೆ ಅವರೂ ಸಹ ಈ ಸ್ಪರ್ಧೆಗಳಲ್ಲಿ ಸೇರಿ ವಿಶೇಷ ಪಾರಿತೋಷಕಗಳನ್ನು ಪಡೆದಿರುವರಂತೆ ಜಪಾನದ ಈ ರಸ್ಥಾನಗಳನ್ನೂ ಅಲ್ಲಿಯ ಯುದ್ಧ ತಯಾರಿಯನ್ನೂ ಚೀನ ದೇಶದ ಮೇಲಿನ ಕಟಾಕ್ಷವನ್ನೂ ಎಲ್ಲರೂ ಬಲ್ಲದ ವಿಷಯ ಸದ್ಯಕ್ಕೆ ಅವರು ತಮ್ಮ ಸಾಮರ್ಥ್ಯವನ್ನು ಬೆಳಸಿಕೊಳ್ಳಲಾರಂಭಿಸಿದ್ದಾರೆ ಬ್ರಿಟಿಶ ಸಾಮ್ರಾಜ್ಯಕ್ಕೊಪ್ಪಿದ ಆಸ್ಟ್ರೇಲಿಯಾ ದೇಶದಲ್ಲಿ ಕೆರಕೆಟೂ ಇರ್ಪಿಂಗ ಮತ್ತು ಡರ್ಜ ಸ[illegible] ಇನ್ನೊಂದು ಹೀಗೆ ಮೂರ ನಡುಗಡ್ಡೆಗಳಲ್ಲಿ ಜಪಾನಿಯರು ಕಳಸ್ಸೂರಿದ್ದಾರೆ ಈ ನಡುಗಡ್ಡೆಗಳಲ್ಲಿ ತವರು ಮತ್ತು ಕಬ್ಬಿಣ ಗಣಿಗಳಿವೆ ಈ ಖನಿಜ ಸಂಪತ್ತನ್ನು ಪಡೆಯುವ ಕಂಟ್ರಾಕ್ಟನ್ನು ಜಪಾನಿಯರು ಪಡಕೊಂಡಿದ್ದಾರೆ ಈ ನಡುಗಡ್ಡೆಗಳಲ್ಲಿ ಸುಮಾರು ೧೦ ಕೋಟಿ ಟನ್ನು ಖನಿಜ [illegible]ಬ ಮುದ ಜಪಾನಿಯರಿಗ ಯುದ್ಧ ಸಾಹಿತ್ಯಕ್ಕೆ ಇಂಥ ಸಂಪತ್ತು ಬೇಕಾಗಿದ್ದಿತು ಯುದ್ಧವೆಂದ್ದಲ್ಲಿ ಬ್ರಿಟಿಶರಿಗೆ ಇದಿರಾಗುವ ಪ್ರಸಂಗ ಒದಗಲ್ಲಿ ಆಸ್ಟ್ರೇಲಿಯಾ ದೇಶದ ಕಬ್ಬಿಣ[illegible] ಮದ್ದುಗುಂಡುಗಳ[illegible] ತವರುಗಳಿಂದ ತಯಾರಿಸಿದ ಹಾರಿಸಲನುಕೂಲವಾಗಿ [illegible] ಬ್ರಿಟಿಶರ ಮೇಲೆ ಒಟ್ಟಿನ ಮೇ[illegible] ಸಡಿ[illegible] ಗುಪರು [illegible] ಪ್ರಸಕ್ತಿಯಲ್ಲಿ ಬಿಟ್ಟುಕೊಡದೆ ಅಲ್ಲದೆ [illegible] ಕೊಂಡ ಆಸ್ಟ್ರೇಲಿಯ ದೇಶದ ಮೇಲೆ ಆಪತ್ತು ಸರಿ ಬ್ರಿಟಿಶ ವಸಹತುವಿನಲಿಯ ರಾಜ್ಯ ಹೂಡಿ ಬ್ರಿಟಿಶರ ಮೇಲೆಯುದ್ಧ ಮಾಡುವ ಅಪೂರ್ವ ನಾಟಕ ನೋಡಬೇಕಾಗುವುದು ಏನೇನು ಆಗಲಿಕ್ಕಿದೆಯೋ ಸರ್ವಸೂತ್ರಚಾಲಕನಾದ ಆ ಪರಮಾತ್ಮನಿಗೆ ಗೊತ್ತು

ವೃತ್ತಸಾರಗಳು.

— ಬಿಹಾರ ಕಿರಾಣಿಯ [illegible] ಚೆಗೆ ತಿರುಗಿಕೊಂಡರು ಗಿರಾಕಿಯವರು ಸಂಯುಕ್ತ ಪ್ರಾಂತದ ರಾಷ್ಟ್ರೀಯ ಸಭೆ [illegible] ಸೂತ್ರಧಾರರು ಪಂ॥ ಜವಾಹಿರಲಾಲ ಸಹಕಾರಿಗಳು ಪರಿತ್ಯಕ್ತಾಯಿದ ಕಾ[illegible] [illegible] [illegible]ಗ್ಯತ ಎಂಬರು [illegible] [illegible] ಆಸ್ಪತ್ರೆಯಿಂದಿಗೆ ಪರಿಷ್ಕಾರಾಯಿದ ಕೌನ್ಸಿಲಿನಲ್ಲಿ ಪರಿಷ ಹಿಡಿಯದ ಕೆಲಸ ನಡಿಸಿದರು ಈ ದಿವಸಗಳಲ್ಲಿಯೇ ವಿಕಾರವು ವಿಪರೀತವಾಗಿ ಸ್ಮೃತಿ ತಪ್ಪಿ ತೀರಿಕೊಂಡರು ಡಾ॥ ಅನ್ಸಾರಿ ಡಾ॥ ದೇಶಮುಖ ಡಾ॥ ಖರೇ ಡಾ॥ ಖಾನ ಸಾಹೇಬ ಡಾ॥ ರಾಜನ್ ಡಾ॥ ಜೋಶಿ ಮೊದಲಾದ ಕುಶಲ ವೈದ್ಯ ಮಾಡಿದ ಯೋಗ್ಯ ಪ್ರಯತ್ನಗಳು ವ್ಯರ್ಥವಾದವು ಈ ಶೋಕ್ಕೆ ಪಾರವೇ ಉಳಿಯಲಿಲ್ಲ

ಉತ್ತರ ಬಂಗಾಲ ಪ್ರದೇಶದಲ್ಲಿ ಗುರುವಾರ ದಿವಸ ಬಿಗಿ ತಿಕ್ಷ್ಣ ಭೂಕಂಪವಾಯಿತು ಹಾಗೆ ಬಿಟ್ಟ ಬೀಸಣಿಗೆಗಳು ವಾಲಿಗಿದವು ಹಳೇ ಮನೆಗಳ ಸಣ್ಣ ಬಿರುಕು ಮತ್ತೇನೂ ಹಾನಿಯಾಗಲಿಲ್ಲ ಕಲಕತ್ತೆಯಲ್ಲಿಯೂ ಭೂಕಂಪನವಾಗಿತು ಅಲ್ಲಿಯೂ ಹಾನಿಯೇನೂ ಆಗಲಿಲ್ಲ

— ಹಿಂದುಸ್ಥಾನದಿಂದ ಮೊರೆಗೆ ಹೆಚ್ಚಿನ ಪ್ರಸಾರ ಕ್ರಮವು ಮೊದಲಾದ ಸೌಂದರ್ಯ ವಿಲಾಸ ಸಾಧನಗಳಿಗಾಗಿ ೧೬ ಕೋಟಿ ರೂಪಾಯಿಗಳು ಪ್ರತಿ ವರ್ಷಕ್ಕೆ ಖರ್ಚಾಗುತ್ತಿವೆ ಖರೇ ಮುಂಬಯಿ ಪಟ್ಟಣದಲ್ಲಿ ದಿನಾ ೩ ಸಾವಿರ ರೂಪಾಯಿಗಳು ಈ ಬಗ್ಗೆ ಖರ್ಚಾಗುತ್ತವೆ

— ಹಿಂದುಸ್ಥಾನಿ ಸೇವಾದಲದ ಮೇಲೆ ಕೂಡಿದ ನಿರ್ಬಂಧ ಇನ್ನೂ ದೂರವಾಗಲಿಲ್ಲ ಹಿಂದುಸ್ಥಾನ ಸರಕಾರವು ಇನ್ನೂ ಆ ಸಂಸ್ಥೆಯನ್ನು ಕ್ರಾಂತಿಕಾರಕವೆಂದೇ ಎಣಿಸುತ್ತದೆ ಹಿಂಸಾಚಾರಿಗಳಿಂದು ಆ ಸಂಸ್ಥೆಯವರ ಮೇಲೆ ಆರೋಪವಿದೆ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಈ ಸಂಸ್ಥೆಯು ರಾಷ್ಟ್ರೀಯ ಸಭೆಯ ಒಂದು ಅಂಗವೆಂದೂ ರಾಷ್ಟ್ರೀಯ ಸಭೆಯ ಧ್ಯೇಯವನ್ನು ನಿಷ್ಠೆಯಿಂದ ಅದು ಪಾಲಿಸುತ್ತದಾಗಿಯೂ ಸರಕಾರವು ಆರೋಪ ಹೊರಿಸುವದು ಅನ್ಯಾಯವೆಂದೂ ಪ್ರಕಟಣೆ ಹೊರಡಿಸಿದ್ದಾರೆ

ಸರ್ವಾಧಿಪತಿ ವಿಲಿಂಗಡನ್ ದೊರೆಗಳ ಅವಧಿ ಮುಗಿಯಲು ಸೇನಾಪತಿ ಸ್ಕಿನ್ನರವರು ಸರ್ವಾಧಿಪತಿಗಳಾಗುವರೆಂದು ಒಂದು ಸುದ್ದಿ ಸೇನಾಪತಿ ಸ್ಕಿನ್ನರವರು ಮಹಮ್ಮದಗಳಿಯರು ಹೊಸ ರಾಜ್ಯಘಟನೆಗೆ ಮಹಮ್ಮದರ ಸಮ್ಮತಿ ದೊರೆಸಿಕೊಳ್ಳುವದಕ್ಕಾಗಿ ಅವರು ಮಹಮ್ಮದರ ಕಡೆ ನಡಿಸಿದ ಪತ್ರವ್ಯವಹಾರದ ಸುದ್ದಿ ಈ ಹಿಂದೆ ಪ್ರಕಟವಾಗಿದೆ ಸ್ಕಿನ್ನರವರು ಸರ್ವಾಧಿಪತಿಗಳಾಗಲೊಪ್ಪದಿದ್ದಲ್ಲಿ ಬಂಗಾಲದ ಗವರ್ನರರಾದ ಸರ್ ಜಾನ್ ಎಂಡರಸನ್ ರವರು ಸರ್ವಾಧಿಪತಿಗಳಾಗುವರಂತೆ

ಕಡ್ಲೆಬೇಳೆ (,,) ಪಂಜಾಬಿ ರೂ ೬-೨-೦ ಇಸ[illegible] ಬಾಸಿ ರೂ ೮ ೨ ೦

ತೌದು (,) ರೂ ೪-೭-೦

ಸೋಜಾ (,) ರೋಜ ರೂ ೧೦-೪-೦, ಶಿಪ್ ರೂ ೧೦ ೭ ೦, ಮಾತೃಭೂಮಿ ರೂ [illegible] ೭ ೦

Notice.

It is hereby notified that the post of a Graduate Supervisor of D S B Kanara, is to fall vacant on 1-4-1935 and permanent appointment of an eligible person, to that post will be made after that date [illegible] persons possessing the following [illegible] testimonials if [illegible] Undersigned before the [illegible] of April 1935 Applications received after that date will not be considered.

1 B A S T C or B A, S T C D or possessing a degree in teaching of a statutory University or any other qualifications in teaching

2 The general scale of pay may be from Rs 45-5-115 E B - 5 145 E B 6 175

3 Persons having experience in teaching may be given preference

Karwar

18 3 1935

M. D. KARKI,
Chairman,
District School Board, Kanara

ಕರಾಚಿ ಪೇಟೆಯ ಧಾರಣೆ.

(ರಾ॥ ಮಿಜಾರ ಮುಕುಂದ ಪೈ,
ಕೆಂಬೆಲ್ ಸ್ಟ್ರೀಟ, ಕರಾಚಿ ಇವರಿಂದ)
(Tel Add 'Matribhumi Karachi')

ತಾ ೨೦—೩—೧೯೩೫

ಬಾಜಾರದ ಸ್ಥಿತಿ ಸ್ಥಿರ, ಮಲಬಾರ ಮದ್ರಾಸ ಕಡೆಯಿಂದ ಗಿರಾಕಿಗಳಿಲ್ಲ ತುತಿಕೋರಿನ ಕಡೆಯ ಗಿರಾಕಿಗಳಿವೆ

ಕಾರವಾರ ಜಿಲ್ಲೆಯ ಎಲ್ಲ ಬಂದರಗಳಲ್ಲಿ ನೌರು ವಿಮೆ ಕೂಡ ಹೊತ್ತು (C I F) ಕೊಡುವ ಧಾರಣಗಳು —

ಕಡ್ಲೆಹಿಟ್ಟು (೧೯೬ ಪೌಂಡಿನ ಚೀಲಕ್ಕೆ) ಕ್ರೌನ ರೂ ೭ ೧೩-೦, ಸಿಗ್ನೇಚರ ರೂ ೯ ೨-೦ ಬ್ಯಟ ರೂ ೬-೬-೦, ಟೇಬಲ್ ಕೀ ರೂ ೯-೪-೦ ಮಾತೃಭೂಮಿ ರೂ ೮-೭-೦ ಟೂ ಸಿಗ್ನಲ್ ರೂ ೮-೯ ೦,

ಗೋದಿಹಿಟ್ಟು ( ) ಶಿಪ್ ರೂ ೯ ೧೨ ೦ ರೋಜ ರೂ ೯-೧೦-೦ ಲೋಟಸ್ ರೂ ೯-೩-೦ ಖಜೂರಿ ರೂ ೯ ೧೪-೦,

ಕಡ್ಲೆ (೨೦೫ ಪೌಂಡಿನ ಚೀಲಕ್ಕೆ) ಥ್ರೀಫೋರ್ಥ ಪ್ಯಾಕಿಂಗ ರೂ ೭ ೫ ೦ ಜಾಕೋಬ ಬಾದ ರೂ ೭ ೧೧ ೦, ವ್ಹಾಯಿಟ ೭ ೧೩ ೦

ರೂಪಾಯಿ ಬೆಲೆಯ ಚಿನ್ನ...ದರೂ ಕಪ್ಪಾಗಿರಬೇಕು
ಇನ್ನೂ ರೆಪ್ಪಾಗುವದು ಬ ದಶಕದ ರಾಷ್ಟ್ರ ಮುಖೋ
ಕೃಪೆಯ ... ಕ ಚಿಕೆ ಮೊದಲಾದ ...
ಬೇರೆ ರೀತಿಯಿಂದ ... ವಾಯಿಗಳ
... ಪ್ರವಾಹಕ್ಕೆ
... ದೇಶದಲ್ಲಿ ... ಹಿಂದ ಸ್ಥಾನ
... ದಲ್ಲಿಯೂ ... ಹೇಳದರ ಸರಕಾ
...ಪ್ಪದಿರುವ ಕಾರಣವೇನು?

ಕುಮಟಾ — ... ವ ಪ್ರದೇಶದಲ್ಲಿ ... ಇಸವಿಯಲ್ಲಿ ... ಕ್ಷೇತ್ರದಲ್ಲಿ ...

...ನ್ನಡ ಕವಿಗಳಲ್ಲಿ ಅರಿಕೆ.

॥ ಸಿರಿಗನ್ನಡಂ ಗೆಲ್ಗೆ ॥

...ನ್ನಡ ಸಾಹಿತ್ಯದ ... ಕನ್ನ... ಕವಿತೆಗಳಲ್ಲಿ ... ಕರ್ನಾಟಕ ಸಂಪ... ಪ್ರಚುರಿಸ... ಮಂಗಳ... ಕಾರವಾರ ... ಸೇರ

ಸಂಚಿಕೆ ೪೩

ಜಾಹೀರಾತುಗಳ ದರ

... ದರವನ್ನು ತಮ್ಮ ... ಪತ್ರಾಧಿಕಾರಿಗಳನ್ನು ... ಒಪ್ಪಿಸುವರಾಗಿಯೂ ... ಕೊಲತೆಯು ಬಗ್ಗೆ ಹಲವು ... ಕೆಯು ... ವೃವಸಾಯಿಕ ... ಸಾಹಿತ್ಯ ... ಲಕ್ಷ ... ಈ ಸುದ್ದಿ ವಿಲಕ್ಷಣವಾದುದ... ಈಗಿನ ಜನಮಾನಗಳೇ ... ಈ ಸುದ್ದಿ ... ತಮ್ಮ ಕಡೆ ಸಂಸ್ಥಾಪಕರು ... ಕಾಮನೆಗೆನ್ನ ... ಭಾಗ್ಯವಂತರು ...]

...ನಾವಿಕರಿಗೆ ಇದು ಗುರುತಿಯಾವದೆಂದು ... ತ್ತಾರೆ

...ಪ್ಲೇಗಿನ ... ಈ ವಾರದಲ್ಲಿ ವಿಶೇಷ ಕೇಳಿಬರುವದಿಲ್ಲ ... ಜನರು ... ವದು ಒಳಿತು

ಮ್ಯುನಿಸಿಪಾಲಿಟಿಯು ... ಪ್ರಕಟವಾಗಿದೆ ... ತಕ್ಷಣ ... ವರು ... ಮ॥ ... ಅರ್ಜಿ ಮಾಡಬೇಕು

ಮೈಸೂರಿನ ಶ್ರೀ ಚಂದ್ರಕಲಾ ನಾಟಕ ಮಂಡಳಿಯವರು ಭಕ್ತ ಪ್ರಹ್ಲಾದ ... ಮೊದಲಾದ ನಾಟಕಗಳನ್ನಾಡಿತೋರಿಸಿದರು ... ನಾಟಕದಲ್ಲಿ ... ಶ್ರೀ ... ಕಳ್ಳನ ಕಲಹದ ... ಜನರು ... ಹೊಗಳುತ್ತಾರೆ

ಮ॥ ... ಸುಪರಿಂಟೆಂಡೆಂಟರ ... ಮತ್ತು ... ಇಲ್ಲಿ ... ಸ ನಡೆದವೆ

ಅಂಕೋಲಾ— ... ವಿದ್ಯಾರ್ಥಿಗಳ ... ಶಿಕ್ಷಕರು ... ಉತ್ಸವದ ... ಒಂದೆರಡು ... ಸಕ್ತಿಯಿಂದ ... ಮಾಡುತ್ತಾರೆ! ಬಿಲ್ಲ ... ಒಂದು ಬಿಲ್ಲ ... ನಿಮ್ಮ ಮನೆಯವರಿಗೆ ಗತಿಯಿಲ್ಲವೇ? ಎಂದು ಹೇಳಿಯುತ್ತಾರೆ!! ಸರಕಾರವು ... ವ್ಯವಸ್ಥೆಯನ್ನು ಮಾಡಿರುವಾಗ ... ಬಿಲ್ಲ ಬಗ್ಗೆ ... ಮಾಡುವದು ಸರಿಯೇನು? ... ಅಧಿಕಾರಿಗಳು ಈ ಕಡೆ ಗಮನಿಸಬೇಕು.

ಕಾರವಾರ— ... ಮ್ಯುನಿಸಿಪಾಲಿಟಿಯ ಅಧಿಕಾರಿಗಳ ವಿಚಿತ್ರ ಲೀಲೆಗಳನ್ನು ... ಎರಡು ತಿಂಗಳ ಹಿಂದ ಪ್ಲೇಗ ... ಅಂಟುರೋಗಗಳ ಪ್ರಸಾರಕ್ಕೆ ... ಅನುಕೂಲವಾಗಬೇಕೆಂದು ... ಮ್ಯುನಿಸಿಪಲ ... ಸರಕಾರದಿಂದ ... ಅಧಿಕಾರಿಗಳನ್ನು ... ಆದರೆ ಆ ಅಧಿಕಾರಿಗಳ ... ಬೇಗ ಮಾಡಿದ ಒಂದು ... ಇಲ್ಲ ... ಊರಲ್ಲಿ ... ಪುನಃ ... ತಿಂಗಳ ವರೆಗೆ ಆ ಅಧಿಕಾರಿಗಳನ್ನು ... ಒಪ್ಪಿಸಬೇಕಾಗಿ ಅಧ್ಯಕ್ಷರು ಮ॥, ... ಬರೆದಿರುತ್ತಾರಂತೆ! ... ಅಧ್ಯಕ್ಷರು ತಮ್ಮ ... ಅಭಿಪ್ರಾಯವನ್ನು ... ಸಿನಿಮಾ ನಾಟಕ ಕಂಪನಿಗಳಿಗೆ ... ಕೊಡುತ್ತಾರೆ ಅಧ್ಯಕ್ಷರು ಊರಲ್ಲಿಲ್ಲದಿದ್ದಾಗ ... ಮಾನ್ಯರೂ, ಮತ್ತು ಉಪಾಧ್ಯಕ್ಷರೂ ಒಂದು ಸಿನೆಮಾ ಕಂಪನಿಗೆ ಪರವಾನಗಿ ಕೊಡಬಾರದಿಲ್ಲವೆಂದು ಬರೆದಿಟ್ಟರು ... ಪ್ರತ್ಯಕ್ಷ ಪರಿಸ್ಥಿತಿಯಲ್ಲಿ ಜನಸಂದಣಿ ... ಒಳಿತಲ್ಲವೆಂದು ಅಭಿಪ್ರಾ...

ದ್ವಿಗುಣವಾದ ... ನಿವಾಸ, ...

ರೋಗದಿಂದ ನರಳುವವರಿಗೆ ಗುಣ ಮತ್ತು ...

... (ಸಾರ್ವವ್ಯಾಧಿ) ಮತ್ತು ...

ಜವ್ಮಿ ವೆಂಕಟರಮಣಯ್ಯನವರ

'ಲಿವರ್ ಕ್ಯೂರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಿರಿ!

ಹ್ಯಾಂಡ್ಬಿಲ್ಲಿಗೆ ಬರೆಯಿರಿ

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು —

ಡಿ ಎಸ್. ಕೋಳಿವಾಡಕರ್, ಕುಮಟಾ. (ಉ.ಕ)

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪೊಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಘ.

ಪೋಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

ವಿ ಸಂ ' ಇಂಡಸ್ಟ್ರಿಯಲ್ ವಿಮೆ ಎಂಬ ರೂಪಾಯಿ ಪೋಲಿಸಿಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ 'ಹೆಡ್ ಆಫೀಸ' ಬರಕೊಳ್ಳತಕ್ಕದ್ದು

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು —

ಪ್ರಭಾಕರ ಕಂಪನಿ, 415 ಕೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು – ಮೆಸರ್ಸ ಜೀವನ ಏಜನ್ಸಿ, ಕಾರವಾರ.

ಸಂಗತಿಯನ್ನು ನಾನು ಈ ಮುಂಚೆಯೇ [illegible] ಕಾಶ್ಮೀರ ಸಂಸ್ಥಾನದಿಂದ [illegible] ಪ್ರಾಂತ [illegible] [illegible] ಸಾವಿರ ಹುಡುಗ ಹುಡುಗಿಯರು ಬೇಸಿಗೆಯಲ್ಲಿ ಬೇಸಾಯ ಶಿಕ್ಷಣ ವನ್ನು ಪಡೆಯಲೋಸುಗ ಗ್ರಾಮಸಂಚಾರ ಮಾಡು ವರ ೪೦-೫೦ ವಿದ್ಯಾರ್ಥಿಗಳೊಂದು ಸಂಗಡ ವಾಗಿ ಗ್ರಾಮಗಳಿಗೆ ಕಳುಹುವರ [illegible] ಶಿಬಿರ ಗಳಲ್ಲಿ ಉಳಕೊಳ್ಳಬೇಕು. ವಿದ್ಯಾರ್ಥಿಗಳಿಗೆಲ್ಲ [illegible] ಮೊದಲು [illegible] ಈ ಸಂಗಡದ ಲ್ಲಿ [illegible] ವಿದ್ಯಾರ್ಥಿ [illegible] ಹೊಲಕ್ಕೆ [illegible] ಕೆಲಸ ಮಾಡಬೇಕು. ಮಧ್ಯಾಹ್ನ ಊಟ [illegible] ಮಾಡಬೇಕು ಆ ಮೇಲೆ ಸಂಜೆಯ [illegible] ಆಟ-ಓಟ ರಾತ್ರಿ ಊಟವಾದ ಮೇಲೆ [illegible] ಸಂಪ್ರದಾಯದ ಪ್ರವಚನ [illegible] ತಕ್ಕದ್ದು. [illegible] ಹುಡುಗಿಯರಿಗೆ ಬೇ ರೆ, ಹೀಗೆ ಪ್ರತ್ಯೇಕ [illegible] ಈ ಸಂಚಾರದಲ್ಲಿ ೮೧೦ ಸಾವಿರ ಹುಡುಗಿಯರಿ ದ್ದಾರಂತೆ. ವಿದ್ಯಾರ್ಥಿಗಳ [illegible] ಗ್ರಾಮನಿವಾಸದ ಅಭಿ ರುಚಿಯನ್ನು ಹುಟ್ಟಿಸುವದಕ್ಕಾಗಿಯೂ, ಬೇಸಾಯದ ಚಟ [illegible] ಕಷ್ಟದ ಅಭ್ಯಾಸ ಹಚ್ಚುವದಕ್ಕಾಗಿಯೂ ಜರ್ಮನ್ ಸರಕಾರವು ಈ ಏರ್ಪಾಟು ಮಾಡಿದೆ. ಜರ್ಮನಿಯಲ್ಲಿ ಈ ಪದ್ಧತಿ ಲೋಕಪ್ರಿಯವಾಗಿದೆ. ಈ ಸಂಗಡದಲ್ಲಿ ಸೇರುವದಕ್ಕಾಗಿ ವಿದ್ಯಾರ್ಥಿಗಳು ಮುಂದಾಗಿ ಬರುತ್ತಾರೆ. ಅಶಕ್ತ ಪ್ರಕೃತಿಯವರ ವ್ಯವಸಾಯದಾಗಬಹುದು. [illegible] ಹಿಂದುಸ್ಥಾನ ಸರ ಕಾರವೂ, ಪ್ರಾಂತಿಕ ಸರಕಾರಗಳೂ, ವಿದ್ಯಾ [illegible] ವಿದ್ಯಾ ಧಿಕಾರಿಗಳೂ ಈ ಉಪಕ್ರಮವನ್ನು ವಿಚಾರಿಸಿ ಇಲ್ಲಿ ಯ ವಿದ್ಯಾರ್ಥಿಗಳಿಗೆ ಈ ಶಿಕ್ಷಣ ಕೊಟ್ಟಲ್ಲಿ ವಿದ್ಯಾ [illegible] ಹಬ್ಬಿದ ವಿಲಾಸವೃತ್ತಿ, ವೃಥಾ [illegible] ಕಷ್ಟದ ಧಿಕ್ಕಾರ ಮೊದಲಾದವು [illegible] ಕ್ಷೀಣವಾಗುವಂತಿದೆ

* * *

ವರಿಷ್ಠ ಕಾಯಿದೆ ಕೌನ್ಸಿಲಿನ ಕಾರ್ಯಕಲಾಪ ಕಳೆದ ವಾರದೊಳಗೆ ವರಿಷ್ಠ ಕಾಯಿದ ಕೌನ್ಸಿಲಿನಲ್ಲಿ ನಡದ ಮುಖ್ಯ ಕೆಲಸವೆಂದರೆ ವಾರ್ಷಿಕ ಪತ್ರಿಕೆ ಯ ಕಾನೂನಿನ ಚರ್ಚೆ. ಉಪ್ಪಿನ ಸುಂಕದ ಮೇಲೆ ರಾಷ್ಟ್ರೀಯರು ಸರಕಾರದೊಡನೆ ಘೋರವಾಗಿ ಕಾದಾ ಡಿದರು. ಉಪ್ಪಿನ ಸುಂಕವನ್ನು ಆಮೂಲಾಗ್ರ ಕಿತ್ತೊಗೆಯಬೇಕಾಗಿ ಪಂಡಿತ ಗೋವಿಂದ ವಲ್ಲಭ ಪಂತರವರು ಬಹು ಆವೇಶದಿಂದ ಪ್ರತಿಪಾದಿಸಿದರು ' ಉಪ್ಪಿನ ಸುಂಕ ಹಿಂದಿನವರೂ ತಲೆ-ತಲಾಂತರ ಎತ್ತು ವಳಿ ಮಾಡುವದೂ ಒಂದೇ. ಸೃಷ್ಟಿಕರ್ತನ ಅನುಗ್ರಹ ದಿಂದ ಸಮುದ್ರದ ದಂಡೆಯ ಮೇಲೆ ಉಪ್ಪು ಹೇರ ಳವಾಗಿ ಬೆಳೆಯುತ್ತದೆ, ಅದನ್ನು ಹೆಕ್ಕಿತಂದು ಬಡ ಬಗ್ಗರಿಗೆ ಉಪಯೋಗಿಸಲು ಕಾಯಿದೆಯಿಂದ ಪ್ರತಿ ಬಂಧವಾಗಿದೆ, ಆ ಸಂಪತ್ತು ನಿರರ್ಥಕವಾಗುತ್ತದೆ. ಉಪ್ಪು ಅಗ್ಗವಾಗಿ ಸಿಗದ್ದರಿಂದ ಜನರು ದೇಹಚೆ ವ ಣಿಗೆಗೆ ಬೇಕಷ್ಟು ಉಪ್ಪು ತಿನ್ನಲಾರರು. ಸೈನ್ಯ [illegible] ಜೇಲ್ [illegible] ಬಂದಿಗಳಿಗೂ ಉಪ್ಪು ಬಡ-ಬಗ್ಗರು ತಿನ್ನುವದಿಲ್ಲ. ಕೈದಿಗಳಿಗಿಂತ ಲೂ ಅವರ ಅವಸ್ಥೆ ದೀನವಾಗಿದೆ " ಈ ಪ್ರಕಾರ ರಾಷ್ಟ್ರೀ ಯ ಪಕ್ಷದವರು ಕಡು ವಿರೋಧ ಮಾಡಿದರು

[illegible] ವತಗಳಿಂದ ಬಿದ್ದು ಹೋಯಿತು. ಆ ಮೇಲೆ [illegible] ಇಳಿಸಬೇಕೆಂಬ [illegible] ಮತಕ್ಕೆ [illegible] ಯಂತೆ ಸುಂಕ ಇಳಿಸುವ ಠರಾವು ಬಹುಮತದಿಂದ ಮಂಜೂರ ಆಯಿತು. [illegible] ಕಾಯಿದ ಕೌನ್ಸಿಲಿ [illegible] ಕಾರ್ಯನಿರ್ವಾಹಕರು [illegible] ಕಡಿಮೆ [illegible] ಇದರಿಂದ [illegible] ಆದ [illegible] ಹೊರಬೀಳಲು [illegible] ಈ ಪ್ರಕಾರ [illegible] ಸರಕಾರ [illegible] ರಾಷ್ಟ್ರೀಯ ಸಭೆಯವರ

ಮನ್ನಿಸಿಕೊಂಡು ದಿಗ್ವಿಜಯಿಗಳಾದರು. ಟಪಾಲು ಖಾತೆಯ ಸೂಚನೆಗಳಿಗೆ ಯುರೋಪಿಯನ್‌ರು ಸಹ ರಾಷ್ಟ್ರೀಯ ಸಭೆಯವರ ಪರವಾಗಿ ಮತದಾನ ಮಾಡಿ ದ್ದರಿಂದು ವಿದೇಶ ಚರ್ಮವನ್ನು ರಫ್ತು ಮಾಡದಂತೆ ಕರ ಹೇರಬೇಕಾಗಿ ರಾಷ್ಟ್ರೀಯ ಸಭೆಯವರು ಸೂಚಿ ಸಿ ಅದನ್ನು ಮನ್ನಿಸಿಕೊಂಡಿದ್ದಾರೆ ಈ ಕರವು ರದ್ದುಪಡಿಸಬೇಕಾಗಿ ಸರಕಾರದ ಅಂಬೋಣವಿತ್ತು. ಈ ಕರ ರದ್ದಾದಲ್ಲಿ ಇಲ್ಲಿಂದ ಚರ್ಮ ವಿದೇಶ ಗಳಿಗೆ ರಫ್ತಾಗಿ ಇಲ್ಲಿಯ ಚರ್ಮದ ಕಾರಖಾನೆಗಳು ಕಷ್ಟಕ್ಕೀಡಾಗುವವಂತೆ. ಆ ಕಾರಖಾನೆಗಳಲ್ಲಿ ದುಡಿದು ಹೊಟ್ಟೆ ಹೊರಕೊಳ್ಳುವ ಅರ್ಧ ಲಕ್ಷ ಅಸ್ಪೃಶ್ಯರ ಗತಿಗೇಡಾಗುವದೆಂದೂ ರಾಷ್ಟ್ರೀಯ ಸಭೆಯವ [illegible] ಸಮರ್ಥಿಸಿ ಪ್ರತಿಪಾದಿಸಿ ಠರಾವನ್ನು ಮಂಜೂ

ಒಡಗ ಕನ್ನಡದ ಕರ್ನಾಟಕ ಸಂಘ, ಕಾರವಾರ.

ಬಿನ್ನಹ— ೨.

ಈ ಸಂಘವು ಈ ಜಿಲ್ಹೆಯ ಕವಿಗಳ ಸವಿ ಸವಿಯಾದ ಕವನಗಳನ್ನು ಪುಸ್ತಕ ರೂಪದಿಂದ ಪ್ರಕಟಿಸಲಿರುವ ವಿಷಯವನ್ನು 'ಕನಡ ವೃತ್ತ'ದ ಮುಖದಿಂದ ಎಲ್ಲರಿಗೂ [illegible] ಮಾಡಿಕೊಂಡಿದೆ. ಈಗಾಗಲೇ ಶ್ರೀ ಪಿ ವಿ ಶೋಕೆ (ಬಾಸಗೋಡ), ತಿಮ್ಮಪ್ಪ ಲಿಂಗಪ್ಪ ಹಗಡ ಎಸ್ ಎ ಶಾನಭಾಗ (ಚಿಗ ಮಂಡಗೋಡ) ಎಮ್ ಎಸ್ ಗಾಂವ್ಕರ (ಶಿರೇಗುತ್ತಿ) [illegible] ಗಣೇಶ ಎಸ್ ಭಟ್ಟ, ದೇವೇಂದ್ರ ಕೀಣಿ (ಚೆಂಡಿಯ), ಎ ವಿ ಪ್ರಭು [illegible] ಇವರ ಕವನಗಳು ಒಂದು [illegible] ಶ್ರೀ [illegible] ಕರ, [illegible] ಕವಿತೆಗಳು ಬೇಗನೆ ಬರಲಿ

ಈ ಪುಸ್ತಕವನ್ನು [illegible] ಪ್ರಕಟಿಸಲು ಹಣದ ಬಲ ಬೇಕ. ಸಂಘಕ್ಕೆ ಇದುವರೆಗೆ ಸೇರಿದ ಸದಸ್ಯರು ೫೦ ಮಂದಿ. ಸದಸ್ಯರ ಸಂಖ್ಯೆ ಏರಿದರೆ ಮಾತ್ರ ಮುಂದೆ ಅದರ ಸಂಘವು ಕೈಕೊಳ್ಳಲಿರುವ ಸಾಹಿತ್ಯ ಸೇವೆ [illegible] ಆಗಬಹುದು. ಆದುದರಿಂದ ಜಿಲ್ಲೆಯ ಮುಖ್ಯ ಮುಖ್ಯ ಪಟ್ಟಣಗಳಲ್ಲಿಯ ಮಹಾಶಯರು ಮನಃಪೂರ್ವಕವಾಗಿ ಮುಂದೆ ಬಂದು ಸಂಘಕ್ಕೆ ಸದಸ್ಯರನ್ನು ಒದಗಿಸಿಕೊಡಲು ಯತ್ನಿಸಬೇಕು.

ಸಾಮಾನ್ಯವಾಗಿ ನಮ್ಮಲ್ಲಿಯ ಕಲಿತವರು- ವಿಶೇಷತಃ ಆಂಗ್ಲವಿದ್ಯಾಸಂಪನ್ನರು- ಇಂಗ್ಲಿಷ ಭಾಷೆಯ ಪುಸ್ತಕಗಳನ್ನೂ, ವೃತ್ತಪತ್ರಗಳನ್ನೂ ಕೊಳ್ಳುವದರಲ್ಲಿ ಹೆಚ್ಚಿಗೆ ಹಣ ವಚ್ಚ ಮಾಡುವದರಿಂದ ಕನ್ನಡದಲ್ಲಿರುವ ಸವಿ ನುಡಿಯ ಪುಸ್ತಕಗಳಲ್ಲಿ ಅವರ ಕಣ್ಣು ಸೇರಿ ನಿಲ್ಲುವದು ಬಹಳ ಅಪರೂಪ. ಅವುಗಳನ್ನು ಕೊಂಡುಕೊಳ್ಳುವದಂತೂ ದೂರದ ಮಾತು. ಆದರೆ ನಮ್ಮ ನಾಡನುಡಿಯನ್ನು ಅಲಸಿ ನಮ್ಮ ಎದೆ ಅರಳುವಂತೆ ಬೇರೆ ಯಾವ ಮಾತಿನಿಂದಲೂ ಅದು ಹಿಗ್ಗದು. ಹೆರವರ ಸಾಹಿತ್ಯವನ್ನು ಓದುವದು ಅನುಚಿತವೆಂದು ಮೇಲೆ ಹೇಳಿದ್ದರ ತಾತ್ಪರ್ಯವಲ್ಲ. ನಾಡನುಡಿ ನಾಶವು ಎರವಾಗಬಾರದೆಂಬುದು ಅದರ ಮುಖ್ಯ ಆಶಯ. ಆದಕಾರಣ ಕಲಿತವರು ಆಂಗ್ಲ ಮುಂತಾದ

ಭಾಷೆಗಳಲ್ಲಿರುವ ಪುಸ್ತಕ ವೃತ್ತಪತ್ರಗಳನ್ನು ಪುಸ್ತಕಾಲಯಗಳಲ್ಲಿ ಓದುತ್ತ, ಕನ್ನಡ ನುಡಿಯ ಪುಸ್ತಕಗಳನ್ನು ಕೊಳ್ಳುವದರಲ್ಲಿ ಹೆಚ್ಚು ಹಣವನ್ನು ವಿನಿಯೋಗಿಸಿ, ಚಿಕ್ಕವರಿಂದ ದೊಡ್ಡವರ ತನಕ ಎಲ್ಲರ ಕಣ್ಣು ಕನ್ನಡದ ಕಡೆಗ ಸೆಳೆಯುವಂತೆ ಯತ್ನಿಸಬೇಕೆಂದು ಸಂಘದ ಬಿನ್ನಹ

ಸಂಘದ ವರ್ಷದ ವಂತಿಗೆ ಬರೇ ೧ ರೂಪಾಯಿ. ಸಂಘದಿಂದ ಪ್ರಕಟವಾಗುವ ಗ್ರಂಥಗಳೆಲ್ಲ ಸದಸ್ಯರಿಗೆ ಅರ್ಧ ಬೆಲೆಗೆ ದೊರೆಯುವವು. ಆದುದರಿಂದ [illegible] ತಿನಿಸನ್ನು ಕಳುಹಿದವರೆಲ್ಲರು ಸಂಘಕ್ಕೆ ಸದಸ್ಯರಾಗುವರೆಂದು ನಂಬಿಕೆ ಇದೆ. ಇದಲ್ಲದೆ ಈ ಜಿಲ್ಹೆಯವರಿಗೆ ಪರೋಪಕಾರ್ಥಕ್ಕೋಸ್ಕರ ಬೇರೆ ಕಡೆಗಳಲ್ಲಿ [illegible] ಸಿಂದವರೂ ಸದಸ್ಯರಾಗುವ ಕೃಪೆ ಮಾಡಬೇಕು. ಈಗ ಸಂಘ [illegible] ಪ್ರಕಟಿಸಲಿಕ್ಕೆಂದು ಕೈಕೊಂಡ ಪುಸ್ತಕಕ್ಕೆ ಕಡಿಮೆ [illegible] ೨೦೦ ರೂ ವೆಚ್ಚ ತಗಲುತ್ತದು. ಈ ವೆಚ್ಚವನ್ನು [illegible] ಜಿಲ್ಹೆಯ ಹಣವಂತರಾದ ಕನ್ನಡಿಗರಲ್ಲಿ [illegible] ರೂ ಕೊಡಲೊಪ್ಪಿದರೆ ಅವರ ಭಾವಚಿತ್ರದೊಡನೆ ಪುಸ್ತಕವು ಪ್ರಕಟವಾಗುವದು. ದಾನಶೀಲರು ಈ ಅರಿಕೆಯನ್ನು ಗಮನಿಸುವರೆಂದು ನಂಬಿಕೆ

ಕರ್ನಾಟಕ ಸಂಘ,
ಕಾರವಾರ,
ತಾ. ೫-೪-೧೯೩೫.

ಪ್ರೋದ್ದಾರ ರಂಗಪ್ಪ.
ವೆಂಕಟೇಶ ಪ್ರಭು
ಕಾರ್ಯದರ್ಶಿಗಳು

ವಿ. ಸೂ:— ಈ ತಿಂಗಳ ೧೫ನೆಯ ತಾರೀಖಿನ ಸಂಜೆಯ ೬ ಘಂಟೆಗೆ (ಸೋಮವಾರ ೧೫-೪-೩೫) ಜಿಲ್ಹಾ ಲೋಕಲ್ ಬೋರ್ಡ ಕಚೇರಿಯ ಮಾಳಿಗೆಯಲ್ಲಿ ಸಂಘದ ಸದಸ್ಯರ ಸಭೆ ಸೇರುವದು, ಸಂಘದ ಕಾರ್ಯನಿರ್ವಾಹಕ ಮಂಡಳದ ಆಯ್ಕೆಯೂ, ಸಂಘವು ಈ ವರುಷದಲ್ಲಿ ಕೈಕೊಳ್ಳಬಹುದಾದ ಕಾರ್ಯವೂ ಅಂದಿನ ಸಭೆಗೆ ಬರುವ ಸದಸ್ಯರ ಬಹುಮತದಿಂದ ಗೊತ್ತಾಗುವವು; ಅದುವರೆಗೆ ಸಂಘವನ್ನು ಸೇರುವ ಸದಸ್ಯರಿಗೆ ಅಂದಿನ ಸಭೆಯಲ್ಲಿ ಮತ ಕೊಡುವ ಅಧಿಕಾರವಿರುವದು, ಸಭೆಗೆ ಸದಸ್ಯರೆಲ್ಲರೂ ಬರಬೇಕೆಂದು ಬಿನ್ನಹ

ಕಾರ್ಯದರ್ಶಿಗಳು

ಸಂಚಿಕೆ ೪೩

ರ ಮಾಡಿಕೊಂಡರು. ಗವ್ಹರ್ನರ-ಜನರಲ್‌ರು ಟಪಾಲು, ಉಪ್ಪು, ಇನಕಮ್ ಟ್ಯಾಕ್ಸುಗಳ ಕುರಿತು ಕಾಯಿದೆ ಕೌನ್ಸಿಲಿನವರು ಮಂಜೂರ ಮಾಡಿದ ನಿರ್ಣಯಗಳನ್ನು ಧಿಕ್ಕರಿಸಿ ಮೂಲ ಸರಕಾರಿ ಸೂಚನೆಗಳನ್ನೇ ಪುರಸ್ಕರಿಸಿ ಅವನ್ನೇ ಇದ್ದಕ್ಕಿದ್ದ ಹಾಗೆ ಮಂಜೂರ ಮಾಡಬೇಕಾಗಿ ಪುನಃ ಕಾಯಿದೆ ಕೌನ್ಸಿಲಿಗೆ ಕಳಿಸಿಕೊಟ್ಟಿರುತ್ತಾರೆ. ಈ ಶಿಫಾರಸನ್ನು ಕಾಯಿದೆ ಕೌನ್ಸಿಲಿನವರು ಧಿಕ್ಕರಿಸಿ ಕಾನೂನನ್ನು ಮಂಜೂರ ಮಾಡದಿದ್ದರೆ ಅದನ್ನು ಹಿರಿಯರ ಸಭೆಗೆ ಕಳುಹಿ ಮಂಜೂರ ಮಾಡಿಕೊಂಡು ಕಾಯಿದೆ ಮಾಡುವರು ಹಿರಿಯರ ಸಭೆಯಲ್ಲಿ ಲೋಕಪಕ್ಷದ ಪ್ರಾಬಲ್ಯವಿಲ್ಲ. ಅಲ್ಲಿ ಸರಕಾರವು ಸೂಚಿಸಿದ ಸೂಚನೆಗಳು ಏನಿದ್ದಾಗ್ಯೂ ಮಂಜೂರಾಗುತ್ತವೆ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ನಡೆದ ವೃತ್ತಾಂತದ ತಾತ್ಪರ್ಯವಿದು ಸರಕಾರವು ನಡಿಸುವ ಲೋಕಶಾಹಿ ನಾಟಕದೊಳಗಿನ ನಿರಂಕುಶ ಅಧಿಕಾರದ ಲೋಕೋಪಕಾರದ ಸನ್ನಿವೇಶವಿದು.

* * *

ಒಂದು ಸಂಗತಿಯನ್ನು ಪ್ರತ್ಯೇಕವಾಗಿ ನಮೂದಿಸಬೇಕಾಗಿದೆ. ರೌಪ್ಯ ರಾಜ್ಯಾರೋಹಣೋತ್ಸವದ ಒಂದು ಅಂಗವೆಂದು ರಾಜಕೀಯ ಬಂದಿಗಳ ಬಿಡುಗಡೆಯಾಗುವದಿಲ್ಲವಾಗಿ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಗೃಹಮಂತ್ರಿಗಳು ನಿಶ್ಚಯಪೂರ್ವಕವಾಗಿ ಹೇಳಿರುತ್ತಾರೆ ಸರಕಾರವು ಇಷ್ಟವಿದ್ದಲ್ಲಿ ಸ್ವತಂತ್ರವಾಗಿ ರಾಜಬಂದಿಗಳಿಗೆ ಬಿಡುಗಡೆ ಮಾಡಬಲ್ಲದು ಉತ್ಸವಕ್ಕಾಗಿ ರಾಜಬಂದಿಗಳಿಗೆ ಬಿಡುಗಡೆಯಾಗುವದೆಂಬ ವಿಚಾರವನ್ನು ಈಗ ಎಲ್ಲರೂ ತೊರೆದ ಉತ್ಸವದ ಕಾರ್ಯದಲ್ಲಿ ತೊಡಗಬೇಕು ಉತ್ಸವಕ್ಕಾಗಿ ಸಿದ್ಧಿಗೊಳಿಸುವವರು ಸಿದ್ಧಿಗೊಳಿಸಬಹುದು, ಬೇಕಾಗಿದ್ದ ಬೇಕಾದ ಸಂಭ್ರಮಗಳ ಸನ್ನಾಹ ಕೈಕೊಳ್ಳಬಹುದು

* * *

ಮಂಗಳೂರಿನಲ್ಲಿ ಸೇರಲಿಕ್ಕಿದ್ದ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಶ್ರೀ ... ಕ್ಷೇತ್ರದೊಳಗಿನ ಶ್ರೀ| ಶ್ರೀಪ್ರಕಾಶರವರು ... ಸಿಕೊಳ್ಳಲು ಒಪ್ಪಿಕೊಂಡಿರುತ್ತಾರೆ ... ಸಿದ್ದಪ್ಪ ಹೊಸಮನಿಯವರು ... ತಯಾರಿ ಮಾಡಿರುತ್ತಾರಾಗಿ ಪ್ರಕಟವಾಗಿದೆ. ಶ್ರೀ ... ಪ್ರಕಾಶರವರು ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳು. ಸಂಯುಕ್ತ ಪ್ರಾಂತದ ಕೊಂಗ್ರೆಸ ಕಮಿಟಿಯ ದಕ್ಷ ಕಾರ್ಯನಿರ್ವಾಹಕರು ಈಗ ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸರಿದ್ದಾರೆ ಪ್ರಾಂತಿಕ ಪರಿಷತ್ತಿನ ತಯಾರಿಗಾಗಿ ಡಾ| ಹರ್ಡೀಕರ ನಾರಾಯಣರಾಯರು ಮಂಗಳೂರಿಗೆ ಹೋಗಿರುತ್ತಾರೆ ಪರಿಷತ್ತು ಬರುವ ಮೇ ೭-೮ ೯ ನೇ ತಾರೀಖುಗಳಲ್ಲಿ ಜರಗುವದು ಆದೇ ಸಮಯ ಕರ್ನಾಟಕ ಸ್ತ್ರೀ-ಪರಿಷತ್ತೂ ಕರ್ನಾಟಕ ಸಮಾಜಸತ್ತಾವಾದಿಗಳ ಪರಿಷತ್ತೂ ಜರಗಲಿಕ್ಕಿವೆ ಸಮಯಾಭಾವದ ಮೂಲಕ ಪ್ರಾಂತಿಕ ಪ್ರದರ್ಶನದ ವಿಚಾರ ರದ್ದಾಗಿದೆ

* * *

ಬಂಗಾಲದ ಕ್ರಾಂತಿಕಾರಕ ಕಾನೂನಿನನ್ವಯ ಬಂಗಾಲ ಪ್ರಾಂತಿಕ ಸರಕಾರವು ಡಾರ್ಜಿಲಿಂಗ ಜಿಲ್ಹಾ ನಿವಾಸಿಗಳ ಮೇಲೆ ಹೊರಡಿಸಿದ ಹುಕುಮುಗಳ ವಿವರ ಲೋಕಶಾಹಿ ಸ್ಥಾಪನೆಯ ಯತ್ನದೊಳಗಿನ ನಿರಂಕುಶ ಕಾರಭಾರದ ದ್ಯೋತಕವಿದೆ - ದಾರ್ಜಿಲಿಂಗ ಜಿಲ್ಹೆಯೊಳಗೆ ಪ್ರತಿಯೊಬ್ಬರೂ ತಮ್ಮ ಸ್ವತ್ವವನ್ನು ಪ್ರತ್ಯಕ್ಷ ಸಿದ್ಧ ಮಾಡಿಕೊಡುವ ಕಾರ್ಡನ್ನು ಪಡಕೊಂಡು ಅದನ್ನು ಪೋಲೀಸ ಅಧಿಕಾರಿಗಳಿಗೆ, ಮೆಜಿಸ್ಟ್ರೇಟರಿಗೆ ಕೇಳಿದಾಗ ಕೊಡಬೇಕು ಮೋಟಾರಿನಿಂದ ಹೋಗುವಾಗ ನಿಲ್ಲಿಸಬೇಕಾಗಿ ಅಪ್ಪಣೆಯಾದೊಡನೆ ನಿಲ್ಲಿಸಿ ಅಂಗಝಡತಿ ಮಾಡಿಕೊಳ್ಳಲು ತಯಾರಾಗಬೇಕು ದಾರ್ಜಿಲಿಂಗ ಸೇರುವ ಪ್ರತಿ ಒಬ್ಬ ಹಿಂದು ಯುವಕನು ತನ್ನ ಎರಡು ಫೋಟೋಗಳನ್ನು ತಯಾರಿಸಿಕೊಂಡು, ತಮ್ಮ ಜಿಲ್ಹೆಯ ಮೆಜಿಸ್ಟ್ರೇಟ ಇಲ್ಲವೆ ಪೋಲೀಸ ಅಧಿಕಾರಿಗಳಿಂದ ಸಹಿ ಪಡೆಯಬೇಕು ಹೀಗೆ ಸಹಿ ಪಡೆದು ಬಂದವರು ಶಿಲಿಗುರಿಯಲ್ಲಿ ಹಾಜರಿ ಕೊಟ್ಟು ಆ ಮೇಲೆ ತಮ್ಮ ಊರಿಗೆ ಹೋಗಬೇಕ. ಶಿಲಿಗುರಿಯಲ್ಲಿ ಪ್ರವೇಶ ಪತ್ರಿಕೆ ಕೊಡುವ ಏರ್ಪಾಟಿದೆ ಪ್ರವೇಶ ಪತ್ರಿಕೆ ಪಡೆಯಬೇಕಾದರೆ ಒಂದು ಭಾವಚಿತ್ರವನ್ನು ಪೋಲೀಸ ಅಧಿಕಾರಿಗಳಿಗೆ ಕೊಟ್ಟು ಪಾಸು ಪಡೆಯಬೇಕು. ಪೋಲೀಸ ಪುಸ್ತಕದಲ್ಲಿ ಹೆಸರು, ಪತ್ತೆ, ಉದ್ಯೋಗ, ಬಂದುದಾ ಕಾರ್ಯಗಳನ್ನು ನಮೂದಿಸಿ ಮಾಡಬೇಕು ದಾರ್ಜಿಲಿಂಗ ಜಿಲ್ಹೆಯೊಳಗಿನ ಖಾನಾವಳಿಯವರೂ, ಆಸ್ಪತ್ರೆಯವರೂ, ಶಾಲೆಯವರೂ, ಮನೆಯವರೂ ತಮ್ಮಲ್ಲಿ ಬಂದ ಅತಿಥಿಗಳ ಸಂಪೂರ್ಣ ಮಾಹಿತಿಯನ್ನು ಕೂಡಲೆ ಪೋಲೀಸ ಠಾಣ್ಯಕ್ಕೆ ಪೂರೈಸಬೇಕು. ಡೆಪ್ಯುಟಿ ಇನ್ಸಪೆಕ್ಟರರು ಯುಕ್ತ ಕಂಡ ಜನಗಳಿಗೆ ಕಾರ್ಡ ಪಡೆಯುವಂತೆ ಸರ್ಟಿಫಿಕೇಟು ಕೊಡಬಹುದು ಹೀಗೆ ಸರ್ಟಿಫಿಕೇಟು ಪಡೆದವರು ಭಾವಚಿತ್ರ, ಪ್ರವೇಶ ಪಾಸು ಮೊದಲಾದವುಗಳನ್ನು ಪೂರೈಸಿಕೊಳ್ಳುವ ಕಾರಣವಿಲ್ಲ. ಬಂಗಾಲ ಗವ್ಹರ್ನರರು ಸೂಚಿಸಿದ್ದ ಹಾಗೆ ಕ್ರಾಂತಿಯ ಕಾರಣ ತಿಳಿದಿದೆ ಜನರಿಗೆ ಉದ್ಯೋಗವಿಲ್ಲದೆ ಹೊಟ್ಟೆ ಹೊರಕೊಳ್ಳಲು ಕಠಿಣವಿದ್ದದ್ದರಿಂದ ನವಯುವಕರು ದುರ್ಬೋಧಕರ ದುರ್ಬೋಧನೆಗಳಿಗೆ ಒಳಪಟ್ಟು ಕ್ರಾಂತಿಗಾರಾಗುತ್ತಾರೆ. ಉದ್ಯೋಗವನ್ನು ಸರಕಾರವು ಪೂರೈಸಿ ಎಳೆ ಹುಡುಗರಿಗೆ ಸಂಪಾದನೆಯ ಮಾರ್ಗ ತೋರಿಸಿಕೊಟ್ಟರೆ ಕ್ರಾಂತಿಯ ಮೂಲವೇ ನಷ್ಟವಾಗಿ ಎಲ್ಲರೂ ನಿರ್ಭಯದಿಂದ ನಡಕೊಳ್ಳಲು ಅನುಕೂಲತೆ ಇದೆ. ಗವ್ಹರ್ನರರಾದ ಸರ್ ಜ್ಹಾನ್ ಎಂಡರಸನ್‌ರವರು ಸುವಿಚಾರ ಮಾಡಬಹುದು

* * *

ಮುಂಬಯಿ ಸರಕಾರವು ರೂ. ೫೦ ಲಕ್ಷ ಬಂಡವಲು ಹಾಕಿ ಸಾಲಗಾರರಿಗೆ ಋಣವಿಮೋಚನೆ ಮಾಡುವದಕ್ಕಾಗಿ ಭೂಭದ್ರತೆಯ ಬೇಂಕುಗಳನ್ನು ಸ್ಥಾಪಿಸಬೇಕಾಗಿ ಕಾಯಿದೆ ಕೌನ್ಸಿಲಿನಲ್ಲಿ ನಿರ್ಣಯವಾಗಿದೆ ೧೦ ಲಕ್ಷ ರೂಪಾಯಿ ಬಂಡವಲು ಇರಬೇಕಾಗಿ ಸರಕಾರದ ಸೂಚನೆ ಇತ್ತು; ... ಅಲ್ಪ ಬಂಡವಲಿನಿಂದ ಕೆಲಸ ಸಾಗದೆಂದು ಕಾಯಿದೆ ಕೌನ್ಸಿಲಿನ ಸಭಾಸದರು ೫೦ ಲಕ್ಷ ರೂಪಾಯಿ ಬಂಡವಲಿನ ನಿರ್ಣಯವನ್ನು ಮನ್ನಿಸಿದ್ದಾರೆ. ಸದ್ಯ, ಮುಂಬಯಿ ಪ್ರಾಂತದಲ್ಲಿ ೮೦—೯೦ ಕೋಟಿ ರೂಪಾಯಿಗಳ ಸಾಲವಿರುವದಾಗಿ ತಿಳಿಯುತ್ತದೆ. ಅರ್ಧ ಕೋಟಿ ಬಂಡವಲಿನಿಂದ ಈ ಸಾಲ ಹೇಗೆ ನಿವಾರಣವಾಗಬಲ್ಲದ ? ಅದರೊಳಗೂ ಈ ಬೇಂಕುಗಳಿಗೆ ಬಡ್ಡಿ- ಅಸಲು ಕೊಡುವ ಬಗೆ ಹೇಗೆ? ಮುಂಬಯಿ ಸರಕಾರವು ಸೂಚಿಸಿದ ಮೋಟಾರ ತೆರಿಗೆಯ ಕಾಯಿದೆ ಕೌನ್ಸಿಲಿನಲ್ಲಿ ರದ್ದಾದ್ದರಿಂದ ಸರಕಾರವು ಹೊಸ ಕಾಯಿದೆಯನ್ನು ಘಟಿಸುವ ವಿಚಾರದಲ್ಲಿದೆ ಆದಕ್ಕಾಗಿ ಸರಕಾರ ... ಸ್ಥಾನಿಕ ಸ್ವರಾಜ್ಯ ... ಯ ಪ್ರತಿನಿಧಿಗಳೊಳಗೆ ಪ್ರವೇಶಿಸಗುವದು ಹೊಸ ಕಾಯಿದೆ ಘಟಿಸುವದಕ್ಕಾಗಿ ಡಿಶಂಬರ ತಿಂಗಳಲ್ಲಿ ಮುಂಬಯಿ ಕಾಯಿದೆ ಕೌನ್ಸಿಲಿನ ವಿಶೇಷ ಅಧಿವೇಶನವನ್ನು ಸೇರಿಸಬೇಕೆಂದು ಗೊತ್ತಾಗಿರುವದಂತೆ.

* * *

ಜಮಖಂಡಿ ಸಂಸ್ಥಾನಿಕರು ತಮ್ಮ ಸಂಸ್ಥಾನದೊಳಗೆ ಋಣವಿಮೋಚನೆ ಮಾಡುವದಕ್ಕಾಗಿ ನೇಮಿಸಿದ ಅಧಿಕಾರಿಗಳು ಮಾಡಿದ ರಿಪೋರ್ಟು ಏನೆಂದರೆ.—
"ಈ ಸಂಸ್ಥಾನದಲ್ಲಿ ಅಂತು ಸಾಲ ೧ ಕೋಟಿ ರೂಪಾಯಿ ಇದೆ ರೈತರಿಗಿರುವ ವ್ಯಸಾಲ ಹಾಗೂ ಭದ್ರತೆಯ ಸಾಲ ಒಟ್ಟು ಲೆಕ್ಕ ಮಾಡಿ ಸಾಲದ ರಕಮಿಗೂ ಆಸ್ತಿಯ ಬೆಲೆಗೂ ಸರಿಯಾಗುತ್ತಿದ್ದರೆ ಸಾಲದ ರಕಮನ್ನು ಇಮ್ಮಡಿ ಮಾಡಬೇಕ. ಆಸ್ತಿಯ ನಿಕ್ಕಿ ಉತ್ಪನ್ನ ತೆಗೆದು ಇಮ್ಮಡಿ ಮಾಡಿದ ರಕಮಿಗೆ ಭಾಗಾಕಾರ ... ಬೇಕು ಭಾಗಾಕಾರದಲ್ಲಿ ಒಂದಷ್ಟು ವರ್ಷಗಳ ತನಕ ಭೂಮಿಯನ್ನು ಸಾವಕಾರರ ಸ್ವಾಧೀನ ಕೊಡಬೇಕು ಅಷ್ಟು ... ತರುವಾಯ ಸಾವಕಾರರು ಆ ಭೂಮಿಯನ್ನು ... ಕೊಡಬೇಕು. ಆಸ್ತಿಗಿಂತ ಕಡಿಮೆ ಇರುವ ಸಾಲಗಳಿಗೂ ಇದೇ ನಿಯಮ. ಆಸ್ತಿಗಿಂತ ಸಾಲ ಹೆಚ್ಚಾಗಿದ್ದರೆ ಆಸ್ತಿಯ ಬೆಲೆಯಷ್ಟು ಸಾಲ ಇಮ್ಮಡಿ ಮಾಡಬೇಕು ಇಮ್ಮಡಿ ರಕಮಿನಲ್ಲಿ ಆಸ್ತಿಯ ಬೆಲೆಗೆ ಮಿಕ್ಕಿ ಉಳಿದ ರಕಮನ್ನು ಇಮ್ಮಡಿ ಮಾಡದೆ ಕೂಡಿಸಬೇಕು ಮತ್ತು ಮೇಲೆ ಹೇಳಿದಂತೆ ಉತ್ಪನ್ನದಿಂದ ಭಾಗಾಕಾರ ಮಾಡಿ ಒಂದಷ್ಟು ಅವಧಿಯ ತನಕ ಸಾವಕಾರರ ವಶಾ ಕೊಡಬೇಕು. ಈ ಸೂಚನೆಗಳಂತೆ ಹೆಚ್ಚೆಂದರೆ ೫೦ ವರ್ಷಗಳೊಳಗೆ ಸಮಸ್ತರೂ ಋಣದಿಂದ ಬಿಡುಗಡೆಯಾಗುವರೆಂದು ಗಣಿತ! ಪ್ರತಿ ೧ ಎಕರೆ ಭೂಮಿಗೆ ಖರ್ಚು ಕಳೆದು ರೂ. ೩|| ಲಾಭ ಉಳಿಯುತ್ತದಾಗಿ ಲೆಕ್ಕ ಮಾಡಲಾಗಿದೆ. ರೈತರಿಗೆ ಇನ್ನು ಸಾಲ ಕೊಡಬೇಕಾದರೆ ತಗಾವಿ ಸಾಲ ಕೊಡಬೇಕು. ಇದಲ್ಲದೆ ಸಂಸ್ಥಾನಿಕರು ಬೇಂಕು ಸ್ಥಾಪಿಸಿ ಉದ್ದಿಮೆಗಳಿಗೆ ಉತ್ತೇಜನ ಕೊಡಬೇಕು ಈ ಯೋಜನೆಯಲ್ಲಿ ಭವಿಷ್ಯದ ಒಡ್ಡಿಯ ಉಲ್ಲೇಖವಿಲ್ಲ. ರಕಮು ಇಮ್ಮಡಿ ಮಾಡುವದು ಮುಂದಿನ ಬಡ್ಡಿಯ ಲೆಕ್ಕಕ್ಕೆ ಗಣಿತದಲ್ಲಿ ತಪ್ಪಿಲ್ಲ ಆದರೆ ಗಣಿತದಂತೆ ವ್ಯವಹಾರ ಸಾಧ್ಯವಾಗಬೇಕಾದರೆ ೫೦ ವರುಷ ತಗಲುವವು. ಅಷ್ಟರೊಳಗೆ ಯಾರು ಎಲ್ಲಿಗೆ ಮುಟ್ಟುತ್ತಾರೆಂದು ಹೇಳುವದು ಕಠಿಣ ಈ ಸೂಚನೆ ವ್ಯವಹಾರದೃಷ್ಟಿಗೆ ... ಸಾವಕಾರರಿಗೂ, ಸಾಲಗಾರರಿಗೂ ... ಹಾಕಿ ಸಂಸ್ಥಾನಿಕರು ಪ್ರಜೆಗಳನ್ನು ಋಣವಿಮೋಚನೆ ಮಾಡಿದ ಶ್ರೇಯಸ್ಸನ್ನು ಕೂತಲ್ಲಿ ಪಡೆಯಬಯಸುವ ... ಸಾಧ್ಯಾ ಸಾಧ್ಯತೆಯನ್ನು ವಿಚಾರಿಸಬೇಕಲ್ಲವೇ?

ಮೀನುಕಣ್ಣಿಗೆ (Corn) ಮದ್ದು.
ಹತ್ತಾಣೆ ಬಿಲ್ಲಿ ಸ್ಟ್ಯಾಂಪು ಕಳಿಸಿದರೆ ಕಳಿಸುತ್ತೇವೆ
ವ್ಹಿ. ಪಿ. ಯಿಂದ ... ಹೆಚ್ಚು
ಕಲಬಾಗ ಗಂಗಾಧರ ಎಂಡ್ ಸನ್ಸ್,
ಕುಮಟಾ. (ಕಾರವಾರ)

ಸುಂಕೇರಿ ಸೊಸಾಯಟಿಯ
ಅಂತಸ್ಥ ಕಾರಭಾರದ ಮೇಲೆ ಬೆಳಕು!

(A Reply to Sunkeri-Kathinkon Society Affairs)

ಸುಂಕೇರಿ ಕಠಿಣಕೋಣ ಕೊಓಪರೇಟಿವ್ಹ ಸೊಸ್ಯಾಟಿಯ ಪರಿಸ್ಥಿತಿಯು— ತಮ್ಮ ತಾ ೧೮-೩ ರ ೩೫ ನೇಯ ಸಂಚಿಕೆಯಲ್ಲಿ ಒಂದು ಬಹಳೇ ಉದ್ದವಾದ ಲೇಖವು ಒಂದದ್ದು ನಾನು ಓದಿದ್ದೇನೆ ಅದು ವಸ್ತುಸ್ಥಿತಿಯ ವಿಪರ್ಯಾಸ ಮಾಡುವಂಥಾದ್ದು ಮತ್ತು ಮಿ| ಜೇ ಪಿ. ಸಾವಕಾರ ಇವರ ಅಂಧಭಕ್ತರು ಸ್ತುತಿಪಾಠಕರು ಬರೆದದ್ದು ಇರಬೇಕೆಂದು ಸ್ಪಷ್ಟವಾಗುತ್ತದೆ ಬರೆದಿರುವ ಒಂದು ತರದ ಪ್ರತಿಯೊಂದು ಕಲಮಿನಲ್ಲಿ ಮಿ| ಜೇ ಪಿ ಸಾವಕಾರರ ಇವರ ಸ್ತುತಿಯೂ, ಮತ್ತು ಮಿ| ಕೇ ಎನ್ ನಾಯ್ಕ ಇವರ ನಿಂದೆಯೂ ತುಂಬಿದ್ದಿರುವದರಿಂದ ಸದ್ರಿ ಲೇಖಕನಿಗೆ ಎಲ್ಲಿಂದ ಪ್ರೇರಣೆ ಬಂತು ಎಂಬುವದು ಹೇಳದೆ ತಿಳಿಯುವಂತೆ ಇದೆ ಇರಲಿ

ಸದ್ರಿ ಲೇಖಕನಿಗೆ ಇಷ್ಟು ಉದ್ದ ಮತ್ತು ಬೇಸರ ಬರುವಂಥ ಲೇಖಕ್ಕೆ ತಮ್ಮ ಪತ್ರದಲ್ಲಿ ಅವಕಾಶಕೊಟ್ಟು ತಮ್ಮ ವಾಚಕರೆಲ್ಲರಿಗೂ, ಒಂದು ಮೂಲೆಯಲ್ಲಿದ್ದ ನಮ್ಮ ಸಣ್ಣ-ಪುಟ್ಟ ಸೊಸ್ಯಾಟಿಯಲ್ಲಿ ನಡೆದ ಅಂತಸ್ಥ ಕಲಹವನ್ನು ಬೈಲಿಗೆ ತಂದು ನಿಮ್ಮ ವಾಚಕರ ಮುಂದ ಇಟ್ಟದ್ದಕ್ಕೆ ನಾನು ತಮ್ಮ ಮತ್ತು ಸದ್ರಿ ಲೇಖಕನ ಬಹಳೇ ಆಭಾರಿಯಾಗಿದ್ದೇನೆ ಆ ಲೇಖನಕ್ಕೆ ನಾನು ಕೊಡುವ ಉತ್ತರಕ್ಕೆ ತಮ್ಮ ಪತ್ರದಲ್ಲಿ ಸ್ಥಳ ಕೊಡುವಿರಾಗಿ ನಂಬಿದ್ದೇನೆ

ಸದ್ರಿ ಲೇಖದ ಪ್ರಥಮ ಸದರಿನಲ್ಲಿ ಮಿ| ಕೇ ಎನ್. ನಾಯ್ಕ ಇವರು ಹ್ಯಾಗೆ ಸಾಧಾರಣ ಸಭಾಸದರಾದರು ಮತ್ತು ಮೆನೆಜಿಂಗ ಕಮಿಟಿಯಲ್ಲಿ ಹ್ಯಾಗ ಆರಿಸಿ ಬಂದರು ವಗೈರೆ ಬಗ್ಗೆ ಅತಿ ವಿಸ್ತಾರವಾಗಿ ನಾಲ್ಕು ರಕಾನೆ ತುಂಬಿದ ಮಜ್ಕೂರು ಓದುವಾಗ ನಿಮ್ಮ ವಾಚಕರು ಬೇಸರಗೊಂಡಿರಬೇಕು. ಸುಂಕೇರಿ ಸೊಸ್ಯಾಟಿಯ ಮೆನೇಜಿಂಗ ಕಮಿಟಿಯಲ್ಲಿ ಯಾರೂ ಮೆಂಬರರಾದರೂ, ಯಾರೂ ಸೆಕ್ರೆಟರಿಯಾದರೂ ನಿಮ್ಮ ವಾಚಕರಿಗೆ ಅಷ್ಟೇ! ಮಿ| ಕೇ ಎನ್ ನಾಯ್ಕ ಇವರ ನೇಮಣೂಕಿಯ ಬಗ್ಗೆ ತಕ್ರಾರು ಸುಪರವ್ಹಾಯಿಜಿಂಗ ಯೂನಿಯನ್‌ದಲ್ಲಿ ಒಂದು ಸದ್ರಿ ಯೂನಿಯನ್‌ದ ವತಿಯಿಂದ ನಡೆದ ವಿಚಾರಣೆಯಲ್ಲಿ ರಾಜಿನಾಮೆ ಕೊಟ್ಟಂಥ ಮೆನೆಜಿಂಗ ಕಮಿಟಿಯ ಮೆಂಬರನು ತಾನು ರಾಜಿನಾಮೆ ಕೊಟ್ಟ ಬಗ್ಗೆ ಒಪ್ಪಿಗೆ ಕೊಟ್ಟ ಸಂಗ್ತಿ ನಿಮ್ಮ ಲೇಖಕನ ಮರೆಮಾಡಲಿಕ್ಕೆ ಏನೂ ಕಾರಣವಾಯಿತೆಂದು ತಿಳಿಯುವದಿಲ್ಲ ಇದಲ್ಲದ ತಾ ೧೧-೯-೧೯೩೩ನೇ ಸೊಸ್ಯಾಟಿಯ ಕೋರಂ ಇದ್ದ ಮೆನೆಜಿಂಗ ಕಮಿಟಿಯಲ್ಲಿ ಸದ್ರಿ ಮೆಂಬರರ ಜಾಗೆಯಲ್ಲಿ ಮಿ| ಕೇ ಎನ್ ನಾಯ್ಕ ಇವರಿಗೆ ನೇಮಿಸಿದ ಬಗ್ಗೆ ಸ್ಪಷ್ಟ ಠರಾವು ಆಗಿರುತ್ತದೆ ಅಂದ ಮೇಲೆ ಈ ರಾಜಿನಾಮೆಯ ಸಂಗ್ತಿಯ ಬಗ್ಗೆ ಹೆಚ್ಚಿನ ಪುರಾವೆಯ ಏನೂ ಜರೂರಿ ಉಳಿಯುವದಿಲ್ಲ, ಸುಪರವ್ಹಾಯಿಜಿಂಗ ಯೂನಿಯನ್‌ದವ ರಾಜಿನಾಮೆ ಕೇಳದ ಉಪೇಂದ್ರ ಶ್ರೀನಿವಾಸ ಭಟ್ಟ ಇವರ ಬದ್ಲು ಮಿ, ಕೇ. ಎನ್ ನಾಯ್ಕ ಇವರ ನೇಮಣೂಕಿ ಆದದ್ದು ಬೇಕಾಯದೆಯಾಯಿತೆಂದು ಠರಾಯಿಸಿದಲ್ಲಿ ಯೂನಿಯನ್‌ದವರ ದೋಷವೇನು?

ಆದರ ನಂತರ ಕೂಡಿದ್ದ ಸೊಸ್ಯಾಟಿಯ ಸಾಧಾರಣ ಸಭೆಯು ತಾ. ೨೦-೧೦-೧೯೩೩ನೇಗೆ ಕೂಡುವದೆಂದು ನೋಟೀಸು ಜಾಹೀರ ಮಾಡಿ, ತಾ ೩೦-೧೦-೧೯೩೩ನೇಗೆ ಕೂಡಿತ್ತಲ್ಲವೇ? ಈ ಸಭೆಯ ನೇತೃತ್ವವನ್ನು ಸದ್ರಿ ಸಾವಕಾರರು ವಹಿಸಿಕೊಂಡಿದ್ದರಲ್ಲವೋ? ಅವರ ಲಕ್ಷವು ಈ ಸಭೆಯು ನೇಮಿಸಿದ ತಾರೀಖಿನ ಕರಾರು ಹೋದದ್ದು ಇರಲಿಕ್ಕೆ ಕಾರಣವೇನು ಮಿತೆಂದು ತಿಳಿಯುವದಿಲ್ಲ ನಿಮ್ಮ ಲೇಖಕನು ಬರೆದ ೭ನೇ ಸದರಿನ (para)ಲ್ಲಿ ಈ ಸಂಗ್ತಿಗನ್ನು ಸ್ಪಷ್ಟವಾಗಿ ತೋರಿಸದೆ ಇರುವ ಕಾರಣವೇನು? ಈ ಸಭೆಗೆ ಸುಪರವ್ಹಾಯಿಜರು ಹಾಜರ ಇದ್ದಿಲ್ಲ ಸದ್ರಿ ಸಭೆಯಲ್ಲಿ ಯೂನಿಯನ್‌ದವರು ಮಾಡಿದ ಠರಾವು ತಪ್ಪು ಎಂತಲೂ, ಸುಪರವ್ಹಾಯಿಜರರು ಯೂನಿಯನ್‌ಕ್ಕೆ ಕೊಟ್ಟ ಮಾಹಿತಿಯು ತಪ್ಪಿದ್ದೆಂತಲೂ, ಸುಪರವ್ಹಾಯಿಜರರ ವರ್ತನದ ಬಗ್ಗೆ ವಿಚಾರ ಮಾಡಿಸಬೇಕಾಗಿಯೂ ಠರಾವು ಆಗಿತ್ತಲ್ಲವೋ? ಮತ್ತು ಯೂನಿಯನ್‌ವು ಈ ಪ್ರಕಾರ ವರ್ತಿಸಿದ್ದಕ್ಕೆ ಸುಂಕೇರಿ ಸಂಘವು ಯೂನಿಯನ್‌ದಿಂದ ದೂರವಾಗಬೇಕಾಗಿತ್ತೆಂದಾಗಿ ಯೂನಿಯನ್‌ಕ್ಕೆ ಸಂಘದ ಚೆಅರಮನ್‌ರು ತಿಳಿಸಿದ್ದರಲ್ಲವೋ? ಇವರಲ್ಲಿ ಸುಂಕೇರಿ ಸಂಘದ ವರ್ತನವು ನೀತಿಗೂ ಮತ್ತು ಸಹಕಾರದ ನಿಯಮಗಳಿಗೂ ವಿರುದ್ಧವಾದದ್ದಿರುವದಿಲ್ಲವೋ? ಯೂನಿಯನ್‌ದ ಸ್ಥಾಪನೆಯು ಸುಂಕೇರಿ ಸಂಘದಂಥ ಮತ್ತು ಇತರ ಸಹಕಾರಿ ಸಂಘಗಳ ತಪಾಸಣೆ ಮತ್ತು ದೇಖರೇಖೆಯ ಬಗ್ಗೆ ಆದದ್ದು ಇರುತ್ತಾ ಸದ್ರಿ ಯೂನಿಯನ್‌ದ ವಿಷಯದಲ್ಲಿ ಸುಂಕೇರಿ ಸೊಸ್ಯಾಟಿಯು ಮೇಲಿನಂತೆ ಠರಾವು ಮಾಡಿದ್ದು ತೀರ ಅಯೋಗ್ಯವೆಂತ ಸದ್ರಿ ಸಭೆಯ ನೇತೃತ್ವವನ್ನು ಹೊಂದಿದ ಮತ್ತು ಸಹಕಾರಿ ತತ್ವಗಳ 'ತಜ್ಞ'ರೆಂದೆನ್ನಿಸಿಕೊಳ್ಳುವ ಮ| ರಾ| ಸಾವಕಾರ ಇವರ ಲಕ್ಷಕ್ಕೆ ಹೇಗೆ ಬರಲಿಲ್ಲ?

೭ನೇ ಸದರಿನಲ್ಲಿ ಬರೆದ ಮಜ್ಕೂರು ಬಹಳೇ ವಿಚಿತ್ರವದೆ. ಸುಪರವ್ಹಾಯಿಜರರು ಮತ್ತು ಒಡಿಟರ ಮಿ| ಪಂಡಿತರವರು, ಸೊಸ್ಯಾಟಿಯ ಸೆಕ್ರೆಟರಿಯವರು ಮಾಡಿದ ಹಣದ ದುರುಪಯೋಗದ ಬಗ್ಗೆ ಅವರ ಜವಾಬು ತಕ್ಕೊಳ್ಳಲಿಕ್ಕೆ ತಾ. ೧-೧೨-೧೯೩೩ನೇ ದಿವಸ ಸುಂಕೇರಿ ಸೊಸ್ಯಾಟಿಯ ಆಫೀಸಿಗೆ ಹೋದಾಗ್ಗೆ, ಮ| ರಾ| ಜೇ. ಪಿ. ಸಾವಕಾರರು ಮೆನೆಜಿಂಗ ಕಮಿಟಿಯಲ್ಲಿಲ್ಲಾದರೂ ಮುದ್ದಾಂ ಅಲ್ಲಿ ಹಾಜರಾಗಿ ಸದ್ರಿ ಚೌಕಶಿಯಲ್ಲಿ ಬಾಯಿಹಾಕುವ ಕಾರಣವೇನು? ಅವರಿಗೆ ತಮ್ಮ ಕೆಲಸ ಬಿಟ್ಟು ಅಲ್ಲಿ ಬರಲಿಕ್ಕೆ ಯಾರು ಕರೆದಿದ್ದರು? ಸುಪರವ್ಹಾಯಿಜರರ ಮೇಲೆ ಸುಳ್ಳು ಆರೋಪವನ್ನು ತಂದು ಅದರ ತಪಾಸ ಮಾಡುವರೆಂದು ಕುಚೇಷ್ಟೆಯನ್ನು ಮಾಡುವದರಲ್ಲಿ ಏನು ತಾತ್ಪರ್ಯ? ಈ ವಿಷಯದಲ್ಲಿ ನಾನು ಇನ್ನೂ ಹೆಚ್ಚು ಬರೆಯುವ ಅವಶ್ಯವಿಲ್ಲ.

ಸದ್ರಿ ಸಂಘದ ಸ್ಥಿತಿಯ ತಪಾಸಣೆಯ ಬಗ್ಗೆ ನೇಮಿಸಲ್ಪಟ್ಟ ಮಿ| ಪರ್ಣೇಕರ ಇವರು ಆ ಸಂಘಕ್ಕೆ ಹೋಗಿ ಸಂಘದ ಲೆಕ್ಕ ಮತ್ತು ಇತರೇ ಕಾಗದ ಪತ್ರಗಳ ತಪಾಸಣೆಯನ್ನು, ಚೆಅರಮನ್-ಸೆಕ್ರೆಟರಿ ಮತ್ತು ಮೆನೆಜಿಂಗ ಕಮಿಟಿಯ ಮೆಂಬರರು, ಇಷ್ಟೇ ಅಲ್ಲ, ಮೆನೆಜಿಂಗ ಕಮಿಟಿಯಲ್ಲಿಲ್ಲದ ಮಿ|| ಜೇ. ಪಿ. ಸಾವಕಾರ ಮತ್ತು ಮಿ|| ಕೇ ಎನ್ ನಾಯ್ಕ ಇವರ ಮುಂದೆ ಸಹ ತಪಾಸಣೆಯ ಕೆಲಸವನ್ನು ನಡಿಸಿರುತ್ತಾ, ಚೆಅರಮನ್-ಸೆಕ್ರೆಟರಿಯವರ ಅಪರೋಕ್ಷ ಈ ತಪಾಸಣೆಯು ಆಯಿತೆಂಬು ತೀರ ಸುಳ್ಳು ವಿಧಾನ ಮಾಡಲಿಕ್ಕೆ ಸದ್ರಿ ಲೇಖಕನಿಗೆ ಎಲ್ಲಿಂದ ಸ್ಫುರಣೆ ಬಂತು? ವಿಚಾರಣಾಧಿಕಾರಿ (Enquiry Office) ಗಳು ಚೆಅರಮನ್ ಮತ್ತು ಸೆಕ್ರೆಟರಿ ಇವರಿಗೆ ತಮ್ಮ ರಿಪೋರ್ಟು ತೋರಿಸಬೇಕೆಂದು ಲೇಖಕನು ಹೇಳುವ ಕಾರಣವೇನು? ಚೌಕಶಿಗೇನೇ ನೇಮಿಸಲ್ಪಟ್ಟಂಥವರು ಅವರಿಗೆ ನೇಮಿಸಿದ ಮೇಲಧಿಕಾರಿಗಳಾದ ಮಿ|| ಅಸಿ|| ರಜಿ|| ಸಾಹೇಬರ ಕಡೆಗೆ ತಮ್ಮ ರಿಪೋರ್ಟ ಕಳುಹಿಸುವದರಲ್ಲಿ ಏನು ದೋಷವೇನು?

ವಿಚಾರಣಾಧಿಕಾರಿಗಳು ಈ ಸೊಸಾಯಟಿಯಲ್ಲಿ ತೋರಿಸಿದ ದೋಷಗಳನ್ನೆಲ್ಲ ಸಂಕ್ಷಿಪ್ತವಾಗಿ ೧೦ನೇ ಸದರಿನಲ್ಲಿ ಕೊಟ್ಟು ೧೧ ನೇ ಸದರಿನಲ್ಲಿ ಎರಡೇ ವಾಕ್ಯಗಳಲ್ಲಿ ಆ ದೋಷಗಳೆಲ್ಲ ನಿರಾಧಾರವಿರುತ್ತವೆಂತಲೂ, ಸೊಸ್ಯಾಟಿಗೆ ಈ ರಿಪೋರ್ಟು ಕಳುಹಿಸಿದ್ದಲ್ಲಿ ಎಲ್ಲ ವಿಷಯಗಳ ಪೂರ್ಣ ಸಮಾಧಾನವಾಗುತ್ತಿತ್ತೆಂದು ಹೇಳುವದರಲ್ಲಿ ಲೇಖಕನ ಹೇತುವೇನು? ಈ ರೀತಿ ಮಾಡದೆ ವಿಚಾರಣಾಧಿಕಾರಿಗಳು ಕಾಣಿಸಿಕೊಟ್ಟ ದೋಷಗಳನ್ನು ಈ ಲೇಖಕನು ಒಂದೊಂದಾಗಿ ತಕ್ಕೊಂಡು ಅವು ಹ್ಯಾಗೆ ನಿರಾಧಾರವೆಂತ ಆಧಾರ ಕೊಟ್ಟು ತೋರಿಸಿದ್ದಲ್ಲಿ ಒಳಿತಾಗುತ್ತಿತ್ತು ಹಾಗೆ ಮಾಡದೆ ವಿಚಾರಣಾಧಿಕಾರಿಗಳ ಮೇಲೆ ಪಕ್ಷಪಾತದ ದೋಷವನ್ನು ಹೊರಿಸಿದ್ದಲ್ಲದೆ ಸದ್ರಿ ಅಮಲದಾರರು ತಮ್ಮ ರಿಪೋರ್ಟು ಬರೆದದ್ದು ಹೈಹಿಂದಿನ ಪಂಚಾಯತ ಫೀ ಪೂರ್ಣ ಕೊಡಲಿಲ್ಲೆಂಬ ಸಿಟ್ಟಿನಿಂದ ಬರೆದಿದ್ದಿರಬೇಕೆಂತ ವಗೈರೆ ಬರೆದದ್ದು ತೀರ ಅನುಚಿತವಿದ್ದು ಅಷ್ಟೇ ನಿಂದಾಸ್ಪದವಿರುತ್ತದೆ. ಸದ್ರಿ ಅಮಲದಾರರ ಮೇಲೆ ಯಾವದೇ ತರದ ಅವಿಶ್ವಾಸವಿದ್ದಲ್ಲಿ ಅವರ ನೇಮಣೂಕಿಯಾದ ಕೂಡಲೆ ಮೇಲಧಿಕಾರಿಗಳ ಕಡೆಗೆ ಸದ್ರಿ ಸೊಸ್ಯಾಟಿಯು ತಕ್ರಾರು ಮಾಡಬಹುದಾಗಿತ್ತು ಅದು ಹ್ಯಾಗೇ ಇರಲಿ, ವಿಚಾರಣಾಧಿಕಾರಿಗಳಾದ ಮಿ| ಪರ್ಣೇಕರ ಇವರು ತಮ್ಮ ರಿಪೋರ್ಟನಲ್ಲಿ ಕೊಟ್ಟ ಮತವನ್ನು ಬದಿಗಿಟ್ಟು ಲೇಖಕನು ತನ್ನ ಮನಸ್ಸಿಗೆ ಬಂ

ದಂತೆ ಬರೆಯುವದು ನೋಡಿ ಆಶ್ಚರ್ಯವಾಗುತ್ತದೆ. ಇರಲಿ

ಈಗ ವಿಚಾರಣಾಧಿಕಾರಿಗಳು ತೋರಿಸಿ ಕೊಟ್ಟ ದೋಷಗಳನ್ನೂ, ಈ ಲೇಖಕನ ಅಂಬೋಣವನ್ನೂ ಸಂಗಡ ವಿಚಾರಿಸಿ ಅವು ಸಾಧಾರವಿದ್ದಾವೋ ಇಲ್ಲವೋ ಎಂಬದನ್ನು ನೋಡುವಾ.

ಮಿ| ವೆರ್ಣೇಕರ ಇವರು ತಮ್ಮ ರಿಪೋರ್ಟಿನಲ್ಲಿ ಮೊಟ್ಟಮೊದಲು ಈ ಸೊಸೈಟಿಯು ಸನ್ ೧೯೨೧ ರಲ್ಲಿ ಪ್ರಾರಂಭವಾಗಿ ಸನ್ ೧೯೨೫ರ ವರೆಗೆ ಅಂದರೆ ದಿವಂಗತ ಗೋವಿಂದ ನಾಗೇಶ ನಾಯಕರವರು ಚೆಅರಮನ್‌ರಾಗಿರುವವರೆಗೆ ಪ್ರಗತಿಯನ್ನು ಹೊಂದಿ ಹ್ಯಾಗೆ 'ಅ' ವರ್ಗದಲ್ಲಿ ಸೇರಿತ್ತು ಮತ್ತು ಅನಂತರ ಹ್ಯಾಗೆ ಅವನತಿಗೆ ಬರಲಿಕ್ಕೆ ಪ್ರಾರಂಭವಾಗಿ ಕಟ್ಟಕಡೆಗೆ ೧೯೨೯-೧೯೩೦ ರಲ್ಲಿ ಮ|| ರಾ|| ಜೇ. ಪಿ. ಸಾವಕಾರ ಇವರು ಈ ಸಂಘದ ಕಾರ್ಯಕಾರಿ ಮಂಡಳದಲ್ಲಿ ಅಗ್ರಗಣ್ಯರೂ, ಸುಪರವಾಯಝಿಂಗ ಯೂನಿಯನ್‌ದ ಚೆಅರಮನ್ ಜಾಗೆಯಲ್ಲಿ ವಿರಾಜಮಾನರೂ ಇರುವಾಗ್ಗೆ ಈ ಸಂಘವು 'ಕ' ವರ್ಗಕ್ಕೆ ಬಂದು, ಸುಪರವಾಯಝಿಂಗ ಯೂನಿಯನ್‌ದಲ್ಲಿ ಸಹ ಈ ಸಾವಕಾರರಿಗೂ, ಯೂನಿಯನ್‌ದ ಇತರ ಬೋರ್ಡ ಸಭಾಸದರಿಗೂ ತಂಟೆ ಹುಟ್ಟಿ ಮ|| ರಾ|| ಸಾವಕಾರರ ವಿರುದ್ಧ ಯೂನಿಯನ್ ಬೋರ್ಡದ ಬಾಕಿ ಎಲ್ಲ ಮೆಂಬರರು ಅವಿಶ್ವಾಸದ ಠರಾವನ್ನು ಪಾಸ ಮಾಡಲು, ಮ|| ರಾ|| ಸಾವಕಾರರು ಬೋರ್ಡ ಮೆಂಬರರೊಡನೆ ಬಡದಾಡಿದ್ದಲ್ಲದೆ ತಾಲೂಕಿನೊಳಗಿನ ಹಲವು ಸಂಘಗಳಿಗೆ ಯೂನಿಯನ್‌ದ ವಿರುದ್ಧ ಬಂಡಾಯ ಹೂಡಲಿಕ್ಕೆ ಪ್ರೇರಣೆ ಕೊಟ್ಟು, ಆ ಮೇಲೆ ಮೇಲಧಿಕಾರಿಗಳು ಪ್ರತಿವರಿಸಲು, ಮ|| ರಾ|| ಸಾವಕಾರರು ಸೋತು ರಾಜಿನಾಮೆ ಕೊಟ್ಟು ಮೋ[illegible] ಲೀಕ ಹೊಂದಿದ ಸಂಗತಿಯು ಸರ್ವಶ್ರುತವಿದ್ದು ಈ ಲೇಖಕನು ಮಾತ್ರ ಅರಿತಿರುವದಿಲ್ಲವೋ? ಇಷ್ಟು ಶೋಭೆ ಮಾಡಿಕೊಂಡು ಯೂನಿಯನ್‌ದಿಂದ ಹೊರಬಿದ್ದ ತರುವಾಯವೇ ಮ|| ರಾ|| ಸಾವಕಾರರು ಸುಂಕೇರಿ ಸೊಸಾಯಟಿಯ ಮೆನೆಜಿಂಗ ಕಮಿಟಿಯನ್ನು ನಾಮವಶಾತ್ರಕ್ಕೆ ಬಿಟ್ಟಿದ್ದು ಅಲ್ಲವೋ? ಸದರಿ ಬಂಡಾಯದಲ್ಲಿ ಈ ಸುಂಕೇರಿ ಸಂಘವು ಮ|| ರಾ|| ಸಾವಕಾರರ ನೇತೃತ್ವದಲ್ಲಿ ಅಗ್ರಸ್ಥಾನದಲ್ಲಿದ್ದಿಲ್ಲವೋ? ಈ ಪರಿಯಲ್ಲಿ ಈ ಸಂಘಕ್ಕೆ ಹತ್ತಿದ ಬಂಡಾಯದ ಪ್ರವೃತ್ತಿ ಈ ಸಂಘದಲ್ಲಿ ಮುಂದೆ ಸಹ ಆಗಿಂದಾಗ್ಯೆ ತಲೆದೋರುತ್ತಿತ್ತಲ್ಲವೋ? ಈ ಸಂಘದ ಮೆಂಬರರಲ್ಲಿ ಎರಡು ಬಣಗಳಾಗಿ ಒಂದು ಬಣದ ನೇತೃತ್ವವು ವ್ಯಕ್ತ ಯಾ ಅವ್ಯಕ್ತ ರೀತಿಯಿಂದ ನಮ್ಮ ಮ|| ರಾ|| ಸಾವಕಾರರ ಹತ್ತಿರ ಇರುತ್ತಿದ್ದಲ್ಲವೋ? ಈ ಸಂಘದಲ್ಲಿ ಯಾವದೇ ಶಿಕ್ಷೆಗೆ ಒಳಗಾಗದಂಥ ಮಿ| ಕಿಣಿ ಎಂಬ ೬೦ ವರ್ಷಕ್ಕೆ ಮಿಕ್ಕಿದವರಿಗೆ ಈ ಸೊಸೈಟಿಯ ಸೆಕ್ರೆಟರಿ ಜಾಗೆಯಲ್ಲಿ ಸೇರಿಸಿದ್ದಲ್ಲದೆ ಅವರ ಜೊತೆಗೆ ಗೋವಾ-ಸೋಡ್ತಿ (Lottery ಯಿಂದ ಪ್ರಸಿದ್ಧಿಗೆ ಬಂದ ವೇ| ಮೂ| ಪಾಂಡುರಂಗ ನರಸಿಂಹ ಭಟ ಎಂಬ ಬಾಲಬೋಧ ವೈದಿಕರಿಗೆ ವ್ಯವಸ್ಥಾಪಕ ಕಮಿಟಿಯಲ್ಲಿ ಸೇರಿಸಿ ತಾವು ಬದಿಗಾಗಿ ಇವರಿಬ್ಬರ ಕಡೆಯಿಂದ ತಮ್ಮ ಕಾರ್ಯವನ್ನು ನೆರವೇರಿಸುತ್ತ ಬಂದಿಲ್ಲವೋ?

ಸಂಘದ ಮೆಂಬರರಲ್ಲಿ ಮತ್ತು ಮೆನೆಜಿಂಗ ಕಮಿಟಿಯಲ್ಲಿ ಇತ್ತಂಡಗಳಾಗಿ ವೇ| ಪಾಂಡುರಂಗ ಭಟ್ಟರು ತಮ್ಮ ಪಕ್ಷದ ಮಿ|| ವಿಶ್ವನಾಥ ಅನಂತ ನಾಯ್ಕ ಮತ್ತು ಮಿ|| ಸುಬ್ರಾಯ ವಿಠ್ಠಲ ಸಾವಕಾರ ಇವರಿಗೆ ಪೋಟನಿಯಮಗಳ ವಿರುದ್ಧ ಸಾಲ ಕೊಟ್ಟಿತ್ತಲ್ಲವೋ? ರೂ. 400/-ಕ್ಕೆ ಮಿಕ್ಕಿ ಯಾರಿಗೂ ಸಾಲ ಕೊಡಬಾರದಾಗಿ ನಿಯಮವಿರುತ್ತಾ ಮಿ| ವಿಶ್ವನಾಥ ನಾಯ್ಕ ಇವರಿಗೆ ರೂ. 750/- ಮತ್ತು ಸುಬ್ರಾಯ ಸಾವಕಾರರಿಗೆ ರೂ. 600/ ಸಾಲವಾಗಿ ಹ್ಯಾಗೆ ಕೊಟ್ಟರು? ಸದ್ರಿ ರಾ| ಸಾವಕಾರರು ಶಿಕ್ಷಕ ಸಂಘಕ್ಕೆ ಸೇರಿದವರಿದ್ದು ಸುಂಕೇರಿ ಸಂಘದ ಸಭಾಸದರಾದರೂ ಹ್ಯಾಗಾದರು? ಆ ಕಾಲದ ಮೆನೆಜಿಂಗ ಕಮಿಟಿಯ ಚೆಅರಮನ್‌ರಾದ ಮಿ| ಪ್ರೂವಕಾರರು ಈ ಸಾಲ ಕೊಡಲಿಕ್ಕೆ ವಿರೋಧ ಮಾಡಲು, ಮಿ| ಪ್ರೋವಕಾರರಿಗೆ ಕಿತ್ತುಹಾಕುವ ಠರಾವನ್ನು ವೇ|ಮೂ| ಪಾಂಡುರಂಗ ಭಟರು ಪಾಸು ಮಾಡಿಸಿಕೊಂಡು, ತಾವು ಅವರ ಜಾಗದ ಮೇಲೆ ಸೇರಿ ತಮ್ಮ ವಿರುದ್ಧ ಇದ್ದ ಜನರಿಗೆ ಸತಾಯಿಸಲಿಲ್ಲವೋ? ಮತ್ತು ಸಹಕಾರಿ ತತ್ವಕ್ಕೆ ವಿರುದ್ಧವಾಗಿ ಮತ್ತೊಬ್ಬ ಸಾಲಗಾರರ ಜಾಮೀನದಾರರಾದ ಕೆಲವು ಪ್ರಮುಖ ಸಭಾಸದರಿಗೆ ಸಿವ್ಹಿಲ ಕೋರ್ಟ ಮೂರ್ಖತ್ತು ದಸ್ತಗಿರಿ ವಾರಂಟು ಹೊರಡಿಸಿ ಸತಾಯಿಸಲಿಲ್ಲವೋ? ಸಂಘದ ಸೆಕ್ರೆಟರಿಯವರಾದ ಮಿ|| ಕಿಣಿಯವರು ರೂ. ೬೯-೦-೫ ಅಪಹರಿಸಿದ್ದು, ಸುಪರವ್ಹಾಜರರು ತೋರಿಸಿದ ನಂತರ ಕೂಡಲೆ ಭರಣಾ ಮಾಡಿದ್ದು ನಿಜವಲ್ಲವೋ? ಅನಂತರ ಮಿ|| ವೆರ್ಣೇಕರ ಇವರು ತಮ್ಮ ತಪಾಸಣೆಯಲ್ಲಿ ಇನ್ನೂ ರೂ ೧೧-೪-೬ ಈ ಸಕ್ರೆಟರಿಯವರು ಅಪಹರಿಸಿದ್ದು ತೋರಿಸಲಿಲ್ಲವೋ? ಈ ಸಕ್ರೆಟರಿ ಮಹಾಶಯರು ಆ ರಕಮನ್ನು ಇನ್ನೂ ತುಂಬದೆ ಇರುವ ಮೂಲಕ ಖಟ್ಲೆ ಮಾಡಬೇಕಾದೀತಾಗಿ ಮೆ| ಅಸಿಸ್ಟಂಟ ರಜಿಸ್ಟ್ರಾರ ಸಾಹೇಬರು ಬರೆದು ಹಾಕಿದ್ದು ನಿಜವಲ್ಲವೋ? ರಾ| ಕಿಣಿಯವರು ಸೊಸೈಟಿಯಿಂದ ತಕ್ಕೊಂಡ ರೂ ೩೦೧-೦-೦ ಸಾಲ ತಿರುಗಿ ಸಲ್ಲಿಸುವದಿರುತ್ತ ಅಧ್ಯಕ್ಷರಾದ ವೇ|| ಮೂ|| ಪಾಂಡುರಂಗ ಭಟ್ಟರು ಮಿ|| ಕಿಣಿಯವರ ಎಲ್ಲ ಆಸ್ತಿಯನ್ನು ತಮ್ಮ ಹೆಸರಿನಲ್ಲಿ ಮಾಡಿಕೊಂಡು ಇಟ್ಟಿಲ್ಲವೋ? ಇದರಿಂದ ಸಂಘಕ್ಕೂ ಜಾಮೀನದಾರರಿಗೂ ದಗೆ ಕೊಡುವ ಹೇತುವು ಅಧ್ಯಕ್ಷರಲ್ಲಿ ಇದ್ದದ್ದು ಸ್ಪಷ್ಟವಾಗುವದಿಲ್ಲವೋ? ಮತ್ತು ಮುಖ್ಯ ಸಾಲಗಾರರಾದ ಮಿ| ಕಿಣಿಯವರ ಮೇಲೆ ಯಾವದೇ ಇಲಾಜು ನಡಿಸದೆ, ತಮ್ಮ ದಾಯವಾದಿಗಳಾದ ರಾ|| ಕಿಣಿಯವರ ಜಾಮೀನದಾರರ ಮೇಲೆ ವಸೂಲಿ ಕ್ರಮವನ್ನು ನಡಿಸಿ ಅವರಿಗೆ ಸತಾಯಿಸಿದ್ದಿಲ್ಲವೋ? ಈ ರೀತಿ ಮಾಡುವದರಿಂದ ಎಲ್ಲಾ ಜನರಲ್ಲಿ ಬಹಳೇ ವೈಮನಸ್ಸು ಉಂಟಾಗಿ ಎಲ್ಲಾ ಜನರು ಇವರ ಕಾರಭಾರಕ್ಕೆ ಬೇಸತ್ತು ಈ ಬಗ್ಗೆ ದೂರುಗಳು ಮೇಲಧಿಕಾರಿಗಳ ಕಡೆಗೆ ಹೋಗಿರುತ್ತಿದ್ದವಲ್ಲವೋ?

ಸೆಕ್ರೆಟರಿಯವರೂ, ಚೆಅರಮನ್‌ರೂ ಕೂಡಾಗಿ ವಿಚಾರಣಾಧಿಕಾರಿಗಳಿಗೆ ಮೆಂಬರರ ಹಳೇ ಪಾಸ ಬೂಕುಗಳನ್ನು ತೋರಿಸಗೊಡದೆ ಬಹುತೇಕ ಎಲ್ಲ ಪಾಸ ಬೂಕುಗಳನ್ನು ತಯಾರಿಸಿ ತೋರಿಸುವ ವ್ಯವಸ್ಥೆ ಮಾಡಿದ್ದಿಲ್ಲವೋ? ಇದು ಹ್ಯಾಗೆ ಸಂಭವಿಸಿತು? ಚೆಅರಮನ್ ವೇ|| ಮೂ|| ಪಾಂಡುರಂಗ ಭಟ್ಟರು ಗೋವೆಯಿಂದ ಒಂದು ಮುಟ್ಟಿನ ಮುಂಚೆ ಸುಪರವಾಯಜರರ ಕೈಯಲ್ಲಿ ಸಿಕ್ಕಿದ ಕೆಲವು ಪಾಸ ಬೂಕುಗಳ ಮೇಲಿಂದ ನೋಡಲು, ಅವುಗಳಲ್ಲಿ ಜಮಾ ತೋರಿಸಿದ ರಕಮುಗಳು ಕೀರ್ದಿಯಲ್ಲಿ ಜಮಾ ಇರದೇ ಇರುವ ಕಾರಣವೇನು? ಮತ್ತು ಇನ್ನೂ ಹಲವು ರಕಮುಗಳ ಬಗ್ಗೆ ಕೀರ್ದಿಗೂ ಪಾಸ ಬೂಕುಗಳಿಗೂ ಅಂತರವಿರುವ ಕಾರಣವೇನು? ಹೀಗಿರುತ್ತಾ ಖರೇ ಸೆಕ್ರೆಟರಿಯವರು ತಮ್ಮ ದೋಷಗಳನ್ನು ಕಬೂಲ ಮಾಡಿ ಹಣ ಭರಪಾಯಿ ಮಾಡುತ್ತೇವೆಂತ ಹೇಳಿದ್ದರ ಮೇಲಿಂದ ಅವರು ನಿರ್ದೋಷಿಗಳಾಗುವರೋ?

ನಿಮ್ಮ ಲೇಖಕನು ೧೬ ನೇ ಸದರಿನಲ್ಲಿ ಬರೆದ ಸಂಗತಿ ನೋಡಿ ಬಹಳೇ ಆಶ್ಚರ್ಯವಾಗುತ್ತದೆ. ವಿಚಾರಣಾಧಿಕಾರಿಯವರಿಗೆ ಒಂದೇ ತಿಂಗಳಲ್ಲಿ ರಿಪೋರ್ಟ ತಯಾರಿಸಲಿಕ್ಕೆ ಹುಕುಮು ಆಗಿರುತ್ತಾ ಅವರು ಅದರಂತೆ ಮಾಡದೆ ೭-೮ ತಿಂಗಳು ತಕ್ಕೊಂಡರೆಂಬದರ ಮೇಲಿಂದ ಅವರು ಸುಳ್ಳು ಪುರಾವೆ ನಿರ್ಮಾಣ ಮಾಡಿದರೆಂಬ ತರ್ಕವು ಹ್ಯಾಗೆ ಹೊರಡುತ್ತದೆಂಬದು ಸ್ಪಷ್ಟವಾಗುವದಿಲ್ಲ ವಿಚಾರಣಾಧಿಕಾರಿಯವರು ಯಾವ ಸುಳ್ಳು ಪುರಾವೆಯನ್ನು ತಯಾರಿಸಿದರೆಂಬ[illegible] ನಿಮ್ಮ ಲೇಖಕನು ಸ್ಪಷ್ಟ ಮಾಡಬೇಕಾಗಿತ್ತು. ಹಾಗೆ ಮಾಡದೆ ಅವರ ಮೇಲೆ ವೃಥಾ ಆರೋಪಗಳನ್ನು ಹೊರಿಸಲಿಕ್ಕೆ ಪ್ರಯತ್ನ ಮಾಡುವದು ತೀರ ಗರ್ಹಣೀಯವು

ಮಿ|| ವೆರ್ಣೇಕರ ಇವರು ಸುಮಾರು ರೂ. ೩೪೬೦ಗಳ ಸಾಲವು ಸಾಕಷ್ಟು ಭದ್ರತೆ ಇಲ್ಲದ್ದಾಗಿರುತ್ತದೆಂದು ಅಭಿಪ್ರಾಯಪಡುತ್ತಾರೆ. ಕೆಲವು ಸಾಲಗಾರರ ಸ್ಥಿತಿ-ಗತಿ ನೋಡದೆ ಸಾಲ ಕೊಟ್ಟದ್ದರ ಮೇಲಿಂದಲೇ ಇದು ಸಂಭವಿಸಿತಲ್ಲವೇ? ಮೆಂಬರ ಜನರ ಆಸ್ತಿ ಪತ್ರಿಕೆ ತಯಾರಿಸದೆ ಇದ್ದದರಿಂದಲೇ ಈ ಸ್ಥಿತಿ ಪ್ರಾಪ್ತವಾಗಲಿಕ್ಕೆ ಕಾರಣವಾಯಿತಲ್ಲವೇ? ಈ ಸಾಲಗಳು ಸರಿಯಾಗಿ ವಸೂಲ ಆಗದೆ ಇದ್ದಲ್ಲಿ ಅವನ್ನು ಮಂಜೂರ ಮಾಡಿದ ಮೆನೆಜಿಂಗ ಕಮೀಟಿಯವರೇ ತುಂಬಬೇಕಾಗುವದೆಂದು ವಿಚಾರಣಾಧಿಕಾರಿಯವರು ತಮ್ಮ ಅಭಿಪ್ರಾಯ ಕೊಟ್ಟಲ್ಲಿ ಅವರದೇನು ದೋಷ?

ಸತ್ತವನಿಗೆ ಸಾಲ ಕೊಟ್ಟದ್ದು!!!

ಶಂಕರ ಕೃಷ್ಣ ಶೇಟ ಎಂಬವನ ಮರಣದ ೩ ವರ್ಷದ ನಂತರ, ಅವನನ್ನು ಮೆಂಬರನನ್ನಾಗಿ ಮಾಡಿಕೊಂಡು, ಕೂಡಲೆ ಅವನ ಹೆಸರಿನಲ್ಲಿ ರೂ. ೧೦೦/ರ ಸಾಲವನ್ನು ಮಂಜೂರ ಮಾಡಿ, ಅವನ ಹೆಸರಲ್ಲಿ ಬೊಂಡು ಬರಕೊಂಡು ಹ್ಯಾಗೆ ರಜಿಸ್ಟ್ರ ಆಯಿತೆಂಬ ಸಂಗತಿಯು ಇನ್ನೂ ತೀರ ಗೂಢವೇ! ಊರ ಪಟೇಲರಾದ ಮಿ| ಭಿಕಾರೊ ಕೃಷ್ಣನಾಯ್ಕ ಇವರು ಮೆನೆಜಿಂಗ ಕಮಿಟಿಯ ಮೆಂಬರರಿದ್ದು ಸತ್ತವನಿಗೆ ಮೆಂಬರ ಮಾಡಿಕೊಳ್ಳಲು ಹ್ಯಾಗೆ ಸಮ್ಮತಿ ಕೊಟ್ಟರು? ಸದ್ರಿಯವನ ಸಾಲದ ಭದ್ರತೆಗೆ ಶಂಕರ ಪುರ್ಸಪ್ಪ ಎಂಬ ಇನ್ನೊಬ್ಬನ ಜಮೀನು ಬರಕೊಂಡದ್ದೂ ಇನ್ನೂ ಆಶ್ಚರ್ಯ!! ಮೆನೇಜಿಂಗ ಕಮಿಟಿಯ ಮುಂದೆ ಸಭಾಸದನಾಗಲಿಕ್ಕೆ ಅರ್ಜ ಕೊಟ್ಟು, ಸಾಲ ಬೇಡಲಿಕ್ಕೂ, ಸದ್ರಿ ಬೊಂಡಿನ ಮೇಲೆ ಹೆಬ್ಬೆಟ್ಟಿನ ಗುರ್ತ ಹಾಕಲಿಕ್ಕೂ ಶಂಕರ ಕೃಷ್ಣ ಶೇಟನು ಪರಲೋಕದಿಂದ ಸೊಸೈಟಿಯ ಆಫೀಸಿನಲ್ಲಿಯೂ, ಸಬ್‌ರಜಿಸ್ಟ್ರಾರರ ಮುಂದೆಯೂ ಯಾವ ರೂಪ ತಕ್ಕೊಂಡು ಬಂದನು? ಸತ್ತವನ ಹೆಸರಲ್ಲಿ ಸಾಲ ಮಂಜೂರ ಮಾಡಿ ಬೊಂಡು ಬರಕೊಳ್ಳುವ

ಸ್ತರ ವರೆಗೆ ಈ ಸಂಘದ ಮೆನೆಜಿಂಗ ಕಮಿಟಿಯ ಕಾರಭಾರವು ನಡೆದದ್ದು ನೋಡಿ ಇದಕ್ಕೆ ಏನು ಹೇಳಬೇಕೆಂದು ನನಗೆ ತಿಳಿಯುವದಿಲ್ಲ. ಮೆನೆಜಿಂಗ ಕಮಿಟಿಯವರೂ ಸೆಕ್ರೆಟರಿಯವರೂ ಕಣ್ಣುಮುಚ್ಚಿ ಅಂಧರಂತೆ ಕಾರಭಾರ ನಡಿಸುತ್ತಾರೆಂತ ವ್ಯಕ್ತವಾಗುವದಿಲ್ಲವೋ?

ಸೊಸಾಯಟಿಯ ಲೆಕ್ಕದ ತಪಾಸಣೆಯ ಮೇಲಿಂದ ವಿಚಾರಣಾಧಿಕಾರಿಯವರು ಫೋಕಳ ಜಮಾ-ಖರ್ಚು ಆದದ್ದು ಕಂಡುಹಿಡಿದಿದ್ದಾರಲ್ಲವೋ? ಅಂವರೆ ಸಾಲದ ಬಡ್ಡಿ ಬಾಕಿ ಇರುತ್ತ, ಅದರ ವಸೂಲಿಯ ಕ್ರಮ ನಡಿಸದೆ ಸದ್ರಿ ರಕಮಿನಷ್ಟು ಸಾಲ ಮಂಜೂರ ಮಾಡಿದ್ದು ಹ್ಯಾಗೆ? ಇದರಂತೆ ವಿಚಾರಣಾಧಿಕಾರಿಯವರು ೪೨ ಪಾಸೆಗಳಲ್ಲಿ ಈ ರೀತಿ ಆದದ್ದು ಎಂಬುದು ನಿಮ್ಮ ಲೇಖಕನ ಲಕ್ಷ್ಯಕ್ಕೆ ಬಂದಿಲ್ಲವೋ? ಈ ೪೩ ಪಾಸೆಗಳಲ್ಲಿ ಚೆಅರಮನ್‌ರದೂ ಒಂದು ತಿಗಿರುತ್ತದೆ!

ಮೆ|| ರಜಿ|| ಸಾಹೇಬರ ಸೂಚನೆಯಂತೆ ಸಾಲಗಾರರಿಗೆ ಶೇ. ೬|ರಂತೆ ಮಾತ್ರ ಬಡ್ಡಿ ಹಿಡಿದು ಸಾಲ ಕೊಡುವದರಲ್ಲಿ ಚೆಅರಮನ್‌ರು ವಿರೋಧ ಮಾಡುವ ಕಾರಣವೇನು? ಸೂಚನೆಯಂತೆ ಮಾಡುವದರಲ್ಲಿ ಅವರೂ ಮೆನೆಜಿಂಗ ಕಮಿಟಿಯವರೂ ಸಹಕಾರ ಮಾಡಿದ್ದರೆ ಸಾಲ ವಸೂಲಿಯು ಹೆಚ್ಚು ಪ್ರಮಾಣದ ಮೇಲೆ ಆಗುತ್ತಿತ್ತಲ್ಲವೋ?

ಇದರ ಮೇಲಿಂದ ಈ ಸಂಘದ ಆಡಳಿತವು ಈಗಿನ ಮೆನೆಜಿಂಗ ಕಮಿಟಿಯವರ ಕಡೆಗೆ ಉಳಿದಲ್ಲಿ ಸಂಘದ ಮೇಲೆ ಅನರ್ಥ ಒದಗುವದು. ಎಂತ ವಿಚಾರಣಾಧಿಕಾರಿಯವರ ಅಭಿಪ್ರಾಯವಾಗಿ ಚೆಅರಮನ್ ಮತ್ತು ಮೆನೆಜಿಂಗ ಕಮಿಟಿಯ ಕೆಲವು ಮೆಂಬರರಿಗೂ ಮತ್ತು ಮೆನೆಜಿಂಗ ಕಮಿಟಿಯಲ್ಲಿದ್ದ ಪಕ್ಷದವರ ಸೂತ್ರಧಾರಕರಾದ ಇಬ್ಬ ಸಭಾಸದರಿಗೂ ೩ ೩ ವರ್ಷಗಳವರೆಗೆ ವ್ಯವಸ್ಥಾಪಕ ಕಮಿಟಿಯಲ್ಲಿ ಸೇರಗೊಡಬಾರದಾಗಿ ವಿಚಾರಣಾಧಿಕಾರಿಯವರು ಹೇಳಿದ್ದರಲ್ಲಿ ಏನು ತಪ್ಪು?

ಸುಂಕೇರಿ-ಕಣಿಕೋಣ ಸಂಘವನ್ನು ವಿಭಾಗಿಸಿ ಎರಡು ಸಂಘಗಳಾಗಿ ಮಾಡಿದ್ದರಿಂದ ತಂಟೆಗಳು ಕಡಿಮೆಯಾಗುವವೆಂದು ಹೇಳಿದ್ದರಲ್ಲಿ ಅವರದೇನು ತಪ್ಪು?

ಚೆಅರಮನ್‌ರ ಕೈಯಲ್ಲಿ ಶಿಲ್ಕು ರೂ ೧೦೦/-ಕ್ಕೆ ಮಿಕ್ಕಿ ಇರಬಾರದಾಗಿ ನಿಯಮವಿರುತ್ತ, ಅವರ ಕೈಯಲ್ಲಿ ಶಿಲ್ಕು ಹಣ ರೂ ೧೦೦೦/ ಕ್ಕೂ ಮಿಕ್ಕಿ ತಿಂಗಳುಗಟ್ಟಲೆ ಇರುವ ಸಂಗತಿಯನ್ನು ವಿಚಾರಣಾಧಿಕಾರಿಯವರು ತೋರಿಸಿ ಸದ್ರಿ ರಕಮುಗಳ ಮೇಲೆ ಚೆಅರಮನ್‌ರು ಬಡ್ಡಿ ಕೊಡಬೇಕೆಂತ ಶಿಫಾರಸು ಮಾಡಿದರಲ್ಲಿ ಏನು ತಪ್ಪು? ನಿಯಮಕ್ಕೆ ವಿರುದ್ಧವಾಗಿ ಚೆಅರಮನ್‌ರು ತಮ್ಮ ಕೈಯಲ್ಲಿ ಇಷ್ಟು ಹಣ ಇಟ್ಟುಕೊಳ್ಳುವ ಕಾರಣವೇನು?

ನಿಮ್ಮ ಲೇಖಕನು ಸದ್ರಿ ಲೇಖದ ೧೯ ನೇ ಸದರಿನಲ್ಲಿ ಬರೆದದ್ದರ ಮೇಲಿಂದ, ಮೆ|| ರಾ|| ಸಾವಕಾರ ಇವರು ಸದ್ರಿ ಸಂಘದ ಆಧಾರಸ್ತಂಭವಿದ್ದು ಅವರ ಮೂಲಕವೇ, ಅವರು ಮೆನೆಜಿಂಗ ಕಮಿಟಿಯಲ್ಲಿಲ್ಲಾದರೂ, ಬರೇ ಸಭಾಸದರಾಗಿ ಇದ್ದ ಮಾತ್ರದಿಂದಲೇ, ಸಭಾಸದರಲ್ಲಿಂಥ ಹಲವರು ಈ ಸೊಸಾಯಿಟಿಯಲ್ಲಿ ತಮ್ಮ ರಕಮುಗಳನ್ನು ಠೇವಾಗಿ ಈ ವರೆಗೆ ಇಟ್ಟಿದ್ದಾರೆಂತಲೂ, ಈಗ ಮೆ|| ರಾ|| ಸಾವಕಾರರ ವಿರುದ್ಧ ಆದ ಹುಕುಮು ನೋಡಿ ಬೇಸತ್ತು ತಮ್ಮ ಠೇವುಗಳನ್ನೆಲ್ಲ ಒಮ್ಮೆಲೇ ಪರತ ತೆಗೆದುಕೊಂಡು ಮೆ|| ರಾ|| ಸಾವಕಾರರ ಮೇಲೆ ಇದ್ದ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದರೆಂತ, ಮೆ|| ರಾ|| ಸಾವಕಾರರ ಕೇವಲ ಅಂಧ ಭಕ್ತರ ಸ್ತುತಿಪಾಠಕರಿಗೆ ಶೋಭಿಸುವಂಥ ಮಜಕೂರು ನೋಡಿ ನನಗೆ ನಗೆ ಬರುತ್ತದೆ!!

ಸದ್ರಿ ಸಂಘದಲ್ಲಿ ಹೆಚ್ಚಾಗಿದ್ದ ಬಿನ್‌ಮೆಂಬರರ ಠೇವುಗಳು ಸಂಘದ ಅವ್ಯವಸ್ಥೆಗೆ ಕಾರಣವಾಗುತ್ತವೆಂದು ವಿಚಾರಣಾಧಿಕಾರಿಯವರು ಕೊಟ್ಟ ಅಭಿಪ್ರಾಯಕ್ಕೆ ಮೆ|| ಅಸಿ|| ರಜಿ|| ಸಾಹೇಬರವರು ಒಪ್ಪಿ, ಬಿನ್‌ಮೆಂಬರರ ಠೇವುಗಳನ್ನು ರೂ. ೫೦೦೦ಕ್ಕೆ ಮಿಕ್ಕಿ ಇಟ್ಟುಕೊಳ್ಳಬಾರದೆಂತಲೂ, ಹೆಚ್ಚಾಗಿದ್ದ ರೂ.೩೦೦೦ಗಳನ್ನು ಶೀಘ್ರವೇ ಪರತ ಕೊಡಬೇಕೆಂತಲೂ ಅವರು ಮಾಡಿದ ಹುಕುಮಿನನ್ವಯ ಸಂಘದಲ್ಲಿ ಠೇವು ಇಟ್ಟ ರಕಮುಗಳನ್ನು ಪರತ ಕೊಟ್ಟಿರುತ್ತ, ನಿಮ್ಮ ಲೇಖಕನು ಈ ಸಂಗತಿಯ ವಿಪರ್ಯಾಸ ಮಾಡಿ ಬರೆದದ್ದು ತೀರ ಹಾಸ್ಯಾಸ್ಪದವು.

ವಿಚಾರಣಾಧಿಕಾರಿಯವರು ಕೊಟ್ಟ ರಿಪೋರ್ಟಿನ ಮೇಲೆ, ಮೇಲಿನಂತೆ ೫ ಜನರು ಮೆನೆಜಿಂಗ ಕಮಿಟಿಯಲ್ಲಿ ಇರಲಿಕ್ಕೆ ನಾಲಾಯಕರಿರುವರೆಂತಲೂ, ಕೂಡಲೆ ಜಾದಾ ಸಾಧಾರಣ ಸಭೆಯನ್ನು ಕರೆದು ಅದರಲ್ಲಿ ಹೊಸ ವ್ಯವಸ್ಥಾಪಕ ಕಮಿಟಿಯನ್ನು ನೇಮಿಸಿಕೊಳ್ಳಬೇಕೆಂತಲೂ, ಚೆಅರಮನ್‌ರು ನಿಯಮಕ್ಕೆ ಮಿಕ್ಕಿ ತಮ್ಮ ಕೈಯಲ್ಲಿ ಇಟ್ಟುಕೊಂಡು ಉಪಯೋಗಿಸಿದ ಹಣದ ಬಗ್ಗೆ ರೂ ೧೮-೧೩-೦ ಬಡ್ಡಿ ಕೊಡಬೇಕೆಂತಲೂ, ತಪಾಸಣೆ ಫೀ ಬಾಬು ಸಂಘವು ರೂ. ೧೫/-, ಚೆಅರಮನ್‌ರು ರೂ ೩೫/- ಮತ್ತು ಸೆಕ್ರೆಟರಿಯು ರೂ ೧೦/- ಗಳನ್ನು ಕೊಡಬೇಕೆಂದು ಮಾಡಿದ ಮೆ|| ಅಸಿ|| ರಜಿ|| ಸಾಹೆಬರ ಹುಕುಮುಗಳಂತೆ ನಡೆಯದೆ ತಮ್ಮ ಅಂಕಿತ ಜನರ ಮತಗಳ ಬಲದಿಂದ ಚೆಅರಮನ್ನಾದಿ ಇತರ ಮೆನೆಜಿಂಗ ಕಮಿಟಿಯವರು ತಮ್ಮ ಜಾಗೆಯನ್ನು ಬಿಡದೆ ಇರುವ ಹಟವನ್ನು ತೋರಿಸಿದ್ದು ಯುಕ್ತವೋ? ಈ ಹುಕುಮಿನ ವಿಚಾರಣೆಯ ಬಗ್ಗೆ ಕರೆದ ಸೊಸಾಯಟಿಯ ಸಾಧಾರಣ ಸಭೆಯಲ್ಲಿ ಬಹುತರ ಯಾವತ್ತೂ ಹುಕುಮುಗಳು ತಿರಸ್ಕರಿಸಲ್ಪಡಲಿಲ್ಲವೋ? ಈ ರೀತಿ ಮೆ|| ಅ. ರಜಿಸ್ಟ್ರಾರರ ಹುಕುಮುಗಳು ತಿರಸ್ಕೃತವಾಗುವಂತೆ ಮೆ|| ರಾ|| ಜೀ. ಪಿ. ಸಾವಕಾರರು ಸಭೆಯಲ್ಲಿ ಪ್ರತಿಯೊಂದು ಠರಾವಿನ ಮೇಲೆ ಆವೇಶಯುಕ್ತವಾಗಿ ನಡುಗುತ್ತ ಮಾತಾಡಲಿಲ್ಲವೋ? ಸದ್ರಿ ಹುಕುಮುಗಳನ್ನು ಮನ್ನಿಸುವ ಬದಲು ಸೊಸಾಯಟಿಯು ಹೋದರೂ ತಮಗೆ ಇಷ್ಟವೇ ಎಂದು ಅವರು ಹೇಳಲಿಲ್ಲವೇನು? ಅವರ ಆವೇಶದ ಅಂಜಿಕೆಯಿಂದ ಕೆಲವು ಮೆಂಬರರು ಅವರಿಗೆ ಬೇಕಾದಂತೆ ತಮ್ಮ ಮತಗಳನ್ನು ಕೊಡಲಿಲ್ಲವೋ?

ಆ ಮೇಲೆ ಮೆ|| ಅಸಿ|| ರಜಿ|| ಸಾಹೇಬರು ಸ್ವತಃ ಸೊಸಾಯಟಿಗೆ ಬಂದು ತಮ್ಮ ಹುಕುಮುಗಳಂತೆ ನಡೆಯದೆ ಇದ್ದಲ್ಲಿ ಇಡೀ ಸಂಘವು ಬಂದ ಮಾಡುವವರಲ್ಲಿ ಬಂದೀತೆಂದು ಹೇಳಿದ ಮೇಲೆ ಚೆಅರಮನ್‌ರೊಬ್ಬರೇ ತಮ್ಮ ಜಾಗೆಗೆ ರಾಜಿನಾಮೆ ಕೊಟ್ಟು ಮೋಕಳೀಕರಾದರಲ್ಲವೇ? ಇನ್ನೊಬ್ಬ ಮೆಂಬರನು ಕಮಿಟಿಯನ್ನು ಯಾಕೆ ಬಿಡಲೊಲ್ಲನು? ವಿಶೇಷ ಸಾಧಾರಣ ಸಭೆಯನ್ನು ಕರೆದು ಹೊಸ ವ್ಯವಸ್ಥಾಪಕ ಕಮಿಟಿಯು ಇನ್ನೂ ಯಾಕೆ ನೇಮಣೂಕ ಆಗಲಿಲ್ಲ? ಮೇಲಧಿಕಾರಿಗಳ ಹುಕುಮಿನ ಅರ್ಥ ತಿಳಿಯದಷ್ಟು ಇವರಲ್ಲಿ ಯಾರು ಇವರು? ಮೇಲಧಿಕಾರಿಗಳ ಹುಕುಮುಗಳನ್ನು ಅಮಾನ್ಯ ಮಾಡಿದರಿಂದ ಎರಡೇ ವರ್ಷಗಳಗಿದ್ದ ಬಾಡ ಸೊಸಾಯಟಿಗೆ ಸಂಭವಿಸಿದ ಗತಿಯನ್ನು ಇವರು ಮರೆತರೋ? ಇನ್ನಾದರೂ ಈ ಸಂಘದ ಸೂತ್ರಚಾಲಕರಿಗೂ, ವ್ಯವಸ್ಥಾಪಕ ಕಮಿಟಿಯವರಿಗೂ ಸುಬುದ್ಧಿಯನ್ನು ಕೊಟ್ಟು ಮೇಲಧಿಕಾರಿಗಳ ಹುಕುಮಿನಂತೆ ನಡೆಯುವ ಸದ್ಬುದ್ಧಿಯನ್ನಿತ್ತು ಸಂಘವನ್ನು ಇದ್ದ ಸ್ಥಿತಿಯಲ್ಲಿ ಉಳಿಸಿಕೊಳ್ಳುವಂತೆ ಮಾಡಲೆಂದು ದೇವರಡಿಗೆ ಪ್ರಾರ್ಥನೆ.

ಇದರ ಮೂಲಕ ನಿಮ್ಮ ವಾಚಕರ ಜನರಿಗೆ ಸಮ್ಮಂಧ ಗ್ರಾಮ ಸಂಘದ ಕಾರಭಾರದ ನಿಜ ಸ್ವರೂಪವನ್ನು ತೋರಿಸಿಕೊಡುವ ಪ್ರಸಂಗ ಕೊಟ್ಟ ಬಗ್ಗೆ ನಾನು ತಮ್ಮ ಆಭಾರಿಯಾಗಿದ್ದೇನೆ.

ಸುಂಕೇರಿ, ಒಬ್ಬ ಸತ್ಯಪ್ರಿಯ

ತಾ. ೪ ೪-೩೫. **ಸಹಕಾರಿ.**

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರ ಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಅಂತಹ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮಾರು ಬೆಲ್ಲದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಮಾಡಿದರೆ ಅಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾರಿ ೩೨ ಡಬ್ಬಿ ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ಪೋ.ಪ. ೪ ಬುಡ್ಡಿ ಡಜನ್ ೧ಕ್ಕೆ ರೂ. ೩-೮-೦. ವಿ. ಪಿ. ೦-೩-೦.

ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

(Registered Trade Mark.)

ಪತ್ತೆ:-ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ.ಬಾ. ೫೧೦, ಮಾರ್ಕೆಟ್‌ನ ಮದ್ರಾಸ.

ಅಲ್ಲಲ್ಲಿ ಇಷ್ಟಿಷ್ಟು!

ರೌಪ್ಯ ಮಹೋತ್ಸವದ ಸಮಯ ರಾಜಬಂದಿಗಳಿಗೆ ಬಿಡುಗಡೆ ಮಾಡುವ ವಿಚಾರವಿಲ್ಲವಾಗಿ ಕಳೆದ ಸೋಮವಾರ ಪಾರ್ಲಿಮೆಂಟ ಸಭೆಯಲ್ಲಿ ಸಹಾಯಕ ಭಾರತ ಮಂತ್ರಿಗಳಾದ ಮಿ| ಬಟ್ಲರರವರು ನುಡಿದರು. "ಅಹಿಂಸಾವಾದಿ ರಾಜಕೀಯ ಬಂದಿಗಳ ಸಂಖ್ಯೆ ಬರೇ ೬೭ ಇದೆ; ಅವರಿಗೆ ಬಿಡುಗಡೆಯಾಗಹತ್ತಿದೆ;" ಎಂಬದಾಗಿಯೂ ಮಿ| ಬಟ್ಲರರವರು ಉದ್ಗರಿಸಿದರು. ವಿಚಾರವಿಲ್ಲದೆ ರಾಜದ್ರೋಹಿಗಳೆಂಬ ಸಂಶಯದ ಮೇಲೆ ಸೆರೆಯಲ್ಲಿಟ್ಟವರಿಗೆ ರಜತೋತ್ಸವದ ಸಮಯ ಬಿಡುಗಡೆ ಮಾಡುವ ವಿಚಾರವಿಲ್ಲವಾಗಿ ವರಿಷ್ಠ ಶಾಯಿದೆ ಕೌನ್ಸಿಲಿನಲ್ಲಿ ಗೃಹಮಂತ್ರಿಗಳಾದ ಸರ್ ಹೆನ್ರಿ ಕ್ರೇಕರವರು ಉತ್ತರ ಕೊಟ್ಟರು. ಅದು ಬಂಗಾಲ ಸರಕಾರದ ಕಕ್ಷೆಯೊಳಗಿನ ಪ್ರಶ್ನೆಯೆಂದೂ ಗೃಹಮಂತ್ರಿಗಳು ಉದ್ಗರಿಸಿದರು. ರಾಜಬಂದಿಗಳಿಗೆ ಬಿಡುಗಡೆ ಮಾಡಿದ್ದಲ್ಲಿ ಸುರಕ್ಷಿತತೆಗೆ ಬಾಧೆಯಿಲ್ಲವೆಂದು ಸರಕಾರಕ್ಕೆ ಖಾತ್ರಿಯಾಗುವತನಕ ಬಂಧನದಲ್ಲಿ ಅವರು ಉಳಿಯುವರಾಗಿ ಸರ್ ಹೆನ್ರಿ ಕ್ರೇಕರವರ ಅಂಬೋಣ. ಆದರೂ, ಕಲಕತ್ತೆಯ 'ಅಮೃತ ಬಝಾರ' ಪತ್ರಿಕೆಯ ಲಂಡನಿನ ಸುದ್ದಿಗಾರರು ರಾಜಬಂದಿಗಳಿಗೆ ರೌಪ್ಯ ಮಹೋತ್ಸವದ ಸಮಯ ಬಿಡುಗಡೆಯಾಗುವದೆಂದು ತಿಳಿಸುತ್ತಾರಂತೆ. ಲಾಹೋರದ 'ಟ್ರಿಬ್ಯೂನ' ಪತ್ರಿಕೆಯು, ರೌಪ್ಯ ಸಮಾರಂಭದಂಥ ಶುಭ ಪ್ರಸಂಗದಲ್ಲಿ ರಾಜಬಂದಿಗಳಿಗೆ ಬಿಡುಗಡೆ ಮಾಡುವದು ಉಚಿತವಾಗಿದೆಯೆಂದೂ, ಬಿಡುಗಡೆಯಾಗದಿದ್ದಲ್ಲಿ ಪ್ರಜೆಗಳ ಉತ್ಸಾಹಭಂಗವಾಗುವದೆಂದೂ ಪ್ರತಿಪಾದಿಸಿ ಕೈದಿಗಳಿಗೆ ಬಿಡುಗಡೆ ಮಾಡಲು ವಿನಂತಿ ಮಾಡಿಕೊಳ್ಳುತ್ತದೆ. ರಜತೋತ್ಸವದ ಸಮಯ ರಾಜಬಂದಿಗಳಿಗೆ ಬಿಡುಗಡೆ ಮಾಡುವಂಥ ಸಾಮಾನ್ಯವಾದ ರಾಜಾನುಗ್ರಹ ಪ್ರದರ್ಶನವಾಗದಿದ್ದಲ್ಲಿ ಜನಸಾಮಾನ್ಯರ ಮಟ್ಟಿಗೆ ಉತ್ಸವ ನಡೆದೂ, ನಡೆಯದಷ್ಟು ನಿಷ್ಪ್ರಯೋಜಕವೆಂದು 'ಟ್ರಿಬ್ಯೂನ' ಪತ್ರಿಕೆಯ ಅಭಿಪ್ರಾಯ.

***

ರೌಪ್ಯ ಮಹೋತ್ಸವ ನಿಧಿಸಂಗ್ರಹದ ಸಮಯ ಒತ್ತಾಯವಾಗಬಾರದಾಗಿ ಹಿಂದುಸ್ಥಾನ ಸರಕಾರವೂ, ಪ್ರಾಂತಿಕ ಸರಕಾರಗಳೂ ಕೆಳ ಅಧಿಕಾರಿಗಳಿಗೆ ಸೂಚಿಸಿವೆ. ಆದಾಗ್ಯೂ ಒತ್ತಾಯವಾಗುತ್ತದಾಗಿ ಎಲ್ಲೆಲ್ಲೂ ದೂರು ಕೇಳಬರುತ್ತದೆ. ಮದ್ರಾಸ ಮ್ಯುನಿಸಿಪಾಲಿಟಿಯ ಶಾಲೆಗಳ ಹೆಡ್ ಮಾಸ್ತರರು ೩ ಆಣೆ, ಉಳಿದ ಮಾಸ್ತರರು ೧ ಆಣೆಯಂತೆ ರೌಪ್ಯ ಮಹೋತ್ಸವಕ್ಕೆ ವರ್ಗಣಿ ತೆರಲೇಬೇಕೆಂದು ಮೇಲಧಿಕಾರಿಗಳ ಅಪ್ಪಣೆಯಾಗಿದೆ. ಆದರೂ ಸಂಬಳದೊಳಗಿಂದ ಅಷ್ಟು ರಕಮನ್ನು ಮುರಕೊಂಡು ಸಂಬಳ ಕೊಡೋಣಾಗುತ್ತದೆ. ವರಿಷ್ಠ ಶಾಯಿದೆ ಕೌನ್ಸಿಲಿನಲ್ಲಿ ಹೀಗೆ ಒತ್ತಾಯ ನಡೆಯುವ ವಾರ್ತೆಯೇ ಸುಳಿಯಬೊಲ್ಲದು ಸಭಾಸದರು ಪ್ರಶ್ನೆ ಕೇಳಿದಾಗ್ಯೂ ಹಿಂದುಸ್ಥಾನ ಸರಕಾರವು ಪ್ರಾಂತಿಕ ಸರಕಾರಗಳಿಗೆ ಹವಾಲೆ ಹೇಳಿ ಪಾರಾಗುತ್ತದೆ; ಪ್ರಾಂತಿಕ ಸರಕಾರಗಳ ಕಡೆ ವಿಚಾರಿಸಬೇಕಾಗಿಯೂ ಅಪ್ಪಣೆಯಾಗುತ್ತದೆ. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ನಿಧಿಸಂಗ್ರಹ ಮಂಡಲಗಳ ಅಧ್ಯಕ್ಷರಾಗಿ ನಿಧಿಸಂಗ್ರಹಿಸಲು ಒತ್ತಾಯ ನಡಿಸುವ ಸಂಗತಿ ಹಿಂದುಸ್ಥಾನ ಸರಕಾರಕ್ಕೆ ಗೊತ್ತಿಲ್ಲ. ಈ ಕುರಿತು ಉದಾಹರಣೆಗಳನ್ನು ತೋರಿಸಿ ಪ್ರಾಂತಿಕ ಸರಕಾರಗಳ ಕಡೆ ದೂರಿಕೊಳ್ಳಬೇಕೆಂದು ಅಪ್ಪಣೆಯಾಗಿದೆ. ಮದ್ರಾಸ ಇಲಾಖೆಯೊಳಗಿನ ಡೆಪ್ಯುಟ ಕಲೆಕ್ಟರರು ಪಟೇಲರಿಗೆ ಕರಕೊಂಡು ಹಳ್ಳಿ-ಹಳ್ಳಿಗಳಲ್ಲಿ ವರ್ಗಣಿ ಕೂಡಿಸುವ ಸಂಗತಿಯ ಖುಲಾಸೆ ಕೇಳಲು, ಅದಕ್ಕೂ ಸರ್ ಹೆನ್ರಿ ಕ್ರೇಕರವರು ಪ್ರಾಂತಿಕ ಸರಕಾರಗಳಿಗೆ ಹವಾಲೆ ಕೊಟ್ಟರು. ರಜತೋತ್ಸವದ ಸಮಯ ಹಿಂದುಸ್ಥಾನ ಸರಕಾರವು ರೂ. ೨ ಲಕ್ಷಗಳನ್ನು ಖರ್ಚು ಮಾಡುವ ಸೂಚನೆ ವರಿಷ್ಠ ಶಾಯಿದೆ ಕೌನ್ಸಿಲಿನಲ್ಲಿ ಚರ್ಚೆಗೆ ಬರಲು, ಕೊಂಗ್ರೆಸ ಪಕ್ಷದ ಪರವಾಗಿ ಶ್ರೀ| ಭುಲಾಭಾಯಿಯವರು ವಿರೋಧಿಸಿದರು:- "ಬಾದಶಹರ ಬಗ್ಗೆ ನಮ್ಮಲ್ಲಿ ಪೂಜ್ಯಬುದ್ಧಿಯಿದೆ. ರೌಪ್ಯ ರಾಜ್ಯಾರೋಹಣ ಉತ್ಸವ ಪ್ರಸಂಗ ಒದಗಿದ ಬಗ್ಗೆ ನಮಗೆ ಆನಂದವಾಗಿದೆ. ಆದರೆ ಬಾದಶಹರ ಹೆಸರಿನಿಂದ ಹಿಂದುಸ್ಥಾನದಲ್ಲಿ ನಡೆಯುವ ರಾಜ್ಯಪದ್ಧತಿ ರಾಷ್ಟ್ರೀಯ ಸಭೆಗೆ ಮಾನ್ಯವಿಲ್ಲ." ಈ ಠರಾವು ಬಹುಮತದಿಂದ ಮಂಜೂರಾಗಿದೆ. ಅಹಮದಾಬಾದ ಮ್ಯುನಿಸಿಪಾಲಿಟಿಯವರು ಉತ್ಸವ ನಿಧಿಗೆ ಹಣ ಕೊಡಬಾರದೆಂದೂ, ಉತ್ಸವವನ್ನು ಸಾದರಪಡಿಸಬಾರದೆಂದೂ ಠರಾವು ಮಾಡಿದ್ದಾರೆ. ಉತ್ಸವ ನಿಧಿಯ ವಿನಿಯೋಗದ ವಿಷಯದಲ್ಲಿಯೂ ಬಲಾತ್ಕಾರವಾಗುತ್ತದಾಗಿ ಪುಣೆಯ 'ಕೇಸರಿ' ಪತ್ರಿಕೆಯಲ್ಲಿ ಉತ್ಸವಪ್ರಿಯರು ದೂರಿಕೊಳ್ಳುತ್ತಾ

[ಮುಂದೆ ೧೨ನೇ ಪಾನು ನೋಡಿರಿ.]

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು !

ವೃದ್ಧಿಕಾರಕ (ವೀರ್ಯಕ್ಕೆ ಅತ್ಯಂತ ಗುಣಕಾರಿ)
ಮದನಾನಂದ ಶಿವೇಶ್ವರೀ ಲೇಹ್ಯ (ನಷ್ಟವೀರ್ಯ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ್ಯ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾಮಾಷ ತೈಲ್ಯ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಪಾತ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಣ ಪಿಪ್ಪಲಿ (... ರೋಗಕ್ಕೆ ಅತ್ಯುತ್ತಮ)
ಕೃಷ್ಣಾ... (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ)
ಅಮೃತ ಪ್ರಾಶ (ರಕ್ತಪಿತ್ತ, ಜನಕಂಪ್ರದ, ... ಗಳಿಗೆ ...)
ಭುವನ ರಂಜನ (ಸರ್ವ ತರದ ... ನೋವುಗಳಿಗೆ ಅತ್ಯಂತ ಗುಣಕಾರಿ.
ಪಾಶುಪತ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಶ್ರೇಷ್ಠ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-
ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು !

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ನಾವು ... ನೋಡಿ ಬಹಳ ಆನಂದಪಟ್ಟೆವು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆಯುತ ಬಂದಿರುತ್ತದೆ. ಇವರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯ ಸಂತತಿಗೆ ಸೇರಿದವರಾಗಿಯೂ, ಗುಣಿಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ಪರೀಕ್ಷಿಸಿದೆವು. ಅವು ಶಾಸ್ತ್ರಸಿದ್ಧವಾಗಿ ಅನುಭವಸ್ಥವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ... ಅನೇಕ ವನಸ್ಪತಿಗಳ ಪರಿಚಯವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಭಾಗ ಶಾಖೆಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಏಕಮಾತ್ರವಾಗಿ ನಡಿಸಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸ್ಥೆವಹಿಸುವದರಿಂದ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿದಿನವೂ ಅಭಿವೃದ್ಧಿಗೊಳ್ಳಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ

ಮೊಕ್ಕಾಂ, ಉಡುಪಿ. ೧೦-೧೧-೧೯೩೪

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಅಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ.

ಗುಪ್ತ ಆಲೋಚನೆ.

[ನಿರೀಕ್ಷಕನು ಬರೆದುದು.]

ಯುರೋಪ ಖಂಡದೊಳಗಿನ ರಾಜಕಾರಣಿಗಳು ಒಳ್ಳೇ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿದ್ದಾರೆ. ಈ ಸಂಕಟದೊಳಗಿಂದ ಪಾರಾಗುವ ಬಗೆ ಹೇಗೆಂದು ಆಲೋಚಿಸುತ್ತಿದ್ದಾರೆ. "ಹಿಡಿದರೆ ಕಚ್ಚುತ್ತದೆ; ಬಿಟ್ಟರೆ ಓಡುತ್ತದೆ" ಎಂಬಂತೆ ರಾಜಕಾರಣಧುರಂಧರರ ಅವಸ್ಥೆಯಾಗಿದೆ. ಹಿಡಿಯಲಿಕ್ಕೆ ಉಪಾಯವಿಲ್ಲ; ಬಿಟ್ಟರೆ ಉಳಿಗಾಲವಿಲ್ಲ! ಸ್ಟ್ರೆಸ್ಸಾ ಪಟ್ಟಣದಲ್ಲಿ ಗುರುವಾರ ತ್ರಿಮೂರ್ತಿಗಳ ಪರಿಷತ್ತು ಸೇರಿತು. ಬ್ರಿಟಿಶರ ಪರವಾಗಿ ಮುಖ್ಯ ಪ್ರಧಾನರಾದ ಮಿ. ಮೆಕಡೋನಲ್ಡರವರೂ, ರಾಯಭಾರಿಗಳಾದ ಸರ್ ಜ್ಹಾನ್ ಸೈಮನ್‌ರವರೂ ವಿಮಾನ ಮಾರ್ಗವಾಗಿ ಹೋದರು. ಫ್ರಾನ್ಸ ದೇಶದ ಪರವಾಗಿ ಅಧ್ಯಕ್ಷರಾದ ಎಮ್. ಫ್ಲೆಂಡಿನ್‌ರವರೂ, ಪರದೇಶದ ರಾಯಭಾರಿಗಳಾದ ಎಮ್. ಲಾವಲ್‌ರವರೂ ವಿಮಾನಮಾರ್ಗವಾಗಿ ಅಲ್ಲಿ ಹೋಗಿ ತಲ್ಪಿದರು. ಇಟಾಲಿಯ ಮುಸೊಲಿನಿಯವರು ಅವರಿಗೆ ರಾಜವೈಭವದಿಂದ ಸ್ವಾಗತವನ್ನಿತ್ತು ಕರೆದೊಯ್ದರಂತೆ. ರಾಜಕಾರಣಿಗಳು ಸಂಚರಿಸುವ ರಾಜಮಾರ್ಗಗಳ ಮೇಲೆ ಎರಡೂ ಪಕ್ಕಗಳಲ್ಲಿ ಸಶಸ್ತ್ರ ಸೈನಿಕರು ಸಾಲಾಗಿ ನಿಂತುಕೊಂಡಿದ್ದರಂತೆ. ಪೋಲೀಸ ಶಿಬಂದಿ ಮೇರೆದಪ್ಪಿ ಇಡೋಣವಾಗಿದೆ. ೩ ಸಾವಿರ ಪೋಲೀಸರು ಸ್ಟ್ರೆಸ್ಸಾ ಪ್ರದೇಶದಲ್ಲಿ ಸರ್ವ ಕಡೆಯಿಂದ ಕಾವಲಿಡುತ್ತಾರಂತೆ. ಈ ಬಂದೋಬಸ್ತಿಗೆ ಬೇಸರಪಟ್ಟು ಎಮ್. ಲಾವಲರವರು ಮುಂಜಾವಿನ ತಿರುಗಾಟವನ್ನು ಬಿಟ್ಟುಬಿಟ್ಟರಂತೆ. ಅವರು ತಿರುಗಾಡಹೋರಟೊಡನೆ ಬೆನ್ನಿಗೆ ೧೮ ಮಂದಿ ಪೋಲೀಸರು ಹಿಂಬಾಲಿಸಿದರಂತೆ. ೨೦ ಅತಿಥಿಗಳಿಗೆ ಉಳಕೊಳ್ಳಲು ಒಳ್ಳೇ ವ್ಯವಸ್ಥೆ ಏರ್ಪಟ್ಟಾಗಿದೆ. ಮಾಗಿಯೋರ ಸುಂದರ ಸರೋವರದ ಇಸಾಲೊಬೆಲಾ ಅರಮನೆಯಲ್ಲಿ ಇವರೆಲ್ಲರಿಗೆ ಉಳಕೊಳ್ಳಲು ವ್ಯವಸ್ಥೆಯಾಗಿದೆ. ಆದರೆ ಸಭೆಯಲ್ಲಿ ಏನು ನಡೆಯಿತು? ಎಂಬ ಸಂಗತಿ ಪ್ರಕಟವಾಗಲಿಲ್ಲ. ಸಭಾಸ್ಥಾನದಲ್ಲಿ ಪತ್ರಕರ್ತರಿಗೆ ಪ್ರವೇಶವಿರಲಿಲ್ಲ. ಸರ್ ಜ್ಹಾನ್ ಸ್ಯಾಮನ್‌ರು ತಮ್ಮ ಯಾತ್ರೆಯ ವರದಿ ಕೊಟ್ಟರಂತೆ. ಫ್ರೆಂಚರು ಮುಂದೇನು ಮಾಡಬೇಕೆಂಬುದರ ಕುರಿತು ವಿಚಾರ ಪ್ರದರ್ಶನ ಮಾಡಿದರಂತೆ. ಜರ್ಮನ್ನರ ಧೋರಣೆಯಿಂದ ಅವರೊಡನೆ ಮಾತುಕಥೆ ನಡಿಸುವದು ಕಠಿಣವಾಗಿರುವದಾಗಿ ಫ್ರೆಂಚ ಪ್ರತಿನಿಧಿಗಳು ವಾದಿಸಿದರಂತೆ. ಮುಸೊಲಿನಿಯವರು ಜರ್ಮನಿಯ ಯುದ್ಧ ತಯಾರಿಗೆ ಇದಿರಾಗಿ ಸೈನ್ಯಬಲವನ್ನು ಬೆಳೆಸಬೇಕಾಗಿಯೂ, ಆಸ್ಟ್ರಿಯಾ-ಹಂಗರಿ ಮೊದಲಾದ ಬಾಲ್ಕನ್ ರಾಷ್ಟ್ರಗಳಿಗೂ ಸೈನ್ಯಬಲ ಬೆಳೆಸಲು ಅಪ್ಪಣೆ ಕೊಡಬೇಕಾಗಿಯೂ ಪ್ರತಿಪಾದಿಸುತ್ತಾರಂತೆ. ಸದ್ಯಕ್ಕೇ ಮತ್ತೊಂದು ಸಭೆ ಸೇರಿಸಬೇಕಾಗಿಯೂ, ಅದರೊಳಗೆ ಜರ್ಮನಿ, ರಶಿಯಾ, ಪೋಲಂಡ ರಾಷ್ಟ್ರಗಳಿಗೆ ಸೇರಿಸಿಕೊಂಡು ವಿಚಾರ ನಡಿಸಬೇಕಾಗಿಯೂ, ಮಿಲನ್‌ದೊಳಗಿನ 'ಪೊಪಾಲೊ ಡಿ ಇಟಾಲಿಯಾ' ಪತ್ರಿಕೆಯು ಸೂಚಿಸುತ್ತದೆ. ಇಟಾಲಿಗೆ ಫ್ರೆಂಚರೂ ಬೇಕು; ಜರ್ಮನ್ನರೂ ಬೇಕು; ಬ್ರಿಟಿಶರೂ ಬೇಕು; ಎಲ್ಲರೂ ಬೇಕು. ಆದರೆ ಸ್ವಾರ್ಥ ಬಿಡಲಿಕ್ಕೆ ಒಬ್ಬರೂ ತಯಾರಿಲ್ಲ. ಜರ್ಮನ್‌ರೊಡನೆ ರುಶ್ಯರು ಒಕ್ಕಟ್ಟಾಗುವ ಲಕ್ಷಣವಂತು ಕಾಣಿಸಿತು. ಜರ್ಮನಿಯ ಹಿಟ್ಲರರಿಗೆ ಕೈಸರರಂತೆ ರಾಜ್ಯವಿಸ್ತಾರದ ಮಹತ್ವಾಕಾಂಕ್ಷೆ. ಯುರೋಪ ಖಂಡದೊಳಗಿನ ಜರ್ಮನ್‌ರನ್ನೆಲ್ಲ ಒಟ್ಟುಗೂಡಿಸಿ, ಸಮಸ್ತ ಜರ್ಮನ್ ಪ್ರದೇಶದ ಸಾರ್ವಭೌಮರಾಗಬೇಕೆಂದು ಅವರು ಹವಣಿಸುತ್ತಿದ್ದಾರೆ. ರಶಿಯಾ ದೇಶಕ್ಕೆ ಸೇರಿದ ಉಕ್ರೇನ ಪ್ರಾಂತವನ್ನು ಪುನಃ ಜರ್ಮನಿಗೆ ಸೇರಿಸಿಕೊಳ್ಳಲು ಅವರು ಹೊಂಚುಹಾಕಿ ಕೂತಿದ್ದಾರೆ. 'ಜಪಾನಿಯರಿಗೂ, ರುಶ್ಯರಿಗೂ ಯುದ್ಧವಾಗುವದು. ರುಶ್ಯರು ಆ ಸಂಗ್ರಾಮದಲ್ಲಿ ತೊಡಗಿದಾಗ ಈ ಪಾಶ್ಚಾತ್ಯದಿಂದ ರಶಿಯಾ ದೇಶದ ಮೇಲೆ ದಂಡೆತ್ತಿಹೋಗಿ ಉಕ್ರೇನ ಪ್ರಾಂತವನ್ನು ಜರ್ಮನಿಗೆ ಸೇರಿಸಿಬಿಡಬೇಕಾಗಿ' ಅವರು ಹಾದಿ ಕಾಯುತ್ತಿದ್ದಾರೆ. ಇಂದ ಪ್ರಸಕ್ತಿಯಲ್ಲಿ ಇವರೆಲ್ಲರೂ ಒಕ್ಕಟ್ಟಾಗುವ ಬಗೆ ಹೇಗೆ? ಕಲಹ ಕಾರಣಗಳ ಪರಿಹಾರವಾಗುವ ಬಗೆ ಹೇಗೆ? ಶಾಂತಿ ಸ್ಥಾಪನೆಯಾಗುವ ಬಗೆ ಹೇಗೆ? ಮತ್ಸರ-ಸ್ವಮಹತ್ವಾಕಾಂಕ್ಷೆಗಳನ್ನು ಪರಾಂಬರಿಸಿದರೆ ಯುದ್ಧ-ಸ್ಫೋಟಕ್ಕೆ ತಕ್ಕಷ್ಟು ಇಂಧನ. ಆದರೆ ಯುದ್ಧವೆಸಗಿದ್ದಲ್ಲಿ ಸಾಮಾನ್ಯ ಪ್ರಜೆಗಳು ಬೊಂಬ ಮಾಡಬಹುದೆಂದು ಮುತ್ಸದ್ದಿಗಳು ಹೆದರುತ್ತಾರಾಗಿ ಆಶೋರಿಕೆಯು. ರಾಜಕಾರಣಧುರಂಧರರೊಬ್ಬರ ಅಭಿಪ್ರಾಯವಾಗಿರುವದಾಗಿ 'ಪ್ರೊ' ಕರಾರವರು 'ಕ್ರೊನಿಕಲ್' ಪತ್ರಿಕೆಯಲ್ಲಿ ಬರೆಯುತ್ತಾರೆ. ೧೧॥ ವರ್ಷಗಳ ಕಾಲ ಯುದ್ಧವೆಸಗದಂತೆ! ಆದರೆ ನಿಶ್ಚಿತವಾಗಿ ಹೇಳುವದು ಕಠಿಣ. ಈ ಹೊತ್ತು ರಾಷ್ಟ್ರಸಂಘದ ಸಭೆ ಜಿನೇವಾದಲ್ಲಿ ಸೇರಲಿಕ್ಕಿದೆ. ರಶಿಯಾ ದೇಶದ ರಾಯಭಾರಿಗಳಾದ ಲಿಟ್ವಿನ್‌ವೊಫ್‌ರವರು ಜಿನೇವಾಕ್ಕೆ ಗುರುವಾರವೇ ಹೊರಟುಬಿಟ್ಟಿದ್ದಾರೆ. ಜರ್ಮನಿಯ ರಣೋತ್ಸಾಹವನ್ನು ಸ್ಟ್ರೆಸ್ಸಾದಲ್ಲಿ ಸಭೆ ಸೇರಿದ ಬ್ರಿಟಿಶಾದಿ ತ್ರಿಮೂರ್ತಿಗಳು ಹೇಗೆ ನಿಯಂತ್ರಿಸಯೋಜಿಸುತ್ತಾರೆಂದು ತಿಳಕೊಳ್ಳಲಿಕ್ಕೆ ಅವರು ಕುತೂಹಲಪಡುತ್ತಿದ್ದಾರೆ. ಜರ್ಮನಿಯ ಮೇಲೆಯೇ ಸಮಸ್ತರ ಕಟಾಕ್ಷ.

ಜರ್ಮನಿಯೊಳಗಿನ ಯುದ್ಧ ತಯಾರಿಯು ಅಷ್ಟೇ ಪ್ರಚಂಡವಾದದ್ದಿದೆ. ಹಿಟ್ಲರರಿಗೆ ಯಾರ ದಾಕ್ಷಿಣ್ಯವಿಲ್ಲ; ಯಾರ ಭಯವಿಲ್ಲ. "ಜರ್ಮನ್ ರಾಷ್ಟ್ರವನ್ನು ಸಂಕಟನಾತೆಯಿಂದ ನಡಿಸಿಕೊಳ್ಳಬೇಕು. ೫॥ ಲಕ್ಷ ಸೈನ್ಯ ನಮ್ಮ ಸ್ವದೇಶರಕ್ಷಣೆಗೆ ಬೇಕು. ಮದ್ದುಗುಂಡು, ವಿಮಾನು, ನೌಕಾಬಲ ತಕ್ಕಷ್ಟು ಇಡಲು ನಾವು ಬದ್ಧರಿದ್ದೇವೆ. ರುಶ್ಯರ ಸೈನ್ಯಬಲ ನೋಡಿ ನಾವು ನಮ್ಮ ಬಲದಲ್ಲಿ ಇನ್ನೂ ಹೆಚ್ಚು-ಕಡಿಮೆ ಮಾಡಬಹುದು. ಎಲ್ಲರೂ ಸೈನ್ಯಬಲವನ್ನು ಕುಗ್ಗಿಸಲೊಪ್ಪುವಲ್ಲಿ ಅದೇ ಪ್ರಮಾಣದಿಂದ ನಮ್ಮ ಬಲ ಕುಗ್ಗಿಸಲಡ್ಡಿಯಿಲ್ಲ." ಈ ಪ್ರಕಾರ ಹಿಟ್ಲರರ ಸ್ಪಷ್ಟೋಕ್ತಿಗಳನ್ನು ಕೇಳಿ ಸ್ಯಾಮನ್‌ರು ಬೇಸರಗೊಂಡರಂತೆ! ರುಶ್ಯರೊಡನೆ ಒಪ್ಪಂದ ಮಾಡಿಕೊಳ್ಳಲು

THE INDIAN MERCANTILE INSURANCE CO. LTD.,
BOMBAY.

(Established in 1907)

A Solid and purely Indian Life Office which has substantial growth under the Chairmanship of the late Sir Murmohandas Ramji, Kt.

WANTED Energetic & Influential Agents and experienced Organisers, both on Commission & pay for the Karnatak Districts.

For particulars apply to:-

G. Yellapurkar & Sons,
Chief Agents for Karnatak,
Market Square, KARWAR.

ಇಂಡಿಯನ್ ಮರ್ಕಂಟೈಲ ಇನ್ಶೂರನ್ಸ ಕಂಪನಿ, ಲಿಮಿಟೆಡ್,
ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು.

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿ ಹೊಂದಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಹೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ಪಗಾರ ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆ ಪೇಟೆ, ಕಾರವಾರ.

ಹಿಟ್ಲರರು ಸಿಸ್ಟರಲ್ಲಿ, "ಎಲ್ಲರೂ ಒಕ್ಕಟ್ಟಾಗಿ ನಿಮ್ಮ ವಿರುದ್ಧ ನಿಂತರೆ ನೀವೇನು ಮಾಡುವಿರಿ?" ಎಂದು ಕೇಳಲು, "ಆ ಸ್ಥಿತಿ ಗಂಡಾಂತರಪ್ರದವಾದುದು." ಎಂಬದಾಗಿಯೂ ಉದ್ಗರಿಸಿದರಂತೆ. ಯಾರಿಗೆ ಗಂಡಾಂತರವೆಂಬುದರ ಸಂಗತಿ ಹೇಳುವ ಮುಂಚೆಯೇ ತಿಳಿಯುವ ಹಾಗಿದೆ. ಜರ್ಮನಿಯಲ್ಲಿ ಈಗ ಕಾಯಕಷ್ಟದ ಹೊಸ ವಾಯುಗನ್ನು ತಪ್ಪದೆ ಕಲಿಯಬೇಕಾಗಿ ಲೀಪರ್ಝಿಗ್ ಪರಿಷತ್ತಿನಲ್ಲಿ ನಿರ್ಣಯವಾಗಿದೆ; ೩ ವರುಷಗಳವರೆಗೆ ಎಲ್ಲರೂ ಈ ಕವಾಯತನ್ನು ಕಲಿಯಬೇಕು. ಇದು ಸೈನ್ಯ ಶಿಕ್ಷಣದ ಪೂರ್ವತಯಾರಿ. ಪ್ರೌಢವಯಸ್ಕ, ಸುದೃಢ ಜರ್ಮನರೆಲ್ಲರೂ ಈ ಶಿಕ್ಷಣ ಪಡೆದು ಬೇಕಾದಾಗ ಸೈನಿಕರಾಗಿ ರಣರಂಗಕ್ಕೆ ಹೋಗಲು ಸಿದ್ಧರಾಗುವರು. ೬೫ ವರುಷ ಕಳೆದು ಪೆನ್ಶನು ಪಡೆದ ಮುದುಕರಿಗಾಗಿ ಒಂದು ಹೊಸ ಯೋಜನೆ ತಯಾರಿಸಲಾಗಿದೆ. ಪೆನ್ಶನು ಪಡೆದ ಬಳಿಕ ಒಮ್ಮೆಲೇ ಅವರು ನಿರುದ್ಯೋಗಿಗಳಾದ್ದರಿಂದ ಬೇಗನೆ ಸಾಯುತ್ತಾರೆಂದು ತಜ್ಞರ ಅಭಿಪ್ರಾಯವಾಗಿದೆ. ಆದರಿಂದ ಅವರಿಗೆಲ್ಲ ಸಪೂರ್ತಿಸಿ ಆಯುರ್ದಾಯ ಬೆಳಿಸಿಕೊಂಡು ದೇಶರಕ್ಷಣೆಗೆ ಅವಶ್ಯವಿದ್ದ ಸಾಮಗ್ರಿಗಳನ್ನು ತಯಾರಿಸಿಕೊಳ್ಳುವದಕ್ಕಾಗಿ ಕಾರಖಾನೆಗಳ ಏರ್ಪಾಟಾಗುವದು. ಮುದಿ ಪ್ರಾಯಕ್ಕೆ ತಕ್ಕ ಸಾಮಾನ್ಯ ಶ್ರಮವುಳ್ಳ ಕೆಲಸ ಮಾತ್ರ ಅವರಿಗೆ ಕೊಡಲ್ಪಡುವದು. ಜರ್ಮನರು ಇನ್ನೊಂದು ವರ್ಷದಲ್ಲಿ ಯುದ್ಧಕ್ಕೆ ಸಿದ್ಧರಾಗುವರಾಗಿ ಶಸ್ತ್ರಸನ್ಯಾಸ ಪರಿಷತ್ತಿನ ಸೈನ್ಯ ಇಲಾಖೆಯ ತಜ್ಞರು ಅಭಿಪ್ರಾಯಪಡುತ್ತಾರೆ. ೧೯೩೯ ನೇ ಇಸ್ವಿ ಮಾರ್ಚ ತಿಂಗಳಲ್ಲಿ ಜರ್ಮನ್ ರಾಷ್ಟ್ರದಲ್ಲಿ ಆಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಾದ ಸೈನಿಕರೂ ವೈಮಾನಿಕ ದಳವೂ ತಯಾರಾಗುವದು. ಜರ್ಮನಿಯ ಬಳಿ ಈಗ ೩,೦೦೦ ಕುಶಲ ವಿಮಾನಾಧಿಕಾರಿಗಳಿದ್ದಾರೆ. ಬಾಂಬು ಒಗೆಯುವ ವಿಮಾನುಗಳನ್ನೂ ಅವರು ತಯಾರಿಸಿದ್ದಾರೆ. ಇಷ್ಟು ಭದ್ರವಾದ ಕಾರ್ಯಕ್ಷಮ ವಿಮಾನುಗಳು ಬೇರೆ ಕಡೆ ದೊರೆಯುವ್ವು. ಕಾಡತೂಸುಗಳ ಕಡೆ ಹೊಸ ನಮೂನೆಯ ರೈಫಲು ಇದೆ. ಇದು ಸಣ್ಣ ತೋಫಿನೋಪಾದಿಯಲ್ಲಿದೆ. ಕಳೆದ ಮಹಾಯುದ್ಧದಲ್ಲಿ ಸೈನಿಕರು ಉಪಯೋಗಿಸಿದ ರೈಫಲಿಗಿಂತ ಈ ರೈಫಲಿನ ಪೆಟ್ಟು ಹೆಚ್ಚು, ವೇಗ ಹೆಚ್ಚು. ಇದಕ್ಕೆ ಹಾಕುವ ಕಾಡತೂಸುಗಳನ್ನು ಜರ್ಮನ್ನರು ಬಹು ಅಗ್ಗವಾಗಿ ತಯಾರಿಸುತ್ತಾರೆ. ಫ್ರಾನ್ಸ ದೇಶದಲ್ಲಿ ಕಡಿಮೆ ಪ್ರತಿಯ ಎರಡು ಕಾಡತೂಸುಗಳಿಗೆ ಬೇಳುವಷ್ಟು ಮೊಬಲಗಿನಲ್ಲಿ ಜರ್ಮನರು ಉಚ್ಚ ಪ್ರತಿಯ ೫ ಕಾಡತೂಸುಗಳನ್ನು ತಯಾರಿಸುತ್ತಾರೆ. ಸೈನಿಕರು ದೇಹರಕ್ಷಣೆಗಾಗಿ ಹಾಕಿಕೊಳ್ಳುವ ಚಿಲಖತ್ತನ್ನು ಒಡೆಯಬಲ್ಲ ತುಬಾಕಿಗಳನ್ನೂ ಕಾಡತೂಸುಗಳನ್ನೂ ಇವರು ತಯಾರಿಸುವರಂತೆ. ಇವುಗಳಿಂದ ಎರಡು ಫರ್ಲಾಂಗು ದೂರ ನಿಂತು ಹೊಡೆದರೆ ಚಿಲಖತ್ತನ್ನು ಒಡೆದು ಅದು ಅರ್ಧ ಇಂಚಿನ ತನಕ ಒಳ ಸೇರುವದು. ಇನ್ನೊಂದು ನಮೂನೆಯ ತುಬಾಕಿಯ ಪರಾಕ್ರಮ ಕೇಳಿದರೆ ಮತಿ ಕುಂಠಿತವಾಗುತ್ತದೆ. ಈ ತುಬಾಕಿ ಹಗುರವಾದದು. ಇದಕ್ಕೆ ಎತ್ತು ಸಣವಿಲ್ಲದಿದ್ದರೂ ಪರವೆಯಿಲ್ಲ; ಉಸುಬು ಹಾಕಿ ಕೀಲಿ ಕೊಟ್ಟರಾಯಿತು; ಗುಂಡುಗಳನ್ನು ಇದು ಹಾರಿಸುತ್ತ ಉಳಿಯುತ್ತವೆ. ಜರ್ಮನಿಯವರು ಫ್ರಾನ್ಸ ದೇಶದ ಗಡಿನಾಡಿನ ಪ್ರದೇಶದಲ್ಲಿ ಭದ್ರವಾದ ಕೋಟೆ-ಕೊತ್ತಳಗಳನ್ನು ಏರ್ಪಡಿಸುವ ರಭಸ ನಡಿಸಿರುವರಾಗಿ ಪಾರೀಸದೊಳಗಿನ 'ಇಕೋ ಡಿ ಪೆರೀಸ' ಪತ್ರಿಕೆಯ ಬರ್ಲಿನ್‌ದೊಳಗಿನ ಸುದ್ದಿಗಾರರು ಊಹಿಸುತ್ತಾರೆ. ಅತ್ತ ಕಡೆ ಬೇಟೆಯಾಡಲಿಕ್ಕೆ ಫ್ರೆಂಚ ಮತ್ತು ಸ್ವಿಸ್ ಪ್ರವಾಸಿಕರಿಗೆ ಈ ಮುಂಚೆ ಅಪ್ಪಣೆ ಕೊಡುವ ಪರಿಪಾಠವಿತ್ತಂತೆ. ಈಗ ಆ ಅಪ್ಪಣೆ ರದ್ದಾಗಿದೆ. ಈ ಪ್ರದೇಶದಲ್ಲಿ ಕೋಟೆ ಕಟ್ಟಬಾರದಾಗಿಯೂ ಸೈನ್ಯ ರಾಣ್ಯದ ಏರ್ಪಾಟು ಮಾಡಬಾರದಾಗಿಯೂ, ವರ್ಸಲೀಸ ತಹನಾಮೆಯಲ್ಲಿ ಸ್ಪಷ್ಟವಾದ ಶರ್ತವಿದೆ. ಅದನ್ನು ಹಿಟ್ಲರರು ಉಲ್ಲಂಘಿಸಿ ಅನ್ಯಾಯ ಮಾಡಿದರಾಗಿ 'ಪಾರೀಸ' ಪತ್ರಿಕೆಯ ಆರೋಪ. ಲಂಡನಿನ "ಸಂಡೇ ಎಕ್ಸಪ್ರೆಸ್" ಪತ್ರಿಕೆಯಲ್ಲಿ ಬ್ರಿಟಿಶ ಇಂಜನಿಯರರಾದ ಮಿ| ವಿಲ್ಫ್ರೆಡ್ ಹರೆಡೀನರವರು ಜರ್ಮನಿಯೊಳಗಿನ ಗುಪ್ತ ಸೈನ್ಯ ತಯಾರಿಯನ್ನು ವರ್ಣಿಸಿದ್ದಾರೆ. "ಆ ದಿನ ರವಿವಾರ ಕಂದೀಲ ಬಣ್ಣದ ಉಡಿಗೆ-ತೊಡಿಗೆ ಹಾಕಿಕೊಂಡವನೊಬ್ಬರು ಬಂದು ವಿಮಾನುಗಳಿಂದ ಹಲ್ಲೆಯಾಗುವ ಪ್ರಸಂಗದಲ್ಲಿ ನಾವು ಉಳಿದ ಮನೆಗೂಪ್ತಿದ ನೆಲಮನೆಯೊಳಗೆ ಎಷ್ಟು ಜನರಿಗೆ ಸುರಕ್ಷಿತವಾಗಿ ಅಡಗಿಕೊಂಡು ಉಳಕೊಳ್ಳಬಹುದೆಂದು ಆತ ವಿಚಾರಿಸಿ ನೆಲಮನೆಯ ಅಳತೆಕೊಂಡು ಆತ ಹೋದನು. ಪ್ರತಿಯೊಂದು ಮನೆಯ ನೆಲಮನೆಯನ್ನು ಜರ್ಮನ್ ಸರಕಾರವು ಈ ಪ್ರಕಾರ ಅಳತೆ ಮಾಡಿಕೊಂಡಿರುವದಂತೆ! ಓಬರಹೊಸೆನದೊಳಗಿನ ಕಾರಖಾನೆಯಲ್ಲಿ ಆಟಗಾರಿಕೆಯ ಸಾಮಾನುಗಳು ತಯಾರಾಗುತ್ತಿವೆ. ಇಲ್ಲಿ ಮಕ್ಕಳಿಗೆ ಆಡುವದಕ್ಕಾಗಿ ಸೈನಿಕರ ಗೊಂಬೆಗಳು ತಯಾರಾಗುತ್ತಿವೆ. ಮುಲಹೀಮದಲ್ಲಿ ವಿಮಾನ ಸಾಹಿತ್ಯಗಳು ತಯಾರಾಗುತ್ತಿವೆ. ಇದಲ್ಲದೆ ವಿಮಾನಗಳಿಗೆ ಇಳಕೊಳ್ಳುವದಕ್ಕಾಗಿ ವಿಮಾನು ಠಾಣ್ಯಗಳು ಗುಪ್ತವಾಗಿ ಅಲ್ಲಲ್ಲಿ ತಯಾರಿಸಲ್ಪಡುತ್ತಿವೆ. ನೆಲಮನೆಯನ್ನು ಕಟ್ಟಿಸಿ ವಿಮಾನುಗಳ ಹಾರ್‍ಯಾಟಕ್ಕೆ ಅವಶ್ಯವುಳ್ಳ ಯಾವತ್ತು ಸಾಹಿತ್ಯಗಳು ಇಲ್ಲಿ ಗುಪ್ತವಾಗಿ ಶೇಖರಿಸಲ್ಪಟ್ಟಿವೆ. ಜನಸಾಮಾನ್ಯರಿಗೆ ಕಾಣದಂತೆ ಅಲ್ಲಲ್ಲಿ ಗಿಡಗಂಟೆಗಳನ್ನು ಹಚ್ಚಿದ್ದಾರೆ. ಯಾರಾದರೂ ಈ ಸುದ್ದಿಯನ್ನು ವಿದೇಶಗಳಿಗೆ ತಿಳಿಸಿದಲ್ಲಿ ಅವರಿಗೆ ರಾಜದ್ರೋಹದ ಶಿಕ್ಷೆ ವಿಧಿಸಲ್ಪಡುತ್ತದೆ. ಅವರಿಂದ ಜರ್ಮನಿಯೊಳಗಿನ ಯುದ್ಧ ತಯಾರಿಯ ವಾರ್ತೆಯನ್ನು ಜರ್ಮನ್‌ರು ಹೊರಹಾಕುವದಿಲ್ಲ. ಬೇರೆ ಬೇರೆ ರಾಷ್ಟ್ರಗಳ ಯುದ್ಧ ತಯಾರಿಯನ್ನು ತಿಳಕೊಳ್ಳುವದಕ್ಕಾಗಿ ಅಲ್ಲಲ್ಲಿ ಗುಪ್ತ ಪೋಲೀಸರನ್ನು ಜರ್ಮನಿಯವರು ಕಳುಹಿದ್ದಾರೆ. ಫ್ರಾನ್ಸ ದೇಶದಲ್ಲಿ ಒಸವಲ್ಡ ಎಂಬ ಸುಂದರಿಯು ಸಂಚರಿಸಿ ಜರ್ಮನಿಗೆ ಹೋಗಹೊರಟಿದ್ದಳು. ಫ್ರೆಂಚ ಚಾರರು ಸಂಶಯಪಟ್ಟು ಇವಳಿಗೆ ಸೆರೆಹಿಡಿದಿದ್ದಾರೆ. ದೊಡ್ಡ ದೊಡ್ಡ ಹೊಟೆಲುಗಳಲ್ಲಿ ವಿಲಾಸದಿಂದ ಇವಳು ಉಳಿದಳಂತೆ. ದೊಡ್ಡ ದೊಡ್ಡ ಅಧಿಕಾರಿಗಳ ಸ್ನೇಹಸಂಪಾದನೆ ಮಾಡಿಕೊಂಡು ಸುದ್ದಿಸಂಗ್ರಹ ಮಾಡಿದಳಂತೆ. ಇವರ ಮೇಲಿಂದ ಜರ್ಮನಿಯೊಳಗಿನ ಯುದ್ಧ ತಯಾರಿಯ ಕಲ್ಪನೆ ಬಂದೀತು. ಹಿಟ್ಲರರಿಗೆ ಸಾಮೋಪಚಾರದ ಮಾತು

[ಮುಂದಿನ ಪಾನು ನೋಡಿರಿ.]

ಡಾ॥ ಮುಹಿಷಿಯವರ ಅನುಭವಸಿದ್ಧ ಔಷಧ.

ಡಾ| ಮುಹಿಷಿಯವರು ಕಳೆದ ಮೂವತ್ತು ವರ್ಷಗಳ ಪರಿಶ್ರಮದಿಂದಲೂ, ಅನುಭವದಿಂದಲೂ, ಪ್ರಯೋಗದಿಂದಲೂ ತಯಾರಿಸಿದ ಈ ಕೆಳಗಿನ ಔಷಧಗಳು ಅತ್ಯಂತ ಪರಿಣಾಮಕಾರಿಗಳಾಗಿರುವವೆಂದು ಅವನ್ನು ಉಪಯೋಗಿಸಿದವರೆಲ್ಲರೂ ಅಭಿಪ್ರಾಯಪಡುತ್ತಿರುವರು. ಡಾ| ಮುಹಿಷಿಯವರು ಈ ಅನುಕೂಲವಾದ ಔಷಧಗಳಿಂದಲೇ ಕರ್ನಾಟಕದ ಹಳ್ಳಿಯಲ್ಲಿ ಅತ್ಯಂತ ಲೋಕಪ್ರಿಯರಾಗಿರುವರು.

ಅಶೋಕಾ ಕಾರ್ಡಿಯಲ್:— ಸ್ತ್ರೀಯರ ಮುಟ್ಟಿನ ರೋಗಗಳು ಗರ್ಭಾಶಯದ ಎಲ್ಲ ರೋಗಗಳಿಗೆ ಇದು ದಿವ್ಯೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವದಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅನುಕೂಲ್ಯ ಲಾಭ ಹೊಂದಿರುವರು. ಕ್ರಯ ೧೫. ೧ ೮-೦

ಅಶ್ವಗಂಧ ಟಾನಿಕ್:— ಮಜ್ಜಾ, ಮಾಂಸ, ನರಗಳನ್ನು ಬಲಪಡಿಸುವ ಉತ್ಕೃಷ್ಟ, ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನದೋಷ, ಇಂದ್ರಿಯಶಕ್ತಿಯು, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಜೀರ್ಣ ಮುಂತಾದವುಗಳೆಲ್ಲ ನಷ್ಟವಾಗುವವು ಜಾಣ ತಿಳುತ್ತಕ್ಕದು ದಿವ್ಯೌಷಧ! ರೂ. ೧-೮-೦.

ಎಗ್ಯು ಮಿಕ್ಸ್ಚರ, ಜ್ವರದ ಡ್ರಾಪ್ಸ, ಅಮೃತಧಾರಾ, ಕರ್ಪೂರಾರ್ಕ, ಸಾಯಟರಸ್ ಪಾಚಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸತಕ್ಕ ಔಷಧಿಗಳಾಗಿವೆ! ನಿಕ್ಕಗಟ್ಟಲೆ ಇವುಗಳ ಉಪಯೋಗವಾಗುವದು. ಇವು ಅನುಕೂಲ್ಯ ಔಷಧಗಳು!!

ಇದಲ್ಲದೆ ಮಲೇರಿಯಕಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ-ಮಲೇರಿಯಲ್ ಮಿಕ್ಸ್ಚರ, ಬಾಲಾಮೃತ, ಬ್ಲಡ್ ಮಿಕ್ಸ್ಚರ, ಕಾಲರೇಲ, ಟಿಂ ಮೊಬರ, ಸಾಮ್ಯುಯಲ್ ಕ್ಯಾಲ್ಸಿಲಿಕ್ಸ್ ಫಾಸ್ಪೇಟ, ಪ್ರಮೇಹಬಿಂದ, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಲಂತಿ ರುಪ್ಪ, ಸುಪ್ರಸೂತಿ ಗುಳಿಗೆಗಳೂ ಸಿಕ್ಕುತ್ತ ವ ಕ್ಯಾಟಲಾಗು ಪ್ರತ್ಯೇಕವಾಗಿ ಸಿಗುವದು.

ಡಾ| ದೇವಪ್ಪಾ ಅಯ್ಯಾ ನಾಯಕ, ಕುಮಟಾ ಹೆಡ್ ಆಫೀಸ:—
ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು. ‖ ಸ್ವಾಸ್ಥ್ಯನಿಲಯ, ಧಾರವಾಡ.

ಕಾನಡಾವೃತ್ತ.

ವಿಕ್ರಮ ಯುಗ ೫೦೪ ಚೈತ್ರ ಶು ೧೫, ಸೋಮವಾರ.

ಗ್ರಾಮೋದ್ಧಾರದ ಕ್ರಮ.

ಬಡೋದೆ ಸಂಸ್ಥಾನದ ದಿವಾಣರಾದ ಸರ್ ಟಿ. ವ್ಹಿ. ಕೃಷ್ಣಮಾಚಾರಿಗಳವರು ಅಮರೇಲಿಯೊಳಗಿನ ಗ್ರಾಮೋದ್ಧಾರ ಸಂಘದ ಉದ್ಘಾಟನ ಸಮಾರಂಭದ ಸಮಯ ಆಡಿದ ನುಡಿಗಳು ಮನನೀಯವಿವೆ. ಗ್ರಾಮೋದ್ಧಾರದ ಮೂಲ ತತ್ವಗಳನ್ನು ದಿವಾಣರು ವಿಶದಗೊಳಿಸಿದ್ದಾರೆ:

ಬಡೋದೆಯ ಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪ್ರತಿಯೊಬ್ಬರೂ ಪಡೆಯಲೇ ಬೇಕೆಂದು ಕಾನೂನಿವೆ. ಆ ಶಿಕ್ಷಣಕ್ರಮ ಕಾರಕೂನರನ್ನು ತಯಾರಿಸುವದಲ್ಲ; ಪಟ್ಟಣಗಳ ವ್ಯಾಮೋಹಕ್ಕಾಗಿ ಅದು ಚಿಕ್ಕ ಮಕ್ಕಳಿಗೆ ಹಂಬಲಿಸಹಚ್ಚುವದಿಲ್ಲ. ವಿದ್ಯಾರ್ಥಿಗಳಲ್ಲಿ ಗ್ರಾಮನಿವಾಸದ ಅಭಿರುಚಿಯನ್ನು ಹುಟ್ಟಿಸಿ ಪಟ್ಟಣಗಳ ಕುರಿತು ಒಂದು ಪ್ರಕಾರದ ಬೇಸರವನ್ನು ಹುಟ್ಟಿಸುತ್ತದೆ. ಗ್ರಾಮನಿವಾಸದಿಂದ ಶರೀರದ ಸ್ವಾಭಾವಿಕ ಬೆಳವಣಿಗೆಯಾಗಲನುಕೂಲವಾಗುತ್ತದೆ. ಮಾನಸಿಕ ವಿಕಾಸಕ್ಕೂ ಗ್ರಾಮ ನಿವಾಸದಿಂದ ಅನುಕೂಲತೆಯುಂಟು; ಎಂಬ ಕಲ್ಪನೆಯು ವಿದ್ಯಾರ್ಥಿಗಳಲ್ಲಿ ಒಡಮೂಡಿ ಚಿಕ್ಕಂದಿನಿಂದ ವಿದ್ಯಾರ್ಥಿಗಳು ಗ್ರಾಮದ ಅಭಿಮಾನ ತಳೆಯುತ್ತಾರೆ; ಶಿಕ್ಷಕರು ಇದೇ ಪ್ರಕಾರದ ವಾತಾವರಣವನ್ನು ಹಳ್ಳಿಗಳಲ್ಲಿ ಹಬ್ಬಿಸುತ್ತಾರೆ. ಹಳ್ಳಿಗರ ಮುಖ್ಯ ವ್ಯವಸಾಯವೆಂದರೆ ಬೇಸಾಯ. ತಕ್ಕ ಮಟ್ಟಿಗೆ ೩ ತಿಂಗಳು ಕೆಲಸ, ಉಳಿದ ೯ ತಿಂಗಳು ಸೋಮಾರಿತನದಿಂದ ಕಳೆಯಬೇಕಾಗುತ್ತದೆ. ಸೋಮಾರಿತನದಿಂದ ಕ್ಷೇಮವಿಲ್ಲ. ಮನುಷ್ಯನು ನಿರುದ್ಯೋಗಿಯಾದರೆ ಕುಕಲ್ಪನೆಗಳು ತಲೆದೋರಿ ಆತನು ಕುಕರ್ಮಗಳಿಗೆ ಪ್ರವೃತ್ತನಾಗುತ್ತಾನೆ. ಕೋರ್ಟ-ಕಚೇರಿಗಳೊಳಗಿನ ವ್ಯಾಜ್ಯ, ಜಗ್ಗಾಟಗಳಿಂದಾಗಿ ಗ್ರಾಮನಿವಾಸಿಗಳು ಕಷ್ಟ-ನಷ್ಟಗಳಿಗೀಡಾಗುತ್ತಾರೆ. ಮಾನವನು ಉದ್ಯೋಗಿಯಾದರೆ ಇಂಥ ಪ್ರಸಂಗಗಳು ಘಟಿಸಲವಕಾಶವಾಗದು. ನಿರುದ್ಯೋಗಿಗಳಿಗೆ ಉದ್ಯೋಗ ಪೂರೈಸುವದು ಪವಿತ್ರವಾದ ರಾಜಧರ್ಮ. ಪ್ರಜಾ ಸೌಕರ್ಯಗಳನ್ನು ದೇಶ-ಕಾಲ-ಪರಿಸ್ಥಿತಿಗನುರೂಪವಾಗಿ ನಿರ್ಮಿಸಿ ಸಮಸ್ತ ಪ್ರಜಾವರ್ಗದ ಅಭ್ಯುದಯ ಮಾಡುವದೇ ಪರಮ ಶ್ರೇಷ್ಠವಾದ ರಾಜಧರ್ಮವಿದೆ. ಪರಿಸ್ಥಿತಿಯನ್ನು ಲಕ್ಷಿಸದೆ ನಿಶ್ಚಿತ ತೆರಿಗೆಯನ್ನು, ನಿಷ್ಠುರತನದಿಂದ, ನಿಶ್ಚಿತ ಅವಧಿಯೊಳಗೆ ವಸೂಲ ಪಡೆದು ಕೋಶ ತುಂಬಿಕೊಂಡು, ಲೋಕಮತ ಲಕ್ಷಿಸದೆ ಖರ್ಚು ಮಾಡುವದು ರಾಜಧರ್ಮವಲ್ಲ; ಲೋಕಕಂಟಕ ವ್ಯಾಪಾರವದು. ಬಡೋದೆಯ ಮಹಾರಾಜರು ಅಲ್ಲಲ್ಲಿ ಗ್ರಾಮೋದ್ಧಾರ ಸಂಘಗಳನ್ನೇರ್ಪಡಿಸಿ ಬೇಸಾಯಗಾರರಿಗೆ ಗ್ರಾಮಗಳಲ್ಲಿಯೇ ಉದರನಿರ್ವಹವಾಗುವಂತೆ ಏರ್ಪಾಟು ಮಾಡಿದ್ದಾರೆ. ನೇಯ್ಗೆ, ಗೌಳಿಗತನ, ಕೋಳಿ ಸಾಕುವದು, ರೇಶಿಮೆ ಹುಳ ಸಾಕುವದು, ಜೇನು ಸಾಕುವದು ಮೊದಲಾದ ಉದ್ದಿಮೆಗಳಿಂದ ಬೇಸಾಯಗಾರರಿಗೆ ನಿರುದ್ಯೋಗದ ಸಮಯದಲ್ಲಿ ಉದ್ದಿಮೆ. ಕಲ್ಪಿಸಿಕೊಡೋಣಾಗಿದೆ ಇದಲ್ಲದೆ ಸಹಕಾರಿ ಸಂಘ, ಗ್ರಾಮ ಪಂಚಾಯತ, ಔದ್ಯೋಗಿಕ ಇಲಾಖೆ, ಬೇಸಾಯ ಇಲಾಖೆ, ಮೊದಲಾದವುಗಳನ್ನೇರ್ಪಡಿಸಿ ಬೇಸಾಯಗಾರರ ಕಲ್ಯಾಣವಾಗುವಂತೆ ಸಂಸ್ಥಾನಿಕರು ಏರ್ಪಾಟು ಮಾಡಿದ್ದಾರೆ. ಪ್ರತಿ ಇಲಾಖೆಯವರು ಸರಕಾರಕ್ಕೆ ರಿಪೋರ್ಟು ಮಾಡಿ ತಮ್ಮ ಇಲಾಖೆಯಿಂದ ಬೇಸಾಯಗಾರರಿಗಾದ ಹಿತದ ಪರಿಮಾಣವನ್ನು ತಿಳಿಸಬೇಕು. ಸ್ವತಃ ಮಹಾರಾಜರವರು ಗ್ರಾಮೋದ್ಧಾರ ಕೇಂದ್ರಗಳಲ್ಲಿ ಸಂಚರಿಸಿ ಇವುಗಳಿಂದಾಗುವ ಲೋಕೋಪಕಾರವನ್ನು ಗ್ರಹಿಸಿಕೊಳ್ಳುತ್ತಾರೆ.

ಈ ವಾರ್ತೆ ಸ್ವಾಗತ ನಮಗೆ ಆನಂದವಾಗಿದೆ. ಬೊಂಬಾಯಿ ಸಂಸ್ಥಾನದಲ್ಲಿ ಪ್ರಾಥಮಿಕ ಶಾಲೆ ಇಲ್ಲದ ಒಂದು ಸಹ ಗ್ರಾಮವಿಲ್ಲವಾಗಿ ಪ್ರಕಟವಾಗಿದೆ. ಇಂಥ ಉಪಕ್ರಮಗಳು ನಿಜವಾಗಿಯೂ ಅಭಿನಂದನೀಯವಿವೆ; ಅನುಕರಣೀಯವಿವೆ. ಸಾರ್ವಭೌಮ ಬ್ರಿಟಿಶ ಸರಕಾರವು ಈ ಉಪಕ್ರಮಗಳನ್ನು ಸ್ವೀಕರಿಸಿದರೆ ಬೇಸಾಯಗಾರರಿಗೆ ಅಪಾರವಾದ ಉಪಕಾರವಾಗುವಂತಿದೆ. ಬೇಸಾಯಗಾರರು ಭೂಮಿಯ ಉತ್ಪತ್ತಿಯಿಂದ ಹೊಟ್ಟೆ ತುಂಬಿಕೊಳ್ಳಲಾರರೆಂಬ ಸಂಗತಿ ಈಗ ಸಿದ್ಧವಾದದ್ದು ಬೇಸಾಯಗಾರರ ಬಡತನದಿಂದ ಇಲ್ಲಿಯ ಭೂಮಿಗೆ ತಕ್ಕ ಬಾಗಾಯತು ಮುಟ್ಟಿಸಲಿಕ್ಕಾಗದೆ ಭೂಮಿಯ ಉತ್ಪತ್ತಿ ಬಹಳ ಕುಗ್ಗಿದೆ. ಇಂಗ್ಲಂಡ ದೇಶದಲ್ಲಿ ಒಂದು ಎಕರೆ ಭೂಮಿಗೆ ಸರಾಸರಿ ೨ ಸಾವಿರ ರತ್ತಲು ಗೋಧಿ ಬೆಳೆಯುತ್ತದೆ; ಅದೇ ನಮ್ಮ ಹಿಂದುಸ್ಥಾನದಲ್ಲಿ ಒಳೇ ೬ ನೂರು ರತ್ತಲು ಬೆಳೆಯುತ್ತದೆ. ಸಂಯುಕ್ತ ಪ್ರಾಂತದಲ್ಲಿ ಸೇರಿದ ಪ್ರಾಂತಿಕ ಸಹಕಾರಿ ಪರಿಷತ್ತಿನ ಅಧ್ಯಕ್ಷರು ಬೇರೆ ಬೇರೆ ದೇಶಗಳ ಉತ್ಪತ್ತಿಯ ಅಂಕಿ ಕೊಟ್ಟು ನಮ್ಮ ಹಿಂದುಸ್ಥಾನ ದೇಶದ ಸ್ಥಾನವು ಕೊನೆಯದೆಂದು ನುಡಿಗಿದರು. ಹೀಗಾಗುವದು ನಿಜವಾಗಿಯೂ ಶೋಚನೀಯವಿದೆ. ಹಿಂದುಸ್ಥಾನವು ಒಕ್ಕಲತನದ ದೇಶವೆಂದು ಬ್ರಿಟಿಶರು ಲೋಕದಲ್ಲಿ ಡಂಗುರ ಸಾರುತ್ತಾರೆ. ಒಕ್ಕಲತನದ ದೇಶದಲ್ಲಿ ಒಕ್ಕಲತನದ ಪರಮಾವಧಿಯ ಲಾಭ ಸಿಗುವ ಯೋಜನೆ ಇರಬೇಕು. ಒಕ್ಕಲಿಗರಿಗೆ ಇಡೀ ವರುಷ ಕಾಲುವನ್ನು ಉದ್ಯೋಗ ದೊರೆತಲ್ಲಿ ಒಕ್ಕಲಿಗರು ಸಂಪನ್ನರಾಗಿ ಭೂಮಿಯ ಉತ್ಪತ್ತಿಗೆ ಅವಶ್ಯವುಳ್ಳ ಸಿಚನ್ನು ಪೂರೈಸಿ ಒಕ್ಕಲತನದಿಂದ ವಿಶೇಷ ಲಾಭ ಹೊಂದುವರು. ಸಂಸ್ಥಾನಿಕರಂತೆ ಹಿಂದುಸ್ಥಾನ ಸರಕಾರವೂ, ಪ್ರಾಂತಿಕ ಸರಕಾರಗಳೂ ಈ ವಿಷಯದಲ್ಲಿ ಮನಮುಟ್ಟಿ ಧಾವತಿ ಮಾಡಿ ಗ್ರಾಮೋದ್ಧಾರದ ಕ್ರಮವನ್ನೇರ್ಪಡಿಸಿ ಕೀರ್ತಿ ಪಡೆಯುವವೇನು?

ಗುಪ್ತ ಆಪ್ತಾಲೋಚನೆ.

[ನಿರೀಕ್ಷಕನು ಬರೆದುದು.]

(ಹಿಂದಿನ ವಾರದಿಂದ ಮುಂದರಿಸಿದ್ದು.)

ಕಥೆ ನಡಿಸಲಿಕ್ಕೆ ಸಾಧ್ಯವಿಲ್ಲವಾಗಿ ಮಿ| ಬ್ರೇಲ್ಸ ಫರ್ಡರವರ ಅಂಬೋಣ. ಜರ್ಮನಿಯೊಳಗಿನ ಕ್ರಿಶ್ಚಿಯನ್ನ ಸಿಪಾಯಿಗಾರರು ಯುದ್ಧ ಸಾಮಗ್ರಿ ತಯಾರಿಸಿ ಮುನಾಫೆ ಹೊಡೆಯುವವರು. ಅವರಿಗೆ ನಿಯಂತ್ರಣದ ಅಧಿಕಾರವು ಬಿಟ್ಟಿರಲಿಲ್ಲ. ಅದರಿಂದ ಹಿಟ್ಲರರು ಮಾರ್ಕಸನ್ನು ಸ್ವೀಕರಿಸಬೇಕಾಗಿದೆಂದು ಮಿ ಬ್ರೇಲ್ಸ ಫರ್ಡರವರು ಅಭಿಪ್ರಾಯಪಡುತ್ತಾರೆ.

ಫ್ರಾನ್ಸ ದೇಶದ ತಯಾರಿಯೂ ಅಷ್ಟೇ ರಭಸದಿಂದ ನಡೆದಿದೆ. ಮೊನ್ನೆ ೧೨ನೇ ತಾರೀಖಿಗೆ ೬೦ ಸಾವಿರ ಸೈನಿಕರು ನಿವೃತ್ತರಾಗುವವರಿದ್ದರು. ಅವರಿಗೆ ಪೆನ್ಶನ ಕೊಡಬಾರದಾಗಿ ಫ್ರೆಂಚ ಪ್ರಧಾನ ಮಂಡಳವು ನಿರ್ಧರಿಸಿದೆ. ಯುದ್ಧ ಸಾಮಗ್ರಿಗೆ ಅವಶ್ಯವುಳ್ಳ ಸಾಮಾನನ್ನು ವಿದೇಶಕ್ಕೆ ರಫ್ತು ಮಾಡಬಾರದಾಗಿ ಹುಕುಮುಗಳು ಹೊರಟಿವೆ. ಫ್ರೆಂಚರ ಕಡೆ ೫೦೦೦ ವೈಮಾನಿಕರಿದ್ದಾರೆ ರಶಿಯಾ ದೇಶದೊಡನೆ ತಹನಾಮೆ ಮಾಡಿಕೊಂಡು ಜರ್ಮನಿಗೆ ಮುತ್ತಿಗೆ ಹಾಕಿ ಇತ್ತ-ಇತ್ತ ಸರಿದಾಡಗೊಡದಂತೆ ಫ್ರೆಂಚ-ರಶಿಯಾ ದೇಶಗಳೊಳಗೆ ಹೊಸ ತಹನಾಮೆಯಾಗಿದೆ. ರಾಷ್ಟ್ರ ಸಂಘದ ಇಂದಿನ ಸಭೆಯನ್ನು ತೀರಿಸಿಕೊಂಡು ಫ್ರೆಂಚ ಪರರಾಷ್ಟ್ರೀಯ ಪ್ರಧಾನರಾದ ಎಮ್. ಲಾವಲರವರು ಮಾಸ್ಕೋ ಪಟ್ಟಣಕ್ಕೆ ಚಿತ್ತೈಸುವವರಿದ್ದಾರೆ. ತಮ್ಮೊಡನೆ ಫ್ರೆಂಚರಂತೆ ಬ್ರಿಟಿಶರು ಒಪ್ಪಂದ ಮಾಡಿಕೊಳ್ಳಬೇಕಾಗಿ ರುಶ್ಯರ ಇಚ್ಛೆಯಿದ್ದ, ಬ್ರಿಟಿಶರ ನಿಷ್ಕಪಟದಿಂದಲೂ, ನಿರ್ಧಾರ ಕ್ರೌರ್ಯದಿಂದಲೂ ನಡಕೊಳ್ಳುವದಿಲ್ಲವಾಗಿ ಮಾಸ್ಕೋದೊಳಗಿನ ಪತ್ರಿಕೆಗಳು ಬ್ರಿಟಿಶರ ಮೇಲೆ ಆಕ್ಷೇಪಿಸುತ್ತವೆ. ಬ್ರಿಟಿಶರ ಇಂಥ ನಡತೆಯಿಂದ ಜರ್ಮನರು ಸೊಕ್ಕೇರಿದವರಾಗಿಯೂ ದುರ್ಮಾರ ಆರೋಪ. ಮಾಸ್ಕೋದೊಳಗಿನ 'ಇಜ್ವೆಸ್ತಿಯಾ', 'ಪ್ರಾವ್ದಾ' ಮೊದಲಾದ ಪತ್ರಿಕೆಗಳು ಸರ್ ಜಾನ್ ಸೈಮನರ ಚಂಚಲ ವೃತ್ತಿಯನ್ನು ಸಂತಪ್ತವಾಗಿ ಟೀಕಿಸುತ್ತವೆ. ಇತ್ತ ಜರ್ಮನಿಯು ಬ್ರಿಟಿಶ ಧೋರಣವನ್ನೇ ನಿರೀಕ್ಷಿಸುತ್ತಿರುವದಾಗಿ ಬರ್ಲಿನ್ನದೊಳಗಿನ 'ರ್ಯೂಟರ' ವಾರ್ತಾವಾಹಕರ ತಂತಿ ರಾಷ್ಟ್ರಸಂಘವು ಶಾಂತತೆಯನ್ನು ಸ್ಥಾಪಿಸುವೆನ್ನುವ ಬಯಸುವಾಗಬೇಕಾದರೆ ಜರ್ಮನಿಗೆ ಅಲಕ್ಷ್ಯ ಮಾಡಿ ಸಾಧ್ಯವಿಲ್ಲವಂತೆ. ಸ್ಟ್ರೆಸಾ ಪರಿಷತ್ತಿನ ಸಮಯದಲ್ಲಿ ಫ್ರೆಂಚ ಸರಕಾರವು ರುಶ್ಯರೊಡನೆ ಸ್ವತಂತ್ರವಾಗಿ ತಹನಾಮೆ ಮಾಡಿಕೊಂಡು ಬ್ರಿಟಿಶರಿಗೆ ತಮ್ಮ ಜಾಲದಲ್ಲಿ ಸೇರಿಸಿಕೊಳ್ಳುವ ಕುಹಕ ನಡಿಸಿದ್ದು ಶುಭ ಲಕ್ಷಣವಲ್ಲವಾಗಿ ಬರ್ಲಿನ್ನದೊಳಗಿನ 'ಎಂಗ್ರಿಫ' ಪತ್ರಿಕೆಯ ಅಭಿಪ್ರಾಯ.

ಇಟಾಲಿ-ಹಬಶಿ ದೇಶಗಳೊಳಗಿನ ವಿವಾದವು ಬಗೆಹರಿಯಲೊಲ್ಲದು. ಹಬಶಿ ದೇಶದವರು ರಾಷ್ಟ್ರ ಸಂಘಕ್ಕೆ ಈ ಕಲಹವನ್ನು ಪರಿಹರಿಸಬೇಕಾಗಿ ಬಿನ್ನೈಸಿಕೊಂಡಿದ್ದರು. ಆದರೆ ಈ ಹೊತ್ತು ಸೇರಲಿಕ್ಕಿದ್ದ ಕಾರ್ಯಕ್ರಮಪತ್ರಿಕೆಯಲ್ಲಿ ಅದನ್ನಿಡಬಹುದಿಲ್ಲವಾಗಿ ರಾಷ್ಟ್ರಸಂಘದ ಕಾರ್ಯದರ್ಶಿಗಳು ಹಬಶಿ ಸರಕಾರಕ್ಕೆ ತಿಳಿಸಿದ್ದಾರೆ. ವಿವಾದ ಪ್ರದೇಶ ಉಸುಕಿನ ಬಯಲಾಗಿದ್ದು ಖನಿಜ ಸಂಪತ್ತಿನಿಂದ ತುಂಬಿರುತ್ತದಾಗಿ ಆ ಪ್ರದೇಶ ನೋಡಿಬಂದ ಇಜಿಪ್ತ ದೇಶದ ಇಂಜನಿಯರರಾದ ಸಲೀಬೇಯವರು ಪ್ರಕಟಿಸುತ್ತಾರೆ. "ಈ ಪ್ರದೇಶದಲ್ಲಿ ಸಂಗ್ರಾಮ ಮಾಡುವದು ತೀರ ಕಷ್ಟವಾದುದು. ೩೦೦ ಮೈಲುಗಳ ತನಕ ಮರುಭೂಮಿಯಲ್ಲಿ ಕೂಚ ಮಾಡಬೇಕು. ಮುಸೊಲಿನಿಯವರು ಸೈನಿಕರಿಗಾಗಿ ಅಲ್ಲಲ್ಲಿ ಆರವಟ್ಟಿಗೆಗಳನ್ನು, ಸಿಲ್ಯಾಣಗಳನ್ನು ಕಟ್ಟಿಸಬೇಕಾದೀತು. ಹಾದಿಯಲ್ಲಿ ದೊಡ್ಡದೊಡ್ಡ ಹಾವುಗಳು ಹುತ್ತುಗಳಿವೆ.

ತರತರದ ಕ್ರಿಮಿ-ಕೀಟಕಗಳ ಬಾಧೆಯಿದೆ. ಆದಾಗ್ಯೂ ಮುಸೊಲಿನಿಯವರು ಬೇಕಷ್ಟು ಹಣ ಖರ್ಚು ಮಾಡಲು ಸಿದ್ಧರಿದ್ದಾರೆ ಯಾಕಂದರೆ ಈ ಪ್ರದೇಶದಲ್ಲಿ ಚಿನ್ನ, ಬೆಳ್ಳಿ, ತಾಮ್ರ, ಪ್ಲೆಟಿನಮ್ ಮೊದಲಾದ ಖನಿಜಗಳು ವಿಪುಲವಿವೆ. "ಆ ಕಾಸುಗಳಲ್ಲಿ ನಾವೂ, ನಮ್ಮ ಪರಿವಾರದವರೂ ೩|| ರತ್ತಲು ಚಿನ್ನವನ್ನು ತೆಕ್ಕಿಕೊಂಡೆವು. ಉಸುಬು ತಂದು ನೈಲ ನದಿಯ ನೀರಿನಲ್ಲಿ ತೊಳೆದೊಡನೆ ಚಿನ್ನ ಸಿಗುತ್ತದೆ." ಇದಕ್ಕಾಗಿಯೇ ಮುಸೊಲಿನಿಯವರು ಹಬಸಿ ಸರಕಾರದೊಡನೆ ಕಾಲು ಕೆದರಿ ಜಗಳ ಹೂಡುತ್ತಿದ್ದಾರೆ. ಹಬಸಿ ಸರಕಾರವಾದರೂ ಇದಕ್ಕಾಗಿಯೇ ಸರ್ವಸ್ವವನ್ನೂ ತೊರೆದು ಯುದ್ಧ ಮಾಡಲು ಸಿದ್ಧವಾಗಿದೆ. ಹಬಸಿ ಪ್ರದೇಶದ ಮೇಲೆ ಇಟಾಲಿಗೆ ಸಾರ್ವಭೌಮತ್ವ ಸಿಗಬಾರದೆಂದು ಬ್ರಿಟಿಶ ಮುತ್ಸದ್ದಿಗಳು ಪ್ರಯತ್ನ ಮಾಡುವ ಕಾರಣವೂ ಇದೇ. ಹಬಸಿ ದೇಶವು ಇಟಾಲಿಯ ಪಾರುಪತ್ಯಕ್ಕೊಳಪಟ್ಟರೆ ಕೆಂಪು ಸಮುದ್ರದ ಮೇಲಿನ ಆಧಿಪತ್ಯಕ್ಕೂ ಸಹ ಅಂಶ್ಯವಾಗಿ ಮುಂದೆ ತೊಂದರೆಯಾಗುವ ಸಂಭವವಿದೆ. ಯುಗಾಂಡಾ, ಕೆನಿಯಾ ಮತ್ತು ಸೂಡಾನ ಮೊದಲಾದ ಬ್ರಿಟಿಶ ವಸಾಹತುಗಳಿಗೆ ಪೆಟ್ಟು ತಗಲುವಂತಿದೆ. ಇಷ್ಟು ಹಬಸಿ ಪ್ರಕರಣವು ಮಹತ್ವದ್ದಿದ್ದಾಗ್ಯೂ ಮುಸೊಲಿನಿಯವರು ಇತ್ತ ಕಡೆ ಕೂಚು ಮಾಡಹೊರಟ ಸೈನಿಕರಿಗೆ ತೊರೆದಬಾರದಾಗಿ ಫಕ್ಕನೆ ಹುಕುಮನ್ನು ಹೊರಡಿಸಿರುವರಾಗಿಯೂ ವಾರ್ತೆ.

ಇಂಥ ಮತ್ಸರಸಾಮ್ರಾಜ್ಯದಲ್ಲಿ, ಗುಪ್ತಾಲೋಚನೆಗಳಲ್ಲಿ ನಿಶ್ಚಯವಾದ ಒಂದು ಸಿದ್ಧಾಂತವನ್ನು ನಾನು ಹೇಗೆ ಪ್ರತಿಪಾದಿಸಲಿ? ಬ್ರಿಟಿಶ ಸಾಮ್ರಾಜ್ಯ ಸರಕಾರಕ್ಕೆ ಜರ್ಮನ್ ಧೋರಣದ ವ್ಯಾಪ್ತಿಯೇ ಇನ್ನೂ ಗ್ರಹಿಕೆಯಾಗಲಿಲ್ಲವಂತೆ! ಆ ಧೋರಣದ ಧ್ಯೇಯವೇನು? ಎಂಬದನ್ನು ಅವರು ಪುನರಾಲೋಚಿಸಿ ತಮ್ಮ ಮುಂದಿನ ಧೋರಣವನ್ನು ಕಲ್ಪಿಸುವರಾಗಿ ಗುರುವಾರ ಲಂಡನಿನಿಂದ ವಾರ್ತೆ. ಮುತ್ಸದ್ದಿಗಳೇ ಈ ಪ್ರಕಾರ ಚಂಚಲಮನಸ್ಕರಾಗಿ ಸಂಕಟಗ್ರಸ್ತರಾಗಿರುವಾಗ ನಿರೀಕ್ಷಕನು ಏನು ಹೇಳಬಲ್ಲನು?

ವಾರ್ತೆಗಳು.

— ಕರಾಚಿ ಗೋಳಿಬಾರ ಪ್ರಕರಣದಲ್ಲಿ ಚೌಕಶಿ ಮಾಡುವದಕ್ಕಾಗಿ ಕರಾಚಿಯ ಪ್ರಮುಖರು ಶ್ರೀ|| ಜಯಕರ, ನರಿಮಾನ, ಜಮಶೇಟ ಮೇಹತಾ, ಡಾ|| ಚೊಯಿಥರಾಮ ಗಿಡ್ವಾನಿ, ಸರ್ ಮೌಲ್ವಿ ಅಬ್ದುಲ್ ರಹಿಮಾನರವರ ಮಂಡಳವೊಂದನ್ನು ನೇಮಿಸಿದ್ದಾರೆ. ಪಾಟಣಾ ಪಟ್ಟಣದಲ್ಲಿ ರೌಪ್ಯ ಮಹೋತ್ಸವ ಸಮಾರಂಭಗಳನ್ನು ಬಹಿಷ್ಕರಿಸಿ ಸರಕಾರದ ನಿಷೇಧ ಮಾಡಬೇಕಾಗಿ ಆಲೋಚನೆ ನಡೆದಿದೆ. ಮುಂಬಯಿ ಕಾಯಿದೆ ಕೌನ್ಸಿಲಿನ ಇನ್ನೊಬ್ಬ ಸಭಾಸದರಾದ ಮಿ|| ಮಹಮ್ಮದ ಹಶೀಮ ಗಝ್ದರರವರು ರಾಜಿನಾಮೆ ಕೊಟ್ಟಿರುತ್ತಾರೆ.

— ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ಪಂಜಾಬ ಪ್ರಾಂತದಲ್ಲಿ ಸಂಚಾರ ಮಾಡುತ್ತಿದ್ದಾಗ ದಮ್ಮಿನ ವಿಕಾರದಿಂದ ಅಸ್ವಸ್ಥರಾದ ಮೂಲಕ ನಿರುಪಾಯವೇ ಸಂಚಾರ ಕಾರ್ಯಕ್ರಮವನ್ನು ರದ್ದುಪಡಿಸಿ ಬಿಹಾರ ಪ್ರಾಂತಕ್ಕೆ ತೆರಳಿದ್ದಾರೆ. ರಾಷ್ಟ್ರಪತಿಗಳಿಗೆ ಶೀಘ್ರವೇ ಆರೋಗ್ಯ ಪ್ರಾಪ್ತಿಯಾಗಲೆಂದು ಪ್ರಾರ್ಥನೆ.|

— ಕರ್ನಾಟಕ ಪ್ರಾಂತಿಕ ಪರಿಷತ್ತನ್ನು ಇದೇ ಬರುವ ಮೇ ತಾ. ೯-೧೦-೧೧ನೇಗೆ ಸೇರಿಸಬೇಕಾಗಿ ಈಗ ನಿಶ್ಚಯವಾಯಿತು. ಅದನ್ನು ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ಉದ್ಘಾಟನೆ ಮಾಡುವರಾಗಿ ಮಂಗಳೂರಿನಿಂದ ಸ್ವಾಗತ ಸಮಿತಿಯವರ ಪ್ರಕಟಣೆ ಹೊರಟಿದೆ.

— ಸೌ| ಕಮಲಾ ನೆಹರೂವರಿಗೆ ಔಷಧೋಪಚಾರಕ್ಕಾಗಿ ಯುರೋಪ ಖಂಡದೊಳಗಿನ ಆರೋಗ್ಯ ಧಾಮಕ್ಕೆ ಒಯ್ಯಬೇಕಾಗಿ ನಿಶ್ಚಯವಾಗಿದೆ. ಅತ್ತೆಯಂದಿರಾದ ಶ್ರೀ| ಸ್ವರೂಪರಾಣಿ ನೆಹರೂರವರು ವ್ಯವಸ್ಥೆಯ ಕುರಿತು ಆಲೋಚನೆ ಮಾಡಲು ಭೋವಾಲಿಗೆ ಹೋಗಿರುತ್ತಾರೆ.

— ಅಮೇರಿಕೆಯ ಸರಕಾರದವರು ಲೋಕೋಪಕಾರದ ಖಾತೆಗಳಿಗಾಗಿ ಒಂದು ಖರ್ವ, ಐದು ಅಬ್ಜ ರೂಪಾಯಿಗಳನ್ನು ಖರ್ಚು ಮಾಡುವ ಸಂಕಲ್ಪ ಮಾಡಿದ್ದಾರೆ. ಹಿಂದುಸ್ಥಾನದಲ್ಲಿ ೩೦ ಕೋಟಿ ರೂಪಾಯಿಗಳು ಖರ್ಚಾಗುತ್ತಿವೆ. ಅಮೇರಿಕೆಯ ಲೋಕಸಂಖ್ಯೆ ಹಿಂದುಸ್ಥಾನದ ಅರ್ಧದಷ್ಟು. ಇಲ್ಲಿಯ ರಾಜ್ಯಾಧಿಕಾರಿಗಳು ತಮ್ಮ ಕರ್ತವ್ಯವನ್ನು ಎಷ್ಟರ ಮಟ್ಟಿಗೆ ನಡಿಸುತ್ತಾರೆಂದು ತಿಳಿಯುವಂತಿದೆ.

— ಸೊಲ್ಲಾಪುರದಲ್ಲಿ ರೌಪ್ಯ ಮಹೋತ್ಸವ ನಿಧಿಯನ್ನು ಅಧಿಕಾರಿಗಳು ಬಲಾತ್ಕಾರದಿಂದ ವಸೂಲ ಮಾಡುತ್ತಾರೆ ಇಂತಿಷ್ಟು ರಕಮು ಕೊಡಲೇಬೇಕೆಂದು ಅಧಿಕಾರಿಗಳು ಮ್ಯುನಿಸಿಪಾಲಿಟಿಯ ಶಿಕ್ಷಕರಿಂದ ರೂಪಾಯಿಗೆ ಅರ್ಧಾಣೆಯಂತೆ ಉತ್ಸವ ತೆರಿಗೆ ಅಂಗಡಿಗೆ ಹೋಗಿ ಪಟ್ಟಿಯನ್ನು ವಸೂಲ ಮಾಡುತ್ತಾರೆ.

ಹೊನ್ನಾವರ— ರಾಜನವಮಿಯ ರಥೋತ್ಸವವು ಸಾಂಗವಾಗಿ ನೆರವೇರಿತು. ಇದೇ ಸಮಯ ಪೇಟೆಗೆ ಬಂದಿದ್ದವರಿಂದ ಪೋಲೀಸರು ಹಿಂದುಗಳಿಗೂ, ಮುಸಲ್ಮಾನರಿಗೂ ಕಾಲುಮಾರ್ಗದ ತಕರಾರು [illegible] ಇದರಿಂದ ಇತ್ತಿತ್ತಲಾಗಿ ಶಾಂತಿಯಾಗುವ ಸಂಭವವು [illegible].

ಮ್ಯುನಿಸಿಪಾಲಿಟಿಯಲ್ಲಿ ಬೀಲ [illegible] ಮುಂತಾದವುಗಳನ್ನು ಮಾರ್ಕೆಟ್ಯಲ್ಲಿ ಹಾಕಿಟ್ಟು ನೌಕರರ ಜಪ್ತಿ [illegible] ಕೇಳುತ್ತಿದ್ದಾರೆ. ಮ್ಯುನಿಸಿಪಲ್ ನೌಕರರು [illegible] ಹಣ [illegible] ಸಂಶಯ [illegible] ಏನು!

[illegible] ಗ್ರಾಮದ ಕೃಷಿಕರು [illegible] — ಈಗ ೫-೬ ತಿಂಗಳಿಂದ [illegible], [illegible], [illegible], [illegible], [illegible] ಹಳ್ಳಿಗಳಲ್ಲಿ [illegible] ಆಗಿದೆ. [illegible] ಆನೆಗಳು [illegible] ತೋಟಗಳನ್ನು [illegible]. ಆನೆಗಳು [illegible] ನೋಡಿ "ಕಲ್ಲುಗಳು ಸಹ ಕರಗುತ್ತಿವೆ! ವಜ್ರದ ಹೃದಯವು ಸಹ ಒಡೆಯುತ್ತಿದೆ!" ಈ ಬಗ್ಗೆ ಸಂಬಂಧದಲ್ಲಿ [illegible] ಇಲ್ಲ! ಹಿಂದೆ ಆನೆ [illegible]. ಆದರೆ, ಅವನಿಗೆ [illegible] ೧೦ ರೂ. [illegible] ಸಾಧ್ಯವಿಲ್ಲೆಂದು [illegible]; [illegible] ಕಚೇರಿಯಲ್ಲಿ [illegible] ಕಷ್ಟವಾಗುವಾಗ ಅವರಿಗೆ ನೆರವಾಗುವದು ಸರಕಾರದ ಕರ್ತವ್ಯವಲ್ಲವೇ? ಸರಕಾರದವರು ದುರ್ಲಕ್ಷ ಮಾಡಿದರೆ ರೈತರು ಬಾಳುವೆಯುವದು ಹೇಗೆ? [illegible] ಅವರ ಕೃಷಿಯ [illegible] ಏನು? ಸರಕಾರಕ್ಕೆ [illegible] ದಲ್ಲಿಂದ? ಇವೆಲ್ಲ ವಿಚಾರ ಮಾಡಿ ಅಧಿಕಾರಿಗಳು ಅನ್ಯಾಯದ ಕಾನೂನಿಗಳ ಉದ್ಧಾರ [illegible] ಯೋಗ್ಯ [illegible] ಯೋಜನೆ ಮಾಡುವರೇ?

The Canara Industrial & Banking Syndicate, Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Head Office:— **Mukund Nivas, UDIPI.**

Branches:— Udipi, Bangalore City, Mangalore, Payyanur, Cannanore, Brahmavar, Honnavar, Karwar, Hubli, Belgaum, Sirsi, Kumta, Hungarkatta, Coondapur, Ankola, Kanhangad & Bellary.

Paid-up Capital Rs. 2,12,200.

Working Capital exceeds Rs. 17 Lacs.

Last 5 Year's Progress proves growing popularity.

Year	Rolling Capital.
1930.	2,42,065.
1931.	4,95,266.
1932.	9,25,958.
1933.	13,90,789.
1934.	15,93,238.

Fixed Deposits for one year received at 4% and withdrawble by 15 days' notice. 2% interest allowed if if withdrawn without notice.

All sorts of Banking Business transacted.

For further particulars apply to:—

Kumta, 10—4—1935.

P. Panduranga Shenoy,
Agent at KUMTA.

ಸ್ಥಾನಿಕ ವೃತ್ತಾಂತ.

ಕುಮಟಾ— ಸ್ಥಳಿಗಳ ಉಪದ್ರವ ಕಡಿಮೆಯಾಗಲಿಲ್ಲ. ಕೆಲವೆಡೆ ಇಲಿಗಳು ಬೀಳುತ್ತಿವೆ. ಒಂದೆರಡು ಕಡೆ ಪ್ಲೇಗಾಗಿತ್ತು; ಗುಣ ಹೊಂದುತ್ತಿದ್ದಾರೆ. ಹಳ್ಳಿಗಳಲ್ಲಿ ಮೈಲಿಬೇನೆ.

ರಾಜ್ಯ ಮಹೋತ್ಸವ ಸಿದ್ಧಿ ಎತ್ತುವಳಿ ಮಾಡುವ ಬಳ್ಳೀ ರಭಸ ನಡೆದಿದೆ. ಉತ್ಸವ ದಿನಗಳು ಸಮೀಪಿಸಿ ಬಂದ ಹಾಗೆ ಎತ್ತುವಳಿಗೆ ಹೆಚ್ಚಿನ ರಭಸ. ಅಲ್ಲಲ್ಲಿಯ ಪಟೇಲರೂ, ಊರ ಮುಖಂಡರೂ ಎತ್ತುವಳಿ ಮಾಡಲಾರಂಭಿಸಿದ್ದಾರೆ. ಊರಲ್ಲಿ ಮಾಮಲೇದಾರ ಮೊದಲಾದವರು ಅಂಗಡಿ-ಅಂಗಡಿಗೆ ಹೋಗಿ ಉತ್ಸವ ಸಿದ್ಧಿಯನ್ನು ಒಟ್ಟುಗೂಡಿಸಿದ್ದರು. ಉಗ್ರಾಣಿಗಳೂ, ಪೇದೆಗಳೂ ರಜತೋತ್ಸವ ಕಾಣಿಕೆಯನ್ನು ಈ ತಿಂಗಳ ಸಂಬಳ ಪಡೆಯುವಾಗ ಉತ್ಸವ ಫಂಡ ಕಡವರಿಗೆ ಅರ್ಪಿಸಿ ರಾಜನಿಷ್ಠೆಯ ಪ್ರದರ್ಶನ ಮಾಡಿದರು. ಈಗ ತೀರ್ವೆ ತರುವ ಸಮಯ, ಜನರು ಈವಾಗ ತಮ್ಮ ಕಾಣಿಕೆಯನ್ನು ಗ್ರಾಮಾಧಿಕಾರಿಗಳ ಕಡೆ ಕೊಡುತ್ತಿರುವರು. ತೀರ್ವೆಯಲ್ಲಿ ಸೂಟು ಕೊಡ ಬೇಕೆಂದು ಉತ್ಸವ ಸಿದ್ಧಿ ಸಹಜ ವಸೂಲ ಹಿಡಿಯುತ್ತಿದೆ. 'ಒಕ್ಕಲಿಗ! ದಾನಿ ಅದೃಷ್ಟ ಪರೀಕ್ಷೆಯ ಸಮಯವು ಇದೇ' ಉತ್ಸವ ಸೋಡತಿಯ ಟಿಕೇಟುಗಳೂ ಈಗಲೇ ಮಾರಾಟಕ್ಕೆ ಬಂದಿವೆ. ಹಲವು ಟಿಕೇಟುಗಳು ಖರ್ಚಾದವು. ಹಿರೇಗುತ್ತಿ, ಮಾಧವನಗರ ಇದಿಯಲ್ಲಿ ಉತ್ಸವ ಸಿದ್ಧಿ ಎತ್ತುವಳಿಗೆ ಬಳ್ಳೀ ತೊಂದರೆ. ಜನರು ಜಾದು ಪೊಲೀಸ ತೆರಿಗೆ, ಹಿಡಿದುಕೊಂಡಿರುವ ತೆಂಗಿ ತೆತ್ತು ಸೋತುಹೋಗಿದ್ದಾರೆ. ರಾಜನಿಷ್ಠೆಯ ಪ್ರದರ್ಶನ ಮಾಡಲು ತಮ್ಮ ಹಲವು ತೆರಬೇಕೆಂದು ಅವರಿಗೆ ಹಂಬಲ; ಆದರೆ ಕೈಯಲ್ಲಿ ಕಾಸಿಲ್ಲವಲ್ಲಾ ಎಂದು ವ್ಯಸನ! ಆದರೂ ಗ್ರಾಮಾಧಿಕಾರಿಗಳು ಪ್ರಯತ್ನಪಡುತ್ತಿದ್ದಾರೆ. ಕೆಲವಾದರೂ ಸಿದ್ಧಿ ವಸೂಲಾಗುವದು. ಉತ್ಸವ ಸಿದ್ಧಿ ಎತ್ತುವಳಿ ಮಾಡುವಾಗ ಯಾವದೇ ಪ್ರಕಾರ ಒತ್ತಾಯ ಮಾಡಬಾರದಾಗಿ ಉತ್ಸವ ಮಂಡಳದ ಕಟ್ಟಪ್ಪಣೆ ಆದರೆ ಕಾಣಿಕೆ ಕೊಡುವ ಸ್ಥಳಿಕ ಅಧಿಕಾರಿಗಳಿಗೆ ಪ್ರಸನ್ನಗೊಳಿಸದಿದ್ದರೆ, ಅಪ್ರಸನ್ನತೆಯಿಂದ ಮುಂದೆ ನಾನಾ ತೊಂದರೆ ಉಂಟಾಗಬಹುದೆಂದು ಸುಳ್ಳೇ ಕಲ್ಪನೆ ಮಾಡಿಕೊಂಡು ಹಲವರು ಭೀತಿಗೊಳ್ಳುತ್ತಾರೆ. ಹೀಗೆ ಭೀತಿಪಡುವ ಕಾರಣವಿಲ್ಲೆಂತಲೂ, ಕಾಣಿಕೆಯನ್ನು ಆತ್ಮಸಂತೋಷದಿಂದ ಎತ್ತುವಳಿಯಾಗಬೇಕೆಂಬ ಸರಕಾರ ಹುಕುಮು ಇರುವವಾಗಿಯೂ ಎಷ್ಟು ಹೇಳಿದಾಗ್ಯೂ ಈ ಭೀತಿಯು ಪರಿಹಾರವಾಗಲೊಲ್ಲದು.

೧೯೩೨-೩೩ ಮತ್ತು ೧೯೩೩-೩೪ ಈ ಎರಡು ಸಾಲುಗಳ ಮ್ಯುನಿಸಿಪಲ್ ಮನೆಪಟ್ಟಿ ವಸೂಲಿಯು ಬಗ್ಗೆ ಮ್ಯುನಿಸಿಪಾಲಿಟಿಯವರು ಕೋರ್ಟದಲ್ಲಿ ವಸೂಲ ಕೊಡಿಸಬಹುದೆಂದು ಕೆಲ ತೆರಿಗೆದಾರರು ಬೇಕು ಮಾಡುತ್ತಾರೆ. ಈ ತೆರಿಗೆಯ ವಿಷಯ ದಾವೆ ನಡೆದಿದ್ದು ಆ ವಸೂಲಿ ನಿಂತಿದೆ. ಮ್ಯುನಿಸಿಪಾಲಿಟಿಯವರು ಬಿಲು ಕೊಟ್ಟಲ್ಲಿ ಆ ಕುರಿತು ಆ ಮೇಲೆ ವಿಚಾರ ಮಾಡಿದರಾಯಿತು. ಬಿಲು ಕೊಟ್ಟನಕ ವಸೂಲಿಯ ಕ್ರಮ ನಡೆಸುವಂತಿಲ್ಲ.

ಇಲ್ಲಿ ಹೊಸ ತಾಲೂಕ ಕಚೇರಿ ಕಟ್ಟುವ ಕಂಟ್ರಾಕ್ಟನ್ನು ರಾ। ದೀವಕರ ಎಂಬ ರತ್ನಾಗಿರಿಯವರು ಪಡೆದಿದ್ದಾರೆ. ಈ ಕಟ್ಟಡದ ಸರಕಾರಿ ಅಂದಾಜ ಖರ್ಚು ರೂ. ೫೩೦೦೦. ಕಟ್ಟಡವು ೧೯೩೬ನೇ ಇಸ್ವಿಯ ಜನವರಿ ತಿಂಗಳಲ್ಲಿ ತಯಾರಾಗತಕ್ಕದ್ದು.

ಇಲ್ಲಿಯ ಕೆಲ ಗೌಡಸಾರಸ್ವತ ಸಮಾಜದ ವಿದ್ಯಾರ್ಥಿಗಳು ಶ್ರೀ ಗೋಕರ್ಣ-ಪರ್ತಗಾಳಿ ಮಠಾಧೀಶರ ಕಡೆ ಬಿನ್ನಹ ಮಾಡಿ ಶ್ರೀ ಗುರುಗಳಿಗೆ ಈ ಊರಿಗೆ ಚಿತ್ತೈಸಬೇಕಾಗಿ ಅರಿಕೆ ಮಾಡಿಕೊಂಡಿದ್ದಾರೆ. ಶ್ರೀ ಗುರುಗಳು ವಿದ್ಯಾ ಸಮಾಜದ ವಿನಂತಿಯನ್ನು ಮನ್ನಿಸಿ ಇತ್ತ ಕಡೆ ಅನುಗ್ರಹಿಸಬೇಕಾಗಿ ಪ್ರಾರ್ಥನೆ.

ಇಲ್ಲಿ ಮೋಹರಂ ಸಮಯು ಶಾಂತತೆಯಿಂದ ಸಂಪನ್ನವಾಯಿತು. ಕಳೆದ ವರ್ಷ ಇರಲಿಲ್ಲ; ಈ ವರ್ಷವೂ ಇರಲಿಲ್ಲ ಈ ಕುರಿತು ಇಲ್ಲಿ ಇತ್ತಂಡಗಳಾಗಿ, ಹಿಂದೆ ಮತ ಕಲಹದಿಂದ ಮೋಹರಂ ಹಬ್ಬವು ಕೊನೆಗಂಡಿತು.

ದಿ ಕರ್ನಾಟಕ ಟೂರಿಂಗ ಟಾಕೀಜ ಕಂಪನಿಯವರು ಇಲ್ಲಿ ಬಂದಿದ್ದು, ಇತ್ತ ೨ ವಾರಗಳಿಂದ ಶ್ಯಾಮಸುಂದರ, ರತ್ನಾಕರ, ಅಗ್ನಿಕಂಕಣ, ಸತೀ ಸುಲೋಚನಾ ಮೊದಲಾದ ಮರಾಠಿ ಕನ್ನಡ ಚಿತ್ರಪಟಗಳನ್ನು ಪ್ರದರ್ಶಿಸುತ್ತಿರುವರು.

ಸಿದ್ದಾಪುರ— ರಾ। ನಾರಾಯಣ ವೆಂಕ ಭಟ್ಟ ಸಾ। ಸಿರಿಗಾನ ಇವರು ಸಿದ್ದಾಪುರ ಸಬ್‌ಜಜ್ಜ ಕಚೇರಿಯಲ್ಲಿ ತಾ. ೩ ೧೯೩೪ ಕ್ಕೆ ಎರಡು ದಸ್ತೈವಜುಗಳನ್ನು ನೋಂದಣೆ ಬಗ್ಗೆ ಹಾಜರ ಮಾಡಿದ್ದರು. ಆಗ ಅವರು ಎರಡೂ ದಸ್ತಗಳ ನೋಂದಣೀ ಫೀ, ನಕಲ ಫೀ, ಯಾದಿ ಫೀ ಇವುಗಳ ಬಗ್ಗೆ ರೂಪಾಯಿ ೧೨-೬-೦ ತೆತ್ತಿದ್ದಲ್ಲದೆ, ದಸ್ತಗಳನ್ನು ಹಿಂದಿರುಗಿ ಕಳಿಸಿಕೊಡುವ ಬಗ್ಗೆ ೬॥ ರ ಕಾಗದ ಹಚ್ಚಿಗೆ ಕೊಟ್ಟಿದ್ದರು. ಸಬ್‌ಜಜ್ಜರು ೩-೪ ತಿಂಗಳುವರೆಗೂ ದಸ್ತೈವಜುಗಳನ್ನು ಕಳಿಸಿಕೊಡಲಿಲ್ಲ! ಮೇಲಾಗಿ ತಾ. ೧೮-೩-೧೯೩೫ಕ್ಕೆ ನೋಟೀಸು ಮುಟ್ಟಿದ ೫ ದಿನಗಳಲ್ಲಿ ಬೆಸ್ತ ಆಫೀಸಿಗೆ ಬಂದು ದಸ್ತಗಳನ್ನು ಒಯ್ಯಬೇಕೆಂತಲೂ ಹಾಗೆ ಒಯ್ಯದಿದ್ದರೆ ದಿನಾ ಎರಡಾಣೆಯಂತೆ ದಂಡ ವಸೂಲ ಮಾಡಲಾಗುವದೆಂತಲೂ ರಾ। ಭಟ್ಟರಿಗೆ ನೋಟೀಸು ಕೊಟ್ಟಿರುತ್ತಾರೆ! ರಾ। ಭಟ್ಟರು ಕೆತ್ತ ಹಿಂದಿನ ಟಪಾಲಿನ ಗತಿಯೇನಾಯಿತು? ದಸ್ತ ತಿರುಗಿ ಒಯ್ಯಲಿಕ್ಕೆ ವಿಳಂಬ ಮಾಡಿದರೆ ದೈನಿಕ ದಂಡ ಮಾಡಲಿಕ್ಕೆ ಸಬ್‌ಜಜ್ಜರಿಗೆ ಎಲ್ಲಿಂದ ಅಧಿಕಾರ

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿರಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪ್ರೊಪ್ಯುಲರ್ ಇನಶ್ಯೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

[illegible] ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ.
ಜೀವವಿಮೆಯ ಬಗ್ಗೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!
ಸಿ. ಸಾ. 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ [illegible]

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!
ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.
ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು.
ಮುಂಬಯಿ ಪ್ರಾಂತ್ಯದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಖ ಮೆಮನ್ ರಸ್ತೆ, ಮುಂಬಯಿ.
ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು:- ಮೆಸರ್ಸ್ ಜೀವನ ಏಜನ್ಸಿ, ಕಾರವಾರ.

Established 1900. ಶ್ರೀ **FIXED RATE.**

ದಾಸಪ್ಪಾ ಕೃಷ್ಣಪ್ಪಾ
ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರಸಿ.

ನಮ್ಮಲ್ಲಿ ಜೋಡಿ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪತ್ತಾರೇಷ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಷ್ಮೆ ಜಿಬ್ಬದ ಮಡಿಗಳೂ, ನಾರ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಭೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮ್ಹಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಸೋಯಿ ದರದಿಂದ ಸಿಗುವವು. ರೋಖ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel:- "Honesty." **D. K. DHAKAPPA BROS.,**

ಹೊಸ ಮ್ಹಾಲು. **Cloth Merchants,** ದರ ಅಗ್ಗ.
SIRSI. N. KANARA.

ಬಂತು? ಎಂದು ರಾ|| ನಾರಾಯಣ ಭಟ್ಟರ ಕೇಳುತ್ತಿದ್ದಾರು ಪ್ರಶ್ನಿಸುತ್ತಾರೆ.

ಕಾರವಾರ— ರಾಜ್ಯ ಜ್ಯುಬಿಲಿ ಮಹೋತ್ಸವದ ನಿಧಿಗೆ ವಿವಿಧ ರೀತಿಗಳಿಂದ ಹಣ ಎತ್ತಲಾಗುತ್ತಿದೆ. ಜುಬಿಲಿ ಸಮಾರಂಭದ ದಿನ 'ಲಕೀ ಡ್ರಾ' ಯಾನೆ ಭಾಗ್ಯದ ಗಂಟು ಎಂಬ ಸೋಡತಿ ತೆಗೆಯುವ ಹೊಸದೊಂದು ಕಲ್ಪನೆ ಹೊರಟಿದೆ. ಸೋಡತಿ ಟಿಕೇಟುಗಳನ್ನು ಜನರ ಕೊರಳಿಗೆ ಕಟ್ಟುತ್ತಾರೆ. ಸರಕಾರಿ ಕಚೇರಿಗಳಲ್ಲೂ ಲೋಕಲ್ಬೋರ್ಡ-ಮ್ಯುನಿಸಿಪಾಲಿಟಿಗಳಲ್ಲೂ ಕೆಲಸ ಮಾಡುವ ನೌಕರ ಜನರ ಮಾಸಿಕ ಸಂಬಳದೊಳಗಿಂದ ಟಿಕೇಟಿನ ಹಣಂತೆ ಮಾಸೂಲ ಮಾಡಬೇಕಾಗಿಯೂ ವ್ಯವಸ್ಥೆಯಾಗಿದೆ. ಹಿಂದೆ ಇವರು ಸ್ಕೌಟ-ಸಿನೇಮಾ ಪ್ರಯೋಗಗಳ ಟಿಕೇಟು ಕೊಂಡುಕೊಂಡರು, ಬರಿಭಾರಿ ಜ್ಯುಬಿಲೀ-ನಿಧಿಗೆ ಹಣ ಕೊಟ್ಟಿದ್ದರ ಎಣಿಕೆಯಿಲ್ಲ! ಕಡಿಮೆ ಸಂಬಳದ ನೌಕರರು ಪಗಾರ-ಪತ್ರಿಯ ಕ್ರಮ ಬಂದು ಮನಸ್ಸಿನಲ್ಲೇ ಕೊರಗುತ್ತಾರೆ! ಮಾಡುವದೇನು! ಬಾಯ್ದೆರೆದು ಮಾತಾಡಹೋದರೆ ನೌಕರಿಗೆ ಸಲುವಾಗಿ ಕಡತೆಯುವ ಪ್ರಸಂಗ ಬರಬಹುದಲ್ಲವೇ? ನಿಧಿಯ ಸಂಚಾಲಕರು ಜನತೆಯ ದಾರಿದ್ರ್ಯವನ್ನೇ ನಂಬಿಕೊಂಡು, ಜನರು ಸ್ವಯಂಸ್ಫೂರ್ತಿಯಿಂದಲೂ, ಸ್ವಸಂತೋಷದಿಂದಲೂ ಅರ್ಪಿಸುವ ಹಣವನ್ನಷ್ಟೇ ಕೂಡಿಸುವದು ಒಳಿತಾಗುತ್ತಿತ್ತು. ಪರಮ ಪೂಜ್ಯ ಚಕ್ರವರ್ತಿಗಳ ಮನೋದಯವಾದರೂ ಹಾಗೆಯೇ ಇರುತ್ತದೆ!

ಕಳೆದ ೧ನೇ ತಾರೀಖಿನಿಂದ ಕಾರವಾರ ಶಹರದ ಮಧ್ಯಭಾಗದಲ್ಲಿ, ಪೇಟೆಗೆ ತಗಲಿ, ಹುಡುಗಿಯರ ಶಾಲೆಯ ಸಮೀಪದಲ್ಲೇ ಸರಾಯಿ ಅಂಗಡಿಯು ತೆರೆಯಲ್ಪಟ್ಟಿದೆ! ಮೊದಲು ಈ ಸರಾಯಿ ಅಂಗಡಿಯು ಊರ ಹೊರಗೆ ಮ್ಯುನಿಸಿಪಾಲಿಟಿಯ ತೋಟದಲ್ಲಿತ್ತು. ಈಗ ಅಂಗಡಿಯು ಪೇಟೆಯಲ್ಲಿ ಬಂದದ್ದರಿಂದ ಜನರಲ್ಲಿ ತೀವ್ರತರ ಕ್ಷೋಭೆಯುಂಟಾಗಿದೆ. ಈ ಕುರಿತು ಮ್ಯುನಿಸಿಪಾಲಿಟಿಯಲ್ಲೂ ಒಂದು ಠರಾವು ಬಂದಿತ್ತು. ಆದರೆ ಮ್ಯು|| ಯ ಅಧ್ಯಕ್ಷ ರಾ|| ಚಂದಾವರಕರರು, ಈ ಅಂಗಡಿಯನ್ನು ಸ್ಥಳಾಂತರ ಮಾಡಿಸಬೇಕಾಗಿ ತಾವು ಮಾ|| ಕಲೆಕ್ಟರ ಸಾಹೇಬರಿಗೆ ಬರೆದುಕೊಂಡಿದ್ದೇನೆ; ಅವರ ಠರಾವು ಬರುವ ತನಕ ಹಾದಿ ನೋಡೋಣ; ಎಂದು ಸೂಚಿಸಿದ್ದರಿಂದ ಠರಾವಿನ ಮೇಲೆ ಚರ್ಚೆಯಾಗಲಿಲ್ಲ.

ಕಾರವಾರದ ಸ್ತ್ರೀಸಭೆಯವರು ಬರೆಯುವದೇನಂದರೆ:— ಹಲವು ವರ್ಷಗಳಿಂದ ಇಲ್ಲಿ ಪೇಟೆಯಲ್ಲಿ ಬಾಲಿಕಾ ಕನ್ನಡ ಶಾಲೆಯು ನಡೆಯುತ್ತಿತ್ತು. ಮುಖ್ಯ ಶಾಲೆಯು ದೂರದಲ್ಲಿರುವ ಬಾಲಕ ಚಿಕ್ಕ ಚಿಕ್ಕ ಮಕ್ಕಳಿಗೆ ಶಾಲೆಗೆ ಹೋಗಲು ಪ್ರಯಾಸವಾಗಬಾರದೆಂಬ ಉದ್ದೇಶದಿಂದ ಈ ಶಾಲೆಯನ್ನು ನಡಿಸುತ್ತಿದ್ದರು. ಅಲ್ಲಿ ಮುಂಚೆ ೩ನೇ ಇಯತ್ತೆಯ ತನಕ ಕಲಿಸುತ್ತಿದ್ದರು. ಕಳೆದ ವರ್ಷ ಹೊಸದಾಗಿ ೪ನೇ ಇಯತ್ತೆ ವರ್ಗವನ್ನು ಜೋಡಿಸಿದರು. ಆ ವರ್ಗ ಆವಶ್ಯವಿದ್ದಿಲ್ಲ. ಆ ವರ್ಗದಲ್ಲಿ ಕಲಿಯುವವರಿಗೆ ದೊಡ್ಡ ಶಾಲೆಯಲ್ಲಿ ಸಿಗುವ ವಿಶಾಲ ಸಹವಾಸ, ಅನುಭವಗಳು ಈ ಚಿಕ್ಕ ಶಾಲೆಯಲ್ಲಿ ದೊರೆಯುವಂತಿದ್ದಿಲ್ಲ. ಶಿಕ್ಷಣದ ದೃಷ್ಟಿಯಿಂದ ವಿಚಾರ ಮಾಡಿದರೆ ಇಂಥಾ ವ್ಯವಸ್ಥೆಯಿಂದ ಹುಡುಗರ ಹಾನಿಯೇ ಸರಿ. ಪರೀಕ್ಷೆಯ ಪರಿಣಾಮದ ಮೇಲಿಂದಲೂ ಕೂಡ ಈ ವರ್ಗವು ಅಯಶಸ್ವಿಯಾಗಿದೆ. ಮೊನ್ನಿನ ಪರೀಕ್ಷೆಗೆ ಕೂತ ೨೫ ಹುಡುಗರಲ್ಲಿ ನಾಲ್ವರು ಮಾತ್ರ ತೇರ್ಗಡೆ ಹೊಂದಿದ್ದಾರೆ; ಇನ್ನು ೩—೪ ಹುಡುಗರಿಗೆ, ಕಾಗುಣಿತದ ಗುಣಗಳನ್ನು ಕೊಟ್ಟು ತೇರ್ಗಡೆ ಮಾಡಿದ್ದಾರೆ! ಸದ್ಯದಲ್ಲಿ ಆ ವರ್ಗವನ್ನು ಮುಚ್ಚುವದು ಇಷ್ಟ.

ಇದೇ ಬರುವ ಎಪ್ರಿಲ್ ೨೫ನೇ ತಾರೀಖಿಗೆ ಜಿಲ್ಹಾ ಬೋರ್ಡಿನ ಸಭೆ ಸುಪೆಯಲ್ಲಿ ಸೇರುವದಿದೆ. ಆ ಸಭೆಯು ಪ್ರಾಥಮಿಕ ಶಾಲೆಗಳ ಖರ್ಚು ಪೂರೈಸಿಕೊಳ್ಳುವದಕ್ಕಾಗಿ ಲೋಕಲ್ ಫಂಡನ್ನು ರೂಪಾಯಿಗೆ ೧೮ ಪೈಯಿಂದ ೨ ಆಣೆಗೆ ಏರಿಸಿಕೊಳ್ಳಬೇಕೆಂಬ ಸೂಚನೆಯ ವಿಚಾರವಾಗುವದಿದೆ. ಜನರಿಗೆ ಈಗಿದ್ದ ತೆರಿಗೆ ಲೋಕಲ್ಫಂಡ ಕೊಡಲಿಕ್ಕೆ ಗತಿಯಿಲ್ಲ. ಬೋರ್ಡಿನ ಕಡೆಯಿಂದ ಪ್ರಾ|| ಶಾಲೆಗಳನ್ನು ನಡಿಸಲಾಗದಿದ್ದರೆ ಅವನ್ನು ತಿರುಗಿ ಸರಕಾರಕ್ಕೆ ಒಪ್ಪಿಸುವದು ಲೇಸು.

ಸುಲಭ ರೀತಿಯಿಂದ ನೀರು ಬರುವಂಥ,

ಒಡೆದು ಹೋಗದಂಥ,

ಬಹುಕಾಲ ಬಾಳುವಂಥ

ಕಿರ್ಲೋಸ್ಕರ

ಪಂಪುಗಳು ಅಗದೀ ಖಾಯಂಸ ಮಾಡಲ್ಪಡುವಂಥವುಗಳು !

ಬಾವಿಗಳಿಗೆ,
ತೋಟಪಟ್ಟಿಗಳಿಗೆ ಮತ್ತು
ಇತರ ಕೃಷಿಯ ಕೆಲಸಗಳಿಗೆ
ಬೇಕಾದಷ್ಟು ನೀರು

ಕಿರ್ಲೋಸ್ಕರ ಪಂಪುಗಳು

ಪೂರೈಸುತ್ತವೆ !!



ಸ್ವಂತ ಯಾ ಶಕ್ತಿಬಲದಿಂದ
ಉಪಯೋಗಿಸಬಹುದು.

ಹೆಚ್ಚಿನ ವಿವರಗಳಿಗೂ, ಬೆಲೆಯ ವಿಷಯಕ್ಕೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕಿರ್ಲೋಸ್ಕರ ಬಂಧುಗಳು, ಲಿಮಿಟೆಡ್,
ಕಿರ್ಲೋಸ್ಕರವಾಡಿ. (ಜಿ. ಸಾತಾರಾ.)

ದ್ವಿಗುಣವಾದ ಲಾಭವನ್ನು ಹೊಂದಿರಿ.

ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ !

ಮಕ್ಕಳ ಲಿವರ್ ಕಂಪ್ಲೇಂಟು (ಕೂರ್ಮವ್ಯಾಧಿ) ಮತ್ತು ಜ್ವರಗಳಿಗೆ

ಜಮ್ಮಿ ವೆಂಕಟರಮಣಯ್ಯನವರ

'ಲಿವರ್ ಕ್ಯೂರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಿರಿ !

ಹೆಚ್ಚಿನ ಮಾಹಿತಿಗೆ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ. ಕ.)

ಅಲ್ಲಲ್ಲಿ ಇಷ್ಟಿಷ್ಟು!

[೫ನೇ ಪಾನಿನಿಂದ ಮುಂದರಿಸಿದ್ದು]

೩. ಒಟ್ಟುಗೂಡಿದ ನಿಧಿಯೊಳಗಿಂದ ಸ್ಥಳಿಕ ಖರ್ಚು ತೆಗೆದು ಉಳಿದ ಹಣವನ್ನು ಸರ್ವಾಧಿಪತಿಗಳ ಅಪೇಕ್ಷೆಯ ಮೇರೆಗೆ ಕೆಂಪು ಫಿರಂಗಿನ ಶುಶ್ರೂಷಾ ಪಥಕಕ್ಕೆ ಕೊಡಬೇಕೆಂದು ಸರಕಾರದ ಅಪ್ಪಣೆ. ೪| ಮೆಜಿಸ್ಟ್ರೇಟರು ಸರಿ ಅರ್ಧ ರಕಮು ಕೆಂಪು ಫಿರಂಗಿನ ಫಂಡಿಗೆ ಕೊಡಲೇಬೇಕಾಗಿ ಒತ್ತಾಯ ಮಾಡುತ್ತಾರಂತೆ. ಕೆಲ ಉತ್ಸವ ಮಂಡಳಿಗಳು ೧೦೦ಕ್ಕೆ ೩೦ ೪೦ ರಷ್ಟು ರಕಮನ್ನು ರೆಡ್ ಕ್ರೊಸ್ ಫಂಡಿಗೆ ಕೊಡಬೇಕಾಗಿ ಠರಾವು ಮಾಡಿದ್ದವು. ೫| ಮೆಜಿಸ್ಟ್ರೇಟರು ಈ ಠರಾವುಗಳನ್ನು ರದ್ದುಪಡಿಸಿಬಿಟ್ಟಿರುತ್ತಾರೆ. ಇಷ್ಟಾಗಿ ಹಣ ಕೊಡಬೇಕೆಂದು ಒತ್ತಾಯ ನಡೆಯುತ್ತಿರುವ ಸಂಗತಿ ಸರಕಾರದ ಕಿವಿಗೆ ತಲ್ಪುವದಿಲ್ಲ. ಗುಪ್ತಚಾರರಿಂದ ರಾಷ್ಟ್ರೀಯ ಸಭೆಯವರ ಖಾಸಗಿ ಸಂಗತಿಗಳನ್ನು ಸರಕಾರವು ತಿಳಕೊಳ್ಳುತ್ತದೆ, ಆದರೆ ಸ್ವಂತ ಹುಕುಮಿನಂತೆ ಲೋಕದಲ್ಲಿ ನಡೆಯುವ ಅನ್ಯಾಯದ ಕಲ್ಪನೆಯಾಗದಿದ್ದಷ್ಟು ಪ್ರಜೆಗಳ ದುರ್ದೈವ, ಉತ್ಸವದ ಆನಂದ ಪ್ರಸಂಗದಲ್ಲಿಯೂ ಜನಸಾಮಾನ್ಯರು ಕಷ್ಟಪಡಬೇಕಾದುದು ದೈವದುರ್ವಿಲಾಸವಲ್ಲವೇ ?

* * *

ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಉಪ್ಪಿನ ಬೆಳವಣಿಗೆಯ ಪ್ರಶ್ನೆ ಗಾಂಧಿ-ಇರ್ವಿನ್ ತಹನಾಮೆ ಊರ್ಜಿತವಿರುವದಾಗಿ ಆಗಿಂದಾಗ ಘೋಷಣೆಯಾಗಿ ಬಡವರ ಅನುಕೂಲತೆಗಾಗಿ ಹಿಂದುಸ್ಥಾನ ಸರಕಾರವು ಹಂಬಲಿಸುತ್ತದೆಂದೂ ಹಿಂದುಸ್ಥಾನ ಸಂಕಾರದ ಪರವಾಗಿ ಸಾಧಿಸೋಣಾಯಿತು. ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಾದ ಶ್ರೀ| ಜಯರಾಮದಾಸ ದೌಲತರಾಮರವರು ಸಿಂಧ ಪ್ರಾಂತದೊಳಗಿನ ಪರ ಭಾಗದಲ್ಲಿ ಗಾಂಧಿ-ಇರ್ವಿನ್ ತಹನಾಮೆ ಊರ್ಜಿತವಿಲ್ಲವಾಗಿ ತಮ್ಮ ಪ್ರತ್ಯಕ್ಷ ಅನುಭವ ಪ್ರಕಟಿಸಿದ್ದಾರೆ. ಈ ಭಾಗದೊಳಗಿನ ಜನರು ನೆರೆಹೊರೆಯಲ್ಲಿರುವ ಉಪ್ಪು ನೀರಿನ ಸರೋವರಗಳಿಗೆ ಹೋಗಿ ಉಪ್ಪು ತರುತ್ತಿದ್ದರು. ಕೆಲ ವರ್ತಕರು ದುರುಪಯೋಗ ಮಾಡಿದರೆಂದು ಸರಕಾರವು ಈ ಆನುಕೂಲತೆಗಳನ್ನು ರದ್ದುಪಡಿಸಿದೆ. ಸರಕಾರವು ಆಧರಿಸಿದ ದುರುಪಯೋಗದ ಉದಾಹರಣೆಗಳಲ್ಲಿ ಬಹು ಅಂಶ ಅಸತ್ಯವಾದುದು. ಅಪೀಲ ಕೋರ್ಟುಗಳಲ್ಲಿ ಕೆಳಮೆಜಿಸ್ಟ್ರೇಟ ಕೋರ್ಟಿನ ತೀರ್ಪುಗಳು ರದ್ದಾದದ್ದಾಗ್ಯೂ ಸರಕಾರದ ವರ್ಟಿಗ ಮೆಜಿಸ್ಟ್ರೇಟರ ತೀರ್ಪುಗಳೇ ಆಧಾರವಾಗಿವೆ. ಇದರಿಂದ ಬಡಬಗ್ಗರಿಗೆ ತೀರ ಕಷ್ಟವಾಗಿದೆ. ಸರಕಾರಿ ಡಿಪೋಗಳಿಂದ ಹಳ್ಳಿಗಳಿಗೆ ಉಪ್ಪು ಒಯ್ಯುವ ವರೆಗೆ ಮಣಕ್ಕೆ ಆರೂ ಬೀಳುತ್ತವೆ. ಸರಕಾರದ ಮುಂದಾಗಿ ಪೂಂಜಾಗ್ರತೆ ನಡೆಯದೆ ಈ ಅನುಕೂಲತೆ ರದ್ದುಪಡಿಸಿತು. ಸರಕಾರವು ಈಗಲಾದರೂ ತಹನಾಮೆಯನ್ನು ರದ್ದುಪಡಿಸುವ ಕಾರಣಗಳನ್ನು ವಿಸ್ತಾರವಾಗಿ ಪ್ರಕಟಿಸಬೇಕು. ಶ್ರೀ| ಜಯರಾಮದಾಸ ದೌಲತರಾಮರವರ ಸೂಚನ ಮಹತ್ವದ್ದಿದೆ. ಈ ತಾಲೂಕಿನ ಗುಡೇಅಂಗಡಿ-ಬಾಡ ಗ್ರಾಮಗಳಲ್ಲಿಯೂ ಸರಕಾರವು ಈ ಅನುಕೂಲತೆಗಳನ್ನು ಒಮ್ಮೆಲೆ ರದ್ದು ಮಾಡಿಬಿಟ್ಟಿದೆ. ಗಾಂಧಿ ಇರ್ವಿನ ತಹನಾಮು ಊರ್ಜಿತ ಇರುವದಾಗಿ ಕಾಯಿದೆ ಕೌನ್ಸಿಲಗಳಲ್ಲಿ ಹೇಳಿ ಆಚಾರದಲ್ಲಿ ಅವನ್ನು ರದ್ದು ಮಾಡುವದರಿಂದ ಲೋಕವಂಚನೆಯಾಗುತ್ತದೆ. ದುರುಪಯೋಗದ ವ್ಯಾಖ್ಯೆ ಇಲ್ಲದೆ ವ್ಯಾಪ್ತಿ ಜನಸಾಮಾನ್ಯರಿಗೆ ತಿಳಿಯುವದಿಲ್ಲ. ಸರಕಾರದ ಮನಸ್ಸಿನಲ್ಲೊಂದು, ಜನರ ಮನಸ್ಸಿನಲ್ಲಿ ಮತ್ತೊಂದು, ಹೀಗೆ ಭೇದವುಂಟಾಗಿ ಬಡಬಗ್ಗರಿಗೆ ಸಂಕಟವಾಗುತ್ತದೆ. ಸರಕಾರವು ಯಾವತ್ತೂ ಕಡೆಗಳಲ್ಲಿ ನಡೆದ ದುರುಪಯೋಗದ ಉದಾಹರಣೆಗಳನ್ನು ನಮೂದಿಸಿ, ದುರುಪಯೋಗದ ಕಕ್ಷೆಯನ್ನು ಪ್ರಕಟಿಸುವದಾಗಿ ಕೋರಿಕೆ. "ಅದನ್ನು ಪ್ರಕಟಿಸಲಾಗದಿದ್ದರೆ ಜನರು ಸಾರ್ವತ್ರಿಕವಾಗಿ ದುರುಪಯೋಗ ಮಾಡಹತ್ತಿದ್ದರಿಂದ ಗಾಂಧಿ-ಇರ್ವಿನ್ ತಹನಾಮೆಯನ್ನು ಊರ್ಜಿತ ಇಡಬೇಕಾಗಿ ಸರಕಾರಕ್ಕೆ ಮನಸ್ಸಿದ್ದಾಗ್ಯೂ, ನಿರುಪಾಯವೆಂದು ಅದನ್ನು ರದ್ದುಪಡಿಸಬೇಕಾಗಿದೆ," ಎಂಬದಾಗಿ ಪ್ರಕಟಣೆಯನ್ನು ಹೊರಡಿಸಿಬಿಡುವದು ಲೇಸು.

* * *

ಕಲಕತ್ತೆಯ ಅಮೃತ ಬಝಾರ ಪತ್ರಿಕೆಯ ಸಂಪಾದಕರಾದ ಶ್ರೀ| ತುಷಾರ ಕಾಂತಿ ಘೋಷ ಮತ್ತು ಪ್ರಕಾಶಕರಾದ ಶ್ರೀ| ಶ್ರೀಕಾಂತ ವಿಶ್ವಾಸರವರ ಮೇಲೆ ಕೋರ್ಟಿಗೆ ಅಪಮಾನಗೊಳಿಸಿದ ಆಪಾದನದ ಮೇಲೆ ಸಂಕ್ಷಿಪ್ತ ವಿಚಾರ ನಡೆದು ಅನುಕ್ರಮವಾಗಿ ೩ ಮತ್ತು ೧ ತಿಂಗಳ ಸಾದಾ ಶಿಕ್ಷೆ ವಿಧಿಸೋಣಾಗಿದೆ. ಕಲಕತ್ತೆಯ ಹೈಕೋರ್ಟಿನ ಕುರಿತು ಇತ್ತ ೧-೨ ವರ್ಷಗಳಿಂದ ಬಂಗಾಲ ಪ್ರಾಂತದಲ್ಲಿ ಲೋಕಾಪವಾದ ಹಬ್ಬಿದೆ: ಮಧ್ಯ ಕಾಯಿದೆ ಕೌನ್ಸಿಲಿನಲ್ಲಿಯೂ, ಬಂಗಾಲ ಕಾಯಿದೆ ಕೌನ್ಸಿಲಿನಲ್ಲಿಯೂ ಕಲಕತ್ತೆಯ ನ್ಯಾಯಾಧೀಶರು ಪೂರ್ವಪರಂಪರೆಗೂ, ನ್ಯಾಯಸ್ಥಾನಕ್ಕೂ ಉಚಿತವಾಗಿ ನಡಕೊಳ್ಳುವದಿಲ್ಲ

THE AGRICULTURAL & INDUSTRIAL BANK, LIMITED.
COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
ಕುಂದಾಪುರ.

ಕಾಯಂ ಠೇವಣಾತಿಗಳು.

3 ತಿಂಗಳಿಗೆ ವಾಯಿದೆಯಾಗಿ ಠೇವಣಿ ರೂಪಾಯಿ 3½ರಂತೆ,
6 ತಿಂಗಳಿಗೆ ... ... 4½ರಂತೆ,
12 ತಿಂಗಳಿಗೆ ... ... 5½ ,,
24 ತಿಂಗಳಿಗೆ .. .. 6 ,,
3 ವರ್ಷ ಯಾ ಹೆಚ್ಚಿನ ಅವಧಿಗೆ ... 6½ರಂತೆ

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ.

ಚಿನ್ನ ಬೆಳ್ಳಿಯ ಆಭರಣಗಳ ಆಧಾರದ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ,
ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲ್ಲುಗಳು, ದರ್ಶನಿ ಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಕರೆಂಟ, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಂದಾಪುರ,
ತಾ 21 1—1935

K. Vaman Shenai &
G. Balakrishna S. Nayak.
Managing Directors.

ವಾಗಿಯೂ, ಸರಕಾರಿ ಅಧಿಕಾರಿಗಳ ಮರ್ಜಿ ಕಾಯು ಜನರಿಗ ಅನ್ಯಾಯವಾಗುತ್ತಲಾಗಿಯೂ ಒಂದು ಪ್ರಕಾರದ ಅಪವಾದ ಹಬ್ಬಿತ್ತು. ಕೆಲ ತೀರ್ಪುಗಳನ್ನು 'ಪತ್ರಿಕೆ'ಯವರು ಟೀಕಿಸಿದ್ದರು. ಕಳೆದ ಮಾರ್ಚ ತಿಂಗಳಲ್ಲಿ ಲೋಕನಿಯುಕ್ತ ಸಭಾಸದರು ಪ್ರಶ್ನೆ ಕೇಳಿ ಘೋರ ಚರ್ಚೆ ಮಾಡಿದ್ದರು. ಕೌನ್ಸಿಲಿನ ಕಾರ್ಯಕಲಾಪಗಳನ್ನು 'ಅಮೃತ ಬಝಾರ ಪತ್ರಿಕೆ'ಯವರು ಪ್ರಕಟಿಸಿ ಆ ಕುರಿತು ಪ್ರಧಾನ ಲೇಖನ ಬರೆದರು. "ಮುಖ್ಯ ನ್ಯಾಯಾಧೀಶರೂ, ಇತರ ನ್ಯಾಯಾಧೀಶರೂ ಅಧಿಕಾರಿಗಳ ಮರ್ಜಿ ಕಾಯಲು ಹಾತೊರೆಯುತ್ತಾರೆ; ಇದರಿಂದ ನ್ಯಾಯ ಸ್ವಾತಂತ್ರ್ಯಕ್ಕಾಗಿ ಈ ತನಕ ಲೋಕಪ್ರಸಿದ್ಧಿ ಪಡೆದ ಕಲಕತ್ತೆಯ ಹೈಕೋರ್ಟು ಅಪಕೀರ್ತಿಗೀಡಾಗಿದೆ; ಸ್ವತಂತ್ರ ಬುದ್ಧಿಯಿಂದ ನ್ಯಾಯದಾನವಾಗುವದಿಲ್ಲ" ಎಂಬದಾಗಿ ಆ ಲೇಖದಲ್ಲಿ ಉಲ್ಲೇಖಿಸಿತ್ತು. ಈ ಉಲ್ಲೇಖದಿಂದ ಹೈಕೋರ್ಟಿನ ಅಪಮಾನವಾಯಿತೆಂದು ಖಟ್ಲೆ. ಮುಖ್ಯ ನ್ಯಾಯಾಧೀಶರಾದ ಸರ್ ಹೆರೊಲ್ಡ ಡರ್ಬಿಶಾಯರ, ನ್ಯಾ| ಮುಕರ್ಜಿ, ಕೊಸ್ಟೆಲೋ, ಲೊರ್ಟವಿಲಿಯಮ್ಸ ಮತ್ತು ಜೆಕ್; ಹೀಗೆ ಐವನ್ಯಾಯಮೂರ್ತಿಗಳ ಕೋರ್ಟಿನಲ್ಲಿ ಕಳೆದ ಶುಕ್ರವಾರ ಖಟ್ಲೆಯ ವಿಚಾರ ನಡೆಯಿತು. 'ಪತ್ರಿಕೆ'ಯ ಪರವಾಗಿ ಸರ್ ತೇಜಬಹಾದ್ದೂರ ಸಪ್ರುರವರು ವಾದಿಸಿದರು. ಕೋರ್ಟಿಗೆ ಅಪಮಾನ ಮಾಡುವ ಇರಾದೆ ಸಂಪಾದಕರದಿರಲಿಲ್ಲವಾಗಿಯೂ, ಲೋಕಾಭಿಪ್ರಾಯವನ್ನು ಸಂಪಾದಕರು ನಮೂದಿಸಿ ನ್ಯಾಯ ಕೋರ್ಟಿನ ಅಪವಾದವನ್ನು ಪರಿಹರಿಸಿಕೊಳ್ಳಲು ಸೂಚನೆಯನ್ನಷ್ಟೇ ಸಂಪಾದಕರು ಕೊಟ್ಟಿದ್ದರಾಗಿಯೂ, ಕಾಯಿದೆ ಕೌನ್ಸಿಲಿನ ಕಾರ್ಯಕಲಾಪಗಳನ್ನು ಪ್ರಾಮಾಣಿಕತನದಿಂದ ಪ್ರಕಾಶಿಸಿದರಾಗಿಯೂ, ಸಂಕ್ಷಿಪ್ತವಾಗಿ ವಿಚಾರ ನಡೆಸುವದು ಕಾಯಿದೆ ಕ್ರಮಕ್ಕೆ ಸಮ್ಮತವಲ್ಲವಾಗಿಯೂ ವಾದಿಸಿದರು. ವಿಚಾರ ಮುಗಿದ ಬಳಿಕ, ಸಂಪಾದಕರು ಕ್ಷಮೆ ಬೇಡಲು ಸಿದ್ಧರಿರುವರೇನೆಂದು ಮುಖ್ಯ ನ್ಯಾಯಾಧೀಶರು ಸರ್ ತೇಜಬಹಾದ್ದೂರ ಸಪ್ರುರವರ ಕಡೆ ವಿಚಾರಿಸಲು, "ಎಷ್ಟಕ್ಕೂ ಕ್ಷಮೆ ಬೇಡತಕ್ಕದ್ದಲ್ಲವಾಗಿ ತಮಗ ತಿಳಿಸೋಣಾಗಿದೆ" ಎಂಬದಾಗಿ ಸರ್ ಸಪ್ರುರವರು ನುಡಿದ ಬಳಿಕ, ಸೋಮವಾರ ತೀರ್ಪು ಕೊಡುವೆವೆಂದು ನ್ಯಾಯಮೂರ್ತಿಗಳು ತಿಳಿಸಿ ಅಂದಿನ ಕೋರ್ಟು ವಿಸರ್ಜನ ಮಾಡಿದರು. ಸೋಮವಾರ ಐವ ನ್ಯಾಯಮೂರ್ತಿಗಳು ಐದು ತೀರ್ಪುಗಳನ್ನು ಬರೆದು ಹೇಳಿದರು. ನ್ಯಾ| ಮೂ| ಮುಕರ್ಜಿಯವರು ಖಟ್ಲೆಯ ಕ್ರಮ ಬೇಕಾಯಿದೇಶೀರ ಎಂದು ಅಭಿಪ್ರಾಯಕೊಟ್ಟರು. ಉಳಿದ ನಾಲ್ವರು ಸಂಪಾದಕ ಹಾಗು ಮುದ್ರಕರಿಗೆ ಅಪರಾಧಿಗಳೆಂದು ಠರಾಯಿಸಿ 'ಮೇಲ್ಕಾಣಿಸಿದಂತೆ ಶಿಕ್ಷೆ ವಿಧಿಸಿದ್ದಾರೆ. ತೀರ್ಪು ಕೊಟ್ಟ ಬಳಿಕ, ಮುಖ್ಯ ನ್ಯಾಯಾಧೀಶರು ನುಡಿದದ್ದೇನಂದರೆ— "ಈ ಕೋರ್ಟಿನ ನ್ಯಾಯಮೂರ್ತಿಗಳಿಗೆ ತಮ್ಮ ಕರ್ತವ್ಯ ಗೊತ್ತಿದೆ. ಅವರು ತಮ್ಮ ಕರ್ತವ್ಯವನ್ನು ಜರಗಿಸುತ್ತಿದ್ದಾರೆ, ಇನ್ನು ಮುಂದೆಯೂ ನಿದಾಕ್ಷಿಣ್ಯದಿಂದಲೂ ನಿರ್ಭಯದಿಂದಲೂ ಅವರು ತಮ್ಮ ಕರ್ತವ್ಯ ಜರಗಿಸುವರು." ಅಸಹಾಯರಾದ ಸಂಪಾದಕ-ಮುದ್ರಕರಿಗೆ ಈ ಪ್ರಕಾರ ಉಪನ್ಯಾಸ ಕೊಡುವ ಅವಶ್ಯಕತೆ ಏನಿತ್ತೆಂಬ ಸಂಗತಿ ಯಾರಿಗೂ ತಿಳಿಯದಂತಾಗಿದೆ. ಕಲಕತ್ತೆಯ ನ್ಯಾಯಮೂರ್ತಿಗಳಿಗೆ ಸಂಪಾದಕರ ಭಯವೇನು? ಸಂಪಾದಕರ ದಾಕ್ಷಿಣ್ಯವೇನು? ಈ ಮಾತುಗಳನ್ನು ಸಂಪಾದಕರು ನುಡಿದದ್ದರೆ ಶೋಭೆಯಿತ್ತು. ಮುಖ್ಯ ನ್ಯಾಯಾಧೀಶರಂಥ ಜವಾಬ್ದಾರಿ ಅಧಿಕಾರಸ್ಥಾನಕ್ಕೆ ಈ ಮಾತುಗಳು ಒಪ್ಪುವದಿಲ್ಲ.

* *

ಕಲಕತ್ತೆಯ 'ಅಮೃತ ಬಝಾರ ಪತ್ರಿಕೆ'ಯ ಪರಂಪರೆಯೇ ದೊಡ್ಡದಿದೆ. ಕ್ಷಮಾಯಾಚನೆಯನ್ನು ಅದು ಈ ತನಕ ಮಾಡಿದ್ದಿಲ್ಲ. ಮುಖ್ಯ ನ್ಯಾಯಾಧೀಶರು ನುಡಿದಂತೆ ತಮ್ಮ ಕರ್ತವ್ಯವನ್ನು ನಿದಾಕ್ಷಿಣ್ಯದಿಂದಲೂ, ನಿರ್ಭಯದಿಂದಲೂ ಅವರು ಮಾಡಿರುತ್ತಾರೆ. 'ಪತ್ರಿಕೆ'ಯ ಮೇಲೆ ನಾಲ್ಕು ಬಾರಿ ಖಟ್ಲೆಗಳಾದವು. ೧೮೭೬ನೇ ಇಸ್ವಿಯಲ್ಲಿ ಜಸ್ಸೂರಿನ ಸ. ಡಿಪ್ಟಿ ಜನಲ್ ಆಫೀಸರರು ಮಾನನಷ್ಟದ ಫೌಜದಾರಿ ಮೊಕದ್ದಮೆ ಮಾಡಿ ಮುದ್ರಕರಿಗೆ ೬ ತಿಂಗಳ ಶಿಕ್ಷೆ ಕೊಟ್ಟು ಕಾರಾಗೃಹಕ್ಕಟ್ಟಿದರು. ಈಗಿನ ಸಂಪಾದಕರ ತಂದೆಯವರಾದ ಶ್ರೀ| ವಾ| ಶಿಶಿರಕುಮಾರ ಘೋಷರವರು ಆಗಿನ ಸಂಪಾದಕರಾಗಿದ್ದರು. ಅವರು ಸಂಪಾದಕರೆಂದು ಸರಕಾರದಿಂದ ಸಿದ್ಧ ಮಾಡಲಾಗಲಿಲ್ಲ, ಆದರಿಂದ ಅವರು ತಪ್ಪಿದರು. ೧೮೯೩ನೇ ಇಸ್ವಿಯಲ್ಲಿ ಮತ್ತೊಂದು ಖಟ್ಲೆ ನಡೆದಿತ್ತು. ಆ ಖಟ್ಲೆಯಲ್ಲಿ 'ಪತ್ರಿಕೆ'ಯವರು ನಿರ್ದೋಷಿಗಳೆಂದು ಬಿಡುಗಡೆಯಾದರು. ೧೯೧೭ನೇ ಇಸ್ವಿಯಲ್ಲಿ ಹೈಕೋರ್ಟಿನ ಮೇಲೆ ಮಾಡಿದ ಟೀಕೆಯ ಬಗ್ಗೆ ಮುದ್ರಕರಿಗೆ ರೂಪಾಯಿ ೩೦೦ ದಂಡವಾಯಿತು. ಈಗಿನ ಖಟ್ಲೆ ೪ನೇದು. ೬೭ ವರ್ಷಗಳ ಆಯುಷ್ಯದಲ್ಲಿ 'ಪತ್ರಿಕೆ'ಯ ಮೇಲೆ ನಡೆದ ಖಟ್ಲೆಗಳ ವಿವರವಿದು! 'ಅಮೃತ ಬಝಾರ ಪತ್ರಿಕೆ'ಯು ಇಡೀ ಬಂಗಾಲ ಇಲಾಖೆಯಲ್ಲಿಯೂ, ಹಿಂದುಸ್ಥಾನ ದೇಶದಲ್ಲಿಯೂ ಮಾನ್ಯತೆ ಪಡೆದ ಪ್ರಮುಖ ಪತ್ರಿಕೆ. ನಿರ್ಭಯದಿಂದ ಲೋಕಸೇವೆ

ಎಷ್ಟು ಹಣ ಕೊಟ್ಟರೂ

ಇದಕ್ಕೂ ಸೊಗಸಾದ ಸಾಬೂನು ಸಿಗದು!!



ಸ್ವಸ್ತಿಕ ಆಯಿಲ್ ಮಿಲ್ಸದವರು ತಯಾರಿಸಿದ **ಗಂಧದ ಸಾಬೂನು** ಕಠೋರ ಪರೀಕ್ಷೆಯಲ್ಲಿ ತೇರ್ಗಡೆ [illegible] ಪಾಟಿಯಲ್ಲಿ ಹೊಂದಿದೆ. ಇದಕ್ಕೂ ಮೇಲಾದ ಸಾಬೂನು ಹಿಂದುಸ್ಥಾನದಲ್ಲಿ ಇಲ್ಲ, [illegible] ಕಿಂಮತಿನಲ್ಲಿ ಸಿಗುವದು ಅಸಂಭವವೆಂಬ ಹೆಮ್ಮೆಯಿಂದಲೇ ಅದು ಜನತೆಯ ಮುಂದೆ ಬಂದಿರುತ್ತದೆ!

ಅತಿ ನಿರ್ಮಲವಾದ ದ್ರವ್ಯಗಳಿಂದಲೂ, ಚಿರಕಾಲ ಬಾಳುವ ಕೋಮಲ ಪರಿಮಳದಿಂದಲೂ ಯುಕ್ತವಾಗಿರುವ ಈ ಸಾಬೂನು ಹಿಂದುಸ್ಥಾನದ ಪೇಟೆಗಳಲ್ಲಿ ಈಗಾಗಲೇ ಅಗ್ರಪೂಜೆಯ ಮಾನವನ್ನು ಪಡೆದಿದೆ!!

ಸ್ವಸ್ತಿಕ ಮಿಲ್ಸದವರು "ಸುಪರಫ್ಯಾನ ಸೋಪ" ಎಂಬ ಬಟ್ಟೆ ತೊಳೆಯುವ ಸಾಬೂನು, ಶೇವಿಂಗ ಕ್ರೀಮು, ಹೇರ ಆಯಿಲ್ ಮತ್ತು ದಂತಮಂಜನ ಇವನ್ನೂ ತಯಾರಿಸಿರುವರು

ಉತ್ತರ ಕಾನಡಾ ಜಿಲ್ಹೆಯ ಏಜಂಟರು ಮತ್ತು
ಹುಬ್ಬಳ್ಳಿ—ಧಾರವಾಡಗಳಲ್ಲಿ ಮಾಲಿನ ಸಂಗ್ರಹವಿಡುವವರು.—

ಎನ್. ಎಸ್. ರಂಗೈಶೇಣ್ವಿ, ಪ್ರೋ. ಹಳಿಯಾಳ.

SWASTIK SANDALWOOD SOAP

ಮಾಡುವ ಪತ್ರಿಕೆ. ಇಂಥ ಪರಾಕ್ರಮಿ ಪತ್ರಕರ್ತರ ಮೇಲೆ ಈ ಪ್ರಸಂಗವೊದಗಿದ್ದ, ನೋಡಿ ಎಲ್ಲೆಲ್ಲೂ ವ್ಯಸನವುಂಟಾಗಿದೆ. ಶ್ರೀ| ತುಷಾರಕಾಂತಿ ಘೋಷರವರು ಮಾನ್ಯ ಪುರುಷರು. ಮೋಲ್ಬೋರ್ನದಲ್ಲಿ ಜರಗಲಿಕ್ಕಿದ್ದ ಅಂತರ್ರಾಷ್ಟ್ರೀಯ ಪರಿಷತ್ತಿಗೆ ಹಿಂದುಸ್ಥಾನದ ಪರವಾಗಿ ಇವರಿಗೆ ನಿಮಂತ್ರಣವಾಗಿತ್ತು. ಇಂಥ ಮಹನೀಯರಿಗೆ ಈ ಪರಿಯ ಕಷ್ಟವೊದಗುವದು ದೇಶದ ದುರ್ದೈವ. ಸಜ್ಜನರ ಆತ್ಮಕ್ಲೇಶದಿಂದಲೇ ಹಿಂದಭೂಮಿಯ ಉದ್ಧಾರವಾಗಬೇಕೆಂದು ಪರಮಾತ್ಮನ ಸಂಕಲ್ಪವಿರಬಹುದಲ್ಲವೇ ?

* * *

ಕರಾಚಿ ಗೊಂಬಿಯ ಪ್ರಕರಣ ಬಗೆಹರಿಯಿತು. ಅಲ್ಲಿಯ ಡಿ| ಮೆಜಿಸ್ಟ್ರೇಟರೂ, ಇತರ ಅಧಿಕಾರಿಗಳೂ ಪ್ರಸಂಗಕ್ಕೆ ತಕ್ಕದ್ದಾಗಿ ನಡಕೊಂಡವರೆಂದೂ, ಚೌಕಶಿ ಮಾಡುವದು ಅವಶ್ಯವಿಲ್ಲವಾಗಿಯೂ ಮುಂಬಯಿ ಸರಕಾರವು ನಿರ್ಧರಿಸಿ ಅದರಂತೆ ಪ್ರಕಟಣೆಯನ್ನು ಹೊರಡಿಸಿದೆ. ಮುಂಬಯಿ ಸರಕಾರದ ನಿರ್ಧಾರವು ಹಿಂದುಸ್ಥಾನ ಸರಕಾರಕ್ಕೆ ಮಾನ್ಯವಿದೆ. ಈ ಪ್ರಕರಣಕ್ಕಾಗಿ ಮುಂಬಯಿಯಿಂದ ಗೃಹಮಂತ್ರಿಗಳಾದ ಮಿ| ಬೆಲ್‌ರವರು ರಜೆಯ ಅವಧಿಯನ್ನು ಸಹ ಮುಂದರಿಸಿ ವಿಮಾನ ಮಾರ್ಗವಾಗಿ ಕರಾಚಿಗೆ ಹಾರಿಹೋಗಿ, ಅಲ್ಲಿಂದ ಮುಂಬಯಿಗೆ ಬಂದು ಪ್ರಾಂತಾಧಿಪರೊಡನೆ ದಿಲ್ಲಿಗೆ ಹೋಗಿ ಅಲ್ಲಿ ಹಿಂದುಸ್ಥಾನ ಸರಕಾರದೊಡನೆ, ಸರ್ವಾಧಿಪತಿಗಳೊಡನೆ ಆಲೋಚಿಸಿ ಮುಂಬಯಿಗೆ ಹಿಂತಿರುಗಿ ಒಂದು ಕರಾಚಿಯ ವೃತ್ತಾಂತವನ್ನು ಪ್ರಕಟಿಸಿ ಕರಾಚಿಯ ಡಿ| ಮೆಜಿಸ್ಟ್ರೇಟರು ಕೈಕೊಂಡ ಯಾವತ್ತೂ ಕಾರ್ಯಕ್ರಮವನ್ನು ಮನ್ನಿಸಿದ್ದಾರೆ. ಜನಸಂದಣಿಯನ್ನು ಚದರಿಸುವಾಗ ಗುಂಡಿಗೆ ತುತ್ತಾದವರ ಬಗ್ಗೆ ಖೇದ ಪ್ರದರ್ಶನ ಮಾಡಿರುತ್ತಾರೆ. ಲಗಬಗೆಯಿಂದ ಡಿ| ಮೆಜಿಸ್ಟ್ರೇಟರು ಸೈನ್ಯ ಪಥಕವನ್ನು ಕರೆಸಿಕೊಂಡು ಜನಸಂದಣಿಯನ್ನು ಚದರಿಸದಿದ್ದಲ್ಲಿ ಘೋರ ಅನರ್ಥವೊದಗುತ್ತಿತ್ತಾಗಿಯೂ ಮುಂಬಯಿ ಸರಕಾರದ ಪ್ರಕಟಣೆ. ಯಾವತ್ತೂ ಸೈನಿಕರು ಕೂಡಿ ೪೭ ಸಲ ಗುಂಡು ಹಾರಿಸಿದರಂತೆ. ಒಬ್ಬ ಸೈನಿಕನು ತಿಕ್ಕಾ ಮಿಕ್ಕ ಗುಂಡು ಹಾರಿಸಲಿಲ್ಲ. ಅಂತು ೪೭ ಮಂದಿ ಸತ್ತರು; ೩೩೪ ಮಂದಿಗಳಿಗೆ ಘಾಯವಾಗಿದೆ. ಒಬ್ಬ ಹೆಂಗಸಿಗೆ ಬಹಳ ಘಾಯವಾಗಿದೆ; ೫ ಮಂದಿ ಹುಡುಗರು ಸತ್ತರು. ಇಬ್ಬರು ಪ್ರಾಣಾಂತಿಕ ಸ್ಥಿತಿಯಲ್ಲಿರುತ್ತಾರೆ. ಕರಾಚಿಯ ಅಧಿಕಾರಿಗಳು ಪ್ರಸಂಗಕ್ಕೆ ಮಿಕ್ಕಿ ನಡಕೊಂಡರಾಗಿಯೂ, ಪರಿವೆಯಿಲ್ಲದೆ ಜನರ ಮೇಲೆ ಗುಂಡುಹಾರಿಸಿದರಾಗಿಯೂ, ಕರಾಚಿಯಲ್ಲಿ ಸ್ಥಾಪನೆಯಾದ 'ಕರಾಚಿ ಪ್ರೆಸಿಡೆಂಟ್ ಲೀಗ' ಯಾನೆ ಕರಾಚಿಯೊಳಗಿನ ಅನರ್ಥ ಚೌಕಶಿ ಮಂಡಳದ ಅಭಿಪ್ರಾಯ. ಈ ಮಂಡಳದ ಅಧ್ಯಕ್ಷರು ಶೇಕ ಅಬ್ದುಲ್ಲ ಮಜೀದರವರು. ಇವರು ಮುಂಬಯಿ ಕಾ| ಕೌ| ಸಭಾಸದರು ಬ್ರೆಬರ್ನ ದೊರೆಗಳಿಗೂ ವಿಲಿಂಗಡನ್ ದೊರೆಗಳಿಗೂ ತಂತಿ ಮಾಡಿ ಅಧಿಕಾರಿಗಳು ಅತಿಕ್ರಮ ಮಾಡಿದರಾಗಿಯೂ ಗೊಂಬಿಯ ಚೌಕಶಿ ಮಾಡಬೇಕೆಂದಾಗಿಯೂ ಇವರು ಬರಕೊಂಡಿದ್ದರು. ಅತಿಕ್ರಮದ ಕೆಲವು ವಿವರಗಳನ್ನೂ ಇವರು ತಿಳಿಸಿದ್ದರಂತೆ. ಮುಸಲ್ಮಾನೇತರ ಚೌಕಶಿ ಮಂಡಳ ನೇಮಿಸಿದರೂ ಆಕ್ಷೇಪವಿಲ್ಲವಾಗಿಯೂ ಇವರು ತಿಳಿಸಿದ್ದರಂತೆ. ಸರಕಾರದ ಪ್ರಕಟಣೆಯಲ್ಲಿ ಆಕ್ಷಿಪ್ತ ವಿವರಗಳಿಗೆ ಸಮರ್ಪಕ ಉತ್ತರವಿಲ್ಲವಾಗಿಯೂ, ಲೋಕಪಕ್ಷದ ಪರಿವೆಯನ್ನು ಸರಕಾರವು ಹಿಡಿಯುವದಿಲ್ಲವಾಗಿಯೂ, ಅಧಿಕಾರಿಗಳ ಪಕ್ಷಪಾತ ಹಿಡಿದು ಮುಂಬಯಿ ಸರಕಾರವು ಲೋಕಕ್ಕೆ ಬಾಯಿ ಮುಚ್ಚಿಸುತ್ತದಾಗಿಯೂ ಶೇಕ ಅಬ್ದುಲ್ಲ ಮಜೀದರವರು ಮುಂಬಯಿ ಸರಕಾರದ ಮೇಲೆ ಆರೋಪ ಹೊರಿಸಿ ಪ್ರಾಂತಿಕ ಕಾಯಿದೆ ಕೌನ್ಸಿಲಿನ ಸಭಾಸದತ್ವಕ್ಕೆ ನಿಷೇಧವೆಂದು ರಾಜಿನಾಮೆ ಕೊಟ್ಟಿರುತ್ತಾರೆ. ಸರಕಾರವು ವರಿಷ್ಠ ಕಾಯಿದೆ ಕೌನ್ಸಿಲಿನ ನಿಷೇಧ ಠರಾವನ್ನೂ ಲೆಕ್ಕಿಸಲಿಲ್ಲ. ಹಿರಿಯರ ಸಭೆಯಲ್ಲಿ ಬುಧವಾರ ನಡೆದ ಚರ್ಚೆ ನಿಷ್ಫಲವಾಯಿತು. "ಅಧಿಕಾರಿಗಳ ಕಡೆ ತಪ್ಪಿಲ್ಲದಿದ್ದರೆ ಬಹಿರಂಗವಾಗಿ ಅವರು ಚೌಕಶಿ ಮಾಡಲು ಹಿಂಜರಿಯುವದೇಕೆ?" ಎಂಬದಾಗಿ ಹಿರಿಯರ ಸಭೆಯ ಸಭಾಸದರಾದ ಮಿ| ಹುಸೇನ್ ಇಮಾಮ, ಪಂ| ನೆಹ್ರೂ, ರಾ. ಬ. ... ರವರು ಪ್ರಶ್ನಿಸಿದರು. ಗೃಹಮಂತ್ರಿಗಳಾದ ಸರ್ ಹೆನ್ರಿ ಕ್ರೇಕರವರು "ಈಗ ಚೌಕಶಿ ಮಾಡಹೋದಲ್ಲಿ ಕೆಳ ಅಧಿಕಾರಿಗಳ ಮೇಲೆ ಮೇಲಧಿಕಾರಿಗಳ ನಂಬಿಗೆ ಇದೆ ಇಲ್ಲವೆಂಬ ಅಭಿಪ್ರಾಯವಾಗಿ, ಆಪತ್ಕಾಲದಲ್ಲಿ ದೃಢತೆಯಿಂದ ನಡಕೊಳ್ಳಲು ಅವರಿಗೆ ತಕ್ಕ ಧೈರ್ಯ ದೊರೆಯಲಿಕ್ಕಿಲ್ಲ" ವಾದಿಸಿದರು. ಮಿ| ಯಾಕೂಬಸಾಹೇಬರವರು ಸರಕಾರದ ಪಕ್ಷವನ್ನೇ ಎತ್ತಿಹಿಡಿದರು. ಈ ಸೂಚನೆಯ ಮೇಲೆ ಮತ ಎಣಿಸಲು ಸಮಯ ಕೊಡಲಿಲ್ಲ. "ನಿಮಗೆ 'ಸರ್' ಕಿತಾಬು ನಿಶ್ಚಯವಾಗಿ ಬರುವದು; ನಿಮ್ಮ ಪರಾಕ್ರಮ ಅಷ್ಟು ದೊಡ್ಡದು," ಎಂಬದಾಗಿ ಮಿ| ಯಾಕೂಬಸಾಹೇಬರವರಿಗೆ ಸರಕಾರಿ ಸಭಾಸದರಾದ ಮಿ| ಹುಸೇನ ಇಮಾಮರವರು ಸಂತಪ್ತರಾಗಿ ನುಡಿದರು. ಸಮಯಾಭಾವದಲ್ಲಿ ಹಿರಿಯರ ಸಭೆಯ ಅಭಿಪ್ರಾಯ ರೀತಿಯಂತೆ ಪ್ರದರ್ಶಿಸಲು ಅಸಾಧ್ಯವಾಯಿತು. ಆದರೂ ಸರಕಾರವು ಚೌಕಶಿ ಮಾಡಲೊಪ್ಪುವದಿಲ್ಲವೆಂಬ ಮಾತು, ಸರಕಾರಪಕ್ಷಪಾತಿಯಾದ ಹಿರಿಯರ ಸಭೆಯವರಿಗೂ ಮಾನ್ಯವಿಲ್ಲವೆಂಬ ಹಕೀಕತು ಈ ಚರ್ಚೆಯಿಂದ ಸ್ಫುಟವಾಗಿದೆ. ಸರಕಾರಕ್ಕೆ ಲೋಕಮತದ ಪರಿವೆಯಿಲ್ಲವೆಂಬ ಬೋಧವನ್ನು ನಮ್ಮ ಮುಹಮ್ಮದೀಯ ಬಾಂಧವರು ಈ ಪ್ರಕರಣದಿಂದ ಕಲಿತುಕೊಂಡರೆ ಅದೊಂದು ಇಷ್ಟ ಸಂಗತಿಯೇ !

* * *

ಈ ಮೊದಲೇ ತಿಳಿಸಿದಂತೆ, ವಾರ್ಷಿಕ ಕರ ಹೇರಿಕೆಯ ಕಾನೂನಿನಲ್ಲಿ ಸರ್ವಾಧಿಪತಿ ವಿಲಿಂಗಡನ್ ದೊರೆಗಳು ರಾಜ್ಯಾಡಳಿತೆಗೆ ಖರ್ಚು ಪೂರೈಸಿಕೊಳ್ಳುವ ನೆವದಿಂದ ಸರಕಾರವು ಸೂಚಿಸಿದಂತೆ ವಾರ್ಷಿಕ ಕರ ಹೇರಿಕೆಯ ಕಾನೂನನ್ನು ವರಿಷ್ಠ ಕಾಯಿದೆ ಕೌನ್ಸಿಲು ತಿದ್ದುಪಡಿ ಮಾಡದೆ ಮನ್ನಿಸಬೇಕಾಗಿ ಹೊರಡಿಸಿದ ಹುಕುಮನ್ನು ವರಿಷ್ಠ ಕಾಯಿದೆ ಕೌನ್ಸಿಲು ಮನ್ನಿಸಲೊಪ್ಪಲಿಲ್ಲ. ಸರ್ವಾಧಿಪತಿಗಳು ಮಾಡಿದ ಶಿಫಾರಸಿನಿಂದ ವರಿಷ್ಠ ಕಾಯಿದೆ ಕೌನ್ಸಿಲಿಗೆ ಅವಮಾನವಾಗಿರುವದಾಗಿ ಕೊಂಗ್ರೆಸ ಪಕ್ಷದವರೂ, ಇತರ ಸಭಾಸದರೂ ಅಭಿಪ್ರಾಯಪಟ್ಟರು. ಸರಕಾರದ ನಡತೆ ಸರ್ ಕಾವಸಜಿ ಜಹಾಂಗೀರ, ಡಾ| ಝಿಯಾಉದ್ದೀನ ಅಹಮ್ಮದರವರಂಥ ಸರಕಾರ ಪಕ್ಷಪಾತಿಗಳಿಗೆ ಸಹ ಸೇರಲಿಲ್ಲ. ಯುರೋಪಿಯನ್ ಸಭಾಸದರು ಕಟಿಷ್ಟ ನಿಂತರು. "ಇಂಥ ನಿರಂಕುಶ ಅಧಿಕಾರ ಬಹುಕಾಲ ಬಾಳದು; ಅದು ಕ್ಷಣಭಂಗುರವಾದುದು. ನಾವು ಮನೋದೇವತೆಯನ್ನು ಸ್ಮರಿಸಿ ದುಡಿಯುತ್ತಿದ್ದೇವೆ. ನಮಗೆ ನೀವು ಬೇಜವಾಬದಾರ ಎಂದು ಹೇಳುತ್ತಿದ್ದೀರಿ. ನಿಮ್ಮ ಕಾರ್ಯಕ್ರಮಕ್ಕೆ ನಾವು ಬಸವಣ್ಣನಂತೆ ತಲೆದೂಗಿದರೆ, ನಾವು ಜವಾಬದಾರರು; ಇಲ್ಲವಿದ್ದರೆ ನಾವು ಬೇಜವಾಬದಾರರು; ಇದೇ ನಿಮ್ಮ ವ್ಯಾಖ್ಯೆಯಲ್ಲವೇ ? ಕಾಳುಕಡಿಗಳ ದರ ಕುಗ್ಗಿದಾಗ್ಯೂ ದೊಡ್ಡ ದೊಡ್ಡ ಸಂಬಳ ತಿನ್ನುವ ಅಧಿಕಾರಿಗಳು ವರಿಷ್ಠ ಕಾಯಿದೆ ಕೌನ್ಸಿಲಿನ ಅಭಿಪ್ರಾಯವನ್ನು ಮನ್ನಿಸಲೊಪ್ಪುವದಿಲ್ಲ. ರಾಜ್ಯಘಟನೆಯ ಕಾನೂನಿನಂತೆ ಸರಕಾರವು ವರಿಷ್ಠ ಕಾಯಿದೆ ಕೌನ್ಸಿಲಿನ ಅಭಿಪ್ರಾಯವನ್ನು ಅತ್ಯಂತ ಆದರದಿಂದ ವಿಚಾರಿಸಬೇಕೆಂದಿದೆ; ತಿರಸ್ಕಾರದಿಂದ ಧಿಕ್ಕರಿಸಬೇಕೆಂದಿಲ್ಲ. ಬ್ರಿಟಿಶರ ಅಭಿಪ್ರಾಯವನ್ನು ನಾನು ಇಂಗ್ಲಂಡಿಗೆ ಹೋದಾಗ ತಿಳಕೊಂಡಿದ್ದೇನೆ. ಕೊನ್ಸರ್ವೆಟಿವ್ ಯಾನೆ ಹಿಂದುಸ್ಥಾನಕ್ಕೆ ರಾಜ್ಯಾಧಿಕಾರ ಕೊಡಬಾರದೆಂಬ ರಾಜಪಕ್ಷದವರೊಡನೆ ನಾನು ಮಾತನಾಡಿದ್ದೆ. "ಸರಕಾರವು ಲೋಕಪ್ರತಿನಿಧಿಗಳ ಅಭಿಪ್ರಾಯವನ್ನು ಮನ್ನಿಸಿ ಅಲ್ಪಾಂಶದಿಂದ ಸಹ ನಡಕೊಂಡಲ್ಲಿ ಹಿಂದೀಯರು ದಿಟ್ಟರಾಗಿ ಬ್ರಿಟಿಶರ ಕಡೆ ಹೋರಾಡಿ ಅವರ ಸಾರ್ವಭೌಮತ್ವವನ್ನು ಅಂತ್ಯಪಡಿಸುವರು;" ಎಂಬದಾಗಿ ರಾಜಪಕ್ಷದ ಪ್ರಮುಖರು! ಉದ್ಗರಿಸಿದರು. ಈ ಮನೋಭಾವನೆಯೇ ಈ ಧಿಕ್ಕಾರದ ಮೂಲ. ಸರಕಾರವು ವರಿಷ್ಠ ಕಾಯಿದೆ ಕೌನ್ಸಿಲಿನ ಕರ ಇಳಿತದ ಸೂಚನೆಗಳನ್ನು ತಿರಸ್ಕರಿಸಿ ಲೋಕಮತವನ್ನು ತುಳಿದುಬಿಟ್ಟಿದೆ. ಇದು ಕ್ಷೇಮಕರವಲ್ಲ." ಎಂಬದಾಗಿ ಶ್ರೀ| ಭುಲಾಭಾಯಿಯವರು ಸ್ಪಷ್ಟವಾಗಿ ಆವೇಶದಿಂದಲೂ, ಸಂತಾಪದಿಂದಲೂ ನುಡಿದರು. ಸರ್ ಕಾವಸಜಿ ಜಹಾಂಗೀರರವರೂ, ರಾ|| ಜೋಶಿಯವರೂ ಸರಕಾರದ ನಿರಂಕುಶ ಅಧಿಕಾರದ ಪ್ರದರ್ಶನವನ್ನು ಧಿಕ್ಕರಿಸಿದರು. ರಾಷ್ಟ್ರೀಯ ಸಭೆಯವರು ಬೇಜವಾಬದಾರರೆಂಬ ಸರಕಾರದ ಆರೋಪವನ್ನು ಶ್ರೀ| ಸತ್ಯಮೂರ್ತಿಗಳು ಮರೆಮಾಚದೆ ಹಳಿದು ನುಡಿದದ್ದೇನೆಂದರೆ:- "ಕರ ಇಳಿತದ ಸೂಚನೆಗಳನ್ನು ಮನ್ನಿಸಿ ನಿಮ್ಮಿಂದ ರಾಜ್ಯದಾಡಳಿತ ನಡಿಸಲಾಗದಿದ್ದರೆ ನೀವು ಬಿಟ್ಟು ಹೊರಹೋಗಿರಿ. ನಾವು ನಿಮ್ಮ ಅಧಿಕಾರ ಪಡೆದು ರಾಜ್ಯಾಡಳಿತೆ ನಡಿಸುತ್ತೇವೆ. ನಿಮಗಿಂತ ನಾವು ಒಳ್ಳೇ ರೀತಿಯಿಂದ ರಾಜ್ಯ ನಡಿಸಬಲ್ಲೆವು." ಅರ್ಥಸಚಿವರಾದ ಸರ್ ಜೇಮ್ಸ ಗ್ರಿಗ್‌ರವರು ಮಾಡಿದ ಸರಕಾರದ ವಕೀಲಿ ನಿರರ್ಥಕವಾಗಿ ಆ ಕಾನೂನು ತಿರಸ್ಕರಿಸಲ್ಪಟ್ಟಿತು. ಈಗ ಈ ಕಾನೂನಿನ ಚರ್ಚೆ ಹಿರಿಯರ ಸಭೆಯಲ್ಲಿ ನಡೆದಿದೆ. ಅಲ್ಲಿ ಬಹುತರವಾಗಿ ಕಾನೂನು ಮಂಜೂರಿಯಲ್ಲಿ ಸರ್ವಾಧಿಪತಿಗಳ ಅಂಕಿತ ಪಡೆದು ಅದು ಕಾಯಿದೆಯಾಗಿ ಅಮಲಿನಲ್ಲಿ ಬರುವದು. ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ರಾಷ್ಟ್ರೀಯ ಸಭೆಯವರು ಸರಕಾರದ ನಿರಂಕುಶ, ಬೇಜವಾಬದಾರ ಬಲಾತ್ಕಾರವನ್ನು ಬೈಲಿಗೆಳೆದು ಜನಸಾಮಾನ್ಯರಿಗೆ ರಾಜ್ಯಾಧಿಕಾರ ಒಪ್ಪಿಸುವ ಕಪಟ ನಾಟಕದ ನಿಜ ವೇಷವನ್ನು ಜಗತ್ತಿಗೆ ಸಾರಿದ್ದಾರೆ. ಈ ಅಧಿವೇಶನದ ಪರಾಕ್ರಮ ಇದೇ.

ಪೋಸ್ಟ ಮತ್ತು ತಾರ ಖಾತೆಯ ಮಾಹಿತಿ.

ಗೊತ್ತು ಹಚ್ಚುವ ಕಾರ್ಡು.

೧. ಪರಸ್ಥಳಕ್ಕೆ ಹೋದಲ್ಲಿ ಮನಿಆರ್ಡರಿನಿಂದ ಹಣವಾಗಲಿ, ವಿಮೆ ಇಳಿಸಿದ ಪತ್ರವಾಗಲಿ ಬಂದರೆ ಇವರೇ ಆ ಮನುಷ್ಯರೆಂದು ಗೊತ್ತು ಹಚ್ಚುವದು ಬಹು ಕಠಿಣವಾಗುವದು. ಇದು ಜವಾಬದಾರಿಯ ಕೆಲಸವಿರುವದರಿಂದ ಅವರ ಗುರ್ತ ಹತ್ತಿದ ಹೊರತು ಪೋಸ್ಟ ಖಾತೆಯವರಿಗೂ ಏನೂ ಮಾಡಲಿಕ್ಕೆ ಬರಲಾರದು. ಈ ತೊಂದರೆಯನ್ನು ದೂರ ಮಾಡುವಗೋಸುಗ ಪೋಸ್ಟ ಖಾತೆಯವರು 'ಆಯಡೆಂಟಿಫಿಕೇಶನ್ ಕಾರ್ಡು' ಅಂದರೆ "ಗುರ್ತು ಹಿಡಿಯುವ ಕಾರ್ಡು"ಗಳೆಂದು ಒಂದು ಹೊಸ ಯೋಜನೆಯನ್ನು ತೆಗೆದಿದ್ದಾರೆ. ಈ ಯೋಜನೆಯು ಈಗ ನಾಲ್ಕು ವರ್ಷಗಳಿಂದ ರೂಢಿಯಲ್ಲಿದೆ. ಪ್ರವಾಸಿಕರು, ಯಾತ್ರಿಕರು ದೊಡ್ಡ ಕಂಪನಿಯ ಅಥವಾ ವಿಮಾ ಕಂಪನಿಯ ಯಾವಾಗಲೂ ತಿರುಗುತ್ತಿರುವ ಗುಮಾಸ್ತರು ಇವರಿಗೆ ಈ ಯೋಜನೆಯಿಂದ ಚೆನ್ನಾಗಿ ಉಪಯೋಗವಾಗುವಂತಿದೆ. ಈ ಯೋಜನೆಯಿಂದ ಮನಿಆರ್ಡರು, ವಿಮೆ ಇಳಿಸಿದ ಪತ್ರ ಇವು ತೀವ್ರ ದೊರೆಯುವಗೋಸುಗ ಈ 'ಆಯಡೆಂಟಿಫಿಕೇಶನ್ ಕಾರ್ಡು'ಗಳೇ ಒಳ್ಳೇ ಸಾಧನಗಳಾಗಿವೆ.

೨. ಪ್ರತಿಯೊಂದು ಹೆಡ್ ಪೋಸ್ಟ ಆಫೀಸಿನಲ್ಲಿ ಈ ಕಾರ್ಡುಗಳು ದೊರೆಯುತ್ತವೆ. ಇವುಗಳ ಫೀ ಮಾತ್ರ ಒಂದೇ ರೂಪಾಯಿ ಇರುತ್ತದೆ. ಈ ಕಾರ್ಡಿನ ಮುದ್ದತು ಮೂರು ವರ್ಷಗಳ ವರೆಗೆ ಮಾತ್ರ ಇರುತ್ತದೆ. ಆ ನಂತರ ಬೇಕಾದಲ್ಲಿ ಪುನಃ ಎರಡನೇ ಕಾರ್ಡು ಫೀ ಕೊಟ್ಟು ತೆಗೆದುಕೊಳ್ಳಬೇಕಾಗುವದು. ಈ ಕಾರ್ಡು ತೆಗೆದುಕೊಳ್ಳುವ ಮನುಷ್ಯನು ಆವ ಪಿರತಿಕ್ಕ ಭಾಗದಲ್ಲಿ ಒಳ್ಳೇ ಮಾಹಿತಿಗಾರನಿದ್ದು ಅವನ ಗುರ್ತು ಪೋಸ್ಟ ಮಾಸ್ತರರಿಗೆ ಗೊತ್ತಿರಬೇಕು. ಇದಲ್ಲದೆ ತನ್ನ ಚಿತ್ರ (ಫೋಟೊ) ವನ್ನು ಆ ಕಾರ್ಡಿಗೆ ಅಂಟಿಸಲು ಕೊಡಬೇಕು. ಕಾರ್ಡಿನಲ್ಲಿ ಅವನ ವರ್ಣನೆಯೆಂದರೆ: ಹುಟ್ಟಿದ ತಾರೀಖು, ಹುಟ್ಟಿದ ಊರು, ಎತ್ತರ, ಬಣ್ಣ, ವೈಯಕ್ತಿಕ ಗುರ್ತ [ಕಚ್ಚು ವಗೈರೆ] ಉದ್ಯೋಗ, ಮತ್ತು ಯಾವಾಗಲೂ ವಾಸಿಸುವ ಸ್ಥಳ, ತನ್ನ ಸಹಿ, ಮತ್ತು ಆ ಸಹಿಯು ಫೋಟೋ ಇವಲ್ಲ ಸಮಾವೇಶವಾಗುತ್ತವೆ. ಸಹಿಯನ್ನು ಪೋಸ್ಟ ಮಾಸ್ತರರ ಸಮಕ್ಷಮ ಮಾಡಬೇಕಾಗುತ್ತದೆ.

೩. ಸಾಮಾನ್ಯತಃ ಈ ಕಾರ್ಡಿನ ಮೇಲಿಂದ ಗುರ್ತು ಹತ್ತಬಹುದು. ಆದರೆ ಸಂಶಯ ಬಂದಲ್ಲಿ ಅವರ ಬಗ್ಗೆ ಖಾತ್ರಿ ಮಾಡಿಕೊಳ್ಳುವದಕ್ಕಾಗಿ ಪೋಸ್ಟ ಆಫೀಸಿನವರು ಯೋಗ್ಯ ಚೌಕಶಿಯನ್ನು ಮಾಡಬಹುದು.

೪. ಮೂರು ವರ್ಷಗಳ ಅವಧಿಯಲ್ಲಿ ಕಾರ್ಡು ತೆಗೆದುಕೊಳ್ಳುವ ಮನುಷ್ಯನ ಲಕ್ಷಣವು ಬದಲಿಸಿ ಇವನೇ ಆ ಮನುಷ್ಯನೆಂದು ತಿಳಿಯುವದಿಲ್ಲ. ಇಂಥ ಸ್ಥಿತಿಯು ಪ್ರಾಪ್ತವಾದರೆ ಕಾರ್ಡಿನ ಅವಧಿಯು ಮುಗಿಯುವದರೊಳಗಾಗಿ ಹೊಸ ಫೋಟೋ ಹಾಜರ ಮಾಡಿ ಬದಲಾಯಿಸಿಕೊಳ್ಳಬೇಕು. ಮನುಷ್ಯನ ವರ್ಣನೆ ಮತ್ತು ಫೋಟೋ ಇವುಗಳ ಹೊರ್ತು ಯೋಗ್ಯವಾದ ಬೇರೆ ಸಾಕ್ಷಿಗಳೇ ಇಲ್ಲ. ಮತ್ತು ಇಂಥ ಪುರಾವೆಗಳಿಲ್ಲದಿದ್ದರೆ ಬೇರೆ ಸಾಕ್ಷಿಗಳು ಅನೇಕ ಸಾರೆ ಕುಂಠಿತವಾಗುತ್ತವೆ. ಪಂಢರಪುರ, ಡಾಕೋರ, ಪ್ರಯಾಗ ಮೊದಲಾದ ಯಾತ್ರೆಗಳ ಸ್ಥಳಗಳಲ್ಲಿ ಯಾತ್ರಿಕರಿಗೆ ಹಣದ ಕೊರತೆಯುಂಟಾಗುವದರಿಂದ ಎಷ್ಟೋ ಜನರು ತಮ್ಮ ಮನೆಗಳಿಂದ ತಂತಿಯ ಮೂಲಕ ಹಣವನ್ನು ತರಿಸುತ್ತಾರೆ. ಅವರು ಇಳಿದ ಮನೆಯವರು ಸಹ ಇವರನ್ನು ಗುರ್ತಿಸಲಿಕ್ಕೆ ಅಸಮರ್ಥರಾಗುತ್ತಾರೆ. ಈ ಗುರ್ತು ಹಿಡಿಯುವದು ಅಸಾಧ್ಯವಾಗುವದರಿಂದ ಪೋಸ್ಟ ಖಾತೆಯವರು ಹಣ ಕೊಡಲು ಹಿಂದು-ಮುಂದಾಗುತ್ತಾರೆ. ಇಂಥ ಪ್ರಸಂಗಗಳಲ್ಲಿ ಈ "ಆಯಡೆಂಟಿಫಿಕೇಶನ್ ಕಾರ್ಡಿ"ನ ಸಹಾಯವು ಚೆನ್ನಾಗಿ ಆಗುತ್ತದೆ. ಮತ್ತು ಯಾತ್ರಿಕರ ಅಡಚಣೆಯೂ ದೂರಾಗುತ್ತದೆ. ಸುಮಾರು ೪॥ ಇಂಚ ಉದ್ದ ಮತ್ತು ೩॥ ಇಂಚ ಅಗಲವಾದಂಥ ಅರಿವೆಯ ಮೇಲೆ ಮಡಚಲು ಬರುವಂಥ ಕಾರ್ಡನ್ನು ಅಂಟಿಸುವದರಿಂದ ಕಿಸೆಯಲ್ಲಿಡಲು ಸುಲಭವಾಗುತ್ತದೆ. ಪ್ರವಾಸಿಕರ ಹತ್ತರ ಈ ಕಾರ್ಡು ಇರುವದರಿಂದ ಹೋದ ಹೋದಲ್ಲೆಲ್ಲ ಅವರ ಗುರ್ತನ್ನು ಹಿಡಿಯುವದಕ್ಕಾಗಿ ಪೋಸ್ಟ ಆಫೀಸಿನವರು ಬೇಡುವ ಗುರ್ತಿನ ಜನರಿಗೆ ಆಗ್ರಹ ಮಾಡುವ ಕೆಲಸವು ನಿಂತುಹೋಗುವದು; ಯಾರ ಭಿಡೆಯೂ ಬೇಕಾಗುವದಿಲ್ಲ. ಹೀಗೆ ಈ ಕಾರ್ಡಿನಿಂದ ವಿಶೇಷ ಉಪಯೋಗವಿರುವದರಿಂದ ಜನರು ಇದರ ಕಡೆಗೆ ಲಕ್ಷಕೊಡಬೇಕು.

೬ ಆಣೆಗಳಲ್ಲಿ ಅಭಿನಂದನಪರ ತಂತಿ.

ಆನಂದದ ಪ್ರಸಂಗಗಳಲ್ಲಿ ಅಭಿನಂದನ ಮಾಡಲಿಕ್ಕೆಂದು 'ಅಭಿನಂದನ ತಂತಿ' ಎಂದು ತಂತಿ ಖಾತೆಯವರು ತಾರಿನ ಒಂದು ಹೊಸ ವರ್ಗವನ್ನು ನಿರ್ಮಾಣ ಮಾಡಿದ್ದಾರೆ. ಹೀಗೆ ಮಾಡುವಲ್ಲಿ ಜನರಿಗೆ ಖರ್ಚು ಕಡಿಮೆ ಬೀಳಬೇಕು ಮತ್ತು ತಂತಿ ಖಾತೆಯ ಉತ್ಪನ್ನ ಬೆಳೆಯಬೇಕೆಂಬ ಎರಡು ಉದ್ದೇಶಗಳಿವೆ.

ಆನಂದದ ಪ್ರಸಂಗಗಳನ್ನು ೬ ಭಾಗಗಳಾಗಿ ವಿಂಗಡಿಸಲಾಗಿದೆ. ಅವು ಈ ರೀತಿ ಇವೆ:—

೧ ನಾತಾಳ ಮತ್ತು ಹೊಸ ವರ್ಷ,
೨ ದೀಪಾವಳಿ,
೩ ಜನ್ಮ ದಿವಸ,
೪ ಅಪತ್ಯ ಜನ್ಮ (ಕೂಸುಗಳ ಜನನ)
೫ ಹಬ್ಬ ಮತ್ತು
೬ ಸಫಲ ಮಾಸ ವಿವಾಹ ಮತ್ತು ಪರೀಕ್ಷೆಯ ಯಶ.

ಇಂಥ ತಂತಿಗಳನ್ನು ಬೇಕಾದ ಸರಕಾರಿ ತಂತಿ ಆಫೀಸುಗಳಿಂದ ಕಳಿಸಲು ಬರುತ್ತದೆ. ಮತ್ತು ಪ್ರಸಂಗಕ್ಕನುಸಾರವಾಗುವಂಥ ವಿಶಿಷ್ಟ ಕಾಗದದಲ್ಲಿ ಬರೆಯಲ್ಪಟ್ಟು ವಿಶಿಷ್ಟ ಕವ್ಹರಿನಲ್ಲಿ ಹಾಕಿ ಕಳುಹಿಸಲ್ಪಡುತ್ತದೆ. ಕಳೆದ ಎಪ್ರಿಲ್ ತಿಂಗಳಿನಿಂದ ಈ ತಾರಿನ ದರವು ಕಡಿಮೆಯಾಗಿದೆ.

ಸಾಧಾರಣ ತರಗತಿ ೬ ಆಣೆ, ಜರೂರಿನ ತರಗತಿ ೧೨ ಆಣೆ. ತೆಗೆದುಕೊಳ್ಳುವವರ ಹೆಸರು ಹಾಗೂ ವಿಳಾಸ ಕೂಡಿ ೪ ಶಬ್ದ, ಅಭಿನಂದನ ಅಂದರೆ ತಂತಿಯಲ್ಲಿಯ ಮಜಕೂರ ೧ ಶಬ್ದ, ಮತ್ತು ಕಳಿಸುವವರ ಹೆಸರು ೧ ಶಬ್ದ ಕೂಡಿ ಒಟ್ಟು ಅಭಿನಂದನಪರ ತಂತಿಯಲ್ಲಿ ೬ ಶಬ್ದಗಳ ಯೋಜನೆಯಿದೆ. ಶಬ್ದಗಳು ಇದಕ್ಕಿಂತ ಹೆಚ್ಚಾದರೆ ಪ್ರತಿಯೊಂದು ಶಬ್ದಕ್ಕೆ (ಸಾಧಾರಣ) ೧ ಆಣೆ (ಜರೂರ) ೨ ಆಣೆ ಚಾರ್ಜು ಬೀಳುವದು.

ಅಭಿನಂದನದ ೬ ಪ್ರಕಾರಗಳಲ್ಲಿ ಪ್ರತಿಯೊಂದು ಬೇರೆ ಬೇರೆ ನಮೂನೆಯವಿರುವವು. ಹಾಗು ನಾತಾಳ ಹೊಸ ವರ್ಷದ ಪ್ರೀತ್ಯರ್ಥ ಬೇರೆಬೇರೆ ಅಭಿನಂದನಪರ ೨೭ ವಾಕ್ಯಗಳು ನಿತ್ಯದ ವಾಡಿಕೆಯಲ್ಲಿಯವು ಆವೆ. ದೀಪಾವಳಿಗಾಗಿ ೮, ವರ್ಧಂತಿ ದಿನಕ್ಕಾಗಿ ೧೦, ಪುತ್ರ ಜನ್ಮಕ್ಕಾಗಿ ೨, ಮುಸಲ್ಮಾನರ ಹಬ್ಬಗಳ ಪ್ರಸಂಗಕ್ಕಾಗಿ ೫, ಕ್ರಿಸ್ತೀ ವರ್ಷಾರಂಭ ಅಥವಾ ಬಾದಶಹರ ಜನ್ಮದಿನ, ಜನರಿಗೆ ಕೊಡಲ್ಪಡುವ ಪದವಿಗಳ ಬಗ್ಗೆ ೧೨, ವಿವಾಹದ ಮಂಗಲ ಹಾಗು ಆನಂದದಾಯಕ ಪ್ರಸಂಗಕ್ಕಾಗಿ ೪, ಪರೀಕ್ಷೆಯಲ್ಲಿ ಪಾಸಾದುದಕ್ಕಾಗಿ ೯ ಹೀಗೆ ಒಟ್ಟು ೬೭ ಅಭಿನಂದನದ ವಾಕ್ಯಗಳು ತಯಾರಿಸಲ್ಪಟ್ಟಿದ್ದು ಅವು ಪೋಸ್ಟ ಹಾಗು ಟೆಲಿಗ್ರಾಫ್ ಗ್ಯಾಡಿನ ೩೯೬ ನೇ ಪೃಷ್ಠ(?)ಕ್ಲಾಸಿನಲ್ಲಿ ಕೊಡಲ್ಪಟ್ಟಿವೆ. ತಮಗೆ ಯೋಗ್ಯವೆನಿಸುವ ವಾಕ್ಯದ ಅನುಕ್ರಮ ನಂಬರು ಒಂದೇ ಶಬ್ದವು ತಂತಿಯ ಮಜಕೂರೆಂದು ಕಳುಹಿಸುವವರು ತಲಾ ಫಾರ್ಮಿನಲ್ಲಿ ಬರೆಯುವದಿರುತ್ತದೆ ಮತ್ತು ತಂತಿಯನ್ನು ಡಿಲಿವ್ಹರಿ ಮಾಡುವಾಗ ಅನುಕ್ರಮ ನಂಬರಿನಲ್ಲಿಯ ವಾಕ್ಯವು ಮಜಕೂರೆಂದು ತಾರಿನಲ್ಲಿ ತಂತಿ ಆಫೀಸಿನವರಿಂದ ಬರೆಯಲ್ಪಡುತ್ತದೆ. ಉದಾಹರಣಾರ್ಥವಾಗಿ:- ಯಾರಾದರೊಬ್ಬರ ವಿವಾಹ ಪ್ರಸಂಗದಲ್ಲಿ 'ನಿನ್ನ ವಿವಾಹಾತ್ಮಕ ಆಯುಷ್ಯವು ಸುಖದಾಯಕವೂ, ಅಭಿವೃದ್ಧಿದಾಯಕವೂ ಆಗಲಿ' ಎಂದು ೩೬ನೇ ವಾಕ್ಯವು. ಪರೀಕ್ಷೆಯಲ್ಲಿ ಪಾಸಾದರೆ ಅಭಿನಂದನವೆಂದು ೬೧ನೇ ವಾಕ್ಯವೂ ಇದೆ. ನಿಮ್ಮಿಷ್ಟದಂತೆ ಆರಿಸಿಕೊಳ್ಳಬಹುದು. ಮ್ಯಾಟ್ರಿಕ್, ಬಿ. ಎ. ವಗೈರೆ ಪರೀಕ್ಷೆಗಳ ಫಲಿತಾಂಶದ ಸಮಯದಲ್ಲಿ, ಲಗ್ನ ಪ್ರಸಂಗದಲ್ಲಿ ೬ ಆಣೆಯಲ್ಲಿ ಅಭಿನಂದನಪರ ಅಥವಾ ಆಶೀರ್ವಾದಾತ್ಮಕ ಸಂದೇಶಗಳನ್ನು ಕಳುಹಿಸಲು ಬರುತ್ತದೆ. ಜನರು ಇತ್ತ ಲಕ್ಷಕೊಡಬೇಕು.

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಠೇವಿನ ದಾಗಿನ, ತಮಗೂ ಬಹಳ ಕೋಯಿದುವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ತಿಳಿಯುವದು.

Kumta Agents
D. K. Nayak Bros.
D. S. Pai.
K. N. Nayak.
Honavar Agent:-
R. V. Prabhu Esq.

K. Padmanabha Rao & Sons,
BELGAUM
Chief Agents for
Karnatak Districts & S. M. States

ಅಲ್ಲಲ್ಲಿ ಇಷ್ಟಿಷ್ಟು!

ರೌಪ್ಯ ಮಹೋತ್ಸವ ನಿಧಿಗೆ ಎಪ್ರಿಲ್ ೬ನೇ ತಾರೀಖಿನ ವರೆಗೆ ಇಡೀ ಹಿಂದುಸ್ಥಾನದಲ್ಲಿ ರೂ. ೩೫ ಲಕ್ಷ ಕೂಡಿವೆ. ನಮ್ಮ ಮುಂಬಯಿ ಇಲಾಖೆಯಲ್ಲಿ ತತ್ಕಾಲಕ್ಕೆ ರೂ ೫ ಲಕ್ಷ ಕೂಡಿವೆ. ಅಧಿಕಾರಿಗಳು ಕನಿಷ್ಠ ರೂ. ೩೦ ಲಕ್ಷ ಒಟ್ಟುಗೂಡಿಸಬೇಕೆಂಬ ಸಂಕಲ್ಪದಲ್ಲಿದ್ದಾರೆ. ಅದಕ್ಕಾಗಿ ಊರೂರಲ್ಲಿ ಪ್ರಚಾರ ಕಾರ್ಯ ನಡಿಸಬೇಕೆಂದು ಗೊತ್ತಾಗಿದೆ. ಗ್ರಾಮಗಳಲ್ಲಿ ಒಟ್ಟಾದ ಹಣ ಗ್ರಾಮಗಳಲ್ಲಿಯೇ ಖರ್ಚು ಮಾಡಬೇಕೆಂಬ ಹೊಸ ಕಲ್ಪನೆ ಹೇಳಿ ಗ್ರಾಮದೊಳಗಿನ ಔದಾರ್ಯವಂತ ಮಹನೀಯರ ಕಡೆಯಿಂದ ಉತ್ಸವ ನಿಧಿ ಎತ್ತುವಳಿ ಮಾಡುವ ಪ್ರಕಾರ ನಡೆದಿದೆ. ಅಧಿಕಾರಿಗಳು ಉತ್ಸವ ನಿಧಿಯನ್ನು ಉತ್ಸಾಹದಿಂದ ಕೂಡಿಸುವ ಸಂಕಲ್ಪ ಮಾಡಿದ್ದರಿಂದ ಸಂಕಲ್ಪದಂತೆ ರೂ. ೫೦ ಲಕ್ಷ ಸಹಜವಾಗಿ ಕೂಡುವಂತಿವೆ. ಸೊಲ್ಲಾಪುರ ಜಿಲ್ಲೆಯಲ್ಲಿ ಕಲೆಕ್ಟರರು ಸಮಸ್ತರಿಗೆ ಒಂದು ಸರ್ಕ್ಯುಲರನ್ನೇ ಹೊರಡಿಸಿದ್ದಾರಂತೆ! ತೀರ್ವೆ ರೂ. ೧ಕ್ಕೆ ೧ ಆಣೆಯಂತೆ ಉತ್ಸವ ಆಳಿ ಪಟ್ಟಿಯನ್ನು ಬೈತರ ಕಡೆಯಿಂದ ವಸೂಲ ಪಡೆಯಬೇಕಾಗಿಯೂ, ಇಲ್ಲದಿದ್ದರೆ ತೀರ್ವೆ ಕೊಳ್ಳಬಾರದಾಗಿಯೂ ಅಪ್ಪಣೆ ಹೊರಡಿಸಿದ್ದಾರಂತೆ. ಸೊಲ್ಲಾಪುರ ಜಿಲ್ಲಾ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ| ತುಳಸೀದಾಸ ಸುಭಾನರಾವ ಜಾಧವರವರಿಗೂ, ಬಾರ್ಶಿ ತಾಲೂಕ ದಹಿಟಣೇ ಗ್ರಾಮದ ಗ್ರಾಮಾಧಿಕಾರಿಗಳಿಗೂ ಒಳ್ಳೇ ಕಿಟಪಿಟ ನಡೆಯಿತಂತೆ! ಅವರು ರೂ. ೬-೭-೦ ತೀರ್ವೆ ತೆರಬೇಕಾಗಿದ್ದಿತು. ಪಟೇಲರು ರೂ. ೬-೧೫-೩ ಬೇಡಿದರು. ೦-೮-೩ ಉತ್ಸವ ಪಟ್ಟಿಯೆಂದು ಹೇಳಿದರು. ಅದನ್ನು ವಸೂಲು ಪಡೆಯಲಿಕ್ಕೆ ಮೇಲಧಿಕಾರಿಗಳ ಹುಕುಮವಾಗಿರುವದೆಂದರು. ರಾ| ಜಾಧವರವರು ನುಡಿದದ್ದೇನಂದರೆ:— ‘ಈ ಪಟ್ಟಿ ಕೊಡಬಾರದೆಂದು ನನಗನಿಸುತ್ತದೆ. ನಾನು ಅಖಿಲ ಭಾರತೀಯ ಕೊಂಗ್ರೆಸ ಕಾರ್ಯಕಾರಿ ಮಂಡಳದ ತೀರ್ಮಾನದಂತೆ ಊರೂರಿಗೆ ಹೋಗಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಅಲಿಪ್ತತೆಯ ಠರಾವನ್ನು ಜನರಿಗೆ ತಿಳಿಸಿ ಹೇಳುತ್ತೇನೆ. ಬಾದಶಹರ ಉತ್ಸವದ ಸಮಯ ಬಡಬಿದ್ದ ಜನತೆಗೆ ದಾನಧರ್ಮ ಮಾಡಿ ಪ್ರಸನ್ನಗೊಳಿಸುವದು ಒತ್ತಟ್ಟಿಗುಳಿಯಿತು; ದರಿದ್ರ, ಸರ್ವ ಪರಿಯಿಂದಲೂ ಕಷ್ಟಕ್ಕೀಡಾದ ಪ್ರಜೆಗಳ ಕಡೆಯಿಂದ ಪಟ್ಟಿ ವಸೂಲ ಮಾಡುವದು ಪ್ರಶಸ್ತ ತೋರದು.” ಪಟ್ಟಿ ಕೊಡದಿದ್ದರೆ ತೀರ್ವೆ ಕೊಳ್ಳಬರುವದಿಲ್ಲವಾಗಿ ಪಟೇಲರು ನುಡಿಯಲು, ರಾ|| ಜಾಧವರವರು ನುಡಿದದ್ದೇನಂದರೆ:- “ನಾನು ಫಂಡನ್ನು ಎಷ್ಟಕ್ಕೂ ಕೊಡಲಾರೆ. ಇಷ್ಟ ಕಂಡರೆ ತೀರ್ವೆ ಕೊಳ್ಳಿರಿ, ಇಲ್ಲದಿದ್ದರೆ ಬಿಡಿರಿ. ಇಂಥ ಕೃತಿಯಿಂದ ಬಡಬಗ್ಗರ ಮೇಲೆ ಬಲಾತ್ಕಾರವಾಗುತ್ತದೆ. ಈ ನಿಧಿಯನ್ನು ಬಲಾತ್ಕಾರದಿಂದ ವಸೂಲ ಮಾಡಬಾರದು. ಪ್ರೇಮದಿಂದಲೇ ಇದು ವಸೂಲಾಗಬೇಕು. ಹೀಗಿದ್ದು ಸಕ್ತಿಯಿಂದ ವಸೂಲ ಮಾಡುವದು ತರವಲ್ಲ. “ನೀವು ತೀರ್ವೆ ಕೊಳ್ಳುತ್ತೀರೋ ಇಲ್ಲವೋ? ”ಎಂಬದಾಗಿ ರಾ| ಜಾಧವರವರು ಕೇಳಲು, ಕೊಳ್ಳುವದಿಲ್ಲವಾಗಿ ಪಟೇಲರು ನುಡಿದರು. ರಾ| ಜಾಧವರವರು ೧-೩ ತಾಸಿನ ನಂತರ ಪುನಃ ಹೋಗಿ ಉತ್ಸವ ನಿಧಿ ಕೊಡಲೊಪ್ಪದ್ದರಿಂದ ತೀರ್ವೆ ವಸೂಲ ಕೊಳ್ಳಲಿಲ್ಲವಾಗಿ ಬರೆದು ಕೊಡಲು ಪಟೇಲರ ಕಡೆ ಹೇಳಿದರು. ಹಾಗೆ ಬರೆದುಕೊಡಬರುವದಿಲ್ಲವಾಗಿ ಪಟೇಲರು ನುಡಿದರು. ಇದೆಂಥ ನಮೂನೆಯೆಂದು ರಾ| ಜಾಧವರವರು ಉದ್ಗರಿಸಲು, ಪಟೇಲರು ನುಡಿದದ್ದೇನಂದರೆ:- “ಸುಮ್ಮನೆ ಯಾಕೆ ಉಪದ್ರವ ಕೊಡುತ್ತೀರಿ? ೮|| ಆಣೆಯೆಂದರೇನು? ಆದರೊಳಗಿನ ಬಹು ಅಂಶವು ಶಾಲೆ ಹುಡುಗರಿಗೆ ತಿನಸು ಕೊಡುವದಕ್ಕಾಗಿ ಖರ್ಚಾಗುವದು. ೮|| ಆಣೆ ಕೊಟ್ಟು ಹೋಗಿಬಿಡಿ!” “ಹೀಗೆ ಬಲಾತ್ಕಾರವೇಕೆ? ನೀವು ತೀರ್ವೆ ಕೊಳ್ಳದಿದ್ದರೆ ೨ ಸಾಕ್ಷಿ ಮಾಡಿ ನಾನು ಹೋಗುತ್ತೇನೆ. ಪುನಃ ನಿಮ್ಮ ಕಡೆ ಬರಲಿಕ್ಕಿಲ್ಲ. ಸಂಜೆಯ ತನಕ ವಿಚಾರ ಮಾಡಿ ನನಗೆ ತಿಳಿಸಿಬಿಡಿ.” ಹೀಗೆ ರಾ| ಜಾಧವರವರು ಪಟೇಲರಿಗೆ ಹೇಳಿ, ಕಾನಭೋಗರಕಡೆ ತೀರ್ವೆ ವಸೂಲ ಕೊಳ್ಳುತ್ತೀರೇನೆಂದು ಕೇಳಿದರು. ಆಗ ಇಬ್ಬರೂ ನುಡಿದದ್ದೇನಂದರೆ:- ಸಂಜೆಗೆ ಮಾಮಲೇದಾರರು ಬರುತ್ತಾರೆ, ನಾವು ಅವರಿಗೆ ಕೇಳಿ ನಿಮಗೆ ತಿಳಿಸುತ್ತೇವೆ; ನಮಗೂ ಸಂಕಟವಾಗಿದೆ; ಹುಕುಮಿನ ಹೊರಗೆ ನಡೆಯಲಿಕ್ಕೆ ಸಾಧ್ಯವಿಲ್ಲ.” ಸಂಜೆ ಸರ್ಕಲ್ ಇನ್ಸ್‌ಪೆಕ್ಟರರು ಹಳ್ಳಿಗೆ ಹೋಗಿದ್ದರಂತೆ. ಅವರೊಡನೆ ಆಲೋಚನೆ ಮಾಡಿ ರಾ| ಜಾಧವರವರ ಕಡೆಯಿಂದ ಉತ್ಸವಪಟ್ಟಿ ಕೊರ್ತುಪಡಿಸಿ ತೀರ್ವೆ ವಸೂಲ ಕೊಳ್ಳೋಣಾಯಿತು, ಕೆಲವೆಡೆ ಮಾಮಲೇದಾರರು ರಶೀದಿಯನ್ನು ಮುಂಚೆಯೇ ಕೊಟ್ಟು, ಆ ಮೇಲೆ ರಶೀದಿಯಂತೆ ಹಣ ವಸೂಲ ಪಡೆಯುತ್ತಾರಾಗಿ ‘ಮುಂಬಯಿ ಕ್ರೊನಿಕಲ್’ ಪತ್ರಿಕೆಯಲ್ಲಿ ಒಬ್ಬರು ದೂರುತ್ತಾರೆ. ಒಂದು ಗಿರಣಿಯ ಮನೇಜರರು ಉತ್ಸವ ಪಟ್ಟಿ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು !

ಪುಷ್ಟಿಕಾರಕ (ನಿಶ್ಶಕ್ತಿಗಳಿಗೆ ಅತ್ಯಂತ ಗುಣಕಾರಿ).
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಕ್ಷೀರಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾದಶಾಂಶ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾಂಜನ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ಪಕ್ಷವಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ
ಮಹಾಕುಲಾಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಸಿದ್ಧ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:—

ಹೆಚ್ಚಿನ ವರ್ತಮಾನಕ್ಕೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು !

ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಅವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ಬಹಳ ಆನಂದಪಟ್ಟೆವು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗ ವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಗುಣನಿಧಿಯೂ ಆಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆವು. ಇವು ಶಾಸ್ತ್ರಸಿದ್ಧವಾಗಿ ಅನುಭವಶ್ರೇಷ್ಠವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ನಡಿಸಲು ಇದರ ವ್ಯವಸ್ಥಾಪಕರು ಯತ್ನಿಸುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅಸ್ತೇ[illegible] ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯು ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇವೆ.

ಮುಕ್ಕಾಂ, ಉಡುಪಿ. ೧೦-೧೧-೧೯೩೪

ವಿದ್ವಾನ್ ಶ್ರೀ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ.

ಯ ಪ್ರಮಾಣವನ್ನು ನಿಶ್ಚೈಸಿ ಕಾರಕೂನ-ಪೇದೆಗಳ ಕಡೆಯಿಂದ ಹಣ ವಸೂಲ ಮಾಡುತ್ತಾರಂತೆ. ಹಣ ವಸೂಲ ಕೊಡದಿದ್ದ ಇಸಮುಗಳಿಗೆ, ಯಾಕೆ ಉತ್ಸವ ನಿಧಿ ಕೊಡಲಿಲ್ಲವೆಂಬದಾಗಿ ಕೇಳುತ್ತಾರಂತೆ. ಗಿರಣಿಯ ಕೂಲಿಕಾರರು ಬಡವರು. ಅವರಿಗೂ ಉತ್ಸವ ಪಟ್ಟಿ ತಪ್ಪುವದಿಲ್ಲವಂತೆ. ಬರ್ಹಾಣಪುರದ ಧರ್ಮಾಲು ಲ ಗ್ರಾಮದಲ್ಲಿ ಕೊರ್ಕು ಎಂಬ ಮೂಲಜಾತಿಯವರಿದ್ದಾರೆ ಇವರು ತೀರ ಬಡವರು; ಈ ಬಾರಿ ಹತ್ತಿಯ ಪೈರು ಪೂರ್ಣ ನಷ್ಟವಾಗಿ ಅವರು ಕೂಳಿಗೆ ಗತಿಯಿಲ್ಲದವರಾಗಿದ್ದಾರೆ; ಹೆಂಡರು-ಮಕ್ಕಳು ಉಪವಾಸ ಸಾಯುತ್ತಿದ್ದಾರೆ. ಅವರ ಕಡೆಯಿಂದ ರೂಪಾಯಿಗೆ ೪ ಆಣೆಯಂತೆ ಉತ್ಸವ ಪಟ್ಟಿ ವಸೂಲಾಯಿತು. ಇದಕ್ಕೆ ಬಲಾತ್ಕಾರವೆಂದು ಹೇಳಿದರೆ, ಅಧಿಕಾರಿಗಳು ಒಪ್ಪುವದಿಲ್ಲ; ಸಂತೋಷದಿಂದ ಎಂದು ಹೇಳಲಿಕ್ಕೆ ಅಸಾಧ್ಯ! ಮಾಮಲೇದಾರರು ಪಟ್ಟಿ ಕೊಡಲು ಒತ್ತಾಯ ಮಾಡುತ್ತಿದ್ದ ಬಗ್ಗೆ ಅವರ ಸಹಿಯ ಒಂದು ಯಾದಿಯನ್ನು ಪುಣೆಯ 'ಲೋಕಶಕ್ತಿ' ಕರ್ತರು ಪ್ರಕಟಿಸಿದ್ದಾರೆ. ಸ್ಕೂಲ ಬೋರ್ಡಿನ ಎಡ್‌ಮಿನ್‌ಸ್ಟ್ರೇಟಿವ್ ಆಫೀಸರರು ಬಡ ಶಾಲಾ ಮಾಸ್ತರರಿಗೆ ಪಟ್ಟಿಯನ್ನು ಕೊಡಲು ಒತ್ತಾಯ ಮಾಡುತ್ತಾರಂತೆ. ಮೇಲಧಿಕಾರಿಗಳ ಮಾತು ಮೀರಲಾಗದೆ ಕೆಳ ಅಧಿಕಾರಿಗಳು ಈ ಫಂಡಿಗೆ ಪಟ್ಟಿ ತೆಸುತ್ತಿದ್ದಾರೆ. ಇಷ್ಟಾಗಿ ಒತ್ತಾಯವಿಲ್ಲ; ಪ್ರೇಮದ ಕಾಣಿಕೆ; ಎಂಬದಾಗಿ ಲೋಕತುಂಬ ಆಡಂಬರದ ಮಾತುಗಳು ಆಡಲ್ಪಡುತ್ತವೆ. ಈ ಉಪದ್ರವವು ಸಂಸ್ಥಾನಗಳಲ್ಲಿಯೂ ಹಬ್ಬಿದೆ. ಸಂಸ್ಥಾನದೊಳಗಿನ ನೌಕರರೆಲ್ಲರೂ ಅವರವರ ಸಂಬಳದಲ್ಲಿ ೧೦೦ಕ್ಕೆ ೫ರಂತೆ ಉತ್ಸವ ಪಟ್ಟಿ ಕೊಡಬೇಕೆಂದು ಹುಕುಮು ಮಾಡಿದ್ದಾರೆ. ಹಾಗೆ ಮುರಕೊಂಡು ಪಟ್ಟಿ ವಸೂಲ ಮಾಡುವಂತೆ ಸಂಬಳ ಹಂಚುವ ಅಧಿಕಾರಿಗಳಿಗೆಲ್ಲ ಸರ್ಕ್ಯುಲರುಗಳು ಹೋಗಿವೆ. ಬಡ ಸುಮಾಸ್ತರಿಗೆ ಸಹ ಈ ಪಟ್ಟಿ ತಪ್ಪಲಿಲ್ಲ. ಉತ್ಸವ ಸಮಯ ಕಾರಕೂನ—ಪೇದೆ ಮೊದಲಾದ ಚಿಕ್ಕ—ಪುಟ್ಟ ಸಂಬಳದವರಿಗೆ ಹೆಚ್ಚಿನ ಸಂಬಳ ಕೊಟ್ಟು ಸಂತೋಷಪಡಿಸುವ ಸಂದರ್ಭದಲ್ಲಿ, ಅವರ ಪಗಾರಿಗೆ ಕತ್ತರಿ ಹಚ್ಚುವ ಉತ್ಸವವೆಂತಹದು? ಎಂಬದಾಗಿ ಬೆಂಗಳೂರಿನ ರಾ। ಕೃಷ್ಣಮೂರ್ತಿಯವರು ಮಂಗಳೂರಿನ 'ರಾಷ್ಟ್ರಬಂಧು' ಪತ್ರಿಕೆಯಲ್ಲಿ ಉದ್ಗರಿಸುತ್ತಾರೆ! ಸರಕಾರದವರು ಕಾರಕೂನ-ಪೇದೆಗಳಿಗೆ ಉತ್ಸವದ ಸಮಯ ೧ ತಿಂಗಳ ಸಂಬಳವನ್ನಾದರೂ ಉಚಿತವಾಗಿ ಕೊಟ್ಟು ಅವರಿಗೆಲ್ಲ ಸಂತೋಷಗೊಳಿಸಬಹುದಿತ್ತು. ಇದು ಉತ್ಸವ ಸಂಭ್ರಮಕ್ಕೆ ಶೋಭಿಸುವಂಥ ಕ್ರಮವಾಗಿದ್ದಿತು.

***

ರೌಪ್ಯ ಮಹೋತ್ಸವದ ಸಮಯ ಪಶ್ವಾನ್ನ ಮಾಡುವ ವಿಚಾರವು ಈಗಿನಿಂದಲೇ ನಡೆದಿದೆ. ಇಂಗ್ಲಂಡ ದೇಶದಲ್ಲಿ ಎತ್ತಿನ ಪಶ್ವಾನ್ನ ಮಾಡುವದೊಂದು ಸಂಪ್ರದಾಯವಿದೆ. ಇದೊಂದು ಶ್ರೇಷ್ಠತರಗತಿಯ ಪಕ್ವಾನ್ನವೆಂದು ಎಣಿಸಲ್ಪಡುತ್ತದೆ. ಇದಕ್ಕೆ 'ಒಕ್ಸ-ರೋಸ್ಟಿಂಗ' ಪಕ್ವಾನ್ನವೆಂದು ಹೆಸರು. ಇದನ್ನು ಮಾಡಲಿಕ್ಕೆ ಬಾದಶಹರು ಸಮ್ಮತಿಯನ್ನಿತ್ತಿರುವರಂತೆ. ಈ ಪಕ್ವಾನ್ನದ ಕ್ರಮ ತೀರ ಬೇಸಂಕೆಯದ ಎತ್ತುಗಳನ್ನು ಬೀದಿ-ಬೀದಿಗಳಲ್ಲಿ ಮೆರಸಿ ಸಮಾರಂಭಕ್ಕಾಗಿ ಏರ್ಪಡಿಸಿದ ಹಂದರದಲ್ಲಿ ಅವನ್ನು ನಿಷ್ಕರತನದಿಂದ ಕೊಲೆ ಮಾಡುವರು. ಎತ್ತುಗಳ ಕೊಲೆಪಾತಕವನ್ನು ನೋಡಿ ಮನೋರಂಜನೆ ಮಾಡಿಕೊಳ್ಳಲು ಸಾವಿರಾರು ಜನರಿಗೆ ಅನುಕೂಲತೆಯಾಗುವಂತೆ ಥೇಟರು ಕಟ್ಟಿಸಲ್ಪಡುವದು. ಅದಕ್ಕೆ ಟಿಕೀಟಿಟ್ಟು ಹುಟ್ಟಿದ ಹಣ ಪರೋಪಕಾರಿ ಸಂಸ್ಥೆಗಳಿಗೆ ಅರ್ಪಿಸಲ್ಪಡುವದು. ಎತ್ತಿನ ಕೊಲೆಯಾದ ಬಳಿಕ, ನೆರೆದ ಜನರ ಮುಂದೆ ಅದನ್ನು ಸರಿಪಡಿಸಿ ಮಾಂಸದ ಅಡಿಗೆ ಮಾಡಿ ಭಕ್ಷಿಸುವರಂತೆ! ಈ ಪ್ರಕಾರ ಕೇಳಿದರೆ ಮನಸ್ಸು ಉದ್ವಿಗ್ನವಾಗುತ್ತದೆ. ಉತ್ಸವ ಸಮಾರಂಭದಲ್ಲಿ ನಿರಪರಾಧಿ ಬಸವಣ್ಣನಿಗೆ ಕೊಲೆ ಮಾಡಿ ಆನಂದದಿಂದ ನಲಿದಾಡುವದಿಗೆ ಹೇಗೆ? ಅದರ್ಮದ ನಾಟಕ ತೋರಿಸಿ ಧರ್ಮ ಸಂಸ್ಥೆಗಳಿಗೆ ಧರ್ಮ ಮಾಡುವ ಬಗೆ ಹೇಗೆ? ಇದನ್ನು ಮಾಡುವದು ವಿಹಿತವಲ್ಲವಾಗಿ ಹಲವು ಬ್ರಿಟಿಶರು ಬಾದಶಹರಿಗೆ ವಿನಂತಿಪತ್ರ ಮಾಡಿಕೊಂಡು ಇಂಥ ಪ್ರಕಾರಗಳಿಂದ ಎಳೆ ಹುಡುಗರ ಮೇಲೆ ಬಹು ಕೆಟ್ಟ ಪರಿಣಾಮವಾಗುತ್ತದಾಗಿ ಅರಿಕೆ ಮಾಡಿಕೊಂಡಿದ್ದಾರೆ. ಈ ಕ್ರಮವನ್ನು ಉತ್ಸವ ಕಾರ್ಯಕ್ರಮದೊಳಗಿಂದ ಲೋಪ ಮಾಡಬೇಕಾಗಿಯೂ ಬಿನ್ನೈಸಿಕೊಳ್ಳಲಾಗಿದೆ. ಬಸವಣ್ಣನು ಹಿಂದು ಜನಾಂಗಕ್ಕೆ ಪವಿತ್ರವಾದ ಪ್ರಾಣಿ. ಬಸವಣ್ಣನ ಕೊಲೆ ಗೋಹತ್ಯವಲ್ಲಿ ಸೇರುತ್ತದೆ. ಉತ್ಸವ ಪ್ರಸಂಗಗಳಲ್ಲಿ ಹಿಂದುಸ್ಥಾನದೊಳಗಿನ ೨೭ ಕೋಟಿ ಹಿಂದು ಪ್ರಜೆಗಳಿಗೆ ವ್ಯಸನವುಂಟು ಮಾಡಲಾಗದು; ಎಂಬದಾಗಿ ಬ್ರಿಟಿಶ ಉತ್ಸವ ಕಾರ್ಯಕರ್ತರ ಕಡೆ ಬಿನ್ನೈಸಿಕೊಳ್ಳಲಾಗಿದೆ. ಆದರೆ, ಈ ಬಿನ್ನಹಗಳಿಗೆ ಮಾನ್ಯತೆ ದೊರೆಯುವ ಲಕ್ಷಣಗಳಿಲ್ಲ.

[ಮುಂದೆ ೧೦ನೇ ಪಾನು ನೋಡಿರಿ.]

THE AGRICULTURAL & INDUSTRIAL BANK, LIMITED, COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್, ಕುಂದಾಪುರ.

ಕಾಯಂ ಠೇವಣಾತಿಗಳು.

3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ 3½ರಂತೆ,
6 ತಿಂಗಳಿಗೆ .. ... 4½ರಂತೆ,
12 ತಿಂಗಳಿಗೆ ... ... 5½ ,,
24 ತಿಂಗಳಿಗೆ .. .. 6 ,,
3 ವರ್ಷ ಯಾ ಹೆಚ್ಚಿನ ಅವಧಿಗೆ 6½ರಂತೆ

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ

ಚಿನ್ನ ಮತ್ತು ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಕರೆಂಟ್, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಂದಾಪುರ,
ತಾ. 21—1—1935.

K. Vaman Shenai &
G. Balakrishna S. Nayak.
Managing Directors.

ಹಬಸಿ ಪ್ರಕರಣದ ವಿರಾಟ್ ಸ್ವರೂಪ.

[ನಿರೀಕ್ಷಕನು ಬರೆದುದು.]

ನಾನು ಹಿಂದಾಗಿಯೂ ಸೂಚಿಸಿದಂತೆ ಹಬಸಿ ಪ್ರಕರಣಕ್ಕೆ ಅಂತರ್ರಾಷ್ಟ್ರೀಯ ಮಹತ್ವವಿಲ್ಲದಾಗಿ ಮುಂಬಯಿ 'ಟೈಮ್ಸ್' ಕರ್ತರು ಬರೆದ ಅಭಿಪ್ರಾಯವನ್ನು ನಂಬಿ ಕೆಟ್ಟೆ. ಯುರೋಪ ರಾಜಕಾರಣದ ಹಗರಣವನ್ನೇ ನಿರೀಕ್ಷಿಸತೊಡಗಿದ್ದು ಇದು ದೊಡ್ಡ ತಪ್ಪು. ಹಬಸಿ ಪ್ರಕರಣದೊಳಗಿನ ಕಥಾತಂತುಗಳನ್ನು ದೀರ್ಘವಾಗಿ ಆಲೋಚನ ಮಾಡಿದರೆ ಯುರೋಪ್ಯ ರಾಜಕಾರಣವು ಇಲ್ಲಿಯೇ ಸ್ಫೋಟವಾದೀತೆಂಬದೊಂದು ಭೀತಿಯುಂಟಾಗಿದೆ. ಸ್ಪಷ್ಟ ಪರಿಸ್ಥಿತಿ, ರಾಷ್ಟ್ರಸಂಘದ ಪರಿಷತ್ತು ಜಮಾಯಿಸಿದ ಬೇದರಿಕೆ ಇವೆಲ್ಲ ಈ ಪ್ರಕರಣದ ಸೂಕ್ಷ್ಮ ಪಾತಳಿಯಿಂದ ವಿಚಾರ ಮಾಡಿದರೆ ಹಬಸಿ ಪ್ರದೇಶದೊಳಗಿನ ಕಲಹಗಳು ಭೀಷ್ಮ ಯುದ್ಧಕ್ಕೆ ಕಾರಣವಾಗುವುದೆಂದು ನಾನು ಹೇಳಬೇಕಾಗಿದೆ. ಅದರಿಂದ ಇಂದಿಗೆ ಅದನ್ನೇ ವಿಸ್ತಾರವಾಗಿ ಹೇಳುವೆನು. ಹಬಸಿಯ ಕೂಡ ರಾಜಕಾರಣವನ್ನು ಕೊನೆಗೆ ವಿವರಿಸುತ್ತೇನೆ.

ಹಬಸಿ ದೇಶವು ಸಮೃದ್ಧವಾದ ಪ್ರದೇಶ. ಚಿನ್ನ, ಬೆಳ್ಳಿ, ಕಲ್ಲಿದ್ದಲಿ, ಕಬ್ಬಿಣ, ತಾಮ್ರ, ಗಂಧಕ, ಪ್ಲಾಟಿನಮ್ ಮೊದಲಾದ ಖನಿಜ ಸಂಪತ್ತು ಅಲ್ಲಿ ವಿಪುಲವಿದೆ. ಭೂಮಿ ಫಲವತ್ತಾದ್ದು. ಗೋದಿ, ಅರಳೆ, ಕಾಫಿ, ರಬ್ಬರು, ತಂಬಾಕು ಇವು ಹೇರಳ ಬೆಳೆಯಬಲ್ಲಾದ ಪ್ರದೇಶ. ಚರ್ಮ, ಕಾಫಿ, ಮೇಣ, ಹಸ್ತಿದಂತ ಇವು ಈ ದೇಶದಿಂದ ರಫ್ತಾಗುತ್ತಿವೆ. ಗೋಸಂಪತ್ತು ಇಲ್ಲಿಯಷ್ಟು ಬೇರೆ ಎಲ್ಲಿಯೂ ಇಲ್ಲವಂತೆ. ಮೇಲಾಗಿ ನೈಲ ನದಿಯು ಉಗಮಿಸುವದು ಇಲ್ಲಿ. ಈ ಪ್ರದೇಶದಿಂದಲೇ ನೈಲ ನದಿಗೆ ನೀರಿನ ಪೂರೈಕೆಯಾಗುತ್ತದೆ. ಬ್ರಿಟಿಶ ಸೂಡಾನ ಪ್ರಾಂತಕ್ಕೆ ನೈಲನದಿಯ ನೀರಿಲ್ಲದಿದ್ದರೆ ಬ್ರಿಟಿಶರು ಕೆಟ್ಟರು. ಅದರಿಂದ ಹಬಸಿ ದೇಶದ ಪ್ರಕರಣದಲ್ಲಿ ಬ್ರಿಟಿಶರಿಗೂ ಸಂಬಂಧವಿದೆ.

ತಾ. ೫-೩-೧೮೯೬ನೇಗೆ ಇತಾಲಿಯ ಪ್ರವೇಶವು ಈ ಭಾಗದಲ್ಲಾಯಿತು. ವಸಾಹತು ಅಭಿಲಾಷೆಯಿಂದ ಇತಾಲಿಯವರು ಕಾಲಿಟ್ಟು ಮಸುವಾ ಬಂದರವನ್ನು ಸ್ವಾಧೀನಪಡಿಸಿಕೊಂಡು ಉತ್ತರ ಹಬಸಿದೇಶದ ಕೆಂಪು ಸಮುದ್ರದ ಹಾದಿಯನ್ನು ಕಟ್ಟಿದರು. ೧೮೮೭ನೇ ಇಸ್ವಿಯಲ್ಲಿ ಹಬಸಿ ಸೈನಿಕರು ಇತಾಲಿಯ ವಸಾಹತಿನ ಮೇಲೆ ದಂಡೆತ್ತಿಹೋಗಿ ದೋಗಲಿ ಕೋಟೆಯನ್ನು ಸ್ವಾಧೀನಪಡಿಸಿಕೊಂಡರು. ಮರು ವರ್ಷ ೨೦ ಸಾವಿರ ಇತಾಲಿ ಸೈನಿಕರು ಹಬಸಿ ದೇಶದ ಮೇಲೆ ಸಾಗಿ ಹೋದರು. ಯಾರೂ ಗೆಲ್ಲಲಿಲ್ಲ; ಯಾರೂ ಸೋಲಲಿಲ್ಲ. ೧೮೯೬ನೇ ಇಸ್ವಿಯಲ್ಲಿ ಘೋರ ಸಂಗ್ರಾಮವಾಯಿತು. ಆ ಕಾಲದಲ್ಲಿ ಕ್ರಿಸ್ಪಿ ಎಂಬವರು ಇತಾಲಿಯ ಸರ್ವಸತ್ತಾಧಾರಿಗಳು. ಸಮಗ್ರ ಹಬಸಿ ದೇಶವನ್ನು ಪಾದಾಕ್ರಾಂತ ಮಾಡಿಕೊಳ್ಳುವ ರಾಕ್ಷಸೀ ಮಹತ್ವಾಕಾಂಕ್ಷೆಯನ್ನು ಇವರು ತಳೆದು, ಹಬಸಿ ದೇಶದಲ್ಲಿ ಘೋರ ಸಂಗ್ರಾಮ ನಡೆಸಿದರು. ತಾ ೧-೩-೧೮೯೬ನೇಗೆ ಆಡ್ವಾ ಪಟ್ಟಣದ ಸಮೀಪದಲ್ಲಿ ಹಬಸಿಯ ಬಾದಶಹರಾದ ಮೆನಲೀಕರವರ ನೇತೃತ್ವದಲ್ಲಿ ಹಬಸಿ ಸೈನಿಕರು ಕ್ರೌರ್ಯದಿಂದ ಹೋರಾಡಿ ಇತಾಲಿಯ ಸೈನಿಕರಿಗೆ ಹೊಡೆದೋಡಿಸಿದರು. ಆಗ ಇತಾಲಿಗೂ ಹಬಸಿ ಸರಕಾರಕ್ಕೂ ಒಪ್ಪಂದವಾಗಿ ಇರಿಟ್ರಿ ಪ್ರದೇಶವನ್ನು ಇತಾಲಿಯವರು ಅನುಭವಿಸಬೇಕೆಂದು ಗೊತ್ತಾಯಿತು. ಈ ಪ್ರದೇಶವು ಬರೇ ಬಂಜರು. ಇದರಿಂದ ಇತಾಲಿಗೆ ಲಾಭವಿಲ್ಲ. ಆದರೆ ಕೆಂಪು ಸಮುದ್ರಕ್ಕೆ ಉತ್ತರ ಹಬಸಿ ದೇಶದಿಂದ ಹೋಗುವ ಹಾದಿಯ ಮೇಲೆ ಇದು ಇರುತ್ತದೆಂಬದಿಷ್ಟೇ ಲಾಭ. ಹಬಸಿ ದೇಶದಲ್ಲಿ ಈಗ ರಾಷ್ಟ್ರೀಯ ಭಾವನೆ ಉಂಟಾಗಹತ್ತಿದೆ. ಅವರು ಬಂದರವನ್ನು ಪಡೆಯುವದಕ್ಕಾಗಿ ಈ ಪ್ರದೇಶದ ಮೇಲೆ ಸಾಗಿಬರುವ ಸಂಭವವಿದೆ. ಇದಕ್ಕಾಗಿಯೇ ಇತಾಲಿಯವರು ಸಮಗ್ರ ಹಬಸಿ ದೇಶವನ್ನು ಪಾದಾಕ್ರಾಂತ ಮಾಡುವ ಮಹತ್ವಾಕಾಂಕ್ಷೆ ಹಿಡಿದಿದ್ದಾರೆ. ಇತಾಲಿಗೆ ಮಹಾಯುದ್ಧದಲ್ಲಿ ಸೇರಿದ ಬಗ್ಗೆ ಪ್ರತಿಫಲವೆಂದು ಶತ್ರುರಾಷ್ಟ್ರಗಳ ವಸಾಹತು ಕೊಡಮಾಡಿದ್ದರಂತೆ. ಆದರೆ ವರ್ಸೇಲೀಸ ತಹನಾಮೆಯ ಕಾಲಕ್ಕೆ ಬ್ರಿಟನ್, ಫ್ರಾನ್ಸ್, ಜಪಾನ ದೇಶಗಳು ಲೂಟಿಯನ್ನು ಹಂಚಿಕೊಂಡವು. ಇತಾಲಿಗೆ ಏನೂ ಸಿಗಲಿಲ್ಲ. ಅದರಿಂದ ಹಬಸಿ ದೇಶವನ್ನು ಹೇಗಾದರೂ ಮಾಡಿ ಅಪಹರಿಸಬೇಕೆಂದು ಇತಾಲಿಯವರು ಹೊಂಚುಹಾಕಿದ್ದಾರೆ. ಎರಿಟ್ರಿ ಪ್ರದೇಶವು ಹಬಸಿ ದೇಶದ ಉತ್ತರ ಪಾರ್ಶ್ವಕ್ಕೆ ಹೊಂದಿಕೊಂಡಿದ್ದು ಅಲ್ಲಿ ಸೈನ್ಯಸಂಗ್ರಹ ಮಾಡಲು ಇತಾಲಿಗೆ ಒಳ್ಳೇ ಅನುಕೂಲತೆಯಿದೆ. ಈಗ ಅಲ್ಲಿ ಮಳೆಗಾಲವಾದ್ದರಿಂದ ಪ್ರತ್ಯಕ್ಷ ಯುದ್ಧಕ್ಕೆ ಸಾಧ್ಯವಿಲ್ಲ. ಇನ್ನು ೬ ತಿಂಗಳು ಹೋಗಬೇಕು. ಆದರೆ ಇತಾಲಿಯವರು ಈ ಪ್ರದೇಶದಲ್ಲಿ ಹಡಗು ತುಂಬಿ-ತುಂಬಿ ಸೈನಿಕರನ್ನೂ, ಮದ್ದು-ಗುಂಡುಗಳನ್ನೂ ರವಾನಿಸುತ್ತಿದ್ದಾರೆ. ಈಗಿನ ಬಾದಶಹರಾದ ರಾಸಟಫಾರಿಯವರು ಇತಾಲಿಗೆ ಆದಷ್ಟರ ಮಟ್ಟಿಗೆ ಪ್ರತಿಬಂಧ ಮಾಡುತ್ತಿದ್ದಾರೆ. ಅಡಿಸಅಬಾಬಾ ಪಟ್ಟಣಕ್ಕೂ, ಗೊಂಡರ ಪಟ್ಟಣಕ್ಕೂ ತಮ್ಮ ಮಸೂವಾ ಕೋಟೆಗೂ ಊಗಿಬಂಡಿ ಕಟ್ಟಿ ಹಬಸಿ ದೇಶವನ್ನು ಸಾವಕಾಶವಾಗಿ ತಮ್ಮ ಸಾರುಪತ್ಯಕ್ಕೊಳಗಾಗುವಂತೆ ಇತಾಲಿಯವರು ಕಾರಸ್ಥಾನ ಹೂಡಿದ್ದರು. ಅದಕ್ಕೆ ರಾಸಟಫಾರಿ ಬಾದಶಹರು ಒಪ್ಪಲಿಲ್ಲ. ಸದ್ಯಕ್ಕೆ ಇಂಗ್ಲಂಡ ದೇಶಕ್ಕೂ, ಇತಾಲಿ ದೇಶಕ್ಕೂ ಒಂದು ಗುಪ್ತ ತಹನಾಮೆಯಾಗಿ ಹಬಸಿದೇಶದ ಪಾಲುಗಾರಿಕೆಯಾಗಿರುವದಾಗಿಯೂ ಬ್ರಿಟನ್-ಇತಾಲಿ ದೇಶದವರು ತಮ್ಮ ಸಾರುಪತ್ಯದ ಪ್ರದೇಶವನ್ನು ಹಂಚಿಕೊಂಡಿರುತ್ತಾರಾಗಿಯೂ ಒಂದು ವಾರ್ತೆಯಿದೆ. ೧೯೦೬ನೇ ಇಸ್ವಿಯಲ್ಲಿ ಆದ ತಹನಾಮೆಯಂತೆ ಹಬಸಿ ದೇಶದ ಸ್ವಾತಂತ್ರ್ಯವನ್ನು ಕಾಪಾಡಲು ಬ್ರಿಟನ್, ಫ್ರಾನ್ಸ್, ಇತಾಲಿ ರಾಷ್ಟ್ರಗಳು ಬದ್ಧವಿದ್ದು ಅದಕ್ಕೆ ವಿರುದ್ಧವಾಗಿ ಬ್ರಿಟಿಶರೂ ಫ್ರೆಂಚರೂ ಇತಾಲಿಯೊಡನೆ ಒಳಸಂಚು ಮಾಡುವ ನಮೂನೆ ನೋಡಿ ಪಾಶ್ಚಾತ್ಯ ಕಪಟ ರಾಜಕಾರಣಿಗಳಿಗೆ ಲೋಕದಲ್ಲಿ ಸರಿಗಟ್ಟುವ ಕಪಟಿಗಳು ದೊರಕರೆಂದು ನನಗೆ ಅನಿಸುತ್ತದೆ.

ಆದರೆ ಶತ್ರು ಅಲ್ಲಿಯೇ ನಿರ್ವಾಣ ಹೊಂದಿದ್ದಾನೆ. ಹಬಸಿ ಜನಾಂಗವು ಪಾಶ್ಚಾತ್ಯ ಸುಧಾರಿಸಿದ ಜನಾಂಗವಲ್ಲವೆಂಬ ಮಾತು ನಿಜ. ಆದರೆ ರಣಶೂರ ರಾಷ್ಟ್ರವದು; ರಣಹೇಡಿಯಲ್ಲ. ಪ್ರತಿಯೊಬ್ಬರೂ ದೇಶರಕ್ಷಣೆಗಾಗಿ ರಣರಂಗಕ್ಕೆ ಕೂಚು ಮಾಡಲು ಸಿದ್ಧರಿದ್ದಾರೆ. ಈಗಾಗಲೇ ಹಬಸಿ ಸರಕಾರದ ಬಳಿ ಒಂದು ಲಕ್ಷ ಸೈನ್ಯವಿದೆ. ೩-೪ ಲಕ್ಷ ಜನರು ಸಹಜ ಒಟ್ಟಾಗಬಲ್ಲರು. ಹಬಸಿ ದೇಶದ ಲೋಕಸಂಖ್ಯೆ ೧ ಕೋಟಿ ೨೦ ಲಕ್ಷವಿದ್ದು ಹಾಜಿ ಜನರು ಬಿಟ್ಟು ಉಳಿದವರೆಲ್ಲರೂ ಸೈನ್ಯ ಪಥಕಗಳಲ್ಲಿ ಸೇರುವವರೇ. ಹಬಸಿ ಜನರಿಗೆ ಸೋಲಿಸುವದು ಸಹಜ ಮಾತಲ್ಲ. ಬಾದಶಹರು ಮದ್ದು-ಗುಂಡುಗಳನ್ನೂ, ಶಸ್ತ್ರಾಸ್ತ್ರಗಳನ್ನೂ ಸಂಗ್ರಹಿಸುತ್ತಿದ್ದಾರೆ. ಮೇಲಾಗಿ ಅವರ ಬಳಿ ಶಿಕ್ಷಣ ಪಡೆದ ವೈಮಾನಿಕ ದಲವೂ ಇದೆ. ಫ್ರೆಂಚರೇ ಅವರಿಗೆ ವೈಮಾನಿಕ ಶಿಕ್ಷಣವನ್ನು ಕಲಿಸಿದರಂತೆ. ಇತ್ತಲಾಗಿ ಜಪಾನು ಅಲ್ಲಿ ಕಾಲೂರಿದೆ. ಜಪಾನ ದೇಶದ ಮುತ್ಸದ್ದಿ

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೇ ಸಂಸ್ಥೆಗೆ ಉತ್ತೇಜನ ಕೊಡಿ!!!

ಪ್ರೊಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಕಂಪನಿ.

ಪೋಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ.

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

ವಿ. ಸೂ. 'ಇಂಡಸ್ಟ್ರಿಯಲ್' ವಿಮೆ ಎಂಬ 'ರೂಪಾಯಿ ಪೋಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರಕೊಳ್ಳತಕ್ಕದ್ದು.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಕ ಮೆಮನ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು:— **ಮೆಸರ್ಸ ಜೀವನ ಏಜನ್ಸಿ, ಕಾರವಾರ.**

ಗಳಿಗೆ ಪಾಶ್ಚಾತ್ಯರ ಪ್ರವೇಶ. ತಮ್ಮ ವ್ಯಾಪಾರವನ್ನು ಬೆಳೆಸುವದಕ್ಕಾಗಿ ಜಪಾನಿಯರು ಹಬಸಿ ಸರಕಾರದೊಡನೆ ಒಳ್ಳೇ ಸ್ನೇಹಸಂಗ್ರಹ ಮಾಡಿದ್ದಾರೆ. ಹಬಸಿ ರಾಜಪುತ್ರರಾದ ಲೀಜ ಅಬಾಯಾರವರಿಗೂ, ಜಪಾನದ ದೊರೆಗಳ ಮಗಳಾದ ಮಾಸುಕೊ ಕುರೋಡಾರವರಿಗೂ ಮದುವೆಯಾಗುವದಿತ್ತು. ಮುಸೋಲಿನಿಯವರು ನಿಷೇಧ ಮಾಡಿದ್ದರಿಂದ ಆ ವಿವಾಹ ನಿಂತು ಹೋದಾಗ್ಯೂ, ಜಪಾನಿಯರು ಪ್ರತ್ಯೇಕ ಕಾರಣಕ್ಕಾಗಿ ನವನ್ನೇ ರಚಿಸಿ ಹಬಸಿ ರಾಷ್ಟ್ರದೊಡನೆ ನೆಂಟಸ್ತಿಕೆ ಹೂಡಿದ್ದಾರೆ. ಹಬಸಿ ಸರಕಾರವು ಜಪಾನವರ್ತಕರಿಗೂ, ಕಾರಖಾನೆಯವರಿಗೂ ಒಳ್ಳೇ ಆಶ್ರಯ ಕೊಟ್ಟಿದೆ. ಜಪಾನಿಯರು ಹಬಸಿ ಪ್ರಮುಖರ ಸಹಾಯದಿಂದ ಒಂದು ಸಂಘವನ್ನೇರ್ಪಡಿಸಿ ಹತ್ತಿ ಮತ್ತು ಕಾಫಿ ಬೆಳೆಸುವದಕ್ಕಾಗಿ ೧೬| ಲಕ್ಷ ಎಕರೆ ಭೂಮಿಯನ್ನು ಸಂಪಾದಿಸಿದ್ದಾರೆ. ಸರಕಾರಕ್ಕೆ ಹುಟ್ಟುವಳಿಯಲ್ಲಿ ದಶಾಂಶ ರಾಜಾರ್ಥ ಕೆತ್ತಲಾಯಿತು. ಈ ಪ್ರದೇಶದಲ್ಲಿ ಹಬಸಿ ಜನರಿಗೆ ಬಾಳ್ವೆ ಮಾಡುವದು ಕಠಿಣ. ದಂಯು ಪ್ರದೇಶವಾದ್ದರಿಂದ ಜನರು ಬದುಕುವದಿಲ್ಲ. ಜಪಾನಿಯರಿಗೆ ಈ ಹವೆಯ ಬಾಧಕವಿಲ್ಲವಂತೆ. ಆದರಿಂದ ಸಾವಿರಾರು ಜಪಾನಿಯರು ಇಲ್ಲಿ ವಾಸ್ತವ್ಯ ಮಾಡಲು ಸ್ವದೇಶ ತೊರೆದು ಬಂದಿದ್ದಾರೆ. ಅವರಿಗೆ ವಾಸ್ತವ್ಯ ಮಾಡಲು ಹಕ್ಕು ಸಿಗುವಂತೆ ಇತ್ತಿಚ್ಚಿನಲ್ಲಿ ಒಪ್ಪಂದವಾಗಿದೆ. ಹಬಸಿ ದೇಶದ ಹುಡುಗಿಯರನ್ನು ಜಪಾನಿಯರು ಮದುವೆ ಮಾಡಿಕೊಳ್ಳುವ ಕಾಯಿದೆಯೂ ಏರ್ಪಟ್ಟಾಗಿದೆ. ಈ ಪ್ರಕಾರ ಜಪಾನಿಯರು ಹಬಸಿ ದೇಶದಲ್ಲಿ ಜನಾಂಗವನ್ನು ಘಟಿಸಲಾರಂಭಿಸಿದ್ದಾರೆ. ಜಪಾನ ದೇಶಕ್ಕೆ ಈಗ ಹಬಸಿ ದೇಶದಲ್ಲಿ ಅಸ್ತಿತ್ವ ಉಂಟಾದ್ದರಿಂದ ಅಲ್ಲಿ ವ್ಯಾಪಾರಕ್ಕೆ ಒಳ್ಳೇ ಕಳೆಯೇರಿದೆ. ಹಬಸಿ ದೇಶದಲ್ಲಿ ನಮ್ಮ ಹಿಂದುಸ್ಥಾನದಿಂದ ಹೆಚ್ಚಾಗಿ ಜವಳಿ ಹೋಗುತ್ತಿತ್ತು; ೧೯೩೦ನೇ ಇಸ್ವಿಯ ವ್ಯಾಪಾರದ ಅಂಕಿಗಳನ್ನು ನೋಡಿದರೆ ಹಿಂದುಸ್ಥಾನದಿಂದ ೧೦೦ರಲ್ಲಿ ೫೭ರಷ್ಟು ಜವಳಿ ರಫ್ತಾಗಿತ್ತು; ಜಪಾನದಿಂದ ಬರೇ ೧೬ರಷ್ಟು ಜವಳಿ ಹೋಗಿತ್ತು. ಅದೇ ಕಳೆದ ವರ್ಷ ೧೦೦ಕ್ಕೆ ೮೦ರಷ್ಟು ಬೆಳೆ ಆಯಿತು. ಇದರ ಮೇಲಿಂದ ಜಪಾನದ ಗೌರವದ ಗ್ರಹಿಕೆಯಾಗುವಂತಿದೆ. ಜಪಾನ ದೇಶಕ್ಕೆ ಹಬಸಿ ದೇಶದ ಅಸ್ತಿತ್ವದಿಂದ ಸರ್ವ ಪರಿಯಿಂದಲೂ ಲಾಭವಿದೆ. ವರ್ಷ-ವರ್ಷಕ್ಕೆ ಹುಟ್ಟುತ್ತಿರುವ ಸ್ವಜನರಿಗೆ ಒಂದು ಉಂಬಳಿ. ಸ್ವದೇಶದೊಳಗಿನ ಸರಕುಗಳಿಗೆ ಒಂದು ಪೇಟೆ; ಮೇಲೆ ಸಮೃದ್ಧ ದೇಶದ ಪಾರುಪತ್ಯ. ಕಾರಖಾನೆಗಳಿಗೆ ತಗಲುವ ಅರಳೆ-ಗೋದಿ ಮೊದಲಾದ ಸಾಮುಗ್ರಿಗಳಿಗೆ ಹಿಂದುಸ್ಥಾನದಂಥ ವಿದೇಶಗಳ ಕಡೆ ಕೈಯೊಡ್ಡುವ ಗರಜಿಲ್ಲ. ಜಪಾನ ದೇಶವು ಹಬಸಿ ದೇಶದ ಪಾರುಪತ್ಯಾಧಿಕಾರವನ್ನು ವಹಿಸಿಕೊಂಡರೆ " ಬ್ರಿಟಿಶ ದೇಶಕ್ಕೂ ಒಳ್ಳೇ ಸಂಕಟವಿದೆ ಬ್ರಿಟಿಶರ ಸೂಡಾನ ಪ್ರದೇಶವು ಹಬಸಿ ದೇಶದ ಉತ್ತರ ಪಾರ್ಶ್ವದಲ್ಲಿದ್ದು ಸೂಡಾನಕ್ಕೆ ನೀರು ಹಬಸಿ ದೇಶದವರು ಬಿಟ್ಟುಕೊಟ್ಟರೆ ಮಾತ್ರ ಸಿಗಬೇಕು. ಈ ಪ್ರದೇಶದಲ್ಲಿ ಬ್ರಿಟಿಶ ಕಂಪನಿಯವರು ೪|| ಲಕ್ಷ ಎಕರೆ ಭೂಮಿಯ ಮೇಲೆ ಅರಳೆ ಬಿತ್ತುತ್ತಿದ್ದಾರೆ. ಇನ್ನು ೩೦ ಲಕ್ಷ ಎಕರೆ ಭೂಮಿಯ ಮೇಲೆ ಅರಳೆ ಬಿತ್ತಬಹುದು. ಹಬಸಿ ಸರಕಾರವು ಬ್ರಿಟಿಶರಿಗೆ ವಿರೋಧ ಬಗೆದರೆ, ನೈಲ ನದಿಯ ನೀರನ್ನು ಕಟ್ಟಿಬಿಟ್ಟರೆ ಸೂಡಾನ ಪ್ರದೇಶದೊಳಗಿನ ಯಾವತ್ತೂ ಹೊಲಗಳು ಬಂಜರು ಬಿದ್ದು ಬ್ರಿಟಿಶ ಸಾವಕಾರರಿಗೆ ಲಕ್ಷಾವಧಿ ರೂಪಾಯಿ ಹಾನಿಯಿದೆ. ಆದರಿಂದ ಬ್ರಿಟಿಶರು ಇಟಾಲಿಯ ಬಲಾತ್ಕಾರವನ್ನು ಸಹಿಸಬಾರದಾಗಿಯೂ ಇಟಾಲಿಗೂ ಹಬಸಿ ಸರಕಾರಕ್ಕೂ ಯುದ್ಧವಸಗಿದ್ದಲ್ಲಿ ಬ್ರಿಟಿಶರಿಗೆ ನಷ್ಟ ಬರಗುವದರಿಂದ ಇಟಾಲಿಗೆ ಬ್ರಿಟಿಶರು ಮುಂಜಾಗ್ರತೆ ಕೊಟ್ಟು ಇಟಾಲಿ-ಹಬಸಿ ದೇಶಗಳೊಳಗೆ ಶೀಘ್ರವೇ ಒಪ್ಪಂದವಾಗುವಂತೆ ಇಟಾಲಿಗೆ ಒತ್ತಾಯ ಮಾಡಬೇಕಾಗಿ 'ಮೆಂಚೆಸ್ಟರ ಗಾರ್ಡಿಯನ' ಪತ್ರಿಕೆಯಲ್ಲಿ ಮಿ| ಜೊಫ್ರಿ ಮೆಂಡರರವರು ಬರೆಯುತ್ತಾರೆ. ಬ್ರಿಟನ್, ಇಟಾಲಿ, ಜಪಾನ ಈ ಮೂರು ದೇಶಗಳ ಜೊತೆಗೆ ಜರ್ಮನಿಯೂ ಸೇರಬಯಸುತ್ತದೆ ಏರೋಪ್ಯ ರಾಜಕಾರಣದೊಳಗಿಂದ ಇಟಾಲಿಯ ದ್ವೇಷದಿಂದ ಜರ್ಮನರು ಹಬಸಿ ದೇಶಕ್ಕೆ ನೆರವಾಗಲೊಪ್ಪಿದ್ದಾರಂತೆ. ಜರ್ಮನಿಯ ರಾಯಭಾರಿಗಳು ಅಡಿಸಬಾಬಾದಲ್ಲಿ ಬಾದಶಹರಿಗೆ ಭೆಟ್ಟಿಯಾಗಿ ಈ ಸಂಗತಿಯನ್ನು ತಿಳಿಸಿದರಂತೆ. ಇದು ಸುಳ್ಳೆಂದು ಇಟಾಲಿಯಲ್ಲಿದ್ದ ಜರ್ಮನ್ ರಾಯಭಾರಿಗಳು ಇಟಾಲಿ ಸರಕಾರಕ್ಕೆ ತಿಳಿಸಿದಾಗ್ಯೂ ಮುಸೋಲಿನಿಯವರಿಗೆ ನಂಬಿಕೆಯಾಗಲಿಲ್ಲವಾಗಿ ಲಂಡನ್ನಿನೊಳಗಿನ 'ಒಬ್ಜರ್ವರ' ಪತ್ರಿಕೆಯ ರೋಮ ಪಟ್ಟಣದೊಳಗಿನ ಸುದ್ದಿಗಾರರು ತಿಳಿಸುತ್ತಾರೆ ಜರ್ಮನಿಯ ಉದ್ದೇಶವೇ ಬೇರೆ. ಇಟಾಲಿಗೆ ಹಬಸಿ ದೇಶದಲ್ಲಿ ತೊಡಗಿಸಿ ಏರೋಪ್ಯ ರಾಜಕಾರಣದಲ್ಲಿ ಅದಕ್ಕೆ ಮನಸ್ಸು ಹಾಕಗೊಡದ ಆಸ್ಟ್ರಿಯಾ-ಹಂಗೇರಿ ಪ್ರದೇಶವನ್ನ ಸ್ವಾಧೀನಪಡಿಸಿಕೊಳ್ಳುವ ಕುಹಕವನ್ನು ಹಿಟ್ಲರರು ರಚಿಸಿದ್ದಾರೆ. ಮೇಲಾಗಿ ರಶಿಯಾ ದೇಶದ ಪೂರ್ವ ಪಾರ್ಶ್ವದ ಪ್ರದೇಶವನ್ನು ನುಂಗಿಬಿಡುವದಕ್ಕಾಗಿ ಜರ್ಮನಿ, ಜಪಾನ ಮತ್ತು ಪೋಲಂಡ ಈ ಮೂರು ರಾಷ್ಟ್ರಗಳು ಒಂದು ಗುಪ್ತ ತಹನಾಮೆ ಮಾಡಿಕೊಂಡಿರುವರಾಗಿಯೂ ವಾರ್ತೆಯಿದೆ. ಜರ್ಮನಿ-ಪೋಲಂಡ ದೇಶಗಳು ಒ

[ಮುಂದಿ ೭ನೇ ಪಾನು ನೋಡಿರಿ.]

ಸ್ವಸ್ತಿಕ ಸುಪರಸ್ಪ್ಯಾನ ಸಾಬೂನು

ಮನೆತನದ ಯಾವತ್ತೂ ಕೆಲಸಗಳಿಗೆ
ಅತ್ಯುತ್ಕೃಷ್ಟವಾದದ್ದು ....

ಸ್ವಸ್ತಿಕ ಮಿಲ್ಲಿನವರು ಗಂಧದ ಸಾಬೂನು, ಟರ್ಕಿಶ ಜಳಕದ ಸಾಬೂನು, ಕಾರ್ಬೋಲಿಕ ಸಾಬೂನು, ಶೇವಿಂಗ ಸ್ಟಿಕ್, ಶೇವಿಂಗ ಕ್ರೀಮು, ಹೇರ ಆಯಿಲ್, ದಂತಮಂಜನ ಮುಂತಾದ ವಿವಿಧ ವೇಷಭೂಷೆಯ ಸಂಪೂರ್ಣ ಸಾಹಿತ್ಯವನ್ನು ತಯಾರಿಸಿರುವರು

ಉತ್ತರ ಕಾನಡಾ ಜಿಲ್ಲೆಯ ಏಜಂಟರು ಮತ್ತು
ಹುಬ್ಬಳ್ಳಿ-ಧಾರವಾಡಗಳಲ್ಲಿ ಮಾಲಿನ ಸಂಗ್ರಹಿಸುವವರು.—

ಎಸ್. ಎಸ್. ರಂಗೈಶೇಣ್ವಿ. ಪ್ರೋ. ಹಳಿಯಾಳ

ಕಾನಡಾವೃತ್ತ.

ಮಿತಿ ಯುವ ಸಂ। ಚೈತ್ರ ಬ। ೫ಥಿ, ಸೋಮವಾರ.

ಕ್ರಾಂತಿಯ ಮೂಲ ತತ್ವ.

ಕ್ರಾಂತಿಯ ಮೂಲ ತತ್ವಗಳನ್ನು ನಾವು ಈ ಹಿಂದೆ ಪರಾಂಬರಿಸುವಾಗ, ಕೆಲ ವಿಚಾರಗಳನ್ನು ಪ್ರದರ್ಶಿಸಿದ್ದೇವೆ. ಮಾನವನು ಸ್ವಾರ್ಥ ವಿಕಾರ ಸದ್ಭಾವನೆಯವನು. ನೀತಿವಂತನು. ಪರಿಸ್ಥಿತಿಯಿಂದ ಆತನೊಳಗೆ ಅವಸ್ಥಾಂತರ ಉಂಟಾಗುತ್ತದೆ. ಸದ್ವರ್ತನದಿಂದ, ನೀತಿಯಿಂದ ಪ್ರಪಂಚ ಸಾಗಿಸಲಾಗದಳಿಕೆ, ಆತನು ಅಡ್ಡ ದಾರಿ ಹಿಡಿದು ದುರ್ವರ್ತನಿಯಾಗುತ್ತಾನೆ. ಜನಸಾಮಾನ್ಯರು ನೀತಿಯಿಂದ ನಡೆಯುವಂತೆ ಪರಿಸ್ಥಿತಿಯನ್ನು ನಿರ್ಮಿಸುವದು ರಾಜ್ಯಕರ್ತರ ಕರ್ತವ್ಯ. ಅನೀತಿಗೆ ಇಂಬು ದೊರೆಯದಂತೆ ಪ್ರಚಲಿತ ಪರಿಸ್ಥಿತಿಯಲ್ಲಿನ ನ್ಯೂನತೆಗಳನ್ನು ಪರಿಹರಿಸುವದೂ ರಾಜ್ಯಕರ್ತರ ಕರ್ತವ್ಯ. ರಾಜ್ಯಸಂಸ್ಥೆಯು ಇದಕ್ಕಾಗಿಯೇ ಘಟಿಸಲ್ಪಟ್ಟಿದೆ. ರಾಜ್ಯದೊಳಗಿನ ಪ್ರಜೆಗಳಿಗೆ ಪ್ರಪಂಚವನ್ನು ನೀತಿಯಿಂದಲೂ, ಸದ್ಭಾವನೆಯಿಂದಲೂ ನಡಿಸಲು ಯಾವತ್ತೂ ಯೋಜನೆಗಳನ್ನು ರಚಿಸಿ ಪರಿಸ್ಥಿತಿಯನ್ನು ಸುಲಭವಾಗಿ, ಜನಸಾಮಾನ್ಯರ ಸಾಮರ್ಥ್ಯಕ್ಕೆ ಉಚಿತವಾಗಿ ಕಲ್ಪಿಸುವದೇ ಸರಕಾರದ ಮುಖ್ಯ ಕರ್ತವ್ಯ. ಈ ಕರ್ತವ್ಯವನ್ನು ನೆರವೇರಿಸುವದಕ್ಕಾಗಿ ಅವಶ್ಯವುಳ್ಳ ಖರ್ಚನ್ನು ಪೂರೈಸಿಕೊಳ್ಳಲು ಸರಕಾರಕ್ಕೆ ಕರ ವಸೂಲಿಯ ಅಧಿಕಾರ ಕೊಡಲಾಗಿದೆ. ನೀತಿಭ್ರಷ್ಟರಿಗೆ, ಸಮಾಜಹಿತಘಾತಕರಿಗೆ, ಲೋಕಕಂಟಕರಿಗೆ ದಂಡಿಸುವ ಅಧಿಕಾರವಾದರೂ ಸರಕಾರಕ್ಕೆ ಪ್ರಜಾಹಿತ ಕರ್ತವ್ಯಕ್ಕಾಗಿಯೇ ಅರ್ಪಿಸಲಾಗಿದೆ. ಲೋಕಕಂಟಕ ಪ್ರಜೆಗಳಿಗೆ ದಂಡಿಸುವಾಗ ಅವರನ್ನು ಸನ್ಮಾರ್ಗಕ್ಕೆ ಹಚ್ಚಲು ಪ್ರಯತ್ನಿಸುವ ಧೋರಣವಿರಬೇಕು. ಲೋಕಕಂಟಕ ಪ್ರವೃತ್ತಿಯ ಮೇಲೆ ಸರಕಾರದ ಹಗೆಯಿರಬೇಕು; ಲೋಕಕಂಟಕ ಶರೀರದ ಮೇಲೆ ಮಮತೆಯಿರಬೇಕು. ಸದ್ಭಾವನೆಯನ್ನು ತ್ಯಜಿಸಿ, ಸ್ವಜನರಿಗೆ ಅಹಿತ ಮಾಡುವ ಪ್ರವೃತ್ತಿಯನ್ನು ಸರಕಾರವು ಹೋಗಲಾಡಿಸಲೆತ್ನಿಸಿದರೆ ಮಾತ್ರ ಸರಕಾರವು ಕರ್ತವ್ಯಪರಾಯಣವಾಗುತ್ತದೆ. ಕಾರಾಗೃಹ ಕಟ್ಟಿ ನಿಯಮಿತ ಶಿಕ್ಷೆಯನ್ನು ವಿಧಿಸಿ ಪ್ರತಿಬಂಧಿಸುವದರಿಂದ ಸರಕಾರದ ಕರ್ತವ್ಯ ಮುಗಿಯದು. ಇತ್ತ ಕಡೆ ಸರಕಾರವು ಲಕ್ಷ್ಯ ಕೊಡಬೇಕು. ಕ್ರಾಂತಿಕಾರಕರ ಪಂಗಡಗಳಲ್ಲಿ ವಿದ್ಯಾವಂತರೂ, ಶೀಲವಂತರೂ ಸೇರುವ ಕಾರಣವನ್ನು ಪರ್ಯಾಲೋಚಿಸಿದರೆ ನಮಗೇನು ಕಾಣುತ್ತದೆ? ಕಲಿತವರಿಗೆ ತಕ್ಕಷ್ಟು ಪ್ರತಿಫಲ ಕೊಡುವ ವ್ಯವಸಾಯ ದೊರೆಯುವದಿಲ್ಲ. ಎಷ್ಟು ಪ್ರಯತ್ನಪಟ್ಟಾಗ್ಯೂ ಎಲ್ಲಿಯೂ ಪ್ರವೇಶವಿಲ್ಲ. ಇದರೊಳಗೂ ಅವರೊಳಗೆ "ಈಗಿನ ರಾಜ್ಯಪದ್ಧತಿಯೇ ದೋಷಪೂರ್ಣವಾದುದು; ವಿಕಾಸಕ್ಕೆ ಇಂಬಿಲ್ಲ. ಇದನ್ನು ಒಂದಿಲ್ಲೊಂದು ಪರಿಯಿಂದ ನಾಶ ಮಾಡಬೇಕು;" ಎಂಬ ಭಾವನೆ ಲೋಕದಲ್ಲಿ ರೂಢವಾಗುತ್ತದೆ. ಈಗಿನ ಪರಿಸ್ಥಿತಿಯಲ್ಲಿ ನಿರಾಶೆ ಹುಟ್ಟದನಕ ಸಾಮಾನ್ಯ ಮಾನವನು ಕ್ರಾಂತಿಗೆ ಬಲಿ ಬೀಳುವದಿಲ್ಲ. ಇದೊಂದು ಪ್ರಕಾರದ ರೋಗವೆಂದು ಎಣಿಸಬಹುದು. ಈ ರೋಗಕ್ಕೆ ಶಾರೀರಿಕ ದಂಡವು ಉಪಚಾರವಲ್ಲ. ಪರಿಸ್ಥಿತಿಯನ್ನು ಗ್ರಹಿಸಿಕೊಂಡು ಅದನ್ನು ಪರಿಹರಿಸಲಿಕ್ಕೆ ಉಪಾಯ ಕಲ್ಪಿಸುವದೇ ಈ ರೋಗದ ಮೇಲೆ ಅಮೋಘ ಉಪಾಯವಿದೆ. ಮಹಾತ್ಮರಾಗಲಿ, ರಾಷ್ಟ್ರೀಯ ಸಭೆಯವರಾಗಲಿ ಗ್ರಾಮೋದ್ಯೋಗಗಳನ್ನು ದೇಶತುಂಬ ಹರಡುವದಕ್ಕಾಗಿ ಪ್ರಯತ್ನಪಡುವ ಕಾರಣವಾದರೂ ಇದೇ. ದೇಶದೊಳಗಿನ ಕೈಗಾರಿಕೆಗಳು ಕ್ರಮೇಣವಾಗಿ ನಷ್ಟವಾದವು. ಭೂಮಿಯ ಉತ್ಪತ್ತಿಯಿಂದ ಉದರನಿರ್ವಾಹವಾಗುವದು ಕಠಿಣ. ಆದರಿಂದ ಜನರೊಳಗೆ ನಿರಾಶೆ ಹಬ್ಬಿದೆ. ಇದನ್ನು ತಪ್ಪಿಸಿಕೊಳ್ಳಬೇಕಾದರೆ ಗ್ರಾಮಾಂತರಗಳಲ್ಲಿ ಕೈಗಾರಿಕೆಗಳನ್ನು ಹೆಚ್ಚಿಸಿ ಅವುಗಳ ಪ್ರಚಾರ ಮಾಡಬೇಕು. ಈ ಉಪಚಾರದಿಂದಲೇ ಲೋಕಕ್ಷೇಮವಾಗುವಂತಿದೆ. ರಶಿಯಾ ದೇಶದೊಳಗಿನ ಒಂದು ಉದಾಹರಣೆಯನ್ನು ನಾವು ಈ ಹಿಂದೆ ಕೊಟ್ಟಿದ್ದೇವೆ. ಅದೊಂದು ವಿಶೇಷವಾದ ಸಂಗತಿಯಲ್ಲ. ಅಲ್ಲಿಯ ಪದ್ಧತಿಯೇ ಹಾಗೆ. ಪ್ರೊಫೆಸರ ಮೆಕ್‌ಸುಕ್‌ರವರು ರಶಿಯಾ ದೇಶದೊಳಗಿನ ಸೆರೆಮನೆಯೊಳಗಿನ ಜೀವನಕ್ರಮವನ್ನು ವರ್ಣಿಸಿದ್ದಾರೆ. ಕಾರಾಗೃಹಕ್ಕೆ ಅಲ್ಲಿ 'ಹೌಸ ಆಫ್ ಕರೆಕ್ಶನ್' ಯಾನೆ ತಪ್ಪು ಸುಧಾರಿಸುವ ಗೃಹ ಎಂಬ ಅನ್ವರ್ಥಕ ಹೆಸರಿದೆ. ಅಪರಾಧಿಯು ಸ್ವಭಾವಿಕವಾಗಿ ಜನ್ಮಯುಗ್ಯ ಕೈ ನೀಡುವವನಲ್ಲ. ಆತನಿಗೆ ನ್ಯಾಯ ಮಾರ್ಗದಿಂದ ಸಂಸಾರ ನಡಿಸಲು ಸಾಧ್ಯವಿದ್ದರೆ ಆತನು ಸಮಾಜಕಂಟಕ ವ್ಯಾಪಾರಗಳಿಗೆ ಕೈ ಹಾಕುವದಿಲ್ಲ. ಎಂಬ ವಿಚಾರದಿಂದ ಅಲ್ಲಿಯ ಸೆರೆಮನೆಗಳಲ್ಲಿ ಅಪರಾಧಿಗಳಿಗೆ ನಡೆಸಿಕೊಳ್ಳುತ್ತಾರೆ. ಅಪರಾಧಿಗಳಿಗೆ ಕೈಕೋಳ ಕಾಲುಕೋಳ ತೊಡಿಸುವದಿಲ್ಲ. ಸಾಮಾನ್ಯ ರೋಗಿಗಳಿಗೆ ವೈದ್ಯೋಪಚಾರ ನಡಿಸುವಂತೆ ಅಪರಾಧಿಗಳಿಗೆ ಅಲ್ಲಿ ಚಿಕಿತ್ಸೆಯಿಂದ ನಡಿಸಿಕೊಳ್ಳುತ್ತಾರೆ. ಕಾರಾಗೃಹದಲ್ಲಿ ೧೦ ವರುಷಕ್ಕೆ ಒಬ್ಬ ಯಾರೂ ಸಾಯಬೇಕಾಗಿಲ್ಲ. ಕಾರ್ಖಾನೆಯಲ್ಲಿ ಮಾಡುವ ಉದ್ಯೋಗವನ್ನೇ ಅಪರಾಧಿಗಳು ಜೈಲಿನಲ್ಲಿ ಮಾಡಿ ಉಳಿಯುವ ಸಂಬಳವನ್ನೇ ಅಲ್ಲಿ ಪಡೆಯಬಹುದು. ಸಂಬಳದ ಅರ್ಧಾಂಶವನ್ನು ಜೈಲಿನವರು ಇಟ್ಟುಕೊಳ್ಳುತ್ತಾರೆ, ಉಳಿದ ಅರ್ಧಾಂಶದಲ್ಲಿ ಚತುರ್ಥಾಂಶ ಅವನಿಗೆ ಖರ್ಚಿಗೆ ಕೊಡುತ್ತಾರೆ. ಇದರಿಂದ ಆತನು ಬೀಡಿ, ತಿಂಡಿ-ತಿನಸು ಮೊದಲಾದವುಗಳನ್ನು ಕೊಂಡುಕೊಳ್ಳಬಹುದು. ಉಪಕಾರಗೃಹಗಳು ಜೈಲುಗಳ ನೆರೆಹೊರೆಯಲ್ಲಿವೆ. ಜೈಲುಗಳು ಮನೆಗಳಂತೆ ಇವೆ. ಎತ್ತರವಾದ ಗೋಡೆಗಳು, ಅವುಗಳ ಮೇಲೆ ಕಬ್ಬಿಣದ ಬಾಣಗಳು ಮೊದಲಾದ ಆಡಂಬರವಿಲ್ಲ; ಅಪರಾಧಿಗಳಿಗೆ ಜೈಲಿನ ಉಡಿಗೆ-ತೊಡಿಗೆಗಳಿಲ್ಲ. ಸಾಮಾನ್ಯ ನಾಗರಿಕರಂತೆ ನಿತ್ಯ ಪೋಷಾಕಿನಲ್ಲಿ ಅವರು ಇರುತ್ತಾರೆ. ಸದ್ವರ್ತನದ ಬಗ್ಗೆ ಶಿಕ್ಷೆಯಲ್ಲಿ ಸೂಟು ಸಿಗುತ್ತದೆ. ಪ್ರತಿ ೩ ದಿನಕ್ಕೆ ೨ ದಿನಗಳ ಸೂಟು. ಅಂದರೆ ೫ ವರ್ಷಗಳ ಶಿಕ್ಷೆ ೩ ವರ್ಷಗಳಲ್ಲಿಯೇ ಮುಗಿಯುತ್ತದೆ. ಇದಲ್ಲದೆ ಪ್ರತಿ ವರ್ಷ ೧೫ ದಿನಗಳ ರಜೆ. ರಜಾ ಪಕ್ಷದಲ್ಲಿ ಅಪರಾಧಿಗಳು ಬೇಕಾದಲ್ಲಿ ಹೋಗಿ ಆಡ್ಡಾಡಿ ತಿರುಗಿ ಬರಬಹುದು. ಕಳೆದ ವರ್ಷ ಒಂದು ಜೈಲಿನಲ್ಲಿ ೫ ಸಾವಿರ ಜನರಿಗೆ ಈ ಪ್ರಕಾರ ರಜೆ ಕೊಟ್ಟಿತ್ತು. ಅವರಲ್ಲಿ ೯ ಜನರು ಮಾತ್ರ ತಿರುಗಿ ಬರಲಿಲ್ಲ. ಉಳಿದವರೆಲ್ಲರೂ ತಾವಾಗಿಯೇ ಕಾರಾಗೃಹಕ್ಕೆ ತಿರುಗಿ ಬಂದರು. ಈ ಪದ್ಧತಿಯಿಂದ ರಶಿಯಾ ದೇಶದೊಳಗೆ ಅಪರಾಧಿಗಳ ಸಂಖ್ಯೆ ಹೇರಳವಾಗಿ ಕುಗ್ಗಿದೆ. ಅಪರಾಧಿಗಳು ತಮ್ಮ ಅನೀತಿಯ ವ್ಯವಸಾಯವನ್ನು ಬಿಟ್ಟು ಕೊಟ್ಟು ಸಭ್ಯ ನಾಗರಿಕರಾಗಿದ್ದಾರೆ. ಜೇಬು ಕತ್ತರಿಸಿದ ಅಪರಾಧದ ಬಗ್ಗೆ ಒಬ್ಬನಿಗೆ ಶಿಕ್ಷೆಯಾಗಿತ್ತು. ೭ ವರುಷ ಕಾರಾಗೃಹವಾಸವನ್ನನುಭವಿಸಿ ಆತನು ತನ್ನ ದುಷ್ಟ ವ್ಯಾಪಾರವನ್ನು ಸಂಪೂರ್ಣವಾಗಿ ತ್ಯಜಿಸಿ, ಈಗ ಒಳ್ಳೇ ನಾಗರಿಕನಾಗಿದ್ದಾನೆ. ಆತನಿಗೆ ೨ ಮಕ್ಕಳು ಹುಟ್ಟಿದ್ದಾರಂತೆ. ಮರ್ಯಾದೆಯಿಂದ ಪ್ರಪಂಚ ಸಾಗಿಸುತ್ತಾನೆ. ಈ ಸಂಗತಿಯನ್ನು ಪ್ರೊ| ಪ್ರೊಫೆಸರ ಮೆಕ್‌ಸೋರ್‌ರವರು ಆನಂದದಿಂದ ನಮೂದಿಸಿ ಅಪರಾಧಿಗಳಿಗೆ ಕಾರಾಗೃಹಗಳಲ್ಲಿ ನಿಷ್ಠುರತನದಿಂದಲೂ, ನಿರ್ದಯತನದಿಂದಲೂ ದಣಿಸುವದರಿಂದ ಅವರ ಸದ್ಭಾವನೆಗಳೆಲ್ಲ ನಷ್ಟವಾಗಿ ಲೋಕಕ್ಕೆ ಅಹಿತವಾಗುತ್ತದಾಗಿ ಸೂಚಿಸುತ್ತಾರೆ. ಕ್ರಾಂತಿಯ ಮೂಲ ಪರಿಹಾರ ಮಾಡಬಯಸುವ ರಾಜ್ಯಕರ್ತರು ಈ ಸಂಗತಿಯನ್ನು ಲಕ್ಷ್ಯದಲ್ಲಿಟ್ಟು ವರ್ತಿಸಬೇಕು. ಕ್ರಾಂತಿಕಾರಕರು ಸುಖಕ್ಕಾಗಿ, ವಿಲಾಸಕ್ಕಾಗಿ, ಪರಪೀಡೆಗಾಗಿ ಕ್ರಾಂತಿಯನ್ನೆಬ್ಬಿಸುವದಿಲ್ಲ. ಈಗಿನ ಜಗತ್ತಿನಲ್ಲಿ ಸುಖ ದೊರೆಯುವದು ದುರಾಪಾಸ್ತವೆಂಬ ಅಭಿಪ್ರಾಯವಾಗಿ ನಿರಾಶೆಯಿಂದ ಅವರು ರಾಜ್ಯಕ್ರಾಂತಿಯಂಥ ಗಂಡಾಂತರದಲ್ಲಿ ಸಿಲುಕುತ್ತಾರೆ. ಸರಕಾರವು ಅವರಿಗೆ ದಣಿಸುವದು ಹಿತಕರವಲ್ಲ. ಅವರಿಗೆ ಪ್ರಕೃತಿಗೆ ತಕ್ಕದ್ದಾಗಿ ಕೆಲಸ ಪೂರೈಸಿ ಅವರಲ್ಲಿ ಆತ್ಮವಿಶ್ವಾಸವನ್ನೂ ಮಾನವ ಜೀವನದ ಸುಖವನ್ನು ಉಂಟುಮಾಡಿದ್ದಲ್ಲಿ ಕ್ರಾಂತಿಕಾರಕರ ಪಂಗಡವು ತಾನಾಗಿಯೇ ಸೊರಗಿ ಹೋಗಿ ಹಿಂದದೇಶದ ಮೇಲಿನ ಆಪತ್ತು ಪರಿಹಾರವಾಗುವಂತಿದೆ. ವಂಗದೇಶದೊಳಗ ಸಾವಿರಾರು ದೇಶಬಾಂಧವರು ವಿದ್ಯಾವಂತರು, ಶೀಲವಂತರು, ಮನೆತನಸ್ಥರು, ಬುದ್ಧಿವಂತರು ಕಾರಾಗೃಹವಲ್ಲಿ ನರಳುತ್ತಿರುವದನ್ನು ನೋಡಿ ನಮಗೆ ವ್ಯಸನವಾಗಿದೆ. ಅವರ ಕಷ್ಟಗಳನ್ನು ಕೇಳಿದರೆ ಕರುಳು ಕರಗಿ ನೀರಾಗುತ್ತದೆ. ಅಪರಾಧ ಮಾಡಿದ ಬಗ್ಗೆ ಅವರ ಮೇಲೆ ಖಟ್ಲೆಯಾಗಲಿಲ್ಲ. ಬರೇ ಸಂಶಯದ ಮೇಲೆ ಅವರಿಗೆ ಸೆರೆಹಿಡಿದಿಟ್ಟಿದ್ದಾರೆ. ಸರಕಾರಕ್ಕೆ ಕ್ರಾಂತಿಕಾರಕರದೇ ಕನಸು. ಕಂಡಕಂಡವರಿಗೆ ಸಂಶಯದ ಮೇಲೆ ಸೆರೆಹಿಡಿಯುವ ರಭಸ ನಡೆದದೆ. ಮುಂಬಯಿ ಮೊದಲಾದ ಕಡೆ ಇವರ ಕಷ್ಟನಿವಾರಣೆಗಾಗಿ ನಿಧಿಗೂಡಿಸಲಾರಂಭಿಸಿದ್ದಾರೆ. ಹಿಂದುಸ್ಥಾನ ಸರಕಾರವು, ಬಂಗಾಲ ಸರಕಾರವೂ ಸುದೀರ್ಘವಾಗಿ ವಿಚಾರ ಮಾಡಬೇಕು. ಸಾವಿರಾರು ಪ್ರಜೆಗಳಿಗೆ ಪ್ರತಿಬಂಧದಲ್ಲಿಡಲು ಅಧಿಕಾರಿಗಳಿಗೂ ಮನಸ್ಸೊಪ್ಪದು. ಬ್ರಿಟಿಶರು ಕುಶಲ ವ್ಯವಹಾರಿಕರೆಂದು ಲೋಕದಲ್ಲಿ ಖ್ಯಾತಿ ಪಡೆದವರು. ಅಂಥ ಜಾಣ್ಮೆಯುಳ್ಳವರು ಹಿಂದುಸ್ಥಾನದ ರಾಜ್ಯಕರ್ತರಿರುವಾಗ ಈ ಪ್ರಕಾರ ಸಭ್ಯ, ಶಿಷ್ಟ ದೇಶಬಾಂಧವರು ಕಾರಾಗೃಹದಲ್ಲಿ ನರಳುವದು ಉಚಿತವೇ? ಬಂಗಾಲದ ಗವರ್ನರರಾದ ಸರ್ ಜೋನ್ ಎಂಡರ್ಸನ್‌ರವರು ಪ್ರಾಂತಿಕ ಪರಿಸ್ಥಿತಿಯನ್ನು ಸಮಾಲೋಚಿಸಿ ಕ್ರಾಂತಿ ಕಲ್ಪನೆಯ ಮೂಲವನ್ನು ಪರಿಶೋಧಿಸಿ ಅದನ್ನು ಪರಿಹರಿಸುವದಕ್ಕಾಗಿ ಉಪಾಯ-

ಯೋಜನೆ ಮಾತದೇಕಾಗಿಯೂ ನಿರಪರಾಧಿ ದೇಶಬಾಂಧವರಿಗೆ ನಿಷ್ಕಾರಣವಾಗಿ ದಣಿಸಿ ಪ್ರಜಾಕ್ಷೋಭವನ್ನುಂಟು ಬೆಳೆಸಬಾರದಾಗಿಯೂ ನಾವು ನಮ್ರಭಾವದಿಂದ ಬಿನ್ನೈಸಿಕೊಳ್ಳುತ್ತೇವೆ. ಅದಕ್ಕಾಗಿಯೇ ಕ್ರಾಂತಿಯ ಮೂಲ ತತ್ವವನ್ನು ಈ ಹೊತ್ತು ಸ್ವಲ್ಪ ವಿಸ್ತಾರದಿಂದ ನಾವು ವಿವರಿಸಿದ್ದೇವೆ.

ಹಬಸಿ ಪ್ರಕರಣದ ವಿರಾಟಸ್ವರೂಪ

[೫ನೇ ಪಾನಿನಿಂದ ಮುಂದರಿಸಿದ್ದು.]

ಯಾ ದೇಶದ ಪಶ್ಚಿಮ ಪಾರ್ಶ್ವವನ್ನು ಅಪಹರಿಸುವಾಗ ಜಪಾನ ದೇಶವು ವ್ಲೆಡಿವ್ಹೊಸ್ಟೋಕ್ ಮೊದಲಾದ ಪೂರ್ವಭಾಗವನ್ನು ರಶಿಯಾ ದೇಶದಿಂದ ಸೆಳೆದುಕೊಳ್ಳಬೇಕೆಂದು ಗೊತ್ತಾಗಿರುವದಂತೆ. ಸದ್ಯಕ್ಕೆ ಬರ್ಲಿನ್‌ದಲ್ಲಿ ಜಪಾನದ ರಾಯಭಾರಿಗಳಾದ ಕೌಂಟ ಮುಶಾಕೋಜಿಯವರಿಗೂ ಹಿಟ್ಲರರವರಿಗೂ ನಡೆದ ಸಂಭಾಷಣದ ಮೇಲಿಂದ ಇತ್ತಿತ್ತಲಿನೊಳಗಿನ ಪ್ರೀತಿ ಪ್ರದರ್ಶನವಾಗಿರುವದಾಗಿ 'ಮೆಂಚೆಸ್ಟರ ಗಾರ್ಡಿಯನ್' ಪತ್ರಕರ್ತರು ಅಭಿಪ್ರಾಯಪಡುತ್ತಾರೆ. ಹಿಟ್ಲರರು ಯುರೋಪ್ಯ ರಾಜಕಾರಣದಲ್ಲಿ ಪ್ರಭುಗಳಾಗಲು ಹವಣಿಸುತ್ತಾರಾಗಿಯೂ, ತಮ್ಮ ಧೋರಣಕ್ಕೆ ರುಶ್ಯರು ಅನುಕೂಲರಿದ್ದಲ್ಲಿ ಅವರೊಡನೆ ಒಪ್ಪಂದ ಮಾಡಿಕೊಳ್ಳಲಿಕ್ಕೂ ಹಿಟ್ಲರರು ಅನುಮಾನ ಮಾಡುವವರಲ್ಲವಾಗಿಯೂ 'ಮೆಂಚೆಸ್ಟರ ಗಾರ್ಡಿಯನ್' ಪತ್ರಿಕಕಾರರ ಅಂಬೋಣ. ಹಬಸಿ ಪ್ರಕರಣದೊಳಗಿನ ಅಂತಃಸೂತ್ರಗಳನ್ನು ಪರಾಂಬರಿಸಿದರೆ ನಿಮಗೇನು ತೋರುವದು? ಕಲಹವು ಇಟಾಲಿ ಹಬಸಿ ದೇಶಗಳೊಳಗಿನದೋ? ಬ್ರಿಟನ್, ಫ್ರಾನ್ಸ, ಜಪಾನ, ಜರ್ಮನಿ, ಹಬಸಿ ದೇಶಗಳೊಳಗಿನದೋ? ಈ ಪ್ರಕರಣವನ್ನು ಬಗೆಹರಿಸಬೇಕಾಗಿ ಹಬಸಿ ಸರಕಾರವು ರಾಷ್ಟ್ರಸಂಘಕ್ಕೆ ಬಿನ್ನಹ ಮಾಡಿಕೊಂಡಿದೆ. ಅದರ ವಿಚಾರ ಮೇ ತಿಂಗಳಲ್ಲಿ ಆಗಲಿಕ್ಕಿದೆಯಂತೆ. ಈ ಯುದ್ದೆಯಂತೆ, ನೀತಿಯ ಎತ್ತ ಹಬಸಿ ಸರಕಾರದ ತಪ್ಪಿಲ್ಲವಾಗಿಯೂ, ಉಲವೆಲ್ ಪ್ರದೇಶವು ಹಬಸಿ ಸೀಮೆಯಲ್ಲಿ ಇರುವದಾಗಿಯೂ, ಇಟಾಲಿ-ಹಬಸಿ ದೇಶಗಳೊಳಗೆ ತಾ. ೧೬-೫-೧೯೨೮ನೇದಾದ ತಹನಾಮೆಯ ೪ನೇ ಕಲಮಿನ ಅರ್ಥ ಮಾಡಿದರೆ ಇಟಾಲಿಯ ದುಸ್ಸಾಧನೆ ತಿಳಿಯುವಂತಿರುವದಾಗಿಯೂ 'ನೋ-ಫ್ರಂಟಿಯರ ನ್ಯೂಸ ಸರ್ವಿಸ' ವಾರ್ತಾ ಸಂಸ್ಥೆಯ ಜಿನೇವಾದೊಳಗಿನ ಸುಪ್ರಿಗಾರರ ಅಂಬೋಣ. ಇಟಾಲಿಯ ವಾದ ಬೇರೆ: ಉಲವೆಲ್ ಗ್ರಾಮದ ಭೂಮಿ ಇಟಾಲಿಯ ಸೋಮಾಲಿ ಪ್ರಾಂತದೊಳಗೆ ಸಾಗಿಸುವ ಸಂಗಡದವರ ಒಡೆತನದ್ದು; ಆದರಿಂದ ಇದು ಇಟಾಲಿಯದು. ಈ ವಕೀಲಿ ಕೇಳಿ ಯಾರಿಗೂ ನಗೆ ಬರದಿರದು. ಅದೆಂತಿರಲಿ, ರಾಷ್ಟ್ರಸಂಘದ ತೀರ್ಮಾನವೇನೆಂದು ನಾನು ಕೇಳಿಕೊಳ್ಳುತ್ತೇನೆ ಆಮೇಲೆ ಮುಂದಿನ ಪರಿಣಾಮ ಹೇಳೇನು. ಸದ್ಯಕ್ಕೆ ಈ ನಾಟಕದೊಳಗಿನ ಬೇರೆ ಬೇರೆ ಪ್ರವೇಶಗಳನ್ನೂ, ಬೇರೆ ಬೇರೆ ಪಾತ್ರಗಳನ್ನೂ ಹೇಳಿದ್ದೇನೆ. ಅದನ್ನಷ್ಟು ವಾಚಕರು ಲಕ್ಷದಲ್ಲಿಟ್ಟುಕೊಂಡರೆ ಸಾಕು:

ಸ್ಟ್ರೆಸಾ ಪರಿಷತ್ತು ಮುಗಿಯಿತು. ರಾಷ್ಟ್ರಸಂಘದ ಪರಿಷತ್ತಿನ ಅಧಿವೇಶನವೂ ಮುಗಿಯಿತು. ಫಲಿತಾಂಶವೇನೆಂದು ಕೇಳುವವರಿಗೆ ನಾನು ಹೇಳುವದಿಷ್ಟೇ: ಯುರೋಪ್ಯ ರಾಜಕಾರಣ ಇದ್ದಲ್ಲಿಯೇ ಇದೆ. ಜರ್ಮನಿಯವರು ಶಸ್ತ್ರಾಸ್ತ್ರಗಳನ್ನೂ, ಸೈನ್ಯ ಪಥಕಗಳನ್ನೂ ಬೆಳೆಸಿ, ವರ್ಸಾಲೀಸ ತಹನಾಮೆಯನ್ನು ಸೊಕ್ಕಿನಿಂದ ಮುರಿದರೆಂದು ಫ್ರೆಂಚರು ಮಾಡಿದ ಸಾಧನೆಯನ್ನು ಸ್ಟ್ರೆಸಾ ಪರಿಷತ್ತು ಮನ್ನಿಸಿತು. ರಾಷ್ಟ್ರಸಂಘವು ಅದನ್ನೇ ಮನ್ನಿಸಿದೆ. ಬ್ರಿಟಿಶ, ಫ್ರಾನ್ಸ, ಇಟಾಲಿ ಈ ಮೂರು ದೇಶಗಳಿಗೆ ಬಿಟ್ಟು ರಾಷ್ಟ್ರಸಂಘಕ್ಕೆ ಸ್ವತಂತ್ರ ವಿಚಾರ ಮಾಡುವ ಸಾಮರ್ಥ್ಯವೆಲ್ಲಿ? ಸ್ವತಂತ್ರ ವಿಚಾರ ಮಾಡುವ, ಬದಲಿಗೆ ಜರ್ಮನಿಯ ದ್ವೇಷಬಗೆಯ ರುಶ್ಯರು ಫ್ರಾನ್ಸ ದೇಶದ ಸೂಚನೆಯನ್ನು ಬಲವಾಗಿ ಪುಷ್ಟೀಕರಿಸಿದರು. ಡೆನ್ಮಾರ್ಕ ದೇಶದ ರಾಯಭಾರಿಗಳಾದ ಡಾ| ಮಂಚರವರು ಮಾತ್ರ ಸ್ವತಂತ್ರ ವಿಚಾರ ಹಿಡಿದು ಜರ್ಮನಿಯ ಆಕ್ಷೇಪದ ವಿಚಾರ ಮಾಡಬೇಕಾಗಿ ಸಭಿಕರಿಗೆ ಬುದ್ಧಿ ಹೇಳಿದರೂ ಆ ಕಡೆ ಒಬ್ಬರೂ ಕಿವಿಗೊಡಲಿಲ್ಲ. ಜರ್ಮನಿಗೆ ಯಾವ ಪ್ರಕಾರ ಶಾಸನ ಮಾಡಬೇಕೆಂಬದರ ಕುರಿತು ವಿಚಾರ ಮಾಡಲೋಸುಗ ಬ್ರಿಟನ್, ಫ್ರಾನ್ಸ, ಇಟಾಲಿ ಮೊದಲಾದ ೧೩ ರಾಷ್ಟ್ರಗಳ ಮಂಡಳವೊಂದು ನೇಮಿಸಲ್ಪಟ್ಟಿದೆ. ಡಾ| ಮಂಚರವರೂ ತಟಸ್ಥರಿದ್ದರು. ರಾಷ್ಟ್ರಸಂಘದ ಈ ವೃತ್ತಾಂತ ಕೇಳಿ ಜರ್ಮನಿಯ ಹಿಟ್ಲರರು ಸಂತಪ್ತರಾದರಂತೆ. ಕೂಡಲೆ ಅಂದರೆ ಬುಧವಾರವೇ ಬ್ರಿಟನ ಮತ್ತು ಇಟಾಲಿ ರಾಯಭಾರಿಗಳ ಕಡೆ ನಿಷೇಧವನ್ನು ಜರ್ಮನ್ ಸರಕಾರದ ತರ್ಫೆನಿಂದ ಹಿಟ್ಲರರು ತಿಳಿಸಿದ್ದಾರೆ. ಮೊನ್ನೆ ಶನಿವಾರ ೨೦ನೇ ತಾರೀಖಿಗೆ ಮ್ಯುನಿಕ್ ಪಟ್ಟಣದಲ್ಲಿ ಬೆರನ್ ನ್ಯೂರೆಥ್ ಪ್ರಭೃತಿ ಪರರಾಷ್ಟ್ರೀಯ ಪ್ರಧಾನರೊಡನೆ ಒಬ್ಬರು ಆಲೋಚನೆ ಮಾಡಿ ತಮ್ಮ ಅಂಬೋಣವನ್ನು ಪ್ರಕಟಿಸುವವರಿದ್ದರು. ಇದರ ಮೇಲಿಂದ ಸ್ಟ್ರೆಸಾದ ಯುರೋಪ ಖಂಡದ ಯಾತ್ರೆಯು ನಿರರ್ಥಕವಾಯಿತೆಂದು ಧಾರಾಳವಾಗಿ ಹೇಳಬಹುದು. ಫ್ರೆಂಚರಿಗೆ ನಿಯಂತ್ರಿಸುವ ಶಕ್ತಿ ಯಾರಲ್ಲಿಯೂ ಇರಲಿಲ್ಲ. ಜರ್ಮನ್ ಪತ್ರಿಕೆಗಳು ರಾಷ್ಟ್ರಸಂಘದ ತೀರ್ಮಾನವನ್ನು ಧಿಕ್ಕರಿಸುತ್ತವೆ. ಜರ್ಮನಿಯ ಮೇಲೆ ಯಾವತ್ತೂ ಅಪರಾಧ ಹೊರಿಸಿ ಚೌಕಶಿ ಮಂಡಳ ನೇಮಿಸಿದ್ದು ಶಿಷ್ಟಸಮ್ಮತವಲ್ಲವೆಂದೂ, ರಾಷ್ಟ್ರಸಂಘದವರು ಜರ್ಮನ್ ದ್ವೇಷಿಕರ ಬಲೆಯಲ್ಲಿ ಸಿಲುಕಿ ಬಿದ್ದರೆಂದೂ, ಇದರಿಂದ ಕ್ಷೇಮವಿಲ್ಲವಾಗಿಯೂ ಪತ್ರಿಕೆಗಳ ಅಂಬೋಣ. ಫ್ರಾನ್ಸ-ರಶಿಯಾ ದೇಶಗಳ ರಾಯಭಾರಿಗಳಾದ ಲಾವಲ್‌ರಿಗೂ, ಲಿಟ್ವಿನೋಫ್‌ರವರಿಗೂ ಪರಸ್ಪರ ಸಹಾಯದ ತಹನಾಮೆ ಜಿನೇವಾದಲ್ಲಿಯೇ ಆಗಿರುತ್ತದೆ. ಅದನ್ನು ಸರಿಮಾಡುವ ಕೆಲಸ ಮಾತ್ರ ಮಾಸ್ಕೋ ಪಟ್ಟಣಕ್ಕೆ. ಲಾವಲ್‌ರವರು ಹೋದಾಗ ಝೆಕೋಸ್ಲಾವಾಕಿಯಾದೇಶದ ರಾಯಭಾರಿಗಳಾದ ಬೇನೆಶರವರೂ, ಲಿಟ್ವಿನೋಫ್‌ರವರೂ ಪರಸ್ಪರ ಸಹಾಯದ ತಹನಾಮೆಯನ್ನು ಕುರಿತು ಸಂಭಾಷಣೆ ನಡೆಸಿದರು. ಫ್ರೆಂಚ ತಹನಾಮೆಯ ಮಾದರಿಯ ಮೇಲೆ ಈ ತಹನಾಮೆಯಾಗುವದಿದೆ. ಈ ತಹನಾಮೆಗಳ ಅರ್ಥವೊಂದೇ. ಜರ್ಮನಿಗೆ ನೆರೆಹೊರೆಯ ರಾಷ್ಟ್ರಗಳ ಬೆಂಬಲ ಸಿಗದಂತೆ ವ್ಯವಸ್ಥೆ ಮಾಡುವದು. ಜರ್ಮನ್‌ರ ಭಾಷೆಯಲ್ಲಿ ಹೇಳಬೇಕಾದರೆ, ಜರ್ಮನಿಗೆ ಸುತ್ತುಗಟ್ಟುವ ಇಲ್ಲವೆ ಮುತ್ತಿಗೆ ಹಾಕುವ ಫ್ರೆಂಚ ಕಾರಸ್ಥಾನದ ವ್ಯೂಹ ರಚನೆಯ ಸೋಪಾನಗಳಿವು. ಜರ್ಮನಿಯು ಈಗಲೂ ಸಂಧಿ ಪ್ರಸ್ತಾಪವನ್ನು ನಡೆಸಬಹುದಾಗಿಯೂ, ಆ ದ್ವಾರವು ಇನ್ನೂ ಮುಚ್ಚಲಿಲ್ಲವಾಗಿಯೂ ಬ್ರಿಟಿಶ ಮುಖ್ಯ ಪ್ರಧಾನರಾದ ಮಿ| ಮೆಕಡೋನಲ್ಡರವರು ನಾರ್ಥೆಂಪ್ಟನ್ನಲ್ಲಿ ನುಡಿದ ವಚನ ಕೇಳಿ ಜರ್ಮನ್ ಪತ್ರಿಕೆಗಳಿಗೆ ಒಳ್ಳೇ ಸಿಟ್ಟು ಬಂದಿದೆ. ಬರ್ಲಿನ್‌ದೊಳಗಿನ 'ನಾಸ್ತ ಔಸಗೇಬ' ಪತ್ರಿಕೆಯು ನುಡಿಯುವದೇನಂದರೆ:- "ಈಗ್ಗೆ ತೆರೆದುಕೊಂಡಿದ್ದ ಬಾಗಿಲು ಮಹಾದ್ವಾರವಲ್ಲ; ಹಿತ್ತಲ ಬಾಗಿಲು ಇಲ್ಲವೆ ಹಿಂಬಾಗಿಲು. ಆ ದ್ವಾರ ಜರ್ಮನಿಗೆ ಬೇಡ." ಇದರ ಮೇಲಿಂದ ಜರ್ಮನ್‌ರ ಮನೋವೃತ್ತಿ ತಿಳಿಯುವಂತಿದೆ. ಯುರೋಪ್ಯ ರಾಜಕಾರಣವು ಸಮಾಧಾನಹೊಂದಬಹುದೆಂದು ನಾ ತಿಳಕೊಂಡಿದ್ದೆನು. ಆದರೆ ಈಗಿನ ಪರಿಸ್ಥಿತಿ ನೋಡಿದರೆ ಸಂಕಷ್ಟವಾಗಿದೆಯೆಂದು ಹೇಳಬೇಕಾಗಿದೆ. ಜರ್ಮನ್-ಫ್ರೆಂಚರೊಳಗೆ, ಜರ್ಮನ್-ರುಶ್ಯರೊಳಗೆ ಸಂಧಿಯಾಗುವ ಆಶೆಯೇ ಇಲ್ಲ. ಮೊನ್ನೆ ಪ್ರಕಟವಾದ ಜರ್ಮನ್ ಸರಕಾರದ ಪ್ರಕಟಣೆ ಏನೆಂದು ತಿಳಕೊಂತನಕ ನನ್ನಿಂದ ಏನೂ ನಿಶ್ಚಿತವಾಗಿ ಹೇಳಬರದು. ಇನ್ನು ೧೦ ವರ್ಷಗಳ ತನಕ ಮಹಾ ಯುದ್ಧವಾಗಲಿಕ್ಕಿಲ್ಲವಾಗಿ ಪುಣೆಯ 'ಮರಾಠಾ' ಪತ್ರಿಕೆಯಲ್ಲಿ ರಾ| ನಾಮಜೋಶಿಯವರು ಬರೆಯುತ್ತಾರೆ. ಯುದ್ಧವಾಗಬೇಕಾಗಿಯೂ, ಬ್ರಿಟಿಶರು ಯಾವ ಪಕ್ಷವನ್ನು ವಹಿಸಿಕೊಳ್ಳಬೇಕೆಂದು ಇದೀಗಲೇ ನಿಶ್ಚಯ ಮಾಡಬೇಕಾಗಿಯೂ ರಾಷ್ಟ್ರಸಂಘಕ್ಕೆ ಯುದ್ಧಕ್ಕೆ ತಡೆಹಾಕುವ ಸಾಮರ್ಥ್ಯವಿಲ್ಲವಾಗಿಯೂ ಹಿಟ್ಲರರು ಯುರೋಪ್ಯ ರಾಜಕಾರಣಿಗಳ ಬಲೆಯಲ್ಲಿ ಸಿಗುವವರಲ್ಲವಾಗಿಯೂ ಮಿ| ಬ್ರೇಲ್ಸಫರ್ಡರವರು ಅಭಿಪ್ರಾಯಪಡುತ್ತಾರೆ. ಜರ್ಮನ್‌ರಿಗೂ, ರುಶ್ಯರಿಗೂ ಸದ್ಯಕ್ಕೇ ಯುದ್ಧವಾಗಬಹುದಾಗಿಯೂ ಆ ಯುದ್ಧದಲ್ಲಿ ಜಪಾನಿಯರು ಸೇರಬಹುದಾಗಿಯೂ ಅಮೇರಿಕೆಯ ಜನಸಾಮಾನ್ಯರು ಚಿಂತಾತುರರಾಗಿರುವರಾಗಿ ಟೋಕಿಯೋದಿಂದ ರಾ| ಚಮನಲಾಲರವರು 'ಮುಂಬಯಿ ಕ್ರೊನಿಕಲ್' ಪತ್ರಿಕೆಗೆ ಬರೆಯುತ್ತಾರೆ. ಈ ಪರಿಸ್ಥಿತಿಯಲ್ಲಿ ಯಾರದು ತಪ್ಪು, ಯಾರದು ಒಪ್ಪು? ಎಂಬ ಸಂಗತಿಯನ್ನು ನಾನು ನಿಶ್ಚಯವಾಗಿ ಹೇಗೆ ಹೇಳಲಿ? ಯುದ್ಧಸ್ಫೋಟ ತರ್ಕದ ಮೇಲೆ, ಅನುಮಾನದ ಮೇಲೆ ಅವಲಂಬಿಸಿಕೊಂಡಿಲ್ಲ. ಮುಸೊಲಿನಿಯವರು ಈ ಹಿಂದೆ ನುಡಿದಂತೆ, ಯಾವದೊಂದು ವಿಷಯದ ಮೇಲೆ ತೀಕ್ಷ್ಣ ಮತಭೇದ ಹುಟ್ಟಿದೊಡನೆ ಅದೊಂದು ಕಿಡಿಯಾಗಿ ಫಕ್ಕನೆ ಸ್ಫೋಟವಾಗುವಂತೆ ಯುದ್ಧಸ್ಫೋಟವಾಗಬಹುದು. ಇಂದಿನ ಯುದ್ಧ ತಯಾರಿಯನ್ನೇ ಮಾಡುತ್ತಾರೆಂದು ಮುಸೊಲಿನಿಯವರಂಥ ರಾಜಕಾರಣಿಗಳು ಉದ್ಗರಿಸುತ್ತಿರುವಾಗ ಭವಿಷ್ಯ ಹೇಳುವದು ಕಠಿಣ ಮಾತಲ್ಲವೇ?

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕೆಲಸ ದರಗಳೂ, ಕರಾರುಗಳೂ ಬಹಳ [illegible] ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟಿ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಯ ಲಾಭಕರವಾಗಿದೆ.

ವಿಸ್ತಾರ [illegible] ಕೆಳಗಿನ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ತಿಳಿವದು.

Kumta Agents -
D. K. Nayak Bros.
D. S. Pai.
K. N. Nayak.
Honavar Agent -
R. V. Prabhu Esq.

K. Padmanabha Rao & Sons
BELGAUM
Chief Agents for
Karnatak Districts & S. M. States

ಸ್ಥಾನಿಕ ವೃತ್ತಾಂತ.

ಕುಮಟಾ— ಪ್ಲೇಗು ಹಿಂದಿನಂತೆ ಇಲ್ಲದೆ ಇನ್ನೂ ಇಲಿಗಳು ಬೀಳುತ್ತಿವೆ. ಪ್ಲೇಗಿನವರೆಷ್ಟರು ಉಪಚಾರದಿಂದ ಗುಣಹೊಂದಿದ್ದಾರೆ. ವೈಶಿ ಬೇಸಿಗೆಯ ಉರಿಗೆ ತ್ರಾಸಪಡುವವರಿಗೆ ಮೊದಲಾದ ಕಡೆ ಹೆಚ್ಚುತ್ತಲಿದೆ.

ಉಕ್ಕೇರಿ ಗ್ರಾಮಕ್ಕೆ ಸಮೀಪದ ಹೊಸಕೇರಿಯಲ್ಲಿ ಒಂದು ಕೋಚವನಿಯ ಪ್ರಕಾರವಾಯಿತು. ಲಿಂಗಯ ಪಟಗಾರ ಎಂಬುವನು ಹೆಗಡೆಯ ಒಬ್ಬ ಭಟ್ಟರಿಗೆ ೨೫ ರೂಪಾಯಿ ಕೊಡುವವರಿದ್ದಂತೆ ಭಟ್ಟರು ಅವನಿಗೆ ಪಲುಕು ಮಾಡಿದರು. ಮನೆಯ ಜಗಲಿಯ ಮೇಲೆ ಹೋಗಿ ಉದ್ದವಾಗ ಮಲಗಿದಂತೆ ಮನೆಯವರು. ಭಟ್ಟರಿಗೆ ಉಪವಾಸ ಹಾಕಿ ... ಕೊಟ್ಟಿಲ್ಲ. ಹೆಂಗಸರಿಗೂ, ಮಕ್ಕಳಿಗೂ ಎಲ್ಲರಿಗೂ ಉಪವಾಸ, ೫ ರೂಪಾಯಿ ಕೊಡುವದಕ್ಕಾಗಿ ಲಿಂಗಯ್ಯನು ಎಲ್ಲೆಲ್ಲಿಯೂ ಅಡ್ಡಾಡಿದನಂತೆ. ಎಲ್ಲಿಯೂ ಹಣ ಸಿಗಲಿಲ್ಲ. ರಾತ್ರಿ ಮನೆಗೆ ಹೋದನು. ಕಟ್ಟೆಯ ಮೇಲೆ ಮಲಗಿದನು. ನಡು ರಾತ್ರಿಯಲ್ಲಿ ಏನು ತೋಚಿತೋ ಏನೋ ಉರುಲು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡನು. ಈತನು ಒಳ್ಳೇ ಮರ್ಯಾದಸ್ಥ ಮನುಷ್ಯನಿದ್ದನು. ಸುಮಾರು ೬೦ ವರ್ಷದ ವೃದ್ಧನಿದ್ದನಂತೆ. ಈ ಸಂಗತಿಯ ಮೇಲಿಂದ ರೈತರ ಸ್ಥಿತಿ ಎಲ್ಲಿಗೆ ಮುಟ್ಟಿರುವದೆಂಬ ಕಲ್ಪನೆಯಾಗಿ ಮನಸ್ಸು ಕೊರಗುತ್ತದೆ.

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರವರು ದಣಿವಿನ ವಿಕಾರದಿಂದ ಅಸ್ವಸ್ಥರಾದ ಮೂಲಕ ಕರ್ನಾಟಕ ಪ್ರವಾಸದ ಸಂಚಾರ ಕಾರ್ಯಕ್ರಮ ರದ್ದಾಗಿರುವದಾಗಿ ತಿಳಿಯುತ್ತದೆ. ಹೊಸ ಕಾರ್ಯಕ್ರಮವು ಸದ್ಯಕ್ಕೆ ತಯಾರಾಗಲಿಕ್ಕಿಲ್ಲವು.

ಇಲ್ಲಿಯ ರಾಷ್ಟ್ರೀಯೋತ್ಸವ ನಿಧಿಗೆ ನಾಟಕ ಪಟ್ಟಿ ಮೊದಲಾದ ಕ್ರಮದಿಂದ ರೂಪಾಯಿ ೧ ಸಾವಿರ ಮುಟ್ಟಿದಂತೆ ಕಾಣಿಸಿದೆ. ಹಳ್ಳಿಹಳ್ಳಿಗಳಲ್ಲಿಯೂ ರಾಯರ ಹಳ್ಳಿಯ ಮಾಲೀಕ ಪ್ರಕಾರ ಹಣ ಕೂಡಿಸಿದೆ. ಹಳ್ಳಿಹಳ್ಳಿಗಳಲ್ಲಿ ಕೂಡುವ ಹಣವನ್ನು ಹಳ್ಳಿಹಳ್ಳಿಗಳಲ್ಲಿಯೇ ಖರ್ಚು ಮಾಡುವಂತೆ ಕಲೆಕ್ಟರ ಹುಕುಮು ಇರುವದರಿಂದ ಗ್ರಾಮಾಧಿಕಾರಿಗಳು ಜನರಿಗೆ ತ್ರಾಸಕೊಟ್ಟು ಎತ್ತುವಳಿ ಮಾಡಿದ್ದಾಗಿ ತಿಳಿಯುತ್ತದೆ. ಆದರಂತೆ ಸದರ ಹಣ ಹಳ್ಳಿಗಳಲ್ಲಿಯೇ ವಿನಿಯೋಗಿಸಲ್ಪಡುವದು. ಇಲ್ಲಿಯ ಅಧಿಕಾರಿಗಳವರು ಅವಶ್ಯವಿದ್ದಲ್ಲಿ ಹಳ್ಳಿಗಳಿಗೆ ಹೋಗುವಂತೆ ಕಾರ್ಯಕ್ರಮವು ರೀತಿಯಂತೆ ತಯಾರಾಗುವದು.

ಮ್ಯುನಿಸಿಪಾಲಿಟಿಯ ಸೆಕ್ರೆಟರಿಗಳು ಚಹಾ ಅಂಗಡಿಗಳವರ ಮೇಲೂ ೩-೪-೫ ವರ್ಷಗಳ ಲೈಸೆನ್ಸ ಫೀ ಬಾಕಿ ಇರುವದಾಗಿ ಹೇಳಿ ಅರಬಂದಿಗೆ ಜಪ್ತ ಮಾಡುವ ಕ್ರಮ ನಡೆಸಿದ್ದಾರೆ. ಈ ಅವಧಿಯಲ್ಲಿ ಚಹಾದ ಅಂಗಡಿ ಇಟ್ಟವರ ಮೇಲೂ ನೋಟೀಸು ಗಾಡಿ ಇಲ್ಲದವರ ಮೇಲೂ ನೋಟೀಸು ಗಾಡಿಕಾರನು ಹತ್ತು ವರ್ಷಗಳಿಂದಲೂ ಅವರ ಹೆಸರಿನ ಮೇಲೆ ಗಾಡಿ ಇಟ್ಟಬಗ್ಗೆ ನೋಟೀಸು ಜಪ್ತಿ ಜಮೆಂಟು ಕಳಿಸುತ್ತಿಯವರು. ಸೆಕ್ರೆಟರಿಗಳಿಗೆ ಸ್ವಲ್ಪ ತಿಳಿಯುತ್ತಿಲ್ಲವೇಕೆ ೩-೪-೫ ವರುಷಗಳ ಹಿಂದಿನ ಲೈಸೆನ್ಸ ಫೀ ವಸೂಲು ಮಾಡುವ ಕಾಯಿದೆ ಯಾವದೆಂದು ಜನರಿಗೆ ತಿಳಿಯುವದಿಲ್ಲ. ಚಹಾದಂಗಡಿ ಇತ್ತೋ ಇಲ್ಲವೋ, ಗಾಡಿ ಇತ್ತೋ ಇಲ್ಲವೋ ಎಂಬ ಸಂಗತಿಯನ್ನು ತಾವು ಚೌಕಶಿ ಮಾಡದೆ ಒಮ್ಮೆಲೇ ನೋಟೀಸು ಹೊರಡಿಸುವದು ಎಲ್ಲಿಯ ನ್ಯಾಯ? ಇತ್ಯಾದಿ ಒಬ್ಬ ತಕರಾರುದಾರರು ಬರೆಯುತ್ತಾರೆ.

ಶ್ರೀ ಪೇಟೆಯ ಅಂಗಡಿಯ ಮಾಳಿಗೆಯ ಮೇಲೆ ವಸ್ತ್ರ-ಕರವಸ್ತ್ರ-ಕಾವಜಿ ಗ್ರಾಮಸ್ಥರ ಇಚ್ಛೆಗಳಿವೆ. ಬೇಸಿಗೆ ರಾತ್ರಿ ಪಾಳಿಗೆ ಮುಕ್ತ ದೀಪಗಳ ಬೇಗ ಬರೆದು ಕಳ್ಳರು ಹಣ ಒಯ್ದುರತ್ತಾರಂತೆ. ಕಾಗದಗಳಿಗೆ ಕೈ ಹಚ್ಚಿಲ್ಲ.

ಸಿದ್ದಾಪುರ--- (ತಾ ೨೨ ೪-೩೫) ಜಿಲ್ಲಾವರೊ ...

... ಸ್ಥಿತಿ ತಿಳಿಸುವದೇನಂದರೆ — ಇಲ್ಲಿಯ ತೋಟಿಗರ ಪರಿಸ್ಥಿತಿ ವಿಚಿತ್ರವಾದದ್ದಿದೆ. ಜಂಗಲ ಕಷ್ಟಗಳನ್ನು ಇಲ್ಲಿಯೇ ಅನುಭವಿಸಬಹುದು. ತೋಟಿಗರಿಗೆ ಸೊಪ್ಪಿಗಾಗಿ ೯ ಎಕರೆ ಬೆಟ್ಟ ಕೊಟ್ಟದ್ದು ೫ ಕರೆ ಒಂದು ಕಡೆ, ೪ ಎಕರೆ ಮತ್ತೊಂದು ಕಡೆ. ಸರಾಸರಿ ತೋಟದಿಂದ ಮೈಲು ಎರಡು ಮೈಲು ದೂರದ ವರೆಗೆ ಈ ಬೆಟ್ಟಗಳಿವೆ. ಇಂಥ ಬೆಟ್ಟದಿಂದ ತೋಟಿಗರಿಗೆ ಸ್ವಲ್ಪ ಜನವಾಗುವದಿಲ್ಲ. ಬರೆಯುವಲ್ಲಿ ಕಾನಬೆಟ್ಟವಿದೆ. ಅದರೊಳಗೆ ಕಿರಿಯ ಮಾತ್ರ ಎಂಬ ಜಾತಿಯ ಗಿಡಗಳು ಅದನ್ನು ಕೊಡಲಿಕ್ಕೆ ಸರಕಾರವು ಒಪ್ಪುವದಿಲ್ಲ. ಸರಕಾರಕ್ಕೆ ಇವುಗಳಿಂದ ಪ್ರಯೋಜನವಿಲ್ಲ. ಈ ಬೆಟ್ಟಗಳು ತೋಟಿಗರಿಗೆ ಮಾತ್ರ ಒಳ್ಳೆ ಉಪಯುಕ್ತ. ಹಂದಿ ಹುಲಿ ಮೊದಲಾದವು ಈ ಕಾನು ಕಾನಬೆಟ್ಟಗಳಲ್ಲಿ ಸ್ವಚ್ಛಂದವಾಗಿ ಉಳಕೊಂಡು ಇದ್ದ ಇಟ್ಟ ಬೆಳೆದ ಪೈರನ್ನು ನಾಶ ಮಾಡುತ್ತವೆ. ಕೆಲವು ಕಾಲ ದನಗಳ ಫಲಾಹಾರ ಮಾಡುತ್ತದೆ. ಈ ಬೆಟ್ಟಗಳಲ್ಲಿ ಬೆಲೆಯುಳ್ಳ ಕಟ್ಟಿಗೆಯಿಲ್ಲವಾಗಿಯೂ ಅದನ್ನು ಕೊಡಲ್ಲ. ತೋಟಿಗರಿಗೆ ತೋಟದ ಬಳಿಯಲ್ಲಿಯೇ ಬೆಟ್ಟ ದೊರೆತರೆ ಸೊಪ್ಪಿಗೆ ಅನುಕೂಲವಾಗುವದಾಗಿಯೂ ಹಂದಿ-ಹುಲಿಗಳ ಉಪದ್ರವ ತಪ್ಪುವದಾಗಿಯೂ ರೈತರು ಬೇಡಿಕೊಂಡಲ್ಲಿ ಸರಕಾರವು ಕಿವಿಗೊಡಲಿಲ್ಲ. ಕಾವಲು ದ ಕೆಲಸಕ್ಕೆ ಈ ಗ್ರಾಮಗಳು ಮಾದರಿಯ ಗ್ರಾಮಗಳು. ಜಿಲ್ಲಾಧಿಪರೂ ಪ್ರಾಂತ ಸಾಹೇಬರೂ ಇವನ್ನು ನೋಡಿರುತ್ತಾರೆ. ಪ್ರಾಂತಾಧಿಕಾರಿ ಬ್ರೌನರ ದೊರೆಗಳು ನೋಡಿಕೊಂಡು ಹೋದರು. ದಿವಾನರೂ ನೋಡಿಕೊಂಡು ಹೋದರು. ಈವಾಗಲೋ ಆ ಗ್ರಾಮದಲ್ಲಿ ೪೦ ಘಾಸಿಯೊಳಗೆ ಕಾನಬೆಟ್ಟ ಕನಬೆಟ್ಟವಿವೆ. ಅಲ್ಲಿ ಜನಗಳು ೫೦ ಕೆಂಪು ಬೆಳೆ ನಷ್ಟ ಮಾಡುತ್ತವೆ. ದನಗಳ ಉಪದ್ರವ ಕೊಡುತ್ತವೆ ಎಂಬುದನ್ನು ಗ್ರಾಮದವರು ಮಾಮಲೇದಾರರಿಗೆ ತೋರಿಸಿದರು. ಇಲ್ಲಿ ತಮಗೆ ಬೇಕಾದ ಬಹಳ ಹಿಂದಿನವರೆ ಮೈಲು ದೂರ ಬೆಟ್ಟ ಕೊಟ್ಟಿದ್ದಾರೆ. ಇದರಿಂದ ತಮಗೆ ಕಷ್ಟವಾಗಿದೆ. ಇದರೊಳಗಿಂದ ತಮಗೆ ಪಾರಗಾಣಿಸಬೇಕಾಗಿ ಅವರು ಮಹಾನುಭಾವರ ಬಳಿ ಬಿನ್ನೈಸಿಕೊಂಡರು. ಅದಾಗ್ಯೂ ಇದ್ದ ಸ್ಥಿತಿ ಇದ್ದಂತೆಯೇ. ಗವರ್ನರರೂ ದಿವಾನರೂ ಊರು ನೋಡಿ ಹೋಗಿದ್ದರೆ, ಜನರಿಗೊಂದು ಆಶೆ ಇರುತ್ತಿತ್ತು. ಮೇಲಧಿಕಾರಿಗಳಿಗೆ ಸತ್ಯಸ್ಥಿತಿ ತಿಳಿದಲ್ಲಿ ಕಷ್ಟಪರಿಹಾರವಾಗುವದು, ಎಂಬುದೊಂದು ಭಾವನೆ ಇರುತ್ತಿತ್ತು. ಅರಿಗೆ ಪರಿಹಾರವಾಗಿದೆ. ಇದೇ ಸ್ಥಿತಿ ಇನ್ನು ಕೆಲ ಕಾಲ ನಡೆದಲ್ಲಿ ಸಿದ್ದಾಪುರ ತಾಲೂಕಿನೊಳಗಿನ ಅನೇಕ ಗ್ರಾಮಗಳು ನಿರ್ಜನವಾಗುವವು. ಸಂರಕ್ಷಕರು ಇಲ್ಲದಿದ್ದರೆ ಜನರು ಬಾಳ್ವೆ ಮಾಡುವ ಬಗೆ ಹ್ಯಾಗೆ? ಸರಕಾರವು ಕೆಳ ರೋಗ ಪರಿಹಾರಕ್ಕಾಗಿ ಪ್ರಯತ್ನ ನಡೆಸುತ್ತಿದೆ. ಕೆಳ ರೋಗದ ಔಷಧವನ್ನು ಅಡಿಕೆಯ ಕೊನೆಗಳ ಮೇಲೆ ಸಿಂಪಡಿಸಿ ಕೊಳೆರೋಗ ಹತ್ತದಂತೆ ಉಪಾಯ ಮಾಡಲು ರೈತರಿಗೆ ನೆರವಾಗಲಾರಂಭಿಸಿದೆ. ಬೇಸಾಯ ಇಲಾಖೆಯ ರಾ। ಹಬ್ಬುರವರು ಈ ಬಗ್ಗೆ ಒಳ್ಳೇ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಜಂಗಲ ಕಷ್ಟಗಳ ನಿವಾರಣೆಯಾಗದಿದ್ದಲ್ಲಿ ಕೆಳ ರೋಗದ ಔಷಧೋಪಚಾರದಿಂದ ಜನರಿಗೆ ಅಷ್ಟಿಷ್ಟು ಜೀವನಾಧಾರ ದೊರೆಯದು. ಸರಕಾರವು ಈ ಬಗ್ಗೆ ಮಾಡಿದ ಖರ್ಚು ನಿರರ್ಥಕವಾಗುವದು. ರಾ। ಹಬ್ಬುರವರ ಸಲಹೆಯಂತೆ ಸರಕಾರವು ಇಲ್ಲಿಯ ಪರಿಸ್ಥಿತಿಯ ಕುರಿತು ರಿಪೋರ್ಟನ್ನು ಪಡೆದು ವಿಚಾರ ಮಾಡಬಹುದು. ಪ್ರಾಂತ ಸಾಹೇಬರು ಕೆಲ ಹಳ್ಳಿಗಳಿಗೆ ಹೋಗಿ ಸ್ವತಃ ಹಳ್ಳಿಗರ ಕಷ್ಟವನ್ನು ತಿಳಕೊಳ್ಳಬಹುದು. ಮೇಲಧಿಕಾರಿಗಳು ಇನ್ನಾದರೂ ರೈತರಿಗೆ ಜಂಗಲ ಉಪದ್ರವಗಳಿಂದ ಬಿಡುಗಡೆ ಮಾಡದಿದ್ದಲ್ಲಿ ಈ ತಾಲೂಕಿನಲ್ಲಿ ಬಾಳುವೆ ಮಾಡುವದು ಕಠಿಣವಾಗಿ ಜನರು ದೇಶಾಂತರ ಮಾಡಬೇಕಾಗುವದು. ಇತ್ಯಾದಿ.

ಡಾ॥ ವ-ಹಿಷಿಯವರ ಅನುಭವಸಿದ್ಧ ಔಷಧ.

... ಕಳೆದ ಮೂವತ್ತು ವರ್ಷಗಳ ಪರಿಶೀಲನದಿಂದಲೂ ... ದಿಂದಲೂ ಪ್ರಯೋಗದಿಂದಲೂ ತಯಾರಿಸಿದ ಈ ಕೆಳಗಣ ಔಷಧಿಗಳು ಅತ್ಯಂತ ಪರಿಣಾಮಕಾರಿಗಳಿರುವವೆಂದು ಅವನ್ನು ಉಪಯೋಗಿಸಿದವರೆಲ್ಲರೂ ಅಭಿಪ್ರಾಯಪಡುತ್ತಿರುವರು. ಆ। ಮಹಿಷಿಯವರು ಈ ಅಮೂಲ್ಯವಾದ ಔಷಧಗಳಿಂದಲೇ ಕರ್ನಾಟಕ ದೇಶದಲ್ಲಿ ಅತ್ಯಂತ ಲೋಕಪ್ರಿಯರಾಗಿರುವರು.

ಅಶೋಕಾ ಕಾರ್ಡಿಯಲ್ — ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗಿ ದವಾಖಾನೆ ಬಿಡಿಸುವದು ತಪ್ಪುವಾಗುವದು. ಅನೇಕ ಸ್ತ್ರೀಯರು ಇದರಿಂದ ಅನುಪಮ ಲಾಭ ಹೊಂದಿರುವರು. ಕ್ರಯ ರೂ ೧-೮-೦

ಅಶ್ವಗಂಧ ಟೊನಿಕ್ — ಮಜ್ಜಾ ಮಾಂಸ, ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯ ಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಜೀರ್ಣ ಮುಂತಾದವುಗಳೆಲ್ಲ ನಷ್ಟವಾಗಿ ನವ ಚೈತನ್ಯ ಶಕ್ತಿ ಕೊಡುವ ದಿವ್ಯೌಷಧ. ರೂ -೨-೮

ಎಗ್ಸ್ ಮಿಕ್ಸ್ಚರ, ಫೀವರ ಡ್ರಾಪ್ಸ್, ಅಮೃತಸುಧಾ, ಕರ್ಪೂರಾರ್ಕ, ಸಾಂಬರಸ ವಾತಕ ಇತ್ಯಾದಿ ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ಸಿಕ್ಕಿಗಟ್ಲೆ ಇವುಗಳ ಉಪಯೋಗವಾಗುವುದು. ಇವು ಅಮೂಲ್ಯ ಔಷಧಗಳು!!

ಇವಲ್ಲದೆ ಮಲೇರಿಯಾದ ಮೇಲೆ ಒಳ್ಳೇ ಪರಿಣಾಮಕಾರಿಯಾದ ಎಂಟಿ ಮಲೇರಿಯಲ್ ಮಿಕ್ಸ್ಚರ, ಬ್ಲಾಡ್ ಮಿಕ್ಸ್ಚರ, ಕಾಲರಾ ಪಿಲ್, ... ಹೈಪೊ ಫಾಸ್ಫೇಟ ಪ್ರಮೇಹಬಿಂದು, ನೇತ್ರಾಂಜನ, ಹೇರ ... ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಲಸಂಜೀವನ, ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತವೆ. ಕ್ಯಾಟಲಾಗ್ ಪುಕ್ಕಟೆಯಾಗಿ ಸಿಗುವದು.

ರಾ। ದೇವಪ್ಪಾ ಅಯ್ಯ ನಾಯಕ, ಕುಮಟಾ — ಹೆಡ್ ಆಫೀಸು—
ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು । ಸ್ವಾಸ್ಥ್ಯನಿಲಯ, ಧಾರವಾಡ.

ಕಾರವಾರ— ಕಳೆದ ಗುರುವಾರ ದಿವಸ ಹುಯುವಾಗ ಹಿಂದು ಹೈಸ್ಕೂಲಿನ ತರುಣ ಶಿಕ್ಷಕರಾದ ರಾ|| ಜಯವಂತ ಭವಾನೀಶಂಕರ ಮಾಥೆ ಇವರು ಮಿದುಳಿನ ಜ್ವರದಿಂದ ಅಕಸ್ಮಾತ್ ತೀರಿಕೊಂಡ ವರ್ತಮಾನ ತಿಳಿಸಲು ಅತ್ಯಂತ ಖೇದವಾಗುತ್ತದೆ. ಮಂಗಳವಾರದ ಅವರು ಬಿ. ಟಿ. ಪರೀಕ್ಷೆಯಲ್ಲಿ ಶೇಗರ್ಣೆ ಹೊಂದಿದ ತಂತಿ ವಾರ್ತೆಯು ಬಂದು ತಲ್ಪಿತು. ಅದೇ ದಿನ ಮೂರು ಸಂಜೆಗೆ ಅವರಿಗೆ ತಲೆನೋವು ಹಿಡಿಯುತ್ತಿದ್ದು ಮೈಯಲ್ಲಿ ಜ್ವರ ಬಂದ ಹಾಗೆ ಆಗುತ್ತದೆಂದು ಡಾ|| ಮಾಥೆ ಇವರಲ್ಲಿ ಉಪಚಾರಕ್ಕಾಗಿ ಹೋಗಿ ಉಳಿದಿದ್ದರು. ಡಾಕ್ಟರರ ಉಪಚಾರದಿಂದ ಜ್ವರವು ಹೋಯಿತು, ತಲೆನೋವು ಹಾಗೆ ಉಳಿಯಿತು. ಗುರುವಾರ ರಾತ್ರಿಯಲ್ಲಿ ಎಷ್ಟು ಉಪಚಾರ ನಡಿಸಿದಾಗ್ಯೂ ಜಯವಂತರಾಯರು ಎಚ್ಚರದಪ್ಪಿ ಆ ಸ್ಥಿತಿಯಲ್ಲೇ ಇಹಲೋಕ ಬಿಟ್ಟು ಪರಲೋಕಕ್ಕೆ ತೆರಳಿದರು.

ಜಯವಂತರಾಯರ ತಂದೆಯವರು ಹಿಂದು ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು. ಜಯವಂತರು ೩ ವರ್ಷಗಳ ಹಿಂದೆ ಗಣಿತ ಶಾಸ್ತ್ರದಲ್ಲಿ [illegible] ಬಿ. ಎ. ಪದವಿಯನ್ನು ಪಡೆದು, ಇದೇ ಶಾಲೆಯಲ್ಲಿ ಶಿಕ್ಷಕರಾಗಿ ಸೇರಿದ್ದರು. ಅಲ್ಪ ಕಾಲದಲ್ಲೇ ತಮ್ಮ ಶಿಕ್ಷಣ ಪದ್ಧತಿಯಿಂದ ವಿದ್ಯಾರ್ಥಿವರ್ಗದಲ್ಲಿ ಕೀರ್ತಿಯನ್ನು ಸಂಪಾದಿಸಿದ್ದರು. ಇವರು ಗಣಿತ ವಿಷಯದ ಮೇಲೆ ಬಂದವರು ಬಾಲೋಪಯೋಗಿ ಪುಸ್ತಕಗಳನ್ನು ಬರೆದಿರುವರಂತೆ. ಜಯವಂತರಾಯರಿಗೆ ಶಾರೀರಿಕ ಬಲಸಂವರ್ಧನೆಯ ಹಂಬಲ ಬಹಳವಿತ್ತು. ಶಾಂತವಾದ ಆಯುರಾರೋಗ್ಯ [illegible] ಪ್ರಸನ್ನವಾದ ಸ್ವಭಾವವು ಅವರಿಗೇ ಸಲ್ಲತಕ್ಕದ್ದು. ಮರಣ ಸಮಯದಲ್ಲಿ ಜಯವಂತರಾಯರಿಗೆ ಬರೇ ೨೫ ವರ್ಷ ಪ್ರಾಯ. ಅವರ ಈ ಅಕಾಲಿಕ ನಿಧನದಿಂದ ವಿಧವೆ-ತಾಯಿಯೂ ೧೯ ವರ್ಷದ ಪತ್ನಿಯೂ ಅನಾಥರಾಗಿದ್ದಾರೆ. ದಯಾಘನ ಪರಮೇಶ್ವರನು ವ್ಯಾಕುಲರಿಗೆ ಶಾಂತಿಯನ್ನಿತ್ತು ಅನಾಥರನ್ನು ರಕ್ಷಿಸಲೆಂದು ಹಾರೈಸುತ್ತೇವೆ.

ಜಯವಂತರಾಯರ ನಿಧನದ ಪ್ರೀತ್ಯರ್ಥ ಗುರುವಾರ ಹಿಂದು ಹೈಸ್ಕೂಲಿಗೆ ರಜೆ ಕೊಟ್ಟಿತು. ಮಿದುಳಿನ ಜ್ವರದ (meningitis) ವಿಕಾರವು ಇಲ್ಲಿ ಭಯಂಕರ ಸಾಂಕ್ರಾಮಿಕ ರೋಗವು [illegible] ವಿಚಾರವಾದವರು ಗುಣ ಹೊಂದುವರು. ಇದರಿಂದ ಇದ ಕಾರಣ ಮ್ಯುನಿಸಿಪಾಲಿಟಿಯವರು [illegible] ಆಟಗಳಿಗೆ ಪ್ರತಿಬಂಧ ಮಾಡಿದ್ದಾರೆ.

ಹಳಿಯಾಳ— (ತಾ ೧೫-೪-೩೫) [illegible] ೧೧ರಿಂದ ೧೪ರ ವರೆಗೆ ಗೋರಕ್ಷಣದ [illegible] ಇಲ್ಲಿ [illegible] ರಾ|| ಧಾರವಾಡದ [illegible] ಯವರು ತಮ್ಮ ಪರಿವಾರ ಸಹಿತ ಬಂದಿದ್ದರು. ಅವರು ಎರಡು ಕೀರ್ತನಗಳನ್ನೂ ಮ್ಯಾಜಿಕ್ ಲ್ಯಾಂಟರ್ನ ಪ್ರದರ್ಶನಗಳನ್ನೂ ಮಾಡಿ ತೋರಿಸಿದರು. ಗೋರಕ್ಷಣ ಸಂಸ್ಥೆಯು ಹೊಸ ಕಾರ್ಯಕಾರಿ ಮಂಡಳದ ಚುನಾವಣೆಯಾಯಿತು. ಈಗ ಈ ಸಂಸ್ಥೆಯು [illegible] ದಾನಿಗಳ [illegible] ನಿಧಿಯಿಂದ [illegible] ತಂದುಗಟ್ಟಿ ಸೇರುತ್ತಿದ್ದರು, [illegible] ಗೋರಕ್ಷಣ [illegible] ಕೊಟ್ಟರು, [illegible] ಈ ಪ್ರಕಾರ [illegible] ಕಾರ್ಯಕಾರಿ ಮಂಡಳದ ಸದಸ್ಯರುಗಳು — ಶ್ರೀ|| ಕಾಂತಾರಾಮ ರಾವ [illegible] (ಪ್ರೆಸಿಡೆಂಟ ಮತ್ತು ಟ್ರೆಝರರ), ಬಸವಂತ [illegible] ಭಟ್ಟ (ಚೇರಮನ್), ಮಂಗೇಶ [illegible] ಭಟ್ಟ (ಸೆಕ್ರೆಟರಿ), ದಾಮೋದರ [illegible] ಭಟ್ಟ (ಜಾಯಿಂಟ ಸೆಕ್ರೆಟರಿ), (ಸಭಾಸದರು) ಶ್ರೀ|| ಗಣಪತಿ ಮುಕುಂದ [illegible], ರಾಮಲಿಂಗ [illegible] ಅಪ್ಪಯ್ಯಾ [illegible], (ಆಡಿಟರು) ಶ್ರೀ|| ರಾಮಚಂದ್ರ [illegible] ದೇಸಾಯಿ [illegible] ದೇಶಪಾಂಡೆ

ಸುಲಭ ರೀತಿಯಿಂದ ನೀರು ಬರುವಂಥ,
ಒಡೆದು ಹೋಗದಂಥ,
ಬಹು ಕಾಲ ಬಾಳುವಂಥ
ಕಿರ್ಲೋಸ್ಕರ
ಪಂಪುಗಳು ಅಗದೀ ಖಾಯಸ ಮಾಡಲ್ಪಡುವಂಥವುಗಳು !
ಕಾಲುವೆಗಳಿಗೆ,
ಫೆಕ್ಟರಿಗಳಿಗೆ ಮತ್ತು
ಇತರ ಕೃಷಿಯ ಕೆಲಸಗಳಿಗೆ
ಬೇಕಾದಷ್ಟು ನೀರು
ಕಿರ್ಲೋಸ್ಕರ ಪಂಪುಗಳು
ಪೂರೈಸುತ್ತವೆ !!

ಸ್ವಂತ ಯಾ ಶಕ್ತಿಬಲದಿಂದ
ಉಪಯೋಗಿಸಬಹುದು.
ಹೆಚ್ಚಿನ ವಿವರಗಳಿಗಾಗಿ ಬೇಕಾದ ವಿಷಯಕ್ಕೂ ಕೆಳಗಿನ ವಿಳಾಸಕ್ಕೆ ಬರೆಯಿರಿ —
ಕಿರ್ಲೋಸ್ಕರ ಬಂಧುಗಳು, ಲಿಮಿಟೆಡ್,
ಕಿರ್ಲೋಸ್ಕರವಾಡಿ. (ಜಿ. ಸಾತಾರಾ.)

ದ್ವಿಗುಣವಾದ ಲಾಭವನ್ನು ಹೊಂದಿರಿ.
ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ !
ಮಕ್ಕಳ ಲಿವರ್ ಕಂಪ್ಲೈಂಟ (ಕಾಮಾಲೆವ್ಯಾಧಿ) ಮತ್ತು ಜ್ವರಗಳಿಗೆ
ಜಮ್ಮಿ ವೆಂಕಟರಮಣಯ್ಯನವರ
'ಲಿವರ್ ಕ್ಯೂಅರ್' ಎಂಬುದು ದಿವ್ಯೌಷಧ!
ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,
ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಿರಿ
ಹೆಚ್ಚಿನ ಮಾಹಿತಿಗೆ ಬರೆಯಿರಿ
ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು —
ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ. ಕ.)

ಅಲ್ಲಲ್ಲಿ ಇಷ್ಟಿಷ್ಟು!

[೩ನೇ ಪಾನಿನಿಂದ ಮುಂದರಿಸಿದ್ದು]

ಯಜ್ಞ-ಯಾಗಾದಿಗಳಲ್ಲಿ ನಡೆಯುವ ಪಶುಬಲಿಯನ್ನು ನಿಷೇಧಿಸಿ, ತಾವು ಸುಧಾರಿಸಿದವರೆಂದು ಲೋಕದಲ್ಲಿ ಮೆರೆಯುವ ಬ್ರಿಟಿಶರ ಜನ್ಮಭೂಮಿಯಲ್ಲಿ ನಡೆಯುವ ಪ್ರಕಾರವಿದು !!

* * *

'ಲಕ್ಕಿ ಬೆಗ್' ಸೋಂಗಿಯ ಪ್ರಕಾರವೇನೆಂದು ಸಾಮಾನ್ಯರಿಗೆ ತಿಳಿಯುವದಿಲ್ಲ. 'ಲಕ್ಕೀ ಬೆಗ್'ದ ಮೂಲ ಉತ್ಪತ್ತಿ ಹ್ಯಾಗೆಂದರೆ- "ಯುದ್ಧದ ಹಡಗು ಪಡೆಯ ಮೇಲೆ ವಿಸ್ಮರಣೆಯಿಂದ ಬಿಟ್ಟ ಸಾಮಾನುಗಳನ್ನು ಇಡುವ ಚೀಲ." ಕಳೆದುಹೋದ ವಸ್ತು ಸಿಕ್ಕಿದವನು 'ಲಕ್ಕೀ' ಯಾನೆ ಭಾಗ್ಯವಂತನು. ಬರಬರುತ್ತ ಮೇಲಿಂದ ಕಳೆದು ಹೋದ ಸಾಮಾನು ಕೊಡುವ ಚೀಲಕ್ಕೆ 'ಲಕ್ಕೀ ಬೆಗ್' ಯಾನೆ ಭಾಗ್ಯನಿಧಿ ಅಥವಾ ಅದೃಷ್ಟ ಚೀಲವೆಂದು ಹೆಸರು ಬಂತು. ಮುಂದೆ ಇದನ್ನು ಅಂಗಡಿಕಾರರು ಸ್ಪರ್ಧಾಸಾಧನೆಗಾಗಿ ಉಪಯೋಗಿಸಲಾರಂಭಿಸಿದರು! ಹೆಚ್ಚು — ಕಡಿಮೆ ಬೆಲೆಯ—ಹೆಚ್ಚಿನಕಿಂತ ಕಡಿಮೆ ಬೆಲೆಯ — ಸಾಮಾನುಗಳನ್ನು ಒಂದು ಚೀಲದಲ್ಲಿ ಹಾಕಿಡುವದು; ಮತ್ತು ೧ ಟಿಕೀಟಿಗೆ ೧ ಸಾರೆ ಭಾಗ್ಯನಿಧಿಯಲ್ಲಿ ಕೈಹಾಕಿ ಸಾಮಾನನ್ನು ತೆಗೆಯುವದು. ೪ ಆಣೆ ಟಿಕೀಟು ಕೊಂಡವನಿಗೆ ಆತನ ಅದೃಷ್ಟದಂತೆ ೫೦ ದುಡ್ಡಿನ ಸಾಮಾನು ಬರಬಹುದು, ೧ ರೂಪಾಯಿಯ ಸಾಮಾನೂ ಬರಬಹುದು! ಬೆಲ್ಲಿ ದುಡ್ಡಿನ ಸಾಮಾನು ಬಂದರೆ ವರ್ತಕನ ಅದೃಷ್ಟ! [illegible] ಸಾಮಾನು ಬಂದರೆ ಗಿರಾಕಿಯ ಅದೃಷ್ಟ! ಭಾಗ್ಯನಿಧಿಯಲ್ಲಿ ಒಲ್ಲಿ ದುಡ್ಡಿನ ಸಾಮಾನೇ [illegible] ದರಿಂದ ವರ್ತಕನಿಗೇ ಯಾವಾಗಲೂ ಭಾಗ್ಯ!! ವರ್ತಕನಾಗಲಿ, ಗಿರಾಕಿಯಾಗಲಿ ಭಾಗ್ಯ ಹೊಂದುವದರಿಂದ ಇದಕ್ಕೆ ಭಾಗ್ಯನಿಧಿ ಯಾನೆ 'ಲಕ್ಕೀ ಬೆಗ್' ಎಂದು ಹೆಸರು ಬರಲು ಕಾರಣ!

* * *

'ಲಕ್ಕೀ ಬೆಗ್'ನ ಮೂಲ ಉತ್ಪತ್ತಿಯಲ್ಲಿ ಪ್ರತಿಫಲದ ಲೇಶವಿಲ್ಲ. ಸಾಮಾನು ಕಳಕೊಂಡವರು ಏನೊಂದೂ ಹಣ ಕೊಡದೆ 'ಲಕ್ಕೀ ಬೆಗ್'ನಲ್ಲಿ ತಮ್ಮ ಸಾಮಾನು ಹುಡುಕಿಕೊಂಡು ಹೋದರಾಗಿತ್ತು. ವರ್ತಕನು ಹೆಚ್ಚಿನ ಹಣ ಕೊಂಡು ಕಡಿಮೆ ಬೆಲೆಯ ಸಾಮಾನನ್ನಾದರೂ ಕೊಡುತ್ತಿದ್ದನು. ರೌಪ್ಯ ಮಹೋತ್ಸವಕ್ಕಾಗಿ ಏರ್ಪಟ್ಟ 'ಲಕ್ಕೀ ಬೆಗ್'ನಲ್ಲಿ ಟಿಕೀಟು ಕೊಡುವ ಭಾಗ್ಯವಂತರು ಬೇರೆ! ಇನಾಮು ಕೊಡುವ ಪುಣ್ಯವಂತರು ಬೇರೆ! ಟಿಕೀಟಿನಿಂದ ಒಟ್ಟಾದ ನಿಧಿಯನ್ನು ಪಡೆಯುವ ಅದೃಷ್ಟವಂತರು ಬೇರೆ! ಈ ಯೋಜನೆಯ ಕ್ರಮವೇನಂದರೆ:- ಉತ್ಸವ ನಿಧಿಗಾಗಿ ೮-೮ ಆಣೆಯ ಟಿಕೀಟುಗಳು ಎಲ್ಲೆಲ್ಲಿಯೂ ಹಂಚಲ್ಪಡುತ್ತವೆ. ಟಿಕೀಟು ಪಡೆದವರಿಗೆ ಇನಾಮು ಹಂಚುವದಕ್ಕಾಗಿ ಜಿಲ್ಹೆಯೊಳಗಿನ ಧನವಂತರಿಗೆ ಉತ್ಸವ ಮಂಡಳದವರು ಅರಿಕೆ ಮಾಡಿಕೊಂಡಿದ್ದಾರೆ. ಧನವಂತರು ಔದಾರ್ಯದಿಂದ ಕೊಟ್ಟ ಸಾಮಾನುಗಳನ್ನೇ ಸೋಡ್ತಿಯ ಟಿಕೀಟು ತೆಗೆದು ಬಂದ ಸಾಮಾನನ್ನು ಭಾಗ್ಯವಂತ ಟಿಕೀಟುದಾರರಿಗೆ ಹಂಚುವರು. ಟಿಕೀಟಿನ ಪೂರ್ಣ ಹಣ ಉತ್ಸವ ಮಂಡಳದವರ ಸ್ವಾಧೀನವಾಗುವದು!! ಇದರಿಂದ ಮೂವರಿಗೆ ಭಾಗ್ಯನಿಧಿ ದೊರೆತಂತಾಗುತ್ತದೆ: (೧) ಧನವಂತರಿಗೆ ದಾನ ಮಾಡಿದ ಭಾಗ್ಯ! (೨) ಟಿಕೀಟು ಪಡೆದವರಿಗೆ ಸೋಡ್ತಿ ಹತ್ತಿದ ಭಾಗ್ಯ! (೩) ಉತ್ಸವ ಮಂಡಳದವರಿಗೆ ಒಂದು ಕಾಸು ಸಹ ಖರ್ಚಾಗದೆ ಟಿಕೀಟಿನ ಪೂರ್ಣ ಹಣ ಕೈಸೇರಿದ ಭಾಗ್ಯ! 'ಲಕ್ಕೀ ಬೆಗ್' ಕಲ್ಪನೆಯ ಪೂರ್ಣ ವಿಕಾಸರೂಪವಿದು !! ಪರಸ್ಪರ ಭಾಗ್ಯಸಂಪಾದಿಸಿ ಕೊಡುವ ಭಾಗ್ಯನಿಧಿಯಿದು ! ಇಂಥ ಪರಸ್ಪರ ಭಾಗ್ಯಸಂಗ್ರಹ ಮಾಡುವ ಭಾಗ್ಯನಿಧಿಯ ಕಲ್ಪಕರು ಹಿಂದುಸ್ಥಾನದಲ್ಲಿರುವಾಗ, ಹಿಂದೀಯರು ಭಾಗ್ಯಹೀನರಾಗಿ ದಾರಿದ್ರ್ಯಪಂಕದಲ್ಲಿ ತೊಳಲಿ ಬಳಲುವದು ದುರ್ಭಾಗ್ಯವಲ್ಲವೇ ?

* * *

ಈವಾಗ ರೌಪ್ಯ ಮಹೋತ್ಸವದ ಗಲಾಟೆ, ಸಂಸ್ಥಾನಿಕರ ರೌಪ್ಯ ಮಹೋತ್ಸವಗಳಾಗುತ್ತವೆ. ಆಮೇಲೆ ಸಂಸ್ಥಾನಿಕರು ಸ್ವಸ್ವಕ್ಕೆ ರಾಜ್ಯಾರೋಹಣದ ರೌಪ್ಯ ಮಹೋತ್ಸವವನ್ನು ಜರುಗಿಸಿದರು. ಈಗಿನ ಭಾರತ ಮಂತ್ರಿಗಳಾದ ಸರ್ ಸೆಮ್ಯುಅಲ್ ಹೋರರವರು ತಮ್ಮ ಪಾರ್ಲಿಮೆಂಟು ಮೆಂಬರಿಯ ರೌಪ್ಯ ಮಹೋತ್ಸವವನ್ನು ಸದ್ಯಕ್ಕೆ ಜರುಗಿಸಿದರು. ಆ ಸಮಯ ಜಿಲ್ಹೆ ಪಟ್ಟಣದೊಳಗಿನ ಸಭಾಮಂದಿರದಲ್ಲಿ ಭಾಷಣ ಮಾಡುವಾಗ ಅವರು ನುಡಿದದ್ದೇನಂದರೆ— "ಈಗ ಭಾರತ ಮಂತ್ರಿಗಳ ಕೆಲಸ ಬಹಳ ಕಠಿಣವಾಗಿದೆ. ಹಿಂದಿನ ದಿನಮಾನದ ವಿಚಾರ ಬಂದರೆ ಈಗ ವ್ಯಸನವಾಗುತ್ತದೆ. ಆ ಕಾಲದಲ್ಲಿ ಒಳ್ಳೇ ಸುಖವಿತ್ತು. ಮೆಂಬರನಾತೆಯಿಂದ ವರ್ಷಕ್ಕೊಮ್ಮೆ ಪಾರ್ಲಿಮೆಂಟಿನಲ್ಲಿ ಒಂದು ಭಾಷಣ ಮಾಡಿದರಾಗಿತ್ತು. ಈ ಭಾಷಣದ ಸಮಯ ಗಡಿಬಿಡಿಯಿದ್ದಿಲ್ಲ. ಕೇಳುವವರು ಉಳಕೊಂಡರೆ ಗಡಿಬಿಡಿಯಲ್ಲವೇ? ಹಿಂದುಸ್ಥಾನ ಮತ್ತು ಇಂಗ್ಲಂಡ ದೇಶಗಳೊಳಗೆ ಒಳ್ಳೇ ಸಮಾಧಾನವಿತ್ತು. ಸಮಾಧಾನದಿಂದಲೇ ಇತ್ತಿಟ್ಟಿನಲ್ಲಿ ಪತ್ರವ್ಯವಹಾರ ನಡೆಯುತ್ತಿತ್ತು. ಈಗಿನಂಥ ವರ್ತಮಾನಪತ್ರಗಳು ಆ ಕಾಲದಲ್ಲಿರಲಿಲ್ಲ. ಬ್ರಿಟಿಶ ರಾಜ್ಯದಾಡಳಿತೆಯ ವಿರುದ್ಧ ಒಬ್ಬರೂ ಚಕಾರ ಶಬ್ದ ತೆಗೆಯುತ್ತಿರಲಿಲ್ಲ. ಸರಕಾರದ ಇಷ್ಟದಂತೆ ಯಾವತ್ತೂ ಕಾರಭಾರ ಸುಸೂತ್ರವಾಗಿ ನಡೆಯುತ್ತಿತ್ತು. ಇದೇ ಸ್ಥಿತಿ ಈಗಲೂ ಇದ್ದಿದ್ದರೆ ಎಷ್ಟು ಒಳಿತಾಗುತ್ತಿತ್ತು? ಹೊಸ ರಾಜ್ಯಘಟನೆಯ ಕಾನೂನು ನನ್ನ ಎದೆಯ ಮೇಲೆ ಬಂದಿದೆ. ಚಿಕ್ಕ ಪುಟ್ಟ ಕಲಮುಗಳ ಕುರಿತು ಇಲ್ಲಿಯೂ, ಹಿಂದುಸ್ಥಾನದಲ್ಲಿಯೂ ಒಳ್ಳೇ ಚರ್ಚೆ ನಡೆಯುತ್ತದೆ. ಎಲ್ಲರಿಗೂ ನನ್ನ ಮೇಲೆ ಅಪನಂಬಿಗೆ. ಇದನ್ನೆಲ್ಲ ನೋಡುತ್ತಿರುವಾಗ ನಾನು ಮುಂಚೆ ಸಾಯುವೆನೋ ? ಈ ಪಾರ್ಲಿಮೆಂಟು ಸಭೆ ಮುಂಚೆ ಸತ್ತು ಹೋಗುವದೋ ? ಎಂಬ ಸಂದೇಹ ಆಗಿಂದಾಗ ಉಂಟಾಗುತ್ತದೆ!" ಭಾರತ ಮಂತ್ರಿಗಳ ನುಡಿಗಳು ಮನನೀಯವಿವೆ. ಕಳೆದ ೨೫ ವರ್ಷಗಳಲ್ಲಿ ಪೂಜ್ಯ ದಾದಾಭಾಯಿ ನವರೋಜಿ, ಲೋಕಮಾನ್ಯ

THE INDIAN MERCANTILE INSURANCE CO. LTD., BOMBAY.

(Established in 1907)

A Solid and purely Indian Life Office which has substantial growth under the Chairmanship of the late Sir Munmohandas Ramji, Kt.

WANTED Energetic & Influential Agents and experienced Organisers, both on commission & pay for the Karnatak Districts.

For particulars apply to:-

G. Yellapurkar & Sons,
Chief Agents for Karnatak,
Market Square, KARWAR.

ಇಂಡಿಯನ್ ಮರ್ಕೆಂಟೈಲ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್, ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ್, ಇವರ ಅಧ್ಯಕ್ಷತೆಯಲ್ಲಿ ವಿಕಾಸ ವೃದ್ಧಿಹೊಂದಿದ ಕಂಪನಿಯು !

ಬೇಕು! ಕರ್ನಾಟಕದೊಳಗಿನ ಜಿಲ್ಹೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು, ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ಪಗಾರ ಕೊಡುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ್,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆ ಪೇಟೆ, ಕಾರವಾರ.

ಟಿಳಕ, ಗೋಪಾಲಕೃಷ್ಣ ಗೋಖಲೆ, ಅರವಿಂದ ಘೋಷ, ಲಾಲಾ ಲಜಪತರಾಯ, ಚಿತ್ತರಂಜನದಾಸ, ಮೌಲಾನಾ ಮಹಮ್ಮದ ಅಲ್ಲಿ, ಪಂಡಿತ ಮೋತಿಲಾಲ ನೆಹರು, ವಿಠ್ಠಲಭಾಯಿ ಪಟೇಲ, ಹಕೀಮ ಅಜಮಲ್‌ಖಾನ, ಹಸನ ಇಮಾಮ ಪ್ರಭೃತಿ ಲೋಕಸೇವಕರು ಹಿಂದುಸ್ಥಾನದಲ್ಲಿ ನಡಿಸಿದ ಲೋಕಜಾಗೃತಿಯ ಸಾಕ್ಷಿಯನ್ನು ಭಾರತ ಮಂತ್ರಿ ಸರ್ ಸೆಮ್ಯುಅಲ್ ಹೋರರವರು ಕೊಟ್ಟಿರುತ್ತಾರೆ. ಹಿಂದಿನ ದಿನಗಳು ಈಗ ಎಂದಿಗೂ ಹಿಂತಿರುಗಿ ಬರಲಾರವು, ಇಂದಿನ ದಿನಗಳು ಬಹು ಕಾಲ ಬಾಳಲಾರವು ಸರ್ ಸೆಮ್ಯುಅಲ್ ಹೋರರವರು ನುಡಿದಂತೆ, ಅವರ ಜೀವಮಾನದಲ್ಲಿಯೇ ಹಿಂದುಸ್ಥಾನವು ಸ್ವರಾಜ್ಯಸಂಗ್ರಹ ಮಾಡಿಕೊಂಡು ಭಾರತ ಮಂತ್ರಿಗಳಿಗೂ, ಪಾರ್ಲಿಮೆಂಟ ಸಭೆಗೂ ಹಿಂದುಸ್ಥಾನದ ರಾಜ್ಯದಾಡಳಿತೆಯ ಉಪದ್ರವದಿಂದ ಬಿಡುಗಡೆ ಮಾಡುವದು. ಭಾರತ ಮಂತ್ರಿಗಳು ವರ್ತಮಾನ ಪತ್ರಗಳಿಗೆ ಕೊಟ್ಟ ಪ್ರಶಸ್ತಿಪತ್ರಿಕೆಯನ್ನು ಕೇಳಿ ಬಹು ಸಂತೋಷವಾಗುತ್ತದೆ. ಪತ್ರಿಕೆಗಳು ದೇಶೋಪ್ಕಾರದ ಕರ್ತವ್ಯವನ್ನು ದಕ್ಷತೆಯಿಂದ ನಡಿಸಿರುವರೆಂಬದಕ್ಕೆ ಭಾರತ ಮಂತ್ರಿಗಳಿಗಿಂತ ಭಪ್ರನಾದ ಸಾಕ್ಷಿ ಬೇರೊಂದಿಲ್ಲ. ಸರ್ ಸೆಮ್ಯುಅಲ್ ಹೋರರವರು ಸರ್ವಾಧಿಪತಿ ವಿಲಿಂಗಡನ್ ದೊರೆಗಳ ಕಾರಕೀರ್ದಿ ಮುಗಿದ ತರುವಾಯ ಸರ್ವಾಧಿಪತಿಗಳಾಗುತ್ತಾರೆಂದು ಒಂದು ವಾರ್ತೆ ಹಬ್ಬಿದೆ. ಹಾಗಾದರೆ ಹಿಂದುಸ್ಥಾನದೊಳಗಿನ ಲೋಕಜಾಗೃತಿಯನ್ನು ಅವರೇ ಕಣ್ಣಾರೆ ಕಂಡು ಹಿಂದುಸ್ಥಾನಕ್ಕೆ ರಾಜ್ಯಾಡಳಿತಯನ್ನು ಒಪ್ಪಿಸಿಬಿಡುವ ಸೂಚನೆಯನ್ನು ಸಾಮ್ರಾಜ್ಯ ಸರಕಾರಕ್ಕೆ ಮಾಡಬಹುದು. ಅವರೆ ಹಿಂದೀಯರು ಈಗಿನ ಕ್ರಮದಂತೆ ರಾಜ್ಯಾಡಳಿತೆ ನಡಿಸುವದು ಅಶಕ್ಯವೆಂದು ಅವರಿಗೆ ಮನಗಾಣಿಸಬೇಕು

⁂

ಹಿಂದುಸ್ಥಾನದಲ್ಲಿ ಉದ್ಯೋಗಹೀನರ ಸಂಖ್ಯೆ ಹೇರಳ; ಬಂಗಾಲದಲ್ಲಂತೂ ವಿಪರೀತ. ಕ್ರಾಂತಿಕಾರಕರ ಉಪಟಳಕ್ಕೆ ಇದೇ ಮೂಲ ಕಾರಣವೆಂದು ಸರಕಾರಕ್ಕೆ ಇತ್ತಕಡೆ ಗ್ರಹಿಕೆಯಾಗುತ್ತಿರುವ ಸಂಗತಿ ಈ ಹಿಂದೆಯೇ [illegible]ವಾಗಿದೆ. ಒಂದು ಉದಾಹರಣೆಯನ್ನು ನಮೂದಿಸಬಹುದು. ಬರದ್ವಾನ ಜಿಲ್ಲೆಯಲ್ಲಿ ದಾಮೋದರ ನದಿಗೆ ಕಾಲಿವೆ ಕಡಿಯುವ ಯೋಜನೆ ನಡೆದಿದೆ. ವಿಶ್ವವಿದ್ಯಾಲಯದಲ್ಲಿ ಪದವಿ ಹೊಂದಿದ ಗ್ರಾಜ್ಯುಯೇಟರು ಅಲ್ಲಿ ಕೆಲಸ ಬೇಡಹೋದರಂತೆ! ೧೫ ದಿನ ಉಮೇದ್ವಾರಿ ಮಾಡಿ ಶಿಕ್ಷಣ ಪಡೆಯಬೇಕು, ಎಂಬದಾಗಿ ಕಾಲಿವೆ ಕಚೇರಿಯವರು ಹೇಳಿದರಂತೆ! ಈ ಆಶ್ವಾಸನದ ಮೇಲೆ ಪದವೀಧರರು ಅಲ್ಲಿ ಕಾಲಿವೆ ಕಡಿಯುವ ಕೆಲಸ ಸಹ ನಡಿಸಿದರು. ಮನೆಯಿಂದ ಹಣ ತರಿಸಿ ಉಣ್ಣುವದು, ಕಾಲಿವೆ ಕಚೇರಿಗೆ ಹೋಗಿ ಕೆಲಸ ಮಾಡುವದು ೧೫ ದಿನ ಹೋದವು; ಒಂದು ತಿಂಗಳು ಹೋಯಿತು; ಪತ್ತೆಯಿಲ್ಲ! ಚೀಫ ಇಂಜನಿಯರರಿಗೆ ಅರ್ಜಿ ಮಾಡಿದರು, ಚೀಫ ಇಂಜನಿಯರರು ಅವರಿಗೆ ಕೂಡಲೆ ಮನೆಗೆ ತೆರಳಬೇಕಾಗಿ ಅಪ್ಪಣೆ ಕೊಟ್ಟರಂತೆ. ಮುಂಚಿತವಾಗಿ ಮನ್ನಣೆ ಪಡೆಯದೆ ಅವರಿಗೆ ಯಾಕೆ ಕೆಲಸದ ಮೇಲೆ ಇಟ್ಟುಕೊಳ್ಳಲಾಯಿತೆಂದು ಕೆಲ ಅಧಿಕಾರಿಗಳಿಗೆ ಕೇಳಿದರಂತೆ, ಆದಾಗ್ಯೂ ಉಮೇದವಾರರಿಗೆ ಕಾಲಿವೆ ಖಾತೆಯವರು ಬಿಡುಗಡೆ ಮಾಡಲಿಲ್ಲ, ಇನ್ನೂ ಆಶೆ ತೋರಿಸುತ್ತ ಉಳಿದರು! ಕೆಲಸದ ಹುಕುಮು ಬಾರದ್ದರಿಂದ ಎಗ್ಜಿಕ್ಯೂಟಿವ ಇಂಜನಿಯರರಿಗೆ ಅವರು ಭೆಟ್ಟಿಯಾಗಿ ತಮ್ಮ ಗತಿಯೇನೆಂದು ಕೇಳಿದರಂತೆ! ಎಗ್ಜಿಕ್ಯೂಟಿವ್ಹ ಇಂಜನಿಯರರು ತಮ್ಮಿಂದ ಏನೂ ಸಾಧ್ಯವಿಲ್ಲವಾಗಿ ಹೇಳಿದ ಬಳಿಕ, ನಿರಾಶರಾಗಿ ಅವರು ಕಚೇರಿ ಬಿಟ್ಟು ಹೋದರಂತೆ. ಮೊದಲೇ ಬಡವರು! ಮೇಲೆ ಉಮೇದವಾರಿಯ ಖರ್ಚು! ಸರಕಾರಿ ಕಚೇರಿಯವರು ಹೀಗೆ ಮೋಸಗಾರಿಕೆ ನಡಿಸಿದ ಬಗ್ಗೆ ಬಂಗಾಲ ಪ್ರಾಂತದಲ್ಲಿ ಒಳ್ಳೇ ಗಲಾಟೆಯೆದ್ದಿದೆ. ಪ್ರಾಂತಾಧಿಪರಾದ ಸರ್ ಜ್ಹೊನ್ ಎಂಡರಸನ್‌ರವರು ಈ ಸಂಗತಿಯ ಚೌಕಶಿ ಮಾಡಬೇಕೆಂದು ಹುಕುಮು ಹೊರಡಿಸಿದ್ದಾರೆ. ಆ ಕಚೇರಿಯಲ್ಲಿ ಖಾಲಿ ಜಾಗವಿಲ್ಲದಿದ್ದರೆ ೩೦ ಇಸಮುಗಳಿಗೆ ಬಡತರ್ಫ ಮಾಡಿ ಈ ೩೦ ಇಸಮುಗಳಿಗೆ ನೇಮಿಸಿಕೊಂಡರೆ ಮೋಸಕ್ಕೆ ತಕ್ಕ ಪ್ರಾಯಶ್ಚಿತ್ತ ಹಾಗೂ ಪರಿಹಾರ ಕೊಟ್ಟಂತಾಗುವದು.

Siromani Udipi Narayanacharya

CHAUKHAMBA, BENARES CITY.

ಮಹಾಶಯರೇ, ರುದ್ರಸೇವೆ ಶ್ರೀಕೃಷ್ಣವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಕ್ರಿ. 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ. ಇದು ಸಣ್ಣದಾಗುತ್ತ ಅಗುತ್ತ ಕ್ರಯ ಹೆಚ್ಚುವದು. ಕಂಠಿ ಸರ 32 ದರ1ಕ್ಕೆ ರೂ.0-8-0ಯಿಂದ ರೂ. 100 ವರೆಗೆ. ಗೌರಿಶಂಕರ 1ಕ್ಕೆ ರೂ. 3-8-0ರಿಂದ ೨೦ ವರೆಗೆ ಮತ್ತು ದರ ಪಟ್ಟಿ ತಿಳಿಯಲು ಅಪೇಕ್ಷಿಸುವವರು 0-1-0ಸ್ಟಾಂಪು ಕಳಿಸಿದರೆ, 1 ಕಾಶಿ ನಕ್ಷೆ, 1 ವಿಶ್ವೇಶ್ವರನ ಪಟ ಮತ್ತು ಕೆಟಲಾಗು ಸಹ ಉಚಿತ ಕಳಿಸಲಾಗುವದು.

ಪತ್ತೆ:— ಶಿರೋಮಣಿ ನಾರಾಯಣಾಚಾರ್ಯ,
ಚೌಖಂಬಾ, ಕಾಶೀ ಕ್ಷೇತ್ರ.

Established 1900. | ಶ್ರೀ | FIXED RATE.

ದಾಸಪ್ಪಾ ಕೃಷ್ಣಪ್ಪಾ ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಶಿ.

ನಮ್ಮಲ್ಲಿ ಪೇಟೆ ಪೇಟೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪತ್ತಾಲೀಸ್ಟಿಯ ಖಣಗಳೂ, ಕೋಟಿಂಗ ನ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರೀ ರುಮಾಲು, ಉಪ್ಪರ್ಣಿ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಷ್ಮೆ ಖದ್ದರ ಮಡಿಗಳೂ, ನಾರ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮ್ಹಾಲು ಆಬಾಲವೃದ್ಧರಿಗೂ ಮೋಸ ಹೋಗುವ ಭಯವಿಲ್ಲದೆ ನ್ಯಾಯ ದರದಿಂದ ಸಿಗುವವು. ರೋಖ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel:- "Honesty" **D. K. DHAKAPPA BROS.,**

ಹೊಸ ಮ್ಹಾಲು. | **Cloth Merchants,** SIRSI. N. KANARA. | ದರ ಅಗ್ಗ.

ಸುಲಭ ಕ್ರಯ! ಡಾಕ್ಟರ ಟೀ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಯಾರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಯಿಸಿದರೆ ಬಹಳ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗುವದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ.ಪಿ. ೪ ಆಣೆ. ಡಜನ್ ೧ಕ್ಕೆ ರೂ. ೨-೮-೦. ವಿ. ಪಿ. ೦-೫-೦.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ.ಬಾ. ೫೧೦, ಪಾರ್ಕಟೌನ ಮದರಾಸ.

ಅಲ್ಲಲ್ಲಿ ಇಷ್ಟಿಷ್ಟು!

ಈ ವರ್ಷ ಮುಂಬಯಿ ಯುನಿವ್ಹರ್ಸಿಟಿಯ ಸೆನೇಟಿನ ಚುನಾವಣೆಗೆ ನಮ್ಮ ಜಿಲ್ಲೆಯ ರಾ| ಎಸ್. ಜಿ. ವರ್ಟಿಯವರು ಹುರಿಯಾಳುಗಳಾಗಿ ನಿಂತಿದ್ದಾರೆ. ರಾ| ವರ್ಟಿಯವರು ನಮ್ಮ ಕುಮಟೆಯ ಗಿಬ್ಸ ಹೈಸ್ಕೂಲಿನಲ್ಲಿ, [illegible] ಬಾಲ್ಯಾವಸ್ಥೆಯೊಳಗೆ, ಶಿಕ್ಷಕರಾಗಿ ದುಡಿದು ಕುಮಟೆಯವರ ಪರಿಚಯದವರಾಗಿದ್ದಾರೆ. ಕಳೆದ ೨೦ ವರ್ಷಗಳಲ್ಲಿ ಅವರು ಮುಂಬಯಿಯಲ್ಲಿ ವಾಸ್ತವ್ಯ ಮಾಡಿಕೊಂಡಿದ್ದು ಅಲ್ಲಿ ಶೈಕ್ಷಣಿಕ, ರಾಜಕೀಯ ಮೊದಲಾದ ಆಂದೋಲನಗಳಲ್ಲಿ ಭಾಗ ವಹಿಸಿ ತಮ್ಮ ಮಟ್ಟಿಗೆ ಸಮಾಜಸೇವೆಯನ್ನು ಮಾಡುತ್ತಲಿದ್ದಾರೆ. ರಾ| ವರ್ಟಿಯವರು ರಾಜ್ಯಘಟನಾ ಶಾಸನ ಶಾಸ್ತ್ರದ ವಿಶೇಷ ಅಭ್ಯಾಸ ಮಾಡಿದವರಿರುತ್ತಾರೆ. ವಿಶ್ವವಿದ್ಯಾಲಯದ ಸುಧಾರಣೆಯ ಬಗ್ಗೆ ಅವರ ಲೇಖನಗಳು ಪತ್ರಿಕೆಗಳಲ್ಲಿ ಮೇಲಿಂದ ಮೇಲೆ ಪ್ರಕಟವಾಗುತ್ತಿವೆ. ವಿವಿಧ ಸಾರ್ವಜನಿಕ ಸಮಸ್ಯೆಗಳ ಚರ್ಚೆಯನ್ನು ಅವರು [illegible] ರೀತಿಯಿಂದ ಮಾಡುತ್ತಾರೆ. ರಾ| ವರ್ಟಿಯವರು ಕನ್ನಡಿಗರಿದ್ದು ಕರ್ನಾಟಕದ ಬಗ್ಗೆ ಅವರಿಗೆ ಪೂರ್ಣ ಅಭಿಮಾನವಿದೆ. ಅದ್ದರಿಂದ ಕರ್ನಾಟಕಸ್ಥ ಪದವೀಧರರೆಲ್ಲರೂ ಅವರಿಗೆ ತಮ್ಮ ಬೆಂಬಲವನ್ನಿತ್ತು, ಅವರ ಕಡೆಯಿಂದ ವಿಶೇಷ ಸೇವೆಯನ್ನು ಪಡೆಯಬೇಕಾಗಿ ನಮ್ಮ ಬಿನ್ನಹವಿರುವ ಕರ್ನಾಟಕ ಪದವೀಧರ ಸಂಘದವರು ರಾ| ವರ್ಟಿಯವರಿಗೇನೇ ಮತ ಕೊಡಬೇಕೆಂದು ನಿಶ್ಚಯಿಸಿದ್ದಾರೆಂದು ತಿಳಿಯುತ್ತದೆ.

***

ರಾಷ್ಟ್ರಪತಿ ಬಾಬು. ರಾಜೇಂದ್ರ ಪ್ರಸಾದರವರು ಇದೇ ಮೇ ತಿಂಗಳ ೩ನೇ ತಾರೀಖಿನಿಂದ ೧೩ನೇ ತಾರೀಖಿನ ವರೆಗೆ ಕರ್ನಾಟಕದಲ್ಲಿ ಸಂಚಾರ ಮಾಡುವವರಿದ್ದ ಸಂಗತಿ ಎಲ್ಲರೂ ಬಲ್ಲರು. ಅವರ ಸಂಚಾರದ ಕಾರ್ಯಕ್ರಮವೂ ಈ ಮೊದಲು ಪ್ರಕಟವಾಗಿದ್ದವು. ಆದರೆ ಆ ಕಾರ್ಯಕ್ರಮದಿಂದ ಆಯಾಯ ಜಿಲ್ಲೆಯ ಕಾಂಗ್ರೆಸ ಕಾರ್ಯಕರ್ತರಿಗೆ ಮಂಗಳೂರಿನ ಪ್ರಾಂತಿಕ ಪರಿಷತ್ತಿಗೆ ಹೋಗಲು ಅನಾನುಕೂಲವಾಗುತ್ತದೆಂದು ಕಂಡುಬಂದದ್ದರಿಂದ, ಅದನ್ನು ರದ್ದುಪಡಿಸಿ, ಕರ್ನಾಟಕದ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಹೊಸ ಕಾರ್ಯಕ್ರಮವನ್ನು ತಯಾರಿಸಿರುತ್ತಾರೆ. ಹೊಸ ಕಾರ್ಯಕ್ರಮದ ಪ್ರಕಾರ ರಾಷ್ಟ್ರಪತಿಗಳು, ತಾ| ೭ಕ್ಕೆ ಹುಬ್ಬಳ್ಳಿಗೆ ಬಂದು, ಮುಂಜಾನೆ ಅಲ್ಲಿಯ ಕೆಲಸ ಮುಗಿಸಿ, ಮಧ್ಯಾಹ್ನಕ್ಕೆ [illegible]ಗೆ ಹೋಗುವರು. ಅಲ್ಲಿ ಸಂಜೆ ೬, [illegible] ತನಕ ಸಾರ್ವಜನಿಕ ಸಭೆಯಾದ ಮೇಲೆ [illegible] ರಾತ್ರಿ [illegible] ಘಂಟೆಗೆ ಕುಮಟೆಗೆ [illegible]. [illegible] ಕುಮಟೆಯಲ್ಲಿ ಸಭೆ [illegible] ಮುಂಜಾನೆ ಕುಮಟೆಯಿಂದ [illegible] ಹೊರಡು[illegible] [illegible] ಸಭೆ [illegible] [illegible] [illegible] ಕನ್ನಡ [illegible] ಪ್ರತ್ಯೇಕ ಮಾತಾಡುವರು. ಸಂಚಾರ ಮಾಡುತ್ತ ತಾ| [illegible] ಮಂಗಳೂರಿಗೆ ತಲ್ಪುವರು. ಆ ದಿನ ಸಂಜೆಗೆ ೫ ಘಂಟೆಗೆ ಪ್ರಾಂತಿಕ ಪರಿಷತ್ತಿನ ಗಣೇಶಪೂಜೆಯು ಅವರ ಕೈಯಿಂದ ಆಗುವದು. ತಾ. ೧೭ಕ್ಕೆ ಮಧ್ಯಾಹ್ನದಲ್ಲಿ ಮಂಗಳೂರಿಂದ ಹೊರಟು ಚಿಕ್ಕಮಗಳೂರ, ಕಡೂರ ಮಾರ್ಗವಾಗಿ ತಾ| ೧೩ನೇ ಸಾಯಂಕಾಲ ಬೆಳಗಾಂವಿಗೆ ತಲ್ಪುವರು. ಈ ಕಾರ್ಯಕ್ರಮವು ರಾಜೇಂದ್ರ ಬಾಬೂಗಳ ಒಪ್ಪಿಗೆಯ ಬಗ್ಗೆ ಕಳಿಸಿಕೊಟ್ಟಿದೆ. ಅವರ ಒಪ್ಪಿಗೆ ದೊರೆತ ಬಳಿಕ ಅದು ನಿಶ್ಚಿತವಾಗುವದು.

***

ಸರಕಾರಿ ಆಡಳಿತೆಯ ಖರ್ಚು ಹೇಗೆ ತಗ್ಗಿಸಬೇಕೆಂಬ ವಿಚಾರ ಮಾಡಲಿಕ್ಕೆ ಮುಂಬಯಿ ಸರಕಾರದವರು ಎರಡು ವರ್ಷಗಳ ಹಿಂದೆ ಥೋಮಸ ಸಾಹೇಬರ ಅಧ್ಯಕ್ಷತೆಯಲ್ಲಿ ನೇಮಿಸಿದ ಕಮಿಟಿಯ ನೆನಪು ವಾಚಕರಿಗೆ ಇರಬಹುದು. ಕಮಿಟಿಯವರು ಅನೇಕ ಸೂಚನೆಗಳನ್ನು ಮಾಡಿದ್ದರು. ಸರಕಾರದವರು ಕೆಲವು ಸೂಚನೆಗಳನ್ನು ಕೂಡಲೆ ತಿರಸ್ಕರಿಸಿದ್ದರು; ಕೆಲವನ್ನು ಸ್ವೀಕರಿಸಿದ್ದರು; ಕೆಲವು ಸೂಚನೆಗಳನ್ನು ಹಿಂದಿನಿಂದ ವಿಚಾರಿಸುವೆವೆಂದು ಕಾದಿಟ್ಟಿದ್ದರು. ಅವುಗಳ ಪೈಕಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಬಳದ ಪ್ರಶ್ನೆಯ ವಿಚಾರ ನಡಿಸಿ, ಸರಕಾರದವರು ಈಗ ಹೊಸ ಸ್ಕೇಲು ತಯಾರಿಸಿದ್ದಾರೆ. ಸ್ಥಾನಿಕ ಸಂಸ್ಥೆಗಳು, ಶಾಲಾ ಬೋರ್ಡುಗಳು ಈ ಸ್ಕೇಲಿನ ಬಗ್ಗೆ ತಮ್ಮ ಅಭಿಪ್ರಾಯವನ್ನು [illegible] ೧ನೇ ತಾರೀಖಿನೊಳಗಾಗಿ ಶಿಕ್ಷಣ ಖಾತೆಯ ಡೈರೆಕ್ಟರರ ಕಡೆಗೆ ಕಳಿಸಿಕೊಡಬೇಕೆಂದು ತಿಳಿಸಲಾಗಿದೆ. ಹೊಸ ಸ್ಕೇಲಿನಂತೆ ಅನ್‌ಕ್ವಾಲಿಫೈಡ್ ಶಿಕ್ಷಕರಿಗೆ [illegible] ರೂ. ೧೫, ಕ್ವಾಲಿಫೈಡ್ ಶಿಕ್ಷಕರಿಗೆ ರೂ ೨೦ ಕೊಡಲಾಗುವದು. ಅವರಿಗೆ ಬಡತಿ ವಗೈರೆ ಏನೂ ಇಲ್ಲ. ಒಂದನೇ ವರ್ಷದ ಟ್ರೇಂಡ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ವೃದ್ಧಿಕಷಾಯ (ಪಿತ್ತ್ರಣಕ್ಕೆ ಅತ್ಯಂತ ಗುಣಕಾರಿ).
ಮಕರಧ್ವಜದ ಕಾಮೇಶ್ವರೀ ಲೇಹ್ಯ (ನಷ್ಟಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾಮಾಷ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಪಿ [illegible] ರೋಗಕ್ಕೆ ಅತ್ಯುತ್ತಮ).
ಕೃಷ್ಣಾಂಜನ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಲಿಪ್ತ (ಪಕ್ಷವಾತ, ಅಪತಂತ್ರಕ, [illegible]ಗಳಿಗೆ [illegible]).
ಭುವನಾಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ).
ಮಹಾಕುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಶ್ರೇಷ್ಠ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಪಗಳು, ಭಸ್ಮಗಳು, ತೈಲಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-

ಹೆಚ್ಚಿನ ವಿವರಗಳಿಗೂ, ಕಮಿಶನಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಅವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ಬಹು ಸಂತೋಷಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯ ಮನೆತನಕ್ಕೆ ಸೇರಿದವರಾಗಿಯೂ, ಗಣನೆಯುಳ್ಳವರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಇವು ಶಾಸ್ತ್ರಸಿದ್ಧವಾಗಿ ಅನುಭವಪ್ರಮಾಣವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವೂ ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಸರ್ವಪ್ರಿಯವಾಗಿ ಮಾಡಿಟ್ಟ ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ಯೋನ್ಯಸಹಾಯದಿಂದಾಗಲೇ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯು ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿದಿವಸ ಅಭಿವೃದ್ಧಿಗೆ ಬರುವಂತಾಗಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ,

ಕೊಳ್ಳಾಂ, ಉಡುಪಿ ೧೦-೧೧-೧೯೩೩

ವಿದ್ವಾನ್ ಕೇ. ಕೇಶವಶಾಸ್ತ್ರಿ, ಪ್ರಧಾನ ಮಂತ್ರಿ,
ಅಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ.

ಶಿಕ್ಷಕರಿಗೆ ಆರಂಭದ ಪಗಾರ ರೂ. ೨೦; ೧೫ ವರ್ಷಗಳ ವರೆಗೆ ½ ರೂ. ಯಂತೆ ಬಡತಿ, ಮುಂದೆ ೧೦ ವರುಷ ⅓ ರೂ. ಯಂತೆ ಬಡತಿ; ಕೊನೆಯ ಪಗಾರು ರೂ. ೩೦. ಎರಡನೇ ವರ್ಷದ ಟ್ರೇಂಡ ಶಿಕ್ಷಕರಿಗೆ ರೂ. ೨೫ ಆರಂಭದ ಪಗಾರು; ಕೊನೆಯ ಪಗಾರ ರೂ. ೪೦. ಮೂರನೇ ವರ್ಷದವರಿಗೆ ಆರಂಭದ ಸಂಬಳ ರೂ. ೩೦, ಕೊನೆಯ ಸಂಬಳ ರೂ. ೫೦ ತಾ. ೧-೪-೩೫ನೇ ದಿನ ಯಾ ಆ ಮೇಲೆ ನೌಕರಿಯಲ್ಲಿ ಸೇರುವವರಿಗೂ, ನೌಕರಿಯಲ್ಲಿ ಕಾಯಂ ಆಗುವವರಿಗೂ ಈ ಸ್ಕೇಲಿನಂತೆ ಸಂಬಳ ಸಿಗುವದು. ಹಾಜರಿ ಭತ್ತೆ ರದ್ದಾಗುವದು. ಕೆಳಗಿನ ತರಗತಿಯ ಶಿಕ್ಷಕರು ಮೇಲ್ತರಗತಿಯ ಸರ್ಟಿಫಿಕೇಟು ದೊರಕಿಸಿದ ಕೂಡಲೆ ಅವರಿಗೆ ಮೇಲ್ತರಗತಿಯ ಸಂಬಳ ಸಿಗುವದೇ ಎಂದು ಹೇಳಬರದು! ಯಾಕೆಂದರೆ ೧ನೇ, ೨ನೇ, ಮತ್ತು ೩ನೇ ವರ್ಷದ ಟ್ರೇಂಡ ಶಿಕ್ಷಕರ ಪ್ರಮಾಣವು ಅನುಕ್ರಮವಾಗಿ ೧೦೦ರಲ್ಲಿ ೫೦, ೨೦, ಮತ್ತು ೧೦ ಇರತಕ್ಕದ್ದೆಂದು ಠರಾಯಿಸಲಾಗಿದೆ. ಮಹಾಯುದ್ಧದ ನಂತರದ ಮಹರ್ಘತೆಯ ಮೂಲಕ ಏರಿಸಿದ ಸಂಬಳದ ಮಾನವನ್ನು ಈಗ ಆ ಮಹರ್ಘತೆಯು ಕಡಿಮೆಯಾದ್ದರಿಂದ ಇಳಿಸುವದು ನ್ಯಾಯವಾಗಿರಬಹುದು, ಆದರೆ ಈ ಹೊಸ ಸ್ಕೇಲು ಯುದ್ಧ ಪೂರ್ವಕಾಲದ ಸ್ಕೇಲಿಗಿಂತಲೂ ಕನಿಷ್ಟವಿರುತ್ತದೆ! ಮೇಲಾಗಿ ಬೇರೆ ಖಾತೆಗಳಲ್ಲೆಲ್ಲೂ ಈ ಮಾನದಿಂದ ಸಂಬಳಗಳನ್ನು ಇಳಿಸಿಲ್ಲ! ತಮ್ಮ ಮೇಲೆಯೇ ಸರಕಾರದ ವಕ್ರದೃಷ್ಟಿಯೇಕೆಂದು ಶಿಕ್ಷಕರು ಗೋಳಿಡಹತ್ತಿದ್ದಾರೆ. ಇಷ್ಟು ಕನಿಷ್ಟ ಸಂಬಳಗಳ ಮೇಲೆ ಕೆಲಸ ಮಾಡಲಿಕ್ಕೆ ಯೋಗ್ಯ ಶಿಕ್ಷಕರು ಎಂದಾದರೂ ಸಿಗುವರೇ?

***

ಈಗಣ ಉಚ್ಚ ಶಿಕ್ಷಣದ ಕುರಿತಾಗಿ ಪಂಜಾಬದ ಗವ್ಹರ್ನರರು ಮೊನ್ನೆ ಲಾಹೋರದೊಳಗಿನ ಒಂದು ಮಹಮ್ಮದೀ ಶಿಕ್ಷಣ ಸಂಸ್ಥೆಯ ಮುಂದೆ ಆಡಿತೋರಿಸಿದ ವಿಚಾರಗಳು ಮನನೀಯವಿರುತ್ತವೆ. ಅವರು ನುಡಿದದ್ದೇನೆಂದರೆ:- “ಸಾಮಾನ್ಯವರ್ಗದವರಂತೆ ನಿಮ್ಮ ಜಾತಿಯವರೂ ಕೂಡ ಉಚ್ಚ ಬೌದ್ಧಿಕ ಶಿಕ್ಷಣದ ಬೆನ್ನುಹಿಡಿದುದು ಜಾಣತನವೆಂದು ನಿಮ್ಮ ಮತವೇ? ಯುನಿವ್ಹರ್ಸಿಟಿ ಶಿಕ್ಷಣಕ್ಕೆ ಹೋಗುವ ಹುಡುಗರೆಲ್ಲರೂ ಪಾತ್ರರೇ? ಪಾತ್ರತೆಯಿದ್ದವರಾದರೂ ತಮಗೆ ಉಚಿತವಾದ ಅಭ್ಯಾಸ-ಕ್ರಮವನ್ನೇ ಅನುಸರಿಸುತ್ತಾರೆಯೇ? ಈ ಶಿಕ್ಷಣದಿಂದ ಅವರು ಯೋಗ್ಯ ಜೀವನಾಧಾರ ದೊರಕಿಸುವ ಸಂಧಿ ಸಾಧಿಸುತ್ತಾರೆಂದು ತಿಳಿಯಲೇ? ಆಹಾ! ಏನು ಮಾನವಿ ಶಕ್ತಿಯು ಸುತ್ತು ಹಣದ ಅಪವ್ಯಯವಿದು! ಆದರ್ಶಪ್ರಾಯ ಸಮಾಜದಲ್ಲಿ ಹೀಗೆಂದೂ ಆಗದು. ಪ್ರತಿಯೊಬ್ಬ ಹುಡುಗನ ಬುದ್ಧಿಮತ್ತೆ-ಶಕ್ತಿ-ರುಚಿಗಳನ್ನು ಪರೀಕ್ಷಿಸಿ ಅವನ ಧ್ಯೇಯವನ್ನು ನಿಶ್ಚಯಿಸಬೇಕು. ಉಚ್ಚ ಶಿಕ್ಷಣಕ್ಕೆ ಅವನು ಅರ್ಹನಲ್ಲದಿದ್ದರೆ, ಆ ಮಾರ್ಗ ಬಿಡೆಂದು ಹೇಳಬೇಕು. ಅವನಿಗೆ ಯೋಗ್ಯ ಹಾಗೂ ಸಾಧ್ಯವಿರುವ ವ್ಯವಸಾಯವನ್ನು ತೋರಿಸಿಕೊಡಬೇಕು. ಪಾತ್ರರಿದ್ದವರನ್ನೇ ಯುನಿವ್ಹರ್ಸಿಟಿಗೆ ಕಳಿಸಿಕೊಡಬೇಕು. ಸಮಾಜದ ಹಾಗೂ ಹುಡುಗರ ಹಿತಕ್ಕಾಗಿ ಇಂಥ ಚುನಾವಣೆ ಮಾಡುವದು ಅಗತ್ಯವಿದೆ

ಮೇಲ್ಕಾಣಿಸಿದ ಶಿಕ್ಷಣ ಸಂಸ್ಥೆಯವರು ಪಂಜಾಬ ಯುನಿವ್ಹರ್ಸಿಟಿ ಚೌಕಶಿ ಕಮಿಟಿಯ ಮುಂದೆ ಸಾಕ್ಷಿ ಕೊಡುವಾಗ ಈ ಕೆಳಗಿನಂತೆ ತಮ್ಮ ಅಭಿಪ್ರಾಯ ಕೊಟ್ಟಿದ್ದರು:- “ದಿನಾಲೂ ನಿರುದ್ಯೋಗಿಗಳ ಸಂಖ್ಯೆಯು ಬೆಳೆಯುತ್ತ ನಡೆದಿದೆ. ಇದರ ಮೇಲಿಂದ ಪ್ರಕೃತ ಯುನಿವ್ಹರ್ಸಿಟಿ ಶಿಕ್ಷಣಕ್ರಮವು ನಿರುಪಯೋಗಿಯೆಂಬುದು ಸಿದ್ಧವಾಗುತ್ತದೆ. ಪ್ರತಿ ವರ್ಷ ಹೇರಳ ಮಂದಿ ಪದವೀಧರರು ಹೊರಬೀಳುತ್ತಾರೆ. ಅವರಲ್ಲಿ ಅತಿ ಸ್ವಲ್ಪ ಜನರು ಮಾತ್ರ ಮೇಲಾಟದ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಉಚ್ಚ ಸರಕಾರಿ ನೌಕರಿಗಳನ್ನು ದೊರಕಿಸುತ್ತಾರೆ. ಕೆಲವರು ಡಾಕ್ಟರರೂ, ವಕೀಲರೂ ಆಗುತ್ತಾರೆ; ಅವರಲ್ಲಿ ಬಹುಸಂಖ್ಯಾಕರು ಪ್ರಾಪ್ತಿಯಿಲ್ಲದೆ ಕೂಡ್ರುತ್ತಾರೆ. ಅವರು ತಮ್ಮ ಯಾಂತ್ರಿಕ ಬುದ್ಧಿಬಲಗಳನ್ನು ಪರೀಕ್ಷಿಸದೆ, ಬೇರೆ ಮಾರ್ಗ ಕಾಣದೆಂದು, ಈ ವ್ಯವಸಾಯಗಳನ್ನು ಆರಿಸಿದ್ದರಿಂದಲೇ ಹೀಗಾಗುತ್ತಿದೆ. ಬಹಳ ಮಂದಿ ಪದವೀಧರರು ಕಾರಕೂನರಾಗಬಯಸುತ್ತಾರೆ. ಅಷ್ಟು ಕಾರಕೂನಿ ಸ್ಥಳಗಳು ಬರಬೇಕೆಲ್ಲಿಂದ? ಈ ಪ್ರಕಾರ ಪದವೀಧರರು ಹೆಚ್ಚಾದಂತೆ ನಿರುದ್ಯೋಗಿಗಳ ಸಂಖ್ಯೆಯೂ ಬೆಳೆಯುತ್ತದೆ! ಅಸಂತೋಷ- ...ಗಳು ಹಬ್ಬುತ್ತವೆ. ಇಂಥ ಜನರು ಮುಂದೆ ರಾಜ್ಯಕ್ಕೆ ಕೇಡು ಮಾಡದೆ ಇರಲಾರರು!” ಗವ್ಹರ್ನರಸಾಹೇಬರು ಈ ಅಭಿಪ್ರಾಯವನ್ನು ಓದಿಹೇಳಿ, ಅದರಂತೆಯೇ ತಮ್ಮ ಅಭಿಪ್ರಾಯವೆಂದು ವ್ಯಕ್ತ ಮಾಡಿದ್ದಾರೆ ಮತ್ತು ಶಿಕ್ಷಣದೊಳಗಿನ ಈ ದೋಷಗಳನ್ನು ದೂರಪಡಿಸಲು ಯತ್ನಿಸಬೇಕಾಗಿ ಬೋಧ ಮಾಡಿರುತ್ತಾರೆ

[೧೦ನೇ ಪಾನಿನ ಮೇಲೆ ಮುಂದುವರಿಸಿದೆ.]

***

THE AGRICULTURAL & INDUSTRIAL BANK, LIMITED, COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್, ಕುಂದಾಪುರ.

ಕಾಯಂ ಠೇವಣಾತಿಗಳು.

ಸೇವಿಂಗ್ಸ ಬೇಂಕ ಠೇವಣಾತಿಗೆ ಶೇಕಡಾ 4% ರಂತೆ ಬಡ್ಡಿ.	3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ 3½ರಂತೆ, 6 ತಿಂಗಳಿಗೆ ... ... 4½ರಂತೆ, 12 ತಿಂಗಳಿಗೆ ... ... 5½ „ 24 ತಿಂಗಳಿಗೆ ... ... 6 „ 3 ವರ್ಷ ಯಾ ಹೆಚ್ಚಿನ ಅವಧಿಗೆ ... 6½ರಂತೆ	ಪ್ರತಿ ಮೂರು ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವದು.

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ.

ಚಿನ್ನ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲ್ಲುಗಳು, ದರ್ಶನಿ ಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಕರೆಂಟ್, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಂದಾಪುರ.
ತಾ. 21—1—1935.

K. Vaman Shenai &
G. Balakrishna S. Nayak.
Managing Directors.

ರೌಪ್ಯ ಉತ್ಸವ ಸಂಭ್ರಮ.

[illegible]

ಲಂಡನಿನಲ್ಲಿ ಈಗ ಬಹಳ ಗಡಿಬಿಡಿ. [illegible] ಸಾರ್ವಭೌಮ ಪಂಚಮ ಜಾರ್ಜ [illegible] ರೌಪ್ಯ ಮಹೋತ್ಸವದ ಸಂಭ್ರಮಕ್ಕಾಗಿ [illegible] ದುಡಿಯುತ್ತಿದ್ದಾರೆ. ಅಲ್ಲಲ್ಲಿಯ ಸ್ಥಳಿಕ ಸಂಸ್ಥೆಗಳು ತಮ್ಮ ತಮ್ಮ ಸ್ಥಾನಗಳಲ್ಲಿ ನಡೆಯುವ [illegible] ಕ್ಕಾಗಿ, ದೀಪೋತ್ಸವಕ್ಕಾಗಿ ಒಳ್ಳೆ ತಯಾರಿ ನಡೆಸುತ್ತಿದ್ದಾರೆ. ಊರೊಳಗಿನ ಬಡಬಾಲಕ [illegible] ಮಿಠಾಯಿ ಹಂಚುವದಕ್ಕಾಗಿ [illegible] ನಿಧಿಸಂಗ್ರಹ ಮಾಡಿ ತಕ್ಕ ಏರ್ಪಾಟು ಮಾಡುತ್ತಿದ್ದಾರೆ. ಇಂಗ್ಲೀಷರಲ್ಲಿ [illegible] ಯೋಗ್ಯ ಚಿಂತಿಸುವದಕ್ಕಾಗಿ [illegible] ರಾಜನಿಷ್ಠೆಯಿಂದ [illegible] ಸೂದರವಾದ [illegible] ಅಂದವನ್ನು [illegible] ರಚಿಸಲಾರಂಭಿಸಿದ್ದಾರೆ. [illegible] ಕಲಾಕೌಶಲ್ಯಗಳಿಂದ [illegible] ರತ್ನಖಚಿತ [illegible] ತಕ್ಕಮಟ್ಟಿಗೆ [illegible] ಲಕ್ಷ ಜನರಿಗೆ [illegible] ಅಪ್ಪಣೆ [illegible] ಉಳಿದವರೆಲ್ಲ [illegible] ಲಂಡನ್ ಯಾತ್ರೆ [illegible] ಒಂದು ದೊಡ್ಡ ಕ್ರೀಯಾ [illegible] ವಿನೋದ [illegible] ಜಾಗಕ್ಕೆ [illegible] ಪ್ರೊಲಿ [illegible] ಭಾಗ್ಯವಂತ ಅಧಿಕಾರಿಗಳು ತಮ್ಮ ಆಫೀಸಿನಲ್ಲಿ [illegible] ಬೇಕಾದರೆ [illegible] ಹಣ ಕೊಟ್ಟು [illegible] ಮಹಡಿಯ ಬಾಡಿಗೆಯಿಂದ [illegible] ಅಲ್ಲಿ ೧೦ ಲಕ್ಷ ಜನರು [illegible] ವೆಂದು ಚಾರ್ಲಿಸ್ ಮಾರ್ಟಿನ್ ಎಂಬವರು ಲೆಕ್ಕ ಮಾಡುತ್ತಾರೆ. ಮುಂದಿನ [illegible] ಸ್ಥಾನಾವಳಿಗಳಗಿಂತ ಹಿರಿಸುಗ್ಗಿ! [illegible] ದು ಕೋಣೆಗೆ ಉತ್ಸವ ಕಾಲದಲ್ಲಿ [illegible] ಮನೆಗಳ [illegible] ಉತ್ಸವ ಕಾಲದಲ್ಲಿ ತಯಾರಿಸಿದ [illegible] ಈ ಪ್ರಕಾರ ಜಾನಾವಳಿಯವರೂ, [illegible] ನವರೂ ರಾಜಭಕ್ತರಿಗೆ [illegible] ಸಿದ್ಧರಾಗಿ ಚಾರ್ಲಿಸ್ ಮಾರ್ಟಿನ್‌ರವರು [illegible] ರಾಗಿ ಬರೆಯುತ್ತಾರೆ. [illegible] ಪ್ರಕಟ [illegible] ದೊಳಗಿನ ಎಳೆ ಹುಡುಗರು ಉತ್ಸಾಹ ಮಾಡುವ ದನಿ [illegible] ಉತ್ಸವ ನಿಧಿಯ ಸಂಗ್ರಹ ಮಾಡುತ್ತಿದ್ದಾರೆ [illegible] ವರೆಗೆ [illegible] ಇನ್ನೂ [illegible] ಸಾವಿರ ಜನರು [illegible] ದು ಹಣ [illegible] ಅವನ್ನು [illegible] ನೋಡಲು ಸಮಯ [illegible] ದಿನ ಪತ್ರಗಳು [illegible] ತಕ್ಕಮಟ್ಟಿಗೆ [illegible] ಲಕ್ಷ ಜನರು ಕೂಡ [illegible] [illegible] ಯನ್ನು [illegible] ಹಿಂದುಸ್ಥಾನ [illegible] ಸಾಮ್ರಾಜ್ಯ ಭಾಗಗಳಿಂದ ಲಂಡನಿಗೆ [illegible] ಸ್ಥಳ ದೊರೆಯುವದು [illegible] ವಂತೆ! ರೌಪ್ಯ ಮಹೋತ್ಸವ [illegible]

[illegible] ಜನರಿಗೆ [illegible] ಲಾಭವಾಗಿದೆ. ರಾಜಭಕ್ತರಿಗೆ ಸತ್ಕಾರವಾಗಿದೆ.

* *

[illegible] ಉತ್ಸವ [illegible] ಎತ್ತುವಳಿ ಮಾಡುವ [illegible] ನಡೆದಿದೆ. [illegible] ತಮ್ಮ ಬಾಡಿಗೆದಾರರ ಕಡೆಯಿಂದ ರೂಪಾಯಿಗೊಂದಾಣೆಯಂತೆ ಉತ್ಸವ-ಪಟ್ಟಿಯನ್ನು ಎತ್ತುವಳಿ ಮಾಡುತ್ತಾರಾಗಿ [illegible] ಉತ್ಸವ-ಪಟ್ಟಿ ಕೊಡದಿದ್ದವರಿಗೆ ಅಂಗಡಿಗಳೊಳಗಿಂದ ಹೊರಹೋಗಬೇಕೆಂದು ಅಪ್ಪಣೆಯಾಗುತ್ತದಾಗಿಯೂ ಹುಬ್ಬಳ್ಳಿಯ "ತರುಣ ಕರ್ನಾಟಕ" ಪತ್ರಿಕೆಯು ದೂರು. [illegible]

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪಾಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಕಂ.

[illegible] ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ

ಜೀವವಿಮೆಯ ಒಳ್ಳೆಯ ಎಲ್ಲ ಲಾಭಗಳನ್ನೂ ಸಾಕಷ್ಟು ಸುಲಭ ದರದಲ್ಲಿ

ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[illegible] ರೂಪಾಯಿ ಪೋಲಿಸಿಗಳ ಸುಲಭ ಕಂತಿನ [illegible]

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು.

[illegible] ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಠಾಕ ಮಹಮ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು: **ಮೆಸರ್ಸ ಜೀವನ ಏಜನ್ಸಿ, ಕಾರವಾರ.**

ಡಾ॥ ವ. ಹಿ. ಶಿರ[illegible]ರ ಅನುಭವಸಿದ್ಧ ಔಷಧ.

[illegible] ಕಳೆದ ಮೂವತ್ತು ವರ್ಷಗಳ ಪರೀಕ್ಷೆಯಿಂದಲೂ, ಅನುಭವದಿಂದಲೂ ಪ್ರಯೋಗದಿಂದಲೂ ತಯಾರಿಸಿದ ಈ ಕೆಳಗಿನ ಔಷಧಗಳು ಅತ್ಯಂತ [illegible] ಗಳಾಗಿರುವವೆಂದು ಅವನ್ನು ಉಪಯೋಗಿಸಿದವರೆಲ್ಲರೂ ಅಭಿಪ್ರಾಯಪಟ್ಟಿರುವರು. [illegible] ಈ ಅಮೂಲ್ಯವಾದ ಔಷಧಗಳಿಂದಲೇ [illegible] ಅತ್ಯಂತ ಲೋಕಪ್ರಿಯರಾಗಿರುವರು.

ಅಶೋಕಾ ಕಾರ್ಡಿಯಲ್.— ಸ್ತ್ರೀಯರ ಮುಟ್ಟಿನ [illegible] ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು. ಇದರ ಉಪಯೋಗದಿಂದ ಸ್ತ್ರೀಯರ [illegible] ಅನೇಕ ರೋಗಗಳು ಗುಣವಾಗುವದಲ್ಲದೆ [illegible] ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ [illegible] ಹೊಂದಿರುವರು. ಕ್ರಯ ರೂ. [illegible]

ಅಶ್ವಗಂಧ ಟೊನಿಕ:— ಮಜ್ಜಾ, ಮಾಂಸ, ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, [illegible] ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಪಚನ ಮುಂತಾದವುಗಳೆಲ್ಲ ನಷ್ಟವಾಗುವವು. [illegible] ಇದು ದಿವ್ಯೌಷಧ! ರೂ. [illegible]

ಎಗ್ಸು ಮಿಕ್ಸ್ಚರ, ಫೀವರ ಡ್ರೊಪ್ಸ, ಅಮೃತ [illegible], ಕರ್ಪೂರಾರ್ಕ [illegible] ಪಾಚಕ [illegible] ಸಂಗ್ರಹಿಸಿದ [illegible] ಔಷಧಿಗಳಾಗಿವೆ! [illegible] ಇವುಗಳ ಉಪಯೋಗವಾಗುವದು. ಇವು ಅಮೂಲ್ಯ ಔಷಧಗಳು!

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಏಂಟಿ-ಮಲೇರಿಯಲ್ ಮಿಕ್ಸ್ಚರ [illegible], ಬ್ಲಡ್ ಮಿಕ್ಸ್ಚರ, [illegible] ಮೊಹರೆ, ನಾರಾಯಣ [illegible] ಪ್ರಮೇಹ [illegible] ದಂತ [illegible] ಆಯಿಲ್ [illegible] ಅನೇಕ ಔಷಧಗಳು ದೊರೆಯುತ್ತಿರುವವು. [illegible] ಗುಳಿಗೆಗಳು [illegible] ಪ್ರತ್ಯೇಕವಾಗಿ [illegible]

[illegible] ದೇಶಪಾಂಡೆ [illegible], ನಾಯಕ, [illegible]

ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು : ಸ್ವಾಸ್ಥ್ಯನಿಲಯ, ಧಾರವಾಡ.

ಯ ಜೌಕಶಿ ಮಾಡಲು ಸರಕಾರವು ಒಪ್ಪದ್ದರಿಂದ ನಿಷೇಧವೆಂಬ ಉತ್ಸವ ಸಮಾರಂಭಗಳನ್ನು ಮುಸಲ್ಮಾನರೆಲ್ಲರೂ ಬಹಿಷ್ಕರಿಸಬೇಕಾಗಿ ಲಖನೌದಿಂದ ಮೌಲಾನಾ ಕುತುಬುದ್ದೀನ ಅಬ್ದುಲ್ಲ ವಾಲಿ ಫಿರಂಗಿ ಮಹಾಲರವರು ಫರ್ಮಾನನ್ನು ಹೊರಡಿಸಿದ್ದಾರೆ. ದಕ್ಷಿಣ ಅರ್ಕಾಟ ಜಿಲ್ಲೆಯ ರಾಷ್ಟ್ರೀಯ ಕಾರ್ಯಕರ್ತರಾದ ಶ್ರೀ| ದೇವನಾಯಗ ಅಯ್ಯಾರವರು ವಿಲ್ಲುಪುರದಿಂದ ಮದ್ರಾಸಕ್ಕೆ ರೌಪ್ಯ ಮಹೋತ್ಸವವನ್ನು ಬಹಿಷ್ಕರಿಸುವಂತೆ ಪ್ರಕಟಣೆಗಳನ್ನು ಕಳಿಸಿದರೆಂಬ ಆರೋಪದ ಮೇಲೆ ಪೋಲೀಸರು ಅವರಿಗೆ ಸೆರೆಹಿಡಿದರು. ಮೆಜಿಸ್ಟ್ರೇಟರು ಅವರ ಕಡೆಯಿಂದ ೫೦೦ ರೂ.ಗಳ ಎರಡು ಜಾಮೀನು ಪಡೆದು ಬಿಡುಗಡೆ ಮಾಡಿರುತ್ತಾರೆ. ರಾಷ್ಟ್ರೀಯ ಸಭೆಯವರು ಈ ಉತ್ಸವದಲ್ಲಿ ಸೇರದೆ ಅಲಿಪ್ತರಾಗಿರಬೇಕೆಂದು ಕೈಕೊಂಡ ಠರಾವನ್ನು ಮುಂಬಯಿ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಲೋಕದಲ್ಲಿ ಪ್ರಚಾರ ಮಾಡಿ ಅಲಿಪ್ತರಾಗಿರಲು ದೇಶಬಾಂಧವರಿಗೆ ಬೋಧಿಸುತ್ತಿದ್ದಾರೆ.

* * *

ಸರಕಾರದ ಪರವಾಗಿ ಸಮಸ್ತರೂ ಉತ್ಸವ-ನಿಧಿಗೆ ಪಟ್ಟಿ ಕೊಟ್ಟು ರಾಜಭಕ್ತಿಯನ್ನು ಲೋಕಕ್ಕೆ ಪ್ರದರ್ಶನ ಮಾಡಬೇಕಾಗಿ ಹಿಂದವಾಸಿಯರಿಗೆ ತಿಳಿಸಿ ಹೇಳಲಾಗುತ್ತದೆ. ಬ್ರಿಟಿಶರ ರಾಜ್ಯಭಾರದಿಂದ, ಪ್ರಾಮುಖ್ಯವಾಗಿ ಪಂಚಮ ಜೋರ್ಜ ಭೂಪಾಲರ ಕಾರಕೀರ್ದಿಯಿಂದ ಹಿಂದುಸ್ಥಾನಕ್ಕೆ ಹೇರಳವಾದ ಲಾಭವಾಯಿತೆಂದೂ ಪಂಚಮ ಜೋರ್ಜ ಭೂಪಾಲರಿಗೆ ಹಿಂದುಸ್ಥಾನದ ಬಗ್ಗೆ ಪ್ರೀತಿ ಇರುವದಾಗಿಯೂ ಡಂಗುರ ಸಾರಲಾಗುತ್ತದೆ. ಹಿಂದುಸ್ಥಾನಕ್ಕೆ ಬ್ರಿಟಿಶ ರಾಜ್ಯದಿಂದ ಉಂಟಾದ ಲಾಭಗಳನ್ನೆಲ್ಲ ಹಿಂದವಾಸಿಯರು ಅನುಭವಿಸುವದರಿಂದ ಅವುಗಳಿಗೆ ತಕ್ಕದ್ದಾಗಿ ರೌಪ್ಯ ಮಹೋತ್ಸವವು ಇಡೀ ಹಿಂದುಸ್ಥಾನದಲ್ಲಿ ಪಾಲಿಸಲ್ಪಡುವದೆಂಬುದರಲ್ಲಿ ಸಂದೇಹವಿಲ್ಲ.

* * *

ಜಬಲಪುರದ ವಾರ್ತೆ.

ಜಬಲಪುರದಲ್ಲಿ ಬುಧವಾರ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭೆ ರಾಷ್ಟ್ರೀಯ ಸಭೆಯ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರವರು ಸಭಾಪತಿಗಳಿದ್ದರು. ಸುಮಾರು ೭೦ ಕ್ಕೆ ಮಿಕ್ಕಿ ಸಭಾಸದರು ಬೇರೆ ಬೇರೆ ಪ್ರಾಂತಗಳಿಂದ ಬಿಜ್ಮೈಸಿದ್ದರು. ಸಭಾಮಂಟಪವು ಪ್ರೇಕ್ಷಕರಿಂದ ತುಂಬಿಹೋಗಿತ್ತು. ಬಾಬು ರಾಜೇಂದ್ರ ಪ್ರಸಾದರವರು ಪ್ರಾಸ್ತಾವಿಕವಾಗಿ ನಾಲ್ಕು ಮಾತುಗಳನ್ನಾಡಿ ಪ್ರತಿನಿಧಿಗಳ ಸ್ವಾಗತ ಮಾಡಿದ ಬಳಿಕ ಬ್ಯಾರಿಸ್ಟರ ಶೇರವಾಣಿ, ಬ್ಯಾರಿಸ್ಟರ ಅಭ್ಯಂಕರರವರ ನಿಧನದಿಂದ ಹಿಂದೀ ರಾಷ್ಟ್ರೀಯ ಸಭೆಗುಂಟಾದ ನಷ್ಟವನ್ನು ವರ್ಣಿಸಿ ದುಃಖಪ್ರದರ್ಶನ ಮಾಡಿದ ಬಳಿಕ ರಾಷ್ಟ್ರೀಯ ಸಭೆಯ ಇಲೆಕ್ಷನಿನ ಕುರಿತು ಉಂಟಾಗಬಹುದಾದ ವಿವಾದಗಳನ್ನು ಬಗೆಹರಿಸುವದಕ್ಕಾಗಿ ಮಂಡಳವನ್ನು ನೇಮಿಸಿದ ಬಳಿಕ ಹೊಸ ಪಾರ್ಲಿಮೆಂಟರಿ ಬೋರ್ಡು ನೇಮಿಸಲ್ಪಟ್ಟಿತು. ಈ ಬೋರ್ಡಿನ ಅಧ್ಯಕ್ಷರು ಶ್ರೀ| ಭುಲಾಭಾಯಿ ದೇಸಾಯಿಯವರು. ಬಳಿಕ, "ರಾಷ್ಟ್ರೀಯ ಸಭೆಯ ಪರವಾಗಿ ವರಿಷ್ಠ ಕಾಯಿದೆ ಕೌನ್ಸಿಲಿಗೆ ಆರಿಸಿಹೋದ ಸಭಾಸದರು ಕೆಲಸ ಮಾಡಿ ವಿಜಯ ಸಂಪಾದನೆ ಮಾಡಿದ ಬಗ್ಗೆ ಅಖಿಲ ಭಾರತೀಯ ಕೊಂಗ್ರೆಸ ಮಂಡಳದವರು ಅವರಿಗೆ ಅಭಿನಂದಿಸುತ್ತದೆ. ರಾಷ್ಟ್ರೀಯ ಸಭೆಯವರು ಬೇರೆ ಪಕ್ಷಗಳ ಸಹಕಾರ ಪಡೆದು ಸರಕಾರಕ್ಕೆ ಹೇರಳವಾಗಿ ಸೋಲಿಸಿದ ಬಗ್ಗೆ ರಾಷ್ಟ್ರೀಯ ಪಕ್ಷದ ಪ್ರಶಂಸೆ ಮಾಡುತ್ತದೆ." ಈ ಠರಾವನ್ನು ಕೊಂಗ್ರೆಸ ಕಾರ್ಯಕಾರಿ ಮಂಡಳದ ಪರವಾಗಿ ಶ್ರೀ| ಚಕ್ರವರ್ತಿ ರಾಜಗೋಪಾಲಾಚಾರಿಯವರು ಸೂಚಿಸಿದರು. "ಕೊಂಗ್ರೆಸ ಪಕ್ಷದವರು ಸರಕಾರಕ್ಕೆ ತಮ್ಮ ಕಾಯಿದೆಗಳನ್ನು ಘಟಿಸಿಕೊಳ್ಳಲು ಆತಂಕ ಮಾಡಿದರೆಂದು ಸರಕಾರವೇ ಒಪ್ಪುತ್ತದೆ. ರಾಷ್ಟ್ರೀಯ ಸಭೆಯವರು ಬರೀ ಕೆಲ ಮಂದಿಗಳಿದ್ದು ಮುಸಲ್ಮಾನಾದಿ ಬೇರೆ ಬೇರೆ ಪಕ್ಷದವರ ಸಹಕಾರ ಪಡೆದು ಸರಕಾರಕ್ಕೆ ಸೋಲಿಸಿದ ಶ್ರೇಯಸ್ಸು ಪ್ರಾಮುಖ್ಯವಾಗಿ ಮುಖ್ಯಸ್ಥರಾದ ಶ್ರೀ| ಭುಲಾಭಾಯಿ ದೇಸಾಯಿಯವರಿಗೇ ಸಲ್ಲತಕ್ಕದ್ದು." ಈ ಪ್ರಕಾರ ರಾಜಗೋಪಾಲಾಚಾರಿಯವರ ಭಾಷಣವಾದ ಬಳಿಕ ಸರದಾರ ಶಾರ್ದೂಲಸಿಂಗರವರು ಅನುಮೋದನೆ ಕೊಟ್ಟು ನುಡಿದದ್ದೇನಂದರೆ:-"ಸರಕಾರಕ್ಕೆ ಲೋಕಬೆಂಬಲವಿಲ್ಲ. ಅವರ ಕಾರಭಾರಕ್ಕೆ ಲೋಕಸಮ್ಮತಿ ಇಲ್ಲ. ಈ ಸಂಗತಿಯನ್ನು ಕೊಂಗ್ರೆಸ ಪಕ್ಷದವರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸಿದ್ಧ ಮಾಡಿರುತ್ತಾರೆ." ಆಮೇಲೆ ಶ್ರೀ| ಶಂಕರರಾವ ದೇವರವರು ಉಪಸೂಚನೆ ತಂದರು. ಅವರು ನುಡಿದದ್ದೇನಂದರೆ:- "ರಾಷ್ಟ್ರೀಯ ಸಭೆಯವರು ವಿಜಯಸಂಪಾದನೆ ಮಾಡಲಿಲ್ಲ. ಸರಕಾರಕ್ಕೆ ಲೋಕಬೆಂಬಲವಿಲ್ಲವೆಂಬ ಸಂಗತಿ ಈಗ ೧೫ ವರ್ಷಗಳ ಹಿಂದೆ ಸಿದ್ಧವಾಗಿದೆ. ಅದನ್ನು ಸಿದ್ಧ ಮಾಡುವ ಆವಶ್ಯಕತೆಯೂ ಇಲ್ಲ. ರಾಷ್ಟ್ರೀಯ ಸಭಾಸದರು ಹೊಸ ರಾಜ್ಯಘಟನೆಯನ್ನು ಧಿಕ್ಕರಿಸಲಿಲ್ಲ. ಪ್ರಜಾಪ್ರತಿನಿಧಿ ಸಭೆಯನ್ನು ಸಂಘಟಿಸಲಿಲ್ಲ. ಆದರಿಂದ ವಿಜಯ ಸಂಪಾದಿಸಿದರೆಂದು ಅವರಿಗೆ ಹೊಗಳುವದು ತಪ್ಪು. ವಿಜಯದ ಉಬ್ಬೆಯನ್ನು ಕಡಿಮೆ ಮಾಡಬೇಕು." ಆ ಮೇಲೆ ಮಿ| ಮಹಮದ ಅಲ್ಲಿಯವರು ವಿರೋಧಿಸಿ ಮಾತಾಡಿದ್ದೇನಂದರೆ:-"ಕೊಂಗ್ರೆಸ ಕಾರ್ಯಕಾರಿ ಮಂಡಳದ ಆಜ್ಞೆಗಳನ್ನು ಉಲ್ಲಂಘಿಸಿ ನಡೆದ ರಾಷ್ಟ್ರೀಯ ಸಭೆಯ ಸಭಾಸದರಿಗೆ ಕೊಂಗ್ರೆಸ ಕಾರ್ಯಕಾರಿ ಮಂಡಳವು ಅಭಿನಂದಿಸುವದು ವಿಚಿತ್ರ. ಪ್ರಜಾಪ್ರತಿನಿಧಿ ಸಭೆಯನ್ನು ಸಂಘಟಿಸಿ ಅದರ ವಿದ್ಯಮಾನ ರಾಜ್ಯಘಟನೆಯನ್ನು ರದ್ದುಮಾಡಿಸಬೇಕಾಗಿ ರಾಷ್ಟ್ರೀಯ ಸಭೆಯವರ ಅಪ್ಪಣೆ ಇತ್ತು. ಸಂಪೂರ್ಣ ಸ್ವಾತಂತ್ರ್ಯವನ್ನು ಸಂಗ್ರಹಿಸಲು ರಾಷ್ಟ್ರೀಯ ಸಭೆಯವರು ವಚನಬದ್ಧರಾಗಿದ್ದರು. ದಬ್ಬಾಳಿಕೆಯ ಕಾನೂನುಗಳನ್ನು ರದ್ದು ಮಾಡಿಸಲಿಕ್ಕೂ ಅವರು ಬದ್ಧರಿದ್ದರು. ಇದನ್ನು ಈ ಸಭಾಸದರು ಮಾಡಲಿಲ್ಲ. ಶಿಸ್ತಿನಿಂದ ಸಹ ವರ್ತಿಸಲಿಲ್ಲ. ಸರ್ವಾಧಿಪತಿಗಳ ಭಾಷಣವಾಗುವಾಗ ಶ್ರೀ|| ಗಾಡಗೀಳ ಮೊದಲಾದ ರಾಷ್ಟ್ರೀಯ ಸಭೆಯ ಕೆಲ ಸಭಾಸದರು ಮಾತ್ರ ಕೂತುಕೊಂಡಿದ್ದರು. ಇದಬಗ್ಗೆ ಹಳಿಯಬೇಕಲ್ಲದೆ ಅಭಿನಂದಿಸಲಾಗದು. ಸರಕಾರದ ಶಿಫಾರಸು ಪಡೆಯಲಿಕ್ಕೆ ರಾಷ್ಟ್ರೀಯ ಸಭೆಯವರಿಗೆ ನಾವು ಕಳಿಸಿದ್ದಿಲ್ಲ. ಸರಕಾರದೊಡನೆ ಯಾವದೇ ಪ್ರಕಾರ ಸಂಧಿ ಪ್ರಸ್ತಾಪ ಮಾಡುವದು ರಾಷ್ಟ್ರೀಯ ಸಭೆಗೆ ಅನುಚಿತವಾದುದು." ರಾಷ್ಟ್ರೀಯ ಸಭೆಯವರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಜನವಿರೋಧವನ್ನು ಪ್ರಕಟಿಸಿದ ಬಗ್ಗೆ ಶ್ರೀ|| ಮಹಾಮಾತಾ ಪ್ರಸಾದರವರು

[೬ನೇ ಪಾನಿನ ಮೇಲೆ ಮುಂದರಿಸಿದೆ.]

ಸ್ವಸ್ತಿಕ ವಸ್ತ್ರದ ಸಾಬೂನು

ನಯವಾದ ಬಟ್ಟೆಗಳ ಬಗ್ಗೆ ಉತ್ತಮ!

ಹಾಳು ಸಬಕಾರ ಉಪಯೋಗಿಸಿದರೆ ನಯವಾದ ಅರಳೆ, ಉಣ್ಣೆ ಮತ್ತು ರೇಶಿಮೆ ಬಟ್ಟೆಗಳು ಸಹಜವಾಗಿ ಕೆಡುತ್ತವೆ. ಕನಿಷ್ಠ ಪ್ರತಿಯ ಸಬಕಾರಗಳಲ್ಲಿರುವ ಅಪಾಯಕರ ಆಮ್ಲಗಳಿಂದ ವಸ್ತ್ರದ ನೂಲೇ ನಾಶವಾಗುತ್ತದೆ.

ಅತ್ಯುತ್ಕೃಷ್ಟ 'ಸ್ವಸ್ತಿಕ' ಸಾಬೂನಿನಲ್ಲಿರುವ ದ್ರವ್ಯಗಳು ನಿರ್ದೋಷವಿರುವ ಕಾರಣ ಅದರಿಂದ ತೊಳೆದ ಬಟ್ಟೆಗಳು ಸಾಮಾನ್ಯ ಸಬಕಾರಗಳಿಂದ ಒಗೆದ ಬಟ್ಟೆಗಳಿಗಿಂತ ಹೆಚ್ಚು ಕಾಲ ಬಾಳುವದು ಖಂಡಿತ!

'ಸ್ವಸ್ತಿಕ' ಸಾಬೂನುಗಳು ಸಂಪೂರ್ಣ ಸ್ವದೇಶಿಯಾಗಿದ್ದು ಶುದ್ಧ ವನಸ್ಪತಿ ತೈಲದಿಂದ ತಯಾರಾಗುತ್ತವೆ. ಆದರಿಂದ ಅವನ್ನೇ ಕೊಂಡುಕೊಳ್ಳಿರಿ.

ಉತ್ತರ ಕಾನಡಾ ಜಿಲ್ಹೆಯ ಏಜಂಟರು ಮತ್ತು ಹುಬ್ಬಳ್ಳಿ-ಧಾರವಾಡಗಳಲ್ಲಿ ಮಾಲಿನ ಸಂಗ್ರಹವಿಡುವವರು:—

ಎಸ್. ಎಸ್. ರಂಗ್ಯಶೇಣ್ವಿ, ಪ್ರೋ. ಹಳಿಯಾಳ.

ಯುದ್ಧವೆಸಗಿದ್ದಲ್ಲಿ?

[ನಿರೀಕ್ಷಕನು ಬರೆದುದು.]

ಯುರೋಪು ರಾಜಕಾರಣದ ಸ್ಥಿತಿ ಇದ್ದಕಿದ್ದ ಹಾಗೆ [illegible] ಜರ್ಮನ್ ಸರಕಾರವು ರಾಷ್ಟ್ರಸಂಘದ ತೀರ್ಮಾನವನ್ನು ಧಿಕ್ಕರಿಸಿ ಆ ತೀರ್ಮಾನಿಸಿದ್ದನ್ನು ತಾನು ಸ್ವಲ್ಪವೂ ನಡೆಯಲಾರದೆಂದು ರಾಷ್ಟ್ರಸಂಘದ ಸಭಾಸದರಿಗೆಲ್ಲ ತಿಳಿಸಿಬಿಟ್ಟಿದೆ. ಜರ್ಮನಿಯು ಉತ್ತರವೇನೆಂದು ಇನ್ನೂ ಪ್ರಕಟಿಸಿಕೊಂಡಿಲ್ಲ. ಈ ಉತ್ತರವನ್ನು ಸಮರ್ಥಿಸಿ ಇನ್ನೊಂದು ಪತ್ರವನ್ನು ಜರ್ಮನ್ ಸರಕಾರವು ರಾಷ್ಟ್ರಸಂಘದವರಿಗೆ ಕಳಿಸಲಿಕ್ಕಿದೆ. ಅದನ್ನು ನೋಡಿ ಯುರೋಪ ರಾಜಕಾರಣಧುರಂಧರರು ಮುಂದೆ ವಿಚಾರ ಮಾಡುವರಂತೆ. ಆದರೆ ಹಿಟ್ಲರರಿಗೂ ಬ್ರಿಟಿಶ, ಫ್ರಾನ್ಸ, ಇಟಾಲಿ ಮೊದಲಾದ ರಾಷ್ಟ್ರಗಳಿಗೂ ಮುಂಚೆ [illegible] ಭೇದವುಂಟು. ಇಷ್ಟರಲ್ಲಿ ಸಂಧಿಯಾಗುವ ಆಶೆ ತೀರ ಕಡಿಮೆ. ಯುರೋಪ ರಾಜಕಾರಣದ ಪರಿಸ್ಥಿತಿಯ ಕುರಿತು ಬ್ರಿಟಿಶ ಮುಖ್ಯ ಪ್ರಧಾನರಾದ ಮಿ| ಮೆಕಡೋನಲ್ಡರವರು ಕಳೆದ ಶುಕ್ರವಾರ [illegible] 'ನ್ಯೂಸ ಲೆಟರ'ದಲ್ಲಿ ಒಂದು ಲೇಖನವನ್ನು ಬರೆ[illegible]ರಿಸಿದರೆ ರಾಷ್ಟ್ರಗಳೊಳಗೆ ಪರಸ್ಪರ [illegible] ಇಲ್ಲವಾಗಿಯೂ ಜರ್ಮನಿಯನ್ನು ಸರಿಕ ನಾತೆಯಿಂದ ನಡೆಸಿ[illegible] ಬ್ರಿಟಿಶರು ತಯಾರಿಲ್ಲವಾಗಿಯೂ ಸ್ಪಷ್ಟವಾಗುತ್ತದೆ. ಬ್ರಿಟಿಶ ರಾಯಭಾರಿಗಳಾದ ಮಿ| [illegible] ಜರ್ಮನಿಯ ಹಿಟ್ಲರರವರಿಗೂ ನಡೆದ ಸಂಭಾಷಣದಲ್ಲಿ ಐಕ್ಯಮತ್ಯಕ್ಕಿಂತ [illegible] ಸ್ಪಷ್ಟವಾಯಿತಂತೆ. ಪ್ರತ್ಯಕ್ಷ ಸಂಭಾಷಣದಿಂದ ಸಮಾಧಾನವಾಗುವ ಬದಲಿಗೆ ಅಸಮಾಧಾನವಾಯಿತಾಗಿ ಮಿ| ಮೆಕಡೋನಲ್ಡರವರು ಬರೆಯುತ್ತಾರೆ. ಜರ್ಮನಿಯ ಶಸ್ತ್ರಾಸ್ತ್ರಗಳ ತಯಾರಿಯಿಂದ ತಮ್ಮಂತ ನೆರೆಹೊರೆಯಲ್ಲಿರುವ ರಾಷ್ಟ್ರಗಳಿಗೆ ಅಪಾಯದ [illegible] ವನ್ನುಂಟಾಗುತ್ತದೆಂಬ ಸಂಗತಿಯನ್ನು ಜರ್ಮನರು ತಿಳಿದೂ ತಿಳಿದೂ ಏನೂ ಅರಿಯದವರಂತೆ [illegible]ಡಕೊಳ್ಳುತ್ತಾರಾಗಿ ಮೆಕಡೋನಲ್ಡರ ಆರೋಪ. [illegible] ಹಿಟ್ಲರವರ ಸಂಭಾಷಣದ ಒಂದು ವಿನೋದ [illegible] ಕೇಳಿದರೆ ತಕ್ಕಮಟ್ಟಿಗೆ ಇವ್ವರಿಕೆ [illegible] ಹಿಟ್ಲರ ಒಂದೀಸು ಸಹಜ ಮಾತಾಡುತ್ತ [illegible] ಭೋಜನ ಮಾಡುತ್ತಿರುವಾಗ ಮಿ| ಈಡನ್‌ರವರು [illegible] ಯಾದಿ (menu) ಇದ್ದ ಕಾರ್ಡಿನ ಮೇಲೆ [illegible] ಯುದ್ಧ ಕಾಲದಲ್ಲಿ ತಾವು ಯುದ್ಧ ಮಾಡಿದಂತ [illegible]ವನ್ನು ನಿರ್ದೇಶಿಸಿ ನಕಾಶ ತೆಗೆದು ಹಿಟ್ಲರರಿಗೆ ತೋರಿಸಿದರಂತೆ. ಹಿಟ್ಲರರು ಅದೇ ಕಾರ್ಡಿನ ಮೇಲೆ ಎದುರಾಳಿಯಾಗಿ ತಾವು ಹೋರಾಡುತ್ತಿದ್ದ ಸ್ಥಳವನ್ನು ನಿರ್ದೇಶಿಸಿ ಆ ಕಾರ್ಡನ್ನು ಮಿ| ಈಡನ್‌ರವರಿಗೆ ತಿರುಗಿ ಕೊಟ್ಟರಂತೆ. ಈ ಕಾರ್ಡನ್ನು ಮಿ| ಈಡನ್‌ರವರು [illegible] ಯಾತ್ರೆಯ ಜ್ಞಾಪಕಾರ್ಥ ಕಾದಿಟ್ಟುಕೊಂಡಿರುತ್ತಾರಾಗಿ ಪ್ರಕಟವಾಗಿದೆ. [illegible] ದರ ಮೇಲಿಂದ ಹೋರಾಡಬೇಕಾಗಬಹುದೇನು? ಇಷ್ಟರಲ್ಲಿಯೂ ರಣೋತ್ಸಾಹ ಹುಟ್ಟಿದೆ [illegible] ನ [illegible] ಹಾತೊರೆಯುತ್ತಿದೆ. [illegible] ನನ್ನ [illegible] ಯುದ್ಧ [illegible]ಗುವದಿಲ್ಲ [illegible] ಪರಿಸ್ಥಿತಿ ಇಷ್ಟೊಂದು [illegible] ಬ್ರಿಟಿಶ ಸರ[illegible]ರವರು ಒಂದಂತೆ [illegible] ರಾಷ್ಟ್ರ

ರಾಷ್ಟ್ರಪತಿಗಳು ಸೂಚಿಸಿದ ಹೊಸ ವಿಚಾರದಂತೆ, ನಾವು ನಮ್ಮ ನಡಾವಳಿಯನ್ನಿಟ್ಟರೆ ದೇಶತುಂಬ ಬೇರೂರಿಕೊಂಡಿದ್ದ ಬಡತನ ನಿಯಲಾಗುವದು. ನಿತ್ಯ ಪ್ರಪಂಚಕ್ಕೆ ತಗಲುವ ಪ್ರತಿಯೊಂದು ಜಿನಸನ್ನು ಉಪಯೋಗಿಸುವ ಮುಂಚೆ "ಇದರಿಂದ ದೇಶದೊಳಗಿನ ಬಡಬಗ್ಗರಿಗೆ ಸಿಗುವ ಲಾಭವೇನು?" ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬರೂ ಕೇಳಿಕೊಂಡು ಅದಕ್ಕೆ ಸಿಗುವ ಉತ್ತರದ ಮೇಲೆ ಆ ಜಿನಸಿನ ಉಪಯೋಗವನ್ನು ನಿರ್ಣಯಿಸಿಕೊಳ್ಳಬೇಕು. ಈಗಿನ ಪ್ರವೃತ್ತಿಯಿಂದ ಬಡಬಗ್ಗರಿಗೆ ಲಾಭವಾಗದಿದ್ದರೆ, ಪರದೇಶೀಯರಿಗೆ ಲಾಭವಾಗುತ್ತಿದ್ದರೆ, ಆ ಜಿನಸನ್ನು ದೇಶಬಾಂಧವರು ತೊರೆಯಲು ಬದ್ಧರಿದ್ದಾರೆ. ಸ್ವದೇಶ ಬಾಂಧವರಿಗೆ ಲಾಭವಾಗುವ ಪ್ರಸಂಗದಲ್ಲಿ ಒಂದು ಮಟ್ಟಿಗೆ ಅನಾನುಕೂಲತೆ ಕಷ್ಟಗಳೊದಗಿದಾಗ್ಯೂ ಅವನ್ನು ಸಂತೋಷದಿಂದ ಸಹಿಸಲು ದೇಶಬಾಂಧವರು ಕರ್ತವ್ಯಬದ್ಧರು. ದೇಶಬಾಂಧವರ ಕಲ್ಯಾಣದ ಮಾತುಗಳನ್ನಾಡಿ ಅಭಿಮಾನದಿಂದ ಅದಕ್ಕಾಗಿ ಕಷ್ಟ ಸಹಿಸಲು ಒಪ್ಪದ ಜನರು ರಾಷ್ಟ್ರೀಯರಲ್ಲ; ರಾಷ್ಟ್ರಘಾತಕಿಗಳವರು. ರಾಷ್ಟ್ರಪತಿಗಳಿಗೆ ವಿಶೇಷ ಆದರಾತಿಥ್ಯ ಮಾಡಿದಾಗ್ಯೂ, ಆಚಾರ್ಯ ಕೃಪಾಲಾನಿಯವರು ನುಡಿದಂತೆ, ಆ ಆದರಾತಿಥ್ಯವೆಲ್ಲ ಬರೀ ಲೋಕವಂಚನೆಯದು; ಇದರಿಂದ ದೇಶಬಾಂಧವರ ರಾಷ್ಟ್ರಹಿತಘಾತಕ ಪಾಪ ತೊಳೆದುಹೋಗದು. ಆ ಘಾತಕಿಯು ಕ್ಷಮೆಗೆ ಪಾತ್ರನಾಗಲಾರನು. ದೇಶದೊಳಗಿನ ಕೈಗಾರಿಕೆಗಳನ್ನು ನಷ್ಟಪಡಿಸಿ ಕೈಗಾರಿಕೆಗಳ ಮೇಲೆ ಹೊಟ್ಟೆಹೊರಕೊಂಡಿದ್ದ ದೇಶಬಾಂಧವರಿಗೆ ಉಪವಾಸ ಹಾಕಿದ ಮಹಾಪಾಪಿಯವನು: ದೀರ್ಘ ವಿಚಾರ ಮಾಡದ, ತನ್ನ ಲಾಭದ ಸಂಕುಚಿತ ವಿಚಾರ ಮಾಡಿ ಮೋಹಕ್ಕೊಳಪಟ್ಟ ಅಜ್ಞಾನಿಯವನು; ಆತನಿಗೆ ತನ್ನ ವ್ಯಾಪಾರದ ಜ್ಞಾನವಾಗಿ ಅದನ್ನು ತ್ಯಜಿಸಿದ ಹೊರತು ಆತನ ಪಾಪಕ್ಷಾಲನವಾಗದು. ರಾಷ್ಟ್ರಪತಿಗಳ ಆದರಾತಿಥ್ಯದ ಶ್ರೇಯಸ್ಸು ಆತನಿಗೆ ಲಭಿಸದು. ಹಿಂದವಾಸಿಯರು ಇಷ್ಟು ವಿಚಾರ ಮಾಡದೆ, ಅಂಧಪಂಥ ವಿದೇಶಿ ಸರಕುಗಳ ವ್ಯಾಪಾರ ನಡಿಸಲು ಉತ್ತೇಜನ ಕೊಟ್ಟದ್ದರಿಂದಲೇ ಹಿಂದಭೂಮಿಯು ಕ್ರಮವಾಗಿ, ಸ್ಥಿರವಾಗಿ ಕೈಗಾರಿಕೆಗಳನ್ನೆಲ್ಲ ಕಳಕೊಂಡು ದಾರಿದ್ರ್ಯ ಪಂಕದಲ್ಲಿ ಬೀಳುತ್ತಿದೆ; ಪಾರತಂತ್ರ್ಯ ಪಾಶದಲ್ಲಿ ಸಿಲುಕಿ ನರಳಾಡುತ್ತಿದೆ. ಅಖಿಲ ಭಾರತೀಯ ಗ್ರಾಮೋದ್ಯೋಗಿಕ ಸಂಘದ ಕಾರ್ಯಕ್ರಮಕ್ಕೆ ರಾಷ್ಟ್ರೀಯರೆಲ್ಲರೂ ಆಶ್ರಯವನ್ನಿತ್ತು ಬಡಜನರ ಸಂಪದಭ್ಯುದಯಕ್ಕೆ ರಾಷ್ಟ್ರೀಯರು ಕಾರಣರಾಗಬೇಕಾಗಿ ರಾಷ್ಟ್ರಪತಿಗಳು ಆಜ್ಞೆ ಕೊಟ್ಟದ್ದು ಇದೇ ದೃಷ್ಟಿಯಿಂದ.

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರವರ ನಮ್ಮ ಜಿಲ್ಲೆಗೆ ಬಂದು, ಬಾಂಧವರಿಗೆ ರಾಷ್ಟ್ರಸಂದೇಶವನ್ನು ಸ್ವತಃ ಸಾರಿ ರಾಷ್ಟ್ರೀಯ ಸಭೆಯ ಲೋಕೋಪಕಾರಿ ಸಂಕಲ್ಪವನ್ನು ತಿಳಿಸಿಹೇಳಿದ ಬಗ್ಗೆ ನಾವು ಅವರಿಗೆ ತುಂಬಾ ಕೃತಜ್ಞರಾಗಿದ್ದೇವೆ. ನಮ್ಮ ಜಿಲ್ಲೆ ಮೂಲೆಗುಂಪಾಗಿ ಬಿದ್ದ ಪ್ರದೇಶ. ಇತ್ತ ಕಡೆ ರಾಷ್ಟ್ರಪತಿಗಳಂಥ ಅಖಿಲ ಭರತಖಂಡಕ್ಕೆ ಬೆಳಕು ನೀಡುವ ಸನಾತನದ ಪುರುಷರು ಚಿತ್ತೈಸುವದೆಂದರೂ ಪೂರ್ವಸುಕೃತದಿಂದಲೇ. ಇಂಥ ಮಹಾನುಭಾವರು ನಮ್ಮಲ್ಲಿ ಅನುಗ್ರಹಿಸಬೇಕು. ರಾಷ್ಟ್ರಪತಿಗಳು ರಾಷ್ಟ್ರೀಯ ಕಾರ್ಯಕ್ರಮದ ವಿವರವನ್ನು ಸುಲಭವಾಗಿ ಜನರಿಗೆ ಬೋಧಿಸಿದ್ದಾರೆ. ಜಿಲ್ಲೆಯೊಳಗೆ ಉಂಟಾದ ಒಂದು ಪ್ರಕಾರದ ಅಲಕ್ಷ್ಯವೃತ್ತಿ ಜನತೆ ರಾಷ್ಟ್ರಪತಿಗಳ ಪುಣ್ಯ ಸಂದರ್ಶನದಿಂದ ಬಯಲಾಗಿ ಅಲ್ಲಲ್ಲಿ ನವಚೈತನ್ಯ ಉಂಟಾಗಲೆಂದೂ, ಪ್ರತಿಯೊಬ್ಬರು ರಾಷ್ಟ್ರಕಾರ್ಯದೊಳಗಿನ ತಮ್ಮ ತಮ್ಮ ಕರ್ತವ್ಯವನ್ನು ನೆನಸಿ ಅದಕ್ಕನುಗುಣವಾಗಿ ತಮ್ಮ ತಮ್ಮ ಜೀವನಕ್ರಮದಲ್ಲಿ ಅವಶ್ಯಾಂತರಗಳನ್ನುಂಟುಮಾಡಲೆಂದೂ ಮಾತ್ರ ಬಿನ್ನೈಸಿಕೊಳ್ಳುತ್ತೇವೆ. ರಾಷ್ಟ್ರಪತಿಗಳು ನುಡಿದಂತೆ ನಾವು ಯಾರಿಗೂ ಹೆದರುವ ಕಾರಣವಿಲ್ಲ. ಸರಕಾರಕ್ಕೆ ಹೆದರುವಂಥ, ಗಂಡಾಂತರಕ್ಕೊಳಗಾಗುವಂಥ ಯಾವದೇ ಕಾರ್ಯಕ್ರಮವನ್ನು ರಾಷ್ಟ್ರೀಯ ಸಭೆಯು ಕೈಕೊಂಡಿಲ್ಲ. ದೇಶತುಂಬ ಐಕ್ಯಮತ್ಯದ ಭಾವನೆಯುಂಟಾಗುವಂತೆ, ದೇಶದೊಳಗೆ ಉಪವಾಸ ಸಾಯುವ ಬಡಬಗ್ಗರಿಗೆ ಜೀವನೋಪಾಯವಾಗುವಂತೆ ಪ್ರವೃತ್ತಿ ಹಿಡಿದು ಸಮಸ್ತ ದೇಶಬಾಂಧವರು ತಮ್ಮ ನಡುವಳಿಯನ್ನಿಡಬೇಕಾಗಿ ರಾಷ್ಟ್ರೀಯ ಸಭೆಯ ಅಪೇಕ್ಷೆಯಿದೆ; ಆಗ್ರಹವಿದೆ; ಬಿನ್ನಹವಿದೆ: ಅಪ್ಪಣೆಯಿದೆ. ಜಿಲ್ಲೆಯೊಳಗಿನ ನಾಗರಿಕರೆಲ್ಲರೂ ವಿಚಾರ ಮಾಡಿ ರಾಷ್ಟ್ರೀಯ ಸಭೆಯ ಅಪ್ಪಣೆಯಂತೆ ವರ್ತಿಸಿ, ರಾಷ್ಟ್ರೀಯ ಸಭೆಯು ದೇಶಬಾಂಧವರನ್ನು ನಂಬಿಕೊಂಡು, ಕೈಕೊಂಡ ಸ್ವರಾಜ್ಯ ಸಂಗ್ರಹದ ಕಾರ್ಯದಲ್ಲಿ ನೆರವಾಗಬೇಕಾಗಿ ಹೃತ್ಪೂರ್ವಕವಾಗಿ ಬಿನ್ನೈಸಿಕೊಂಡು, ರಾಷ್ಟ್ರಪತಿಗಳಿಗೂ, ಅವರ ಪರಿವಾರದವರಿಗೂ ನಮ್ಮತ್ತ ಕಡೆ ಅನುಗ್ರಹಿಸಿದ ಬಗ್ಗೆ ಪುನಃ ಕೃತಜ್ಞತೆಯನ್ನು ಪ್ರದರ್ಶಿಸಿ ಇಂದಿನ ಸೇವೆಯನ್ನು ಮುಗಿಸುತ್ತೇವೆ.

ಜೊರ್ಜ ಭೂಪರಿಗೆ ಮಂಗಳವಾಗಲಿ!

ಇಡೀ ಬ್ರಿಟಿಶ ಸಾಮ್ರಾಜ್ಯದೊಳಗೆ ಒಂದು ದೊಡ್ಡ ಉತ್ಸವ! ಸಾರ್ವಭೌಮ ಪಂಚಮ ಜೊರ್ಜ ಭೂಪಾಲರು ಪಟ್ಟಕ್ಕೆ ಬಂದು, ಈ ಹೊತ್ತಿಗೆ ಇಪ್ಪತ್ತೈದು ವರ್ಷಗಳು ಮುಗಿದವು! ಯಾವದೇ ಸಂಸ್ಥೆಯು ಇಲ್ಲವೆ ವ್ಯಕ್ತಿಯು ವಿಶಿಷ್ಟ ಭೂಮಿಕೆಯ ಅಸ್ತಿತ್ವಕ್ಕೆ ೨೫ ವರ್ಷ ತುಂಬಿದ ಮೇಲೆ ರೌಪ್ಯ ಉತ್ಸವ, ೫೦ ವರ್ಷ ತುಂಬಿದರೆ ಸುವರ್ಣಉತ್ಸವ, ೬೦ ವರ್ಷ ತುಂಬಿದರೆ ಹೀರಕ ಜುಬಿಲಿ; ಹೀಗೆ ಆನಂದೋತ್ಸವಗಳನ್ನು ಜರುಗಿಸುವ ಪರಿಪಾಠ ಪಾಶ್ಚಾತ್ಯರಲ್ಲಿದೆ. ಪಾಶ್ಚಾತ್ಯರ ಆಚಾರ-ವಿಚಾರಗಳು ನಮ್ಮಲ್ಲಿ ನೆಲೆಗೊಳ್ಳಹತ್ತಿದಂದಿನಿಂದ, ಆ ಪರಿಪಾಠ ನಮ್ಮೊಳಗೂ ಬಳಕೆಯಲ್ಲಿ ಬಂದಿರುತ್ತದೆ. ಸನ್ ೧೮೮೭ನೇ ಇಸವಿಯಲ್ಲಿ ಶ್ರೀ|ಮಾ| ವಿಕ್ಟೋರಿಯಾ ಮಹಾರಾಣಿಯವರ ರಾಜ್ಯಾರೋಹಣದ ಸುವರ್ಣಉತ್ಸವವಾಗಿತ್ತು; ೧೮೯೭ ನೇ ಇಸವಿಯಲ್ಲಿ ಹೀರಕಉತ್ಸವವಾಗಿತ್ತು; ಆ ಮಹೋತ್ಸವಗಳ ಸಡಗರವನ್ನು ನಾವು ಹಿರಿಯರ ಕಡೆಯಿಂದ ಕೇಳಬಹುದು. ಕಳೆದ ನಾಲ್ಕೆಂಟು ತಿಂಗಳಲ್ಲಿ ಹಿಂದುಸ್ಥಾನದ ಬೇರೆ ಬೇರೆ ಸಂಸ್ಥಾನಿಕರು ತಮ್ಮ ರಾಜ್ಯಾರೋಹಣದ ರಜತ ಮಹೋತ್ಸವಗಳನ್ನು ಜರುಗಿಸಿದ ಸುದ್ದಿಯನ್ನೂ ಪದ್ಧತಿಯನ್ನೂ ಪತ್ರಿಕಾ ವಾಚಕರು ಚನ್ನಾಗಿ ಅರಿತಿರುವರು. ಅದರಂತೆಯೇ ಈ ಹೊತ್ತು ಸಾರ್ವಭೌಮರ ಆಳಿಕೆಯ ರೌಪ್ಯ ಜುಬಿಲಿ ಮಹೋತ್ಸವವು ಇಡೀ ಸಾಮ್ರಾಜ್ಯದಲ್ಲಿ ಜರುಗಿಸಲ್ಪಡುವದು. ಈ ಆನಂದೋತ್ಸವದ ಬಗ್ಗೆ ವಿಲಾಯತಿಯಲ್ಲೂ, ಹಿಂದುಸ್ಥಾನದಲ್ಲೂ ೧—೧| ವರ್ಷದಿಂದ ನಡೆದ ತಯಾರಿಯ ವೃತ್ತಾಂತವನ್ನು ನಾವು ಕಾಲಕಾಲಕ್ಕೆ ವಾಚಕರಿಗೆ ಅರುಹಿದ್ದೇವೆ. ನಿನ್ನೆ ದಿನ ಸರ್ವ ತಯಾರಿ ಪೂರ್ಣವಾಗಿ ಈ ಹೊತ್ತಿನಿಂದ ಉತ್ಸವಕ್ಕೆ ಪ್ರಾರಂಭವಾಗುವದು. ವಾರ-ಎರಡು ವಾರಗಳ ತನಕ ಈ ಮಹೋತ್ಸವವು ಜರಗುವದು. ಸ್ಥಾನಿಕ ಸಾಧನ-ಸಿದ್ಧತೆಗಳಿಗನುಸಾರವಾಗಿ ಆಟ-ಪಾಟ, ದಾನ-ಧರ್ಮ, ಸಭಾ-ಮೆರವಣಿಗೆ, ಸಿನೆಮಾ-ನಾಟಕ, ಊಟ-ಔತಣ, ದೀಪೋತ್ಸವ ಮುಂತಾದವುಗಳು ನಡೆಯುವವು. ಬಾದಶಹರಿಗೆ ಆಯುರಾರೋಗ್ಯ, ಸುಖ-ಸಂಪತ್ತುಗಳನ್ನು ದಯಪಾಲಿಸಬೇಕಾಗಿ ರಾಜವತ್ಸಲ ಪ್ರಜಾಜನರು ದೇವಾಲಯಗಳಲ್ಲಿ ಹೋಗಿ ಪರಮಾತ್ಮನೆಡೆಗೆ ಪ್ರಾರ್ಥನೆ ಮಾಡುವರು. ಮಹಾರಾಜರಿಗೆ ತಮ್ಮ ರಾಜನಿಷ್ಠೆಯ ಸಂದೇಶಗಳನ್ನು ಕಳುಹಿಸಿ, ಮಹಾನುಭಾವರು ಕೃತಾರ್ಥರಾಗುವರು.

ನಮ್ಮ ಭೂಪಾಲರಿಗೆ ಈಗ ೬೦ ವರ್ಷ ವಯಸ್ಸು. ಎರಡು ವರ್ಷಗಳ ಹಿಂದೆ ಅವರು ಪ್ರಾಣಸಂಕಟ

[ಮುಂದೆ ೪ನೇ ಪಾನಿನ ಮೇಲೆ ಮುಂದುವರಿಸಿದೆ.]

ಸ್ಥಾನಿಕ ವೃತ್ತಾಂತ.

ಕುಮಟಾ— ಮೋಡ, ಬಿಸಿಲು, ಸೆಕೆ, ಹಲವೆಡೆ ಸೀರಿನ ಅಭಾವ. ಹಳ್ಳಿಗಳಲ್ಲಿ ಇನ್ನೂ ಮೈಲಿಯು ಉಪದ್ರವ ದೂರಾಗಿಲ್ಲ. ಮೈಲಿಯಿಂದ ಮಕ್ಕಳಿಗರ ಮನೆಗಳಲ್ಲಿ ಅನೇಕರು ತೀರಿಕೊಂಡರು. ಬಾಲಕರ ಮರಣ ಸಂಖ್ಯೆಯೇ ಹೆಚ್ಚು. ಇದರೊಡನೆ ಬೇಸಾಯ ಕೆಲಸಗಳಿಗೆ ಒಳ್ಳೇ ತೊಂದರೆ. ದುರ್ದೈವ ...

ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರ ಆಗಮನದ ಸ್ವಾಗತ ಕಾರ್ಯಕ್ರಮ ಇಲ್ಲಿ ತಿಳಿಸಿದ್ದು ... ಬಾಬು ರಾಜೇಂದ್ರ ಪ್ರಸಾದರಿಗೂ ಒಳ್ಳೇ ಸ್ವಾಗತ ... ಅವರು ಮಾತನಾಡಿದರು. ಸಭೆಯ ವೃತ್ತಾಂತವು ಸವಿಸ್ತರವಾಗಿ ಬೇರೊಂದೆಡೆಗೆ ಕೊಟ್ಟಿದೆ.

ಇಲ್ಲಿಯ ರೌಪ್ಯ ಮಹೋತ್ಸವ ನಿಧಿಗೆ ರೂ. ೧೮೦೦ ಕೂಡಿರುವದಂತೆ. ... ವಿದ್ಯಾರ್ಥಿಗಳಿಗೆ ... ರೂ. ೪೦೦ ... ನಿಜವಲ್ಲವಾಗಿ ತಿಳಿದು ... ಮ್ಯುನಿಸಿಪಲ್ ಮೆನೆಜಿಂಗ್ ಕಮಿಟಿಯವರು ಉತ್ಸವ ನಿಧಿಗೆ ರೂ. ೧೦೦ನ್ನು ಕೊಟ್ಟಿದ್ದಾರೆ ... ಒಬ್ಬರು ಟೀಕಿಸಿದ್ದಾರೆ !

ಅಂಕೋಲಾ— (೪ ಮೇ ೩೪) ಈಗ ಒಂದು ... ಸ್ವಲ್ಪ ಮೈಲಿ ಮುಂತಾದ ಬೇನೆಗಳು ತಲೆದೋರಿತ್ತಿವೆ.

ಸಿದ್ಧ ಸತ್ಯಾಗ್ರಹ ... ರಾಷ್ಟ್ರಪತಿಗಳು ಅಂಕೋಲೆಗೆ ಭೆಟ್ಟಿ ಕೊಡು ... ದಿನ ಪರಿಸರದ ನಾಗರಿಕ ಸ್ತ್ರೀ-ಪುರುಷರೆಲ್ಲರೂ ... ಅಂಕೋಲೆಯಲ್ಲಿ ... ಜಿಲ್ಹಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರೂ ... ರಾಷ್ಟ್ರಪತಿಗಳಿಗೆ ... ಸ್ವಾಗತ ಮಾಡಿದರು. ... ರಾಷ್ಟ್ರಪತಿಗಳು ... ಕಾಂಗ್ರೆಸ-ವಂದಿಗಳು ... ತ್ಯಾಗ ಮಾಡಿದ್ದಾರೆ ... ಕೃತಜ್ಞತೆಯಿಂದ ನೆನೆಸುತ್ತಾರೆ.

ಈ ಸಲದ ಸಂಗ್ರಾಮದಲ್ಲಿ ನಮಗೆ ಯಶಸ್ಸು ದೊರೆಯಲಿಲ್ಲ. ... ಬೇಸರವೆ ... ಮುಂದಿನ ಕೆಲಸ ... ರಾಷ್ಟ್ರೀಯ ಸಭೆಯ ... ಆಡಬೇಕು.

ಈ ಮೇಲೆ ರಾಷ್ಟ್ರಗೀತವಾಗಿ ಸಭೆಯು ಸಮಾಪ್ತಿಯಾಯಿತು. ... ರಾಷ್ಟ್ರಪತಿಗಳ ... ಶಾಂತತೆಯಿಂದ ... ತಿಳಿಸಿದರು.

ರಾಷ್ಟ್ರಪತಿಗಳು ... ಇಲ್ಲಿಯ ಎಜ್ಯುಕೇಶನ್ ಸೊಸಾಯಿಟಿಯ ... ಅವರು ... ಶಾಲೆಯ ... ವಿದ್ಯಾರ್ಥಿಗಳ ... ಆಗದ ... ಇತ್ಯಾದಿ.

(ತಾ. ೫-೫-೩೪) ತಾಲೂಕ ಕಚೇರಿಯಲ್ಲಿ ಜುಬಿಲಿ ಉತ್ಸವದ ... ಇಲ್ಲ; ... "ಎಲ್ಲಾ ... ಸರಕಾರದ ... ಅಗತ್ಯವೆಯಾಗಿದೆ; ... " ಎಂದು ... ಕೊಟ್ಟಿದ್ದಾರೆ ... ಮಾಡುವದು " ಎಂದು ... ಕೊಟ್ಟಿರುವಂತೆ.

ಖಾಜೀಜುಬಿ ... ಒಂದ ಹುಸೇನ ಸಾಹೇಬ ... ನಡೆಸಿದ ... ಇತರ ದಿನ ... ಆಗಿರುವಂತೆ; ... ಮಾಡುವೆಯ ದಿನ ಖಾಜೀಜುಬಿಯು ಲಗ್ನವಾದ ಮನೆಯಲ್ಲಿ ಸಹ ಇದ್ದಿಲ್ಲ ದೂರದಲ್ಲಿ ಇಟ್ಟು

Siromani Udipi Narayanacharya,

CHAUKHAMBA, BENARES CITY.

S U.N. & CO.
BENARES CITY.

ಮಹಾಶಯರೇ, ರುದ್ರನೇತ್ರ ... ಶ್ರೇಷ್ಠವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ರೂ. 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ... ಸಣ್ಣದಾಗುತ್ತ ಆಗುತ್ತ ... ಹೆಚ್ಚುವದು. ... ಸರ 32 ದರ 1ಕ್ಕೆ ರೂ. 0-8-0ಯಿಂದ ರೂ. 100 ವರೆಗೆ. ಗೌರಿಶಂಕರ 1ಕ್ಕೆ ರೂ. 3-8-0ದಿಂದ ೨೫ ವರೆಗೆ ಮತ್ತು ಬೇರೆ ... ವಿವರ ತಿಳಿಯಲು ಅಪೇಕ್ಷಿಸುವವರು 0-1-0 ಸ್ಟ್ಯಾಂಪು ಕಳಿಸಿದರೆ, 1 ಕಾಶೀ ನಕ್ಷೆ, 1 ವಿಶ್ವೇಶ್ವರನ ಪಟ ನಮ್ಮ ಕೆಟಲಾಗು ಸಹ ಉಚಿತ ಕಳಿಸಲಾಗುವದು.

ಪತ್ತೆ:- ಶಿರೋಮಣಿ ನಾರಾಯಣಾಚಾರ್ಯ,
ಚೌಕಾಂಬಾ, ಕಾಶೀ ಕ್ಷೇತ್ರ.

ಹಿಂದು ಎಂಬುವನ ಮನೆಯಲ್ಲಿದ್ದಳು ಎಂಬುದೂ ಧ್ರುವವಾಗಿದೆ. ಮಿಜರ್ಜಾನದ ಕಾಜಿಯು ತನ್ನ ಸಾಕ್ಷಿಯಲ್ಲಿ ತಾನು ಹುಡುಗಿಯನ್ನು ನೋಡಿಲ್ಲವೆಂದು ಹೇಳಿದನು; ಹುಡುಗಿಯು ಸವಿಾಪದಲ್ಲಿರಬೇಕಾಗಿ ಬಿಸ್ತ್ರವೂ ಇಲ್ಲೆಂದು ಪ್ರತಿಪಾದಿಸಿದನು. ಮೆಜಿಸ್ಟ್ರೇಟರು ಇನೇ ಆರೋಪಿ ಸಯ್ಯದ ಮೊಹಿದ್ದೀನ ವ|| ಸಯ್ಯದ ನಸಿರುದ್ದೀನ ಸಾ|| ಗಾಝೀಪೂರ ಅವನೊಡನೆ ಫಿರ್ಯಾದಿಯ ಲಗ್ನವಾದದ್ದಿಲ್ಲೆಂಬುದೂ, ಆತಯೊಡನೆ ಮದುವೆಯಾಗಿದೆಯೆಂದು ಲೋಕದಲ್ಲಿ ಸುಳ್ಳು ಸಾಧನೆ ಮಾಡಿದ್ದರಿಂದ ಫಿರ್ಯಾದಿಯ ಮಾನಹಾನಿಯಾಗಿರುತ್ತದಾಗಿಯೂ ನಿರ್ಣಯಿಸಿ, ಐದೂ ಆರೋಪಿಗಳಿಗೆ ರೂ. ೨೦೦–೨೦೦ ರಂತೆ ದಂಡ, ದಂಡ ಕೊಡದಿದ್ದರೆ ೪–೪ ತಿಂಗಳ ಕೈದ; ಹೀಗೆ ಶಿಕ್ಷೆಯನ್ನು ವಿಧಿಸಿರುತ್ತಾರೆ. ದಂಡ ವಸೂಲಾದ ಮೇಲೆ ಅದರೊಳಗಿಂದ ರೂ. ೫೦೦ ಫಿರ್ಯಾದಿಗೆ ಕೊಡಬೇಕಾಗಿ ಹುಕುಮಾಗಿದೆ. [ಈ ಖಟ್ಲೆಯ ವೃತ್ತಾಂತವು ತಾ. ೨೦–೮–೩೪ ನೇ 'ವೃತ್ತ'ದಲ್ಲಿ ಪ್ರಕಟವಾಗಿದೆ.]

ಹಳಿಯಾಳ— ಇಲ್ಲಿಯ ಗೋರಕ್ಷಣ ಸಂಸ್ಥೆಯವರು ಈಗ ಹಳ್ಳಿಗಳಲ್ಲಿ ಪ್ರಚಾರ ಕಾರ್ಯ ನಡೆಸಬೇಕೆಂದು ನಿರ್ಧರಿಸಿದ್ದಾರೆ. ಆ ಪ್ರಕಾರ ಕೊನ್ನೆ ಎತೊಳ್ಳಿಯಲ್ಲಿ ಮೊದಲನೇ ಸಭೆ ಸೇರಿಸಿ ಕೀರ್ತನೆ, ವ್ಯಾಖ್ಯಾನಗಳ ದ್ವಾರಾ ಗೋರಕ್ಷಣ ಮತ್ತು ಒಕ್ಕಲುತನ ಸುಧಾರಣೆ ಎಂಬ ವಿಷಯದ ಮೇಲೆ ಹಳ್ಳಿಗರಿಗೆ ಉಪದೇಶ ಮಾಡಲಾಯಿತು. ಸಭೆಯ ಕೊನೆಯಲ್ಲಿ ಪ್ರಚಾರಕರಿಗೂ ಸಭಿಕರಿಗೂ ನಡೆದ ಚರ್ಚೆಯೊಳಗೆ ಎತೊಳ್ಳಿ ಹಳ್ಳಿಯ ಸುತ್ತುಮುತ್ತಲಿನ ಭೂಮಿಯೆಲ್ಲ ರಿಝರ್ವ ಫಾರೆಸ್ಟಿನಲ್ಲಿ ಕೂಡಿ ಹೋಗಿರುತ್ತದಾಗಿಯೂ, ಹಳ್ಳಿಯೊಳಗಿನ ದನಗಳಿಗೆ ಮೇಯಲು ಹುಲ್ಲುಬನ್ನಿ ಸ್ಥಳವೇನೂ ಉಳಿದಿಲ್ಲವಾಗಿಯೂ, ಜಾನುವಾರುಗಳಿಗೆ ಬಹಳ ಕಷ್ಟವಾಗುತ್ತದಾಗಿಯೂ ತಿಳಿದು ಬಂದಿತು. ಜಿಲ್ಲಾಧಿಕಾರಿಗಳು ಇತ್ತ ಲಕ್ಷಿಸುವರೇನು?

ಶಿರಶಿ— ಮ್ಯುನಿಸಿಪಾಲಿಟಿಯಲ್ಲಿ ನಡೆದ ಅನ್ಯಾಯದ ಬಗ್ಗೆ ತರಿಗೆದಾರರಾದ ಮಿ|| ಗೋಪಾಲ ವಾಮನರಾವ ಅಧ್ಯಕ್ಷರಿಗೂ, ಸಭಾಸದರಿಗೂ ನೋಟೀಸು ಕೊಟ್ಟಿರುತ್ತಾರಂತೆ, ಕಾಯದೆ ನಿಯಮಗಳ ವಿರುದ್ಧ ನಡೆದ ಖರ್ಚು ಮ್ಯುನಿಸಿಪಲ್ ಹಣದ ದುರುಪಯೋಗವೆಂದು ತರಿಗೆದಾರರ ಸಾಧನೆಯು, ನೋಟೀಸ ಅವಧಿ ತೀರಿದ ಮೇಲೆ ಮ್ಯುನಿ ಯ ಮೇಲೆ ದಾವೆಯಾಗುವದು ಖಂಡಿತವೆಂದು ಊರಲ್ಲಿ ವಾರ್ತೆ ಹಬ್ಬಿದೆ.

ಗ್ರಾಮ ಚಾವಡಿ ಹಿಂದಿನ ರಸ್ತೆಯ ದುರುಸ್ತಿಗೆ ಆರಂಭವಾಗಿ ಬಹುಕಾಲವಾಯಿತು. ದುರುಸ್ತಿ ಕೆಲಸ ಇನ್ನೂ ಮುಗಿಯದ ಕಾರಣ ಮೇಲೆ ಕಲ್ಲು-ಮಣ್ಣುಗಳು ಬಿದ್ದಿರುವದರಿಂದ ತಿರುಗಾಡುವವರಿಗೆ ತೊಂದರೆಯಾಗುತ್ತದೆ. ರಸ್ತೆಗಳ ಮೇಲೆ ನೀರು ಸಾಕಷ್ಟು ಬೀಳುವದಿಲ್ಲ, ಮೋಟಾರ ಗಾಡಿಗಳ ಓಡಾಟದಿಂದ ಧೂಳು ಎದ್ದು ಕಷ್ಟವಾಗುತ್ತದೆ, ಮ್ಯುನಿಯವರು ಸ್ವಲ್ಪ ಲಕ್ಷ ಪೂರೈಸಬೇಕು.

ಕಳೆದ ಮಾರ್ಚ ತಿಂಗಳಲ್ಲಿ ಇಲ್ಲಿರುವ ಚರಖಾ ಸಂಘದ ಖಾದಿ ಭಾಂಡಾರದಲ್ಲಿ ರೂ. ೪೪೬ ರ ವಿಕ್ರಿಯಾಯಿತು. ಇಡೀ ಕರ್ನಾಟಕದೊಳಗೆ ಸಂಘದ ಖಾದಿಯ ಮಾರಾಟ ರೂ. ೧೫೯೬ ಗಳಷ್ಟು ಆಯಿತಾಗಿ ತಿಳಿಯುತ್ತದೆ.

For Sale.

One Harvey Foster Vulcanizer Standard Model A complete with blow lamp used for three months only. For price and particulars write to:- **K. R. KAMAT,**
ANKOLA. [N. Kanara]

ದ್ವಿಗುಣವಾದ ಲಾಭವನ್ನು ಹೊಂದಿರಿ.

ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ!

ಮಕ್ಕಳ ಲಿವರ್ ಕಂಪ್ಲೇಂಟು (ಕೂರ್ಮವ್ಯಾಧಿ), ಮತ್ತು ಜ್ವರಗಡ್ಡೆಗೆ

ಜಮ್ಮಿ ವೆಂಕಟರಮಣಯ್ಯನವರ

'ಲಿವರ್ ಕ್ಯೂರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಿರಿ!

ಪೆಟ್ಟಿನ ಮಾಹಿತಿಗೆ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ.)

Established 1900. — ಶ್ರೀ — *FIXED RATE.*

ದಾಸಪ್ಪಾ ಕೃಷ್ಣಪ್ಪಾ ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರಶಿ.

ನಮ್ಮಲ್ಲಿ ಪೇಟೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರೇಷ್ಮೆಯ ಖಣಗಳೂ, ಕೋಟಿಂಗ ಷರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಒರೀ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಷ್ಮೆ ಖದ್ದರ ಮಡಿಗಳೂ, ಸಾದ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಭೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಸೋಯಿ ದರದಿಂದ ಸಿಗುವವು. ಹೋಲ್‌ಸೇಲ್ ವ್ಯಾಪಾರಕ್ಕೆ ಕಮಿಶನ್ ದೊರೆಯುವದು

Tel:- "Honesty." **D. K. DHAKAPPA BROS.,**

Cloth Merchants,
SIRSI. N. KANARA.

ಹೊಸ ಮಾಲು. — ದರ ಅಗ್ಗ.

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: **1908.**

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರತ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಶೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K. Nayak Bros.
D. S. Pai.
K. N. Nayak.
Honavar Agent:-
R. V. Prabhu Esq.

K. Padmanabha Rao & Sons.
BELGAUM
Chief Agents for
Karnatak Districts & S. M. States

ಇಂಗ್ರಜರಿಗೂ ಹಿಂದುಸ್ಥಾನಿಯರಿಗೂ ಇರುವ ವಿಚಾರಭೇದ ನಿರೂಪಣ!

[ಹಿಂದಿನ ಪಾನಿನಿಂದ ಮುಂದರಿಸಿದ್ದು]

ವಿಚಾರ ಮಾಡುವದಿಲ್ಲ. ನಾವು ನಮ್ಮ ಲಾಭವನ್ನು ಮಾತ್ರ ನೋಡಿಕೊಳ್ಳುತ್ತೇವೆ. ದೇಶದ ಲಾಭದ ಕಡೆ ಅಲಕ್ಷ ಮಾಡುತ್ತೇವೆ. ನಮ್ಮ ಹಿಂದು ರಾಜರಾಗಲಿ, ಮುಸಲ್ಮಾನ ಬಾದಶಹಂರಾಗಲಿ ತಮ್ಮ ತಮ್ಮ ಪ್ರಾಂತದ ಲಾಭವನ್ನೇ ನೋಡಿಕೊಂಡು ವರ್ತಿಸಿದರು. ದೇಶದ ಲಾಭ-ಹಾನಿ ತಮ್ಮ ಲಾಭ-ಹಾನಿಯೆಂದು ಅವರು ಗ್ರಹಿಸಲಿಲ್ಲ. ನಮಗೂ ಇಂಗ್ರಜರಿಗೂ ಇರುವ ಭೇದವಿದೇ. ದೇಶದ ಉನ್ನತಿಯ ಅಭಾವದಲ್ಲಿ ವ್ಯಕ್ತಿಯ ಉನ್ನತಿಯಾಗದೆಂದು ಅವರ ನಿಶ್ಚಿತಾಭಿಪ್ರಾಯ. ನಮ್ಮಂತೆ ಇಂಗ್ರಜರಲ್ಲಿಯೂ ವರ್ತಕರಿದ್ದಾರೆ; ಅವರೂ ಲಾಭವನ್ನೇ ಕಾಂಕ್ಷಿಸುತ್ತಾರೆ. ಆದರೆ ತಮ್ಮ ಲಾಭದ ಜೊತೆಗೆ ದೇಶದ ಲಾಭವಾಗುತ್ತದೋ ಹೇಗೆ? ಎಂಬ ವಿಚಾರ ಮಾಡಿ ಸ್ವಂತ ಲಾಭ ಪಡೆದು ದೇಶದ ಲಾಭವನ್ನು ಸಾಧಿಸುತ್ತಾರೆ. ಅವರು ಇಲ್ಲಿ ವ್ಯಾಪಾರ ಮಾಡಿ ತಮ್ಮ ಲಾಭ ಪಡೆದು ದೇಶಕ್ಕಾಗಿ ಸಾಮ್ರಾಜ್ಯವನ್ನು ಗಳಿಸಿದ್ದಾರೆ. ಅದೇ ಕಾಲಕ್ಕೆ ನಮ್ಮ ವ್ಯಾಪಾರಿಗಳು ದೇಶದ ಲಾಭದ ವಿಚಾರ ಮಾಡದೆ ತಮ್ಮ ಸ್ವಂತ ಲಾಭದ ವಿಚಾರಮಾತ್ರ ಮಾಡಿ, ಅವರೊಡನೆ ವ್ಯಾಪಾರ ನಡೆಸಿ ತಮ್ಮ ಲಾಭವನ್ನೂ ದೇಶವನ್ನೂ ಕಳೆಕೊಂಡರು. ಈ ಮಾತನ್ನು ನಾವು ಚನ್ನಾಗಿ ಲಕ್ಷದಲ್ಲಿಡಬೇಕು. ದೇಶದ ಲಾಭದ ಹೊರತು ನಮ್ಮ ಲಾಭವಾಗುವದಿಲ್ಲ. ತಮ್ಮ ಲಾಭದಿಂದ ದೇಶದ ಲಾಭವಾಗುವಂತೆ ದೇಶದೊಳಗಿನ ಬುದ್ಧಿವಂತರು ತಮ್ಮ ವ್ಯಾಪಾರ ನಡಿಸಬೇಕು.

"ಇನ್ನೊಂದು ಮಾತು ಏನಂದರೆ:- ನಮ್ಮ ದೇಶದ ಜನರ ಸಹಾಯದ ಲಾಭವು ಇಂಗ್ರಜ ಜನರಿಗೆ ಸಿಗದಿದ್ದರೆ ಅವರಿಂದ ಎಂದಿಗೂ ಸಾಮ್ರಾಜ್ಯ ಸ್ಥಾಪನೆಯಾಗುತ್ತಿದ್ದಿಲ್ಲ. ನಮ್ಮ ಬುದ್ಧಿಯಿಂದಲೇ ನಾವು ಸಾಮ್ರಾಜ್ಯ ನಡಿಸಲು ಇಂಗ್ರಜರಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಸಾಮ್ರಾಜ್ಯದ ಆಡಳಿತೆಯಲ್ಲಿ ನಮ್ಮಿಂದ ಒದಗುವ ಬೆಂಬಲದ ಗ್ರಹಿಕೆಯನ್ನು ನಾವು ಪಡೆಯಬೇಕು; ನಮ್ಮ ಬೆಂಬಲ ತಪ್ಪಿದರೆ ಸಾಮ್ರಾಜ್ಯವು ಅಲ್ಲಿಂದಲ್ಲೇ ಒಮ್ಮೆಲೇ ನಿಂತುಬಿಡುವದು; ಎಂಬದನ್ನು ನಾವು ಗ್ರಹಿಸಬೇಕು. ಈ ಗ್ರಹಿಕೆಯನ್ನು ಜನಸಾಮಾನ್ಯರಲ್ಲಿ ಹುಟ್ಟಿಸಿ ರಾಷ್ಟ್ರಕಾರ್ಯ ಸಾಧಿಸಲು ಕೊಂಗ್ರೆಸ್ಸು ದುಡಿಯುತ್ತದೆ. ನಾವೇ ಸಾಮ್ರಾಜ್ಯಾಡಳಿತೆಯ ಯಂತ್ರದ ಅಂಗ ವೆಂಬ ಆತ್ಮವಿಶ್ವಾಸವು ಹುಟ್ಟಬೇಕು. ಅಂಥ ಭಾವನೆ ಹುಟ್ಟದನಕ ನಮಗೆ ಸ್ವರಾಜ್ಯ ಸಿಗದು. ನೀವು ಅಂತಃಕರಣದೊಳಗಿಂದ ಭಯವನ್ನು ಸಂಪೂರ್ಣವಾಗಿ ತೊರೆದು ರಾಷ್ಟ್ರೀಯ ಸಭೆಯ ಸಭಾಸದರಾಗಬೇಕು. ಕಾಯಿದೆಭಂಗಕ್ಕೆ ಈಗ ಕೃತಡೆದಿದ್ದೇವೆ; ಆದರೆ ಅದರಿಂದ ಕೊಂಗ್ರೆಸ ಕೆಲಸ ನಿಂತಿಲ್ಲ; ನಿಲ್ಲಲಾರದು. ಸಂಪೂರ್ಣ ಸ್ವಾತಂತ್ರ್ಯ ಸಿಗುವ ತನಕ ಈ ಕೆಲಸ ನಡೆಯುವದು; ನಡೆಯಲೇ ಬೇಕು.

"ಮುಖ್ಯವಾಗಿ ರಾಷ್ಟ್ರೀಯ ಸಭೆಯು ಎರಡು ವಿಷಯಗಳ ಮೇಲೆ ವಿಶೇಷ ಕಟಾಕ್ಷವನ್ನಿಟ್ಟಿದೆ: (೧) ರಾಷ್ಟ್ರೀಯ ಸಭೆಗೆ ಹೆಚ್ಚೆಚ್ಚಾಗಿ ಸಭಾಸದರನ್ನು ಸೇರಿಸಿ ಕೊಂಗ್ರೆಸ್ಸನ್ನು ಬಲಪಡಿಸುವದು; (೨) ವಿಧಾಯಕ ಕಾರ್ಯಕ್ರಮ. ಈ ಎರಡು ಸಂಗತಿಗಳಲ್ಲಿ ನಿಮಗೆ ಯಾವದನ್ನು ಮಾಡಲು ಸಾಧ್ಯವಿದೆಯೋ ಅದನ್ನು ಮಾಡಿರಿ. ರಚನಾತ್ಮಕ ಕಾರ್ಯದ ವಿಶೇಷವೆಂದರೆ ಪ್ರೇಮ. ಜನಸಾಮಾನ್ಯರಲ್ಲಿ ಪ್ರೇಮ ಬೆಳೆಯುವಂತೆ ನಾವೆಲ್ಲರೂ ವರ್ತಿಸಬೇಕು. ಸಮಸ್ತರೂ ಒಂದೇ ದೇಶದ, ಒಂದೇ ಜನಾಂಗದ ಅಣ್ಣ-ತಮ್ಮಂದಿರೆಂಬ ಭಾವನೆಯನ್ನು ಹಿಡಿಯಬೇಕು. ಈ ದೇಶದೊಳಗೆ ಅನೇಕ ಜಾತಿಗಳಿವೆ; ಧರ್ಮಗಳಿವೆ; ಪಂಗಡಗಳಿವೆ. ಅವುಗಳಿಗಾಗಿ ನಾವು ಮತ್ಸರಭಾವ ಹಿಡಿದು ಜಗಳಾಡುತ್ತಿದ್ದರೆ ನಮ್ಮೀ ರಾಷ್ಟ್ರೀಯ ಸಂಗ್ರಾಮದಲ್ಲಿ ಸರಕಾರದೊಡನೆ ನಾವು ಪ್ರತಿಭಟರಾಗಿ ಹೋರಾಡಲಾರೆವು. ಹಿಂದು, ಮುಸಲ್ಮಾನ, ಕ್ರಿಶ್ಚನ್, ಪಾರ್ಸಿ, ಹರಿಜನ ಎಂಬ ಭೇದವನ್ನು ನಾವು ಎಣಿಸಲೇ ಕೂಡದು. ಈ ದೇಶವು ಯಾವದೊಂದು ವ್ಯಕ್ತಿಯ ದೇಶವಲ್ಲ; ಇದು ಸಮಸ್ತರದೂ ದೇಶ. ಸಮಸ್ತರಿಗೂ ಈ ದೇಶದಲ್ಲುಳಿಯಲು ಅಧಿಕಾರವಿದೆ. ಅಧಿಕಾರವಿಲ್ಲದೆ ಈ ದೇಶದಲ್ಲಿ ಯಾವ ವ್ಯಕ್ತಿಯೂ ಇರುವದಿಲ್ಲ. ಭೂಮಾತೆಯು ಕಾಳುಕಡಿಗಳನ್ನು ಅನುಗ್ರಹಿಸುವಾಗ ಹಿಂದು-ಮುಸಲ್ಮಾನ ಎಂಬ ಭೇದಭಾವ ಹಿಡಿಯುವದಿಲ್ಲ. ಎಲ್ಲರ ಭೂಮಿಯಲ್ಲಿಯೂ ಒಂದೇ ತೆರನಾಗಿ ಬೆಳೆ ಕೊಡುತ್ತಾಳೆ; [illegible] ಅನುಗ್ರಹಿಸುತ್ತದೆ. [illegible] ಒದಗುತ್ತದೆ. ಪಾರತಂತ್ರ್ಯದ ಕಷ್ಟದಿಂದ ಎಲ್ಲರಿಗೂ [illegible] ಮುಸಲ್ಮಾನ [illegible] ಈ [illegible] ಭೇದ [illegible] ಮಾನಿಸುವದರಿಂದ ನಮ್ಮದೂ ನಾಶ [illegible] ಗುತ್ತದೆ.

"ನಮ್ಮೀ ದೇಶದೊಳಗೆ ದಾರಿದ್ರ್ಯ ಬೇರೂರಿಕೊಂಡಿದೆ. ಇದನ್ನು ನಾವು ಹರಾಂಬರಿಸಬೇಕು. ಉದ್ಯೋಗ ಮಾಡಸಿದ್ಧರಿದ್ದ ಸಾವಿರಾರು ಮಂದಿಗಳು ನಿರುದ್ಯೋಗಿಗಳಾಗಿ ಕೂಳಿಗೆ ಗತಿಯಿಲ್ಲದವರಾಗಿದ್ದಾರೆ. ಜನರಿಗೆ ಯಾವ ಉದ್ಯೋಗ ಮಾಡಬೇಕೆಂಬದು ಸೂಚಿಸದು. ವಿದೇಶಗಳಲ್ಲಿ ಈ ಪ್ರಕಾರ ನಿರುದ್ಯೋಗ ಹಬ್ಬಿದರೆ ಆ ದೇಶದ ಸರಕಾರವು ಉದ್ಯೋಗವನ್ನು ತೋರಿಸಿಕೊಟ್ಟು ಜನರಿಗೆ ಪ್ರಪಂಚ ಸಾಗಿಸಲು ಯೋಗ್ಯ ಏರ್ಪಾಟು ಮಾಡುತ್ತದೆ. ಇಲ್ಲಿ ಆ ಪ್ರಕಾರ ನಿರುದ್ಯೋಗ ನಿವಾರಣೆಯ ಸರಕಾರಿ ವ್ಯವಸ್ಥೆಯಿಲ್ಲ. ಅದರಿಂದ ಕೋಟ್ಯವಧಿ ಬಾಂಧವರು ಉದ್ಯೋಗವಿಲ್ಲದೆ ಉಪವಾಸ ಬಿದ್ದಿದ್ದಾರೆ. ಅವರ ವಿಚಾರವನ್ನು ನಾವು ಸ್ವತಃ ಮಾಡಬೇಕು. ಹಳ್ಳಿ-ಹಳ್ಳಿಗಳಲ್ಲಿ ನಾವು ಅನೇಕ ವ್ಯವಸಾಯಗಳನ್ನು ಮಾಡಬಹುದು. ಅವನ್ನು ಉದ್ಧರಿಸಬೇಕಾದರೆ ನಮ್ಮ ವಿಚಾರ ಪದ್ಧತಿಯನ್ನು ನಾವು ತಿದ್ದಿಕೊಳ್ಳಬೇಕು. ಈ ಹೊತ್ತು ನೀವು ಮೆರವಣಿಗೆ ತೆಗೆದಿರಿ; ಅದರೊಳಗೆ ನೀವು ಹಳೇ ಪದ್ಧತಿಯನ್ನು ಅನುಸರಿಸಿದಿರಿ. ಹೋದ-ಹೋದಲ್ಲಿ ಹಳೇ ಪದ್ಧತಿ ಪ್ರಚಾರದಲ್ಲಿ ಇರುವದನ್ನು ನಾನು ನೋಡುತ್ತೇನೆ. ಪೆಟ್ರೋಮೆಕ್ಸ, ದೀಪಗಳ ಬದಲಿಗೆ ಹಳೇ ಪದ್ಧತಿಯ ಹಿಲಾಲುಗಳನ್ನು ಹಿಡಿದು ಮೆರವಣಿಗೆಯನ್ನು ತೆಗೆದಿರಿ. ಪೆಟ್ರೋಮೆಕ್ಸ ದೀಪ ಮೊದಲಾದ ಈಗಿನ ಪದ್ಧತಿಯನ್ನು ಸಂಪೂರ್ಣವಾಗಿ ಬಿಡಬೇಕೆಂದು ನನ್ನ ಹೇಳಿಕೆಯಲ್ಲ;

THE INDIAN MERCANTILE INSURANCE CO. LTD.,

BOMBAY.

(Established in 1907)

A Solid and purely Indian Life Office which has substantial growth under the Chairmanship of the late Sir Munmohandas Ramji, Kt.

WANTED Energetic & Influential Agents and experienced Organisers, both on commission & pay for the Karnatak Districts.

For particulars apply to:-

G. Yellapurkar & Sons,
Chief Agents for Karnatak,
Market Square, KARWAR.

ಇಂಡಿಯನ್ ಮರ್ಕೆಂಟೈಲ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್,

ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು.

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿ ಹೊಂದಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಹೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ಪಗಾರ ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆ ಪೇಟೆ, ಕಾರವಾರ.

ಬಡವರಿಗೆ ಅನ್ನ ನೀಡುವ ಜಿನಸುಗಳನ್ನು ಜನರು ಉಪಯೋಗಿಸತಕ್ಕದ್ದು.

ನೆಪ್ಪಿಸುವುದಕ್ಕಿಂತ ಬಡವರಿಗೆ ಲಾಭವಾಗುವ ವಸ್ತುವನ್ನು ವಿಚಾರಿಸಿ ಅದನ್ನು ಉಪಯೋಗಿಸಬೇಕು. 'ಇದರಿಂದ ಬಡವರಿಗೆ ಹಿತವಾಗುತ್ತದೋ ಹೇಗೆ?' ಎಂಬುದನ್ನು ಮೊಟ್ಟಮೊದಲು ವಿಚಾರಿಸಬೇಕು. ನಾವು ಉಪಯೋಗಿಸುವ ಸರಕಿನಿಂದ ನಮ್ಮ ಹಳ್ಳಿಯ ಉದ್ಯೋಗ ಕಡಿಮೆಯಾಗುತ್ತಿದ್ದರೆ, ಪರದೇಶಿ ಉದ್ಯೋಗ ಬೆಳೆಯುತ್ತಿದ್ದರೆ ಅದನ್ನು ನಾವು ತ್ಯಜಿಸಬೇಕು. ಬಡ ಜನರಿಗೆ ಲಾಭವಾಗುವ ಆ ಜಿನಸನ್ನೇ ನಾವು ಉಪಯೋಗ ಮಾಡಿಕೊಳ್ಳಬೇಕು. ಜಿನಸಿನ ಉಪಯೋಗದಿಂದ ಕೆಲ ಮಟ್ಟಿಗೆ ನಮಗೆ ಹೆಚ್ಚು ಖರ್ಚು-ಕಷ್ಟ ತಗಲುತ್ತಿದ್ದಾಗ್ಯೂ ನಾವು ಅದನ್ನು ಸಂತೋಷದಿಂದ ಸಹಿಸಿಕೊಳ್ಳಬೇಕು. ಅಕ್ಕಿ-ಹಿಟ್ಟು ಮುಂತಾದವುಗಳನ್ನು ಗಿರಣಿಯ ಮೇಲೆ ತಯಾರಿಸಿಕೊಂಡು ನಾವು ಉಪಯೋಗಿಸಿಕೊಳ್ಳುತ್ತೇವೆ. ಆದರಿಂದ ಎಷ್ಟು ಜನರು ಕೂಲಿಗೇಡಿಗಳಾದರೆಂದು ನಾವೆಣಿಸುವದಿಲ್ಲ. ತಾನು ಸಾವಿರಾರು ಜನರಿಗೆ ಹೊಟ್ಟೆಗೆ ಕೊಡುತ್ತೇನಾಗಿ ಗಿರಣಿ ಸಾವಕಾರನು ಡೌಲಿನಿಂದ ಹೇಳುತ್ತಾನೆ; ನಾವು ಈ ಹೇಳಿಕೆಯ ಸತ್ಯಾಸತ್ಯತೆಯನ್ನು ಪರೀಕ್ಷಿಸುವದಿಲ್ಲ. ಗಿರಣಿಯಿಂದ ಸಾವಿರಾರು ಜನರಿಗೆ ಕೂಲಿ ದೊರೆತರೆ ನೆರೆಹೊರೆಯ ಹಳ್ಳಿಗಳಲ್ಲಿ ವಾಸಿಸುವ ೧೦ ಸಾವಿರ ಜನರು ಕೆಲಸದ ಅಭಾವದಲ್ಲಿ ಹೊಟ್ಟೆಗಿಲ್ಲದೆ ಪೇಚಾಡುತ್ತಾರೆ. ಈ ನಮೂನೆಯಿಂದ ಒಕ್ಕಲತನದ ಹೊರತು ಬಡವರಿಗೆ ಕೈಗಾರಿಕೆಗಳೇ ಉಳಿದಿಲ್ಲ. ಎಲ್ಲರೂ ಬೇಸಾಯದಿಂದಲೇ ಜೀವಿಸುವ ಪ್ರಸಂಗ ಒದಗಿಬಂದಿದೆ. ಅದು ಕಾರಣ ರಾಷ್ಟ್ರೀಯ ಸಭೆಯವರು ಅಖಿಲ ಭಾರತೀಯ ಗ್ರಾಮೋದ್ಯೋಗಿಕ ಸಂಘಕ್ಕೆ ಆಶ್ರಯ ಕೊಡಬೇಕಾಗಿ ಅಪ್ಪಣೆ ಮಾಡಿದ್ದುಂಟು. ನೀವೆಲ್ಲರೂ ಅದರಂತೆ ವರ್ತಿಸಿ ಬಡವರಿಗೆ ನೆರವಾಗಬೇಕಾಗಿ ನಾನು ಆಗ್ರಹದಿಂದ ಹೇಳುತ್ತೇನೆ.

"ನಿಮ್ಮ ಮಾನಪತ್ರದಲ್ಲಿ ಬಿಹಾರ ಭೂಕಂಪದ ಉಲ್ಲೇಖವಿದೆ. ನನ್ನ ಬಿಹಾರ ಪ್ರಾಂತ ಬಡಪ್ರಾಂತ. ಭೂಕಂಪದಿಂದ ಅದು ಗತಿಗೇಡಾಯಿತು. ನಿಸರ್ಗ ಕೋಪದಿಂದ ಒಂದು ಪ್ರಾಂತದ ಮೇಲೆ ಒದಗಿದ ಆಪತ್ತು ಇಡೀ ದೇಶದ್ದೆಂದು ಇತರ ಪ್ರಾಂತಗಳು ಭಾವಿಸಿ ಸಂಕಟನಿವಾರಣಕ್ಕಾಗಿ ಧಾವಿಸಿಬಂದವು. ಹಿಂದುಸ್ಥಾನ ದೇಶದೊಳಗಿನ ಏಕರಾಷ್ಟ್ರೀಯ ಭಾವನೆಯು ಈ ಆಪತ್ತಿನಿಂದ ಲೋಕಕ್ಕೆ ಪ್ರಕಟವಾಯಿತು. ಭೂಕಂಪ ದುಃಖಕ್ಕಿಂತ ಏಕರಾಷ್ಟ್ರೀಯ ಭಾವನೆಯ ಪ್ರದರ್ಶನದ ಸುಖ ನೋಡಿ ನನಗೆ ಒಂದು ಪ್ರಕಾರದ ಗೌರವ ಉಂಟಾಗಿದೆ. ಭೂಕಂಪಗ್ರಸ್ತರ ಸಂಕಟನಿವಾರಣಕ್ಕಾಗಿ ನೆರವಾದವರಿಗೆಲ್ಲ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ತಾವೆಲ್ಲರೂ ಶಾಂತಚಿತ್ತದಿಂದ ನನ್ನ ಭಾಷಣ ಕೇಳಿಕೊಂಡ ಬಗ್ಗೆ ಬಂಧು-ಭಗಿನಿಯರೇ, ನಿಮಗೆಲ್ಲರಿಗೆ ಧನ್ಯವಾದಗಳು." ಈ ಪ್ರಕಾರ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ಸುಬೋಧವಾದ ಹಿಂದೀ ಭಾಷೆಯಲ್ಲಿ ಮುಕ್ಕಾಲು ಘಂಟೆಯ ತನಕ ಭಾಷಣ ಮಾಡಿದರು. ಅವರ ಭಾಷಣವನ್ನು ಪ್ರಾಂತಿಕ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ರಾ| ರಾಮರಾವ ಹುಕ್ಕೇರಿಕರರವರು ಕನ್ನಡದಲ್ಲಿ ಭಾಷಾಂತರ ಮಾಡಿ ಆಗಿಂದಾಗ ಹೇಳುತ್ತಿದ್ದರು. ಪಟಾಂಗಣದ ಒಳಗೂ ಹೊರಗೂ ನೆರೆದ ೮-೯ ಸಾವಿರ ಜನಸ್ತೋಮವು ಚಿತ್ರಾರ್ಪಿತವಾದಂತೆ ಶಾಂತಚಿತ್ತದಿಂದ ಆಲಿಸುತ್ತಿತ್ತು; ರಾಷ್ಟ್ರಪತಿಗಳ ಭಾಷಣ ಮುಗಿದೊಡನೆ ಚಪ್ಪಾಳೆಗಳ ಘೋಷವಾಯಿತು. 'ವಂದೇ ಮಾತರಮ್' ಗೀತವಾದ ಬಳಿಕ ಮಹಾಜನರ ಆಗ್ರಹದ ಮೇರೆಗೆ ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರು ನುಡಿದದ್ದೇನಂದರೆ:— "ಬಂಧು-ಭಗಿನಿಯರೇ, ರಾಷ್ಟ್ರಪತಿಗಳ ಭಾಷಣವಾದ ಬಳಿಕ ನಾನು ನಿಮಗೆ ಹೇಳತಕ್ಕದ್ದೇನಿಲ್ಲ; ಬೇರೆ ಯಾರೂ ಹೇಳಬೇಕಾಗಿದ್ದಿಲ್ಲ. ನನಗೇನು ಭಾಷಣ ಮಾಡಬೇಕೆಂಬುದು ಸೂಚಿಸುವದೂ ಇಲ್ಲ. ಆದರೆ ಒಂದು ಮಾತು ಹೇಳುತ್ತೇನೆ. ನಮ್ಮ ಜನರಲ್ಲಿ ಒಂದು ಕೆಟ್ಟ ಚಟವುಂಟು. ಪ್ರತಿಯೊಂದಕ್ಕೆ ನಾವೊಂದು ಆಚಾರರೂಪ (form) ಕೊಡುತ್ತೇವೆ. ನಮ್ಮ ಧರ್ಮಾಚಾರಗಳಲ್ಲಿ ಒಳಗೊಂಡ ತತ್ವಗಳ ಅನುಷ್ಠಾನ ಮಾಡುವದಕ್ಕಿಂತ ಆಚಾರಗಳ ಆಡಂಬರವೇ ಹೆಚ್ಚು. ಮಂತ್ರಘೋಷ, ಘಂಟಾನಾದ ಇವುಗಳ ಮೇಲೆ ನಮ್ಮ ಧರ್ಮ ಕೂಡಿಕೊಂಡಿದೆ. ನಮ್ಮ ರಾಜಕಾರಣದಲ್ಲಿಯೂ ನೀವು ಹೀಗೆ ಮಾಡಬಾರದು. [illegible] ಕೀರ್ತನೆಯನ್ನು ಕೇಳಿದಂತೆ ನೀವು ಇದೊಂದು ಕೀರ್ತನೆಯೆಂದು ತಿಳಕೊಳ್ಳಬಾರದು. ಸಂಜೆ ಕೀರ್ತನೆ ಕೇಳಿ ಪಾಪ ತೊಳೆಯುತ್ತೀರಿ; ಹಗಲಿಗೆ ನಿತ್ಯ ನಿಯಮದಂತೆ ಸುಳ್ಳುತನ, ಠಕ್ಕತನ ಮೊದಲಾದವುಗಳನ್ನು ಆಚರಿಸುತ್ತೀರಿ. ಧರ್ಮಾಚಾರಗಳಿಗೂ ಮಾನವನ ನಿತ್ಯ ಜೀವನಕ್ರಮಕ್ಕೂ ಸಂಬಂಧವಿರುವದಿಲ್ಲ. ಇದು ತರವಲ್ಲ. ಈ ಪರಂಪರೆಯನ್ನು ನೀವು ರಾಜನೀತಿಯಲ್ಲಿ ತರಕೂಡದು. 'ಮೆರವಣಿಗೆಯಿಂದ ಹೆಚ್ಚಿನ ಲಾಭವಿಲ್ಲ. ಜನರ ಶಕ್ತಿಯನ್ನು ಈ ಪ್ರಕಾರ ಅಪವ್ಯಯ ಮಾಡಬಾರದು. ಇಂಥ ಆಚಾರಕ್ಕೆ ಉತ್ತೇಜನ ಕೊಡಲು ನಾವು ಬಂದಿಲ್ಲ. ನಾವು ರಾಷ್ಟ್ರಪತಿಗಳೊಡನೆ ಬಂದವರು ಕಾರ್ಯ ಮಾಡುವ ಜನರು. ನಮಗೆ ಇಂಥ ಮೆರವಣಿಗೆಗಳಿಂದ ನೀವು ಕೆಡಿಸಬಾರದು! ಧರ್ಮ-ತತ್ವಗಳಿಗೆ ಒಂದು ಆಚಾರದ ರೂಪ ಕೊಟ್ಟು ಅವುಗಳಿಗೂ ನಿತ್ಯ ಜೀವನಕ್ರಮಕ್ಕೂ ಇರುವ ಸಂಬಂಧ ತುಂಡರಿಸಿ ಧರ್ಮ-ಗುರುಗಳಿಗೆ ಮೆರವಣಿಗೆ-ಮಿಷ್ಟಾನ್ನಭೋಜನ ಮೊದಲಾದ ಆದರಾತಿಥ್ಯದಿಂದ ನೀವು ಕೆಡಿಸಿಬಿಟ್ಟಿದ್ದೀರಿ; ಹಾಗೇ ನೀವು ನಮಗೆ ಕೆಡಿಸಬಯಸುತ್ತೀರೇನು? ನಮ್ಮ ಶಕ್ತಿಯನ್ನು ಕುಂದಿಸಬೇಡಿರಿ. ಮೆರವಣಿಗೆ, ಮಾನಪತ್ರ ಇವುಗಳಿಗೆ ಖರ್ಚಾಗುವ ಹಣದಿಂದ ಎಷ್ಟೋ ಜನರು ರಾಷ್ಟ್ರೀಯ ಸಭೆಯ ಸಭಾಸದರಾಗುತ್ತಿದ್ದರು. ಅನೇಕರು ರಾಷ್ಟ್ರಪತಿಗಳಿಗೆ ಪುಷ್ಪಹಾರಗಳನ್ನೂ, ನೂಲಿನ ಮಾಲೆಗಳನ್ನು ಅರ್ಪಿಸಿದ್ದಾರೆ. ವಿದೇಶಿ ಅರಿವೆಯ ವರ್ತಕನು ರಾಷ್ಟ್ರಪತಿಗಳಿಗೆ ನೂಲಿನ ಮಾಲೆ ಹಾಕಿ ವಿದೇಶಿ ಅರಿವೆಯ ಮಾರಾಟದ ಪಾಪದಿಂದ ಪುನೀತನಾದೆನೆಂದು ಎಣಿಸುತ್ತಾನೆ. ಕೊಂಗ್ರೆಸ್ಸಿನ ಕರ್ತವ್ಯವು ಮುಗಿಯಿತೆಂದು ಆತನ ಎಣಿಕೆ. ವಿದೇಶಿ ಅರಿವೆಯ ವ್ಯಾಪಾರದ ಪಾಪವೆಲ್ಲ ನಮ್ಮ ತಲೆಯ ಮೇಲೆ ಅತ ಹೊರಿಸಿಬಿಡುತ್ತಾನೆ. ಮಹಾತ್ಮರ ಮೇಲೆ ನಿಮಗೆ ಪ್ರೇಮವಿದ್ದರೆ ಅವರು ನುಡಿಯುವಂತೆಯೇ ನುಡಿಯಬೇಕು. ಅಂದರೆ ಮಾತ್ರ ಮಹಾತ್ಮರ ಮೇಲೆ ನಿಮಗೆ ನಿಜವಾದ ಭಕ್ತಿಯುಂಟೆಂದು ನಾನು ತಿಳಿಯುವೆನು. ನಾನು ನಿಮ್ಮ ಅತಿಥಿ. ನಿಮಗೆ ನಾನು ಇಂಥ ಬಿರುಸು ಮಾತುಗಳನ್ನಾಡಬಾರದಿತ್ತು. ಆದರೆ ದೇಶಕ್ಕಾಗಿ ಕರ್ತವ್ಯವೆಂದು ತಿಳಿದು ನಾವು ಬಿರುಸು ಮಾತುಗಳನ್ನಾಡಬೇಕಾಯಿತು. ಈ ಬಗ್ಗೆ ನನಗೆ ನೀವು ಕ್ಷಮಿಸಬೇಕು. ನಾನು ಮಾತನಾಡಿದ ವಿಷಯಗಳ ಕುರಿತು ರಾತ್ರಿ ಒಳ್ಳೇ ವಿಚಾರ ಮಾಡಬೇಕು." ಈ ಪ್ರಕಾರ ಆಚಾರ್ಯ ಕೃಪಾಲಾನಿಯವರ ಭಾಷಣವಾದ ಬಳಿಕ ಸಭೆಯು 'ವಂದೇ ಮಾತರಮ್' ಜಯಘೋಷದಲ್ಲಿ ಸಭೆ ವಿಸರ್ಜನ ಹೊಂದಿತು.

ರಾಷ್ಟ್ರಪತಿಗಳು ರಾತ್ರಿ ವಿಶ್ರಮಿಸಿದರು. ಸಭೆ ಮುಗಿದ ಬಳಿಕ ಕರ್ನಾಟಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ, ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾದ ರಾ| ಹೊಸಮನಿ ಸಿದ್ದಪ್ಪನವರೂ, ಜಿಲ್ಲಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ರಾ| ಸುಬ್ರಾವ ಹಳದೀಪುರಕರರವರೂ ಬಂದು ತಲ್ಪಿದರು. ಅವರೆಲ್ಲರಿಗೆ ಆದರಸತ್ಕಾರದಿಂದ ಸ್ವಾಗತ ಸಮಿತಿಯವರು ಬರಮಾಡಿಕೊಂಡರು. ಬೆಳಗಿನ ೫ ಘಂಟೆಗೆ ಎಲ್ಲರ ಪ್ರಾತರ್ವಿಧಿ, ಸ್ನಾನ, ಉಪಹಾರ ಮುಗಿದ ಬಳಿಕ ರಾಷ್ಟ್ರಪತಿಗಳೊಡನೆ ಭಾವಚಿತ್ರ ಕೊಳ್ಳೋಣಾಯಿತು. ಇಷ್ಟಾಗಲಿಕ್ಕೆ ೭|| ಹೊಡೆಯಿತು. ಶಿರ್ಶಿಗೆ ಹೋಗುವ ಗಾಡಿಯು ಮೂಲಕ ಸ್ವಾಗತ ಸಮಿತಿಯವರ ಪೂರ್ವಾಲೋಚನೆಯಂತೆ ಬಂದರ ರಸ್ತೆ, ಗುಜ್ಜರ ಗಲ್ಲಿ, ಕೆಳಗಿನ ಪೇಟೆ ಮಾರ್ಗವಾಗಿ ಮೆರವಣಿಗೆ ತೆಗೆಯಲು ಅನುಕೂಲವಾಗಲಿಲ್ಲ. ರಾಷ್ಟ್ರಪತಿಗಳು ಜನರ ಸಮಾಧಾನಕ್ಕಾಗಿ ನಡಕೊಂಡು ಹೋಗಲಿಕ್ಕೆ ಸಹ ಸಿದ್ಧರಿದ್ದರು. ಆದರೆ ಮೆರವಣಿಗೆಯಿಂದ ಎಷ್ಟೋ ಜನ ಧೂಳಿಯ ಉಪಟಳದಿಂದ ದಮ್ಮಿನ ವಿಕಾರಕ್ಕೆ ಪ್ರಕೋಪವಾಗುತ್ತಿದ್ದದರಿಂದ ತಮ್ಮ ಕ್ಷೇಮೋಪಚಾರ ಮಾಡಬೇಕಾಗಿ ಬಾಬು ರಾಜೇಂದ್ರಪ್ರಸಾದರವರು ಬಹು ದಾಕ್ಷಿಣ್ಯದಿಂದ ಸ್ವಾಗತ ಸಮಿತಿಯವರ ಕಡೆ ತಿಳಿಸಿದರು. ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರು ನಿಷ್ಠುರತನದಿಂದ ಮೆರವಣಿಗೆ ಹೊರಡಿಸಲಿಕ್ಕೆ ಆತಂಕ ಮಾಡಿದರು. ಆದರಿಂದ ಈ ಭಾಗದಲ್ಲಿ ಮೆರವಣಿಗೆಯಾಗಲಿಲ್ಲ; ನಡುಪೇಟೆಯಿಂದ ಮೂರುಕಟ್ಟಿ, ಬಸ್ತೀಪೇಟೆ ಮಾರ್ಗವಾಗಿ ಅಧ್ಯಕ್ಷರ ಮೋಟಾರು ಒಯ್ಯಲಾಯಿತು.

ಸ್ವಾಗತ ಸಮಿತಿಯವರ ವಿನಂತಿ ಮೇರೆಗೆ ಪುರಜನರು ರಾಷ್ಟ್ರೀಯ ನಿಷ್ಠೆಯಿಂದ ಸ್ವಾಗತ ಕಾರ್ಯದಲ್ಲಿ ನೆರವಾಗಿದ್ದಾರೆ. ತೋರಣಗಳನ್ನು ಹಾಕಿ ಮೆರವಣಿಗೆ ಹೋಗುವ ಮಾರ್ಗಗಳನ್ನು ಶೃಂಗರಿಸಿದರು. ನಾರಾಯಣ ನಾಗಪ್ಪ ಶಾನಭಾಗ ತಾಮ್ರದ ಅಂಗಡಿಯವರು ರಾಷ್ಟ್ರಪತಿಗಳಿಗೆ ೧ ಕೊಡಪಾನವನ್ನು ಕಾಣಿಕೆಯಾಗಿ ಅರ್ಪಿಸಿದರು. ಬಸ್ತಿಹಿತ್ತಲ ಅಲ್ಲಿ ಸಾಹೇಬ ಆದಮ ಸಾಹೇಬರವರು ತಮ್ಮ ಅಂಗಡಿಯ ಮುಂದೆ ಮೋಟಾರು ನಿಲ್ಲಿಸಿಕೊಂಡು ಅಧ್ಯಕ್ಷರಿಗೆ ಪುಷ್ಪಹಾರವನ್ನು ಅರ್ಪಿಸಿ ಸುಗಂಧ ದ್ರವ್ಯಗಳಿಂದ ಸಂತೈಸಿದರು. ಸಭಾಸ್ಥಾನದ ಸಿಂಗಾರಕ್ಕಾಗಿ, ಊಟ-ಉಪಚಾರಕ್ಕಾಗಿ ಸ್ವಯಂಸೇವಕರೂ, ಊರವರೂ ಅವಶ್ಯವುಳ್ಳ ಸರಕುಗಳನ್ನೂ, ಪರಿಶ್ರಮವನ್ನೂ ಯಥಾಶಕ್ತಿ ಪೂರೈಸಿದ್ದಾರೆ. ರಾ| ಕಾಗಾಲ ಗೋವಿಂದ ಅನಂತ ಪೈರವರು ತಮ್ಮ ವಿಶಾಲ ಆವಾರವನ್ನು ಸ್ವಾಗತ ಸಮಿತಿಯವರಿಗೆ ಒಪ್ಪಿಸಿದ್ದಲ್ಲದೆ, ಅಲ್ಲಿಯ ತಯಾರಿಯಲ್ಲಿ ಹಗಲಿರುಳು ದುಡಿದ ಬಗ್ಗೆ ಊರವರು ಕೃತಜ್ಞರಾಗಿದ್ದಾರೆ. ಮಹಾತ್ಮರ ಆದರಾತಿಥ್ಯದ ಸಮಯದಲ್ಲಿಯೂ ಅವರು ಈ

[೭ನೇ ಪಾನಿನ ಮೇಲೆ ಮುಂದರಿಸಿದೆ.]

ಸುಪೆಯ ಪತ್ರ.

ಜಿಲ್ಲಾ ಬೋರ್ಡಿನ ಸಭೆಯ ವೃತ್ತಾಂತ.

(ಸುಪೆ ತಾ ೨೬-೪-೩೫)

ಇಲ್ಲಿ ಈ ಸಮಯ ಒಳ್ಳೇ ತಂಪು ಕಾಣುತ್ತದೆ ಹೊರಗಿಂದ ಬಂದವರಿಗೆ ನಾಲ್ಕಾರು ದಿನ ಉಳಕೊಂಡು ಹೋಗಲು ಒಳ್ಳೇ ಸುಖ. ಆದರೆ ಇಲ್ಲಿ ಇದ್ದವರಿಗೆ ಮಾತ್ರ ಈ ಋತುಮಾನ ಒಳ್ಳೇ ಉಪದ್ರವಕಾರಕ. ಈ ವಾರ ಇಲ್ಲಿ ಜ್ವರದ ಉಪದ್ರವ ಇನಷ್ಟು ಯಂಥಾ ಜ್ವರದಿಂದ ಬಹಳೇ ಜನರು ತೀರಿಕೊಂಡರು ಒಕ್ಕಲಿಗರ ಗರ್ಭಿಣಿ ಹೆಂಗಸರು ಬದುಕುವದು ಕಠಿಣ. ಗರ್ಭಿಣಿಯಾದ ಬಳಿಕ ಮೈತುಂಬ ಬೀಗು ಬಂದು ಹೆಂಗಸರು ತೀರಿಕೊಳ್ಳುತ್ತಾರೆ ಒಕ್ಕಲಿಗರು ಅಜ್ಞಾನಿಗಳು. ಔಷಧೋಪಚಾರ ಪಡಕೊಳ್ಳುವವರಲ್ಲ. ಒಳಿದೇಳಿ ಔಷಧೋಪಚಾರ ಮಾಡುವ ವ್ಯವಸ್ಥೆಯೂ ಇಲ್ಲಿ ಇಲ್ಲ. ಇದರಿಂದ ಲೋಕಸಂಖ್ಯೆ ಇತ್ತಲಾಗಿ ಹೇರಳ ಕುಗ್ಗಿತು. ಈ ಪೇಟೆಯಲ್ಲಿ ೭೦ ಸಾವಿರ ಜನವಸತಿ ಇತ್ತು. ಈಗ ೧೬ ಸಾವಿರಕ್ಕೆ ತಗ್ಗಿದೆ ಸರಕಾರವು ಲೋಕಸಂಖ್ಯೆ ಕುಗ್ಗುವ ಕಾರಣವನ್ನು ಪರಿಶೋಧಿಸಿ ಉಪಾಯಯೋಜನೆ ಮಾಡದಿದ್ದರೆ ಇನ್ನು ಕೆಲ ವರ್ಷಗಳಲ್ಲಿಯೇ ಈ ಪೇಟೆ ನಾಮ ಮಾತ್ರ ಉಳಿದೀತು

ಇಲ್ಲಿ ಈ ವಾರದಲ್ಲಿ ಜಿಲ್ಲಾ ಬೋರ್ಡಿನ ಸಭೆ ಸೇರಿತು. ಸಭೆಗೆ ೧೮ ಮಂದಿ ಸಭಾಸದರು ಹಾಜರಿದ್ದರು. ಸಭೆಯಲ್ಲಿ ನಡೆದ ಮುಖ್ಯ ಮುಖ್ಯ ವಿಷಯಗಳ್ಯಾವೆಂದರೆ— ಸ್ಟೆಂಡಿಂಗ ಕಮಿಟಿಯವರು ಸೂಚಿಸಿದ ರಿಎಪ್ರೋಪ್ರಿಯೇಶನ್ ಯಾನೆ ಖರ್ಚಿನ ವಿಷಯಾಂತರಗಳನ್ನು ಮಂಜೂರ ಮಾಡುವದಿತ್ತು ಈ ವಿಷಯಗಳಲ್ಲಿ ರೌಪ್ಯ ಮಹೋತ್ಸವ, ನಾಮದಾರ ಗವ್ಹರ್ನರಿಗೆ ಮಾನಪತ್ರ, ದಿವಾಣರಿಗ ಮಾನಪತ್ರ ಇವುಗಳಿಗಾಗಿ ತಾಲೂಕ ಬೋರ್ಡುಗಳು ಖರ್ಚು ಮಾಡಿದ ಹಣವನ್ನು ಬಿಟ್ಟು ಬಾಕಿ ಖರ್ಚು ಮಂಜೂರ ಮಾಡಬೇಕಾಗಿ ತಂದ ಸೂಚನೆ ಬಹುಮತದಿಂದ ರದ್ದಾಗಿ ಸ್ಟೆಂಡಿಂಗ ಕಮಿಟಿಯವರು ಮಾಡಿದ ಯಾವತ್ತೂ ಸೂಚನೆಗಳು ಮಂಜೂರ ಮಾಡಲ್ಪಟ್ಟವು. ಶಿರ್ಸಿಯಲ್ಲಿ ಬೋರ್ಡಿನ ಧರ್ಮಶಾಲೆಯಿದೆ. ಈ ಧರ್ಮಶಾಲೆಯನ್ನು ಗ್ರಾಮಸ್ಥರು ಗ್ರಾಮಚಾವಡಿಗಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ ಇದನ್ನು ಶಿರ್ಸಿಯೊಳಗಿನ ಸಹಕಾರಿ ಸಂಘಕ್ಕೆ ಕೊಡಬೇಕಾಗಿ ಬೋರ್ಡಿನಲ್ಲಿ ಠರಾವಾಗಿತ್ತು. ಈ ಪ್ರಕಾರ ಸಹಕಾರಿ ಸಂಘಕ್ಕೆ ಕೊಡುವದರಿಂದ ಸರಕಾರವು ಧರ್ಮಶಾಲೆ ಕಟ್ಟಿಗೊಟ್ಟ ಶರ್ತಕ್ಕೆ ವಿರೋಧ ಬರುತ್ತಿದ್ದದರಿಂದ ಹಾಗ ಕೊಡಬಾರದಾಗಿ ಕಲೆಕ್ಟರರ ಆಕ್ಷೇಪ! ಧರ್ಮಶಾಲೆಯಲ್ಲಿಟ್ಟ ಗ್ರಾಮಚಾವಡಿಯನ್ನು ಖಾಲಿ ಮಾಡಿಕೊಡಬೇಕಾಗಿ ಬೋರ್ಡಿನಿಂದ ಬರೆದುಹೋದಲ್ಲಿ ಗ್ರಾಮಚಾವಡಿಯನ್ನಿಡಲು ಬೇರೆ ಸ್ಥಳವಿಲ್ಲವಾಗಿ ಕಲೆಕ್ಟರರ ಅಭಿಪ್ರಾಯ. ಈ ವಿಷಯ ಚರ್ಚೆಗೆ ಬಂತು. ಧರ್ಮಶಾಲೆಯ ಮುಂದಿನ ಅರ್ಧಭಾಗದ ಪೈಕಿ ಈಗಿದ್ದ ಸ್ಥಳದಲ್ಲಿ ಗ್ರಾಮ ಚಾವಡಿ ಇರಬೇಕು. ಉಳಿದ ಸ್ಥಳದಲ್ಲಿ ಸಹಕಾರಿ ಸಂಘಕ್ಕೆ ಇರಗೊಡಬೇಕು, ಧರ್ಮಶಾಲೆಯ ಖರ್ಚನ್ನು ಸರಕಾರವೂ, ಸಂಘದವರೂ ಕೂಡಿ ನಡೆಸಬೇಕು, ಹಿಂಭಾಗವನ್ನು ಪಾಂಥಸ್ಥರಿಗೆ ಉಪಯೋಗ ಮಾಡಗೊಡಬೇಕು; ಎಂಬ ಠರಾವು ಬಹುಮತದಿಂದ ಮಂಜೂರಾಯಿತು. ಈ ತನಕ ಗ್ರಾಮ ಚಾವಡಿಯನ್ನು ಇರಗೊಟ್ಟು ಧರ್ಮಶಾಲೆಯ ಸನದಿನ ಶರ್ತಿನ ಭಂಗ ಮಾಡಿದ ಬಗ್ಗೆ ಕಲೆಕ್ಟರರು ಕ್ಷಮಿಸಿ ಧರ್ಮಶಾಲೆಯೊಳಗಿಂದ/ ಗ್ರಾಮ ಚಾವಡಿಯನ್ನು ತೆಗೆಯುವಂತೆ ಗ್ರಾಮಾಧಿಕಾರಿಗಳಿಗೆ ಹುಕುಮು ಮಾಡಬೇಕೆಂಬ ಉಪಸೂಚನೆ ರದ್ದಾಯಿತು ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ದ್ರವ್ಯಸಹಾಯ ಮಾಡಲಿಕ್ಕೆ ಹಣದ ಅಡಚಣೆ ಇರುವದರಿಂದ ಅಸಾಧ್ಯವೆಂದು ತೀರ್ಮಾನವಾಯಿತು. ಕೆಸಲಕೊಪ್ಪದ ಧರ್ಮಶಾಲೆಯಲ್ಲಿ ದಕ್ಷಿಣ ಭಾಗದ ಡಿವಿಜನಲ ಫಾರೆಸ್ಟ ಆಫೀಸರರು ಧರ್ಮಶಾಲೆಯ ನಿಯಮಗಳಿಗೆ ವಿರುದ್ಧವಾಗಿ ೧೭ ದಿವಸ ಉಳಿದಿದ್ದರು. ಇವರ ಕಡೆಯಿಂದ ಧರ್ಮಶಾಲೆಯ ನಿಯಮದಂತೆ ರೂ ೧೭ನ್ನು ವಸೂಲ ಕೊಡಬೇಕಾಗಿ ಸುಪೆಯ ಬೋರ್ಡಿನವರು ಕನ್ಸರವೇಟರರಿಗೆ ಬರೆದಿದ್ದರು ಇದನ್ನು ಮಾಫ ಮಾಡಬೇಕಾಗಿ ಕನ್ಸರವೇಟರರಿಂದ ಬರೆದು ಬಂದಿತ್ತು. ಈ ಹಿಂದೆ ಮಾಫಿ ಕೊಟ್ಟದ್ದು ಅದೆ. ಹೀಗೆ ಮಾಫಿ ಕೊಡುತ್ತ ಹೋದರೆ ನಿಯಮಗಳು ಕಾಗದದ ಮೇಲೆಯೇ ಉಳಿಯುವವು ಆದರಿಂದ ವಸೂಲ ಮಾಡಬೇಕಾಗಿ ತಂದ ಸೂಚನೆ ಬಹುಮತದಿಂದ ಮಂಜೂರಾಯಿತು. ಅಧ್ಯಕ್ಷರಾದ ರಾ| ಗಂಗೊಳ್ಳಿಯವರು ಮಾಫಿ ಮಾಡಬೇಕಾಗಿ ತಾವು ಈ ಹಿಂದೆಯೇ ಬರೆದಿಟ್ಟಿರುವದಾಗಿ ಸಭಿಕರಿಗೆ ಹೇಳಿ ಮತಾಧಿಕ್ಯ ಮಾಡಿಕೊಳ್ಳುವ ಕುಯುಕ್ತಿ ನಡಿಸಿದಾಗ್ಯೂ ಅದರಿಂದ ಪ್ರಯೋಜನವಾಗಲಿಲ್ಲ. ಕಾಯಿದೆಯಂತೆ ವಸೂಲ ಮಾಡಬರುವದಿಲ್ಲವಾಗಿ ಅಧ್ಯಕ್ಷರು ಹೆದರಿಸಿದರು. ಕಾಯಿದೆಯಂತೆ ವಸೂಲ ಮಾಡಬಹುದು

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು !

ವೃದ್ಧಿಕಾರಕ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).
ಮಹಾಮಾದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗಳಿಗೆ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾದಗನ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾರ್ಕ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ವಜ್ರ (ರಕ್ತವಾತ, ಉಪದಂಶ, ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ
ಮಹಾಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-

ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು !

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ್ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬಾ ಆನಂದಪಟ್ಟೆವು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಗಣ್ಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು, ಅವು ಶಾಸ್ತ್ರಸಿದ್ಧವಾಗಿ ಅನುಭವಶ್ರೇಷ್ಠವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಚಯವೂ ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಭಾಗ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಅವಶ್ಯವಾಗಿ ನಡಿಸಲು ಇದರ ವ್ಯವಸ್ಥಾಪಕರು ಯತ್ನಿಸಿರುವರು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ವೇಷಣೀಯರಾದರೆ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸಾಯದಿಂದ ಪ್ರಯತ್ನವು ಸಫಲವಾಗಲಿ. ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ

ಮೊಕ್ಕಾಂ, ಉಡುಪಿ. ೧೦-೧೧-೧೯೩೪.

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟ್, ದ. ಕನ್ನಡ.

ವದಿಲ್ಲವಾದರೆ ನಿಯಮಗಳನ್ನು ಮಾಡಿದ್ದೇಕೆ? ಅವನ್ನು ಪೊಟ್ಟನೋದಲು ರದ್ದುಪಡಿಸಿರಿ, ಎಂದು ಸೂಚಕರು ಹೇಳಿ ಅಧ್ಯಕ್ಷರ ಬೆದರಿಕೆ ನಿರರ್ಥಕವಾದದ್ದೆಂದು ಪ್ರತಿಪಾದಿಸಿದರು. ರೌಪ್ಯಮಹೋತ್ಸವಕ್ಕೆ ಹಣದ ಅಡಚಣೆಯ ಮೂಲಕ ಏನೊಂದೂ ಹಣ ಕೊಡಬಾರದಾಗಿ ಮಾಡಿದ ಸೂಚನೆ ಬಹುಮತದಿಂದ ರದ್ದಾಗಿ ರೂ. ೫೦ ಕೊಡಬೇಕಾಗಿ ಬಹುಮತದಿಂದ ಠರಾವಾಗಿದೆ. ರೂ. ೧೦೦ ಕೊಡಬೇಕೆಂಬ ಸೂಚನೆಯು ಬಹುಮತದಿಂದ ಬಿದ್ದುಹೋಯಿತು. ಸ್ಕೂಲ ಬೋರ್ಡಿನ ಖರ್ಚಿಗೆ ಕಡಿಮೆ ಬೀಳುವದರಿಂದ ಲೋಕಲ್ಫಂಡನ್ನು ಇಮ್ಮಡಿ ಮಾಡುವ ಸೂಚನೆ ವಿಚಾರಮಾಡಲು ವಿಶೇಷ ಸಭೆ ಸೇರಿಸಬೇಕೆಂಬ ಠರಾವಿನ ಮೇಲೆ ಚರ್ಚೆಯಾಗಿ ಆ ಠರಾವು ತಿರಸ್ಕರಿಸಲ್ಪಟ್ಟಿತು. "ಭೂಮಿಯ ಮೇಲೆ ಒಂದು ಪೈ ಸಹ ಭಾರ ಹೇರಲು ಅಶಕ್ಯವಿದೆ. ಪ್ರತಿ ವರ್ಷಕ್ಕೆ ತೀರ್ವೆ ವಸೂಲಾಗದೆ ಲೋಕಲ್ಫಂಡು ಸೂಟು ಬಿಡುವ ಪ್ರಸಂಗ ಒದಗುತ್ತದೆ. ಇದ್ದ ತೀರ್ವೆ ಕೊಡಲಾಗುವದಿಲ್ಲ. ಸ್ಕೂಲ ಬೋರ್ಡ ಖರ್ಚನ್ನು ಸರಕಾರವು ಡೇಟಿಮಲ್ಯಾನ್ಸ, ಪಗಾರ ಸ್ಕೇಲು, ಎಪ್ರೂವ್ಡ ಸ್ಕೂಲ್ಸ ಮೊದಲಾದ ವಿವಿಧ ಹೆಸರುಗಳನ್ನು ಹೇಳಿ ಗ್ರೆಂಟನ್ನು ಕಡಿಮೆ ಮಾಡಿ ಪ್ರಾಥಮಿಕ ಶಿಕ್ಷಣದ ಜವಾಬದಾರಿಯನ್ನು ಕ್ರಮವಾಗಿ ತಪ್ಪಿಸಿಕೊಳ್ಳುತ್ತಿದೆ. ಬಾಕಿ ಯಾವತ್ತೂ ಖಾತೆಗಳಿಗೆ ಸರಕಾರವು ಹಣ ಪೂರೈಸುತ್ತದೆ. ಸ್ಕೂಲ ಬೋರ್ಡಿಗೆ ಮಾತ್ರ ಹಣ ಪೂರೈಸಲು ಸರಕಾರಕ್ಕೆ ಅಲ್ಲದ ಪ್ರತಿಬಂಧಗಳು. ಹೊಸ ಕರ ಹೇರುವ ಅಪ್ರೀತಿ ಪಡೆಯದೆ ಸ್ಕೂಲ ಬೋರ್ಡಿಗೂ, ಜಿಲ್ಹಾ ಬೋರ್ಡಿಗೂ ಹಚ್ಚಿಹಾಕಿ ಖರ್ಚಿನ ಜವಾಬದಾರಿಯನ್ನು ಸರಕಾರವು ತಪ್ಪಿಸಿಕೊಳ್ಳುತ್ತದೆ. ಅದಕ್ಕೆ ಹೊಸ ಕರಗಳನ್ನು ಹೇರಿಕೊಳ್ಳುವದು ಪರಿಹಾರವಲ್ಲ. ಕೊಟ್ಟಷ್ಟು ಗ್ರೆಂಟನ್ನು ಖರ್ಚ ಮಾಡಿ ಶಿಕ್ಷಣ ಖಾತೆಯನ್ನು ಸಾಧ್ಯವಿದ್ದರೆ ನಡಿಸಬೇಕು. ವಿದ್ಯಾಖರ್ಚಿನ ಬಗ್ಗೆ ಅವಶ್ಯವಿದ್ದರೆ ಶಿಕ್ಷಣ ತೆರಿಗೆಯನ್ನು ಹೇರುವ ವಿಚಾರ ಮಾಡಬಹುದು. ಲೋಕಲ್ಫಂಡಿನ ಏರಿಕೆಯ ಪ್ರಶ್ನೆ ಒಂದು ಬಿಟ್ಟುಬಿಡಿ." ಎಂಬದಾಗಿ ರಾ|| ವಿಶ್ವನಾಥ ಪ್ರಭುರು ಆವೇಶದಿಂದ ಭಾಷಣ ಮಾಡಿದರು.

ಶಿಕ್ಷಕ ಜನರ ಪಗಾರದ ಕುರಿತು ಸರಕಾರವು ಹೊಸ ಸ್ಕೇಲನ್ನು ತಯಾರಿಸಿದೆ. ಈ ಸ್ಕೇಲಿನಿಂದ ಈಗ ನೌಕರಿಯಲ್ಲಿದ್ದವರಿಗೆ ನಷ್ಟವಾಗದಂತೆ ವ್ಯವಸ್ಥೆಯಾಗಬೇಕಾಗಿಯೂ ಈ ಸ್ಕೇಲು ಮಾನ್ಯವಿಲ್ಲದವರಿಗೆ ನೌಕರಿಯನ್ನು ಬಿಟ್ಟುಹೋಗಲಿಕ್ಕೆ ೩ ತಿಂಗಳ ಅವಧಿ ಕೊಡಬೇಕಾಗಿಯೂ ಬೋರ್ಡಿನಲ್ಲಿ ಠರಾವಾಯಿತು. ಈ ಸ್ಕೇಲು ತೀರ ಕಡಿಮೆ ಪ್ರತಿಯದಿದ್ದರೆ ಯೋಗ್ಯತಾವಂತ ಪ್ರಾಥಮಿಕ ಶಿಕ್ಷಕರು ದೊರಕುವದು ದುರ್ಲಭವಾದೀತು. ಸ್ಕೂಲ ಬೋರ್ಡಿನ ಎಡಮಿನ್ನಿಸ್ಟ್ರೇಟಿವ್ಹ ಆಫೀಸರರು ಮೇ ತಿಂಗಳಲ್ಲಿ ರಜೆ ಮೇಲೆ ಹೋಗುತ್ತಾರೆ. ಅವರ ಸ್ಥಳದಲ್ಲಿ ಸೀನಿಯರ ಯಾನೆ ಹಿರಿ ಸುಪರವೈಝರರಿಗೆ ನೇಮಿಸಬೇಕೆಂಬ ಠರಾವು ಚರ್ಚೆಗೆ ಬಂತು. ಮಿ|| ಶೇಖ ಇವರು ಸರ್ವಿಸ ಯಾನೆ ಕೆಲಸದಿಂದ ಹಿರಿಯರು. ರಾ|| ಭಟ್ಟರವರು ಪಗಾರದಿಂದ ಹಿರಿಯರು. ಇವರಲ್ಲಿ ಮಿ|| ಶೇಖರೇ ಹಿರಿಯರಾಗುತ್ತಾರೆಂದು ಕೆಲವರ ಅಭಿಪ್ರಾಯ, ರಾ|| ಭಟ್ಟರು ಹಿರಿಯರಾಗುತ್ತಾರೆಂದು ಕೆಲವರ ಅಭಿಪ್ರಾಯ. ನ್ಯಾಯಖಾತೆ, ಮುಲ್ಕಿಖಾತೆ ಮೊದಲಾದ ಖಾತೆಗಳಲ್ಲಿ ಪಗಾರದಿಂದ ಹಿರಿಯರಿದ್ದವರಿಗೆ ಸೇವಾಧಿಕಾರದ ಬದಲಿ ಸಿಗುತ್ತದಾಗಿ ಉದಾಹರಣೆ ಕೊಟ್ಟು ರಾ|| ಭಟ್ಟರಿಗೆ ನೇಮಿಸಬೇಕಾಗಿ ಠರಾವಾಯಿತು. ರಾ|| ಭಟ್ಟರವರಿಗೆ ನೇಮಿಸಬೇಕೆಂಬದಾಗಿ ಮಂಜೂರಾದ ಉಪಸೂಚನೆಯನ್ನು ಮೂಲ-ಸೂಚನೆಯೆಂದು ಮತ ಎಣಿಕೆಗೆ ಹಾಕಿದಾಗ ಅಧ್ಯಕ್ಷ ರಾ|| ಗಂಗೊಳ್ಳಿಯವರು ಒಬ್ಬೊಂಟಿಗರೇ ರಾ|| ಭಟ್ಟರ ನೇಮಣೂಕಿಯ ವಿರುದ್ಧ ಮತ ಕೊಟ್ಟರು. ಇಷ್ಟು ವಿರೋಧ ಬಗೆಯುವ ಕಾರಣವೇನೆಂದು ಸಭಿಕರಿಗೆ ಕಡೆತನಕ ತಿಳಿಯಲೇ ಇಲ್ಲ.

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪೊಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಘ.

ಪೊಲೀಸದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ
ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

ವಿ. ಸೂ. 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!
ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.
ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರಕೊಳ್ಳತಕ್ಕದ್ದು.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—
ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.
ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು:- **ಮೆಸರ್ಸ ಜೀವನ ಏಜನ್ಸಿ, ಕಾರವಾರ.**

ಡಾ|| ಮಹಿಷಿಯವರ ಅನುಭವಸಿದ್ಧ ಔಷಧ.

ಡಾ|| ಮಹಿಷಿಯವರು ಕಳೆದ ಮೂವತ್ತು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ, ಪ್ರಯೋಗದಿಂದಲೂ ತಯಾರಿಸಿದ ಈ ಕೆಳಗಣ ಔಷಧಗಳು ಅತ್ಯಂತ ಪರಿಣಾಮಕಾರಿಗಳಾಗಿರುವವೆಂದು ಅವನ್ನು ಉಪಯೋಗಿಸಿದವರೆಲ್ಲರೂ ಅಭಿಪ್ರಾಯಪಡುತ್ತಿರುವರು. ಡಾ|| ಮಹಿಷಿಯವರು ಈ ಅಮೂಲ್ಯವಾದ ಔಷಧಗಳಿಂದಲೇ ಕಾರವಾರ ಜಿಲ್ಲೆಯಲ್ಲಿ ಅತ್ಯಂತ ಲೋಕಪ್ರಿಯರಾಗಿರುವರು.

ಅಶೋಕಾ ಕಾರ್ಡಿಯಲ್:— ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವದಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು. ಕ್ರಯ ರೂ. ೧-೮-೦.

ಅಶ್ವಗಂಧ ಟಾನಿಕ್:— ಮಜ್ಜಾ, ಮಾಂಸ, ನರಗಳನ್ನು ಬಲಪಡಿಸುವ ಉತ್ಕೃಷ್ಟ, ಶಕ್ತಿದಾಯಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಪಚನ ಮುಂತಾದವುಗಳೆಲ್ಲ ನಷ್ಟವಾಗುವವು. ಕಾಂತಿ ಶಕ್ತಿಗೆ ಇದು ದಿವ್ಯೌಷಧ! ರೂ. ೧-೩-೦

ಎಗ್ಯು ಮಿಕ್ಶ್ಚರ, ಫೀವರ ಡ್ರಾಪ್ಸ, ಅಮೃತಸುಧಾ, ಕರ್ಪೂರಾರ್ಕ, ಸಾಯರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕರು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ಸಮಯಕ್ಕೆ ಇವುಗಳ ಉಪಯೋಗವಾಗುವದು. ಇವು ಅಮೂಲ್ಯ ಔಷಧಗಳು!!

ಇವಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿಮಲೇರಿಯಲ್ ಮಿಕ್ಶ್ಚರ, ಲಾಕ್ಷಾಮೃತ, ಬ್ಲಡ್ ಮಿಕ್ಶ್ಚರ, ಕಾಲರೇಲ್, ಡಿಶ್ ವ್ಹೈಟರ, ಸಾಯರಪ್ ಕ್ಯಾಲ್ಸಿಲೆಕ್ಟೋ ಫಾಸ್ಫೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಳಂತಿ ಮದ್ದು, ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು. ಕ್ಯಾಟಲಾಗು ಪುಕ್ಕಟೆಯಾಗಿ ಸಿಗುವುದು.

ರಾ|| ದೇವಪ್ಪಾ ಅಯ್ಯ ನಾಯಕ, ಕುಮಟಾ ಹೆಡ್ ಆಫೀಸು—
ಉತ್ತರ ಕನ್ನಡ ಜಿಲ್ಲೆಯ **ಸೋಲ್ ಏಜಂಟರು.** || **ಸ್ವಾಸ್ಥ್ಯನಿಲಯ, ಧಾರವಾಡ.**

ಅಲ್ಲಿ ಇಷ್ಟು!

ಚಕ್ರವರ್ತಿ ಪಂಚಮ ಜೋರ್ಜ ಭೂಪಾಲರ ರೌಪ್ಯ ರಾಜ್ಯಾರೋಹಣ ಉತ್ಸವವು ವಿಜೃಂಭಣೆಯಿಂದ ಲಂಡನನಲ್ಲಿ ನೆರವೇರಿತೆಂದು ತಿಳಿದು ತುಂಬಾ ಸಂತೋಷ. ಚಕ್ರವರ್ತಿ ಪಂಚಮ ಜೋರ್ಜ ಭೂಪಾಲರು ಸೋಮವಾರ ಬಕಿಂಘಮ್ ಪೆಲೇಸ ಅರಮನೆಯಿಂದ ಮೆರವಣಿಗೆಯಿಂದ ಹೊರಟರು. [illegible] ಒಪ್ಪತ್ರಯ, ರಾಜಪುತ್ರಿಯರೂ, ಮುಖ್ಯ ಪ್ರಧಾನರೂ ಇತರ ಪ್ರಧಾನರೂ ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳೂ ಪಾರ್ಲಿಮೆಂಟಿನ ಅಧ್ಯಕ್ಷರೂ ಸಂಸ್ಥಾನಿಕರೂ ಈ ಮೆರವಣಿಗೆಯಲ್ಲಿ ಸೇರಿದ್ದರು. ಕುದುರೆ [illegible] ಸಂಪ್ರದಾಯದಿಂದ ಗೌರವದಿಂದ ಕೂಡುವ [illegible] ಬಾದಶಹರೂ ರಾಣಿ ಮೇರಿ [illegible] ಜನಸಂದಣಿಯ ಉತ್ಸಾಹ [illegible] ಅಸಂಖ್ಯ [illegible] ಸಂತೋಷಪಟ್ಟು ಮಾರ್ಗದ ಎರಡೂ ಪಕ್ಕಗಳಲ್ಲಿ ಸಾಲಾಗಿ ನಿಂತ [illegible] ವಂದಿಸುತ್ತ, ಅಕ [illegible] ಪಥವನ್ನು [illegible] ಸಾಗುತ್ತಿದರು. [illegible] ಆಗಮನವನ್ನು ಕಹಳೆಯಿಂದ [illegible] ಅದನ್ನು ಕೇಳಿದೊಡನೆ ಜನಸಮುದಾಯದ [illegible] ಉಕ್ಕೇರಿಬಂದು ಜಯಘೋಷ [illegible] ಲಂಡನಪಟ್ಟಣದ ಅಧಿಕಾರಿಗಳ [illegible] ಮೇಯೂರ ಅಂ [illegible] ಅಧ್ಯಕ್ಷರು. ಬಾದಶಹರ ವಾತ್ಸಲ್ಯವು ಲಂಡನ ಪಟ್ಟಣದ ಹೊರಪಾರ್ಶ್ವದಲ್ಲಿದೆ. ಪಟ್ಟಣದ ಪ್ರವೇಶ ದ್ವಾರದಲ್ಲಿ ಮೇಯೋರ ದೊರೆಗಳು ಬಾದಶಹರಿಗೆ ಇದಿರುಗೊಂಡರು, ಬಾದಶಹರು ಪರಂಪರೆಗನುಸಾರವಾಗಿ ಪಟ್ಟಣದ ಪ್ರವೇಶ ಮಾಡಲು ಮೇಯೊರ ದೊರೆಗಳ ಅಪ್ಪಣೆ ಪಡೆದರು ಮೇಯೊರ ದೊರೆಗಳು ಚಕ್ರವರ್ತಿಗಳಿಗೆ ಸಂತೋಷದಿಂದ ಅಪ್ಪಣೆಯನ್ನಿತ್ತು ಮುತ್ತಿನ ಖಡ್ಗವನ್ನು ಕಾಣಿಕೆಯಾಗಿ ಅರ್ಪಿಸಿದರು. ಆಮೇಲೆ ಮೆರವಣಿಗೆ ಮುಂದರಿದು ಸೆಂಟ ಪಾಲ ಕೆಥೆಡ್ರಲ್‍ಕ್ಕೆ ಹೋಗಿ, ರೌಪ್ಯ ರಾಜ್ಯಾರೋಹಣ ಉತ್ಸವ ಪ್ರಸಂಗವನ್ನು ಒದಗಿತೆಂದ ಬಗ್ಗೆ ಪರಮಾತ್ಮನ ಆಭಾರ ಮನ್ನಿಸುವ ವಿಧಿಯಾದ ಬಳಿಕ, ಬಾದಶಹರು ಪುನಃ ಮೆರವಣಿಗೆಯಿಂದ ಸ್ವಸ್ಥಾನಕ್ಕೆ ತೆರಳಿದರು. ರೌಪ್ಯಮಹೋತ್ಸವವನ್ನು ಒದಗಿತೆಂದ ಬಗ್ಗೆ ಚಕ್ರವರ್ತಿಗಳಿಗೆ ಪ್ರೌಢ ಗುರುಗಳೂ, ಜಪಾನದ ಬಾದಶಹರೂ, ಇಟಾಲಿಯ ಅರಸರೂ, ಅಮೇರಿಕೆಯ ಅಧ್ಯಕ್ಷರೂ ಬಾದಶಹರ ಅಭೀಷ್ಟ ಚಿಂತನ ಮಾಡಿ ಸಂದೇಶ ಕಳುಹಿದ್ದರು. ಜರ್ಮನಿಯ ಸರ್ವ ಸತ್ತಾಧಾರಿಗಳಾದ ಹಿಟ್ಲರ ಅವರೂ ಸಂದೇಶ ಕಳುಹಿದ್ದರು. 'ಲೋಕದಲ್ಲಿ ಶಾಂತತೆ ಪ್ರಸ್ಥಾಪಿಸುವದಕ್ಕಾಗಿ ಬ್ರಿಟಿಶ ಸರಕಾರವೂ ಬಾದಶಹರೂ ನಡಿಸುವ ಪ್ರಯತ್ನವನ್ನು ಜರ್ಮನ ಸರಕಾರವು ಸಮಾನುಭೂತಿಯಿಂದ ನಿರೀಕ್ಷಿಸುತ್ತಿದೆ. ಅವು ಸಾರ್ಥಕವಾಗಿ ಬ್ರಿಟಿಶ ಸರಕಾರದ ಕಲ್ಯಾಣವಾಗಿ ಜಗದ [illegible]ದವಾಗಲಿ" ಎಂಬದಾಗಿ ಸಹ ಅಪೇಕ್ಷಿಸಿದ್ದಾರೆ. ಅದೇ ದಿನ ರಾತ್ರಿ ಬಾದಶಹರ ಭಾಷಣವಾಯಿತು. "ರಾಜನಿಷ್ಠ ಪ್ರಜೆಗಳ ಸೇವೆಗೆ ನನ್ನ ದೇಹ ಅರ್ಪಿಸಲ್ಪಟ್ಟಿದೆ! ಈ ವರ್ಷಗಳಲ್ಲಿ ನನಗೆ, ನನ್ನ ದೇಶಕ್ಕೆ ನನ್ನ ಸಾಮ್ರಾಜ್ಯಕ್ಕೆ ಪರಮಾತ್ಮನು ದಯಪಾಲಿಸಿದ ಅನುಗ್ರಹ ವಿಚಾರದಿಂದಲೇ ನಾನು ಕಾಲ ಕಳೆದೆನು. ಪರಮಾತ್ಮನು ನನ್ನನ್ನೂ ನನ್ನ ಪ್ರಜೆಗಳನ್ನೂ ಅನೇಕ ಕಷ್ಟಗಳಿಂದ ಪಾರುಗಾಣಿಸಿದ್ದಾನೆ. ಇನ್ನೂ ಸಂಕಟಗಳು ದೂರವಾಗಲಿಲ್ಲ. ಇಂಗ್ಲಂಡ ದೇಶದಲ್ಲಿ ನಿರುದ್ಯೋಗಿಗಳ ಸಂಖೆ ಬೆಳೆಯುತ್ತಿದೆ. ಅವರ ಬಗ್ಗೆ ನಾನು ವ್ಯಥಿಸುತ್ತಿದ್ದೇನೆ. ದೇವರ ಅನುಗ್ರಹದಿಂದ ಯಾವತ್ತೂ ಕಷ್ಟಗಳು ದೂರವಾಗಿ ರಾಜ್ಯದಲ್ಲಿ ಸುಖ ಶಾಂತಿಯುಂಟಾಗುವದೆಂದು ನನಗೆ ಶ್ರದ್ಧೆಯಿದೆ. ಯುವರಾಜರು ಹೊರಡಿಸಿದ ಉತ್ಸವದ ನಿಧಿಗೆ ಸಮಸ್ತರೂ ದ್ರವ್ಯ ಸಹಾಯ ಮಾಡಬೇಕು. ವಸಾಹತುಗಳಿಂದಲೂ ಹಿಂದುಸ್ಥಾನದಿಂದಲೂ ನನಗೆ ಬಂದ ಅಭೀಷ್ಟ ಚಿಂತನ ಸಂದೇಶಗಳಿಂದ ನನಗೆ ಆನಂದವಾಗಿದೆ. ದೇವರು ಪ್ರಜೆಗಳ ಕಲ್ಯಾಣ ಮಾಡಲಿ!" ಎಂಬದಾಗಿ ಜೋರ್ಜ ಭೂಪಾಲರು ಪ್ರಜೆಗಳಿಗೆಲ್ಲ ಸಂದೇಶ ಕೊಟ್ಟಿದ್ದಾರೆ. ಉತ್ಸವದ ಪ್ರೀತ್ಯರ್ಥ ಸೋಮವಾರ ರಾತ್ರಿ ತರತರದ ಆಟ-ಪಾಟ, ಕುಣಿತ-ಗಣಿತ, ವಿಮಾನುಗಳ ಹಾರ್‍ಯಾಟ, ಮೊದಲಾದವು ನಡದವು. ಲಂಡನಿನೊಳಗಿನ ವರ್ತಮಾನ ಪತ್ರಗಳು ಪ್ರಾಮುಖ್ಯವಾಗಿ ಬಾದಶಹರ-ಮೇರಿರಾಣಿಯರ ಭಾವಚಿತ್ರಗಳನ್ನು ಕೊಟ್ಟು ಜೋರ್ಜ ಭೂಪಾಲರ ಕಾರಕೀರ್ದಿಯಲ್ಲಿ ಸ್ವದೇಶಕ್ಕುಂಟಾದ ಲಾಭಗಳನ್ನೆಲ್ಲ ವಿವರಿಸಿ ಇದೇ ಪ್ರಕಾರ ದೇಶಸೇವೆಯಾಗಲೆಂದು ಬಯಸಿದರು. ಅಮೇರಿಕಾ, ಫ್ರಾನ್ಸ, ಜರ್ಮನಿ, ಇಟಾಲಿ, ಜಪಾನ ಮೊದಲಾದ ದೇಶಗಳೊಳಗಿನ ಪ್ರಮುಖ

THE AGRICULTURAL & INDUSTRIAL BANK, LIMITED. COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್, ಕುಂದಾಪುರ.

ಕಾಯಂ ಠೇವಣಾತಿಗಳು.

	3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ	3½ ರಂತೆ,	
ಸೇವಿಂಗ್ಸ ಬೇಂಕ ಠೇವಣಾತಿಗೆ	6 ತಿಂಗಳಿಗೆ	4½ ರಂತೆ,	ಪ್ರತಿ ಮೂರು ತಿಂಗಳಿಗೊಮ್ಮೆ
ಶೇಕಡಾ	12 ತಿಂಗಳಿಗೆ	5½ ,,	ಬಡ್ಡಿ
4½ ರಂತೆ ಬಡ್ಡಿ	24 ತಿಂಗಳಿಗೆ	6 ,,	ಕೊಡಲಾಗುವದು
	3 ವರ್ಷ ಯಾ ಹೆಚ್ಚಿನ ಅವಧಿಗೆ ...	6½ ರಂತೆ	

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ

ಚಿನ್ನ ಬೆಳ್ಳಿಯ ಆಭರಣಗಳ ಆಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ,

ಓವರ್-ಡ್ರಾಫ್ಟಗಳೂ ಕೊಡಲ್ಪಡುವವು.

ಒಳ್ಳೇ ಪ್ರತಿಯ [illegible] ದರ್ಶನಿ ಹುಂಡಿಗಳು, ಚೆಕ್ಕುಗಳು ವಸೂಲಿ ಮಾಡಲ್ಪಡುವವು.

ಹೋಮ್ ಸೇವಿಂಗ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು

ಹೆಚ್ಚಿನ ಮಾಹಿತಿ [illegible] ಕೆಳಗಿನ ವಿಳಾಸಕ್ಕೆ ಬರೆಯಿರಿ—

ಕುಂದಾಪುರ
ತಾ 23 1 1935

K. Vaman Shenai & G. Balakrishna S Nayak
Managing Directors

ಪತ್ರಿಕೆಗಳೂ ಜುಬಿಲೀ ಭೂಷಣಾಂಗ ಹರಬಿದವು. ಲಂಡನಿನೊಳಗಿನ ಸಮಾರಂಭವು ಜುಲೈ ತಿಂಗಳವ ತನಕ ನಡೆಯುವದು ಸ್ವತಂತ್ರ ದೇಶದೊಳಗಿನ ಉತ್ಸವ ವೈಭವವಿದು! ಅದನ್ನು ಬಣ್ಣಿಸಲು ಸಾಧ್ಯವೇ?

* * *

ಹಿಂದುಸ್ಥಾನದಲ್ಲಿಯೂ ಸರಕಾರದ ಅಪೇಕ್ಷೆಯಂತೆ ಸರಕಾರಿ ಅಧಿಕಾರಿಗಳ ಪಾರುಪತ್ಯದಲ್ಲಿ ಸ್ಥಾಪನೆ ಹೊಂದಿದ ಉತ್ಸವ ಮಂಡಳಿಗಳ ವಿದ್ಯಮಾನ ರಾಜ್ಯಾರೋಹಣ ಉತ್ಸವದ ಸಂಭ್ರಮ ನಡೆಯಿತು. ಕಲಕತ್ತಾ, ಮದ್ರಾಸ, ಮುಂಬಯಿ ಮೊದಲಾದ ಕಡೆ ಯುರೋಪಿಯನರ ವಸತಿ ಇದ್ದ ಪ್ರದೇಶದಲ್ಲಿ ದೀಪೋತ್ಸವ ಮೊದಲಾದ ಪ್ರಕಾರಗಳು ನಡೆದವು. ಪ್ರಯಾಗದಲ್ಲಿ ಥಟ್ಟನೆ ವಿದ್ಯುಚ್ಛಕ್ತಿ ನಿಂತು ಕತ್ತಲೆಯಾಗಿತ್ತು. ಆದರೆ ಅಷ್ಟರಲ್ಲಿ ಯಂತ್ರ ದುರುಸ್ತಿಯಾಗಿ ವಿದ್ಯುದ್ದೀಪಗಳಿಂದ ಸುಶೋಭಿತವಾದ ಪಟ್ಟಣವು ಅಲಂಕರಿಸಲ್ಪಟ್ಟಿತು. ಉತ್ಸವದ ಬಗ್ಗೆ ಪ್ರಾಂತಾಧಿಪರೂ, ಸರ್ವಾಧಿಪರೂ ರಾಜನಿಷ್ಠೆಯ ಭಾಷಣಗಳನ್ನು ಕೊಟ್ಟರು. ಔತಣ ಸಮಾರಂಭಗಳನ್ನೇರ್ಪಡಿಸಿ ಐಶ್ವರ್ಯವಂತ ರಾಜಭಕ್ತರಿಗೆಲ್ಲ ಮೇಜವಾನಿ ಕೊಟ್ಟರು. ರೌಪ್ಯ ಮಹೋತ್ಸವದ ಪ್ರೀತ್ಯರ್ಥ ಕೆಲವರಿಗೆ ರೌಪ್ಯ ಪದಕಗಳು ಅರ್ಪಿಸಲ್ಪಟ್ಟವು. ಸರಕಾರಿ ಇಮಾರತುಗಳು ದೀಪೋತ್ಸವದಿಂದ ಕಂಗೊಳಿಸುತ್ತಿದ್ದವು. ಉತ್ಸವದ ಪ್ರೀತ್ಯರ್ಥ ಬಡವರಿಗೆ ಅನ್ನದಾನ, ಹುಡುಗರಿಗೆ ಮಿಠಾಯಿ ಹಂಚೋಣವಾದವು. ತೋಫಿನ ಸಲಾಮಿ ಕೊಡೋಣಾಯಿತು. ಹಲವರಿಗೆ ಸನದುಗಳು ಕೊಡಲ್ಪಟ್ಟವು. ಈ ಪ್ರಕಾರ ಹಿಂದುಸ್ಥಾನದೊಳಗೆ ಬಾದಶಹರ ರೌಪ್ಯರಾಜ್ಯಾರೋಹಣ ಉತ್ಸವವು ಜರಗಿತು. ಜನಸಾಮಾನ್ಯರು ಉತ್ಸಾಹಭರಿತರಾಗಿ ಉತ್ಸವದಲ್ಲಿ ಸೇರಲಿಲ್ಲ. ಬಹುತರವಾಗಿ ಅಲಿಪ್ತರಾಗಿಯೇ ಇದ್ದರು.

* * *

ಸಂಸ್ಥಾನಿಕರು ಉತ್ಸವವನ್ನು ಒಳ್ಳೇ ವೈಭವದಿಂದ, ರಾಜಭಕ್ತಿಯಿಂದ ನೆರವೇರಿಸಿದರು. ಪತಿಯಾಳಾ, ಜುನಾಗಡ, ಜಯಪುರ, ಭೋಪಾಳ ಮೊದಲಾದ ಸಂಸ್ಥಾನಿಕರು ತಮ್ಮ ತಮ್ಮ ಸಂಸ್ಥಾನಗಳಲ್ಲಿ ದಾನಧರ್ಮ, ಬಂದ್ಯಾಬ್ಟ, ವಾದ್ಯಘೋಷ ಮೊದಲಾದ ಸಂಭ್ರಮದಿಂದ ಈ ಉತ್ಸವವನ್ನು ನೆರವೇರಿಸಿದರು. ದರಬಾರನ್ನು ಸೇರಿಸಿ ಬ್ರಿಟಿಶರ ಆಧಿರಾಜ್ಯದಿಂದ ಸಂಸ್ಥಾನಿಕರಿಗುಂಟಾದ ಲಾಭಾತಿಶಯವನ್ನು ಹೊಗಳಿ ಬಾದಶಹರಿಗೆ ಆಯುರಾರೋಗ್ಯ ಸಂಪತ್ತು ಕರುಣಿಸಲೆಂದು ಬಯಸಿದರು. ಜುನಾಗಡ ಸಂಸ್ಥಾನಿಕರು ರೈತರಿಗೆ ೨ ಲಕ್ಷ ರೂಪಾಯಿಗಳ ತೀರ್ವೆಯನ್ನು ಸೂಟು ಬಿಟ್ಟರು. ಪತಿಯಾಳಾ ಮಹಾರಾಜರು ೧೫೦ ಬಂದಿ ಕೈದಿಗಳಿಗೆ ಬಿಡುಗಡೆ ಮಾಡಿದ್ದಲ್ಲದೆ ಉಳಿದ ಕೈದಿಕಳಿಗೆ ಒಂದು ದಿವಸ ರಜೆ ಕೊಟ್ಟರು. ಭೋಪಾಳದ ಮಹಾರಾಜರು ಉತ್ಸವದ ಸ್ಮರಣಾರ್ಥ ಅನೇಕ ಕೈದಿಗಳಿಗೆ ಸ್ವಾತಂತ್ರ್ಯವನ್ನಿತ್ತರು. ಅನೇಕ ಸಂಸ್ಥಾನಿಕರು ಲಂಡನಿಗೆ ಹೋಗಿ ಬಾದಶಹರಿಗೆ ಸ್ವತಃ ತಮ್ಮ ರಾಜನಿಷ್ಠೆಯನ್ನು ವ್ಯಕ್ತಗೊಳಿಸಿದ್ದಾರೆ. ಕಾಶ್ಮೀರದ ಮಹಾರಾಜರು ಲಂಡನಿಗೆ ಪರಿವಾರ ಸಹಿತ ಹೋಗಿದ್ದಾರೆ. ಪೋಲೊ ಆಟದ ಒಂದು ಸಂಗಡವನ್ನೂ, ೩೮ ಕುದುರೆಗಳನ್ನೂ, ಇತರ ಪರಿವಾರವನ್ನೂ ಒಯ್ದಿದ್ದಾರೆ. ಇವರಿಗೆ ಈಗ ಕರ್ನಲ್ ಹಿಜ್ ಹೈನೆಸ್ ದಿ ಶ್ರೀ ಮಹಾರಾಜಾ ಹರಿಸಿಂಗಜಿ ಬಹಾದ್ದೂರ, ಮಹಾರಾಜಾ ಆಫ್ ಜಮ್ಮು ಎಂಡ ಕಾಶ್ಮೀರ, ಜಿ ಸಿ ಎಸ್. ಐ., ಜಿ. ಸಿ ಐ ಇ., ಕೆ. ಸಿ ವ್ಹಿ ಓ ಹೀಗೆ ಬಿರುದುಗಳಿವೆ. ಇವರಿಗೆ ಬಾದಶಹರು ಅಂಗರಕ್ಷಕರಾಗಿ ನೇಮಿಸಿಕೊಂಡು ಗೌರವಿಸಿದ್ದಾರೆ. ಇವರು ತಮ್ಮ ಗಿಲಜಿತ ಪ್ರಾಂತವನ್ನು ಸಾಮ್ರಾಜ್ಯ ಸರಕಾರಕ್ಕೆ ಒಪ್ಪಿಸಿ ಪ್ರತಿಯಾಗಿ 'ಹಿಜ ಎಗ್ಜೊಲ್ಟೆಡ ಹಾಯನೆಸ್' ಎಂಬ ಹೊಸ ಪದವಿಯನ್ನು ಪಡೆಯುವವರಿದ್ದಾರೆ. ಅನೇಕ ಸಂಸ್ಥಾನಿಕರು ಲಂಡನಿಗೆ ತೆರಳಿದ್ದಾರೆ. ಲಂಡನ ವರ್ತಕರು ಸಂಸ್ಥಾನಿಕರ ಉದಾರಪ್ರಿಯವನ್ನು ನಂಬಿಕೊಂಡಿದ್ದಾರಾಗಿ ಕಲಕತ್ತೆಯ 'ಅಮೃತ ಬಝಾರ' ಪತ್ರಿಕೆಯಲ್ಲಿ 'ಲಂಡನರ' ಎಂಬವರು ಬರೆಯುತ್ತಾರೆ "ದೊಡ್ಡ ದೊಡ್ಡ ಮಹಾರಾಜರ ಮೇಲೆ ನಮ್ಮ ನಂಬಿಗೆ. (ಅಲ್ಲಿಯ ಅಂಗಡಿಕಾರರಿಗೆ ಮಹಾರಾಜರೆಂದು ಅನ್ನಬರುವದಿಲ್ಲ) ಅವರು ಕೈಬಿಟ್ಟು ಖರ್ಚು ಮಾಡುತ್ತಾರೆ. ಔದಾರ್ಯವಂತ ಪುರುಷರು ಉಪಭೋಗ ಮಾಡುವ ಕ್ರಮವನ್ನು ಅವರೇ ಬಲ್ಲರು" ಈ ಪ್ರಕಾರ ಒಬ್ಬ ಅಂಗಡಿಕಾರನು ಸಂಸ್ಥಾನಿಕರ ಔದಾರ್ಯವನ್ನು ಹೊಗಳಿದವಂತೆ. ಅಮೇರಿಕೆಯಿಂದ, ಯುರೋಪ ಖಂಡದಿಂದ ಜನರು ಬರುವರು, ಆದರೆ ಇವರು ತೀರ ಕೃಪಣಪ್ರಾಣಿಗಳು, ಇವರಿಂದ ವ್ಯಾಪಾರಕ್ಕೆ ಕಳೆ ಏರದಾಗಿ ಅಂಗಡಿಕಾರರು ಹೇಳಿದರಾಗಿ 'ಲಂಡನರ'ರು ಬರೆಯುತ್ತಾರೆ. ಸಂಸ್ಥಾನಿಕರ ಸ್ತುತಿಪಾಠ ಮಾಡುವ ಲೇಖಗಳನ್ನು ವರ್ತಮಾನ ಪತ್ರಗಳು ಪ್ರಕಟಿಸಿ ಪ್ರಸ್ಥ್ಯ ಸಂಗ್ರಹ ಮಾಡಲಾರಂಭಿಸಿವೆ. ಹೀಗೆ ವಿವಿಧ ಪ್ರಕಾರಗಳಿಂದ ನಮ್ಮ ಹಿಂದುಸ್ಥಾನದೊಳಗಿನ ಸಂಸ್ಥಾನಿಕರು ಹಣ ಖರ್ಚುಮಾಡಿ ದಿಗಂತ ಗೌರವ ಪಡೆಯುವರು. ರೌಪ್ಯಮಹೋತ್ಸವದ ಸಂಭ್ರಮದಿಂಥ ಹಿಂದೀ ಸಂಸ್ಥಾನಿಕರ ಔದಾರ್ಯವು ಲೋಕದಲ್ಲಿ ಪ್ರಕಟವಾಗುವದು!

* * *

ಉತ್ಸವದ ದಿನ ಬ್ರಿಟಿಶ ಹಿಂದುಸ್ಥಾನದಲ್ಲಿ ಘಟಿಸಿದ ವಿಶೇಷ ಸಂಗತಿಯೆಂದರೆ - ಬಂಗಾಲ ಪ್ರಾಂತದ ತಾಂಗೈಲ ಪಟ್ಟಣದೊಳಗಿನ ೯ ಜನರ ಮೇಲೆ ಹೊರಡಿಸಿದ ಪ್ರತಿಬಂಧಕ ನೋಟೀಸುಗಳನ್ನು ರದ್ದುಪಡಿಸಿದ್ದು. ಇಬ್ಬರಿಗೆ ಸೆರೆಹಿಡಿಯಲ್ಪಟ್ಟಿತು. ರೌಪ್ಯ ಮಹೋತ್ಸವದಲ್ಲಿ ಸೇರಬಾರದೆಂದು ಜಾಹೀರಾತುಗಳನ್ನು ಹಂಚಿ ಮುದ್ರಣ ಕಾಯಿದೆಯ ಭಂಗ ಮಾಡಿದ ಬಗ್ಗೆ ಮದ್ರಾಸದೊಳಗಿನ ರಾ|| ಬಿ ಶ್ರೀನಿವಾಸರಾವ ಎಂಬವರಿಗೆ ಸೆರೆಹಿಡಿಯಲ್ಪಟ್ಟದೆ. ರಾಮಾಯಣ ಕೀರ್ತನ ಮಾಡಿ ರಾಜದ್ರೋಹ ಬೀರುವ ಆರೋಪದ ಮೇಲೆ ಸಂಯುಕ್ತ ಪ್ರಾಂತದೊಳಗಿನ ಪಂಡಿತ ಶಾಂತಿಕುಮಾರ ಭಾರತೀಯರವರಿಗೆ ಸೆರೆ ಹಿಡಿದು ೩ ಸಾವಿರ ಜಾಮೀನು ಪಡೆದು ಬಿಡುಗಡೆ ಮಾಡೋಣಾಗಿದೆ.

* * *

ರೌಪ್ಯ ಮಹೋತ್ಸವಕ್ಕಾಗಿ ಏರ್ಪಡಿಸಿದ ಉತ್ಸವ ನಿಧಿಗೆ ಅರ್ಧ ಕೋಟಿ ರೂಪಾಯಿಗಳು ದೊರಕಿದವು. ಉತ್ಸವ ಮಂಡಳದ ಅಧ್ಯಕ್ಷರಾದ ವಿಲಿಂಗ್ಡನ್ ದೊರಸಾನಿಗಳಿಗೆ ಒಂದು ಕೋಟಿ ರೂಪಾಯಿಗಳ ಅಪೇಕ್ಷೆಯಾಗಿ, ಅಷ್ಟು ರಕಮನ್ನು ತಮ್ಮ ಸ್ವಾಧೀನ ಕೊಡಬೇಕಾಗಿ ಅವರು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಮುಂಬಯಿ ಪ್ರಾಂತದಲ್ಲಿ ಈಗಾಗಲೇ ೧೦ ಲಕ್ಷಕ್ಕೆ ಮಿಕ್ಕಿ ನಿಧಿ ಸಂಗ್ರಹವಾಗಿದೆ. ದೊರೆಸಾನಿಗಳ ಅಪ್ಪಣೆಯಂತೆ ಇನ್ನು ೧೦ ಲಕ್ಷ ಮುಂಬಯಿ ಪ್ರಾಂತವು ಪಟ್ಟಿ ಕೂಡಿಸಬೇಕಾಗಿದೆ. ಉತ್ಸವ ಪಟ್ಟಿ ಕೂಡಿಸುವ ಕ್ರಮವನ್ನು ಎಲ್ಲರೂ ಅನುಭವಿಸುವ ವಿಷಯ. ಗಯಾದೊಳಗಿನ ಒಂದು ಪ್ರಕಾರವನ್ನು ನಮೂದಿಸಿದ್ದಲ್ಲಿ ತಕ್ಕನುಟ್ಟಿಗೆ ಹಿಂದುಸ್ಥಾನದಲ್ಲಿ ನಡೆಯುವ ಪಟ್ಟಿ ವಸೂಲಿಯ ಕಲ್ಪನೆ ಬಂದೀತು. ಪಾಟನಾ ಪಟ್ಟಣದ 'ಸರ್ಚಲೈಟ' ಪತ್ರಿಕೆಯಲ್ಲಿ

(೧೨ನೇ ಪಾನಿನ ಮೇಲೆ ಮುಂದರಿಸಿದೆ)

The Canara Industrial & Banking Syndicate, Ltd

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Head Office — **Mukund Nivas, UDIPI**

Branches — Udipi, Bangalore City, Mangalore, Payyanur, Cannanore, Brahmavar, Honnavar, Karwar, Hubli, Belgaum, Sirsi, Kumta, Hungarkatta, Coondapur, Ankola, Kanhangad & Bellary

Paid-up Capital Rs. 2,12,200.

Working Capital exceeds Rs 17 Lacs.

Last 5 Year's Progress proves growing popularity.

Year	Rolling Capital
1930	2,42,095
1931	4,95,266
1932	9,25,958
1933	**13,90,789.**
1934.	15,93,238.

Fixed Deposits for one year and two years are accepted now at 5% and 5½% respectively

All sorts of Banking Business transacted

For further particulars apply to —

Kumta, 1—5—1935

G Sanjiva Nayak
Agent at KUMTA.

ಯುದ್ಧದ ತಾಲೀಮು!

[ನಿರೀಕ್ಷಕನು ಬರೆದುದು.]

ಎಲ್ಲರ ದೃಷ್ಟಿ ಜರ್ಮನಿಯ ಮೇಲೆ ಯುದ್ಧ ಮಾಡಿದ ಹೊರತು ಜರ್ಮನಿಗೆ ಉಪಾಯವಿಲ್ಲವಾಗಿ ಮಿ ಫ್ಲ್ಯಾಂಡಿನವರು ಪ್ರತಿಪಾದಿಸುತ್ತಾರ ಫ್ರೆಂಚ ರಿಗೂ ರಶ್ಯರಿಗೂ ಒಪ್ಪಂದವಾಯಿತು ಪ್ರಕಟಗೊಂಡ ಶರ್ತುಗಳಲ್ಲಿ ವಿಶೇಷವೇನಿಲ್ಲ ಮಿತ್ರಭಾವದ ಸಹಾಯವನ್ನಷ್ಟೇ ಫ್ರೆಂಚರು ಅಪೇಕ್ಷಿಸಿದ್ದಾರೆ ಆದರೆ ಜರ್ಮನಿಯು ಪಿರ್ಯಾದಿ ಸ್ವತಂತ್ರ ಶರ್ತುಗಳ ರುವವಂತಲೂ ಅವನ್ನು ಇತ್ತಿಟ್ಟವರು ಒಪ್ಪಿಟ್ಟುಕೊಂಡಿದ್ದಾಗಿಯೂ ತರ್ಕ ಸೌಷ್ಠವಾಸಿಸ್ಲಿವಾಗಿ ಫ್ರೆಂಚ ಮಹಾನುಭಾವರ ಟೀಕೆ ಹಿಟ್ಲರರು ನಲ್ವತ್ತು ಒದಿಯಿಂದ ತಮ್ಮ ಯುದ್ಧ ಶಸ್ತ್ರಗಳು ತಯಾರಿ ಮಾಡಿದ್ದಾರೆಂದು ಎಣಿಸಿ ಸೈನ್ಯ ಪದಕಗಳ ಸಕಲ ಸಿದ್ಧತೆ ಮಾಡಹತ್ತಿದ್ದಾರೆ ನೌಕಾಘೋಷಣದ ಕುರಿತು ಬ್ರಿಟಿಶ ನೌಕಾ ಇಲಾಖೆಯವರೆ ಚರ್ಚೆ ನಡಿಸಿ ಬ್ರಿಟಿಶರಿಗೆ ಜಲಾಂತರ್ಗತ ಹಡಗಗಳನ್ನು ಅವರು ರಚಿಸಲಾರಂಭಿಸಿದರು ಇದರಿಂದ ಬ್ರಿಟಿಶರು ಗಲಭೆಯನ್ನೆಬ್ಬಿಸಿದರೆ ಪಾರ್ಲಮೆಂಟ ಸಭೆಯಲ್ಲಿ ಈ ಬಗ್ಗೆ ಪ್ರಶ್ನೆಯಾಯಿತು ಸಭಿಕರಿಗೆ ಸಮಾಧಾನ ಮಾಡಬೇಕಾದರ ಪ್ರಧಾನ ಮಂಡಲದವರಿಗೆ ಸಂಕೋಚವಾಯಿತು ಜರ್ಮನಿಯ ಧೋರಣದಿಂದ ಬ್ರಿಟಿಶ ದೇಶದ ಭದ್ರತೆಗೆ ಭಂಗ ಬರುತ್ತಾದಾಗಿಯೂ, ವೈಮಾನಿಕ ಬಲವನ್ನು ಹೆಚ್ಚಿಸಬೇಕಾಗಿಯೂ ಸಭಿಕರು ವಾದಿಸಿದರು ಲಂಡನಿನ ಪೌರ್ಸನ್ ದೊರೆಸಾನಿಗಳು ತಮ್ಮ ಪಟ್ಟಣದ ಭದ್ರತೆಗೆ ವಿಮಾನುಗಳನ್ನು ರಚಿಸುವದಕ್ಕಾಗಿ ೨ ಲಕ್ಷ ಹವನುಗಳನ್ನರ್ಪಿಸಿದ್ದಾರೆ ಆಕಾಶ ಮಾರ್ಗದಲ್ಲಿಯೇ ಈ ಯುದ್ಧವಾಗುವದಂತೆ! ಜರ್ಮನಿಯ ಸೇನಾಪತಿಗಳಾದ ಗೋರಿಂಗರವರು ವೈಮಾನಿಕ ಬಲವನ್ನು ಬೆಳೆಸಿ ಬ್ರಿಟಿಶ, ಫ್ರಾನ್ಸ್, ಇಟಾಲಿ ಮೊದಲಾದ ಯಾವತ್ತೂ ಯುರೋಪ್ಯ ರಾಷ್ಟ್ರಗಳ ಸರಿಕರಾಗಬಯಸಿದ್ದಾರೆ ಈ ಮೂರು ರಾಷ್ಟ್ರಗಳಲ್ಲಿದ್ದಷ್ಟು ವೈಮಾನಿಕ ದಲ ಜರ್ಮನಿಯಲ್ಲಿರಬೇಕೆಂತ ಇದೇ ಯುರೋಪ್ಯ ಶಾಂತತೆಯ ಮೂಲಾಧಾರವೆಂದು ಸೇನಾಪತಿ ಗೋರಿಂಗರವರ ಅಭಿಮತ ಜರ್ಮನಿಯ ಪೂರ್ವ ಪ್ರಶ್ಯಿಯಾ ಪ್ರಾಂತದ ಕೋನಿಂಗ್ಸಬರ್ಗ ಪಟ್ಟಣದಲ್ಲಿ ತಾ ೮ನೇ ಬುಧವಾರ ವೈಮಾನಿಕ ಹಲ್ಲೆಯ ತಾಲೀಮಾಯಿತು ಮೊದಲು ತುತೂರಿ ಬಾರಿಸಿ ಪಟ್ಟಣಿಗರಿಗೆ ಮುಂಜಾಗ್ರತೆ ಕೊಡಲಾಯಿತು ಪೋಲೀಸರೂ, ಸೈನಿಕರೂ ಲೋಕರಕ್ಷಣಯ ತಾಲೀಮು ಮಾಡಿದರು ವಿಮಾನುಗಳಿಂದ ಹರಡಿಸಿದ ವಿಷಾರಿ ಹೊಗೆಯಿಂದ ಸಂರಕ್ಷಣ ಮಾಡಿಕೊಳ್ಳುವದಕ್ಕಾಗಿ ಪೋಲೀಸರೂ ಸೈನಿಕರೂ ಹೊಸ ಪದ್ಧತಿಯ ಸಂರಕ್ಷಕ ಕವಚಗಳನ್ನು ಧರಿಸಿದ್ದರು ಅರ್ಧ ತಾಸಿನ ವರೆಗೆ ಈ ತಾಲೀಮು ನಡೆಯಿತು ಪ್ರತಿ ಸೂಚನೆಯಾದ ಬಳಿಕ ನಿತ್ಯವ್ಯವಹಾರ ನಿಶ್ಚಯದಂತೆ ನಡೆಯಲಿಕ್ಕೆ ಪ್ರಾರಂಭವಾಯಿತು ಒಬ್ಬಾ ತಿಂಗಳಲ್ಲಿ ಜರ್ಮನಿಯು ಮುಂದಾಗಿ ಯುದ್ಧವನ್ನು ಪ್ರಾರಂಭಿಸುವದೆಂದ ವಿಯನ್ನದೊಳಗಿನ ಜ್ಯೋತಿಷಿಗಳೊಬ್ಬರ ಭವಿಷ್ಯ ಹೇಳುತ್ತಾರೆ ಜರ್ಮನಿಯೊಳಗಿನ ಸೈನ್ಯಬಲ ಬ್ರಿಟಿಶ, ಫ್ರಾನ್ಸ ಇತರ ದೇಶಗಳೊಳಗಿನ ಸೈನ್ಯಬಲ ಅವುಗಳಿಗೆ ತಗಲುವ ಖರ್ಚು ಇವುಗಳನ್ನು ಸೈನ್ಯಶಾಸ್ತ್ರ ತಜ್ಞರು ಲೆಕ್ಕ ಮಾಡಿ ಯುರೋಪ ಖಂಡವು ಯುದ್ಧಕ್ಕೆ ಸಿದ್ಧವಾಗಿರುವದಾಗಿ ಅಭಿಪ್ರಾಯಪಟ್ಟಿರುತ್ತಾರೆ ೩ ಕೋಟಿ ಜನರು ಈಗ ಯುದ್ಧಕ್ಕೆ ಸಿದ್ಧರಾಗಿದ್ದಾರೆ ಮಹಾಯುದ್ಧವಾದಂದಿನಿಂದ ೪ ಶಂಕು ಡಾಲರುಗಳನ್ನು ಖರ್ಚು ಮಾಡಿದರಂತೆ ಇನ್ನೂ ಖರ್ಚು ಮಾಡುತ್ತಿದ್ದಾರೆ ಆ ಲೆಕ್ಕದ ವಿವರ ಸೈನ್ಯ ತಯಾರಿಯ ವಿವರ ಜನಸಾಮಾನ್ಯರಿಗೆ ಅವಶ್ಯವಾದದ್ದಲ್ಲ ಆದರೆ ಅಮೆರಿಕದ ಒಬ್ಬ ಪತ್ರಿಕೆಯು ಲಂಡನಿನ ಸುದ್ದಿಗಾರರು ಜರ್ಮನಿಯೊಳಗೆ ತಯಾರಿಸಲ್ಪಟ್ಟ ಆ ಪ್ರಕಾರದ ಯುದ್ಧ ಸಾಹಿತ್ಯಗಳ ವರ್ಣನೆ ಮಾಡಿದ್ದಾರೆ ಅವುಗಳ ವರ್ಣನ ಕೇಳತಕ್ಕಂಥದ್ದಿದೆ ನಾವು ಕೆಳಗೆ ಕೊಟ್ಟಿದೆ — (೧) All piercing Bullet (ಸರ್ವಭೇದಕ ಗುಂಡು) (೨) Rotative Gun (ತಿರುಗುವ ನಳಿಗೆಯುಳ್ಳ ತೋಫು) (೩) Stratosphere Rocket (ಸ್ಟ್ರಟೋಸ್ಫಿಯರ ರಾಕೆಟ) (೪) The Z Ray (ಝೆಡ್ ಕಿರಣ) (೫) Strange Machine Gun (ಸ್ಟ್ರೇಂಜ ಮಶಿನ್ ಗನ್) ಆಲ್ ಪಿಯರ್ಸಿಂಗ ಬುಲೆಟ್ ಅಂದರೆ ಸರ್ವಭೇದಕ ಗುಂಡು ಮತ್ತು ೬ ಇಂಚು ದಪ್ಪವಿದ್ದಾಗ್ಯೂ ಈ ಗುಂಡು ಅದನ್ನು ಭೇದಿಸಿ ಒಳಸೇರಬಲ್ಲದು ಇಂಥ ಗುಂಡುಗಳು ದಿನ ೪ ಲಕ್ಷ ಅಷ್ಟು ಸಿದ್ಧವಾಗುತ್ತವೆ 'ರೋಟೇಟಿವ ಗನ್' ಅಂದರೆ ತಿರುಗುವ ನಳಿಗೆಯುಳ್ಳ ತೋಫು ಇದಕ್ಕೆ ೫ ತಿರುಗುವ ನಳಿಗೆಗಳಿವೆ ೧ ಮಿನಿಟಿಗೆ ೧೦೦೦ ಗುಂಡುಗಳನ್ನು ಇದು ಹಾರಿಸಬಲ್ಲದು ಶತ್ರು ಸೈನ್ಯವು ವಿಶೇಷದಿಂದ ಸಾಗಿಬರುತ್ತಿದ್ದಾಗ್ಯ, ವಿಮಾನುಗಳು ಥಟ್ಟನೆ ಹಾರಿಬಂದಾಗ ಈ ತೋಫುಗಳಿಂದ ಒಮ್ಮೆಲೇ ಅಗ್ನಿವೃಷ್ಟಿ ಸುರಿಸಿ ನಾಶ ಮಾಡುವ ಯೋಜನಯಾಗಿದೆ ಇಂಥ ೨ ಸಾವಿರ ತೋಫುಗಳನ್ನು ತಯಾರಿಸುವರಂತೆ 'ಸ್ಟ್ರಟೋಸ್ಫಿಯರ ರಾಕೆಟ್' ಅಂದರೆ ಆಕಾಶ ಬಾಣ ಇದರಿಂದ ೨೦೦ ಮೈಲು ಪ್ರದೇಶದಲ್ಲಿ ವಿಷಾರಿ ಹೊಗೆ ಇಳಿವ ವಿಷಾರಿ ಕ್ರಿಮಿಗಳನ್ನು ಥಟ್ಟನೆ ಪಸರಿಸಿ ಸರ್ವನಾಶ ಮಾಡಲಾಗುತ್ತದೆ 'ಝೆಡ್' ಕಿರಣ ಭಯಂಕರವಾದದ್ದು ಫ್ರಾನ್ಸ ದೇಶದವರು ಜರ್ಮನಿಯ ಗಡಿನಾಡಿನಲ್ಲಿ ರಚಿಸಿದ ಕೋಟೆ ಕೊತ್ತಲು, ಸಂಕಗಳನ್ನು ನಾಶ ಮಾಡಲು ಈ ಕಿರಣದಷ್ಟು ಪ್ರಚಂಡ ಶಕ್ತಿ ಬೇರೊಂದಿಲ್ಲ ಈ ಕಿರಣದ ಗುಟ್ಟನ್ನು ಜರ್ಮನ್ ಸರಕಾರದ ಬಹು ಜ್ವಾಗ್ರತೆಯಿಂದ ರಕ್ಷಿಸುತ್ತದೆ ಈ ಕಿರಣ ಬಿದ್ದೊಡನೆ ವಜ್ರವಾದ ಸಂಕಗಳು ಥಟ್ಟನೆ ಮುರಿದುಬೀಳುತ್ತವೆ, ತುಬಾಕಿಗಳ ಬಾಯಿ ಕರಗುತ್ತದೆ ವಿಮಾನಗಳ ಯಂತ್ರಗಳು ಆಕಾಶದಲ್ಲಿಯೇ ಬಿಡಿಬಿಡಿಯಾಗಿ ಬೀಳುವವು, ಉಗಿಬಂಡಿಯ ಮಾರ್ಗಗಳು ಪುಡಿಪುಡಿಯಾಗುವವು ತೋಫು ಹೊಡೆಯುವವರ ಸಂರಕ್ಷಕ ಕವಚಗಳು ನುಚ್ಚುನೂರಾಗುವವು 'ಸ್ಟ್ರೇಂಜ ಮಶಿನ್‌ಗನ್' ಅಂದರೆ ಸ್ಟ್ರೇಂಜರವರು ತಯಾರಿಸಿದ ಯಾಂತ್ರಿಕ ತೋಫು ಇದರ ತಾಕತ್ತು ರತ್ತಲು ಒಬ್ಬನು ಮಿನಿಟಿಗೆ ೬೦೦ ರೌಂಡ ಯಾನೆ ಗುಂಡುಗಳನ್ನು ಹಾರಿಸಬಹುದು ಇದಲ್ಲದ ಮಿನಿಟಿಗೆ ೧೪೦೦ ರೌಂಡು ಗುಂಡುಗಳನ್ನು ಹಾರಿಸಬಲ್ಲ ಮೋಟಾರ ತೋಫುಗಳನ್ನು ಜರ್ಮನರ

ತಾಯಂದಿರೆಲ್ಲರೂ ಬಲ್ಲರು—
ತಮ್ಮ ಬೆಳೆಯುವ ಮಕ್ಕಳಿಗೆ ಔಡಲೆಣ್ಣೆ ಅವಶ್ಯ ಬೇಕೆಂದು'
ಸ್ವಸ್ತಿಕ ಔಷಧಿ ಔಡಲೆಣ್ಣೆಗಿಂತ ಮಿಗಿಲಾದ ಎಣ್ಣೆಯೇ ಇಲ್ಲ
ಡಾಕ್ಟರಜನರೆಲ್ಲರೂ ಇದನ್ನೇ ಶಿಫಾರಸ ಮಾಡುತ್ತಾರೆ
ಎಂದರೂ ಒಂದು ಗುಟಕು ಕೊಂಡರೆ ಹೊಟ್ಟೆ ಸ್ವಚ್ಛವಾಗಿ ದೇಹಕ್ಕೆ ಆರೋಗ್ಯವಾಗುವದು ನಿಮ್ಮ ಮಕ್ಕಳು ಸರಿಯಾಗಿ ಅನ್ನ ಕೊಳ್ಳದಿದ್ದರೆ ಕಿರಿಕಿರಿ ಮಾಡುತ್ತಿದ್ದರೆ, ಒಂದು ಗುಟಕು ಸ್ವಸ್ತಿಕ ಔಡಲೆಣ್ಣೆಯ ಗುಟಕು ಕುಡಿಸಿರಿ ಈ ಎಣ್ಣೆಗೆ ರಸವಿಲ್ಲ ವಾಸನೆಯಿಲ್ಲ, ಕುಡಿಯಲಿಕ್ಕೆ ಅತಿ ಮಧುರವಿದೆ!



ಸ್ವಸ್ತಿಕ ಔಷಧಿ ಔಡಲೆಣ್ಣೆ.
ಕಾರವಾರ ಜಿಲ್ಹೆಯ ಏಜಂಟರು —
ಎನ್. ಎಸ್. ರಂಗ್ಯಶೇಟ್ಟಿ,
ಪ್ರೋ. ಹಳಿಯಾಳ.
ದಕ್ಷಿಣ ಕನ್ನಡ ಜಿಲ್ಹೆಯ ಏಜಂಟರು
ಎಸ್. ಎನ್. ವ್ಹಿ. ನಾಯಕ ಮತ್ತು ಕಂಪನಿ, ಮಂಗಳೂರು

ತಯಾರಿಸಿರುವರಂತೆ ಇಂಗ್ಲಂಡ ದೇಶದಿಂದ ಜರ್ಮನರು ಯುದ್ಧ ಸಾಹಿತ್ಯಗಳನ್ನು ಗುಪ್ತವಾಗಿ ಆಮದು ಮಾಡುತ್ತಾರೆಂದು ವಾರ್ತೆ ಇದೆ ಅಮೇರಿಕೆಯವರು ಯುದ್ಧ ತಯಾರಿಯನ್ನು ಆತ್ಮಸಂರಕ್ಷಣೆಯ ನೆವದಿಂದ ನಡಿಸಿರತ್ತಾರೆ ಒಂದೊಂದಕ್ಕೆ ೧|| ಲಕ್ಷ ಡಾಲರು ಖರ್ಚು ಮಾಡಿ ಹೊಸ ನಮೂನೆಯ ವಿಮಾನಗಳನ್ನು ಅವರು ರಚಿಸತೊಡಗಿದ್ದಾರೆ ಈ ವಿಮಾನುಗಳ ಮೇಲೆ ೬ ಯಾಂತ್ರಿಕ ತೋಫು ೨ ಟನ್ ಮದ್ದು ಗುಂಡು ಇಟ್ಟುಕೊಂಡು ಒಮ್ಮೊಮ್ಮೆ ೩ ೪ ಸಾವಿರ ಮೈಲು ಸಂಚಾರ ಮಾಡಬಹುದಂತ ಜರ್ಮನಿಯು ಬ್ರಿಟಿಶ, ಫ್ರಾನ್ಸ, ಇಟಾಲಿಯವರಿಗೆ ಜೊಟ್ಟು ತೋರಿಸಿ ರಶಿಯಾ ದೇಶಕ್ಕೆ ಒಳಪಟ್ಟ ಜರ್ಮನಿಯವರ ವಾಸ್ತವ್ಯದ ಯುಕ್ರೇನ ಪ್ರಾಂತವ ಮೇಲೆ ಸಾಗಿ ಹೋಗುವ ತಯಾರಿ ನಡಿಸಿರುವದಾಗಿ ರುಶ್ಯದ ಭೀತಿಗೊಂಡು ಆ ಕಡೆ ಭದ್ರತೆ ಮಾಡತೊಡಗಿದ್ದಾರೆ ಕ್ಯಾಸ್ಪಿಯನ್, ಕಪ್ಪು, ಅಜೋವ್ಹ, ಬಾಲ್ಟಿಕ್ ಹಾಗು ಬಿಳೀ ಸಮುದ್ರಗಳನ್ನು ಜೋಡಿಸುವದಕ್ಕಾಗಿ ಒಂದು ದೊಡ್ಡ ಕಾಲುವೆಯನ್ನು ರಚಿಸುವ ಏರ್ಪಾಟ ಗಿದೆ ಇಷ್ಟು ದೊಡ್ಡ ಕಾಲುವೆ ಲೋಕದಲ್ಲಿ ಬೇರೊಂದು ಇಲ್ಲವಂತೆ ಇದು ೧೯೩೭ನೇ ಇಸ್ವಿಯಲ್ಲಿ ತಯಾರಾಗುವದಂತೆ. ಜಪಾನಿಯರು ಜರ್ಮನರ ಪಕ್ಷಪಾತಿಯಾಗಿ ರುಶ್ಯ ದೇಶದ ವ್ಲಾಡಿವೊಸ್ಟೋಕ್ ಬಂದರದ ಮೇಲೆ ಸಾಗಿಹೋಗಿ ರಶ್ಯರಿಗೆ ಪೀಡಿಸುವರು ಒಗ ಫ್ರೆಂಚರು, ಬ್ರಿಟಿಶರು ಇಟಾಲಿಯರು ರುಶ್ಯರ ಪಕ್ಷಪಾತಿಯಾಗಿ ಸೇರಿ ಯುದ್ಧದ ವಡವಾನಲವನ್ನು ಪ್ರಜ್ವಲಿಸುವಂತಾಗಿ ಇಲ್ಲವದ ಅಧಿಪತಿಯ ರೌಪ್ಯ ಮಹೋತ್ಸವದ ಸಮಯ ಲಂಡನ್ ಪಟ್ಟಣದಲ್ಲಿ ಸೇರಿದ ಕನಡಾ, ಆಸ್ಟ್ರೇಲಿಯಾ ನ್ಯೂಝಿಲಂಡ, ದಕ್ಷಿಣ ಆಫ್ರಿಕಾ ಮೊದಲಾದ ವಸಾಹತುಗಳ ಪ್ರಧಾನರೊಡನೆ ಬ್ರಿಟಿಶ ಪ್ರಧಾನಮಂಡಲದವರು ಯುದ್ಧವೆಸಗಿದ್ದಲ್ಲಿ ಯಾರೇನು ಮಾಡಬೇಕೆಂಬುದರ ಕುರಿತು ಆಲೋಚನೆ ಮಾಡಿದರಂತೆ ಹಿಂದುಸ್ಥಾನ ದೇಶವು ಪರತಂತ್ರ ದೇಶವಾಷ್ಟರಿಂದ, ಹಿಂದುಸ್ಥಾನದೊಳಗಿನ ಸೈನ್ಯ ಇಲಾಖೆಯು ಸಾಮ್ರಾಜ್ಯ ಸೈನ್ಯ ಇಲಾಖೆಯ ಜೊತ್ತಾದ್ದರಿಂದ ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳು ಹಾಜರಿದ್ದಾಗ್ಯೂ ಅವರಿಗೆ ಈ ಆಲೋಚನೆಯಲ್ಲಿ ಸೇರಿಸಿಕೊಳ್ಳಲಿಲ್ಲ ಯುದ್ಧ ಒದಗಿದಲ್ಲಿ ಸೈನ್ಯ ಸಾಧಕಗಳನ್ನು ಒದಗಿಸುವದಕ್ಕಾಗಿ ಮುಂಬಯಿಯೊಳಗಿನ ಬ್ರಿಟಿಶ್ ಅಮೇರಿಕಾ ಮೋಟಾರು ಕಂಪನಿಗಳೊಡನೆ ಕರಾರು ಆಗಿರುವದಾಗಿ 'ಯುನೈಟೆಡ್ ಪ್ರೆಸ್ಸ' ವರ್ತಮಾನಸಂಸ್ಥೆಯ ಮುಂಬಯಿ ಸುದ್ದಿಗಾರರ ವಾರ್ತೆ ಇದನ್ನೆಲ್ಲ ಪರಾಮರಿಸಿದರೆ ಏಶಿಯನ್ನಾದೋಳಗಿನಜ್ಯೋತಿಷಿಯು ನುಡಿದಂತೆ ಜುಲೈ ತಿಂಗಳ ತನಕ ಯುದ್ಧ ತಡೆದಿತ್ತೇನೆಂದ ಸಂದೇಹವುಂಟಾಗುತ್ತದೆ

ಇತಾಲಿ ಹಬಸಿ ದೇಶದೊಳಗಿನ ಪ್ರಕರಣಕ್ಕೆ ಒಳ್ಳೇ ಕಳೆ ಏರಿದೆ ಹಬಸಿ ದೇಶದವರು ಸೈನ್ಯ ಕೂಡಿಸತೊಡಗಿದ್ದಾರೆಂದು ಇತಾಲಿಯ ಸರಕಾರವು ಹಬಸಿ ಜನಾಂಗದ ಮೇಲೆ ಆರೋಪ ಹೊರಿಸಿ ಇತಾಲಿಯ ವಸಾಹತುಗಳ ಸಂರಕ್ಷಣಕ್ಕಾಗಿ ೩೪೦೦೦ ಸೈನಿಕರನ್ನೂ ಅವುಗಳ ಸೈನ್ಯಕ್ಕೆ ಅವಶ್ಯವುಳ್ಳ ಮದ್ದು-ಗುಂಡು ಪೂರೈಸಿಕೊಳ್ಳಲಾರಂಭಿಸಿರುವದಾಗಿ ವಾರ್ತೆ ಇತಾಲಿಗ ವಿರೋಧ ಬಗೆದು ಬೇರೆ ಬೇರೆ ಯುರೋಪ್ಯ ರಾಷ್ಟ್ರಗಳು ಹಬಸಿ ಸರಕಾರಕ್ಕೆ ತೋಫು-ತುಬಂಕಿ-ಮದ್ದು ಗುಂಡು ಮುಂತಾದವುಗಳನ್ನು ಪೂರೈಸುತ್ತಲಾಗಿಯೂ, ಹಾಗೆ ಪೂರೈಸುವ ರಾಷ್ಟ್ರಗಳಿಗ ಇತಾಲಿಯ ಸರಕಾರವು ಶತ್ರುಗಳೆಂದು ಎಣಿಸಬೇಕಾದೀತಾಗಿಯೂ ಇತಾಲಿಯು ಬೆದರಿಕೆ ಹಾಕಿದೆ ಬೇರೆ ಬೇರೆ ರಾಷ್ಟ್ರಗಳಿಗೆ ಈ ಕುರಿತು ನಿಷೇಧ ಮಾಡುವ ಪತ್ರಗಳನ್ನು ಇತಾಲಿಯ ಸರಕಾರವು ಬರೆದಿರುವದಾಗಿ ರೋಮಪಟ್ಟಣದೊಳಗಿನ 'ಗೂರ್ನಲ್' ಎಂಬ ಇತಾಲಿಯ ಪತ್ರಿಕೆಯ ಅಂಬೋಣ ಹಬಸಿ ಜನಾಂಗವು ಶರಣಾಗತವಾದನಕ ಇತಾಲಿಯ ವಸಾಹತುಗಳು ಸುರಕ್ಷಿತವೆಂದು ಮುಸೊಲಿನಿಯವರು ಒಪ್ಪರ, ಸ್ವಾತಂತ್ರ್ಯ ಕಳಕೊಳ್ಳಲು ಸ್ವಾಭಿಮಾನಿ ಹಬಸಿ ಜನಾಂಗವು ಒಪ್ಪದು! ರಾಷ್ಟ್ರಸಂಘದಲ್ಲಿ ಇತ್ತಿಟ್ಟಿನ ಕಲಹವಿಚಾರ ನಡೆದಾಗ ಇತ್ತಿಟ್ಟಿನಲ್ಲಿ ಯುದ್ಧ ತಯಾರಿ ನಡೆಯುವದು ಕ್ಷೇಮಸೂಚಕವಲ್ಲ ಹಬಸಿ ಪ್ರಕರಣದವಿರಾಟಸ್ವರೂಪವನ್ನು ನಾನು ಈ ಹಿಂದೆ ಸವಿಸ್ತರ ವಿವರಿಸಿದ್ದೇನೆ ಈಗಿನ ವಾರ್ತೆಯ ಮೇಲಿಂದ ಯುದ್ಧ ಭೀತಿ ಮಿಗಿಲಾಗ ತ್ತದ

ರಾಜಕಾರಣಧುರಂಧರರು ಇನ್ನೂ ಆಲೋಚನೆ ಮಾಡುತ್ತಿದ್ದಾರೆ ಯುದ್ಧ ಪರಿಹಾರಕ್ಕಾಗಿ ಕೈಕೊಳ್ಳುವ ಕ್ರಮಗಳಿಂದ ಹುಟ್ಟುವದು ಯುದ್ಧಕ್ಕೇ! ಇಂಥ ಪರಸ್ಪರ ವಿರುದ್ಧವಾದ ಚಪಲ-ಚೇಷ್ಟೆಗಳ ಪರಿಣಾಮವೇನೆಂದು ಹೇಳುವದು ಸುಜ್ಞರಿಗೆ ಸಹ ಕಠಿಣವಿಂದ ಬಳಿಕ, ನಾನೇನು ಹೇಳಲಿ?

For Sale.

One Harvey Foster Vulcanizer Standard Model A complete with blow lamp used for three months only For price and particulars write to **K. R. KAMAT,** **ANKOLA** [N Kanara]

Established 1900 ಶ್ರೀ *FIXED RATE*

ದಾಸಪ್ಪಾ ಕೃಷ್ಣಪ್ಪಾ ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಬವಳಿ ಅಂಗಡಿ, ಶಿರ್ಶಿ

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳು, ತರತರದಕ್ಷಿಣಕಾಶ್ಮೀರದ ಖಣಗಳೂ ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಉಂಪವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು, ಉಪ್ಪರ್ಣೆ ಟೊಪ್ಪಿಗೆಳೂ, ಧೋತರ ಜೋಡುಗಳೂ, ರೇಶ್ಮೆ ಖಿದ್ದರವಡಿಗಳೂ, ನಾರವಡಿಗಳೂ, ವ ಅಂತಾದ ಎಲ್ಲ ತರದ, ಜವಳಿಯೂ ಕಬ್ಬಿಣದ ಮಜಭೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಯೋಗ್ಯ ದರದಿಂದ ಸಿಗುವವು ಡೋಯಿ ವ್ಯಾಪಾರಕ್ಕೆ ಕಮಿಶನ್ ಕೊಡಲಾಗುವದು.

Tel "Honesty"] **D. K DHAKAPPA BROS.,**

ಹೊಸ ಮಾಲು. **Cloth Merchants,** **SIRSI.** N KANARA ದರ ಅಗ್ಗ.

ಸುಲಭ ಕ್ರಯ! ಡಾಕ್ಟರ ಜೀ ಬೀ ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರ ಗಳಿಗೆ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ನಷ್ಟವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟೆತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರಿಲ್ಪಟ್ಟ ವ್ಯಾಧಿಗಳನ್ನೂ ಸ್ತಂಭಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ ಮೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಕೆಯನ್ನು ಮಿಶ್ರಯಿಸಿದರೆ ಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸೆ ಧಿಕ್ಕಟೆ ಕಳಿಸಲಾದೀತು ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪ ೦, ವ್ಹಿ ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦ ವಿ ಪಿ ೦-೩-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸೂ ಸರಿಯಾಗಿ ತಿಳಿಯುವಂತೆ ಬರೆಯಿರಿ

(Registered Trade Mark)

ಪತ್ತೆ-ಗುರುಬಸವ ಅಂಡ್ ಕಂಪನಿ ಲಿಮಿಟಡ್, ಪೋ ಬಾ ೫೧೧, ಮಾರ್ಕೆಟ್‌ನ ಮುಂದಿನ

ಕನ್ನಡವೃತ್ತ.

ಮಂಗಳೂರು ಸಂ| ವೈಶಾಖ ಶು| ೧೧ನೇ ಸೋಮವಾರ

ಹಿಂದಭೂಮಾತೆಯ ಪ್ರಾರ್ಥನೆ!

ಅರಸರ ಉತ್ಸವ ಪ್ರಸಂಗಗಳಲ್ಲಿ ಪ್ರಜೆಗಳ ಕಷ್ಟಗಳನ್ನು ನಿವಾರಿಸುವ ಸಂಪ್ರದಾಯವು ಅನಾದಿ ಕಾಲದಿಂದ ನಡೆದು ಬಂದಿದೆ. ಸ್ವಕ್ರಮದಿಂದ ಪ್ರಜೆಗಳು ಮುಂದಾದ ನಿರ್ಬಂಧಗಳನ್ನು ತಿರಸ್ಕರಿಸಿ ರಾಜ ಧಿಕಾರದಿಂದ ಅವನ್ನು ದೂರಪಡಿಸುವ ಪರಂಪರೆಯನ್ನು ಎಲ್ಲರೂ ಬಲ್ಲದ ವಿಷಯ. ಉತ್ಸವ ಕಾಲದಲ್ಲಿ ಪ್ರಜಾ ಸಂತೋಷವನ್ನು ಕಾಪಾಡುವ ಸಂಪ್ರದಾಯವು ಇದೆ. ಆ ರಂಗ ರೌಪ್ಯ ರಾಜ್ಯಾರೋಹಣೋತ್ಸವದ ಶುಭ ಪ್ರಸಂಗದಲ್ಲಿ ಸಮ್ರಾಟ್ ರಂತಮ ಜಾರ್ಜ್ ಬಾದಶಹರ ಸನ್ನಿಧಾನದಲ್ಲಿ ಹಿಂದ ಭೂಮಾತೆಯು ಬಂದವರಿಗೆ ವಂದಿಸುವಾಗ ಈ ಪ್ರಕಾರ ತನ್ನ ಪರಿಸ್ಥಿತಿಯನ್ನು ಹೇಳಿಕೊಳ್ಳುವದು —

ಚಕ್ರವರ್ತಿಗಳೇ ಜಗತ್ಪಾಲಕನು ತಮಗೆ ಆಯುರಾರೋಗ್ಯವನ್ನಿತ್ತು ಇಂದಿಗೆ ರೌಪ್ಯ ರಾಜ್ಯಾರೋಹಣೋತ್ಸವವನ್ನು ಒದಗಿಸಿತೆಂದು ಆ ಪರಮಾತ್ಮನಿಗೆ ನಾನು ಕೃತಜ್ಞಪೂರ್ವಕವಾಗಿ ಕೊಂಡಾಡುತ್ತೇನೆ. ಭೂಪಾಲರಿಗೆ ಅಭಿನಂದಿಸುತ್ತೇನೆ. ಉತ್ಸವದ ಉಲ್ಲಾಸದಲ್ಲಿ ನಾನೂ ಉಲ್ಲಾಸದಿಂದ ಸೇರಬಯಸಿದ್ದೆ. ಸಾರಬೇಕೆಂಬ ಲವಲವಿಕೆಯು ಈಗಲೂ ಉಂಟು. ಭೂಪಾಲರಿಗೂ ನನಗೂ ವಿಶೇಷ ಋಣಾನುಬಂಧವಿದೆ. ಯುವರಾಜರಾಗಿ ತಾವು ೧೯೦೫ನೇ ಸಾಲಿನಲ್ಲಿ ನನ್ನಲ್ಲಿ ಚಿತ್ತೈಸಿ ನನ್ನ ಮಕ್ಕಳ ಕಡೆಯಿಂದ ಆದರಾತಿಥ್ಯ ಪಡೆದು ಸಂತೋಷಭರಿತರಾಗಿ ಮರಳಿಹೋಗಿದ್ದಿರಿ. ೧೯೧೧ನೇ ಇಸ್ವಿಯಲ್ಲಿ ಪಟ್ಟವನ್ನೇರಿ ಮರುವರ್ಷವೇ ಇತಿಹಾಸಪ್ರಸಿದ್ಧ ಇಂದ್ರಪ್ರಸ್ಥದಲ್ಲಿ ದರಬಾರನ್ನು ನೆರಿಸಿ ವಂಗಭಂಗವನ್ನು ರಾಜಾಧಿಕಾರದಿಂದ ರದ್ದುಪಡಿಸಿ, ನನ್ನ ಮಕ್ಕಳಿಗೆ ಸಂತೈಸಿದ ಸಂಗತಿಯನ್ನು ನಾನೆಂದಿಗೂ ಮರೆಯಲಾರೆ. ಮರೆಯುವದು ಹೇಗೆ? ವಂಗಭಂಗ ನಿಶ್ಚಿತ ಸಂಗತಿ (settled fact) ಎಂಬದಾಗಿ ತಮ್ಮ ಕಾರಭಾರ ಮಾಡುವ ಪ್ರಧಾನರು ನುಡಿದಿದ್ದರು. ಅದನ್ನು ತಾವು ಪ್ರಜಾನುರಂಜನಕ್ಕಾಗಿ ಧಿಕ್ಕರಿಸಿ ವಂಗೈಕ್ಯವನ್ನು ಸಾಧಿಸಿದಿರಿ. ಪ್ರಜಾನುರಂಜನವೇ ರಾಜರ ಮುಖ್ಯ ಕರ್ತವ್ಯವೆಂದು ತಾವು ಲೋಕಕ್ಕೆ ಸಿದ್ಧಪಡಿಸಿದಿರಿ. ಈ ಮೂಲಕ ತಮ್ಮ ಬಗ್ಗೆ ನನ್ನಲ್ಲಿ ವಿಶೇಷವಾದ ಭಕ್ತಿ ಪ್ರೇಮಗಳುಂಟಾಗಿವೆ. ಸನ್ನಿಧಾನದಿಂದ ನನ್ನ ಆಡಳಿತೆಗಾಗಿ ನಿಯಮಿಸಲಾಗಿರುವ ಮುಖ್ಯ ಅಧಿಕಾರಿಗಳು ಪ್ರಜಾನುರಂಜನದ ಹೊಸ ಮನ್ವಂತರವನ್ನು ಪ್ರಾರಂಭಿಸಿ ಕೋಟ್ಯಾವಧಿ ಪುತ್ರರಿಗೆ ನಾನಾ ಸಲಹುವರೆಂದು ನಾನು ನಂಬಿಕೊಂಡಿದ್ದೆ. ಮಹಾಯುದ್ಧ ಪ್ರಸಂಗದಲ್ಲಿ ನನ್ನ ಮಕ್ಕಳು ರಾಜನಿಷ್ಠೆಯಿಂದ ಬ್ರಿಟಿಶರ ಸಂಕಟವೇ ತಮ್ಮ ಸಂಕಟವೆಂಬ ಭಾವನೆಯಿಂದ ಪ್ರಾಣ ದೇಶದ ರಣಾಂಗಣದ ಮೇಲೆ ವೀರರಂತೆ ಹೋರಾಡಿ ಮಹಾಯುದ್ಧದಲ್ಲಿ ವಿಜಯ ಸಂಪ್ರಾಪ್ತ ಮಾಡಿದರೆಂಬಾಗಿ ಲೋಕವೇ ಹೊಗಳುತ್ತಿದೆ. ನನ್ನ ಆಡಳಿತೆಯಲ್ಲಿ ಅಭ್ಯಂತರ ಒದಗುವದೆಂದೂ ನನ್ನ ಮಕ್ಕಳಿಗೆ ಸ್ವಾತಂತ್ರ್ಯಪ್ರಾಪ್ತಿಯಾಗುವದೆಂದೂ ತಮ್ಮ ಪ್ರಧಾನರು ದೊಡ್ಡ ದೊಡ್ಡ ಜಾಹೀರನಾಮೆಗಳನ್ನೇ ಹೊರಡಿಸಿದ್ದರು. ಅವನ್ನು ನಾನು ನಿಜವೆಂದು ನಂಬಿಕೊಂಡೆ. ಆ ಜಾಹೀರನಾಮೆಗನುಸಾರವಾಗಿ ೧೯೧೯ನೇ ಇಸ್ವಿಯಲ್ಲಿ ಪ್ರಚುರಗೊಂಡ ರಾಜ್ಯಾಧಿಕಾರದ ಕ್ರಮವನ್ನು ನಾನು ಹೇಳುವದಕ್ಕಿಂತ ಕಡಿಮೆ. ಸ್ವತಂತ್ರ್ಯಕ್ಕಿಂತ ಪಾರತಂತ್ರ್ಯವೇ ಹೆಚ್ಚಾಯಿತು. ದಿವಾನರು ಸರಕಾರದ ಸೂತ್ರಗಳಂತೆ ಬೆಗಳಾಗಿ ನನ್ನ ಪ್ರಜೆಗಳಿಗೆ ಕಾಡಿದರು. ಪಂಜಾಬದಲ್ಲಿ ಹಾಕಿಕೊಂಡದ್ದು ಪ್ರಜೆಗಳ ಕೊಲೆಯಾಯಿತು. ಜಾಲಿಯನ್‍ವಾಲಾಬಾಗದ ಕೊಲೆ ಯಾರೂ ಎಂದಿಗೂ ಮರೆಯಲಾಗದ ವಿಷಯ. ಈ ಪ್ರಕಾರದಿಂದ ನಾನು ಉದ್ವಿಗ್ನಳಾದೆ. ಲೋಕಶಾಹಿ ಪುರಸ್ಕರ್ತರಾದ ತಮ್ಮ ಕಾರುಬಾರುದಾರರು ನನ್ನ ನಿರಪರಾಧಿ ಮಕ್ಕಳಿಗೆ ದಣಿಸುವ ಬಗೆ ಹೇಗೆಂದು ನಾನು ಯೋಚನೆಯಿಂದ ವ್ಯಾಕುಲಳಾದೆ. ಈ ಕೊಲೆಯ ತರಕದಿಂದ ಗಾಂಧಿಯು ಮುಂಬಾಗಿ ಬಂದನು. ಆತನಿಗೆ ತಮ್ಮ ಕಾರುಬಾರುದಾರರು ಪ್ರತಿಬಂಧಿಸಿದರು, ಸತ್ಯಾಗ್ರಹವಾಯಿತು. ಮುಂಬಿಗೆಯಲ್ಲಿ ನೂರಾರು ಜನರು ಸೆರೆಮನೆಗೆ ಕಳಿಸಲ್ಪಟ್ಟರು. ಭೂಪಾಲರೇ ತಾವು ಕರುಣಿಸಿದಿರಿ. ಜಾಹೀರನಾಮೆಯನ್ನು ಹೊರಡಿಸಿ ಸಕ್ಕವಲ ಕೈದಿಗಳನ್ನು ಬಿಡುಗಡೆ ಮಾಡಿದಿರಿ. ಆದಾಗ್ಯೂ ಕಾರುಬಾರುಗಾರರಿಗೆ ಸದ್ಬುದ್ಧಿ ಬರಲಿಲ್ಲ. ರಾಜ್ಯತಂತ್ರದ ಉಪಟಳ ತಪ್ಪಲಿಲ್ಲ. ಗಾಂಧಿಯ ಮಹಿಮೆಯು ಲೋಕಕ್ಕೆ ಗೊತ್ತಾದ ... ದಿನ ಎಲ್ಲರೂ ಮಣಿದರು. ೧೯೨೦ನೇ ಇಸ್ವಿಯಲ್ಲಿ ರಾಜಕಾರಣದ ನೂತನ ಉಪಕ್ರಮಕ್ಕೆ ಕೈಹಾಕಬೇಕಾಯಿತು. ಲೋಕದಲ್ಲಿ ಉಂಟಾದ ಸಮಗ್ರ ಆಂದೋಲನವನ್ನು ತಮ್ಮ ಪ್ರಧಾನರು ಬಲ್ಲದ ವಿಷಯ. ಲೋಕವೇ ಬಲ್ಲದು. ಆ ಆಂದೋಲನದ ಕಷ್ಟಗಳನ್ನು ನೆನೆಸಿದರೆ ಕರುಳು ಕರಗಿ ನೀರಾಗುತ್ತದೆ. ನನ್ನ ಸೇವಾಸಕ್ತಿಗಾಗಿ ನೇಮಿಸಿದ ಪೋಲೀಸರು ನಿರ್ಬಂಧದಿಂದ ನನ್ನಲ್ಲಿ ದೂರ ಸಾರಿ ದೇಶದಲ್ಲಿ ಉಂಟುಮಾಡಿದ ಹಾವಳಿಯನ್ನು ನಾನು ಹೇಗೆ ಸಂಪೂರ್ಣವಾಗಿ ತಮಗೆ ನಿವೇದಿಸಲಿ? ಆ ಸಂಗತಿಯ ಅಲ್ಪಾಂಶದ ಗ್ರಹಿಕೆಯಾದರೆ ತಾವು ಈಗಿನ ಕಾರುಬಾರುಗಾರರಿಗೆಲ್ಲ ಒಮ್ಮೆಲೇ ಸ್ವದೇಶಕ್ಕೆ ಕರಿಸಿಕೊಂಡು ಅವರಿಗೆ ನಿಮ್ಮ ಕಾರುಬಾರು ಸಾಕೆಂದು ಹೇಳದಿರಲಾರಿರಿ.

ರೌಲೆಟ್ ಕಾಯಿದೆಯನ್ನುಂಟುಮಾಡಿಸಿ ನನ್ನನ್ನು ನಿರ್ಬಂಧಿಸಲು ಮಾಡಿದ ಕುಹಕವನ್ನೂ ಅದರಿಂದೊದಗಿದ ಸಂತಾಪವನ್ನೂ ಗಾಂಧಿಯ ಸಂಗ್ರಾಮವನ್ನೂ ವಿಸ್ತಾರವಾಗಿ ಈಗ ನಾನು ಹೇಳಲಾರೆ. ದಿವಾಣರ ಪದವಲ್ಲಿ ಆರೂಢರಾದ ನನ್ನ ಮಕ್ಕಳೇ ಸಹೋದರರಿಗೆ ದಣಿಸಿ ನನ್ನ ಸೇವೆ ಮಾಡುವ ಮಹತ್ವಾಕಾಂಕ್ಷೆ ಹಿಡಿದರು. ಶುಭ್ರವಾದ, ನಿರ್ಮಲವಾದ, ನಿರುಪದ್ರವಿಯಾದ ಗಾಂಧಿ ಟೊಪ್ಪಿಗೆಯು ಮೇಲೆ ಚಿಂತಾಮಣಿಯಂಥ ವಿಚಾರವಂತ ದಿವಾಣನು ಎಬ್ಬಿಸಿದ ಹಾವಳಿ ನೋಡಿ ಲಜಪತರಾಯನು ಕೋಪಾವಿಷ್ಟನಾಗಿ ಪಂಜಾಬಿ ಪಾಟಿಯ ಅಭಿಮಾನವನ್ನು ಸಹ ತ್ಯಜಿಸಿ ಗಾಂಧಿ ಟೊಪ್ಪಿಗೆಯನ್ನು ಧರಿಸಿದನು! ಸಾವಿರಾರು ಪುತ್ರ-ಪುತ್ರಿಯರು ಕಾರಾಗೃಹವಾಸವನ್ನು ಸುಖವಿನ ಕಷ್ಟಪಟ್ಟರು. ಈ ಸಂದರ್ಭದಲ್ಲಿಯೇ ತಮ್ಮ ಯುವರಾಜರ ಆಗಮನವಾಯಿತು. ತಮಗೆ ನನ್ನ ಕರುಣ ಸ್ಥಿತಿಯ ಗ್ರಹಿಕೆಯಾಗಬೇಕೆಂದು ನನ್ನ ಮಕ್ಕಳು ಯುವರಾಜರಿಗೆ ಬಹಿಷ್ಕರಿಸಿ ಸೆರೆಮನೆಯ ಕ್ಲೇಶಗಳನ್ನು ಸಹಿಸಿದರು. ಸ್ವಾಮಿನ್ ಸಾಹೇಬರ ಚೌಕಶಿ ಮಂಡಳ, ಅದಕ್ಕೊದಗಿದ ಬಹಿಷ್ಕಾರ, ಇವನ್ನೆಲ್ಲ ನಾನು ತಮ್ಮಡೆ ನಿವೇದಿಸಬಯಸುವದಿಲ್ಲ. ಆದರೆ ಒಂದು ಮಾತನ್ನು ಮಾತ್ರ ನಾನು ಮರೆಯಲಾರೆ. ಲಜಪತರಾಯನಿಗೆ ಈ ಬಹಿಷ್ಕಾರ ಸಂಭ್ರಮದಲ್ಲಿ ಡೊಣ್ಣೆಯ ಪೆಟ್ಟು ಬಿದ್ದು ಆತನು ತಾಳಿಕೊಂಡ ವೇದನೆಯನ್ನು ನಾನು ಇಂದಿಗೂ ಅನುಭವಿಸುತ್ತಿದ್ದೇನೆ. ಆಹಾ! ಅಂಥ ವೀರಪುತ್ರನು ನನಗೆಂದಿಗೂ ಪುನಃ ದೊರಕುವನೇ? ನನ್ನ ಉದ್ಧಾರಕ್ಕಾಗಿ ನಿರುಪಾಯ ಪೆಂದು ಗಾಂಧಿಯು ಸತ್ಯಾಗ್ರಹದ ಸಂದೇಶವನ್ನು ದೇಶತುಂಬ ಸಾರಿದನು. ಅನೀತಿಯ ನಿರ್ಬಂಧಗಳನ್ನು ಸತ್ಯಾಗ್ರಹದಿಂದ ಮುರಿದು ನಿನ್ನ ಸಾರುಪತ್ಯಗಾರರಿಗೆ ಅಂಜದೆ ಹಾಕಿ ಸ್ವಾತಂತ್ರ್ಯ ಪಡೆಯುವ ಅಭಿಲಾಷೆಯನ್ನು ತಾಳಿದನು. ಇದಕ್ಕೆ ತಮ್ಮ ಕಾರುಪತ್ಯಗಾರರು ಹೇಗೆ ಇದಿರು ದರೆಂದು ನಾನು ಹೇಳಲಿ? ನಿರಾಯುಧ ಮಕ್ಕಳಿಗೆ ಡೊಣ್ಣೆಯಿಂದ ಹೊಡೆದು ದಣಿಸಿದರು. ಹಲವರು ಪ್ರಾಣೋತ್ಕ್ರಮಣ ಮಾಡಿದರು. ಅನೇಕರು ಘಾಯಪಟ್ಟರು. ಆ ಕಾಲದಲ್ಲಿ ನಡೆದ ಪ್ರಕಾರಗಳಿಂದ ತಮ್ಮ ಬ್ರಿಟಿಶ ದೇಶಕ್ಕೆ ಕಲಂಕ ಬಂತೆಂದೂ, ಇಂಗ್ಲಿಷರು ಅಪಕೀರ್ತಿಗೀಡಾದರೆಂದೂ ತಮ್ಮ ಬ್ರಿಟಿಶ ಪ್ರಮುಖರೇ ಒದರಿ ತಲೆ ಕೆಳಗೆ ಹಾಕಿದ್ದಾರೆ. ಗಾಂಧಿಯು ಸಾತ್ಮಿಕ್ಯದಲ್ಲಿ ನನ್ನ ಮಕ್ಕಳು ಪ್ರವರ್ತಿಸಿದ ಸಾಹಸವನ್ನೂ, ಸಮಾಧಾನವನ್ನೂ ಅವರು ಮನವಣಿ ಹೊಗಳಿದ್ದಾರೆ. ಆಗ ಇರ್ವಿನ್ ಪ್ರಭುವೇ ಸರ್ವಾಧಿಕಾರಿ. ಆತನು ಗಾಂಧಿಗೆ ಕರಿಸಿ ಆತನೊಡನೆ ಸಂಧಾನ ಮಾಡಿ ನನ್ನ ಮಕ್ಕಳ ಕಷ್ಟಗಳನ್ನು ಪರಿಹರಿಸುತ್ತೇನೆಂಬ ಅಭಿವಚನ ಕೊಟ್ಟನು. ಇದರಿಂದ ಕೆಳಕಾರುಪತ್ಯಗಾರರಿಗೆ ಸಮಾಧಾನವಾಗಲಿಲ್ಲ. ಈ ಕರಾರಿನಂತೆ ಅವರು ಪ್ರಜಾಪೀಡನೆಯನ್ನು ಪರಿಹರಿಸಲೊಪ್ಪಲಿಲ್ಲ. ಆದಾಗ್ಯೂ ಗಾಂಧಿಯು ಲಂಡನಿಗೆ ರೌಂಡ ಟೇಬಲಿಗೆ ತೆರಳಿದನು. ಭೂಪಾಲರೇ, ಆಗ ನನಗೆ ಬಹಳ ಆಶೆ ಹುಟ್ಟಿತು! ಇನ್ನು ನನ್ನ ಕಷ್ಟಗಳು ದೂರವಾದವೆಂದೆನಿಸಿತು! ತಾವು ಆತನಿಗೆ ಅರಮನೆಯಲ್ಲಿ ನಿಮಂತ್ರಿಸಿ ಮೇಜವಾನಿ ಕೊಟ್ಟು ಸತ್ಕರಿಸಿದಿರಿ. ಆ ಸಮಯ ಪ್ರತ್ಯಕ್ಷ ಸಂಭಾಷಣದಿಂದ ನನ್ನ ಉದ್ಧಾರವಾಗುವದೆಂದು ನಾನು ಉತ್ಸಾಹಗೊಂಡೆ. ಆದರೆ ರೌಂಡ ಟೇಬಲ್

ನಿಂದ ಏನೂ ಪ್ರಯೋಜನವಾಗಲಿಲ್ಲ. ಆದೊಂದು ನಂಟಿಕವಾಗಿ ಪರಿಣಮಿಸಿತ. ಗಾಂಧಿಯು ಇಲ್ಲಿ ಬಂದು ತಲ್ಪಿದೊಡನೆ ಆಪತ್ಕಾಲವೆಂದು ನಿನ್ನ ಪಾರುಪತ್ಯಗಾರರು ನಿರ್ಧರಿಸಿ ಲೋಕಕಂಟಕ ಕಾನೂನುಗಳನ್ನು ಒಂದೊಂದಾಗಿ ಹೊರಡಿಸಿ, ಜವಾಹಿರಲಾಲ, ಖಾನ ಅಬ್ದುಲ್ ಗಫ್ಫರಖಾನ, ಗಾಂಧಿ, ಸರದಾರ ವಲ್ಲಭಭಾಯಿ ಪಟೇಲ, ಡಾ|| ಅನ್ಸಾರಿ ಮೊದಲಾದ ಕೊಂಗ್ರೆಸಿಗೆ ಸಂಬಂಧಪಟ್ಟ ಒಟ್ಟಿಲ್ಲಿಯ ಪ್ರಮುಖ ಕಾರ್ಯಕರ್ತರಿಗೆಲ್ಲ ವಿಚಾರವಿಲ್ಲದೆ ಸೆರೆಮನೆಗಟ್ಟಿಬಿಟ್ಟರು. 'ಅಪರಾಧಿಯು ಸ್ವತಂತ್ರನಾಗಬಹುದು, ಆದರೆ ನಿರಪರಾಧಿಗೆ ನಿರ್ಬಂಧಿಸಬಾರದು" ಎಂಬದು ಬ್ರಿಟಿಶ ಪರಂಪರೆ. ಆ ಪರಂಪರೆಯನ್ನು ಆಮೂಲಾಗ್ರ ಕಿತ್ತೊಗೆದು ತರತರದ ನಿರ್ಬಂಧಗಳನ್ನೇರ್ಪಡಿಸಿ ಸಭ್ಯರಿಗೆ, ಶಿಷ್ಟರಿಗೆ, ಯೋಗ್ಯತಾವಂತರಿಗೆ, ವಿಚಾರವಂತರಿಗೆ ದಣಿಸಿ ದೇಶತುಂಬ ತಮ್ಮ ಪಾರುಪತ್ಯಗಾರರು ರಾಜ್ಯರಕ್ಷಣೆಯ, ಲೋಕಶಾಂತಿಯ ಹಾರ ಮಾಡಿ ನನ್ನ ಮಕ್ಕಳೊಳಗಿನ ಸ್ವಾತಂತ್ರ್ಯ-ಲಾಲಸೆಯನ್ನು ದಬ್ಬುವದಕ್ಕಾಗಿ ಮಾಡಿದ ಅನರ್ಥವನ್ನು ನಾನು ಹೇಗೆ ವರ್ಣಿಸಲಿ? ಜವಾಹಿರಲಾಲನಂಥ ವೀರ ಪುತ್ರನು ಈಗ ಸೆರೆಮನೆಯಲ್ಲಿದ್ದಾನೆ. ಖಾನ ಸಾಹೇಬನಂಥ ಖುದಾಯಿ-ಖಿದಮತಗಾರನು ಕಾರಾಗೃಹದಲ್ಲಿ ಕೊಳೆಯುತ್ತಿದ್ದಾನೆ. ಕೊಂಗ್ರೆಸು ಕಾಯಿದೆಗೆ ಸಮ್ಮತವೆಂದು ತಮ್ಮ ಪಾರುಪತ್ಯಗಾರರು ಪ್ರಕಟಿಸುವದೇನೋ ನಿಜ. ಆದರೆ ಕೊಂಗ್ರೆಸ್ಸಿನ ದ್ವೇಷ ಇನ್ನೂ ಒಯ್ಯಲಾಗಲಿಲ್ಲ. ಪ್ರಜಾಸ್ವಾತಂತ್ರ್ಯ ನಿರ್ಬಂಧಕ ಕಾನೂನುಗಳು ಇನ್ನೂ ಊರ್ಜಿತವಿವೆ. ವಂಗದೇಶದಲ್ಲಂತೂ ಕ್ರಾಂತಿಕಾರಕರಿಗೆ ದಬ್ಬುವ ದೊಡ್ಡ ಯಜ್ಞವೇ ನಡೆದಿದೆ. ತಂಡವರ ಮೇಲೆ ನೋಟೀಸುಗಳು, ಕಂಡವರ ಮೇಲೆ ಒಟ್ಟಿಗಳು, ಮನೆ ಬಿಟ್ಟಿರಬಾರದು, ಮನೆ ಸೇರಿರಬಾರದು, ಮಾತ ಹಬಾರದು, ಊರು ಬಿಟ್ಟಿರಬಾರದು, ಊರು ಸೇರಿರಬಾರದು, ಹಾಜರಿ ಕೊಡಬೇಕು, ಸಂಚಾರ ಕ್ರಮವನ್ನು ತಿಳಿಸಬೇಕು, ಮುಂತಾದ ಮಾನವನ ಕಲ್ಪನೆಗೆ ಸೂಚಿಸುವ ಯಾವತ್ತೂ ನಿರ್ಬಂಧಗಳು ವಂಗದೇಶದಲ್ಲಿ ರೂಢವಾಗಿವೆ. ವಿಚಾರವಿಲ್ಲದ ಸೆರೆಮನೆಗಟ್ಟುವ ಕ್ರಮವೂ ನಡೆದಿದೆ. ಇಂಥ ಲೋಕಕಂಟಕ ವ್ಯಾಪಾರಗಳಲ್ಲಿ ನನ್ನ ಮಕ್ಕಳು ಸಿಲುಕಿ ಬೇಚಾಡುತ್ತಿದ್ದಾರೆ - ಜಗತ್ತಿನಲ್ಲಿ [illegible]ದ ಆರ್ಥಿಕ ಅಡಚಣಿಯಿಂದಲೂ ನನ್ನ ಮಕ್ಕಳು ಬೆಂದು ಬೆಂಡಾಗಿದ್ದಾರ. ಕೂಳಿಗೆ ಗತಿ ಇಲ್ಲದೆ ಉಪವಾಸ ಸಾಯುವವರೆಷ್ಟೋ ಮಂದಿ. ತಮ್ಮ ಪಾರುಪತ್ಯಗಾರರ ವಿಪರೀತ ಧೋರಣದಿಂದ ನನ್ನ ಪ್ರಜೆಗಳು ಅಪಾರ ಧನವನ್ನೆಲ್ಲ ಕಳಕೊಂಡರು. ೫೦ ವರ್ಷಗಳಿಂದ ಕಾದಿಟ್ಟ ಸುವರ್ಣವು ಐದೇ ವರ್ಷಗಳಲ್ಲಿ ಪರದೇಶಗಮನ ಮಾಡಿತು. ಇಂಥ ಅವಸ್ಥೆಯಲ್ಲಿ ನಾನೇನು ಮಾಡಲಿ? ಟಿಳಕ, ದಾಸ, ಮೋತಿಲಾಲ, ಮಹಮ್ಮದ ಅಲ್ಲಿ, ವಿಠ್ಠಲಭಾಯಿ ಪಟೇಲ, ಸೇನಗುಪ್ತ ಮೊದಲಾದ ನನ್ನ ಸಾಹಸಿಗ ಪುತ್ರರು ಬಂದಿವಾಸದ ಕಷ್ಟಗಳನ್ನು ಅನುಭವಿಸಲು ಜನ್ಮ ಪಡೆದವರಲ್ಲ. ತಮ್ಮ ಪ್ರಧಾನರಾಗಿ ನನ್ನ ಆಡಳಿತೆ ನಡಿಸಿ, ನನ್ನ ಉದ್ಧಾರ ಮಾಡಲು ಹುಟ್ಟಿದವರು. ನನ್ನಂಥ ಸ್ವಾತಂತ್ರ್ಯಹೀನ, ಪರತಂತ್ರ ಪಾಪಿಯ ಉದರದಲ್ಲಿ ಅವರು ಹುಟ್ಟಿದ್ದರಿಂದ ಬಂದಿವಾಸದ ಕಷ್ಟಗಳನ್ನು ಅವರು ಅನುಭವಿಸಬೇಕಾಯಿತು. ಈ ದೇಹವು ಆ ಕಷ್ಟಗಳಿಗೆ ತಕ್ಕದ್ದಲ್ಲವಾದ್ದರಿಂದ ಅವರು ಅಕಾಲದಲ್ಲಿಯೇ ತೀರಿಕೊಂಡರು. ಅವರ ನಿಧನದಿಂದ ನಿತ್ಯವೂ ಕಣ್ಣೀರು ಸುರಿಸುತ್ತಿರುತ್ತೇನೆ. ಭೂಪಾಲರೇ, ತಾವು ಈ ಉತ್ಸವ ಪ್ರಸಂಗದಲ್ಲಿ ನನಗೆ ಉಪಕಾರ ಮಾಡಲಾರಿರೇನು? ೨೫ ವರ್ಷಗಳ ಆಡಳಿತೆಯಲ್ಲಿ ನನ್ನ ಪ್ರಜೆಗಳ ಸಂಖ್ಯೆ ೩೨ ಕೋಟಿಯಿಂದ ೩೫ ಕೋಟಿಯಾಯಿತು. ಇದು ಪ್ರಾಪಂಚಿಕ ಸುಖದ ದ್ಯೋತಕವಲ್ಲ. ನಿಸರ್ಗನಿಯಮದಂತೆ ಅದ ಬೆಳೆದಿದೆ. ಉಗಿಬಂಡಿ ಮಾರ್ಗ ಬೆಳೆಯಿತು, ಆದರೆ ಅದರಿಂದ ನನ್ನ ಮಕ್ಕಳಿಗೆ ಬಳಕೆಯಿಲ್ಲ. ರಾಜ್ಯಕಾರಭಾರದ ಆಡಳಿತೆಯ ಖರ್ಚು ಮಾತ್ರ ೧೫೦ ಕೋಟಿಯಿಂದ ೨೦೦ ಕೋಟಿಯಾಯಿತು. ಇದರೊಳಗೆ ಸೈನ್ಯಕ್ಕಾಗಿಯೇ ೫೦ ಕೋಟಿ ಖರ್ಚು ಬೇಕು. ಇದ್ದ ಕರಗಳು ಬೆಳೆದವು. ಇಲ್ಲದ ಕರಗಳು ಹುಟ್ಟಿದವು. ಕ್ರಮವಾಗಿ ದಾರಿದ್ರ್ಯ ಬೆಳೆದಾಗ್ಯೂ ಇನ್‌ಕಮ್ ಟೆಕ್ಸಿನ ಉತ್ಪನ್ನ ಕುಗ್ಗುವ ಬದಲಿಗೆ ಏರಿಕಾಯಿತು. ತಮ್ಮ ಕಾರಕೀರ್ದಿಯ ಪ್ರಾರಂಭದಲ್ಲಿ ೨|| ಕೋಟಿ ಉತ್ಪನ್ನವಿತ್ತು, ಅದು ೧೬ ಕೋಟಿಗೆ ಹಾರಿತು. ಈ ಚಮತ್ಕಾರ ಹೇಗೆಂದು ನನಗೇನೂ ಸೂಚಿಸದು. ಉತ್ಪನ್ನ ಬೆಳೆಯಿತೆಂದು ಸರಕಾರ ಸಾಲ ಇಳಿಯಲಿಲ್ಲ. ೪|| ಅಬ್ಜ ಸಾಲವಿದ್ದದ್ದು ೯|| ಗೆ ಏರಿತು. ಈಗಿನ ಪಾರುಪತ್ಯಗಾರರು ಆಡಳಿತೆ ನಡಿಸಲು ಅಯೋಗ್ಯರೆಂದು ಇದರಿಂದ ಸಿದ್ಧವಾಗುವದಿಲ್ಲವೇ? ಭೂಪಾಲರೇ, ಈಗಿನ ರಾಜ್ಯಕರ್ತರ ಲೋಕಕಂಟಕ ವ್ಯಾಪಾರದ ಒಂದು ಉದಾಹರಣೆಯನ್ನು ಕೊಡಲೇ? ನನ್ನ ಹಿಂದು- ಮುಸಲ್ಮಾನ ಮಕ್ಕಳು ಒಟ್ಟಿಗೆ ಸೇರಿ ಒಕ್ಕಟ್ಟಿನಿಂದ ಯತ್ನ ಮಾಡಿ ಐಕ್ಯಭಂಗ ಕಾರಣವನ್ನು ಪರಿಹರಿಸುವ ಸಭೆ ಸೇರಿಸಿದ್ದರು. ಮುಸಲ್ಮಾನ ಮಕ್ಕಳಿಗೆ ಶೇಕಡಾ ೩೦ರಷ್ಟು ಕೌನ್ಸಿಲಿನೊಳಗಿನ ಆಸನಗಳನ್ನು ಕೊಡಬೇಕಾಗಿ ನಿರ್ಧರಿಸಿತ್ತು. ಅಷ್ಟರಲ್ಲಿ ಈಗಿನ ತಮ್ಮ ಪ್ರಧಾನರಾದ ಸರ್ ಸೆಮ್ಯುಅಲ್ ಹೋರರವರು ೩೩|| ಆಸನಗಳನ್ನು ಅನುಗ್ರಹಿಸುತ್ತೇವೆಂದು ಮುಸಲ್ಮಾನ ಮಕ್ಕಳಿಗೆ ತಿಳಿಸಿ ಹಿಂದು ಮಕ್ಕಳೊಡನೆ ಐಕ್ಯಮತ್ಯ ಮಾಡದಂತೆ ದುಷ್ಪ್ರೇರಣೆ ಮಾಡಿದ ಸಂಗತಿಯನ್ನು ಉಲ್ಲೇಖಿಸಿ ಚಿಂತಾಮಣಿಯು ಹೋರ ಪ್ರಧಾನರಿಗೆ ಅಧಿಕ್ಷೇಪ ಮಾಡಿದ ಸಂಗತಿಯನ್ನು ಭೂಪಾಲರೇ ತಾವು ಪರಾಂಬರಿಸಬೇಕು. ಈಗಿನ ಅಧಿಕಾರಿಗಳಿಂದ ನನ್ನ ಕಲ್ಯಾಣವಾಗುವ ಆಶೆ ಇಲ್ಲ. ಅವರಿಗೆ ನನ್ನ ಮಕ್ಕಳ ಕಷ್ಟ ಗ್ರಹಿಕೆಯಾಗುವದಿಲ್ಲ. ಆದ್ದರಿಂದ ತಾವೇ ಸ್ವತಃ ಅನುಗ್ರಹಿಸಬೇಕ. ಕೊಲೆಪಾತಕಿಯೆಂದು ಗಲ್ಲಿಗೇರಿಸಬೇಕೆಂದು ಶಿಕ್ಷೆಯಾದ ಆಯರ್ಲಂಡದ ವರಪುತ್ರನಾದ ಡಿ ವ್ಹೆಲೆರಾನಿಗೆ ಪ್ರಾಣಾರ್ಪಣ ಮಾಡಿದ ಪುಣ್ಯಪುರುಷರು ತಾವು. "ಸಿನ ಫೇನರ ರಾಷ್ಟ್ರಭಕ್ತರಿಗೆ ಸಂಪೂರ್ಣವಾಗಿ ಕೊಲೆ ಮಾಡುವ ಅಭಿಲಾಷೆ ನಿಮಗಿರುವದೇನು?" (Are you going to wait until the last Sinn Feinner is killed?) ಎಂಬದಾಗಿ ತಾವು ಸ್ಪಷ್ಟ ಸವಾಲನ್ನು ಲೊಯಿಡ್ ಜೋರ್ಜ ಮುಖ್ಯ ಪ್ರಧಾನರಿಗೆ ಕೇಳಿ ಆಯರ್ಲಂಡದ ಉದ್ಧಾರ ಮಾಡಿದ ಸ್ವಾತಂತ್ರ್ಯದೇವಿ ಉಪಾಸಕರು ತಾವು, ಲೋಕಶಾಹಿಯ ಪುರಸ್ಕರ್ತರು ತಾವು. ನನ್ನ ಅವಸ್ಥೆ ನೋಡಿ, ಕೇಳಿ, ತಮಗೆ ಕರುಣೆ ಹುಟ್ಟಬೇಕಾಗಿ ಪ್ರಾರ್ಥನೆ. ಮೆಕಡೋನಲ್ಡರವರಿಗೆ ನನ್ನ ಸ್ಥಿತಿಯು ಗ್ರಹಿಕೆಯಿದೆ. ಮುಖ್ಯ ಪ್ರಧಾನರಾಗುವ ಪೂರ್ವದಲ್ಲಿ ಅವರು ನನ್ನ ಸ್ಥಿತಿ ಕಣ್ಣಾರೆ ಕಂಡಿದ್ದಾರೆ. ಈಗಿನ ಆಡಳಿತೆಯನ್ನು ಭೂಪಾಲರಾದ ತಾವು ಧಿಕ್ಕರಿಸಿ, ಹೊಸ ಸ್ವಾತಂತ್ರ್ಯ ಮನ್ವಂತರವನ್ನು ಪ್ರಾರಂಭಿಸಬೇಕಾಗಿ ಮುಖ್ಯ ಪ್ರಧಾನರಿಗೆ ರಾಜಾಜ್ಞೆಯಾಗಲಿ! "ರಾಷ್ಟ್ರೀಯ ಸಭೆಯು ಆಮೂಲಾಗ್ರ ನಾಶವಾಗುವ ತನಕ ನೀನು ಸ್ವಸ್ಥ ಹಾದಿ ನೋಡುವಿಯೋ? ಕ್ರಾಂತಿಕಾರಕರು ಸಂಪೂರ್ಣವಾಗಿ ನಿಃಶೇಷವಾಗುವ ತನಕ ನೀನು ಸ್ವಸ್ಥ ಚಿತ್ತದಿಂದ ಕಾರಭಾರ ನಡಿಸುವಿಯೋ?" ಎಂಬ ಪ್ರಶ್ನೆಗಳನ್ನು ಮುಖ್ಯ ಪ್ರಧಾನರಾದ ಮೆಕಡೋನಲ್ಡರವರಿಗೆ, ಸಮ್ರಾಟರೇ ತಾವು ಕೇಳಬೇಕು. ತಮ್ಮ ಪ್ರಜಾವತ್ಸಲ ಹೆಸರಿನಿಂದ ನಡೆಯುವ ಲೋಕಕಂಟಕ ವ್ಯಾಪಾರಗಳಿಗೆ ಇದೀಗಲೇ, ಸಮ್ರಾಟರೇ ಸ್ವತಃ ತಡೆಹಾಕಿ ಹೊಸ ಮನ್ವಂತರಕ್ಕೆ ಪ್ರಾರಂಭಿಸಿ ರೌಪ್ಯ ಮಹೋತ್ಸವವನ್ನು ಚಿರಸ್ಮರಣೀಯ ಮಾಡಬೇಕು. ಪ್ರಜಾ ಸ್ವಾತಂತ್ರ್ಯವನ್ನು ತರತರದಿಂದ ನಿರ್ಬಂಧಿಸುವ ಕಟ್ಟಳೆಗಳಿಂದ ಆಡಳಿತೆ ನಡಿಸುವದು ರಾಜ್ಯಶಾಸ್ತ್ರವಲ್ಲ, ತಮ್ಮ ರಾಜ್ಯದಾಡಳಿತೆಯ ಪರಂಪರೆ ಅದಲ್ಲ. 'ರಾಜಶಕ್ತೇರಧಿಷ್ಠಾನಂ ಲೋಕಶಕ್ತಿರ್ಹಿ ಶಾಶ್ವತೀ' ಎಂಬ ರಾಜ್ಯಶಾಸ್ತ್ರವಚನವಿದೆ. ಲೋಕಶಕ್ತಿಗೆ ಅನುಗುಣವಾಗಿ ರಾಜಶಕ್ತಿಯನ್ನು ನಡಿಸುವದು ರಾಜ್ಯದಾಡಳಿತೆಯ ಬೀಜವಿದೆ. ಲೋಕಶಕ್ತಿಗೆ ವಿರೋಧವಾಗಿ ರಾಜಶಕ್ತಿಯ ಪ್ರದರ್ಶನವಾಗಬಾರದು. ಇವೆರಡು ಶಕ್ತಿಗಳಲ್ಲಿ ವಿಗ್ರಹ ಒದಗಬಾರದು. ಒದಗಿದರೆ ಲೋಕಕ್ಕೆ ಕ್ಷೇಮವಿಲ್ಲ. ಈ ಶಾಸ್ತ್ರಾರ್ಥವನ್ನು ಸಮ್ರಾಟರೇ ನಾನು ತಮ್ಮಂಥ ಸುಜ್ಞರಿಗೆ ನಿರೂಪಿಸಬೇಕಾಗಿಲ್ಲ. ನನ್ನ ಆಡಳಿತೆಗಾಗಿ ನೇಮಿಸಲ್ಪಟ್ಟ ಕಾರಭಾರಿಗಳು ಮೂಲತತ್ವವನ್ನು ಮರೆಮಾಡಿ ಲೋಕಶಕ್ತಿಯನ್ನು ನಿಗ್ರಹಿಸುವ ರಾಕ್ಷಸೀ ಮಹತ್ವಾಕಾಂಕ್ಷೆ ತಳೆದು ನನ್ನ ಮಕ್ಕಳಿಗೆ ತರತರದಿಂದ ದಣಿಸುತ್ತಿದ್ದಾರೆ. ಇದನ್ನು ಭೂಪಾಲರೇ ದಿವ್ಯ ಚಿತ್ತಕ್ಕೆ ತಂದು ನನ್ನ ಮಕ್ಕಳನ್ನು ಲೋಕಕಂಟಕ ವ್ಯಾಪಾರದಿಂದ ವಿಮೋಚಿಸುವ ಅನುಗ್ರಹ ಮಾಡಿ ದಿಗಂತ ಗೌರವ ಪಡೆಯಬೇಕಾಗಿ ನಾನು ಈ ಮೂಲಕ ಪ್ರಾರ್ಥಿಸುತ್ತೇನೆ. ಇದಕ್ಕೂ ಹೆಚ್ಚಿಗೆ ನಾ ತಮ್ಮ ಸನ್ನಿಧಾನದಲ್ಲಿ ಇನ್ನೇನು ಹೇಳಿಕೊಳ್ಳಲಿ?

[illegible]

ಇಲ್ಲಿಯ ವಕೀಲರಾದ ರಾ. ವ. ಸಾಹೇಬ ಮಂಜನಾಥ ದೇವರಾವ ಕುಲಕರ್ಣಿ ಇವರು ನಿನ್ನೆ ಸಾಯಂಕಾಲ ಹೃದಯಕ್ರಿಯೆ ನಿಂತು ಫಕ್ಕನೆ ತೀರಿಕೊಂಡರೆಂದು ತಿಳಿಸಲು ತೀರ ವಿಷಾದವಾಗುತ್ತದೆ. ರಾವ ಸಾಹೇಬರು ಇಳಿಪ್ರಾಯದಲ್ಲಿಯೂ ಒಳ್ಳೇ ಆಸ್ಥೆಯಿಂದ ತಮ್ಮ ವ್ಯವಸಾಯ ನಡಿಸುತ್ತಿದ್ದರಲ್ಲದೆ, ಸಾರ್ವಜನಿಕ ಸೇವೆಯನ್ನೂ ನಡಿಸುತ್ತಿದ್ದರು. ಸಹಕಾರ ಸಂಘದ ಕಾರ್ಯದರ್ಶಿಗಳಾಗಿಯೂ ಮ್ಯುನಿಸಿಪಾಲಿಟಿಯ ಸಭಾಸದರಾಗಿಯೂ ದನಗಳ ಆಸ್ಪತ್ರಿ ಮಂಡಳದ ಚಾಲಕರಾಗಿಯೂ ಇವರು ದುಡಿದಿದ್ದರೆ. ಈಗ ಕೆನರಾ ಡಿಸ್ಟ್ರಿಕ್ಟ ಸೆಂಟ್ರಲ್ ಕೋಒಪರೇಟಿವ್ ಇನ್‌ಸ್ಟಿಟ್ಯೂಟಿದ ಚೇರಮನ್‌ರಾಗಿದ್ದರು. ಕಳೆದ ವರ್ಷ ಮಹಾತ್ಮರು ಚಿತ್ತೈಸಿದಾಗ ಅವರು ಸ್ವಾಗತ ಸತ್ಕಾರ ಸಭೆಯ ಅಧ್ಯಕ್ಷರಾಗಿ ದುಡಿದಿದ್ದರೆ. ರೌಪ್ಯ ರಾಜ್ಯಾರೋಹಣ ಮಹೋತ್ಸವ ಮಂಡಳದಲ್ಲಿಯೂ ಇವರು ಕೆಲಸ ಮಾಡಿರುತ್ತಾರ. ಇವರ ನಿಧನದಿಂದ ಊರೊಳಗಿನ ಹಿರೇ ಮನುಷ್ಯರೊಬ್ಬರು ತೀರಿದಂತಾಗಿದೆ. ಈಶ್ವರೇಚ್ಛೆಗೆ ಉಪಾಯವಿಲ್ಲ. ಇವರ ಮಗಂದಿರಾದ ರಾ|| ರಾವ ಕೃಷ್ಣ ಕುಲಕರ್ಣಿಯವರೂ, ಶ್ರೀಧರ ಕುಲಕರ್ಣಿಯವರೂ ತಮ್ಮ ದುಃಖದಲ್ಲಿ ಊರವರು ಪಾಲುಗಾರರಾಗಿದ್ದಾರೆಂದು ಎಣಿಸಿ ಸಾಂತ್ವನ ಮಾಡಿಕೊಳ್ಳಬೇಕು. ಮೃತಾತ್ಮರಿಗೆ ಸದ್ಗತಿ ಪ್ರಾಪ್ತವಾಗಲೆಂದು ಬಯಸುತ್ತೇವೆ.

ಸ್ಥಾನಿಕ ವೃತ್ತಾಂತ.

ಕುಮಟೆ— [illegible]

[illegible]

[illegible]

ದಿ ಬೆಳಗಾಂವಿ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ 1908.

ಈ ಕಂಪನಿಯು ಪ್ರೀಮಿಯಂ ಕಡಿಮೆ ಇದ್ದು, ಇದರ [illegible] ದರಗಳೂ, ಕಟ್ಟಳೆಗಳೂ [illegible] ಕಂಪನಿಯ ಹಣವು ಸರಕಾರಿ ಪ್ರೊ[illegible] ನೋಟುಗಳಲ್ಲಿಯೂ ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ [illegible] ರಿಟಿಗಳಲ್ಲಿಯೂ [illegible]

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ [illegible] ಕಛೇರಿಗೆ ಅಥವಾ [illegible] ಬರೆಯಿರಿ.

Kumta Agents

D K Nayak Bros
D S Pai
K N Nayak

Honavar Agent

R V Prabhu Esq

K. Padmanabha Rao & Sons,

BELGAUM

Chief Agents for

Karnatak Districts & S. M. States

ಕಮಿಟಿಯ ಮತದ ಸೇವೆಯೊಳಗಿನ ಲಕ್ಷ್ಯ ಕೊಂಡುಕೊಳ್ಳಲು ಬರುವುದಿಲ್ಲ. ನಿಜವಾಗಿ ಅಂಗಡಿಕಾರರು ಮಾಡಿದ ಲಕ್ಷ್ಯಗಳು ಸರಿಯಾಗಲಿಕ್ಕಿಲ್ಲವೆಂದು ಅಭಿಪ್ರಾಯಪಟ್ಟ ಕಮಿಟಿಯ ಪ್ರತಿ ಸಭಾಸದರು ಡಾ॥ ಅಗ್ನಿಹೋತ್ರಿಯವರು ತಮ್ಮ ಮನೆಯಲ್ಲೇ ಸ್ವಂತ ದೇಖರೇಖಿಯ ಕೆಳಗೆ ಎಲ್ಲ ಲಕ್ಷ್ಯಗಳನ್ನು ತಯಾರಿಸಿದ್ದರಂತೆ. 'ಹಳ್ಳಿ-ಹಳ್ಳಿಗಳೊಳಗಿನ, ಕಾಲೇಜುಗಳೊಳಗಿನ ಲಕ್ಷ್ಯಗಳಲ್ಲಿ ಭೇದ ತೋರಿಬಂದು ವೈಷಮ್ಯಕ್ಕೆ ಕಾರಣವಾದೀತೆಂದು ಕಮಿಟಿಯವರು ಏರಿಯ ತಯಾರಿಯ ಕೆಲಸವನ್ನು ಆಯಾ ಗ್ರಾಮದವರಿಗೆ ಒಪ್ಪಿಸದಿರಲಿಕ್ಕೆ ಕಾರಣವಾಯಿತು. ಮೇಲಾಗಿ ಬಡವರ ಸಹ ಕಡಿಮೆ ವೆಚ್ಚ ಲಕ್ಷ್ಯಗಳಿಗೂ ರುಚಿ ಬಂತು!! ಇದೇ ಕಾಲಕ್ಕೆ ಜರುಗಿದ ಉತ್ಸವದ ಖರ್ಚು ರೂ ೩೦೦ಕ್ಕೆ ಮುಕ್ತಾಯ ಕಮಿಟಿಯವರು ಮಾಡಿದ ವ್ಯವಸ್ಥೆಯು ನಿಜವಾಗಿ ಅತಿ ಪ್ರಶಂಸನೀಯವಾದದ್ದು!" ಇತ್ಯಾದಿ

ಕಳೆದ ಒಂದೆರಡು ತಿಂಗಳು ದಿನಗಳನ್ನು ದೂಷ್ಟಿಗೆ ಬಿಯ್ಯಾದ ಹಾವಳಿ ಕಡಿಮೆಯಾಗಿತ್ತು. ಈಗ ಪುನಃ ಪ್ರಾರಂಭವಾಗಿದೆ. ತಾ. ೨೯ ಏಪ್ರಿಲಕ್ಕೆ ಮಧ್ಯಾಹ್ನದಲ್ಲಿ ಪಾಠಕ ಕಂಪನಿಯ ರಸ್ತೆ ಹತ್ತರ ಪೋಲೀಸರು ೫೬ ದನಗಳನ್ನು ಹಿಡಿದು ದೊಡ್ಡಿಗೆ ಹಾಕಿದರು. ಹೀಗೆಯೇ ಸಂಧ್ಯಾ ಕಾಲದಲ್ಲಿ ಬಹಳ ಜಾಗೆಯ ಮೇಲೆ ನಿಂತ ದನಗಳನ್ನು ಪಡೆಹಿಡಿದರು. ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನಕ್ಕೆ ಹೋಗುವ ರಸ್ತೆ ನಂ. ೧೮ ಗನೇಟದಲ್ಲಿ ರಸ್ತೆಯಿಂದ ದೂರವಿರುವ ಜಾಗೆಯ ಒಳಗೆ ನೆರಳೊಳಗೆ ಮಲಗಿದ್ದ ೫ ನಿಂತ ಎರಡು ದನಗಳನ್ನು ಪೋಲೀಸರು ಹಿಡಿದು ಎಳೆದೊಯ್ದರು. 'ಇದು ಕಾಯಿದೆಗೆ ಸಮ್ಮತವೋ ಎಂಬ ಮೇಲಧಿಕಾರಿಗಳು ವಿಚಾರ ಮಾಡಬೇಕು!'

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರ ಕರ್ನಾಟಕದಲ್ಲಿ ಸಂಚಾರ ಮಾಡುತ್ತಿರುವ ರಾ। ರಾಮರಾವ ಹುಕ್ಕೇರಿಕರರು ಬಿಟ್ಟಿರುವ ರಾಜೇಂದ್ರ ಸ್ವಾಗತ ಸಮಿತಿಯ ಕಾರ್ಯದರ್ಶಿಗಳಿಗೆ ತಾ ೬-೫-೩೫ಕ್ಕೆ ಬೆಂಗಳೂರಿನಿಂದ ಪತ್ರ ಬರೆದು ಕಳಿಸುವದೇನೆಂದರೆ "ಮೆರವಣಿಗೆಯ ಸಂಬಂಧದಲ್ಲಿ ನಿಮಗೆ ಕೊಂಚ ಸೂಚನೆ ಮಾಡುವ ಬಗ್ಗೆ ರಾಷ್ಟ್ರಪತಿಗಳಿಗೆ ವ್ಯಸನವಾಗುತ್ತದೆ. ಅವರಿಗೆ ದಮ್ಮಿನ ಉಪದ್ರವಿದ್ದುದರಿಂದ ನೀವೆಲ್ಲ ಬಿಸಿಲಿನಲ್ಲಿ ಮೆರವಣಿಗೆಯಲ್ಲಿ ಅವರಿಗೆ ಶ್ವಾಸ ಕಟ್ಟಿಬಂದು ಕಷ್ಟವಾಗುತ್ತದೆ. ರಾಷ್ಟ್ರಪತಿಗಳು ರಾಷ್ಟ್ರದ ಕಾರ್ಯ ಸಲುವಾಗಿ ಅವರ ಆರೋಗ್ಯ ಕಾಯಿದುವದು ನಮ್ಮ ಮುಖ್ಯದ ಕರ್ತವ್ಯ. ಇದರ ವಿಚಾರ ಮಾಡಿ ಜನರು ತಮ್ಮ ಸಮಾಧಾನ ಮಾಡಿಕೊಳ್ಳತಕ್ಕದ್ದೆಂದು ನಂಬಿಗೆಯಿಂದ ಸ್ವಾಗತ ಕಮಿಟಿಯವರು ತಮ್ಮ ಮನೆಗಳ ಎದುರಿನಿಂದ ರಾಷ್ಟ್ರಪತಿಗಳ ಮೆರವಣಿಗೆ ತೆಗೆಯಲಾಗದ ಬಗ್ಗೆ ಕ್ಷಮೆ ಬೇಡಿಕೊಳ್ಳುತ್ತೇವೆ."

ಭಟಕಳ— ಕಳೆದ ಸೋಮವಾರ ಶ್ರೀ ವೀರ ಹನುಮ ಉತ್ಸವವಾಯಿತು. ಆಟಗಳ ಸ್ಪರ್ಧೆ, ಮಿಠಾಯಿ ಹಂಚೋಣ, ಬಡಬಗ್ಗರಿಗೆ ಅಕ್ಕಿಯ ಧರ್ಮ ಮುಂತಾದ ಕಾರ್ಯಕ್ರಮ ನಡೆಯಿತು. ಸಾಯಂಕಾಲ ಭಜನೆಯವರ ಭಾಷಣಗಳ ಮೆರವಣಿಗೆಯಾಯಿತು. ಆಕಸ್ಮಾತ್ ಪೋಲೀಸರು ನಾಲ್ಕರಿಂದ ಮೆರವಣಿಗೆಯಲ್ಲಿ ಕೂಡಿದ ಮಾತು ತಿದ್ದಿದರು. ರಾತ್ರಿ ಸತ್ಯ ಬೋಧೆ ಸಂಗೀತಗಳು ಮತ್ತು ಬಾಲ ಬಾಲೆಯರು ಗಳನ್ನು ಎಬ್ಬಿಸಿ ಉತ್ಸವ ಮುಕ್ತಾಯ ಮಾಡಿದರು. ಹೆಚ್ಚಾಗಿ ಸಂಘಟನಾಕಾರರು ಮತ್ತು ಕೆಲವು ವಿದ್ಯಾರ್ಥಿಗಳು ಉತ್ಸವದಲ್ಲಿ ಸೇರಿದ್ದರು.

ತಿಪ್ಪಾಪುರ— ಶನಿವಾರ ತಾ ೪ನೇ ದಿನ ಸಂಜೆಯ ಸಮಯದಲ್ಲಿ ರಾಷ್ಟ್ರಪತಿಗಳ ಸ್ವಾಗತವು ಇಲ್ಲಿ ಬಂದು ಒಪ್ಪಿತು. ಮುಂಜಾನೆ ಗೋಕರ್ಣ ಮಾರ್ಗ ಪ್ರಕಾರ ರಾಷ್ಟ್ರಪತಿಗಳಿಗೆ ಅಧ್ಯಕ್ಷರಿಗೆ ಆರತಿಯೆತ್ತಿದ್ದು ರಾ। ಶಿವರಾಮ ಜೋಗಳೇಕರರು ಒಳ್ಳೆಯ ಬಂದಲ್ಲಿ ಅವರ ಸೊಗಸಾದ ಹಾಡನ್ನು ಹಾಡಿ ರಾಷ್ಟ್ರಪತಿಗಳಿಗೆ ಅರ್ಪಿಸಲಾಯಿತು. ಆ ಕೃತ್ಯವನ್ನು ನೋಡಿ ರಾಷ್ಟ್ರಪತಿಗಳಿಗೆ ಅತ್ಯಾನಂದವಾಯಿತು. ಅಲ್ಲಿಂದ ಮುಂದೆ ಹೊರಟು ರಾ। ದೇಶಪಾಂಡೆ ಕೃಷ್ಣ ಹೆಗಡೆಯವರ ಮನೆಯಲ್ಲಿ ಅಲ್ಪೋಪಹಾರ ತೆಗೆದುಕೊಂಡು ರಾಜೇಂದ್ರಬಾಬು ಸಭಾಸ್ಥಾನಕ್ಕೆ ಹೋದರು. ಜನರು ದೊರೆಯ ಹಾಗೆಯೇ ಅವರನ್ನು ಕಾದು ನಿಂತಿದ್ದರು. ಮೆರವಣಿಗೆಯು ಹೊರಟಿದ್ದಲ್ಲದೆ ಮುಟ್ಟುತ್ತಲೆ ನೆರೆದ ಜನರೆಲ್ಲರೂ ರಾಷ್ಟ್ರಧ್ವಜಕ್ಕೆ ಅಭಿವಂದನ ಮಾಡಿದರು. ರಾಷ್ಟ್ರಪತಿಗಳು ಅನೇಕ ಹೋರಾಟಗಳಿಂದ ಕಷ್ಟ ಸಹಿಸಿದ ಒಬ್ಬ ಶ್ರೇಷ್ಠ ನಾಯಕರೆಂದು ಸಭೆಯು ಅಭಿಮಾನದಿಂದ ಅಲಂಕರಿಸಿದ ವ್ಯಾಸಪೀಠದ ಮೇಲೆ ಹೋಗಿ ಕುಳಿತುಕೊಳ್ಳುವಷ್ಟರಲ್ಲಿ ಜಯ ಜಯ ಕಾರಗಳ ಗರ್ಜನೆಯಿಂದ ದಿಕ್ಕುಗಳೆಲ್ಲ ತುಂಬಿಹೋದವು. ಶ್ರೀ ಕೃಷ್ಣ ಕಮಿಟಿಯ ಅಧ್ಯಕ್ಷ ರಾ। ಹರಿದಾಸ ವೈದ್ಯರು ರಾಷ್ಟ್ರಪತಿಗಳಿಗೆ ಫಲ ಪುಷ್ಪಮಾಲೆಗಳನ್ನು ಅರ್ಪಿಸಿದರು. ರಾ॥ ಸುಬ್ರಾಯ ಹಳದೀಪುರಕರರ ಪ್ರಾಸ್ತಾವಿಕ ಭಾಷಣವಾದ ಮೇಲೆ ಚಪ್ಪಾಳೆಗಳ ಘನಗರ್ಜನೆಯಲ್ಲಿ ರಾಜೇಂದ್ರರು ಎದ್ದುನಿಂತು ತಮ್ಮ ದಿವ್ಯವಾಣಿಯಿಂದ ಈ ಕೆಳಗಿನಂತೆ ಭಾಷಣ ಮಾಡಿದರು. "ವರ್ತಮಾನಪತ್ರಗಳ ಮೂಲಕವಾಗಲಿ ಕಾಂಗ್ರೆಸ ಕಮಿಟಿಗಳ ವರದಿಗಳ ಮೂಲಕವಾಗಲಿ ನಿಮ್ಮ ಪ್ರಾಂತದ ಪರಿಚಯ ನನಗೆ ಈ ಮೊದಲೇ ಆಗಿದೆ. ಅದನ್ನೆಲ್ಲ ಪ್ರತ್ಯಕ್ಷ ನೋಡಬೇಕೆಂದು ನಾನು ಬಯಸುತ್ತಿದ್ದೆ. ಈಗ ಆ ಯೋಗ ಬಂತು. ತಮ್ಮ ದರ್ಶನದಿಂದ ನಾನು ಧನ್ಯನಾದೆನು. ಸ್ವರಾಜ್ಯದ ಹೋರಾಟದಲ್ಲಿ ನೀವು ತಮಗೆ 'ಸ್ವರಾಜ್ಯ' ದ ಅರ್ಥ ತಿಳಿದಿರಬೇಕಾದರೂ ಆಗಿರುವದು. ಹಿಂದುಸ್ಥಾನದೊಳಗಿನ ಬಡಬಗ್ಗರ ಸ್ವರಾಜ್ಯವೇ ನಿಜವಾದ ಸ್ವರಾಜ್ಯವೆಂದು ನಮ್ಮ ಅಭಿಪ್ರಾಯ. ಬ್ರಿಟಿಶರ ಕೈಯೊಳಗಿನ ಸತ್ತೆಯನ್ನು ಹಿಂದೀ ಜನರು ತಮ್ಮ ಕೈಗೆ ತೆಗೆದುಕೊಳ್ಳುವದು ಸ್ವರಾಜ್ಯವಲ್ಲ. ಯಾವ ಸ್ವರಾಜ್ಯದಲ್ಲಿ ಶ್ರೀಮಂತರು-ಬಡವರು, ಸ್ಪೃಶ್ಯರು-ಅಸ್ಪೃಶ್ಯರು ಇವೇ ಮೊದಲಾದ ಭೇದ ಭಾವಗಳು ಅಳಿದುಹೋಗುವವೋ ಅದೇ ನಿಜವಾದ ಸ್ವರಾಜ್ಯ. ದೇಶ್ಯ ಪೋಷಕರುಗಳಲ್ಲಿ ಕೂಡಿಕೊಂಡು ವಿಚಾರ ಮಾಡುತ್ತ ತಿರುಗಾಡಿ ಬಡಬಗ್ಗರ ಸುಖ-ದುಃಖಗಳ ಕಡೆಗೆ ನೋಡದಿರುವದು ಸ್ವರಾಜ್ಯದ ಲಕ್ಷಣವಲ್ಲ. ಅಂಕೋಲೆ ಬಡಬಗ್ಗರು ಸ್ವರಾಜ್ಯಕ್ಕಾಗಿ ಮಾಡಿರುವ ತ್ಯಾಗದ ಬಗ್ಗೆ ನಾನು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ತಮ್ಮ ತಮ್ಮ ದೇಶದ ಸ್ವರಾಜ್ಯ ಸಂಪಾದನೆಗಾಗಿ ಹಿಂದೆ ಪರದೇಶದವರು ಬಹಳ ತ್ಯಾಗ ಮಾಡಿದ್ದಾರೆ. ೨೦ ವರ್ಷಗಳ ಹಿಂದೆ ನಡೆದ ಮಹಾಯುದ್ಧದಲ್ಲಿ ದೊಡ್ಡ ದೊಡ್ಡ ಸಾವಿರಾರು ಜನರೂ ಸತ್ತರು. ಯುದ್ಧದಲ್ಲಿ ಗಾಯಪಟ್ಟ ವ್ಯಕ್ತಿಯಿಲ್ಲದ ಒಂದು ಮನೆ ಸಹ ಇದ್ದಿಲ್ಲ. ಹೆಂಗಳೆಯರು ಸಹ ಬೀದಿ ಬೀದಿ, ಫ್ಯಾಕ್ಟರಿ ಖಾತೆಗಳಲ್ಲಿ ಸೇರಿ ತಮ್ಮ ನಾಡಿನ ಕರ್ತವ್ಯ ಮಾಡಿದರು. ಅವರು ಆಗಲೇ ಹಣ ಕಳಕೊಂಡರು. ಸ್ತ್ರೀಯರು ಗಂಡಂದಿರನ್ನು, ತಂದೆ ತಾಯಿಗಳು ಮಕ್ಕಳನ್ನು ಕಳಕೊಂಡರು! ಅವರೆಲ್ಲರೂ ತಮಗಾಗುವ ಹಾನಿಯನ್ನು ಎಣಿಸದೆ ಸುಮ್ಮನೆ ತುಂಬಿಕೊಂಡು ಎರಡು ಅಡಿ ಕ್ಷಯಿಂದ ಯುದ್ಧದಲ್ಲಿ ಸೇರಿದ್ದಲ್ಲ. ನಾವೂ ಆ ಯುದ್ಧದ ಖರ್ಚಿಗೆ ಕೋಟ್ಯವಧಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದನ್ನು ನಮಗೆ ಯಾರೂ ತಿರುಗಿ ಕೊಟ್ಟಿರುವದಿಲ್ಲ! ಅದೇ ರೀತಿ ಸ್ವರಾಜ್ಯ ಸಂಗ್ರಾಮದಲ್ಲಿ ತ್ಯಾಗ ಮಾಡಿದವರು ರಾಷ್ಟ್ರೀಯ ಸಭೆಯು ತಮ್ಮ ಹಾನಿ ತುಂಬಿಕೊಡಬೇಕೆಂದು ಅಪೇಕ್ಷಿಸುತ್ತಾರಾಗಿ ನಾನು ನಂಬುವದಿಲ್ಲ. ನಿಮಗೆ ನೆರವಾಗುವದು ಬಂಧು-ಬಾಂಧವರ ಕರ್ತವ್ಯ. ರಾಷ್ಟ್ರೀಯ ಸಭೆಯು ಕೈಲಾದ ಮಟ್ಟಿಗೆ ನಿಮಗೆ ಸಹಾಯ ಮಾಡುವದು. ನೀವು ಸ್ವಾವಲಂಬಿಗಳಾಗಬೇಕು. ಪರರ ಸಹಾಯ ಬಯಸುವದು ತಪ್ಪು. ಒಮ್ಮೆ ಮಾಡಿದ ಆಣೆಗೆ ಕಟ್ಟರೆ ಪುನಃ ಆಣೆಗೆ ಮಾಡತಕ್ಕದ್ದೆ. ವ್ಯಾಪಾರದಲ್ಲಿ ಹಾನಿ ಆಗಿದ್ದರೆ ವ್ಯಾಪಾರ ಬಿಡುವದಿಲ್ಲ, ತಿರುಗಿ ವ್ಯಾಪಾರ ಮಾಡುತ್ತಲೆ ಇರುತ್ತೇವೆ. ಸ್ವರಾಜ್ಯ ಪ್ರಾಪ್ತಿಯ ಕೆಲಸದಲ್ಲಿ ಸಹ ನಾವು ಹಾನಿಪಟ್ಟವರು ಎದೆಗುಂದದೆ ಸ್ವಾವಲಂಬಿಗಳಾಗಿ ಪುನಃ ಕೆಲಸಕ್ಕೆ ತೊಡಗಬೇಕು. ನಿಮ್ಮೊಳಗಿನ ಕೆಲವರ ಧೈರ್ಯ ನೋಡಿ ಸಂತೋಷವಾಯಿತು. ಇತರರೂ ಹೀಗೆಯೇ ಧೈರ್ಯ ತಾಳುವರೆಂದು ನಾನು ನಂಬಿದ್ದೇನೆ. ಸತ್ಯಾಗ್ರಹದಲ್ಲಿ ಸೇರದೆ ಅಲಿಪ್ತರಾಗಿ ಉಳಿದವರು ಯುದ್ಧ ಮಾಡಿ ಗಾಯ ಪಟ್ಟ ತಮ್ಮ ಬಾಂಧವರಿಗೆ ಸಹಾಯ ಮಾಡಬೇಕು. ಅವರಿಗಿಂತಲ್ಲಿ ಒಂದು ಅಂಗಕ್ಕೆ ಕಷ್ಟ ಒದಗಿದರೆ ಬೇರೆ ಅಂಗಗಳು ಅದಕ್ಕೆ ಪೀಡೆಯಾಗುತ್ತವೆ. ನಮ್ಮ ಪ್ರಾಂತದಲ್ಲಿ ಒಂದು ಕಾಲಿಗೆ ಯಾರಾದರೂ ಹೊಡೆದರೆ ಒಂದರೆ ಬೇರೆ ದನಗಳು ಅದರ ರಕ್ಷಣೆಗೆ ಓಡುತ್ತವೆ. ದನಗಳಲ್ಲಿ ಈ ಪ್ರವೃತ್ತಿ ಕಂಡುಬರುತ್ತಿರುವಾಗ ಮನುಷ್ಯರ ಕರ್ತವ್ಯವೇನೆಂಬುದು ನೀವೇ ಊಹಿಸಿರಿ. ಸತ್ಯಾಗ್ರಹದಲ್ಲಿ ಸೇರಿ ಹಾನಿಪಟ್ಟವರಿಗೆ 'ಸ್ವರಾಜ್ಯ'ದಲ್ಲಿ ವಿಶೇಷ ಅಧಿಕಾರ ಸಿಗದು, ಎಲ್ಲರಿಗೂ ಸಮಾನ ಹಕ್ಕುಗಳು ಸಿಗುವವು. ಕಾರಣ ಪರಸ್ಪರ ಸಹಾಯ ಮಾಡುವದು ನಮ್ಮೆಲ್ಲರ ಕರ್ತವ್ಯವಿದೆ. ಯುದ್ಧದಲ್ಲಿ ಸೇರಲು ಧೈರ್ಯವಿಲ್ಲದವರು ಆರ್ಥಿಕ ಚಳವಳಿಯಲ್ಲಿ ಸರ್ವಸ್ವ ಕಳಕೊಂಡವರಿಗೆ ನೆರವಾಗಬಾರದಲ್ಲವೇ? ಈಗ ನಮ್ಮ ಕಾರ್ಯಕರ ಸ್ವರೂಪ ಬದಲಾಗಿದೆ. ಕಾಯಿದೆ-ಭಂಗ, ಕರನಿರಾಕರಣೆಗಳಿಗೆ ಈಗ ಅವಕಾಶ ಇರದು. ಸ್ವರಾಜ್ಯ ಇನ್ನೂ ಸಿಕ್ಕಿರುವದಿಲ್ಲ. ಅದು ಲಕ್ಷ್ಯದಲ್ಲಿ ಸಿಗುವದು. ಆ ಬಗ್ಗೆ ನಾವೆಲ್ಲರೂ ಪ್ರಯತ್ನದಿಂದ ದುಡಿಯಬೇಕು. ಸ್ವರಾಜ್ಯವಿಲ್ಲದೆ ಯಾವ ರಾಷ್ಟ್ರವೂ ಉಳಿಯದಿಲ್ಲ. ನಮ್ಮ ದೇಶವು ಬೇರೆ ದೇಶಗಳಿಗಿಂತ ಯಾವ ದೃಷ್ಟಿಯಿಂದಲೂ ಹೀನವಾಗಿರುವದಿಲ್ಲ. ಆದರೆ ನಮ್ಮ ಶಕ್ತಿ ನಮಗೆ ತಿಳಿಯದೆ ಹೋಗಿದೆ. ಶಾಸನಗಳ ಬೆನ್ನ ಮೇಲೆ ಹತ್ತಿದರು ಸುಖವಿಲ್ಲ. ಆದರೆ ನಾವು ಮನುಷ್ಯರು ಯುಕ್ತಿಯಿಂದ ಅವನ್ನು ಹತೋಟಿಯಲ್ಲಿಟ್ಟು ಅದರ ಮೇಲೆ ನಮ್ಮ ಅಧಿಪತ್ಯ ಸ್ಥಾಪಿಸುತ್ತೇವೆ. ಹಿಂದುಸ್ಥಾನದ ಗತಿಯೂ ಇದರಂತೆ ಆಗಿದೆ. ಅನ್ಯ ಸಾಮ್ರಾಜ್ಯದ ಅಧೀನರಾಗಿ, ಆತ್ಮವಿಶ್ವಾಸವು ನೆಲೆಯೂರದ ಕಾರಣ ಜನತೆಯು ಅಲ್ಪಬಲ ಮಾನವನ ಅಂಕೆಯಲ್ಲಿರುವದು. ಗಜವೇ ಆನೆಯು ಮಾವುತನಿಗೆ ಅಂಜುತ್ತದೆ. ನಿಜ. ಆದರೆ ಅದೇ ಆನೆಯು ಒಮ್ಮೆ ತಿರುಗಿಬಿದ್ದರೆ ಮಾವುತನನ್ನು ಮಣ್ಣುಪಾಲು ಮಾಡಿಬಿಡುತ್ತದೆ. ಹಿಂದುಸ್ಥಾನವೆಂಬ ಆನೆಯು ಈಗ ಮಾವುತನ ಅಂಕೆಯಲ್ಲಿದೆ. ಅನ್ಯ ಸಾಮ್ರಾಜ್ಯದ ಅಂಕುಶ ಅದಕ್ಕಾಗುತ್ತಿದೆ. ಆ ಅಂಕುಶ ಎಂದು ಪೂರ್ಣವಾಗುವದೋ, ಆತ್ಮಗೌರವವುಂಟಾಗುವದೋ ಅಂದು ಮಾವುತನ ಆಟ ನಿಂತುಹೋಗುವದು. ಅವನೆಷ್ಟು ಪ್ರಯತ್ನ ಮಾಡಿದರೂ ಆ ಆನೆಗೆ ಕಟ್ಟಿಹಾಕಲು ಆವನಿಂದಾಗದು. ನೀವು ಇನ್ನು ತಮ್ಮ ಅಂತಃಶಕ್ತಿಯನ್ನು ಜಾಗ್ರತಗೊಳಿಸಬೇಕು. ನಾವು ನಮ್ಮ ಕಾಲ-ಉದ್ದಿಮೆಗಳ ಬಗ್ಗೆ ಪರದೇಶಗಳ ಮೇಲೆ ಅವಲಂಬಿಸಿಕೊಳ್ಳದೆ ನಮ್ಮಲ್ಲೇ ತಯಾರಾಗುವ ವಸ್ತುಗಳ ಮೇಲೆ ನಿರ್ವಾಹ ಮಾಡಿಕೊಳ್ಳಬೇಕು. ಊರಲ್ಲೇ ತಯಾರಾಗುವ ಒಡವೆಗಳನ್ನು ಕೊಂಡುಕೊಳ್ಳಬೇಕು. ಇದರಿಂದಲೇ ಹಳ್ಳಿಗಳ ಉದ್ಧಾರವಾಗುವದೆಂದು ರಾಷ್ಟ್ರಸಭೆಯು ಅಪ್ಪಣೆಮಾಡಿದೆ. ಇನ್ನೊಂದು ಸಂಗತಿಯೆಂದರೆ ರಾಷ್ಟ್ರೀಯ ಸಭೆಯನ್ನು ಬಲಪಡಿಸುವದು. ರಾಷ್ಟ್ರೀಯ ಸಭೆಗಿರುವ ಜನತೆಯ ಬೆಂಬಲದ ಮೇಲೆ ಅದರ ಬಲಾಬಲದ ನಿರ್ಣಯವಾಗುತ್ತದೆ." ಮುಂತು ಮೇಲಿನ ಅರಿಕೆತ್ತಿಗೆ ಹೋದಾಗ ಮಹಾತ್ಮರಿಗೆ ಒಬ್ಬರು 'ನಿಮ್ಮ ಕಾಂಗ್ರೆಸ್ಸಿಗೆ ಜನರ ಬೆಂಬಲವಿದೆಯೆ?' ಎಂದು ಪ್ರಶ್ನೆ ಮಾಡಿದರು. ಅದಕ್ಕೆ ಮಹಾತ್ಮರು 'ಬಹುಜನ ಜನರು ಕಾಂಗ್ರೆಸ್ಸಿನ ಮಾತಿಗೆ ಕಿವಿಗೊಡುತ್ತಾರೆ' ಎಂದು ಉತ್ತರಿಸಿದ್ದರು. ಆ ಮಾತು ನೀವು ಸಾರ್ಥಕ ಮಾಡಿಕೊಡಬೇಕು. ಎಲ್ಲರೂ ರಾಷ್ಟ್ರೀಯ ಸಭೆಯ ಮೆಂಬರರಾಗಿರಿ." ಶ್ರೀ॥ ಸ್ವಾಮಿನಾಯಕರವರಿಂದ ಒಂದು ಭಾಷಣವಾಯಿತು. ಆ ಮೇಲೆ ರಾಷ್ಟ್ರಗೀತವಾಗಿ ಸಭೆಯು ವಿಸರ್ಜನವಾಯಿತು. ಜಯಘೋಷದ ಗದ್ದಲದಲ್ಲಿ ರಾಷ್ಟ್ರಪತಿಗಳು ಮೋಟಾರಹತ್ತಿ ಸಿರಸಿಗೆ ಹೊರಟರು.

ಅಲ್ಲಲ್ಲಿ ಇಷ್ಟಿಷ್ಟು!

[೨ನೇ ಕಾ ಲಮಿನಿಂದ ಮುಂದರಿದದ್ದು]

ಶ್ರೀ ಜಗನ್ನಾಥ ಪ್ರಸಾದ ಖಲೀಶರವರು ಪ್ರಕಟಿಸುವದೇನಂದರೆ — ಎಸ್ ಎಸ್ ಸಹಾಯ ಎಂಬ ನೌಕಾದೊಳಗಿನ ಸಬ್‌ಡಿವ್ಹಿಜನಲ್ ಆಫೀಸರ ಬಾಬು ಭಾಗವತ ಪ್ರಸಾದ ಸಿಂಗ, ಬಾಬು [illegible] ಪ್ರಸಾದಸಿಂಗ ಎಂಬ ಇಬ್ಬ ಜಮೀನದಾರರಿಗೆ ಪತ್ರ ಬರೆದದ್ದೇನಂದರೆ:— "ರಾಷ್ಟ್ರ ಮಹೋತ್ಸವಕ್ಕೆ ಇನ್ನು ಎರಡೇ ವಾರಗಳುಳಿದವು. ಇನ್ನೂ ನಿಮ್ಮ ಪಟ್ಟಿ ಬರಲಿಲ್ಲ. ನಿಮ್ಮ ಪಟ್ಟಿಯನ್ನು ೨೩ ನೇ ಎಪ್ರಿಲ್ ಒಳಗೆ ನನಗೆ ಖಂಡಿತವಾಗಿ ಕಳಿಸಬೇಕು. ಇಲ್ಲದಿದ್ದರೆ ನೀವು ಉತ್ಸವದಲ್ಲಿ ಸೇರಬಯಸುವದಿಲ್ಲವಾಗಿ ನನ್ನ ಅಭಿಪ್ರಾಯವಾಗಬೇಕಾದೀತು. ಒಂದು ವೇಳೆ ಯಾವದೇ ಕಾರಣದ ಮೂಲಕ ನಿಮಗೆ ಪಟ್ಟಿ ಕೊಡಲಾಗದಿದ್ದರೆ ನೀವು ಸ್ವತಃ ಹಾಜರಾಗಿ ಎಲ್ಲ ಸ್ಥಿತಿಯನ್ನು ನಮಗೆ ತಿಳಿಸಬೇಕು. ನಿಮ್ಮಂಥ ಸ್ಥಿತಿಯವರು ದೂ [illegible] ಕಡಿಮೆಯಾಗಿ ಪಟ್ಟಿ ಕೊಟ್ಟಲ್ಲಿ ಸೋಫಿಸಲಾರದು." ಇದೇ ಪ್ರಕಾರ ಜ[illegible]ನದಾರರಿಗೆ ಪತ್ರ ಬರದು ಹದರಿಸಿಕೊಂಡು ಪಟ್ಟಿ ವಸೂಲಿಯ [illegible] ನಡೆದದೆ, ಉತ್ಸವ ಪಟ್ಟಿ ವಸೂಲ ಮಾಡಿ [illegible] ಳಿಗ ಬಿಡುಗಡೆ ಮಾಡದ ಕ್ರಮವೂ ಕೆಲ [illegible]ಗಳಲ್ಲಿ ನಡೆದ[illegible] ಮೋಬಾರ ಇಟ್ಟವರ [illegible] ಕುದ[illegible] ಇಟ್ಟವರ ದೂ [illegible]ರಂತೆ ಪಟ್ಟಿ ವಸೂಲಿ ಕೊಡತಕ್ಕದ್ದು. ಗಯಾ [illegible] ಈ ಕ್ರಮವನ್ನು ಅಕ್ಷೇಪಿಸಿ [illegible] ಉತ್ಸವ ಪಟ್ಟಿ ಕೊಡದಿದ್ದರೆ [illegible] ಟಸ್ಸ ಹೆಚ್ಚಿಸಲ್ಪಡುವದು, ಯೂನಿಯನ್ [illegible] ಲ್ಪಡುವದು, ಎಂಬದಾಗಿ ಹೆದರಿಸಿ [illegible] ನೊಳಗಿನ ನಿವಾಸಿಗಳಿಂದ ಉತ್ಸವ ಪಟ್ಟಿ [illegible] ತ್ತದೆ. ಕೆಲವರಿಗೆ ಪೋಲೀಸರು ಕರಸಿ [illegible] ಕೊಡಲು ಅಪೇಕ್ಷಿಸುತ್ತಾರೆ. ಶಾಲೆಗೆ [illegible] ಪಿಸಿಯಾಗದಂತೆ ಪ್ರಿ[illegible] ಶಿಕ್ಷಕರು [illegible] ಉತ್ಸವ ಪಟ್ಟಿ ಕೊಡಬೇಕಾಗಿ ಶಾಲೆಯ ಇನ್ಸ್‌ಪೆಕ್ಟರರು ಹು[illegible]ಗಳನ್ನು ಪ್ರೇರಿಸಿರುತ್ತಾರೆ. ಉತ್ಸವ [illegible]ಯನ್ನು ಪ್ರತಿರೋಧಿ ವಿದ್ಯಾರ್ಥಿಯು ಕೋರ್ಟಿಗೆ ಬೇಕೆಂದು ನೌಕಾದೊಳಗಿನ ಹೆಡಮಾಸ್ತರರ [illegible] ನು ಎಲ್ಲ [illegible]ಂತದಲ್ಲಿ ಬಡ ಹಳ್ಳಿಯವರು ಕಡಿಮೆ ಪಟ್ಟಿ ಸಹ [illegible]ಯದಿಂದ ವಸೂಲ ಮಾಡಲಿಕ್ಕೆ ಇಂದ್ರ[illegible] ಬರೆಯುತ್ತಾರೆ. ಆ[illegible] ಕಡೆಯಲ್ಲಿ ಅವರ ಕಡೆ ಹಣವಿಲ್ಲ! [illegible] ಉ[illegible]ಡಕದವರು ಎಷ್ಟು [illegible]ರಂತೆ [illegible] ಯ ಉಪದ್ರವದಿಂದ ಜನರು ತೀರ ನೊಂದು [illegible]ರೆಂದು [illegible] ಕೊಂಗ್ರೆಸ ಕಮೀಟಿಯವರ [illegible] ಕಂಡಳದ [illegible] ಕಾಂಗ್ರೆಸ [illegible] ನೇ ತಾರೀಖಿನ ಸಭೆ [illegible] ಹಿಂದುಸ್ಥಾನ ಸರಕಾರವು ಒ[illegible] ಮಾಡಬಾರದ[illegible] ಕೋರಡಿ[illegible] ಗೂ ಸ್ಥೇ[illegible] ಗಳಲ್ಲಿ ನಮ್ಮ ಗೌರವಪಿಪೆಯಿಂದ [illegible] ಪಡಿಸಲು ಅವ್ವಾನಿಗಳಿಗೆ ಒಳಪಡಿಸಲಾಗಿ ದೆಣಿಸುತ್ತ[illegible] ಅಪೇಕ್ಷೆ [illegible]ಯಂತೆ ನಡಕೊಳ್ಳದಿದ್ದಲ್ಲಿ ನಮಗೆ ಅಧಿಕಾರಿಗ[illegible] ಸಮಯ ಸಾಧಿಸಿ ಜೋರ ಜೇರಿ ಕಾನೂನುಗಳನ್ನು [illegible] ಇದ್ದ ಅಧಿಕಾರ ಒಲವಿಂದ ಸೀಡಿಸಬಹುದಾಗಿ ಜನರು ಅಭಿಪ್ರಾಯಪಟ್ಟು ಹೆದರಿ ಉತ್ಸವಪಟ್ಟಿ ಕೊಡುತ್ತಾರೆ. ವಿಲಿಂಗ್ಡನ್ ದೊರೆಸಾಹೇಬರು ಸಿಥಿಸಂಗ್ರಹವನ್ನು ಇಷ್ಟಕ್ಕೇ ಸಾಕು ಮಾಡಿದ ಪ್ರಕಟಣೆ ಹೊರಡಿಸಬೇಕಾಗಿ ವಿನಂತಿ. ಉತ್ಸವ ಪಟ್ಟಿ[illegible] ಕೆ [illegible] ವಿಷಯದಲ್ಲಿ ನಡೆದ ಬಲಾತ್ಕಾರವನ್ನು ಪರಿಶೋಧಿ[illegible] ಅತ್ಯು[illegible] ಅಧಿಕಾರಿಗ[illegible] ನ ಮಾಡಬೇಕಾಗಿಯೂ ಒತ್ತಾಯ ಕಂಡುಬಿಂದಲ್ಲಿ ಪಟ್ಟಿಯ ಹಣವನ್ನು ಹಿಂತಿರುಗಿ ಕೊಡಬೇಕಾಗಿಯೂ ಸೂಚನ ಇತ್ತಿಡಿದ [illegible] ಪ್ರಜೆಗಳಲ್ಲಿ ಬಾದಶಹ ಪಂಚಮ ಜಾರ್ಜ [illegible] ಒಗ್ಗೆ ಇರುವ ಪ್ರೀತಿ [illegible] ಪಂಚಮ ಜಾರ್ಜ ಭೂಪಾಲರು ಪ್ರಜಾವತ್ಸಲರು, [illegible] ದುಸ್ಥಾನದ ಕಲ್ಯಾಣವಾಗಬೇಕೆಂದು ಹಗಲಿರು[illegible] ಚಿಂತಿಸುವವರು, ಅಂಥ ಸಮ್ರಾಟರ ಒಗ್ಗೆ ಯಾವದೇ ಪ್ರಕಾರ ಅಪ್ರೀತಿಯಾಗದಂತೆ ವಿಲಿಂಗ್ಡನ್ ದೊರೆಸಾಹೇಬ[illegible] ಕೊಳ್ಳಬೇಕಾಗಿ ಪ್ರಾರ್ಥನೆ.

***

ಉತ್ಸವದೊಳಗಿನ ಕೆಲ ಪ್ರಕಾರಗಳನ್ನು ಇಲ್ಲಿಯೇ ನಮೂದಿಸುವದವಶ್ಯ. ಪಾಟ್ನಾ-ಹಾಗು ಅಲಹಾಬಾದದೊಳಗಿನ ಹೈಕೋರ್ಟಿನ ನ್ಯಾಯಾಧೀಶರು ಸ[illegible] ದರಬಾರಗಳಲ್ಲಿ ಸೇರಲೊಪ್ಪಲಿಲ್ಲ. ಪಾಟ[illegible] ದೊಳಗಿನ ನ್ಯಾಯಮೂರ್ತಿಗಳು ತಮ್ಮದೊಂದು ಪ್ರತ್ಯೇಕ ದರಬಾರವನ್ನೇರ್ಪಡಿಸಿದರು. ಇಂಥ [illegible] ಅದ[illegible] ಕ್ಷೇಪವನ್ನು ಮೊಟ್ಟ[illegible] ಪ್ರಾಂತ ವಿಷಯ [illegible] ವಹಿಸತಕ್ಕದ್ದು [illegible] ಅಧಿವೇಶನದಲ್ಲಿ ಹೈಕೋರ್ಟಿನ ನ್ಯಾಯಾ[illegible] [illegible] ಕ್ಷೇಪವನ್ನು ವಹಿಸಬೇಕು [illegible] ಪ್ರಕ್ಷಣ ಗಬೇಕಾಗಿ ನಿಶ್ಚಯವಾದ್ದರಿಂದ ಈ ದರಬಾರದಲ್ಲಿ ತಾವು ಸೇರಲಾರೆವೆಂದು ನ್ಯಾಯಮೂರ್ತಿಗಳು ಅಭಿಪ್ರಾಯವಾಗಿ ಬಹಿಷ್ಕಾರ ಹಾಕಿದೆ. ಸಂಯುಕ್ತ ಪ್ರಾಂತಿಕ ಸರಕಾರವು ಪ್ರಯಾ[illegible] ಪಟ್ಟಣದ ಕ[illegible]ರಿಗೆ ಅಧ್ಯಕ್ಷಸ್ಥಾನವನ್ನು ವಹಿಸಿದ್ದರಿಂದ ಅಲಹಾಬಾದ ಹೈಕೋರ್ಟಿನ ನ್ಯಾಯಮೂರ್ತಿಗಳು ದರಬಾರಿಗೆ ಹಾಜರಾಗಿಂದ ನಿಮಂತ್ರಣವನ್ನು ಧಿಕ್ಕರಿಸಿದರು. ದರಬಾರಿಗ ಹೋದ ದರಬಾರಿಗಳೊಬ್ಬರು ಅಧ್ಯಕ್ಷರಾದ ಕಮಿಶನರರ ಕಡೆಯಿಂದ ಪದಕ ಹಚ್ಚಿಕ[illegible]ಲು ಒಪ್ಪಲಿಲ್ಲ. ಸಿಂಧ ಪ್ರಾಂತದ ಹೈದರಾಬಾದದೊಳಗಿನ ಕಾಲೇಜ ವಿದ್ಯಾರ್ಥಿಗಳು ಉತ್ಸವಕ್ಕಾಗಿ ಏರ್ಪಡಿಸಿದ ಚಹಾ-ಪಾರ್ಟಿಗಳಲ್ಲಿ ಸೇರಲಿಲ್ಲ. ಮಿಠಾಯಿ ಸಹ ತಿನ್ನಲೊಪ್ಪಲಿಲ್ಲ.

***

ಉತ್ಸವದಿಂದ ಜರ್ಮನಿ, ಅಸ್ಟ್ರಿಯಾ ಜಪಾನ ದೇಶಗಳೊಳಗಿನ ಜನಸಾಮಾನ್ಯರು ಒಳ್ಳೇ ಲಾಭ ಪಡೆದರು. ಜರ್ಮನರ ಪಂಚಮ ಜಾರ್ಜ ಭೂಪಾಲರ ಮತ್ತು ಮೇರಿ ಮಹಾರಾಣಿಯವರ ಛಾಯಾಚಿತ್ರ ಸಹಿತ ಕೈವಸ್ತ್ರಗಳನ್ನು ತಯಾರಿಸಿದರಂತೆ ಮುಂಬಯಿ

ಕಿರ್ಲೋಸ್ಕರರ

ಕೈಗಳಿಂದ ಮತ್ತು ಇಲೆಕ್ಟ್ರಿಕ್ ಮುಂತಾದ ಬೇರೆ ಶಕ್ತಿಯಿಂದ ನಡಿಸಲಿಕ್ಕೆ ಬರುವಂಥ

ಪಂಪುಗಳು.

ಇವುಗಳಿಂದ ಕೆರೆ ನದಿ ಬಾವಿಗಳಿಂದ ನೀರು ಎಷ್ಟೇ ಆಳದಿಂದಾದರೂ ಬೇಕಾದಷ್ಟು ಮೇಲೆ ಏರಿಸಲಿಕ್ಕೆ ಬರುತ್ತದೆ.

ಇರಿಗೇಶನ್ ಕೆಲಸಕ್ಕೆ,
ಫೆಕ್ಟರಿ (ಕಾರಖಾನೆ)ಗಳಲ್ಲಿ,
ಶೇತಕಿ ತೋಟಗಳಲ್ಲಿ

ಬೇಕಾದಷ್ಟು ನೀರು ಪೂರೈಸಿಕೊಳ್ಳಬಹುದು.
ಇವುಗಳು ಮಜಬೂತ, ಬಹುಕಾಲ ಬಾಳುವಂಥ, ಮಿತವ್ಯಯದ್ದು ಇದ್ದು,
ಇಡೀ ಹಿಂದುಸ್ಥಾನದಲ್ಲಿ ಸಾವಿರಾರು ಜನರು ಉಪಯೋಗ ಮಾಡಿ ಶಿಫಾರಸು ಮಾಡುತ್ತಿದ್ದಾರೆ.
ಪಂಪುಗಳ ಚಿತ್ರಗಳುಳ್ಳ ಕ್ಯಾಟಲಾಗ್ ತರಿಸಿಕೊಳ್ಳಿರಿ.



ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್—
ಕಿರ್ಲೋಸ್ಕರವಾಡಿ.

ಪೇಟೆಯಲ್ಲಿ ಮಾರಾಟ ಮಾಡಲು ವ್ಯವಸ್ಥೆ ಮಾಡಿದ್ದರಂತೆ. ಜಪಾನ ಮತ್ತು ಆಸ್ಟ್ರಿಯಾ ದೇಶದವರು ವಿದ್ಯುದ್ದೀಪದ ಬಲ್ಬುಗಳನ್ನು ತಯಾರಿಸಿ ತೀರ ಅಗ್ಗವಾಗಿ ಮಾರಾಟ ಮಾಡುತ್ತಿದ್ದರು ಜಪಾನ, ಆಸ್ಟ್ರಿಯಾ ದೇಶದೊಳಗಿನ ೧೨ ಬಲ್ಬುಗಳಿಗೆ ೩ ರೂಪಾಯಿಗಳಾದರೆ, ಇಂಗ್ಲಿಷ ಬಲ್ಬುಗಳಿಗೆ ೫ ರೂಪಾಯಿ ಬೀಳುತ್ತಿತ್ತು. ಇಷ್ಟಾಗಿ ಬೇಕಷ್ಟು ಅವು ಸಿಗುತ್ತಿದ್ದಿಲ್ಲ. ಜರ್ಮನರು ಇದೇ ಪ್ರಕಾರ ಉತ್ತಮ ಸಾಹಿತ್ಯಗಳನ್ನು ಇಂಗ್ಲಂಡ ದೇಶಕ್ಕೂ ರವಾನೆ ಮಾಡಿರುತ್ತಾರೆ ಉತ್ಸವದಿಂದ ಬ್ರಿಟಿಶ ದೇಶದವರಿಗೆ ಲಾಭ. ಜರ್ಮನಿ, ಜಪಾನ, ಆಸ್ಟ್ರಿಯಾ ದೇಶದವರಿಗೆ ಲಾಭ. ಹಿಂದುಸ್ಥಾನ ದೇಶದವರಿಗೆ ಮಾತ್ರ ಪರಿಷರಿಯಿಂದ ನಷ್ಟ ಸಂಸ್ಥಾನಿಕರ ಔದಾರ್ಯದಿಂದ ನಷ್ಟ, ಮಹಾನುಭಾವರ ಯಾತ್ರೆಯಿಂದ ನಷ್ಟ, ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳು ಹೋಗಿ ನಷ್ಟ; ಮುಂಬಯಿ, ಮದ್ರಾಸ, ಕಲಕತ್ತಾ ಮೊದಲಾದ ದೊಡ್ಡ ದೊಡ್ಡ ಮ್ಯುನಿಸಿಪಾಲಿಟಿಗಳ ರಾಜಭಕ್ತಿಪರ ಪತ್ರಿಕೆಗಳನ್ನು ಅರ್ಪಿಸುವದಕ್ಕಾಗಿ ಕಳುಹಿದ ಜನರ ಮೂಲಕ ನಷ್ಟ ಸ್ವತಂತ್ರ-ಪರತಂತ್ರ ದೇಶಗಳೊಳಗಿನ ಅಭ್ಯಂತರ ಏನು? ಆಪತ್ತಿನಲ್ಲಿಯೂ ನಷ್ಟ! ಸಂಪತ್ತಿನಲ್ಲಿಯೂ ನಷ್ಟ !!

•:•

ಗಾಂಧಿ-ಇರ್ವಿನ್ ಕರಾರಿನಂತೆ ಉಪ್ಪು ಬೆಳಿಸಿ ಸ್ಥಳಿಕ ಹಳ್ಳಿಗರು ತಮ್ಮ ಹಾಗು ತಮ್ಮ ದನ ಕರುಗಳ ವ್ಯವಸ್ಥೆ ಮಾಡಿಕೊಳ್ಳಲು ಅಧಿಕಾರಿಗಳ ಆತಂಕವಿಲ್ಲವಾಗಿ ನೆಲ್ಲೂರ ಜಿಲ್ಲೆಯ ಶಿಪ್ಪರಿಗೆ ಮದ್ರಾಸದೊಳಗಿನ ಉಪ್ಪಿನ ಇಲಾಖೆಯ ಅಧಿಕಾರಿಗಳು ಆಶ್ವಾಸನೆ ಕೊಟ್ಟಿರುತ್ತಾರೆ ವ್ಯಲಾಪಲೆಮದಲ್ಲಿ ಉಪ್ಪು ಬೆಳಸಬಾರದಾಗಿ ಅಧಿಕಾರಿಗಳು ಹುಕುಮು ಹೊರಡಿಸಿದ್ದು ನಿಜ. ಆದರೆ ಕಾರಣವೇನಂದರೆ- ತಾ ೩೦-೪-೩೧ನೇದರೊಳಗೆ ಗ್ರಾಮನಿವಾಸಿಗಳು ತಮ್ಮ ಪ್ರಪಂಚಕ್ಕೆ ಅವಶ್ಯವುಳ್ಳ ಉಪ್ಪನ್ನು ಒಟ್ಟು ಮಾಡಿದರಾಗಿ ಸರಕಾರಕ್ಕೆ ವರದಿ ಬಂತು ಆದರಿಂದ ಮೇ ೧ನೇ ತಾರೀಖಿನಿಂದ ಇನ್ನು ಉಪ್ಪು ತೆಕ್ಕಬಾರದಾಗಿ, ತಯಾರಿಸಬಾರದಾಗಿ ಉಪ್ಪಿನ ಇಲಾಖೆಯವರು ಪ್ರತಿಬಂಧಕ ಹುಕುಮು ಹೊರಡಿಸಿದರು "ಉಪ್ಪಿನ ಇಲಾಖೆಯವರಿಗೆ ಸಿಕ್ಕಿದ ರಿಪೋರ್ಟ ಸರಿಯಾಗಿಲ್ಲ ಹಳ್ಳಿಗರು ಒಟ್ಟು ಮಾಡಿದ ಉಪ್ಪು ತೀರ ಸ್ವಲ್ಪ ಸ್ವಾರ್ಥಪರಾಯಣ ಉಪ್ಪಿನ ಸಾವಕಾರರು ಕಸ್ಟಮ್ ಆಫೀಸರರಿಗೆ ಸುಳ್ಳು ಮಾಹಿತಿ ಕೊಟ್ಟಿದ್ದಾರೆ." ಹೀಗೆ ಶಿಪ್ಪರು ಹೇಳಲು, "ನಾವು ಚೌಕಶಿ ಮಾಡಿ ಹೊಸ ಹುಕುಮನ್ನು ಹೊರಡಿಸುತ್ತೇವೆ ಅಲ್ಲಿಯವರೆಗೆ ಈಗಿನ ಪ್ರತಿಬಂಧಕ ಹುಕುಮುಗಳನ್ನು ಪಾಲಿಸತಕ್ಕದ್ದು" ಎಂಬವಾಗಿ ಉಪ್ಪಿನ ಇಲಾಖೆಯ ಅಧಿಕಾರಿಗಳು ಶಿಪ್ಪರಿಗೆ ಹೇಳಿ ಕಳಿಸಿದರು. ಚೌಕಶಿ ಮುಗಿಯುವ ತನಕ ಮುಳಿಗಳ ಬಂದೀಸು, ಮುಳಿಗಳವಲ್ಲಿ ಆ ಚೌಕಶಿ ಪ್ರಕರಣ ತೀರ್ಮಾನ್ಯತ್ರ ಬದ್ಧಿತ ಹಳ್ಳಿಗರಿಗೆ ಕಸ್ಟಮ್ ಆಫೀಸರರ ಕಡೆಗೋಗಿ ಅವಶ್ಯವಿದ್ದಷ್ಟೇ ಉಪ್ಪನ್ನು ಒಟ್ಟು ಮಾಡುತ್ತೇವಾಗಿ ಸ್ಥಾಪಿಸಲು ಶಿಪ್ಪರು ಹಳ್ಳಿಗರಿಗೆ ಸೂಚಿಸಿದ್ದಾರೆ "ಗಾಂಧಿ ಇರ್ವಿನ್ ತಹನಾಮೆಯಲ್ಲಿ ಹೆಚ್ಚು ಕಡಿಮೆಯಾಗಲಿಲ್ಲ. ಆದನ್ನು ಜನರು ಸರಿಯಾಗಿ ಉಪಯೋಗಿಸುವದಿಲ್ಲವಾಗಿ ಸರಕಾರದ ಆಕ್ಷೇಪ, ಆ ಕರಾರಿನಂತೆ ಸರಕಾರವು ನಡೆಯುವದಿಲ್ಲವಾಗಿ ಜನರ ದೂರು ಇದೇ ವಿವಾದ ಕಾರಣ" ಎಂಬದಾಗಿ ಶಿಪ್ಪರು ಪ್ರಕಟಿಸುತ್ತಾರೆ. ಶಿಷ್ಟಾಯಿಗೆ ಹೋದವರು ಈ ವಿಷಯಗಳನ್ನು ಹೆಚ್ಚಿನ ವಿವರದಿಂದ ವಿಚಾರಿಸಿದ್ದರೆ ಗಾಂಧಿ-ಇರ್ವಿನ್ ತಹನಾಮೆಯಿಂದ ಸಿಗುವ ಲಾಭದ ಪರಿಮಿತಿ ಜನರಿಗೆ ತಿಳಿಯುತ್ತಿತ್ತು. ಯೋಗ್ಯ ಉಪಯೋಗವೆಂದರೇನು? ಪ್ರತಿಯೊಬ್ಬರು ಎಷ್ಟೆಷ್ಟು ಉಪ್ಪನ್ನು ಒಟ್ಟು ಮಾಡಬೇಕೆಂದು ಸರಕಾರದ ಅಂಬೋಣವಿದೆ? ಕಸ್ಟಮ್ ಆಫೀಸರರ ರಿಪೋರ್ಟು ಯಾವ ಕ್ರಮಕ್ಕನುಸಾರವಾಗಿ ನಡೆಯಬೇಕು? ಪ್ರತಿಬಂಧಕ ಹುಕುಮು ಹೊರಡಿಸುವ ಮುಂಚೆ ಸರಕಾರವು ಜನರ ಅಂಬೋಣ ಕೇಳಿಕೊಳ್ಳಬೇಕೋ ಬೇಡವೋ? ಎಂಬ ಪ್ರಶ್ನೆಗಳನ್ನು ಶಿಪ್ಪರು ಸ್ಫುಟ ಮಾಡಿಕೊಂಡಿದ್ದರೆ ಗಾಂಧಿ-ಇರ್ವಿನ್ ತಹನಾಮೆ ಅಳಿದಿದೆಯೋ, ಉಳಿದಿದೆಯೋ ಎಂಬ ಸಂಗತಿ ಸ್ಪಷ್ಟವಾಗುತ್ತಿತ್ತು. ಈಗಿನಂತೆ ಏಕತರ್ಫಿ ರಿಪೋರ್ಟುಗಳ ಮೇಲೆ ಮೇಲಧಿಕಾರಿಗಳು ಪ್ರತಿಬಂಧಕ ಹುಕುಮುಗಳನ್ನು ಹೊರಡಿಸುವದಿದ್ದಲ್ಲಿ ಜನರಿಗೆ ತಹನಾಮೆಯ ನೆಲೆ ಸಿಗದೆ ಸುಖಕ್ಕಿಂತ ಕಷ್ಟವೇ ಹೆಚ್ಚಾಗುತ್ತದೆ. ಉಪ್ಪಿನ ಇಲಾಖೆಯವರು ಪ್ರತಿಬಂಧಕ ಹುಕುಮು ಹೊರಡಿಸುವ ಮುಂಚೆ ಇತ್ತಂಡದವರ ಹೇಳಿಕೆ ಕೇಳಿಕೊಳ್ಳಬೇಕೆಂಬ ನಿಯಂತ್ರಣವನ್ನು ಗಾಂಧಿ-ಇರ್ವಿನ್ ತಹನಾಮೆಯ ಅಭಿಮಾನ ಹಿಡಿಯುವ ಹಿಂದುಸ್ಥಾನ ಸರಕಾರವು ಪ್ರಕಟಿಸಬೇಕು; ಅಂದರೆ ಮಾತ್ರ ಪ್ರಯೋಜನವಿದೆ ಇಲ್ಲದಿದ್ದರೆ ಸರಕಾರವು ಮೊಟ್ಟಮೊದಲು ಪ್ರತಿಬಂಧ ಮಾಡಿ, ಚೌಕಶಿಯ ಅಭಿವಚನ ಕೊಟ್ಟು, ಚೌಕಶಿ ಮುಗಿಯುವ ತನಕ ಪ್ರತಿಬಂಧವನ್ನು ಊರ್ಜಿತ ಇಟ್ಟು ಗಾಂಧಿ-ಇರ್ವಿನ್ ತಹನಾಮೆಯನ್ನು ಪಾಲಿಸುವದಿದ್ದಲ್ಲಿ ಅದನ್ನು ರದ್ದುಪಡಿಸಿ ಆ ಬಂಧನದಿಂದ ಜನರಿಗೆ ಬಿಡುಗಡೆ ಮಾಡುವದು ಲೇಸು. ಅಂದರೆ ಏಕತರ್ಫಿನಿಂದ ಜನರ ಮೇಲೆ ಹೊರುವ ದುರುಪಯೋಗದ ಆರೋಪವಾದರೂ ತಪ್ಪೀತು. ಶಿಪ್ಪರು ವಿಚಾರಿಸಿ ಯಾವದೊಂದು ಕ್ರಮವನ್ನು ನಿರ್ಧರಿಸಬೇಕಾಗಿ ಸೂಚನೆ.

— ಹಿಂದುಸ್ಥಾನ ಸರಕಾರದವರು ಪಂಡಿತ ಜವಾಹಿರಲಾಲರಿಗೆ ಬಿಡುಗಡೆ ಮಾಡುವ ವಿಚಾರದಲ್ಲಿದ್ದಾರಂತೆ. ಆದರೆ ಅವರು ಕೂಡಲೇ ತಮ್ಮ ಸೌಭಾಗ್ಯವತಿಯವರೊಡನೆ ಯುರೋಪಕ್ಕೆ ಹೋಗಬೇಕಾಗಿಯೂ ಸರಕಾರದ ಅಪ್ಪಣೆ ಪಡಕೊಂಡತನಕ ಸ್ವದೇಶಕ್ಕೆ ಹಿಂತಿರುಗಿ ಬರಬಾರದಾಗಿಯೂ ಹಾಕಿದ ಶರ್ತಗಳನ್ನು ಜವಾಹಿರಲಾಲರು ತಿರಸ್ಕಾರಪೂರ್ವಕ ಧಿಕ್ಕರಿಸಿದ್ದಾರೆಂದು ವಾರ್ತೆ.

ಅಲ್ಲಿಷ್ಟು ಇಲ್ಲಿಷ್ಟು!

[೧೫ನೇ ಪಾನಿನಿಂದ ಮುಂದರಿಸಿದ್ದು]

ಖರ್ಚಿನ ಅಂಕಿಗಳನ್ನು ಪರ್ಯಾಲೋಚಿಸಬಹುದು. ೧೯೧೩ನೇ ಇಸ್ವಿಯಲ್ಲಿ ಅಂದರೆ ಮಹಾ ಯುದ್ಧ ಪೂರ್ವದಲ್ಲಿ ಅಮೇರಿಕೆಯಲ್ಲಿ ೭೩೫೦ ಲಕ್ಷ, ಇಂಗ್ಲಂಡದಲ್ಲಿ ೧೧೫೫೦ ಲಕ್ಷ, ಫ್ರಾನ್ಸದಲ್ಲಿ ೧೦೪೭೦ ಲಕ್ಷ, ಜಪಾನದಲ್ಲಿ ೩೮೮೦ ಲಕ್ಷ, ರಶಿಯಾದಲ್ಲಿ ೧೩೪೪೦ ಲಕ್ಷ ರೂ. ಖರ್ಚಾಗುತ್ತಿತ್ತು ೧೯೩೦ನೇ ಇಸ್ವಿಯಲ್ಲಿ ಅನುಕ್ರಮವಾಗಿ ೨೧೮೮೦ ಲಕ್ಷ, ೧೬೦೫೦ ಲಕ್ಷ, ೧೩೭೫೦ ಲಕ್ಷ, ೬೯೭೦ ಲಕ್ಷ, ೧೭೩೭೦ ಲಕ್ಷ ಹೀಗೆ ಖರ್ಚಾಯಿತು. ಇತ್ತ ೫ ವರ್ಷಗಳಲ್ಲಿ ಖರ್ಚಿನ ರಕಮು ಮೇರೆದಪ್ಪಿ ಬೆಳೆಸುತ್ತಿದ್ದ ಸಂಗತಿ ಈಗ ಎಲ್ಲರಿಗೂ ಗೊತ್ತಿದ್ದ ವಿಷಯ. ಪರಿಸ್ಥಿತಿ ಈ ಪ್ರಕಾರದ್ದಿದೆ.

•:•

ಬರಗಾಲದ ಅಂಕಿಗಳು— ೧೮೭೭ನೇ ಇಸ್ವಿಯಿಂದ ೧೯೦೮ನೇ ವರೆಗೆ ಹಿಂದುಸ್ಥಾನದೊಳಗೆ ಬಿದ್ದ ಬರಗಾಲದ ಕಷ್ಟದ ಕಥೆ. ೧೮೭೭-೭೮ನೇ ಇಸ್ವಿಯಲ್ಲಿ ೨|| ಲಕ್ಷ ಚಚ್ಚೌಕು ಮೈಲು ಪ್ರದೇಶದ ಮೇಲೆ ಬರಗಾಲ ಬಿದ್ದು ೫೫ ಲಕ್ಷ ಜನರು ತೀರಿದರು ೧೮೮೮ನೇ ಇಸ್ವಿಯಲ್ಲಿ ೩|| ಸಾವಿರ ಚಚ್ಚೌಕು ಮೈಲು ಪ್ರದೇಶದ ಮೇಲೆ ಬಿದ್ದ ಬರಗಾಲದಿಂದ ೧೦ ಲಕ್ಷ ಜನರು ತೀರಿದರು ೧೮೯೦-೯೭ನೇ ಇಸ್ವಿಯಲ್ಲಿ ೩|| ಲಕ್ಷ ಚಚ್ಚೌಕ ಮೈಲು ಪ್ರದೇಶದ ಮೇಲೆ ಬರಗಾಲ, ೭೦ ಲಕ್ಷ ಜನರು ತೀರಿದರು. ೧೮೯೯-೧೯೦೦ನೇ ಇಸವಿಯಲ್ಲಿ ಸಾರ್ವತ್ರಿಕ ಬರಗಾಲ ಬಿದ್ದು ೪|| ಕೋಟಿ ಜನರು ಸತ್ತರು ೧೯೦೬-೦೭ರಲ್ಲಿ ಮತ್ತು ೧೯೧೩-೧೪ರಲ್ಲಿ ಸಂಯುಕ್ತ ಪ್ರಾಂತದಲ್ಲಿ ಬರಗಾಲ. ೧೯೧೮ರಿಂದ ೧೯೨೦ರ ತನಕ ಮಧ್ಯಪ್ರಾಂತ, ದಕ್ಷಿಣ ಹಿಂದುಸ್ಥಾನ ಪ್ರದೇಶಗಳಲ್ಲಿ ಭಯಂಕರ ಬರಗಾಲ ೩||. ಅಬ್ಜ ರೂಪಾಯಿಗಳ ನಷ್ಟವಾಗಿರಬೇಕಂತೆ ಜನರ ತೀರಿಕೊಂಡ ಲೆಕ್ಕ ಸಿಗದಿಲ್ಲ ೧೯೨೮ನೇ ಇಸ್ವಿಯಿಂದ ಇತ್ತ ೧೦-೧೧ ವರುಷಗಳಲ್ಲಿ ಹಿಂದುಸ್ಥಾನದೊಳಗುಂಟಾದ ಕಷ್ಟವನ್ನು ಬಣ್ಣಿಸಿ ತೀರದು. ಕೈಗಾರಿಕೆಗಳು ನಷ್ಟವಾದವು ಜನರಿಗೆ ಉಣ್ಣಸಿಗದೆ ಸಾವಿರಾರು ಜನರು ಉಪವಾಸ ತೀರಿಕೊಂಡರು. ಬರಗಾಲದ ಜಾಹೀರನಾಮೆಯಿಲ್ಲದೆ ಒದಗಿದ ಅವಸ್ಥೆ ಬಣ್ಣಿಸಲಸವಳ.

ದ್ವಿಗುಣವಾದ ಲಾಭವನ್ನು ಹೊಂದಿರಿ.

ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ!

ಮಕ್ಕಳ ಲಿವರ್ ಕಂಪ್ಲೇಂಟು (ಕೂರ್ಮವ್ಯಾಧಿ) ಮತ್ತು ಜ್ವರಗಳಿಗೆ

ಜಪ್ಪಿ ವೆಂಕಟರಮಣಯ್ಯನವರ

'ಲಿವರ್ ಕ್ಯುಅರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಿರಿ!

ಹೆಚ್ಚಿನ ಮಾಹಿತಿಗೆ ಬರೆಯಿರಿ

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು —

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ)

ಅಲ್ಲಿಷ್ಟು ಇಲ್ಲಿಷ್ಟು!

ಚಳಿಜ್ವರದ ಮೇಲೆ ಹೊಸ ಪ್ರಕಾರದ ಪ್ರತಿಬಂಧಕ ಉಪಾಯ ದೊರಕಿದೆ. ಚಳಿಜ್ವರ ಗುಂಗಾಡಿಗಳಿಂದ ಹುಟ್ಟುತ್ತದೆ, ಗುಂಗಾಡಿಗಳು ಜವಳು ಪ್ರದೇಶಗಳಲ್ಲಿ ಹುಟ್ಟುತ್ತವೆ, ಎಂಬ ಸಂಗತಿಗಳನ್ನು ಈಗ ಎಲ್ಲರೂ ಬಲ್ಲಾದ ವಿಷಯ. ಈ ಜ್ವರದಿಂದ ತಪ್ಪಿಸಿಕೊಳ್ಳುವ ಒಂದು ಹೊಸ ಉಪಾಯ ಸಿಂಹಳದ್ವೀಪದಲ್ಲಿ ಅನುಭವಕ್ಕೆ ಬಂದಿದೆ. ಚಳಿಜ್ವರದಿಂದ ಸಿಂಹಳದ್ವೀಪದಲ್ಲಿ ಲಕ್ಷಾವಧಿ ಜನರು ತೀರಿಕೊಂಡರು. ನೂರಾರು ಹಳ್ಳಿಗಳು ಹಾಳು ಬಿದ್ದವು. ಅಲ್ಲಿ ಉಪಚಾರ ಮಾಡುವದಕ್ಕಾಗಿ ಬುದ್ಧ ಸನ್ಯಾಸಿಗಳೊಬ್ಬರು ಹೋಗಿದ್ದರು. ಅವರು ಅರಿಸಿನ ಬಣ್ಣದ ನಿಲುವಂಗಿಗಳನ್ನು ಹಾಕಿಕೊಳ್ಳುತ್ತಾರೆ. ಇವರಿಗೆ ಚಳಿಜ್ವರದ ಬಾಧೆಯಾಗಲಿಲ್ಲ. ಬಿಳೀ ಅಂಗಿ ಹಾಕಿಕೊಂಡು ಉಪಚಾರಕ್ಕೆ ಹೋದವರೆಲ್ಲ ಚಳಿಜ್ವರವಾಗಿ ತೀರಿಕೊಂಡರು. ಈ ಅನುಭವ ನೋಡಿ ಕೋಲೊಂಬೋದಲ್ಲಿ ಆಲೋಚನೆ ಮಾಡಲಾಯಿತು. ಅಲ್ಲಿ ಹಳದಿ ಬಣ್ಣದ ಅರಿವೆ ಹಾಕಿಕೊಂಡವರು ತಮ್ಮ ಅನುಭವ ಹಾಗೇ ಎಂದು ಹೇಳಿದರಂತೆ. ಈ ಗುಂಗಾಡಿಗಳಿಗೆ ಕೆಂಪು ಬಣ್ಣದ ಮೇಲೆ ಪ್ರೀತಿ, ಅರಿಸಿನ ಬಣ್ಣದ ಮೇಲೆ ದ್ವೇಷ. ಅರಿಸಿನ ಬಣ್ಣ ನೋಡಿದಲ್ಲಿ ಅವು ಓಡಿಹೋಗುತ್ತವೆ. ಮಲೇರಿಯಾ ಬಳಗದಲ್ಲಿ ಜನರು ಈ ಉಪಾಯ ಕೈಕೊಂಡು ಪ್ರಯೋಜನ ಪಡೆಯಬಹುದು.

* * *

ಲೆಫ್ಟನಂಟ ಕರ್ನಲ್ ಸರ ಶೀರ ಜಂಗ ಎಂಬ ಹೆಸರಿನ ರಾಜವೈದ್ಯರು ವಸಾಹತಿಗೆ ಬೆಲ್ಲದ ವಿಷಯ ಪತ್ರ ಬರೆದಿದ್ದಾರೆ. ಬೆಲ್ಲದಲ್ಲಿ ... ಎಂಬ ದ್ರವ್ಯವಿರುತ್ತಿದ್ದು ಸಕ್ಕರೆ ಮಾಡುವ ಕ್ರಮದಲ್ಲಿ ಅದು ನಾಶವಾಗುತ್ತದೆ. 'ಸಕ್ರೋಜ' ಮಾತ್ರ ಉಳಿಯುತ್ತದೆ. ಸಕ್ರೋಜ ಇದು ಫ್ರುಕ್ಟೋಜದಲ್ಲಿ ರೂಪಾಂತರವಾದನಕ ಶರೀರದಲ್ಲಿ ಬೆರೆತುಹೋಗುವದಿಲ್ಲ. ಆದರಿಂದ ಸಕ್ಕರೆಗಿಂತ ಬೆಲ್ಲವೇ ಶ್ರೇಷ್ಠವಾದುದು ಎಂಬದಾಗಿ ಬರೆದಿದ್ದಾರೆ. ಸಕ್ಕರೆಯ ಬಳಕೆಗೆ ಜನರು ಮೋಹ ಹೋಗದೆ ಬೆಲ್ಲವನ್ನೇ ಉಪಯೋಗಿಸಿ ಆರೋಗ್ಯವನ್ನು ಸಂಗ್ರಹಿಸಿಕೊಳ್ಳಬೇಕು.

* * *

ಡಾ| ಎಡ್ವರ್ಡ ಪಾವಲ್ಸ್ಕಿರವರು 'ಹೆಲ್ಥ' ಎಂಬ ಆರೋಗ್ಯ ಪತ್ರಿಕೆಯಲ್ಲಿ ಬರೆಯುವದೇನಂದರೆ - ಸಮುದ್ರ ಪರ್ಯಟಣ ಮಾಡುವಾಗ ಆಗುವ ವಾಕರಿಕೆ, ಹೆಂಗಸರಿಗೆ ಬಯಕೆಯಾದಾಗ ಆಗುವ ವಾಕರಿಕೆ ಇವುಗಳಿಗಲ್ಲ ಒಂದೇ ಕಾರಣವಿದೆ. ದೇಹದಲ್ಲಿ ಸಕ್ಕರೆಯ ಅಂಶವು ಕಡಿಮೆಯಾಗಿ ವಾಕರಿಕೆ ಹುಟ್ಟುತ್ತದೆ. ಅದಕ್ಕೆ ಸಕ್ಕರೆಯ ಇಂಜಕ್ಶನ್ ಕೊಟ್ಟಲ್ಲಿ ಈ ತೊಂದರೆ ಪರಿಹಾರವಾಗುತ್ತದೆ. ಪಾಶ್ಚಾತ್ಯ ವೈದ್ಯರು ಔಷಧೋಪಚಾರದ ಮಾತಿಗಿಂತ ಇತ್ತಲಾಗಿ ಇಂಜಕ್ಶನ್‌ದ ಮಾತಗಳನ್ನೇ ಆಡುತ್ತಾರೆ. ಬಿಸಿನೀರಿನಲ್ಲಿ ಬೆಲ್ಲ ಕಲಿಸಿ ಅದನ್ನು ಬಯಕೆ ಹೆಂಗಸರಿಗೆ ಕೊಟ್ಟು ಉಪಚಾರ ಮಾಡುವ ಪದ್ಧತಿ ಈಗ ಬಹು ಕಾಲದಿಂದ ನಡೆದು ಬಂದಿದೆ. ಗರ್ಭಾಶಯದೊಳಗಿನ ಶಿಶುವಿನ ಬೆಳವಣಿಗೆಗೆ ಸಕ್ಕರೆಯು ಅವಶ್ಯವಿದ್ದದರಿಂದ ತಾಯಿಯ ಬಳಿ ಕಡಿಮೆಯಾಗುವದರಿಂದ ... ಆಗುತ್ತ...ಗಿ ಗ್ರಹಿಕೆ ... ವಾವಲ್ಸ್ಕಿಯವರು ಸಹ ಇದೇ ಪ್ರಕಾರ ಅಭಿಪ್ರಾಯ ಪಡುತ್ತಾರೆ.

* * *

ಡಬ್ಲಿನ್‌ದೊಳಗಿನ 'ಐರಿಶ ಪ್ರೆಸ್' ಪತ್ರಿಕೆಯಲ್ಲಿ ಪ್ರಕಟವಾದ ಒಂದು ಸಂಗತಿ ಮನಸೆಳೆಯುವದಿದೆ. ಹಿಂದುಸ್ಥಾನದೊಳಗಿನ ಕೈಕೀ ಖುರಾಸ, ರುಸ್ತುಮ ಗಾಂಧಿ, ರತನ ಕ್ರೋಸ್ ಈ ಮೂವರು ಪಾರ್ಸಿ ಸಾಹಸಿಗಳು ಬಾಯಸಿಕಲ್‌ನಿಂದ ಪೃಥ್ವಿ ಪ್ರದಕ್ಷಿಣೆ ಮಾಡುವ ಸಂಕಲ್ಪ ಮಾಡಿ ತಾ ೩೦-೪-೩೩ ರಂದು ಮುಂಬಯಿಯಿಂದ ಹೊರಟರು. ದಿಲ್ಲಿ, ಕಾಶ್ಮೀರ, ಬಲುಚಿಸ್ಥಾನ, ಅಫಘಾಣಿಸ್ತಾನ, ಇರಾಣ, ತುರ್ಕಸ್ಥಾನ, ಬಲ್ಗೇರಿಯಾ, ಯುಗೋಸ್ಲಾವಿಯಾ, ಹಂಗರಿ, ಆಸ್ಟ್ರಿಯಾ, ಝೆಕೋಸ್ಲೋವಾಕಿಯಾ, ಜರ್ಮನಿ, ಬೆಲ್ಜಿಯಮ, ಇಂಗ್ಲಂಡ ದೇಶಗಳನ್ನು ಸುತ್ತಿ ಈಗ ಆಯರ್ಲಂಡ ದೇಶಕ್ಕೆ ತಲ್ಪಿದ್ದಾರೆ. ಆಯರ್ಲಂಡದೊಳಗಿನ ಸಂಚಾರ ಮುಗಿಸಿ, ಇಂಗ್ಲಂಡ ದೇಶಕ್ಕೆ ಹಿಂತಿರುಗಿಬಂದು ಅಲ್ಲಿಂದ ಫ್ರಾನ್ಸ, ಸ್ಪೇನ, ಸ್ವಿತ್ಸರ್ಲಂಡ, ಇಟಾಲಿ, ಅಫ್ರಿಕಾ, ದಕ್ಷಿಣ ಅಮೇರಿಕಾ, ಉತ್ತರ ಅಮೇರಿಕಾ, ಜಪಾನ, ಚೀನ, ಆಸ್ಟ್ರೇಲಿಯಾ, ಸಿಂಗಾಪುರ ಮಾರ್ಗವಾಗಿ ಹಿಂದುಸ್ಥಾನಕ್ಕೆ ತಲ್ಪುತ್ತಾರೆ. 'ಆಯರಿಶ ಪ್ರೆಸ್' ಪ್ರತಿನಿಧಿಗಳ ಬಳಿ ಅವರು ತಮ್ಮದೊಂದು ಅನುಭವ ಹೇಳಿದರು. ಪೌರ್ವಾತ್ಯ-ಪಾಶ್ಚಾತ್ಯರೊಳಗಿನ ಮಾನಸಿಕ ಭೇದವನ್ನು ಅವರು ಅರುಹಿದರು. ಅದೇ ಮನಸೇಯವೆಂದು ಹೇಳಿದ್ದು "ಏಶಿಯಾ ಖಂಡದೊಳಗಿನ ಯಾವತ್ತೂ ದೇಶಗಳಲ್ಲಿ ನಮಗೆ ಅಪಾರವಾದ ಆದರಾತಿಥ್ಯವಾಯಿತು. ಈಗಿನ ಕಲ್ಪನೆಯಂತೆ ಸುಧಾರಿಸದ ಜನಾಂಗಗಳಿಗೂ, ಸುಧಾರಿಸಿದ ಜನಾಂಗಗಳಿಗೂ ಇರುವ ಅಭ್ಯಂತರ ಅತಿಥಿಸತ್ಕಾರದ ವ್ಯತ್ಯಾಸದಲ್ಲಿ ಕಂಡುಬಂತು. ಏಶಿಯಾ ಖಂಡದೊಳಗಿನ ಒಕ್ಕಲಿಗರ ಮನೆಯಲ್ಲಿ ನಾವು ಹೋಗಿ ತಲ್ಪುವದೇ ತಡ ಅವರು ನಮಗೆ ಸ್ವಾಗತ ಮಾಡಿ ತಾವು ಧನ್ಯರಾದೆವೆಂದು ಉದ್ಗರಿಸುತ್ತಿದ್ದರು. ಅಫಗಾಣಿಸ್ತಾನದೊಳಗಿನ ಕಥೆ. ಪ್ರಚಂಡ ಚಳಿಗಾಳಿ ಬೀಸುತ್ತಿತ್ತು. ಹೇಗಾದರೂ ಮಾಡಿ ನಾವು ಒಂದು ಸಣ್ಣ ಗುಡಿಸಲು ಕಂಡೆವು. ರಾತ್ರಿ ಆಗಿತ್ತು. ಒಕ್ಕಲಿಗನು ಮಲಗಿದ್ದನು. ಆತನು ಎದ್ದು ತನ್ನ ಗುಡಿಸಲನ್ನು ನಮಗೊಪ್ಪಿಸಿ ಹೊರಹೋದನು. ನಾವು ಬೆಳಗ್ಗೆ ಎದ್ದುನೋಡಿದರೆ ಆತನು ಹೊರಗೆ ಚಳಿಗಾಳಿಯಲ್ಲಿ ನಡುಗುತ್ತಿದ್ದನು. "ನೀವು ಹೀಗೆ ಯಾಕೆ ಮಾಡಿದಿರಿ?" ಎಂದು ಆತಗೆ ಕೇಳಲು, "ನೀವು ನಮ್ಮ ಅತಿಥಿಗಳಲ್ಲವೇ!" ಎಂದು ಆತ ಉದ್ಗರಿಸಿದನು. ಏಶಿಯಾ ಖಂಡದಲ್ಲಿ ನಮಗೆ ಎಲ್ಲೆಲ್ಲಿಯೂ ಇದೇ ಪ್ರಕಾರ ಸತ್ಕಾರವಾಯಿತು. ನಾವು ಏಶಿಯಾ ಖಂಡದಲ್ಲಿ ೯ ಸಾವಿರ ಮೈಲು ಪಯಣ ಮಾಡಿದೆವು. ನಮಗೆ ಬರೇ ೩೦ ಪವನ ಖರ್ಚು ಬಂತು. ಅದೇ ಯುರೋಪ ಖಂಡದಲ್ಲಿ ನಮಗೆ ಎಲ್ಲಿಯೂ ಅತಿಥಿಗಳೆಂದು

THE INDIAN MERCANTILE INSURANCE CO. LTD.,

BOMBAY.

(Established in 1907)

A Solid and purely Indian Life Office which has substantial growth under the Chairmanship of the late Sir Munmohandas Ramji, Kt

WANTED Energetic & Influential Agents and experienced Organisers, both on commission & pay for the Karnatak Districts

For particulars apply to:—

G. Yellapurkar & Sons,
Chief Agents for Karnatak,
Market Square, KARWAR.

ಇಂಡಿಯನ್ ಮರ್ಕಂಟೈಲ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್, ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ ನೈಟ್, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿಹೊಂದಿದ ಕಂಪನಿಯು!

ಬೇಕಾ! ಕರ್ನಾಟಕದೊಳಗಿನ ಜಿಲ್ಲೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು, ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ಪಗಾರ ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆ ಪೇಟೆ, ಕಾರವಾರ.

ಎಣಿಸಲಿಲ್ಲ ಹಣಕೊಟ್ಟು ನಮ್ಮ ವ್ಯವಸ್ಥೆ ಸಾವು ಮಾಡಿಕೊಳ್ಳಬೇಕಾಯಿತು. ೬ ಸಾವಿರ ಮೈಲು ಸಂಚಾರಕ್ಕೆ ನೂರಾರು ಪವನುಗಳನ್ನು ಖರ್ಚು ಮಾಡಬೇಕಾಯಿತು. ಆದರೆ ಅಲ್ಲಿ ಸಂಪಾದನೆಯ ಮಾರ್ಗಗಳವೆ ರೇಡಿಯೋದ ಮೇಲೆ ಮಾತನಾಡಿ ಕೆಲ ಸಂಪಾದನೆ ಮಾಡಿದೆವು. ವ್ಯಾಖ್ಯಾನಗಳಿಂದ ಪ್ರಾಪ್ತಿಯಾಯಿತು. ವರ್ತಮಾನ ಪತ್ರಗಳಲ್ಲಿ ಲೇಖ ಬರೆದು ಹಣ ಗಳಿಸಿದೆವು” ರಾಕ್ಫೆಲೆ ಪ್ರವಾಸಿಗಳು ಪೌರ್ವಾತ್ಯ-ಪಾಶ್ಚಿಮಾತ್ಯರೊಳಗಿನ ಭೇದವನ್ನು ಬಲು ಮಾರ್ಮಿಕವಾಗಿ ವರ್ಣಿಸಿದ್ದಾರೆ. ಪೌರ್ವಾತ್ಯರು ಧರ್ಮಪ್ರಧಾನರು, ಪಾಶ್ಚಿಮಾತ್ಯರು ದ್ರವ್ಯಪ್ರಧಾನರು

* * *

ಸರ ಶಂಕರನ್ ನಾಯರರ ಮಗಂದಿರಿಗೆ ದೊಡ್ಡ ಸಂಕಟ ಒಂದೊದಗಿದೆ. ಸರ ಶಂಕರನ್ ನಾಯರರು ಕಳೆದ ವರ್ಷ ತೀರಿಕೊಂಡರು. 'My Life and Times' ಎಂಬ ಗ್ರಂಥವನ್ನು ಅವರು ಬರೆದಿಟ್ಟಿದ್ದಾರೆ. ಸರ ಶಂಕರನ್‌ರವರು ಒಳ್ಳೇ ಸ್ವಾಭಿಮಾನಿ ಪುರುಷರು. ಅವರು ಪ್ರಾಂತಿಕ ಸರಕಾರ, ಹಿಂದುಸ್ಥಾನ ಸರಕಾರಗಳಲ್ಲಿ ಸೇರಿ ಕೆಲಸ ಮಾಡಿದ ಸಂಗತಿ ಲೋಕವಿಶ್ರುತವಿದೆ. ಈ ಗ್ರಂಥದಲ್ಲಿ ಸರಕಾರದ ಅಂತರಂಗವನ್ನೂ ಅಧಿಕಾರಿಗಳಿಗೆ ಹಿಂದಿಯರು ಹೇಳುವ ಕಲ್ಯಾಣವನ್ನೂ ಅದರಿಂದ ಜನರಿಗೆ ಒದಗುವ ಅಕಲ್ಯಾಣವನ್ನೂ ಮಾರ್ಮಿಕವಾಗಿ ವರ್ಣಿಸಿದ್ದಾರಂತೆ. ಈ ಸಂಗತಿಗಳನ್ನು ಪ್ರಕಟಿಸಿದ್ದಲ್ಲಿ ಘೋರ ಚರ್ಚೆಗೆ ಆಸ್ಪದವಾಗುವದೆಂದು ಅಭಿಪ್ರಾಯವಾಗಿದೆ. ಆದರಿಂದ ಈ ಗ್ರಂಥದಲ್ಲಿಯ ಕೆಲ ಉಲ್ಲೇಖಗಳನ್ನು ಲೋಪ ಮಾಡುವ ವಿಚಾರ ನಡೆದಿರುವದಂತೆ. ಒಂದು ಮಾತಿನ ಮೇಲಿಂದ ಅಧಿಕಾರಿಗಳ ಮನಸ್ಥಿತಿಯ ಕಲ್ಪನೆ ಬಂದೀತು. ಜಾಲಿಯನವಾಲಾ ಬಾಗ ಕೊಲೆಯಿಂದ ಕೆಲ ಯುರೋಪಿಯನ ಅಧಿಕಾರಿಗಳಿಗೆ ಬಹಳ ಸಮಾಧಾನವಾಯಿತಂತೆ. ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದೊಳಗಿನ ತಮ್ಮನ್ನು ಹೊರತಲ್ಲದ ಸಹಕಾರಿ ಸಭಾಸದರು ತಮ್ಮ ಪದದ ರಾಜೀನಾಮೆ ಕೊಡದಿದ್ದರಿಂದ ಸರ ಶಂಕರನ್‌ರವರು ಒಡೆದಿದ್ದಾರಂತೆ. ಈ ಗ್ರಂಥ ಪ್ರಕಟವಾದ ಮೇಲೆ ಸತ್ಯಸ್ಥಿತಿ ತಿಳಿದೀತು. ಇಂಥ ಗ್ರಂಥ ಪ್ರಕಟ ಮಾಡಬೇಕಾದ್ದು ಯಾವ ಸಂಗತಿಗಳನ್ನು ಇಡಬೇಕು, ಯಾವ ಸಂಗತಿಗಳನ್ನು ಬಿಡಬೇಕು ಎಂಬ ವಿಚಾರದಲ್ಲಿ ಮಗಂದಿರು ತೊಡಗಿದ್ದಾರೆ.

* * *

ವಾಶಿಂಗ್ಟನ ಪಟ್ಟಣದೊಳಗಿನ 'ಸರ್ಕಲ್ಯೂಟಿ' ಪತ್ರಿಕೆಯಲ್ಲಿ ಪ್ರಕಟಗೊಂಡ ಇಟಾಲಿಯ ಆಫೀಸಿನ ಹಿಂದುಸ್ಥಾನದ ಪರತಂತ್ರ್ಯದ ಫಲವಿದೆ. ಹಿಂದುಸ್ಥಾನದೊಳಗಿನ ವಿಮೆಕಂಪನಿಯವರು ಇಟಾಲಿಯಲ್ಲಿ ತಮ್ಮ ಶಾಖೆ ತೆಗೆಯುವ ಉದ್ದೇಶ ಅಲ್ಲಿಯ ಕಾಯಿದೆಯಂತೆ ಸರಕಾರದ ಕಡೆ ೨ ಲಕ್ಷ ಲಾಯರು ಅಂದರೆ ಸುಮಾರು ೧ ಲಕ್ಷ ರೂಪಾಯಿಗಳನ್ನು ಠೇವಿಟ್ಟರು. ಇದು ೧೯೨೫ನೇ ಇಸ್ವಿ ಜೂನ ತಿಂಗಳಲ್ಲಿ ಕಾಯಿದೆಯಂತೆ ಕಂಪನಿಗೆ ಸಂಬಂಧಿಸಿದ ದಾಖಲೆಗಳ ಭಾಷಾಂತರವಾಗಿ ಇಟಾಲಿಯ ಸರಕಾರದ ಕಡೆ ಒಪ್ಪಿಸೋಣಾದವು. ಹಿಂದುಸ್ಥಾನದಲ್ಲಿ ವಿಮೆ ಕೆಲಸ ಮಾಡುವ ಇಟಾಲಿ ದೇಶಗಳ ಕಂಪನಿಗಳದ್ದಾವೇ ನೆಂದು ಇಟಾಲಿ ಸರಕಾರವು ಈ ಕಂಪನಿಯ ಕಡೆ ೧೯೨೭ನೇ ಇಸ್ವಿ ಮಾರ್ಚ ತಿಂಗಳಲ್ಲಿ ಪ್ರಶ್ನಿಸಿತು. ಹಿಂದುಸ್ಥಾನದಲ್ಲಿ ಇಟಾಲಿ ಕಂಪನಿಯಿದ್ದರೆ ಹಿಂದೀ ಕಂಪನಿಗೆ ಇಟಾಲಿಯಲ್ಲಿ ಪ್ರವೇಶಕೊಡಲಿಕ್ಕೆ ಅಡ್ಡಿಯಿಲ್ಲವಾಗಿ ಉತ್ತರ ದೊರಕಿತು. ಹಿಂದೀ ಕಂಪನಿಯವರು ಇಟಾಲಿ ಕಂಪನಿಯ ಒಂದು ಶಾಖೆಯನ್ನು ಸ್ಥಾಪಿಸಿದರು. ಆದಾಗ್ಯೂ ಇಟಾಲಿ ಸರಕಾರಕ್ಕೆ ಸಮಾಧಾನವಾಗಲಿಲ್ಲ. ವಿದೇಶಿ ಕಂಪನಿಗಳಿಗೆ ಇಟಾಲಿಯಲ್ಲಿ ಆಸ್ಪದಕೊಡಲಿಕ್ಕಿಲ್ಲವಾಗಿ ೧೯೩೦ನೇ ಆಕ್ಟೋಬರ ತಿಂಗಳಲ್ಲಿ ಉತ್ತರದೊರೆಯಿತು. ಠೇವು ತಿರುಗಿ ದೊರಕಲು ೧೯೩೨ನೇ ಇಸ್ವಿ ಬೇಕಾಯಿತು.” ಹಿಂದುಸ್ಥಾನದ ಪಾರತಂತ್ರ್ಯವೆಂಬುದು ಹೀಗೆ ಪರಿಣಮಿಸುತ್ತದೆ. ಹಿಂದುಸ್ಥಾನದಲ್ಲಿ ಎಲ್ಲರಿಗೂ ಆಶ್ರಯ, ಹಿಂದುಸ್ಥಾನದವರಿಗೆ ಮಾತ್ರ ಎಲ್ಲಿಯೂ ಆಶ್ರಯವಿಲ್ಲ.

* * *

ವಂಗ ದೇಶದೊಳಗಿನ ರಾಜಬಂದಿಗಳಿಗೆ ಒದಗುವ ಕಷ್ಟಗಳನ್ನು ಬಣ್ಣಿಸಿ ತೀರದು. ಬರೇ ಸಂಶಯದ ಮೇಲೆ ಸಾವಿರಾರು ಸ್ವದೇಶಾಭಿಮಾನಿ ದೇಶಬಾಂಧವರು ಕಾರಾಗೃಹದಲ್ಲಿ ಕೊಳೆಯುತ್ತಿದ್ದಾರೆ. ಅವರ ಪರಿಸ್ಥಿತಿಯನ್ನು ಚೌಕಶಿ ಮಾಡುವದಕ್ಕಾಗಿ ಜಬಲಪುರದಲ್ಲಿ ಸೇರಿದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯವರು ಬಾಬು ಮೋಹನಲಾಲ ಸಕ್ಸೇನಾರವರಿಗೆ ನೇಮಿಸಿರುತ್ತಾರೆ. ಮೋಹನಲಾಲರವರು ಈ ಕುರಿತು ಚೌಕಶಿ ಮಾಡತೊಡಗಿದ್ದಾರೆ. ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ೧೯ನೇ ತಾರೀಖಿಗೆ ಜನರು ಸಭೆ ಸೇರಿ ಜನರ ಕಷ್ಟನಿವಾರಣಾ ನಿಧಿಯನ್ನು ಸಂಗ್ರಹಿಸಬೇಕಾಗಿ ಅಪ್ಪಣೆ ಹೊರಡಿಸಿರುತ್ತಾರೆ. ಪೋಲಿಸ ರಾಜ್ಯಕ್ಕೆ ಬಾಡಿಗೆ ಕೊಡದ ಬಗ್ಗೆ ಶಿಕ್ಷೆಗೊಳಗಾಗುವ ಸಂಗತಿ ಚಿರಪರಿಚಿತವಾದುದು. ಆದರೆ ಮಗನ ಅಭಾವದಲ್ಲಿ ತಾಯಿಯ ಮೇಲೆ ನೋಟೀಸ ಜಾರಿ ಮಾಡಿ ಅವಳಿಗೆ ದಣಿಸುತ್ತಾರೆ. ನೆಹರಾದಲ್ಲಿ ಅಲ್ತಾಫ ಅಲ್ಲಿ ಎಂಬವರಿದ್ದಾರೆ. ಇವರಿಗೆ ತಮ್ಮ ಮನೆ ಬಿಟ್ಟು ಹೋಗಬಾರದೆಂದೂ ಯಾರೊಡನೆ ಮಾತಾಡಬಾರದೆಂದೂ ೧೯೩೧ನೇ ಇಸ್ವಿ ಎಪ್ರಿಲ್‌ದಲ್ಲಿ ಹುಕುಮವಾಗಿತ್ತು. ತಾ ೨೫-೧-೩೩ನೇ ಯ ಅವರು ಪ್ರತಾಪ ಚಕ್ರವರ್ತಿ ಎಂಬವರ ಕಡೆ ಮಾತನಾಡಿದರಂತೆ! ಮಾತನಾಡಿದ್ದು ಪೋಲೀಸರ ಸಮಕ್ಷ! ಅವರ ಮನೆ ಝಡತಿಗೆ ಹೋದಾಗ ಪ್ರತಾಪರು ಸಿಕ್ಕಲಿಲ್ಲ. ಆಕ್ಷೇಪಿತ ಮನುಷ್ಯರೂ ಅಲ್ಲ. ಆದಾಗ್ಯೂ ಅಲ್ತಾಫ ಅಲ್ಲಿಯವರ ಮೇಲೆ ಖಟ್ಲೆ ನಡೆದು ೨ ವರ್ಷಗಳ ಸಖ್ತ ಶಿಕ್ಷೆ ವಿಧಿಸಲಾಗಿದೆ. ಇದರ ಮೇಲಿಂದ ವಂಗದೇಶದೊಳಗಿನ ದಬ್ಬಾಳಿಕೆಯ ಕಲ್ಪನೆ ಬಂದೀತು.

* * *

ಜಬಲಪುರದಲ್ಲಿ ಕೈಕೊಂಡ ರಾಷ್ಟ್ರೀಯ ಸಭೆಯ ವೇಳಾಪತ್ರಿಕೆ— ಜೂನ ೩೦ನೇ ತಾರೀಖಿನೊಳಗೆ ರಾಷ್ಟ್ರೀಯ ಸಭೆಯ ಸಭಾಸದರು ದಾಖಲಾಗಬೇಕು. ಜುಲೈ ೧೫ನೇ ತಾರೀಖಿನೊಳಗೆ ಸಭಾಸದರ ಯಾದಿಗಳನ್ನು ಪ್ರಾಂತಿಕ ಕೊಂಗ್ರೆಸ ಕಮಿಟಿಗಳಿಗೆ ಕಳಿಸಬೇಕು. ಆಗಸ್ಟ ೩೦ ನೇ ತಾರೀಖಿನೊಳಗೆ ಈ ಯಾದಿಗಳು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗಳಿಗೆ ತಲ್ಪಬೇಕು. ಡಿಸೆಂಬರ ೧೫ ನೇ ತಾರೀಖಿಗೆ ಜಿಲ್ಲೆಯಲ್ಲಿ ಪ್ರತಿನಿಧಿಗಳ ಚುನಾವಣೆ. ಜನವರಿ ೩ ನೇ ತಾರೀಖಿನೊಳಗೆ ಪ್ರತಿನಿಧಿಗಳ ಯಾದಿ ಪ್ರಾಂತಿಕ ಕಮಿಟಿಗಳಿಂದ ಅಖಿಲಭಾರತೀಯ ಕೊಂಗ್ರೆಸ ಕಮಿಟಿಗೆ ತಲ್ಪಬೇಕು. ಜನವರಿ ೨೫ ನೇ ತಾರೀಖಿನೊಳಗೆ ಪ್ರಾಂತಿಕ ಕೊಂಗ್ರೆಸ ಕಮಿಟಿಗಳು ಅಧ್ಯಕ್ಷರ ಚುನಾವಣೆ ಮಾಡಬೇಕು. ಜನವರಿ ೩೧ ನೇ ತಾರೀಖಿಗೆ ಅಧ್ಯಕ್ಷರ ಚುನಾವಣೆಯ ಪರಿಣಾಮ. ಫೆಬ್ರುವರಿ ತಿಂಗಳಲ್ಲಿ ರಾಷ್ಟ್ರೀಯ ಸಭೆಯ ಅಧಿವೇಶನ.

* * *

ಸಿಂಧ ಹುಡುಗಿಯರು ಉದ್ವಿಗ್ನರಾಗಿದ್ದಾರೆ. ವರದಕ್ಷಿಣೆ ಬೇಡುವ ಮದುಮಗಂದಿರರಿಗೆ ಮದುವೆ ಮಾಡಿಕೊಳ್ಳಬಾರದಾಗಿ ನಿಶ್ಚಯಿಸಿದ್ದಾರೆ. ವರದಕ್ಷಿಣೆ ಪಡೆದನಕ ಮದುಮಗಂದಿರು ಮದುವೆಯಾಗುವದಿಲ್ಲ. ಈ ಹಂದ್ಯಾಟದಲ್ಲಿ ಅಬಲೆಯರು ಗೆಲ್ಲುತ್ತಾರೋ? ಪ್ರಬಲರು ಗೆಲ್ಲುತ್ತಾರೋ? ನೋಡಬೇಕು.

* * *

ತುರ್ಕಸ್ಥಾನದ ಕೆಮಾಲಪಾಶಾರವರು ಒಳ್ಳೊಳ್ಳೇ ಸುಧಾರಣೆಗಳನ್ನು ಮಾಡಲಾರಂಭಿಸಿದ್ದಾರೆ. ಮುಸಲ್ಮಾನರಿಗೆ ಶುಕ್ರವಾರ ಪವಿತ್ರ ವಾರ. ಬಹು ಕಾಲದಿಂದ ತುರ್ಕಸ್ಥಾನದಲ್ಲಿ ಆ ದಿನ ಯಾವತ್ತು ಬೇಂಕು, ಶಾಲೆಗಳಿಗೆ ರಜೆ ಇರುತ್ತಿತ್ತು. ರವಿವಾರ ಯುರೋಪ, ಅಮೇರಿಕಾ ಮೊದಲಾದ ರಾಷ್ಟ್ರಗಳಲ್ಲಿ ರಜೆ. ಆದರಿಂದ ತುರ್ಕಸ್ಥಾನದಲ್ಲಿ ವಾರಕ್ಕೆರಡು ದಿನ ಯಾವತ್ತೂ ವ್ಯವಹಾರ ನಿಲ್ಲುತ್ತಿತ್ತು. ಇದರಿಂದ ವ್ಯಾಪಾರಕ್ಕೆ ನಷ್ಟವಾಗುತ್ತದಾಗಿ ಕೆಮಾಲ ಪಾಶಾರವರ ಅಭಿಪ್ರಾಯವಾಗಿ ಅವರು ಶುಕ್ರವಾರದ ರಜೆಯನ್ನು ನಿಲ್ಲಿಸಿದ್ದಾರೆ. ಇನ್ನಲ್ಲದೆ ಗಡ್ಡ ತೆಗೆಯಬೇಕಾಗಿಯೂ ವಿಧಿಸಿದ್ದಾರೆ. ಹಿಂದುಗಳಿಗೆ ಚಂಡಿಕೆ, ಮುಸಲ್ಮಾನರಿಗೆ ಗಡ್ಡ ಇವು ಪವಿತ್ರವಾದವುಗಳು. ಪಾಶ್ಚಾತ್ಯರ ಸಹವಾಸದಲ್ಲಿ ಇವೆರಡೂ ಹೋಗುವ ತುರ್ಕಸ್ಥಾನವು ಮುಸಲ್ಮಾನ ಸಂಸ್ಕೃತಿಯ ದೇಶ. ಅಲ್ಲಿ ಪಾಶಾರವರು ಈ ಪ್ರಕಾರ ಅಪ್ಪಣೆ ಹೊರಡಿಸಿದ್ದನ್ನು ನೋಡಿ ಆಶ್ಚರ್ಯವಾಗುತ್ತದೆ.

* * *

ಬೇರೆ ಬೇರೆ ರಾಷ್ಟ್ರಗಳೊಳಗಿನ ಸೈನ್ಯಬಲದ ಅಂಕಿಗಳು — ಫ್ರಾನ್ಸದೇಶದಲ್ಲಿ ೬೬೨ ಸಾವಿರ, ರಶಿಯಾದಲ್ಲಿ ೫೬೨ ಸಾವಿರ, ಇಟಾಲಿಯಲ್ಲಿ ೪೯೧ ಸಾವಿರ, ಪೋಲಂಡದಲ್ಲಿ ೬೩೩ ಸಾವಿರ, ಜಪಾನದಲ್ಲಿ ೨೭೦ ಸಾವಿರ ಹಿಂದುಸ್ಥಾನದಲ್ಲಿ ೨೬೦ ಸಾವಿರ ರೂಮಾನಿಯಾದಲ್ಲಿ ೫೫೦ ಸಾವಿರ ಅಮೇರಿಕೆಯಲ್ಲಿ ೧೩೫ ಸಾವಿರ, ತುರ್ಕಸ್ಥಾನದಲ್ಲಿ ೧೪೦ ಸಾವಿರ, ಗ್ರೇಟಬ್ರಿಟನದಲ್ಲಿ ೧೩೭ ಸಾವಿರ, ಜರ್ಮನಿಯಲ್ಲಿ ೧೦೦ ಸಾವಿರ. ಈ ಅಂಕಿಗಳು ೧೯೩೧ನೇ ಇಸವಿಯೊಳಗಿನವು. ಇತ್ತ ೩-೪ ವರುಷಗಳಲ್ಲಿ ಎಲ್ಲ ರಾಷ್ಟ್ರಗಳು ತಮ್ಮ ಸೈನ್ಯಬಲವನ್ನು ಅಂತರಂಗದಿಂದ ಬೆಳೆಸುತ್ತಿವೆ. ಇನ್ನು ವೈಮಾನಿಕ ದಳದ ಅಂಕಿಗಳು. ಫ್ರಾನ್ಸದೇಶದಲ್ಲಿ ೨೩೭೫ ರಶಿಯಾದಲ್ಲಿ ೭೫೦, ಇಟಾಲಿಯಲ್ಲಿ ೧೫೦೭, ಪೋಲಂಡದಲ್ಲಿ ೭೦೦ ಜಪಾನದಲ್ಲಿ ೧೬೩೯, ರೂಮಾನಿಯಾದಲ್ಲಿ ೭೯೯, ಅಮೇರಿಕೆಯಲ್ಲಿ ೧೭೫೨, ತುರ್ಕಸ್ಥಾನದಲ್ಲಿ ೫೦, ಗ್ರೇಟಬ್ರಿಟನದಲ್ಲಿ ೧೬೩೪, ಜರ್ಮನಿಯಲ್ಲಿ ೦. ಈ ಅಂಕಿಗಳು ೧೯೩೨ ನೇ ಇಸವಿಯೊಳಗಿನವು. ಇವಲ್ಲದೆ ಅಮೇರಿಕೆಯಲ್ಲಿ ಸುಮಾರು ೧೧ ಸಾವಿರಕ್ಕೆ ಮಿಕ್ಕಿ ಇತರ ವಿಮಾನಗಳು ಇದ್ದವು. ಇತ್ತ ೩ ವರ್ಷಗಳಲ್ಲಂತೂ ವಿಮಾನು ಬೆಳವಣಿಗೆಯು ತೀವ್ರತೆಯಿಂದ ನಡೆದಿದೆ. ಸ್ವಸ್ಥ

(೧೩ನೇ ಪಾನಿನ ಮೇಲೆ ಮುಂದುವರಿಸಿದೆ)

ಓಂ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹು ದಿವಸಗಳಿಂದ ಎಲ್ಲಾ ಆರ್ಯ ವೈದ್ಯರಿಗೂ ಹಾಗೂ ಎಲ್ಲಾ ಫಾರ್ಮಾಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳ ಎಲ್ಲಾ ಕಡೆಯಲ್ಲಿ ಸಿಗದೇ ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಾಣದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದ್ದು ಇದರ ಈ ಮಿಶ್ರಣದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹು ಬಲವತ್ತರವಾಗಿರುತ್ತದೆ

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಯಾಗಿ ನಡೆದು [illegible] ಉದ್ದರೂ [illegible] ಶರೀರದ ತಾಕತ್ತನ್ನು, ಶಕ್ತಿಯನ್ನು ಹೆಚ್ಚು ಮಾಡಿಸಿ ಆನಂದಗೊಳಿಸುತ್ತದೆ

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ವಾಂತಿ) ಕಾಮಿಲ ಪಾಂಡುರೋಗ, ರಕ್ತ ಸಂಬಂಧದ ಸ್ತ್ರೀವ್ಯಾಧಿ, ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ತಟ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವ ಸಂಧಿವಿಕಾರಗಳಿಗೆ, ನರಗಳ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆ ಶೂಲಿ ವಗೈರೆ ಆದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗಿರುತ್ತದೆ

ವಿಶೇಷವಾಗಿ ಹೆಂಗಸರಿಗೆ— ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸ ನಂತೆ ೧೨ ದಿವಸಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯಾಗುತ್ತಾರೆ

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವವು ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔಂಸ ಬಾಟ್ಲಿ ೧ಕ್ಕೆ ರೂ ೧—೪—೦

,, ಬಾಟ್ಲಿ ೬ಕ್ಕೆ ರೂ ೬—೧೨—೦

,, ಬಾಟ್ಲಿ ೧೨ಕ್ಕೆ ರೂ ೧೨—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶ, [illegible] ಅಶ್ವಗಂಧಾರಿಷ್ಟ, [illegible], ದ್ರಾಕ್ಷಾಸವ, ಪ್ರಾಕ್ಷಾರಿಷ್ಟ [illegible] ಸರ್ವ [illegible], [illegible]ರಿಷ್ಟ [illegible]ರಿಷ್ಟ ಲೋಹಾಸವ, ಮಹಾನಾರಾಯಣ ತೈಲ [illegible] ಗರ ತೈಲ ಬೃಹತ್ ಭೃಂಗರಾಜ ತೈಲ ವಗೈರೆ ಉತ್ತಮ ಔಷಧಗಳು ತಯಾರ [illegible] ಪವು ತರಿಸಿಕೊಂಡು ಅನುಭವ ನೋಡಬೇಕು

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,

ಮಾಲಕ,

ಆರ್ಯಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ. (ಉ ಕನ್ನಡ)

ಶ್ರೀ [illegible] ಪ್ರಸನ್ನ ॥

ಡಾ॥ ಅಂಕಲೀಕರ ಎಮ್ ಬಿ, (ಬಿ.ಪಿ.ಎಚ್) ಸಂಕೇಶ್ವರ ಆಸ್ಪತ್ರಿ ಇವರು ದಮ್ಮು ಕೆಮ್ಮು ಮೊದಲಾದ ಫುಪ್ಫುಸದ ರೋಗಗಳ ಮೇಲೆ ರಾಮಬಾಣ ಔಷಧವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ- ಮನತನದ ವೈದ್ಯ'

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ದೋಷಿ ಅಥವಾ ಸಾದಾ) [illegible] (ಮಾಯಿಜ್ವರ), [illegible] (ವಿಷಮಜ್ವರ), ಹೊಟ್ಟೆಶೂಲಿ, ಕಾಲರಾ, ಪ್ಲೇಗ, ಇನ್‌ಫ್ಲುಯೆಂಝಾ ಸಂಧಿವಾತ, ಬಾಣಂತಿ ರೋಗ, (ಹಡೆದಾಗ ಇದ್ದವೆ [illegible]ಯಿಂದ ಸಂಭವಿಸುವ ಬಾಣಂತ ರೋಗಗಳ ಮೇಲೆ) ಚಿಕ್ಕ ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ ಮಲಬದ್ಧತೆ ಮೈನೋವು, ಥಂಡಿಯಿಂದ ಗಂಟಲು ನೋವು ಮತ್ತು [illegible] ಜನರಿಗೆ ಧ್ವನಿ ಬೀಳೋಣ, ರಕ್ತಹೊರಕಡೆ, ಅತಿಸಾರ, [illegible] [illegible]ರೋಗ, ಮಾಂತ್ರಿಯಾಗೋಣ, ಯಾವದೇ ಕಾರಣದಿಂದ ಉಂಟಾದ [illegible], ಲಿವ್ಹರ (ಸ್ಪ್ಲೀನ), ಹೊಟ್ಟೆಯೊಳಗಿನ ಗಂಟು, [illegible] ಹಾಗೂ [illegible] ಯಾವದೇ ವಿಕಾರ, ಧಾತುಕ್ಷೀಣತೆ, ಸ್ವಪ್ನಾವಸ್ಥೆ, [illegible] ಕಡಕೆ, [illegible] ಮಟ್ಟುದೋಷ ಮೊದಲಾದ ಎಲ್ಲಾ ರೋಗಗಳ ಮೇಲೆ [illegible], [illegible] ಸಿದ್ಧೌಷಧವಿರುತ್ತದೆ ಈ ಔಷಧವು ತಕ್ಕೊಳ್ಳಲಿಕ್ಕೆ ಸ್ವಾದಿಷ್ಟ [illegible], ಸಣ್ಣ ಹುಡುಗರಂತೂ ಬಹಳ ಪ್ರೀತಿಯಿಂದ ತಕ್ಕೊಳ್ಳುವರು ಇದು ತಕ್ಕೊಳ್ಳುವದರಿಂದ ರಕ್ತಶುದ್ಧಿ ಹಾಗೂ ರಕ್ತವೃದ್ಧಿಯಾಗಿ ವೀರ್ಯವೃದ್ಧಿಯಾಗುವದು. ಮತ್ತು [illegible] ಉತ್ಸಾಹವನ್ನು ಕಳೆದು ಮನಸ್ಸು ಆನಂದಿತ ಮಾಡುವದು. [illegible] ಜಗತ್ತು ರಮಣೀಯವಾಗಿ ತೋರುವದು

ಈ ಔಷಧದಿಂದ ೨೦ ೨೫ ವರ್ಷಗಳಿಂದ ದಮ್ಮಿನ ರೋಗದಿಂದ ನರಳುತ್ತಿರುವ ರೋಗಿಗಳು ಪೂರ್ಣಗುಣ ಪಡೆದಿರುವರು. ಈಗ ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗಗಳ ಮೇಲೆ ಔಷಧವಿಲ್ಲದು ಚಿರಂಜೀವಿಸುವ ಕಾರಣವಿಲ್ಲದಂತಾಗಿದೆ ಈ ಔಷಧ ಉಪಯೋಗ ಮಾಡಿಕೊಂಡು ರೋಗಮುಕ್ತರಾಗಿರಿ ಈ ವರೆಗೆ ಸಾವಿರಾರು ಜನರು ರೋಗಮುಕ್ತರಾಗಿರುವರು ನಿರಾಶೆಯುಳ್ಳ ಜನರಿಗೆ ಇದರ ಮಾಹಿತಿಯಾಗಿ ಗುಣಪಡೆಯಬೇಕೆಂದು ಈ ಔಷಧದ ಜಾಹಿರಾತು ಪ್ರಕಟಿಸಲ್ಪಟ್ಟಿರುವದು ಇದನ್ನು ಹಳ್ಳಿಗರು ಹಾಗೂ [illegible] ಸಂಗ್ರಹದಲ್ಲಿ ಇಟ್ಟುಕೊಳ್ಳತಕ್ಕದ್ದು

ನೆಗಡಿ ಜ್ವರ, ಕೆಮ್ಮು [illegible] ಹೊತ್ತಿನಲ್ಲಿ ಜನರು ನಿಷ್ಕಾಳಜಿಯಿಂದ ೨ ೩ ದಿವಸ ಹಾಗೇ ಮೈಮೇಲೆ ತೆಗೆಯುತ್ತಾರೆ ಹೀಗೆ ಮಾಡುವದರಿಂದ ಮುಂದೆ ಜ್ವರವು ದೋಷಿಯಾಗುವ ಸಂಭವವಿರುತ್ತದೆ ಆ ಕಾರಣ [illegible] ಕೂಡಲೆ ಈ ಕಷಾಯ ತೆಗೆದುಕೊಳ್ಳುವದರಿಂದ ಮುಂದಿನ ತ್ರಾಸು ತಪ್ಪುವದು. [illegible] ಬಾಣಂತಿ ಮತ್ತು ಕೂಸು ಇವರಿಗೆ ಮೊದಲನೇ ದಿವಸದಿಂದ ಕರು ಮಾತಿ ಮೂರು ತಿಂಗಳು ತನಕ ಚಾಲು ಇಡುವದು, ಹುಡುಗರಿಗೆ ಬೇರೆ ಔಷಧವು ಕೊಡುವ ಗರಜಿಲ್ಲ ಚಿಕ್ಕಮಕ್ಕಳ ತಕರಾರ ನಿಲ್ಲುತ್ತದೆ ಗರ್ಭಿಣಿ ಹೆಂಗಸರಿಗೆ ಸಹ ಇದನ್ನು ಕೊಡಲು ಅಡ್ಡಿಯಿಲ್ಲ ಅನುಪಾನ ಪತ್ರಿಕೆಯು ಬಾಟ್ಲಿಯ ಸಂಗಡ ಸಿಗುತ್ತದೆ.

ಲಕ್ಷ್ಮೀಬಾಯಿ ಕೊಲ್ಹಾಪೂರಕರ- [illegible] ಬಡೋದಾ, ಆಸ್ಥಾನ್ ಗಾಯಕಿ- ತಮ್ಮ "ಕಲ್ಪತರು ಕಷಾಯ" ಈ ಔಷಧವನ್ನು ನನ್ನ ಧ್ವನಿ ಬಿದ್ದ ಹೊತ್ತಿನಲ್ಲಿ ತಕ್ಕೊಳ್ಳುವ ಪ್ರಸಂಗ ಬಂತು ತಿಳಿಸಲಿಕ್ಕೆ ಇಷ್ಟು ಆನಂದವಾಗುತ್ತದಲ್ಲಾ! ಔಷಧ ತಕ್ಕೊಂಡ ಅರ್ಧ ತಾಸಿನಲ್ಲಿಯೇ ಮೊದಲಿನಂತೆಯೇ ಸುಸ್ವರದಿಂದ ಹಾಡಲಿಕ್ಕೆ ಒಂದು ಧ್ವನಿ ಬಿದ್ದ ಕಲ್ಪನೆಯೇ ಉಳಿಯಲಿಲ್ಲ ತಾ ೧—೫—೧೯೩೩

ಶ್ರೀಯುತ ಪು ಹ ಶಿರಶೀಕರ, ಮಾಡೇಕರ ಬಿಲ್ಡಿಂಗ- ಮುಂಬಯಿ. ತಾ, ೧-೪-೩೪, [illegible] "ಕಲ್ಪತರು ಕಷಾಯ"ವು ದಮ್ಮಿನ ಮೇಲೆ ಬಹಳೇ ರಾಗು ಬಿದ್ದಿತು ನನ್ನ ಅತ್ತಿಗೆಗೆ ದಮ್ಮು [illegible] ಆದಕಾರಣ ೩ ಕಷಾಯದ ಬಾಟ್ಲಿಗಳನ್ನು ರೇಲ್ವೆ ಪಾರ್ಸಲಿನಿಂದ ಕಳಿಸಿಕೊಡಿರಿ. ಶಿಮ್ಮತ್ತು [illegible] ದೊಡ್ಡ ಬಾಟ್ಲಿಗೆ ರೂ ೧॥ ಸಣ್ಣ ಬಾಟ್ಲಿಗೆ ೧೨ ಆಣೆ, ಸಹಿರತ್ನ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪೂರಕರ ಮೊದಲಾದ ಅನೇಕ [illegible] ಪತ್ರಗಳನ್ನು ಕೊಟ್ಟಿರುತ್ತಾರೆ

ಔಷಧೀ ದಂತಮಂಜನ

ಇದರಿಂದ ಹಲ್ಲಿಗಳ ವಿವಿಧ ವಿಕಾರಗಳು, ಕೀವು, ರಕ್ತ, ಹಲ್ಲು-ವಸಡುಗಳ ರೋಗ [illegible]ಗಳು ನಾಶಿಯಾಗುತ್ತವೆ ಈ ಔಷಧವನ್ನು ದಿನಾ ಒಂದಾವರ್ತಿ ಯಾ ಎರಡಾವರ್ತಿ [illegible] ಬೆಲೆ ಆಣೆ ೫

ಇದಲ್ಲದೆ, ಥಂಡಿ ಜ್ವರ, (ಮಲೇರಿಯಾ) ದ ಮೇಲೆ ಮಿಶ್ರಣ, ಪಾಚಕ್ಕೆ ಸವಿ ಔಷಧ, ಜಂತುನಾಶಕ ಕಷಾಯ, ಕಾಲರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೆಶಲ್ ಔಷಧಗಳು [illegible]

ಶ್ರೀರಾಮಚಂದ್ರ ಯೋಗೇಶ ಫಾರ್ಮಸಿ. ಗಡಹಿಂಗ್ಲಜ. (ಕೊಲ್ಹಾಪುರ ಸಂ)

Reg No B 1270.

Monday, 20th May, 1935

ವರ್ಷ ೧೭

ಸಂಚಿಕೆ ೪೮

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಆ ಖರ್ಚು ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ 1-0-0 ಆ ನಂತರ ಪ್ರತಿ ಸಾಲಿಗೆ 0-1-0 ಹಚ್ಚಿಗೆಯ ಸಾಲು ಎಷ್ಟು ದೊಡ್ಡದಿರುವದೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೨೦ ಮಾಹೆ ಮೇ ಸನ್ ೧೯೩೫ ನೇ ಇಸವಿ.)

1906ರಲ್ಲಿ

ಅಲ್ಪಾವಸ್ಥೆಯಲ್ಲಿ ಹುಟ್ಟಿ ಶೈಶವವನ್ನು ಮಂಗಳೂರಿನಲ್ಲಿಯೇ ಕಳೆದು, ಕೌಮಾರ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಹೆಯ ಎಲ್ಲಾ ತಾಲೂಕುಗಳಲ್ಲಿಯೂ, ಯೌವನದ ಆದಿಯಲ್ಲಿಯೇ ಮುಂಬಾಯಿ, ಕೊಚ್ಚಿ, ತಿರುವಾಂಕೂರ, ಮೈಸೂರು ಸಂಸ್ಥಾನಗಳಲ್ಲಿಯೂ ಪಸರಿಸಿ, ವಿಖ್ಯಾತಿ ಪಡೆದು. ಇನ್ನೂ ಅಭಿವೃದ್ಧಿಪಟ್ಟು ದೇಶಸೇವೆಯನ್ನು ಮಾಡಲಿಚ್ಛಿಸುವ ಮದ್ರಾಸ ಸಂಸ್ಥಾನದ ಜೋಯಿಂಟ್ ಸ್ಟೋಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ ಲಿಮಿಟೆಡ್.

ತೆತ್ತ ಮೂಲಧನ: ರೂ. 331035

ಕ್ಷೇಮನಿಧಿಗಳು: ರೂ. 250000

ಠೇವಣಾತಿಗಳು: ರೂ. 5862486.

ಆಫೀಸುಗಳು — ಮಂಗಳೂರು ಮುಂಬಾಯಿ, (ಫ್ರೋರ್ಟ ಮತ್ತು ಮಾಟುಂಗಾ), ಆಲಪ್ಪೆ, ಕೊಚ್ಚಿ ಎರ್ನಾಕುಲಂ, ಕಲ್ಲಿಕೋಟೆ, ಬೆಂಗಳೂರು, ಚಿಕ್ಕಮಗಳೂರು ಪುತ್ತೂರು, ಕಾಸರಗೋಡು, ಕಾರ್ಕಳ, ಉಡುಪಿ, ಕುಂದಾಪುರ, ಗಂಗೊಳ್ಳಿ, ಬಂಟವಾಳ, ಹುಬ್ಬಳ್ಳಿ ಮತ್ತು ದಾವಣಗೆರೆ

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

CANARA BANK LTD.

The Canara Industrial & Banking Syndicate, Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Head Office — **Mukund Nivas, UDIPI**

Branches Udipi, Bangalore City, Mangalore, Payyanur, Cannanore, Brahmavar Honnavar, Karwar, Hubli, Belgaum, Sirsi, Kumta Hangarkatte, Coondapur, Ankola Kanhangad & Bellary

Paid-up Capital Rs. 2,12,200.

Working Capital exceeds Rs. 17 Lacs.

Last 5 Year's Progress proves growing popularity.

Year	Rolling Capital
1930	2,42,095.
1931.	4,95,260.
1932	9,25,958.
1933	**13,90,789.**
1934.	15,93,238.

Fixed Deposits for one year and two years are accepted now at 5% and 5½% respectively

All sorts of Banking Business transacted.

For further particulars apply to:—

Kumta, 1—7—1935

G. Sanjiva Nayak,
Agent at KUMTA.

ಬನ್ನಿರಿ! || ಶ್ರೀ ಚಂದ್ರಮೌಳೇಶ್ವರ ಪ್ರಸನ್ನ: || ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, **ಕುಮಟಾ,** (ಉ ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಧಾರ್ಮಿಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆನ್ನಿನವರಿಗೂ ಊಟಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ, ಬಹಳ ಸೌಕರ್ಯತ್ವವಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

" ದಿ ಮೊಡರ್ನ ಹಿಂದೂ ಹೊಟೆಲ್ "ದಲ್ಲಿ ಬಂದು ಅನುಭವ ಪಡೆಯಿರಿ !

ಸೂಚನೆ:- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾಲಕ.

೮ನೇ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷ

ಬಾಬು ಶ್ರೀಪ್ರಕಾಶರ ಭಾಷಣ.

ಬಂಧು-ಭಗಿನಿಗಳೇ,

ದೂರದ ಕಾಶಿಯ ನಿವಾಸಿಯಾದ ನನ್ನನ್ನು ತಮ್ಮ ಪರಿಷತ್ತಿನ ಅಧ್ಯಕ್ಷರಾಗಿ ಆರಿಸಿ ಗೌರವಿಸಿದುದಕ್ಕೆ ನಾನು ನಿಮಗೆ ತುಂಬಾ ಋಣಿಯಾಗಿರುವೆನು. ಉತ್ತರ ಹಿಂದುಸ್ಥಾನವು ಭಾರತೀಯ ನಾಗರಿಕತೆಯ ಜನ್ಮಸ್ಥಾನವೆಂದು ನಾವು ಒಲು ಹೆಮ್ಮೆಯಿತ್ತು ಇತ್ತೀಚಿನ ಶೋಧಗಳಿಂದ ನಮ್ಮ ಗರ್ವಭಂಗವಾಗಿದೆ. ಭಾರತೀಯ ಸಭ್ಯತೆಯ ಶುದ್ಧ ಸ್ವರೂಪ ಕಾಣಬಯಸುವವರು ದಕ್ಷಿಣಕ್ಕೇ ಬರಬೇಕು. ಪ್ರಾಂತಿಕ ಪರಿಷತ್ತುಗಳಿಗೆ ಆಯಾಯ ಪ್ರಾಂತದವರೇ ಅಧ್ಯಕ್ಷರಾಗುವದು ಒಳಿತೆಂದು ನನ್ನ ಸೂಚನೆಯಿದೆ. ಅಂಥವರಿಗೆ ಪ್ರಾಂತಿಕ ವಿದ್ಯಮಾನಗಳು ಚನ್ನಾಗಿ ತಿಳಿದಿರುತ್ತವೆ. ಅವರು ಅವುಗಳ ಬಗ್ಗೆ ಪ್ರೋಹ ಮಾಡಬಲ್ಲರು. ಪರರಿಗೆ ಅದು ಸಾಧ್ಯವಾಗುವದಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ಹಣಗಾಡಿದ ಸಮಸ್ತ ಜ್ಞಾತಾಜ್ಞಾತ ವೀರರಿಗೆ ಧನ್ಯವಾದಗಳನ್ನರ್ಪಿಸುವದು ನನ್ನ ಆದ್ಯ ಕರ್ತವ್ಯ. ಅವರ ನಾಮನಿರ್ದೇಶ ಮಾಡುವದು ಅವಶ್ಯವಲ್ಲ. ಅವರಲ್ಲಿ ತಮ್ಮ ತಮ್ಮ ಶಕ್ತಿಗನುಸಾರವಾಗಿ [illegible] ದುಡಿದಿದ್ದಾರೆ. ಅವರ ಕೆಲಸದಲ್ಲಿ ಹೆಚ್ಚು ಕಡಿಮೆಯಾದಾಗ್ಯೂ ದೇಶದ ದೃಷ್ಟಿಯಿಂದ ಅವರ ತ್ಯಾಗವು ಒಂದೇ ತರಗತಿಯದಾಗಿರುತ್ತದೆ. ಆದ್ದರಿಂದ ಅವರೊಳಗೆ ಭೇದ ಭಾವ ಮಾಡುವದು ಇಷ್ಟವಲ್ಲ. ಅವರೆಲ್ಲ ನಿಮ್ಮ ತರ್ಫಿನಿಂದಲೂ ನನ್ನ ಸ್ವಂತ ತರ್ಫಿನಿಂದಲೂ ನಾನು ಧನ್ಯವಾದಗಳನ್ನೀಯುವೆನು. ಈಗಲೂ ಕಾರಾಗೃಹದಲ್ಲಿ ಕೊಳೆಯುತ್ತಿರುವ ಬಂಧುವರ್ಗಕ್ಕೆ ಸಹ ನನ್ನ ಧನ್ಯವಾದಗಳು. ಸರಕಾರದ ದಬ್ಬಾಳಿಕೆಗೆ ಬಗ್ಗದ ಶೂರ-ಶಿಖಾಮಣಿಗಳವರು. ಸರಕಾರದವರು ತೋರಿಕೆಯ ಉದಾರತನದಿಂದ ಅನೇಕ ರಾಷ್ಟ್ರೀಯ ಸಂಸ್ಥೆಗಳ ಮೇಲಿನ ಪ್ರತಿಬಂಧ [illegible] ತೆಗೆದದ್ದು ನಿಜ. ಆದರೆ ಇನ್ನೂ ಕೆಲವು ಪ್ರಮುಖ ಸಂಸ್ಥೆಗಳ ಮೇಲಿನ ಪ್ರತಿಬಂಧ ತೆಗೆಯುವದಿಲ್ಲ. ತಮ್ಮ ಪ್ರಾಂತವಲ್ಲ ಇನ್ನುಳಿದ ಹಿಂದುಸ್ಥಾನ ಸೇವಾದಳದ ಮೇಲಿನ ಪ್ರತಿಬಂಧ ಇನ್ನೂ ದೂರವಾಗಿಲ್ಲ. ಏಕೆಂದು ಯಾರೂ ಅರಿಯರು. ಸೇವಾದಲದವರ ಕಡೆ ಬಂದೂಕೊಂದು ಸಿಕ್ಕಿತೆಂದು ಗೃಹಮಂತ್ರಿಗಳು ಆರೋಪವಿಟ್ಟಿದ್ದರು! ಅಧಿಕಾರಾರೂಢ ಜನರಿಗೆ ಪರರ ಮೇಲೆ ಎಂಥ ಸುಳ್ಳು ಆರೋಪ ಹಾಕುವದು ಅಭ್ಯಾಸವಾಗಿ ಹೋಗಿಯದೆ. ಅದರ ಸತ್ಯತೆಯನ್ನು ಸಿದ್ಧ ಮಾಡಲು ಅವರು ಸಿದ್ಧರಾಗುವದಿಲ್ಲ. ಅದಾಗ್ಯೂ ಸೇವಾದಲವು ಸರಕಾರದ ಕಣ್ಣುಗಳಿಗೆ ಕಷ್ಟ ಕೊಡುವ ಪ್ರಭಾವಿ ಸಂಸ್ಥೆಯೆಂದು ಮಾನ್ಯತೆ ಹೊಂದಿದ ಬಗ್ಗೆ ನಮಗೆಲ್ಲರಿಗೂ ಆನಂದವಾಗಿದೆ.

ನಿಮ್ಮ ಕರ್ನಾಟಕ ಪ್ರಾಂತವು ವೈಶಿಷ್ಟ್ಯಪೂರ್ಣ ಪ್ರಾಂತವೆಂಬುದಕ್ಕೆ ಸಂದೇಹವಿಲ್ಲ. ನಿಮ್ಮ ಪ್ರಾಂತದ ಭಾಗಗಳನ್ನೆಲ್ಲ ಕೂಡಿಸಿ ತರುವದು ಕಠಿಣವಾದ ಸಮಸ್ಯೆಯಾಗಿರುತ್ತದೆ. ಬೇರೆ ಬೇರೆ ಪ್ರಾಂತಗಳೊಳಗೂ, ಸಂಸ್ಥಾನಗಳೊಳಗೂ ಹಂಚಿಹೋದ ಕರ್ನಾಟಕವನ್ನು ಒಟ್ಟುಗೂಡಿಸುವದು ಕಷ್ಟವಾಗಿದೆ. ರಾಷ್ಟ್ರಸಭೆಯು ನಿಮ್ಮ ಪ್ರಾಂತವನ್ನು ಪ್ರತ್ಯೇಕ ಪ್ರಾಂತವಾಗಿ ಮಾಡಿದ್ದು ಸಂತೋಷದ ಸಂಗತಿ. ಇದರಿಂದ ಬವಿಷ್ಯತ್ಕಾಲದಲ್ಲಿ ನಿಮಗೆ ಪ್ರತ್ಯೇಕ ಪ್ರಾಂತ ದೊರೆಯುವದೆಂದು ನಿಂತ್ರ ನಂಬಿಕೊಂಡಿರಲಿಕ್ಕಡ್ಡಿಯಿಲ್ಲ. ಪ್ರಾಂತ ರಚನೆಯ ಅಡಚಣೆಯು ನಿಮ್ಮನ್ನೊಬ್ಬರನ್ನೇ ಹೊಂದಿರುವದಿಲ್ಲ. ಬೇರೆ ಭಾಗಗಳಲ್ಲೂ ಈ ಅಡಚಣೆಯುಂಟಾಗಿದೆ. ಪ್ರಾಂತರಚನೆಯ ಕಾರ್ಯ ಸಾಮಾನ್ಯವಲ್ಲ. ಅಲ್ಪಸಂಖ್ಯಾಕರ ಸಮಸ್ಯೆಗಿಂತ ಕಠಿಣವಾದ ಸಮಸ್ಯೆಯಿದು. ಒಬ್ಬ ತ್ಯಾಗದ ಪ್ರಾಂತರಚನೆಯಿಂದ ಪೂರ್ವದಲ್ಲೂ, ಪಶ್ಚಿಮದಲ್ಲೂ ಬಹಳ ಅನರ್ಥ [illegible] ನಾಗರಿಕತೆ, [illegible] ವನೋದರನ್ನೆ, ಪರಂಪರೆ ಮುಂತಾದ ಗುಣಗಳ ವ್ಯಾಪ್ತಿ ಮಾಡುವದು ಕಠಿಣವಿದ್ದಾಗ್ಯೂ ಅದು ನಿರ್ಣಯಿಸುವಂಥ [illegible] ಅವುಗಳ ತಿರಸ್ಕಾರ ಮಾಡಿದರೆ [illegible] ನಗೆ [illegible] . ಇಂದ [illegible] ರಾಷ್ಟ್ರಸಂಸ್ಥೆಯು ನಿರ್ಣಯ [illegible]

ನಮ್ಮಂತೆ ನೀವು ಸಹ ಪ್ರಮುಖವಾಗಿ ರೈತ ಕಸಬಿನವರಾಗಿರುತ್ತೀರಿ. ಆದ್ದರಿಂದ ನಿಮ್ಮ ಮಹತ್ವದ ಕಷ್ಟಗಳೆಲ್ಲ ಹೊಲ-ಭೂಮಿಗಳಿಗೆ ಸಂಬಂಧಿಸಿದವಿರಬೇಕು. ನಮ್ಮ-ನಿಮ್ಮ ಕಾಯಿದೆಗಳಲ್ಲಿ ವ್ಯತ್ಯಾಸವಿರುವದಾದರೂ ಕಷ್ಟಗಳ ರೂಪ ಒಂದೇ ಇರಬೇಕು. ಎಲ್ಲ ಪ್ರಾಂತಗಳಲ್ಲೂ ಅವು ಒಂದೇ. ಅವುಗಳನ್ನು ಪರಿಹರಿಸಿಕೊಳ್ಳುವ ಬಗೆಯಾದರೂ ಒಂದೇ. ಅರ್ವಾಚೀನ ಆಂದೋಲನದಲ್ಲಿ ನಗರಗಳಿಗೆ ಮುಕ್ತ ದೊರಕಿದೆ. ಉತ್ತಮೋತ್ತಮ ವಿಚಾರವಂತರಿಗೂ ಕೂಡ ಈ ನಗರ-ಪ್ರಾಧಾನ್ಯದ ರೋಗ ತಟ್ಟಿದೆ. ಹೀಗಾಗಿ ಸುಧಾರಣೆಗಳ ವಿಚಾರದಲ್ಲಿ ನಗರವಾಸಿಗಳ ಕಷ್ಟ, ಕೊರತೆ ಆಕಾಂಕ್ಷೆಗಳಿಗೇನೇ ವಿಶೇಷ ಲಕ್ಷ ಪೂರೈಸಲ್ಪಡುತ್ತಿದೆ. ಮಹಾತ್ಮರ ಹೊಸ ಕಾರ್ಯಕ್ರಮದಿಂದ ಹಳ್ಳಿಗಳಿಗೂ ಶಹರಗಳಿಗೂ ನಿಕಟ ಸಂಬಂಧವಾಗಹತ್ತಿದೆ. ಅದರ ಮುಂಚೆ ನಗರವಾಸಿಗಳಾದ ನಮಗೆ ಯಾವ ಹಳ್ಳಿಗಳ ಮೇಲೆಯೇ ನಮ್ಮ ಬಾಳು ಅವಲಂಬಿಸಿರುತ್ತದೋ ಆ ಹಳ್ಳಿಗಳ ಪರಿಚಯ ಸಹ ಇದ್ದಿಲ್ಲ. ಈಗಲೂ ಕೂಡ ನಾವು ಹಳ್ಳಿಯ ಜನರ ಹಿತದ ಕಡೆ ಸಾಕಷ್ಟು ನೋಡುವದಿಲ್ಲವೆಂದು ನನ್ನ ಅಭಿಪ್ರಾಯ. ದಶಿಯಾದೋಣಗೆ ಬಹುಕಾಲದಿಂದ ನಡೆದುಬಂದ ವರ್ಗಭೇದದ ಮೇಲೆ ದಾಳಿಯಾಗಿದೆ. ಇಡೀ ದೇಶವು ಒಂದು ಕುಟುಂಬವಾಗಿದೆ, ಪ್ರತಿಯೊಂದು ವ್ಯಕ್ತಿಯು ತೋಟಿಗಾರನಾಗಿ

THE INDIAN MERCANTILE INSURANCE CO. LTD.,
BOMBAY.

(Established in 1907)

A S [illegible] and purely Indian Life Office which has [illegible] growth under the Chairmanship of the late Sir Munmohandas Ramji Kt.

WANTED Energetic & Influential Agents and experienced Organisers, both on commission & pay for the Karnatak Districts.

For particulars apply to—

G. Yellapurkar & Sons,
Chief Agents for Karnatak,
Market Square, KARWAR.

ಇಂಡಿಯನ್ ಮರ್ಕಂಟೈಲ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್, ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ್, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿ ಹೊಂದಿದ ಕಂಪನಿಯು !

ಬೇಕು! ಕರ್ನಾಟಕದೊಳಗಿನ ಜಿಲ್ಲೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ಪಗಾರ ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆಪೇಟೆ, ಕಾರವಾರ.

ಸುಖದಿಂದಿದ್ದಾನೆ, ಇದೆಲ್ಲ ನಿಜ. ಆದರೆ ಇಲ್ಲಿಯೂ ಕೂಡ ನಗರಗಳಲ್ಲಿರುವ ಕೂಲಿಕಾರರ ಸುಖಕ್ಕಾಗಿಯೇ ಪ್ರಯತ್ನಗಳು ನಡೆದಿವೆ. ಹಳ್ಳಿಗಳೊಳಗಿನ ರೈತರ ಕಡೆಗೆ ಲಕ್ಷವಿಲ್ಲ. ನಾವು ಈ ತಪ್ಪು ಮಾಡಕೂಡದು. ಹಳ್ಳಿಗಳೇ ರಾಷ್ಟ್ರದ ಜೀವನಾಧಾರವು. ನಮ್ಮ ಭಾರವೆಲ್ಲ ಹಳ್ಳಿಗಳ ಮೇಲೆ ಇದೆ. ರಾಜಕಾರಣಿಗಳು, ಧರ್ಮೋಪದೇಶಕರು, ವರ್ತಕರು, ಅಧಿಕಾರಿಗಳು, ಸಾವಕಾರರು, ಜಮೀನದಾರರು ಇವರೆಲ್ಲರೂ ಹಳ್ಳಿಯ ಜನರು ಮಾಡಿದ ಉತ್ಪತ್ತಿಯನ್ನು ಸುಲಿದು ತಿನ್ನುವವರಾಗಿದ್ದಾರೆ. ಕಷ್ಟ ಮಾಡುವವನು ಹಳ್ಳಿಯವನು, ಎಲ್ಲರ ಉಪಯೋಗಕ್ಕೆ ಬೇಳುವವನೂ ಅವನೇ; ಕಷ್ಟ ಸಹಿಸಬೇಕಾದ್ದೂ ಅವನೇ, ಎಲ್ಲರಿಗಿಂತಲೂ ಹೆಚ್ಚು ಹಣ ತೆರುವದಾದರೂ ಅವನೇ. ಈ ಕುರಿತು ನಾನು ವಿಸ್ತರಿಸುವದು ಅಗತ್ಯವಿಲ್ಲ. ಪರಿಸ್ಥಿತಿಯು ಸ್ಪಷ್ಟ ತಿಳಿಯ ಹಂತದೆ. ಆಸ್ತಿವಂತರಿಗೆ ತಿಳಿಯದಾದರೂ ನಾವದನ್ನು ಚನ್ನಾಗಿ ಬಲ್ಲೆವು. ಆದ್ದರಿಂದ ನಮ್ಮ ಹಳ್ಳಿಗಳೊಳಗಿನ ಬಾಂಧವರ ಕಷ್ಟಪರಿಹಾರ ಮಾಡಲು ನಾವು ಹೆಣಗಾಡಬೇಕಾಗಿದೆ. ಹಳ್ಳಿಗಳ ಉದ್ಧಾರಕ್ಕೆ ಮಹಾತ್ಮರು ಮಾಡಿದ ಕೆಲಸ ಸಾಧಾರಣವಲ್ಲ. ನಮಗೆ ಸ್ವಾಭಿಮಾನದ ಪಾಠ ಕಲಿಸಿ ಬಡ ಹಳ್ಳಿಗರ ಹಿತವೇ ನಮ್ಮ ಹಿತವೆಂದು ತಿಳಿಸಿಹೇಳಿದವರು ಮಹಾತ್ಮರೇ ಸರಿ. ಹಳ್ಳಿಗಳ ಪುನರುಜ್ಜೀವನದ ಬಗ್ಗೆ ಅವರು ಸೂಚಿಸಿದ ಯೋಜನೆಗಳಿಗೆ ನಾವು ಸಂಪೂರ್ಣ ಬೆಂಬಲ ಕೊಡಬೇಕು. ನಗರಗಳಲ್ಲೂ ಹಳ್ಳಿಗಳಲ್ಲೂ ಇರುವ ಸಮಸ್ತ ಜನರಿಗೆ ಕೂಲಿ-ಕೆಲಸಗಳನ್ನು ಒದಗಿಸಿಕೊಟ್ಟು ಅನ್ನ-ವಸ್ತ್ರಾದಿಗಳನ್ನು ಪೂರೈಸಿ ಸುಖಿಗಳನ್ನಾಗಿ ಮಾಡಿದರೆ ನಮ್ಮ ರಮ್ಯ ಜೀವನವು ಇನ್ನೂ ರಮ್ಯವಾಗುವದೆಂದು ನನ್ನ ಅಶೆ. ಒಂದು ಜಾಗ್ರತೆಯನ್ನು ಮಾತ್ರ ಕೊಡುವೆನು. ಹಳ್ಳಿಯ ಜನರ ಬಗ್ಗೆ ನನಗೆ ಅನುಭವವಿದೆ. ಅವರು ಸಂಘಟಿತರಾಗಲು ತಯಾರಿಲ್ಲ. ಸ್ಪರ್ಧದ ಮೇಲೇ ಅವರ ಕಣ್ಣು. ನೆರೆಹೊರೆಯವರ ಮೇಲೆ ಅವರಿಗೆ ದ್ವೇಷ; ಮಿತ್ರರ ಮೇಲೆ ಅಪನಂಬಿಗೆ. ಪಕ್ಷ-ಪಂಗಡಗಳು, ದ್ವೇಷ-ಕಲಹಗಳು ಬಹುಕಾಲದಿಂದ ನಡೆದುಬಂದಿವೆ; ಪರಸ್ಪರ ಕಲ್ಯಾಣಕ್ಕೆಂದು ಅವರು ಕೂಡಿ ಕಾರ್ಯ ಮಾಡುವದು ಕಷ್ಟವಾಗಿದೆ. ತಮ್ಮ ಸಣ್ಣ ಸಣ್ಣ ಭೂಮಿಯ ತುಂಡುಗಳ ಬಗ್ಗೆ ಅವರು ತೋರಿಸುವ ತೀವ್ರತರ ಮಮತೆಯಿಂದಂತೂ ಅವರ ಜೀವನ-ಸಮಸ್ಯೆ ಮತ್ತೂ ಕಠಿಣವಾಗಿದೆ. ಹಳ್ಳಿಗರ ಈ ದೋಷಗಳನ್ನು ನೆನಸಿಟ್ಟು ನಾವು ಸಹಾನುಭೂತಿಯಿಂದ ನಡೆಯಬೇಕು.

ಇತ್ತಿತ್ತ ನಮ್ಮ ದೇಶದಲ್ಲಿ ನಡೆದ ವಿವರಗಳನ್ನೂ, ಜಯಾಪಜಯಗಳನ್ನೂ ನಾನು ಬಣ್ಣಿಸಲಿಚ್ಛಿಸುವದಿಲ್ಲ. ತುರ್ತಕ್ಕೆ ನಾವು ವಿಮನಸ್ಕರಾಗಿದ್ದೇವೆಂಬವನ್ನು ಮಾತ್ರ ಮರೆಯಕೂಡದು. ಇಂಥ ಕಾಲದಲ್ಲೇ ರಾಷ್ಟ್ರದ ಹಾಗೂ ವ್ಯಕ್ತಿಗಳ ಪರೀಕ್ಷೆಯಾಗುತ್ತದೆ. ಈ ವಿಮನಸ್ಕತೆಯು ಚಿರಕಾಲ ಉಳಿಯದು. ನಮ್ಮ ಸಾಧ್ಯ, ನಮ್ಮ ಉದ್ದಿಷ್ಟಗಳನ್ನು ಸ್ಪಷ್ಟವಾಗಿ ನಿರ್ಣಯಿಸಿಕೊಳ್ಳಲಿಕ್ಕೂ ಜಗತ್ತಿಗೆ ತಿಳಿಸಿ ಹೇಳಲಿಕ್ಕೂ ಇದೇ ಅನುಕೂಲ ಕಾಲವೆಂದು ನನಗನಿಸುತ್ತಿದೆ. ನಮಗೆ ಬೇಕಾದ್ದು ಸಮಾಜದ ಪುನರ್ಘಟನೆ. ಪ್ರಪಂಚದಲ್ಲಿ ಕಂಡುಬರುವ ಉಚ್ಚ-ನೀಚ, ಶ್ರೀಮಂತ-ಬಡವ ಮೊದಲಾದ ವೈಷಮ್ಯಗಳು ನಮ್ಮನ್ನು ಬೇಸರಗೊಳಿಸಿವೆ. ರಾಷ್ಟ್ರೀಯ ಸಭೆಯೊಳಗಿನ ಸಮತಾವಾದಿ (ಸೋಶಿಯೆಲಿಸ್ಟ) ಪಕ್ಷದವರು ರಾಷ್ಟ್ರದ ಬೇಡಿಕೆಗಳ ಸ್ಪಷ್ಟ ಯಾದಿಯನ್ನು ತಯಾರಿಸಹತ್ತಿದ್ದು ಅಭಿನಂದನೀಯವಿದೆ. ಆ ಪಕ್ಷದ ಮುಂದಾಳುಗಳಿಗೆ ನನ್ನದೊಂದು ನಮ್ರ ಸೂಚನೆಯಿದೆ. ಪಕ್ಷದ ಹೊರಗಿನ ಜನರು ಏನು ಮಾಡುತ್ತಾರೆ, ಏನು ಮಾಡುವದಿಲ್ಲ ಇದರ ವಿಚಾರ ಅವರು ಮಾಡುವದು ಅಗತ್ಯವಿಲ್ಲ. ನಾವೇನು ಮಾಡಬೇಕು, ಹೇಗೆ ಮಾಡಬೇಕು? ಎಂಬುವದರ ವಿಚಾರವನ್ನೇ ಅವರು ಮಾಡುವದುತ್ತಮ. ಸಮತಾವಾದದಿಂದ ನಮಗೂ ಹಿತವಾಗುವದೆಂದು ನಾನು ಆ ತತ್ವಕ್ಕೆ ಅಂಜುವವರಿಗೆ ಹೇಳಬಯಸುತ್ತೇನೆ. ಸುತ್ತುಮುತ್ತಲಿನ ಜನರೆಲ್ಲ ಚನ್ನ-ಸುಖಗಳ ಬೆಳಕಿಲ್ಲದೆ, ದಾರಿದ್ರ್ಯಪಂಕದಲ್ಲಿ ಮುಳುಗಿರುವಾಗ ಅಧಿಕಾರಸಂಪನ್ನರ ಅಧಿಕಾರ, ಶ್ರೀಮಂತರ ಸಿರಿ-ಸಂಪತ್ತುಗಳು ಸುರಕ್ಷಿತವಲ್ಲ! ನೆರೆ-ಹೊರೆಯವರ ಬಡತನವು ಸಾವಕಾರನಿಗೂ ಬಾಧಿಸುತ್ತದೆ. ಹೊರಗಿನ ಜನರು ದುಃಖಿತರೂ, ಹೊಲಸೂ ಇರುವದರಿಂದ ಬೇನೆ-ಸಾವುಗಳು ಸದ್ದಿಲ್ಲದೆ ಸಾವಕಾರನ ಭದ್ರವಾದ ಮನೆಯಲ್ಲಿ ಹೊಕ್ಕುತ್ತವೆ. ಸಮಾಜದ ಪುನರ್ಘಟನೆಯ ರೀತಿ-ನಿಯಮಗಳನ್ನು ಈಗ ಸ್ಪಷ್ಟೀಕರಿಸುವದು ಅವಶ್ಯವಿದೆ. ಅದರಿಂದ ನಮ್ಮ ಸಾಧ್ಯವೇನೆಂದು ಎಲ್ಲರಿಗೂ ತಿಳಿಯುವದು; ಸಂಶಯ-ಸಂದೇಹಗಳು ದೂರವಾಗುವವು; ಹಳ್ಳಿಗರ ಆಶೆ-ಅಭಿಲಾಷೆಗಳೂ ಬಯಲಾಗುವವು. ನಮ್ಮ ಪ್ರಾಂತದೊಳಗೆ ಆಸ್ತಿ-ಸಂಪತ್ತಿಯ ವಿಭಾಗಣೆಯು ವಿಶೇಷ ವಿಷಮವಾಗಿರುವದಿಲ್ಲ, ಜನರು ಸಾದಾ ವೃತ್ತಿಯವರಿದ್ದದರಿಂದ ಹೆಚ್ಚು-ಕಡಿಮೆ ಸಮತೆಯೇ

[೧೦ನೇ ಪಾನು ನೋಡಿರಿ.]

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ವ್ಯಾಧಿಹರಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).

ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).

ಶಿವಸಾಗರ ತೈಲ್ಯ (ನಿದ್ರಾನಾಶಕ್ಕೆ ಅತ್ಯುತ್ತಮ).

ಮಹಾಭೃಂಗ ತೈಲ್ಯ ([illegible]ಕ್ಕೆ ಅತ್ಯಂತ ಗುಣಕಾರಿ).

ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ)

ಕೃಷ್ಣಾರಿಷ್ಟ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).

ಅಮೃತ ಪ್ರಾಶ (ರಕ್ತವಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ)

ಭುವನ ರಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ)

ಮಹಾಶುಲಿಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-

ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ಬಹಳ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಪ್ರಸಿದ್ಧ ವೈದ್ಯ ಮನೆತನಕ್ಕೆ ಸೇರಿದವರಾಗಿಯೂ, ಗುಣಿಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ಪರೀಕ್ಷಿಸಿದೆನು. ಅವು ಶಾಸ್ತ್ರಸಿದ್ಧವಾಗಿ ಅನುಭವಸಿದ್ಧವಾಗಿ ಇರುತ್ತವೆ. [ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗಿಡ ಮೂಲಿಕೆ ಅನೇಕ ವನಸ್ಪತಿಗಳ ಪರಿಶೀಲನವೂ] ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ನಿರ್ಣಯ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಪ್ರಧಾನವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅಸ್ತೇಪಕರಾದರೆ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯು ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ. ೧೦-೧೧-೧೯೩೩

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟ್, ದ. ಕನ್ನಡ.

ಬಾಬು ಶ್ರೀಪ್ರಕಾಶರ ಪರಿಚಯ.

ಮೊನ್ನೆ ಮಂಗಳೂರಲ್ಲಿ ಸೇರಿದ ೫ನೇ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷ ಬಾಬು ಶ್ರೀಪ್ರಕಾಶರು ಕಾಶಿಯ ಘನವಿದ್ವಾಂಸರಾದ ಬಾಬು ಭಗವಾನದಾಸರ ದ್ವಿತೀಯ ಪುತ್ರರಾಗಿರುತ್ತಾರೆ. ಬಾಬು ಭಗವಾನದಾಸರ ಮನೆತನವು ಹಳೇ ಕಾಲದ ಪ್ರಸಿದ್ಧ ಮನೆತನಗಳಲ್ಲೊಂದಾಗಿರುತ್ತದೆ. ಶ್ರೀಪ್ರಕಾಶರ ಶಿಕ್ಷಣವೆಲ್ಲ ಕಾಶಿಯಲ್ಲೇ ಆಯಿತು. ೧೯೧೧ರಲ್ಲಿ ಅವರು ಬಿ ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಕಾಲೇಜಿನಲ್ಲಿ ಕಲಿಯುತ್ತಿರುವಾಗ ಶ್ರೀಪ್ರಕಾಶರು ವಿದ್ಯಾರ್ಥಿ ಸಹಾಯಕ ಸಭೆಯ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ್ದರು ಕಾಲೇಜ-ಪಾರ್ಲಿಮೆಂಟಿನಲ್ಲೂ ಅವರು ಪ್ರಮುಖ ಭಾಗವನ್ನು ವಹಿಸಿದ್ದರು. ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಳಿಕ ಶ್ರೀಪ್ರಕಾಶರು ವಿಲಾಯತಿಗೆ ಹೋಗಿ ಲಂಡನ್‌ದಲ್ಲೂ, ಕೆಂಬ್ರೀಜಿನಲ್ಲೂ ಅಭ್ಯಾಸ ಮಾಡಿ ಬ್ಯಾರಿಸ್ಟರ ಪರೀಕ್ಷೆಯಲ್ಲೂ, ಟ್ರ್ಯಾಪ್ರೊಸ್ ಪರೀಕ್ಷೆಯಲ್ಲೂ ಯಶಸ್ವಿ ರೀತಿಯಿಂದ ಉತ್ತೀರ್ಣರಾಗಿ ೧೯೧೭ರಲ್ಲಿ ಹಿಂದುಸ್ಥಾನಕ್ಕೆ ಮರಳಿ ಬಂದರು. ಎರಡು ವರ್ಷ ಬನಾರಸ ಹಿಂದು ಕಾಲೇಜಿನಲ್ಲಿ ಇತಿಹಾಸ ವಿಷಯದ ಅಧ್ಯಾಪಕರಾಗಿದ್ದರು. ಮುಂದೆ ಅಧ್ಯಾಪಕನ ಸ್ಥಾನಕ್ಕೆ ಶರಣು ಹೊಡೆದು ಒಂದು ವರ್ಷ ಪ್ರಯಾಗದೊಳಗಿನ 'ಲೀಡರ' ಪತ್ರಿಕೆಯ ಉಪಸಂಪಾದಕರಾಗಿ ಕೆಲಸ ಮಾಡಿದರು ಕೆಲ ಕಾಲ ಕಾಶಿಯ 'ಆಜ' ಎಂಬ ದೈನಿಕ ಹಿಂದೀ ಪತ್ರಿಕೆಯ ಸಂಪಾದಕತ್ವದ ಕೆಲಸವನ್ನೂ ಅವರು ಮಾಡಿರುತ್ತಾರೆ.

ಶ್ರೀಪ್ರಕಾಶರು ಪ್ರಾರಂಭದಿಂದ ರಾಷ್ಟ್ರೀಯ ವೃತ್ತಿಯವರು ೧೯೧೬ನೇ ಇಸವಿಯಿಂದ ಅವರು ರಾಷ್ಟ್ರೀಯ ಸಭೆಯಲ್ಲಿ ಸೇರಿ ಉತ್ಸಾಹದಿಂದ ರಾಷ್ಟ್ರಕಾರ್ಯ ಮಾಡುತ್ತಿದ್ದಾರೆ. ಕಳೆದ ೧೮ ವರ್ಷಗಳಿಂದ ಅವರು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭಾಸದರಿರುತ್ತಾರೆ ೧೯೩೦ರಲ್ಲಿ ಅವರು ಪ್ರಾಂತಿಕ ಕೊಂಗ್ರೆಸ ಕಮಿಟಿಯ ಜನರಲ್ ಸಕ್ರೆಟರಿಗಳಾಗಿಯೂ, ೧೯೩೪ರಲ್ಲಿ ರಾಷ್ಟ್ರೀಯ ಸಭೆಯ ಜನರಲ್ ಸೆಕ್ರೆಟರಿಗಳಾಗಿಯೂ ಕೆಲಸ ಮಾಡಿರುತ್ತಾರೆ. ಹೋದ ವರ್ಷ ಇಟಾವಾದಲ್ಲಿ ಸೇರಿದ ಸಂಯುಕ್ತ ಪ್ರಾಂತ ರಾಜಕೀಯ ಪರಿಷತ್ತಿನ ಅಧ್ಯಕ್ಷಪದದ ಮಾನವು ಶ್ರೀಪ್ರಕಾಶರಿಗೇ ಸಿಕ್ಕಿತು ಸತ್ಯಾಗ್ರಹ ಸಂಗ್ರಾಮದ ಕಾಲಕ್ಕೆ ಅವರು ಎರಡಾವರ್ತಿ ಕಾರಾಗೃಹವಾಸವನ್ನು ಅನುಭವಿಸಿರುತ್ತಾರೆ. ಕಳೆದ ಎಸೆಂಬ್ಲಿ ಚುನಾವಣೆಯಲ್ಲಿ ಬಾಬು ಶ್ರೀಪ್ರಕಾಶರು ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಪರವಾಗಿ ಕಾಶಿವಿಭಾಗದ ಉಮೇದವಾರರಾಗಿ ನಿಂತು ತಮ್ಮ ಪ್ರತಿಸ್ಪರ್ಧಿಗಳನ್ನು ಅತಿ ಪ್ರಚಂಡ ಬಹುಮತದಿಂದ ಸೋಲಿಸಿರುತ್ತಾರೆ.

ಬಾಬು ಶ್ರೀಪ್ರಕಾಶರು ತರುಣ ಪೀಳಿಗೆಯ ಮುಂದಾಳುಗಳು, ಪಂ| ಜವಾಹಿರಲಾಲರ ನಿಸ್ಸೀಮ ಭಕ್ತರು: ಸಮಾಜಸತ್ತಾವಾದದ ಪುರಸ್ಕರ್ತರು ತಮ್ಮ ಪೂಜ್ಯ ತಂದೆಯವರೊಡನೆ ಎಸೆಂಬ್ಲಿಯ ಸಭಾಮಂದಿರದಲ್ಲಿ ಕೂಡ್ರುವ ಭಾಗ್ಯಶಾಲಿ ಪುರುಷರು ಇವರೊಬ್ಬರೇ ಸರಿ ಇಂಥ ತರುಣ ಮುಖಂಡರ ನೇತೃತ್ವದಲ್ಲಿ ಕೂಡಿದ ಮಂಗಳೂರ ಪರಿಷತ್ತಿನೊಳಗೆ ಸಮಾಜಸಮತಾವಾದಿಗಳು ಜಯಶಾಲಿಗಳಾದದ್ದು ಆಶ್ಚರ್ಯವಲ್ಲ

ದ್ವಿಗುಣವಾದ ಲಾಭವನ್ನು ಹೊಂದಿರಿ.

ರೋಗದಿಂದ ನರಳುವವರಿಗೆ ಗುಣ ಮತ್ತು ಅನುಮಾನ ಸಂದರ್ಭದಲ್ಲಿ ರಕ್ಷೆ!

ಮಕ್ಕಳ ಲಿವರ್ ಕಂಪ್ಲೈಂಟು (ಕೂರ್ಮವ್ಯಾಧಿ) ಮತ್ತು ಜ್ವರಗಡ್ಡೆಗೆ

ಜಮ್ಮಿ ವೆಂಕಟರಮಣಯ್ಯನವರ

'ಲಿವರ್ ಕ್ಯೂರ್' ಎಂಬುದು ದಿವ್ಯೌಷಧ!

ಮೋಸವಾಗದಂತೆಯೂ, ಅನುಮಾನವಿಲ್ಲದಂತೆಯೂ,

ಪ್ರತಿ ಪ್ಯಾಕೆಟ್ಟಿನ ಮೇಲೂ ನಮ್ಮ ಹೆಸರನ್ನು ಸರಿಯಾಗಿ ನೋಡಿ ತೆಗದುಕೊಳ್ಳಿರಿ!

ಹೆಚ್ಚಿನ ಮಾಹಿತಿಗೆ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ)

Established 1900

ಓಂ

FIXED RATE

ದಾಸಪ್ಪಾ ಕೃಷ್ಣಪ್ಪಾ ಢಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಶಿ

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರೇಶ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರೀ ರುಮಾಲು, ಉಪ್ಪರ್ಣಿ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಶ್ಮೆ ಖಣ್ಣರ ಮಡಿಗಳೂ ನ್ಯಾ ಪಿ ಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಭೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಸೋಯಿ ದರದಿಂದ ಸಿಗುವವು ರೊಖ ವ್ಯಾಪಾರಕ್ಕೆ ಕಮಿಶನ್ ದೊರೆಯ ವದು

Tel - "Honesty" D. K. DHAKAPPA BROS.,

ಹೊಸ ಮಾಲು.

Cloth Merchants,

SIRSI. N KANARA

ದರ ಅಗ್ಗ.

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಕೆಳಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗ ವದು.

Kumta Agents -
D K. Nayak Bros
D S. Pai.
K. N. Nayak
Honarar Agent
R. V. Prabhu Esq.

K. PadmanabhaRao & Sons,
BELGAUM
Chief Agents for
Karnatak Districts & S. M States

ಅಲ್ಲಲ್ಲಿ ಇಷ್ಟಿಷ್ಟು!

ನಾಶಿಕದಲ್ಲೊಂದು ದೈವೀ ಚಮತ್ಕಾರ! ಅಲ್ಲಿರುವ ಶೃಂಗೇರಿ ಮಠದಲ್ಲಿ ಶ್ರೀಮದಾದ್ಯ ಶಂಕರಾಚಾರ್ಯರದೊಂದು ಬಿಳೀ ಶಿಲೆಯ ಪದ್ಮಾಸನಸ್ಥ ಮೂರ್ತಿಯುಂಟು. ಕಳೆದ ವಾರ ಅಭಿಷೇಕ ಮಾಡಿ ಮೂರ್ತಿಯನ್ನು ಸಿಂಗರಿಸಿದ್ದರು. ಮರುದಿನ ಪೂಜಾರಿ ಭಟ್ಟರು ಬಾಗಿಲು ತೆರೆಯಲಾಗಿ ಮೂರ್ತಿಯ ಕಾಲಡಿಗೆ ನೀರು ರಾಶಿಯಾಗಿ ಬಿದ್ದದ್ದು ಕಂಡುಬಂತು ಆ ನೀರನ್ನೆಲ್ಲ ತುಂಬಿತೆಗೆದರು. ಕೆಲ ಹೊತ್ತಿನಲ್ಲಿ ಪುನಃ ನೀರು ತುಂಬಿತು! ಪರೀಕ್ಷೆ ಮಾಡಿ ನೋಡಿದ್ದಲ್ಲಿ ಮೂರ್ತಿಯ ಕಾಲುಗಳೊಳಗಿಂದ ನೀರು ಹನಿ ಹನಿಯಾಗಿ ಒರುತ್ತಿದೆಂದು ಕಂಡುಬಂತು! ಈ ಚಮತ್ಕಾರ ನೋಡಲಿಕ್ಕೆ ಸಾವಿರಾರು ಜನರು ದೇವಸ್ಥಾನಕ್ಕೆ ಹೋಗುತ್ತಾರೆ

* * *

ಬೆಳ್ಳಿಯ ದರ ಏರುತ್ತ ನಡೆದಿದೆ. ಅಮೇರಿಕೆಯ ಸರಕಾರವು ಬೆಳ್ಳಿಯ ಖರೀದಿ ಮಾಡಿ ದರ ಏರಿಸುವ ಕ್ರಮ ನಡಿಸಿರುತ್ತಾರೆ. ಔನ್ಸ ತೂಕದ ಬೆಳ್ಳಿಯ ಕಿಮ್ಮತ್ತು ೧೨೯ ಸೆಂಟುಗಳಿಗೆ ಏರಿಸಬೇಕೆಂದು ಅಮೇರಿಕೆಯವರ ನಿರ್ಧಾರವಾಗಿರುತ್ತದಂತೆ ಅಷ್ಟು ಎಂದರೆ ೧೦೦ ತೊಲೆ ಬೆಳ್ಳಿಯ ಬೆಲೆ ೧೯೭ ರೂಗಳಷ್ಟು ಆಗುವದು. ಈ ಪ್ರಕಾರ ಬೆಲೆ ಏರುತ್ತ ನಡೆದರೆ ಒಂದು ದಿನ ಜನರು ರೂಪಾಯಿಯ ನಾಣ್ಯಗಳನ್ನು ಕರಗಿಸ ಬಹುದೆಂದು ಭೀತಿಯುಂಟಾಗಿದೆ. ಈ ಬಗ್ಗೆ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರಗಳು ನಡೆದವು ಸರಕಾರದವರು ಜಾಗ್ರತೆಯಿಂದಿದ್ದಾರೆ, ಪ್ರಸಂಗಕ್ಕೆ ಉಚಿತ ಕ್ರಮ ಕೈಕೊಳ್ಳಬಹುದೀತೆಂದು ಉತ್ತರ ದೊರಕಿತು. ಬಹಳವಾಗಿ ಹಳೀ ರೂಪಾಯಿಗಳನ್ನು ಹಿಂದಕ್ಕೆ ತರಿಸಿ, ಸರಕಾರದವರು ಹೀನ ಬೆಲೆಯ ರೂಪಾಯಿ ನಾಣ್ಯಗಳನ್ನು ಮುದ್ರಿಸುವರೆಂದು ಕಾಣುತ್ತದೆ ಬಂಗಾರ ಹೋದದ್ದು ಹೋಯಿತು, ಭಾರತೀಯರು ಬೆಳ್ಳಿಯನ್ನಾದರೂ ಕಾದಿಟ್ಟುಕೊಳ್ಳಲಿ.

* * *

ಮಂಗಳೂರ ಪರಿಷತ್ತಿನ ಅಧ್ಯಕ್ಷ ಬಾ॥ ಶ್ರೀಪ್ರಕಾಶರು ಮರಳಿ ಸ್ವದೇಶಕ್ಕೆ ಹೋಗುವಾಗ ಮೈಸೂರಲ್ಲಿ 'ತಾಯಿನಾಡು' ಪತ್ರಿಕೆಯ ಸುದ್ದಿಗಾರರು ಅವರ ಸಂದರ್ಶನ ಕೊಂಡಿದ್ದರು 'ಕರ್ನಾಟಕದ ಕಾರ್ಯಕರ್ತರಲ್ಲಿ ಪರಸ್ಪರ ನಂಬಿಗೆ, ಆದರಗಳಿಲ್ಲದ್ದು ನೋಡಿ ನಾನು ವ್ಯಸನಪಟ್ಟೆನು. ಮತಭೇದ ಬಂದ ಕೂಡಲೆ ವ್ಯಕ್ತಿದ್ವೇಷಕ್ಕೆ ಪ್ರಾರಂಭವಾಗುತ್ತದೆ. ರಾಷ್ಟ್ರೀಯರು ಭಿನ್ನ ಮತದವರಿಗೂ ಆದರಾಶ್ರಯ ಕೊಡಲು ಕಲಿಯಬೇಕು ಸೇವಾದಲದ ಉಜ್ವಲ ಶಿಸ್ತು, ಸೇವೆಗಳನ್ನು ರಾಷ್ಟ್ರಕ್ಕೊಪ್ಪಿಸಿ ಕರ್ನಾಟಕ ಪ್ರಾಂತದವರು ಮತಭೇದಗಳನ್ನು ಗಣಿಸದೆ ಧ್ಯೇಯ ಸಾಧನೆಗಾಗಿ ಒತ್ತಟ್ಟಿಗೆ ಕಾರ್ಯ ಮಾಡುವರೆಂದು ನಾವು ಅಪೇಕ್ಷಿಸುತ್ತೇವೆ' ಎಂದ, ಬಾಬುಜಿಯವರು ಸುದ್ದಿಗಾರರ ಬಳಿ ನುಡಿದರಂತೆ

* * *

ಬಂಗಾಲ ಪ್ರಾಂತದಲ್ಲಿ ಕ್ರಾಂತಿಕಾರಕರ ಗೋಣು ಮುರಿಯಲಿಕ್ಕೆ ಪೋಲೀಸರೂ ಸೈನಿಕರೂ ಸಜ್ಜಾಗಿ ಮೆರೆಯುತ್ತಾರೆ. ಹಗಲು-ರಾತ್ರಿ ಪೋಲೀಸರ ಕಾವಲಿರುವಾಗ ಅಲ್ಲಿ ಕಳವು, ದರೋಡೆಗಳು ಕಡಿಮೆಯಾಗಬೇಕಿತ್ತು. ಆದರೆ ಇಡೀ ಬಂಗಾಲದಲ್ಲಿ ಒಂದು ವಾರದೊಳಗೆ ೫೧ ದರೋಡೆಗಳಾದವಂತೆ! ಪೋಲೀಸರ ಕಠಿಣ ಕಾವಲಿನಲ್ಲಿರುವ ಮಿದ್ನಾಪೂರ ಜಿಲ್ಹೆಯೊಳಗೇ ಏಳು ದರೋಡೆಗಳು ನಡೆದವಂತೆ. ಇವೂ ಕೂಡ ಶುಕ್ಲ ಪಕ್ಷದ ಅಚ್ಚ ಬೆಳದಿಂಗಳಲ್ಲಿ! ಬಂಗಾಲ ಪೋಲೀಸರ ಯೋಗ್ಯತೆ ನೋಡಿರಿ!

* * *

ಮಿರಜದ ವಿದ್ಯಾಧಿಕಾರಿಗಳು ವಿದ್ಯಾರ್ಥಿಗಳ ಆರೋಗ್ಯದ ಚೌಕಶಿ ಬಗ್ಗೆ ಒಂದು ಮಂಡಳವನ್ನು ನೇಮಿಸಿದ್ದರು ಸದರಿ ಮಂಡಳದವರು ಈಗ ಪ್ರಚಾರದಲ್ಲಿರುವ ಶಾಲೆಯ ವೇಳೆಯೇ ಹುಡುಗರ ಆರೋಗ್ಯ ಕೆಡಿಸಲಿಕ್ಕೆ ದೊಡ್ಡ ಕಾರಣವೆಂದು ಕಂಡು ಹಿಡಿದು, ಅದನ್ನು ಬದಲಿಸಬೇಕಾಗಿ ಸೂಚನೆ ಕೊಟ್ಟಿದ್ದಾರೆ. ಈಗ ಹುಡುಗರು ಬೆಳಗ್ಗೆ ಹಸಿವೆಯಾಗುವ ಮೊದಲೇ ಊಟ ಮಾಡಬೇಕು, ಸಂಜೆ ತಡ ಮಾಡಿ ಉಣ್ಣಬೇಕು ಹೀಗೆ ಅಕಾಲ ಭೋಜನ ಮಾಡುವದರಿಂದ ಹುಡುಗರ ಆರೋಗ್ಯ ಕೆಟ್ಟರೆ ಆಶ್ಚರ್ಯವೇನು? ನಮ್ಮ ಕಡೆಯ ಶಾಲಾಧಿಕಾರಿಗಳು ಮಿರಜ ಮಂಡಳದ ಸೂಚನೆಯ ಕಡೆಗೆ ಗಮನಿಸಬಹುದಲ್ಲವೇ?

ಜಾಹೀರ ನೋಟೀಸು.

ಉತ್ತರ ಕಾನಡಾ ಜಿಲ್ಹಾ ಭಟ್ಕಳ ಪೇಟಾ ಮೂಡಭಟ್ಕಳ ಗ್ರಾಮದಲ್ಲಿ ಇರುವ ರಾಮಕೃಷ್ಣ ನಾಗಪ್ಪ ಹೆಬ್ಬಾರ ಈತನು ಇದರ ಮೂಲಕ ಎಲ್ಲಾ ಜನರಿಗೆ ತಿಳಿಸುವದೇನಂದರೆ— ನನಗೂ ಕುಟುಂಬದ ಇತರ ಮೆಂಬರರಿಗೂ ಹಿಂದೂ ಮಿತಾಕ್ಷರಾ ಕಾಯಿದೆಯಂತೆ ಸಾಮಾಯಿಕ ಹಕ್ಕುಳ್ಳ ಮೂಡಭಟ್ಕಳ ವಗೈರೆ ಗ್ರಾಮಗಳ ಜಮೀನು ನಮ್ಮ ಕುಟುಂಬದಲ್ಲಿ ಹಿರಿಯನಾಗಿರುವ ಮಂಜುನಾಥ ಗೋಪಾಲಕೃಷ್ಣ ಹೆಬ್ಬಾರ ಅವನ ಖಾತೆಯಲ್ಲಿರುತ್ತದೆ. ಇದರ ಗೈರಫಾಯದೆ ಪಡಕೊಂಡು ಅದನ್ನು ಕುಟುಂಬಕ್ಕೆ ಲುಕ್ಸಾನು ಮಾಡಿ ತನ್ನ ಸ್ವಂತದ ಅನ್ಯಾಯದ ಫಾಯಿದೆ ಪಡಕೊಳ್ಳುವ ಬಗ್ಗೆ ಕುಟುಂಬದ ಖರ್ಚಿನ ನೆವ ತೋರಿಸಿ ಹಿಂದಿನ ತಾರೀಕು, ತಿಂಗಳು, ಇಸ್ವಿಯನ್ನು ಹಾಕಿ ಆತನು ಬೇರೆಯವರ ಹೆಸರಲ್ಲಿ ಮೋಸಕರವಾದ ವ ಬಿನ್‌ಮುಬಾದ್ಲೆಯ ಬಿನಾಮಿ ಪ್ರೊಮಿಸರಿ ನೋಟು, ಕ್ರಯ, ಆಡವು ವಗೈರೆ ಆಸ್ತಿ-ಪರಾಧೀನತೆ ಮಾಡಿಕೊಡುವ ಹವಣಿಕೆಯಲ್ಲಿ ಇದ್ದಾನಾಗಿಯೂ, ಈ ಮೊದಲು ಅಂಥವುಗಳನ್ನು ಮಾಡಿಕೊಟ್ಟಿರುತ್ತಾನಾಗಿಯೂ ನನ್ನ ತಿಳುವಳಿಕೆಯಲ್ಲಿ ಬಂದಿದೆ. ಈ ಶಿವಾ ಕುಟುಂಬದ ಹೇರಳ ಜಮಾನಿಯನ್ನು ಬೇರೆಯವರ ಹೆಸರಲ್ಲಿ ಏನೂ ಕಾರಣವಿಲ್ಲದೆ ಮೂಲಗೇಣಿ ವಗೈರೆ ಹಕ್ಕುಗಳ ಮೂಲಕ ಬೋಜಾಕ್ಕೆ ಒಳಪಡಿಸುತ್ತಿದ್ದಾನಾಗಿಯೂ, ಈ ಮೊದಲು ಒಳಪಡಿಸಿ ಕೊಟ್ಟಿರುತ್ತಾನಾಗಿಯೂ ನನ್ನ ತಿಳುವಳಿಕೆಯಲ್ಲಿ ಬಂದಿದೆ. ನಮ್ಮ ಕುಟುಂಬಕ್ಕೆ ಸಾಲ ಮಾ‍ಡುವ ಅವಶ್ಯ ಎಂದೂ ಇದ್ದಿಲ್ಲ, ಈಗಾದರೂ ಇರುವದಿಲ್ಲ ಕಾರಣ ಆತನು ಈವರೆಗೂ ಮಾಡಿಕೊಟ್ಟ ಯಾವದೇ ತರದ ದಸ್ತೈವಜುಗಳು ಮತ್ತು ಕರಾರುಗಳು ಹಾಗೂ ವ್ಯೆಸಾಲುಗಳು ನನ್ನ ಹಕ್ಕನ್ನು ಎಂದಿಗೂ ಬಾಧಿಸಲಾರವು. ಹಾಗೂ ಇನ್ನು ಮುಂದೆ ಮಾಡಿಕೊಡಬಹುದಾದ ಪರಾಧೀನತೆಗಳೂ ನನ್ನ ಹಕ್ಕಿಗೆ ಬಾಧಿಸಲಾರವು. ನನ್ನ ಹಕ್ಕನ್ನು ಬಾಧಿಸುವ ರೀತಿಯಿಂದ ಪರಾಧೀನ ಮಾಡುವ ಅಧಿಕಾರವು ಸದ್ರಿಯವನಿಗೆ ಇರುವದಿಲ್ಲ ತಿಳಿದಿರಲಿ.

ಭಟ್ಕಳ, ತಾರೀಕು ೧೬-೫-೧೯೩೫ನೇ ಇಸ್ವಿ

ರಾಮಕೃಷ್ಣ ನಾಗಪ್ಪ ಹೆಬ್ಬಾರ, ಮೂಡಭಟ್ಕಳ

ಬಟ್ಟೆಗಳೂ ಶುಭ್ರ! ಒಗೆಯೋಣವೂ ಸುಲಭ!!

ಮನೆತನದ ಉಪಯೋಗಕ್ಕೆ ಮತ್ತು ನಯವಾದ ಉಣ್ಣೆ-ರೇಶಿಮೆಗಳ ಬಟ್ಟೆಗಳನ್ನು ಒಗೆಯಲಿಕ್ಕೆ ಸ್ವಸ್ತಿಕ ಸುಪರಫೈನ ಸಾಬೂನಿನಷ್ಟು ಉತ್ತಮ ಸಾಬೂನು ಬೇರೊಂದಿಲ್ಲ! ಇದನ್ನು ಉಪಯೋಗಿಸಿದರೆ ಅತಿ ಸೂಕ್ಷ್ಮ ಬಟ್ಟೆಗಳಿಗೂ ಬಾಧೆಯಿಲ್ಲ ಕೈಗಳಿಗೂ ಪೆಟ್ಟಿಲ್ಲ! ಉತ್ಕೃಷ್ಟ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಶ್ರೇಷ್ಠ ತರಗತಿಯ ಸಾಬೂನಿದು!



ಸ್ವಸ್ತಿಕ ಸುಪರಫೈನಸಾಬು.

ಕಾರವಾರ ಜಿಲ್ಹೆಯ ಏಜಂಟರು —

ಎನ್ ಎಸ್. ರಂಗ್ಯಶೇಣ್ವಿ, ಪೋ. ಹಳಿಯಾಳ.

ದಕ್ಷಿಣಕನ್ನಡ ಜಿಲ್ಹೆಯ ಏಜಂಟರು.—

ಎಸ್. ಎನ್. ವ್ಹಿ. ನಾಯಕ ಮತ್ತು ಕಂಪನಿ, ಮಂಗಳೂರು

ಕಾನಡಾವೃತ್ತ.

ಮಿತಿ ಯುವ ಸಂ| ವೈಶಾಖ ಬ|| ೨ ಗೆ, ಸೋಮವಾರ.

ವಿಕಾರದ ವಿಜಯ!

ಕಳೆದ ವಾರ ಮಂಗಳೂರಿನಲ್ಲಿ ಸೇರಿದ ಎಂಟನೆಯ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತಿನ ವಿವರವನ್ನೂ ನಿರ್ಣಯಗಳನ್ನೂ ನಾವು ಸಂಕ್ಷೇಪವಾಗಿ ಬೇರೆಡೆಯಲ್ಲಿ ಕೊಟ್ಟಿರುತ್ತೇವೆ. ಅವುಗಳನ್ನು ಸೂಕ್ಷ್ಮ ರೀತಿಯಿಂದ ಪರಿಶೀಲಿಸಿದರೆ ರಾಷ್ಟ್ರೀಯ ಸಭೆಯೊಳಗಿನ ಜಾಣ ಮತ್ತು ಅನುಭವಿಕ ಹಿರಿಯರ ವಿಚಾರಸರಣಿಯಿಂದಲೂ, ಕಾರ್ಯಕ್ರಮದಿಂದಲೂ ತರುಣರಿಗೆ ಸಮಾಧಾನವಿಲ್ಲೆಂಬುದು ಸ್ಪಷ್ಟವಾಗಿ ತಿಳಿದುಬರುತ್ತಿದೆ. ಹಿರಿಯರು ಸಾಧ್ಯಾಸಾಧ್ಯತೆ, ದೇಶ-ಕಾಲ-ಪರಿಸ್ಥಿತಿ, ಕೊನೆಯ ಪರಿಣಾಮ ಮುಂತಾದವುಗಳ ದೀರ್ಘ ವಿಚಾರ ಮಾಡಿ ಯೋಗ್ಯವಾದ ನಿರ್ಣಯಗಳನ್ನು ಕೈಕೊಂಡರೆ, ತರುಣರು ಕೇವಲ ಧ್ಯೇಯದ ಕಡೆಗೆ ಕಣ್ಣಿಟ್ಟು ಅವ್ಯವಹಾರಿಕ ನಿರ್ಣಯಗಳನ್ನು ಕೈಕೊಳ್ಳುತ್ತಾರೆ. ತರುಣರಿಗೆ ದೇಶ-ಕಾಲ-ಪರಿಸ್ಥಿತಿಯ ವಿಚಾರವಿರುವದಿಲ್ಲ; ಸಾಧ್ಯಾಸಾಧ್ಯತೆಗಳ ಜ್ಞಾನವಿರುವದಿಲ್ಲ! ತರುಣರಲ್ಲಿ ವಿವೇಕಕ್ಕಿಂತ ವಿಕಾರಕ್ಕೇ ಪ್ರಾಧಾನ್ಯ ಹೆಚ್ಚು. ವಿಕಾರವಶತೆಯು ತಾರುಣ್ಯದ ಗುಣವು. ಹಿರಿಯರಂತೆ ಕಿರಿಯರೂ, ತರುಣರೂ ವಿವೇಕಿಗಳಾದರೆ ಹಿರಿಯರ ಬೆಚ್ಚಳವೆಲ್ಲಿರುತ್ತಿತ್ತು? ಹೋದ ತಿಂಗಳ ಕೊನೆಗೆ ಜಬಲಪುರದಲ್ಲಿ ಸೇರಿದ ಹೊಸ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭೆಯಲ್ಲಿ ಹಿರಿಯರ ಪ್ರಾಬಲ್ಯದಿಂದ ಸೋಶಿಯಲಿಸ್ಟ ಯಾನೆ ಸಮಾಜಸಮತಾವಾದಿಗಳ ಪಕ್ಷದ ತರುಣರ ಸೂಚನೆಗಳು ಬಹುಮತದಿಂದ ತಿರಸ್ಕೃತವಾಗಿದ್ದವು. ಕರ್ನಾಟಕದೊಳಗಿನ ತರುಣರು ಈಗ ಪ್ರಯತ್ನ ಮಾಡಿ ಅವೇ ಸೂಚನೆಗಳನ್ನು ಮಂಗಳೂರ ಪರಿಷತ್ತಿನ ಕಡೆಯಿಂದ ಮಾನ್ಯ ಮಾಡಿಸಿಕೊಂಡಿದ್ದಾರೆ. ಯುದ್ಧವಿರೋಧ, ಸಂಸ್ಥಾನಗಳ ಉಚ್ಚಾಟನ, ಭಾವೀ ರಾಜ್ಯಘಟನೆಯ ವಿಧ್ವಂಸ ಮೊದಲಾದ ಪರಿಷತ್ತಿನ ಕೆಲವು ತೀಕ್ಷ್ಣ ನಿರ್ಣಯಗಳ ಬಗ್ಗೆ ಅಲ್ಲಲ್ಲಿ ಟೀಕೆಯಾಗುತ್ತದೆ. ಬೆಳಗಾಂವ, ವಿಜಾಪುರ, ಕಾರವಾರ ಮುಂತಾದ ಜಿಲ್ಹೆಗಳಿಂದ ಪ್ರತಿನಿಧಿಗಳು ಪರಿಷತ್ತಿಗೆ ಹೋಗಿದ್ದಿಲ್ಲವೆಂತಲೂ, ಪರಿಷತ್ತಿನಲ್ಲಿ ಪಾಸಾದ ನಿರ್ಣಯಗಳು ಇಡೀ ಕರ್ನಾಟಕಕ್ಕೆ ಮಾನ್ಯವಿರುತ್ತವೆಂದು ತಿಳಿಯಬಾರದೆಂತಲೂ ಕೆಲವರು ದೂರುತ್ತಿದ್ದಾರೆ. ಮಂಗಳೂರ ಪರಿಷತ್ತು ರಾಷ್ಟ್ರೀಯ ಸಭೆಯ ನಿರ್ಣಯಗಳ ವಿರುದ್ಧ ಬಂಡಾಯವನ್ನೆಬ್ಬಿಸಿತೆಂದು ಕೆಲವರು ನೊಂದುಕೊಳ್ಳಹತ್ತಿದ್ದಾರೆ.

ಆದರೆ ನಾವು ಈ ಟೀಕೆಗೂ ದೂರುಗಳಿಗೂ ಮಹತ್ವ ಕೊಡಲಿಚ್ಛಿಸುವದಿಲ್ಲ. ಎಲ್ಲೇ ಸೇರಿದ್ದರೂ, ಎಲ್ಲ ಜಿಲ್ಹೆಗಳಿಂದ ಪ್ರತಿನಿಧಿಗಳು ಬಂದಿರುತ್ತಿದ್ದರೂ, ತರುಣರ ಪ್ರಾಬಲ್ಯವಿದ್ದ ಪರಿಷತ್ತಿನಲ್ಲಿ, ಈಗ ಕೈಕೊಳ್ಳಲ್ಪಟ್ಟ ಎಲ್ಲ ನಿರ್ಣಯಗಳು ನಿಃಸಂಶಯ ಪಾಸಾಗುತ್ತಿದ್ದವೆಂದು ನಮಗನಿಸುತ್ತದೆ. ಪರಿಷತ್ತಿನಲ್ಲಿ ಪಾಸಾದ ಯಾವತ್ತೂ ನಿರ್ಣಯಗಳು ನಮಗೆ ಪೂರ್ಣ ಮಾನ್ಯವಿರುತ್ತವೆಂದು ತಿಳಿಯಕೂಡದು. ಒಂದೆರಡು ನಿರ್ಣಯಗಳು ಅವ್ಯವಹಾರ್ಯ, ಆದ್ದರಿಂದಲೇ ತುಸು ಹಾಸ್ಯಾಸ್ಪದವಿರುತ್ತವೆಂದು ನಾವೂ ಒಪ್ಪುತ್ತೇವೆ. ಉದಾಹರಣೆಗಾಗಿ ಸಂಸ್ಥಾನಗಳ ಉಚ್ಚಾಟನದ ತೀರ್ಮಾನವನ್ನೇ ಪರೀಕ್ಷಿಸುವಾ. ತೀರ್ಮಾನವಂತೂ ರಮ್ಯ ಕಾಣುತ್ತದೆ. ಆದರೆ ಅದು ವ್ಯವಹಾರ್ಯವೆಂದು ತೋರುವದಿಲ್ಲ. ಸಂಸ್ಥಾನಗಳನ್ನು ಕಿತ್ತೊಗೆಯುವ ಬಗೆ ಹೇಗೆ? ಎಂಬೀ ವಿಚಾರ ನಮಗಂತು ಹೊಳೆಯದು. ಆದರೂ ನಾವು ಈ ನಿರ್ಣಯಗಳ ಬಗ್ಗೆ ಪರಿಷತ್ತಿಗಾಗಲಿ, ಬಹುಮತವನ್ನು ತಮ್ಮ ಕಡೆಗೆ ಒಲಿಸಿಕೊಂಡ ತರುಣರಿಗಾಗಲಿ ದೋಷ ಕೊಡಲು ಇಚ್ಛಿಸುವದಿಲ್ಲ. ತರುಣರ ಆಕಾಂಕ್ಷೆಗಳೂ, ವಿಚಾರಗಳೂ ಇಂದು ಮುಂದೆ ಮೂರ್ತಸ್ವರೂಪವನ್ನೊಂದಿದ ಬಗ್ಗೆ ನಮಗೆ ಸಂತೋಷವಾಗುತ್ತದೆ. ಬರೇ ವಿವೇಕದಿಂದ ಕಾರ್ಯವಾಗುವದಿಲ್ಲ. ವಿವೇಕಕ್ಕೆ ವಿಕಾರದ ಬೆಂಬಲವಿರಬೇಕು; ವಿಕಾರಕ್ಕೆ ವಿವೇಕದ ಕಡಿವಾಣ ಬೇಕು. ವಿವೇಕ-ವಿಕಾರಗಳೆರಡೂ ಕೂಡಿದರೆ ಮಾತ್ರ ಮಹಾ ಕಾರ್ಯಗಳು ಸಾಧ್ಯವಾಗುತ್ತವೆ. ಜಬಲಪುರದ ಸಭೆಯಲ್ಲಿ ಹಿರಿಯರ ವಿವೇಕ ಗೆದ್ದಿತು, ಮಂಗಳೂರಿನ ಪರಿಷತ್ತಿನಲ್ಲಿ ತರುಣರ ವಿಕಾರವು ವಿಜಯಶಾಲಿಯಾಯಿತು! ಈ ವಿವೇಕ-ವಿಚಾರಗಳ ಮಧುರ ಮಿಶ್ರಣವು ಈ ಮುಂದೆ ಕೂಡಿಬರುವದೆಂದು ನಾವು ನಂಬಿಕೊಂಡಿದ್ದೇವೆ.

ಮೇಲಾಗಿ ಇಂದಿನ ತರುಣರೇ ನಾಳಿನ ಮುಂದಾಳುಗಳು. ಭವಿಷ್ಯಕಾಲದಲ್ಲಿ ಯಾರ ಕಡೆಗೆ ರಾಷ್ಟ್ರದ ನೇತೃತ್ವವು ಹೋಗುವದೋ ಅವರ ವಿಚಾರಗಳು ಈಗ ಪ್ರಕಟವಾಗುವದರಿಂದ ರಾಷ್ಟ್ರಕ್ಕೂ ಹಿತವಿದೆ; ರಾಜ್ಯಕರ್ತರಿಗೂ ಉಪಯೋಗವಿದೆ. ತರುಣರ ಆಕಾಂಕ್ಷೆಗಳನ್ನು ನೋಡಿಯೇ ನಡೆಯುವದರಲ್ಲಿ ಕ್ಷೇಮವಿದೆ, ಸುಖವಿದೆ. ರಾಷ್ಟ್ರದ ಸಂಸಾರವೂ, ವೈಯಕ್ತಿಕ ಸಂಸಾರವೂ ಒಂದೇ ತತ್ವವನ್ನು ಹೊಂದಿಕೊಂಡಿವೆ. ರಾಷ್ಟ್ರದೊಳಗಿನ ತರುಣ ಹಿರಿಯರ ಸಂಸಾರವು ಪಿತಾ-ಪುತ್ರರ ಸಂಸಾರದಂತೆಯೇ ಇರುತ್ತದೆ. ಪಿತಾ-ಪುತ್ರರು ಪರಸ್ಪರ ಸಲಹೆಯಿಂದ, ಪರಸ್ಪರ ಸಹಕಾರದಿಂದ ನಡಿಸಿದ ಸಂಸಾರವೇ ಸುಖದ ಸಂಸಾರವಾಗುತ್ತಿದೆ. ವಿಚಾರವಂತ ತಂದೆಯು ಮಗನ ಆಕಾಂಕ್ಷೆಗಳನ್ನು ತಿಳಕೊಂಡು, ಮಗನು ತಪ್ಪಿದರೆ ಅವನಿಗೆ ಸವಿ ಮಾತಿನಿಂದ ಬೋಧಗಲಿಸಿ, ಅವನ ಸಲಹೆಯಿಂದಲೇ ಸಂಸಾರ ನಡಿಸುವನು. ಅದೇ ಮೇರೆಗೆ ರಾಷ್ಟ್ರದೊಳಗಿನ ಹಿರಿಯರು ತರುಣರ ಮನೋರಥಗಳನ್ನು ತಿಳಕೊಂಡು ತರುಣರಿಗೆ ಮಾನ್ಯವಾಗುವಂಥ ಕಾರ್ಯಕ್ರಮಗಳನ್ನೂ ಘಟನೆಗಳನ್ನೂ ರಚಿಸಿದರೆ ಮಾತ್ರ ರಾಷ್ಟ್ರಕಾರ್ಯವು ಸುಸೂತ್ರ ಸಾಗುವದು. ಇಲ್ಲದಿದ್ದರೆ ಪ್ರಗತಿಯ ಚಕ್ರವು ಕೆಸರಿನಲ್ಲಿ ಸಿಕ್ಕಿಬೀಳುವದು. ಆದ್ದರಿಂದ ಮಂಗಳೂರಿನಲ್ಲಿ ತರುಣರು ಮುಂದರಿದು ತಮ್ಮ ವಿಚಾರಗಳನ್ನು ದಿಟ್ಟತನದಿಂದ ದೇಶದ ಹಿರಿಯರ ಮುಂದಿಟ್ಟ ಬಗ್ಗೆ ನಾವು ಅವರನ್ನು ಹೃತ್ಪೂರ್ವಕ ಅಭಿನಂದಿಸುತ್ತೇವೆ.

— ಸೌ| ಕಮಲಾ ನೆಹರುರವರು ಆರೋಗ್ಯಕ್ಕಾಗಿ ಗುರುವಾರದ ಬೋಟಿಯಿಂದ ಯುರೋಪಕ್ಕೆ ಹೊರಡುವರು. ಅವರನ್ನು ಬೀಳ್ಕೊಡಲಿಕ್ಕೆ ಮಹಾತ್ಮರು ಬುಧವಾರ ಮುಂಬಯಿಗೆ ಬರುವವರಿದ್ದಾರೆ.

ಪ್ರಾಂತಿಕ ಪರಿಷತ್ತಿನ ನಿರ್ಣಯಗಳು

ತಾ ೧೧-೧೨ನೇ ದಿವಸ ಪರಿಷತ್ತಿನಲ್ಲಿ ಅನೇಕ ನಿರ್ಣಯಗಳು ಸ್ವೀಕೃತವಾದವು. ಸ್ವರಾಜ್ಯ-ಸಂಗ್ರಾಮದಲ್ಲಿ ಮಡಿದ ವೀರರಿಗಾಗಿ ಸಂತಾಪ, ಅಂಕೋಲಾ-ಸಿದ್ದಾಪುರಗಳ ರೈತರಿಗೆ ಸಹಾಯ ಮಾಡಿದವರ ಆಭಾರ-ಮನ್ನಣೆ, ಅನಂತಪುರ-ಬಳ್ಳಾರಿ ಜಿಲ್ಹೆಯೊಳಗಿನ ಕ್ಷಾಮಪೀಡಿತರಿಗೆ ಸಹಾಯ ಮಾಡೋಣ, ದೇಶಕಾರ್ಯದಲ್ಲಿ ನೊಂದವರ ಬಗ್ಗೆ ಸಹಾನುಭೂತಿ, ಶ್ರೀ| ದಿವಾಕರ ಮತ್ತು ಕರಮರಕರ ಇವರಿಗೆ ಕಾರವಾರ ಜಿಲ್ಹೆಯಲ್ಲಿ ಬರಲು ಪ್ರತಿಬಂಧವಾದ ಬಗ್ಗೆ ನಿಷೇಧ, ಹಿಂದುಸ್ಥಾನಿ ಸೇವಾ ದಲದ ಮೇಲಿನ ನಿರ್ಬಂಧ ದೂರವಾಗದ ಬಗ್ಗೆ ನಿಷೇಧ, ದಕ್ಷಿಣ ಕನ್ನಡ ಜಿಲ್ಹೆಯ ಅಪ್ಪಾದ ತೀರ್ವೆ-ಪದ್ಧತಿಯ ತಿರಸ್ಕಾರ, ಪಂ| ಜವಾಹಿರಲಾಲ ನೆಹರು, ಮತ್ತು ಮಾನವೇಂದ್ರನಾಥ ರೋಯ್ ಇವರ ಬಿಡುಗಡೆ, ಗ್ರಾಮ-ಕೈಗಾರಿಕೆಗಳ ಪುನರುಜ್ಜೀವನ, ಖಾದಿಯ ಪ್ರೋತ್ಸಾಹನ ವಗೈರೆ ನಿರ್ಣಯಗಳು ವಿಶೇಷ ಚರ್ಚೆಯಾಗದೆ ಸ್ವೀಕರಿಸಲ್ಪಟ್ಟವು. ಬ್ರಿಟಿಶ ಸರಕಾರವು ಯಾವದೇ ಯುದ್ಧದಲ್ಲಿ ತೊಡಗಿದರೆ ಹಿಂದುಸ್ಥಾನವು ಅದರಲ್ಲಿ ಸೇರಬಾರದು, ಸಹಾಯ ಮಾಡಬಾರದು; ಸಂಸ್ಥಾನಗಳನ್ನು ಕಿತ್ತೊಗೆಯಬೇಕು; ಹೋರ ಸಾಹೇಬರ ರಾಜ್ಯಘಟನೆಯನ್ನು ಸದೆಬಡಿಯಬೇಕು; ಸ್ವರಾಜ್ಯದ ಘಟನೆ ನಿರ್ಣಯಿಸಲು, ಲೋಕಪ್ರತಿನಿಧಿಗಳ ಸಭೆಯನ್ನು ಸೇರಿಸಲು ಪ್ರಜೆಗಳೇ ಬಾಧ್ಯರು; ಕಾಯಿದ ಮಂಡಳಗಳನ್ನು ವಶ ಮಾಡಿಕೊಂಡು ದೇಶವನ್ನು ಪ್ರತ್ಯಕ್ಷ ಕಾರ್ಯಕ್ಕೆ ಸಿದ್ಧಗೊಳಿಸಬೇಕು; ಶ್ರಮಜೀವಿ ಕೆಲಸಗಾರರಿಗೆ ಶ್ರಮಜೀವಿ ಮತಾಧಿಕಾರದ ನಿಯಮ ಅನ್ವಯಿಸಬಾರದು; ಮೂಲಭೂತ ಹಕ್ಕುಗಳು; ಇವೇ ಮೊದಲಾದ ಸೋಶಿಯಲಿಸ್ಟ ಪಕ್ಷದ ಸೂಚನೆಗಳು ದೀರ್ಘ ಚರ್ಚೆಯಾಗಿ ಪ್ರಚಂಡ ಬಹುಮತದಿಂದ ಪಾಸಾಗಿವೆ.

ಜಾಹೀರ ವಿನಂತಿ.

ಕಾರವಾರ ಜಿಲ್ಲಾ ಪ್ರಾಥಮಿಕ ಶಿಕ್ಷಕ ಸಂಘದ ೧೬ನೇ ಅಧಿವೇಶನವು ಶ್ರೀಯುತ ಜಿ. ಎಸ್. ಗಂಗೊಳ್ಳಿ, ಎಮ್. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ತಾ. ೨೮ ೫-೩೫ನೇ ಮಂಗಳವಾರ ಮಧ್ಯಾಹ್ನ ೪ ಘಂಟೆಗೆ; ಪುನಃ ೨೯-೫-೩೫ನೇ ಬೆಳಿಗ್ಗೆ ೧೧|| ಘಂಟೆಯ ವರೆಗೆ ಮತ್ತು ಕಾರವಾರ ಪ್ರಾಥಮಿಕ ಶಿಕ್ಷಕ ಸಹಕಾರಿ ಸಂಘದ ಜಾದಾ ಅಧಿವೇಶನವು ಶ್ರೀಯುತ ಎಮ್. ಡಿ. ಕರ್ಕಿ, ಚೇರಮನ್ ಡಿಸ್ಟ್ರಿಕ್ಟ ಸ್ಕೂಲ ಬೋರ್ಡ ಕಾರವಾರ ಇವರ ಅಧ್ಯಕ್ಷತೆಯಲ್ಲಿ ತಾರೀಕು ೨೯-೫-೩೫ನೇ ಮಧ್ಯಾಹ್ನ ೩|| ಘಂಟೆಗೆ ಕುಮಟಾ ಕನ್ನಡ ೧ನೇ ನಂಬರ ಶಾಲೆಯಲ್ಲಿ ಸೇರುವವು. ಆದ್ದರಿಂದ ಶಿಕ್ಷಕ-ಶಿಕ್ಷಕಿಯರೂ, ಶಿಕ್ಷಣಾಭಿಮಾನಿಗಳೂ ಬರಬೇಕಾಗಿ ವಿನಂತಿ.

ಸುಬ್ರಾಯ ಸೀತಾರಾಮ ಮಕ್ಕಿಕೇರಿ,
ಸ್ವಾಗತಾಧ್ಯಕ್ಷ, ಪ್ರಾಥಮಿಕ ಶಿಕ್ಷಕ ಸಂಘ ಕುಮಟಾ.

Wanted

Three Matriculates to work as Clerks in Motor Offices at Karwar, Ankola & Kumta. Applications are to be addressed to the undersigned before the 31st May, 1935

The Manager,
PRABHAT MOTOR SERVICE,
KUMTA.

೮ನೆಯ ಕರ್ನಾಟಕ ಪ್ರಾಂತಿಕ ಪರಿಷತ್ತು.

ಕರ್ನಾಟಕ ಪ್ರಾಂತಿಕಪರಿಷತ್ತಿನ ೮ನೇ ಅಧಿವೇಶನವು ಕಳೆದ ತಾರೀಖು ೧೦-೧೧-೧೨ನೇಗೆ ಮಂಗಳೂರಿನಲ್ಲಿ ಯಶಸ್ವಿರೀತಿಯಿಂದ ಪಾರಗಂಡಿತು. ತಾ. ೧೦ನೇ ಸಂಜೆಗೆ ಅಧ್ಯಕ್ಷ ಬಾಬು ಶ್ರೀಪ್ರಕಾಶರನ್ನು ಮೆರವಣಿಗೆಯಿಂದ ಪರಿಷತ್ತಿನ ಮಂಟಪಕ್ಕೆ ಕರತಂದರು. ಕೆಲ ಹೊತ್ತಿನ ಮೇಲೆ ರಾಷ್ಟ್ರಪತಿ ಬಾಬು ರಾಜೇಂದ್ರಪ್ರಸಾದರೂ ಬಂದು ಮುಟ್ಟಿದರು. ಕೂಡಿದ ಜನರೆಲ್ಲರೂ ಎದ್ದುನಿಂತು ಜಯಘೋಷಗಳಿಂದಲೂ, ಚಪ್ಪಾಳೆಗಳಿಂದಲೂ ರಾಷ್ಟ್ರಪತಿಗಳಿಗೂ ಶ್ರೀಪ್ರಕಾಶರಿಗೂ ಸಡಗರದ ಸ್ವಾಗತವನ್ನಿತ್ತರು. ಪ್ರಾರಂಭದಲ್ಲಿ ಭಗಿನಿಗಳು ಸ್ವಾಗತ ಪದ್ಯಗಳನ್ನು ಹಾಡಿ ಎಲ್ಲರಿಗೂ ಸ್ವಾಗತ ಬಯಸಿದರು. ಬಳಿಕ ಜಿಲ್ಹಾ ಬೋರ್ಡಿನದೊಂದು, ಹಿಂದೀ ಪ್ರಚಾರಕ ಸಮಿತಿಯವರದೊಂದು; ಹೀಗೆ ಎರಡು ಮಾನಪತ್ರಗಳು ರಾಷ್ಟ್ರಪತಿಗಳಿಗೆ ಅರ್ಪಿಸಲ್ಪಟ್ಟವು. ರಾಷ್ಟ್ರಪತಿಗಳು ಎರಡೂ ಮಾನಪತ್ರಗಳಿಗೆ ಕೂಡಿಯೇ ಉತ್ತರ ಕೊಟ್ಟರು. ರಾಷ್ಟ್ರಪತಿಗಳು ತಮಗೆ ಕರ್ನಾಟಕದಲ್ಲೆಲ್ಲ ಬಹು ಆದರದಿಂದ ಗೌರವಿಸಿದ ಬಗ್ಗೆ ಆಭಾರ ಎಣಿಸಿದರು. ಕರ್ನಾಟಕದವರು ಬಿಹಾರ-ಕಷ್ಟನಿವಾರಣೆಗೆ ಮಾಡಿದ ಸಹಾಯವನ್ನು ಹೊಗಳಿದರು. ಹಿಂದುಸ್ಥಾನದ ಉದ್ಧಾರಕ್ಕಾಗಿ ಹೆಣಗಾಡುವ ಶ್ರೇಷ್ಠ ಸಂಸ್ಥೆಯೆಂದರೆ ರಾಷ್ಟ್ರೀಯ ಸಭೆಯೆಂದು ಹೇಳಿ, ಅದನ್ನು ಬಲಪಡಿಸಲಿಕ್ಕೆ ಪ್ರಾರ್ಥಿಸಿದರು. ಖಾದಿಯನ್ನೇ ತೊಟ್ಟು ಖಾದಿಯ ಪ್ರಸಾರಕ್ಕೆ ಉತ್ತೇಜನ ಕೊಡಿರೆಂದು ಬೋಧ ಮಾಡಿದರು. ಮಹಾತ್ಮರ ತತ್ವಗಳು ಒಂದು ದಿನ ಇಡೀ ಭೂಲೋಕದಲ್ಲೆಲ್ಲ ಅನುಸರಿಸಲ್ಪಡುವವೆಂತಲೂ, ಮಹಾತ್ಮರ ಮಹಿಮೆಯು ಅಗಾಧವಿರುತ್ತದೆಂತಲೂ, ಅದ್ದರಿಂದಲೇ ತಾವು ಮಹಾತ್ಮರ ಅಂಧ ಭಕ್ತರಾಗಿರುವೆವಾಗಿಯೂ ನುಡಿದರು. ಹಳ್ಳಿಗಳೊಳಗಿನ ಚಿಕ್ಕ-ಪುಟ್ಟ ಕೈಗಾರಿಕೆಗಳ ಪುನರುಜ್ಜೀವನ ಮಾಡಿ ಬಡವರ ಸಾಂಪತ್ತಿಕ ಸ್ಥಿತಿಯನ್ನು ಕೆಲ ಮಟ್ಟಿಗಾದರೂ ಸುಧಾರಿಸಿಕೊಳ್ಳುವದವಶ್ಯವೆಂದು ಹೇಳಿದರು. ಜನಬಲವಿಲ್ಲದ ರಾಷ್ಟ್ರಗಳಲ್ಲಿ ಮಾತ್ರ ಕಾರಖಾನೆಗಳು ಕ್ಷೇಮಂಕರವೆಂತಲೂ, ಕಾರಖಾನೆ[illegible] ಕೈಗಾರಿಕೆಯಿಂದ ಜೀವನ ಸಾಗಿಸುವ ಬಹ ಜನರು ನಿರುದ್ಯೋಗಿಗಳಾಗುತ್ತಾರೆಂತಲೂ ವಿವರಿಸಿ ಹೇಳಿದರು. ಪೂರ್ಣ ಸ್ವರಾಜ್ಯದ ಧ್ಯೇಯವನ್ನು ಬಿಡದೆ ದೃಢ ಸಂಕಲ್ಪದಿಂದ ಅನುಸರಿಸಿರೆಂದು ಬೋಧಿಸಿ ಇನ್ನೊಮ್ಮೆ ಎಲ್ಲರ ಆಭಾರ ಮನ್ನಿಸಿ ಪರಿಷತ್ತಿನ ಕೆಲಸಕ್ಕೆ ಪ್ರಾರಂಭ ಮಾಡಿಕೊಟ್ಟರು. ಆ ನಂತರ ಸ್ವಾಗತಾಧ್ಯಕ್ಷ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ತಮ್ಮ ಸ್ವಾಗತ ಭಾಷಣವನ್ನು ಓದಿ ತೋರಿದರು. ಸ್ತ್ರೀಯರಿಗೆ ಸಾರ್ವಜನಿಕ ಕಾರ್ಯ ಮಾಡಲು ಪೂರ್ಣ ಅವಕಾಶ ಕೊಟ್ಟ ಸಂಸ್ಥೆಗಳಲ್ಲಿ ರಾಷ್ಟ್ರೀಯ ಸಭೆಯೇ ಪ್ರಧಾನ ಸಂಸ್ಥೆಯೆಂದೂ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ತ್ರೀ-ಪುರುಷರು ಕೂಡಿಯೇ ಉತ್ಸಾಹದಿಂದ ಹೋರಾಡಿದ್ದನ್ನು ನೋಡಿ ಜಗತ್ತು ಮರುಳುಗೊಂಡಿತಾಗಿಯೂ ಬಣ್ಣಿಸಿ ಹೇಳಿ, ದೇಶಕ್ಕಾಗಿ ದುಡಿದ ಸೇವಕರಿಗೆ ವಂದನೆಗಳನ್ನರ್ಪಿಸಿದರು. ಪೂರ್ಣ ಸ್ವಾತಂತ್ರ್ಯ ದೊರೆತನಕ ಸುಮ್ಮನಿರಬಾರದಾಗಿ ಎಚ್ಚರಿಕೆ ಕೊಟ್ಟರು. ಕಾರವಾರ ಜಿಲ್ಲೆಯಲ್ಲಿ ನಡೆದ ಕರನಿರಾಕರಣೆಯ ಕದನದ ಗೌರವಪೂರ್ಣ ಉಲ್ಲೇಖ ಮಾಡಿದರು. ರೈತರ ಸ್ಥಿತಿಯು ಕೆಂಗೆಟ್ಟು ಹೋಗಿರುತ್ತದೆಂತಲೂ ತೆರಿಗೆ ತೆರಲಾರದೆ ರೈತರು ಕರನಿರಾಕರಣೆಯ ಚಳವಳ ಕೈಕೊಳ್ಳಬೇಕಾಯಿತೆಂತಲೂ, ತೆರಿಗೆ ಹೊರೆ ಹಗುರ ಮಾಡುವದಗತ್ಯವಿರುವದಾಗಿಯೂ ತೋರಿಸಿಕೊಟ್ಟರು. ಆ ಮೇಲೆ ಶ್ರೀಮತಿಯವರು ಲೋಕಪ್ರತಿನಿಧಿ ಸಭೆಯ ವಿಷಯದ ವಿಸ್ತೃತ ಚರ್ಚೆ ಮಾಡಿ, ಸರಕಾರದ ಕಡೆಯಿಂದ ಇಂಥ ಸಭೆ ಕರೆಯುವ ಪ್ರಯತ್ನ ಅಸಾಧ್ಯವೆಂತಲೂ, ಒಂದಾನು ವೇಳೆ ಸರಕಾರವು ಕರೆದರ ಆ ಸಭೆಯಿಂದ ಸಾರ್ವಜನಿಕರ ಕಲ್ಯಾಣವಾಗದೆಂತಲೂ ಅಭಿಪ್ರಾಯಪಟ್ಟರು. ಈಗಿನ [illegible]ಯು ಮಧ್ಯಮ ವರ್ಗದವರ ಹಿತವನ್ನೇ ಸಾಧಿಸುತ್ತದೆ; ಸಾಮಾನ್ಯ ಜನರ ಹಿತದ ಕಡೆಗೆ ದುರ್ಲಕ್ಷ್ಯವಾಗುತ್ತದೆಂದು ನುಡಿದರು. ಸಾಮ್ರಾಜ್ಯದ ಶೃಂಖಲೆಗಳೊಳಗಿಂದ ದೇಶದ ಬಿಡುಗಡೆಯಾದ ಮೇಲೆ ಸ್ವತಂತ್ರರಾದ ಜನರೇ ಲೋಕಪ್ರತಿನಿಧಿ ಸಭೆಯನ್ನು ಕರೆಯತಕ್ಕದೆಂತಲೂ, ಆ ಸಭೆಯೇ ಸಮಸ್ತ ಪ್ರಜೆಗಳ ಕಲ್ಯಾಣ ಸಾಧಿಸುವದೆಂತಲೂ ವಿವರಿಸಿದರು. ಸಂಸ್ಥಾನಗಳ ವಿಷಯದಲ್ಲಿ ರಾಷ್ಟ್ರೀಯ ಸಭೆಯವರ ತಟಸ್ಥ ವೃತ್ತಿಯು ಶ್ರೀಮತಿಯವರಿಗೆ ಮಾನ್ಯವಿಲ್ಲ. ಸಂಸ್ಥಾನದ ಪ್ರಜೆಗಳಿಗೆ ಸ್ವಾತಂತ್ರ್ಯದ ಚಳವಳಿಯಲ್ಲಿ ಸೇರಿಸಿಕೊಂಡರೇನೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಯ ಸಿಗುವದೆಂದು ಅವರ ಮತವಿರುತ್ತದೆ. ತಮ್ಮ ಭಾಷಣದ ಕೊನೆಯಲ್ಲಿ ಶ್ರೀಮತಿಯವರು ಕರ್ನಾಟಕ ಪ್ರಾಂತದ ಏಕೀಕರಣ ವಿಷಯವನ್ನೆತ್ತಿ ಕರ್ನಾಟಕ ಪ್ರಾಂತವು ಸ್ವತಂತ್ರ ಪ್ರಾಂತವಾಗಲು ಎಲ್ಲ ಬಗೆಯಿಂದ ಅರ್ಹವಿರುತ್ತದೆಂದು ತೋರಿಸಿಕೊಟ್ಟು ಎಲ್ಲರಿಗೂ ಸ್ವಾಗತ ಮಾಡಿದರು. ಆ ಮೇಲೆ ಅಧ್ಯಕ್ಷರ ಭಾಷಣವಾಯಿತು.

(ಭಾಷಣದ ವಿಸ್ತೃತ ಸಾರಾಂಶ ಬೇರೆ ಕಡೆಯಲ್ಲಿ ಕೊಟ್ಟಿದೆ.)

Notice.

The following Motor trucks etc. belonging to Shri Chitrapur Motor Coy. Ltd. Shirali (in liquidation) will be disposed of by auction on 26th May 1935 at 4 P. M. in the Coy.'s office at Shirali. Inteuding bidders are requested to be present at the auction.

1. Bus No. X 5766 Ford, 30 Cwt. 1929 model without body, kept at Kumta in Shivrao Fitters garrage.
2. " X 2375 one-ton Chevrolet 1929 model.
3. " Y 7465 one-ton Graham Bros.' truck 1727 model.
4. " Z 3806 one-ton truck Graham Bros' 1926 model.
5. Spare parts etc.

Nos. 2, 3, 4 & 5 have been kept at Shirali.

12th May, 1935.

Sd/- ***R. N. SHASTRI.***
Liquidator
Shri Chitrapur Motor Coy. Ltd.
SHIRALI

For Sale.

One Harvey Foster Vulcanizer Standard Model A complete with blow lamp used for three months only. For price and particulars write to:- **K. R. KAMAT,**
ANKOLA. [N. Kanara]

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೇ ಸಂಸ್ಥೆಗೆ ಉತ್ತೇಜನ ಕೊಡಿ!!!

ಪೋಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಘ.

ಪಾಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನು ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

ವಿ. ಸೂ. 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪಾಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು.'

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಖ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು:- ಮೆಸರ್ಸ ಜೀವನ ಏಜನ್ಸಿ, ಕಾರವಾರ.

ಸ್ಥಾನಿಕ ವೃತ್ತಾಂತ.

ಕುಮಟಾ— ೪೯ ೬ಹಳ. ಆಗಾಗ್ಗೆ ಮೋಡಗಳು ಗುತ್ತಿವೆ ಗುರುವಾರ-ಶುಕ್ರವಾರ ರಾತ್ರಿ ತುಸು ಮಳೆಯೂ ಆಯಿತು ಮಾನಸೂನಿಕಯಾಗುವದರಲ್ಲಿ ತೋರುವ ಮುಂಚಿನ ಮುದುವೆ ಚಪ್ಪರಗಳಲ್ಲ ಕಷ್ಟ

ಕಳೆದ ವಾರ ಬೋಟಿಯು ಮೇಲಿನ ಸರಕು ಬಂದರಕ್ಕೆ ತರುವಾಗ ಒಂದು ದುಬ್ಬೆಯು ಸಂಗಮದ ಹತ್ತರ ನೀರಲ್ಲಿ ಮುಳುಗಿ ಸಾವಿರಾರು ಎಲ್ಲ ನೀರಲ್ಲಿ ತೊಪ್ಪು ಹೋಯಿತು.

ಮೋಟಾರ ಗಾಡಿಗಳ ತೂಕದ ಕುರಿತು ಟೋಲ ನಾಕೆಯವರಿಗೂ ಮೋಟಾರ ಮಾಲೀಕರಿಗೂ ವಿವಾದ ನಡೆದಿದೆ ೧ ಟನ್ ತೂಕದ ಮೋಟಾರ ಗಾಡಿಗಳಿಗೆ ಟೋಲ ತೆರಲು ೦-೮-೦, ೧ ಟನ್ನಿಗೆ ಮಿಕ್ಕಿದ ತೂಕದ ಗಾಡಿಗಳಿಗೆ ೦-೧೨-೦, ಈ ಬಗ್ಗೆ ವಾದವಿಲ್ಲ ತಮ್ಮ ಮೋಟಾರ ಗಾಡಿಗಳ ತೂಕ ಒಂದೇ ಟನ್ನು, ತಾವ್ರ ೮ ಆಣೆ ಹಾಕಲು ಮಾತ್ರ ಕೊಡುವೆವು, ಎಂದು ಮೋಟಾರ ಮಾಲೀಕರನ್ನುತ್ತಾರೆ ಈ ಜಿಲ್ಲೆಯಲ್ಲಿ ಒಂದು ಟನ್ನಿನ ಗಾಡಿಗಳಿಲ್ಲ, ಎಲ್ಲ ಬಸ್ಸುಗಳು ೧|| ಟನ್ನ ತೂಕದವು, ೧೨ ಆಣೆಯಂತೆ ಹಾಕಲು ಕೊಡಬೇಕೆಂದು ಟೋಲ ಕಾಂಟ್ರ್ಯಾಕ್ಟರರ ಹಟ ದುಂಬು ಯಲ್ಲಿರುವ ಮೋಟಾರ ಗಾಡಿಗಳ ಮಿತಿಯ ಅಧಿಕಾರಿಗಳಿಗೆ ಕೇಳಿದರೆ ಅವರು ಬಸ್ಸುಗಳ ಮೂಲ ತೂಕ ೧|| ಟನ್ನ ಇರುತ್ತದೆಂದು ಹೇಳುತ್ತಾರೆ ಗಾಡಿಗಳ ಮೂಲ ತೂಕ ೧|| ಟನ್ನಿರಬಹುದು, ಆದರೆ ಪೋಲೀಸ ಅಧಿಕಾರಿಗಳು ಆ ತೂಕ ಮನ್ನಿಸದೆ, ಎಲ್ಲ ಗಾಡಿಗಳು ೧ ಟನ್ನ ತೂಕದವೆಂದು ಹಿಡಿದು ೧೬ ಪ್ರಯಾಣಿಕರನ್ನು ಮಾತ್ರ ಒಯ್ಯಗೊಡುತ್ತಾರೆ ೧|| ಟನ್ನಿನ ತೂಕ ನಿಜವಾದರೆ ೨೨ ಪ್ರಯಾಣಿಕರನ್ನು ಒಯ್ಯಲು ಅಪ್ಪಣೆ ಕೊಡಬೇಕಿತ್ತು, ನಾವು ಒಂದು ಟನ್ನಿನ ಹಾಸಲು ಮಾತ್ರ ಕೊಡ ಮೇವೆಂದು ಮೋಟಾರ ಮಾಲೀಕರ ಅಂಬೋಣ ಪ್ರಯಾಣಿಕರ ಸಂಖ್ಯೆ ನಿಯಮಿಸುವ ಅಧಿಕಾರ ಮಾತ್ರ ಪೋಲೀಸರದು; ತೂಕ ಪಡ್ಡ-ಕಡಿಮೆ ಮಾಡುವ ಅಧಿಕಾರ ಅವರಿಗಿಲ್ಲ, ಟೋಲ ಕಾಯಿದೆ ಪ್ರಕಾರ ಮೂಲ ತೂಕದ ಮೇಲೆ ಹಾಸಲು ತೆಟ್ಟಬೇಕಾದ್ದು ಎಂಬುದಾಗಿ ಟೋಲ ಕಂಟ್ರ್ಯಾಕ್ಟರರ ಸಾಧನೆಯಿರುತ್ತದೆ ಈ ವಾದ ವಾ|| ಕಲೆಕ್ಟರ ಸಾಹೇಬರ ತನಕ ಮುಟ್ಟಿ ಸಾಹೇಬರು ಮೋಟಾರ ಮಾಲೀಕರ ಅಂಬೋಣ ಎತ್ತಿ ಹಿಡಿದು ಎಲ್ಲ ಮೋಟಾರ ಗಾಡಿಗಳ ಮೇಲೆ ೦-೮ ಆಣೆಯಂತೆ ಟೋಲ ವಸೂಲ ಮಾಡಬೇಕಾಗಿ ತಾ ೧-೫-೩೫ಕ್ಕೆ ಎಲ್ಲ ಕಾಂಟ್ರ್ಯಾಕ್ಟರರಿಗೆ ಹುಕುಮು ಕೊಟ್ಟಿರುತ್ತಾರೆ ಆದೇ ಎರಡು ದಿವಸಗಳ ಮೇಲೆ ಧಾರವಾಡ ಜಿಲ್ಲೆಯ ಕಲೆಕ್ಟರರು ಮೇಲಿನ ಹುಕುಮಿಗೆ ಸರಿ ವಿರುದ್ಧವಾದ ಹುಕುಮು (*P. W. D. 476*) ಹೊರಡಿಸಿ ೧೨ ಆಣೆಯಂತೆ ಟೋಲ ವಸೂಲ ಮಾಡಬೇಕಾಗಿ ಕಾಂಟ್ರ್ಯಾಕ್ಟರರಿಗೆ ತಿಳಿಸಿದ್ದಾರೆ. ಧಾರವಾಡ ಜಿಲ್ಲೆಯೊಳಗಿನ ಗಾಡಿಗಳು ಸರ್ವಸಾಧಾರಣವಾಗಿ (*generally*) ೧|| ಟನ, ತೂಕದವಿರುವದರಿಂದ ೧೨ ಆಣೆ ಟೋಲ ವಸೂಲ ಮಾಡಬೇಕಂತೆ! ಇದು ಮೂವ ಲಕ್ಷ್ಯವೆಂದು ತಿಳಿಯುವದಿಲ್ಲ. ಈ ಜಿಲ್ಲೆಯೂ, ಧಾರವಾಡ ಜಿಲ್ಲೆಯೂ ಒಂದೇ ಬ್ರಿಟಿಶ ರಾಜ್ಯದೊಳಗಿನ, ಒಂದೇ ಅಧಿಪತ್ಯಕ್ಕೆ ಒಳಪಟ್ಟ ಜಿಲ್ಲೆಗಳು! ಎರಡೂ ಜಿಲ್ಲೆಗಳಲ್ಲಿ ತೂಕದ ಪರಿಮಾಣ ಒಂದೇ! ಟೋಲ ಕಾಯಿದೆ ಸಹ ಒಂದೇ!! ಹೀಗಿರುವಾಗ ಜಿಲ್ಲೆ ಒದಲಿದಂತೆ ಗಾಡಿಗಳ ತೂಕ, ಹಾಸಲು ಒದಲು ತ್ತವೆಂದು ತಿಳಿಯಬೇಕೇ?

ಉಪ್ಪಿನಪಟ್ಟಿಣದೊಳಗಿನ ವಿಷೂವಿನಲ್ಲಿ ಕಾಣೆ ಕಟ್ಟಿ ಉಪ್ಪಿನ ಸಂಘದವರು ಉಪ್ಪಿನ ದರ ಇಳಿಸಿದ್ದಾರೆ ಸಂಘದಿಂದ ಹೊರಹೋದ ಉಪ್ಪಿನ ಮಾಲೀಕರು ತಮ್ಮ ಉಪ್ಪು ಉಪ್ಪಿನಪಟ್ಟಿಣದಲ್ಲಿ ಮಾರಹತ್ತಿದ್ದರಿಂದ ಸಂಘದವರು ದರ ಇಳಿಸಿದ್ದಾರೆ! ಬೇರೆಕಡೆಗಳಲ್ಲಿ ಇಳಿಸಿರುವದಿಲ್ಲ!

ಪ್ರಾಂತ ಸಾಹೇಬರು ತಪಾಸಣೆ ಗೆ ಉಪ್ಪಿನಪಟ್ಟಣಕ್ಕೆ ಹೋದಾಗ ಕೆಲ ಜನರು ಅವರಿಗೆ ಭೆಟ್ಟಿಯಾಗಿ ಮುಲಿಕೊಂಡದ್ದರ ಹೊಲಗಳಿಗೆ ನೀರು ಸಿಗುತ್ತದೆಂಬ ಅನುಕೂಲತೆಯನ್ನು ಎಣಿಸಿ ತೀರ್ವ ಲಕಂಣಯಾಗಿತ್ತಾಗಿ ಯ ಸ ಹುಲಿಕೂಲದ ಕ ಗಿದುಹೋಗಿ ಈಗ ನೀರು ಸಿಗುವದಿಲ್ಲವಾದರೂ ಸರಕಾರದವರು ಮುಂಚಿನ ಆಕಾರ ಯಂತೆ ತೀರ್ವ ವಸೂಲ ಮಾಡುತ್ತಿದ್ದಾರಾಗಿಯೂ ದೂರಿ ಕೊಂಡರು. ಪ್ರಾಂತ ಸಾಹೇಬರು ಗ್ರಾಮಸ್ಥರನ್ನು ಕರೆದು ಕೇಳಲಾಗಿ, ತೀರ್ವಯಲ್ಲಿ ನೀರಾರಿಗೆ ನೀರಿರುವದೆಂದು ಸರಕಾರ ದಾಖಲೆಗಳ ಮೇಲಿಂದ ಕಂಡುಬರುತ್ತದಾಗಿ ಗ್ರಾಮಸ್ಥರು ಹೇಳಿದರು ಹುಲಿಕೂಲದ ನೀರು ಹೊಲಗಳಿಗೆ ಒಯ್ಯಲು ಹಿಂದೆ ಕಟ್ಟಿದ ಒಂದು ಪಾರು ಹದಗೆಟ್ಟಿದೆ ಎಂದು ಕುರುಹು ಇನ್ನೂ ಉಂಟು ಪ್ರಾಂತ ಸಾಹೇಬರು ವಿಚಾರ ಮಾಡಿ, ಅಸ್ಟ್ಯಾಯದಿಂದ ವಸೂಲಾದ ನೀರಾರಿಗೆ ಯನ್ನು ತಿರುಗಿ ಕೊಡಿಸಬೇಕಾಗಿಯೂ, ಮುಂದೆ ವಸೂಲ ಮಾಡದಂತೆ ಜಾಗ್ರತೆ ಕೊಳ್ಳಬೇಕಾಗಿಯೂ ಹುಕುಮ

ಮಾಡಿದ್ದರೆ ಮಾಡುವುದಕ್ಕೆ ಅರೆಮನೆಯವರು ಕುಂಟ ಚಟಕೆರ ಕೇರಿಯಲ್ಲಿ ಒಹಳ ತೊಂದರೆ ಕೊಡುತ್ತಾನಂತೆ. ಎರಡು ಸಲ ಗುಂಡಾರು ಇಲ್ಲದಿದ್ದಾಗ ಒಳ ಹೊಕ್ಕು ತ್ತಾನಂತೆ. ಹೆಂಗಸರು-ಮಕ್ಕಳು ಭಯಪಡುತ್ತಾರೆ ಪೋಲೀಸರು ಆವನ ಬಂದೋಬಸ್ತ ಮಾಡಲಾರರೇ?

ಕಾರವಾರ— (ತಾ ೧೮ ೫-೩೫) ಜುಬಿಲಿ ಉತ್ಸವವ ಇಲ್ಲಾ ನಡೆದ ಪರೇಡು, ಮೆರವಣಿಗೆ ಬೋನ್‌ಫಾಯರ್, ಪೋಲೀಸ ಪರೇಡ, ದೀಪೋತ್ಸವ ಮುಂತಾದ ಕಾರ್ಯಕ್ರಮಗಳು ಕೊನೆಗೊಂಡವು ಇಂತಿ ಬೆಗ್ ನಗ್ಗರೆ ಕಾರ್ಯಕ್ರಮಗಳು ನಡೆದಿದ್ದವು ಬಾರಿ ಹುಡುಗರಿಗೆ ಮಿಠಾಯಿ ಹಂಚಿದರು ಬಾಡದೊಳಗಿನ ಹರಿಜನರ ಶಾಲೆಯ ಹುಡುಗರಿಗೆ ಮಾತ್ರ ಮಿಠಾಯಿ ಕೊಡಿ ಕೊಟ್ಟಿಲ್ಲವೆಂದು ತಿಳಿಯುತ್ತದೆ' ಜುಬಿಲಿ ಮಿಠಾಯಿ ತಿಂದು ಹರಿಜನರು ತಮ್ಮ ಬಾಯಿ ಸವಿ ಮಾಡಬಾರದೇ?

ಮ್ಯುನಿಸಿಪಾಲಿಟಿಯ ಪ್ರಸಿಡೆಂಟರಾದ ರಾ|| ಲಿಂಗಪ್ಪ ಇವರ ಪ್ರಯತ್ನದಿಂದ ಹರಿಕಂತ್ರ ಕೇರಿಯಲ್ಲಿ ಒಂದು ಹೊಸ ಪ್ರಾಥಮಿಕ ಶಾಲೆ ತೆರೆಯಲ್ಪಟ್ಟಿದೆ ಬಾಡ ಕೇರಿಯಲ್ಲೂ ಒಂದು ಶಾಲೆ ಬೇಕು ಆ ಬಗ್ಗೆ ಯಾರಾದರೂ ಯತ್ನ ಮಾಡುವರೇ?

ನಮ್ಮ ಜಿಲ್ಲೆಯಲ್ಲಿ ಜುಬಿಲಿ ಪದಕಗಳು ಹಲವರಿಗೆ ಅಧಿಕಾರಿಗಳಿಗೆ ಮಾತ್ರ ದೊರಕಿದರಂತೆ ಸಿಕ್ಕಿವೆ. ಆ ಪದಕ ದ ಬಹುಮಾನ ದೊರಕಿದ ಬಿನ್‌ಸರಕಾರಿ ಗೃಹಸ್ಥರು ರಾ|| ಬ ಎಸ್. ಗಂಗೊಳ್ಳಿ, ಎಲ್. ಎಲ್. ಬಿ. ಇವರ ಒಬ್ಬರೇ.

ಕಗ್ಗ ನಾನೆಲ್ಲಿದ್ದರೆ ಒದಿನ ತ್ವಾರೆ - (ಜಿಲ್ಲಾ ಕಾ ಕೋ ಕ ಸ) ರಾ|| ಗಂಗೊಳ್ಳಿಯವರು ತಮ್ಮದೊಂದು ಕೂಟ ಮಾಡಿ ಅಧ್ಯಕ್ಷರ ರಾ|| ಕರಿಯಪ್ಪನ ಕೊಡ ಕಾರ್ಯಕ್ಕಿತ್ತಿದ್ದರೆಂದು ಹಿರಿ ಆದರೆ ಸರಿಯಾ ಮಾ ಜಿಗಳಿಕೆ ಕ ಎ ಒ ಪ್ರಸ್ಸ ಒಂದ ಸಿಹಿಸಲ ಅವರ ಒಂದೊಂದಿಗೆ ಎಳೆದೊಂದು ಅ ರು ಸಾರೆ ನನ್ನ ಬದ ತಾ ಎನಿನ ಜರ ನಬರ ಪರಿ ಯ ಸಕ ರಾ|| ಪ್ರಭು ಎಂಬವರು ಬೋರ್ಡಿನ ನಿಯಮ ಮಸ್ಕ್ಯ ವಾಗಿ ಕೆಲವು ವ್ಯಕ್ತಿಗಳ ಹುಡುಗರಿಗೆ ತಮ್ಮ ಶಾಲೆಯಲ್ಲಿ ಸೇರಿಸಿಕೊಂಡರು ಪ್ರ್ಯಾಕ್ಟಿಸ್ಸಿಂಗನೆಂಬ ಭೇದವನ್ನು ಶಾಲೆಗಳಲ್ಲಿ ಎಸಗುವದೆಂದು ಬೋರ್ಡಿನ ನಿಯಮವಿದ್ದಂತೆ ಅವರು ಹಾಗೆ ಮಾಡಬೇಕಾಯಿತು ಸ್ಥಳಿಕ ಹರಿಕರ ಬ್ರಾಹ್ಮಣರಿಗೆ ಇದು ಸೇರಲಿಲ್ಲ ಅವರು ತಮ್ಮ ಹುಡುಗರನ್ನು ಶಾಲೆಯಿಂದ ಹಿಂತೆಗೆದುಕೊಂಡರು. ಶಾಲಾ ಪಂಚರಿಗೆ ರಾಜೀನಾಮೆ ಕೊಡಹತ್ತಿದರು ೮ನೇ ಭಾಗಗಳು ಧ್ಯೆರ್ಯ ಮಾಡಿ ನಿಯಮವನ್ನು ಟೀಕಿಸಿ ಮಾಡಿಕೊಂಡರು ಹಿಂತರು. ಮುಂದೆ ಬೇರೆ ಪಂಚರ ನೇಮಣೂಕಿ ಸಹ ಆಯಿತು ಆದರೆ ಸ್ಥಾನಿಕ ಹರಿಕರ ಕುಚೋದ್ಯಗಳು ನಡೆದು, ಅವರಿಬ್ಬರು ಶಿಕ್ಷಕರನ್ನಾಗಿ, ಬೋರ್ಡಿನವರು ರಾ|| ಪ್ರಭುಗಳಿಗೆ ಬೇರೆ ಕಡೆಗೆ ವರ್ಗ ಮಾಡಿ ಕಾಯ ಮಾಡಿದ್ದಾರೆ ವರ್ಗಾವರ್ಗಿಯ ಬಗ್ಗೆ ಹೊರಿಸಿದ ಕಾರಣ ಬೇರೆ ಕೊಟ್ಟಿದ್ದಾರೆ' ಆದರೆ ಅಂತಸ್ಥ ಕಾರಣ ಮೇಲಿನದೇ ಎಂದು ಬಲ್ಲವರು ಬಲ್ಲರು. ಬೋರ್ಡಿನ ನಿಯಮವನ್ನು ಪ್ರಾಮಾಣಿಕ ಬುದ್ಧಿಯಿಂದ ಪಾಲಿಸಿದವರಿಗೆ ಒಳ್ಳೇ ಇನಾಮು ಸಿಕ್ಕಿತು!

ಸದಾಶಿವಗಡ-ಕದ್ರಾ ರಸ್ತೆಯು ಒಡೆದು ಎರಡು ರಸ್ತೆಗಳಾಗುವಲ್ಲಿ ಒಂದು ಸರಕಾರಿ ಬಾವಿ ಸಂಕರ ದೊಳಗೆ ಸಮೃದ್ಧ ಕರು ಮಹಮ್ಮದ ಖಾಜಾಜಿ ಇಲ್ಲ ಬಾಗಿ ಎಂಬ ಬಿಯರನ್ನೂ ಬಾವಲಿಯ ಪಾರ್ಶ್ವ ಪಡಿ ಕೊಂಡಿದ್ದಾರೆ ತಾವು ಸತ್ತ ಮೇಲೆ ತಮ್ಮ ಗೋರಿಯನ್ನು ತಮ್ಮ ಪಾರ್ಶ್ವದ ಭೂಮಿಯಲ್ಲೇ ಕಟ್ಟಗೊಡಬೇಕಾಗಿಯೂ, ಪ್ರತಿ ವರ್ಷ ತಮ್ಮ ಶ್ರಾದ್ಧದ ದಿನ ಗೋರಿಯ ಮುಂದೆ ಗೋಹತ್ಯ ಮಾಡಲು ಪರವಾನಗಿ ಕೊಡಬೇಕಾಗಿಯೂ ಈ ಅವಲಿಯಾರು ಮೆ|| ಕಮಿಶನರ ಸಾಹೇಬರ ಕಡೆ ಅರ್ಜಿ ಮಾಡಿರುತ್ತಾರಂತೆ, ಈ ವರೆಗೆ ಇಲ್ಲಿ ಹಿಂದು-ಮುಸಲ್ಮಾನರ ಕಲಹ ವಿದ್ದಿಲ್ಲ ಇದರಿಂದ ಕಲಹದ ಬೀಜವೂರಾಗಲಿಕ್ಕಿದ್ದೆ ಅಕ್ಕೆ ಈ ಬೀಜ ನಮ್ಮ ಕಡೆ ಬೀಜವಾಗಿಯೂ, ಅವಲಿಯಾ ರವರ ಅರ್ಜಿಯನ್ನು ತಿರಸ್ಕರಿಸಬೇಕಾಗಿಯೂ ಸದಾಶಿವಗಡ ಪಕ್ಕರೆ ಹಳ್ಳಿಗಳೊಳಗಿನ ಸನಾತನ ಜನರು ಕಮಿಶನರ ಸಾಹೇಬರಿಗೆ ಬಿನ್ನೈಸಿಕೊಂಡಿದ್ದಾರೆ

ಹಳಿಯಾಳ— ಜುಬಿಲಿ ದಿನದ ಪ್ರೀತ್ಯರ್ಥ ತಾ ೬ನೇ ಸೋಮವಾರ ಬೆಳಿಗ್ಗೆ ಚರ್ಚದಲ್ಲಿ ಪ್ರಾರ್ಥನೆ, ೮ ಕ್ಕೆ ಯೂನಿಯನ್ ಜೆಕ್ಕಿಗೆ ಪೋಲೀಸರ ಅಭಿವಾದನ ಆ ಮೇಲೆ ಬಾದಶಹರ ಛಾಯಚಿತ್ರದ ಮೆರವಣಿಗೆ, ಹೀಗೆ ಕಾರ್ಯಕ್ರಮಗಳಾದವು ಮುಂಗಳವಾರ ಬಾಲ-ಬಾಲಿಕೆಯರ ಆಟಗಳಾದವು ಬುಧವಾರ ಭಕ್ತೀನ ಸನ್ಮಾನಂಭವಾದ ಮೇಲೆ ರಾ|| ಗಿಂಡೇ ವಕೀಲರವರ, ರಾ|| ನಿಡಾ ಇವರೂ ಭಾಷಣ ಮಾಡಿ ಯಬೋಧ ಮಾಡಿ, ಬ್ರಿಟಿಶ ಆಳಿಕೆಯಿಂದ ಹಿಂದುಸ್ತಾನಕ್ಕಾದ ಕಲ್ಯಾಣದರಂಪರೆಯನ್ನು ಬಣ್ಣಿಸಿದರು ಕೊನೆಗೆ ಹುಡುಗರಿಗೆ ಮಿಠಾಯಿ ಹಂಚಲಾಯಿತು

ಹೇಳಿ ಗಳಿ ಭ್ರಷ್ಟ ಮಾಡಿದ ಬಗ್ಗೆ ಗಂಡಿಕ್ಕೆಯವರು ಮಾಡಿದ ಫಿರ್ಯಾದಿಯಲ್ಲಿ ಮ್ಯಾಜಿಸ್ಟ್ರೇಟರು ನಿರ್ದೋಷಿಗಳೆಂದು ನಿರ್ಣಯಿಸಿಬಿಟ್ಟಿರುತ್ತಾರೆ

ಅಂಕೋಲಾ— ಶ್ರೀ ದಿವಾಕರರು ಈ ಜಿಲ್ಲೆಯಲ್ಲಿ ಪ್ರವೇಶ ಮಾಡದಂತೆ ತಮ್ಮ ಮೇಲೆ ಹೊರಡಿಸಿದ ಪ್ರತಿಬಂಧದ ಹುಕುಮನ್ನು ಪಾಲಿಸಬೇಕೋ, ಬಾರದೋ ಎಂಬ ಬಗ್ಗೆ ಮಹಾತ್ಮರ ಕಡೆ ಆಲೋಚಿಸಲಾಗಿ ಕಳೆಯುತ್ತದೆ ಈಗಿನ ಪರಿಸ್ಥಿತಿಯಲ್ಲಿ ಹುಕುಮನ್ನು ಪಾಲಿಸುವದೇ ಕರ್ತವ್ಯವೆಂದು ಮಹಾತ್ಮರು ತಿಳಿಸಿದ್ದಾರಂತೆ

ಕಳೆದ ಸತ್ಯಾಗ್ರಹದ ಸಮಯದಲ್ಲಿ ಕೆಲವು ಅಧಿಕಾರಿಗಳು ಮಾಡಿದ ಮಾತಕ್ಕೆ ಬಾಯಿಡಿಸುತ್ತಿದೆ ಆದಿನಿಂ

Siromani Udipi Narayanacharya,
CHAUKHAMBA, BENARES CITY.



ಮಹಾಶಯರೇ, ಮದ್ರಾಸಿನೆಲ್ಲೋರೆ ಪ್ರಸಿದ್ಧವಾದ ರಾ|| ದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರೆಂದು ಕ್ಕಿ. 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇರು ಸಗ್ಗದಾಗುತ್ತ ಇಗುತ್ತ ಕ್ರಿಯೇ ಹೆಚ್ಚುವದು. ಕಾರಿ ಸರ 32 ಪರ1ಕ್ಕೆ ರೂ.0-8-0ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ. 3 8 0ರಿಂದ 50 ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ಸ್ಟಾಂಪು ಕಳಿಸುವರೆ, 1 ಕಾಶಿ ನಕ್ಷೆ, 1 ವಿಶ್ವೇಶ್ವರನ ಪಠ ಸನ್ನ ಕೆಟಲಾಗು ಸಹ ಉಚಿತ ಕಳಿಸಲಾಗುವದು

ಪತ್ತೆ— ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಕಾಶೀ ಕ್ಷೇತ್ರ

ಕರ್ನಾಟಕದಲ್ಲಿ ಸರಕಾರದಿಂದ ಜಪ್ತಾದ ಭೂಮಿಯನ್ನು ಯಾ ಆಸ್ತಿಯನ್ನು ಲಿಲಾಂವು ಮಾಡಿ ಹಾಗೆ ಅವುಗಳನ್ನು ಕರನಿರಾಕರಣೆ ಮಾಡಿದವರಿಗೂ ಅವರ ಪರಿವಾರದ ಆಪ್ತೇಷ್ಟರಿಗೂ ಬಿಟ್ಟುಕೊಡದಾಗಿ ಅಧಿಕಾರಿಗಳಿಗೆ ಗುಪ್ತ ಹುಕುಮಿನಾಗಿ ತ್ವಾಗಿ ತಿಳಿಯುತ್ತದೆ. ಈ ಹುಕುಮಿಗೆ ವಿರುದ್ಧವಾಗಿ ಅಲ್ಲಿ ಕೆಲವು ಅಧಿಕಾರಿಗಳು ನಡೆದರೆಂದು ಕಂಡು ಬರುತ್ತದೆ. ಹಿರೇಕೆರೂರ ಬೀರಣ್ಣ ನಾಯ್ಕರ ಜಪ್ತ ಭೂಮಿಯು ಲಿಲಾಂವಿಗಿಟ್ಟಿತ್ತು. ಅದನ್ನು ಬೀರಣ್ಣ ನಾಯ್ಕರ ಹೆಂಡತಿಯೇ ಕೊಂಡುಕೊಂಡಳು. ಸದ್ರಿಯವಳು ಹಿರೇಕೆರೂರ ಪಟೇಲರ ಸೊಸೆಯು. ಪಟೇಲರು ಈ ಸಂಗತಿಯನ್ನು ಲಿಲಾಂವಿನ ಅಧಿಕಾರಿಗಳಿಗೆ ತಿಳಿಸಲಿಲ್ಲವೆಂತ ಹೇಳಬರುತ್ತದೆ. ಅಧಿಕಾರಿಗಳು ಗೊತ್ತಿದ್ದು ಬೀರಣ್ಣ ನಾಯ್ಕರ ಹೆಂಡತಿಯ ಸವಾಲನ್ನು ಮಂಜೂರ ಮಾಡಿದರೆಂದು ಜನರು ಹೇಳುತ್ತಾರೆ. ಸತ್ಯಾಗ್ರಹದಲ್ಲಿ ಜಪ್ತಾದ ಭೂಮಿಗಳನ್ನು ಸವಾಲಿಗೆ ಪಡೆಯುವವರು ಅವನ್ನು ಸರಕಾರ ಅಪ್ಪಣೆ ಕೊಡುವ ಪದ್ಧತಿಯ ವಿಷಯದಾಗಿ ಬಂದು ವಿಶೇಷ ಹುಕುಮ ಹೊರಡಿಸಿದ್ದಿರುತ್ತದೆ. ಬೀರಣ್ಣ ನಾಯ್ಕರ ಹೆಂಡತಿಯು ತಾನು ಕೊಂಡುಕೊಂಡ ಜಮೀನನ್ನು ಬೀರಣ್ಣನಿಗೆ ಮಾರಿದ್ದರಿಂದ ಸದ್ರಿ ಸಂಗತಿ ಗ್ರಾಮ ರಿಕಾರ್ಡಿನಲ್ಲಿ ದಾಖಲ ಮಾಡಿಕೊಳ್ಳುವ ಬಗ್ಗೆ ತ್ಯಾಬೆದಾರರಿಗೆ ತಿಳಿಸಲಾಯಿತು. ಮೇಲಿನ ಹೊಸ ಕರಿಗೆ ವಿರೋಧವಾಗಿ ಈ ಪದ್ಧತಿಯಾದದ್ದರಿಂದ ಈ ಬಗ್ಗೆ ಪ್ರಾಂತಸಾಹೇಬರಿಗೆ ತ್ಯಾಬೆದಾರರು ವರದಿ ಕೊಟ್ಟರಂತೆ. ಪ್ರಾಂತ ಸಾಹೇಬರು ಎಲ್ಲ ಕಾಗದ-ಪತ್ರಗಳನ್ನು ತರಿಸಿಕೊಂಡು ಪರಾಂಬರಿಸಿದರು. ಚೌಕಿಯಲ್ಲಿ ಲಿಲಾಂವಿಗೆ ಕೊಂಡುಕೊಂಡವಳು ಬೀರಣ್ಣ ನಾಯ್ಕರ ಹೆಂಡತಿಯೂ, ಹಿರೇಕೆರೂರ ಪಟೇಲರ ಸೊಸೆಯೂ ಆಗಿರುತ್ತಾಳೆಂದು ತಿಳಿದುಬಂತು. ಲಿಲಾಂವಿನ ಅಧಿಕಾರಿಗಳು ಇದೆಲ್ಲ ಅರಿತೇ ಆಕೆಯ ಸವಾಲು ಸ್ವೀಕರಿಸಿದರೆಂದು ಪ್ರಾಂತ ಸಾಹೇಬರಿಗೆ ಮನವರಿಕೆಯಾಯಿತಂತೆ. ಪ್ರಾಂತ ಸಾಹೇಬರು ಆ ಕೂಡಲೆ ಸರ್ಕ್ಯುಲರ ಒಂದನ್ನು ಹೊರಡಿಸಿದರು. ಅಲ್ಲದೆ ಗ್ರಾಮಾಧಿಕಾರಿಗಳೂ ಲಿಲಾಂವಿನ ಅಧಿಕಾರಿಗಳೂ ಮಾಡಿದ ಒಳಸಂಚುಗಳು ಪ್ರಕಾಶಕ್ಕೆ ಬಂದವು! ಏನಾದರೆ, ನಾಲ್ಕಾರು ತಿಂಗಳು ಮುಗಿದ ಬಗ್ಗೆ ಸಾಯಂಕಾಲದಿಂದಾರಿಗೆ ಹೇಳದೆ ಕೇಳದೆ ಒಬ್ಬ ಗ್ರಾಮಸ್ಥರು ಇದೇ ಸರ್ವೆ ನಂಬರಗಳನ್ನು ಸರಕಾರಕ್ಕೆ ಜಪ್ತ (ಫೋರ್‌ಫೀಟ) ಮಾಡಿಸಿದ ಸಂಗತಿ ಬೆಳಕಿಗೆ ಬಂತು! ಲಿಲಾಂವಿನಲ್ಲಿ ಇಂಥ ಭೂಮಿಗಳನ್ನು ಜನರೆಲ್ಲರೂ ನಮ್ಮ ಮನುಷ್ಯನ ಮುಖಾಂತರ ಖರೀದಿಗೆ ಪಡೆದ ಕಥೆಯೂ ಮುಂದೆ ಬಂತು! ಪ್ರಾಂತ ಸಾಹೇಬರು ನಿಷ್ಪಕ್ಷಪಾತದಿಂದ ಈ ಪ್ರಕರಣಗಳನ್ನೆಲ್ಲ ಚೌಕಶಿ ಮಾಡುತ್ತಿದ್ದಾರೆ. ಹಗಲು ರಾತ್ರಿ ಇದೇ ಕೆಲಸ ನಡೆಸಿರುವರಿಗೆ ಹಬ್ಬವಿಲ್ಲ ನಿದ್ರೆಯಿಲ್ಲ, ವಿಶ್ರಾಂತಿಯಿಲ್ಲ! ಅದಾಯ್ತು

ಅಧಿಕಾರಿಗಳಿಗೂ, ಕುಳ್ಳಿಗಾರರಿಗೂ ನಮ್ಮ ಸ್ವಂತ ಮೋಟಾರುಗಳು ಇರಿಸಿ, ಕರೆಸುತ್ತಾರೆ. ಜಬಾನಿ ಬರೆಯಿಸಿಕೊಳ್ಳುತ್ತಾರೆ. ಬಂದವರಿಗೆ ಊಟದ ವ್ಯವಸ್ಥೆಯನ್ನೂ ಇನ್ನು ಬಂಗಲೆಯಲ್ಲೇ ಮಾಡುತ್ತಾರೆ. ಒಬ್ಬ ತಾಲೂಕ ಕಚೇರಿಯ ಕಾರಕೂನರಿಗೂ, ೨-೩ ತ್ಯಾಬೆದಾರರಿಗೂ ನಜರ ಕೈದಿಯಲ್ಲಿಟ್ಟುಕೊಂಡಂತೆ ಇಟ್ಟುಕೊಂಡಿದ್ದಾರೆ. ಅನ್ಯ ಜಬಾನಿ-ಚೌಕಶಿಗಳು ನಡೆದಿವೆ. ಮೂಲ ಕಾರ್ಯಕ್ರಮ ದಂತೆ ಸಾಹೇಬರ ಮುಕ್ಕಾಮು ಧಾರವಾಡದಲ್ಲಿ ಎರಡೇ ದಿವಸವಿತ್ತು. ಆದರೆ ಈಗ ಬಂದು ತಿಂಗಳಾದರೂ ಸಾಹೇಬರು ಧಾರವಾಡದಲ್ಲೇ ಇದ್ದಾರೆ. ದಿನಾಲು ಸುಳ್ಳೇ ಸಾವಿರ ಜನರ ಅರ್ಜಿಗಳು ಬರುತ್ತಿವೆ. ಅಧಿಕಾರಿಗಳು, ಅವರ ಹಸ್ತಕರು ಮಾಡಿದ ಕಿಸಗಳನ್ನು ಕುರಿತ ಅಂತ ಪ್ರಕರಣಗಳು ವಿಸ್ತೃತವಾದಿಂದ ಬೈಲಿಗೆ ಬರುತ್ತಿವೆ! ಅಲ್ಲಲ್ಲಿ ಅಧಿಕಾರಿಗಳು ನಡುಗಹತ್ತಿದ್ದಾರೆ! ಧಾರವಾಡದ ಮೇಲೆ ಸಂಕ್ರಾಂತಿ ಬರುವದೆಂದು ತಿಳಿಯದಾಗಿದೆ. ಪ್ರಾಂತ ಸಾಹೇಬರು ನ್ಯಾಯಬುದ್ಧಿಯಿಂದಲೂ, ನಿಷ್ಠುರತನದಿಂದಲೂ ಎಲ್ಲ ಅಪರಾಧಿಗಳಿಗೆ ಯೋಗ್ಯ ಶಾಸನ ಮಾಡಿ ಅಕ್ಕ ಪ್ರಾಯಶ್ಚಿತ್ತ ಕೊಡುವರಾಗಿ ಜನರು ಹಾರೈಸುತ್ತಾರೆ.

ಇಲ್ಲಿ ಜ್ಯುಬಿಲಿ ಉತ್ಸವದ ವಿಶೇಷ ಗಲಾಟೆಯೇನಿದ್ದಿಲ್ಲ. ಎಲ್ಲ ಸರಕಾರಿಂಥ ಕಚೇರಿಯಲ್ಲೇ ನಡೆಯಿತು. ಬಾಲಚರ ಸಂಘದ ಹುಡುಗರನ್ನು ಒಯ್ಯುವದು ಕಂಡುಬರುತ್ತಿತ್ತು. ಶಾಲೆಗಳೊಳಗಿನ ಹಿರೇ ಹುಡುಗರು ಉದಾಸೀನರಾಗಿದ್ದರು

ಡಾ॥ ಮಹಿಷಿಯವರ ಅನುಭವಸಿದ್ಧ ಔಷಧ.

ಡಾ| ಮಹಿಷಿಯವರು ಕಳೆದ ಮೂವತ್ತು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ, ಪ್ರಯೋಗದಿಂದಲೂ ತಯಾರಿಸಿದ ಈ ಕೆಳಗಣ ಔಷಧಗಳು ಅತ್ಯಂತ ಪರಿಣಾಮಕಾರಿಗಳಾಗಿರುವವೆಂದು ಅವನ್ನು ಉಪಯೋಗಿಸಿದವರೆಲ್ಲರೂ ಅಭಿಪ್ರಾಯಪಡುತ್ತಿರುವರು. ಡಾ| ಮಹಿಷಿಯವರು ಈ ಅಮೂಲ್ಯವಾದ ಔಷಧಗಳಿಂದಲೇ ಕಾಲವಾರ ಜಿಲ್ಲೆಯಲ್ಲಿ ಅತ್ಯಂತ ಲೋಕಪ್ರಿಯರಾಗಿರುವರು.

ಅಶೋಕಾ ಕಾರ್ಡಿಯಲ್.— ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವದಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು. ಕ್ರಯ ರೂ. ೧-೮-೦.

ಅಶ್ವಗಂಧ ಟೊನಿಕ್:— ಮೆದುಳು, ಮಾಂಸ, ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಜೀರ್ಣ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಣಂತಿ ಶುಶ್ರೂಷೆಗೆ ಇದು ದಿವ್ಯೌಷಧ! ರೂ ೧-೪-೦.

ಎಗ್ಸ್ ಮಿಕ್ಶ್ಚರ, ಫೀವರ ಡ್ರೊಪ್ಸ್, ಅಮೃತಸುಧಾ, ಕರ್ಪೂರಾರ್ಕ, ಸಾಯಿರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ನಿಮಗಿಟ್ಟೆ ಇವುಗಳ ಉಪಯೋಗವಾಗುವುದು. ಇವು ಅಮೂಲ್ಯ ಔಷಧಗಳು!

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ ಮಲೇರಿಯಲ್ ಮಿಕ್ಶ್ಚರ, ಬಾಲಾಮೃತ, ಬ್ಲಡ್ ಮಿಕ್ಶ್ಚರ, ಕಾಲರೇಬು, ಡಿಸ್ ಪೆಪ್ಸಿಯ, ಸಾಯಿರಪ್ ಕ್ಯಾಲ್ಸಿಲೆಕ್ಟೋ ಫಾಸ್ಪೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಳಂತಿ ಮದ್ದು, ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು. ಕ್ಯಾಟಲಾಗು ಪುಕ್ಕಟೆಯಾಗಿ ಸಿಗುವುದು.

ಡಾ| ದೇವಪ್ಪಾ ಆಯ್ಯ ನಾಯಕ, ಕುಮಟಾ. ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು. ‖ ಹೆಡ್ ಆಫೀಸು— ಸ್ವಾಸ್ಥ್ಯನಿಲಯ, ಧಾರವಾಡ.

ಕಿರ್ಲೋಸ್ಕರರ

ಕೈಗಳಿಂದ ಮತ್ತು ಇಲೆಕ್ಟ್ರಿಕ್ ಮುಂತಾದ ಬೇರೆ ಶಕ್ತಿಯಿಂದ ನಡಿಸಲಿಕ್ಕೆ ಬರುವಂಥ

ಪಂಪುಗಳು.

ಇವುಗಳಿಂದ ಕೆರೆ, ನದಿ, ಬಾವಿಗಳಿಂದ ನೀರು ಎಷ್ಟೇ ಆಳದಿಂದಾದರೂ ಬೇಕಾದಷ್ಟು ಮೇಲೆ ಏರಿಸಲಿಕ್ಕೆ ಬರುತ್ತದೆ!

ಇರಿಗೇಶನ್ ಕೆಲಸಕ್ಕೆ,
ಫೆಕ್ಟರಿ (ಕಾರಖಾನೆ)ಗಳಲ್ಲಿ,
ತೋಟ ತೋಟಗಳಲ್ಲಿ

ಬೇಕಾದಷ್ಟು ನೀರು ಪೂರೈಸಿಕೊಳ್ಳಬಹುದು.

ಇವುಗಳು ಮಜಬೂತ, ಬಹುಕಾಲ ಬಾಳುವಂಥ, ಮಿತವ್ಯಯದ್ದು ಇದ್ದು, ಇಡೀ ಹಿಂದುಸ್ಥಾನದಲ್ಲಿ ಸಾವಿರಾರು ಜನರು ಉಪಯೋಗ ಮಾಡಿ ಶಿಫಾರಸು ಮಾಡುತ್ತಿದ್ದಾರೆ.

ಪಂಪುಗಳ ಚಿತ್ರಗಳುಳ್ಳ ಕ್ಯಾಟಲಾಗ್ ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್— ಕಿರ್ಲೋಸ್ಕರವಾಡಿ.



ಬಾಬು ಶ್ರೀಪ್ರಕಾಶರ ಭಾಷಣ.

[೩ನೇ ಪಾನಿನಿಂದ ಮುಂದರಿಸಿದ್ದು]

ಕಂಡುಬರುತ್ತಿದೆ ಆದ್ದರಿಂದ ನಿಮ್ಮ ಪ್ರಾಂತದವರು ಮುಂದಾಗಿ, ಭವಿಷ್ಯದ ಸಮಾಜದ ಘಟನೆ ಯಾವ ತರದ್ದಿರಬೇಕೆಂದು ತೋರಿಸಿಕೊಡಬೇಕಾಗಿ ನನ್ನ ಕೋರಿಕೆಯಿದೆ ರಾಜ್ಯಘಟನೆಯು ಅಷ್ಟು ಮಹತ್ವದ್ದಲ್ಲ, ಸಮಾಜ-ಘಟನೆಯೇ ಮಹತ್ವವುಳ್ಳದ್ದು ಸಮಾಜದ ಕಲ್ಯಾಣಕ್ಕಾಗಿಯೇ ರಾಜಸಂಸ್ಥೆಯ ಅಸ್ತಿತ್ವ.

ಜಾತೀಯ ವೈಷಮ್ಯದ ವಿಷಯವಾಗಿ ನಾನು ನಿಮಗೆ ಹೇಳಬೇಕಾಗಿಲ್ಲ ನಿಮ್ಮ ಒದಿಗೆ ಸುದೈವದಿಂದ ಈ ತೊಡಕಿರುವದಿಲ್ಲ ನಮ್ಮ ಪ್ರಾಂತದಲ್ಲಿ ಅದು ಬಹಳ ಕಠಿಣವಾಗಿದೆ ಈ ಜಾತೀಯ ಕಲಹಗಳ ಮೂಲಕ ನಮ್ಮ ಪ್ರಾಂತದಲ್ಲಿ ಹೊಸ್ತೆ ಹೊಸ್ತೆ ದೊಡ್ಡ ಅನಾಹುತಗಳಾಗಿವೆ ನಾವು ಇನ್ನಾದರೂ ಒಬ್ಬಿಲಿತು ಈ ಅನರ್ಥಗಳಿಗೆ ತಡೆಹಾಕಬಾರದೇ? ಜಾತಿ ವರ್ಣ, ವರ್ಗ, ಧರ್ಮ ಎಂಬ ಭೇದಗಳ ಸಂಕುಚಿತ ದೃಷ್ಟಿಯನ್ನು ತೊರೆದು, ಶುದ್ಧ ರಾಷ್ಟ್ರೀಯ ಮತ್ತು ಮಾನವಪ್ರೇಮದ ಭಾವನೆಯನ್ನು ಬೆಳೆಸುವದು ನಮ್ಮ ಕರ್ತವ್ಯವಿರುತ್ತದೆ ನಾವು ಮನಸ್ಸು ಮಾಡಿದರೆ ಇದನ್ನು ಕೂಡಲೆ ಮಾಡಬಲ್ಲೆವು ಜಾತೀಯ ಕಲಹಕ್ಕೆ ತಡೆಹಾಕಲು ನಾವು ಹಿಂದು ಮಾಡಿದ್ದಾದರೆ ನಮ್ಮ ನಾಡು ಇನ್ನೂ ಹಾಳಾಗುವದು, ಸ್ವಾತಂತ್ರ್ಯದೇವಿಯು ದೂರ ಓಡಿಹೋಗುವಳು

ಪರಿಸ್ಥಿತಿಯ ಒತ್ತಾಯದಿಂದ ನಾವು ಕಾಯಿದೆ ಮಂಡಳಗಳಲ್ಲಿ ಸೇರಿ ಅವುಗಳ ಅದಷ್ಟು ಉಪಯೋಗ ಮಾಡಿಕೊಳ್ಳಬೇಕಾಯಿತು. ಆದರೆ ಜವಾಬದಾರ ರಾಷ್ಟ್ರಕರ್ತರ ದಾಸಿಗಂತಿರುವ ಈ ಕಾಯಿದೆ ಮಂಡಳಗಳೊಳಗಿನ ಕಾರ್ಯದಿಂದ ಸ್ವರಾಜ್ಯವು ಎಳ್ಳಷ್ಟು ಸಹ ಹತ್ತಿರ ಬರಲಾರದೆಂದು ಎಲ್ಲರೂ ಒಪ್ಪತಕ್ಕ ವಿಷಯ ದೇಶದೊಳಗಿನ ಕಾರ್ಯವೇ ಮಹತ್ವದ್ದು ಹೊರಗಿನ ಕಾರ್ಯದ ಬಲವಿದ್ದರೆ ಮಾತ್ರ ಕಾಯಿದೆ ಮಂಡಳಗಳೊಳಗಿನ ಕಾರ್ಯವು ಸಫಲವಾಗುವದು. ಸ್ವತಂತ್ರ ರಾಷ್ಟ್ರಗಳೊಳಗಿನ ಕಾಯಿದೆ ಸಭೆಗಳು ಸಹ ಜನತೆಯ ಬೆಂಬಲವಿಲ್ಲವಿದ್ದರೆ ಏನೂ ಮಾಡಲಾರವು ಆದ್ದರಿಂದ ಕಾಯಿದೆ ಮಂಡಳದೊಳಗಿನ ರಾಷ್ಟ್ರೀಯ ಸಭಾಸದರಿಗೆ ನೈತಿಕ ಬೆಂಬಲ ಕೊಡತಕ್ಕ ನಾವು ಹೊರಗಿನ ದೇಶದೊಳಗಿನ ಕಾರ್ಯದ ಮೇಲೆಯೇ ನಮ್ಮ ಶಕ್ತಿ ಸರ್ವಸ್ವವನ್ನು ವೆಚ್ಚ ಮಾಡಬೇಕು, ಕಾಯಿದೆ ಮಂಡಳಗಳಲ್ಲಿ ನಮ್ಮೊಳಗಿನ ಕೆಲ ಜನರಿಗೆ ಮಾತ್ರ, ಕೆಲಸ ಸಿಗುವದು. ಉಳಿದ ಕಾರ್ಯಕರ್ತರು ಜನತೆಯೊಳಗೆ ಸೇರಿ ಕೆಲಸ ಮಾಡಲು ಅನುಕೂಲವಾಗುವಂತ ಒಂದು ಕಾರ್ಯಕ್ರಮ ನಿಶ್ಚಯಿಸುವದು ಅಗತ್ಯವಿದೆ ಕಾಂಗ್ರೆಸ ಸಂಸ್ಥೆಯನ್ನು ಬಲಪಡಿಸುವದೇ ನಮ್ಮ ಮೊದಲನೇ ಕರ್ತವ್ಯ ಎಲ್ಲರೂ ಕಾಂಗ್ರೆಸ್ಸಿನ ಧ್ಯೇಯದಲ್ಲಿ ಪೂರ್ಣ ವ್ಯವಸ್ಥೆ ಮಾಡಿ ತರಬೇಕ ಬದ್ಧರಾಗಿದ್ದರೆ ನಮ್ಮಿಂದ ಏನೂ ಕೆಲಸವಾಗದು ಪರಸ್ಪರ ಅಸೂಯಾ-ಸಂಶಯಗಳನ್ನು ಬಿಟ್ಟುಕೊಟ್ಟು ನಾವು ಒಂದುಮನಸ್ಸಿನಿಂದ ದುಡಿಯುವಾ ನಮ್ಮೊಳಗೆ ಶಿಸ್ತು ಇಲ್ಲದ್ದು ನೋಡಿ ನನಗ ವ್ಯಸನವಾಗುತ್ತದೆ ಶಿಸ್ತು ಇಲ್ಲದೆ ನಮ್ಮ ಪ್ರಯತ್ನಗಳು ನಿಷ್ಫಲವಾಗುತ್ತವೆ ಜೀವನದ ವಿವಿಧ ಅಂಗೋಪಾಂಗಗಳಲ್ಲಿ ತಜ್ಞ ಕಾರ್ಯಕರ್ತರು ಬೇಕು ತಮ್ಮ ಕರ್ತವ್ಯಕರ್ಮದ ಜ್ಞಾನವಿದ್ದ, ಅವಿಶ್ರಾಂತ ದುಡಿಯುವ, ಜವಾಬದಾರಿಯನ್ನರಿಯುವ, ವಿಶ್ವಸನೀಯ, ಕೆಲಸ ಮಾಡುವದರಲ್ಲ ಆನಂದಾಭಿಮಾನಗಳನ್ನು ಹೊಂದುವ ಕಾರ್ಯಕರ್ತರು ಬೇಕು. ಇದೀಗ ಭಾರತೀಯ ಜೀವನದೊಳಗೆ ಸಂಘಟನ ಮಾಡುವದು ಅವಶ್ಯವಿದೆ ಸ್ವೋದಾಹರಣದಿಂದ ತಮ್ಮ ಬಂಧು ಭಗಿನಿಗಳಿಗೆ ಯೋಗ್ಯ ಜೀವನಕ್ರಮ ಕಲಿಸಿಕೊಡಲಿಕ್ಕೆ ರಾಷ್ಟ್ರೀಯ ಸಭೆಯವರಾದ ನಾವೇ ಅರ್ಹರೆಂದು ನನ್ನ ಮತವಿರುತ್ತದೆ

ಪ್ರಸಂಗ ಬಂದಾಗ ಕೆಲಸ ಮಾಡಿದರೆ ಸಾಕು, ನಿತ್ಯವೂ ಎಚ್ಚತ್ತು ಕೆಲಸ ಮಾಡುತ್ತಿರುವದು ಅವಶ್ಯವಿಲ್ಲೆಂದು ಕೆಲವರ ಅಭಿಪ್ರಾಯವಿದೆ ಆದರೆ ಪ್ರಾಸಂಗಿಕ ಕೆಲಸದಿಂದ ಇಷ್ಟಫಲ ದೊರೆಯದು, ಯುದ್ಧದ ತಯಾರಿಗಿಂತ ಶಾಂತಿಸ್ಥಾಪನೆಯ ಕೆಲಸ ಶ್ರೇಷ್ಠವಾದದ್ದು ಶಾಂತತೆಯ ಕಾರ್ಯ ಪೂರ್ಣವಾದರೆ ಯುದ್ಧದ ತಯಾರಿಯು ಕ್ಷಣದೊಳಗೆ ಮಾಡಬರುತ್ತದೆ ನಮ್ಮ ಜನರಲ್ಲಿ ಐಕ್ಯಭಾವನೆಯಿರದಿರುವದು ದೊಡ್ಡ ದುರ್ದೈವದ ಸಂಗತಿ ಅದೇ ನಮ್ಮ ದೊಡ್ಡ ರೋಗವಾಗಿದೆ, ನಮ್ಮ ದ್ವೇಷಿಗಳು ಇದರ ಲಾಭ ತಕ್ಕೊಳ್ಳುತ್ತಾರೆ ಈಗಿನ ಕಠಿಣ ಕಾಲದಲ್ಲೂ ಈ ನಮ್ಮ ರೋಗವನ್ನು ನಾವು ಬಿಡುವದಿಲ್ಲ ರಾಷ್ಟ್ರೀಯ ಸಭೆಯಲ್ಲೂ ಕೂಡ ಐಕ್ಯ ತೋರುವದಿಲ್ಲ. ಆದ್ದರಿಂದ ನಾವು ರಾಷ್ಟ್ರೀಯ ಸಭೆಯನ್ನು ಬದ್ರವಾಗಿ ಸಂಘಟಿಸಿ ಅದಕ್ಕೆ ಧೈರ್ಯ-ಸ್ಥೈರ್ಯ ತಂದುಕೊಡಬೇಕು ಹಣದ ಅಡಚಣಿಯನ್ನು ಯಾರೂ ಹೇಳ

THE AGRICULTURAL & INDUSTRIAL BANK, LIMITED. COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್, ಕುಂದಾಪುರ.

ಕಾಯಂ ಠೇವಣಾತಿಗಳು.

	3 ತಿಂಗಳಿಗೆ ಸವಲಿಯಾನ ಶೇಕಡಾ ರೂಪಾಯಿ 3½ ರಂತೆ,	
ಸೇವಿಂಗ್ಸ ಬೇಂಕ ಠೇವಣಾತಿಗೆ	6 ತಿಂಗಳಿಗೆ ... .. . 4½ ರಂತೆ,	ಪ್ರತಿ ಮೂರು ತಿಂಗಳಿಗೊಮ್ಮೆ
ಶೇಕಡಾ	12 ತಿಂಗಳಿಗೆ .. .. 5½ ,,	ಬಡ್ಡಿ
4% ರಂತೆ ಬಡ್ಡಿ	24 ತಿಂಗಳಿಗೆ .. . . 6 ,,	ಕೊಡಲಾಗುವದು
	3 ವರ್ಷ ಯಾ ಹೆಚ್ಚಿನ ಅವಧಿಗೆ ... 6½ ರಂತ	

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ.

ಚಿನ್ನ ಬೆಳ್ಳಿಯ ಆಭರಣಗಳ ಆಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟ್‌ಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು, ಚಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಕರೆಂಟ್, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಕುಂದಾಪುರ,
ತಾ 21—1—1935.

K. Vaman Shenai &
G. Balakrishna S. Nayak.
Managing Directors

ಕೊಡದು ನಮ್ಮನ್ನು ಪಾರತಂತ್ರ್ಯದಲ್ಲಿಡುವದಕ್ಕೆ ಸರಕಾರಕ್ಕೆ ಪ್ರತಿ ವರ್ಷ ನೂರಾರು ಕೋಟಿ ರೂಪಾಯಿಗಳ ತೆರಿಗೆಗಳನ್ನು ಕೊಡುವ ನಾವು, ನಮ್ಮವರ ರಾಜಕೀಯ, ಆಧ್ಯಾತ್ಮಿಕ ಸ್ವಾತಂತ್ರ್ಯ ಸಂಪಾದನೆಯ ಕೆಲಸಕ್ಕೆ ಒಂದು ಕೋಟಿ ರೂಪಾಯಿ ಕೊಡಬಾರದೇನು? ನಾವು ಹೆಚ್ಚು ಹಣ ಬೇಡುವದಿಲ್ಲ ಪ್ರತಿಯೊಬ್ಬನು ವರ್ಷದಲ್ಲಿ ನಾಲ್ಕಾಣೆ ರೊಕ್ಕ ಕೊಟ್ಟರಾಯಿತು. ಅಷ್ಟರಿಂದ ಅವನಿಗೆ ರಾಷ್ಟ್ರೀಯ ಸಭೆಯ ಘಟಕನೆಂಬ ಗೌರವದ ಪದ ಪ್ರಾಪ್ತಿಯಾಗುತ್ತದೆ, ದೇಶದ ಸ್ವಾತಂತ್ರ್ಯಪ್ರಾಪ್ತಿಯ ಕೆಲಸಕ್ಕೆ ನೆರವಾದೆನೆಂಬ ಆನಂದವೂ ಉಂಟಾಗುತ್ತದೆ! ನಾಲ್ಕು ಕೋಟಿ ಸ್ತ್ರೀ ಪುರುಷರು ರಾಷ್ಟ್ರೀಯ ಸಭೆಯ ಸಭಾಸದರಾದರೆ ಪ್ರತಿ ವರ್ಷ ಒಂದು ಕೋಟಿ ರೂಪಾಯಿ ಸಹಜ ಸಿಗುತ್ತದೆ. ಬಹಳ ಜನರ ದುಃಖವಿಮೋಚನಕ್ಕೆ ಬಹಳ ಜನರ ಕಡೆಯಿಂದ ಸಣ್ಣ-ಸಣ್ಣ ರಕಮುಗಳನ್ನು ಕಲೆಹಾಕುವದು ಶ್ರೇಯಸ್ಕರವೆಂದು ನನ್ನ ತಿಳುವಳಿಕೆ. ಕೆಲವು ಜನ ಶ್ರೀಮಂತರು ಉಪಕಾರ ತೋರಿಸಿಕೊಟ್ಟ ದೊಡ್ಡ ರಕಮುಗಳಿಗೆ ನಾನು ಬೆಲೆ ಕೊಡುವಂತಿಲ್ಲ! ರಾಷ್ಟ್ರಸಭೆಯು ಸಮಸ್ತರ ಬಗ್ಗೆ ದುಡಿಯುತ್ತಿದೆ, ಸಮಸ್ತರೂ ಅದರ ಪರಿಶ್ರಮದ ಫಲ ಉಪಭೋಗಿಸುವರು. ಆದ್ದರಿಂದ ಸರ್ವಸ್ತರೂ ರಾಷ್ಟ್ರೀಯ ಸಭೆಯ ಭಾರವನ್ನು ಹೊರಲು ಸಿದ್ಧರಾಗಬೇಕು.

ಬಂಧುಗಳೇ, ಲಕ್ಷಾವಧಿ ಬಡ ಜನರು ಒಕ್ಕಟ್ಟಾಗಿ, ಸುಸಂಘಟಿತರಾಗಿ, ದೃಢ ನಿಶ್ಚಯದಿಂದ ಸತ್ಯಮಾರ್ಗ ಹಿಡಿದು ನಡೆಯಲಾರಂಭಿಸಿದರೆ ಅವರ ಸಾಮರ್ಥ್ಯವು ಶ್ರೀಮಂತರೆಂದೆಣಿಸಲ್ಪಡುವ ಕೆಲವರ ಸಾಮರ್ಥ್ಯಕ್ಕಿಂತ ಮಿಗಿಲಾಗುವದೆಂದು ನೆನಪಿನಲ್ಲಿಡಿರಿ. ನಮ್ಮ ರಾಷ್ಟ್ರೀಯ ಸಭೆಯ ಸಂಘಟನೆಯು ದೇಶದೊಳಗಿನ ಸಂದಿ-ಗೊಂದಿಗಳಲ್ಲಿ ಮುಟ್ಟಬೇಕು. ಅದರ ಎಲ್ಲ ಖರ್ಚು ನಾವೇ ಸಹಿಸಬೇಕು, ಎಲ್ಲ ಕೆಲಸ ನಾವೇ ಮಾಡಬೇಕು. ನಮ್ಮಲ್ಲಿ ಧೈರ್ಯವಿದೆ, ತ್ಯಾಗಬುದ್ಧಿಯಿದೆ, ಈಗ ಜಯದಾಶೆ ಹಿಡಿದು ಆತ್ಮವಿಶ್ವಾಸದಿಂದ ದುಡಿದರೆ ನಾವು ಗೆದ್ದೇ ಗೆಲ್ಲುವೆವು. ಕಾಂಗ್ರೆಸ್ಸು ಒಂದು ತರದ ವಿಮೆಯ ಸಂಘವಾಗಿರಬೇಕೆಂಬುದನ್ನು ಮರೆಯಬೇಡಿರಿ. ಕಾಂಗ್ರೆಸಿನ ಪರವಾಗಿ ಹೋರಾಡುವಾಗ ನಮ್ಮ ಬಾಂಧವರು ಹತರಾದರೆ ಯಾ ಗಾಯಪಟ್ಟರೆ ಅವರಿಗೂ ಅವರ ಕುಟುಂಬದವರಿಗೂ ಕಾಂಗ್ರೆಸ್ಸು ಸಹಾಯ ಮಾಡಬೇಕು. ಅನೇಕ ಜನರು ಸಂಸಾರದ ತೊಂದರೆಗಳ ಮೂಲಕ ಚಳವಳದಲ್ಲಿ ಸೇರಲಾಗದೆ ವ್ಯಸನಪಡುತ್ತಾರೆ, ಕೆಲವರು ಉತ್ಸಾಹದಿಂದ ಮುಂದೆ ಬರುತ್ತಾರೆ, ಆದರೆ ಯುದ್ಧದಲ್ಲಿ ತಾವು ಬಿದ್ದರಾದರೆ ತಮ್ಮ ಆಶ್ರಿತರು ನಿರಾಧಾರಿಗಳಾದಾರೆಂಬ ಅಂಜಿಕೆಯಿಂದ ಹಿಂದೆ ಕಾಲು ತೆಗೆಯುತ್ತಾರೆ. ಉತ್ತಮ ಕಾರ್ಯ ಮಾಡಿದ ಕೆಲ ಜನರು ತಮ್ಮ ಗೈರಹಾಜರಿಯಲ್ಲಿ ತಮ್ಮ ಆಪ್ತೇಷ್ಟರ ಹಿತವನ್ನು ರಾಷ್ಟ್ರೀಯ ಸಭೆಯವರು ನೋಡಲಿಲ್ಲೆಂಬ ದುಃಖದಿಂದ ಉದ್ವಿಗ್ನರಾಗಿ ಹಿಂದಕ್ಕೆ ಸರಿದಿದ್ದಾರೆ. ಇಂಥ ಬಂಧುಗಳಿಗೆ ನಾವು ನಂಬಿಕೆ ಕೊಡಬೇಕು. ಈ ಕಾರ್ಯವು ಕಾರ್ಯಕರ್ತರ ಕಡೆಯಿಂದ ಕರ-ರೂಪದ ವಂತಿಗೆಗಳನ್ನು ಕಲೆಹಾಕಿ ಒಂದು ನಿಧಿ ಕೂಡಿಸಿದರೇನೇ ಸಾಧ್ಯವಾದೀತು. ಜಗತ್ತಿನೊಳಗಿನ ಕೂಲಿಕಾರರ ಸಂಪದ ಕ್ರಮವನ್ನು ನಾವು ಅನುಸರಿಸಿದರೆ ಒಳಿತಾದೀತು.

ಮನುಷ್ಯ-ಮನುಷ್ಯರೊಳಗಿನ ಭೇದ ಭಾವಗಳನ್ನು ನಷ್ಟಮಾಡಲು ಹೆಣಗಾಡುವ ನಾವು ನಮ್ಮೊಳಗೇ ಕಲಹ ಮಾಡುವದು ನಾಚಿಕೆಗೇಡಿನದ ಸಂಗತಿ! ನಾವು ನಮ್ಮ ಸ್ವಭಾವದೊಳಗಿನ ಈ ಹೀನ ದೋಷ ಹೋಗಲಾಡಿಸಬಾರದೇ? ದೇಶಕಾರ್ಯಕ್ಕಾಗಿ ಆತ್ಮನಾಶ ಮಾಡಿಕೊಂಡ ತ್ಯಾಗಿ ವೀರರು ಪರಸ್ಪರ ಟೀಕೆ ಮಾಡಿ, ಹೆರವರ ಹೇತುಗಳ ವಿಪರ್ಯಾಸ ಮಾಡುತ್ತಿರುವದನ್ನು ನೋಡಿ ನನಗೆ ಅತಿಶಯ ದುಃಖವಾಗುತ್ತದೆ. ಪಾತ್ರತೆ, ಬುದ್ಧಿಬಲ, ಉದ್ಯಮಪ್ರೀತಿ, ಅನುಭವ, ಜ್ಞಾನ, ನಿಃಸ್ವಾರ್ಥ ಜನಸೇವೆ ಮುಂತಾದ ಗುಣಗಳ ಪರೀಕ್ಷೆ ಮಾಡಿ ನಾವು ಯಾರನ್ನು ಅಧಿಕಾರಸ್ಥಾನಕ್ಕೆ ಆರಿಸಿಕೊಡುವೆವೋ ಅವರ ಕಾರಭಾರವೇ ಸ್ವರಾಜ್ಯ! ಭಾವೀ ರಾಜ್ಯದಲ್ಲಿ ಚುನಾವಣೆಗೆ ಮಹತ್ವ ಹೆಚ್ಚು. ಕಾಂಗ್ರೆಸ ಕಮಿಟಿಗಳ ಚುನಾವಣೆಗಳನ್ನು ಸುರಳಿತ ಪಾರಗಾಣಿಸಲಾಗದಿದ್ದರೆ ನಾವು ಆ ರಾಜ್ಯದ ಸ್ವಾಗತ ಮಾಡುವದೆಂತು? ಒಬ್ಬರಿಗೊಬ್ಬರು ಸಾಕು. ಪರಸ್ಪರ ಸಂಶಯ-ಅಸೂಯೆಗಳನ್ನು ತೊರೆದು, ಪರಸ್ಪರರ ಬಗ್ಗೆ ಆದರ-ವಿಶ್ವಾಸಗಳನ್ನು ತೋರಿಸಿ, ಒಕ್ಕಟ್ಟಿಗೆ ಸೇರಿ ಒಮ್ಮನಸ್ಸಿನಿಂದ ದುಡಿಯಿರೆಂದು ನನ್ನ ಪ್ರಾರ್ಥನೆ.

ನಾವು ಯಾವ ವರ್ಗ, ವರ್ಣಗಳ ಬಗ್ಗೆ ಕಾದಾಡುವದಿಲ್ಲ, ಕೆಟ್ಟ ರಾಜ್ಯಪದ್ಧತಿಯ ವಿರುದ್ಧ ನಮ್ಮ ಕಾದಾಟವಿದೆ. ನಾವು ಯಾವದೇ ವ್ಯಕ್ತಿಯ ಯಾ ವ್ಯಕ್ತಿಸಮೂಹದ ದ್ವೇಷ ಬಗೆಯುವದಿಲ್ಲ. ನಾವು ಯಾರೊಬ್ಬನ ಕೇಡು ಬಯಸುವದಿಲ್ಲ, ಸಮಸ್ತರ ಕಲ್ಯಾಣವಾಗಬೇಕೆಂದು ನಮ್ಮ ಹಂಬಲ. ಅದೇ ಉದ್ದೇಶದಿಂದ ನಾವು ಸಮಸ್ತರ ಸೇವೆಯ ವ್ರತ ಕೈಕೊಂಡಿದ್ದೇವೆ. ಯಾರ ಮೇಲೂ ನಾವು ಸಿಟ್ಟು ಮಾಡುವಂತಿಲ್ಲ. ಯಾರ ವಿರುದ್ಧ ನಮ್ಮ ಕಾದಾಟ ನಡೆದಿದೆಯೋ ಅವರ ಬಗ್ಗೆ ಎಳ್ಳಷ್ಟು ಕೇಡು ಬಗೆಯದೆ ಹೋರಾಡುವದು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ವಿಶೇಷ! ಜಗತ್ತಿನ ಇತಿಹಾಸದಲ್ಲಿ ಇದು ಅಪೂರ್ವ ಸಂಗತಿ. ನಾವು ಬ್ರಿಟಿಶ ಜನರ ಸದ್ಗುಣಗಳನ್ನು ಅಂಗೀಕರಿಸಲಿಚ್ಛಿಸುತ್ತೇವೆ. ಅನೇಕ ಬ್ರಿಟಿಶ ಜನರು ನಮ್ಮವರ ಜೀವದ ಗೆಳೆಯರಿರುತ್ತಾರೆ. ಮೇಲಿಂದ ಮೇಲೆ ಅಲ್ಲಲ್ಲಿ ಅತ್ಯಾಚಾರಗಳಾಗುತ್ತವೆ. ಸರಕಾರದ ಕೃತ್ಯಗಳಿಗೆ ಬೇಸತ್ತು, ಮಹಾತ್ಮರ ಮಾರ್ಗದ ಮೇಲಿನ ವಿಶ್ವಾಸ ಕಳಕೊಂಡ ಜನರು ಅತ್ಯಾಚಾರಗಳಿಗೆ ಪ್ರವೃತ್ತರಾಗುತ್ತಾರೆ. ರಾಷ್ಟ್ರೀಯ ಸಭೆಯ ತತ್ವಕ್ಕೆ ವಿರೋಧವಾಗಿ ನಡೆಯುವವರಿಗೆ ನನ್ನ ಬಿನ್ನಹವೇನೆಂದರೆ — "ತಾಳಿರಿ! ನಿರಪರಾಧಿಗಳಿಗೆ ಕಷ್ಟಕೊಡಬೇಡಿರಿ. ನಿಮ್ಮ ಹಗೆಗಳೆಂದು ತೋರುವವರು ಪರತಂತ್ರರಾಗಿ ನಿಮ್ಮನ್ನು ದಣಿಸುತ್ತಿರಬಹುದು." ರಾಷ್ಟ್ರೀಯ ಸಭೆಯ ಕಾರ್ಯಕ್ರಮಕ್ಕೆ ಅಂಜುವವರು ಲಕ್ಷ್ಯದಲ್ಲಿಡತಕ್ಕದ್ದೇನೆಂದರೆ, ರಾಷ್ಟ್ರೀಯ ಸಭೆಯು ಸಮಸ್ತರ ಹಿತಕ್ಕಾಗಿ ಹೋರಾಡುವ ಸಂಸ್ಥೆ; ಯಾವದೇ ತರದ ಹಿಂಸೆಗೆ ನಾವು ಸಮ್ಮತಿ ಕೊಡಲಾರೆವು. ಯಾವನೊಬ್ಬನ ರಕ್ತಪಾತ ಮಾಡಲಿಕ್ಕಾಗಲಿ, ಆಸ್ತಿಯನ್ನು ಅಪಹರಿಸಲಿಕ್ಕಾಗಲಿ ನಮ್ಮ ಒಪ್ಪಿಗೆಯಿಲ್ಲ. ಸಮಸ್ತ ಪ್ರಜೆಗಳಿಗೆ ನ್ಯಾಯದಿಂದ ನಡಿಸುವ ಬಗ್ಗೆ ನಮ್ಮ ಹೋರಾಟ. ನಮ್ಮ ಸಾಧನಗಳು ಶಾಂತ ಮತ್ತು ನ್ಯಾಯವಿಹಿತ. ಬೇಕಾದುದು ಸಹಜ ಮಾತು. ಕಷ್ಟ ಸಹಿಸಲೇಬೇಕಾದುದಾದರೆ ಅವನ್ನು ನಾವೇ ಸಹಿಸುವಾ.

ನಮಗೆ ಸ್ವರಾಜ್ಯ ಯಾಕೆ ಬೇಕೆಂಬುದರ ಬಗ್ಗೆ ಮತಭೇದಗಳಿವೆ. ದಾರಿದ್ರ್ಯ ದೂರಪಡಿಸಲಿಕ್ಕೆಂದು ಕೆಲವರು ಹೇಳಿದರೆ, ನಮ್ಮ ಜನರ ಸುಲಿಗೆ ತಪ್ಪಿಸಲಿಕ್ಕೆ ಸ್ವರಾಜ್ಯ ಬೇಕೆಂದು ಬೇರೆ ಕೆಲವರು ಹೇಳುತ್ತಾರೆ. ಸ್ವರಾಜ್ಯದಿಂದ ಈ ಎಲ್ಲ ಕಷ್ಟಗಳು ಬಯಲಾಗುವವೆಂದು ಅವರ ಕಲ್ಪನೆ. ಆದರೆ ನಮ್ಮ ಆಕಾಂಕ್ಷೆಗಳು ಕೇವಲ ಭೌತಿಕ ಸುಖವನ್ನೇ ಹೊಂದಿಕೊಂಡಿವೆಯೆಂದು ನಾನು ನಂಬುವದಿಲ್ಲ. ನಮ್ಮ ರಾಷ್ಟ್ರವು ಲಕ್ಷಾಧೀಶರ ತವರುಮನೆಯಾಗಿದ್ದು, ಸ್ವದೇಶದಲ್ಲಿ ಬಡತನ-ದಾರಿದ್ರ್ಯಗಳು ಕಂಡುಬರುತ್ತಿದ್ದಿಲ್ಲವಾದರೂ ಕೂಡ ನಮಗೆ ಸ್ವರಾಜ್ಯ ಬೇಕಾಗುತ್ತಿತ್ತು. ನಮ್ಮ ಪತಿತ ಆತ್ಮದ ಉದ್ಧಾರವೇ ಸ್ವರಾಜ್ಯ! ಕಳೆದು ಹೋದ ಸಂಪತ್ತಿಯನ್ನು ತಿರುಗಿ ಗಳಿಸುವದಷ್ಟೇ ಸ್ವರಾಜ್ಯವಲ್ಲ. ನಮಗೆ ಯುಕ್ತ ಕಂಡಂತೆ ನಮ್ಮ ಜೀವನಕ್ರಮ ನಡಿಸಲಿಕ್ಕೆ, ಜಗತ್ತಿನ ಆಚಾರ-ವಿಚಾರಗಳ ಪ್ರಗತಿಗೆ ಸಹಾಯ ಮಾಡಲು ಸಮರ್ಥರಾಗುವದಕ್ಕೆ, 'ಹಿಂದುಸ್ಥಾನ' ಮತ್ತು 'ಹಿಂದೀ' ಎಂಬ ಶಬ್ದಗಳು ಕಿವಿಯ ಮೇಲೆ ಬಿದ್ದ ಕೂಡಲೆ ಔದಾರ್ಯ-ಸೌಜನ್ಯಗಳ ಮೂರ್ತಿಯು ನಮ್ಮ ಕಣ್ಮುಂದೆ ಬೆಳಗುವಂತೆ ಮಾಡಲಿಕ್ಕೆ, ಸ್ವಾಭಿಮಾನದಿಂದ ತಲೆಯೆತ್ತಿ ಸ್ವತಂತ್ರ ಜನಾಂಗದ ಘಟಕಗಳೆಂದು ಜಗತ್ತಿನಲ್ಲಿ ಮೆರೆಯಲಿಕ್ಕೆ ನಮಗೆ ಸ್ವರಾಜ್ಯ ಬೇಕು!! ॥ ವಂದೇ ಮಾತರಮ್ ! ॥

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂತು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಶಿರಕ್ಕೆ ಸಂಬಂಧಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ, ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಧಾರ್ಕೆಟ ಕಳಿಸಲಾಗುವದು.

(Registered Trade Mark.)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವಿ ಪಿ ೦-೫-೦.

ದಯವಿಟ್ಟು ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ:—ಗೋ. ಬಸವ ಅಂಡ್ ಕಂಪನಿ ಲಿಮಿಟೆಡ್, ಪ್ರೋ. ಬಾ. ೫೧೧, ನಂ. ೯ ಟೌನ ಮದರಾಸ

ಅಲ್ಲಲ್ಲಿ ಇಷ್ಟಿಷ್ಟು!

ತಮ್ಮ ಕಡೆಗಿದ್ದ ಪರರ ಹಣದ ದುರುಪಯೋಗ ಮಾಡಿದರೆಂಬ ಅಪಾದನೆ ಹೊರಿಸಿ ಹಜಾರಿಬಾಗ ಕೋರ್ಟಿನ ನಾಝುರಬಾದ ಮಹಮ್ಮದ ಇಶಾಕ್ ಇವರ ಮೇಲೆ ಪೌಜದಾರಿ ಖಟ್ಲೆಯೊಂದು ನಡೆದಿದೆ ಈ ನಾಝುರರ ವಿರುದ್ಧ ಹಿಂದೊಂದು ಪ್ರಕರಣ ನಡೆದಿತ್ತು. ಅದರಲ್ಲಿ ಕೈ| ವಾ| ಬಾಬು ಹರೇಂದ್ರನಾಥ ಮುಕರ್ಜಿಯೆಂಬವರು ನಾಝುರರ ವಕೀಲರಾಗಿದ್ದರು. ನಾಝುರರಿಗೆ ಒಂದು ದಿನ ರಾತ್ರಿ ಕನಸು ಬಿತ್ತು. ಕನಸಿನಲ್ಲಿ ಹರೇಂದ್ರನಾಥರು ಬಂದು ಕೆಲವೊಂದ, ಹಳೇ ಕಾಲದ ಮಾಹಿತಿ ಕೊಟ್ಟು, ಹಿಂದಿನ ಪ್ರಕರಣದೊಳಗಿನ ಕೆಲ ದಾಖಲೆಗಳನ್ನು ನೋಡಿಕೊಳ್ಳಲಿಕ್ಕೆ ಬೋಧಿಸಿದರು ! ಕನಸಿನಲ್ಲಿ ಸಿಕ್ಕ ಮಾಹಿತಿಯು ಸಾಧಾರವಿರುತ್ತದಂತೆ! ಮೃತಾತ್ಮರು ಕೊಟ್ಟ ಮಾಹಿತಿಯಿಂದ ತಮಗೆ ಗುಣವಾಗುವದೆಂದು ನಾಝುರರು ನಂಬಿಕೊಂಡಿದ್ದಾರೆ! ಜಗತ್ತಿನಲ್ಲಿ ಎಂಥೆಂಥ ಚಮತ್ಕಾರಗಳು ಸಂಭವಿಸುತ್ತದೆಂದು ಯಾರು ಹೇಳಬೇಕು !

* * *

ಕರಾಚಿಯ 'ಹಿಂದು' ಪತ್ರಿಕೆಯ ಸಂಪಾದಕರಿಗೆ ನ್ಯಾಯಾಗ್ರಹ ಕಾಲದಲ್ಲಿ ೧ ವರ್ಷದ ಶಿಕ್ಷೆ ಮತ್ತು ರೂ. ೧೦೦ ದಂಡ ವಿಧಿಸಿತ್ತು. ಸಂಪಾದಕರು ಶಿಕ್ಷೆಯನ್ನನುಭವಿಸಿದ್ದಲ್ಲದೆ, ದಂಡ ತೆರದ ಬಗ್ಗೆ ಮೂರು ತಿಂಗಳ ವಿಶೇಷ ಶಿಕ್ಷೆಯನ್ನೂ ಅನುಭವಿಸಿದ್ದರು. ಆದಾಗ್ಯೂ ಕೆಲ ದಿನಗಳ ಹಿಂದೆ ಪೋಲೀಸರ ಒಂದು ತಂಡ ಬಂದು 'ಹಿಂದು' ಕಚೇರಿಯಲ್ಲಿ ಜಪ್ತಿಮಾಡಿ ದಂಡ ವಸೂಲ ಮಾಡಿದರು.

* * *

ನಾಗಪುರದ ಮ್ಯುನಿಸಿಪಾಲಿಟಿಯವರು ಬಾದಶಹರ ಜುಬಿಲಿ ಉತ್ಸವದ ಬಗ್ಗೆ ರೂ. ೫೦೦೦ ಖರ್ಚು ಮಾಡಿರುತ್ತಾರೆ. ಈ ಬಗ್ಗೆ ಒಬ್ಬ ಸಭಾಸದರಾದ ಡಾ| ನಾಯಡು ಎಂಬವರು ಮ್ಯುನಿಸಿಪಾಲಿಟಿಯ ಮೇಲೆ ದಾವೆ ಮಾಡಿದ್ದಾರೆ. ಮ್ಯುನಿಸಿಪಲ್ ಆಕ್ಟಿನಲ್ಲಿ ಇರುವ ಖರ್ಚಿನ ಬಾಬುಗಳಲ್ಲಿ ಉತ್ಸವದ ಖರ್ಚಿನ ಬಾಬು ಬರುವದಿಲ್ಲೆಂದೂ, ಖರ್ಚು ಮಾಡಿದ್ದು ಕಾಯಿದೆಗೆ ವಿರುದ್ಧವೆಂದೂ ವಾದಿ ನಾಯಡುರವರ ಸಾಧನೆ. ದಾವೆಯ ವಿಚಾರ ಜೂನ ತಿಂಗಳಲ್ಲಿ ನಡೆಯುವದು.

* * *

ಇಂಗ್ಲಂಡದೊಳಗಿನ ಸ್ಕಾರ ಮಿನಿಸ್ಟರ ಎಂಬ ದನಗಳ ಮಾರ್ಕೆಟಿನಲ್ಲಿ ದನಗಳ ಕಾಲು-ಬಾಯಿ ಒಡೆಯುವ ಬೇನೆ ಬಂದಿತ್ತು. ಈ ಬೇನೆಯು ದೇಶದಲ್ಲಿ ಹಬ್ಬದಂತೆ ಸುತ್ತುಮುತ್ತಲಿನ ಭಾಗದಿಂದ ದನಗಳನ್ನು ಬೇರೆ ಕಡೆಗೆ ಒಯ್ಯಬಾರದಾಗಿ ಪ್ರತಿಬಂಧ ಮಾಡಲಾಗಿತ್ತು. ಆದರೂ ಬೇನೆಯು ಹಬ್ಬುವದೆಂದು ಅಂಜಿಕೆಪಟ್ಟ ಸರಕಾರದವರು ಮಾರ್ಕೆಟಿನೊಳಗಿನ ೫೦೦೦ ದನಗಳ ಕೊಲೆ ಮಾಡಿ ದೊಡ್ಡ ಕಂದಕದಲ್ಲಿ ಹಾಕಿ ಹೋಳಿ ಮಾಡಿದರಂತೆ! ದನಗಳನ್ನು ಸೌಮ್ಯ ರೀತಿಯಿಂದ ಕೊಲ್ಲುವ ಬಗ್ಗೆ ಚತುರ ಕಟುಕರನ್ನು ನೇಮಿಸಲಾಗಿತ್ತು !!

* * *

ಮೊನ್ನೆ ಮೊನ್ನೆ ನಡೆದ ಖಾನೇಸುಮಾರಿಯ ಮೇಲಿಂದ ಫ್ರಾನ್ಸ ದೇಶದಲ್ಲಿ ೬೬ ಜನರು ೧೦೦ ವರ್ಷ ಮಿಕ್ಕಿದ ವಯಸ್ಸಿನವರು ಇರುತ್ತಾರೆಂದು ತಿಳಿದುಬಿರುತ್ತದೆ. ಅವರೆಲ್ಲರೂ ದಿನಾಲು ನಾಲ್ಕಾವರ್ತಿ ಉಣ್ಣುತ್ತಾರೆ. ೫೬ ಜನರಿಗೆ ಯಾವದೇ ಆಹಾರ ನಡೆಯುತ್ತದೆ. "ಬೇಗನೆ ಮಲಗಬೇಕು," ಮತ್ತು "ತಿಂದುಂಡು ಆನಂದವಿಂದಿರಬೇಕು." ಇವೆರಡು ಈ ಶತಾಯುಷಿಗಳ ಸೂತ್ರವಾಕ್ಯಗಳು.

* * *

ಆಫ್ರಿಕೆಯ ಮರುಭೂಮಿಯಲ್ಲಿ ಒಂದು ಸ್ತ್ರೀರಾಜ್ಯವಿರುತ್ತದೆಂಬ ಹೊಸ ಶೋಧ ಹೊರಟಿದೆ! ಅಲ್ಲಿ ಹೆಂಗಸರೇ ರಾಜ್ಯವಾಳುತ್ತಾರೆ; ಯುದ್ಧ ಮಾಡುತ್ತಾರೆ; ಪ್ರೇಮ ವಿವಾಹಗಳನ್ನೂ ಮಾಡಿಕೊಳ್ಳುತ್ತಾರೆ. ಪುರುಷರು ನಮ್ಮ ಹೆಂಗಸರಂತೆ ಉದ್ದಗೂದಲುಗಳನ್ನು ಬೆಳಸುತ್ತಾರೆ, ಬಾಚಿಕೊಳ್ಳುತ್ತಾರೆ. ಹೆಂಗಸರು ಕೂದಲುಗಳನ್ನು ಕತ್ತರಿಸಿಕೊಳ್ಳುತ್ತಾರೆ. ವಿವಾಹದಲ್ಲಿ ಮಹಿಳೆಯರಿಗೇ ಪ್ರಾಧಾನ್ಯ. ವಿವಾಹ ನಿರ್ಣಯ ಮಾಡುವದು ಮಹಿಳೆಯರ ಅಧಿಕಾರ. ಪುರುಷರು ಬರೇ ಗುಲಾಮರಂತೆ ದುಡಿದರಾಯಿತು.

* * *

ಬಾದಶಹರ ರೌಪ್ಯ ಮಹೋತ್ಸವವನ್ನು ಜರುಗಿಸುವದಕ್ಕೆ ದೇಶದೊಳಗಿನ ಸರ್ವಸಾಧಾರಣ ಎಲ್ಲ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ತಮ್ಮ ಬೊಕ್ಕಸದೊಳಗಿಂದ ಹಣ ಖರ್ಚು ಮಾಡಿರುತ್ತವೆ. ಕೆಲವು ಸಂಸ್ಥೆಗಳು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿವೆ, ಕೆಲವು ಹತ್ತಿಪ್ಪತ್ತು ರೂಪಾಯಿಗಳನ್ನಾದರೂ ಖರ್ಚು ಮಾಡಿರುತ್ತವೆ. ಇದಕ್ಕೆ ಅಪವಾದ ಸಂಯುಕ್ತ ಪ್ರಾಂತಗಳೊಳಗಿನ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಉತ್ಸವ ಪ್ರಾರಂಭಕ್ಕೆ ೩-೪ ದಿನಗಳರು

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಸಾರಂಪರ್ಯದ ಅನುಭವ ಸಿದ್ಧೌಷಧಗಳು !

ವೃದ್ಧಿಕಾಕಷ (ಸಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾವಿಷಗರ್ಭ ತೈಲ್ಯ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಲೀವರ್‌ರೋಗಕ್ಕೆ ಅತ್ಯುತ್ತಮ)
ಕೃಷ್ಣಾರಿಷ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ಪಕ್ಷವಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಶಾರೀರಿಕ ನೋವುಗಳಿಗೆ ಅತ್ಯಂತ ಗುಣಕಾರಿ)
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:--

ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು !

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯ ವಂಶಕ್ಕೆ ಸೇರಿದವರಾಗಿಯೂ, ಗಣನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು, ಇವು ಶಾಸ್ತ್ರಸಿದ್ಧವಾಗಿ ಅನುಭವಸಿದ್ಧವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಭಾಗ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವರು. ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸ್ಥೆವಹಿಸುವವರಾದರೆ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ದಿನೇ ದಿನೇ ಅಭಿವೃದ್ಧಿಗೆ ಬರುವಂತಾಗಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ. ೧೦-೧೧-೧೯೩೩.

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಅಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ಯಾ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟ್, ದ. ಕನ್ನಡ.

ವಾಗ ಸಂಯುಕ್ತ ಪ್ರಾಂತ ಸರಕಾರವು ಒಂದು ಪ್ರಕಟಣೆ ಹೊರಡಿಸಿ, ಲೋಕಲ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಜುಬಿಲಿ-ಉತ್ಸವದ ಬಗ್ಗೆ ತಮ್ಮ ಬೊಕ್ಕಸದೊಳಗಿನ ಹಣ ವಿನಿಯೋಗಿಸಬಾರದಾಗಿ ಸೂಚನೆ ಕೊಟ್ಟಿತು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಾಯಿದೆಯಂತೆ ಬೋರ್ಡ-ಮ್ಯುನಿಸಿಪಾಲಿಟಿಯವರು ತಮ್ಮ ತೆರಿಗೆದಾರರ ಹಿತದ ಕಾರ್ಯಗಳಿಗಾಗಿಯೇ ಹಣ ವಿನಿಯೋಗಿಸಬೇಕು; ಜುಬಿಲಿ ಉತ್ಸವವು ಅಂಥ ಕಾರ್ಯವಾಗುವದಿಲ್ಲ; ಆದ್ದರಿಂದ ಜುಬಿಲಿ ಬಗ್ಗೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಹಣ ಖರ್ಚು ಮಾಡಿದರೆ, ಆ ಖರ್ಚು ಬೇಕಾಯಿದೆ ವ್ಯಯವಾಗುವಾಗುವದು ಎಂತ ಸಂಯುಕ್ತ ಪ್ರಾಂತೀಯ ಸರಕಾರದ ಮೊದಲನೇ ಆಕ್ಷೇಪ. ಸ್ಥಾನಿಕ ಸಂಸ್ಥೆಗಳ ಸಾಂಪತ್ತಿಕ ಸ್ಥಿತಿಯು ಸರಿಯಾಗಿರುವದಿಲ್ಲ; ಕಾರಣ ಉತ್ಸವಾದಿಗಳ ಬಗ್ಗೆ ಅನಾವಶ್ಯಕ ಖರ್ಚು ಮಾಡುವದು ಯುಕ್ತವಲ್ಲವೆಂದು ಸರಕಾರದ ಎರಡನೇ ಆಕ್ಷೇಪ. ಜುಬಿಲಿ ನಿಧಿಯನ್ನು ಜನತೆಯ ಕಡೆಯಿಂದ ವೈಯ್ಯಕ್ತಿಕ ವರ್ಗಣಿಗಳನ್ನು ಕೂಡಿಸಿಯೇ ಸಂಗ್ರಹಿಸಬೇಕೆಂದು ಸರಕಾರದವರ ಸಂಕಲ್ಪವಿದೆ; ಸ್ಥಾನಿಕ ಸಂಸ್ಥೆಗಳ ಕಡೆಯಿಂದ ಹಣ ಪಡೆಯುವ ಸಂಕಲ್ಪವಿರುವದಿಲ್ಲವೆಂತ ಕೊನೆಯ ಆಕ್ಷೇಪವಿರುತ್ತದೆ. ಸಂಯುಕ್ತ ಪ್ರಾಂತ ಸರಕಾರದ ಆಕ್ಷೇಪಗಳು ಇತರ ಪ್ರಾಂತಗಳೊಳಗಿನ ಸ್ಥಾನಿಕ ಸಂಸ್ಥೆಗಳಿಗೂ ಅನ್ವಯಿಸುತ್ತವೆ. ಆದರೆ ಜ್ಯುಬಿಲಿ-ಉತ್ಸವದಲ್ಲಿ ದೀಪ-ದೀಪೋತ್ಸವಗಳಿಗೂ ತೋರಣ-ಶೃಂಗಾರಗಳಿಗೂ ಅವು ಪೇರಲ ಹಣ ವೆಚ್ಚ ಮಾಡುವದು ಗೊತ್ತಿದ್ದಾಗ್ಯೂ ಪ್ರಾಂತಿಕ ಸರಕಾರಗಳು ಅವುಗಳಿಗೊಡನೆಗಿ ಹೋಗಿರುವದಿಲ್ಲ!

* * *

ಬಂಗಾಲದಲ್ಲೂ ಇನ್ನಿತರ ಪ್ರಾಂತಗಳಲ್ಲೂ ಸಾವಿರಾರು ತರುಣರು ಬಗೆಬಗೆಯ ದಬ್ಬಾಳಿಕೆಯ ಕಟ್ಟಳೆಗಳನ್ವಯ ನಿರ್ಬಂಧದಲ್ಲಿರುವ ಸಂಗತಿ ಸರ್ವವಿಶ್ರುತವಿದೆ. ಈ ಸ್ಥಾನಬದ್ಧ ಕೈದಿಗಳಲ್ಲಿ ಪದವೀಧರರೂ ಪ್ರೊಫೆಸರರೂ ಮುಂತಾಗಿ ಸುಶಿಕ್ಷಿತ ತರುಣರೇ ಹೆಚ್ಚಾಗಿರುವರು. ಕೇವಲ ಸಂಶಯದ ಮೇಲೆ ಸರಕಾರದವರು ಇವರಿಗೆ ಪ್ರತಿಬಂಧದಲ್ಲಿಟ್ಟಿರುತ್ತಾರೆ. ಅವರ ಮೇಲೆ ಖಟ್ಲೆಯಿಲ್ಲ; ಶಿಕ್ಷೆಯಿಲ್ಲ! ಬರೇ ಪೋಲೀಸರು ಕೊಟ್ಟ ವರದಿಯ ಮೇಲೆ ವಿಶ್ವಾಸವಿಟ್ಟು ಸರಕಾರದವರು ಅವರ ಮೇಲೆ ನಿರ್ಬಂಧಗಳನ್ನು ಹಾಕಿದ್ದಾರೆ. ಈ ಪ್ರಕಾರ ಸಾವಿರಾರು ತರುಣರು ವ್ಯವಸಾಯವಿಲ್ಲದೆ, ಸ್ವ-ಪರ ಕಾರ್ಯ ಮಾಡಲಿಕ್ಕೆ ಇಂಬಿಲ್ಲದೆ ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ. ಅವರ ಗೋಳು-ಕಷ್ಟಗಳನ್ನು ಕೇಳಿದರೆ ಯಾವಾತನ ಕರಳು ಕರಗದಿರದು! ಅವರ ಕುಟುಂಬದವರೂ, ಆಪ್ತೇಷ್ಟರೂ ಕೂಡ ದುಡಿಯುವ ಯಾ ದುಡಿಯಬಹುದಾದ ಮನೆಯ ಪುರುಷನು ಪ್ರತಿಬಂಧದಲ್ಲಿರುವದರಿಂದ ಅನಾಥರೂ ಅಸಹಾಯರೂ ಆಗಿರುತ್ತಾರೆ. ಅಂಥವರಿಗೆ ಆದಷ್ಟು ಸಹಾಯ ಮಾಡುವದು ದೇಶಬಾಂಧವರ ಕರ್ತವ್ಯವೆಂದು ಭಾವಿಸಿ ರಾಷ್ಟ್ರಪತಿಗಳು ಸ್ಥಾನಬದ್ಧ ಕೈದಿಗಳ ಸಹಾಯಕ್ಕೆಂದು ಒಂದು ನಿಧಿಯನ್ನು ಏರ್ಪಡಿಸುವ ನಿರ್ಧಾರ ಮಾಡಿ, ಕಳೆದ ತಾ. ೧೯ಕ್ಕೆ ಇಡೀ ಭರತಭೂಮಿಯಲ್ಲಿ "ಸ್ಥಾನಬದ್ಧ ಕೈದಿಗಳ ದಿನ" ಆಚರಿಸಬೇಕಾಗಿ ಪ್ರಕಟಣೆಯನ್ನು ಹೊರಡಿಸಿದ್ದರು. ಆ ರೀತಿ ಇಡೀ ದೇಶದಲ್ಲಿ ಆ ದಿನ ಆಚರಿಸಲ್ಪಟ್ಟಿತು. ಸಭೆಗಳೂ ಮೆರವಣಿಗೆಗಳೂ ಆದವು! ನಿಧಿಸಂಗ್ರಹವೂ ಆಗಿಯದೆ. ಬರೇ ಭೂತದಯೆಯ ದೃಷ್ಟಿಯಿಂದ ರಾಷ್ಟ್ರೀಯ ಸಭೆಯವರು ಈ ಕಾರ್ಯ ಕೈಕೊಂಡಿರುತ್ತಾರೆ. ಆದುದರಿಂದಲೇ ಇಡೀ ಹಿಂದುಸ್ಥಾನದಲ್ಲಿ ಯಾವ ಸರಕಾರವೂ ಅದಕ್ಕೆ ಪ್ರತಿಬಂಧ ಮಾಡಲಿಲ್ಲ. ಆದರೆ ಬಂಗಾಲ ಸರಕಾರಕ್ಕೆ ಮಾತ್ರ ಈ ದಿನದಾಚರಣೆಯಿಂದ ಅತ್ಯಾಚಾರಗಳಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆಂದು ಭಯವುಂಟಾಯಿತು! ಅವರು ಒಂದು ವಿಶೇಷ ಸರಕಾರಿ ಪ್ರಕಟಣೆಯನ್ನು ಹೊರಡಿಸಿ, "ಸ್ಥಾನಬದ್ಧ ಕೈದಿಗಳ ದಿನ"ದ ಆಚರಣೆಯ ಏನೊಂದು ವೃತ್ತಾಂತವನ್ನಾಗಲಿ, ಆ ಕೈದಿಗಳ ಸಂಬಂಧವಾದ ಯಾವದೇ ಮಾಹಿತಿಯನ್ನಾಗಲಿ ವೃತ್ತಪತ್ರಗಳಲ್ಲಿ ಪ್ರಕಟಿಸಬಾರದಾಗಿ ಕಟ್ಟಪ್ಪಣೆ ಮಾಡಿದರು!! ಸ್ಥಾನಬದ್ಧ ಕೈದಿಗಳಿಗೆ ಇಲ್ಲವೆ ಅವರ ಕುಟುಂಬದವರಿಗೆ ನೆರವಾದರೆ ಅತ್ಯಾಚಾರಕ್ಕೆ ಪ್ರೋತ್ಸಾಹನ ಕೊಟ್ಟಂತಾಗುತ್ತಿದ್ದರೆ ಹಿಂದುಸ್ಥಾನ ಸರಕಾರವೂ ಬೇರೆ ಪ್ರಾಂತಿಕ ಸರಕಾರಗಳೂ ಸುಮ್ಮನೆ ಕೂಡ್ರುತ್ತಿದ್ದಿಲ್ಲ! ಆದ್ದರಿಂದ ಬಂಗಾಲ ಸರಕಾರವು ಕೊಟ್ಟ ಪ್ರತಿಬಂಧದ ಕಾರಣವು ಸಯುಕ್ತಿಕ ಕಾಣುವದಿಲ್ಲ! ಸಾವಿರಾರು ತರುಣರ ಮೇಲೆ ತಾವು ಮಾಡಿದ ಅತ್ಯಾಚಾರಗಳ ಬೀಭತ್ಸ ಚಿತ್ರವು ಪತ್ರಿಕೆಗಳಲ್ಲಿ ಪ್ರಕಟವಾದೀತೆಂಬ ಅಂಜಿಕೆಯಿಂದಲೇ ಕದಾಚಿತ್ ಬಂಗಾಲ ಸರಕಾರವು ಮೇಲ್ಕಾಣಿಸಿದ ಫರ್ಮಾನು ಹೊರಡಿಸಿರಬೇಕು! ಬಂಗಾಲದೊಳಗಿನ ಹಿಂದೀ ಪತ್ರಿಕಾಕರ್ತರು ಸರಕಾರೀ ಹುಕುಮಿನ ನಿಷೇಧ ಮಾಡುವರೆ ತಾ. ೨೧ಕ್ಕೆ ತಮ್ಮ ಪತ್ರಿಕೆಗಳನ್ನು ಪ್ರಕಟಿಸಲೇ ಇಲ್ಲ.

* * *

[ಮುಂದೆ ೧೦ನೇ ಪಾನು ನೋಡಿರಿ.]

THE AGRICULTURAL & INDUSTRIAL BANK, LIMITED.
COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
ಕುಂದಾಪುರ.

ಕಾಯಂ ಠೇವಣಾತಿಗಳು.

	3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ 3½ರಂತೆ,	
ಸೇವಿಂಗ್ಸ ಬೇಂಕ ಠೇವಣಾತಿಗೆ	6 ತಿಂಗಳಿಗೆ ... ... 4½ರಂತೆ,	ಪ್ರತಿ ಸ್ಯಾರು ತಿಂಗಳಿಗೊಮ್ಮೆ
ಶೇಕಡಾ	12 ತಿಂಗಳಿಗೆ ... ... 5½ ,,	ಬಡ್ಡಿ
4% ರಂತೆ ಬಡ್ಡಿ.	24 ತಿಂಗಳಿಗೆ ... ... 6 ,,	ಕೊಡಲಾಗುವದು.
	3 ವರ್ಷ ಯಾ ಹೆಚ್ಚಿನ ಅವಧಿಗೆ ... 6¼ರಂತೆ	

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ.

ಚಿನ್ನ ವ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಕರೆಂಟ, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಂದಾಪುರ,
ತಾ. 21—1—1935.

K. Vaman Shenai &
G. Balakrishna S. Nayak.
Managing Directors.

ಪತ್ರಕರ್ತರ ನುಡಿಗನ್ನಡಿ.

೧. ಜುಬಿಲಿ ಉತ್ಸವದ ಪ್ರಸಂಗದಲ್ಲಿ ತಾ. ೯ ನೇ ದಿನ ಬ್ರಿಟಿಶ ಪಾರ್ಲಿಮೆಂಟಿನ ಉಭಯ ಸಭೆಗಳ ತರ್ಫಿನಿಂದ ಸಾರ್ವಭೌಮರಿಗೆ ಮಾನಪತ್ರಗಳು ಕೊಡಲ್ಪಟ್ಟವು. ಈ ಮಾನಪತ್ರಗಳಿಗೆ ಸಾರ್ವಭೌಮರು ಕೊಟ್ಟ ಪ್ರತ್ಯುತ್ತರವು ಬಹಳೇ ಮನನೀಯವಿರುತ್ತದೆ. ಪ್ರತ್ಯುತ್ತರದೊಳಗಿನ ಕೆಲವು ವೈಯಕ್ತಿಕ ವಿಚಾರಗಳೂ, ಸರ್ವಸಾಮಾನ್ಯ ಭಾಷೆಯೂ ಸಾರ್ವಭೌಮರದಿರುತ್ತಿದ್ದರೂ ಅದನ್ನು ಮಂತ್ರಿಮಂಡಳದವರು ಜಾಗ್ರತೆಯಿಂದ ತಿದ್ದುಪಡಿ ಮಾಡಿರಬೇಕಾಗಿ ಬಲ್ಲವರ ಹೇಳಿಕೆಯಿದೆ. ಬ್ರಿಟಿಶ ಸಾಮ್ರಾಜ್ಯದಲ್ಲಿ ಹಿಂದುಸ್ಥಾನದ ಸ್ಥಾನವ್ಯಾವುದೆಂಬುದು ಈ ಪ್ರತ್ಯುತ್ತರದಲ್ಲಿ ಬಹು ಸೂಕ್ಷ್ಮರೀತಿಯಿಂದ ಸೂಚಿಸಲ್ಪಟ್ಟಿದೆ. ಆನಂದೋತ್ಸವದ ಭರದಲ್ಲಿ ಬಾದಶಹರ ಬಾಯಿಯಿಂದ ಹೊರಟ ಶಬ್ದಗಳು ಮುಂದೆ ಭಾರತೀಯ ರಾಜ್ಯಘಟನೆಯ ರಚನೆಯ ಕಾಲಕ್ಕೆ ತೊಡರುಗಳನ್ನು ಉಂಟುಮಾಡದಂತೆ ಹಿಂದುಸ್ಥಾನ-ವಿಷಯಕ ಉಲ್ಲೇಖಗಳು ಬಹಳೇ ಜಾಗ್ರತೆಯಿಂದ ಮಾಡಲಾಗಿವೆ. ಮೊಟ್ಟಮೊದಲು ಬಾದಶಹರು ಪಾರ್ಲಿಮೆಂಟ ಸಭೆಯ ಆಭಾರವನ್ನಿಸಿದರು. ಮುಂದಿನ ವಾಕ್ಯದಲ್ಲಿ ಕಾನಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮತ್ತು ನ್ಯೂಝಿಲಂಡ ಈ ವಸಾಹತುಗಳ ಮುಖ್ಯ ಪ್ರಧಾನರು ಸಹ ತಮ್ಮ ಸನ್ಮಾನ ಕಾರ್ಯದಲ್ಲಿ ಪಾರ್ಲಿಮೆಂಟಿನ ಸಭಾಸದರೊಂದಿಗೆ ಸೇರಿರುವದರ ಉಲ್ಲೇಖ ಮಾಡಿರುತ್ತಾರೆ. ಹಿಂದುಸ್ಥಾನದ ಪ್ರತಿನಿಧಿಗಳೂ ಈ ಸಮಾರಂಭದಲ್ಲಿ ಸೇರಿದ್ದರು. ಆದರೆ ಸಾರ್ವಭೌಮರು ಮೇಲಿನ ನಾಲ್ಕು ದೇಶಗಳ ಮಾಲಿಕೆಯಲ್ಲಿ ಹಿಂದುಸ್ಥಾನದ ಹೆಸರನ್ನು ಪೋಣಿಸಲಿಲ್ಲ. ಆ ನಾಲ್ಕು ದೇಶಗಳು "ಡೊಮಿನಿಯನ್ ಸ್ಟೇಟಸ್" ಅಂದರೆ ಸ್ವಯಂಸತ್ತಾತ್ಮಕ ರಾಜ್ಯಗಳು. ಅವುಗಳ ಪಂಕ್ತಿಯಲ್ಲಿ ಪರತಂತ್ರ, ಹೀನ ದರ್ಜೆಯ ಹಿಂದುಸ್ಥಾನವನ್ನು ಕೂಡ್ರಿಸುವದೆಂತು! ಮುಂದಿನ ವಾಕ್ಯಗಳಲ್ಲಿ ಸಾರ್ವಭೌಮರು, ಈಗ ವಿಲಾಯತಿಯ ಪಾರ್ಲಿಮೆಂಟು ತನ್ನ ಅಧಿಕಾರ ಶ್ರೇಷ್ಠವೆಂದು ಎಣಿಸುವದಿಲ್ಲವಾಗಿಯೂ, ವಿಲಾಯತಿಯ ಪಾರ್ಲಿಮೆಂಟು ಮತ್ತು ವಸಾಹತುಗಳೊಳಗಿನ ಪಾರ್ಲಿಮೆಂಟುಗಳ ಸಂಬಂಧವು ತಾಯಿ ಮತ್ತು ಪ್ರೌಢ ಪ್ರಾಯಕ್ಕೆ ಬಂದ ಮಕ್ಕಳ ಕುಟುಂಬನೀತಿಯದಿಯಲ್ಲಿರುತ್ತದಾಗಿಯೂ ಬಣ್ಣಿಸಿರುತ್ತಾರೆ. ಪ್ರಾಯಕ್ಕೆ ಬಂದ ಮಕ್ಕಳ ಯಾದಿಯಲ್ಲೂ ಹಿಂದುಸ್ಥಾನದ ನಿರ್ದೇಶವಿಲ್ಲ! ಆರನೇ ವಾಕ್ಯದಲ್ಲಿ ಬ್ರಿಟಿಶ ಸಾಮ್ರಾಜ್ಯದೊಳಗಿನ ಘಟಕಗಳ ಸರ್ವಸಾಮಾನ್ಯ ವರ್ಣನೆಯನ್ನು ಮಾಡುವಾಗ ಮಾತ್ರ ಹಿಂದುಸ್ಥಾನದ ಉಲ್ಲೇಖವಾಗಿದೆ. "ಸಾಮ್ರಾಜ್ಯದ ಘಟಕಗಳಾದ ಯುನೈಟೆಡ್ ಕಿಂಗ್ಡಮ್ (ಬ್ರಿಟಿಷ ದ್ವೀಪಗಳು) ಮತ್ತು ಸ್ವಯಂಸತ್ತಾಕ ರಾಜ್ಯಗಳು, ಹಿಂದುಸ್ಥಾನ, ವಸಾಹತುಗಳು ಮತ್ತು ಆಶ್ರಿತ ರಾಜ್ಯಗಳು ಇವುಗಳಲ್ಲಿ ವಿವಿಧ ಭಾಷೆಗಳಿವೆ; ಭಿನ್ನಭಿನ್ನ ನಾಗರಿಕತೆಗಳಿವೆ, ತರತರದ ರಾಜ್ಯಪದ್ಧತಿಗಳಿವೆ. ಇಷ್ಟು ಭಿನ್ನಭಿನ್ನ ರಾಷ್ಟ್ರಗಳು ಒಂದೇ ಶಾಂತತಾ-ಸಂಘದಲ್ಲಿ ಸೇರಿಕೊಂಡ ಉದಾಹರಣೆಯು ಜಗತ್ತಿನ ಇತಿಹಾಸದಲ್ಲಿ ಎಲ್ಲೂ ಸಿಗುವಂತಿಲ್ಲ!" ಈ ವಾಕ್ಯದಲ್ಲೇ ಹಿಂದುಸ್ಥಾನದ ಹೆಸರು ಬಂದಿದೆ. ಈ ತನಕ ರಾಜಕಾರಣಧುರಂಧರರು ಬ್ರಿಟಿಶ ಸಾಮ್ರಾಜ್ಯದ ವರ್ಣನೆಯನ್ನು "ಕೊಮನ್ ವೆಲ್ಥ ಆಫ್ ಈಕ್ವಲ್ ನೇಶನ್ಸ ಆಫ್ ಫ್ರೀ ಪೀಪಲ್" ಅಂದರೆ ಸ್ವತಂತ್ರ ಮತ್ತು ಸಮಾನ ಹಕ್ಕುಗಳುಳ್ಳ ರಾಷ್ಟ್ರಗಳ ಸಮಾಯಿಕ ಸಂಸ್ಥೆಯೆಂದು ಮಾಡುತ್ತಿದ್ದರು. ಈ ವರ್ಣನೆಯೊಳಗಿನ ಸ್ವತಂತ್ರ, ಸಮಾನ ಹಕ್ಕು ಮುಂತಾದ ಶಬ್ದಪ್ರಯೋಗಗಳನ್ನು ತಪ್ಪಿಸುವದಕ್ಕೆ "ಶಾಂತತಾ ಸಂಘ" ವೆಂಬ ಹೌಲಿನ ಹೊಸ ಶಬ್ದ ನಿರ್ಮಾಣ ಮಾಡಲ್ಪಟ್ಟಿದೆ! ಇರಲಿ. ವಸಾಹತು ಸ್ವರಾಜ್ಯಗಳ ಮಾಲಿಕೆಯಲ್ಲಿ ಹಿಂದುಸ್ಥಾನದ ವಾಚ್ಯಕ ಉಲ್ಲೇಖ ಮಾಡಲು ಸಹ ಒಪ್ಪದ ಬ್ರಿಟಿಶ ಪ್ರಧಾನ ಮಂಡಳವು ನಮಗೆ ಯಾವ ಬಗೆಯ ಸ್ವರಾಜ್ಯ ಕೊಡುವದೆಂದು ವಾಚಕರೇ ತರ್ಕಿಸಲಿ.

---

೨ ಮಹಾತ್ಮರು ಈಗ ಗ್ರಾಮೋದ್ಯೋಗ ಪುನರುಜ್ಜೀವನ ಸಂಘದ ಮುಖಾಂತರ ಭಾರತೀಯರಿಗೆ ಕೈಗಳಿಂದ ಕುಟಿದ ಅಕ್ಕಿ, ಗಾಣದಿಂದ ತೆಗೆದ ಎಣ್ಣೆ ಮತ್ತು ರೈತರು ತಯಾರಿಸಿದ ಬೆಲ್ಲಗಳನ್ನೇ ಉಪಯೋಗಿಸಲಿಕ್ಕೆ ಬೋಧ ಮಾಡುತ್ತಿದ್ದ ಸಂಗತಿಯನ್ನು ಎಲ್ಲರೂ ಬಲ್ಲರು. ಮಹಾತ್ಮರು ಬರೇ ವಿಕ್ಷಿಪ್ತ ಸೂಚನೆಗಳನ್ನು ಮಾಡಿರುತ್ತಾರೆಂದು ಯಾರೂ ತಿಳಿಯಕೂಡದು. ಮಹಾತ್ಮರ ಸೂಚನೆಗಳು ಅರ್ಥಶಾಸ್ತ್ರ ದೃಷ್ಟಿಯಿಂದ ಸಯುಕ್ತಿಕವಿರುತ್ತವೆಂದು ಅರ್ಥಶಾಸ್ತ್ರಜ್ಞರು ಒಪ್ಪುತ್ತಾರೆ. ವೈದ್ಯಶಾಸ್ತ್ರದ ದೃಷ್ಟಿಯಿಂದಲೂ ಹಿತಕರವಿರುತ್ತವಾಗಿ ದೊಡ್ಡ ದೊಡ್ಡ ಡಾಕ್ಟರರು ಒಪ್ಪಿಕೊಳ್ಳುತ್ತಾರೆ. ಗ್ರಾಮೋದ್ಯೋಗ ಸಂಘದವರು ಹಿಂದುಸ್ಥಾನದ ಪ್ರಖ್ಯಾತ ಡಾಕ್ಟರರ ಕಡೆಗೆ ತಮ್ಮ ಸೂಚನೆಗಳನ್ನು ಕಳಿಸಿ ಅವುಗಳ ಮೇಲೆ ತಮ್ಮ ಅಭಿಪ್ರಾಯ ತಿಳಿಸಬೇಕಾಗಿ ಬಿನ್ನೈಸಿಕೊಂಡಿದ್ದರು. ಅಕ್ಕಿಯನ್ನು ಪಾಲೀಸ ಮಾಡುವದರಿಂದ ಶಕ್ತಿವರ್ಧಕ ದ್ರವ್ಯಗಳು ನಾಶವಾಗುತ್ತವೆಂದು ಡಾಕ್ಟರರು ತಿಳಿಸಿದ್ದಾರೆ. ಅಕ್ಕಿಯ ಕಾಳಿನ ಹೊರಮೈಗ್ಗುಳಿಗಿದುವ ಸಿಪ್ಪೆಯಲ್ಲಿ ಶರೀರದ ಜೀವನಕ್ಕೆ ಅವಶ್ಯವಿರುವ ತರತರದ ದ್ರವ್ಯಗಳಿವೆ. ಅಕ್ಕಿ ಪಾಲೀಸ ಮಾಡುವದರಿಂದ ಅವು ನಾಶವಾಗುತ್ತವೆ. ಅದೇ ಮೇರೆಗೆ ಗಿರಣಿಯಲ್ಲಿ ಅಕ್ಕಿ ತಯಾರ ಮಾಡುವಾಗ ಗಿರಣಿ ಯಂತ್ರದ ಉಷ್ಣತೆಯಿಂದ ಅಕ್ಕಿಯೊಳಗಿನ ವ್ಹಿಟಮಿನ್ ಅಂದರೆ ಶಕ್ತಿವರ್ಧಕ ದ್ರವ್ಯವು ಕೆಡುತ್ತದೆಂತಲೂ ಡಾಕ್ಟರರು ಅಭಿಪ್ರಾಯಪಟ್ಟಿದ್ದಾರೆ. ಒಟ್ಟಿಗೆ ಗಿರಣಿಯಲ್ಲಿ ತಯಾರಾದ, ಪಾಲೀಸ ಮಾಡಿದ ಅಕ್ಕಿಗಿಂತ ಕೈಯಿಂದ ಕುಟಿದ ಪಾಲಿಸ ಮಾಡದ ಅಕ್ಕಿಯೇ ಆರೋಗ್ಯಕ್ಕೆ ಅತ್ಯಂತ ಹಿತಕರವೆಂದು ಡಾಕ್ಟರ ಜನರು ನಿರ್ಣಯ ಮಾಡಿರುತ್ತಾರೆ. ಇದೇ ಮಾತು ಎಣ್ಣೆಗೂ ಅನ್ವಯಿಸುತ್ತದೆ. ಯಂತ್ರದ ಉಷ್ಣತೆಯಿಂದ ಎಣ್ಣೆಯೊಳಗಿನ ಪೋಷಕ ದ್ರವ್ಯಗಳು ಮಾಯವಾಗುತ್ತವೆ. ಗಾಣದ ಎಣ್ಣೆಯಲ್ಲಿ ಅವು ಹಾಗೇ ಉಳಿಯುತ್ತವೆ. ಬೆಲ್ಲದ ವಿರುದ್ಧ ಸಕ್ಕರೆಯ ಪ್ರಶ್ನೆಯ ಮೇಲೂ ಡಾಕ್ಟರ ಜನರು ಬೆಲ್ಲಕ್ಕೆ ಅನುಕೂಲ ನಿರ್ಣಯ ಕೊಟ್ಟಿದ್ದಾರೆ. ಬೆಲ್ಲದಲ್ಲಿ ದೇಹಪೋಷಣೆಗೆ ಸಹಾಯಕವಾದ ಲೋಹಾಂಶ, ಖನಿಜಕ್ಷಾರ ಮುಂತಾದ ಕೆಲವು ದ್ರವ್ಯಗಳಿರುತ್ತವೆ. ಗಿರಣಿಗಳಲ್ಲಿ ಸಕ್ಕರೆಯನ್ನು ಹಸನ ಮಾಡುವಾಗ ಈ ದ್ರವ್ಯಗಳೆಲ್ಲ ಹಾರಿಹೋಗುತ್ತವೆ. ಆದ್ದರಿಂದ ಸಕ್ಕರೆಗಿಂತ ಬೆಲ್ಲವೇ ಆರೋಗ್ಯಕ್ಕೆ ಹಿತಕರವೆಂದು ಡಾಕ್ಟರರೆಲ್ಲರೂ ಏಕಮತದಿಂದ ನಿರ್ಣಯ ಮಾಡಿರುತ್ತಾರೆ. ಸಾರಾಂಶ, ಮಹಾತ್ಮರು ಪುರಸ್ಕರಿಸಿದ ಕೈಯಿಂದ ಕುಟಿದ ಅಕ್ಕಿ, ಗಾಣದ ಎಣ್ಣೆ ಮತ್ತು ಬೆಲ್ಲ ಇವೇ ದೇಹಾರೋಗ್ಯಕ್ಕೆ ಒಳಿತೆಂದು ವೈದ್ಯಶಾಸ್ತ್ರಪಾರಂಗತರು ಸಹ ಒಪ್ಪಿಕೊಂಡಿದ್ದಾರೆ. ಗಿರಣಿ ಮಾಲಿನ ಸೊಬಗಿಗೆ ಮರುಳಾಗದೆ ನಾವು ಇವನ್ನೇ ಉಪಯೋಗಿಸಿದರೆ ನಮ್ಮ ಹಳ್ಳಿಗಳೊಳಗಿನ ಬಡಬಗ್ಗರಿಗೆ ಉದ್ಯೋಗ ಪೂರೈಸಿ ಅನ್ನದಾನ ಮಾಡಿದ ಪುಣ್ಯ ಸಿಗುವದು, ನಮ್ಮ ದೇಹಕ್ಕೂ ಆರೋಗ್ಯವಾಗುವದು, ರಾಷ್ಟ್ರದ ಹಿತವೂ ಸಾಧಿಸುವದು. ಮಹಾತ್ಮರ ಸೂಚನೆಗಳನ್ನು ಭಕ್ತಿಯಿಂದ ಅನುಸರಿಸಿ ಭಾರತೀಯರು ತಮ್ಮ ಹಾಗೂ ತಮ್ಮ ಮಾತೃಭೂಮಿಯ ಕಲ್ಯಾಣ ಮಾಡಿಕೊಳ್ಳಬಾರದೇ?

---

೩. ಅಂತೂ ಇಂತೂ ಬ್ರಹ್ಮದೇಶವನ್ನು ಹಿಂದುಸ್ಥಾನದಿಂದ ಪ್ರತ್ಯೇಕಿಸುವ ಹಟವನ್ನು ಬ್ರಿಟಿಶ ರಾಜ

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪ್ರೊಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಘ.

ಪೊಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

ವಿ ಸೂ. 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು:- **ಮೆಸರ್ಸ ಜೀವನ ಏಜನ್ಸಿ, ಕಾರವಾರ.**

ಕಾರಣಗಳು ಬಿಡುವದಿಲ್ಲ! ೧೯೩೭ನೇ ಇಸ್ವಿಯ ಪ್ರಾರಂಭಕ್ಕೆ ಬ್ರಹ್ಮದೇಶವು ಹಿಂದುಸ್ಥಾನದಿಂದ ಬೇರೆಯಾಗುವದು ಖಂಡಿತವೆಂದು ಈಗ ಪ್ರಕಟವಾಗಿದೆ! ಈ ಬಗ್ಗೆ ತಯಾರಿ ಸಹ ನಡೆದಿದೆ. ಬ್ರಹ್ಮದೇಶವು ಹಿಂದುಸ್ಥಾನದಿಂದ ಪ್ರತ್ಯೇಕಿಸಲ್ಪಡುವದಾದರೆ, ಹಿಂದುಸ್ಥಾನ ಸರಕಾರದ ಸಾಲ-ಮೂಲಗಳ ಹಿಸೆಯನ್ನು ಅದು ತೆಗೆದುಕೊಳ್ಳಬೇಕಾದದ್ದು ಸಹಜಪ್ರಾಪ್ತ ಸಂಗತಿ. ಈ ಪ್ರಕಾರ ಸಾಲ-ಮೂಲಗಳ ವಿಭಾಗಣೆಯನ್ನು ಮಾಡಿಕೊಡುವ ಬಗ್ಗೆ ಮತ್ತು ಎರಡೂ ರಾಷ್ಟ್ರಗಳ ನಡುವೆ ಲೆಕ್ಕಾಚಾರ ಮಾಡಿಕೊಡಲಿಕ್ಕೆ ಪ್ರಧಾನ ಮಂಡಳವು ಲೆಫ್ಟನೆಂಟ ಕರ್ನಲ್ ಅಮೇರಿ ಇವರ ಅಧ್ಯಕ್ಷತೆಯ ಕೆಳಗೆ ಒಂದು "ಪಂಚಾಯತ ಮಂಡಳ"ವನ್ನು ನೇಮಿಸಿತ್ತು. ಇಂಗ್ಲಿಷ ಗೃಹಸ್ಥರೇ ಪಂಚರಾಗಿ ನೇಮಿಸಲ್ಪಟ್ಟಿದ್ದರು. ಪಂಚರ ಮುಂದೆ ಹಿಂದುಸ್ಥಾನದ ಪ್ರತಿನಿಧಿಗಳಿಗಾಗಲಿ, ಬ್ರಹ್ಮೀ ಪ್ರತಿನಿಧಿಗಳಿಗಾಗಲಿ ತಮ್ಮ ಅಂಬೋಣವನ್ನು ಮುಂದಿಡಲಿಕ್ಕೆ ಅವಕಾಶ ಕೊಟ್ಟಿದ್ದಿಲ್ಲ. ಹಿಂದುಸ್ಥಾನ ಸರಕಾರಕ್ಕಾದರೂ ಸಿಕ್ಕಿತ್ತೋ ಇಲ್ಲವೆಂದು ಸಂಶಯವಿದೆ. ಪಂಚರು ರೇಲ್ವೆ, ಸೈನ್ಯ, ಸಾಲ, ಪೆನ್ಶನ ಮುಂತಾದವುಗಳ ಲೆಕ್ಕಾಚಾರ ಮಾಡಿ, ಒಟ್ಟು ಸಾಲದಲ್ಲಿ ಬ್ರಹ್ಮದೇಶವು ನೂರರಲ್ಲಿ ೭½ಯಂತೆ ತೆರಲು ಬದ್ಧವೆಂದು ಲೆಕ್ಕಹಾಕಿ, ತನ್ನ ಅಂಶದ ಸಾಲವನ್ನು ಪ್ರತಿ ವರ್ಷ ೨ ಕೋಟಿ, ೩೫ ಲಕ್ಷ, ೪೭ ಸಾವಿರ ರೂಪಾಯಿಗಳಂತೆ ೪೫ ವರ್ಷಗಳ ತನಕ ಹಿಂದುಸ್ಥಾನ ಸರಕಾರಕ್ಕೆ ಕಂತುಬಂದಿಯಿಂದ ಪತ್ತೆ ತೀರಿಸಬೇಕಾಗಿ ಫೈಸಲ ಮಾಡಿದ್ದಾರೆ. ಚಲನು, ನಾಣ್ಯ ಮುಂತಾದವುಗಳ ವ್ಯವಹಾರವು ಮಾತ್ರ ರಿಝರ್ವ ಬೆಂಕಿನ ಕಡೆಗೇ ಇರಬೇಕೆಂದು ನಿರ್ಣಯವಾಗಿರುತ್ತದೆ. ಒಂದು ಕುಟುಂಬದೊಳಗಿನ ಸಾಲ-ಮೂಲಗಳ ವಾಂಟಣಿ ಮಾಡಲಿಕ್ಕೆ ಎಷ್ಟು ಪ್ರಯಾಸ ಬೀಳುತ್ತದೆಂಬುದನ್ನು ಅನುಭವಿಕರು ಬಲ್ಲರು. ಅಂದ ಮೇಲೆ ಒಂದೇ ರಾಷ್ಟ್ರದಲ್ಲಿ ಕೂಡಿದ ಎರಡು ಭಾಗಗಳಲ್ಲಿ ರಾಷ್ಟ್ರದ ಸಾಲಮೂಲಗಳ ವಿಭಾಗಣೆ ಮಾಡಿ ಕೊಡುವದು ಅದೆಷ್ಟು ಕಠಿಣವೆಂದು ಹೇಳಬೇಕೇ? ಮೂರು ವರ್ಷಗಳ ಹಿಂದೆ ಹಿಂದುಸ್ಥಾನ ಸರಕಾರವು ಈ ವಿಭಾಗಣೆಯ ಕಚ್ಚಾ ಮಸೂದೆಯನ್ನು ತಯಾರಿಸಲಿಕ್ಕೆ ಇಬ್ಬ ತಜ್ಞರನ್ನು ನೇಮಿಸಿತ್ತು. ಇಬ್ಬರಲ್ಲೂ ಮತಭೇದಗಳಾಗಿದ್ದವು. ಆಜೇ ತಜ್ಞರು ಸಂಗ್ರಹಿಸಿದ ಮಾಹಿತಿಯನ್ನುಪಯೋಗಿಸಿ ಈಗಿನ ಪಂಚರು ತಮ್ಮ ನಿರ್ಣಯ ಮಾಡಿರುತ್ತಾರಾಗಿ ತಿಳಿಯುತ್ತದೆ. ಪಂಚರ ನಿರ್ಣಯವು ನ್ಯಾಯವಿರುವದಿಲ್ಲವಾಗಿ ಅರ್ಥಶಾಸ್ತ್ರಜ್ಞರ ಹೇಳಿಕೆಯಿದೆ. ಹಿಂದುಸ್ಥಾನಕ್ಕೆ ಬಹಳೇ ಅನ್ಯಾಯವಾಗಿರುತ್ತದೆಂದು ಅವರು ಅಭಿಪ್ರಾಯಪಡುತ್ತಾರೆ. ಈ ಪಂಚಫೈಸಲೆಯು ಎಸೆಂಬ್ಲಿಯ ಮಂಜೂರಿಯ ಬಗ್ಗೆ ಮುಂದೆ ಬಂದಾಗ ಎಸೆಂಬ್ಲಿಯೊಳಗಿನ ಲೋಕನಿಯುಕ್ತ ಪ್ರತಿನಿಧಿಗಳು ಅದನ್ನು ತಿರಸ್ಕರಿಸಬೇಕಾಗಿಯೂ, ಹೊಸ ನಿಃಪಕ್ಷಪಾತಿ ಪಂಚರನ್ನು ನೇಮಿಸಲು ಸರಕಾರಕ್ಕೆ ಒತ್ತಾಯಪಡಿಸಬೇಕಾಗಿಯೂ ತಜ್ಞರು ಸೂಚಿಸುತ್ತಿದ್ದಾರೆ.

---

೪. ಸನ್ ೧೯೩೪ನೇ ಇಸವಿಯಲ್ಲಿ ಹಿಂದುಸ್ಥಾನವು ಪರರಾಷ್ಟ್ರಗಳ ಕೂಡ ನಡಿಸಿದ ವ್ಯಾಪಾರದ ಅಂಕಿಗಳು ಈಗ ಪ್ರಕಟವಾಗಿವೆ: ಹಿಂದುಸ್ಥಾನದಿಂದ ಕಳೆದ ವರ್ಷ ೧೫೧ ಕೋಟಿ ೩೨ ಲಕ್ಷ ರೂಪಾಯಿಗಳ ಸರಕುಗಳು ಪರದೇಶಗಳಿಗೆ ರಫ್ತಾದವು. ರಫ್ತಾದ ಸರಕುಗಳಲ್ಲಿ ೩೩ ಕೋಟಿ ರೂಪಾಯಿಗಳ ಅರಳೆ, ೩೧ ಕೋಟಿ ರೂ.ಗಳ ನಾರು, ೨೦ ಕೋಟಿ ರೂ.ಗಳ ಚಹಾ, ೧೧ ಕೋಟಿ ರೂ.ಗಳ ಅಕ್ಕಿ, ೧೧ ಕೋಟಿ ರೂ.ಗಳ ಕಡದಾಣೆ ಇವೇ ಮುಖ್ಯವಾದವು. ಕಳೆದ ವರುಷ ಆಮದಾದ ಸರಕುಗಳ ಬೆಲೆಯು ರೂ. ೧೩೬ ಕೋಟಿಯಾಗುತ್ತದೆ. ಆಮದು ಮಾಡಲ್ಪಟ್ಟ ಸರಕುಗಳಲ್ಲಿ ೧೬ ಕೋಟಿ ರೂಪಾಯಿಗಳ ಬಟ್ಟೆ, ೧೧½ ಕೋಟಿ ರೂ.ಗಳ ಯಂತ್ರಸಾಮುಗ್ರಿ, ೬ ಕೋಟಿ ರೂ.ಗಳ ಉಕ್ಕು ಮತ್ತು ಕಬ್ಬಿಣ, ೨½ ಕೋಟಿ ರೂ.ಗಳ ಸಕ್ಕರೆ, ೧½ ಕೋಟಿ ರೂ.ಗಳ ಅಕ್ಕಿ ಸೇರಿರುತ್ತವೆ. ಆಚೆ ವರ್ಷ ಪರದೇಶಿ ಬಟ್ಟೆಯ ಆಮದು ರೂ.೧೪ ಕೋಟಿಗೆ ಇಳಿದದ್ದು ಮರುವರ್ಷ; ಪುನಃ ೧೬ ಕೋಟಿಗೆ ಏರಿದ್ದು ಶುಭಲಕ್ಷಣವಲ್ಲ. ಅಕ್ಕಿಯ ಆಯಾತವಂತೂ ನಾಚಿಕೆಗೇಡಿತನದ ಮಾತು! ಅಕ್ಕಿಯ ಆಗರವೇ ಆಗಿರುವ ಮದ್ರಾಸ ಇಲಾಖೆಯಲ್ಲಿ ಇಂಡೋ-ಚ್ಯಾನಾ ಮತ್ತು ಸಿಯಾಮ ದೇಶಗಳಿಂದ ಅಕ್ಕಿ ಬಂದು ದೇಶಿ ಅಕ್ಕಿಯೊಡನೆ ಮೇಲಾಟ ನಡಿಸುವದೆಂದರೆ ಆಶ್ಚರ್ಯವಲ್ಲವೇ? ಈ ಬಗ್ಗೆ ಸರಕಾರವು ಕಣ್ಮುಚ್ಚಿ ಕೂಡುಕೊಂಡು ಮೊನ್ನೆ ಮೊನ್ನೆ ಮಾತ್ರ ಅಲ್ಪ ಸ್ವಲ್ಪ ಆಮದು ತೆರಿಗೆಯನ್ನು ಹೇರಿದೆ. ಮಹಾಯುದ್ಧದ ಪೂರ್ವದಲ್ಲಿ ಹಿಂದುಸ್ಥಾನದಿಂದ ಪ್ರತಿವರ್ಷ ಸರಾಸರಿ ೨೪೦ ಕೋಟಿ ರೂಪಾಯಿಗಳ ಸರಕು ವಿದೇಶಗಳಿಗೆ ರಫ್ತಾಗುತ್ತಿತ್ತು; ೧೬೦ ಕೋಟಿ ರೂಪಾಯಿಗಳ ಸರಕು ವಿದೇಶಗಳಿಂದ ಬರುತ್ತಿತ್ತು; ಅಂತು ೮೦ ಕೋಟಿ ರೂಪಾಯಿಗಳ ಉಳಿತಾಯವಾಗುತ್ತಿತ್ತು. ಇದರೊಳಗಿಂದ ೪೦-೪೫ ಕೋಟಿ ರೂ. ಹಣ ಇಂಗ್ಲಂಡದಿಂದ ಕೊಂಡ ಸಾಲದ ಬಡ್ಡಿ, ನಿವೃತ್ತ ಸಿವ್ಹಿಲ್-ಮಿಲಿಟರಿ ನೌಕರರಿಗೆ ಪೆನ್ಶನು, ಭಾರತಿ ಮಂತ್ರಿಗಳ ಕಚೇರಿಯ ಖರ್ಚು ಮುಂತಾದವುಗಳ ಬಗ್ಗೆ ಸಂದಾಯವಾಗಿ, ಬಾಕಿ ಉಳಿದ ೩೦-೩೫ ಕೋಟಿ ರೂಪಾಯಿಗಳು ಚಿನ್ನ-ಬೆಳ್ಳಿ ರೂಪದಿಂದ ನಮ್ಮ ದೇಶಕ್ಕೆ ಬರುತ್ತಿದ್ದವು. ಈಗ ರಫ್ತಾಗುವ ಸರಕಿನ ಬೆಲೆಯೊಳಗಿಂದ ಆಮದಾಗುವ ಸರಕಿನ ಬೆಲೆಯನ್ನು ಕಳೆಯಲಾಗಿ ಬರೇ ೨೩ ಕೋಟಿ ರೂಪಾಯಿ ನಮಗೆ ಬರತಕ್ಕದ್ದಾಗುತ್ತವೆ. ಇಷ್ಟು ಹಣ ವಿಲಾಯತಿ ಸರಕಾರಕ್ಕೆ ಸಲ್ಲಿಸಬೇಕಾದ್ದನ್ನು ಸಲ್ಲಿಸಲಿಕ್ಕೆ ಸಾಕಾಗುವದಿಲ್ಲ. ಅದನ್ನು ನಾವು ಚಿನ್ನ ರಫ್ತು ಮಾಡಿ ಸಲ್ಲಿಸುತ್ತಿದ್ದೇವೆ. ೧೯೩೨ನೇ ಇಸ್ವಿಯಲ್ಲಿ ೬೬ ಕೋಟಿ ರೂ.ಗಳ ಚಿನ್ನ ಹಾರಿತು; ೧೯೩೩ನೇ ಸಾಲಿನಲ್ಲಿ ೫೧ ಕೋಟಿಯ ಚಿನ್ನ ಹಾರಿತು; ಕಳೆದ ವರ್ಷ ೬೧ ಕೋಟಿಯ ಚಿನ್ನ ವಿಲಾಯತಿಗೆ ಹಾರಿಯಿತು. ಇದರ ಮೇಲಿಂದ ಹಿಂದುಸ್ಥಾನವು ಚಿನ್ನ-ಬೆಳ್ಳಿ ಮಾರಿಕೊಂಡು ಸಂಸಾರ ಸಾಗಿಸುತ್ತದೆಂದು ಸ್ಫುಟವಾಗುವದಿಲ್ಲವೇ? ಹೀಗೆಯೇ ಎಷ್ಟು ಕಾಲ ನಡೆದೀತು? ಚಿನ್ನ-ಬೆಳ್ಳಿಗಳು ಖರ್ಚಾದ ಮೇಲೆ ಉಪವಾಸ ಬೀಳುವ ಪ್ರಸಂಗ ಬರವದಲ್ಲವೇ? ಇಷ್ಟಾದರೂ ರಾಜ್ಯಕರ್ತರು ಹಿಂದುಸ್ಥಾನದ ಸ್ಥಿತಿ ಹಾಳಾಗಿಲ್ಲ, ಸುಧಾರಿಸುತ್ತಲಿದೆಯೆಂದು ಜಪ ಮಾಡುತ್ತಿರುವದನ್ನು ಕಂಡು ತೀರ ವ್ಯಸನವಾಗುತ್ತದೆ."

—ಕಳೆದ ತಾ. ೨೩ರ ತನಕ ಇಡೀ ಹಿಂದುಸ್ಥಾನದಲ್ಲಿ ಜುಬಿಲಿ ನಿಧಿಯು ೭೭ ಲಕ್ಷ ರೂಪಾಯಿಗಳಿಗೆ ಮಿಕ್ಕಿ ಕೂಡಿದ್ದು, ಎಲ್ಲ ಪ್ರಾಂತಗಳಲ್ಲಿ ಮುಂಬಯಿ ಇಲಾಖೆಯೇ ಮುಂದಿರುವದಾಗಿ ತಿಳಿಯುತ್ತದೆ. ಮುಂಬಯಿ ಇಲಾಖೆಯಲ್ಲಿ ಕೂಡಿದ ನಿಧಿಯು ೧೨½ ಲಕ್ಷಕ್ಕೆ ಮಿಕ್ಕಿ ಹೋಗಿದೆ.

ಕಿರ್ಲೋಸ್ಕರರ

ಕೈಗಳಿಂದ ಮತ್ತು ಇಲೆಕ್ಟ್ರಿಕ್ ಮುಂತಾದ ಬೇರೆ ಶಕ್ತಿಯಿಂದ ನಡಿಸಲಿಕ್ಕೆ ಬರುವಂಥ

ಪಂಪುಗಳು.

ಇವುಗಳಿಂದ ಕೆರೆ, ನದಿ, ಬಾವಿಗಳಿಂದ ನೀರು ಎಷ್ಟೇ ಆಳದಿಂದಾದರೂ ಬೇಕಾದಷ್ಟು ಮೇಲೆ ಏರಿಸಲಿಕ್ಕೆ ಬರುತ್ತದೆ!

ಇರಿಗೇಶನ್ ಕೆಲಸಕ್ಕೆ,
ಫೆಕ್ಟರಿ (ಕಾರಖಾನೆ)ಗಳಲ್ಲಿ,
ಶೇತಕಿ ತೋಟಗಳಲ್ಲಿ

ಬೇಕಾದಷ್ಟು ನೀರು ಪೂರೈಸಿಕೊಳ್ಳಬಹುದು.

ಇವುಗಳು ಮಜಬೂತ, ಬಹುಕಾಲ ಬಾಳುವಂಥ, ಮಿತವ್ಯಯದ್ದು ಇದ್ದು,
ಇಡೀ ಹಿಂದುಸ್ಥಾನದಲ್ಲಿ ಸಾವಿರಾರು ಜನರು ಉಪಯೋಗ ಮಾಡಿ ಶಿಫಾರಸು ಮಾಡುತ್ತಿದ್ದಾರೆ.
ಪಂಪುಗಳ ಚಿತ್ರಗಳುಳ್ಳ ಕ್ಯಾಟಲಾಗ್ ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್—
ಕಿರ್ಲೋಸ್ಕರವಾಡಿ.



ಕಾನಡಾವೃತ್ತ.

[illegible]

ಸಂಘಟನೆ ಮಾಡಿರಿ

ಮುಂಬಯಿಯ ರಾಷ್ಟ್ರೀಯ ಸಭೆಯಾಗಿ ಈಗ ಆರು ತಿಂಗಳುಗಳಾದವು ರಾಷ್ಟ್ರೀಯ ಸಭೆಯು ಹೊಸ ಘಟನೆಯು ನಿರ್ಮಾಣವಾಗಿ ಆ ಘಟನೆಯಂತೆ ಜಿಲ್ಲಾ ಕಮಿಟಿಗಳೂ ಮೆಂಬರರೂ ಆಗಹತ್ತಿ[illegible] ನಾವು ರಾಜಕಾರಣದೊಳಗಿಂದ ನಿವೃತ್ತರಾ[illegible] ಗ ಮಹಾತ್ಮರ ರಾಷ್ಟ್ರೀಯ ಸಭೆಯ ಘಟನೆಯನ್ನು ವಿಸ್ತಾರಗೊಳಿಸಿ ಬಲಪಡಿಸಬೇಕಾಗಿಯೂ, ಖಾದಿ ಪ್ರಸಾರ ಹಿಂದೂ-ಮುಸಲ್ಮಾನರ ಐಕ್ಯ ಗ್ರಾಮ ಕೈಗಾರಿಕೆಗಳ ಪುನರುಜ್ಜೀವನ ಮತ್ತು ಹರಿಜನರ ಉದ್ಧಾರ ಎಂಬ ಚತುರಂಗ ಕಾರ್ಯಕ್ರಮವನ್ನು ನಿಶ್ಚಯದಿಂದ ಸಾಗಿಸಬೇಕಾಗಿಯೂ ಮುಂಬಯಿಯ ರಾಷ್ಟ್ರೀಯ ಸಭೆಯ ವ್ಯಾಸಪೀಠದ ಮೇಲಿಂದ ದೇಶಬಾಂಧವರಿಗೆಲ್ಲ ಬೋಧ ಮಾಡಿದ್ದರು. ಮಹಾತ್ಮರ ಅಪೇಕ್ಷೆ-ಆಜ್ಞೆಗಳ ಮೇರೆಗೆ ರಾಷ್ಟ್ರೀಯ ಸಭೆಯು ಘಟನೆಯನ್ನು ವಿಸ್ತಾರಗೊಳಿಸಲಿಕ್ಕೂ ದೃಢಪಡಿಸಲಿಕ್ಕೂ ದೇಶದ ಬೇರೆ ಬೇರೆ ಭಾಗಗಳಲ್ಲಿ ಕಸುವಿನ ಪ್ರಯತ್ನಗಳು ನಡೆದಿವೆ. ನಮ್ಮ ಕರ್ನಾಟಕದಲ್ಲಿಯೂ ಬೆಳಗಾವಿ ಧಾರವಾಡ ಮೊದಲಾದ ಜಿಲ್ಲೆಗಳಲ್ಲಿ ಸಾವಿರಗಟ್ಟಲೆ ಕಾಂಗ್ರೆಸ ಮೆಂಬರರನ್ನು ಮಾಡಿರುತ್ತಾರೆ. ಇನ್ನು ಸಭಾಸದರನ್ನು ಕೂಡಿಸುವ ರಭಸ ನಡೆದಿದೆ. ಆದರೆ ನಮ್ಮ ಜಿಲ್ಲೆಯಲ್ಲಿ ಜನರು ಇನ್ನೂ ಮಲಗಿಕೊಂಡಿದ್ದಾರೆ! ಯಾರೂ ಕೈಕಾಲು ಅಲಗಾಡಿಸುವದು ಕಂಡು ಬರುವದಿಲ್ಲ! ಎಲ್ಲಿ ನೋಡಿದರೂ ಪ್ರಶಾಂತ ನಿಃಶಬ್ದತೆಯೇ ಕಂಡು ಬರುತ್ತದೆ!

ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರು ದೇಶ ಸಂಚಾರ ಮಾಡುತ್ತ ಕರ್ನಾಟಕಕ್ಕೆ ಬರುವರೆಂದೂ ನಮ್ಮ ಜಿಲ್ಲೆಗೂ ಸಂದರ್ಶನ ಕೊಡುವರೆಂದೂ ತಿಳಿದ ಕೂಡಲೆ ತುಸು ಗಡಿಬಿಡಿಯಾಗಿತ್ತು! ಸತ್ಯಾಗ್ರಹ ಸಂಗ್ರಾಮದ ಕಾಲದಲ್ಲಿ ಕರನಿರಾಕರಣೆಯ ಚಳವಳವನ್ನು ಹೂಡಿ ಕರ್ನಾಟಕದಲ್ಲಷ್ಟೇ ಅಲ್ಲ ಇಡೀ ಭರತಖಂಡದಲ್ಲಿ ಹೆಸರುವಾಸಿಯಾದ ಕಾರವಾರ ಜಿಲ್ಲೆಯಲ್ಲಿ ಕಾಂಗ್ರೆಸ ಕಮಿಟಿಗಳಿಲ್ಲ ಕಾಂಗ್ರೆಸ ಸಭಾಸದರಾದವರಿಲ್ಲ, ಕಾಂಗ್ರೆಸ ಕಾರ್ಯವನ್ನು ಮುಂದರಿಸುವ ಬಗ್ಗೆ ಚಟುವಟಿಕೆ ಸಹ ತೋರಿಬರುವದಿಲ್ಲವೆಂದು ಕಂಡರೆ ರಾಷ್ಟ್ರಪತಿಗಳು ಏನೆನ್ನುವರು? ಎಂದು ಗಾಬರಿಯಾಗಿ ಡಾ|| ಘ. ಗಂಗಾಧರರಾವ ದೇಶಪಾಂಡೆ ಪ್ರಭೃತಿ ಕರ್ನಾಟಕ ಮುಂದಾಳುಗಳು ನಮ್ಮ ಜಿಲ್ಲೆಗೆ ಬಂದು, ಅಲ್ಲಲ್ಲಿ ಓಡ್ಯಾಡಿ, ಜನರಿಗೆ ಎಚ್ಚರಿಸಿ ಹೋದರು. ಆಗ ರಾಷ್ಟ್ರಪತಿಗಳು ಬರುವದಕ್ಕೆ ೩-೪ ವಾರಗಳ ಅವಧಿಯಿತ್ತು. ಆ ಅವಧಿಯಲ್ಲಾದರೂ ಜಿಲ್ಲೆಯಲ್ಲಿ ಕಾಂಗ್ರೆಸ ಕಮಿಟಿಗಳ ಸ್ಥಾಪನೆಯಾಗಿ ಕಾಂಗ್ರೆಸ ಸಭಾಸದರನ್ನು ಕೂಡಿಸಬಹುದೆಂದು ನಾವು ನಂಬಿಕೊಂಡಿದ್ದೆವು. ಆದರೆ ನಮ್ಮ ನಂಬಿಗೆಯು ವಿಫಲವಾಯಿತು! ಆಕೆಯು ಒಯ್ಯಲಾಯಿತು. ನಾವು ಇದ್ದಲ್ಲೇ ಉಳಿದೆವು!

ನಾವು ಈವರೆಗೆ ರಾಷ್ಟ್ರಪತಿಗಳು ಚಿತ್ತೈಸಿದರು. ನಮ್ಮ ಜನರು ಅವರಿಗೆ ಯಥೋಚಿತ ಸ್ವಾಗತ ಮಾಡಿದರು. ರಾಷ್ಟ್ರಪತಿಗಳು ಉದಾತ್ತ ಸಂದೇಶವನ್ನು ನಾವು ಆಲಿಸಿದರು[illegible] ರಾಷ್ಟ್ರಪತಿಗಳೂ ನಮ್ಮ ಉತ್ಸಾಹ ನಮ್ಮ ಶಕ್ತಿ ನಮ್ಮ ನಿಷ್ಠೆ ಮುಂತಾದವುಗಳನ್ನು ನೋಡಿ ಆನಂದಪಟ್ಟರು! ರಾಷ್ಟ್ರಪತಿಗಳು ಹೊರಟುಹೋದ ಮೇಲೆಯಾದರೂ ನಾವು ಕಾರ್ಯಕ್ಕೆ ತೊಡಗುವೆವೆಂದು ತಿಳಿಯಬಹುದಾಗಿತ್ತು. ರಾಷ್ಟ್ರಪತಿಗಳು ಹೇಳಿಹೋದ ಸಾರವನ್ನು ನಾವು ಮರೆಯಲಿಕ್ಕಿಲ್ಲವೆಂದು ನಮ್ಮ ಭಾವನೆಯಾಗಿತ್ತು. ಆದರೆ ನಾವು ಅವನ್ನು ಮರೆತುಬಿಟ್ಟಂತೆ ತೋರುತ್ತದೆ.

ರಾಷ್ಟ್ರಪತಿಗಳು ಹೇಳಿಹೋದ ಸಾರವೇನು? ರಾಷ್ಟ್ರಪತಿಗಳು ದೇಶಸಂಚಾರಕ್ಕೆ ಹೊರಟು ಬಂದಂದಿನಿಂದ ಎಲ್ಲ ಕಡೆಯಲ್ಲಿ ಎಲ್ಲ ಜನರಿಗೆ ರಾಷ್ಟ್ರಪತಿಗಳು ಬೋಧ ಮಾಡಿದ್ದೇನೆಂದರೆ (೧) ರಾಷ್ಟ್ರೀಯ ಸಭೆಯನ್ನು ಸೇರಿರಿ, ರಾಷ್ಟ್ರೀಯ ಸಭೆಯ ಸಭಾಸದರಾಗಿರಿ (೨) ಹಳ್ಳಿಗಳಲ್ಲಿ ತಯಾರಾಗುವ ಪದಾರ್ಥಗಳನ್ನೇ ಕೊಂಡುಕೊಳ್ಳಿರಿ, ಖಾದಿ ಹಳ್ಳಿಗಳ ಉದ್ಧಾರ ಮಾಡಿರಿ. ಹಳ್ಳಿಗಳ ಪುನರುಜ್ಜೀವನ ಕಾರ್ಯದಲ್ಲಿ ನೆರವಾಗಿ ದೇಶದ ಸಂಪತ್ತು ಬೆಳೆಸಿರಿ (೩) ಜಾತಿ-ಜಾತಿಗಳೊಳಗಿನ ವೈಷಮ್ಯಗಳನ್ನು ಕಡೆದೊಡಿಸಿ. [illegible] ಹರಿಜನರನ್ನು ಬಂಧುಗಳಂತೆ ನಡಿಸಿಕೊಳ್ಳಿರಿ, ಎಲ್ಲರೊಡನೆ ಒಂದೇ ಭಾವನೆಯಿಂದ ವರ್ತಿಸಿರಿ. ಕರ್ನಾಟಕದ [illegible] ಜನರಿಗೆ ಹೇಳಿದ್ದು ಇದೇ. ಇದೇ ಸಾರ ಕಲಿಸಲಿಕ್ಕೆ ರಾಷ್ಟ್ರಪತಿಗಳು ಅಲ್ಲಲ್ಲಿ ಅಡ್ಡಾಡಿದರು. ಬಗಬಗೆಯ ದೃಷ್ಟಾಂತ [illegible] ರಾಷ್ಟ್ರಪತಿಗಳು ಬೇರೆಬೇರೆ ಜಿಲ್ಲೆಯವರಿಗೆ ಇದೇ ಸಂದೇಶ ಸೂತ್ರವಾಕ್ಯವನ್ನು ಕಲಿಸಿಕೊಟ್ಟರು. ನಮ್ಮ [illegible] ರಾಷ್ಟ್ರಪತಿಗಳ [illegible]ವನ್ನು ಕೇಳಿದ ಮೇಲಾದರೂ ಎಚ್ಚತ್ತು ಕೆಲಸಕ್ಕೆ ತೊಡಗಬಹುದಿತ್ತಲ್ಲವೇ? ರಾಷ್ಟ್ರಪತಿಗಳ ಕಾರ್ಯದರ್ಶಿಗಳಾದ ದಾ|| ಬಾ|| ಕೃಪಾಲಾನಿ ಮುಂತಾದವರ ಮರ್ಮಸ್ಪರ್ಶಿ ಮಾತುಗಳನ್ನು ಕೇಳಿಯಾದರೂ ನಾವು ಕಾರ್ಯಕ್ಕೆ ಪ್ರವೃತ್ತರಾಗಬಹುದಿತ್ತಲ್ಲವೇ?

ರಾಷ್ಟ್ರೀಯ ಸಭೆಯ ಬಗ್ಗೆ ನಮ್ಮ ಜನರಿಗೆ ಆದರವಿದೆ, ನಂಬಿಗೆಯಿದೆ, ಶ್ರದ್ಧೆಯಿದೆ. ರಾಷ್ಟ್ರಪತಿಗಳು ತಮ್ಮ ಕೊನೆಯ ಸಂದೇಶದಲ್ಲಿ ಇದನ್ನೇ ಹೇಳುತ್ತಾ [illegible] ಉತ್ತರಿಸಿದ, ಕಾರ್ಯಕರ್ತರೂ ಸ್ವಯಂಸೇವಕರೂ ಅವನ್ನು ಕಾಂಗ್ರೆಸ ಘಟನೆಯ ಕಾರ್ಯಕ್ಕೆ ಉಪಯೋಗಿಸಿಕೊಳ್ಳಲಿ" ಎಂದು ಅವರು ಸಾರುತ್ತಾರೆ. ಅದರ ಉಪಯೋಗವೇನು? ನಾವು ಇನ್ನೂ ಸ್ವಸ್ಥರಿದ್ದೇವೆ, ಕೈಚಾಚಿ ಕುಳಿತುಕೊಂಡಿದ್ದೇವೆ. ಎಲ್ಲಾ ಕೆಲಸಕ್ಕೆ ಆರಂಭ ಮಾಡಿದ್ದು ಕಂಡ ಬರುವದಿಲ್ಲ! ಎಲ್ಲ ಕಡೆಗೂ ಕಾರ್ಯಕರ್ತರು ತಿರುಗಿ ಮಲಗಿಬಿಟ್ಟಂತೆ ಕಾಣುತ್ತದೆ.

ಇದೆಂದೂ ಒಳಿತಲ್ಲ. ಹೀಗ ನಾವು ವೈಗಪ್ಪಿದರೆ [illegible] ಕೂತರೆ ನಾವು ಗಳಿಸಿದ ಕೀರ್ತಿಯನ್ನು ಬೀಗಸುತ್ತ ಕೊಳ್ಳುವೆವು. ದೇಶವೆಲ್ಲ ಮುಂದರಿದು ಹೋಗುವಾಗ ನಾವು ಹಿಂದ ಬೀಳುವೆವು. ಕಾಂಗ್ರೆಸ ಸಂಘಟನೆಯ ಕಾಲವು ಇದು. ಕಾಂಗ್ರೆಸ ಕಮಿಟಿಗಳನ್ನು ಸ್ಥಾಪಿಸಿ ಜನರಲ್ಲಿ ಕಾಂಗ್ರೆಸ ಮನೋರಚನೆಯನ್ನು ಬೇರಲಿಕ್ಕೆ ಇದೇ ಅನುಕೂಲ ಕಾಲ. ಆದ್ದರಿಂದ ನಾವು ಜಿಲ್ಲೆಯೊಳಗಿನ ಜನರಿಗೆ ಎಚ್ಚರಿಕೆ ಕೊಡಲು ಇಚ್ಛಿಸುತ್ತಿದ್ದೇವೆ. ಎಲ್ಲ ಕಾರ್ಯಕರ್ತರೂ ಇನ್ನಾದರೂ ಎಚ್ಚತ್ತು ಕಾಂಗ್ರೆಸ ಸಂಘಟನೆಯ ಕಾರ್ಯವನ್ನು ತ್ವರೆಯಿಂದ ಸಾಗಿಸುವರೆಂದು ನಾವು ಹಾರೈಸುತ್ತೇವೆ. ಕಾಂಗ್ರೆಸ ಸಂಘಟನೆಯು ಕೆಲಸವೇ ಎಲ್ಲಕ್ಕೂ ಮಹತ್ವದ. ಕಾಂಗ್ರೆಸ ಸಂಘಟನೆಯಿಲ್ಲದಿದ್ದರೆ ಬೇರೆ ಯಾವ ರಾಷ್ಟ್ರಸೇವೆಯ ಕೆಲಸವೂ ಸುಲಭ ಸಾಧ್ಯವಾಗುವಂತಿಲ್ಲ. ಕಾಂಗ್ರೆಸ ಘಟನೆಯ ಆಧಾರವಿಲ್ಲದೆ ಖಾದಿ ಪ್ರಸಾರವಾಗದು, ಹಳ್ಳಿಗಳ ಪುನರುಜ್ಜೀವನ ಕಾರ್ಯವಾಗದು, ಬಂಧು-ಭಾವನೆಯು ಪ್ರಚಾರವೂ ಆಗದು. ಯಾವ ದೇಶಕಾರ್ಯಕ್ಕೂ [illegible] ಕಾಂಗ್ರೆಸದ ಆಧಿಷ್ಠಾನವು ಬೇಕು. ಈಗ ನಮ್ಮಲ್ಲಿ ಅಂಥ ಅಧಿಷ್ಠಾನವಿರುವದಿಲ್ಲ. ಅದನ್ನು ನಾವು ಉಂಟು ಮಾಡಬೇಕಾಗಿದೆ. ಆದ್ದರಿಂದ ಕಾಂಗ್ರೆಸ ಘಟನೆಯ ಕಾರ್ಯವನ್ನು ಕೈಗೊಳ್ಳಬೇಕೆಂದು ನಾವು ಜಿಲ್ಲೆಯೊಳಗಿನ ಸಮಸ್ತ ಕಾರ್ಯಕರ್ತರಿಗೆ ಸೂಚಿಸಬಯಸುತ್ತೇವೆ.

೬ ನೇ ಕರ್ನಾಟಕ ಸ್ತ್ರೀ-ಪರಿಷತ್ತು.

ಪ್ರಾಂತಿಕ ಪರಿಷತ್ತಿನ ಕಾಲಕ್ಕೆ ಮಂಗಳೂರಿನಲ್ಲಿ ೬ ನೇ ಕರ್ನಾಟಕ ಸ್ತ್ರೀ-ಪರಿಷತ್ತು ಕೂಡಿತ್ತು. ಸತ್ಯಾಗ್ರಹ ಸಂಗ್ರಾಮದಲ್ಲಿ ಹೋರಾಡಿದ ಮಹಿಳೆಯರ ಅಭಿನಂದನ, ಕೂಲಿಕಾರ ಹೆಣ್ಣುಮಕ್ಕಳ [illegible] ಸುಧಾರಿಸುವ ಬಗ್ಗೆ ಅಸೆಂಬ್ಲಿ ಸಭಾಸದರಿಗೆ ವಿನಂತಿ, ಗ್ರಾಮ-ಕೈಗಾರಿಕೆಯ ಒಡವೆಗಳನ್ನೂ [illegible] ಉಪಯೋಗಿಸಬೇಕಾಗಿ ಕನ್ನಡ ಸ್ತ್ರೀಸಮಾಜಕ್ಕೆ ಪ್ರಾರ್ಥನ, ಜೈಂಟ ಪಾರ್ಲಿಮೆಂಟರಿ ಕಮಿಟಿಯ ವರದಿ ಹಾಗೂ ಅದರ ಮೇಲಿ ಆಧರಿಸಿದ ಸುಧಾರಣಾ ಬಿಲ್ಲಿನ ನಿಷೇಧ, ದಕ್ಷಿಣ ಕನ್ನಡ ಜಿಲ್ಲೆಯೊಳಗಿನ ರಿಷ್ಟ್ರಿಜನರ ಸ್ಟಂಟಿನ ನಿಷೇಧ, ಪ್ರಾಥಮಿಕ ಶಿಕ್ಷಣ ಧರ್ಮಾರ್ಥ ಮತ್ತು ಒತ್ತಾಯದ್ದು ಮಾಡುವ ಬಗ್ಗೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಸೂಚನೆ ಹಿಂದೀ ಪ್ರಚಾರ ಮುಂತಾದ ಠರಾವುಗಳು ಪಾಸಾಗಿರುತ್ತವೆ. ಹುಬ್ಬಳ್ಳಿಯ ಭಗಿನೀ ಮಂಡಳದ ಶಾಖೆಗಳನ್ನು ಅಲ್ಲಲ್ಲಿ ತೆರೆಯುವ ಬಗ್ಗೆ ಒಬ್ಬ ಪ್ರಚಾರಿಕೆಯನ್ನು ನೇಮಿಸಬೇಕಾಗಿಯೂ ಪರಿಷತ್ತು ಗೊತ್ತುಮಾಡಿದೆ.

— ಬೆಂಗಾಲ ಬ್ರಿಟಿಶ ಪ್ರಧಾನ ಮಂಡಳದ ಪುನರ್ಘಟನೆಯಾಗುವದೆಂದು ತಿಳಿಯುತ್ತದೆ. ಮಿ. ರಾಮ್ಸೇ ಮೆಕಡೋನಲ್ಡರು ಮುಖ್ಯ ಪ್ರಧಾನಪದವನ್ನು ಬಿಟ್ಟು ವಿಶೇಷ ಶ್ರಮ ಬೀಳದ ಬೇರೊಂದು ಪದವನ್ನು ಸ್ವೀಕರಿಸುವರು. ಮಿ. ಬೋಲ್ಡವಿನ್‌ರವರು ಮುಖ್ಯ ಪ್ರಧಾನರಾಗುವರು. ಬರುವ ಅಕ್ಟೋಬರ ಸುಮಾರಕ್ಕೆ ಪಾರ್ಲಿಮೆಂಟಿನ ವಿಸರ್ಜನೆಯಾಗಿ ಹೊಸ ಚುನಾವಣೆಗಳು ಆಗುವವಂತೆ.

— ಹಿಂದೀ ಸುಧಾರಣಾ ಬಿಲ್ಲಿನ ಕಾಪಿ ಚರ್ಚೆ (ಕಲಮವಾರ ಚರ್ಚೆ) ಮುಗಿಯುತು. ರಿಪೋರ್ಟ ತಯಾರಾಗುತ್ತಿದೆ. ಆಗಸ್ಟ ತಿಂಗಳೊಳಗಾಗಿ ಬಿಲ್ಲು ಪಾಸ ಮಾಡಿಕೊಳ್ಳಬೇಕೆಂದು ಪ್ರಧಾನ ಮಂತ್ರಿಗಳ ಇಚ್ಛೆಯಿದೆ.

ಯುದ್ಧ ಹಿಂದಾಯಿತೇ?

[ನಿರೀಕ್ಷಕನು ಬರೆದುದು.]

ಯುದ್ಧ ಹಿಂದಾಯಿತೇ? ಯುದ್ಧ ಬೇಗನೇ ಒದಗದೇ? ಇದೇ ಪ್ರಶ್ನೆ ನನ್ನ ಕಣ್ಮುಂದೆ ನಿಂತಿದೆ ಕೆಲ ಕಾಲ ಹಿಂದಾಯಿತೆಂದು ಕಾಣುತ್ತದೆ, ಕೆಲ ಕಾಲ ಹಿಂದಾಗಲಿಲ್ಲವೆಂದು ತೋರುತ್ತದೆ ಜರ್ಮನರು ವ್ಹರ್ಸಾಲಿಸ್ ತಹನಾಮೆಯನ್ನು ತುಳಿದು ಸಕ್ತಿಯ ಲಷ್ಕರಿ ಶಿಕ್ಷಣ ಕ್ರಮವನ್ನು ಕೈಕೊಂಡಂದಿನಿಂದ ವಿಮಾನಗಳನ್ನೂ ನೌಕಾಬಲವನ್ನೂ ಕಟ್ಟುವ ಉದ್ಯೋಗವನ್ನು ಭರದಿಂದ ಆರಂಭಿಸಿದಂದಿನಿಂದ ಎಲ್ಲ ಯುರೋಪ್ಯ ರಾಷ್ಟ್ರಗಳಲ್ಲಿ ಗದಿಬಿಡಿಯೆದ್ದಿತು ಎಲ್ಲರೂ ತಮ್ಮತಮ್ಮ ಸಿದ್ಧತೆಯನ್ನು ಪರಿಕ್ಷಿಸತೊಡಗಿದರು ಹಿಟ್ಲರರಿಗೆ ಶಾಪ ಕೊಡಲಾರಂಭಿಸಿದರು! ಜರ್ಮನಿಯ ಹೇತುವಿನ ಬಗ್ಗೆ ಸಂಶಯ ತೋರಹತ್ತಿದರು ರಾಷ್ಟ್ರಸಂಘದಲ್ಲೂ ಚರ್ಚೆಯಾಗಿ ವ್ಹರ್ಸಾಲೀಸ ತಹನಾಮೆ ಮುರಿದ ಬಗ್ಗೆ ಜರ್ಮನಿಯ ಮೇಲೆ ಆರೋಪ ಹೊರಿಸಲಾಯಿತು. ಜರ್ಮನ್ ಸರಕಾರವು ಬೆದರಲಿಲ್ಲ ತನ್ನ ಸಂಕಲ್ಪವನ್ನು ಬಿಡಲಿಲ್ಲ ಆದರೆ ಹೀಗೆ ಜಗತ್ತಿನಲ್ಲಿ ಎಲ್ಲರಿಗೂ ಶತ್ರುಗಳಾಗಿ ಮಾಡಿಕೊಂಡರೆ ಉಳಿಗಾಲವಿಲ್ಲೆಂದು ಹಿಟ್ಲರರೂ ಬಲ್ಲರು ರಾಷ್ಟ್ರಸಂಘದ ಆರೋಪಕ್ಕೆ, ಪರರಾಷ್ಟ್ರಗಳ ಟೀಕೆಗೆ ಕಳೆದ ೨೧ನೇ ಮಂಗಳವಾರ ಉತ್ತರ ಕೊಡುವವಾಗಿ ಹಿಟ್ಲರರು ಜಾಹೀರ ಮಾಡಿದರು ಎಲ್ಲ ರಾಷ್ಟ್ರಗಳು ಜರ್ಮನಿಯ ಕಡೆಗೆ ಕಿವಿಗಳನ್ನು ಒಡ್ಡಿದವು ಹಿಟ್ಲರರು ತಮ್ಮ ಪ್ರಜಾಪ್ರತಿನಿಧಿ ಸಭೆಯ ಮುಂದೆ ಜರ್ಮನ್ ಸರಕಾರದ ಧೋರಣವನ್ನು ಜಾಹೀರಪಡಿಸಿದರು ಜರ್ಮನಿಗೆ ಪರರಾಜ್ಯಗಳ ಮೇಲೆ ಆಕ್ರಮಣ ಮಾಡುವ ಇಚ್ಛೆಯಿಲ್ಲ, ಬೇರೆ ರಾಷ್ಟ್ರಗಳು ವ್ಹರ್ಸಾಲಿಸ್ ಒಪ್ಪಂದಕ್ಕನುಸಾರವಾಗಿ ತಮ್ಮ ತಮ್ಮ ಶಸ್ತ್ರಾಸ್ತ್ರಗಳನ್ನು ಕುಗ್ಗಿಸುವದಿಲ್ಲವಾದ್ದರಿಂದ ಜರ್ಮನಿಯೂ ತನ್ನ ಮೇಲೆ ಹಾಕಿದ ನಿರ್ಬಂಧಗಳನ್ನು ಮುರಿಯಬೇಕಾಯಿತು ಸಾಂಘಿಕ ಸಹಕಾರದಿಂದ ಶಾಂತಿ ಸ್ಥಾಪನೆ ಮಾಡುವದಾದರೆ ಜರ್ಮನಿಯು ನೆರವಾಗಲು ಸಿದ್ಧವಿದೆ ಆಕಾಶನೌಕೆಗಳ ಉಪಯೋಗದ ಬಗ್ಗೆ ಆಂತರ್ ರಾಷ್ಟ್ರೀಯ ಕರಾರು ಮಾಡುವದಕ್ಕೂ ಜರ್ಮನಿಯ ಒಪ್ಪಿಗೆಯಿದೆ ತನ್ನ ನೆರೆಹೊರೆಯ ರಾಷ್ಟ್ರಗಳ ಕೂಡ ಮಿತ್ರತ್ವದ ಕರಾರುಗಳನ್ನು ಮಾಡಲಿಕ್ಕೆ ಜರ್ಮನಿಯು ತಯಾರಿಯಿದೆ ಆಸ್ಟ್ರಿಯಾ ದೇಶದ ಕಾರಭಾರದಲ್ಲಿ ಕೈಹಾಕಲು ಜರ್ಮನಿಗೆ ಇಚ್ಛೆಯಿಲ್ಲ ನೌಕಾಬಲ ಬೆಳಸುವ ಇಚ್ಛೆಯೂ ಇಲ್ಲ ಆತ್ಮರಕ್ಷಣೆಯ ಬಗ್ಗೆ ಬೇಕಷ್ಟು ವಿಮಾನಗಳನ್ನು ಇಡಲಿಕ್ಕೆ ಮಾತ್ರ ಯಾರ ಆತಂಕವನ್ನೂ ಜರ್ಮನಿಯು ಕೇಳಲಿಕ್ಕಿಲ್ಲ ಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಕಡಿಮೆ ಮಾಡಬೇಕೆಂಬುದೇ ಜರ್ಮನಿಯ ಇಚ್ಛೆ ಇತರ ರಾಷ್ಟ್ರಗಳು ಇದಕ್ಕೆ ಒಪ್ಪಿದರೆ ಜರ್ಮನಿಯು ಸಹ ಸಹಕರಿಸುವದು. ಈ ಪ್ರಕಾರ ಹಿಟ್ಲರರು ಜರ್ಮನಿಯ ಧೋರಣವನ್ನು ವ್ಯಕ್ತಗೊಳಿಸಿದ್ದಾರೆ. ಮರುದಿನ ಬೆಳಿಗ್ಗೆ ಬ್ರಿಟಿಶ ಪ್ರಧಾನಮಂಡಳದ ಸಭೆಯಾಗಿ ಹಿಟ್ಲರರ ಭಾಷಣದ ಪರಾಮರ್ಶೆ ತೆಗೆದುಕೊಳ್ಳಲಾಯಿತು. ಅದೇ ಸಾಯಂಕಾಲ ಕಾಮನ್ಸ ಸಭೆಯಲ್ಲಿ ಮಿ| ಬೋಲ್ಡವಿನ್ ಸಾಹೇಬರು ಹಿಟ್ಲರರ ಹೇಳಿಕೆಯನ್ನು ಅಭಿನಂದಿಸಿ, ಜರ್ಮನಿಯಿಂದ ಯುರೋಪ ಖಂಡದ ಶಾಂತತೆಗೆ ಬಾಧೆಯಾಗಲಾರದೆಂದು ತಿಳಿಸಿಹೇಳಿದರು ಇಂಗ್ಲಿಷ ಪತ್ರಿಕೆಗಳೂ ಹಿಟ್ಲರರ ವಿಚಾರಗಳನ್ನು ಕೇಳಿ ಹಿಗ್ಗುತ್ತಿವೆ ಜರ್ಮನಿಯ ಹೇತುಗಳ ಬಗ್ಗೆ ಇಂಗ್ಲಂಡದ ಸಂದೇಹ ದೂರವಾದರೂ ಫ್ರೆಂಚರಿಗೆ ಮಾತ್ರ ಸಮಾಧಾನವಿಲ್ಲ. ಹಿಟ್ಲರರು ತಮ್ಮ ತಯಾರಿಯ ಪೂರ್ಣತೆಯನ್ನು ಮಾಡಿಕೊಳ್ಳುವದಕ್ಕೆ ಅವಕಾಶ ಬೇಕಾದ್ದರಿಂದ ರಕ್ಷಣತನದ ಮಾತುಗಳನ್ನಾಡಿದರೆಂದು ಫ್ರೆಂಚ ಪತ್ರಿಕೆಗಳ ಅಭಿಪ್ರಾಯ. ಇದು ಸುಳ್ಳೆಂದು ಹೇಳುವ ಧೈರ್ಯ ನನಗಿಲ್ಲ ಭವಿಷ್ಯದ ಘಟನೆಗಳೇ ಅದರ ಸತ್ಯಾಸತ್ಯತೆಯನ್ನು ನಿರ್ಣಯಿಸುವವು

ಹಿಟ್ಲರರ ಧೋರಣವು ವ್ಯಕ್ತವಾಗುವ ಮುಂಚೆ ಫ್ರೆಂಚರ ಪರರಾಷ್ಟ್ರೀಯ ಮಂತ್ರಿಗಳಾದ ಎಮ್. ಲಾವಲ್‌ರವರು ಮೊಸ್ಕೋ ವೊರ್ಸೋ ನಗರಗಳಿಗೆ ಭೆಟ್ಟಿಕೊಟ್ಟು ಅಲ್ಲಿಯ ಮಂತ್ರಿಮಂಡಳಗಳ ಕೂಡ ಚರ್ಚೆ ನಡಿಸಿ ಬಂದರು ಏನು ಚರ್ಚೆಯಾಯಿತೆಂಬುದು ಹೊರಬಿದ್ದಿರುವದಿಲ್ಲ. ತಿರುಗಿ ಬರುವಾಗ ಎಮ್ ಲಾವಲ್‌ರವರು ಜರ್ಮನಿಯ ಸೈನ್ಯ ಖಾತೆಯ ಮುಖ್ಯಸ್ಥರಾದ ಜನರಲ್ ಗೋರಿಂಗರವರನ್ನೂ ಕಂಡು ಮುಕ್ಕಾಲು ತಾಸು ತನಕ ಮಾತಾಡಿದರು ಗೋರಿಂಗರವರು ಜರ್ಮನಿಯ ವಿಚಾರಗಳನ್ನು ತಿಳಿಸಿ ಹೇಳಿದರಂತೆ. ಈ ಭೆಟ್ಟಿಯಿಂದ ಜರ್ಮನ್-ಫ್ರೆಂಚರ ವಿರೋಧ ತುಸು ಶಾಂತವಾಗಬಹುದೆಂದು ಹೇಳುತ್ತಾರೆ.

ಪೋಲಂಡದ ಸರ್ವಾಧಿಕಾರಿಗಳಾದ ಮಾರ್ಶಲ ಪಿಲ್ಸುಡಸ್ಕಿಯವರು ೮-೧೦ ದಿನಗಳ ಹಿಂದೆ ಸ್ವರ್ಗವಾಸಿಗಳಾದರು ಹೊಸ ಸರ್ವಾಧಿಕಾರಿಗಳನ್ನು ತಮ್ಮ ತಮ್ಮ ಕಡೆಗೆ ಒಲಿಸಿಕೊಳ್ಳಲಿಕ್ಕೆ ಫ್ರೆಂಚರೂ ಜರ್ಮನರೂ ಪ್ರಯತ್ನ ಮಾಡುತ್ತಲಿದ್ದಾರೆ. ಪೋಲಂಡಕ್ಕೂ ರಶ್ಯರಿಗೂ ಮುಂಚಿನಿಂದ ಹಗೆತನವಿದೆ ಆದ್ದರಿಂದ ಪೋಲಂಡವು ಜರ್ಮನಿಯ ಕಡೆಗೆ ಒಲಿಯಬಹುದೆಂದು ಹೇಳುತ್ತಾರೆ ಪೋಲಂಡ-ಜರ್ಮನಿಗಳು ಕೂಡಿದರೆ ಫ್ರಾನ್ಸ ಮತ್ತು ಇಟಾಲಿಗಳ ಸೊಕ್ಕು ಮುರಿಯುವದೆಂಬ ಆಶೆ ಜರ್ಮನಿಗಿದೆ.

ಇಟಾಲಿ-ಹಬಸಿ ಪ್ರಕರಣವು ರಾಷ್ಟ್ರಸಂಘದ ಮುಂದೆ ವಿಚಾರಕ್ಕೆ ಒಂದು ಬ್ರಿಟಿಶ ಪ್ರತಿನಿಧಿಗಳಾದ ಮಿ| ಎಂಥೋನಿ ಈಡನ್‌ರವರ ಪ್ರಯತ್ನಗಳಿಂದ ಇತ್ತಟ್ಟಿನವರ ವಿವಾದ ಬಗೆಹರಿದದಾಗಿ ಇದೀಗಲೇ ಸುದ್ದಿ ಬಂದಿದೆ ಅಂತು ಯುರೋಪಖಂಡದೊಳಗಿನ ಮದ್ದಿನ ಮನೆಗಳಿಗೆ ಬೆಂಕಿ ಹಚ್ಚಬಹುದೆಂಬ ಕಲ್ಪನೆ ಮಾಡಿದ ಹಬಸೀ ಪ್ರಕರಣ ಶಾಂತವಾಯಿತು ಜರ್ಮನಿಯ ಪ್ರಕರಣವೂ ಸದ್ಯಕ್ಕೆ ತಣ್ಣಗಾಗಿದೆ ಆದ್ದರಿಂದಲೇ ಯುದ್ಧ ತುಸು ಹಿಂದಾಯಿತೆಂದು ಒಮ್ಮೆ ಕಲ್ಪನೆ ಮಾಡಬೇಕಾಗುತ್ತದೆ ಆದರೆ ಬೇರೆ ಬೇರೆ ರಾಷ್ಟ್ರಗಳಿಗೆ ಏರಿದ ರಣೋತ್ಸಾಹ ಕಡಿಮೆಯಾಗದಿರುವಾಗ ಯುದ್ಧ ಹಿಂದಾಯಿತೆಂದು ನಾನು ಖಂಡಿತ ಹೇಗೆ ಹೇಳಲಿ ?

Siromani Udipi Narayanacharya,
CHAUKHAMBA, BENARES CITY.

SUNECO
BENARES CITY

ಮಹಾಶಯರೇ, ರುದ್ರನೇತ್ರರೂಪನಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಕ್ರಿಂ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಿಯ ಹೆಚ್ಚುವದು. ಕೆಂಪು ಸರ 82 ದರ 1ಕ್ಕೆ ರೂ 0 8 0ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8 0ರಿಂದ ೨೦ ವರೆಗೆ ಮತ್ತು ಬೇರೆ ವಿಷಯಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0ರ ಸ್ಟಾಂಪು ಕಳಿಸಿದರೆ, 1 ಕಾಶಿ ನಕ್ಷೆ, 1 ವಿಶ್ವೇಶ್ವರನ ಪಟ ಸಮ್ಮ ಕೆಟಲಾಗು ಸಹ ಇನಾಂ ಕಳಿಸಲಾದೀತು.

ಪತ್ತೆ.— ಶಿರೋಮಣಿ ನಾರಾಯಣಾಚಾರ್ಯ,
ಚೌಕಾಂಬಾ, ಕಾಶೀಕ್ಷೇತ್ರ

ಡಾ॥ ಮಹಿಷಿಯವರ ಅನುಭವಸಿದ್ಧ ಔಷಧ.

ಡಾ| ಮಹಿಷಿಯವರು ಕಳೆದ ಮೂವತ್ತು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ, ಪ್ರಯೋಗದಿಂದಲೂ ತಯಾರಿಸಿದ ಈ ಕೆಳಗಣ ಔಷಧಗಳು ಅತ್ಯಂತ ಪರಿಣಾಮಕಾರಿಗಳಾಗಿರುವವೆಂದು ಅವನ್ನು ಉಪಯೋಗಿಸಿದವರೆಲ್ಲರೂ ಅಭಿಪ್ರಾಯಪಡುತ್ತಿರುವರು ಡಾ| ಮಹಿಷಿಯವರು ಈ ಅಮೂಲ್ಯವಾದ ಔಷಧಗಳಿಂದಲೇ ಕಾರವಾರ ಜಿಲ್ಲೆಯಲ್ಲಿ ಅತ್ಯಂತ ಲೋಕಪ್ರಿಯರಾಗಿರುವರು.

ಆಶೋಕಾ ಕಾರ್ಡಿಯಲ್ — ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ದಿವ್ಯೌಷಧವು ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವದಲ್ಲದೆ ಬಂಜೆತನವು ನಷ್ಟವಾಗುವದು ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು ಕ್ರಯ ರೂ ೧-೮-೦

ಅಶ್ವಗಂಧ ಟೋನಿಕ್:— ಮಜ್ಜಾ, ಮಾಂಸ ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯ ಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ ಅಪಚನ ಮುಂತಾದವುಗಳೆಲ್ಲ ನಷ್ಟವಾಗುವವು ಬಾಣಂತಿಯರಿಗೂ ಇದು ದಿವ್ಯೌಷಧ ರೂ ೧-೮-೦,

ಎಗ್ಸ್ ಮಿಕ್ಸ್ಚರ, ಫೀವರ ಡ್ರೊಪ್ಸ್, ಅಮೃತಸುಧಾ, ಕರ್ಪೂರಾರ್ಕ, ಸಾಯರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ಸಿಕ್ಕಾಗಲೇ ಇವುಗಳ ಉಪಯೋಗವಾಗುವುದು ಇವು ಅಮೂಲ್ಯ ಔಷಧಗಳು!!

ಇವಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ-ಮಲೇರಿಯಲ್ ಮಿಕ್ಸ್ಚರ, ಬಾಲಾಮೃತ, ಬ್ಲಡ್ ಮಿಕ್ಸ್ಚರ, ಕಾಲರೇಲ, ಡಿಸ್ಪೆಪ್ಟಿಕ ಮಿಕ್ಸ್ಚರ, ಸಾಯರಪ್ ಕ್ಯಾಲ್ಸಿಲೆಕ್ಟೋ ಫಾಸ್ಪೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು ಬಾಳಂತಿ ಮದ್ದು, ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು ಕ್ಯಾಟಲಾಗು ಪುಕ್ಕಟೆಯಾಗಿ ಸಿಗುವುದು.

ರಾ| ದೇವಪ್ಪಾ ಅಯ್ಯ ನಾಯಕ, ಕುಮಟಾ ಹೆಡ್ ಆಫೀಸು—
ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು || ಸ್ವಾಸ್ಥ್ಯನಿಲಯ, ಧಾರವಾಡ.

ಸ್ಥಾನಿಕ ವೃತ್ತಾಂತ

ಕುಮಟಾ— ೩೩ ಹಸ್ತಾಕ್ಷರದ ಪ್ರತಿಯು ಲಕ್ಷ್ಯ ಗಳಿಲ್ಲ

ಕಳೆದ ತಾ ೧೯ ನೇ ರವಿವಾರ ಸಾಯಂಕಾಲಕ್ಕೆ ಶ್ರೀ ವೆಂಕಟರಮಣ ದೇವಸ್ಥಾನದ ಉತ್ತರಗಿಯ ಮಾಳಿ ರಾ| ಜನಾರ್ದನ ಶಿವ ರಾಮಕೃಷ್ಣ, ವಕೀಲ ಇವರ ಅಧ್ಯಕ್ಷತೆಯಲ್ಲಿ ಊರ ನಾಗರಿಕರು ಸಭೆ ಸೇರಿ ಕೈ ವಾ| ರಾ| ಸಾ| ಮಂಜುನಾಥ ದೇವರಾವ ಕುಳಕರ್ಣಿ ಇವರ ಆಕಸ್ಮಿಕ ಹಾಗು ಅಕಾಲಿಕ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಿದರು

ಅಳ್ವೆಕೋಡಿಯಲ್ಲಿ ಮೊನ್ನೆ ಬೆಳಿಗ್ಗೆ ೧೦ ಘಂಟೆಯ ಸುಮಾರಕ್ಕೆ ಭಾನು ನಾರಾಯಣ ನಾಯ್ಕ ಎಂಬುವನ ಮನೆಗೆ ಆಕಸ್ಮಿಕ ಬೆಂಕಿ ಹತ್ತಿ ಮನೆಯು ಸುಟ್ಟು ಹೋಯಿತು

ದನಗಳನ್ನು ದೊಡ್ಡಿಗೆ ಹಾಕುವ ಕ್ರಮ ಇಲ್ಲಿ ನಡೆದಿತ್ತು ಈ ಬಗ್ಗೆ ನಾಗರಿಕರು ಜಿಲ್ಹಾಧಿಪರಿಗೆ ಅರ್ಜಿ ಮಾಡಿದ್ದರಿಂದ ಈಗ ತಿರುಗುತ್ತಿದ್ದ ದನಗಳ ಹಿಡಿಯೋಣದಿಂದ ನಾಗರಿಕರಿಗೆ ತುಂಬ ಬೇಸತ್ತವಾಗಿಯೂ ಇದೆ ಕಾರಣದಿಂದ ತಮ್ಮನ್ನ ಕಾಪಾಡಬೇಕಾಗಿಯೂ ಅರ್ಜಿದಾರರು ಬಿನ್ನೈಸಿಕೊಂಡಿದ್ದರೆ ಅರ್ಜಿಗೆ ತಿಂಗಳು ಮಿಕ್ಕಿ ಸಹಿಗಳಾಗಿವೆ. ಜಿಲ್ಹಾಧಿಪರು ನಾಗರಿಕರ ಮನವಿಯ ಕಡೆಗೆ ಸಹಾನುಭೂತಿಯಿಂದ ಗಮನಿಸಬೇಕಾಗಿ ನಮ್ಮ ನಮ್ರ ಸೂಚನೆ ಇದೆ

೧೯೩೩-೩೪ ಮತ್ತು ೧೯೩೪ ೩೫ನೇ ವರ್ಷಗಳಲ್ಲಿ ಪಡೆಯಲಾಗದ ಮನೆ ತೆರಿಗೆಯನ್ನು ವಸೂಲ ಮಾಡಲು ಇಲ್ಲಿಯ ಮ್ಯುನಿಸಿಪಾಲಿಟಿಯವರು ಹೊಸ ಉಪಾಯ ಹುಡುಕಿ ತೆಗೆದಿದ್ದಾರೆ ೧೯೩೬ ೩೭ ಮತ್ತು ೧೯೩೭-೩೮ನೇ ವರ್ಷಗಳಲ್ಲಿ ಈಗ ಪ್ರಚಲಿತದಲ್ಲಿರುವ ಮನೆ-ತೆರಿಗೆಯ ದರವನ್ನು ಇಮ್ಮಡಿ ಮಾಡುವದೇ ಆ ಉಪಾಯ! ಕಳೆದ ತಾ ೨೦ನೇಗೆ ಕೂಡಿದ ಕೌನ್ ಮ್ಯುನಿಸಿಪಾಲಿಟಿಯ ವಿಶೇಷ ಸಭೆಯಲ್ಲಿ ಈ ರೀತಿ ಮನೆತೆರಿಗೆಯ ದರವಾರ ಪಟ್ಟಿಯನ್ನು ದಿನ ಸ್ಥಾಪಿಸುವ ಬಗ್ಗೆ ಠರಾವು ಪಾಸಾಗಿದೆ ಜನರ ತಕ್ರಾರುಗಳಿದ್ದಲ್ಲಿ ಅವನ್ನು ತಾ ೩೧-೬-೧೯೩೫ರೊಳಗಾಗಿ ಕಮಿಟಿಯ ಸೆಕ್ರೆಟರಿ ಕಡೆಗೆ ಬರೆದು ಕೊಟ್ಟು ಪಾವತಿ ಪಡೆಕೊಳ್ಳಬೇಕಾಗಿ ಕಮಿಟಿಯು ಜಾಹೀರನಾಮೆ ಹೊರಡಿಸಿದೆ ಈಗಿರುವ ಮನೆ-ತೆರಿಗೆ ನಿಯಮಗಳಲ್ಲಿ ಮನೆ ತೆರಿಗೆ ಪತ್ರಿಕೆಯಲ್ಲಿ ಒಳ್ಳೆ ಬದಲಾವಣೆಗಳನ್ನು ಮಾಡಬೇಕಾಗಿ ಕ್ರಮಗಳನ್ನು ಮಾಡಿದ್ದಾದರೆ, ಸಂಬಂಧಪಟ್ಟ ಮನೆ ಮಾಲಿಕರಿಗೆ ನೋಟೀಸು ಕೊಟ್ಟರೆ ಸಾಕು, ಜಾಹೀರ ನೋಟೀಸು ಕೊಡುವದವಶ್ಯವಿಲ್ಲ" ವೆಂಬ ಒಸೇ ನಿಯಮವುಂಟು. ಅದನ್ನು ತಗೆದುಹಾಕಬೇಕಾಗಿಯೂ ಕಮಿಟಿಯಲ್ಲಿ ಠರಾವಾಗಿದೆ ಈ ಬಗ್ಗೆ ತಕ್ರಾರ ಇದ್ದವರು ಒಂದು ತಿಂಗಳೊಳಗೆ ತಿಳಿಸಬೇಕಂತೆ! ಮನೋಜವಂಟು ಕಮಿಟಿಯು ಕಾಲಾವಧಿ ತೀರುತ್ತ ಬಂದಿದೆ. ಇನ್ನಿರುವ ಎರಡು ತಿಂಗಳಲ್ಲಿ ಕಮಿಟಿಯವರು ಏನೇನು ಮಾಡುವರೆಂದು ಸಕಲ ಸಜ್ಜಲ ಬಾಲಕನಾದ ವೆಂಕಟರಮಣನೇ ಬಲ್ಲನು!

ಗೋಕರ್ಣ — ವೈಶಾಖ ಶುದ್ಧ ೫ಮಿಯಿಂದ ಶುದ್ಧ ೧೦ಮಿ ವರೆಗೆ ಶ್ರೀಮತ್ ಶಂಕರಾಚಾರ್ಯರ ಜಯಂತಿ ಮಹೋತ್ಸವವು 'ಅನಂತ ವಿದ್ಯಾದಾಯಿನೀ' ವೇದಪಾಠ ಶಾಲೆಯಲ್ಲಿ ವಿಜೃಂಭಣೆಯಿಂದ ನೆರವೇರಿತು ದಿನಾಲು ಶಾಂಕರ ದಿಗ್ವಿಜಯ ಪಾರಾಯಣ, ಆಚಾರ್ಯ-ಚರಿತ್ರ ಕಥನ ಮುಂತಾದ ಕಾರ್ಯಕ್ರಮ ನಡೆದಿತ್ತು ಆಚಾರ್ಯರ ಗುಹಾಪ್ರವೇಶದ ದಿನ ಅಂದರೆ ಪೌರ್ಣಿಮೆಯು ದಿನ ಮಹಾಜನರ ಸಭೆಯಾಯಿತು ವೇದಘೋಷ, ಪ್ರವಚನ, ಪೂಜೆ ಮೊದಲಾದವುಗಳು ನಡೆದವು ಸಭೆ ಮುಂತಾದ ವ್ಯವಸ್ಥೆಗಳ ಬಗ್ಗೆ ಸಹಾಯ ಮಾಡಿದವರಿಗೆ ಪಾಠಶಾಲೆಯ ಚಾಲಕರು ಧನ್ಯವಾದಗಳನ್ನರ್ಪಿಸುತ್ತಾರೆ

ಹೊನ್ನಾವರ— ಮಳೆ ಇಲ್ಲದ ನೀರಿಗೆ ಬರಗಾಲ ಬಂದಿದೆ ಜನರು ವ್ಯಸನಾಕ್ರಾಂತರಾಗಿರುತ್ತಾರೆ

ಈಗ ಬಿಸಿಲು ಬಾಧೆ ಹೆಚ್ಚಾದ್ದರಿಂದ ದನ ಕರುಗಳನ್ನು ಹೊರಗೆಬಿಡುವದು ಕಡಿಮೆ ಬಿಟ್ಟ ದನಗಳು ಮಧ್ಯಾನ್ಹದ ವೇಗ ತಿರುಗಿ ಕೊಟ್ಟಿಗೆಗೆ ಬರುತ್ತವೆ ಇಷ್ಟು ದಿನ ಪೋಲೀಸರು ದನಗಳನ್ನು ಹಿಡಿಯುತ್ತಿದ್ದಿಲ್ಲ, ಈಗ ಪುನಃ ಹಿಡಿಯ ಹತ್ತಿದ್ದಾರೆ ರಸ್ತೆಯ ಬದಿಗೆ ಖಾಸಗಿ ಜಾಗದಲ್ಲಿ ನಿಂತ ದನಗಳನ್ನು ಹಿಡಿಯುತ್ತಾರೆಂದು ಅಲ್ಲಲ್ಲಿ ದೂರು ಕೇಳುತ್ತಿದೆ ಪೋಲೀಸ ಅಧಿಕಾರಿಗಳು ಜನರನ್ನು ಕಾಯಬೇಕು.

೧೯೩೪-೩೫ನೇ ಸಾಲಿನಲ್ಲಿ ನಮ್ಮ ಮ್ಯುನಿಸಿಪಾಲಿಟಿಯ ಉತ್ಪನ್ನ ಬೆಳೆದಿದೆ ಆ ಮಾನದಿಂದ ಸಾರ್ವಜನಿಕ ಸುಖ ಸೋಯಿಗಳು ಮಾತ್ರ ಸುಧಾರಿಸಿಲ್ಲ ನೌಕರರ ಸಂಖ್ಯೆ ಬೆಳೆಸುವದರಲ್ಲಿ ಮತ್ತು ಪಗಾರ-ಬಡ್ತಿ ಮಾಡುವದರಲ್ಲಿ ಮ್ಯುನಿಸಿಪಾಲಿಟಿಯ ಲಕ್ಷ್ಯ! ರಾಮತೀರ್ಥ ದುರುಸ್ತಿಯ ಕೆಲಸವು ಕಂಟ್ರಾಕ್ಟರ ಜನರ ತಿಕ್ಕಾಟದಲ್ಲಿ ಸಿಕ್ಕು ಮುಂದರಿಯದೆ ಬಿದ್ದಿದೆ'

ಮುಂಚೆ ೧ ರೂಪಾಯಿ ದರ ಹೆಚ್ಚು ಅಕ್ರಾಯ ಡ್ಯೂಟಿ ತೆತ್ತ ನಂತರ ಡ್ಯೂಟಿ ತೆತ್ತ ೩ ತಿಂಗಳಲ್ಲಿ ಮ್ಯುನಿಸಿಪಾಲಿಟಿಯು ಹದ್ದಿನ ಹೊರಗೆ ರವಾನ್ಯಾದರೆ ಡ್ಯೂಟಿ ರಿಫಂಡು ತಿರುಗಿ ಸಿಗುತ್ತಿತ್ತು ಈಗ ೨ ರೂಪಾಯಿಗಿಂತ ಹೆಚ್ಚಿಗೆ ಡ್ಯೂಟಿ ತೆತ್ತ ವಸ್ತುಗಳು ರವಾನ್ಯಾದರೆ ಮಾತ್ರ ರಿಫಂಡ ಸಿಗುತ್ತದೆ ಅದೂ ಕೂಡ ಒಂದೇ ತಿಂಗಳೊಳಗೆ ರವಾನ್ಯಾದರೆ ಸಿಗುವದು ' ಇದರಿಂದ ರಿಫಂಡ ಕೊಡುವದು ಕಡಿಮೆ ಕಡಿಮೆಯಾಗಿ ಮ್ಯುನಿಯ ಉತ್ಪನ್ನ ಬೆಳೆಯಿತು

ಊರಲ್ಲಿ ಪ್ಲೇಗ ಬೇನೆಯು ಹಬ್ಬುತ್ತ ನಡೆದಿದೆ ಮ್ಯುನಿಸಿಪಾಲಿಟಿಯವರು ಊರಲ್ಲಿ ಸ್ವಚ್ಛತೆ ಇಟ್ಟು ಬೇನೆಯು ಪ್ರಸಾರವಾಗದಂತೆ ಜಾಗ್ರತೆ ಕೊಳ್ಳಬೇಕು

ಕೆಕ್ಕಾರ ಇಲ್ಲಿಯ ಶ್ರೀ ಸಿದ್ಧಿವಿನಾಯಕ ವಿದ್ಯಾಲಯದ ವಿದ್ಯಾರ್ಥಿಗಳ ವಾರ್ಷಿಕ ಸಮ್ಮೇಲನವು ಕಳೆದ ತಾ ೧೩-೫-೩೫ನೇಗೆ ರಾಯ ರಾ| ಪೋಟೆನ್ಸರ ತಿಮ್ಮಪ್ಪ ಹೆಗಡೆರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು ಅಧ್ಯಕ್ಷರು ತಮ್ಮ ಭಾಷಣದಲ್ಲಿ, ದೇಶದ ಪ್ರಗತಿಯಾಗಬೇಕಾದರೆ ಹಳ್ಳಿ ಹಳ್ಳಿಗಳಲ್ಲಿ ಇಂಥ ಸಂಸ್ಥೆಗಳು ಹೊರಡುವದವಶ್ಯವೆಂದು ಪ್ರಸ್ತಾವನೆ ಮಾಡಿ ಸ್ಥಾಪಿಸಿದ ವಿದ್ಯಾಲಯದ ಸಂಸ್ಥಾಪಕರಾದ ವ್ಯವಸ್ಥಾಪಕರಾದ ರಾ| ರಾ| ಗಣೇಶ ಭಟ್ಟರನ್ನು ಇಂಥ ಪವಿತ್ರ ಕಾರ್ಯ ಕೈಕೊಂಡು ಕಷ್ಟದಲ್ಲಿ ಶಾಲೆಯನ್ನು ತೆರೆದ ಬಗ್ಗೆ ಅಭಿನಂದಿಸಿದರು. ಸಂಸ್ಕೃತ ಅಂತ ವ್ಯಾಕರಣ ಸಾಹಿತ್ಯ ಜನ್ಯಾಗವೆ ... ... ಈ ಶಾಲೆಯಲ್ಲಿ ಬೋಧಿಸುವ ಬೋರ್ಡ ಶಾಲೆಗಳಂತೆಯೇ ಫೀ ವಸೂಲ ಮಾಡಲಾಗದು ಆದ್ದರಿಂದ ಬಡವರಿಗೂ ವಿದ್ಯಾಭ್ಯಾಸಕ್ಕೆ ಅತಿಶಯ ಅನುಕೂಲವಾಗುವದು ಇದಲ್ಲದೆ ಇಂಗ್ಲಿಷ ವರ್ಗವನ್ನು ಮುಂಜೂರ ಮಾಡಿಕೊಳ್ಳಬೇಕಾಗಿ ಶಾಲೆಯ ಚಾಲಕರ ಹಂಬಲವಿದೆ ಅದನ್ನು ಸಾಧಿಸುವಂತೆ ಎಲ್ಲರೂ ಸಹಾಯ ಮಾಡಬೇಕು " ಎಂದು ನುಡಿದು ಅಧ್ಯಕ್ಷರು ವಿದ್ಯಾರ್ಥಿಗಳಿಗೆ ನಾಲ್ಕು ಉಪದೇಶದ ಮಾತುಗಳನ್ನು ಹೇಳಿದರು ಸಭೆಯ ಕೊನೆಯಲ್ಲಿ ರಾ| ಹೆಗಡೆರು ಶಾಲೆಯ ನಿಧಿಗೆ ರೂ ೧೦ ಮತ್ತು ವಿದ್ಯಾರ್ಥಿಗಳಿಗೆ ಇನಾಮ ಕೊಡುವ ಬಗ್ಗೆ ರೂ ೧೦ ಹೀಗೆ ರೂ ೨೦ನ್ನು ಶಾಲಾ ಚಾಲಕರವಳಿ ಅರ್ಪಿಸಿದರು

ಭಟಕಳ— ೩೩ ವಿಪರೀತ ಪ್ಲೇಗ ಬೇನೆಗೆ ಪ್ರಾರಂಭವಾಗಿದೆ ಮ್ಯುನಿಸಿಪಾಲಿಟಿಯವರು ಜಾಗ್ರತೆಯಿಂದ ಊರಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕು ಸಮಾಯ ಕೇರಿಯಲ್ಲಿ ದಟ್ಟ ಜನಸಂದಣಿ ಕೂಡುವ ಮಾರ್ಗದ ಬದಿಗೆ ಮಾಂಸ ಮಾರುತ್ತಾರೆ ಇದರಿಂದ ಪ್ಲೇಗ ಬೇನೆಯು ಪ್ರಸಾರವು ಹೆಚ್ಚಾಗುವ ಸಂಭವವುಂಟೆಂದು ಹೇಳುತ್ತಾರೆ ಆದ್ದರಿಂದ ಮ್ಯುನಿಸಿಪಾಲಿಟಿಯವರು ಮಾಂಸದಂಗಡಿಯನ್ನು ಊರ ಹೊರಗೆ ಬರುವಂತೆ ವ್ಯವಸ್ಥೆ ಮಾಡುವ ರೆಂದು ನಂಬುತ್ತೇವೆ

ಮಾತ್ರಫಟಕಳ, ಮುಟ್ಟಳ್ಳಿ ಗ್ರಾಮಗಳಲ್ಲಿ ಕೆಲ ಕುಂಟರು ಚಲೋ ಉದ್ಯೋಗ ಇಡಿಸಿದ್ದಾರೆ! ಬೆಟ್ಟ-ಬೇಣಗಳಲ್ಲೂ, ಮಾರ್ಗದ ಬದಿಗೂ ಮೇಯುವ ದನ-ಕರುಗಳನ್ನು ಹಿಡತಂದು ದೊಡ್ಡಿಗೆ ಹಾಕುತ್ತಾರೆ. ದಾಲೀಕರು ಬಂದು ಅವರಿಗೆ ದೊಡ್ಡಿಗೆ ತೆರುವ ಅರ್ಧದಷ್ಟು ಹಣ ತಮಗೆ ಕೊಟ್ಟರೆ ದನಗಳನ್ನು ಬಿಡುವೆವೆಂದು ಹೇಳುತ್ತಾರೆ' ಈ ಕುಂಟರಿಗೆ ಬುದ್ಧಿ ಕಾಸಿ ಶಾಸನ ಮಾಡಬೇಕೆಂದು ಅನೇಕರು ಸರಕಾರಕ್ಕೆ ಬರೆದಿದ್ದಾರೆ ಎಲ್ಲಾದರೂ ಹೊಡೆದಾಟವಾಗುವದೇನೋ ಎಂಬ ಅಂಜಿಕೆ ಇದೆ ಗ್ರಾಮಸ್ಥರೂ ಪಟೇಲರೂ ಕಣ್ಣು ತೆರೆದು ಕುಂಟರ ಕುಂಟತನಕ್ಕೆ ಸಕಾಲದಲ್ಲಿ ತಡೆಹಾಕಬೇಕು

ನಾಮಧಾರಿ (ಹಳೇಪೈಕ) ಜಾತಿಯವರು ಸ್ಪೃಶ್ಯರೋ ಅಸ್ಪೃಶ್ಯರೋ? ಎಂಬ ಬಗ್ಗೆ ಚೌಕಶಿ ಮಾಡಿ ರಿಪೋರ್ಟ ಮಾಡಬೇಕೆಂದು ಈ ಪೇಟೆಯೊಳಗಿನ ಮಾಮಲೇದಾರರು ಗ್ರಾಮಸ್ಥರಿಗೆ ಹುಕುಂ ಬಗಿದೆ ಕೆಲ ಗ್ರಾಮಸ್ಥರು ನಾಮಧಾರಿಗಳು ಸ್ಪೃಶ್ಯರೆಂತಲೂ, ಕೆಲ ಗ್ರಾಮಸ್ಥರು ಅಸ್ಪೃಶ್ಯರೆಂತಲೂ ರಿಪೋರ್ಟ ಮಾಡಿದ್ದಾರಾಗಿ ತಿಳಿಯುತ್ತದೆ ಊರ ನಡಾವಳಿ ನೋಡಿದರೆ ನಾಮಧಾರಿ ಜಾತಿಯವರು ಮುಟ್ಟಿಸಿಕೊಳ್ಳಲಾಗಳೆಂದು ತಿಳಿಯಲಿದ್ದಿಯಲ್ಲ ತಾವು ಅಸ್ಪೃಶ್ಯರೆಂದು ಎನಿಸಲ್ಪಡಲಿಕ್ಕೆ ಅವರು ತಯಾರಿಲ್ಲ

ಶಿರಸಿ— ಕಳೆದ ತಾ ೧೮-೫-೩೫ಕ್ಕೆ ಜಿಲ್ಹಾ ಲೋ.ಲೋ. ಬೋರ್ಡಿನ ಸಭೆಯು ಇಲ್ಲಿ ಕೂಡಿತ್ತು. ಅನೇಕ ಠರಾವುಗಳಾದವು ಸಭೆಯ ಮುಂದಿನ ಮಹತ್ವದ ವಿಷಯವೆಂದರೆ ಶಿಕ್ಷಕರ ವರ್ಗದಿಂದ ತೆರವಾದ ಸ್ಥಳದಲ್ಲಿ ಹೊಸ ಸುಪರವೈಜರರನ್ನು ನೇಮಿಸಿಕೊಳ್ಳುವದಾಗಿತ್ತು ಈ ಬಗ್ಗೆ *S T C* ಇಲ್ಲವೆ *B T* ಪರೀಕ್ಷೆ ಪಾಸಾದ ಶಿಕ್ಷಕರು ಬೇಕೆಂದು ಲೋಕಲ್ ಬೋರ್ಡಿನವರು ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟಿದ್ದರು ಬೋರ್ಡಿನ ಕಡೆ ೯-೧೦ ಅರ್ಜಿಗಳು ಬಂದಿದ್ದವಂತೆ ಎರಡು ಅರ್ಜಿದಾರರು ಮಾತ್ರ *S T C.* ಇಲ್ಲವೆ *B T* ಪರೀಕ್ಷೆಯಲ್ಲಿ ತೇರ್ಗಡೆ ಯಾದವರಿದ್ದರೆಂದು ಕೇಳುತ್ತೇವೆ ಪ್ರಾಯಮರಿ ಎಜ್ಯುಕೇಶನ್ ಆಕ್ಟಿನಂತೆ ಟ್ರೇಂಡ ಜನರನ್ನೇ ಸುಪರವೈಜರರ ಜಾಗಕ್ಕೆ ನೇಮಿಸಿಕೊಳ್ಳಬೇಕಾಗಿ ನಿಯಮವಿರುತ್ತದಂತೆ ಈ ನಿಯಮವನ್ನು ತಿರಸ್ಕರಿಸಿ ಬೋರ್ಡಿನವರು ಟ್ರೇನಿಂಗ ಇಲ್ಲದ ಪಡೆದ ರಾ| ಆರ್ ಎಸ್ ಹೆಗಡೆ ಎ ಇವರನ್ನು ಸುಪರವೈಜರರಾಗಿ ನೇಮಿಸಿಕೊಳ್ಳಬೇಕೆಂದು ಬಹುಮತದಿಂದ ತೀರ್ಮಾನ ಮಾಡಿರುತ್ತಾರೆ! ಸದ್ರಿ ಹೆಗಡೆಯವರು ಒಳ್ಳೇ *M A.* ಪರೀಕ್ಷೆಯಲ್ಲಿ ಪಾಸಾದವರಿರುತ್ತಾರೆ ಬೋರ್ಡಿನ ಮುಂದೆ ಟ್ರೇಂಡ ಅರ್ಜಿದಾರರ ಅರ್ಜಿಗಳಿರುತ್ತ ಟ್ರೇನಿಂಗ ಇಲ್ಲದ ಅರ್ಜಿದಾರರನ್ನು ಆರಿಸುವದರಲ್ಲಿ ಬೋರ್ಡಿನ ಬಹುಮತಪಕ್ಷದವರ ಜಾತಿಮಾತ್ಸರ್ಯವೇ ಕಾರಣವಾಯಿತೆಂದು ಕೆಲವರ ಊಹೆ ನಿಯಮಗಳಿಗೆ ವಿರುದ್ಧವಾಗಿ ಮಾಡಿದ ನೇಮಣೂಕಿಯನ್ನು ವಿದ್ಯಾಖಾತೆಯವರು ಮಂಜೂರ ಮಾಡುವರೋ ಏನೆಂಬುದನ್ನು ನೋಡಬೇಕು!

ಕಳೆದ ಎಪ್ರಿಲ್ ತಿಂಗಳಲ್ಲಿ ಇಲ್ಲಿಯ ಆ ಟ್ರಾ. ಚೇಂಬರ ಸಂಘದ ಮಾರಿ ಅಂಗಡಿಯಲ್ಲಿ ರೂ ೩೩೬ ರ ಮಾರಿಯು ಮಾರಾಟವಾಯಿತು. ಇದೀ ಕರ್ನಾಟಕದೊಳಗೆ ಆರಾರು ಸಂಘದ ಪರವಾಗಿ ರೂ ೧೬೯೬೩ ಬೆಲೆಯ ಮಾರಿಯು ಮಾರಾಟವಾಗಿರುತ್ತದಾಗಿ ತಿಳಿಯುತ್ತದೆ

ಕಾರವಾರ— (ತಾ ೧೮-೫-೩೫) ಜುಬಿಲಿ ಉತ್ಸವವು ಸಾಂಗವಾಗಿ ನೆರವೇರಿತು, ಹೋದ ರವಿವಾರ "ಲಕ್ಕಿ ಬೆಗ್" ನೋಟೀಸುಗಳು ತಗೆ ಸಲ್ಪಟ್ಟವು (ಎಂಟಾಣೆ ಕೊಟ್ಟು ಟಿಕೀಟು ಕೊಂಡವರು ತಮಗೆ ಬೇಕಾದ ಗಂಟನ್ನು ಆರಿಸಿತೆಗೆಯಬಹುದಾಗಿತ್ತು ಗಂಟುಗಳಲ್ಲಿ ಬುತ್ತಿಗಳ ಆಟದ ಸಾಮಾನು ಹಿಡಿದು ಪೆಟ್ಟಿಯು ಕಸ್ಟಿವ ವರೆಗೆ ತರತರದ ಸಾಮಾನುಗಳಿದ್ದವು ಅವರವರ ಭಾಗ್ಯವಿದ್ದಂತೆ ಸಾಮಾನುಗಳು ದೊರೆತವು

ಮ್ಯುನಿಸಿಪಾಲಿಟಿಯ ನಳ ಎರಡು ತಿಂಗಳ ಗಳಿಂದ ಹೆಚ್ಚು ಹುಡುಗಿಯರ ಶಾಲೆಯ ಬಳಿ ಇರುವ ಹೊಂಡದ

ಜಂಗಿಯಲ್ಲಿ ಉರುವಳಿಗಿನ ಕಾಲುವನ್ನು ಮಾತ್ರ ತುದ್ದಿ ಹೊಂದಿದ್ದು ಈಗ ತುಂಬುತ್ತ ಬಂದಿದೆ. ಈ ಕಾಲುವೆಯ ಮೇಲೆ ಉಸುಗು ಹಾಕಿ ತುಂಬಬೇಕೆಂದು ಮ್ಯುನಿಸಿಪಾಲಿಟಿಯವರ ನಿರ್ಣಯವಾಗಿತ್ತು. ಆದರೆ ಇನ್ನೂ ಉಸುಗು ಬಂದು ಬಿದ್ದಿರುವದಿಲ್ಲ. ಕಚರೆಯು ಕಾಳಿಯು ರಸ್ತೆಯ ಪಾರ್ಶ್ವಭಾಗದಲ್ಲಿ ಕಟ್ಟಿ ಮಾಡಿದೆ. ಹೊಸಹತ್ತಿರದ ಸಮಿತಿಯವರು ಉಸುಗು ತಂದು ಹಾಕಿ ಕೆಲಸವನ್ನು ಸ್ವಲ್ಪ ಜಾಗ್ರತೆಯಿಂದ ಸಾಧಿಸುವರು ಎಂದು ನಂಬುತ್ತೇವೆ. ಇಲ್ಲದಿದ್ದರೆ ಸಾರ್ವಜನಿಕ ಆರೋಗ್ಯ ಕೆಟ್ಟು ಹೋಗುವ ಸಂಭವವಿದೆ.

ಸ್ವಸ್ತಿಕ
ಕೇಶರಂಜನ ತೈಲಗಳು.

ಕೋಮಲವಿದ್ದಾಗ್ಯೂ ವೈಶಿಷ್ಟ್ಯಪೂರ್ಣ, ಹೂವಿನೋಪಾದಿಯಲ್ಲಿ ಅದು ಬಗೆಯ ಬೇರೆ ಬೇರೆ ಪರಿಮಳಯುಳ್ಳ ತೈಲಗಳು ! ಸ್ವಸ್ತಿಕ ಕೇಶರಂಜನ ತೈಲಗಳು ಶುದ್ಧ, ಸ್ವಚ್ಛ ವನಸ್ಪತಿತೈಲಗಳಿಂದಲೇ ತಯಾರಾಗಿವೆ. ಇತರ ತೈಲಗಳಲ್ಲಿರುವಂತೆ ಇವುಗಳಲ್ಲಿ ಖನಿಜ ತೈಲ ಎಳ್ಳಷ್ಟು ಸಹ ಇಲ್ಲ. ಕೂದಲುಗಳ ಬೆಳವಣಿಗೆಗೆ, ಅವು ಉದುರುವದನ್ನು ತಪ್ಪಿಸಲಿಕ್ಕೆ, ತಲೆಯ ಹೊಟ್ಟು ತೆಗೆಯಲಿಕ್ಕೆ ಹಾಗು ಮಿದುಳಿಗೆ ಶೈತ್ಯ ಕೊಡಲಿಕ್ಕೆ ಈ ಎಣ್ಣೆಗಳು ಗುಣಕಾರಿಯೆಂದು ಪ್ರಖ್ಯಾತಿಗೊಂಡಿವೆ.

ಕಾರವಾರ ಜಿಲ್ಹೆಯ ಏಜಂಟರು —
ಎನ್. ಎಸ್. ರಂಗ್ರೇಕರ್ಣಿ, ಪೋ. ಹಳಿಯಾಳ.

ದಕ್ಷಿಣ ಕನ್ನಡ ಜಿಲ್ಹೆಯ ಏಜಂಟರು.-
ಎಸ್. ಎನ್. ವಿ. ನಾಯಕ ಮತ್ತು ಕಂಪನಿ, ಮಂಗಳೂರು

For Sale.

One Harvey Foster Vulcanizer Standard Model A complete with blow lamp used for three months only. For price and particulars write to:- **K. R. KAMAT,**
ANKOLA. [N. Kanara]

ನಮ್ಮ ಜಯಭೇರಿ !

ಪಿತ್ತಕ್ಕೆಗಿ ಆಗುವ ಭಯಂಕರವಾದ ಲಿವರ್ ಕಂಪ್ಲೇಂಟು (ಕಾಮಾಲೆವ್ಯಾಧಿ) ಮತ್ತು ಜ್ವರಗಳಿಗೆ ಜಮ್ಮಿ ವೆಂಕಟರಮಣಯ್ಯನವರು

'ಲಿವರ್ ಕ್ಯೂರ್' (ರಿಜಿಸ್ಟರ್ಡ್)

ಎಂಬ ದಿವ್ಯೌಷಧವನ್ನು ತಯಾರಿಸುವದರಲ್ಲಿ ಸಂಪೂರ್ಣ ಜಯ ಹೊಂದಿರುತ್ತಾರೆ. ಶುದ್ಧವಾದ ದೇಶಿ ಸಾಮಾನುಗಳಿಂದ ಇದನ್ನು ತಯಾರಿಸಿರುವದರಿಂದ ಅವು ಪೂರ್ಣ ತೃಪ್ತಿ ಕೊಡುವುವೆಂದು ನಮ್ಮ ಭರವಸ. ಈ ಔಷಧವು ಕಾಹಿಲೆಯನ್ನು ಗುಣ ಮಾಡುವುದಲ್ಲದೆ ಕಾಹಿಲೆಯು ಬಾರದಂತೆ ಮಾಡುವುದರಿಂದ ಮತ್ತಷ್ಟು ಜನರ ತೃಪ್ತಿಗೆ ಕಾರಣವಾಗಿದೆ. ಹೆಚ್ಚಿನ ಮಾಹಿತಿಗೆ ಈ ದಿನವೇ ಬರೆಯಿರಿ

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ.)

Established 1900	ಶ್ರೀ	*FIXED RATE*

ದಾಸಪ್ಪಾ ಕೃಷ್ಣಪ್ಪಾ
ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರಸಿ.

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರೇಶ್ಮೆಯ ಖಣಗಳೂ, ಕೋಟಿಂಗ ವ ಸರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರೀ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಶ್ಮೆ ಖದ್ದರ ಮಡಿಗಳೂ, ನಾರ ಮಡಿಗಳೂ, ವಗೈರೆ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಅಗಾಲವ್ಯವಹಾರಿಗೂ ಮೋಸ ಹೋಗುವ ಭಯವಿಲ್ಲದೆ ಸೋಯ ದರದಿಂದ ಸಿಗುವವು. ರೋಖ ವ್ಯಾಪಾರಕ್ಕೆ ಕಮಿಶನ್ ಕೊಡಲಾಗುವದು.

Tel - "Honesty"] **D. K. DHAKAPPA BROS.,**

ಹೊಸ ವಸ್ತ್ರಾಲು.	Cloth Merchants, SIRSI. N. KANARA.	ದರ ಅಗ್ಗ.

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಶಂಕಿನ ದರಗಳೂ, ಶರ್ತುಗಳೂ ಜಿಕರ ಕೊಡುವಂತಿವೆ. ಕಂಪನಿಯು ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಕೆಳಗಿನ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents
D. K. Nayak Bros.
D. S. Pai.
K. N. Nayak.
Honavar Agent.-
R. V. Prabhu Esq.

K. Padmanabha Rao & Sons,
BELGAUM
Chief Agents for
Karnatak Districts & S. M. States

ಅಲ್ಲಲ್ಲಿ ಇಷ್ಟಿಷ್ಟು!

[೩ನೇ ಪಾನಿನಿಂದ ಮುಂದರಿಸಿದ್ದು]

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ಒಂಭತ್ತು ತಿಂಗಳಿಂದ ದೇಶಸಂಚಾರ ಮಾಡುತ್ತಲಿದ್ದು ಹೋದಹೋದಲ್ಲಿ ಜನರು ಅವರನ್ನು ಮೆರವಣಿಗೆಯಿಂದ ಸ್ವಾಗತ ಮಾಡುತ್ತಾರೆ. ಮಹಾರಾಷ್ಟ್ರದಲ್ಲೂ ಎರಡು ಮೂರು ಜಿಲ್ಹೆಗಳಲ್ಲಿ ಅವರ ಸಂಚಾರವಾಯಿತು. ಅಲ್ಲಲ್ಲಿ ವಿಜೃಂಭಣೆಯ ಮೆರವಣಿಗೆಗಳಾದವು. ಸೊಲ್ಲಾಪುರದ ಜಿಲ್ಹಾಧಿಪತಿಗಳಿಗೆ ಮಾತ್ರ ರಾಷ್ಟ್ರಪತಿಗಳ ಮೆರವಣಿಗೆ ಹೊರಟರೆ ಶಾಂತತಾಭಂಗವಾದೀತೆಂದು ಭೀತಿ ಬಡಿಯಿತು! ಕ್ರಿ. ಪ್ರೊ. ಕೋಡ ಕಲಂ ೧೪೪ರನ್ವಯ ಅವರು ಮೆರವಣಿಗೆಗೆ ಪ್ರತಿಬಂಧ ಮಾಡಿದರು! ಸೊಲ್ಲಾಪುರದ ಅಧಿಕಾರಿಗಳು ಇನ್ನೂ ಲಷ್ಕರಿ ಕಾಯಿದೆಯ ವಾತಾವರಣದಲ್ಲಿರುವಂತೆ ತೋರುತ್ತದೆ! ಮೆರವಣಿಗೆಯ ಪ್ರತಿಬಂಧದಿಂದ ರಾಜೇಂದ್ರರ ಸ್ವಾಗತದ ವೈಭವವೇನೂ ಕಡಿಮೆಯಾಗಲಿಲ್ಲ. ಜನರು ನಗರವನ್ನೆಲ್ಲ ಸಿಂಗರಿಸಿ ದೊಡ್ಡ ದೀಪೋತ್ಸವವನ್ನು ಮಾಡಿದ್ದರು.

* * *

ರೇವಾ ಸಂಸ್ಥಾನದಲ್ಲೊಂದು ಸ್ತುತ್ಯ ಉಪಕ್ರಮ. ಸುಶಿಕ್ಷಿತ ತರುಣರಿಗೆ ಬೇಸಾಯದ ವ್ಯವಸಾಯ ಕೈಕೊಳ್ಳಲು ಉತ್ತೇಜನ ಕೊಡುವದಕ್ಕಾಗಿ ಸಂಸ್ಥಾನಿಕರು ರೆವಿನ್ಯೂ ಕಾಯಿದೆಯಲ್ಲಿ ತಿದ್ದುಪಡಿ ಮಾಡಿರುತ್ತಾರೆ. ರೈತರ ಶಿಕ್ಷಣದ ವ್ಯಸ್ತ ಪ್ರಮಾಣದಿಂದ ಅವರು ತೆರಬೇಕಾದ ಗೇಣಿಯು ಕಡಿಮೆಯಾಗುತ್ತದೆ. ಬೇಸಾಯಗಾರನು ಹೆಚ್ಚಿಚ್ಚು ಶಿಕ್ಷಣ ಪಡೆದವನಿದ್ದ ಹಾಗೆ ಗೇಣಿಯ ಮಾನವು ಸಣ್ಣ ಸಣ್ಣದಾಗುತ್ತದೆ.

* * *

ಶೀಖ ಸಮಾಜದಲ್ಲಿ ನೂರಾರು ಪಕ್ಷಗಳಾಗಿವೆಯಂತೆ. ಮುಂದಾಳುಗಳು ತಮ್ಮ ತಮ್ಮ ಪ್ರತಿಷ್ಠೆಗಾಗಿ ಬಡಿದಾಡುತ್ತಿರುವರು; ಸಮಾಜದ ಹಿತಕ್ಕಾಗಿ ಹೆಣಗಾಡುವವರು ಮಾತ್ರ ಇಲ್ಲ. “ಈ ಅವ್ಯವಸ್ಥೆಯನ್ನು ಯಾದವೀಯುದ್ಧವನ್ನೂ ಅಚ್ಚ ತೊಳೆದು, ಶೀಖ ಸಮಾಜವು ಪುನಃ ಉಜ್ವಲವಾಗುವಂತೆ ಮಾಡಲು, ಸಮಾಜದೊಳಗಿನ ಸುಳ್ಳು ಮುಂದಾಳುಗಳ ಸುಳಿದಾಟಕ್ಕೆ ತಡೆಹಾಕುವ ಉದ್ದೇಶದಿಂದ” ನಾಲ್ವತ್ತು ಶೀಖ ಮಹಿಳೆಯರು ಮರಣಾಂತ ಉಪವಾಸ ಕೈಕೊಳ್ಳುವ ನಿರ್ಧಾರ ಮಾಡಿದ್ದಾರೆಂದು ತಿಳಿಯುತ್ತದೆ. ಒಬ್ಬೊಬ್ಬರೇ ಉಪವಾಸ ಮಾಡುವರು, ಒಬ್ಬಳ ದೇಹ ಪತನವಾದ ಮೇಲೆ ಇನ್ನೊಬ್ಬ ಮಹಿಳೆಯು ಉಪವಾಸಕ್ಕೆ ಪ್ರಾರಂಭ ಮಾಡುವಳು. ಪಂಜಾಬ ಪ್ರಾಂತದೊಳಗಿನ ಏಕಾಂತ ಸ್ಥಳಗಳಲ್ಲಿ ಈ ಉಪವಾಸ ವ್ರತವು ನಡೆಯುವದು. ಯಾವ ಸುದ್ದಿಯೂ ಪ್ರಕಟವಾಗಲಿಕ್ಕಿಲ್ಲ. ಉಪವಾಸದಿಂದ ಸತ್ತ ಮಹಿಳೆಯ ಶವವನ್ನು ಮಾತ್ರ ಸಮಾಜದ ಮುಖಂಡರಿಗೆ ತಂದು ಒಪ್ಪಿಸಲಾಗುವದು. ಉಪವಾಸ ವ್ರತಕ್ಕೆ ಮುಂದಿನ ತಿಂಗಳಲ್ಲಿ ಆರಂಭವಾಗುವದು. ವೀರ ಸ್ತ್ರೀಯರ ನಿರ್ಧಾರದಿಂದ ಶೀಖ ಸಮಾಜದಲ್ಲಿ ಜಾಗೃತಿಯಾಗುವದೇ?

* * *

ಸಿಂಧ ಪ್ರಾಂತದೊಳಗಿನ ಅಮಿಲ ಜಾತಿಯ ತರುಣನೊಬ್ಬನು ‘ವಧೂ ಬೇಕು - ಯೋಗ್ಯ ವರದಕ್ಷಿಣೆ ಬೇಕು!’ ಎಂದು ಪತ್ರಿಕೆಗಳಲ್ಲಿ ಜಾಹೀರಾತನ್ನು ಕೊಟ್ಟಿದ್ದನು. ಮೂವತ್ತು ಗೃಹಸ್ಥರು ತಮ್ಮ ಹುಡುಗಿಯರನ್ನು ಕೊಡಮಾಡಿದರು. ತರುಣನು ಒಪ್ಪಲಿಲ್ಲ. ಮೂವತ್ತು ಸಾವಿರ ವರದಕ್ಷಿಣೆ ಕೊಡಲೊಪ್ಪಿದ ಡಾಕ್ಟರರೊಬ್ಬರ ಹುಡುಗಿಯೊಡನೆ ತರುಣನು ಲಗ್ನವಾಗಲೊಪ್ಪಿದನು. ಹುಡುಗಿಯೊಡನೆ ಮದುವೆಯೋ ಹಣದೊಡನೆ ಮದುವೆಯೋ?

* *

ಮಹಾತ್ಮರು ಜಾತಿಭೇದಗಳ ಅಸ್ತಿತ್ವಕ್ಕೆ ವಿರುದ್ಧರಿಲ್ಲ. ಗೀತೆಯಲ್ಲಿ ಹೇಳಿದಂತೆ “ಗುಣಕರ್ಮ ವಿಭಾಗಶಃ” ನಿರ್ಮಿಸಿದ ಜಾತಿ ಸಂಸ್ಥೆಗೆ ಅವರ ಮನ್ನಣೆಯಿದೆ. ಡಾ|| ಸ್ಟೆನಲೀ ಜೋನ್ಸ ಎಂಬವರ ಕೂಡ ಮಾತಾಡುವಾಗ ಮಹಾತ್ಮರು ನುಡಿದದ್ದೇನಂದರೆ:- “ಸಮಾಜದಲ್ಲಿ ಉಚ್ಚ-ನೀಚರೆಂಬ ಭೇದಭಾವ ನನಗೆ ಬೇಡ. ಎಲ್ಲರೂ ಒಂದೇ ಪಾತಳಿಯ ಮೇಲೆ ಇರಬೇಕೆಂದು ನನ್ನ ಹಂಬಲ. ನಾನು ಬೋಧಿಸುವ ವರ್ಣಾಶ್ರಮವು ಧರ್ಮಾಶ್ರಮವಾಗಿರುತ್ತದೆ. ಮನುಷ್ಯನು ಪೂರ್ವಜನ್ಮದ ಸಂಸ್ಕಾರದಿಂದ ತನ್ನ ಅಂತರಾತ್ಮಕ್ಕೆ ಸೇರುವ ವ್ಯವಸಾಯವನ್ನು ಮಾಡತಕ್ಕದ್ದು. ಅದೇ ಮಾನವನ ಧರ್ಮ, ಕರ್ತವ್ಯಕರ್ಮ. ವರ್ಣಾಶ್ರಮವು ವ್ಯವಸಾಯದ ಮೇಲೆ ಅವಲಂಬಿಸಿರತಕ್ಕದ್ದು. ಅದಕ್ಕೆ ಉಚ್ಚ-ನೀಚತ್ವದ ಸಂಬಂಧವಿಲ್ಲ; ಮೇಲು-ಕೀಳು ಎಂಬ ಭೇದಗಳನ್ನು ಮಾಡುವ ಜಾತಿ ಸಂಸ್ಥೆಯನ್ನು ಮುರಿದು ನಾನು ಧಂದೆಗಳ ಮೇಲೆ ನಿರ್ಣಯವಾಗುವ ಜಾತಿಸಂಸ್ಥೆಯನ್ನು ಪುರಸ್ಕರಿಸುವೆನು.”

* *

ಸಮ್ರಾಟರ ಜುಬಿಲಿ-ಉತ್ಸವದ ಖರ್ಚಿಗೆ ಹಣ ಮಂಜೂರ ಮಾಡುವ ಪ್ರಶ್ನೆಯು ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಬಂದಾಗ ಕೆಲವರು ಅದಕ್ಕೆ ಕಸುವಿನ ವಿರೋಧ ಮಾಡಿದ್ದರೆಂಬ ವರ್ತಮಾನವು ಅಮೇರಿಕೆಯೊಳಗಿನ ವೃತ್ತಪತ್ರಿಕೆಗಳ ಮೇಲಿಂದ ತಿಳಿದು ಬರುತ್ತದೆ. ಬ್ರಿಟಿಶ ವಾರ್ತಾವಾಹಕ ಸಂಸ್ಥೆಗಳು ಈ ವಾರ್ತೆಯನ್ನು ಯಾರಿಗೂ ತಿಳಿಸಲಿಲ್ಲ. ವಿರೋಧ ಮಾಡಿದವರಲ್ಲಿ, ಕಾಮಗಾರ ಪಕ್ಷವು ಮುಂದೆ ಅಧಿಕಾರಾರೂಢವಾಗುವ ಪ್ರಸಂಗದಲ್ಲಿ ಇಂಗ್ಲಂಡದ ಮುಖ್ಯ ಪ್ರಧಾನರಾಗಬಹುದಾದ ಸರ್ ಸ್ಟೆಫೋರ್ಡ ಕ್ರಿಪ್ಸರವರೂ, ಮಿ|| ಮೆಕ್ಸಟನ್‌ರವರೂ ಸೇರಿದ್ದರಂತೆ. ಸಮ್ರಾಟರು ಜುಬಿಲಿ ಉತ್ಸವದ ಕಾಲಕ್ಕೆ ಎಡಿನಬರೋ ನಗರಕ್ಕೆ ಸಂದರ್ಶನ ಕೊಡುವರೆಂದು ಮುಂಚೆ ಪ್ರಸಿದ್ಧವಾಗಿತ್ತು. ಮುಂದೆ ಎಡಿನಬರೋ ಯಾತ್ರೆ ಜುಬಿಲಿ ಕಾರ್ಯಕ್ರಮದೊಳಗಿಂದ ಲೋಪವಾಯಿತು. ಅದರ ಗುಟ್ಟು ಸಹ ಈಗ ಹೊರಬಿದ್ದಿದೆ. ಸ್ಕಾಟಲಂಡದವರು ಸ್ವಭಾವತಃ ಮಿತವ್ಯಯಿಗಳು; ಲಾಭ-ಹಾನಿಯ ಲೆಕ್ಕ ಹಾಕುವ ವ್ಯಾಪಾರಿಗಳು. ಎಲ್ಲೆಲ್ಲೂ ಆರ್ಥಿಕ ಮುಗ್ಗಟ್ಟು ಹಬ್ಬಿಕೊಂಡು ಕಾಡುತ್ತಿರುವಾಗ ಉತ್ಸವಕ್ಕಾಗಿ ಹೇರಳ ಹಣ ಖರ್ಚು ಮಾಡಲು ಅವರ ಒಪ್ಪಿಗೆಯಿರಲಿಲ್ಲ. ಹಾಗೆ ಖರ್ಚು ಮಾಡುವದು ಮೂರ್ಖತನವೆಂದು ಅವರ ಅಭಿಪ್ರಾಯವಾಯಿತು. ಸ್ಕಾಟಲಂಡದವರ ಈ ಮನೋರಚ

THE INDIAN MERCANTILE INSURANCE CO. LTD., BOMBAY.

(Established in 1907)

A Solid and purely Indian Life Office which has substantial growth under the Chairmanship of the late Sir Munmohandas Ramji, Kt.

WANTED Energetic & Influential Agents and experienced Organisers, both on commission & pay for the Karnatak Districts.

For particulars apply to:-

G. Yellapurkar & Sons,
Chief Agents for Karnatak,
Market Square, KARWAR.

ಇಂಡಿಯನ್ ಮರ್ಕೆಂಟೈಲ ಇನ್ಶೂರನ್ಸ ಕಂಪನಿ, ಲಿಮಿಟೆಡ್, ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು.

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿಹೊಂದಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಹೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ಪಗಾರ ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆ ಪೇಟೆ, ಕಾರವಾರ.

ನೆಯೇ ಮಹಾರಾಜರ ಏಶಿನಬರೋ ಯಾತ್ರೆಯ ರದ್ದಾಯತಿಗೆ ಕಾರಣವಾಯಿತಂತೆ!

* * *

ಸೌ| ಕಮಲಾ ನೆಹರುರವರು ಪ್ರಕೃತಿಯ ಸಾಸ್ಥ್ಯಕ್ಕಾಗಿ ಮೊನ್ನೆ ಗುರುವಾರದ ಹಡಗದಿಂದ ಸ್ವಿತ್ಸರ್ಲಾಂಡಕ್ಕೆ ಪ್ರಯಾಣ ಬೆಳಿಸಿದರು. ಅವರೊಡನೆ ಪಂಡಿತ ಜವಾಹಿರಲಾಲರ ಪ್ರಿಯ ಪುತ್ರಿಯಾದ ಕುಮಾರಿ ಇಂದಿರೆಯೂ, ಡಾ| ಅಟಲರವರೂ ಹೋಗಿರುತ್ತಾರೆ. ಸೌ| ಕಮಲಾರವರು ನಾಲ್ಕು ವರ್ಷಗಳ ತನಕ ಯುರೋಪದಲ್ಲಿಯೇ ಇರುವರಂತೆ. ಮಧ್ಯಂತರದಲ್ಲಿ ಅವರು ಕುಮಾರಿ ಇಂದಿರೆಯ ಶಿಕ್ಷಣಕ್ರಮವನ್ನೂ ಮುಗಿಸಬೇಕೆಂದು ಮಾಡಿರುತ್ತಾರೆ. ಸೌ| ನೆಹರೂರವರಿಗೆ ಬೀಳ್ಕೊಡಲು ಮಹಾತ್ಮರು ಮುದ್ದಾಂ ವರ್ಧಾದಿಂದ ಮುಂಬಯಿಗೆ ಬಂದಿದ್ದರು. ತನ್ನ ತಾಯಿಯ ಶುಶ್ರೂಷೆಯನ್ನು ಜಾಗ್ರತೆಯಿಂದ ಮಾಡಬೇಕಾಗಿ ಇಂದಿರೆಗೆ ಪ್ರೇಮದಿಂದ ಹೇಳಿಕೊಟ್ಟಿದ್ದಾರೆ. ಮುಂಬಯಿ ಪುರಸ್ಥರೂ ಮುಂಬಯಿಯಲ್ಲಿ ಬಂದ ಸರದಾರ ವಲ್ಲಭಭಾಯಿ ಪಟೇಲ ಪ್ರಭೃತಿ ಮುಖಂಡರಿಲ್ಲರೂ ಸೌ| ಕಮಲಾರವರನ್ನು ಕಂಡು ಅವರ ಪ್ರಕೃತಿಯ ಬಗ್ಗೆ ಚೌಕಶಿ ಮಾಡಿದರು. ಸೌಭಾಗ್ಯವತಿಗಳು ಯುರೋಪದಲ್ಲಿ ಬೇಗನೆ ಆರೋಗ್ಯ ಸಂಪಾದನೆ ಮಾಡಿ ಸುಖದಿಂದ ಮಾತೃಭೂಮಿಗೆ ತಿರುಗಿ ಬರಲೆಂದು ಇಡೀ ಭಾರತಭೂಮಿಯು ಪರಮಾತ್ಮನ ಕಡೆ ಪ್ರಾರ್ಥನೆ ಮಾಡುತ್ತದೆ. ಸೌಭಾಗ್ಯವತಿಯವರೊಡನೆ ಯುರೋಪಕ್ಕೆ ಹೋಗಿ ಅವರ ಶುಶ್ರೂಷೆಯ ವಗೈರೆ ವ್ಯವಸ್ಥೆ ಮಾಡಲಿಕ್ಕೆ ಅನುಕೂಲವಾಗುವಂತೆ ಪಂಡಿತ ಜವಾಹಿರಲಾಲರನ್ನು ಬಿಡುಗಡೆ ಮಾಡಲೊಪ್ಪದ ಸರಕಾರದ ನಿಷ್ಠುರತನವನ್ನು ಎಲ್ಲರೂ ನಿಷೇಧಿಸುತ್ತಾರೆ.

* * *

ಕರ್ನಾಟಕದೊಳಗಿನ ಸಂಚಾರದ ಕೊನೆಯಲ್ಲಿ ರಾಷ್ಟ್ರಪತಿಗಳು ನಮಗೆ ಈ ಕೆಳಗಿನಂತೆ ಸಂದೇಶವನ್ನು ಕೊಟ್ಟಿರುತ್ತಾರೆ:— ನಿಸರ್ಗಸುಂದರ ಕರ್ನಾಟಕ ಪ್ರಾಂತವನ್ನು ಬಿಡುವ ಮುಂಚೆ, ಹೋದಹೋದಲ್ಲಿ ನನ್ನನ್ನು ಪ್ರೇಮದಿಂದ ಬರಮಾಡಿಕೊಂಡು ವೈಭವದ ಆದರಾತಿಥ್ಯ ಮಾಡಿದ ಬಗ್ಗೆ ನಾನು ಸಕಲ ಕರ್ನಾಟಕಸ್ಥರ ಆಭಾರಗಳನ್ನು ಎಣಿಸುತ್ತೇನೆ. ಜನರ ಈ ಉತ್ಸಾಹವೃತ್ತಿ ಸ್ಥಾಯಿಯಾಗಿ ರಾಷ್ಟ್ರೀಯ ಸಭೆಯ ಘಟನೆಯನ್ನು ಬಲಪಡಿಸುವದರಲ್ಲಿ ಸಹಾಯಕವಾಗುವದೆಂದು ನಾನು ಕೋರುತ್ತೇನೆ. ರಾಷ್ಟ್ರೀಯ ಹೋರಾಟದಲ್ಲಿ ಒಮ್ಮೊಮ್ಮೆ ಶಾಂತ ಮತ್ತು ಸ್ವಸ್ಥಚಿತ್ತದಿಂದ ಕೆಲಸ ಮಾಡಬೇಕಾದ ಪ್ರಸಂಗಗಳು ಬರುತ್ತವೆ. ಈಗ ಅಂತಹದೇ ಪ್ರಸಂಗವಿದೆ. ಎಲ್ಲರೂ ಈ ಪ್ರಸಂಗದ ಪೂರ್ಣ ಲಾಭ ಮಾಡಿಕೊಳ್ಳಬೇಕು. ಸಿಕ್ಕಷ್ಟು ಸ್ತ್ರೀ-ಪುರುಷರನ್ನು ಕೊಂಗ್ರೆಸ ಸಭಾಸದರನ್ನಾಗಿ ಮಾಡಿಕೊಳ್ಳಬೇಕು. ಅವರೊಳಗೆ ಶಕ್ಯವಿದ್ದಷ್ಟು ಜನರಿಗೆ ದಿನಾಲು ಖಾದಿ ಧರಿಸುವಂತೆ ಮತ್ತು ಏನಾದರೂ ಶಾರೀರಿಕ ಶ್ರಮದ ಕೆಲಸ ಮಾಡುವಂತೆ ಬೋಧ ಮಾಡಬೇಕು. ನಾನು ನೋಡಿದ್ದರ ಮೇಲಿಂದ ಜನತೆಯೊಳಗೆ ರಾಷ್ಟ್ರಕಾರ್ಯದ ಬಗ್ಗೆ ಪೂರ್ಣ ಉತ್ಸಾಹ ಉಂಟೆಂದು ನನ್ನ ಅಭಿಪ್ರಾಯವಾಗಿದೆ. ಆ ಉತ್ಸಾಹವನ್ನು ಘಟನಾತ್ಮಕ ಕಾರ್ಯದ ಕಡೆಗೆ ಒಲಿಸಿ ಕೊಡಬೇಕಾಗಿದೆ. ಕೊಂಗ್ರೆಸ ಕಾರ್ಯಕರ್ತರೂ ಸ್ವಯಂಸೇವಕರೂ ಮಾಡಬೇಕಾದ ಮಹತ್ವದ ಕೆಲಸವಿದೇ. ಆದನ್ನವರು ನೆರವೇರಿಸಿ ನನ್ನ ಅಪೇಕ್ಷೆಯನ್ನು ಪೂರ್ಣ ಮಾಡುವರೆಂದು ನಾನು ನಂಬಿಕೊಂಡಿದ್ದೇನೆ. ಕಾನಡಾ ಜಿಲ್ಹೆಯೊಳಗಿನ ಪೀಡಿತರ ಬಗ್ಗೂ, ಬಳ್ಳಾರಿ-ಅನಂತಪೂರ ಮುಂತಾದ ಜಿಲ್ಹೆಗಳೊಳಗಿನ ಕ್ಷಾಮಪೀಡಿತರ ಬಗ್ಗೂ ನನ್ನ ಪೂರ್ಣ ಸಹಾನುಭೂತಿಯಿದೆ. ಅವರು ಸರಕಾರದ ರೋಷಕ್ಕೂ ನಿಸರ್ಗದೇವತೆಯ ರೋಷಕ್ಕೂ ಬಲಿಬಿದ್ದು ಪೇಚಾಡುತ್ತಿದ್ದಾರೆ. ಕರ್ನಾಟಕ ಪ್ರಾಂತದೊಳಗಿನ ಇತರ ಜಿಲ್ಹೆಯವರು ಮೇಲಿನ ಆಪದ್ಗ್ರಸ್ತರ ಶೌರ್ಯ-ಸಾಹಸಗಳನ್ನು ನೆನಿಸಿ ಅವರಿಗೆ ಕೈಲಾದ ಮಟ್ಟಿಗೆ ಸಹಾಯ ಮಾಡುವರೆಂದು ನನಗಾಶೆಯಿದೆ.

* * *

ನಮ್ಮ ಜಿಲ್ಹೆಯಲ್ಲಿ ಕರನಿರಾಕರಣ ಮಾಡಿದ ಜನರ ಬಗ್ಗೆ ರಾಷ್ಟ್ರಪತಿಗಳು ಈ ಕೆಳಗಿನ ವಿಶೇಷ ಸಂದೇಶವನ್ನು ದಯಪಾಲಿಸಿರುತ್ತಾರೆ:— ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ಸರ್ವಸ್ವವನ್ನು ಕಳಕೊಂಡ ಕಾರವಾರ ಜಿಲ್ಹೆಯೊಳಗಿನ ಅಂಕೋಲಾ, ಸಿರ್ಸಿ, ಸಿದ್ದಾಪೂರ ತಾಲೂಕುಗಳ ಜನರ ಪ್ರತ್ಯಕ್ಷ ದರ್ಶನದ ಸುಸಂಧಿಯು ನನಗೆ ದೊರೆತ ಬಗ್ಗೆ ನನಗೆ ಪರಮ ಹರುಷವಾಯಿತು. ಅನೇಕ ಕಷ್ಟಗಳು ಬಂದಾಗ್ಯೂ ಅವರ ಉತ್ಸಾಹವೂ ಬಲವೂ ಎಳ್ಳಷ್ಟೂ ಕಡಿಮೆಯಾಗದಿದ್ದದ್ದನ್ನು ನೋಡಿ ನನಗೆ ಅತ್ಯಾನಂದವಾಯಿತು. ದೇಶದ ಆಶೆಯು ಇಂತಹ ಜನರನ್ನೇ ಹೊಂದಿಕೊಂಡಿದೆ. ಅವರು ಅದನ್ನು ಸಫಲಗೊಳಿಸುವರೆಂದು ನನಗೆ ತುಂಬಾ ನಂಬಿಗೆಯಿದೆ.

* * *

ಖಾನ ಅಬದುಲ್ಲ ಗಫೂರಖಾನರ ಆರೋಗ್ಯವು ನೆಟ್ಟಗಿಲ್ಲ. ಮುಂಬಯಿ ಇಲಾಖೆಯೊಳಗಿನ ಹವೆಯು ಅವರಿಗೆ ಸೇರುವದಿಲ್ಲ. ಆದ್ದರಿಂದ ಖಾನಸಾಹೇಬರಿಗೆ ಪಂಜಾಬ ಇಲ್ಲವೆ ಸರಹದ್ದ ಪ್ರಾಂತದೊಳಗಿನ ಯಾವದಾದರೂ ಜೈಲಿಗೆ ಕಳಿಸಿಕೊಡಬೇಕೆಂದು ಮುಂಬಯಿ ಸರಕಾರವು ಹವಣಿಸಿತ್ತು. ಅದರಂತೆ ಅವರು ಆ ಉಭಯ ಸರಕಾರದವರಿಗೂ ಬರೆದು ತಿಳಿಸಿದ್ದರಂತೆ. ಆದರೆ ಎರಡೂ ಸರಕಾರಗಳು ಖಾನಸಾಹೇಬರನ್ನು ತಮ್ಮ ಪ್ರಾಂತಗಳೊಳಗಿನ ತುರಂಗದಲ್ಲಿಟ್ಟುಕೊಳ್ಳಲಿಕ್ಕೆ ಒಪ್ಪಲಿಲ್ಲವಾಗಿ ಸುದ್ದಿ! ಕಾರಾಗೃಹದ ಕತ್ತಲೆಯಲ್ಲಿ ಕೊಳೆಯುವ ಕೈದಿಗೂ ಅಂಜುವ ಈ ಸರಕಾರಗಳ ಅಂಜುಬುರುಕುತನಕ್ಕೆ ಏನೆನ್ನಬೇಕು?

* * *

ಮಹಾತ್ಮರು ಮುಂಬಯಿಗೆ ಬಂದ ಸುಸಂಧಿಯ ಲಾಭ ತಕ್ಕೊಂಡು ಮುಂಬಯಿಯ ನಾಗರಿಕರು ಒಂದು ಸಭೆಯನ್ನೇರ್ಪಡಿಸಿ ಅವರ ಭಾಷಣ ಕೇಳುವ ಅನುಕೂಲತೆಯನ್ನು ಮಾಡಿಕೊಳ್ಳಬೇಕಾಗಿ ಸಂಕಲ್ಪಿಸಿದ್ದರು. ಮಹಾತ್ಮರು ವ್ಯಾಖ್ಯಾನ ಕೊಡಲು ಒಪ್ಪಲಿಲ್ಲ. ಸಾರ್ವಜನಿಕ ಪ್ರಾರ್ಥನೆಯಲ್ಲಿ ಸೇರಲು ಒಪ್ಪಿಗೆ ಕೊಟ್ಟಿದ್ದರು. ಆದರಂತೆ ಕಳೆದ ಬುಧವಾರ ಸಂಜೆಗೆ ಕೊಂಗ್ರೆಸ ಭುವನದ ಪ್ರಾಕಾರದಲ್ಲಿ ಸಾರ್ವಜನಿಕ ಪ್ರಾರ್ಥನೆಯಾಯಿತು. ೧೫ ಸಾವಿರ ಜನರು ಪ್ರಾರ್ಥನೆಯಲ್ಲಿ ಸೇರಿದ್ದರು. ಪ್ರಾರ್ಥನೆಗೆ ಪ್ರಾರಂಭವಾಗುವ ಮುಂಚೆ ಮಹಾತ್ಮರು ಚಿಕ್ಕದೊಂದು ಭಾಷಣ ಮಾಡಿ ಪ್ರಾರ್ಥನೆಯ ಮಹಿಮೆಯನ್ನು ಚಿತ್ತವೇಧಕ ರೀತಿಯಿಂದ ಬಣ್ಣಿಸಿ ಹೇಳಿದರು. ಅವರು ಹೇಳಿದ್ದೇನಂದರೆ:— "ನಾನು ಮುಂಬಯಿಗೆ ಬಂದದ್ದು ಮುಖ್ಯವಾಗಿ ಸೌ| ಕಮಲಾ ನೆಹರುರವರನ್ನು ಕಾಣಲಿಕ್ಕೆ. ಇಲ್ಲಿ ನನಗೆ ಬೇರೆ ಕೆಲಸವಿಲ್ಲ. ಸಾರ್ವಜನಿಕ ವ್ಯಾಖ್ಯಾನ ಕೊಡಲು ಕೇಳಿದ್ದರು; ನಾನೊಪ್ಪಲಿಲ್ಲ; ಭಾಷಣ ಮಾಡುವ ಶಕ್ತಿಯೂ ಈಗ ನನ್ನಲ್ಲಿರುವದಿಲ್ಲ, ಸಾರ್ವಜನಿಕ ಭಜನೆ ಮಾಡಲು ನಾನು ಒಪ್ಪಿಕೊಂಡೆ. ಮೊದ[illegible]ಲೂ ನನಗೆ ಭಜನೆಯಲ್ಲಿ ಆಸಕ್ತಿ. ದೇವರಲ್ಲಿ ವಿಶ್ವಾಸವಿದ್ದವರಿಗೆ ಪ್ರಾರ್ಥನೆಯ ಮಹಿಮೆ ತಿಳಿದಿರಬೇಕು. ದೇವರ ಭಜನೆಯಿಂದ ಸುಖವಿಲ್ಲದವರಿಗೆ ಸುಖ ಸಿಗುತ್ತದೆ; ನಿರಾಶೆಯ ಗರ್ತೆಯಲ್ಲಿ ಬಿದ್ದವರಿಗೆ ಆಶೆಯ ಕಿರಣಗಳು ಕಾಣಹತ್ತುತ್ತವೆ; ಧೈರ್ಯಗುಂದಿದವರಿಗೆ ಧೈರ್ಯ ಬರುತ್ತದೆ. ರಾಮನಾಮ ಭಜನೆಯಿಂದ ನನಗನೇಕಾವರ್ತಿ ಧೈರ್ಯ-ಉತ್ಸಾಹಗಳ ಪ್ರಾಪ್ತಿಯಾಗಿದೆ. ಮಾನವೀ ಸಂಸಾರದಲ್ಲಿ ನಿರಾಶೆಗೆ ಆಸ್ಪದವಿಲ್ಲ. ನಾನು ರಾಜಕಾರಣದಿಂದ ನಿವೃತ್ತನಾಗಿರುತ್ತಿದ್ದಾಗ್ಯೂ ದೇಶದೊಳಗಿನ ವರ್ತಮಾನವೆಲ್ಲ ನಾನು ಬಲ್ಲೆನು. ನನಗೇನೂ ಅಸಮಾಧಾನವಾಗಿಲ್ಲ. ಜನರು ಸ್ವಲ್ಪ ನಿರಾಶರಾಗಿರುವಂತೆ ಕಾಣುತ್ತದೆ. ನಿರಾಶರಾಗಬೇಡಿರಿ. ಸ್ವರಾಜ್ಯದ ಮಹಾದ್ವಾರವು ತೆರೆದದೆ. ಧೈರ್ಯ ಹಿಡಿದು ಹಳ್ಳಿಗಳೊಳಗಿನ ಕೈಗಾರಿಕೆಗಳ ಪುನರುಜ್ಜೀವನ, ಖಾದಿ ಪ್ರಸಾರ, ಹಿಂದು-ಮುಸಲ್ಮಾನರ ಐಕ್ಯ ಮತ್ತು ಹರಿಜನರ ಉದ್ಧಾರ; ಈ ಸುಲಭವಾದ ಕಾರ್ಯಕ್ರಮವನ್ನು ನೆರವೇರಿಸಿರಿ. ಕೂಡಲೇ ನಿಮಗೆ ಸ್ವರಾಜ್ಯ ಸಿಗುವದು." ಪ್ರಾರ್ಥನೆ ಮುಗಿಸಿ ಮಹಾತ್ಮರು ಬೋರಸಾದಕ್ಕೆ ಪಯಣ ಬೆಳಿಸಿದರು. ಜೂನ ತಾ. ೪ರ ವರೆಗೆ ಮಹಾತ್ಮರು ಬೋರಸಾದದಲ್ಲಿರುವರು.

ಸುಲಭ ಕ್ರಯ! ಡಾಕ್ಟರ ಜೇ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರು ಗುಣಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಕಾಂಬೊಗತಕ್ಕ ಸರ್ವ ವ್ಯಾಧಿಗಳು, ತಲೆಸೋತ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಿವಿಕಿವುಡು ಮುಂತಾದ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ, ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

(Registered Trade Mark.)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ.ಪಿ ೪ ಆಣೆ ಡಜನ್ ೧ಕ್ಕೆ ರೂ. ೩-೮-೦. ವಿ. ಪಿ ೦-೩-೦

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ.—ಗುರುಬಸವ ಎಂಡ್ ಕಂಪನಿ ಲಿಮಿಟೆಡ್ ಪೋ.ಬಾ. ೫೧೦, ಪೋರ್ಟಟೌನ, ಮದ್ರಾಸ.

ॐ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹ ತರವಾಗಿ ಎಲ್ಲ ಆರ್ಯ ವೈದ್ಯ ಕರಿಗೂ ಹಾಗೂ ಎಲ್ಲ ಡಾಕ್ಟರರಿಗೂ ಪರಿಚಿತವಾದ ಔಷಧವು ... ಆದರೆ ... ಗಿದ ... ರು ಎಲ್ಲ ಕಡೆಯಲ್ಲಿ ಸಿಗದ ... ವದಲ್ಲ ಅದರ ಗುಣಗಳು ಸರಿಯಾಗಿ ... ಆರ ... ಆದರ ... ದಶಮೂಲಾರಿಷ್ಟವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದ್ದು ಆದರೆ ಈ ಔಷಧದಲ್ಲಿ ಎಲ್ಲ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನ ಕ್ರಿಯೆ ಸರಿಪಡಿಸಿ ಎಂಥ ಅಶಕ್ತರಿದ್ದರೂ ಹಸಿವು ಉಂಟುಮಾಡಿಸಿ ಮೈಯಲ್ಲಿ ತಾಕತ್ತವನ್ನು ಶಕ್ತಿಯನ್ನು ಉಂಟುಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, ವಾತ, ಕ್ಷಯ, ಪಾಂಡು, ಕಾಮಿಲ, ಪಾಂಡುರೋಗ, ರಕ್ತಸಂಬಂಧದ ಕುಷ್ಠವ್ಯಾಧಿ, ಅಲ್ಪವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅರ್ಶರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ ಗರ್ಭಾಶಯ ಕಟಿ ಇದ್ದರೆ ಮಕ್ಕಳಿಲ್ಲದೇ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವ ಆದನಂತರ ಅಗುಂತಕ ವಿಕಾರಗಳಿಗೆ, ನಂತರ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆಗೆ ಉಂಟಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗಿದೆ.

ವಿಶೇಷವಾಗಿ ಹೆಂಗಸರಿಗೆ — ಪ್ರಸೂತ ನಂತರ (ಹಸಿ ಎರಡಂಶಕ್ಕೆ) ಹಿಂದೊಂದು ಔನ್ಸ ನಂತೆ ೧೫ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ಪರಾಕ್ರಮ ಉಂಟುಮಾಡುತ್ತದೆ.

ಔಷಧಕ್ಕೆ ಕಾರಕರಿಗೆ ಕವಿ ಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೬ ಔನ್ಸ ಬಾಟ್ಲಿ ಗಕ್ಕೆ ರೂ ೧—೪—೦
„ ಬಾಟ್ಲಿ ... ರೂ ೭—೧೨—೦
„ ಬಾಟ್ಲಿ ... ರೂ ೧೨—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ, ಕುಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಬಿಂದು ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ

ಪಿ. ಅಚ್ಯುತ ಪಂಡಿತ,

ಚಾಲಕ,

ಆರ್ಯಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ. (ಉ. ಕನ್ನಡ)

॥ ಶ್ರೀರಾಮ ಪ್ರಸನ್ನ ॥

ಡಾ. ಅಂಕಲೀಕರ, ಎಮ್.ಡಿ, (ಅಮೇರಿಕಾ) ಸಂಕೇಶ್ವರ ಆಸ್ಪತ್ರಿ ಇವರು ದಮ್ಮು, ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ ರಾಮಬಾಣ ಔಷಧವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ— ಮನೆತನದ ವೈದ್ಯ!

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ದೋಷಿ ಅಥವಾ ಸಾದಾ) ನಿಮೋನಿಯಾ (ವಾತಶ್ಲೇಷ್ಮಜ್ವರ), ಟಾಯಿಫಾಯಿಡ (ವಿಷಮಜ್ವರ), ಹೊಟ್ಟೆಶೂಲಿ, ಕಾಲರಾ, ಪ್ಲೇಗ ಇನ್‌ಫ್ಲುಎಂಝಾ, ಸಂಧಿವಾತ, ಬಾಣಂತಿ ರೋಗ, (ಹೆರಿಗೆ ಆದ ಬಳಿಕ ಸಂಭವಿಸುವ ಬಾಣಂತ ರೋಗಗಳ ಮೇಲೆ), ಚಿಕ್ಕ ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ, ಮಲಬದ್ಧತೆ, ಮೈನೋವು, ಗಂಟಲು ನೋವು ಮತ್ತು ಗಾಯನ ಜನರಿಗೆ ಧ್ವನಿ ಬಿಗಿತ, ರಕ್ತಹೊರಡುವಿಕೆ, ಅತಿಸಾರ, ತಂಬಾಕು ಸೇವನೆಯಿಂದಾದ ರೋಗ, ಬಾಂತಿಯಾಗುವಿಕೆ, ಯಾವದೇ ತರದ ... ಗಂಟೆ, ಲಿವ್ಹರ (ಪಿ ...), ಹೊಟ್ಟೆಯೊಳಗಿನ ಗಂಟು, ಫುಪ್ಫುಸದ ಹಾಗೂ ಹೊಟ್ಟೆಯೊಳಗಿನ ಯಾವದೇ ವಿಕಾರ, ಧಾತುಕ್ಷೀಣತೆ, ಸ್ವಪ್ನಾವಸ್ಥೆ, ಎಲ್ಲ ತರದ ... ಸ್ತ್ರೀಯರ ... ರೋಗ ಮೊದಲಾದ ಎಲ್ಲಾ ರೋಗಗಳ ಮೇಲೆ ಅನುಭವ ... ಪರಿಣಾಮಕಾರಿಯಾಗಿ ... ಈ ಔಷಧವು ತೆಗೆದುಕೊಳ್ಳಲಿಕ್ಕೆ ಸ್ವಾದಿಷ್ಟ ರುಚಿಕರವಿರುವದ ... ಹುಡುಗರಿಂದ ... ಪ್ರೀತಿಯಿಂದ ತೆಗೆದುಕೊಳ್ಳುವರು. ಇದು ತೆಗೆದುಕೊಳ್ಳುವದರಿಂದ ರಕ್ತಶುದ್ಧಿ ಹಾಗೂ ... ವೃದ್ಧಿಯಾಗಿ ... ವೃದ್ಧಿಯಾಗುವದು. ಮತ್ತು ಯಾವದೇ ... ದಿಂದ ಉಂಟಾದ ... ಕಳೆದು ಮನುಷ್ಯನು ಆನಂದಿತನಾಗುವನು ಹಾಗೂ ಬಹಳ ದಿವಸ ... ತೋರುವನು.

ಈ ಔಷಧದಿಂದ ೩೦-೩೫ ವರ್ಷಗಳಿಂದ ದಮ್ಮಿನ ರೋಗದಿಂದ ನರಳುತ್ತಿರುವ ರೋಗಿಗಳು ಪೂರ್ಣ ಗುಣ ಪಡೆದಿರುವರು. ಈಗ ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗಗಳ ಮೇಲೆ ಔಷಧವೆಲ್ಲ ... ಈ ಔಷಧ ಗುಣಯೋಗ ಮಾಡಿಕೊಂಡು ರೋಗಮುಕ್ತರಾಗಿರಿ. ಈ ತನಕ ಸಾವಿರಾರು ಜನರು ರೋಗಮುಕ್ತರಾಗಿರುವರು ... ದುಃಖಪಡುತ್ತಿರುವ ಜನರಿಗೆ ಇದರ ಪರಿಚಯವಾಗಿ ಗುಣವಾಗಬೇಕೆಂದು ಈ ಔಷಧದ ಜಾಹಿರಾತು ಪ್ರಕಟಿಸಲ್ಪಟ್ಟಿರುತ್ತದೆ. ಇದನ್ನು ಹಳ್ಳಿಗರು ಹಾಗೂ ... ಕನ್ನಡದಲ್ಲಿ ... ಕತ್ತರಿಸಿ ...

ನೆಗಡಿ ಜ್ವರ, ಕೆಮ್ಮು ಶುರು ಆದ ಹೊತ್ತಿನಲ್ಲಿ ಜನರು ನಿಷ್ಕಾಳಜಿಯಿಂದ ... ವಿಕಾರಗಳು ... ಮುಂದೆ ಜ್ವರವು ದೋಷಿಯಾಗಿ ... ಸಂಭವವಿರುತ್ತದೆ. ಈ ಕಾರಣ ಶುರುವಾದ ಕೂಡಲೆ ಈ ಕಷಾಯ ತೆಗೆದುಕೊಳ್ಳುವದರಿಂದ ಮುಂದಿನ ತ್ರಾಸು ತಪ್ಪುವದು. ... ಬಾಣಂತಿ ... ಮತ್ತು ... ಮೊದಲನೇ ದಿವಸದಿಂದ ಶುರು ಮಾಡಿ ಮೂರು ತಿಂಗಳು ತನಕ ಚಾಲು ಇಟ್ಟರೆ ... ಗರ್ಭಿಣಿ ... ಔಷಧವು ... ಸುರಕ್ಷಿತವು ... ಹೆಂಗಸರಿಗೆ ... ಅನುಪಾನ ಪತ್ರಿಕೆಯು ಬಾಟ್ಲಿಯ ಸಂಗಡ ಸಿಗುತ್ತದೆ.

ಲಕ್ಷ್ಮೀಬಾಯಿ ಕೊಲ್ಹಾಪೂರಕರ- ಸಂಸ್ಥಾನ ಓತೂರ, ಅಪ್ಪಾ ಗಾಯಕಿ- ತಮ್ಮ "ಕಲ್ಪತರು ಕಷಾಯ" ಈ ಔಷಧದಿಂದ ನನ್ನ ಧ್ವನಿ ಬಿದ್ದ ಹೊತ್ತಿನಲ್ಲಿ ತೆಗೆದುಕೊಂಡ ಪ್ರಸಂಗ ... ತಿಳಿಸಲಿಕ್ಕೆ ನನಗೆ ಆನಂದವಾಗುತ್ತದೆ! ಔಷಧ ತೆಗೆದುಕೊಂಡ ಅರ್ಧ ತಾಸಿನಲ್ಲಿಯೇ ಮೊದಲಿನಂತೆಯೇ ... ಒಂದು ಧ್ವನಿ ಬಿದ್ದ ... ಇಲ್ಲ. ತಾ. ೧—೧—೩೬.

ಶ್ರೀಯುತ ವ್ಹಿ. ಹೆ. ಶಿರಪೇಕರ, ... ಮುಂಬಯಿ. ತಾ. ೧—೪—೩೬ ತಮ್ಮ "ಕಲ್ಪತರು ಕಷಾಯ"ದ ... ಮೇಲೆ ಹೆಚ್ಚಿಗೆ ಆಗು ... ನನ್ನ ಅತ್ತಿಗೆಗೆ ದಮ್ಮು ಇರುವದು ಅದಕ್ಕಾಗಿ ... ಬಾಟ್ಲಿಗಳನ್ನು ರೇಲ್ವೆ ಪಾರ್ಸಲಿನಿಂದ ಕಳಿಸಿಕೊಡಿರಿ.

ಕಿಮ್ಮತ್ತು — ... ಬಾಟ್ಲಿಗೆ ರೂ ೩॥, ಅರ್ಧ ರತ್ತಲ ಬಾಟ್ಲಿಗೆ ರೂ ೧॥, ... ಬಾಟ್ಲಿಗೆ ... ಆಣೆ.

ನಟವರ್ಯ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪೂರಕರ ಮೊದಲಾದ ಅನೇಕ ಮಹನೀಯರು ಉಪಯೋಗಿಸಿ ಪ್ರಶಸಾ ಪತ್ರಗಳನ್ನು ಕೊಟ್ಟಿರುತ್ತಾರೆ.

ಔಷಧೀ ದಂತಮಂಜನ

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು, ಕೀವು, ರಕ್ತ, ಹಲ್ಲು ... ಗಳ ರೋಗ ಮುಂತಾದವುಗಳು ನಾಶವಾಗುತ್ತವೆ. ಈ ಔಷಧವನ್ನು ದಿನಾ ... ಎರಡಾವರ್ತಿ ಹಲ್ಲುಗಳಿಗೆ ಹಚ್ಚುವದಲ್ಲದೆ ನಾಲಿಗೆಗೂ ಹಚ್ಚಬೇಕು. ಬೆಲೆ ... ೫

ಇದಲ್ಲದೆ, ಥಂಡಿಜ್ವರ, (ಮಲೇರಿಯಾ) ದ ಮೇಲೆ ಮಿಶ್ರಣ, ಪೌಷ್ಟಿಕ ಸವಿ ಔಷಧ, ಜಂತುನಾಶಕ ಕಷಾಯ, ಕಾಲರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೆಶಲ್ ಔಷಧಗಳು ನಮ್ಮಲ್ಲಿ ಸಿಗುತ್ತವೆ.

ಶ್ರೀ ರಾಮ ಆಯುರ್ವೇದಿಕ ಫಾರ್ಮಸಿ, ಗಡಹಿಂಗ್ಲಜ. (ಕೊಲ್ಹಾಪುರ ಸಂ)

ಇದನ್ನು ... ರಂಗ ಕೃಷ್ಣ ಕ್ಯಾಸಳಗ (ಸಂಪಾದಕ) ಇವರು ... "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B 1270. Monday, 3rd June, 1935.

ವರ್ಷ ೧೭

ಸಂಚಿಕೆ ೫೦

ಕಾನಡಾವೃತ್ತ

THE KANARA NEWS.

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0
ಮನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಸ್ಮಾಲ
ಪ್ಯಾಯಿಕ (೧೫ ಎಮ್ ಅಗ
ಲ ಸಾಲುಗಳವರೆಗೆ ರೂ. 1-0-0
ಆ ನಂತ್ರ ಪ್ರತಿಸಾಲಿಗೆ 0-2-0
ಹತ್ತಿಂಗದ ಸಾಲು ಎಷ್ಟು
ಹೊತ್ತಿದ್ದರೂ ಆ ಮಾಪ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು
ಬಾಕಿ ಜಾಹಿರಾತುಗಳ ಬಗೆ
ಪತ್ರವ್ಯಾರ ಯಾ ಸಮಕ್ಷ ತಿಳಿ
ಸಲ್ಪಡುವದು

—✱(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೩ ಮಾಹೆ ಜೂನ ಸನ್ ೧೯೩೫ ನೇ ಇಸವಿ.)✱—

ಕನ್ನಡ ಸೇವಿಂಗ್ಸ ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ಸಹ
ವಟಾಯಿಸಬರುತ್ತವೆ.

ಅಂತು ದರಸಾಲ ಶೇಕಡಾ ೪-೬-೦
ರಂತೆ ಬಡ್ಡಿ ಸಿಗುತ್ತದೆ!

ಆರಾರು ತಿಂಗಳಿಗೆ ದರಸಾಲ ಶೇಕಡಾ ೩½ ರಂತೆ
ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ದರಸಾಲ
ಶೇಕಡಾ ೧½ ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು

ನಡುವೆ ಬಡ್ಡಿ ತೆಗೆದುಕೊಳ್ಳದ ಇದ್ದರೆ,
ರೂ. ೧೦೦ರ ರಕಮು ಮುದ್ದತ್ತಿನ ಕೊನೆಗೆ
ರೂ ೧೨೨-೧೩-೬ ಆಗುತ್ತದೆ
ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.

ಕೆನರಾ ಬ್ಯಾಂಕ ಲಿಮಿಟೆಡ್.

(ಸ್ಥಾಪನೆ ೧೯೦೬)

ಈ ಕೆಳಗಿನ ನಗರಗಳಲ್ಲಿ ನಮ್ಮ
ಶಾಖೆಗಳಿವೆ:—

ಮುಂಬಯಿ-ಕೋಟೆ, ಮುಂಬಯಿ-ಮಾಂಡವಿ,
ಹುಬ್ಬಳ್ಳಿ ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲಮ್,
ಅಲಪ್ಪೆ, ಬೆಂಗಳೂರು, ದಾವಣಗೇರಿ ಚಿಕ್ಕಮಗಳೂರು,
ಮಂಗಳೂರು-ಬಂದರ, ಮಂಗಳೂರು-ಶಹರ,
ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ,
ಕುಂದಾಪುರ ಮತ್ತು ಗಂಗೊಳ್ಳಿ

ಸಂಕಲ್ಪಿತ ಮೂಲಧನ	೬,೦೦,೦೦೦
ಕೆತ್ತ ಮೂಲಧನ	೩,೩೧,೦೦೦
ಕ್ಷೇಮನಿಧಿ	೪,೫೦,೦೦೦
ಠೇವುಗಳು	೫೪,೬೩,೦೦೦
ವ್ಯವಹಾರದ ಹಣ	೭೩,೪೯,೦೦೦

The Canara Industrial & Banking Syndicate, Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Head Office — **Mukund Niva DIPI**

Branches — Udipi, Bangalore City, Mangalore, Payyanur, Cannanore, Brahmavar, Honnavar, Karwar, Hubli, Belgaum, Sirsi, Kumta, Hungarkatta, Coondapur, Ankola, Kanhangad & Bellary

Paid-up Capital Rs. 2,12,200.
Working Capital exceeds Rs. 17 Lacs.
Last 5 Year's Progress proves growing popularity.

Year	Rolling Capital
1930.	2,42,095
1931.	4,95,266.
1932	9,25,958
1933	13,90,789.
1934.	15,93,238.

Fixed Deposits for one year and two years are accepted now at 5% and 5½% respectively.
All sorts of Banking Business transacted
For further particulars apply to —

Kumta, 1—5—1935

G. Sanjiva Nayak,
Agent at KUMTA.

ಬನ್ನಿರಿ! || ಶ್ರೀ ಚಂದ್ರಮೌಳೀಶ್ವರ ಪ್ರಸನ್ನ: || ನೋಡಿರಿ !!

❀ ಉಡುಪಿ ಬ್ರಾಹ್ಮಣರ ❀

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, **ಕುಮಟಾ.** (ಉ ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರಾವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಉಪಹಾರೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

" ದಿ ಮೊಡರ್ನ ಹಿಂದೂ ಹೊಟೆಲ್ " ದಲ್ಲಿ ಬಂದು ಅನುಭವ ಪಡೆಯಿರಿ !

ಸೂಚನೆ.- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯ, ಮಾಲಕ.

ಅಲ್ಲಲ್ಲಿ ಇಷ್ಟಿಷ್ಟು!

ಬಿರುದಿನ ಆಸೆಯಿಂದ ಕೊರಗುತ್ತಿರುವವರ ಇದೊಂದು ವಿನೋದಿ ಶಬ್ದ ಚಿತ್ರ!

ಬಿರುದಿನ ಆಸೆ!

ಎಂದಿಗೆ ದೊರಕೂವದೋ! ಬಿರುದೂ!
ಎನಗಿನ್ನೆಂದಿಗೆ ದೊರಕೂವದೋ! || ಪಲ್ಲ ||
ಬರ್ತಡೇ ಗಿಲ್ಲಾ ಜುಬಿಲೀಗಿಲ್ಲಾ!
ನೂಯಿರ ಲಿಸ್ಟಿಲೀ ಮೊದಲೇಯಿಲ್ಲಾ! || ಅನುಪಲ್ಲ ||

ಪೇದೆರ ಸಂಬಳಾ ಕಡಿಮೆ ಮಾಡಿದೆ!
ಕಾಗ್ದಾಪತ್ರಗಳ ಜೋಕೇ ನೋಡಿದೆ!
ಆಫೀಸ ಫರ್ನಿಚರ್ ಕೇಳ್ದೇ ಮಾಡಿದೆ!
ಕಾಂಗ್ರೆಸ್ ಪಕ್ಷವ ಎಷ್ಟೋ ಕಡಿದ! || ೧ ||

ಗುಮಾಸ್ತರಕ್ಕೂ ಕಳಿಸಿಕೊಟ್ಟೆ!
ಆಫೀಸ ಬಾಡಿಗೆ ಇಳಿಸಿ ಬಿಟ್ಟೆ!
ರಜಾ ಪಡೆಯದೆ ಕೆಲಸಾ ಕೊಟ್ಟೆ!
ಬಿರುದಿಗೆ ಮಾತ್ರವೇ ಲೋಳೋಲಾವೇ! || ೨ ||

ದೊರೆಗಳ್ಗೆಷ್ಟೋ ಸಲಾಮ ಮಾಡಿದ
ಸ್ಟೇಶನ್ ತನಕ ಹಿಂದುಮುಂದೋಡಿದೆ!
ದೊರೆಗಳೆಂದುದೆ 'ಸರಿ ಸರಿ' ಅಂದೆ!
ಗುಲಾಬಿ ಮಾಡಿ ಫಳಾ ನೊಂದೆ! || ೩ ||

ದೊರೆಗಳು ಬಂದ್ರೆ ಹಾಜರಿಯಿಟ್ಟೆ!
ಬಾರಿಬಾರಿಗು ಮುಜರೇ ಕೊಟ್ಟೆ!
ಕಣ್ಣಾ ಮುಂದೆ ಕಾಣಿಕೆಯಿಟ್ಟೆ!
ಬಿಟ್ಟೇನೌಕರ ಚಾಕ್ರಿಗೆ ಬಿಟ್ಟೆ! || ೪ ||

ಬರ್ತಡೇಗಿಲ್ಲಾ! ಜುಬಿಲೀಗಿಲ್ಲಾ!
ನೂಯಿರ ಲಿಸ್ಟಿಲಿ ಮೊದಲೇಯಿಲ್ಲಾ!
ದಿವಾಳಿ ಹಬ್ಬ ಮುಂದಾಯ್ತಲ್ಲಾ!
ಮುಂದೇನ ಮಾಡಲಿ? ಶಿವನೇ ಬಲ್ಲಾ! || ೫ ||

ಅಣ್ಣಾಜಿ (ಕಂಠೀರವ, ಮಂಗಳೂರು)

(೧ ಬರ್ತಡೇ = ಜನ್ಮದಿನ, ೨ ನೂಯಿರ ಲಿಸ್ಟಿಲಿ = ವರ್ಷಾರಂಭದ ಬಿರುದುಗಳ ಯಾದಿಯಲ್ಲಿ, ೩ ಜೋಳೇ ಲೊಟ್ಟೆ = ಬಾಯ್ಕೀರು ಬಿಟ್ಟೆ, ೪ ಮುಜರೆ = ಸಲಾಮು)

* * *

ಎಲ್ಲೆಲ್ಲೂ ವಿಪರೀತ ಬಿಸಿಲು ತಾಪ! ಲಖನೌ ಶಹರದಲ್ಲೂ, ಸುತ್ತಲಿನ ಜಿಲ್ಲೆಯಲ್ಲೂ ಶಕೆಯಿಂದ ಬಳಲಿ ಅನೇಕ ಜನರು ಮರಣಪಟ್ಟರು. ಲಷ್ಕರದಲ್ಲಿ ನೌಕರಿಗಿದ್ದ ಪ್ರಾಯವೇಟ ಕೌಯೀ ಎಂಬವನು ಬ್ರಿಟಿಶ ಮಿಲಿಟರಿ ಆಸ್ಪತ್ರೆಯಲ್ಲಿ ಸತ್ತನು. [illegible]ಡದಲ್ಲಿ [illegible] ಇನ್ಸಪೆಕ್ಟರನಾದ [illegible] ಎಂಬವನು ಕಚೇರಿ ಕೆಲಸ ಮಾಡುವಾಗ ಒಂದಾವರ್ತಿ ಎತ್ತರದಿಂದ ಬಿದ್ದವನು ಕೂಡಲೇ ಸತ್ತ. [illegible] ಊರೋಗಿನ ಅಸಿಸ್ಟಂಟ ಟ್ರಾಫಿಕ್ ಸುಪರಿಂಟೆಂಡೆಂಟರಾದ ಮಿ. [illegible]ಟರವರಿಗೆ ಉಪಚಾರದ ಬಗ್ಗೆ ಪ್ರವಾಸಕ್ಕೆ ಒಯ್ದರು. ಗುಂಟೂರ ಜಿಲ್ಲೆ ಮೊದಲಾದ ಊರುಗಳಲ್ಲೂ ಬಿಸಿಲು ತಾಪದಿಂದ ಜನರು ಸಾಯುತ್ತಿರುವರಂತೆ. ಭುಸಾವಳ (ಗಾ ರೇಲ್ವೆ) ದಿಂದ ಇಬ್ಬರು ಒಕ್ಕಲಿಗರು ಸತ್ತ ಸುದ್ದಿಯಿದೆ. ಪ್ರಯಾಗದೊಳಗೆ ಗುಪ್ತ ಪೋಲೀಸ ಖಾತೆಯ ಡೆ. ಸುಪರಿಂಟೆಂಟರಾದ ದಿವಾಣಚಂದರೂ, ಈಸ್ಟ ಇಂಡಿಯನ್ ರೇಲ್ವೆಯಲ್ಲಿ ಇಂಜಿನ ಖಾತೆಯ ಅಧಿಕಾರಿಗಳಾದ ಕ್ಲೇಮೆಂಟ್ಸರವರೂ ತೀರಿಕೊಂಡಿರುತ್ತಾರೆ. ಮದ್ರಾಸದಲ್ಲಿ ಕಳೆದ ಸೋಮವಾರ ಇನ್ನಿಬ್ಬರು ಸತ್ತರು. ಮ್ಯುನಿಸಿಪಾಲಿಟಿಯವರು ನಾಗರಿಕರಿಗೆ ಯೋಗ್ಯ ಉಪಚಾರ ಮಾಡಲಿಕ್ಕೂ ಹುಡುಗರನ್ನು ಮನೆ ಹೊರಗೆ ಕಳಸದಿರಲಿಕ್ಕೂ ಎಚ್ಚರಿಕೆ ಕೊಟ್ಟದ್ದಾರೆ. ಝಾಂಸಿಯಲ್ಲಿ ನಾಲ್ವರು ಮರಣಪಟ್ಟ ವಾರ್ತೆಯಿದೆ. ಬೀಣಾದ ರೇಲ್ವೆ ಗಾರ್ಡನೊಬ್ಬನು ರೇಲ್ವೆ ಪ್ರವಾಸಮುಗಿಸಿ ಬಂದವನೇ ಮೂರ್ಛೆ ಹೊಂದಿ ತೀರಿಕೊಂಡನು! ಇನ್ನೂ ಮಳೆಯ ಲಕ್ಷಣಗಳು ಕಂಡುಬರುವದಿಲ್ಲ. ಮೇಘರಾಜನು ಬೇಗನೆ ಕೃಪೆ ಮಾಡದಿದ್ದರೆ ಇನ್ನೂ ಎಷ್ಟು ಆಹುತಿಗಳು ಬೀಳುವವೋ!

* * *

ಮುಂಬಯಿ ಬಂದರದ ಧಕ್ಕೆ ಮುಂತಾದವುಗಳ ಕಟ್ಟೋಣ ದುರುಸ್ತಿ-ಆಡಳಿತೆಗಳ ಬಗ್ಗೆ ಮುಂಬಯಿ ಪೋರ್ಟ ಟ್ರಸ್ಟ' ಎಂಬ ಸಂಸ್ಥೆಯುಂಟು. ಈ ಸಂಸ್ಥೆಯ ಕೆಲ ಸಭಾಸದರನ್ನು ಸರಕಾರದವರು ನೇಮಿಸುತ್ತಾರೆ. ಕೆಲ ಸಭಾಸದರು ಮ್ಯುನಿಸಿಪಾಲಿಟಿಯಿಂದಲೂ ವರ್ತಕ ಸಂಘಗಳಿಂದಲೂ ಆರಿಸಲ್ಪಡುತ್ತಾರೆ. ಸದರಿ ಸಂಸ್ಥೆಯ ಅಧ್ಯಕ್ಷರು ಹಿಂದೀ ಗೃಹಸ್ಥರೇ ಇರಬೇಕಾಗಿ ಪೋರ್ಟ ಟ್ರಸ್ಟ ಕಾಯಿದೆಯಲ್ಲಿ ತಿದ್ದುಪಡಿ ಮಾಡುವ ಬಗ್ಗೆ ಮುಂಬಯಿಯ ಹಿಂದೀ ವರ್ತಕ ಸಂಘದ ಪ್ರತಿನಿಧಿಗಳಾದ ಶ್ರೀ| ಲಕ್ಷ್ಮೀದಾಸ ತೇರಸಿಯವರು ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಒಂದು ಬಿಲು ತರುವವರಿದ್ದರು. ಆ ಬಿಲು ಮುಂದೆ ತರಲಿಕ್ಕೆ ನಾ| ನಾ| ವ್ಹಾಯಿಸರಾಯರು ಅಪ್ಪಣೆ ಕೊಡಲಾರೆವೆಂದು ತಿಳಿಸಿದ್ದಾರೆ! ಹಿಂದುಸ್ಥಾನದ ಕರಭಾರ ಹಿಂದೀ ಜನರ ಕೈಯಲ್ಲಿ ಕೊಡುವ ಸರ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ವೃದ್ಧಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ)
ಮಹಾಮಾಷ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾರಕ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ)
ಅಮೃತ ಪ್ರಾಶ (ಪಕ್ಷವಾತ, ಅಪತಂತ್ರಕ ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ)
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-
ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬಾ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಗಣನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಇವು ಶಾಸ್ತ್ರಸಿದ್ಧವಾಗಿ ಅನುಭವಗಮ್ಯವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಅವಶ್ಯವಾಗಿ ಸ್ಥಾಪಿಸಲು ಇದರ ವ್ಯವಸ್ಥಾಪಕರು ಯತ್ನಿಸಿರುವರು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ವೇಷಣೋಪಯೋಗಿಗಳೇ ಮಹಾಮಂಡಲದ ಉದ್ದೇಶವು ಸಿದ್ಧಿಯಾಗುತ್ತದೆ. ಈ ವೈದ್ಯಶಾಲೆಯು ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇನೆ

ಮೊಕ್ಕಾಂ, ಉಡುಪಿ ೧೦ ೧೧ ೧೯೩೬

ವಿದ್ವಾನ್ ಕೇ. ಶೇಷಶಾಸ್ತ್ರಿ ಪ್ರಧಾನ ಮಂತ್ರಿ
ಅಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ಯಾಪರಿಷತ್ ಇತ್ಯಾದಿ

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟ್, ದ. ಕನ್ನಡ

ಕಾರಿ ಘೋರಣದ ಇದೊಂದು ಮಾದರಿ !!

* * *

ಅಕುಲಿ ದುವ್ರಾ (ಬಂಗಾಳ) ಎಂಬ ಹಳ್ಳಿಯಲ್ಲಾದ ಸೋಜಿಗದ ಕಥೆ! ರಾತ್ರಿಯ ಕಗ್ಗತ್ತಲೆಯಲ್ಲಿ ಒಬ್ಬಳು ಮನೆಯಿಂದ ಹೊರಗೆ ಹೋಗಿದ್ದಳು ಸುಮ ದೂರ ಹೋಗುವಷ್ಟರಲ್ಲಿ ಕಾಲಿಗೆ ಏನೋ ಸಿಕ್ಕಿತು! ಸಮೀಪದಲ್ಲಿರುವ ಗಿಡದ ಮೇಲಿನ ಬಳ್ಳಿಯು ಕಾಲಿಗೆ ಸುತ್ತಿರಬಹುದೆಂದು ಆಕೆ ತರ್ಕ ಮಾಡಿದಳು! ಕಾಲು ಜಾಡಿಸಿದರೂ ಬಳ್ಳಿ ಬಿಡಲಿಲ್ಲ, ಜಾಡಿಸಿದಂತೆ ಬಳ್ಳಿ ಗಟ್ಟಿಯಾಗಿ ಸುತ್ತಿತು! ಗಾಬರಿಯಿಂದ ಓರಟಾಗ ಇದೇನು ವಿಘ್ನ ಬಂತು? ಎಂದು ನೋಡಲಿಕ್ಕೆ ಒಗ್ಗಿದಳು, ಕಾಲಿಗೆ ಸುತ್ತಿದ್ದು ಗಿಡದ ಮೇಲಿನ ಬಳ್ಳಿಯಲ್ಲ, ನಾಗರ ಹಾವು ಸುತ್ತುಹಾಕಿದೆ ಎಂದು ತಿಳಿದು ಬಂದ ಮೇಲೆ ಆ ಹೆಂಗಸಿನ ಪಾಡು ಏನಾಯಿತೆಂಬುದನ್ನು ಕಲ್ಪನೆಯಿಂದಲೇ ತಿಳಿಯಬೇಕಲ್ಲದೆ ಶಬ್ದಗಳಿಂದ ವರ್ಣಿಸುವದು ಶಕ್ಯವೇ ಇಲ್ಲ ಆ ನಾಗರಹಾವು ಹೆಂಗಸಿಗೆ ಸಲಕ್ಕೆ ಕಡಿದು, ಆಕೆಯ ಮೊಲೆಗಳನ್ನು ಕುಡಿಯಿತು ಹೆಂಗಸು ಭೀತಿಯಿಂದ ಬಾಯಿ ಬಿಡದೆ ಸುಮ್ಮನೆ ಬಿದ್ದುಕೊಂಡಳು ಮೊಲೆ ಕುಡಿದಾದ ಮೇಲೆ ಹಾವು ಆನಂದದ ಡೌಲಿನಿಂದ ಸಮೀಪದಲ್ಲಿರುವ ಪೊದೆಯೊಳಗೆ ಹೊರಟುಹೋಯಿತು! ವಿಚಿತ್ರ ಸಂಸಾರ!!

* * *

ಶೀಖ ಸ್ತ್ರೀಯರು ಮರಣಾಂತಿಕ ಉಪವಾಸ ಕೈಕೊಳ್ಳಬೇಕೆಂದು ಮಾಡಿರುವ ನಿರ್ಧಾರ ಶೀಖ ಸಮಾಜದಲ್ಲಿ ಒಳ್ಳೇ ಗಡಿಬಿಡಿ ಎಬ್ಬಿಸಿದ ಉಪವಾಸಕ್ಕೆ ಪ್ರಾರಂಭ ಮಾಡುವ ಮೊದಲು ನಿಮ್ಮ ಬೇಡಿಕೆಗಳಾವವೂ ಏನು ಎಂಬುದನ್ನು ತಿಳಿಸಿರಿ ಲಾಹೋರಿಗೆ ಸಮಕ್ಷ ಒಂದು ಚರ್ಚೆ ಮಾಡಿರಿ ಎಂದು ಮಧ್ಯವರ್ತಿ ಖಾಲಸಾ ತರುಣ ಸಂಘದವರು ಶ್ರೀಮತಿ ಅಮೃತ ಕೌರ ಇವರಿಗೆ ತಿಳಿಸಿದರು ಸಮಾಜದಲ್ಲಿ ಸಂಪೂರ್ಣ ಒಕ್ಕಟ್ಟು ಉಂಟುಮಾಡಿ ಸುಳ್ಳು ಮುಂದಾಳುತನವನ್ನು ನಿರ್ಮೂಲಗೊಳಿಸಬೇಕಾಗಿಯೇ ತಮ್ಮ ಭಗಿನಿಯರ ಉದ್ದೇಶವಿರುತ್ತದೆಂದು ಶ್ರೀಮತಿಗಳು ಇನ್ನೊಮ್ಮೆ ಖುಲಾಸ ಮಾಡಿ ಲಾಹೋರಿಗೆ ಹೋಲಿಕ್ಕೆ ಅಲ್ಲಗಳೆದಿರುತ್ತಾರೆ ಈ ಸಂಬಂಧ ವಿಚಾರ ಮಾಡಲಿಕ್ಕೂ ಶೀಖ ಸಮಾಜದಲ್ಲಿ ಒಕ್ಕಟ್ಟು ಒದಗಿಸಿ ತರುವ ಪ್ರಯತ್ನ ಮಾಡಲಿಕ್ಕೂ ನಾಳೆ ಬರುವ ೯ನೇ ತಾರೀಖಿಗೆ ಲಾಹೋರಿನಲ್ಲಿ ಸಮಾಜದ ಮುಂದಾಳುಗಳ ಸಭೆಯು ಕೂಡಲಿಕ್ಕಿದೆ

* * *

ಕಳೆದ ತಾ ೨೯ಕ್ಕೆ ನಾಗಪುರದೊಳಗಿನ ಪ್ರಾಂತಿಕ ಸರಕಾರದ ಕಚೇರಿಯಲ್ಲಿ ಬೆಂಕಿಬಿದ್ದು ಉಪ್ಪರಿಗೆಯ ಮೇಲಿರುವ ಶಿಕ್ಷಣ ಖಾತೆ ಸ್ಥಳೀಕ ಖಾತೆ, ಸಹಕಾರ ಖಾತೆ ಮತ್ತು ಇಂಜನಿಯರ ಖಾತೆಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳೆಲ್ಲ ಸುಟ್ಟು ಹೋದವು ರಾತ್ರಿ ೩॥ ಘಂಟೆಯಿಂದ ಬೆಳಗ್ಗೆ ೫ ಘಂಟೆ ತನಕ ಬೆಂಕಿಯು ಉರಿಯುತ್ತಿತ್ತು ಹಿಂದೆ ಮಧ್ಯಪ್ರಾಂತದ ಒಂದು ಕಮಿಶನರರಾಗಿದ್ದು ಈಗ ವಿಲಾಯತಿಯಲ್ಲಿ ಹಿಂದೀ ಸ್ವರಾಜ್ಯದ ಪ್ರಗತಿಗೆ ಕಸುಬಿನಿಂದ ವಿರೋಧ ಮಾಡುತ್ತಿರುವ ಸರ್ ರೆಜಿನೊಲ್ಡ ಕ್ರಾಡೊಕ್ ಇವರ ಛಾಯಾಚಿತ್ರವೂ ಸುಟ್ಟುಹೋಗಿರುತ್ತದಾಗಿ ತಿಳಿಯುತ್ತದೆ ಕಚೇರಿಗೆ ಬಿದ್ದ ಬೆಂಕಿಯು ನೂರು ಮೈಲುಗಳ ತನಕ ಕಂಡುಬರುತ್ತಿತ್ತಂತೆ ಬೆಂಕಿ ಆರಿಸಲಿಕ್ಕೆ ಒಂದೇ ಒಂದು ಬಂಬು ತೊಡಗಿತ್ತು ನಾಗಪುರ ಮ್ಯುನಿಸಿಪಾಲಿಟಿಯ ಬಳಿಯಲ್ಲಿ ಹೆಚ್ಚಿಗೆ ಬಂಬುಗಳಿಲ್ಲ ಪ್ರಾಂತಿಕ ಸರಕಾರದ ಕಚೇರಿಯು ಬೇಸಿಗೆಯ ಮೂಲಕ ಪಾಚಮಾರಿಗೆ ಹೋಗಿತ್ತು ಬೆಂಕಿಯ ಸುದ್ದಿ ಕೇಳಿ ಅಧಿಕಾರಿಗಳು ನಾಗಪುರಕ್ಕೆ ತಿರುಗಿ ಬಂದು ವ್ಯವಸ್ಥೆ ಮಾಡಹತ್ತಿದ್ದಾರೆ ಬೆಂಕಿಗೆ ಕಾರಣವೇನಾಯಿತೆಂದು ಚೌಕಶಿ ನಡೆದದೆ ಒಟ್ಟಿಗೆ ೧೫ ಲಕ್ಷ ರೂಪಾಯಿಗಳ ಹಾನಿಯಾಗಿರುವದೆಂದು ಅಂದಾಜು ಕಟ್ಟಲ್ಪಟ್ಟಿದೆ

* * *

ಈಗ ಸಂಯುಕ್ತ ಪ್ರಾಂತದಲ್ಲಿ ೬೫, ಬಿಹಾರ ಮತ್ತು ಒಡಿಸಾ ಪ್ರಾಂತದಲ್ಲಿ ೩೯, ಮುಂಬಯಿ ಇಲಾಖೆಯಲ್ಲಿ ೬, ಮದರಾಸ ಇಲಾಖೆಯಲ್ಲಿ ೧೦, ಬ್ರಹ್ಮದೇಶದಲ್ಲಿ ೩, ಬಂಗಾಲದಲ್ಲಿ ೫ ಪಂಜಾಬದಲ್ಲಿ ೭, ಮತ್ತು ದೇಶಿ ಸಂಸ್ಥಾನಗಳಲ್ಲಿ ೭, ಹೀಗೆ ಒಂದು ಸ್ಥಾನದಲ್ಲಿ ೧೩೮ ಸಕ್ಕರ ಕಾರಖಾನೆಗಳಿವೆ ಅವುಗಳಲ್ಲಿ ೫,೮೦,೦೦೦ ಟನ್ ಸಕ್ಕರೆ ಆಗುತ್ತದೆ ಹೋದ ಮಳೆ ದಲ್ಲಿ ಮಳೆಯು ಸರಿಯಾಗಿ ಬೀಳದ್ದರಿಂದಲೂ, ಜನವರಿ ತಿಂಗಳಲ್ಲಿ ಮಂಜಿನ ಹಾವಳಿಯಾದ್ದರಿಂದಲೂ ಕಬ್ಬಿನ ಬೆಳೆಯು ಕೆಲ ಮಟ್ಟಿಗೆ ಕಟ್ಟು ಹೋಯಿತು

* * *

ಬರವ ಜುಲೈ ೧ನೇ ತಾರೀಖಿಗೆ ಬಾದಶಹರ ಜುಬಿಲಿ ಪ್ರೀತ್ಯರ್ಥ ಎಲ್ಲ ಶಾಲೆಗಳಿಗೆ ರಜೆ ಕೊಡಬೇ

[ಮುಂದಿನ ೧೦ನೇ ಪಾನು ನೋಡಿರಿ]

THE AGRICULTURAL & INDUSTRIAL BANK, LIMITED. COONDAPOOR

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್, ಕುಂದಾಪುರ.

ಕಾಯಂ ಠೇವಣಾತಿಗಳು.

	3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ	3½ರಂತೆ,	
ಸೇವಿಂಗ್ಸ ಬೇಂಕ ಠೇವಣಾತಿಗೆ	6 ತಿಂಗಳಿಗೆ ...	4½ರಂತೆ	ಪ್ರತಿ ಮೂರು ತಿಂಗಳಿಗೊಮ್ಮೆ
ಶೇಕಡಾ	12 ತಿಂಗಳಿಗೆ . .	5½ ,,	ಬಡ್ಡಿ
4% ರಂತೆ ಬಡ್ಡಿ	24 ತಿಂಗಳಿಗೆ	6 ,,	ಕೊಡಲಾಗುವದು
	3 ವರ್ಷ ಯಾ ಹೆಚ್ಚಿನ ಅವಧಿಗೆ ...	6½ರಂತೆ	

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ

ಚಿನ್ನ ವ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು, ಚಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಕರೆಂಟ್, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಕುಂದಾಪುರ,
ತಾ 21—1—1935

K Vaman Shenai &
G Balakrishna S Nayak
Managing Directors

ಯಾರಿಗೂ ಯುದ್ಧ ಬೇಡ?

[ನಿರೀಕ್ಷಕನು ಬರೆಯುವದು.]

ಕಳೆದ ಸೋಮವಾರ ಲಂಡನಿನಲ್ಲಿ ರಾಜಪಕ್ಷದ ಸ್ತ್ರೀಯರ ಸಭೆಯ ಮುಂದೆ ಬ್ರಿಟಿಶ ಸರಕಾರದ ಈಗಿನ ಸೂತ್ರಧಾರರೂ, ಇನ್ನೊಂದು ವಾರದೊಳಗೆ ಬ್ರಿಟಿಶ ಮುಖ್ಯ ಪ್ರಧಾನಪದದಲ್ಲಿ ಆರೂಢರಾಗುವವರೂ ಆದ ಮಿ॥ ಸ್ಟೆನಲೀ ಬೋಲ್ಡ್ವಿನ್‌ರವರು ಒಂದು ಮಹತ್ವದ ಭಾಷಣ ಮಾಡಿದರು. ತಮ್ಮ ಭಾಷಣದಲ್ಲಿ ಮಿ॥ ಬೋಲ್ಡ್ವಿನ್‌ರವರು ಯುರೋಪ್ಯ ರಾಜಕಾರಣವನ್ನೆಲ್ಲ ಪರಾಂಬರಿಸಿ, ಇಂಗ್ಲಂಡದ ಸ್ವಸಂರಕ್ಷಣೆಯ ಬಗ್ಗೆ ಆಕಾಶಯಾನಗಳ ಬಲವನ್ನು ಹೆಚ್ಚಿಸುವದು ಅವಶ್ಯವಿರುತ್ತದಾಗಿ ಒತ್ತಿಹೇಳಿದರು. ಭಾಷಣದ ಕೊನೆಯಲ್ಲಿ ಅವರು ಹೇಳಿದ್ದೇನೆಂದರೆ.

"I do not believe that any nation wants war, at least at present." (ಯಾವದೇ ರಾಷ್ಟ್ರವು ಯುದ್ಧವನ್ನಪೇಕ್ಷಿಸುತ್ತದೆಂದು ನಾನು ಹೇಳಲಾರೆ; ನಿದಾನ ಸದ್ಯದಲ್ಲಿ ಯಾರಿಗೂ ಯುದ್ಧ ಬೇಡ.) ಬೋಲ್ಡ್ವಿನ್‌ರ ವಾಕ್ಯದೊಳಗಿನ ಕೊನೆಯ ನಾಲ್ಕು ಶಬ್ದಗಳೇ ಅರ್ಥಪೂರ್ಣವೆಂದು ನನ್ನ ನಂಬಿಗೆ. ಯುದ್ಧವಾಗದೆಂದು ಅವರು ಹೇಳುವದಿಲ್ಲ; ಯಾರಿಗೂ ಯುದ್ಧ ಬೇಡವೆಂತಲೂ ಅವರು ಹೇಳುವದಿಲ್ಲ. ತುರ್ತಕ್ಕೆ ಮಾತ್ರ ಯಾರಿಗೂ ಯುದ್ಧ ಬೇಡವೆಂದು ಅವರು ಬಹು ಜಾಗ್ರತೆಯಿಂದ ನುಡಿಯುತ್ತಾರೆ. ಯುದ್ಧ ಬೇಡವಾದರೆ, ಆಯಾ ರಾಷ್ಟ್ರಗಳು ಸೇನಾ ಸಾಮಗ್ರಿಯನ್ನು ಸಂಗ್ರಹಿಸುವದೇಕೆ? ಸೈನ್ಯ ಘಟಕಗಳನ್ನು ನಿರ್ಮಾಡಿಸುವದೇಕೆ? ಇಂಗ್ಲಂಡವು ಬರುವ ವರ್ಷದ ಅಂತ್ಯದೊಳಗಾಗಿ ೭೧ ವಿಮಾನ-ಘಟಕಗಳನ್ನು ಹೆಚ್ಚಿಗೆ ನಿರ್ಮಾಣ ಮಾಡಬೇಕೆಂದು ಠರಾಯಿಸಿದೆ. ಇಟಲಿಯು ಬ್ರೆನರ ಸೀಮೆಯ ರಕ್ಷಣೆಗೆ ಇನ್ನೆರಡು ಲಕ್ಷ ಸೈನ್ಯ ಭರತಿ ಮಾಡಬೇಕೆಂದು ಸಂಕಲ್ಪ ಮಾಡಿದೆ. ಅಂತು ಈ ವರೆಗೆ ಇಟಲಿಯ ಸೈನ್ಯ ೧೦ ಲಕ್ಷಕ್ಕೆ ಮುಟ್ಟಿತು. ಜರ್ಮನಿಯು ತನ್ನ ವಿಮಾನ ಬಲವನ್ನು ಯುರೋಪದೊಳಗಿನ ಪ್ರಮುಖ ರಾಷ್ಟ್ರಗಳ ಬಲಗಳಷ್ಟೇ ವಿಸ್ತಾರಪಡಿಸಬೇಕೆಂದು ಸಂಕಲ್ಪ ಮಾಡಿ ಆ ತಯಾರಿಯಲ್ಲಿ ತೊಡಗಿದೆ. ಜರ್ಮನಿಯ ಈ ಸಂಕಲ್ಪಕ್ಕೆ ಬ್ರಿಟಿಶರ ಹಾಗು ಇಟಲಿಯರ ವಿರೋಧವಿಲ್ಲ. ಈ ರೀತಿ ತಮ್ಮ ತಮ್ಮ ಸೈನ್ಯಬಲವನ್ನು ಬೆಳಸುವದರಲ್ಲಿ ಎಲ್ಲರೂ ತೊಡಗಿದ್ದಾರೆ. ಅವರೂ ಬಾಯಿಯಿಂದ ಶಾಂತಿಪಾಠ ಹೇಳುತ್ತಿರುವರು! ಅದಕ್ಕೇನೂ ಕಡಿಮೆಯಿಲ್ಲ! ಆಕಾಶಯಾನಗಳ ಬಗ್ಗೆ ಇಂಗ್ಲಂಡ, ಫ್ರಾನ್ಸ್, ಬೆಲ್ಜಿಯಮ್, ಜರ್ಮನಿ ಮತ್ತು ಇಟಲಿ ಈ ಐದು ರಾಷ್ಟ್ರಗಳಲ್ಲಿ ಒಂದು ಒಪ್ಪಂದ ಮಾಡಿಕೊಳ್ಳಬೇಕಾಗಿ ಪ್ರಯತ್ನಗಳು ನಡೆದಿವೆ. ಜರ್ಮನಿಯು ಒಪ್ಪಂದದ ಕಚ್ಚಾ ಮಸೂದೆಯನ್ನು ತಯಾರಿಸಿ ಬೇರೆ ರಾಷ್ಟ್ರಗಳಿಗೆ ಕಳಿಸಿಕೊಟ್ಟಿದೆ. ಫ್ರೆಂಚರೂ ಒಂದು ಯೋಜನೆಯನ್ನು ತಯಾರಿಸಿದ್ದಾರೆ. ಬೇರೆ ರಾಷ್ಟ್ರಗಳೂ ತಮ್ಮ ತಮ್ಮ ಯೋಜನೆಗಳನ್ನು ಸಿದ್ಧಪಡಿಸುತ್ತಿವೆಯಂತೆ. ಇದರ ಮೇಲಿಂದ ಇನ್ನು ಕೆಲವು ದಿನಗಳಲ್ಲಿಯೇ ಈ ಐದು ರಾಷ್ಟ್ರಗಳದೊಂದು ಪರಿಷತ್ತು ಸೇರಬಹುದೆಂದು ಕಾಣುತ್ತದೆ.

ಇಟಲಿ ಅಬಿಸೀನಿಯಾ ಪ್ರಕರಣವು ತುರ್ತಕ್ಕೆ ಶಾಂತವಾಗಿದೆಯೆಂದು ನಾನು ಕಳೆದ ವಾರ ತಿಳಿಸಿದ್ದೆ. ಈಗ ಆ ಸುದ್ದಿ ಪೂರ್ಣ ತಿಳಿದುಬಂದಿದೆ. ಇಟಲಿ-ಅಬಿಸೀನಿಯಾಗಳ ನಡುವಿನ ವಾದ ಬಗೆಹರಿದಿಲ್ಲ. ಅದನ್ನು ಬರುವ ಆಗಸ್ಟ ತಿಂಗಳೊಳಗಾಗಿ ಪಂಚರ ಮುಖಾಂತರ ಬಗೆಹರಿಸಿಕೊಳ್ಳಬೇಕೆಂದು ನಿಕಾಲೆಯಾಗಿದೆ. ಆ ಅವಧಿಯೊಳಗೆ ನಿಕಾಲೆಯಾಗದಿದ್ದರೆ ರಾಷ್ಟ್ರಸಂಘವು ಪುನಃ ಸಭೆಸೇರಿ ಮುಂದಿನ ವಿಚಾರ ಮಾಡುವದಂತೆ. ಮುಸೊಲಿನಿಯವರು ಕೊನೆಯ ತನಕ ಗರ್ಜಿಸುತ್ತಿದ್ದರು. ರಾಷ್ಟ್ರಸಂಘದ ಮಧ್ಯಸ್ಥಿಕೆಗೆ ಅವರು ಒಪ್ಪಿಗೆಯನ್ನು ಕೊಡಲಿಕ್ಕಿಲ್ಲವೆಂತಲೇ ಬಂದ ಬಂದ ಸುದ್ದಿಗಳ ಮೇಲಿಂದ ನಾನು ಅಂದಾಜು ಮಾಡಿದ್ದೆ. ಆದರೆ ಬ್ರಿಟಿಶ ರಾಷ್ಟ್ರದ ಪ್ರತಿನಿಧಿಗಳಾದ ಕೆಪ್ಟನ್ ಎಂಥೊನಿ ಈಡನ್‌ರವರೂ ಫ್ರೆಂಚ ಪರರಾಷ್ಟ್ರಮಂತ್ರಿಗಳಾದ ಲಾವಲ್‌ರವರೂ ಬಹಳ ಪ್ರಯತ್ನ ಮಾಡಿ ಇಟಲಿಯ ಮನವೊಲಿಸಿ ತುರ್ತಕ್ಕೆ ಇತ್ತಕ್ಕಿನಲ್ಲಿ ಒಪ್ಪಂದ ಮಾಡಿ ತಂದಿರುವರು. ಇಟಲಿ ಸರಕಾರವು ಉದಾರ ಬುದ್ಧಿಯಿಂದ ನೆರವಾಗಿದ್ದಿಲ್ಲವಾದರೆ ಈ ಒಪ್ಪಂದ ಮಾಡಿಕೊಳ್ಳುವದು ಸಾಧ್ಯವಾಗುತ್ತಿದ್ದಿಲ್ಲವೆಂದು ಎಂಥೊನಿ ಈಡನ್‌ರವರು ಉದ್ಗರಿಸುತ್ತಾರೆ. ಇದರ ಮೇಲಿಂದ ಇಟಲಿಯೇ ಪಂಚರ ಕಡೆಯಿಂದ ತನ್ನ ವಾದ ಬಗೆಹರಿಸಿಕೊಳ್ಳಲಿಕ್ಕೆ ಸಿದ್ಧವಿದ್ದಿಲ್ಲವೆಂದು ಸ್ಪಷ್ಟವಾಗುತ್ತದೆ. ಇಟಲಿ-ಅಬಿಸೀನಿಯಾ ಪ್ರಕರಣವು ಸದ್ಯಕ್ಕೆ ಶಾಂತವಾದರೂ ಅದು ಶಾಂತರೀತಿಯಿಂದಲೇ ನಿಕಾಲೆಯಾಗುವದೆಂದು ನಾನು ನಂಬುವದಿಲ್ಲ. ಇಟಲಿಯ ಹೇಳಿಕೆಯಂತೆಯೇ ಪಂಚರು ನಿಕಾಲೆ ಮಾಡಿದರೆ ಇಟಲಿಯು ಪಂಚರ ನ್ಯಾಯನಿರ್ಣಯವನ್ನು ಮನ್ನಿಸುವದು. ಇಲ್ಲವಾದರೆ ಮುಸೊಲಿನಿಯವರು ಅದನ್ನು ತಿರಸ್ಕರಿಸುವರೆಂಬುದಕ್ಕೆ ಸಂದೇಹ ಬೇಡ. ಮೇಲಾಗಿ ಇಟಲಿಯ ಹೇಳಿಕೆಯಂತೆ ನಿಕಾಲೆ ಮಾಡಲಿಕ್ಕೆ ಫ್ರೆಂಚರೂ ಬ್ರಿಟಿಶರೂ ಒಪ್ಪಿರುವರು. ಅಬಿಸೀನಿಯಾ ಪ್ರಕರಣದಲ್ಲಿ ಅವರ ಹಿತಸಂಬಂಧಗಳೂ ಕೂಡಿಕೊಂಡಿವೆಯೆಂದು ಹೇಳುತ್ತಾರೆ.

ತಾ. ೨೧ ನೇ ದಿನ ಜರ್ಮನಿಯ ಸರ್ವಾಧಿಪತಿಗಳಾದ ಹಿಟ್ಲರರು ಮಾಡಿದ ಭಾಷಣದ ಸಾರವನ್ನು ನಾನು ಕಳೆದ ವಾರ ವಿವರಿಸಿದ್ದೇನೆ. ಅದರಿಂದ ಬ್ರಿಟಿಶರಿಗೂ ಇಟಲಿಗೂ ಸಮಾಧಾನವಾಗಿದೆ. ಫ್ರೆಂಚರಿಗೆ ಮಾತ್ರ ಸಮಾಧಾನವಿಲ್ಲ. ಜರ್ಮನಿಯು ೧೩ ಮುದ್ದೆಗಳನ್ನು ಮುಂದಿಟ್ಟಿದೆ. ಅವುಗಳ ವಿಚಾರ ಮಾಡುವದು ಅವಶ್ಯವೆಂದು ಇಟಲಿ ರಾಜಕಾರಣಿಗಳ ಅಭಿಪ್ರಾಯ.

ಮಧ್ಯಂತರದಲ್ಲಿ ಫ್ರಾನ್ಸದೊಳಗೆ ದೊಡ್ಡ ಕೋಲಾಹಲ. ಬಹುತೇಕ ರಾಷ್ಟ್ರಗಳು ಸುವರ್ಣ ಚಲನವನ್ನು ಬಿಟ್ಟುಕೊಟ್ಟಾಗ್ಯೂ ಫ್ರಾನ್ಸವು ಬಿಟ್ಟುಕೊಟ್ಟಿದ್ದಿಲ್ಲ. ಆದರೆ ಕಳೆದ ವಾರ ಒಮ್ಮೆಲೇ ಫ್ರಾನ್ಸದೊಳಗಿನ ಚಿನ್ನ ವಿದೇಶಗಳಿಗೆ ಹಾರಲಾರಂಭಿಸಿತು. ೩ ದಿನಗಳಲ್ಲಿ ೭ ಕೋಟಿ ಪವನುಗಳ ಬಂಗಾರವನ್ನು ಸರಕಾರಿ ಬೇಂಕುಗಳು ತಿರುಗಿ ಕೊಡಬೇಕಾಯಿತು. ಬಂಗಾರದ ಈ ಪ್ರವಾಹಕ್ಕೆ ತಡೆಹಾಕುವ ವಿಚಾರ ನಡೆದದೆ. ಈ ಮಹತ್ವದ ಆರ್ಥಿಕ ಸಂಕಟಕ್ಕೆ ಇದಿರಾಗಲು ಎಮ್. ಫ್ಲೆಂಡಿನ್‌ರವರ ಮಂತ್ರಿಮಂಡಳವು ಹೆಣಗಾಡಿತು. ಫ್ರೆಂಕ್ ನಾಣ್ಯದ ಸ್ಥಿರಸ್ಥಾವರತೆ ಕಾಪಾಡುವ ಬಗ್ಗೆ ಫ್ಲೆಂಡಿನ್‌ರವರು ಫ್ರೆಂಚ ಚೇಂಬರ ಯಾನೆ ಪ್ರಜಾಪ್ರತಿನಿಧಿ ಸಭೆಯವರ ಕಡನ

ಡಾ॥ ಮಹಿಷಿಯವರ ಅನುಭವಸಿದ್ಧ ಔಷಧ.

ಡಾ॥ ಮಹಿಷಿಯವರು ಕಳೆದ ಮೂವತ್ತು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ, ಪ್ರಯೋಗದಿಂದಲೂ ತಯಾರಿಸಿದ ಈ ಕೆಳಗಿನ ಔಷಧಗಳು ಅತ್ಯಂತ ಪರಿಣಾಮಕಾರಕಗಳಾಗಿರುವವೆಂದು ಅವನ್ನು ಉಪಯೋಗಿಸಿದವರೆಲ್ಲರೂ ಅಭಿಪ್ರಾಯಪಡುತ್ತಿರುವರು. ಡಾ॥ ಮಹಿಷಿಯವರು ಈ ಅಮೂಲ್ಯವಾದ ಔಷಧಗಳಿಂದಲೇ ಕಾರವಾರ ಜಿಲ್ಲೆಯಲ್ಲಿ ಅತ್ಯಂತ ಲೋಕಪ್ರಿಯರಾಗಿರುವರು.

ಅಶೋಕಾ ಕಾಡೀಯಲ್:— ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ದಿವ್ಯೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವವಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು. ಕ್ರಯ ರೂ. ೧-೮-೦.

ಅಶ್ವಗಂಧ ಟೊನಿಕ್:— ಮಜ್ಜಾ, ಮಾಂಸ ಅಂಗಗಳನ್ನು ಬಲಪಡಿಸುವ ಅತ್ಯುತ್ಕೃಷ್ಟ ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಪಚನ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಲಂತಿ ಶಕ್ತಿಗೆ ಇದು ದಿವ್ಯೌಷಧ! ರೂ. ೧-೪-೦.

ಎಗ್ಯು ಮಿಕ್ಸ್ಚರ, ಫೀವರ ಡ್ರೊಪ್ಸ್, ಅಮೃತಸುಧಾ, ಕರ್ಪೂರರಸಕ, ಸಾಯರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ನಿತ್ಯಗಟ್ಲೆ ಇವುಗಳ ಉಪಯೋಗವಾಗುವದು. ಇವು ಅಮೂಲ್ಯ ಔಷಧಗಳು!!

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ-ಮಲೇರಿಯಲ್ ಮಿಕ್ಸ್ಚರ, ಬಾಲಾಮೃತ, ಬ್ಲಡ್ ಮಿಕ್ಸ್ಚರ, ಕಾಲರೇಲ, ಡಿಪ್ ಪೌಡರ, ಸಾಯರಪ್ ಕ್ಯಾಲ್ಸಿ ಲೆಕ್ಟೊ ಫಾಸ್ಫೇಟ್, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಳಂತಿ ಮಸ್ತು. ಕಬ್ಬುಸಹಿತ ಗುಳಿಗೆಗಳೂ ಸಿಕ್ಕುತ್ತಿರುವವು. ಕ್ಯಾಟಲಾಗು ಪುಕ್ಕಟೆಯಾಗಿ ಸಿಗುವದು.

ಡಾ॥ ದೇವಪ್ಪಾ ಅಯ್ಯು ನಾಯಕ, ಕುಮಟಾ — ಹೆಡ್ ಆಫೀಸು—
ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು. ॥ ಸ್ವಾಸ್ಥ್ಯನಿಲಯ, ಧಾರವಾಡ.

ಕೆಲ ತೀಕ್ಷ್ಣ ಅಧಿಕಾರಗಳನ್ನು ಬೇಡಿದ್ದನು. ಪ್ರಜಾ ಪ್ರತಿನಿಧಿ ಸಭೆಯವರು ಕೊಡಲಿಕ್ಕೆ ಒಪ್ಪಲಿಲ್ಲ. ಫ್ಲೆಂಡಿನ್ನರವರು ರಾಜಿನಾಮೆ ಕೊಟ್ಟಿದ್ದಾರೆ.

ವಿಲಾಯತಿಯಲ್ಲೂ ಮಂತ್ರಿಮಂಡಳದ ಪುನರ್ಘಟನೆಯಾಗ ಪದಂತೆ, ರಿಮ್ಸೇ ಮೆಕ್‌ಡೋನಲ್ಡರವರ ಪ್ರಕೃತಿಯು ನೆಟ್ಟಗಿರುವದಿಲ್ಲವಂತೆ! ಕಣ್ಣುಗಳಿಗೆ ಕಷ್ಟವಾಗುತ್ತದಂತೆ! ಪ್ರಕೃತಿಯ ಸ್ವಾಸ್ಥ್ಯಕ್ಕಾಗಿ ವಿಶ್ರಾಂತಿ ಕೊಳ್ಳುವದು ಅವಶ್ಯವೆಂದು ಡಾಕ್ಟರ ಜನರು ಮೆಕಡೋನಲ್ಡರಿಗೆ ಸಲಹೆ ಕೊಟ್ಟಿರುತ್ತಾರಂತೆ. ಬರುವ ಶುಕ್ರವಾರ ದಿನ ಮೆಕಡೋನಲ್ಡರವರು ರಾಜಿನಾಮೆಯನ್ನು ಕೊಡುವರೆಂದು ವಿಶ್ವಸನೀಯ ಬಾತ್ಮಿ ಬಂದಿದೆ. ಕೂಡಲೆ ಮಿ| ಬೋಲ್ಡವಿನ್‌ರವರು ಹೊಸ ಮಂತ್ರಿ ಮಂಡಳವನ್ನು ರಚಿಸಲಿಕ್ಕೆ ಬಾದಶಹರ ಕಡೆಯಿಂದ ಆಜ್ಞಾಪಿಸಲ್ಪಡುವರು. ಬೋಲ್ಡವಿನ್‌ರವರು ಮುಖ್ಯ ಪ್ರಧಾನರಾಗುವರು. ಮೆಕಡೋನಲ್ಡರಿಗೆ ಕೆಲಸವಿಲ್ಲದ ಒಂದು ಮಂತ್ರಿಪದ ಕೊಡಲಾಗುವದು! ಇನ್ನೊಂದು ಮಹತ್ವದ ಬದಲಾವಣೆಯಾಗುವದು. ಪರರಾಷ್ಟ್ರ ಮಂತ್ರಿಪದವು ಸರ್ ಜ್ಹಾನ್ ಸ್ಯಾಮುಸ್‌ರ ಕಡೆಯಿಂದ ಕೆಪ್ಟನ್ ಎಂಥೋನಿ ಈಡನ್‌ರ ಕಡೆಗೆ ಹೋಗುವದು. ಸರ್ ಜ್ಹಾನ್ ಸ್ಯಾಮುಸ್‌ರು ಅವಿವೇಕದಿಂದ ಬ್ರಿಟಿಶ ಪರರಾಷ್ಟ್ರೀಯ ರಾಜಕಾರಣದಲ್ಲಿ ಬಹಳ ಗೊಂದಲ ಮಾಡಿರುತ್ತಾರಾಗಿ ಬಲ್ಲವರ ಹೇಳಿಕೆ. ರುಶ್ಯರ ಕೂಡ ಅವರು ಹಗೆತನವನ್ನು ಬೆಳಸಿದರಂತೆ. ಹೊರಗೆ ಕಾಣಲಿಕ್ಕೆ ಜರ್ಮನಿಯ ಕಡೆಗೆ ಬೊಟ್ಟು ತೋರಿಸಿ ಅವರು ಬ್ರಿಟಿಶ ರಾಷ್ಟ್ರದ ಸೇನಾಬಲ ಬೆಳೆಸುವ ಸಲಹೆ ಕೊಟ್ಟರು. ಆದರೆ ರುಶ್ಯರ ಮೇಲೆಯೇ ಕಣ್ಣಿತ್ತಂತೆ. ರುಶ್ಯರ ವಿರುದ್ಧ ಜಪಾನಕ್ಕೆ ಪ್ರೋತ್ಸಾಹನ ಕೊಟ್ಟವರೂ ಸ್ಯಾಮುಸ್ ಸಾಹೇಬರೇ. ಸ್ಯಾಮುಸ್‌ರ ರಾಜಕಾರಣವು ಈಗ ಅಸಾಯುಕಾರಕವೆಂದು ಕಂಡುಬರಹತ್ತಿದೆ. ಎಂಥೋನಿ ಈಡನ್‌ರವರು ರಶಿಯಾ ದೇಶದಲ್ಲಿ ಅಡ್ಡಾಡಿ ಅಲ್ಲಿಯವರ ಸಿದ್ಧತೆ-ಸಾಮರ್ಥ್ಯಗಳನ್ನು ಕಣ್ಣಾರೆ ಕಂಡು ಬಂದಿದ್ದಾರೆ. ರುಶ್ಯರ ಕೂಡ ಹೋರಾಟಕ್ಕೆ ನಿಲ್ಲುವದು ಕೇವಲ ಮೂರ್ಖತನವೆಂದು ಅವರ ಅಭಿಪ್ರಾಯವಾಗಿದೆ. ಅದರಲ್ಲೂ ಮೊನ್ನೆ ಮೊನ್ನೆ ಫ್ರೆಂಚರಿಗೂ ರುಶ್ಯರಿಗೂ ಒಪ್ಪಂದವಾಗಿದೆ. ಪರಚಕ್ರ ಬಂದಾಗ ಒಬ್ಬರು ಇನ್ನೊಬ್ಬರಿಗೆ ಸಹಾಯ ಮಾಡಬೇಕೆಂದು ಕರಾರಾಗಿದೆ. ಇದರಿಂದ ರುಶ್ಯರ ಕೂಡ ವಿರೋಧ ಮಾಡುವವರು ಫ್ರೆಂಚರ ಕೂಡ ಮಿತ್ರತ್ವದಿಂದಿರುವದು ಸಾಧ್ಯವಿಲ್ಲ. ಇಂಗ್ಲಂಡ-ಫ್ರಾನ್ಸ ದೇಶಗಳು ಒಂದಕ್ಕೊಂದು ತಗಲಿವೆ. ನಡುವೆ ಬರೇ ೨೧ ಮೈಲು ಅಗಲದ ಸಮುದ್ರ ಪಟ್ಟಿ ಇದೆ. ಈಗಣ ವಿಮಾನುಗಳ ಯುಗದಲ್ಲಿ, ಬಹು ದೂರ ತನಕ ಗುಂಡುಗಳನ್ನು ಹಾರಿಸುವ ತೋಫುಗಳ ಕಾಲದಲ್ಲಿ ಈ ಸಮುದ್ರಪಟ್ಟಿಯು ಇಂಗ್ಲಂಡವನ್ನು ರಕ್ಷಿಸದು! ಫ್ರಾನ್ಸದ ಕೂಡ ಯುದ್ಧ ಮಾಡುವ ಪ್ರಸಂಗ ಬಂದರೆ ಇಂಗ್ಲಂಡಕ್ಕೆ ದೊಡ್ಡ ಗಂಡಾಂತರವಿದೆ. ಕಳೆದ ಮಹಾ ಯುದ್ಧದಲ್ಲಿ ಇಂಗ್ಲಂಡವೂ, ಫ್ರಾನ್ಸವೂ ಭುಜಕ್ಕೆ ಭುಜ ಹಚ್ಚಿ ಹೋರಾಡಿದ ರಾಷ್ಟ್ರಗಳು; ಅದ್ದರಿಂದ ಇಂಗ್ಲಂಡವು ಫ್ರಾನ್ಸದ ಕೂಡ ಮಿತ್ರತ್ವವನ್ನೇ ಬಯಸುವದು. ಫ್ರಾನ್ಸದ ಮಿತ್ರತ್ವ ಬೇಕಾದ ಮೇಲೆ ರುಶ್ಯರ ಕೂಡ ಶತ್ರುತ್ವ ಮಾಡುವದಾದೀತೇ? ಅಂತು ಇಂಗ್ಲಂಡವು ತನ್ನ ಪರರಾಷ್ಟ್ರೀಯ ರಾಜಕಾರಣವನ್ನು ಆಮೂಲಾಗ್ರ ಬದಲಿಸಬೇಕಾಗಿದೆ. ಸರ್ ಜ್ಹಾನ್ ಸ್ಯಾಮುಸ್‌ರಿಗೆ ಅದೆಂದಿಗೂ ಸಾಧ್ಯವಿಲ್ಲ. ಸ್ಯಾಮುಸರ ರಾಜಕಾರಣವು ರಾಜಪಕ್ಷೀಯ ಸಭಾಸದರಿಗೆ ಬಹಳ ಕಾಲದಿಂದ ಸೇರುತ್ತಿದ್ದಿಲ್ಲ. ಅವರು ಸ್ಯಾಮುಸ್ಸರನ್ನು ಮಂತ್ರಿಮಂಡಳದಿಂದ ಹೊರ ಮಾಡಲು ಹೊಂಚುಹಾಕುತ್ತಿದ್ದರು. ಈಗಾಗಲಿಕ್ಕಿರುವ ಮಂತ್ರಿಮಂಡಳದ ಪುನರ್ಘಟನೆಯ ಕಾಲಕ್ಕೆ ಅವರು ಸ್ಯಾಮುಸ್ಸರಿಗೆ ಪರರಾಷ್ಟ್ರೀಯ ರಾಜಕಾರಣದ ಮಂತ್ರಿಪದದಿಂದ ಹೊರಹಾಕಿ ಈಡನ್‌ರವರಿಗೆ ಅಲ್ಲಿ ಸ್ಥಾಪಿಸುವರಂತೆ. ಮಂತ್ರಿಮಂಡಳದೊಳಗಿನ ಮಿಕ್ಕ ಬದಲಾವಣೆಗಳು ಅಷ್ಟು ಮಹತ್ವದ್ದಿರುವದಿಲ್ಲ.

ಮಧ್ಯ ಯುರೋಪದಲ್ಲಿ ಆಸ್ಟ್ರಿಯಾ ಮತ್ತು ಹಂಗೇರಿ ರಾಷ್ಟ್ರಗಳಿಗೂ ಜರ್ಮನಿಯಂತೆ ಶಸ್ತ್ರಾಸ್ತ್ರ-ನಿರ್ಬಂಧನೆಗಳು ಬೇಡವಾಗಿವೆ. ಜರ್ಮನಿಯ ಹಿಟ್ಲರರಂತೆ ಅವರು ಅರ್ಭಟಿಸುವದಿಲ್ಲವಷ್ಟೇ! ರಾಷ್ಟ್ರಸಂಘವು ತಮಗೂ ನ್ಯಾಯದಿಂದ ನಡಿಸುವದೆಂದು ಅವು ಕೋರುತ್ತವೆ. ಅಷ್ಟರ ನಿರ್ಬಂಧನೆಗಳನ್ನು ಪರಿಹರಿಸಿಕೊಳ್ಳುವ ಬಗ್ಗೆ ಅನ್ಯ ಉಪಾಯಗಳ ಅವಲಂಬ ಮಾಡುವದು ಅವಶ್ಯ ಬೀಳಲಿಕ್ಕಿಲ್ಲವೆಂದು ಹಂಗೇರಿಯ ಜನರಲ್ ಗೋಂಬೋಸರವರು ಅರ್ಥಪೂರ್ಣ ಸೂಚನೆಯನ್ನು ಕೊಟ್ಟಿರುತ್ತಾರೆ.

ವಿರೋಧ್ಯ ರಾಜಕಾರಣದ ತಂತ್ರಗಳನ್ನು ನನಗೆ ತಿಳಿದಷ್ಟರ ಮಟ್ಟಿಗೆ ನಾನು ವಿವರಿಸಿ ಹೇಳಿದ್ದೇನೆ. ಎಲ್ಲ ರಾಷ್ಟ್ರಗಳೂ ತಮ್ಮ ಲಷ್ಕರ ಸಾಮರ್ಥ್ಯವನ್ನು ಬೆಳಸುವದರಲ್ಲೂ ಸಂಧಿ-ಸಂಧಾನಗಳನ್ನು ಮಾಡುವದರಲ್ಲೂ ತೊಡಗಿವೆ. ಯಾರ ಕೂಡ ಮಿತ್ರತ್ವ ಮಾಡಬೇಕು, ಯಾರ ಕೂಡ ಶತ್ರುತ್ವ ಬೆಳಸಬಹುದು? ಈ ಆಲೋಚನೆ ಅಲ್ಲಲ್ಲಿ ನಡೆದಿದೆ. ಬಲಾಬಲಗಳ ಪರೀಕ್ಷಣವೂ ನಡೆದದೆಯೆಂದು ನಾನು ಭಾವಿಸುತ್ತೇನೆ. ಒಂದಿಲ್ಲೊಂದು ನವ ಮಾದರಿ ರಾಜಕಾರಣಗಳು ಅಲ್ಲಲ್ಲಿ ಅಡ್ಡಾಡಿ ಬರುವದರೊಳಗೆ ಗೂಢ ಉದ್ದೇಶಗಳಿವೆ. ಅದರಲ್ಲೂ ಯುದ್ಧದಲ್ಲಿ ಸೇರಿದರೆ ಪರಿಣಾಮವೇನಾದೀತೆಂಬ ವಿವೇಚನೆಯು ನಡೆದಿದೆ. ಹಿಂದಿನ ಕಾಲದಲ್ಲಿ ಯುದ್ಧರಂಗ ಸೇರಿದವರಿಗೆ ಎರಡೇ ಪರಿಣಾಮಗಳು ದೊರಕುತ್ತಿದ್ದವು. ಒಂದೇ ವಿಜಯ, ಇಲ್ಲವೆ ಸೋಲು. ಈಗಿನ ಮನ್ವಂತರವೇ ಬೇರೆ. ಇಂದಿನ ಪರಿಸ್ಥಿತಿಯೊಳಗೆ ಯುದ್ಧವೆಸಗಿದರೆ ಯುದ್ಧಮಾನ ರಾಷ್ಟ್ರಗಳಲ್ಲಿ, ಹದಿನೆಂಟು ವರ್ಷಗಳ ಹಿಂದೆ ರಶಿಯಾದಲ್ಲಿ ಆದಂತೆ, ರಾಜ್ಯಕ್ರಾಂತಿಗಳಾಗುವ ಭೀತಿಯುಂಟೆಂದು ವಿಚಾರವಂತರು ಎಚ್ಚರಿಕೆ ಕೊಡುತ್ತಾರೆ. ಈ ಎಚ್ಚರಿಕೆಯನ್ನು ದುರ್ಲಕ್ಷಿಸುವದು ಕಠಿಣವಾಗಿದೆ! ಹೀಗೆಲ್ಲ ಅನಿಶ್ಚಯ, ಸಂಶಯ, ಭೀತಿ, ಅಧೈರ್ಯ ಮುಂತಾದ ತೊಂದರೆಗಳಿಂದ ಯುದ್ಧಕ್ಕೆ ತಡೆ ಬಿದ್ದಿದೆ. ಇಲ್ಲದಿದ್ದರೆ ಯುದ್ಧಕ್ಕೆ ಪ್ರಾರಂಭವಾಗಿ ಎಷ್ಟೋ ಕಾಲವಾಗುತ್ತಿತ್ತು!

(ಮುಂದೆ ೭ನೇ ಪಾನಿನ ಮೇಲೆ ಮುಂದರಿಸಿದೆ)

ಮನೆತನದಲ್ಲಿ ಯಾ ಸಣ್ಣ ಸಣ್ಣ ತೋಟಗಳಲ್ಲಿ

ಉಪಯೋಗಿಸುವಂಥ,

ಕಿರ್ಲೋಸ್ಕರ

ಮನೆವಾಡಿಕೆಯ ಪಂಪುಗಳು

ನಿಮಗೆ ಪೂರ್ಣ ಸಮಾಧಾನ ಕೊಡುವವು.

ತನ್ನಿಂದ ತಾನೇ ಸ್ಟ್ರೋಕ್ ಬಲದಿಂದ ಪಂಪಸುತ ಬೇಕಾದ ಜಾಗದಲ್ಲಿ ನೀರನ್ನು ಮೇಲಕ್ಕೆ ಸುರಿದು ತೆಗೆದು ೩ ಇಂಚು ನಳಿಗೆ ವ್ಯಾಸದಿಂದ ನೀರು ಏರುವದು.

೩ ಬಿ. ಎಚ್. ಪಿ. ಇಲೆಕ್ಟ್ರಿಕ್ ಮೋಟರ ಸಹಿತ ಸಿಗುವದು..



ತಪಶೀಲ ಮಾಹಿತಿ ಬಗ್ಗೆ ಬರೆದು ಚಿತ್ರಯುಕ್ತ ಕ್ಯಾಟಲಾಗನ್ನು ಪಡಕೊಳ್ಳಿರಿ.

ಪತ್ರವ್ಯವಹಾರ ಇಂಗ್ಲೀಷ ಯಾ ಮರಾಠಿಯಲ್ಲಿ ಮಾಡುವದು.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್—

ಕಿರ್ಲೋಸ್ಕರವಾಡಿ.

ಕಾನಡಾವೃತ್ತ.

ಶ್ರೀಯುವ ಸಂ ಜ್ಯೇಷ್ಠ ಶು ೨ ಸೋಮವಾರ

ಸ್ವದೇಶಿಯೇ ನಮ್ಮ ತರಣೋಪಾಯ!

ಕಳೆದ ವಾರದ ಸಂಚಿಕೆಯಲ್ಲಿ ನಾವು ೧೯೩೩ನೇ ಇಸವಿಯಲ್ಲಿ ಹಿಂದುಸ್ತಾನವು ಪರರಾಷ್ಟ್ರಗಳ ಕೂಡ ನಡಿಸಿದ ವ್ಯಾಪಾರದ ಮಾಹಿತಿಯನ್ನು ಸವಿಸ್ತರ ಕೊಟ್ಟಿರುತ್ತೇವೆ. ಅದನ್ನು ಆ ವಾಚಿಸಿದವರಿಗೆ ಹಿಂದುಸ್ತಾನವು ದಿನಾ ದಿನಾ ದರಿದ್ರವಾಗ ನಡೆದದೆಯೆಂಬುದು ಯಾರಿಗೂ ಸ್ಪಷ್ಟವಾಗಿ ತಿಳಿದು ಬರುವಂತಿದೆ. ಮಹಾಯುದ್ಧದ ಪೂರ್ವದಲ್ಲಿ ವರ್ಷ ವರ್ಷಕ್ಕೆ ಸರಾಸರಿ ೨೪೦ ಕೋಟಿ ರೂಪಾಯಿಗಳ ಸರಕುಗಳನ್ನು ಪರದೇಶಗಳಿಗೆ ರಫ್ತು ಮಾಡುತ್ತಲಿತ್ತೆಂದು. ನಾವು ಈಗ ಬರೇ ೧೬೦ ಕೋಟಿ ರೂಪಾಯಿಗಳ ಸರಕುಗಳನ್ನು ರಫ್ತು ಮಾಡುತ್ತಿದೆ. ನಮ್ಮ ದೇಶದಿಂದ ಕಚ್ಚಾ ಸರಕು ಕೊಂಡುಕೊಳ್ಳುತ್ತಿದ್ದ ರಾಷ್ಟ್ರಗಳು ಈಗ ತಾವು ಸ್ವಯಂಪೂರ್ಣಗಳಾಗಬೇಕೆಂಬ ಭಾವನೆಯಿಂದ ಆ ಕಚ್ಚಾ ಸರಕನ್ನು ತಮ್ಮ ದೇಶದಲ್ಲೇ ಬೆಳೆಸಿಕೊಳ್ಳುವ ಇಂಪೋರ್ಟುಗಳನ್ನು ಮಾಡುತ್ತಿವೆ. ಇಲ್ಲವೆ ತಮ್ಮ ಕೊರತೆಗಳ ಸಿವಾ ಹೊಸ ಹೊಸ ಅನ್ಯ ಉಪಾಯಗಳಿಂದ ಸಾಗಿಸಲು ಆರಂಭಿಸಿದ್ದರಿಂದ ನಮ್ಮ ಕಚ್ಚಾ ಸರಕುಗಳ ಜಗತ್ತಿನಲ್ಲಿ ಈಗ ಪೂರ್ವದಂತೆ ಬೇಡಿಕೆ ಉಳಿದಿಲ್ಲ. ಅವು ಅಷ್ಟು ಅವಶ್ಯವಿರುವದಿಲ್ಲ. ಇಷ್ಟು ಮಾತ್ರವಲ್ಲ, ಈ ಅರಿವೆಯ ಮುಖ್ಯ ನಮ್ಮ ಆರ್ಥಿಕ ವ್ಯಾಪಾರವು ತಲೆಯೆತ್ತದೆಂದು ಹೇಳಬಹುದು. ಇಂಗ್ಲಂಡ, ಜಪಾನ ದೇಶದವರಿಗೆ ನಾವು ಹೆಚ್ಚಿನಿಂದು ಸವಲತ್ತುಗಳನ್ನು ಕೊಟ್ಟು ನಮ್ಮ ಆರಕ್ಷಣೆಯನ್ನು ಅವರ ಕೊರಳಿಗೆ ಕಟ್ಟಿಕೊಳ್ಳದೆ ಇಲ್ಲದಿದ್ದರೆ ಕಳೆದ ವರ್ಷ ೨೩ ಕೋಟಿ ರೂಪಾಯಿಗಳ ಅರಿವೆಯು ಪರದೇಶಗಳಿಂದ ರಫ್ತು ಮಾಡಬರುತ್ತಿತ್ತೆಂದ ಎಣಿಸಲಾಗುವದಿಲ್ಲ. ಕಳೆದ ೨-೩ ವರ್ಷಗಳಿಂದ ಜಪಾನದವರೂ ಇಂಗ್ಲಂಡ-ಜರ್ಮನಿದವರೂ ತಮ್ಮ ಉದ್ಯಮವನ್ನು ಹಿಂದುಸ್ಥಾನಕ್ಕೆ ತಂದು ಇಲ್ಲಿಯ ಆಕ್ಕಿಗಿಂತ ಅಗ್ಗವಾಗಿ ರಫ್ತಿದ್ದಾರೆ. ಈ ದೇಶದವರು ನಮ್ಮ ದೇಶದ ಆಕ್ಕಿಗ ಪರದೇಶಗಳಲ್ಲಿರುವ ಬೇಡಿಯನ್ನು ಕ್ರಮೇಣ ಅಕ್ರಮಿಸಿ ಅಲ್ಲಿಂದ ನಮಗೆ ಹೊರನೂಕುವರೆಂಬುದು ಸಹಜವಾಗಿದೆ. ಇದರಿಂದ ನಮ್ಮ ದೇಶದ ನಿರ್ಗತ ವ್ಯಾಪಾರವು ದಿನಾ ದಿನಾ ಕಡಿಮೆ ನಡೆಯುವದು ಕಷ್ಟವೆಂದು ಇದಕ್ಕೆ ಹಿಗ್ಗುವದೆಂದ ಅನುಮಾನಕ್ಕೂ ಸಹ ತಾಂಬು ತೋರುವದಿಲ್ಲ.

ಇನ್ನು ನಮ್ಮ ಆಯಾತ ವ್ಯಾಪಾರ ಮಹಾಯುದ್ಧದ ಪೂರ್ವದಲ್ಲಿ ನಾವು ಸರಾಸರಿ ೧೯೦ ಕೋಟಿ ರೂಪಾಯಿಗಳ ಸರಕುಗಳನ್ನು—ಪಕ್ಕಾ ಸರಕುಗಳನ್ನು — ಪರದೇಶಗಳಿಂದ ತರಿಸುತ್ತಿದ್ದೆವು. ಈಗ ಅದು ೧೩೨ ಕೋಟಿಗಳಿಗೆ ಇಳಿದದ. ಈ ಇಳಿತದಿಂದ ನಮ್ಮ ಕೈಗಾರಿಕೆಗಳು ವೃದ್ಧಿಯಾದವೆಂದು ತಿಳಿಯಬಾರದು. ಪರದೇಶೀಯ ಸಾಮಾನುಗಳನ್ನು ಕೊಂಡುಕೊಳ್ಳುವ ಶಕ್ತಿಯೇ ನಮ್ಮಲ್ಲಿ ಕ್ಷೀಣವಾಗುತ್ತ ನಡದಿದೆಯೆಂದು ತಿಳಿಯುವದೇ ಸರಿಯಾಗುವದು. ಏಕೆಂದರೆ ಸಾಮಾನ್ಯ ಜನರ ಅಗ್ಗ ಬೆಲೆಯ ಮುಂದ ಅವೂ ಉಳಿಯಲಿಲ್ಲ.

ಒಂದು-ಹೆಂಡರ ಸೂಚನೆಗೆ ಮುಂದೆ ನಮ್ಮ ದೇಶದ ಕೈಗಾರಿಕೆಯ ಸ್ಥಾನಮಾನಗಳು ಸೋಲುತ್ತಾಗುಗುವದನ್ನು ಆವ ದಿನ ಆ ಕಾರ್ಖಾನೆ ಒಬ್ಬರು ಗಣನೆಯ ವರ್ತನೆಯವರ ಇನ್ನೊಬ್ಬನಿಗೆ ವಿನಿಯವರ ಮೂಲ ಹುಲಿಬ ಇಡುವ ಎಂದು ವಿವರಿಸುವದು ಈ ಜನರು ತಮ್ಮಿಂದ ಬಿಟ್ಟು ಮಾಡಿ ಈ ಪರದಿಶೆಯಿಂದ ಕೊಡುವರು ಯಾವ ಬೆಳೆಯನ್ನು ನೋಡಿದರೂ ಅದು ಒಬ್ಬನೇ ದೇಶದ ಅಗ್ಗ ಸರಕುಗಳಿಂದ ತುಂಬಿದ್ದ ಹೆಂತುಸುತ್ತದೆ. ಅವರ ಜನರ ಹಸ್ತದ ಆ ಅಗ್ಗ ಸರಕುಗಳನ್ನು ಸಹ ಕೊಂಡುಕೊಳ್ಳಲಿಕ್ಕೆ ದುಡ್ಡು ಒಡತನರಾ ಮಿಗಿಲು ಗಿದೆ. ಹಣ ಸತ್ತು ಒಡತನವೇ ನಮ್ಮ ಆಯಾತ ವ್ಯಾಪಾರ ಕಡಿಮೆಯಾಗುವದಕ್ಕೆ ಒಳವಸ್ತುದ ಕಾರಣವಾಗಿದೆಯೆಂದು ನಮ್ಮ ಸ್ಪಷ್ಟವಾದ ಅಭಿಪ್ರಾಯವಾಗಿದೆ.

ಅಂತು ನಾವು ಕಳೆದ ವರ್ಷ ೧೬೦ ಕೋಟಿ ರೂಪಾಯಿಗಳ ಸರಕುಗಳನ್ನು ವಿದೇಶಗಳಿಗೆ ಕಳಿಸಿ ೧೩೨ ಕೋಟಿ ರೂಪಾಯಿಗಳ ಸರಕುಗಳನ್ನು ಪರದೇಶದಿಂದ ತರಿಸಿಕೊಂಡಿರುವದು ನಮಗೆ ಲಾಭವಾದುದು ಬರೇ ೨೮ ಕೋಟಿ ರೂಪಾಯಿ ಎಂದೊಡನೆಯಂದ ನವರು ಯಾಕೆಯೋ ಸಲ್ಲಿಸ ಬೇಕಾಗಿರುವ ಬಡ್ಡಿ ಮನುಮುಂತ ವ್ಯಾಪಾರವು ೨೦-೨೫ ಕೋಟಿಗಳಿಗೆ ಒಳ್ಳದ ಹಣವನ್ನು ತೆರುವದು ಹೇಗೆ? ಆದ್ದರಿಂದ ನಮ್ಮ ರಾಷ್ಟ್ರದ ಸಂಪಾದನೆ ನಮ್ಮ ನಷ್ಟದ ಉತ್ಪನ್ನ ಅತಿ ಸ್ವಲ್ಪವಾಗಿ ನಮ್ಮ ವ್ಯಾಪಾರ ಹಿಂದು ಸಮಾಜದ ಹಾಗೆ ನಷ್ಟದ ನಮ್ಮ ನಡದ ಹಿಂದೆ ಹೋಯಿತು. ನಾವು ನಮ್ಮ ಕಡೆ ಸ್ವಲ್ಪ ಬಂಗಾರ ವಗೈರೆಗಳನ್ನು ಮಾರಿ ಜೀವನ ಸಾಗಿಸಬೇಕಾಗಿದೆ ಎಂದು ಹೇಳಬಹುದು.

ನಾವು ಬರೇ ಕಳೆದ ವರ್ಷ ನಷ್ಟದಲ್ಲಿ ಇದ್ದೇವೆಂದು ತಿಳಿಯಕೂಡದು. ಸರಕಾರಿ ಅಂಕಿಗಳೇ ನಮ್ಮ ದೇಶದ ಮನ್ನಣೆ ಮಾಡುತ್ತಿವೆ ೧೯೩೧ನೇ ಇಸವಿಯಿಂದ ಈ ತನಕ ನಮ್ಮ ದೇಶದಿಂದ ೨೫೦ ಕೋಟಿ ರೂಪಾಯಿಗಳ ಬಂಗಾರ ಹಾರಿಹೋಯಿತು. ಈ ಹಣವೆಲ್ಲ ಹೋಯಿತು? ಜನರು ನೋಟುಗಳನ್ನು ಕೂಡಿಟ್ಟುಕೊಂಡು ತಾವು ಕೊಟ್ಟಿದ್ದಾರೆಂದು ನಂಬಬರುವದಿಲ್ಲ! ಬ್ಯಾಂಕುಗಳಲ್ಲಿಟ್ಟಿದ್ದಾರೆಂದು ತಿಳಿಯುವೆನೆಂದರೆ, ಬ್ಯಾಂಕುಗಳಲ್ಲಿ ಇಡಗಿನ ರಾಷ್ಟ್ರದ ರಕಮು ೨೫೦ ಕೋಟಿ ರೂಪಾಯಿಗಳಿಂದ ಬೆಳೆದದ್ದು ತೋರಿ ಬರುವದಿಲ್ಲ! ಎಂದ ಮೇಲೆ ಆ ಹಣವನ್ನು ಯಾ ಅದರ ಬಹು ದೊಡ್ಡ ಭಾಗವನ್ನು ನಾವು ನಮ್ಮ ಸಂಸಾರಕ್ಕೆ ಖರ್ಚು ಮಾಡಿಬಿಟ್ಟಿರುತ್ತೇವೆಂದು ಊಹಿಸಬೇಕಲ್ಲವೇ?

ಇದೇ ಮಾದರಿಗೆ ನಾವು ಚಿನ್ನ ಬೆಳ್ಳಿ ಮಾರಿ ಎಷ್ಟು ಕಾಲ ಕಳೆಯಬಹುದು? ೧೯೩೧ರಿಂದ ೧೯೩೪ರ ತನಕ ೨೫೦ ಕೋಟಿ ರೂಪಾಯಿಗಳ ಬಂಗಾರ ನಮ್ಮ ದೇಶಕ್ಕೆ ಬಂದಿತ್ತು. ಅದೆಲ್ಲ ಈ ೩-೪ ವರ್ಷಗಳಲ್ಲಿ ತಿರುಗಿ ಹೋಯಿತು. ಈಗ ಜನರ ಕಡೆ — ಬಡಬಗ್ಗರ ಕಡೆಗೆ, ಮಧ್ಯಮ ಸ್ಥಿತಿಯ ಜನರ ಕಡೆಗೆ— ಹಿಂದಿನ ವಿಶೇಷ ಚಿನ್ನ ಉಳಿದು ಹೋಗಲಿಲ್ಲ ಇದ್ದದ್ದು ಇನ್ನು ಕೆಲ ಕಾಲದಲ್ಲಿ ಹಾರಿಹೋಗುವದು. ಆ ವೇಳೆ? ಯೋಗ್ಯ ಉಪಾಯಯೋಜನೆಯನ್ನು ಮಾಡಿ ರಾಷ್ಟ್ರವು ತನ್ನನ್ನು ತಾನೇ ಕಾಪಾಡಿಕೊಳದಿದ್ದರೆ ದಾರಿದ್ರ್ಯ-ಉಪವಾಸಗಳಿಗೆ ಸಂಬಂಧಪಟ್ಟ ಭಿಂಬಿ ಕಳವಳಗಳೂ ರೋಗ-ರುಜಿಗಳೂ ದೇಶದಲ್ಲಿ ವ್ಯಾಪಿಸುವವು. ಭವಿಷ್ಯದ ಆ ಚಿತ್ರವನ್ನು ಕಲ್ಪಿಸಿದರೆ ಮೈಮೇಲೆ ರೋಮಾಂಚಗಳು ನಿಲ್ಲುತ್ತವೆ! ಅದರ ಬದಲು ದೈವದ ಮೇಲೆ ಹವಾಲೆ ಹಾಕಿ ಸುಮ್ಮನೆ ಕೂಡ್ರುವದು ಪೌರುಷವಲ್ಲ. ಪರಿಸ್ಥಿತಿಯನ್ನು ಸ್ವಚ್ಛವಾಗಿ ಪರಿಶೀಲಿಸಿ ತಕ್ಕ ಉಪಾಯಯೋಜನೆ ಮಾಡುವದೇ ಮಾನವನ ಕರ್ತವ್ಯ. ರಾಷ್ಟ್ರದ ಆಯ ವ್ಯಯ ಪತ್ರಿಕೆಯು ರಾಷ್ಟ್ರದ ಮುಂದಿದೆ. ಆಯಕ್ಕಿಂತ ವ್ಯಯ ಹೆಚ್ಚಾಗುತ್ತದೆಂದು ರಾಷ್ಟ್ರಕ್ಕೆ ಕಂಡು ಬರುತ್ತದೆ. ಆಯಕ್ಕೂ ವ್ಯಯಕ್ಕೂ ಮೇಳ ಕೂಡಿ ಬರುವಂತೆ ಮಾಡುವದು ರಾಷ್ಟ್ರಪುರುಷನ ಈಗಿನ ಕರ್ತವ್ಯ! ರಾಷ್ಟ್ರವನ್ನು ಆಳುವವರು ಅದಕ್ಕೆ ಕೊಡಗಬೇಕು. ದುರ್ದೈವದಿಂದ ನಮ್ಮ ರಾಷ್ಟ್ರ ಕರ್ತರು ಈ ನಮ್ಮ ಅನುಕಂಪನೀಯ ಸ್ಥಿತಿಯನ್ನು ಒಪ್ಪುವದಿಲ್ಲ. ಇನ್ನೂ ಹಿಂದುಸ್ಥಾನವು ಸುವರ್ಣ ಭೂಮಿಯಿರುವದೆಂದು ಅವರು ತಿಳಕೊಂಡಿದ್ದಾರೆ. ಪರದೇಶದಿಂದ ಬರುವ ಸರಕುಗಳ ಮೇಲೆ ಜಾಸ್ತಿ ಜಕಾತ ಹಾಕಲಿಕ್ಕೆ ಅವರು ತಯಾರಿಲ್ಲ. ದೇಶದೊಳಗಿನ ಜಾರಿಯ ನಗಳಗಳ ಉದ್ಯೋಗಧಂದೆಗಳಿಗೆ ರಕ್ಷಣ ಕೊಡುವಂತಾದ್ದು ಬದಗಿಸಿಕೊಟ್ಟು ಪ್ರೋತ್ಸಾಹನ ಕೊಡಲಿಕ್ಕೂ ಸಿದ್ಧರಿಲ್ಲ. ಹುಂಡಿ ಜನರ ಹಿತಕ್ಕೆ ಅನ್ಯಾಯಕಾರಕವಿರುವ ಹುಂಡಿ ದರವನ್ನು (exchange ratio) ಬದಲಿಸಲಿಕ್ಕೂ ಒಪ್ಪುವದಿಲ್ಲ. ಹೊರಗೆ ಹರಿಯುತ್ತಿರುವ ಬಂಗಾರದ ಹೊಳೆಗೆ ಕಟ್ಟು ಹಾಕಲಿಕ್ಕೂ ಅವರ ಒಪ್ಪಿಗೆಯಿಲ್ಲ. ರಾಜ್ಯಕರ್ತರು ನಮ್ಮ ರಾಷ್ಟ್ರದ ಆಯ-ವ್ಯಯ ಪತ್ರಿಕೆಯನ್ನು ಸಮತೋಲನಗೊಳಿಸುವರೆಂದು ಬರುವನ ಹಿಡಿಯಬೇಕಾಗುವದಿಲ್ಲ. ಉದ್ಧರೇದಾತ್ಮನಾತ್ಮಾನಂ ಎಂಬ ಭಗವದುಕ್ತಿಯನ್ನು ಅನುಸರಿಸಿ ಜನತೆಯೇ ತನ್ನ ಸ್ಥಿತಿಯನ್ನು ಸುಧಾರಿಸಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ. ಜನತೆಯೇ ಮುಂದಾಗಿ ರಾಷ್ಟ್ರವ ಉತ್ಪನ್ನಕ್ಕೂ ವ್ಯಯಕ್ಕೂ ಮೇಳ ಕೂಡಿಸಿ ತರಬೇಕಾಗಿದೆ!

ಆಯ-ವ್ಯಯ ಪತ್ರಿಕೆಯನ್ನು ಸಂಪಾದಿಸುವದು ಹೇಗೆ? ಉತ್ಪನ್ನ ಕಡಿಮೆ ಖರ್ಚು ಹೆಚ್ಚು ಹೀಗೆ ಸಾಂಪ್ರತದ ಸ್ಥಿತಿ. ಅವುಗಳ ಮೇಳ ಹಾಕಬೇಕಾದರೆ ಉತ್ಪನ್ನ ಬೆಳೆಸಬೇಕು. ಖರ್ಚು ಕುಗ್ಗಿಸಬೇಕು! ಉತ್ಪನ್ನವಂತೂ ಹೆಚ್ಚಾಗುವ ಚಿನ್ಹಗಳು ಕಾಣುವದಿಲ್ಲವೆಂದು ನಾವು ಮೇಲೆ ತೋರಿಸಿಕೊಟ್ಟಿದ್ದೇವೆ. ಅಂದ ಮೇಲೆ ಖರ್ಚು ಕಡಿಮೆ ಮಾಡುವದೊಂದೇ ಉಪಾಯ ಉಳಿಯಿತು. ಪರದೇಶಿ ಸರಕುಗಳನ್ನು ಕೊಂಡು ಕೊಂಡು ಪರದೇಶಕ್ಕೆ ಹಣ ಕಳಿಸಿಕೊಡುವದನ್ನು ನಾವು ತಡಿಸಬೇಕು. ಅದೇ ಈಗ ಉಳಿದಿರುವ ಮಾರ್ಗ. ನಾವು ರಕ್ಷಿಸಿದ್ದವರ ಚಟ್ಟಿಗೆ ಪರದೇಶಿ ಸರಕುಗಳನ್ನು ಕೊಂಡು ಕೊಡಲು ಪರದೇಶಿ ಸರಕುಗಳನ್ನು ಸ್ವೀಕರಿಸಿದರೆ ಮಾತ್ರ ನಮ್ಮ ಖರ್ಚು ಕುಗ್ಗುವದು. ವಿದೇಶಿ ಸರಕುಗಳ ಸ್ವಾಗತಿಸಿ ಮಾರುಕಟ್ಟೆಗಳ ಆವುಗಳ ಆಸ್ತಿ ಕನವ ಮಾಯೆಗೆ ಬಲಿಬೀಳದೆ ಪ್ರತಿಯೊಂದು ಬಡವೆಯನ್ನು ಕೇಳಿಕೊಳ್ಳ

(1) Provided always that the licensee may, from time to time, with the previous consent in writing of and subject to such limitations and conditions as shall be prescribed in writing, by Government adopt any other system of supply for the purpose of this license and that no high tension mains shall be brought within or near the populated areas without the specific sanction of Government in each case

(2) The feeders, distributing mains and service lines shall be overhead, provided that wherever and whenever specifically permitted or required to do so in writing by Government, such feeders, distributing mains or service lines shall be laid underground

Provided that—

(*a*) No work or works shall be commenced by the licensee unless and until the method of construction shall have been previously approved, in writing, by the Electrical Engineer to Government

(*b*) Where overhead mains are used, they shall be nowhere at a height less than 20 feet from the ground level of the streets at all crossings & in all the routes where Raths or Taboots or similar religious processions are likely to pass In case of dispute, such routes and heights shall be determined by the District Magistrate

(*c*) In narrow lanes or streets, the posts shall be placed on the extreme edge of the lane or street and a special construction to be approved by the Electrical Engineer to Government, shall be adopted to keep the wires clear of every building

(*d*) Nothing in this license shall authorise the licensee to use overhead mains at any high pressure than the medium pressure without the written sanction of Government in each case and subject to any conditions or limitations which Government may prescribe

(3) Due precautions shall be taken to avoid any possible interference with the adjacent telephone or telegraph circuits due to inductive method The electric wires shall be suitably transposed where necessary

(4) For the purpose of Rule 61 of the Rules the maximum wind pressure shall be taken as 15 pounds per square foot

8 Generating, Receiving, Transforming & Distributing Stations

(1) The Generating, Receiving, Transforming and Distributing stations shall be within the area of supply But the licensee shall be at liberty either to generate energy to satisfy the whole or any part of their requirements or to buy the whole or any part of the energy they require for distribution and resell the same within the area of supply When energy is bought from outside the area of supply, the licensee may, if necessary, lay down or place electric supply lines, in accordance with the Act and the Rules for the conveyance and transmission of energy, from the point of bulk supply outside the area of supply, to the boundary of the area of supply

(2) Properly qualified man for electricity shall be employed in the generating station, and the whole undertaking shall be under the charge of a fully qualified Electrical Engineer with previous experience

9 Rates--Limits of prices to be charged The prices to be charged by the licensee for energy supplied by him shall not exceed the maxima set out below or, in case of a method of charge approved by Government under Clause (*c*) of sub section (3) of section 23 of the Act, such maxima as Government may fix on approving the method

(1) Where energy is supplied through meter For General Supply Purposes—

(*a*) For lights and fans a rate of ans 8 per unit

(*b*) For Heating and Refrigerating Purposes — a rate of annas 3 per unit

(2) For Motive Power Purposes and purposes other than those provided for in items 1 (*a*) & (*b*) a Rate of Rs 3/- per K W per month plus annas 3 per unit

Provided that the total consumption of energy in all the Government Buildings in the area of supply shall be treated as a single bulk supply and a rebate of 1 per cent shall be granted for every 250 units consumed per month upto a maximum of 35 per cent

Note - The term ' unit occuring in this sub-clause shall mean the energy contained in a current of 1,000 Ampered flowing under an Electric Motive force of 1 volt during 1 hour

(2) A Minimum charge of Rs 3/ per month in the cases referred to in items (*a*) and (*b*) of sub-clause 1 above shall be charged exclusive of meter rent, and irrespective of whether energy of that value has been consumed or not

(3) **Meter Rent** The rent to be charged for meters shall not exceed As 8 per month for a D C meter or a single phase A C meter, and Re 1/- per month for a poly phase A C meter

(4) Where energy is not supplied through meter a fixed rate of Rs 1-8-0 per mensem shall be charged for a 20 watt light and a proportionate rate for every additional 20 watts or part there-of burning for not more than 6 hours per night i e from 6 P M to 12 midnight

(5) In the case of large consumers contracts may be made for fixed period at such rates not exceeding the rates specified in sub clause (1) of this clause as may be agreed upon

(6) Without prejudice to anything contained in the above clauses the licensee may at any time enter into a special contract with the Municipality of Sirsi for supply of energy to the Municipality for public lighting upon such terms and conditions and at such rates not exceeding the maximum charges specified above as may for the time being be mutually agreed upon

10. Breaking up of Streets The length of trenches to be opened on any street at any one time and the period for which they may remain open shall be determined from time to time by Government or the local authority by whom such streets are repairable

11. Purchase of Undertaking (1) The option of purchase given by Section (7) sub section (1) of the Act shall be exercisable first on the expiration of 40 years from the commencement of this license & thereafter on the expiration of every subsequent period of 10 years therefrom The percentage of the value of lands, buildings works materials and plant of the licensee referred to in sub-section (1) of section 7 of the Act which shall be added to such value under the second proviso to that sub section on account of compulsory purchases, shall be 10%

(2) In accordance with clause (*d*) (ii) of sub section (2) of Section 3 of the Act it is hereby declared that the generating station belonging to the licensee and used in connection with the under taking, or where energy is bought from any other person or company the receiving and distributing sub-stations used in conection with the undertaking shall form part of the undertaking for the purposes of purchase under Section 5 or Section 7 of the Act

12 Assignment of the license. At any time after the commencement of this license the licensee may, with the previous consent in writing of Government and subject to compliance with such conditions upon which such consent may be given assign this license and transfer the whole of the undertaking in respect of which this license is granted (including all lands buildings works materials and the plant of the licensee) to any individual or company formed or to be formed and registered in accordance with the law for the time being in force in British India or in Great Britain, under any enactment relating to Companies for the time being in force there and having authority to take over the license and the said undertaking as the case may be and to exercise the power and perform the obligations given to or imposed upon the licensee under this license and the Act, and the Rules and on such assignment and transfer the rights, powers, authorities, obligations and liabilities of the licensee shall be exercisable by and shall attach to such individual or company formed or to be formed as aforesaid

ANANT SUBRAO KASARKOD,
SIRSI.

Applicant.

Dated the 3rd day of June One Thousand Nine-Hundred and Thirty Five

— ಮಹಾತ್ಮಾ ಗಾಂಧಿಯವರು ಸಾಬರಮತಿ ಜೈಲಿನಲ್ಲಿರುವ ಗಡಿನಾಡಿನ ಗಾಂಧಿಯವರ ಭೆಟ್ಟಿ ತಕ್ಕೊಂಡರು. ಖಾನಸಾಹೇಬರು ಅಶಕ್ತರೂ, ಕ್ಷೀಣರೂ ಆಗಿದ್ದರೂ ಉಲ್ಲಾಸವೃತ್ತಿಯಿಂದಿರುತ್ತಾರಂತೆ.

— ಕ್ವೆಟ್ಟಾ (ಬಲುಚಿಸ್ತಾನ)ದಲ್ಲಿ ಭೂಕಂಪವಾಗಿ ದೊಡ್ಡ ಅನಾಹುತವಾಗಿದೆ. ೨೦ ಸಾವಿರ ಜನರು ಮರಣಪಟ್ಟಿರುವರಾಗಿ ತಿಳಿಯುತ್ತದೆ. ತಂತಿ-ಕಂಬಗಳೆಲ್ಲ ನಾಶವಾದ್ದರಿಂದ ಬಿನತಂತಿಗಳಿಂದಲೇ ಸುದ್ದಿ ತಿಳಕೊಳ್ಳಬೇಕಾಗಿದೆ. ರೇಲ್ವೆ ಕಟ್ಟಡಗಳು ಬಿಟ್ಟರೆ ಊರಿನ ಮುಕ್ಕಾಲು ಭಾಗವು ಸಮೂಲ ನಾಶವಾಗಿದೆ.

— ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಗೆ ಈ ವರ್ಷ ೨೦ ಸಾವಿರ ಜನರು ಕುಳಿತಿದ್ದರು. ೬ ಸಾವಿರ ಮಂದಿ ಪಾಸಾಗಿದ್ದಾರೆ.

— ಬಂಗಾಲದೊಳಗಿನ ಸ್ಥಾನಬದ್ಧ ಕೈದಿಗಳ ಮಾಹಿತಿಯನ್ನು ಸಂಗ್ರಹಿಸಿ ಅವರ ಸ್ಥಿತಿ-ಗತಿ ಬಗ್ಗೆ ವರದಿಯನ್ನೊಪ್ಪಿಸುವರೆ ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡನವರು ಶ್ರೀ ಮೋಹನಲಾಲ ಸಕ್ಸೇನಾ ಇವರ ಅಧ್ಯಕ್ಷತೆಯಲ್ಲಿ ಒಂದು ಮಂಡಳವನ್ನು ನೇಮಿಸಿದ್ದಾರೆ. ಶ್ರೀ| ಸಕ್ಸೇನಾರವರು ಒಂದು ಪ್ರಕಟಣೆಯನ್ನು ಹೊರಡಿಸಿ, ಅಲ್ಲಿಯ ಸ್ಥಾನಬದ್ಧ ಕೈದಿಗಳ ಬಗ್ಗೆ ತಮತಮಗಿರುವ ಮಾಹಿತಿಯನ್ನು ತಮ್ಮ ಕಡೆಗೆ ಕಳಿಸಿಕೊಡಬೇಕಾಗಿ ಸಾರ್ವಜನಿಕರಿಗೆ ಬಿನ್ನೈಸಿದ್ದರು. ಒಂದು ಪ್ರಶ್ನಾವಳಿಯನ್ನೂ ಅವರು ಪ್ರಕಟಿಸಿದ್ದರು. ಆದರೆ ಇದುವರೆಗೆ ತನಕ ಯಾರೂ ಮಾಹಿತಿ ಕಳಿಸಿಕೊಡಲಿಲ್ಲ. ಸರಕಾರದ ಭೀತಿಯಿಂದ ಜನರು ಮಾಹಿತಿ ಕೊಡಲು ಅಂಜಿರಬೇಕೆಂದು ಕಮಿಟಿಯವರ ಅಭಿಪ್ರಾಯವಾಗಿ ಅವರು ಈಗ ಬಂಗಾಲದಲ್ಲಿ ಸಂಚಾರ ಮಾಡಿ ಸ್ವತಃ ಮಾಹಿತಿ ಸಂಗ್ರಹ ಮಾಡಬೇಕೆಂದು ನಿರ್ಣಯಿಸಿದ್ದಾರೆ. ಆದರೆ ಕಮಿಟಿಯ ಕಾರ್ಯಕ್ಕೆ ಸರಕಾರವು ಪ್ರತಿಬಂಧಕವಾಗುವದೆಂದೂ ಕಮಿಟಿಯ ವರದಿಯು ಹೊರಬೀಳುವಷ್ಟರಲ್ಲಿ ಅದನ್ನು ಜಪ್ತ ಮಾಡುವದಾಗಿಯೂ 'ಯುನೈಟೆಡ್ ಪ್ರೆಸ್ ವಾರ್ತಾ ಸಂಸ್ಥೆಗೆ ತಿಳಿದುಬಂದಿದೆಯೆಂತೆ. ಸದರಿ ದವಸದ ಕಮಿಟಿಯ ಮೆಂಬರರ ಪತ್ರವ್ಯವಹಾರವನ್ನು ತೆರೆದು ನೋಡುತ್ತಾರೆಂತಲೂ ಸುದ್ದಿ ಹಬ್ಬಿದೆ.

NOTICE.

THE SIRSI ELECTRIC LICENSE, 1935.

The public are hereby informed that the undersigned has applied to the Government of Bombay for license to supply electric energy to the public of Sirsi The copy of the draft license can be had from the undersigned on payment of annas 8/— Copy of the plan can be seen at the Sirsi Municipal office or in the the office of the Laxmi Rice Mill, Sirsi All those who have any representation to make should do so in writing to the Secretary to the Government, P W D, Bombay, within three months, from the date of publication

Address —
THE LAXMI RICE MILL
SIRSI N KANARA

Anant Sabrao Kasarkod,
Managing Proprietor,
Sirsi Electric Supply Co

DRAFT.

THE SIRSI ELECTRIC LICENSE, 1935.

License for the supply of electrical energy granted by the Government of Bombay under the Indian Electricity Act, 1910

License License is hereby granted to Anant Subrao Kasarkod, L M E, of Sirsi to supply electrical energy in the area, with the powers, and upon the terms and conditions all specified below

1. Short Title This License may be cited as " The Sirsi Electric License, 1935 "

2. Interpretation. The several words, terms and expressions which have been defined in the Indian Electricity Act, 1910 or the Rules made there under, shall have in this license the same respective meanings, provided that —

(1) The " Rules ' shall mean the Rules made under the act,

(2) The expression " **The Licensee** " shall mean and include the said Mr A S. Kasarkod, L M E, and his permitted assigns,

(3) The expression ' Deposited Map ' shall mean the plan of the area of supply as herein-after specified, which is deposited with Government, in pursuance of the rules, which plan is signed, for the purpose of identification, by the Joint Secretary to the Government of Bombay in the Public works Department and by the licensee

(4) The expression ' the commencement of this license " shall mean the date of the notification by the Government of Bombay in the Bombay Government Gazette by whom this license is granted

and

(5) the term "Government shall mean the Government of Bombay

3. Security (1) The period within which the licensee shall show under sub-clause (*a*) of clause I *of the* Schedule *to the Act that he is in a* position fully to discharge the duties and obligations imposed upon him by the license throughout the area of supply, shall, unless otherwise ordered by Government under clause (*b*) of sub section 3 of section 4 of the Act, be six months from the commencement of this license

(2) Unless otherwise ordered by Government under clause (*b*) of sub section (3) of section 4 of the Act, the sum which the licensee shall deposit or secure to the satisfaction of Government under sub clause (*b*) of clause I of the Schedule of the Act, shall be Rupees two thousand, and the period within which such sum shall be deposited or secured shall be three months from the commencement of this license

4 Area of Supply. The area whithin which the supply of energy is authorised by this license, hereinafter referred to as "the area of supply ", shall be the whole of the area comprised within the Municipal limits of the Sirsi Municipality, shown as bounded by a green line on the Deposited Map

5 Area of Compulsory Supply (1) The licensee shall, within a period of eighteen months from the commencement of this license execute works to the satisfaction of Government for the purpose of a full and continuons supply of energy throughout the streets or parts of streets as are mentioned below and coloured Red on the Deposited Map, and also such additional streets or parts of streets as Government may, after consultation with the licensee, direct within six months from the commencement of this license -

1 Chanpattan Bazar Road from the Post Office to the Veterinary Dispensary

2. Library Road, from Sub-judge's court to the Petrol pump.
3. Shimpi Galli, from Chanpattan Bazar junction to the Vithoba Temple.
4. Rayar Pethe, from the Municipal Office to the Vishnu Temple.
5. Basti Galli, from Alur's building to Devikeri.
6. Nadig Galli, from Chitragi's Vakhar to the Maruti Temple.

(2) In the case of any difference between the description of the streets mentioned in sub-clause (1) above and that indicated on the Deposited Map, the latter shall prevail.

(3) The licensee shall commence to secure the works aforesaid within six months from the commencement of this license and shall commence the supply of energy within eighteen months there from.

(4) The licensee shall, every three months, submit reports to Government and also the Electrical Engineer to Government specifying the progress made, up-to-date from the commencement of the license, in the execution of the work in the compulsory area.

5. Revocation of License. If the licensee fails to comply with the provisions of sub-clauses (1), (3) or (4) of this clause, or if, in the opinion of Government, the progress made during any portion of the said period of eighteen months is unsatisfactoy, the license shall be liable to be revoked and the security furnished, as per sub-clause (2) of clause 3 above forfeited.

6. Purposes of supply. (1) Subject to the provisions of this license, and the Act and the Rules, the licensee shall be entitled, during the continuance of this license, to energy within the area of supply for all purposes, and in bulk, and to other licensees for their own purposes:—

Provided that no supply of energy shall be commenced to be given by the licensee, either in retail to any owner or occupier of private premises, or in bulk to a distributing licensee unless and until the licensee's works have been inspected by the Government Electrical Inspector and passed by him in writing, and until Government have approved,

(*a*) The form of requisition to be made by such owner or occupier or distributing licensee for such supply of energy;

(*b*) the form of written contract or agreement with the licensee to take a supply of energy to be executed or entered into such by owner or occupier or distributing licensee; and

(*c*) the amounts of all miscellaneous charges which the licensee proposes to make against such owner or occupier or distributing licensee as incidental to, and in connection with, such supply.

(2) Clauses V, VI, VII, IX, X and XI of the Schedule to the Act shall wherever necessary be read as expressly added to or varied to the extent set out in the proviso to sub-clause (1) of this clause.

(3) The licensee shall not supply energy to any premises unless the owner or occupier of such premises shall have satisfied the licensee that all works, including repairs, relating to electrical wires, fitting and apparatus on such premises, have been carried out by a licensed electrical contractor and under the supervision of a Competency certificate-holder under the rules issued by Government in this behalf or by such other person as may be authorised to carry out such work under rule No. 40—A of the rules, and clause VI of the Schedule to the Act shall be deemed to have been modified accordingly.

7. System of Supply. (1) The system of supply of energy which may be adopted for the purpose of this license shall be the following:-

I. Alternating Current.

Single or three phase, three or four wire, periodically 50 cycles per second. The pressure of supply at the consumer's terminals shall be as under:-

(*a*) 230 volts between each phase and neutral for general purposes, viz. lights, fans, heaters etc.

(*b*) 400 volts between phase for motive power purposes and purposes other than those specified in (*a*) above, and—

(*c*) Any pressure upto 6,600 volts for feeders and for supply to any large consumer for power purposes.

or

II Direct Current.

For general purposes, viz. lights, fans, heaters etc.

(*a*) A continuous current low pressure supply at the consumer's terminals at a pressure of 220-230 volts between one of the outers and the middle conductor of a three-wire system, the middle conductor being connected to earth at the generating station, but insulated at all other parts, or

(*b*) A continuous current low pressure supply at a pressure of 220-230 volts between the conductors of a two-wire system.

For Power Purposes. A continuous current medium pressure supply at a pressure of 440/460 volts between the outers.

ವಾಗ ನಾವು ಸ್ವದೇಶಿ ಒಡವೆಯನ್ನೇ ಕೊಂಡುಕೊಳ್ಳುತ್ತಿದರೆ ದೇಶದೊಳಗಿನ ಧನ ದೇಶದಲ್ಲೇ ಉಳಿಯುವದು, ಆಯ-ವ್ಯಯ ಕೂಡಿ ಬರುವದು, ದೇಶಹಿತವೂ ಸಾಧಿಸುವದು. ದೇಶಿ ವಸ್ತುಗಳು ತುಟ್ಟಿಯೆಂದು ಹೇಳುವದು ಯುಕ್ತವಲ್ಲ. ತುಟ್ಟಿಯಾದ ದೇಶಿ ವಸ್ತುಗಳನ್ನು ಕೊಂಡುಕೊಳ್ಳುವದಕ್ಕಿಂತ ಅಗ್ಗವಾದ ವಿದೇಶಿ ವಸ್ತುಗಳನ್ನು ಕೊಂಡುಕೊಳ್ಳುವದರಿಂದ ವ್ಯಕ್ತಿಯ ಹಿತ ಸಾಧಿಸುವಂತೆ ಕಂಡುಬಂದಾಗ್ಯೂ ಕೊನೆಯಲ್ಲಿ ಇದರಿಂದ ದೇಶಹಿತದ ಘಾತವಾಗುತ್ತದೆಂಬದನ್ನು ನಾವು ಮರೆಯಕೂಡದು. ವಿದೇಶಿ ಒಡವೆಗಳ ಬಗ್ಗೆ ಕೊಟ್ಟ ಹಣವು ದೇಶ ಬಿಟ್ಟುಹೋಗುತ್ತದೆ; ದೇಶಿ ಒಡವೆಗಳ ಬಗ್ಗೆ ಕೊಟ್ಟ ಹಣ ದೇಶದಲ್ಲೇ ಉಳಿಯುತ್ತದೆ. ವ್ಯಕ್ತಿ ಹಿತಕ್ಕಿಂತ ದೇಶಹಿತವೇ ಮಿಗಿಲಾದದ್ದು. ರಾಷ್ಟ್ರಹಿತಘಾತ ಮಾಡುವ ವ್ಯಕ್ತಿಹಿತವು ಹಿತವೇ ಅಲ್ಲ. ಶುರುಕ್ಕೆ ಅದು ಹಿತದಂತೆ ತೋರುತ್ತಿದ್ದರೂ ಕೊನೆಯಲ್ಲಿ ಅದು ವ್ಯಕ್ತಿವಾತ್ರಕ್ಕೂ ಅಹಿತವಾಗಿಯೇ ಪರಿಣಮಿಸುತ್ತಿದೆ. ಆದ್ದರಿಂದಲೇ ನಮ್ಮ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರು ನಮಗೆ ಬೋಧಿಸುತ್ತಾರೆ "ವಿಶಾಲ ರಾಷ್ಟ್ರಹಿತ ಗ್ರಹಿಸಿ ನಡೆಯಿರಿ. ಪ್ರತಿಯೊಂದು ವ್ಯವಹಾರ ಮಾಡುವಾಗ, ಇದರಿಂದ ರಾಷ್ಟ್ರಹಿತವಾಗುವದೋ, ರಾಷ್ಟ್ರಹಿತಘಾತವಾಗುದೋ? ಎಂಬದನ್ನು ಆಳವಾಗಿ ಆಲೋಚಿಸಿರಿ; ವ್ಯಕ್ತಿಹಿತವನ್ನು ಲೆಕ್ಕಿಸಬೇಡಿರಿ," ಎಂದು ಅವರು ಹೋದಹೋದಲ್ಲಿ ಜನರಿಗೆ ಕಲಿಸುತ್ತಾರೆ. ಒಂದೇ ಶಬ್ದದಲ್ಲಿ ಹೇಳುವದಾದರೆ, "ಸ್ವದೇಶಿ" ವ್ರತವನ್ನು ಆಚರಿಸಿರಿ ಎಂದು ಅವರು ಹೇಳುತ್ತಿರುವರು. ಕಠೋರ ಸ್ವದೇಶಿ ವ್ರತವನ್ನು ಆಚರಿಸಿದನಕ ನಮಗೆ ಬೇರೆ ಗತಿಯೇ ಉಪಾಯವಿಲ್ಲ. ಸ್ವದೇಶಿಯಿಂದಲೇ ನಮ್ಮ ಆಯ-ವ್ಯಯಗಳು ಕೂಡಿಬರುವವು; ಬಾಯ್ದೆರೆದು ನಿಂತಿರುವ ಬಡತನವು ದೂರವಾಗುವದು. ಸ್ವದೇಶಿಯ ಉಗ್ರ ತಪಶ್ಚರ್ಯೆಯಿಂದಲೇ ನಮ್ಮ ದೇಶದ ಉದ್ಧಾರವಾಗುವದು.

ಯಾರಿಗೂ ಯುದ್ಧ ಬೇಡ?

(೫ನೇ ಪಾನಿನಿಂದ ಮುಂದರಿಸಿದ್ದು.)

ಇತ್ತ ಪೂರ್ವದ ಕಡೆಗೆ ಚೀನ-ಜಪಾನಿಯರದೊಂದು ಸಣ್ಣ ಗಡಿಬಿಡಿ, ಚೀನ ಮತ್ತು ಮಂಚುಕೋ ನಡುವಿನ ಗಡಿನಾಡಿನಲ್ಲಿ ಜೊಹೋಲ ಪ್ರಾಂತದ ಚೀನದ ಹಂಗಾಮಿ ಸೈನಿಕರಿಗೂ ಜಪಾನಿ ಸೈನ್ಯಕ್ಕೂ ತಿಕ್ಕಾಟವಾಗಿ ೩೦೦ ಚೀನಿ ಸೈನಿಕರು ಮಡಿದರು. ಈ ಹಂಗಾಮಿ ಸೈನಿಕರು ತುಂಟತನ ಮಾಡಿ ಜಪಾನಿಯರ ಹಾಗೂ ಮಂಚುಕೋ ಸರಕಾರದ ವಿರುದ್ಧ ಚಳವಳವನ್ನು ಎಬ್ಬಿಸುತ್ತಾರೆಂಬ ಜಪಾನಿಯರ ಆರೋಪ. ಇನ್ನೂ ಚೀನದ ಉತ್ತರ ಭಾಗದಲ್ಲಿ ಜಪಾನದ ವಿರುದ್ಧ ಚಟುವಟಿಕೆಗಳು ನಡೆದಿವೆಯೆಂತಲೂ ಅವಕ್ಕೆ ಕೂಡಲೆ ತಡೆಹಾಕದಿದ್ದರೆ ಚೀನದ ಉತ್ತರ ದಿಕ್ಕಿಗಿರುವ "ದೊಡ್ಡ ಗೋಡೆ"ಯ ಬದಿಗಿರುವ ಜಪಾನಿ ಸೈನ್ಯವು ಉತ್ತರ ಚೀನದಲ್ಲಿ ಒಳನುಗ್ಗಿ ತುಂಟರ ಪಾರುಪತ್ಯ ಮಾಡಬೇಕಾದೀತೆಂತಲೂ ಜಪಾನ ಸರಕಾರವು ತಮ್ಮ ರಾಯಭಾರಿಗಳ ಮುಖಾಂತರ ಚೀನಿ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದೆ. ಜಪಾನ ವಿರೋಧಕ ಪುಂಡಾಗಾರರ ಠಾಣ್ಯವಾಗಿರುವ ಪೀಕಿಂಗ ಪಟ್ಟಣವನ್ನೂ ತಮ್ಮ ಕೈವಶ ಮಾಡಿಕೊಳ್ಳಬೇಕಾಗುವದೆಂತಲೂ ಬೆದರಿಕೆ ಹಾಕಿದೆ.

ಕಾನಡಾ ಜಿಲ್ಹೆಯ ಕೃಷಿಸಹಾಯಕ ಸಂಘ.

ಕಳೆದ ತಾ. ೩೦ನೇಗೆ ಧಾರವಾಡದಲ್ಲಿ ಮೇಲಿನ ಸಂಘದ ಸಭೆಯು ಕೂಡಿತ್ತು. ಡೇ|ಘ| ದೇಶಪಾಂಡೇ ಗಂಗಾಧರರಾಯರು ಅಧ್ಯಕ್ಷರಾಗಿದ್ದರು. ಸಿದ್ಧಾಪುರದಿಂದ ಶ್ರೀ| ಹೊಸಕೊಪ್ಪ ಗಣೇಶ ಹೆಗಡೆಯವರೂ, ಇನ್ನಿಬ್ಬರೂ ಬಂದಿದ್ದರು. ಅಂಕೋಲೆಯಿಂದ ಶ್ರೀ| ಟೇಂಗ್ಸೇಯವರು ನಿಮಂತ್ರಿತರಾಗಿ ಸಭೆಗೆ ಮುದ್ದಾಂ ಬಂದಿದ್ದರು. ಶ್ರೀ| ದಿವಾಕರ, ಕರಮರಕರ ಮತ್ತು ಕೌಜಲಗಿಯವರು ಸಭೆಯಲ್ಲಿ ಹಾಜರಿದ್ದರು.

ಸಂಘದಿಂದ ಸಹಾಯ ಪಡೆದವರ ಹೆಸರು ಮುಂತಾದವುಗಳನ್ನು ಒಳಪಟ್ಟ ವರದಿಯು ಓದಿ ಮಂಜೂರ ಮಾಡಲ್ಪಟ್ಟಿತು. ತಾ. ೧-೫-೩೫ರ ತನಕ ಜಮಾ-ಖರ್ಚಿನ ಲೆಕ್ಕವೂ ಮಂಜೂರಾಯಿತು. ಕಾರ್ಯದರ್ಶಿಗಳು ತಯಾರಿಸಿದ ಅಂದಾಜುಗಳ ವಿಗತವಾರ ಯಾದಿಯ ಬಗ್ಗೆ ಚರ್ಚೆ ನಡೆಯಿತು. ಕೆಲವು ಕರಕೋಳ ದುರುಸ್ತಿಗಳನ್ನು ಮಾಡಿದ ತರುವಾಯ ಇಡೀ ಯಾದಿಯು ಸ್ವೀಕೃತವಾಯಿತು.

ಕಂಸಿರಾಳಕಂಡಿಯಲ್ಲಿ ಸೇರದ ಕೆಲವರು ಸಹಾಯ ಬೇಡಿ ಅರ್ಜಿ ಮಾಡಿದ್ದರು. ಅವರ ಸಂಕಷ್ಟಗಳ ಬಗ್ಗೆ ಕಮಿಟಿಗೆ ತುಂಬಾ ಸಹಾನುಭೂತಿಯಿರುತ್ತಿದ್ದಾಗ್ಯೂ, ಕಮಿಟಿಯು ಕೂಡಿಸಿದ ನಿಧಿಯು ಕರ ನಿರಾಕರಣೆ ಮಾಡಿ ವಿಪತ್ತಿಗೀಡಾದವರ ಬಗ್ಗೆನೇ ಕೂಡಿಸಿದ್ದಿರುವದರಿಂದ ಅದರೊಳಗಿಂದ ಏನೊಂದೂ ಹಣ ಬೇರೆ ಕಾರ್ಯಗಳಿಗೆ ಉಪಯೋಗಿಸಲಾಗುವದಿಲ್ಲವೆಂದು ಕಮಿಟಿಯು ನಿರ್ಣಯವಾಗಿತು. ಸಂಘದ ವ್ಯವಸ್ಥೆ ಕುರಿತು ಕೆಲವು ಸಂಗತಿಗಳ ವಿಚಾರವೂ ಸಭೆಯಲ್ಲಿ ನಡೆಯಿತು.

ವೃತ್ತಸಾರ.

— ಪಂಡಿತ ಮದನ ಮೋಹನ ಮಾಲವೀಯರ ಪ್ರಕೃತಿಯು ನೆಟ್ಟಗಾಗಿಲ್ಲ. ಪ್ರಕೃತಿಯ ಸ್ವಾಸ್ಥ್ಯಕ್ಕಾಗಿ ಅವರು ಮಸೂರಿಯ ಆರೋಗ್ಯಧಾಮಕ್ಕೆ ಹೋಗಿದ್ದಾರೆ.

—ಕರ್ನಾಟಕದ ಸುಪ್ರಸಿದ್ಧ ಡಾಕ್ಟರರಾದ ಯಶವಂತರಾವ ನಾಡಗೀರರವರು ಮೊನ್ನೆ ಶನಿವಾರ ಧಾರವಾಡದಲ್ಲಿ ಮೂತ್ರಪಿಂಡದ ಉಪಹತಿಯಿಂದ ಕೈಲಾಸವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ. ಕೈಲಾಸವಾಸಿಗಳು ಕೆಲಕಾಲ ಮುಂಬಯಿಯ ಗ್ರಾಂಟ ಮೆಡಿಕಲ್ ಕಾಲೇಜಿನ ಡೀನ (ಮುಖ್ಯಾಧ್ಯಾಪಕ) ರಾಗಿದ್ದರು.

— ಭಂಗಾರದ ರಫ್ತಿನ ವ್ಯಾಪಾರಕ್ಕೆ ತಡೆಹಾಕುವ ಬಗ್ಗೆ ಶ್ರೀ| ಅನಂತ ಶಯನ ಅಯ್ಯಂಗಾರ ಇವರು ಬರುವ ಎಸೆಂಬ್ಲಿ ಅಧಿವೇಶನದಲ್ಲಿ ಒಂದು ಬಿಲು ತರುವವರಿದ್ದಾರೆ

— ಕರಾಚಿಯ ಗೋಳಿಬಾರದಲ್ಲಿ ಮೃತಪಟ್ಟವರ ಕುಟುಂಬದವರೂ ಗಾಯಪಟ್ಟವರೂ ನಷ್ಟ ಭರಪಾಯಿಯ ಬಗ್ಗೆ ಭಾರತ ಮಂತ್ರಿಗಳ ಮೇಲೆ ದಾವೆ ಮಾಡುವ ವಿಚಾರ ನಡೆದದೆ.

— ಪ್ರತಾಪಗಡ ಜಿಲ್ಹೆಯ ಸಂಯುಕ್ತ ಪ್ರಾಂತದ ಕೆಲವು ಭಾಗದೊಳಗಿನ ಬಾವಿಗಳ ನೀರು ಒಮ್ಮಿಂದೊಮ್ಮೆ ಗಂಟಿಡಿ ಕೆಳಗೆ ಇಳಿಯಿತು. ನಿಸರ್ಗಲೀಲೆ !

— ಅತ್ತೂರ (ಸೇಲಮ ಜಿಲ್ಹೆ) ನಿವಾಸಿಕರಾದ ಶ್ರೀ| ಜಯಪಾಲ ಫಿಲಿಪ್‌ರೆಂಬ ಶಿಕ್ಷಕರು ತಮ್ಮ ಲಗ್ನಕ್ಕಾಗಿ ಬೇಲೂರಿಗೆ ಬಂದಿದ್ದರು. ಮದುವೆ ದಿನ ಬೆಳಗ್ಗೆ ಗಡ್ಡ ಮಾಡಿಕೊಳ್ಳುವಾಗ ಗಲ್ಲದ ಮೇಲಿನ ಒಂದು ಪುಗುಳು ಕತ್ತರಿಸಿದ್ದರಿಂದ ಗಾಯವಾಯಿತು. ಗಾಯದ ವೇದನೆಯು ತೀವ್ರವಾಗಿ ಜಯಪಾಲರು ಮದುವೆಯ ಬಗ್ಗೆ ನಿಶ್ಚಯಿಸಿದ ಮುಹೂರ್ತದಲ್ಲಿ ಪ್ರಾಣ ಬಿಟ್ಟರು. ಮದುವೆ ಮಾಡುವ ಬಗ್ಗೆ ಬಂದ ಪಾದ್ರಿಗಳು ಜಯಪಾಲರ ಅಂತ್ಯವಿಧಿ ಮಾಡಿಸಿದರು.

— ನವಾನಗರದ ಜಾಮಸಾಹೇಬರು ಬಾದಶಹರ ರೌಪ್ಯ ಜ್ಯುಬಿಲಿ ಉತ್ಸವಕ್ಕಾಗಿ ವಿಲಾಯತಿಗೆ ಹೋಗಿದ್ದಾರೆ. ಅವರು ತಮ್ಮ ಸಂಗಡ ಒಂದು ಮುದಿ ಗಿಳಿಯನ್ನೂ ಒಯ್ದಿರುತ್ತಾರೆ. ಗಿಳಿಗೆ ೬೦ ವರ್ಷಗಳಾಗಿವೆಯಂತೆ. ಜಾಮಸಾಹೇಬರ ಹಿರಿಯರ ಕಾಲದಿಂದಲೂ ಅದು ಅರಮನೆಯಲ್ಲಿರುತ್ತದೆ. ಅದರ ಹೆಸರು ಪೊಪ್ಸಿ. ಅದು ಹೋದಲ್ಲಿ ಭೂತ-ಪಿಶಾಚ್ಚಗಳು ಬರುವದಿಲ್ಲವಂತೆ! ಜಾಮಸಾಹೇಬರು ಯಾವದೊಂದು ಮನೆಯನ್ನು ಪ್ರವೇಶಿಸಬೇಕಾದರೆ ಮೊದಲು ಗಿಳಿಯನ್ನು ಪ್ರವೇಶಿಸುತ್ತಾರೆ; ಆ ಮೇಲೆ ಸ್ವತಃ ಒಳಗೆ ಹೋಗುತ್ತಾರೆ. ಇಂಗ್ಲಂಡದಲ್ಲಿ ಗಿಳಿಗೆ ಪ್ರವೇಶವಿಲ್ಲ. ಆದರೆ ಜಾಮಸಾಹೇಬರಿಗೆ ಮರ್ಯಾದೆ ಕೊಟ್ಟು ಕಸ್ಟಮ್ ಅಧಿಕಾರಿಗಳು ಅವರ ಗಿಳಿಯನ್ನು ಒಳಗೆ ಒಯ್ಯಗೊಟ್ಟರು !

—ಕಳೆದ ವಾರದಲ್ಲಿ ಕಲ್ಲಿಕೋಟೆಯೊಳಗೆ 'ಮುಂಬಯಿ ಕ್ರೋನಿಕಲ್' ಪತ್ರಿಕೆಯ ಸಂಪಾದಕರಾದ ಶ್ರೀ| ಸಯ್ಯದ ಅಬ್ದುಲ್ಲಾ ಬ್ರೇಲ್ವಿಯವರ ಅಧ್ಯಕ್ಷತೆಯ ಕೆಳಗೆ ಕೇರಳ ಪ್ರಾಂತಿಕ ರಾಜಕೀಯ ಪರಿಷತ್ತು ಕೂಡಿತ್ತು. ಸಂಸ್ಥಾನಗಳ ಉಚ್ಚಾಟನ, ಯುದ್ಧ ವಿರೋಧ, ಹೊಸ ರಾಜ್ಯಘಟನೆಯ ವಿಧ್ವಂಸನ, ಮಂತ್ರಿಪದಗಳ ಸ್ವೀಕಾರಕ್ಕೆ ವಿರೋಧ ಮುಂತಾದ ನಿರ್ಣಯಗಳಾದವು. ಮಂಗಳೂರಿನಂತೆ ಕಲ್ಲಿಕೋಟೆಯಲ್ಲಿಯೂ ಸಮಾಜ ಸಮತಾವಾದಿಗಳು ಬಹುಮತವನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಂಡರು.

— ಆಯರ್ಲಂಡದ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಬಾದಶಹರು ಆಯರ್ಲಂಡಕ್ಕೆ ಗವ್ಹರ್ನರ ಜನರಲ್‌ರನ್ನು ನೇಮಿಸುವದು ಬೇಡವೆಂದು ನಿರ್ಣಯವಾಗಿದೆ.

— ಮೇ ತಾ, ೩೦ ರ ವರೆಗೆ ಇಡೀ ಹಿಂದುಸ್ಥಾನದಲ್ಲಿ ಜುಬಿಲಿ ನಿಧಿಗೆ ೬೫ ಲಕ್ಷ ರೂಪಾಯಿ ಕೂಡಿವೆಯೆಂದು ತಿಳಿಯುತ್ತದೆ. ಮುಂಬಯಿ ಇಲಾಖೆಯಲ್ಲಿ ಕೂಡಿದ ನಿಧಿಯು ೧೩| ಲಕ್ಷಗಳಿಗೆ ಏರಿದೆ.

— ಅಂದಮಾನದೊಳಗಿನ ಕೈದಿಗಳ ಸ್ಥಿತಿಯನ್ನು ಸ್ವತಃ ನೋಡಿಬರಲಿಕ್ಕೆ ಎಸೆಂಬ್ಲಿಯ ಸಭಾಸದರಾದ ಶ್ರೀ| ಮೋಹನಲಾಲ ಸಕ್ಸೇನಾರವರು ನೇ| ವಾ| ವ್ಹಾಯಿಸರಾಯರ ಪರವಾನಗಿ ಬೇಡಿದ್ದರು. ಪರವಾನಗಿ ಸಿಗಲಾರದೆಂದು ಸರ್ವಾಧಿಪತಿಗಳು ಅಪ್ಪಣೆ ಮಾಡಿದ್ದಾರೆ. ಆದರೆ ಬಿನ್‌ಸರಕಾರಿ ಗೃಹಸ್ಥರ ಜೈಲ ತಪಾಸ ಕಮಿಟಿಯನ್ನು ನೇಮಿಸುವ ಬಗ್ಗೆ ಆಲೋಚನೆ ಮಾಡುತ್ತೇವೆಂದು ತಿಳಿಸಿದ್ದಾರಂತೆ !

— ರಾಷ್ಟ್ರೀಯ ಸಭೆಯವರು ಸ್ಥಾನಿಕ ಸಂಸ್ಥೆಗಳಲ್ಲಿ ಸೇರಲಡ್ಡಿಯಿಲ್ಲವೆಂದು ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರವರು ಅಭಿಪ್ರಾಯ ವ್ಯಕ್ತಮಾಡಿದ್ದಾರೆ. ಆಯಾ ಜಿಲ್ಹೆಯ ಕಾಂಗ್ರೆಸ ಕಮಿಟಿಗಳು ತಮ್ಮ ತಮ್ಮ ಜಿಲ್ಹೆಯ ಬಗ್ಗೆ ನಿರ್ಣಯ ಮಾಡತಕ್ಕದ್ದೆಂತೆ.

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಒಮ್ಮೊಮ್ಮೆ ಅತಿಶಯ [illegible] ಒಮ್ಮೊಮ್ಮೆ [illegible] ಮಳೆ [illegible] ಭಾಸವಾಗುತ್ತದೆ. ಆದರೆ ಮಳೆ [illegible] ಒಮ್ಮೊಮ್ಮೆ [illegible] ಬೀಸುತ್ತದೆ. [illegible] ಸ್ಥಿರವಾಗಿರುವದರಿಂದ [illegible] ಎಲ್ಲರೂ ಮಳೆಯ [illegible] ಬುಧವಾರ ಮಧ್ಯರಾತ್ರಿಯಲ್ಲಿ ಸ್ವಲ್ಪ ಮಳೆ [illegible]

ಕಳೆದ [illegible] ಕನ್ನಡ [illegible] ಕಾನಡಾ ಜಿಲ್ಲಾ [illegible] ಸಮ್ಮೇಲನವು [illegible] ಕಾರವಾರ ಜಿಲ್ಲಾ [illegible] ಅಧ್ಯಕ್ಷರಾದ ರಾ। [illegible] ಅಧ್ಯಕ್ಷತ್ವದಲ್ಲಿ [illegible] ಸಭೆಗಳ ಅಧ್ಯಕ್ಷಸ್ಥಾನಗಳನ್ನು [illegible] ಯಿಂದ [illegible] ಈ ಎರಡು ವಿಷಯಗಳ [illegible] ಸಮ್ಮೇಲನದಲ್ಲಿ [illegible] ಅಧ್ಯಕ್ಷರು [illegible] ಸಮ್ಮೇಲನದ [illegible]

ನ್ಯಾಯಪ್ರಿಯ ದೊಡ್ಡ [illegible]

[illegible] ಸೋಮವಾರ [illegible] ಇಲ್ಲಿಯ [illegible] ಕಚೇರಿ [illegible] ಮೆಜಿಸ್ಟ್ರೇಟರ ಮುಂದೆ [illegible] ದನಗಳನ್ನು ಬಿಟ್ಟರೆಂಬ [illegible] ಮೊಕದ್ದಮೆಗಳು ನಡೆದಿದ್ದವು. [illegible] ಕೊಟ್ಟು [illegible] ಮಾಡಿಕೊಳ್ಳಲಿಲ್ಲ, [illegible] ಮೆಜಿಸ್ಟ್ರೇಟರು [illegible] ದಂಡ ಮಾಡಿದರು. [illegible] ದಂಡ [illegible] ದಂಡ ಕೊಟ್ಟ [illegible] ಮೆಜಿಸ್ಟ್ರೇಟರು "ನಿಮಗೆ ಎರಡಾವರ್ತಿ ದಂಡ ಮಾಡಿದ್ದೇವೆ. ನೀವು ಪುನಃ ದನಗಳನ್ನು [illegible] ಬಿಟ್ಟು [illegible] ಮಾಡಿದರೆ ನಿಮಗೆ [illegible] ದಂಡ ಮಾಡಲಾಗುವದು!" ಎಂದು ಎಚ್ಚರಿಕೆ ಕೊಟ್ಟರು। ಇದನ್ನು ಕೇಳಿ [illegible] ದನಗಳನ್ನು ಬಿಡಿಸಿಕೊಳ್ಳಲಿಕ್ಕೆ ಹೋಗದಿರುವದೇ ಲೇಸು. ಏಕೆಂದರೆ ದನದ [illegible] ದಂಡದ ರಕಮೇ [illegible] ದನ [illegible] ದಂಡದ [illegible] "ಸರಕಾರಿ [illegible] ದನಗಳಲ್ಲ, ಅದ್ದರಿಂದ ಅವಕ್ಕೆ ಅನುಭವವಿಲ್ಲ. ದನಗಳ್ [illegible] ರಸ್ತೆಯ ಮೇಲೆ ಬರುತ್ತಿದ್ದವೋ ಇಲ್ಲವೆಂದು ಕೇಳುತ್ತಿತ್ತು; ದನಗಳಿಗೆಲ್ಲ [illegible] ತಿಳಿದುಬರುತ್ತಿತ್ತು!" ಎಂದು [illegible] ಮೆಜಿಸ್ಟ್ರೇಟರು [illegible] ಜನರಿಗೆ [illegible] ನೋಡಿಕೊಳ್ಳಬೇಕು ಇತ್ಯಾದಿ.

ಕಳೆದ ಬುಧವಾರ ಸಂಜೆ ಇಲ್ಲಿಯ ಪೋಲೀಸರು [illegible] ಕೇರಿಯಲ್ಲಿ [illegible] ಎಂಬುವರ ಮನೆಯೊಳಗೆ ಒಂದು ಜುಗಾರ ಮಂಡವನ್ನು ಹಿಡಿದರು. [illegible] ಜನರು ಸಿಕ್ಕಿದರಂತೆ, ಮುಂದಿನ ಮೇಲೆ [illegible] ಸಿಕ್ಕಿರುತ್ತವಾಗಿಯೂ ತಿಳಿಯುತ್ತದೆ.

ಮೊನ್ನೆ ಶುಕ್ರವಾರ ದಿನ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಗೌಡ ಸಾರಸ್ವತ ಸಮಾಜದ [illegible] ದ ಸಭೆಯಲ್ಲಿ, ಸಮಾಜದ ಗುರುಗಳಾದ ಶ್ರೀಮತ್ [illegible] ಚಾತುರ್ಮಾಸಕ್ಕೆ ಇಲ್ಲಿಗೆ [illegible] ನಿಶ್ಚಯಿಸಿದ [illegible] ಗುರುಗಳನ್ನು ಸಮಕ್ಷ [illegible] [illegible] ಜನ ಪ್ರತಿನಿಧಿಗಳನ್ನು ಕಳಿಸಿಕೊಡಬೇಕೆಂದು ನಿರ್ಧಾರವಾಗಿದೆ.

ಇಲ್ಲಿಯ ಗಿಬ್ಬ ಹೈಸ್ಕೂಲಿನಿಂದ ಮೆಟ್ರಿಕ್ ಪರೀಕ್ಷೆಗೆ ಹೋದ [illegible] ವಿದ್ಯಾರ್ಥಿಗಳಲ್ಲಿ [illegible] ಜನರು ತೇರ್ಗಡೆಯಾಗಿರುತ್ತಾರೆಂದು ತಿಳಿಯುತ್ತದೆ.

ಮುಂಬಯಿಯಲ್ಲಿರುವ "ಗೌಡ ಸಾರಸ್ವತ ಬ್ರಾಹ್ಮಣ ಸ್ಕಾಲರಶಿಪ್ ಲೀಗ್" ಸಂಸ್ಥೆಯಿಂದ [illegible] ಶಾರವಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಸಾರಸ್ವತ ವಿದ್ಯಾರ್ಥಿಗಳಿಗೆ [illegible] ಸಾರಸ್ವತ ಬ್ರಾಹ್ಮಣ [illegible] ಸಂಸ್ಥೆಯ ಕಾರ್ಯದರ್ಶಿಗಳ [illegible] ಕಾರ್ಯದರ್ಶಿಗಳ [illegible] ಸ್ಥಾನಿಕ ಪ್ರತಿನಿಧಿಗಳ [illegible] ಹೈಸ್ಕೂಲಿನಲ್ಲಿ [illegible] ಕಾರ್ಯದರ್ಶಿಗಳು [illegible]

ಅಂಕೋಲಾ— [illegible] ಈ ಜಿಲ್ಲೆಯಲ್ಲಿ ಪ್ರವಾಸ [illegible] ವಿದ್ಯಾರ್ಥಿಗಳು [illegible] ಆಸಿಯ [illegible] ತಿಂಗಳಲ್ಲಿ [illegible] ಈ [illegible] ತ್ತಾರೆ.

[illegible] ಸಾಹೇಬರು ಇಲ್ಲಿಯ [illegible] ಅಧಿಕಾರಿಗಳು [illegible] ಕಷ್ಟ [illegible] ಸಾಹೇಬರು ಸ್ವತಃ ಹೋಗಿ [illegible] ಬಿಟ್ಟುಕೊಟ್ಟರು [illegible] ಸಾಹೇಬರು [illegible] ಹೋಗಿದ್ದು ಅಲ್ಲಿ [illegible] ವಿಚಾರ [illegible] ಭಕ್ತರು [illegible] ಬೇಕಾಗಿದೆ.

ಶಿರಶಿ— ಇಲ್ಲಿ ಸೋಡಕಟ್ಟು ಉಪ್ಪಿನ ಸತ್ಯಾಗ್ರಹ [illegible] ಉಂಟು. ಅದರ ಬಾಲಕರ ಬಗ್ಗೆ ವ್ಯಾಪಾರಿಗಳು [illegible] ವರ್ತಕರು [illegible] ಉಪ್ಪು [illegible] ಇಲ್ಲವೆ [illegible] ಸತ್ಯಾಗ್ರಹ [illegible] ಜನರ ಕಡೆಯಿಂದ ಉಪ್ಪು ಕೊಂಡು ಕೊಂಡರೆ ಸತ್ಯಾಗ್ರಹಿಗಳು [illegible] ವರ್ತಕರ [illegible] ಉಪ್ಪು [illegible] ಉಪ್ಪು [illegible] ವ್ಯಾಪಾರಿಗಳು [illegible] ಉಪ್ಪು ಮಾಡುವದಿಲ್ಲ! [illegible] ಉಪ್ಪು ಕೊಂಡು ಕೊಳ್ಳುವವರನ್ನು [illegible] ಉಪ್ಪು [illegible] ಮಾಡುವವರು [illegible] ಒಳ್ಳೆ [illegible] ಸತ್ಯಾಗ್ರಹ [illegible] ಎಂದು ತಿಳಿದರೆ ತಪ್ಪಾದೀತೇ?

ಇಲ್ಲಿಯ [illegible] ಗಿರುವ [illegible] ಕಾರವಾರದ [illegible] ಇಲ್ಲಿ [illegible] ಯೋಜನೆಯೊಂದು [illegible] ಆ ಕಾರಿಕು ಸರಕಾರ [illegible] ನಡೆದಿದೆ ಯಂತ್ರ [illegible] ಸಂಪೂರ್ಣ [illegible] ಕೊಟ್ಟಿರುತ್ತಾರೆ. ಜನರು [illegible] ಉತ್ತೇಜನ ಕೊಟ್ಟರೆ ಈ ಯೋಜನೆ ಯಶಸ್ವಿಯಾದೀತೆಂದು [illegible]

ಹೊನ್ನಾವರ— ಮೆಟ್ರಿಕ್ ಪರೀಕ್ಷೆ [illegible] ಇಲ್ಲಿಯ [illegible] ಹೈಸ್ಕೂಲಿನಿಂದ ಹೋದ [illegible] ವಿದ್ಯಾರ್ಥಿಗಳಲ್ಲಿ [illegible] ಜನರು ತೇರ್ಗಡೆ ಹೊಂದಿದ್ದಾರೆ. [illegible] ಅಭ್ಯಾಸ ಮಾಡಿ [illegible] ಪರೀಕ್ಷೆಗೆ [illegible] ಇಂಗ್ಲೀಷ ಸ್ಕೂಲಿನಿಂದ ಕಳಿಸಲ್ಪಟ್ಟ [illegible] ವಿದ್ಯಾರ್ಥಿಗಳಲ್ಲಿ [illegible] ಜನರು [illegible]

[illegible] ರವಿವಾರ ರಾತ್ರಿ [illegible] ಕೇರಿಯಲ್ಲಿರುವ [illegible] ಎಸ್ [illegible] ಅವರ ಮನೆಗೆ ಆಕಸ್ಮಾತ್ ಬೆಂಕಿ ಬಿತ್ತು. ಜನರ [illegible] ನೆರೆಹೊರೆಯ ಬಹಳ ಜನರು ಕೂಡಿದರು. ಬೆಂಕಿಯು ಅಷ್ಟರಲ್ಲಿ ಪ್ರಬಲವಾದ್ದರಿಂದ ಅದನ್ನು ನೊಂದಿಸಲು ಸಾಧ್ಯವಾಗಲಿಲ್ಲ. ಕೂಡಿದ ಜನರು ಪ್ರಯತ್ನ ಮಾಡಿ [illegible] ಹುಲ್ಲು [illegible] ಮನೆಗಳನ್ನು ಕಾಯ್ದುಕೊಂಡರು. ಬೆಂಕಿ [illegible] ಒಂದೇ ಮನೆಯು [illegible] ಇಲ್ಲದಿದ್ದರೆ ಬಹಳ ಅನರ್ಥವಾಗುತ್ತಿತ್ತು. [illegible] ಹಾನಿ [illegible] ಮನೆಯನ್ನು [illegible] ಉಳಿಸಲಿಕ್ಕೆ ಸಾಧ್ಯವಾಗಲಿಲ್ಲ. [illegible] ಸೋಮವಾರ [illegible] ತಾರೀಖಿನ [illegible] ಮದುವೆಯಿತ್ತು. ಆದಕ್ಕೆ ಮನೆಯ ಜನರೆಲ್ಲ [illegible] ಹೋಗಿದ್ದರು. ಒಬ್ಬ ಹೆಂಗಸಿನ ಮೇಲೆ [illegible] ಪೋಲೀಸರು ಅವಳ ಜಬಾನಿ ಕೊಂಡು ಬಿಟ್ಟಿದ್ದಾರೆ. ಅವಳು [illegible]

ಮೊನ್ನೆ ಗುರುವಾರ ಮಧ್ಯಾಹ್ನ [illegible] ಎಂಟು [illegible] ವರ್ಷ ಪ್ರಾಯದ ಹುಡುಗನು ಬಿಸಿಲು [illegible] ರಸ್ತೆಯ ಮೇಲೆ ಬಿದ್ದು ಸತ್ತುಹೋದನು. [illegible] ಊರಲ್ಲಿ [illegible] ಜನರು ಮಳೆಯ ಬಗ್ಗೆ [illegible]

ಕಾರವಾರ— ಇಲ್ಲಿಯ [illegible] ಹೈಸ್ಕೂಲಿನ [illegible] ವಿದ್ಯಾರ್ಥಿಗಳು ಮೆಟ್ರಿಕ್ ಪರೀಕ್ಷೆಗೆ [illegible] ಕೊಂಡಿದ್ದರು, ಅವರಲ್ಲಿ [illegible] ಜನರು ಮಾತ್ರ ಉತ್ತೀರ್ಣರಾಗಿರುವರು, ಹಿಂದು ಸ್ಕೂಲಿನಿಂದ [illegible] ವಿದ್ಯಾರ್ಥಿಗಳು ಹೋಗಿದ್ದರು, [illegible] ಜನರು ತೇರ್ಗಡೆಯಾಗಿರುತ್ತಾರೆ.

ಮೊನ್ನೆ [illegible] ಸಹಕಾರ [illegible] ರಜಿಸ್ಟ್ರಾರಾದ ರಾ। [illegible] ದಕ್ಷಿಣ ಭಾಗದ [illegible] ರಜಿಸ್ಟ್ರಾರ [illegible] ಇಲ್ಲಿಗೆ ಬಂದಿದ್ದರು. ಈ ಜಿಲ್ಲೆಯಲ್ಲಿಯ [illegible] ಮೇಲೆ [illegible] ಆಲೋಚನೆ [illegible] ಒಂದು [illegible] ಸೇರಿಸಿದ್ದರು. [illegible] ಸಾಹೇಬರು [illegible]

ಕೆಲವು ದಿನಗಳ ಹಿಂದ [illegible] ಕೇರಿಯಲ್ಲಿ [illegible] ರಾ। [illegible] ಮೇಲೆ [illegible] ಇದ್ದ [illegible] ಬೇರೆ [illegible] ಯೋಗ್ಯ [illegible] ಅಪೇಕ್ಷಿಸುತ್ತಾರೆ.

ತಿಡ್ಡುಪಡಿ - [illegible] ಸಂಚಿಕೆಯಲ್ಲಿ [illegible] ಎಂದಿದೆ, [illegible] ಎಂದಿರುತ್ತದೆ.

ಮಳೆಯ ಭವಿಷ್ಯ.

ಚಾಲು ವರ್ಷದೊಳಗೆ ರವಿ-ಬುಧರ ಮೊದಲಿನ ಎರಡು ಯೋಗಗಳು ಜನವರಿ ತಾ ೧ ಮತ್ತು ಫೆಬ್ರುವರಿ ತಾ ೧೮ ನೇಗ ಆದವು ಆ ಯೋಗಗಳು ಚಳಿಗಾಲದ ಮಧ್ಯಕಾಲದಲ್ಲಿ ಉಂಟಾದ್ದರಿಂದಲೂ, ಆ ಕಾಲದ ಬೇರೆ ಯೋಗಗಳು ಅಡ್ಡ ಬಂದದ್ದರಿಂದಲೂ ಚಳಿ ಮಾತ್ರ ವಿಶೇಷವಾಯಿತು ರವಿ-ಬುಧರ ೩ ನೇ ಯೋಗವು ಎಪ್ರಿಲ್ ತಾ ೨೮ ನೇಗೆ ಆಯಿತು ಆಗ ದಕ್ಷಿಣ ಮಹಾರಾಷ್ಟ್ರದೊಳಗೆ ಬಹಳ ಕಡೆಗೆ ಮಳೆಯಾಗಿದೆ ಮಧ್ಯ ಮಹಾರಾಷ್ಟ್ರದಲ್ಲಿ ಮಾತ್ರ ಇನ್ನೂ ಮಳೆಯಾಗಲಿಲ್ಲ, ಸೆಕೆಯಷ್ಟು ಹೆಚ್ಚಾಯಿತು ಇದು ಮಂಗಳ ಮತ್ತು ನೆಪಚ್ಯೂನ ಈ ಗ್ರಹಗಳು ವಕ್ರವಾದದ್ದರ ಫಲವಾಗಿರಬಹುದು. ಮೇ ತಾ ೧೮ ರಿಂದ ಕುಜನು ಮತ್ತು ಮೇ ತಾ. ೨೫ ರಿಂದ ನೆಪಚ್ಯೂನ ಗ್ರಹವು ಮಾರ್ಗಿಯಾಗಿರುವದರಿಂದ ಈ ತೊಂದರೆ ತಪ್ಪಿದೆ. ಮೇ ತಾ. ೨೮ ನೇಗೆ ಶುಕ್ರನು ಕರ್ಕ ರಾಶಿಯಲ್ಲಿ ಪ್ರವೇಶ ಮಾಡಿದಂದಿನಿಂದ ಹವೆಯಲ್ಲಿ ಬದಲಾವಣೆಯಾಗಿದೆ ಈಗ ಮಳೆಯು ಬೇಗನೆ ಬರುವದು

ಈ ಮುಂದೆ ರವಿ-ಬುಧರ ಮೊದಲನೇ ಯೋಗ ಜೂನ ತಾ. ೨೬ಕ್ಕೆ ಆಗುವದು ಆ ಯೋಗಕ್ಕೆ ೮-೧೦ ದಿನಗಳಿರುವಾಗಲೇ ಮಳೆಯಾಗಬೇಕು. ಅಂದರೆ ಜೂನ ತಾ. ೧೫ರ ಸುಮಾರಕ್ಕೆ ಮಳೆಗಾಲಕ್ಕೆ ಆರಂಭವಾಗುವದೆಂದು ಹೇಳಬಹುದು ರವಿ ಬುಧರ ಎರಡನೇ ಯೋಗವು ಅಗಸ್ಟ ತಾ ೧೦ಕ್ಕಾಗುವದು. ಆ ಯೋಗದ ಪರಿಣಾಮದಿಂದ ಅಗಸ್ಟ ತಿಂಗಳ ಪೂರ್ವಾರ್ಧದಲ್ಲಿ ಚಲೋ ಮಳೆಯಾಗುವದು ಸಪ್ಟಂಬರ ತಿಂಗಳ ಮೊದಲನೇ ವಾರದಲ್ಲಿ ರವಿ ಶುಕ್ರರ ಯೋಗವಿದೆ ಆ ಯೋಗದ ಮಳೆಯು ಸಪ್ಟಂಬರ ತಾ. ೧೧ರಿಂದ ತಾ ೧೦ರ ತನಕ ಬೀಳುವದು ಅಕ್ಟೋಬರ ತಾ ೧೮ಕ್ಕೆ ರವಿ-ಬುಧರ ೩ನೇ ಯೋಗವಿದೆ, ಆ ಯೋಗದ ಮಳೆಯು ಅಕ್ಟೋಬರ ತಿಂಗಳ ಉತ್ತರಾರ್ಧದಲ್ಲಿ ಬೀಳುವದು ರವಿ-ಬುಧರ ೪ನೇ ಯೋಗವು ಡಿಶಂಬರ ೧೦ಕ್ಕೆ ಆಗುವದು ಆ ಮುಂಚೆ ನವೆಂಬರ ತಾ. ೨೮ಕ್ಕೆ ರವಿ-ಗುರುಗಳ ಯೋಗ ಕೂಡಿ ಬರುವವು. ಈ ಎರಡೂ ಯೋಗಗಳ ಪರಿಣಾಮದಿಂದ ಡಿಶಂಬರ ತಿಂಗಳ ಎರಡನೆ-ಮೂರನೆ ವಾರಗಳಲ್ಲಿ ತುಸು ತುಸು ಮಳೆಯಾದೀತು

ಒಟ್ಟಾರೆ ಈ ವರ್ಷ ಮಳೆ ಕಡಿಮೆ ಚಾಲು ವರ್ಷದೊಳಗಿನ ಯೋಗಗಳೂ, ಸನ್ ೧೯೦೨, ೧೯೦೫ ಮತ್ತು ೧೯೧೧ ನೇ ಇಸವಿಗಳೊಳಗಿನ ಯೋಗಗಳೂ ಒಂದೇ ರೂಪದವು ಈ ಮೂರು ವರ್ಷಗಳಲ್ಲಿ ಮಳೆಯ ಮಾನವು ಸಾಧಾರಣವೇ ಇತ್ತು ಈ ವರ್ಷದಲ್ಲೂ ಕೂಡ ಸರಾಸರಿ ಮಳೆಯ ಮೂರು-ನಾಲ್ಕಾಂಶದಷ್ಟು ಮಾತ್ರ ಮಳೆಯಾಗುವದೆಂದು ಅಂದಾಜಿದೆ

ಯಾವತ್ತೂ ಗ್ರಹಗಳ ಉದಯಾಸ್ತಗಳನ್ನೂ ಯೋಗ-ಪ್ರತಿಯೋಗಗಳನ್ನೂ ಲೆಕ್ಕಕ್ಕೆ ಹಿಡಿದು ಅನುಮಾನ ಮಾಡಿದರೆ ಮಹಾರಾಷ್ಟ್ರದಲ್ಲಿ ಈ ಕೆಳಗೆ ಕಾಣಿಸಿದ ತಾರೀಖುಗಳ ಸುಮಾರಕ್ಕೆ ಮಳೆಯಾಗುವದೆಂದು ತೋರುತ್ತದೆ.

ಮಳೆಯಾಗುವ ದಿನಗಳು

ಜೂನ— ತಾ ೫, ೭, ೮, ೧೧, ೧೩, ೧೭, ೨೦ ೨೨, ೨೬, ೩೦

ಜುಲೈ— ೧, ೫ ೬, ೧೩, ೧೭, ೧೯, ೨೦, ೨೯, ೩೦, ೩೧

ಅಗಸ್ಟ— ೩, ೧೦, ೧೪, ೧೬, ೨೧, ೨೪, ೨೯, ೩೦, ೩೧,

ಸಪ್ಟಂಬರ— ೨, ೩, ೮, ೧೨, ೧೩, ೧೬, ೨೫

ಅಕ್ಟೋಬರ— ೧, ೯, ೧೦, ೧೩, ೧೮, ೨೧, ೨೨, ೨೩, ೨೭

ನವಂಬರ— ೭, ೧೨, ೧೮, ೨೨, ೨೫, ೨೭

ಡಿಶಂಬರ— ೭, ೧೦, ೧೫, ೨೧, ೨೨.

(ಕೇಸರಿ—ಪುಣೆ)

(ವಿ ಸೂ — ಕರ್ನಾಟಕವೂ ಮಹಾರಾಷ್ಟ್ರವೂ ಕೂಡಿರುವ ಪ್ರಾಂತಗಳು ಮಹಾರಾಷ್ಟ್ರದ ಮಳೆಯ ಭವಿಷ್ಯ ನಮ್ಮ ಪ್ರಾಂತದಲ್ಲೂ ನಿಜವಾಗಬಹುದು. ಆಸ್ಥೆಯುಳ್ಳ ವಾಚಕರು ಈ ಭವಿಷ್ಯದ ಸತ್ಯಾಸತ್ಯತೆಯನ್ನು ನೋಡಿಕೊಳ್ಳಬಹುದು ಸಂ|| ಕಾ ವೃ.)

ಜಾಹೀರಾತು.

||ಓಂ|| || ಶ್ರೀ ಸದ್ಗುರು ಸಿದ್ಧಾರೂಢ ಪ್ರಸನ್ನ ||

ಬಹುಮಾನಗಳನ್ನೂ, ಪ್ರಶಸ್ತಿಪತ್ರಿಕೆಗಳನ್ನೂ ಪಡೆದ

ಜ್ಯೋತಿಷಿ ಜಗನ್ನಾಥ ಗಣೇಶ ದೇಸಾಯಿ ಫಾತರಪೇಕರ, ಪಣಜಿ (ಗೋವಾ) ಆಫೀಸು- ರಾ| ಪಾಂಡುರಂಗ ಹರಿ ಪೈರ ದುಕಾನ, ಕುಮಟಾ. (ಉ ಕನ್ನಡ)

ನಾವು ಜಾತಕ ನೋಡಿ ಜ್ಯೋತಿಷ ಹಾಗು ಹಸ್ತ-ಪರೀಕ್ಷೆ ಮಾಡಿ ಭೂತ-ವರ್ತಮಾನ-ಭವಿಷ್ಯಗಳನ್ನು ವಿವರವಾಗಿ ತಿಳಿಸುತ್ತೇವೆ ಅನೇಕ ಜನರು ಅನುಭವ ಕೊಂಡು ಪ್ರಶಸ್ತಿಪತ್ರ ಕೊಟ್ಟಿದ್ದಾರೆ ಕುಮಟೆಯಲ್ಲಿ ಮುಕ್ಕಾಮು ಬರೇ ೧ ತಿಂಗಳು! ಬೇಕಾದವರು ಅನುಭವ ಕೊಳ್ಳಬಹುದು

ನಮ್ಮ ಜಯಭೇರಿ!

ಮಕ್ಕಳಿಗೆ ಆಗುವ ಭಯಂಕರವಾದ ಲಿವರ್ ಕಂಪ್ಲೇಂಟು (ಕಾಮಣಿವ್ಯಾಧಿ) ಮತ್ತು ಜ್ವರಗಡ್ಡೆಗೆ **ಜಮ್ಮಿ ವೆಂಕಟರಮಣಯ್ಯನವರು**

'ಲಿವರ್ ಕ್ಯುಅರ್' (ರಿಜಿಸ್ಟರ್ಡ್)

ಎಂಬ ದಿವ್ಯೌಷಧವನ್ನು ತಯಾರಿಸುವದರಲ್ಲಿ ಸಂಪೂರ್ಣ ಜಯ ಹೊಂದಿರುತ್ತಾರೆ. ಶುದ್ಧವಾದ ದೇಶಿ ಸಾಮಾನುಗಳಿಂದ ಇದನ್ನು ತಯಾರಿಸಿರುವದರಿಂದ ಅವು ಪೂರ್ಣ ತೃಪ್ತಿ ಕೊಡುವವೆಂದು ನಮ್ಮ ಭರವಸ ಈ ಔಷಧವು ಕಾಮಾಲೆಯನ್ನು ಗುಣ ಮಾಡುವುದಲ್ಲದೆ ಕಾಮಾಲೆಯು ಬಾರದಂತೆ ಮಾಡುವುದೆಂಬ ಮತ್ತಿಷ್ಟು ಜನರ ತೃಪ್ತಿಗೆ ಕಾರಣವಾಗಿದೆ ಹೆಚ್ಚಿನ ಮಾಹಿತಿಗೆ ಈ ದಿನವೇ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉಕ)

Established 1900 | ॐ | FIXED RATE

ದಾಸಪ್ಪಾ ಕೃಷ್ಣಪ್ಪಾ ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಸಿ.

ನಮ್ಮಲ್ಲಿ ಪೇಟೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪತ್ತಾರೇಶ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರೀ ರುಮಾಲು, ಉಪ್ಪರಣೆ, ಟೋಪಿಗಳೂ, ಫೇಂಟ ಜೋಡುಗಳೂ, ರೇಶ್ಮೆ ಖದ್ದರ ಮಡಿಗಳೂ, ನಾರ ಮಡಿಗಳೂ, ಮಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಸೋಯಿ ದರದಿಂದ ಸಿಗುವವು ರೊಖ ವ್ಯಾಪಾರಕ್ಕೆ ಕಮಿಶನ್ ದೊರೆಯುವದು

Tel - "Honesty"] **D. K. DHAKAPPA BROS.,**

Cloth Merchants,

SIRSI. N KANARA

ಹೊಸ ಮಾಲು. | ದರ ಅಗ್ಗ.

ಅಲ್ಲಲ್ಲಿ ಇಷ್ಟಿಷ್ಟು!.

[೩ನೇ ಪಾನಿನಿಂದ ಮುಂದರಿಸಿದ್ದು]

ಹಾಗಿ ವಿದ್ಯಾಖಾತೆಯ ಅಧಿಕಾರಿಗಳ ಹುಕುಮವಾಗಿದೆ. ಅಹಮದಾಬಾದ ಮ್ಯುನಿಸಿಪಾಲಿಟಿಯ ಶಾಲಾ ಬೋರ್ಡಿನವರು ಸಭೆಸೇರಿ ಈ ಹುಕುಮು ಮನ್ನಿಸ ಬಾರದಾಗಿ ನಿಶ್ಚಯಿಸಿದ್ದಾರೆ!

* * *

ಗಡಿನಾಡಿನೊಳಗೆ ಹದತ್ ಎಂಬ ಹಳ್ಳಿಯಲ್ಲಿ ಗುಬ್ಬಲ್ ರಸೋಲಖಾನ ಎಂಬ ೧೩೫ ವರ್ಷ ಪ್ರಾಯದ ಒಬ್ಬ ಮನುಷ್ಯನಿದ್ದಾನೆ. ಅವನು ಮೂರಾವರ್ತಿ ಲಗ್ನವಾದನು. ೩೦ ಮಕ್ಕಳ ತಂದೆಯಾಗಿದ್ದಾನೆ. ಇನ್ನೂ ಅವನ ಆರೋಗ್ಯವು ನೆಟ್ಟಗಿದೆ. ಅವನು ಹರೆಯದವರ ಸಂಗಡ ನಡೆಯಬಲ್ಲನು ದೃಷ್ಟಿಯು ಸಹಾ ಒಳ್ಳೇದಾಗಿದೆ.

* * *

ಜಯಪೂರ ಸಂಸ್ಥಾನಿಕರು ೯೦ ಲಕ್ಷ ಹಣವನ್ನು ಖರ್ಚು ಮಾಡಿ ಹೊಸದೊಂದು ಅರಮನೆಯನ್ನು ಕಟ್ಟಿದ್ದಾರೆ. ಇಡೀ ಇಮಾರತು ಸಂಗಮರವರಿ ಕಲ್ಲುಗಳಿಂದಲೇ ಕಟ್ಟಲ್ಪಟ್ಟಿದೆ. ಅದಕ್ಕೆ ೧೦೦೦ ಬಾಗಿಲುಗಳಿವೆ, ೬೫೦೦ ಕಿಡಕಿಗಳಿವೆ, ಅಡಿಗೆ ಮನೆಯಲ್ಲಿ ವಿದ್ಯುದ್ಯಂತ್ರಗಳ ವ್ಯವಸ್ಥೆ ಮಾಡಲಾಗಿದೆ. 'ವಾಯು ಪ್ರಸಾದ' ಎಂದು ಅರಮನೆಯ ಹೆಸರು. ಸಂಸ್ಥಾನಿಕರು ಜುಬಿಲಿ ಸಮಾರಂಭಕ್ಕಾಗಿ ಲಂಡನಿಗೆ ಹೋದವರು ಇನ್ನೂ ಅಲ್ಲೇ ಇದ್ದಾರೆ. ಹೊಸ ಅರಮನೆಯ ಉಪಯೋಗಕ್ಕೆ ಬಹಳ ಬೆಲೆ ಕೊಟ್ಟು ತರತರದ ಸಾಮಾನುಗಳನ್ನು ಕೊಂಡುಕೊಳ್ಳುತ್ತಿದ್ದಾರಂತೆ! ಹಿಂದುಸ್ಥಾನವು ಬಡವಾದರೂ ಇಲ್ಲಿನ ಸಂಸ್ಥಾನಿಕರ ಶ್ರೀಮಂತಿಕೆಗೇನೂ ಕಡಿಮೆ ಇಲ್ಲ!"

* * *

ಹೊಸದಾಗಿ ಸ್ಥಾಪಿಸಲ್ಪಟ್ಟ ರಿಝರ್ವ ಬ್ಯಾಂಕಿನ ಡೈರೆಕ್ಟರರ ಸಭೆ ನಾಳೆ ಮುಂಬಯಿಯಲ್ಲಿ ಕೂಡಲಿಕ್ಕಿದೆ. ಹಿಂದುಸ್ಥಾನದ ಅರ್ಥಸಚಿವರಾದ ಸರ್ ಜೇಮ್ಸ ಗ್ರಿಗ್‌ರವರೂ ಈ ಸಭೆಗೆ ಮುದ್ದಾಂ ಬರುವವರಿದ್ದಾರೆ. ಬೆಳ್ಳಿಯ ದರ ಏರುತ್ತಿದ್ದದರಿಂದ ಆ ಬಗ್ಗೆ ಏನು ಉಪಾಯಯೋಜನೆ ಮಾಡಬೇಕೆಂಬದರ ವಿಚಾರ ನಡೆಯುವದಂತೆ. ಡೈರೆಕ್ಟರರು ಸರಕಾರಕ್ಕೆ ಬೆಳ್ಳಿಯ ರಫ್ತಿಗೆ ನಿರ್ಬಂಧ ಹಾಕುವ ಸೂಚನೆಯನ್ನು ಮಾಡಬಹುದಾಗಿ ಲೋಕವಾರ್ತೆಯಿದೆ.

* * *

ಹೊಸ ಸುಧಾರಣೆಗಳ ಕಾಯಿದೆ ಕೆಲಸವು ಪೂರ್ಣವಾಗುತ್ತಬಂದಂತೆ ಇತ್ತ ಹಿಂದುಸ್ಥಾನದಲ್ಲಿ ಅದರ ಅಮಲಬಜಾವಣಿಯ ಪೂರ್ವ ತಯಾರಿ ಭರದಿಂದ ಸಾಗಿದೆ. ಹೊಸ ರಾಜ್ಯಘಟನೆಯಲ್ಲಿ ಮಧ್ಯವರ್ತಿ ಹಾಗು ಪ್ರಾಂತಿಕ ಸರಕಾರಗಳ ಆರ್ಥಿಕಸಂಬಂಧ, ಪ್ರಾಪ್ತಿಯ ಮೇಲಿನ ಕರವನ್ನು ಇಕ್ಕಟ್ಟಿನವರಲ್ಲಿ ಹಂಚುವ ಪ್ರಮಾಣ, ನೂತನವಾಗಿ ನಿರ್ಮಾಣವಾಗುವ ಪ್ರಾಂತಗಳಿಗೆ ಮಧ್ಯವರ್ತಿ ಸರಕಾರದಿಂದ ಕೊಡಬೇಕಾದ ಗ್ರಾಂಟಿನ ಪ್ರಮಾಣ ಮುಂತಾದವುಗಳನ್ನು ನಿಶ್ಚಯಪಡಿಸಲಿಕ್ಕೆ ಒಂದು ಮಂಡಳ ನೇಮಿಸುವ ವಿಚಾರ ನಡೆದಿರುತ್ತದಾಗಿ ಸಿಮ್ಲಾದಿಂದ ಸುದ್ದಿ ದೊರೆತಿದೆ. ಬೇರೆ ಬೇರೆ ಪ್ರಾಂತಿಕ ಸರಕಾರಗಳು ಕಚ್ಚಾ ಮತದಾರರ ಯಾದಿಯನ್ನು ತಯಾರಿಸಲಿಕ್ಕೆ ಜಿಲ್ಹಾಧಿಕಾರಿಗಳಿಗೆ ಹುಕುಮು ಮಾಡಿರುತ್ತಾರೆ. ನಮ್ಮ ಮುಂಬಯಿ ಸರಕಾರದವರು ಯಾವತ್ತೂ ಕಲೆಕ್ಟರರಿಗೆ ಕಚ್ಚಾ ಮತದಾರ ಯಾದಿಗಳನ್ನು ಸಿದ್ಧ ಮಾಡಿಟ್ಟುಕೊಳ್ಳಲು ಗುಪ್ತ ಆಜ್ಞೆ ಮಾಡಿದ್ದಾರಾಗಿ ತಿಳಿಯುತ್ತದೆ! ಇತರ ಪ್ರಾಂತದವರು ಬಹಿರಂಗ ಹುಕುಮು ಕೊಟ್ಟಿರುವಾಗ ಮುಂಬಯಿ ಸರಕಾರದವರು ಗೌಪ್ಯದಿಂದ ಕೆಲಸ ಮಾಡುವದರಲ್ಲಿ ಸ್ವಾರಸ್ಯವೇನೆಂದು ತಿಳಿಯದು. ಶ್ವೇತಪತ್ರಿಕೆಯ ಸೂಚನೆಗಳಂತೆ ಮತದಾರರ ಯಾದಿ ತಯಾರಿಸಲ್ಪಡುವದು. ಕನಿಷ್ಠ ಪಕ್ಷಕ್ಕೆ ಮುಂಬಯಿ ಇಲಾಖೆಯಲ್ಲಿ ೩೫-೪೦ ಲಕ್ಷ ಮತಾಧಿಕಾರಿಗಳು ಉಂಟಾಗುವರೆಂದು ಅಂದಾಜು ಕಟ್ಟಲಾಗಿದೆ. ಶ್ವೇತಪತ್ರಿಕೆಯ ಸೂಚನೆಗಳಂತೆ (೧) ರೂ ೮ ಇಲ್ಲವೆ ಹೆಚ್ಚು ಸಾರ್ವೆ ತೆರುವವರು. (೨) ಮುಂಬಯಿಯಲ್ಲಿ ರೂ. ೬೦, ಕರಾಚಿಯಲ್ಲಿ ರೂ ೩೬, ಇತರ ಪಟ್ಟಣಗಳಲ್ಲಿ ರೂ ೧೮ ವಾರ್ಷಿಕ ಮನೆ ಭಾಡಿಗೆ ಕೊಡುವವರು, (೩) ಪ್ರಾಪ್ತಿಯ ಮೇಲಿನ ಕರ ಕೊಡುವವರು, (೪) ಸಿಂಧ ಪ್ರಾಂತದೊಳಗಿನ ಜಾಗೀರದಾರರು, (೫) ಮೆಟ್ರಿಕ್ ಇಲ್ಲವೆ ಎಸ್. ಎಲ್. ಸಿ. ಪರೀಕ್ಷೆ ಅಥವಾ ತತ್ಸಮ ಪರೀಕ್ಷೆಯಲ್ಲಿ ಪಾಸಾದವರು, (೬) ಅಸ್ತಿಧಾರಣದ ಮಾಲಿಕ ಮತಾಧಿಕಾರವುಳ್ಳವರ ಹೆಂಡಂದಿರು ಮತ್ತು ವಿಧವೆಗಳು ಮತ್ತು (೭) ಸರಕಾರಿ ನೌಕರಿಯಿಂದ ನಿವೃತ್ತರಾದವರು, ಕೆಲಸ ಬಿಟ್ಟವರು ನಾನ್-ಕಮಿಶಂಡ ಆಫೀಸರರು, ಇಲ್ಲವೆ ಲಷ್ಕರಿ ಶಿಪಾಯಿಗಳು, ಇವರೆಲ್ಲರಿಗೂ ಮತಾಧಿಕಾರ ಸಿಗುತ್ತದೆ. ಕೆಲವು ವಿಶಿಷ್ಟ ಜಾತಿಗಳೊಳಗಿನ ಜನರಿಗೆ ಸಾಕ್ಷರತೆ ಮತ್ತು ಗ್ರಾಮಸೇವಾವೃತ್ತಿ ನೋಡಿ ಮತಾಧಿಕಾರ ಕೊಡಲಾಗುವದು. ಇಷ್ಟರಿಂದಲೂ ಆ ಜಾತಿಗಳ ಮತದಾರರ ಸಂಖ್ಯೆಯು ೧೦೦ಕ್ಕೆ ೧೦ರಷ್ಟು ತುಂಬಿಬರದಿದ್ದರೆ, ಅಷ್ಟು ತುಂಬಿಬರುವಂತೆ ಮತಾಧಿಕಾರ-ಪಾತ್ರತೆಯ ಪ್ರಮಾಣವು ಇಳಿಸಲಾಗುವದು.

* * *

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ದಕ್ಷಿಣ ಮಹಾರಾಷ್ಟ್ರದೊಳಗಿನ ಸಂಚಾರ ಮುಗಿಸಿ ತಮ್ಮ ಅಣ್ಣನವರ ಶ್ರಾದ್ಧದ ನಿಮಿತ್ತ ಸ್ವದೇಶಕ್ಕೆ ಹೋಗಿದ್ದರು. ಮೊನ್ನೆ ತಾ. ೩೦ನೇಗ ಸಂಚಾರವನ್ನು ಮುಂದರಿಸಲು ಪುನಃ ಹೊರಟಿದ್ದಾರೆ. ಮುಂಬಯಿಗೆ ಬರುವಾಗ ಅವರು ದಾರಿಯಲ್ಲಿ ಪ್ರಯಾಗದೊಳಗೆ ಇಳಿದು, ಅಲ್ಲಿ 'ಸ್ವರಾಜ್ಯಭವನ'ದೊಳಗೆ ಇರುವ ಮುಖ್ಯ ಕೊಂಗ್ರೆಸ ಕಚೇರಿಯ ಕೆಲಸವನ್ನು ತಪಾಸ ಮಾಡಿದರು. ರಾಷ್ಟ್ರಪತಿಗಳು ತಮ್ಮ ತಪಾಸ ಮುಗಿಸಿ ಮುಂಬಯಿಗೆ ತೆರಳುತ್ತಲೇ ಪೋಲೀಸರು ಸ್ವರಾಜ್ಯಭವನವನ್ನು ಝಡತಿ ಮಾಡಿ “೬ ದಿನದ ವಿಸ್ತಂಭ” ಎಂಬ ಆಕ್ಷಿಪ್ತ ಪುಸ್ತಕವನ್ನು ಹುಡುಕಾಡಿದರಂತೆ.

* * *

ಸತ್ಯಾಗ್ರಹ ಕಾಲದಲ್ಲಿ ಹೊರಡಿಸಿದ ರಾಜಶಾಸನಗಳನ್ನೆಲ್ಲ ಒಟ್ಟುಗೂಡಿಸಿ ಎರಡು ವರ್ಷಗಳ ಹಿಂದೆ ಒಂದು ಕಾಯಿದೆ ಮಾಡಿದ ಸಂಗತಿಯನ್ನು ವಾಚಕ

THE INDIAN MERCANTILE INSURANCE CO. LTD.,

BOMBAY.

(Established in 1907)

A Solid and purely Indian Life Office which has substantial growth under the Chairmanship of the late Sir Munmohandas Ramji, Kt.

WANTED Energetic & Influential Agents and experienced Organisers, both on commission & pay for the Karnatak Districts.

For particulars apply to—

G. Yellapurkar & Sons,
Chief Agents for Karnatak,
Market Square, KARWAR.

ಇಂಡಿಯನ್ ಮರ್ಕಂಟೈಲ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್, ಮುಂಬಯಿ.

(೧೯೦೭ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು.

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿ ಹೊಂದಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಹೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನೈಝರರು ಬೇಕು ಕಮಿಶನ್ ಹಾಗು ಪಗಾರ ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆಪೇಟೆ, ಕಾರವಾರ.

ದು ಬಲ್ಲರು. ಆ ಕಾಯಿದೆಯ ಅವಧಿಯು ಇದೇ ಬರುವ ಡಿಸೆಂಬರ ತಿಂಗಳಲ್ಲಿ ತೀರುತ್ತದೆ. ಆದ್ದರಿಂದ ಅದರ ಅವಧಿಯನ್ನು ಬೆಳಸಬೇಕೋ ಹೇಗೆ ಎಂದು ಹಿಂದುಸ್ಥಾನ ಸರಕಾರದವರು ಪ್ರಾಂತಿಕ ಸರಕಾರಗಳ ಅಭಿಪ್ರಾಯ ಕೇಳಿದ್ದರಾಗಿ ತಿಳಿಯುತ್ತದೆ. ಓಹೊ, ಪ್ರಾಂತಿಕ ಸರಕಾರಗಳು ಅವಧಿ ಬೆಳಸುವದು ಅವಶ್ಯವೆಂದು ತಿಳಿಸಿರುತ್ತವಂತೆ. ಅದರಂತೆ ಹಿಂದುಸ್ಥಾನ ಸರಕಾರದವರು ಬರುವ ಎಸೆಂಬ್ಲಿಯ ಅಧಿವೇಶನದ ಪ್ರಾರಂಭದಲ್ಲಿ ಹೊಸ ಬಿಲು ತರುವ ಆಲೋಚನೆಯಲ್ಲಿ ಇದ್ದಾರೆಂದು ಸಿಮ್ಲಾದೊಳಗೆ ವಾರ್ತೆ ಹಬ್ಬಿದೆ. ಎಸೆಂಬ್ಲಿಯಲ್ಲಿ ತಮ್ಮ ಬಿಲು ಪಾಸಾಗಲಿಕ್ಕಿಲ್ಲೆಂದು ಸರಕಾರಕ್ಕೆ ಖಾತ್ರಿ ಇದೆ! ಆದರೂ ಕಾಯಿದೆ ಮಾಡುವ ವಿಧಿಯನ್ನೆಲ್ಲ ಜರುಗಿಸಿ ಸರ್ವಾಧಿಪತಿಗಳ ಸರ್ಟಿಫಿಕೇಶನ್ ಅಧಿಕಾರದಿಂದ ಅದನ್ನು ಪಾಸು ಮಾಡಿಕೊಳ್ಳುವರಾಗಿಯೂ ತಿಳಿಯುತ್ತದೆ. ಈ ಕಾಯಿದೆಯಿಂದ ಪತ್ರಿಕಾಕರ್ತರ ಮೇಲೆ ತೂಗಾಡಿಸುವ ತೀಕ್ಷ್ಣ ಕತ್ತಿಯು ಇನ್ನೂ ಹೆಚ್ಚು ಕಾಲ ತೂಗಾಡಿಸುತ್ತಿರುವದಲ್ಲದೆ, ಸಂಶಯಿತ ಹಾಗು 'ಅನಿಷ್ಟ' ಜನರ ಚಲನ-ವಲನಗಳ ಮೇಲೆ ನಿರ್ಬಂಧ ಹಾಕಲಿಕ್ಕೂ, ಅಂಥವರನ್ನು ಸ್ಥಾನಬದ್ಧ ಮಾಡಲಿಕ್ಕೂ ಹೊರಗೆ ಹಾಕಲಿಕ್ಕೂ ಸ್ಥಾನಿಕ ಸರಕಾರಗಳಿಗೆ ಇರುವ ಸಂಪೂರ್ಣ ಅಧಿಕಾರಗಳು ಮುಂದೂ ಊರ್ಜಿತವಿರುವವು. ರಾಜಶಾಸನಗಳಿಗೆ ಕಾರಣೀಭೂತವಾದ ಆಪತ್ಕಾಲವು ಕಳೆದುಹೋದರೂ ಸರಕಾರಕ್ಕೆ ತಗಲಿದ ವಿಶೇಷಾಧಿಕಾರಗಳ ಹುಚ್ಚು ಹೋಗಲೊಲ್ಲದು!!

∴

ಕಾಲೇಪಾಡದೊಳಗೆ ಒಂದು ಮದುವೆಯ ಚಪ್ಪರದಲ್ಲಿ ಗಡಬಡಿಯಾಯಿತು. ಈಶ್ವರಲಾಲ ಪರೀಖನೆಂಬವನು ಮದುಮಗನು, ಇಂಗ್ಲಿಷಿಯ ಶಿಕ್ಷಣ ಪಡೆದವನು. ಮದುವೆಯ ಕಾಲಕ್ಕೆ ವರಪಕ್ಷದ ಕಡೆಯಿಂದ ಶುಲ್ಕದ ಹಣ ಕೊಡಲಿಕ್ಕಿಲ್ಲವಾಗಿ ಹುಡುಗಿಯ ತಂದೆಯ ಕಡೆಯಿಂದ ಅಭಿವಚನ ಪಡೆಕೊಂಡೇ ಈಶ್ವರಲಾಲನು ಮದುವೆಯಾಗಲು ಒಪ್ಪಿಕೊಂಡಿದ್ದನು. ಮದುವೆಯ ಸಮಾರಂಭ ನಡೆದಾಗ ಮದುಮಗಳ ತಂದೆಯು ಹಣದ ಬಗ್ಗೆ ಹಟ ಹಿಡಿದಿದ್ದಾನೆಂದು ವರ್ತಮಾನ ತಿಳಿದ ಕೂಡಲೆ ಈಶ್ವರಲಾಲನು ಬಾಶಿಂಗವನ್ನು ಹರಿದೊಗೆದು ಮದುವೆಯ ಮಂಟಪದೊಳಗಿಂದ ಓಡಿಹೋಗಿ ಬಿಟ್ಟನು!

Siromani Udipi Narayanacharya,
CHAUKHAMBA, BENARES CITY.

S. U. N. & CO.
BENARES CITY

ಮಾರ್ಕಂಡೇಯ, ರುದ್ರನೇತ್ರ, ಶ್ವೇತವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಸ್ಫಟಿಕ 108ರ ಸರ 1ಕ್ಕೆ 0-6-0ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚಾಗುವದು. ಕಂಠಿ ಸರ 32 ಮಣಿ 1ಕ್ಕೆ ರೂ.0-8-0ಯಿಂದ ರೂ. 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8-0ರಿಂದ 50 ವರೆಗೆ ಮತ್ತು ಬೇರೆ ಮಾಲಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0 ಸ್ಟ್ಯಾಂಪು ಕಳಿಸಿದರೆ, 1 ಕಾಶೀ ನಕ್ಷೆ, 1 ವಿಶ್ವೇಶ್ವರನ ಫೋಟೋವನ್ನು ಕಟಲಾಗು ಸಹ ಇನಾಂ ಕಳಿಸಲಾಗುವದು.

ಪತ್ತೆ:- ಶಿರೋಮಣಿ ನಾರಾಯಣಾಚಾರ್ಯ, ಚೌಖಾಂಬಾ, ಕಾಶೀ ಕ್ಷೇತ್ರ

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೇ ಸಂಸ್ಥೆಗೆ ಉತ್ತೇಜನ ಕೊಡಿ!!!

ಪ್ರೊಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪೋಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

ವಿ. ಸೂ. 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪೋಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು.!

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಖ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು:- ಮೆಸರ್ಸ್ ಜೀವನ ಏಜನ್ಸಿ, ಕಾರವಾರ.

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಾಗದ ಪತ್ರಗಳೂ, ಕಿತಾಬುಗಳೂ ಬಹಳ ಸರಳವಾಗಿವೆ. ಕಂಪನಿಯ ಹಣವು ಸರಕಾರಿ ಲೋನು, ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ್ ಏಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಕೆಳಗಿನ ಏಜಂಟರ ಕಡೆಗೆ ಇಲ್ಲವೆ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents - D. K. Nayak Bros. D. S. Pai. K. N. Nayak. Honavar Agent - R. V. Prabhu Esq.	**K. Padmanabha Rao & Sons,** BELGAUM *Chief Agents for* *Karnatak Districts & S. M. States*

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಕಾಣುವಂಥ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರಲ್ಪಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ, ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ

(Registered Trade Mark.)

ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಉಚಿತ ಕಳಿಸಲಾಗುವದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ.ಪಿ. ೪ ಆಣೆ. ಡಜನ್ ೧ಕ್ಕೆ ರೂ. ೩-೮-೦ ವಿ. ಪಿ. ೦-೬-೦.

ದಯಮಾಡಿ ನಿಮ್ಮ ಹೆಸರನ್ನೂ, ಆದ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ.—ಗುರುಬಸವ ಅಂಡ್ ಕಂಪನಿ ಲಿಮಿಟೆಡ್. ಪೋ.ಬಾ. ೫೧೦, ಮೌಂಟರೋಡ್, ಮದರಾಸು.

ॐ

'दशमूलारिष्ट.'
'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆರ್ಯ ವೈದ್ಯರ ಕಡೆಗೂ ಹಾಗೂ ಎಲ್ಲ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅವರ ಗುಣಗಳು ಸರಿಯಾಗಿ ಕೂಡದೆ ಇರುವದುಂಟು ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಅಂದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಹೋಗಲಾಡಿಸಿ ಮೈಯಲ್ಲಿ ತಾಕತ್ತವನ್ನು, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ವಾಂತಿ,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಟವ್ಯಾಧಿ, ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಶುಚಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ, ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ನಂಜಿನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹುಟ್ಟಿಕೊಳ್ಳುವಂಥ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಿರುತ್ತದೆ.

ವಿಶೇಷವಾಗಿ ಹೆಂಗಸರಿಗೆ:— ಪ್ರಸೂತಿ ಆದನಂತರ (ದಿನ ಎರಡಾವರ್ತಿ) ಒಂದೊಂದು ಔಂಸಿನಂತೆ ೧೨ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯಾಗುತ್ತಾರೆ

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು ಬೇಕಾದವರು ಪತ್ರವ್ಯವಹಾರ ಮಾಡತಕ್ಕದ್ದು.

೧೨ ಔಂಸ ಬಾಟ್ಲಿ ೧ಕ್ಕೆ ರೂ ೧—೪—೦
,, ಬಾಟ್ಲಿ ೬ಕ್ಕೆ ರೂ ೬—೧೨—೦
,, ಬಾಟ್ಲಿ ೧೨ಕ್ಕೆ ರೂ ೧೨—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ:—

ಪಿ. ಅಚ್ಯುತ ಪಂಡಿತ,

ಮಾಲಕ,

ಆರ್ಯಧನ್ವಂತರಿ ಔಷಧಾಲಯ,

ಪೋಸ್ಟ— **ಕುಮಟಾ.** (ಉ. ಕನ್ನಡ.)

|| ಶ್ರೀರಾಮ ಪ್ರಸನ್ನ ||

ಡಾ| ಅಂಕಲೀಕರ, ಎಮ್. ಡಿ., (ಅಮೇರಿಕಾ) ಸಂಕೇಶ್ವರ ಆಸ್ಪತ್ರಿ ಇವರು ದಮ್ಮು, ಕೆಮ್ಮು ಮೊದಲಾದ ಫುಪ್ಫುಸದ ರೋಗಗಳ ಮೇಲೆ ರಾಮಬಾಣ ಔಷಧವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ— ಮನೆತನದ ವೈದ್ಯ!

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ದೋಷಿ ಅಥವಾ ಸಾದಾ) ನಿಮೋನಿಯಾ (ಫಾಸ್ಸುವಾತ), ಟಾಯಿಫಾಯಿಡ (ವಿಷಮಜ್ವರ), ಹೊಟ್ಟೆಶೂಲಿ, ಕಾಲರಾ, ಪ್ಲೇಗ, ಇನ್‌ಫ್ಲುಯೆಂಝಾ, ಸಂಧಿವಾತ, ಬಾಣಂತಿ ರೋಗ, (ಹಡೆದಾಗ ಇಲ್ಲವೆ ಹಿಂದಿನಿಂದ ಸಂಭವಿಸುವ ಬಾಣಂತ ರೋಗಗಳ ಮೇಲೆ), ಚಿಕ್ಕ ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ, ಮಲಬದ್ಧತೆ, ಪ್ರಮೇಹ, ಧಂತಿಯಿಂದ ಗಂಟಲು ನೋವು ಮತ್ತು ಗಾಯಕ ಜನರಿಗೆ ಧ್ವನಿ ಬೀಳೋಣ, ರಕ್ತಹೋಗುವದು, ಅತಿಸಾರ, ತಂಬಾಕು ಸೇದುವದರಿಂದ ಕಾಲೇಜುಗಳ ಖೋಕಲಿಯಾಗೋಣ, ಯಾವದೇ ಕಾರಣದಿಂದ ಉಂಟಾದ ದುರ್ಬಲತೆ, ಲಿವ್ಹರ (ಸ್ಪ್ಲೀನ), ಹೊಟ್ಟೆಯೊಳಗಿನ ಗಂಟು, ಫುಪ್ಫುಸದ ಹಾಗೂ ಹೊಟ್ಟೆಯೊಳಗಿನ ಯಾವದೇ ವಿಕಾರ, ಧಾತುಕ್ಷೀಣತೆ, ಸ್ವಪ್ನಾವಸ್ಥೆ, ಎಲ್ಲ ತರದ ಗರಮಿ, ಸ್ತ್ರೀಯರ ಮುಟ್ಟುದೋಷ ಮೊದಲಾದ ಎಲ್ಲಾ ರೋಗಗಳ ಮೇಲೆ ಅನುಭವಸಿದ್ಧ, ಖಾತ್ರಿದಾಯಕ ಸಿದ್ಧೌಷಧವಿರುತ್ತದೆ. ಈ ಔಷಧವು ತಕ್ಕೊಳ್ಳಲಿಕ್ಕೆ ಸ್ವಾದಿಷ್ಟ, ರುಚಿಕರವಿರುವದು, ಸಣ್ಣ ಹುಡುಗರಂತೂ ಬಹಳ ಪ್ರೀತಿಯಿಂದ ತಕ್ಕೊಳ್ಳುವರು. ಇದು ತಕ್ಕೊಳ್ಳುವದರಿಂದ ರಕ್ತಶುದ್ಧಿ ಹಾಗೂ ರಕ್ತವೃದ್ಧಿಯಾಗಿ ವೀರ್ಯವೃದ್ಧಿಯಾಗುವದು. ಮತ್ತು ಯಾವದೇ ಕಾರಣದಿಂದ ಉಂಟಾದ ಉದಾಸೀನತೆಯನ್ನು ಕಳೆದು ಮನಸ್ಸು ಆನಂದಿತ ಮಾಡುವದು ಹಾಗೂ ಜಗತ್ತು ರಮಣೀಯವಾಗಿ ತೋರುವದು.

ಈ ಔಷಧದಿಂದ ೨೦-೨೫ ವರ್ಷಗಳಿಂದ ದಮ್ಮಿನ ರೋಗದಿಂದ ನರಳುತ್ತಿರುವ ರೋಗಿಗಳು ಪೂರ್ಣ ಗುಣ ಪಡೆದಿರುವರು. ಈಗ ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗಗಳ ಮೇಲೆ ಔಷಧವಿಲ್ಲೆಂದು ನಿರಾಶೆಪಡುವ ಕಾರಣವಿಲ್ಲದಂತಾಗಿದೆ. ಈ ಔಷಧ ಉಪಯೋಗ ಮಾಡಿಕೊಂಡು ರೋಗಮುಕ್ತರಾಗಿರಿ. ಈ ವರೆಗೆ ಸಾವಿರಾರು ಜನರು ರೋಗಮುಕ್ತರಾಗಿರುವರು ನಿರಾಶೆಯಿಂದ ದುಃಖಪಡುತ್ತಿರುವ ಜನರಿಗೆ ಇದರ ಮಾಹಿತಿಯಾಗಿ ಗುಣಪಡೆಯಬೇಕೆಂದು ಈ ಔಷಧದ ಜಾಹೀರಾತು ಪ್ರಕಟಿಸಲ್ಪಟ್ಟಿರುವದು. ಇದನ್ನು ಹಳ್ಳಿಗರು ಹಾಗೂ ಶಹರವಾಸಿಯರು ಜರೂರ ತಮ್ಮ ಸಂಗ್ರಹದಲ್ಲಿ ಇಟ್ಟುಕೊಳ್ಳತಕ್ಕದ್ದು

ನೆಗಡಿ, ಜ್ವರ, ಕೆಮ್ಮು ಶುರು ಆದ ಹೊತ್ತಿನಲ್ಲಿ ಜನರು ನಿಷ್ಕಾಳಜಿಯಿಂದ ೨-೩ ದಿವಸ ಹಾಗೇ ಮೈಮೇಲೆ ತೆಗೆಯುತ್ತಾರೆ, ಹೀಗೆ ಮಾಡುವದರಿಂದ ಮುಂದೆ ಜ್ವರವು ದೋಷಿಯಾಗುವ ಸಂಭವವಿರುತ್ತದೆ. ಆ ಕಾರಣ ಶುರುವಾದ ಕೂಡಲೆ ಈ ಕಷಾಯ ತೆಗೆದುಕೊಳ್ಳುವದರಿಂದ ಮುಂದಿನ ತ್ರಾಸು ತಪ್ಪುವದು, ಇದೇ ರೀತಿ ಬಾಣಂತಿ ಮತ್ತು ಕೂಸು ಇವರಿಗೆ ಮೊದಲನೇ ದಿವಸದಿಂದ ಶುರು ಮಾಡಿ ಮೂರು ತಿಂಗಳು ತನಕ ಚಾಲು ಇಡುವದು, ಹುಡುಗರಿಗೆ ಬೇರೆ ಔಷಧವು ಕೊಡುವ ಗರಜಿಲ್ಲ. ಚಿಕ್ಕಮಕ್ಕಳ ಕಿರಕಿರೆ ನಿಲ್ಲುತ್ತದೆ. ಗರ್ಭಿಣಿ ಹೆಂಗಸರಿಗೆ ಸಹ ಇದನ್ನು ಕೊಡಲು ಅಡ್ಡಿಯಿಲ್ಲ. ಅನುಪಾನ ಪತ್ರಿಕೆಯು ಬಾಟ್ಲಿಯ ಸಂಗಡ ಸಿಗುತ್ತದೆ.

ಲಕ್ಷ್ಮೀಬಾಯಿ ಕೊಲ್ಹಾಪುರಕರ- ಸಂಸ್ಥಾನ ಬಡೋದಾ, ಆಸ್ಥಾನ ಗಾಯಕಿ- ತಮ್ಮ "ಕಲ್ಪತರು ಕಷಾಯ" ಈ ಔಷಧವನ್ನು ನನ್ನ ಧ್ವನಿ ಬಿದ್ದ ಹೊತ್ತಿನಲ್ಲಿ ತಕ್ಕೊಳ್ಳುವ ಪ್ರಸಂಗ ಬಂತು ತಿಳಿಸಲಿಕ್ಕೆ ಇಷ್ಟು ಆನಂದವಾಗುತ್ತದಲ್ಲಾ! ಔಷಧ ತಕ್ಕೊಂಡ ಅರ್ಧ ತಾಸಿನಲ್ಲಿಯೇ ಮೊದಲಿನಂತೆಯೇ ಸುಸ್ವರದಿಂದ ಹಾಡಲಿಕ್ಕೆ ಒಂದು ಧ್ವನಿ ಬಿದ್ದ ಕಲ್ಪನೆಯೇ ಉಳಿಯಲಿಲ್ಲ. ತಾ ೧—೫—೧೯೩೩

ಶ್ರೀಯುತ ಪು. ಹ ಶಿರಪೇಕರ, ಮಾಡೇಕರ ಬಿಲ್ಡಿಂಗ- ಮುಂಬಯಿ. ತಾ. ೧-೪-೩೪ ತಮ್ಮ "ಕಲ್ಪತರು ಕಷಾಯ"ವು ದಮ್ಮಿನ ಮೇಲೆ ಹಿಲ್ಲೇ ರಾಗು ಲಿಡ್ಡಿತು. ನನ್ನ ಅತ್ತಿಗೆಗೆ ದಮ್ಮು ಇರುವದು. ಅದಕ್ಕಾಗಿ ಆದಾಗಿನ ಕಷಾಯದ ಬಾಟ್ಲಿಗಳನ್ನು ರೇಲ್ವೆ ಪಾರ್ಸಲಿನಿಂದ ಕಳಿಸಿಕೊಡಿರಿ. ಕಿಮ್ಮತ್ತು:— ೧ರತ್ತಲ ಬಾಟ್ಲಿಗೆ ರೂ. ೨॥, ಅರ್ಧ ರತ್ತಲ ಬಾಟ್ಲಿಗೆ ರೂ. ೧॥, ¼ ರತ್ತಲ ಬಾಟ್ಲಿಗೆ ೧೪ ಆಣೆ.

ನಟರತ್ನ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪುರಕರ ಮೊದಲಾದ ಅನೇಕ ಮಹನೀಯರು ಉಪಯೋಗಿಸಿ ಪ್ರಶಂಸಾ ಪತ್ರಗಳನ್ನು ಕೊಟ್ಟಿರುತ್ತಾರೆ

ಔಷಧೀ ದಂತಮಂಜನ.

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು, ಕೀವು, ರಕ್ತ, ಹಲ್ಲು-ದವಡೆಗಳ ರೋಗ ಮುಂತಾದವುಗಳು ನಾಶವಾಗುತ್ತವೆ. ಈ ಔಷಧವನ್ನು ದಿನಾ ಒಂದಾವರ್ತಿ ಯಾ ಎರಡಾವರ್ತಿ ಹಲ್ಲುಗಳಿಗೆ ತಿಕ್ಕುವದಲ್ಲದೆ ನಾಲಿಗೆಗೂ ತಿಕ್ಕಬೇಕು. ಬೆಲೆ ಆಣೆ ೫

ಇದಲ್ಲದೆ, ಥಂಡಿ ಜ್ವರ, (ಮಲೇರಿಯಾ) ದ ಮೇಲೆ ಮಿಶ್ರಣ, ಶಾಂತಕ್ಕೆ ಸವಿ ಔಷಧ, ಜಂತುನಾಶಕ ಕಷಾಯ, ಕಾಲರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೆಶಲ್ ಔಷಧಗಳು ನಮ್ಮಲ್ಲಿ ಸಿಗುತ್ತವೆ

ಶ್ರೀರಾಮ ಆಯುರ್ವೇದಿಕ ಫಾರ್ಮಸಿ, ಗಡಹಿಂಗ್ಲಜ. (ಕೊಲ್ಹಾಪುರ ಸಂ)

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270. Monday, 10th June, 1935.

ವರ್ಷ ೧೭ | ಸಂಚಿಕೆ ೫೧

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಆಗಾವು ರೂಪಾಯಿ 2-4-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0,
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ್ ಪೈಕಾದ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ 1-0-0 ಆ ನಂತ್ರ ಪ್ರತಿಸಾಲಿಗೆ 0-2-0

ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುತವೆ.

ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತೀರ್ಮಾನಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೧೦ ಮಾಹೆ ಜೂನ ಸನ್ ೧೯೩೫ ನೇ ಇಸವಿ.)—

ರೂ. ೧೦ ಯಾ ಹೆಚ್ಚಿನ ಬೆಲೆಯ

ಕನ್ನಡ ಸೇವಿಂಗ್ಸ ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ಸಹ ವಟಾಯಿಸಬರುತ್ತವೆ.

ಅಂತು ದರಸಾಲ ಶೇಕಡಾ ೪-೬-೦ ರಂತೆ ಬಡ್ಡಿ ಸಿಗುತ್ತದೆ!

ಆರಾರು ತಿಂಗಳಿಗೆ ದರಸಾಲ ಶೇಕಡಾ ೩ರ ರಂತೆ ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ದರಸಾಲ ಶೇಕಡಾ ೧೨ ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು!

ನಡುವೆ ಬಡ್ಡಿ ತೆಗೆದುಕೊಳ್ಳದೆ ಇಟ್ಟರೆ, ರೂ. ೧೦೦ರ ರಕಮು ಮುದ್ದತ್ತಿನ ಕೊನೆಗೆ ರೂ. ೧೨೨-೧೩-೬ ಆಗುತ್ತದೆ

ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.

ಕೆನರಾ ಬ್ಯಾಂಕ ಲಿಮಿಟೆಡ್.

(ಸ್ಥಾಪನೆ ೧೯೦೬)

ಬ್ಯಾಡಗೆಯವರ ಬಿಲ್ಡಿಂಗ, ಹುಬ್ಬಳ್ಳಿ.

ಈ ಕೆಳಗಿನ ನಗರಗಳಲ್ಲೂ ನಮ್ಮ ಶಾಖೆಗಳಿವೆ:—

ಮುಂಬಯಿ-ಕೋಟೆ, ಮುಂಬಯಿ ಮಾಂಡವಿ, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಳಮ್, ಆಲಪ್ಪಿ, ಬೆಂಗಳೂರು, ದಾವಣಗೇರಿ, ಚಿಕ್ಕಮಗಳೂರು, ಮಂಗಳೂರು-ಬಂದರ, ಮಂಗಳೂರು-ಶಹರ, ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ, ಕುಂದಾಪುರ ಮತ್ತು ಗಂಗೊಳ್ಳಿ

ಸಂಕಲ್ಪಿತ ಮೂಲಧನ	೬,೦೦,೦೦೦
ಕೆತ್ತ್ರ ಮೂಲಧನ	೩,೩೧,೦೦೦
ಕ್ಷೇಮನಿಧಿ	೨,೫೦,೦೦೦
ಠೇವುಗಳು	೫೮,೬೨,೦೦೦
ವ್ಯವಹಾರದ ಹಣ	೭೩,೪೯,೦೦೦

The Canara Industrial & Banking Syndicate, Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Head Office— Mukund Nivas, UDIPI.

Branches:— Udipi, Bangalore City, Mangalore, Payyanur, Cannanore, Brahmavar, Honnavar, Karwar, Hubli, Belgaum, Sirsi, Kumta, Hungarkatta, Coondapur, Ankola, Kanhangad & Bellary.

Paid-up Capital Rs. 2,12,200.
Working Capital exceeds Rs. 17 Lacs.

Last 5 Year's Progress proves growing popularity.

Year	Rolling Capital.
1930.	2,42,095.
1931.	4,95,266.
1932	9,25,958.
1933.	13,90,789.
1934.	15,93,238.

Fixed Deposits for one year and two years are accepted now at 5% and 5½% respectively.
All sorts of Banking Business transacted.
For further particulars apply to:—

Kumta, 1—5—1935 — G. Sanjiva Nayak, Agent at KUMTA.

ಬನ್ನಿರಿ! || ಶ್ರೀ ಚಂದ್ರಮೌಳೇಶ್ವರ ಪ್ರಸನ್ನ || ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, ಕುಮಟಾ. (ಉ. ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರಿಪ್ಪಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ:- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾಲಕ.

ಅಲ್ಲಲ್ಲಿ ಇಷ್ಟಿಷ್ಟು!

ಸನಾತನಿಗಳಿಗೆ ತುಳಸೀಗಿಡ ಅತಿ ಪವಿತ್ರವಾದದ್ದು. ಈ ಗಿಡದ ಮಹಿಮೆ ವಿಶೇಷ, ಔಷಧೋಪಚಾರದ ಗುಣಗಳು ಈ ಗಿಡದಲ್ಲಿ ಎಲ್ಲಕ್ಕಿಂತಲೂ ಮಿಗಿಲಾಗಿವೆ. ಈ ಕುರಿತು ಕವಿರಾಜ ಸುಖರಾಮ ಪ್ರಸಾದ ಬಿ. ಎಸ್. ಸಿ. ರವರು ಪಾಟಣಾ ಪಟ್ಟಣದೊಳಗಿನ 'ಸರ್ಚಲೈಟ' ಪತ್ರಿಕೆಯಲ್ಲಿ ಬರೆಯುವದೇನಂದರೆ:— ಈ ಗಿಡದ ಬೇರು, ಎಲೆ, ಬೀಜ ಎಲ್ಲವೂ ಔಷಧಕ್ಕೆ ಬರುತ್ತಿದ್ದು ಬೇರೆ ಬೇರೆ ರೋಗಗಳನ್ನು ಗುಣ ಮಾಡಬಲ್ಲವು. ಎಲೆಗಳಲ್ಲಿ ಹಳದಿ ಬಣ್ಣದ ಎಣ್ಣೆಯು ಸತ್ವವಿರುತ್ತದೆ. ಇದು ಕರ್ಪೂರದಂತೆ ಉಪಯೋಗಕ್ಕೆ ಬರುತ್ತದೆ. ಬೇರಿನಿಂದ ಜ್ವರಕ್ಕೆ ಉಪಚಾರ ಮಾಡಬರುತ್ತದೆ. ಬೀಜಗಳಲ್ಲಿ ಮೃದು ಮಾಡುವ ಗುಣವಿದೆ. ಒಣಗಿದ ಗಿಡದಿಂದ ಹೊಟ್ಟೆಯ ನರಗಳನ್ನು ಬಲಪಡಿಸಬರುತ್ತದೆ. ಮತ್ತು ಕಫ ದೂರದಡಿಸಲು ಬರುತ್ತದೆ. ಎಲೆಗಳಿಂದ ಕಫ ಪರಿಹಾರವಾಗುವದಲ್ಲದೆ ನೆಗಡಿಯೂ ದೂರವಾಗಬಲ್ಲದು. ಮೇಲಾಗಿ ತುಳಸಿ ಗಿಡಗಳಿದ್ದಲ್ಲಿ ಗುಂಗಾಡುಗಳು ಸುಳಿಯುವದಿಲ್ಲ ಈ ಬಗ್ಗೆ ಸರ್ ಜೋರ್ಜ ಬರ್ಡವುಡ್‌ರವರು ಸ್ವಾನುಭವವನ್ನು ಬರೆದಿಟ್ಟಿದ್ದಾರೆ. ಅದೇನಂದರೆ:- "ಮುಂಬಯಿಯಲ್ಲಿ 'ವಿಕ್ಟೋರಿಯಾ ಉಪವನ' ಹಾಗೂ 'ಆಲ್ಬರ್ಟ ಮ್ಯೂಝಿಯಮ್' ಯಾನೆ ವಸ್ತುಸಂಗ್ರಹಾಲಯಗಳ ಕೆಲಸ ನಡೆದಿತ್ತು; ಆ ಕಾಲದಲ್ಲಿ ಗುಂಗಾಡುಗಳ ಉಪಟಳ ವಿಪರೀತ ಬಂದ-ಬಂದ ಕೂಲಿಕಾರರಿಗೆ ಕೆಲಸಗಾರರಿಗೆ ಗುಂಗಾಡು ಕಚ್ಚಿ ಚಳಿಜ್ವರ ಬಂದು ಬಲು ತೊಂದರೆಯಾಯಿತು. ಆಗ ಹಿಂದು ಮೆನೇಜರೊಬ್ಬರಿದ್ದರು. ಅವರು ಸುತ್ತಲೂ ತುಳಸೀಗಿಡ ಹಚ್ಚಿಸಿದರು. ಕೂಡಲೆ ಗುಂಗಾಡುಗಳೆಲ್ಲ ಕಾಣೆ. ಚಳಿಜ್ವರ ಅಷ್ಟು ಪ್ರಾಕಾರ ಬಿಟ್ಟು ಒಡಿತು." ಇಂಪೀರಿಯಲ್ ಮಲೇರಿಯಲ್ ಕೊನ್ಫರನ್ಸ ಯಾನೆ ಬಾದಶಾಹಿ ಚಳಿಜ್ವರ ಪರಿಷತ್ತಿನವರು ತುಳಸೀ ಗಿಡದಿಂದ ಚಳಿಜ್ವರ ಪರಿಹಾರವಾಗುತ್ತದಾಗಿ ಅಭಿಪ್ರಾಯಪಟ್ಟಿದ್ದಾರೆ ಚಳಿಜ್ವರವು ತುಳಸೀ ಉಪಚಾರದಿಂದ ದೂರವಾಗುತ್ತದಾಗಿ ಆಯುರ್ವೇದದವಲ್ಲಿಯೂ ವಚನಗಳಿವೆ. ತುಳಸಿ ಎಲೆಗಳ ರಸದಲ್ಲಿ ಕಾಳುಮೆಣಸಿನ ಹುಡಿಯನ್ನು ಹಾಕಿ ಕೊಟ್ಟಲ್ಲಿ ಚಳಿಜ್ವರ ಹೋಗುತ್ತದಾಗಿ ಸಾರಂಗಧರರು ಬರೆದಿಟ್ಟಿದ್ದಾರೆ. ಎಲೆಗಳನ್ನು ಲಿಂಬೆರಸದಲ್ಲಿ ಸಣ್ಣಾಗಿ ಅರೆದು ಹಚ್ಚಿದಲ್ಲಿ ಕಜ್ಜಿ, ಗಜಕರ್ಣಗಳು ನಿವಾರಣವಾಗುತ್ತವೆ. ಇದನ್ನು ಮೈಗೆ ಹಚ್ಚಿಕೊಂಡರೆ ಚರ್ಮವು ಮೃದುವಾಗುವದಲ್ಲದೆ ಚರ್ಮಕ್ಕೆ ಬಿದ್ದ ಕಪ್ಪು ಕಲೆಗಳು ಮಾಯವಾಗಿ ಸೌಂದರ್ಯವು ಹೆಚ್ಚುತ್ತದೆ. ಒಣ ಎಲೆಗಳ ಪುಡಿ ಮಾಡಿ ಸೇದಿದಲ್ಲಿ ಪಿನಸ ರೋಗವು ದೂರವಾಗುತ್ತದೆ. ಕಿವಿ ನೋವಾದರೆ ಎಲೆಗಳ ರಸವನ್ನು ಕಿವಿಯಲ್ಲಿ ಹಿಂಡಬೇಕು. ಅಂದರೆ ಕಿವಿ ನೋವು ನಿಲ್ಲುತ್ತದೆ. ಮಕ್ಕಳಿಗೆ ಆಗುವ ಜಠರ ರೋಗಗಳು ಎಲೆ ತಿನಿಸಿದರೆ ಗುಣಹೊಂದುತ್ತವೆ ಇದೇ ಉಪಚಾರದಿಂದ ಯಕೃತ್ತು ಶೂಲೆಯೂ ನಿವಾರಣವಾಗಬಲ್ಲದು. ಯಾಲಕ್ಕಿಯ ಹಿಟ್ಟನ್ನು ಎಲೆಯ ರಸದಲ್ಲಿ ಮಿಶ್ರಮಾಡಿಕೊಟ್ಟರೆ ವಾಕರಿಕೆ ನಿಲ್ಲುತ್ತದೆ. ಯಾವದೇ ಪ್ರಕಾರದ ವಾಕರಿಕೆ ಇದ್ದರೂ ಈ ಮದ್ದಿನಿಂದ ನಿಲ್ಲಲೇಬೇಕು. ಕಾಳುಮೆಣಸಿನ ೧ ಮಾಸಿ ಹಿಟ್ಟನ್ನು ಒಂದು ತೊಲೆ ತುಳಸಿ ರಸದಲ್ಲಿ ಹಾಕಿ ಬೆರಸಿ ಬೆಳಗ್ಗೆ ಕೊಂಡಲ್ಲಿ ಚಳಿಜ್ವರದ ಬಾಧೆಯಾಗುವದಿಲ್ಲ. ಸರ್ಪದಂಶದ ಬಗ್ಗೆ ಸಹ ತುಳಸಿಯ ಉಪಚಾರ ಮಾಡಬಹುದು. ತುಳಸಿಗಿಡದ ಬೇರುಗಳನ್ನು ಸಣ್ಣಾಗಿ ಕುಟ್ಟಿ ಬೆಣ್ಣೆಯಲ್ಲಿ ಮಿಶ್ರಮಾಡಿ ತುಳಸಿ ಎಲೆಗಳ ಮೇಲೆ ಇಟ್ಟು ಸರ್ಪದಂಶವಾದ ಭಾಗಕ್ಕೆ ಹಚ್ಚಬೇಕು. ಈ ಮಿಶ್ರಣವು ಕಪ್ಪಾದ ಬಳಿಕ ಅದನ್ನು ತೆಗೆದು ಮತ್ತೊಮ್ಮೆ ಹಚ್ಚಬೇಕು. ಹೀಗೆ ಮಿಶ್ರಣವು ಕಪ್ಪಾಗುವ ವರೆಗೆ ಹಚ್ಚುತ್ತಿರಬೇಕು. ಈ ಮಿಶ್ರಣವು ವಿಷವನ್ನು ಹೀರಿಕೊಳ್ಳುವದರಿಂದ ಕಪ್ಪಾಗಲು ಕಾರಣ. ಎಲೆಗಳ ಕಷಾಯ ಮಾಡಿ ಅದರೊಳಗೆ ಒಂದಿಷ್ಟು ಸಕ್ಕರೆ-ಆಕಳ ಹಾಲು ಹಾಕಿ ಕೊಂಡಲ್ಲಿ ದಣುವು ಪರಿಹಾರವಾಗುತ್ತದೆ. ಅಲ್ಲದೆ ನೆಗಡಿ, ಕಫ ಸಹ ಆಗುವದಿಲ್ಲ. ತುಳಸೀ ಬೀಜಗಳಿಂದ ವೀರ್ಯವರ್ಧನವಾಗುತ್ತದೆ. ೧೮ ಗ್ರೇನು (೧/೪ ತೊಲೆ) ತುಳಸಿ ಬೀಜದ ಹುಡಿ ೩೬ ಗ್ರೇನು (೧/೨ ತೊಲೆ) ಹಳೇ ಬೆಲ್ಲ ಇವನ್ನು ಮಿಶ್ರ ಮಾಡಿ ದಿನಾ ಬೆಳಗ್ಗೆ-ಸಂಜೆ ಆಕಳ ಹಾಲಿನಲ್ಲಿ ಕೊಳ್ಳಬೇಕು; ಮತ್ತು ಬ್ರಹ್ಮಚರ್ಯದಿಂದ ಉಳಿಯಬೇಕು, ಸಾತ್ವಿಕ ಆಹಾರ ಕೊಳ್ಳಬೇಕು; ಅಂದರೆ ಮನುಷ್ಯನು ಗಟ್ಟಿಗನಾಗುವನು. ತಿನ್ನುವ ಎಲೆಯ ಸಂಗಡ ತುಳಸಿ ಬೇರು ಕೊಂಡಲ್ಲಿ ವೀರ್ಯದೋಷ ಪರಿಹಾರವಾಗುತ್ತದೆ. ತುಳಸೀಗಿಡದ ಮಹಿಮೆಯಿದು! ಸನಾತನಿಗಳು ಇದಕ್ಕಾಗಿಯೇ ಈ ಗಿಡವನ್ನು ಪವಿತ್ರವೆಂದೆಣಿಸಿ ಆತ್ಯಾದರದಿಂದ ಪೂಜಿಸುತ್ತಾರೆ. ಸುಲಭವಾದ ಔಷಧ ಪ್ರಯೋಗಗಳನ್ನು ಬಡ-ಬಗ್ಗರು ನಡಿಸಿ ಲಾಭ ಹೊಂದಬೇಕೆಂಬ ಸದುದ್ದೇಶದಿಂದ ಕವಿರಾಜ ಸುಖರಾಮ ಪ್ರಸಾದರವರು ಈ ಮಾಹಿತಿಯನ್ನು ಪ್ರಕಟಿಸಿರುತ್ತಾರೆ.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

- ವೃದ್ಧಿಕರಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).
- ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
- ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ).
- ಮಹಾವಾತ ತೈಲ (ವಾತವ್ಯಾಧಿಕ್ಕೆ ಅತ್ಯಂತ ಗುಣಕಾರಿ).
- ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
- ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)
- ಕೃಷ್ಣಾಂಕರ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
- ಅಮೃತ ಪ್ರಾಶ (ರಕ್ತನಾಶ, ಅಪಕಂತ್ರಕ, ಜೀರ್ಣಜ್ವರಗಳಿಗೆ ರಾಮಬಾಣ)
- ಭುವನರಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ)
- ವಾತಕುಲಾಂತಕ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-

ಹೆಚ್ಚಿನ ವಿವರಕ್ಕಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾವಕಾಶ ನೋಡಿ ತುಂಬಾ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಗುಣಿಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಅವು ಶಾಸ್ತ್ರಸಿದ್ಧವಾಗಿ ಅನುಭವಕ್ರಮವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಚಯವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶ ಸಮಿತಿಗೆ ಅವಶ್ಯಕವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವರು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ವೇಷಕರಾದರೆ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯು ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿವಸ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ

ಮೊಕ್ಕಾಂ, ಉಡುಪಿ. ೧೦-೧೧-೧೯೩೩.

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಅಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ.

ಏನು ವಿಧಿಘಟನೆ! ಬಿಹಾರ ಭೂಕಂಪದಿಂದ ಹಿಂದುಸ್ಥಾನವು ಇನ್ನೂ ಚೇತರಿಸಿ ನಿಲ್ಲಲಿಲ್ಲ, ಅಷ್ಟರಲ್ಲಿ ಬ್ರಿಟಿಶ ಬಲೂಚಿಸ್ಥಾನದ ಕ್ವೆಟ್ಟಾ, ಕೋಲಪುರ, ಮಸ್ತುಂಗ ಮೊದಲಾದ ೭ ಚದರ ಮೈಲು ಪ್ರದೇಶದಲ್ಲಿ ಕಳೆದ ಶುಕ್ರವಾರ ರಾತ್ರಿ ೩ ಘಂಟೆಗೆ ೩ ಮಿನಿಟುಗಳ ತನಕ ಭೂಕಂಪವಾಗಿ ಪ್ರಚಂಡ ಅನರ್ಥ. ದೊಡ್ಡ ದೊಡ್ಡ ಕಟ್ಟಡಗಳು ಫಕ್ಕನೆ ನೆಲಕ್ಕುರುಳಿದವು. ಉಗಿಬಂಡಿಯ ಸ್ಟೇಶನಿನ ಇಮಾರತು ಕಡಕಡನೆ ಕುಸಿದು ಬಿತ್ತು. ನಿರ್ಭಯದಿಂದ ಒಳಗೆ ಸುಖನಿದ್ರೆ ಮಾಡುತ್ತಿದ್ದ ಜನರೆಲ್ಲರೂ ನೆಲದಡಿಗೆ. ಕ್ವೆಟ್ಟಾ ಮೊದಲಾದ ಪ್ರದೇಶಗಳಲ್ಲಿ ಪ್ರಚಂಡ ಹಾಹಾಕಾರ. ಹಲವರು ಹೆಂಡರು-ಮಕ್ಕಳೊಡನೆ ನೆಲದಲ್ಲಿ ಹುಗಿದು ಹೋದರು, ಐಶ್ವರ್ಯವಂತರು ಸಕಲೈಶ್ವರ್ಯದೊಡನೆ ಸಮಾಧಿ ಹೊಂದಿದರು. ದೊಡ್ಡ ದೊಡ್ಡ ಆಫೀಸರರು ಬಂಗಲೆ ಸಹಿತ ನೆಲಸೇರಿದರು. ಮೂರು ನಿಮಿಷಗಳಲ್ಲಿ ಸೊಬಗಿನ ಕ್ವೆಟ್ಟಾ ಪಟ್ಟಣವು ಸ್ಮಶಾನ ಭೂಮಿಯಾಯಿತು. ೧ ಸಾವಿರ ಜನರು ತೀರಿಕೊಂಡಿರಬೇಕೆಂದು ಮೊದಲಿನ ತಂತಿ; ಈಗ ನೋಡಿದರೆ, ಕೇಳಿದರೆ ೫೦ ಸಾವಿರಕ್ಕೂ ಮಿಕ್ಕಿ ಜನರು ತೀರಿಕೊಂಡರೆಂದೂ, ಎಲ್ಲಿ ನೋಡಿದಲ್ಲಿ ಶವಗಳೇ ಕಾಣುತ್ತವಾಗಿಯೂ ಹೇಳುತ್ತಾರೆ. ಆಯುರ್ಬಲದಿಂದ ಪಾರಾದ ಸರ್ದಾರರೊಬ್ಬರು ಉದ್ಗರಿಸಿದ್ದೇನಂದರೆ:- "ನನಗೇನು ಗೊತ್ತಿಲ್ಲ. ಭೂಮಾತೆಯೇ ನಡುಗಿತು. ನನಗೆ ಸ್ಮೃತಿ ತಪ್ಪಿತು. ನಾನು ಸ್ಮೃತಿ ಬಂದ ಮೇಲೆ ಆಚೆ-ಈಚೆ ನೋಡಲು, ನಾನು ಆಸ್ಪತ್ರೆಯಲ್ಲಿದ್ದೆ." ಇದರ ಮೇಲಿಂದ ಭೂಕಂಪದಿಂದ ಉಂಟಾದ ಚಮತ್ಕಾರದ ಕಲ್ಪನೆ ಬಂದೀತು. ರೂಪಾಯಿಗೆ ೧೪ ಆಣೆ ಜನರು ತೀರಿಕೊಂಡಿರುತ್ತಾರೆ. ಒಂದಾಣೆ ಘಾಯಪಟ್ಟವರು; ಒಂದಾಣೆ ಹೇಗಾದರೂ ಬದುಕಿ ಉಳಕೊಂಡವರು. ತೀರಿಕೊಂಡವರ ಉತ್ತರಕ್ರಿಯೆ ಮಾಡುವ ಬಗೆ ಹೇಗೆಂದು ತಿಳಿಯದಾಗಿದೆ. ಇಡೀ ಪ್ರದೇಶದಲ್ಲಿ ಈಗ ಲಷ್ಕರೀ ಕಾಯಿದೆ. ಸೈನಿಕರು ಸಮಸ್ತರ ಅಧಿಕಾರಗಳನ್ನು ಪಡೆದು ಅಲ್ಲಿ ವ್ಯವಸ್ಥೆ ಮಾಡುತ್ತಿದ್ದಾರೆ. ಬದುಕಿ ಉಳಿದವರನ್ನು ಉಗಿಬಂಡಿ ತುಂಬಿ ಕಳಿಸುತ್ತಾರೆ. ಉಗಿಬಂಡಿಗೆ ಈಗ ವೇಳಾಪತ್ರಿಕೆಯಿಲ್ಲ. ಅನುಕೂಲತೆಯಂತೆ ಉಗಿಬಂಡಿಗಳು ಹೊರಡುತ್ತವೆ. ಕಟ್ಟಡಗಳ ಅಡಿ ಹುಗಿದುಬಿದ್ದ ಜೀವಂತ ಜನರಿಗೆ ತೆಗೆಯುವ ಕ್ರಮವೂ ನಡೆದಿದೆ. ಪ್ರಾಣದಾಸೆ ಎಲ್ಲರಿಗೂ ದೊಡ್ಡದು. ಐಶ್ವರ್ಯವಂತನೊಬ್ಬನು ೬-೮ ಅಡಿ ತಗ್ಗಿನಿಂದ "ನನಗೆ ಬದುಕಿಸಿರಿ; ೧೦೦೦೦ ರೂಪಾಯಿ ಕೊಡುತ್ತೇನೆ." ಹೀಗೆ ಬೊಬ್ಬೆ ಹೊಡೆಯುತ್ತಿದ್ದನಂತೆ. ತನ್ನ ಐಶ್ವರ್ಯವೆಲ್ಲ ತನ್ನೊಡನೆ ನೆಲಸಮವಾಗಿದೆಯೆಂಬ ಕಲ್ಪನೆ ಆತನಿಗಿಲ್ಲ. ಸ್ತ್ರೀಯರೂ ಮಕ್ಕಳೂ ಮೇಲಕ್ಕೆಬ್ಬಿಸಲು ದೀನವಾಣಿಯಿಂದ ಆಕ್ರೋಶ ಮಾಡುವದನ್ನು ಕಿವಿಯಿಂದ ಕೇಳಲಾಗುವದಿಲ್ಲವಂತೆ. ಬದುಕಿ ಬಂದ ಮೇಲೆ ಆಪ್ತೇಷ್ಟರ ಚೌಕಶಿಯಾಗಿ ಅವರೊಡನೆ ಸತ್ತುಹೋಗಿದ್ದರೆ ಸುಖವಿತ್ತೆಂದು ಜನರು ಪ್ರಲಾಪ ಮಾಡುತ್ತಿದ್ದಾರೆ. ಒಂದು ದೊಡ್ಡ ಐಶ್ವರ್ಯವಂತ ಮನೆತನದ ೧೪ ವರ್ಷ ಪ್ರಾಯದ ಮುದ್ದು ಮಗು ಒಬ್ಬಳೇ ಬದುಕಿ ಉಳಿದಿದ್ದಾಳೆ. ತಂದೆ-ತಾಯಿಗಳಿಲ್ಲ; ಮನೆಮಾರುಗಳಿಲ್ಲ, ಅಲೆದಾಡುವ ಪ್ರಸಂಗ ಬಂದಿದೆ. ಕಾಳು-ಕಡಿ, ತಿಂಡಿ-ತಿನಸು ಮೊದಲಾದ ಯಾವತ್ತೂ ಸಂಸಾರ ಸಾಮಗ್ರಿ ನಷ್ಟವಾಗಿದೆ. ಊರಲ್ಲಿ ಉಳಿಯಲಿಕ್ಕೆ ಸಹ ಉಪಾಯವಿಲ್ಲ. ಶವಗಳ ಮುಂದಿನ ವಿಧಿ ನಡೆಯದ ಮೂಲಕ ಎಲ್ಲೆಲ್ಲಿಯೂ ಕೊಳೆಯಲಾರಂಭಿಸಿವೆ. ಸಾಂಸರ್ಗಿಕರೋಗ ಬಂದು ಭೂಕಂಪದಲ್ಲಿ ಬದುಕಿ ಉಳಿದವರು ಸಾಯಬಹುದೆಂದು ವೈದ್ಯ ಇಲಾಖೆಯವರು ಭೀತಿಗೊಂಡಿರುತ್ತಾರೆ. ಆದರಿಂದ ಇಡೀ ಪಟ್ಟಣಕ್ಕೆ ಬೆಂಕಿ ಹಚ್ಚಿ ಸಮಸ್ತರಿಗೆ ಒಂದೇ ಒಂದು ಚಿತೆಯಲ್ಲಿ ಅಗ್ನಿಸಂಸ್ಕಾರ ಮಾಡುವ ಕಲ್ಪನೆಯಿತ್ತು. ಹೀಗೆ ಮಾಡುವದು ಅಮಾನುಷವೆಂದೂ, ಹುಗಿದುಬಿದ್ದ ಪಟ್ಟಣವನ್ನು ಅಗೆದು ತೆಗೆದು ಬದುಕಿದ್ದವರ ಶೋಧ ಮಾಡಬೇ[illegible]ದೂ ನಿಶ್ಚಯವಾಗಿದೆ. ಕ್ವೆಟ್ಟಾ ಪಟ್ಟಣವು ಲಷ್ಕರೀ [illegible]ವಾಗಿದ್ದು ಯುರೋಪಿಯನ್ನರ ವಾಸ್ತವ್ಯವಿರುವದರಿಂದ ಪಾರ್ಲಿಮೆಂಟಿನಲ್ಲಿ ಒಳ್ಳೇ ಕಳ್ಳೋಲವೆದ್ದಿದೆ. ಭಾರತಮಂತ್ರಿಗಳು ತತ್ಪರತೆಯಿಂದ ಸತ್ತುಬಿದ್ದ ಯುರೋಪಿಯನ್ನರ ಯಾದಿಯನ್ನು ಹಿಂದುಸ್ಥಾನ ಸರಕಾರದ ಕಡೆಯಿಂದ ಒಯ್ದು ಸಭಾಸದರಿಗೆ ತಿಳಿಸಿದರು; ಅಗೆದು ತೆಗೆದು [illegible] ಇದ್ದವರ [illegible]ವಾಗಿಯೂ ಆಶ್ವಾಸನೆ ಕೊಟ್ಟರು. ರಾಷ್ಟ್ರಪತಿಗಳಾದ ಬಾಬು ರಾಜೇಂದ್ರಪ್ರಸಾದರವರು, "ಪಟ್ಟಣಗಳಿಗಿಂತ ಗ್ರಾಮಗಳಲ್ಲೇ ಹೆಚ್ಚಿನ ಅನರ್ಥವಾಗಿರಬೇಕು. ಬಿಹಾರದೊಳಗಿನ ಅನುಭವದಿಂದ ನಾನಿದನ್ನು ಹೇಳುತ್ತೇನೆ." ಎಂಬದಾಗಿ ಉದ್ಗರಿಸಿ ಕರಾಚಿಯಿಂದ ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಾದ ಶ್ರೀ| ಜಯರಾಮದಾಸ ದೌಲತರಾಮರವರಿಗೆ ಕೂಡಲೆ ಭೂಕಂಪ ಪ್ರದೇಶಕ್ಕೆ

THE AGRICULTURAL & INDUSTRIAL BANK, LIMITED, COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್, ಕುಂದಾಪುರ.

ಕಾಯ್ದೆ ಠೇವಣಾತಿಗಳು.

	3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ $3\frac{1}{2}$ ರಂತೆ,	
ಸೇವಿಂಗ್ಸ ಬೇಂಕ ಠೇವಣಾತಿಗೆ	6 ತಿಂಗಳಿಗೆ ... ... $4\frac{1}{2}$ ರಂತೆ,	ಪ್ರತಿ ಮೂರು ತಿಂಗಳಿಗೊಮ್ಮೆ
ಶೇಕಡಾ	12 ತಿಂಗಳಿಗೆ ... ... $5\frac{1}{2}$,,	ಬಡ್ಡಿ
4% ರಂತೆ ಬಡ್ಡಿ.	24 ತಿಂಗಳಿಗೆ ... ... 6 ,,	ಕೊಡಲಾಗುವದು.
	3 ವರ್ಷ ಯಾ ಹೆಚ್ಚಿನ ಅವಧಿಗೆ ... $6\frac{1}{4}$ ರಂತೆ	

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ.

ಚಿನ್ನ ವ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಕರೆಂಟ, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಂದಾಪುರ,
ತಾ. 21—1—1935.

K. Vaman Shenai &
G. Balakrishna S. Nayak.
Managing Directors.

ಹೊರಟು ಹೋಗಲು ಆಜ್ಞೆ ಮಾಡಿರುತ್ತಾರೆ. ಇದಲ್ಲದೆ ಸಂಚಾರ ಕಾಲದಲ್ಲಿ ತಮ್ಮ ಜೊತೆಗಿದ್ದ ಇನ್ನೊಬ್ಬ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯ ವರಿಗೂ ಮುಂಬಯಿಯಿಂದ ಕರೆಸಿರುತ್ತಾರೆ. ಆಚಾರ್ಯ ಕೃಪಾಲಾನಿಯವರು ಬಿಹಾರ ಭೂಕಂಪದಲ್ಲಿ ಸಂಕಟಗ್ರಸ್ತರ ಸೇವೆ ಮಾಡಿದ ದಕ್ಷ ಪುರುಷರು. ಡಾಕ್ಟರರೂ, ದಾದಿಗಳೂ ವಿಮಾನ ಮಾರ್ಗವಾಗಿ ಭೂಕಂಪ ಪ್ರದೇಶಕ್ಕೆ ಹೋಗಿ ಘಾಯಪಟ್ಟವರಿಗೆ ಶುಶ್ರೂಷೆ ಮಾಡಿ ಹೊರ ಪ್ರದೇಶಕ್ಕೆ ಕಳುಹುತ್ತಿದ್ದಾರೆ. ಊರತುಂಬ ದುರ್ವಾಸನೆ ಹಬ್ಬಿದ್ದರಿಂದ ಸಂಕಟ ನಿವಾರಣೆ ಕೆಲಸಮಾಡುವವರು ಗ್ಯಾಸ ಮಾಸ್ಕ ಯಾನೆ ಗ್ಯಾಸ ಕವಚಗಳನ್ನು ಧರಿಸಿಕೊಂಡು ಹೆಣ ತೋಡುವ, ಹೂಳುವ ಕೆಲಸವನ್ನು ಮಾಡುತ್ತಿದ್ದಾರೆ. ಈ ಸಂಕಟ ಕಾಲದಂದೋ ಏನ್ಸೋ ರವಿವಾರ ಮಧ್ಯಾನ್ಹ ೩ ಘಂಟೆಗೆ ೪೫ ಸೆಕಂಡುಗಳ ತನಕ ಭೂಕಂಪವಾಗಿ ಹೇಗೂ ಹಿಂದಿನ ಭೂಕಂಪ ಸಹಿಸಿಕೊಂಡಿದ್ದ ಇಮಾರತುಗಳು ಕುಸಿದು ಬಿದ್ದವು. ಅಲ್ಲಲ್ಲಿ ಬದುಕಿಕೊಂಡಿದ್ದವರು ಅತ್ತಿತ್ತ ಓಡಿದರು. ನಾಲ್ಕೂ ದಿಕ್ಕಿನಿಂದ ಧೂಳಿ ರಾಶಿಯಾಗಿ ಹಾರುತ್ತಿತ್ತು. ಇಡೀ ಆಕಾಶವೇ ಧೂಳಿಮಯವಾಗಿತ್ತು. ಕೆಲವರು ಸತ್ತು ಹೋದರು; ಕೆಲವರು ಬದುಕಿದರು. ಕ್ವೆಟ್ಟಾದಿಂದ ಹೊರಪ್ರದೇಶಕ್ಕೆ ಹೋಗುವ ಉಗಿಬಂಡಿ ಮಾರ್ಗದ ಮೇಲಿದ್ದ ಕೋಲಪುರ ಸಂಕಕ್ಕೆ ಕೆಟ್ಟುಹೋಯಿತು. ಈ ಸಂಕ ಮುರಿದು ಬಿದ್ದಿದ್ದರೆ ಕ್ವೆಟ್ಟಾ ಪಟ್ಟಣದೊಡನೆ ವ್ಯವಹಾರ ನಡೆಯುವದು ಅಸಾಧ್ಯವಿತ್ತು. ಉಗಿಬಂಡಿ ಕಂಪನಿಯವರು ಲಗುಬಗೆಯಿಂದ ಅದನ್ನು ದುರುಸ್ತ ಮಾಡಿರುತ್ತಾರೆ. ಉಗಿಬಂಡಿಗಳು ಓಡಲಾರಂಭಿಸಿವೆ. ಭೂಕಂಪದಿಂದ ಸುರಕ್ಷಿತವಿದ್ದ ಹಳ್ಳಿಗಳಲ್ಲಿ ವಾಸ್ತವ್ಯ ಮಾಡುವಂತೆ ಜನರಿಗೆ ಮನವೊಲಿಸಿ ಅತ್ತ ಕಡೆ ಕಳಿಸಲಾಗುತ್ತದೆ. ಸುಮಾರು ೨೦ ಸಾವಿರ ಜನರಿಗೆ ಮಿಕ್ಕ ಪಂಜಾಬ ಮತ್ತು ಸಿಂಧ ಪ್ರಾಂತಗಳ ಬದಿಗೆ ಕಳಿಸಲಾಯಿತು. ಕುಮಟೆ ಕರ್ಯಾತ್ರಿನ ವೈದಾನಿಸ ಮೇಲೆ ಗುಡಾರ ಹಚ್ಚಿ ೭ ಸಾವಿರ ಜನರಿಗೆ ಉಳಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ೮ ಸಾವಿರ ಜನರು ಆಸ್ಪತ್ರೆಗಳಲ್ಲಿ ಉಪಚಾರ ಹೊಂದುತ್ತಿದ್ದಾರೆ. ಅವರೆಲ್ಲರಿಗೆ ಅನ್ನ-ನೀರು ಪೂರೈಸುವ ಏರ್ಪಾಟಾಗಿರುವದಂತೆ. ವಿಮಾನ ಮಾರ್ಗವಾಗಿ ಹಾಲಿನ ಡಬ್ಬಿ, ಹಿಟ್ಟು, ಹತ್ತಿ ಮೊದಲಾದ ಸಾಮುಗ್ರಿಗಳು ರವಾನೆಯಾಗುತ್ತಿವೆ. ಇನ್ನೂ ಸಂಪೂರ್ಣ ವೃತ್ತಾಂತವು ಸುಸಂಗತವಾಗಿ ಪ್ರಕಟ ಹೊಂದಿಲ್ಲ. ಸಮಗ್ರ ವೃತ್ತಾಂತ ತಿಳಿಯಲಿಕ್ಕೆ ಇನ್ನೂ ಕೆಲ ಕಾಲ ಬೇಕು. ಪ್ರತಿಯೊಂದೆಡೆ ಸರಾಸರಿ ಎರಡಾಳು ಕಲ್ಲು-ಮಣ್ಣು ರಾಶಿಯಾಗಿ ಬಿದ್ದಿರುವದಾಗಿಯೂ, ಅವುಗಳಲ್ಲಿ ಕಾಳು-ಕಡಿ, ಮೋಟಾರ ಕಾರು, ಹಣ ಮೊದಲಾದ ಪ್ರಾಪಂಚಿಕ ಸಾಮುಗ್ರಿಗಳಡಿಪವಾಗಿಯೂ ವಾರ್ತಾವಾಹಕರು ಬರೆಯುತ್ತಾರೆ. ಭೂಕಂಪಗ್ರಸ್ತರ ಕಷ್ಟ ಹೇಳಲಾಸಲ್ಲ. ಆಪ್ತೇಷ್ಟರಿಲ್ಲ; ಮನೆ-ಮಾರಿಲ್ಲ. ಕಾಳು-ಕಡಿಯಿಲ್ಲ; ಆಸ್ತಿಯಿಲ್ಲ; ಎಲ್ಲವೂ ಭೂಮಾತೆಯ ಉದರದಲ್ಲಿ. ಇಂಥ ನಿರ್ಗತಿಕರಿಗೆ ನೆರವಾಗುವದು ಮನುಷ್ಯಮಾತ್ರರ ಕರ್ತವ್ಯವಿದೆ. ಇದಕ್ಕಾಗಿ ಸರ್ವಾಧಿಪತಿಗಳು ಭೂಕಂಪ ನಿಧಿಯನ್ನು ಹೊರಡಿಸಿ ಸರ್ವಾಧಿಪತಿ ಖಾತೆಯಿಂದ ತಮ್ಮ ಸ್ವಾಧೀನದಲ್ಲಿಟ್ಟ ಸರಕಾರಿ ಹಣದೊಳಗಿಂದ ತಮ್ಮ ದ್ರವ್ಯ ಸಹಾಯವೆಂದು ೫ ಸಾವಿರ ರೂಪಾಯಿ ಕೊಟ್ಟಿರುತ್ತಾರೆ. ಹಿಂದುಸ್ಥಾನದೊಳಗಿನ ಔದಾರ್ಯವಂತ ಮಹನೀಯರೆಲ್ಲರೂ ಈ ನಿಧಿಗೆ ನೆರವಾಗಬೇಕಾಗಿಯೂ ಸರ್ವಾಧಿಪತಿಗಳ ಅಪ್ಪಣೆಯಿದೆ. ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ಸಂಕಟಗ್ರಸ್ತ ದೇಶಬಾಂಧವರಿಗೆ ತನು-ಮನ-ಧನದಿಂದ ಸಹಾಯ ಮಾಡಬೇಕಾಗಿ ಅಪ್ಪಣೆ ಹೊರಡಿಸಿದ್ದಾರೆ. ಮುಂಬಯಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ| ಕೆ. ಎಫ್. ನರಿಮಾನರವರು ನಿಧಿಸಂಗ್ರಹ ಮಂಡಳವೊಂದನ್ನು ಏರ್ಪಡಿಸಿದ್ದಾರೆ. 'ಮುಂಬಯಿ ಕ್ರೊನಿಕಲ್', 'ಸೆಂಟಿನಲ್', 'ಸಮಾಚಾರ' ಈ ಪತ್ರಿಕೆಗಳು 'ತ್ರಿಪತ್ರನಿಧಿ' ಯನ್ನು ಏರ್ಪಡಿಸಿವೆ. "ಕೋಟ್ಯಾವಧಿ ರೂಪಾಯಿ ನಷ್ಟವಾಯಿತು. ಸಾವಿರಾರು ಸೌಭಾಗ್ಯವತಿಯರು ವಿಧವೆಯರಾದರು. ಸಾವಿರಾರು ಮಕ್ಕಳು ಅನಾಥರಾಗಿದ್ದಾರೆ. ಅವರಿಗೆ ಒದಗಿಸಿಕೊಡಲು ಲಗುಬಗೆಯಿಂದ ಮುಂದಾಗದೆ ಕಾಲಹರಣವಾದರೆ ಮುಂದೆ ನೆರವಾಗಿ ಪ್ರಯೋಜನವಿಲ್ಲ. ಕಾರಣ ಲಗುಬಗೆಯಿಂದ ದ್ರವ್ಯಸಹಾಯ ಮಾಡಬೇಕು" ಈ ಪ್ರಕಾರ ತ್ರಿಪತ್ರಿಕೆಗಳ ಬಿನ್ನಹ. ಕಲಕತ್ತೆಯಲ್ಲಿಯೂ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಸಭೆ ಸೇರಿಸಿ ದ್ರವ್ಯಸಂಚಯ ಮಾಡತೊಡಗಿದ್ದಾರೆ. ಪಂಜಾಬ ಮತ್ತು ಸಿಂಧ ಪ್ರಾಂತಗಳಲ್ಲಿ ವಿಶೇಷ ಕಳವಳ. ಭೂಕಂಪದ ಪ್ರದೇಶವು ಸಿಂಧ ಮತ್ತು ಪಂಜಾಬ ಪ್ರಾಂತದ ನೆರೆಹೊರೆಯದು. ನಿರ್ಗತಿಕರೂ ಘಾಯಪಟ್ಟವರೂ ಈ ಪ್ರಾಂತಗಳಲ್ಲಿ ಉಗಿಬಂಡಿ ತುಂಬಿ ಸೇರುತ್ತಿದ್ದಾರೆ. ಕರಾಚಿಯಲ್ಲಿ ೮ ಸಾವಿರ ಜನರು ಬರುವವರಿದ್ದಾರಾಗಿಯೂ, ಅವರಿಗೆ ಉಪಚಾರ ಮಾಡಲು ಆವಶ್ಯವುಳ್ಳ ಶುಶ್ರೂಷಾ ಉಪಕರಣಗಳನ್ನು ಕೂಡಲೆ ಪೂರೈಸಬೇಕಾಗಿಯೂ ಶ್ರೀ| ಜಮಶೇದ ಮೇಧಾರವರು ಮುಂಬಯಿಯ ಶ್ರೀ| ನರಿಮಾನರವರಿಗೆ ತಂತಿ ಮಾಡಿದ್ದಾರೆ. ಸಿಂಧ ಪ್ರಾಂತ, ಹೈದರಾಬಾದ, ಶಿಕಾರಪುರ ಮೊದಲಾದ ಜಿಲ್ಹೆಗಳಲ್ಲಿ ಜನರು ಶೋಕಾವಿಷ್ಟರಾಗಿದ್ದಾರೆ. ಪ್ರತಿಯೊಂದು ಮನೆಯಲ್ಲಿಯೂ ಎಂಬಂತೆ ಒಂದೊಂದು ಜನರು ಭೂಕಂಪದಲ್ಲಿ ಮೃತಿಯನ್ನೈದಿದೆ. ಲಾಹೋರದಲ್ಲಿ ೫ ಸಾವಿರ ನಿರ್ಗತಿಕರು ಹೋಗಿರುತ್ತಾರೆ. ಔದಾರ್ಯವಂತರು ಈ ವಿಷಯಗಳನ್ನೆಲ್ಲ ಆಲೋಚಿಸಿ ಭೂಕಂಪ ನಿಧಿಗಳಿಗೆ ಶಕ್ತಿಮೀರಿ ನೆರವಾಗಬೇಕಾಗಿ ಪ್ರಾರ್ಥನೆ.

•:•

ಈ ಆಪತ್ತಿನಲ್ಲಿ ಸರಕಾರಿ ಅಧಿಕಾರಿಗಳು ಔದಾರ್ಯ ಮನಸ್ಸಿನಿಂದ, ದಯಾಬುದ್ಧಿಯಿಂದ ವರ್ತಿಸುವರೆಂದು ಎಲ್ಲರದೂ ಅಪೇಕ್ಷೆಯಿತ್ತು. ಆದರೆ ಆ ಅಪೇಕ್ಷೆ ಇತ್ತ ಬಯಲಾಗುತ್ತ ಬಂದಿದೆ. ಭೂಕಂಪ ಪ್ರದೇಶದಲ್ಲಿ ಜನಸಂದಣಿಯಾದರೆ ಕಷ್ಟ ನಿವಾರಣಾ ಕಾರ್ಯಕ್ಕೆ ತೊಂದರೆಯಾಗುತ್ತದಾಗಿಯೂ, ಜನರ ಗಲಾಟೆಯಿಂದ ಸಂಕಟ ನಿವಾರಣೆಗೆ ಅನಾನುಕೂಲತೆಯಾಗುತ್ತದಾಗಿಯೂ ಸೈನ್ಯಾಧಿಕಾರಿಗಳು ಅಭಿಪ್ರಾಯಪಟ್ಟು ಭೂಕಂಪ ಪ್ರದೇಶದಲ್ಲಿ ಮುಂದಾಗಿ ಅಪ್ಪಣೆ ಪಡೆದನಕ ಯಾರೂ ಒಳಸೇರಬಾರದಾಗಿ ಕಟ್ಟಪ್ಪಣೆ ಹೊರಡಿಸಿ ಯಾರಿಗೂ ಪ್ರವೇಶ ಮಾಡಗೊಡುವದಿಲ್ಲ. ಸಂಕಟಗ್ರಸ್ತರ ಕಷ್ಟನಿವಾರಣೆ ಮಾಡಲೋಸುಗ ಪ್ರಾಮಾಣಿಕ ಉದ್ದೇಶದಿಂದ ಭೂಕಂಪ ಪ್ರದೇಶಕ್ಕೆ ಹೋಗಬಯಸುವವರಿಗೆ ಅಪ್ಪಣೆ ಕೊಡಲ್ಪಡುವದಾ

ಡಾ॥ ಮುಹಿಷಿಯವರ ಅನುಭವಸಿದ್ಧ ಔಷಧ.

ಡಾ| ಮುಹಿಷಿಯವರು ಕಳೆದ ಮೂವತ್ತು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ, ಪ್ರಯೋಗದಿಂದಲೂ ತಯಾರಿಸಿದ ಈ ಕೆಳಗಣ ಔಷಧಗಳು ಅತ್ಯಂತ ಪರಿಣಾಮಕಾರಿಗಳಾಗಿರುವವೆಂದು ಅವನ್ನು ಉಪಯೋಗಿಸಿದವರೆಲ್ಲರೂ ಅಭಿಪ್ರಾಯಪಡುತ್ತಿರುವರು. ಡಾ| ಮುಹಿಷಿಯವರು ಈ ಅಮೂಲ್ಯವಾದ ಔಷಧಗಳಿಂದಲೇ ಕಾರವಾರ ಜಿಲ್ಹೆಯಲ್ಲಿ ಅತ್ಯಂತ ಲೋಕಪ್ರಿಯರಾಗಿರುವರು

ಅಶೋಕಾ ಕಾರ್ಡಿಯಲ್ — ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವದಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು. ಕ್ರಯ ರೂ. ೧ ೮-೦.

ಅಶ್ವಗಂಧ ಟಾನಿಕ್:— ಮಜ್ಜಾ, ಮಾಂಸ ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನನಷ್ಟ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಪಚನ ಮುಂತಾದವುಗಳೆಲ್ಲ ನಷ್ಟವಾಗಿ ನವಚೈತನ್ಯ ಶುಕ್ರ್ಕ ಇದು ದಿವ್ಯೌಷಧ! ರೂ. ೧-೩-೦,

ಎಗ್ಯು ಮಿಕ್ಶ್ಚರ, ಫೀವರ ಡ್ರೊಪ್ಸ, ಅಮೃತಧಾರಾ, ಕರ್ಪೂರದಾರ್ಕ, ಸಾಯರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ನಿತ್ಯಗಟ್ಲೆ ಇವುಗಳ ಉಪಯೋಗವಾಗುವದು. ಇವು ಅಮೂಲ್ಯ ಔಷಧಗಳು!!

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ-ಮಲೇರಿಯಲ್ ಮಿಕ್ಶ್ಚರ, ಬಾಲಾಮೃತ, ಬ್ಲಡ್ ಮಿಕ್ಶ್ಚರ, ಕಾಲರೇಲ, ದಿರ್ ವ್ರೋಟರ, ಸಾಯರಪ್ ಕ್ಯಾಲ್ಸಿಲೆಕ್ಟೋ ಫಾಸ್ಫೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಲಂತಿ ಮದ್ದು, ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು. ಕ್ಯಾಟಲಾಗ ಪುಕ್ಕಟೆಯಾಗಿ ಸಿಗುವದು.

ರಾ| ದೇವಪ್ಪಾ ಅಯ್ಯಾ ನಾಯಕ, ಕುಮಟಾ ಹೆಡ್ ಆಫೀಸು—
ಉತ್ತರ ಕನ್ನಡ ಜಿಲ್ಹೆಯ ಸೋಲ್ ಏಜಂಟರು. ‖ ಸ್ವಾಸ್ಥ್ಯನಿಲಯ, ಧಾರವಾಡ.

ಗಿಯೂ ಪರಿಸ್ಥಿತಿಯನ್ನು ಪತ್ರಿಕೆಗಳಿಗೆ ತಿಳಿಸಬಯಸುವವರಿಗೆ ಪ್ರವೇಶ ಮಾಡಿಸಿಗುವದಾಗಿಯೂ ಸೈನ್ಯಾಧಿಕಾರಿಗಳು ಪರ್ಕಿಲಾರು ಹೊರಡಿಸಿದ್ದರು. ಅದರ ರಾಷ್ಟ್ರಪತಿಗಳ ಆಜ್ಞೆಯಂತೆ ಭೂಕಂಪಗ್ರಸ್ತರ ಸೇವೆಗಾಗಿ ಅತ್ತ ಕಡೆಗೆ ಹೋದ ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರಿಗೂ ಶ್ರೀ| ಜಯರಾಮದಾಸ ದೌಲತರಾವ ರವರಿಗೂ, ಸಿಂಧ ಪ್ರಾಂತಿಕ ಕೊಂಗ್ರೆಸಕಮಿಟಿಯ ಅಧ್ಯಕ್ಷರಾದ ಡಾ| ಚ್ಯೊಥರಾಮ ಗಿಡ್ವಾಣಿಯವರಿಗೂ ಸೈನ್ಯಾಧಿಕಾರಿಗಳು ಒಳಸೇರ ಬಿಡಲಿಲ್ಲ ಅವರು ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರಿಗೂ, ಮಹಾತ್ಮರಿಗೂ ತಂತಿಯಿಂದ ಅಲ್ಲಿಯ ಅಧಿಕಾರಿಗಳ ಮನಸ್ಥಿತಿಯನ್ನು ತಿಳಿಸಿದ್ದಾರೆ ಸೈನ್ಯಾಧಿಕಾರಿಗಳು ''ಶ್ರೀ| ಜಮಶೇಟ್ ಮೇಥಾರವರಂಥ ಮಾನ್ಯರಿಗೆ ಸಹ ಪ್ರವೇಶ ಮಾಡಗೊಡುವದಿಲ್ಲ. ಸರಕಾರಿ ಕಿತಾಬು ಪಡೆದ ತಿಷ್ಟರಿಗೆ ಸಹ ಅತ್ತ ಕಡೆ ಸುಳಿಯಗೊಡುವದಿಲ್ಲ. ತಮ್ಮ ವ್ಯವಸ್ಥೆಯನ್ನು ತಾವೇ ನೋಡಿಕೊಳ್ಳುತ್ತೇವಾಗಿಯೂ, ಧರ್ಮನಿಧಿಯ ಅಪೇಕ್ಷೆ ಮಾಡುವದಿಲ್ಲವಾಗಿಯೂ, ಸಂಕಟಗ್ರಸ್ತರಿಗೆ ನಿಸ್ಪೃಹತನದಿಂದ ನೆರವಾಗುವೆವಾಗಿಯೂ ಅಭಿವಚನ ಕೊಟ್ಟ್ಯಾಗ್ಯೂ ತಿಷ್ಟರಿಗೆ ಪ್ರವೇಶ ದೊರೆಯುವದಿಲ್ಲ ಲೋಕಪ್ರಮುಖರ ಕಡೆಯಿಂದ ಸಿಕ್ಕ ಸಹಕಾರದ ಅಭಿವಚನಗಳನ್ನು ಅಂಗೀಕರಿಸಿ ಕೆಲಸ ನಡಿಸಿದ್ದಲ್ಲಿ ಬಹಳೇ ಉಪಕಾರವಾಗುತ್ತಿತ್ತು ಈಗ ಎಲ್ಲರಿಗೂ ಊರು ಬಿಟ್ಟುಹೋಗಬೇಕಾಗಿ ಅಪ್ಪಣೆ ಹೊರಟಿದೆ. ಗಾಯಪಟ್ಟವರು ಸಹ ದೇಶಾಂತರ ಮಾಡಬೇಕಂತೆ. ಸರಾಸರಿ ೨೦ ಸಾವಿರ ಜನರ ಪತ್ತೆ ಇಲ್ಲ. ಅವರೆಲ್ಲರೂ ಹುಗಿದುಬಿದ್ದಿರಬೇಕು. ಅಧಿಕಾರಿಗಳು ೩ ದಿನಗಳ ತನಕ ಅಗಿಯುವ ಕೆಲಸವನ್ನು ನಡಿಸುವೆವಾಗಿಯೂ, ಆ ಮೇಲೆ ಹುಗಿದುಬಿದ್ದವರೆಲ್ಲರೂ ಶ್ವಾಸಗಟ್ಟಿ ಸತ್ತುಹೋದರೆಂದು ಎಣಿಸಿ ಪೆಟ್ರೋಲ ಹಾಕಿ ಇಡೀ ಪಟ್ಟಣವನ್ನು ಸುಟ್ಟುಹಾಕುವ ಸಂಕಲ್ಪ ಮಾಡಿರುವರಾಗಿಯೂ ದಟ್ಟವಾರ್ತೆ. ಈಗಲೂ ಸಿಂಧ-ಪಂಜಾಬ ಪ್ರಾಂತಗಳೊಳಗಿನ ಲೋಕಪ್ರಮುಖರ ಸಹಾಯ ಪಡೆದರೆ ಅನೇಕರಿಗೆ ಬದುಕಿಸಬಹುದು, ನಷ್ಟಪಟ್ಟ ಆಸ್ತಿಯನ್ನು ತಿರುಗಿ ಪಡೆಯಬಹುದು." ಸ್ವಯಂಸೇವಕರಿಗೆ ಕಳಿಸುತ್ತೇವಾಗಿಯೂ, ಸಂಕಟನಿವಾರಣೆಗೆ ಅವಶ್ಯವುಳ್ಳ ಉಪಕರಣಗಳನ್ನು ಕಳಿಸುತ್ತೇವಾಗಿಯೂ ಅನೇಕರು ಆಚಾರ್ಯ ಕೃಪಾಲಾನಿಯವರಿಗೆ ತಂತಿಯಿಂದ ತಿಳಿಸಿರುತ್ತಾರೆ. ೧೫ ದಿನಗಳ ತನಕ ಮನುಷ್ಯರು ಜೀವಂತ ಉಳಿಯುತ್ತಾರಾಗಿಯೂ, ಬಿಹಾರ ಭೂಕಂಪದ ಕಾಲದಲ್ಲಿ ಅಂಥವರಿಗೆ ಬದುಕಿಸಿಕೊಂಡಿರುತ್ತಾರಾಗಿಯೂ ಸರದಾರ ಜಮಾಯತಸಿಂಗರವರು ಪ್ರಕಟಿಸಿ ತಮಗೆ ಅಪ್ಪಣೆ ಕೊಟ್ಟಲ್ಲಿ ೧ ಸಾವಿರ ಸ್ವಯಂಸೇವಕರೊಡನೆ ಹೋಗ ತಯಾರಿದ್ದೇವಾಗಿಯೂ ಪ್ರಕಟಿಸಿದ್ದಾರೆ. ಸೈನ್ಯಾಧಿಕಾರಿಗಳು ಲೋಕೋಪಕಾರವನ್ನು ತಾವೊಬ್ಬರೇ ಮಾಡಿ ಲೋಕಪ್ರೀತಿ ಸಂಪಾದಿಸುವ ದುರಾಶೆಗೆ ಬಲಿ ಬೀಳಬಾರದು. ಇದರಿಂದ ಕ್ಷೇಮವಿಲ್ಲ. ದೀನಬಂಧು ಎಂಡ್ರೂಸ್‌ರವರು ಸಿಮ್ಲಾದೊಳಗಿನ ಜೈನ ಮಂದಿರದಲ್ಲಿ ನುಡಿದಂತೆ, ''ಲೋಕಪ್ರತಿನಿಧಿಯ ಸಂಸ್ಥೆಯಾದ ರಾಷ್ಟ್ರೀಯ ಸಭೆಯೊಡನೆ ಸಹಕಾರ ಮಾಡಿ ಸಂಕಟನಿವಾರಣೆಯನ್ನು ಮಾಡತಕ್ಕದ್ದು. ಹೀಗೆ ಮಾಡಿದರೆ ಮಾತ್ರ ಸೈನ್ಯಾಧಿಕಾರಿಗಳ ಪ್ರತಿಷ್ಠೆ ಉಳಿದೀತು. ಬಿಹಾರ ಭೂಕಂಪದಲ್ಲಿ ಅಧಿಕಾರಿಗಳೂ, ರಾಷ್ಟ್ರೀಯ ಸಭೆಯವರೂ ಸಹಕಾರ ಮಾಡಿದ್ದರಿಂದ ಒಳ್ಳೇ ಲಾಭವಾಗಿದೆ. ಕ್ವೆಟ್ಟಾ ಭೂಕಂಪವು ಬಿಹಾರ ಭೂಕಂಪಕ್ಕಿಂತಲೂ ಕಠಿಣ ಸ್ವರೂಪದ್ದೆಂದು ಹಿಂದುಸ್ಥಾನ ಸರಕಾರದ ವಾರ್ತಾ ಇಲಾಖೆಯ ಮುಖ್ಯಾಧಿಕಾರಿಗಳಾದ ಡಾ| ಡಾಫ್ರಿಯವರು ಪ್ರಕಟಿಸುತ್ತಾರೆ ಅವರು ಭೂಕಂಪ ಪ್ರದೇಶವನ್ನು ಸಂಚರಿಸಿ ಒಂದರು ಒಂದು ಮನೆಯಿಲ್ಲ; ಅಂಗಡಿಯಿಲ್ಲ; ಇಗ್ಗರ್ಜಿಯಿಲ್ಲ, ಮಶೀದಿಯಿಲ್ಲ, ದೇವಾಲಯ ಎಲ್ಲವೂ ನೆಲಸಮವಾಗಿವೆ. ಇವನ್ನೆಲ್ಲ ಉದ್ಧರಿಸಲು ಕೋಟ್ಯಾವಧಿ ರಕಮು ಬೇಕು. ಭೂಕಂಪದ ಆಪತ್ತಿನಿಂದ ಪಾರಾಗಿ ಕರಾಚಿಗೆ ಬಂದ ತಜ್ಞ ಶಿಲ್ಪಿಗಳ ಅಭಿಪ್ರಾಯದಂತೆ ಕ್ವೆಟ್ಟಾ ಪ್ರದೇಶವು ಪಟ್ಟಣವೆಂದು ಹೇಳಿಸಿಕೊಳ್ಳಬೇಕಾದರೆ ಇನ್ನು ೫೦ ವರ್ಷ ಬೇಕು. ಇಂಥ ಮಹಾ ಆಪತ್ಕಾಲದಲ್ಲಿಯೂ ಅಧಿಕಾರಿಗಳು ತಾವೇ ಲೋಕೋಪಕಾರಿಗಳೆಂದು ಮೆರೆಯಬಯಸುವದು ಬರೇ ಮುಷ್ಕತನ!

***

ದ್ರವ್ಯಸಹಾಯವು ಕೂಡಲೇ ಅವಶ್ಯವಾದ್ದರಿಂದ ರೌಪ್ಯ ರಾಜ್ಯಾರೋಹಣದ ಪ್ರೀತ್ಯರ್ಥ ಎತ್ತುವಳಿ ಮಾಡಿದ ಸುಮಾರು ೧ ಕೋಟಿ ರೂಪಾಯಿ ಹಣವನ್ನು ಭೂಕಂಪ ನಿಧಿಗೆ ವರ್ಗಾಯಿಸಬೇಕಾಗಿ ಅನೇಕ ಪ್ರಮುಖರು ಸೂಚಿಸಿದ್ದರು, ಇನ್ನೂ ಸೂಚಿಸುತ್ತಾರೆ. ಈಗಿನ ದಿನಮಾನ ಕಠಿಣ. ಜನರ ಕಡೆ ನಿಧಿ ಕೊಡುವ ಸಾಮರ್ಥ್ಯ ಕಡಿಮೆ. ಆದರಿಂದ ರೌಪ್ಯ ರಾಜ್ಯಾರೋಹಣ ನಿಧಿಯನ್ನು ಸಂಕಟನಿವಾರಣೆಗೆ ಉಪಯೋಗಿಸಿದ್ದಲ್ಲಿ ಯಾರದೂ ಆಕ್ಷೇಪವಿರಲಿಕ್ಕಿಲ್ಲವಾಗಿ 'ಮುಂಬಯಿ ಕ್ರೊನಿಕಲ್' ಪತ್ರಿಕೆಯು ಸೂಚಿಸುತ್ತಿದೆ. ಬಾದಶಹರು ಕ್ವೆಟ್ಟಾದಿಂದ ದಯಾರ್ದ್ರರಾಗಿ ಸಹಾನುಭೂತಿ ಸಂದೇಶ ಹೊರಡಿಸಿದ್ದರಿಂದ ಹಿಂದೀ ಪ್ರಜೆಗಳಿಂದ ಎತ್ತುವಳಿಯಾದ ಹಣವನ್ನು ಹಿಂದೀ ಪ್ರಜೆಗಳ ಕಷ್ಟನಿವಾರಣೆಗೆ ಉಪಯೋಗಿಸಲು ಸಂತೋಷಪಡುವರಾಗಿಯೂ ಅನೇಕರು ಎಣಿಸಿದ್ದರು ಆದರೆ ಆ ನಿಧಿಯನ್ನು ಈ ಕಾರ್ಯಕ್ಕೆ ಕೊಡಬರುವದಿಲ್ಲವಾಗಿ ಉತ್ಸವ ಚಾಲಕರ ಅಭಿಪ್ರಾಯವಾಗಿದೆ. ಬಾದಶಹರ ಆಲೋಚನೆ ಪಡೆದು ಈ ಅಭಿಪ್ರಾಯ ತೋರುವದಾಗಿ ಲೋಕವಾರ್ತೆ. ಪ್ರಾಂತಿಕ ಸರಕಾರಗಳಿಗೆ ಈ ನಿಧಿಯಿಂದ ಸಿಗುವ ರಕಮನ್ನು ಪ್ರಾಂತಿಕ ಸರಕಾರಗಳು ಇಷ್ಟವಿದ್ದಲ್ಲಿ ಈ ನಿಧಿಗೆ ಕೊಡಬಹುದಾಗಿಯೂ ಸೂಚನೆ ಬಂದಿದೆ. ಬ್ರಿಟಿಶ ಜನಾಂಗದವರು ಅಂತಃಕರಣಪೂರ್ವಕವಾಗಿ ಸಂಕಟ ನಿವಾರಣೆಯ ಕಾರ್ಯದಲ್ಲಿ ಪ್ರಯತ್ನ ಮಾಡುವರಾಗಿ 'ಲಂಡನ್ ಟೈಮ್ಸ' ಪತ್ರಿಕೆಯ ಅಂಬೋಣ. ಅಮೇರಿಕೆಯ ಅಧ್ಯಕ್ಷರಾದ ರೂಝವೆಲ್ಟರವರೂ ಸಹಾನುಭೂತಿಯನ್ನು ಪ್ರಕಟಿಸಿದ್ದಾರೆ. ಬ್ರಿಟಿಶ ಸರಕಾರವಾಗಲಿ, ಅಮೇರಿಕೆಯ

[ಮುಂದೆ ೧೧ನೇ ಪಾನು ನೋಡಿರಿ.]

THE INDIAN MERCANTILE INSURANCE CO. LTD.,

BOMBAY.

(Established in 1907)

A Solid and purely Indian Life Office which has substantial growth under the Chairmanship of the late Sir Munmohandas Ramji, Kt.

WANTED Energetic & Influential Agents and experienced Organisers, both on commission & pay for the Karnatak Districts.

For particulars apply to:-

G. Yellapurkar & Sons,
Chief Agents for Karnatak,
Market Square, KARWAR.

ಇಂಡಿಯನ್ ಮರ್ಕಂಟೈಲ ಇನ್ಶೂರನ್ಸ ಕಂಪನಿ, ಲಿಮಿಟೆಡ್,

ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು.

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿಹೊಂದಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಹೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ತಲಬು ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆ ಪೇಟೆ, ಕಾರವಾರ.

ಕಾನಡಾವೃತ್ತ

ಮಿತಿ ಯುವ ಸಂ। ಜ್ಯೇಷ್ಠ ಶು। ೯ಮಿ, ಸೋಮವಾರ

ಸ್ಕೂಲ ಬೋರ್ಡ್ಸ.

ಪ್ರಾಥಮಿಕ ಶಿಕ್ಷಣದ ವಿಷಯ್ಕ ಸರಕಾರದ ಆಲೋಚನೆಯೇನೆಂದು ನಮಗೆ ತಿಳಿಯದ ಮಾತು. ಪ್ರಾಥಮಿಕ ಶಾಲೆಗಳನ್ನು ಸ್ಕೂಲ ಬೋರ್ಡಿಗೆ ಒಪ್ಪಿಸಿದೊಡನೆ ಲೋಕಶಿಕ್ಷಣದ ಸರಕಾರದ ಕರ್ತವ್ಯವು ಪರಿಸಮಾಪ್ತಿಯಾಯಿತೆಂದು ಯಾರೂ ಎಣಿಸಲಾರರು. ಜನರಿಗೆ ಪ್ರಾಥಮಿಕ ಶಿಕ್ಷಣವನ್ನು ಕೊಟ್ಟು ಪ್ರಜಾಕಲ್ಯಾಣ ಮಾಡುವದು ಸರಕಾರದ ಮುಖ್ಯ ಕರ್ತವ್ಯವಿದೆ. ಆ ಕರ್ತವ್ಯದೊಳಗಿಂದ ಸರಕಾರವು ಒಮ್ಮೆಲೆ ಪಾರಾಗಲಾರದು. ಮುಂಬಯಿ ಸರಕಾರವು ೧೯೩೩-೩೪ನೇ ಸರಕಾರಿ ರಿಪೋರ್ಟಿನಲ್ಲಿ, ಸ್ಕೂಲ ಬೋರ್ಡುಗಳು ಸರಕಾರಿ ದ್ರವ್ಯಸಹಾಯದ ನಿರೀಕ್ಷೆ ಮಾಡದೆ ಶಾಲೆಗಳನ್ನು ಸ್ಥಾಪಿಸಿ ಲೋಕಶಿಕ್ಷಣ ಕಾರ್ಯವನ್ನು ಪುರಸ್ಕರಿಸಬೇಕೆಂದು ಅಪ್ಪಣೆ ಮಾಡುತ್ತದೆ. ೫೦೦ ಲೋಕಸಂಖ್ಯೆಗೆ ಮಿಕ್ಕಿದ ಪ್ರತಿಯೊಂದು ಗ್ರಾಮದಲ್ಲಿ ಒಂದು ಶಾಲೆ ಇರಬೇಕೆಂದು ಮುಂಬಯಿ ಸರಕಾರದ ಉಪದೇಶ. ಅಂಥ ೩ ಸಾವಿರ ಗ್ರಾಮಗಳಲ್ಲಿ ಈಗ ಶಾಲೆಗಳಿಲ್ಲವಾಗಿಯೂ ಮುಂಬಯಿ ಸರಕಾರವು ನಮೂದಿಸಿ ಆ ಗ್ರಾಮಗಳಲ್ಲೆಲ್ಲ ಶಾಲೆಗಳನ್ನು ತೆರೆಯಿಸುವಂತೆ ಸರಕಾರವು ಅಪ್ಪಣೆ ಮಾಡುತ್ತಿದೆ. ಇದರ ಅರ್ಥವೇ ನಮಗೆ ಹೊಳೆಯದು. ಪ್ರಾಥಮಿಕ ಶಾಲೆಗಳನ್ನು ಸ್ಕೂಲ ಬೋರ್ಡಿಗೆ ಒಪ್ಪಿಸಿದಂದಿನಿಂದ ಸರಕಾರವು ಒಂದಿಲ್ಲೊಂದು ನೆವ ಮಾಡಿ ದ್ರವ್ಯಸಹಾಯವನ್ನು ಕತ್ತರಿಸಿತು. ಹುಡುಗರ ಸಂಖ್ಯೆ ಕಡಿಮೆಯೆಂದು ಕೆಲ ಗ್ರಾಂಟು ಕತ್ತರಿ, ಆಫೀಸಿನ ಖರ್ಚಿಗೆ ಕತ್ತರಿ, ಡೆಬಿಟಮ್ ಲ್ಯಾಸೆಂದು ಕಲವು ರಕಮು ಕತ್ತರಿ, ಹೀಗೆ ರಕಮು ಕತ್ತರಿಸಿಹೋದಾಗ್ಯೂ ಸ್ಕೂಲ ಬೋರ್ಡುಗಳು ಹೇಗೂ ಮಾಡಿ ಇದ್ದ ಶಾಲೆಗಳನ್ನು ಕಾದುಕೊಂಡಿವೆ. ಶಿಕ್ಷಣ ಪ್ರಸಾರ ಮಾಡಲು ಹಣ ಒದಗುವದಂತಿರಲಿ, ಸರಕಾರದ ಕತ್ತರಿ ಬಿದ್ದ ರಕಮುಗಳನ್ನು ಒದಗಿಸಿಕೊಂಡು ಶಾಲೆಗಳನ್ನು ನಡಿಸಿದರೆ ಸಾಕಾಗಿದೆ. ಇಂಥಲ್ಲಿ ಹೊಸ ಹೊಸ ಶಾಲೆಗಳನ್ನು ಸರಕಾರದ ದ್ರವ್ಯಸಹಾಯದ ಅಪೇಕ್ಷೆ ಮಾಡದೆ, ತೆರೆಯಿಸುವ ಬಗೆ ಹೇಗೆ? ಸ್ಕೂಲ ಬೋರ್ಡುಗಳು ದ್ರವ್ಯಾನುಕೂಲತೆಯನ್ನು ಹೇಗೆ ಮಾಡಿಕೊಳ್ಳಬೇಕು? ಶಾಲಾ ಇಮಾರತುಗಳನ್ನು ಕಟ್ಟಿಸುವ ಬಗೆ ಹೇಗೆ? ಶಿಕ್ಷಕರನ್ನು ನೇಮಿಸಿಕೊಳ್ಳುವ ಬಗೆ ಹೇಗೆ? ಸರಕಾರದ ದ್ರವ್ಯಸಹಾಯದ ಅಪೇಕ್ಷೆ ಮಾಡಬಾರದೇನೋ ನಿಜ. ಲೋಕಶಿಕ್ಷಣಕ್ಕಾಗಿ ಹಣ ಕೊಡಲು ಸರಕಾರಕ್ಕೆ ತೊಂದರೆ ಎಂಬ ಮಾತೂ ನಿಜ. ಆದರೆ ಬೋರ್ಡುಗಳು ಖರ್ಚನ್ನು ಹೇಗೆ ಪೂರೈಸಿಕೊಳ್ಳಬೇಕು? ಅದನ್ನಾದರೂ ಸರಕಾರವು ಹೇಳಿದ್ದರೆ ಬೋರ್ಡುಗಳಿಗೆ ಮುಂದಿನ ಹಾದಿ ಒಳಿತಾಗುತ್ತಿತ್ತು. ೧೯೩೪ನೇ ಇಸ್ವಿಯಲ್ಲಿ ೧೭೭೧೬ ಶಾಲೆಗಳಿದ್ದವು. ಅವುಗಳಲ್ಲಿ ೧೧೬೯೦೦ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಅಂತು ಖರ್ಚು ರೂ. ೧೯೯೩೮೦೦೦ ಇಂತು. ಸರಕಾರವು ೧೧೭೬೮೦೦೦ ರೂಪಾಯಿ ಕೊಟ್ಟಿತು. ಉಳಿದ ಹಣ ಸ್ಕೂಲ ಬೋರ್ಡು ಕೊಟ್ಟಿತ್ತು. ಈಗ ೩ ಸಾವಿರ ಗ್ರಾಮಗಳಲ್ಲಿ ಶಾಲೆಗಳನ್ನು ಸ್ಥಾಪಿಸಬೇಕೆಂದರೆ ಸರಾಸರಿ ೩೦ ಲಕ್ಷ ರೂಪಾಯಿಗಳಾದರೂ ಬೇಕು. ಅದನ್ನು ಹುಟ್ಟಿಸುವ ಬಗೆ ಹೇಗೆ? ಸವ ಥರ ಸರಕಾರವು ತರತರದಿಂದ ಕರಗಳನ್ನು ಹೇರಿ ರಾಜಾರ್ಥ ವಸೂಲ ಮಾಡುತ್ತಿರುವಾಗ ಅವಕ್ಕೆ ಹಣದ ತೊಂದರೆಯಾದ ಬಳಿಕ ಸ್ಕೂಲ ಬೋರ್ಡುಗಳು ಹಣ ಹುಟ್ಟಿಸುವದೆಂತು? ಲೋಕದಲ್ಲಿ ಒಗೆಒಗೆಯ ವೇಷ ಧರಿಸಬಹುದು, ಆದರೆ ಹಣದ ಪೂರೈಕೆಗೆ ಪ್ರತ್ಯಕ್ಷ ಹಣವೇ ಬೇಕು! ಹಣದ ವೇಷದಿಂದ ಕಾರ್ಯಭಾಗವಾಗ ಮದಿಲ್ಲ. ಇಂಥ ಪ್ರಸಕ್ತಿಯಲ್ಲಿ ಲೋಕಶಿಕ್ಷಣ ಪ್ರಸಾರದ ವೇದಾಂತವನ್ನು ಸ್ಕೂಲ ಬೋರ್ಡುಗಳಿಗೆ ಹೇಳಿದೊಡನೆ ಸರಕಾರದ ಪ್ರಜಾಶಿಕ್ಷಣ ಕಾರ್ಯ ಸಮಾಪ್ತಿಯಾಗುತ್ತದೆಂದು ಅಧಿಕಾರಿಗಳ ತಿಳುವಳಿಕೆಯಿದ್ದರೆ ಆ ಮಾತು ಬೇರೆ. ಪ್ರಾಥಮಿಕ ಶಿಕ್ಷಕರಿಗೂ ಸ್ಕೂಲ ಬೋರ್ಡಿನ ಆಡಳಿತೆಯಿಂದ ಸುಖವಿಲ್ಲ. ಸ್ಕೂಲ ಬೋರ್ಡಿನ ಘಟನೆಯಂತೆ ಸಭಾಸದರು ದವರನೇಕರಿಗೆ ಶಿಕ್ಷಣದ ಗ್ರಹಿಕೆ ಇಲ್ಲ. ಶಿಕ್ಷಕರ ಯೋಗ್ಯತೆಯು ತಿಳಿವಿಲ್ಲ. ಇಂಥ ಯೋಗ್ಯತಾಹೀನ ಜನರ ಮರ್ಜಿ ಕಾಯುವ ದುರ್ಧರ ಪ್ರಸಂಗವು ಪ್ರಾಥಮಿಕ ಶಿಕ್ಷಕರ ಮೇಲೆ ಒದಗಿದೆ. ಹೀಗಾಗಿ ಸಂಬಳದಲ್ಲಿ ಕತ್ತರಿ. ಸರಕಾರ ಕತ್ತರಿ ಬೇರೆ, ಬೋರ್ಡು ಕತ್ತರಿ ಬೇರೆ. ಈ ಎರಡೂ ಕತ್ತರಿಗಳೊಳಗಿಂದ ಪಾರಾಗಿ ಕೈಸೇರಿದ ಸಂಬಳವನ್ನು ಪ್ರಾಥಮಿಕ ಶಿಕ್ಷಕರು ಪಡೆದು ನಿರ್ವಾಹ ಸಾಗಿಸಬೇಕು. ಸರಕಾರದ ನೌಕರರಿದ್ದೂ, ಬೋರ್ಡಿನ ಲೋಕಶಾಹಿಗಳೊಳಗೆ ಸಿಲುಕಿ ಒಡ ಪ್ರಾಥಮಿಕ ಶಿಕ್ಷಕರು ಪರಿತಾಪಡುತ್ತಿದ್ದಾರೆ. ಸರಕಾರದ ಕಡೆ ದೂರಿಕೊಂಡರೆ ಬೋರ್ಡಿಗೆ ಬೊಟ್ಟು, ಬೋರ್ಡಿನ ಕಡೆ ದೂರಿಕೊಂಡರೆ ಸರಕಾರದ ಕಡೆ ಬೊಟ್ಟು! ಅತ್ತ ಸ್ವರ್ಗವೂ ಇಲ್ಲ, ಇತ್ತ ನರಕವೂ ಇಲ್ಲ! ಇಂಥ ಕಠಿಣ ಪರಿಸ್ಥಿತಿಯಲ್ಲಿ ಪ್ರಾಥಮಿಕ ಶಿಕ್ಷಕರು ಸಲ್ಲುತ್ತಿದ್ದಾರೆ. ಸ್ಕೂಲ ಬೋರ್ಡಿನಿಂದ ಲೋಕಶಿಕ್ಷಣದ ಕಾರ್ಯವಾಗಲಿ, ಶಿಕ್ಷಕರ ಸ್ಥಿತಿಯಾಗಲಿ ಸುಧಾರಿಸಲಿಲ್ಲ. ಅಧಿಕಾರಾರೂಢರಾದ ಯೋಗ್ಯತಾಹೀನ ಸಭಾಸದರ ಮರ್ಜಿ ಕಾಯ್ದು ಪ್ರಾಥಮಿಕ ಶಿಕ್ಷಕರು ಗತಿಗೆಟ್ಟಿರುವದರಿಂದ ಪ್ರಾಥಮಿಕ ಶಿಕ್ಷಣವು ಫಲಿಸುವದಿಲ್ಲ. ಶಿಕ್ಷಕರು ಸಮಾಧಾನದಿಂದಿದ್ದರೆ, ಪ್ರಸನ್ನಚಿತ್ತದಿಂದಿದ್ದರೆ ವಿದ್ಯಾದಾನ ಸಾರ್ಥಕವಾಗುತ್ತದೆ. ವಿದ್ಯಾದಾನವು ಪವಿತ್ರವಾದದ್ದು. ಅದಕ್ಕಾಗಿ ಪವಿತ್ರ ಸ್ಥಿತಿಯೇ ಅವಶ್ಯವಾದದ್ದು. ಹಗಲಿರುಳು ಗೂಣಗುಟ್ಟುವ, ಹೊಟ್ಟೆಪಾಡಿಗಾಗಿ ದಿನಾ ಪೇಚಾಡುತ್ತಿರುವ ಯೋಗ್ಯತಾಹೀನರ ಮರ್ಜಿ ಕಾಯುತ್ತಿರುವ ಶಿಕ್ಷಕರಿಂದ ಪವಿತ್ರ ವಿದ್ಯಾದಾನದ ಕರ್ತವ್ಯವು ಸಂಕಲ್ಪದಂತೆ ಈಡೇರದು. ವಿದ್ಯಾರ್ಥಿಗಳು ಇಂಥ ಗುರುಗಳಿಂದ ತಕ್ಕ ಸಂಸ್ಕಾರ ಪಡೆಯರು. ವಿದ್ಯಾರ್ಥಿ ದೆಸೆಯು ಮಾನವನ ಜೀವನದಲ್ಲಿ ಅತ್ಯಂತ ಮಹತ್ವವಾದದ್ದು. ಆ ಕಾಲದಲ್ಲಿ ಶೀಲವಂತ ಪುರುಷರೇ ಗುರುಸ್ಥಾನದಲ್ಲಿರಬೇಕು. ಶೀಲವಂತರನ್ನಾಗಿ ಅವರನ್ನಿಡಲು ಸರಕಾರದ ವ್ಯವಸ್ಥೆ ಇರಬೇಕು. ಕಂಡ-ಕಂಡವರಿಗೆ ಹೊಟ್ಟೆಪಾಡಿಗಾಗಿ ಕಂಡ-ಕಂಡಲ್ಲಿ ಡೊಗ್ಗು ಸಲಾಮು ಹೊಡೆಯಬೇಕಾದ ಈಗಿನ ಸ್ಕೂಲ ಬೋರ್ಡ ಆಡಳಿತೆಯಿಂದ ಲೋಕಶಿಕ್ಷಣದ ಕಾರ್ಯಭಾಗವಾಗದು. ಸ್ಕೂಲ ಬೋರ್ಡುಗಳ ಕಡೆ ಲೋಕಶಿಕ್ಷಣವನ್ನು ಈಗಿನ ಸ್ಥಿತಿಯಲ್ಲಿ ಒಪ್ಪಿಸುವದು ಸಹ ಸಾಧ್ಯವಿಲ್ಲ. ಸರಕಾರಕ್ಕೆ ಸಹ ಈ ಸಂಗತಿ ತಿಳಿದಿದೆ. ಆದರಿಂದ ಶಾಲೆಗಳನ್ನು ಒಂದರ ಹಿಂದೊಂದು ತೆರೆಯಿಸುತ್ತ ಹೋಗುವದಕ್ಕಿಂತ ಇದ್ದ ಶಾಲೆಗಳನ್ನು ಭದ್ರಪಡಿಸಬೇಕಾಗಿ ಸರಕಾರವು ಸ್ಕೂಲ ಬೋರ್ಡುಗಳಿಗೆ ಆಜ್ಞಾಪಿಸಿದೆ. ಇದರ ಅರ್ಥ ಸ್ಪಷ್ಟವಿದೆ. ಸ್ಕೂಲ ಬೋರ್ಡಿನ ಆಡಳಿತೆಯಲ್ಲಿ ಲೋಕಶಿಕ್ಷಣದ ವಿಸ್ತಾರವಾಗಲಿಲ್ಲ. ಇದ್ದ ಶಾಲೆ ಕಂಗೆಟ್ಟವು. ಸ್ಕೂಲ ಬೋರ್ಡುಗಳು ಲೋಕಶಿಕ್ಷಣ ನಡಿಸಲು ಅಸಮರ್ಥವಾಗಿವೆಂದು ಮತ್ತೂ ಹೇಳಬೇಕೇನು? ವರ್ಗಾವರ್ಗಿಯ ಹೊಲಸು, ಬೇರೆ ಬೇರೆ ಜಾತಿಯ ಪಕ್ಷಗಳ ಸಭಾಸದರೊಳಗಿನ ಗದ್ದಲ, ಅಧಿಕಾರಾರೂಢ ಪಕ್ಷದ ಬಲಾತ್ಕಾರ ಇವನ್ನೆಲ್ಲ ಎಲ್ಲರೂ ಬಲ್ಲಾದ ವಿಷಯ. ಪ್ರಾಥಮಿಕ ಶಿಕ್ಷಕರಂತು ಸ್ವಾನುಭವದಿಂದ ಈ ಕಷ್ಟಗಳನ್ನು ಹೇಳಬಲ್ಲರು. ಲೋಕೋಪಕಾರದ ವೇಷ ಬರಕೊಂಡು ಸಭಾಸದರಾದ ಮಹನೀಯರು ನೀತಿಭ್ರಷ್ಟ ವ್ಯಾಪಾರಗಳನ್ನು ಸಹ ಕೈಕೊಳ್ಳುತ್ತಾರಾಗಿ ಅಲ್ಲಲ್ಲಿ ಲೋಕವಾರ್ತೆಯಿದೆ. ಪ್ರಾಥಮಿಕ ಶಿಕ್ಷಕರ ಕ್ಷುದ್ರ ಸ್ವಾರ್ಥ ಬುದ್ಧಿಯಿಂದ ಅಧಿಕಾರಾರೂಢ ಸಭಾಸದರಿಗೆ ಪತಿತರಾಗಲು ಮೋಹವಾಗುತ್ತದೆ. ಸ್ಕೂಲ ಬೋರ್ಡುಗಳ ಹೊಲಸನ್ನು ಹೇಳಿ ತೀರದು. ಸರಕಾರವು ಯುಕ್ತಕಂಡಲ್ಲಿ ಚಿಕ್ಕ ಮಂಡಳವನ್ನೊಂದು ನೇಮಿಸಿ ಚೌಕಶಿ ಮಾಡಿದರೆ ಬಕ ವೇಷಧಾರಿ ದೊಡ್ಡ ದೊಡ್ಡ ಮಹಾನುಭಾವರು ನಡಿಸಿದ ನೀತಿಭ್ರಷ್ಟ ಪ್ರಕಾರಗಳೆಲ್ಲ ಬೈಲಿಗೆ ಬಂದಾವು. ಇವಕ್ಕೆಲ್ಲ ನಾವು ಸಭಾಸದರಿಗೆ ಜೋಕೆದಾರರಾಗಿ ಹಿಡಿಯುವದಿಲ್ಲ. ಸ್ಕೂಲ ಬೋರ್ಡಿನ ಘಟನೆಯ ದೋಷವಿದು. ಅಲ್ಪಜನರಿಗೆ ಸ್ಕೂಲ ಬೋರ್ಡುಗಳಲ್ಲಿ ಸೇರಿಕೊಂಡು ಒಮ್ಮಿಂದೊಮ್ಮೆ ಬಲದಿಂದ ಪಾರುಪತ್ಯ ನಡಿಸಲು ಅಧಿಕಾರ ದೊರೆಯುತ್ತದೆ. ಐಶ್ವರ್ಯ ಬಂದ ಅಲ್ಪ ಜನರು ನಸಕು ಹರಿಯುವ ತನಕ ನಿರೀಕ್ಷಣ ಮಾಡದೆ ಮಧ್ಯರಾತ್ರಿಯಲ್ಲಿಯೇ ಕೊಡೆ ಹಿಡಿಸಿಕೊಂಡು ಏಕಚಕ್ರಾಧಿಪತ್ಯವನ್ನು ಲೋಕದಲ್ಲಿ ಮೆರಿಸುತ್ತಾರೆಂಬ ಸಂಗತಿ ಸರ್ವಶ್ರುತವಾದುದು. ಲೋಕಶಿಕ್ಷಣದ ವಿಸ್ತಾರ ಮಾಡುವ ಸಾಮರ್ಥ್ಯ ಸ್ಕೂಲ ಬೋರ್ಡಿಗಿಲ್ಲ, ಶಿಕ್ಷಕರ ಸ್ಥಿತಿ ಸುಧಾರಿಸುವ ಶಕ್ತಿಯೂ ಅವಕ್ಕಿಲ್ಲ, ಶಿಕ್ಷಣದ ಗುಣ ಬೆಳಸಲಿಕ್ಕೂ ಬೋರ್ಡುಗಳಿಗೆ ಸಾಧ್ಯವಿಲ್ಲ, ಸರಕಾರದ ಕಡೆ ಸಂಗ್ರಾಮ ಮಾಡುವ ಸ್ವಾತ್ರಂತ್ರ್ಯವೂ ಅವಕ್ಕಿಲ್ಲ. ಆದರಿಂದ ಪ್ರಾಥಮಿಕ ಶಿಕ್ಷಕರಿಗೆ ವರ್ಗಾವರ್ಗಿಯ ನೆವದಿಂದ ಸ್ಕೂಲ ಬೋರ್ಡುಗಳು ದಣಿಸುತ್ತಿವೆ. ಜಮಾ-ಖರ್ಚ ಬಾರಿಯಿಗೂಡ ಮದಿಲ್ಲೆಂದು ಸಂಬಳವನ್ನು ಕತ್ತರಿಸುತ್ತಿವೆ. ಶಿಕ್ಷಕರ ಸಂಬಳವನ್ನು ಕತ್ತರಿಸಿ ಜಮಾ-ಖರ್ಚವನ್ನು ಬಾರಿಯಿಗೂಡಿಸಿ ತಮ್ಮ ಪ್ರದೇಶದಲ್ಲಿ ಲೋಕಶಿಕ್ಷಣ ನಡಿಸಿದ ಶ್ರೇಯಸ್ಸು ಪಡೆಯುತ್ತಿವೆ. ಸಭಾಸದರು ತಮ್ಮ ಪ್ರವಾಸ ಭತ್ತೆಗೆ ಕತ್ತರಿ ಹಾಕಿಕೊಳ್ಳಲೊಲ್ಲರು. ಇಂಥ ನಾಲಾಯಕ ಬೋರ್ಡುಗಳಿಗೆ ಸರಕಾರವು ಲೋಕಶಿಕ್ಷಣದ ವೇದಾಂತ ಹೇಳಿ ಪ್ರಯೋಜನವಿಲ್ಲ. ಲೋಕಶಿಕ್ಷಣವು ಸರಕಾರದ ಆದ್ಯ

NOTICE.

THE SIRSI ELECTRIC LICENSE, 1935.

The public are hereby informed that the undersigned has applied to the Government of Bombay for license to supply electric energy to the public of Sirsi The copy of the draft license can be had from the undersigned on payment of annas 8/— Copy of the plan can be seen at the Sirsi Municipal office or in the the office of the Laxmi Rice Mill, Sirsi. All those who have any representation to make should do so in writing to the Secretary to the Government, P. W. D., Bombay, within three months, from the date of publication

Address —
THE LAXMI RICE MILL,
SIRSI N KANARA

Anant Subrao Kasarkod,
Managing Proprietor,
Sirsi Electric Supply Co

DRAFT.

THE SIRSI ELECTRIC LICENSE, 1935

License for the supply of electrical energy granted by the Government of Bombay under the Indian Electricity Act, 1910.

—o—

License. License is hereby granted to Anant Subrao Kasarkod, L. M. E., of Sirsi to supply electrical energy in the area, with the powers, and upon the terms and conditions all specified below

1. Short Title. This License may be cited as "The Sirsi Electric License, 1935"

2. Interpretation. The several words, terms and expressions which have been defined in the Indian Electricity Act, 1910 or the Rules made thereunder, shall have in this license the same respective meanings, provided that:—

(1) The "Rules" shall mean the Rules made under the act,

(2) The expression "**The Licensee**" shall mean and include the said Mr. A S. Kasarkod, L M E, and his permitted assigns,

(3) The expression "Deposited Map" shall mean the plan of the area of supply as herein-after specified, which is deposited with Government, in pursuance of the rules, which plan is signed, for the purpose of identification, by the Joint-Secretary to the Government of Bombay in the Public works Department and by the licensee.

(4) The expression "the commencement of this license" shall mean the date of the notification by the Government of Bombay in the Bombay Government Gazette by whom this license is granted and

(5) the term "Government" shall mean the Government of Bombay.

3. Security. (1) The period within which the licensee shall show under sub-clause (*a*) of clause I of the Schedule to the Act that he is in a position fully to discharge the duties and obligations imposed upon him by the license throughout the area of supply, shall, unless otherwise ordered by Government under clause (*b*) of sub section 3 of section 4 of the Act, be six months from the commencement of this license

(2) Unless otherwise ordered by Government under clause (*b*) of sub section (3) of section 4 of the Act, the sum which the licensee shall deposit or secure to the satisfaction of Government under sub clause (*b*) of clause I of the Schedule of the Act, shall be Rupees two thousand, and the period within which such sum shall be deposited or secured shall be three months from the commencement of this license

4. Area of Supply. The area whithin which the supply of energy is authorised by this license hereinafter referred to as "the area of supply", shall be the whole of the area comprised within the Municipal limits of the Sirsi Municipality, shown as bounded by a green line on the Deposited Map

5 Area of Compulsory Supply. (1) The licensee shall, within a period of eighteen months from the commencement of this license execute works to the satisfaction of Government for the purpose of a full and continuous supply of energy throughout the streets or parts of streets as are mentioned below and coloured Red on the Deposited Map, and also such additional streets or parts of streets as Government may, after consultation with the licensee, direct, within six months from the commencement of this license.-

1. Chanpattan Bazar Road from the Post Office to the Veterinary Dispensary

3 Library Road from Sub Judge's court to the Petrol pump

3 Shimpi Galli from Chhapatti in Bazar junction to the Vithoba Temple

4 Rayar Pethe from the Municipal Office to the Vishnu Temple

5 Basti Galli from Alur building to Sevikei

6 Nadig Galli from Chinigars Vas [illegible] to the Maruti Temple

(2) In the case of any difference between the description of the street mentioned in sub clause (1) above and that indicated on the Deposited Map the latter shall prevail

(3) The licensee shall commence to secure the works aforesaid within six months from the commencement of this License and shall commence the supply of energy within eighteen months

(4) The licensee shall every three months submit reports to Government and also the Electrical Engineer to Government specifying the progress made up to date from the commencement of the License in the execution of the work in the compulsory area

5 Revocation of License If the licensee fails to comply with the provision of sub clauses (1) (3) or (4) of this clause or if in the opinion of Government the progress made during any portion of the said period of eighteen months is unsatisfactory the license shall be liable to be revoked and the security furnished under sub clause (2) of clause 3 above forfeited

6. Purposes of supply (1) Subject to the provisions of this license and the Act and the Rules the licensee shall be entitled during the continuance of this license to supply energy within the area of supply for all purposes and in bulk and to other licensees for their own purposes —

Provided that no supply of energy shall be commenced to be given by the licensee either in retail to any owner or occupier of private premises or in bulk to a distributing licensee unless and until the licensee's works have been inspected by the Government Electrical Inspector and passed by him in writing and until Government have approved

(a) The form of requisition to be made by such owner or occupier or distributing licensee for such supply of energy

(b) the form of written contract or agreement with the licensee to take a supply of energy to be executed or entered into such by owner or occupier or distributing licensee and

(c) the amounts of all miscellaneous charges which the licensee proposes to make against such owner or occupier or distributing licensee as incidental to, and in connection with such supply

(2) Clauses V VI, VII, IX X and XI of the Schedule to the Act shall wherever necessary be read as expressly added to or varied to the extent set out in the proviso to sub-clause (1) of this clause

(3) The licensee shall not supply energy to any premises unless the owner or occupier of such premises shall have satisfied the licensee that all works including repairs relating to electrical wires fitting and apparatus on such premises have been carried out by a licensed electrical contractor and under the supervision of a Competency certificate holder under the rules issued by Government in this behalf or by such other person as may be authorised to carry out such work under rule No 40—A of the rules and clause VI of the Schedule to the Act shall be deemed to have been modified accordingly

7 System of Supply (1) The system of supply of energy which may be adopted for the purpose of this license shall be the following —

I Alternating Current.

Single or three phase, three or four wire periodically 50 cycles per second The pressure of supply at the consumer's terminals shall be as under

(a) 230 volts between each phase and neutral for general purposes viz lights, fans, heaters etc

(b) 400 volts between phase for motive power purposes and purposes other than those specified in (a) above and—

(c) Any pressure upto 6 600 volts for feeders and for supply to any large consumer for power purposes

or

II Direct Current.

For general purposes, viz lights fans heaters etc

(a) A continuous current low pressure supply at the consumer's terminals at a pressure of 220 230 volts between one of the outers and the middle conductor of a three-wire system the middle conductor being connected to earth at the generating station but insulated at all other parts or

(b) A continuous current low pressure supply at a pressure of 220 230 volts between the conductors of a two wire system

For Power Purposes. A continuous current medium pressure supply at a pressure of 440/460 volts between the outers

(1) Provided always that the licensee may from time to time with the previous consent in writing of and subject to such limitations and conditions as shall be prescribed in writing by Government adopt any other system of supply for the purpose of this license and that no high tension mains shall be brought within or near the populated areas without the specific sanction of Government in each case

(2) The feeders distributing mains and service lines shall be overhead provided that wherever and whenever specifically permitted or required to do so in writing by Government, such feeders distributing mains or service lines shall be laid underground

Provided that—

(*a*) No work or works shall be commenced by the licensee unless and until the method of construction shall have been previously approved in writing by the Electrical Engineer to Government

(*b*) Where overhead mains are used they shall be nowhere at a height less than 20 feet from the ground level of the streets at all crossings & in all the routes where Raths or Laboots or similar religious processions are likely to pass In case of dispute such routes and heights shall be determined by the District Magistrate

(*c*) In narrow lanes or street the posts shall be placed on the extreme edge of the lane or street and a special construction to be approved by the Electrical Engineer to Government shall be adopted to keep the wires clear of every building

(*d*) Nothing in this license shall authorise the licensee to use overhead main at any higher pressure than the medium [illegible] without the written sanction of Government in each case and subject to any conditions or limitations which Government may prescribe

(3) Due precautions shall be taken to avoid any possible interference with the adjacent telephone or telegraph circuits due to inductive method The electric wires shall be suitably transposed where necessary

(4) For the purpose of Rule 61 of the Rules the maximum wind pressure shall be taken as 15 pounds per square foot

8 Generating, Receiving Transforming & Distributing Stations

(1) The Generating Receiving Transforming and Distributing stations shall be within the area of supply But the licensee shall be at liberty either to generate energy to satisfy the whole or any part of their requirements or to buy the whole or any part of the energy they require for distribution and resell the same within the area of supply When energy is bought from outside the area of supply the licensee may if necessary lay down or place electric supply lines in accordance with the Act and the Rules for the conveyance and transmission of energy from the point of bulk supply outside the area of supply to the boundary of the area of supply

(2) Properly qualified men for electricity shall be employed in the generating station, and the whole undertaking shall be under the charge of a fully qualified Electrical Engineer with previous experience

9 Rates Limits of prices to be charged The prices to be charged by the licensee for energy supplied by him shall not exceed [illegible] below or in case of a method of charge approved by Government under Clause (*c*) of sub section (3) of section 23 of the Act such maxima as Government may fix on approving the method

(1) Where energy is supplied through meter For General Supply Purposes—

(*a*) For lights and fans a rate of ans 8 per unit

(*b*) For Heating and Refrigerating Purposes — a rate of annas 3 per unit

(2) For Motive Power Purposes and purposes other than those provided for in items 1 (*a*) & (*b*) a Rate of Rs 3/ per K W per month plus annas 3 per unit

Provided that the total consumption of energy in all the Government Buildings in the area of supply shall be treated as a single bulk supply and a rebate of 1 per cent shall be granted for every 250 units consumed per month upto a maximum of 35 per cent

Note The term unit occuring in this sub clause shall mean the energy contained in a current of 1 000 Ampered flowing under an Electric Motive force of 1 volt during 1 hour

(2) A Minimum charge of **Rs** 3/ per month in the cases referred to in items (*a*) and (*b*) of sub clause 1 above shall be charged exclusive of meter rent and irrespective of whether energy of that value has been consumed or not

(3) **Meter Rent** The rent to be charged for meters shall not exceed As 8 per month for a D C meter or a single phase A C meter,

and

Re 1/ per month for a poly phase A C meter

(4) Where energy is not supplied through meter, a fixed rate of Rs. 1-8-0 per mensem shall be charged for a 20 watt light and a proportionate rate for every additional 20 watts or part there-of burning for not more than 6 hours per night i.e. from 6 P M to 12 midnight.

(5) In the case of large consumers, contracts may be made for fixed period at such rates not exceeding the rates specified in sub-clause (1) of this clause as may be agreed upon.

(6) Without prejudice to anything contained in the above clauses the licensee may at any time enter into a special contract with the Municipality of Sirsi for supply of energy to the Municipality for public lighting upon such terms and conditions and at such rates, not exceeding the maximum charges specified above, as may for the time being be mutually agreed upon.

10. Breaking up of Streets. The length of trenches to be opened on any street at any one time and the period for which they may remain open shall be determined from time to time by Government or the local authority by whom such streets are reparable.

11. Purchase of Undertaking. (1) The option of purchase given by Section (7) sub-section (1) of the Act shall be exercisable first on the expiration of 40 years from the commencement of this license & thereafter on the expiration of every subsequent period of 10 years therefrom. The percentage of the value of lands, buildings, works, materials and plant of the licensee referred to in sub-section (1) of section 7 of the Act which shall be added to such value under the second proviso to that sub-section on account of compulsory purchases, shall be 10%.

(2) In accordance with clause (*d*) (ii) of sub-section (2) of Section 3 of the Act, it is hereby declared that the generating station belonging to the licensee and used in connection with the undertaking, or where energy is bought from any other person or company, the receiving and distributing sub-stations used in conection with the undertaking shall form part of the undertaking for the purposes of purchase under Section 5 or Section 7 of the Act.

12. Assignment of the license. At any time after the commencement of this license the licensee may, with the previous consent in writing of Government, and subject to compliance with such conditions upon which such consent may be given, assign this license and transfer the whole of the undertaking in respect of which this license is granted (including all lands, buildings, works, materials and the plant of the licensee) to any individual or company formed or to be formed and registered in accordance with the law for the time being in force in British India or in Great Britain, under any enactment relating to Companies for the time being in force there, and having authority to take over the license and the said undertaking as the case may be and to exercise the power and perform the obligations given to or imposed upon the licensee under this license and the Act, and the Rules, and on such assignment and transfer the rights, powers, authorities, obligations and liabilittes of the licensee shall be exercisable by and shall attach to such individual or company formed or to be formed as aforesaid.

ANANT SUBRAO KASARKOD,
SIRSI.

Applicant.

Dated this 3rd day of June, One Thousand Nine-Hundred and Thirty Five.

— ಮಹಾತ್ಮಾ ಗಾಂಧಿಯವರು ಸಾಬರಮತಿ ಜೈಲಿನಲ್ಲಿರುವ ಗಡಿನಾಡಿನ ಗಾಂಧಿಯವರ ಭೆಟ್ಟಿ ತಕ್ಕೊಂಡರು. ಖಾನಸಾಹೇಬರು ಅಶಕ್ತರೂ, ಕ್ಷೀಣರೂ ಆಗಿದ್ದಾಗ್ಯೂ ಉಲ್ಹಾಸ ವೃತ್ತಿಯಿಂದಿರುತ್ತಾರಂತೆ.

— ಕ್ವೇಟ್ಟಾ (ಬಲುಚಿಸ್ತಾನ)ದಲ್ಲಿ ಭೂಕಂಪವಾಗಿ ದೊಡ್ಡ ಅನಾಹುತವಾಗಿದೆ. ೨೦ ಸಾವಿರ ಜನರು ಮರಣಪಟ್ಟಿರುವರಾಗಿ ತಿಳಿಯುತ್ತದೆ. ತಂತಿ-ಕಂಬಗಳೆಲ್ಲ ನಾಶವಾದ್ದರಿಂದ ಅಲೆಯಂಚೆಗಳಿಂದಲೇ ಸುದ್ದಿ ತಿಳಕೊಳ್ಳಬೇಕಾಗಿದೆ. ರೇಲ್ವೆ ಕಟ್ಟಡಗಳು ಬಿದ್ದಿವೆ. ರೇಲ್ವೆ ಮತ್ತು ಸಿವ್ಹಿಲ ಭಾಗವು ಸಮೂಲ ನಾಶವಾಗಿದೆ.

— ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ ಪರೀಕ್ಷೆಗೆ ಈ ವರ್ಷ ೨೦ ಸಾವಿರ ಜನರು ಕೂತಿದ್ದರು. ೭ ಸಾವಿರ ಮಂದಿ ಪಾಸಾಗಿದ್ದಾರೆ.

— ಬಂಗಾಲದೊಳಗಿನ ಸ್ಥಾನಬದ್ಧ ಕೈದಿಗಳ ಮಾಹಿತಿಯನ್ನು ಸಂಗ್ರಹಿಸಿ, ಅವರ ಸ್ಥಿತಿ-ಗತಿ ಬಗ್ಗೆ ವರದಿಯನ್ನೊಪ್ಪಿಸುವರೆ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನವರು ಶ್ರೀ| ಮೋಹನಲಾಲ ಸಕ್ಸೆನಾ ಇವರ ಅಧ್ಯಕ್ಷತೆಯಲ್ಲಿ ಒಂದು ಮಂಡಳವನ್ನು ನೇಮಿಸಿದ್ದಾರೆ. ಶ್ರೀ| ಸಕ್ಸೆನಾರವರು ಒಂದು ಪ್ರಕಟಣೆಯನ್ನು ಹೊರಡಿಸಿ, ಅಲ್ಲಲ್ಲಿಯ ಸ್ಥಾನಬದ್ಧ ಕೈದಿಗಳ ಬಗ್ಗೆ ತಮತಮಗಿರುವ ಮಾಹಿತಿಯನ್ನು ತಮ್ಮ ಕಡೆಗೆ ಕಳಿಸಿಕೊಡಬೇಕಾಗಿ ಸಾರ್ವಜನಿಕರಿಗೆ ಬಿನ್ನೈಸಿದ್ದರು. ಒಂದು ಪ್ರಶ್ನಾವಲಿಯನ್ನೂ ಅವರು ಪ್ರಕಟಿಸಿದ್ದರು. ಆದರೆ ತಾ. ೨೧ರ ತನಕ ಯಾರೂ ಮಾಹಿತಿ ಕಳಿಸಿಕೊಡಲಿಲ್ಲ. ಸರಕಾರದ ಭೀತಿಯಿಂದ ಜನರು ಮಾಹಿತಿ ಕೊಡಲು ಅಂಜಿರಬೇಕೆಂದು ಕಮಿಟಿಯವರ ಅಭಿಪ್ರಾಯವಾಗಿ ಅವರು ಈಗ ಬಂಗಾಲದಲ್ಲಿ ಸಂಚಾರ ಮಾಡಿ ಸ್ವತಃ ಮಾಹಿತಿ ಸಂಗ್ರಹ ಮಾಡಬೇಕೆಂದು ನಿರ್ಣಯಿಸಿದ್ದಾರೆ. ಆದರೆ ಕಮಿಟಿಯ ಕಾರ್ಯಕ್ಕೆ ಸರಕಾರವು ತಡೆಹಾಕುವದಾಗಿಯೂ, ಕಮಿಟಿಯ ವರದಿಯು ಹೊರಬೀಳುವಷ್ಟರಲ್ಲಿ ಅದನ್ನು ಜಪ್ತ ಮಾಡುವದಾಗಿಯೂ 'ಯುನೈಟೆಡ್ ಪ್ರೆಸ್' ವಾರ್ತಾ ಸಂಸ್ಥೆಗೆ ತಿಳಿದುಬಂದಿದೆಯಂತೆ. ಸರಕಾರದವರು ಕಮಿಟಿಯ ಮೆಂಬರರ ಪತ್ರವ್ಯವಹಾರವನ್ನು ತೆರೆದು ನೋಡುತ್ತಾರೆಂತಲೂ ಸುದ್ದಿ ಹಬ್ಬಿದೆ.

ಕರ್ತವ್ಯವು. ಸುಧಾರಿಸಿದ ರಾಷ್ಟ್ರವೆಂದು ಮೆರೆಯುವ ಬ್ರಿಟಿಶ ರಾಷ್ಟ್ರವಂತು ಈ ಕರ್ತವ್ಯವನ್ನು ಸ್ಕೂಲ ಬೋರ್ಡಿಗೆ ಹವಾಲೆ ಹಾಕಿ ಪಾರಾಗಲಾರದು. ಆದ ಕಾರಣ ಸರಕಾರವು ಪುನಃವಿಚಾರ ಮಾಡಿ ಸ್ಕೂಲ ಬೋರ್ಡುಗಳನ್ನು ರದ್ದುಪಡಿಸಿ ಲೋಕಶಿಕ್ಷಣವನ್ನು ಸ್ವಾಧೀನಪಡಿಸಿಕೊಳ್ಳುವದು ಲೇಸು. ಲೋಕಶಿಕ್ಷಣದ ವಿಸ್ತಾರವನ್ನು ಕೈಕೊಳ್ಳುವದು ಸ್ಕೂಲ ಬೋರ್ಡುಗಳಿಗೆ ಎಂದೂ ಸಾಧ್ಯವಾದ ಮಾತಲ್ಲ. ಇದ್ದ ಶಾಲೆಗಳು ಇದ್ದಂತೆ ಇರಗೊಡಬೇಕಾದರೆ ಸ್ಕೂಲ ಬೋರ್ಡುಗಳ ಆಡಳಿತೆ ತಪ್ಪಬೇಕು. ಇಲ್ಲದಿದ್ದರೆ ಇದ್ದ ಶಾಲೆಗಳು ಗಂಟುಗಟ್ಟಿ ಹೋಗುವವು. ಹೊಸ ಕರಗಳನ್ನು ಹೇರಲು ಸಾಧ್ಯವಿಲ್ಲ. ಇದ್ದ ಕರಗಳನ್ನು ತೆರಲಿಕ್ಕೆ ಜನರಿಗೆ ಕಷ್ಟವಾಗಿದೆ. ಆರ್ಥಿಕ ದೃಷ್ಟಿಯಿಂದಾಗಲಿ, ಪ್ರಾಥಮಿಕ ಶಿಕ್ಷಕರ ಸುಖದ ದೃಷ್ಟಿಯಿಂದಾಗಲಿ, ಪ್ರಾಥಮಿಕ ಶಿಕ್ಷಣದ ವಿಕಾಸ ದೃಷ್ಟಿಯಿಂದಾಗಲಿ, ವಿದ್ಯಾರ್ಥಿಗಳ ಉದ್ಧಾರದ ದೃಷ್ಟಿಯಿಂದಾಗಲಿ ಸ್ಕೂಲ ಬೋರ್ಡುಗಳ ಆಡಳಿತೆ ಯಶಸ್ವಿಯಾಗಿಲ್ಲ. ಮೆಟ್ಟುಮೆಟ್ಟಿಗೂ ಅವುಗಳಿಂದ ಪ್ರಾಥಮಿಕ ಶಿಕ್ಷಣ ಕಾರ್ಯಕ್ಕೆ ಒಂದಿಲ್ಲೊಂದು ತರದಿಂದ ಹಾನಿ ತಟ್ಟಿದೆ. ಆದರಿಂದ ಇವನ್ನು ಶೀಘ್ರವೇ ರದ್ದುಪಡಿಸಿ ಸರಕಾರವು ತಮ್ಮ ಸ್ವಾಧೀನಪಡಿಸಿಕೊಳ್ಳುವದು ಲೇಸು. ಪ್ರಾಥಮಿಕ ಶಾಲೆಗಳನ್ನು ಇದ್ದ ದ್ರವ್ಯಾನುಕೂಲತೆಯಂತೆ ಸುಸೂತ್ರವಾಗಿ ನಡಿಸಬರಲಾಗದಿದ್ದರೆ ಸ್ಕೂಲ ಬೋರ್ಡುಗಳು ಶಾಲೆಗಳನ್ನು ಒಪ್ಪಿಸಿಕೊಳ್ಳುವಂತೆ ಸರಕಾರಕ್ಕೆ ಬಿನ್ನೈಸಿಕೊಂಡು ಸ್ವಾಧೀನಪಡಿಸಿದರೆ ಲೋಕಕ್ಕೆ ಅದೊಂದು ಉಪಕಾರವೇ!

ಹಬಸೀ ರಾಜಕಾರಣ.

[ನಿರೀಕ್ಷಕನು ಬರೆದುದು.]

ಹಬಸಿ ರಾಜಕಾರಣದ ಒಳಗುಟ್ಟು ಇನ್ನೂ ಸಂಪೂರ್ಣವಾಗಿ ತಿಳಿಯಲಿಲ್ಲವೆಂದೇ ನನ್ನ ಅಭಿಪ್ರಾಯ. ಹಬಸಿ ರಾಜಕಾರಣದ ಬೇರುಗಳು ಬಹಳ ದೂರ ದೂರ ಪಸರಿಸಿವೆ. ಇಟಾಲಿಯ ಮುಸೋಲಿನಿಯವರೂ, ಹಬಸಿ ದೇಶದ ರಾಸ ತಿಫಾರಿಯವರೂ ತಮ್ಮೊಳಗೆ ಇದನ್ನು ಸುಧಾ ತಿಳ್ಳುವರೆಂದು ನನಗೆಂದಿಗೂ ತೋರದು. ಹಬಸಿ ರಾಜಕಾರಣದಲ್ಲಿ ಬ್ರಿಟಿಶರಿಗೂ, ಇಟಾಲಿಯರಿಗೂ ಮನಸ್ತಾಪವುಂಟಾಗಲಾರಂಭಿಸಿದೆ. "ಹಬಸಿ ದೇಶದಲ್ಲಿ ಬ್ರಿಟಿಶರು ಚಂಚುಪ್ರವೇಶ ಮಾಡಲಾರಂಭಿಸಿದ್ದಾರೆ. ಅದಕ್ಕಾಗಿ ಹಬಸಿ ದೇಶದ ಗಡಿನಾಡಿನಲ್ಲಿ ಬೈಲು ಪ್ರದೇಶವನ್ನು ಕೊಂಡಿದ್ದಾರೆ. ಇವು ವಿಮಾನುಗಳನ್ನು ಇಳಿಸುವ ಠಾಣ್ಯಗಳ ಅನುಕೂಲತೆಗೆಂದು" ರೋಮದೊಳಗಿನ 'ಗೋರ್ನೇಲ್ ಡಿ ಇಟಾಲಿಯಾ' ಪತ್ರಕರ್ತರ ಅಂಬೋಣ. ಹಬಸಿ ಸರಕಾರವು ಶಾಂತತೆಯಿಂದ ನಡೆಯಬಯಸುವದಿಲ್ಲೆಂದು ಬ್ರಿಟಿಶ ಸರಕಾರಕ್ಕೆ ತೋರಿದ್ದರಿಂದ, ಬ್ರಿಟಿಶರು ಈ ಪ್ರಕಾರ ಶಾಂತಿಯ ಸೋಗು ಹಾಕಿಕೊಂಡು ತಮ್ಮ ವಸಾಹತುಗಳ ರಕ್ಷಣೆಗಾಗಿ ಯುದ್ಧದ ತಯಾರಿ ನಡಿಸುತ್ತಾರಾಗಿ ಇಟಾಲಿಯ ಆಕ್ಷೇಪ. ಸೈನ್ಯಭರತಿಯನ್ನೂ ಬ್ರಿಟಿಶರು ಮಾಡುತ್ತಿದ್ದಾರಂತೆ. "ನಾವು ಮಾತ್ರ ಹಾಗೆಯೇ ಸೈನ್ಯ ಶೇಖರಿಸಿದರೆ ಬ್ರಿಟಿಶರು ಆಕ್ಷೇಪ ಮಾಡುವ ಕಾರಣವೇನು?" ಎಂಬದಾಗಿ ಸಂಪಾದಕರಾದ ಸಿನೋರ ಗ್ಯಾಡಾರವರು ಪ್ರಶ್ನಿಸುತ್ತಾರೆ. "ಹಬಸಿ ದೇಶದಲ್ಲಿ ಗುಲಾಮಗಿರಿಯನ್ನು ರದ್ದು ಮಾಡುತ್ತೇವಾಗಿ ೧೯೨೩ನೇ ಇಸ್ವಿಯಲ್ಲಿ ಹಬಸಿ ಸರಕಾರವು ರಾಷ್ಟ್ರಸಂಘಕ್ಕೆ ಬರೆದುಕೊಟ್ಟಿತ್ತು. ಆದಾಗ್ಯೂ ಅದನ್ನು ಅದು ಪಾಲಿಸಲಿಲ್ಲ. ಇನ್ನೂ ತನಕ ಆ ವ್ಯಾಪಾರ ನಡೆದಿದೆ. ವಯೋಮಾನದಂತೆ, ಶರೀರದಾರ್ಢ್ಯದಂತೆ ಕನ್ಯಾವಿಕ್ರಯ, ಸ್ತ್ರೀ-ಪುರುಷರ ವಿಕ್ರಯ. ಹುಡುಗರ ವಿಕ್ರಯ ಸಾಗುತ್ತಿದೆ. ಹುಡುಗರಿಗೆ ರೂ. ೧೦೦ರಿಂದ [illegible]ರ ತನಕ, ಕನ್ಯೆಯರಿಗೆ ರೂ. ೨೫೦ರಿಂದ ೩೦೦ರ [illegible], ಸ್ತ್ರೀಯರಿಗೆ ರೂ. ೧೭೫ರಿಂದ ೩೦೦ರ [illegible], ಪುರುಷರಿಗೆ ರೂ. ೨೦೦ರಿಂದ ೩೫೦ರ ತನಕ ಬೆಲೆ ಇರುತ್ತದೆ. ಸೊಂಡಾರ ಪಟ್ಟಣದಲ್ಲಿ ೯೦೦ ಮಂದಿ ಗುಲಾಮರಿದ್ದಾರೆ. ಹರಾರದಲ್ಲಿ ೧೦ ಸಾವಿರ ಗುಲಾಮರಿದ್ದಾರೆ. ಹಬಸಿ ಸರಕಾರವು ಗುಲಾಮ ವ್ಯಾಪಾರವನ್ನು ರದ್ದು ಮಾಡುವ ಶರ್ತನ್ನು ಪಾಲಿಸಿತೇನು?" ಎಂಬದಾಗಿ ಸಂಪಾದಕರಾದ ಸಿನೋರ ಗ್ಯಾಡಾರವರ ಸವಾಲು. ಇದರ ಅರ್ಥಗಾಂಭೀರ್ಯವನ್ನು ಬಲ್ಲಿರಾ? ಪಾಶ್ಚಾತ್ಯ ರಾಷ್ಟ್ರಗಳು ಲೋಕದೊಳಗಿನ ಗುಲಾಮ ವ್ಯಾಪಾರವನ್ನು ರದ್ದುಪಡಿಸಿ ಲೋಕೋದ್ಧಾರ ಮಾಡಲು ಜನ್ಮವನ್ನೆತ್ತಿವೆ; ಗುಲಾಮಗಿರಿಯನ್ನು ಪಾಲಿಸುವ ಹಬಸಿ ಸರಕಾರದೊಡನೆ ಮಾಡಿದ ಕರಾರುಗಳೆಲ್ಲ ತಾನಾಗಿಯೇ ರದ್ದು; ಆದರಿಂದ ಹಬಸಿ ಸರಕಾರದ ಸ್ವಾತಂತ್ರ್ಯ ಪಾಲನವಾಗಬೇಕಾಗಿ ಪಾಶ್ಚಾತ್ಯರು ಕೊಟ್ಟ ಕರಾರು ರದ್ದಾಗುತ್ತಿದೆ, ಆ ದೇಶದ ಸ್ವಾತಂತ್ರ್ಯವನ್ನು ಅಪಹರಿಸಲು ಪಾಶ್ಚಾತ್ಯ ರಾಷ್ಟ್ರಗಳಿಗೆ ಹಕ್ಕುಂಟು; ಇದು ಲೋಕೋದ್ಧಾರದ ವೇಷ ತೊಡೆದ ಪಾಶ್ಚಾತ್ಯರ ರಾಜನೀತಿ, ಲೋಕೋದ್ಧಾರ ಪರಂಪರೆ. ಇಟಾಲಿಯವರು ಹಬಸಿ ದೇಶದ ಮೇಲೆ ಸಾಗಿಹೋಗುವ ನೆವ ಹುಡುಕುತ್ತಿದ್ದಾರೆಂಬುದು ಇದರ ಮೇಲಿಂದ ಸ್ಪಷ್ಟವಾಗುವದಿಲ್ಲೇನು? ರಾಷ್ಟ್ರಸಂಘದಿಂದ ಚೌಕಶಿ ಮಂಡಳ ನೇಮಿಸಲ್ಪಟ್ಟಾಗ್ಯೂ ಅತ್ತ ಕಡೆ ಕೂಚು ಮಾಡುವ ಇಟಾಲಿ ಸೈನಿಕರ ಸಂಖ್ಯೆ ಕುಗ್ಗಲಿಲ್ಲ. "೧೦ ಲಕ್ಷ ಸೈನಿಕರನ್ನು ನಾನು ಕಳಿಸುವೆ. ಹಬಸಿ ಸರಕಾರವು ಸೈನ್ಯ ತಯಾರಿ ಮಾಡುತ್ತಿದೆ. ಹಬಸಿ ದೇಶದ ಅಸ್ತಿತ್ವವನ್ನು ಸಂಪೂರ್ಣವಾಗಿ ತಿಳಿಕೊಳ್ಳುವ ಶಕ್ತಿ ಇಟಾಲಿಯಲ್ಲಿ ಮಾತ್ರ ಇದೆ. ನಾನು ಈ ವಿಷಯದಲ್ಲಿ ಹಿಂಗಾಲು ತೆಗೆಯುವವನಲ್ಲ. ಅತ್ಯುತ್ಸಾಹಿಯೆಂದು ನನಗೆ ಮುಂದೆ ಆಕ್ಷೇಪ ಮಾಡಿದರೂ ಪರಿವೆಯಿಲ್ಲ." ಎಂಬದಾಗಿ ಕಳೆದ ಮೇ ೧೪ನೇ ತಾರೀಖಿಗೆ ರೋಮ ಪಟ್ಟಣದೊಳಗಿನ ಲೋಕಪ್ರತಿನಿಧಿ ಸಭೆಯಲ್ಲಿ ಮುಸೋಲಿನಿಯವರು ಒಳ್ಳೇ ಆವೇಶದಿಂದ ಭಾಷಣ ಮಾಡಿದರು. ಇತ್ತಿಟ್ಟಲ್ಲಿ ವಿವಾದ ಉಂಟಾದಂದಿನಿಂದ ಪೂರ್ವ ಆಫ್ರಿಕೆಯ ದೌಡಿನ ಬಗ್ಗೆ 'ಕಳೆದ ಎಪ್ರಿಲ್ ತಿಂಗಳ ಕೊನೆಯ ವರೆಗೆ ೧ ಕೋಟಿ ೭ ಲಕ್ಷ ಪವನು ಖರ್ಚಾಗಿರುವದಾಗಿ ಇಟಾಲಿಯ ಅರ್ಥಸಚಿವರಾದ ಸಿನೇಟರ ರಿವೆಲ್‌ರವರು ಪ್ರಕಟಿಸಿರುತ್ತಾರೆ. ಇಟಾಲಿಯ ಸೋಮಾಲಿ ಲೆಂಡ ಪ್ರದೇಶದಲ್ಲಿ ಪುಂಡ ಹಬಸಿ ಪಾಳೆಯಗಾರರು ಪ್ರವೇಶಿಸಿ ಇಟಾಲಿಯ ಸೈನಿಕರಿಗೆ ಕೊಂದ ವರ್ತಮಾನ ಬಂದಿದೆ. ಈ ಪ್ರಕಾರ ಇತ್ತಿಟ್ಟಿನವರು ಕಾಲು ಕೆದರಿ ಜಗಳ ತೆಗೆಯುತ್ತಿರುವಾಗ ಸಂಧಿಯಾಗುವದೆಂದು ನಾನೆಂದಿಗೂ ಹೇಳಲಾರೆ. ಮೇಲಾಗಿ ಬ್ರಿಟಿಶರು ಹಬಸಿ ಸರಕಾರಕ್ಕೆ ಅನುಕೂಲರಾಗಿ ವರ್ತಿಸುವದರಿಂದ ಇಲ್ಲಿಯೇ ಯುದ್ಧ ಸ್ಫೋಟವಾಗುವದೇನೆಂಬದೊಂದು ಭೀತಿ ವ್ಯಕ್ತವಾಗುತ್ತಿದೆ. ಹಬಸಿ ಸರಕಾರಕ್ಕೆ ಜರ್ಮನಿಯು ಮದ್ದು-ಗುಂಡುಗಳನ್ನೂ, ತೋಫು-ಬಂದೂಕಿಗಳನ್ನೂ ಪೂರೈಸುತ್ತದಾಗಿ ಇಟಾಲಿಯ ಮುಸೋಲಿನಿಯವರು ಈ ಹಿಂದೆಯೇ ಪ್ರಕಟಿಸಿದ್ದಾರೆ. ಅಂಥವರು ತಮ್ಮ ಶತ್ರುಗಳೆಂದೂ ಅವರು ಹೇಳಿದ್ದುಂಟು. ಜಪಾನ ರಾಷ್ಟ್ರವು ಹಬಸಿ ಜನಾಂಗದ ಆಳಿಯ ದೇಶ. ಜಪಾನ ದೇಶಕ್ಕೂ ಜರ್ಮನಿಗೂ ಗುಪ್ತ ತಹನಾಮೆಯಾಗಿರುವದಾಗಿ 'ಲಂಡನ್ ಕ್ರಾನಿಕಲ್' ಪತ್ರಿಕೆಯ [illegible]ಅಂಬೋಣ. ಜರ್ಮನರು ಜಪಾನ ದೇಶಕ್ಕೆ ಮದ್ದು-ಗುಂಡು[illegible]ಗಳನ್ನೂ, ತೋಫುಗಳನ್ನೂ ಪೂರೈಸುವ ಕರಾರು ಮಾಡಿಕೊಂಡಿದ್ದಾರಂತೆ. ಅದಕ್ಕಾಗಿಯೇ ಜರ್ಮನರು ತಾವು, ನಿ[illegible]ಗಳನ್ನು ಹೆಚ್ಚಾಗಿ ಪರದೇಶಗಳಲ್ಲಿ ಖರೀದಿ ಮಾಡಲಾರಂಭಿಸಿದ್ದಾರಂತೆ! ಕೆಲಸಕ್ಕೆ ಬಾರದ ಹಾಳು [illegible], ಉಣ್ಣೆಗಳಿಂದ ಸ್ಫೋಟಕ ದ್ರವ್ಯಗಳು ತಯಾರಿಸ[illegible]ತ್ತವೆ. ಕಳೆದ ೩ ತಿಂಗಳಲ್ಲಿ ೬೩೦೦ ಟನ್ ಹತ್ತಿ ಖರೀದಿಯಾಯಿತಂತೆ. ಕಳೆದ ವರ್ಷ ಇದೇ ಅವಧಿಯಲ್ಲಿ [illegible] ಟನ್ ಖರೀದಿಯಾಗಿತ್ತು. ಉಣ್ಣೆಯ ಖರೀದಿ [illegible] ಲಕ್ಷ ೭೦ ಸಾವಿರ ಪವನಿಗೆ ತಲ್ಪಿತು. ಅದು ೫ ಲಕ್ಷ ೫೭ ಸಾವಿರವಿತ್ತು. ಹಳೇ ಕಬ್ಬಿಣವು ಸ್ಫೋಟಕ ದ್ರವ್ಯದ ಒಂದು ಸಾಮುಗ್ರಿ. ಅದಕ್ಕಾಗಿ ಜರ್ಮನರು ಹಳೇ ಹಡಗಗಳನ್ನು ಖರೀದಿ ಮಾಡಿ ಕುಟ್ಟಲಾರಂಭಿಸಿದ್ದಾರೆ. ಜರ್ಮನಿಯ ಕಡೆ ದ್ರವ್ಯಾನುಕೂಲತೆಯಿಲ್ಲ; ಯಾರೂ ನಂಬಲಾಗದ ಸಂಗತಿ. ಅದರಿಂದ ಮುದ್ದಾಂ ನಾನು ಹೇಳಿ ಬಿಡುತ್ತೇನೆ. ಬ್ರಿಟಿಶ ಸಾವಕಾರರೇ ಜರ್ಮನರಿಗೆ ಬೇಕಷ್ಟು ಸಾಲ ಕೊಡಮಾಡಿದ್ದಾರೆ. ಲಂಡನಿನೊಳಗಿನ 'ಫಿನೆನ್ಶಲ್ ನ್ಯೂಸ್' ಪತ್ರಿಕೆಯು ಈ ಸಂಗತಿಯನ್ನು ಪ್ರಕಟಿಸಿ ಶಾಂತಿಭೂತರ ಸೋಗನ್ನು ಇಳಿಸಿದೆ. ಇಂಗ್ಲಂಡ ಬೇಂಕು ಜರ್ಮನ್ ಬೇಂಕಿಗೆ ೭॥ ಲಕ್ಷ ಪವನನ್ನು ಸಾಲವಾಗಿ ಕೊಟ್ಟಿದೆ; ಇನ್ನೂ ಕೊಡುತ್ತಲಿದೆ. ಈ ಹಣದಿಂದಲೇ ಜರ್ಮನರು ಮದ್ದುಗುಂಡು ಶಸ್ತ್ರಾಸ್ತ್ರಗಳನ್ನು ಬೆಳಿಸಿ ರಣಶೂರರಾಗುತ್ತಿದ್ದಾರೆ. ದಿನಾ ೩೦ ವಿಮಾನುಗಳನ್ನು ತಯಾರಿಸಬಲ್ಲ ವೈಮಾನಿಕ ಕಾರಖಾನೆಗಳು ಜರ್ಮನಿಯಲ್ಲಿ ತಯಾರ ಇವೆ. ಇಂಗ್ಲಂಡದಲ್ಲಿಯೂ ಸೈನ್ಯ ಸಾಹಿತ್ಯಗಳನ್ನು ತಯಾರಿಸುವ ಕಾರಖಾನೆಗಳಿಗೆ ಅರಘಳಿಗೆ ಪುರಸತ್ತಿಲ್ಲ. ಸೈನ್ಯ ಸಾಹಿತ್ಯಗಳನ್ನು ಅವು ಎಡೆಬಿಡದೆ ತಯಾರಿಸಿ ಬೇಕಾದವರಿಗೆ ಪೂರೈಸುತ್ತಿವೆ. ಹಬಸಿ ದೇಶದ ಕಡೆಗೂ ಇವು ರಫ್ತಾಗಬಹುದು. ಯುದ್ಧವೆಂದರೆ ಮದ್ದು-ಗುಂಡು-ಶಸ್ತ್ರಾಸ್ತ್ರಗಳ ಕಾರಖಾನೆಯವರಿಗೆ ದುಡ್ಡು. ಬ್ರಿಟಿಶ ದೇಶದಲ್ಲಿ ಈ ಕಾರಖಾನೆಗಳಿಗೆ ಪ್ರಧಾನ ಮಂಡಳದವರ, ಅರಸುಮನೆತನದವರ ಆಶ್ರಯವಿರುವದಾಗಿ ಲಂಡನಿನಲ್ಲಿ ನಡೆದ ಶಸ್ತ್ರ ಚೌಕಶಿ ಮಂಡಳ (British Arms Enquiry Commission)ದಲ್ಲಿ ಹೊರಬಿದ್ದಿದೆ. ಚೌಕಶಿ ಮಂಡಳದ ಅಧ್ಯಕ್ಷರು ಸಹ ಆಶ್ರಯದಾತರಂತೆ. ಈ ಅಧ್ಯಕ್ಷರಿಗೆ ೮೦ ವರುಷ ಪ್ರಾಯ. ಹೈಕೋರ್ಟಿನ ನ್ಯಾಯಾಧೀಶರಿದ್ದರು. ಈಗ ಪೆನ್ಶನು ಪಡೆಯುತ್ತಿದ್ದಾರೆ, ಅವರಿಗೂ ದುಡ್ಡಿನ ಮೋಹ ಬಿಡದು. ಅಂದ ಬಳಿಕ ಬ್ರಿಟಿಶ ಸರಕಾರದ ಅಂತರಂಗದ ಕಲ್ಪನೆ ಬಂದೀತು. 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಲಂಡನಿನೊಳಗಿನ ಸುದ್ದಿಗಾರರು ನುಡಿ

ವಂತೆ, ಜರ್ಮನರಿಗೂ ಬ್ರಿಟಿಶರಿಗೂ ಋಣಾನುಬಂಧವಾಗಲಾರಂಭಿಸಿದೆ ಆದರಿಂದಲೇ ಫ್ರೆಂಚರು ರುಶ್ಯರ ಸ್ನೇಹಸಂಗ್ರಹ ಮಾಡತೊಡಗಿದ್ದು ಹಬಸಿ ಪ್ರಕರಣದಲ್ಲಿ ಬ್ರಿಟಿಶರು ಇತಾಲಿಯ ವಿರೋಧಕರು ಯಾಕೆಂದರೆ ಇತಾಲಿಯವರು ಪೂರ್ವ ಆಫ್ರಿಕೆಯಲ್ಲಿ ಪಾರುಪತ್ಯಗಾರರಾದರ ಕೆಂಪು ಸಮುದ್ರದ ಆಧಿಪತ್ಯವು ಇತಾಲಿಯ ಸ್ವಾಧೀನವಾಗಿ ಬ್ರಿಟಿಶ ಸಾಮ್ರಾಜ್ಯದ ಏಡನ್ ನಾಕೆಯು ಗಂಡಾಂತರದಲ್ಲಿ ಸಿಲುಕಬೀಳುವದು ಹಬಸಿ ದೇಶವನ್ನು ಒಂದಿಷ್ಟೊಂದು ನವದಿಂದ ಪ ದಾಕ್ರಾಂತ ಮಾಡಿಕ್ಕೊ ಬೇಕಾಗಿ ಇತಾಲಿಯವರು ಹವಣಿಸುತ್ತಿರುವಾಗ ಈ ಕಾರ್ಯದಲ್ಲಿ ಯಾರಿಗೂ ಅಡ್ಡಬ್ಬಲು ಅಧಿಕಾರವಿಲ್ಲವಾಗಿ ನಿರ್ಭಯದಿಂದ ನಿರ್ದಾಕ್ಷಿಣ್ಯದಿಂದ ಮುಸೊಲಿನಿಯವರು ಸಾರಿಧ್ಧಾರ ಹೇಳುತ್ತಿರುವಾಗ ಹಬಸಿ ಪ್ರಕರಣ ತಣ್ಣಗಾ ದು ಹೇಳಲಸಾಧ್ಯ ತಣಿಯಲಾರದೆಂದೇ ... ಅಭಿಪ್ರಾಯ ಯುರೋಪ ಖಂಡದಲ್ಲಿ ... ಮಾತರಾಗಿ ಸಂಚರಿಸಿದ ಬ್ರಿಟಿಶ ಪ್ರಧಾನ ... ಆಮ್ಸ್ಟ್ರಾಂಗರು ಸ್ವರಾಷ್ಟ್ರೀಯ ಪ್ರಧಾನರಿಗೆ ಪ್ರತಿಪಾದಿಸಿರುವ ಸ್ವೀಯ ಭಾ ... ವರೆ ಮ ಸನ್ನ ಗ್ರಹಿಕೆ ಯುದ್ಧವಾದಲ್ಲಿ ಶತ್ರುಗಳು ಮಿತ್ರ ರಾಗುವರು, ಮಿತ್ರರು ಶತ್ರುಗಳಾಗುವರು ಹಬಸಿ ದೇಶದಲ್ಲಿ ಸ್ಫೋಟವಾದರೆ ಯುರೋಪ ಖಂಡದಲ್ಲಿಯೂ ಸ್ಫೋಟವಾಗಲೇ ಬೇಕು ಹಿಟ್ಲರರು ಜರ್ಮನಿಯ ಪೂರ್ವ ಸ್ಥಿತಿಯನ್ನು ಕಾಂಕ್ಷಿಸುತ್ತಾರೆ ಮಹಾಯುದ್ಧದಿಂದ ಕಳಕೊಂಡ ಪ್ರದೇಶಗಳನ್ನು ಮರಳಿ ಪಡೆದು ಜರ್ಮನಿಯ ಪ್ರತಿಷ್ಠೆ ಬೆಳಸಲು ಕಾರಸ್ಥಾನ ನಡಿಸಿದ್ದಾರೆ ಇದರಿಂದ ವರ್ಸಲೀಸ ಒಪ್ಪಂದ ... ದಲ್ಲಿ ಲೂಟಿ ಹಂಚಿಕೊಂಡ ರಾಷ್ಟ್ರಗಳು ಮುನಿಯ ವವು ಹಿಟ್ಲರರು ಅದಕ್ಕೆ ಸೊಪ್ಪು ಹಾಕುವವರಲ್ಲ ಅನುಕೂಲ ಸಂಧಿಯನ್ನೇ ಅವರು ಹುಡುಕ ತ್ತಿದ್ದಾರೆ ಹಬಸಿ ಪ್ರಕರಣದ ಸ್ಫೋಟವಾದಲ್ಲಿ ಜರ್ಮನರು ತಮ್ಮ ಕಾರ್ಯ ಸಾಧಿಸಿಬಿಡುವರು ಈ ಯುದ್ಧದ ಎಣಿಕೆಯನ್ನು ಯಾರಿಂದಲೂ ಮಾಗಲಾಗದೆಂದೂ ಅದು ಸಿ ರ ಭಯಂಕರವಾಗುವದೆಂದೂ, ಯುದ್ಧಸಾಹಿತ್ಯಗಳ ಬೆಳವಣಿಗೆಯಿಂದ ಕ್ಷೇಮವಿಲ್ಲವೆಂದೂ, ಅಪಾಯವಿರುವದೆಂದೂ 'ಕ್ರೋನಿಕಲ್' ಪತ್ರಿಕೆಯು ಲಂಡನಿನೊಳಗಿನ ಸುದ್ದಿಗಾರರು ಧೀಜಿಗೊಂಡು ಬರೆಯುತ್ತಾರೆ ಈ ಹಿಂದೆ ಹಬಸಿ ಜನರು ಇತಾಲಿಗೆ ಅಡ್ವಾ ಪಟ್ಟಣದಲ್ಲಿ ಸೋಲಿಸಿದ ಸಂಗತಿಯನ್ನು ಇತಾಲಿಯರು ಇನ್ನೂ ಸ್ಮರಿಸಿ ಅದರ ಸೇಡು ತೀರಿಸಲು ಉತ್ಸಾಹಪಡುತ್ತಾರಾಗಿ ಕಲಕತ್ತೆಯ 'ಅಮೃತ ಬಝಾರ ಪತ್ರಿಕೆ'ಯ ಲಂಡನಿನ ಸುದ್ದಿಗಾರರು ಬರೆದು ಇತಾಲಿಯ ಮನಸ್ಥಿತಿಯನ್ನು ವರ್ಣಿಸುತ್ತಾರೆ ಇದನ್ನೆಲ್ಲಾ ನಾನು ಇಲ್ಲಿಯೇ ನಮೂದಿಸಿ ಬಿಡುತ್ತೇನೆ ವಿಚಾರವಂತ ಜನರಿದ್ದರೆ ವಿಚಾರ ಹೇತು ಪರಿಸ್ಥಿತಿಯಿದೆ ವಿನಾಶಕಾಲೇ ವಿಪರೀತ ಬುದ್ಧಿ ಯಂತೇ ಯೋಪಾಂ ನ ಜೇತಾಂಸಿ ತ ಏವ ಧೀರಾ ಎಂಬ ವಚನವು ಇದು ಯುದ್ಧ ಲಕ್ಷಣವೆಂದು ಕೇಳುವವರಿಗೆ ನಾನು ಕೇಳುವದಿಲ್ಲ

— ಬೂಕಂಪ ಪ್ರದೇಶವು ೧೩೦ ಮೈಲು ಉದ್ದ ೩೦ ಮೈಲು ಅಗಲವ ಪಡಿದೆ ಸುಮಾರು ೧೦೦ ಗ್ರಾಮಗಳು ಹಾಳಾಗಿವೆ! ರೂ ೬೦ ಕೋಟಿ ನಷ್ಟ!

ಹಿಂದೀ ವ್ಯವಸ್ಥೆಯ ಕಾನೂನು ಪಾರ್ಲಿಮೆಂಟಿನ ಸಭೆಯಲ್ಲಿ ಮಂಜೂರಾಯಿತು ಗೋರೆಗಳ ಸಭೆಯಲ್ಲಿ ಪ್ರಥಮ ವಾಚನ ವಿಧಿಯೂ ಮುಗಿಯಿತು ಇನ್ನೆರಡು ಬಾರಿ ವಾಚನವಾದ ಬಳಿಕ ಬಂದರಹರು ಮನ್ನಣೆಕೊಡುತ್ತಾರೆ ಆನಂತರ ಅದು ಕಾಯಿದೆಯಾಗುವದು. ಈ ಘಟನೆಯನ್ನು ಸ್ವೀಕರಿಸಿ ಅದರೊಳಗಿಂದ ಅದ್ಭುತ ಪ್ರಯೋಜನ ಪಡೆಯಬೇಕಾಗಿ ಕೂಲಿಕಾರ ಪಕ್ಷದ ಮಿ| ಲೆನ್ಸಬರಿಯವರು ಹಿಂದೀಪ್ರಮುಖರಿಗೆ ಉಪದೇಶ ಮಾಡುತ್ತಾರೆ ಹಿಂದುಸ್ಥಾನಕ್ಕೆ ... ಮಾಡುವ ಕೂಲಿಕಾರ ಪಕ್ಷದ ನಾಯಕರ ... ತವಿದು ಬ್ರಿಟಿಶ ಜನಾಂಗದ ಹಿತವಾಗುವಲ್ಲಿ ಎಲ್ಲ ಪಕ್ಷದ ಬ್ರಿಟಿಶರು ಹಿಂದೀಯರಿಗೆ ಉಪದೇಶ ಮಾಡುವದು ಒಂದೇ ಆದರೆ ಹಿಂದೀಯರು ಈಗ ಅಷ್ಟು ದಡ್ಡರಿಲ್ಲ ಜಾಗ್ರತರಾಗಿದ್ದಾರೆ ಉಪದೇಶ ಕೊಳ್ಳುವ ಸ್ಥಿತಿಯಲ್ಲಿಲ್ಲ

☞ [ಇಂದಿನ ಪುರವಣಿ ನೋಡಿರಿ.]

ಜಾಹೀರಾತು.

||ಓಂ|| || ಶ್ರೀ ಸದ್ಗುರು ಸಿದ್ಧಾರೂಢ ಪ್ರಸನ್ನ ||

ಬಹುಮಾನಗಳನ್ನೂ ಪ್ರಶಸ್ತಿಪತ್ರಿಕೆಗಳನ್ನೂ ಪಡೆದ

ಜ್ಯೋತಿಷಿ ಜಗನ್ನಾಥ ಗಣೇಶ ದೆಸಾಯಿ ಘಾತರಪೇಕರ, ಪಣಜಿ

(ಗೋವಾ) ಆಫೀಸು— ಡಾ|| ಚಿಕ್ರಮನೆಯವರ ಮನೆಯು ಸಾಪ್ರ, ಬಿ. ಎಂ ಬಿಎ. (ಉ ಕ) ಸಾಪ್ತ ಜಾತಕ ಗೋಚಿ ಜ್ಯೋತಿಷ ಹಸ್ತ ಸಾಮುದ್ರಿಕ ಮಾಡಿ ಒಳ್ಳೆ ವರ್ತಮಾನ ಭವಿಷ್ಯಗಳನ್ನು ಬರೆದು ಹೇಳುತ್ತೇವೆ ಅನೇಕ ಜನರು ಅನುಭವ ಕಂಡು ಪ್ರಶಸ್ತಿಪತ್ರ ಕೊಟ್ಟಿದ್ದಾರೆ ಕುಪಾಟಿಯಲ್ಲಿ ಮುಕ್ಕಾಮು ಎರಡು ತಿಂಗಳು ... ದವರೆ ಅನುಭವ ಕೇಳಬಹುದು

Siromani Udipi Narayanacharya,

CHAUKHAMBA BENARES CITY.

ಮಹಾಶಯರೇ, ರುದ್ರನೇತ್ರ ಕೃಷ್ಣವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಕ್ಷಿರಿ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸ್ವಚ್ಛದಾಗುತ್ತ ಆಗುತ್ತ ಪ್ರಿಯ ತರ್ಪುವದು ಕಂಠಿ ಸಂ 32 ದರ 1ಕ್ಕೆ ರೂ 0 8 0 ಯಿಂದ ರೂ 100 ವರೆಗೆ ಗೌರಿಶಂಕರ 1ಕ್ಕೆ ರೂ 3 8 0 ರಿಂದ ೨೦ ವರೆಗೆ ಮತ್ತು ದರ ವಗೈರೆ ವಿವರ ತಿಳಿಯಲು ಅಪೇಕ್ಷಿಸುವವರು 0 1 0 ಸ್ಟಾಂಪು ಕಳಿಸಿದರೆ, 1 ಕಾಶೀ ನಕ್ಷೆ, 1 ವಿಶ್ವೇಶ್ವರನ ಪಟ ಪಡ್ಡು ಕೆಟಲಾಗು ಸಹ ಇನಾಮು ಕಳಿಸಲಾಗುವದು

ಪತ್ತೆ - ಶಿರೋಮಣಿ ನಾರಾಯಣಾಚಾರ್ಯ,

ಚೌಕಾಂಬಾ ಕಾಶೀ ಕ್ಷೇತ್ರ

ಮನೆತನದಲ್ಲಿ ಯಾ ಸಣ್ಣ ಸಣ್ಣ ತೋಟಗಳಲ್ಲಿ

ಉಪಯೋಗಿಸುವಂಥ,

ಕಿರ್ಲೋಸ್ಕರ

ಮನೆವಾಡಿಕೆಯ ಪಂಪುಗಳು

ನಿಮಗೆ ಪೂರ್ಣ ಸಮಾಧಾನ ಕೊಡುವವು



ತನ್ನಿಂದ ತಾನೇ ಸ್ವಿಚ್ಚ್ ಒಲದಿಂದ ಪಂಪಸುರವಾಗಿ ಬೇಕಾದ ಜಾಗದಲ್ಲಿರುವ ನೀರನ್ನು ಮೇಲಕ್ಕೆ ಸುರಿದು ತಗದು ಕ್ಕಿ ಇಂಚು ಧಿಬಮರಿ ಕ್ಕ್ಯಪದಿಂದ ನೀರು ಎರುವದು

೩ ಬಿ ಎಚ್ ಪಿ ಇಲೆಕ್ಟ್ರಿಕ್ ಮೋಟರ ಸಹಿತ ಶಿಗುವದು

ತಪಶೀಲ ಮಾಹಿತಿ ಬಗ್ಗೆ ಬರೆದು ಚಿತ್ರಯುಕ್ತ ಕ್ಯಾಟಲಾಗನ್ನು ಪಡಕೊಳ್ಳಿರಿ

ಪತ್ರವ್ಯವಹಾರ ಇಂಗ್ಲೀಷ ಯಾ ಮರಾಠಿಯಲ್ಲಿ ಮಾಡುವದು

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್—

ಕಿರ್ಲೋಸ್ಕರವಾಡಿ.

ಸ್ಥಾನಿಕ ವೃತ್ತಾಂತ.

ಕುಮಟಾ— ಆರಿದ್ರಾ ಮಳೆ ಬೀಳಲಾರಂಭಿಸಿತು ಗುರುವಾರ ಶನಿವಾರ ರಾತ್ರಿ ೬ ೭ ತಾಸು ಜೋರಿನಿಂದ ಬಿದ್ದು ಸ್ವಲ್ಪ ತಂಪಾಗಿದೆ ನೀರಿನ ಬರಗಾಲವಂತು ಹೇಳತೀರದು ಎಂದೂ ಬತ್ತಿ ಹೋಗದ ಬಾವಿಗಳೆಲ್ಲ ಬತ್ತಿ ಹೋಗಿ ಜನರು ಕಷ್ಟ ಸರಿಯಾಗಿ ಮಳೆ ಬಿದ್ದರೆ ೧೦-೧೫ ದಿನಗಳಲ್ಲಿ ನೀರಿನ ಪೂರೈಕೆಯಾದೀತು ರಸ್ತೆಗಳ ಮೇಲೆ ಬಿದ್ದ ಕಸ ರಾಶಿಯಾಗಿ ಬಿದ್ದಿದೆ. ಮುನಿಸಿಪಾಲಿಟಿಯವರು ಇನ್ನಷ್ಟು ಸಿದ್ಧ ಕಸವನ್ನು ತೆಗೆಸದಿದ್ದರೆ ಮಳೆ ನೀರಿಗೆ ಅದು ರಸ್ತೆಗಳ ಮೇಲೆ ಹರಿದು ರಾಡಿಯಾಗುವದು

ಹಿಂದೆ ಸನ್ ೧೯೩೦ನೇ ಇಸವಿಯಲ್ಲಿ ಎರ್ ಮಿಡ್ಲಸ್ಕೂಲಿನ ಪ್ರಾಂತ ಅಧಿಕಾರಿಗಳಾಗಿದ್ದ ಮಿ. ಎಚ್. ಎಸ್. ಜೋಶಿಯವರು ಹಂತಹಂತವಾಗಿ ಸಹಿತ ಕೈಬಿಟ್ಟ ಭಾಗಕ್ಕೆ ಬಿಟ್ಟು ಅರಿಕೆಯಂತರಂತೆ ಪ್ರಕಟವಾಗಿದೆ ಅವರ ಗೆಳೆಯರೆಲ್ಲರೂ ವ್ಯಸನಪಡುತ್ತಾರೆ ಮೃತಾತ್ಮರಿಗೆ ಶಾಂತಿ ದೊರೆಯಲೆಂದು ಹಾರೈಸುತ್ತೇವೆ

ಕಲ್ಲಾಪುರ ಟೌನ ಮುನಿಸಿಪಾಲಿಟಿಯ ಅವಧಿ ಆಗಸ್ಟ ತಿಂಗಳ ಅಖೈರಿಗೆ ಅಂತ್ಯವಾಗತಕ್ಕದ್ದು ಮುನಿಸಿಪಾಲಿಟಿಯವರು ಅದನ್ನು ಅವಧಿ ಬೆಳೆಸಿಕೊಳ್ಳಬೇಕಾಗಿ ಸರಕಾರಕ್ಕೆ ಬರೆದಿರುತ್ತಾರಾಗಿ ಊರಲ್ಲಿ ವಾರ್ತೆ!

ಕಳೆದ ಸೋಮವಾರ ಬಾದಶಹರ ಜನ್ಮ ದಿವಸ ನಿಮಿತ್ತವಾಗಿ ಇಲ್ಲಿಯ ಟೌನ ಮುನಿಸಿಪಾಲಿಟಿ ಕಚೇರಿಯಲ್ಲೂ ತಾಲೂಕ ಕಚೇರಿಯಲ್ಲೂ ಸಮಾರಂಭಗಳು ನಡೆದವು

ರಾ| ಮಾವಿನಜಿ ಜೀವರಾಜ ಶೇಟ್ ಮತ್ತು ರಾ| ವೇಲಜಿ ಲಧ್ಧಾ ಶೇಟ್ ಇವರು ಕೈಬಿಟ್ಟು ಭೂಕಂಪಗ್ರಸ್ತರ ಸಂಕಟ ನಿವಾರಣೆಗಾಗಿ ನಿಧಿಸಂಗ್ರಹ ಮಾಡುವದರಲ್ಲಿ ತೊಡಗಿದ್ದಾರೆ. ಜನರು ಮುಕ್ತಹಸ್ತದಿಂದ ಸಹಾಯ ಮಾಡುವರಾಗಿ ನಂಬಿದ್ದೇವೆ

ಅಳ್ವೆಕೋಡಿಯಿಂದ ಹೊನ್ನಾವರ ವರೆಗಿನ ಮಾರ್ಗವನ್ನು ಬೆಳಸಿ ಪುನಃ ಕಟ್ಟಬೇಕಾಗಿ ಸರಕಾರದ ಪರವಾನಗಿಯಾಗಿ ಇಂಜನಿಯರ ಸಾಹೇಬರು ಯೋಜನೆಯನ್ನು ಸಹ ತಯಾರಿಸಿ ಕಳಿಸಿರುತ್ತಾರಾಗಿ ತಿಳಿಯುತ್ತದೆ. ಬಹಳ ತರಗತಿ ಸಂಕ ಕಟ್ಟಬೇಕಾಗಿಯೂ ನಿರ್ಧಾರವಾಗಿದೆ. ಸರಸುಮಾರು ೨ ಲಕ್ಷ ರೂಪಾಯಿ ಖರ್ಚು ತಗಲುವದು. ಈ ಹಣ ಪೆಟ್ರೋಲ ಫಂಡಿನಿಂದ ಸಿಗುವದು

ಕಾರವಾರ ರೈತ ಸಹಾಯಕ ಮಂಡಳದವರು ತಾರೀಕ ೯—೫—೧೯೩೪ನೇ ಯಿಂದ ತಾರೀಕು ೩೧—೨—೩೫ನೇ ವರೆಗಿನ ವರದಿಯನ್ನು ಪ್ರಕಟಿಸಿದ್ದಾರೆ ಅವನ್ನು ಕನ್ನಡಿಗರೆಲ್ಲರು ಪರಿಶೀಲಿಸಿ ಬರೆಯುವದೇನಂದರೆ — (೧) ಈ ಮಂಡಳದವರು ನಿಧಿ ಹೊರಡಿಸುವ ವಿನಂತಿ ಪತ್ರಿಕೆಯಲ್ಲಿ ಸಿದ್ದಾಪುರ ತಾಲೂಕಿನ ಸಂಕಟಗ್ರಸ್ತ ರೈತರ ಮನೆತನಗಳು ೧೫೦, ಲೋಕಸಂಖ್ಯೆ ೧೨೩೭, ಅಂಕೋಲಾ ತಾಲೂಕಿನೊಳಗಿನ ಮನೆತನಗಳ ಸಂಖ್ಯೆ ೧೫೦, ಲೋಕಸಂಖ್ಯೆ ೬೭೮ ಹೀಗೆ ಪ್ರಕಟಿಸಿದ್ದರು ಅವರ ಮೇಲಿಂದ ಸಿದ್ದಾಪುರದೊಳಗಿನ ಬಾಧಿತರ ಪರಿವಾರದಷ್ಟು ಅಂಕೋಲೆಯ ಇಷ್ಟು ಜನ ಎಂದು ಸ್ಪಷ್ಟವಾಗುತ್ತದೆ ಆದರೆ ವರದಿಯ ಖರ್ಚು ಅಂಕೋಲೆಗಿಂತ ಸಿದ್ದಾಪುರಕ್ಕೆ ಅಧಿಕವಿರುವ ಸಂಗತಿ ಸಹ ನಿರ್ಮಾಣವಿದೆ ಆದರೆ ಈ ಮಂಡಳದವರು ಸಿದ್ದಾಪುರ ರೈತರಿಗೆ ೯೩ ೪೬೬ ಅಂಕೋಲೆಯವರಿಗೆ ರೂ ೪೬೬ ಹೀಗೆ ಹಣ ಹಂಚಿದ್ದಾರೆ. ಇದು ಪಕ್ಷಪಾತವಿದೆ. ವರದಿಯಲ್ಲಿ ಕುಟುಂಬಗಳ ಉಲ್ಲೇಖ ಮಾತ್ರವಿದೆ ಹೊರತು ಆಯಾ ಕುಟುಂಬದೊಳಗಿನ ಜನರ ವಿವರವಿಲ್ಲ ಪುರವಣಿಯಲ್ಲಿ ಈ ವಿಷಯ ಕೊಡಬಹುದಿತ್ತು ಅದನ್ನು ಕೊಡಲಿಲ್ಲ ಹೀಗೇಕೆ? ಬುದ್ಧಿಪೂರ್ವಕವಾಗಿ ಲೋಪವಾಗಿರಬಹುದೇನು? (೨) ಈ ಮಂಡಳದವರು ಕರ್ನಾಟಕದಲ್ಲಿ ಸಂಚರಿಸಿ ೧೩,೩೦೦ಗಳ ಮುಟ್ಟಿಗೆ ಹಣ ಸಂಗ್ರಹಿಸಿದ್ದಾರೆ ಅಷ್ಟು ಹಣ ಕೊಡಿಸಲು ಪ್ರಮಾಣ, ಮುದ್ರಣ, ಆಫೀಸ, ಸಾದಿಲವಾರಗಳೆಂದು ರೂ ೩೩೩-೧೦ ೩ ಖರ್ಚು ಬಿದ್ದಿವೆ ರೂಪಾಯಿಗೆ ೨ ಆಣೆ ಖರ್ಚು ಬಿದ್ದಂತಾಯಿತು ಮನೆವಾರು ಕಳಕೊಂಡು ಅಲೆಯುವ ದೇಶಸೇವಕರಿಗೆ ಇಷ್ಟು ಕೊಡಿಸುವವರು ಇಷ್ಟು ಖರ್ಚು ಮಾಡುವದ ಸಾರ್ವಜನಿಕ ಹಣದ ದುರುಪಯೋಗವಲ್ಲದೆ ಮತ್ತೇನು? (೩) ಇನ್ನೊಂದು ವಿಚಿತ್ರ ಸಂಗತಿ ಖರ್ಚಿನ ಸದರಿನಲ್ಲಿ ಸಾಲವೆಂದು ರೂ ೨೭೫ ಖರ್ಚು ಬಿದ್ದಿವೆ ಈ ಸಾಲ ಪಡೆದವರು ಯಾರು? ಮನೆ-ಮಾರು ಕಳಕೊಂಡ ಸಾಲ ಹೇಗೆ? ಧರ್ಮ ಬೇಡವೆಂದು ಜನ ಹೇಳಿದರೆ ಹೇಗೆ? ಸಾಗಿದರೆ ಅವರ ಹೆಸರು ಯಾಕೆ ಇಲ್ಲ ಧರ್ಮನಿಧಿಯೊಳಗಿಂದ ಸಾಲ ಕೊಡಬಹುದಲ್ಲದೇ ಹೇಗೆ? ಲೆಕ್ಕ ತಪಾಸಕರು ಚೌಕಶಿ ಮಾಡಿದ್ದರೋ ಹೇಗೆ? ಚೌಕಶಿ ಮಾಡಿದ್ದರೆ ಈ ಸಾಲದ ಸ್ವರೂಪ ಸಾಲಗಾರರ ನಾಮನಿರ್ದೇಶವಾಗುವದಾಗಿತ್ತು (೪) ಆವಶ್ಯಕ ಖಾತೆ ಅದೊಂದು ವಿಶೇಷ "ಕೆಲಸಗಾರರ ಹತ್ತಿರ" ಎಂಬುದಾಗಿ ರೂ ೧೩೦ ಖರ್ಚು ಬಿದ್ದಿದೆ ಮುಖ್ಯವಾಗಿ ಒಂದಕ್ಕೊಂದಿದ ಅದಕ್ಕಾಧೀನವಾದ ಎಂದು ಉಪಮಂಡಳಗಳಿವೆ ಹೀಗೆ ಮೂರು ಮಂಡಳಗಳ ವಿಭಾಗದವರೂ ನಿಧಿ ಅಟ್ಟುಕೊಳ್ಳುವ ಕೆಲಸಗಾರರ ಆವಶ್ಯಕತೆಯೇನು? ಯಾರ್‍ಯಾರ ಕಡೆ ಎಷ್ಟು ರಕಮು ಇದೆ? ಕೆಲಸಗಾರರ ಹುದ್ದೆ ಏನು? ಮಂಡಳದ ಹೊರಗಿನ ಸ್ಥಾನವನ್ನು ಕೆಲಸಗಾರರ ಕಡೆ ಹೀಗೆ ರಕಂ ಇಡುವದು ವಿಹಿತವೇ? (೫) ಇನ್ನು ಪ್ರಾರ್ಥನೆ ಮಂಡಳದವರು ಮೇಲ್ಕಾಣಿಸಿದ ಆಕ್ಷೇಪಗಳನ್ನು ಪರಿಹರಿಸಬೇಕು ಮಂಡಳದ ಕಡೆ ರೈತರ ಕಷ್ಟನಿವಾರಣೆಯ ಬಗ್ಗೆ ಮುಂಬಯಿಯಲ್ಲಿ ಕೂಡಿಸಿದ ೩೫ ಸಾವಿರ ರೂಪಾಯಿಗಳು ಸಿಗಲಿಕ್ಕಿವೆ ಈ ಪೂರ್ತ ಹಣವನ್ನು ರೈತರ ಕಷ್ಟನಿವಾರಣೆಗೇ ವಿನಿಯೋಗಿಸಬೇಕು ರಿಝರ್ವ ಸಹರ ಗಳಿಗಾಗಿ ಮುಂಬಯಿಯಲ್ಲಿ ಈ ನಿಧಿ ಹಂಚುವಾಗ ವೆ ಬ್ಯಕ್ತಿಸಿದಂತೆ ಸಂಕಟಗ್ರಸ್ತರಲ್ಲಿ ತಾಲೂಕ ಭೇದದಿಂದ ಪಕ್ಷಪಾತವಾಗಲಿಕ್ಕಿಲ್ಲವಾಗಿ ಅಭಿವಚನ ಬೇಕು ಈಗಿನ ಕಷ್ಟನಿವಾರಕ ಮಂಡಳದ ವರ ಕಡೆಯಿಂದ ನಿಷ್ಪಕ್ಷಪಾತ ವರ್ತನವಾಗದಿದ್ದರೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಇಲ್ಲವೆ ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಬೇರೆ ಯೋಗ್ಯ ಜನರನ್ನು ಈ ನಿಧಿ ಹಂಚಲು ನೇಮಿಸತಕ್ಕದ್ದು ಇಲ್ಲದಿದ್ದರೆ ನಿಧಿಸಂಗ್ರಹದ ಪೂರ್ಣ ಪ್ರಯೋಜನ ರೈತರಿಗೆ ಸಿಗದು ನಿಧಿ ಕೊಟ್ಟವರಿಗೆ ಪೂರ್ಣ ಶ್ರೇಯಸ್ಸು ದೊರೆಯದು" ಇತ್ಯಾದಿ

ಕರ್ನಾಟಕದ ಪ್ರಸಿದ್ಧ ಹುಲಿ ಬೇಟೆಗಾರರಾದ ರಾ|| ಕೇಶವ ನಾ ಭಟ್ಟ ಹೆಗ್ಗರೆ ಇವರು ಕೆಂಗಿರಿ ತೆಂಗಿನ ತೋಟದಲ್ಲಿ ತಾ ೨೧-೫-೩೫ ನೇ ಸಾಯಂಕಾಲ ಮೂರು ಸಂಜೆಗೆ ಬಂದು ದೊಡ್ಡ ಕೊಲ್ಲುತ್ತಿದ್ದ ಹುಲಿಯನ್ನು ಒಂದೇ ಗುಂಡಿನಿಂದ ಕೊಂದುಹಾಕಿದರು ಹುಲಿಯು ೮|| ಅಡಿ ಉದ್ದವಿತ್ತು ರಾ| ಭಟ್ಟರು ಈ ವರೆಗೆ ೨೮ ಹುಲಿಗಳನ್ನು ಕೊಂದಿರುತ್ತಾರಂತೆ

ಮುಡೇಶ್ವರ— (ತಾ ೨ ೬-೩೫) ಇಲ್ಲಿಯ ಟಪಾಲ ಆಫಿಸನ್ನು ಬ್ರಾಂಚ ಆಫೀಸನ್ನಾಗಿ ಮಾಡಬೇಕಾಗಿ ಟಪಾಲ ಖಾತೆಯವರ ವಿಚಾರ ನಡೆದದೆ ಬ್ರಾಂಚ ಆಫೀಸಾದರೆ ಇಲ್ಲಿಯ ತಂತಿ ಆಫೀಸ ಹೋಗುತ್ತದೆ ತಂತಿ ಘಟಕಳದಂತ ಬರಬೇಕಾದೀತು ಹೊನ್ನಾವರ ಮತ್ತು ಭಟಕಳಗಳ ನಡುವೆ ತಂತಿ ಆಫೀಸ ಇದ್ದದ್ದು ಇಲ್ಲಿಯೇ ಇದನ್ನು ತಗೆದರೆ ಜನರಿಗೆ ಬಹಳ ಅನಾನುಕೂಲತೆಯಾಗುವದು ಕಾಯಕಿಣಿ ಬೈಲೂರು, ಮಾವಳ್ಳಿಗಳೆಲ್ಲಿಯ ಸುಮಾರು ೧೧೦೦೦ ಜನರಿಗೆ ಅನಾನುಕೂಲತೆಯಾಗುತ್ತದೆ ವಿಶೇಷ ವ್ಯಾಪಾರ ಮಾಡುವ ೩ ಸಾವಿರ ಮುಸಲ್ಮಾನರಿಗಂತು ಬಹಳ ತೊಂದರೆಯಾಗುವದು. ಮುಂಬಯಿ ಕಡೆಯಿಂದ ಬರುವ ತಾರುಗಳಿಗೆ ತೊಂದರೆ ಆಫೀಸಿನ ಉತ್ಪನ್ನವು ಎಲ್ಲೆಲ್ಲಿಯಂತೆ ಇಲ್ಲಿಯೂ ಅಗ್ಗದಾಗುವದು ಆದರೆ ಆದಕ್ಕಾಗಿ ಆಫೀಸನ್ನು ಒಮ್ಮೆಲೇ ತೆಗೆಯುವದು ಯುಕ್ತವಲ್ಲ ಈಗ ವ್ಯಾಪಾರ ಸುಧಾರಿಸುತ್ತಿದೆ ಆದರಿಂದ ೨ ವರ್ಷಗಳ ವರೆಗೆ ಕಾಯಬಹುದು ಈ ಗ್ರಾಂಟದಲ್ಲಿ ಅಧಿಕಾರಿಗಳು ಮುಖ್ಯವಾದ ವ್ಯಾಪಾರ ಸಂಪ್ರದಾಯವಿದೆ ತಂತಿಯ ಅಭಾವದಲ್ಲಿ ಸರಕಾರಿ ಕೆಲಸಕ್ಕೆ ಸಹ ತೊಂದರೆಯಾಗುವ ಸಂಗತಿಯನ್ನು ಈ ಹಿಂದೆ ಕಲೆಕ್ಟರರಾಗಿದ್ದ ಮಿ. ಹೇಗರವರು ಸ್ವತಃ ತಂತು ೧೯೨೩ನೇ ಇಸ್ವಿಯಲ್ಲಿ ಇಲ್ಲಿ ತಂತಿ ಆಫೀಸನ್ನು ತೆರೆದಿದ್ದರು ಇದನ್ನೆಲ್ಲ ವಿಚಾರಿಸಿ ಈ ಆಫೀಸನ್ನು ತೆಗೆಯುವ ವಿಚಾರವನ್ನು ಟಪಾಲ ಖಾತೆಯವರು ತ್ಯಜಿಸಬೇಕಾಗಿ ಹೊಸ್ಪೋಸ್ಟಮಾಸ್ತರ ಜನರಲ್‌ರವರಿಗೆ ಅರ್ಜಿ ಕಳಿಸಿಕೊಂಡಿರುತ್ತಾರೆ.

ಮುಂಡಗೋಡ— [ತಾ ೩-೬ ೩೫] ಅನ್ನಾಭಾವಳಿಯಲ್ಲಿ ನೀರಿಗೆ ದುಸ್ತರವಾಗಿದೆ ಎಷ್ಟೋ ಕಡೆಯಲ್ಲಿ ಕುಡಿಯಲಿಕ್ಕೆ ಸಹ ನೀರು ಸಿಗುವದು ಕಷ್ಟವಾಗಿದೆ ದನಗಳ ಗೋಳಂತೂ ಹೇಳಲಸಾಧ್ಯ ಜನರು ಚಿಂತಾಕ್ರಾಂತರಾಗಿದ್ದಾರೆ

ಎರಡು ವರ್ಷಗಳಿಂದ ಮಳೆ ಸರಿಯಾಗಿ ಬೀಳದ್ದರಿಂದ ಬೆಳೆ ಸರಿಯಾಗಿ ಸಿಕ್ಕಿರುವದಿಲ್ಲ ಸರಕಾರಕ್ಕೆ ಉದುರಿಸುವದರಿಂದ ಸ್ವಲ್ಪ ಕಷ್ಟ ಕಾಯಬೇಕು ತಗಾವಿ ಕೊಡುವ ಕ್ರಮದಲ್ಲಿ ಸುಧಾರಣೆಯಾಗುವದವಶ್ಯ ಈಗ ತಗಾವಿ ಹಣ ಜೂನ-ಜುಲೈ ತಿಂಗಳಲ್ಲಿ ದೊರೆಯುತ್ತದೆ ರೈತರು ಸಾಗುವಳಿಗೆ ಎತ್ತು-ಬೀಜ ಮುಂತಾದವುಗಳನ್ನು ಬಿತ್ತಿಗೆ ಹಂಗಾಮಿಗೆ ೧ ತಿಂಗಳು ಮುಂಚೆಯಾಗಿಯೇ ಸಾಧಾರಣವಾಗಿ ಎಪ್ರಿಲ್ ತಿಂಗಳಲ್ಲೇ ಕೊಂಡುಕೊಳ್ಳಬೇಕಾಗುತ್ತದೆ, ಆ ಪೂರ್ವದಲ್ಲೇ ತಗಾವಿ ಸಿಕ್ಕರೆ ಬಹಳ ಅನುಕೂಲವಾದೀತು ಇಲ್ಲದಿದ್ದರೆ ರೈತರು ಬೇಕಾದ ಎತ್ತುಗಳನ್ನು ಉದ್ರಿಯಾಗಿ ಕೊಂಡುಕೊಂಡು ಹೆಚ್ಚಿಗೆ ಬೆಲೆ ಕೊಡಬೇಕಾಗುತ್ತದೆ ತಗಾವಿ ಹಣ ಮುಂಚೆಯೇ ದೊರೆತರೆ ರೋಖ ವ್ಯವಹಾರ ಮಾಡಿ ಅಗ್ಗದಲ್ಲಿ ಕೊಂಡುಕೊಳ್ಳಬಹುದಾಗಿದೆ ಜಿಲ್ಲಾಧಿಕಾರಿಗಳು ವಿಚಾರ ಮಾಡುವರೇನು?

ಹಳಿಯಾಳ— (ತಾ ೨ ೬-೧೯೩೫) ಮುಂಜಾನೆ ನೋಡಿದ ಮಳೆ ಬೀಳುತ್ತದೆಂಬಂತೆ ಭಾಸವಾಗುತ್ತದೆ ಆದರೆ ಥಟ್ಟನೆ ನೋಡ ಬಯಲಾಗಿ ಬಿಸಿಲಿನ ತಾಪ ಹಳ್ಳಿಗಳಲ್ಲಂತೂ ಕುಡಿಯುವ ನೀರಿಗೆ ತೊಂದರೆ ದನಗಳ ಗೋಳು ಹೇಳತೀರದು ಜನರು ಚಿಂತೆಗೀಡಾಗಿದ್ದಾರೆ ತಾ ೩೧—೫—೩೫ನೇದಿನ ಗುತ್ತಿಕೇರಿ ಗ್ರಾಮದಲ್ಲಿ ಮ್ಯುನಿಸಿಪಾಲಿಟಿಯವರು ಕಟ್ಟಿಸಿದ ಬಾವಿಯ ಉದ್ಘಾಟನ ಸಮಾರಂಭವು ಜಿಲ್ಲಾಧಿಪತಿ ರಾ| ದೀಕ್ಷಿತರವರ ಪತ್ನಿಯರ ಹಸ್ತದಿಂದ ನೆರವೇರಿತು ಈ ಉತ್ಸವದ ಖರ್ಚನ್ನು ರಾ|| ಬಾಲಕೃಷ್ಣರಾವ ಕೊಟ್ಟರು. ರಾ| ಬಾಲಕೃಷ್ಣರೇ ಯಾಕೆ ಈ ಸಮಾರಂಭದ ಬಗ್ಗೆ ಖರ್ಚು ಕೊಟ್ಟ ಕಾರಣವೇನೆಂದು ತಿಳಿಯಲಿಲ್ಲ ಮ್ಯುನಿಸಿಪಾಲಿಟಿ ಬಾವಿಗೆ ಉದ್ಘಾಟನ ಸಮಾರಂಭವೆಂದರೆ ಸ್ವಲ್ಪ ವಿಶೇಷ ಕಾಣುತ್ತದೆ ಇಲ್ಲಿಯ ಮ್ಯುನಿಸಿಪಾಲಿಟಿಯವರು ಹೊಸ ಕಾಯದೆಯನ್ನನುಸರಿಸಿ ಸಾರ್ವಜನಿಕ ಕೆರೆ ಬಾವಿಗಳ ನೀರನ್ನು ಸಮಸ್ತರೂ ಉಪಯೋಗಿಸಬಹುದೆಂದು ಜಾಹೀರನಾಮೆ ಹೊರಡಿಸಿದ್ದಾರೆ. ಆದರೆ ಈಗಿನ ವಿಠ್ಠಲಗುಡಿಯ ಹಿಂದಿನ ಚೀರಾ ಬಾವಿಗೆ ಹರಿಜನರಾದ ಸಮುತ್ತರಿಗೆ ಸಹ ಆಗುವದಾಗಿ ನೋಟೀಸ ಬೋರ್ಡ ಇದೆ, ಆದರೆ ಹರಿಜನರಿಗೆ ಬಾವಿಯ ಅಚ-ಕಟ್ಟೆ ಹತ್ತಗೊಡುವದಿಲ್ಲ. ಮಾಗಿಸ್ತ್ರೀ ಮಹಾದೇವಭಾಯಿ ದೇಸಾಯಿಯವರು ಕಳೆದ ಜೂನ ೧ನೇ ತಾರೀಖಿನ 'ಹರಿಜನ' ಸಂಚಿಕೆಯಲ್ಲಿ ಹೇಳಿದ್ದಾರೆ. ಈ ಪ್ರಕಾರ ಆಗದಂತೆ ಅಧಿಕಾರಿಗಳು ಜಾಗ್ರತೆ ವಹಿಸಬೇಕು

ಶಿರಶಿ— (ತಾ ೯-೬-೩೫) ಮಳೆಯಿಲ್ಲ ನೀರಿಲ್ಲದೆ ಜನರ ಗೋಳು ಅಕ್ಕಿಯ ಧಾರಣೆ ಏರಿದೆ

ಊರತಾಂಬು ಬಂದೇ ಮಾರ್ಗ ಸಪ್ತಂಬರ ತಿಂಗಳಲ್ಲಿ ಬಸ್ಸು ತಾರಾಮನಿಗೆ ಪೋಲೀಸರು ಒಳ್ಳೇ ಏಟು ಕೊಟ್ಟು ಪೇಟೆಯೊಳಗಿಂದ ಎಳದೊಯ್ದಿದ್ದರು ಈ ಕುರಿತು ಅವು ಲ ಬಾತಮಿವರು ಸಾಕ್ಷ್ಯನಾಗಿ ಬ್ಯಾಕ ನಡಿಸಿ ಪೋಲೀಸ ಕೇದೆಗಳ ಮೇಲೆ ಫಿರ್ಯಾದನ್ನು ಕೊಟ್ಟಿದ್ದರು ಪೋಲೀ ಸರು ತಾರಮನ್ನನ ಮೇಲೆ ಒಂದು ಖಟ್ಲೆ ಮಾಡಿಕೊಟ್ಟಿದ್ದರು ಹೀಗೆ ಪೋಲೀಸ-ಟಪಾಲ ಬಾತಗಳೊಳಗಿನ ವಿಷಾ ದದಿಂದ ಪೋಲೀಸರ ನಿಜರೂಪವು ಬೈಲಿಗೆ ಬರುವದಾಗಿ ಜನರು ಎಣಿಸಿ ಅದರ ನಿಕಾಲಿ ಕಾಯ್ದುಕೊತ್ತಿದ್ದರು ತಾರ ಮನ್ನನ ಮೇಲೆ ಕೊಟ್ಟ ಫಿರ್ಯಾದಿಯಲ್ಲಿ ಪೋಲೀಸರಿಗೆ ಸಾಕ್ಷಿ ವಕೀಲರ ಜಂಬು ವಿಶ್ವಾಗಿ ತಿರಿಯುತ್ತದೆ, ಪ್ರಕರಣ ಕಳೆದ ತಾ, ೩೦ನೇಗೆ ಥಕ್ಕನೆ ನಿಜಾಯಿಯು ಪೋಲೀಸರು ತಮ್ಮ ಖಟ್ಲೆಯನ್ನು ತೆಗೆದುಕೊಂಡರು, ತಾರಮನ್ನನ ಫಿರ್ಯಾದಿ ತಾರಮನ್ನನ ಖರ್ಚು ಕೊಟ್ಟರು, ಇದರ ಉದ್ದೇಶ? ಪೋಲೀಸರು ತಾರಮನ್ನನಿಗೆ ನಿಷ್ಕಾರಣವಾಗಿ ಕೊಡೆದದ್ದು ನಿಜವಿದ್ದರೆ ಆತನಿಗೆ ಶಾಸನವು ಬೇಕಿಲ್ಲವೇ?

ಶ್ರೀ ... ಸ್ಕೂಲಿನಿಂದ ಈ ಸಾರೆ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ೧೬ ಹುಡುಗರು ಹೋಗಿದ್ದರು ಅವರಲ್ಲಿ ನಾಲ್ವರು ತೇರ್ಗಡೆ ಹೊಂದಿದರು, ... ಉತ್ತೀರ್ಣರಾದ ಈ ಶಾಲೆಯು ವಿದ್ಯಾರ್ಥಿ ... ಜನರು ಹೋಗಿದ್ದರು; ಅವರಲ್ಲಿ ನಾಲ್ಕು ಹುಡುಗರು ತೇರ್ಗಡೆ ಹೊಂದಿದ್ದಾರೆ ಹೀಗೆ ಒಟ್ಟು ... ರಲ್ಲಿ ೮ ಜನರು ಉತ್ತೀರ್ಣರಾದರು.

ಜಾಹೀರ ನೋಟೀಸಿಗೆ ಜಾಹೀರ ಉತ್ತರ

ಹೊನ್ನಾವರ ತಾಲೂಕ ಬಟ್ಕಳ ಪೇಟಾ ಮೂಢ ಭಟ್ಕಳದಲ್ಲಿರುವ ಮಂಜನಾಥ ಗೋಪಾಲಕೃಷ್ಣ ಹೆಬ್ಬಾರ ಇವರು ಇದರ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ — ರಾಮಕೃಷ್ಣ ನಾಗಪ್ಪ ಹೆಬ್ಬಾರನು ತಾ ೨೦-೫-೧೯೩೭ ನೇ 'ಕಾನಡಾವೃತ್ತ'ದ ಪತ್ರಿಕೆಯಲ್ಲಿ ಕೊಟ್ಟ ಜಾಹೀರ ನೋಟೀಸಿನ ಮಜಕೂರು ಪೂರ್ಣ ಸುಳ್ಳು ಇರುತ್ತದೆ ಸದ್ರಿ ರಾಮಕೃಷ್ಣ ನಾಗಪ್ಪ ಹೆಬ್ಬಾರನ ತಂದೆ ಮೃತ ನಾಗಪ್ಪಾ ಮಂಜ ಹೆಬ್ಬಾರ ವ ನನ್ನ ತಂದೆ ಗೋಪಾಲಕೃಷ್ಣ ಹೆಬ್ಬಾರ ಇವರೊಳಗೆ ಹೊನ್ನಾವರ ಸಬಜಡ್ಜ ಕೋರ್ಟಿನಲ್ಲಿ ಮೂಲ ನಂಬರ ೧೯೨೬ ನೇಗೆ ವಾಂಟಣಿ ದಾವಾ ನಡೆದು, ಆದರ ಮೇಲೆ ಕಾರವಾರ ಡಿಸ್ಟ್ರಿಕ್ಟ ಕೋರ್ಟ ಅಪೀಲ ನಂಬರ ೧೯೨೭, ಸೆಕೆಂಡ ಅಪೀಲ ನಂಬರ ೧೯೨೮ ಆಗಿ ಹೊನ್ನಾವರ ಸಬಜಡ್ಜ ಕೋರ್ಟಿನ ದರಖಾಸ್ತ ನಂಬರ ೧೯೨೯ ರಲ್ಲಿ ರಾಜಿಯಿಂದ ತಾ ೧೨-೪-೧೯೦೬ ನೇ ದಿವಸ ನಮ್ಮ ಕುಟುಂಬದ ಆಸ್ತಿಗಳು ವಾಂಟಣಿಯಾಗಿರುತ್ತವೆ, ಹೀಗೆ ವಾಂಟಣಿ ಆದ ನಂತರ ನನ್ನ ತಂದೆಯು ಪಡಕೊಂಡ ಆಸ್ತಿಯಲ್ಲಿ ಅಂಶ ಕೇಳುವ ದುರುದ್ದೇಶದಿಂದ ಸದರಿ ರಾಮಕೃಷ್ಣ ಹೆಬ್ಬಾರನು ಭಲತೆ ಮಜಕೂರು ಕಾಣಿಸಿ ನೋಟೀಸು ಕೊಟ್ಟಿರುತ್ತಾನಾಗಿ ಕಾಣುತ್ತದೆ ಮೇಲೆ ಹೇಳಿದ ದರಖಾಸ್ತ ನಂಬರ ೧೯೨೯ ರಲ್ಲಿ ಆದ ವಾಂಟಣಿಯಂತೆ ಪ್ರಾಪ್ತವಾದ ನನ್ನ ತಂದೆಯ ಸ್ವಪ್ರಕೃತ ಅಂಶದ ಆಸ್ತಿಯಲ್ಲಿ ವ ನಂತರ ನನ್ನ ತಂದೆಯು ಪಡಕೊಂಡ ಆಸ್ತಿಯಲ್ಲಿ ಸದ್ರಿ ರಾಮಕೃಷ್ಣ ಹೆಬ್ಬಾರನಿಗೆ ಏನೂ ಹಕ್ಕು ಇರುವದಿಲ್ಲ, ಅವನು ನನ್ನ ಅವಿಭಕ್ತ ಕುಟುಂಬಕ್ಕೆ ಒಪ್ಪಿದವನಲ್ಲ

ತಾ ೬-೬-೧೯೩೭

ಮಂಜನಾಥ ಗೋಪಾಲಕೃಷ್ಣ ಹೆಬ್ಬಾರ.

ನಮ್ಮ ಜಯಭೇರಿ!

ಮಕ್ಕಳಿಗೆ ಆಗುವ ಭಯಂಕರವಾದ ಲಿವರ್ ಕಂಪ್ಲೇಂಟು (ಕೂರ್ಮವ್ಯಾಧಿ) ಮತ್ತು ಜ್ವರಕ್ಕೆ ಜಮ್ಮಿ ವೆಂಕಟರಮಣಯ್ಯನವರು

'ಲಿವರ್ ಕ್ಯೂರ್' (ರಿಜಿಸ್ಟರ್ಡ್)

ಎಂಬ ದಿವ್ಯೌಷಧವನ್ನು ತಯಾರಿಸುವದರಲ್ಲಿ ಸಂಪೂರ್ಣ ಜಯ ಹೊಂದಿರುತ್ತಾರೆ. ಶುದ್ಧವಾದ ದೇಶಿ ಸಾಮಾನುಗಳಿಂದ ಇವನ್ನು ತಯಾರಿಸಿರುವದರಿಂದ ಅವು ಪೂರ್ಣ ತೃಪ್ತಿ ಕೊಡುವುವೆಂದು ನಮ್ಮ ಭರವಸೆ. ಈ ಔಷಧವು ಕಾಹಿಲೆಯನ್ನು ಗುಣ ಮಾಡುವುದಲ್ಲದೆ ಕಾಹಿಲೆಯೂ ಬಾರದಂತೆ ಮಾಡುವುದರಿಂದ ಮಕ್ಕಳನ್ನು ಜನರ ತೃಪ್ತಿಗೆ ಕಾರಣವಾಗಿದೆ. ಹೆಚ್ಚಿನ ಮಾಹಿತಿಗೆ ಈ ದಿನವೇ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ. ಕ)

Established 1900 | ಶ್ರೀ | FIXED RATE.

ದಾಸಪ್ಪಾ ಕೃಷ್ಣಪ್ಪಾ ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಸಿ.

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ್ದ ಪಕ್ಕಾ ರೇಶ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳು, ಜರೀ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಶ್ಮೆ ಖದ್ದರ ವ ಪಂಚೆಗಳೂ, ಸಾದ ಮಡಿಗಳೂ, ಮುಂತಾದ ಎಲ್ಲಾ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕುಗಳು, ಛತ್ರಿಗಳೂ ವಗೈರೆ ಎಲ್ಲಾ ತರದ ಮ್ಹಾಲು ಆಬಾಲವೃದ್ಧರಿಗೂ ಬೇಕಾಗುವ ಏನೊಂದೂ ಭಯವಿಲ್ಲದೆ ನ್ಯಾಯ ದರದಿಂದ ಸಿಗುವವು. ರೋಖ ವ್ಯಾಪಾರಕ್ಕೆ ಕಮಿಶನ ದೊರೆಯುವದು.

Tel - "Honesty"] D. K. DHAKAPPA BROS.,

Cloth Merchants,

SIRSI. N. KANARA.

ಹೊಸ ಮ್ಹಾಲು. | ದರ ಅಗ್ಗ.

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಹೊಸ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಕ್ಕಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆಯಲಿಕ್ಕೆ ಹೇಳುವದು.

Kumta Agents -
D. K. Nayak Bros.
D. S. Pai.
N. K. Nayak.
Honavar Agent.-
R. V. Prabhu Esq.

K. Padmanabha Rao & Sons,
BELGAUM
Chief Agents for
Karnatak Districts & S. M. States

ಅಲ್ಲಲ್ಲಿ ಇಷ್ಟಿಷ್ಟು!

[೯ನೇ ಪುಟದಿಂದ ಮುಂದರಿಸಿದ್ದು.]

ಸರಕಾರದವರಿಗೆಲ್ಲಿ ಸಹಾನುಭೂತಿಯ ಸಂದೇಶಗಳ ಹೊರತು ದ್ರವ್ಯ ಕಳಿಸಿದ ವಾರ್ತೆ ಇಲ್ಲ. ಅಮೇರಿಕೆಯ ರೆಡ್ ಕ್ರೊಸ್ ಎಂಬ ಶುಶ್ರೂಷಾ ಪಥಕದವರು ೫೦೦೦ ಡಾಲರುಗಳನ್ನು ಔಷಧೋಪಚಾರಕ್ಕಾಗಿ ಕಳುಹಿದ್ದಾರೆ.

*

ಈ ವಿಪತ್ತಿನಲ್ಲಿಯೂ ಸ್ವತಂತ್ರ-ಪರತಂತ್ರವೆಂಬ ಭೇದ ಬೈಲಿಗೆ ಬಂತು. ಭೂಕಂಪನಾದೊಡನೆ ಲಗಬಗೆಯಿಂದ ಅಧಿಕಾರಿಗಳು ಸತ್ತುಹೋದ ಯುರೋಪಿಯನ್‌ರ ಹೆಸರುಗಳನ್ನು ತಂತಿ ಮೂಲಕ ಲಂಡನಿಗೆ ತಿಳಿಸಿದರು. ತೀರಿಕೊಂಡ ಹಿಂದೀ ಪ್ರಮುಖರ ಯಾದಿ ತಯಾರಿಸಲಿಲ್ಲ. ಈ ಕುರಿತು ಒಳ್ಳೇ ಚರ್ಚೆ ನಡೆಯಿತು. ಅದಕ್ಕೆ ಸಿಮ್ಲಾದೊಳಗಿನ ಸುದ್ದಿಗಾರರು ಚೌಕಶಿ ಮಾಡಿ ಪ್ರಕಟಿಸುವದೇನಂದರೆ:- "ಯುರೋಪಿಯನ್‌ರು ಬ್ರಿಟಿಶರು. ಬ್ರಿಟಿಶ ದೇಶದಲ್ಲಿ ಪಾರ್ಲಿಮೆಂಟ ಯಾನೆ ಲೋಕಪ್ರತಿನಿಧಿ ಸಭೆಗೆ ಜವಾಬದಾರವುಳ್ಳ ರಾಜ್ಯಪದ್ಧತಿಯಿದೆ. ಪ್ರಧಾನರು ಪಾರ್ಲಿಮೆಂಟಿಗೆ ಜವಾಬದಾರರು ಆದರಿಂದ ಸತ್ತುಹೋದ ಭೂಕಂಪಗ್ರಸ್ತ ಯುರೋಪಿಯನ್ ಪ್ರಜೆಗಳ ವಾರ್ತೆಯನ್ನು ಅವರು ಗಾಬರಿಯಿಂದ ಪಡೆದು ಪ್ರಕಟಿಸಬೇಕಾಯಿತು. ಹಿಂದುಸ್ಥಾನ ಸರಕಾರವು ಹಿಂದೀ ಪ್ರಜೆಗಳಿಗೆ ಜವಾಬದಾರವುಳ್ಳ ಸಂಸ್ಥೆಯಲ್ಲ. ಆದರಿಂದ ಹಿಂದೀ ಪ್ರಮುಖರ ಪಟ್ಟಿ ತಯಾರಿಸಲು ವಿಳಂಬವಾಯಿತು. ಸರಕಾರಕ್ಕೆ ಯುರೋಪಿಯನ್‌ರ ಮೇಲೆ ಮಮತೆ ಹೆಚ್ಚು, ಹಿಂದೀ ಪ್ರಜೆಗಳ ಮಮತೆ ಕಡಿಮೆ, ಹೀಗೆ ವಿಪರೀತ ಅರ್ಥ ಮಾಡಿಕೊಳ್ಳಲಾಗದು. ಬ್ರಿಟಿಶ-ಹಿಂದುಸ್ಥಾನದೊಳಗೆ ರೂಢವಾಗಿರುವ ಭಿನ್ನ ಭಿನ್ನ ರಾಜ್ಯಪದ್ಧತಿಗಳ ಪರಿಣಾಮವಿದು." ಸಂಪತ್ತು-ವಿಪತ್ತುಗಳಲ್ಲಿಯೂ, ಸುಖ-ದುಃಖಗಳಲ್ಲಿಯೂ ಸ್ವಾತಂತ್ರ್ಯ-ಪಾರತಂತ್ರ್ಯಗಳಿಂದ ಸ್ಥಿತ್ಯಂತರಗಳುಂಟಾಗುತ್ತವೆ. ಪಾರ್ಲಿಮೆಂಟಿಗೆ ಭಾರತ ಮಂತ್ರಿಗಳು ಅಧೀನವಾಗಿರುವದರಿಂದ ಹಿಂದುಸ್ಥಾನ ಸರಕಾರವು ಭೂಕಂಪಗ್ರಸ್ತ ಯುರೋಪಿಯನ್‌ರ ಉಪಚಾರಕ್ಕಾಗಿ ವಿಶೇಷ ವ್ಯವಸ್ಥೆ ಮಾಡಿದರೆ ಆಶ್ಚರ್ಯವಿಲ್ಲ. ವರ್ಣಭೇದದ ಮೂಲಕ ಯುರೋಪಿಯನ್‌ರೆಂದು ಅವರಿಗೆ ಹೆಚ್ಚಿನ ಉಪಚಾರವಾಗುತ್ತಿದ್ದಾಗಿ ಸರಕಾರದ ಮೇಲೆ ವೃಥಾರೋಪ ಹೊರಿಸಲಾಗದು. ರಾಜ್ಯಪದ್ಧತಿಯ ನಿರ್ಬಂಧಗಳಿಂದ ಯುರೋಪಿಯನ್‌ರ ಸೌಕರ್ಯಗಳಿಗಾಗಿ ಹಿಂದುಸ್ಥಾನ ಸರಕಾರವು ಮೊಟ್ಟಮೊದಲು ಪ್ರಯತ್ನಪಡಬೇಕಾಗಿದೆ. ಹಿಂದೀ ಪ್ರಮುಖರೂ, ರಾಷ್ಟ್ರೀಯ ಸಭೆಯ ಕಾರ್ಯನಿರ್ವಾಹಕರೂ ಅತ್ತ ಕಡೆ ಹೋದಲ್ಲಿ ಪಕ್ಷಪಾತದ ಆರೋಪ ಹೊರಿಸಿ ಅನಾವಶ್ಯಕವಾದ ಲೋಕಾಪವಾದವನ್ನು ಉಂಟುಮಾಡಬಹುದೆಂದು ಸೈನ್ಯಾಧಿಕಾರಿಗಳು ಮುಂದಾಗಿ ಎಣಿಸಿ ಅವರಿಗೆ ಪ್ರತಿಬಂಧಿಸಿರಬಹುದೇನೆಂಬದೊಂದು ಸಂದೇಹವುಂಟಾಗುತ್ತದೆ. ಭೂಕಂಪದಂಥ ದೈವೀ ಆಪತ್ತಿನ ಸಮಯ ಭರತ ಭೂಮಾತೆಯ ದೈನ್ಯಾವಸ್ಥೆ ಪ್ರಕಟವಾದದ್ದು ಶೋಚನೀಯ. ಮೆಟ್ಟಮೆಟ್ಟಿಗೂ ಹಿಂದೀಯರ ಉದ್ಧಾರ ಕಾರ್ಯದಲ್ಲಿ ಪಾರತಂತ್ರ್ಯವೇ ಅಡ್ಡಗಟ್ಟುತ್ತದೆ. ಇದಕ್ಕಾಗಿಯೇ ರಾಷ್ಟ್ರೀಯ ಸಭೆಯವರು ಸ್ವಾತಂತ್ರ್ಯ ಸಂಗ್ರಹಕ್ಕಾಗಿ ಎಡೆಬಿಡದೆ ಹೋರಾಡುತ್ತಿದ್ದುದು.

*

ಬಿರುದಿನ ಯಾದಿ ಸೋಮವಾರ ಪ್ರಕಟ ಹೊಂದಿತು. ರೌಪ್ಯ ರಾಜ್ಯಾರೋಹಣೋತ್ಸವ ಕಾರ್ಯದಲ್ಲಿ ಬಿರುದಿನ ಆಸೆಯಿಂದ ಮುಂದಾಗಿ ದುಡಿದವರು ತೀರ ನಿರಾಶರಾದರು. ಬಿರುದಿನ ಯಾದಿ [illegible] ಪಟ್ಟು ಬೆಳೆಯುವದಾಗಿಯೂ ಬಹಳ ಜನರಿಗೆ ಬಿರುದಿನ ಪಂಚಖಾದ್ಯ ಹಂಚಿ ಅಧಿಕಾರಿಗಳು ಸಂತೃಪ್ತರಾಗಿಯೂ ಪತ್ರಿಕಾ ಪ್ರತಿನಿಧಿಗಳು ವ[illegible]ದ ಎಣಿಕೆಗಳೆಲ್ಲ ನಿರರ್ಥಕವಾದವು. ಈ ವ[illegible] ಯಾದಿ ವರ್ಷಾಸನಕ್ಕಿಂತ ಚಿಕ್ಕದು. ನಮ್ಮ [illegible]ಯಲ್ಲಂತು ಒಬ್ಬ ಮಹಾನುಭಾವರಿಗೂ ಬಿರುದಿನ ಭಾಗ್ಯ ದೊರೆಯಲಿಲ್ಲ! ಉತ್ಸವದ ದಿನ ಬಿರುದು ದೊರಕುವದು ಎಂಬದಾಗಿ ಮೊದಲಿನ ಆಸೆ; ಆ ಮೇಲೆ ಜನ್ಮದಿನ ಕಿತಾಬು ದೊರೆಯುವದು ಎಂಬದಾಗಿ ಆಸೆ ಹುಟ್ಟಿತು. ಉತ್ಸವ ಕಾರ್ಯಕರ್ತರ ಸಂಪೂರ್ಣ ಯಾದಿ ಮೇಲ್ತನಿಖೆ ತಲ್ಪಲು ವಿಳಂಬವಾದ್ದರಿಂದ ಇದೇ ಕ್ರೈಸ್ತ ಯುಗಾದಿಯಲ್ಲಿ ಇವರೆಲ್ಲರ ಕಿತಾಬಿನ ಪಟ್ಟಿ ಪ್ರಕಟವಾಗುವದೆಂದು ಸಿಮ್ಲಾದೊಳಗಿನ ಸುದ್ದಿಗಾರರು ಪ್ರಕಟಿಸಿ ನಿರಾಶರಾದವರಿಗೆ ಆಶಾಂಕುರ ತೋರಿಸಿ ಇನ್ನೂ ಅಧಿಕಾರಿಗಳ ಮರ್ಜಿ ಸಂಪಾದನೆಯ ಕಾರ್ಯವನ್ನು ಎಡೆಬಿಡದೆ ನಡಿಸಲು ಪ್ರೋತ್ಸಾಹಿಸುತ್ತಾರೆ. ಯುಗಾದಿಯ ಪಟ್ಟಿಯಲ್ಲಿ ಹೆಸರು ಬರದಿದ್ದರೆ ಜನ್ಮದಿನದ ಪಟ್ಟಿಯ ಮೇಲೆ ಹವಾಲೆ ಕೊಟ್ಟರಾಯಿತು. ಕಿತಾಬುಕಾಂಕ್ಷಿಗಳು 'ಪರಮಾತ್ಮನ ಕಡೆ ದೀರ್ಘಾಯುಷ್ಯವನ್ನು ಬೇಡಿಕೊಂಡು ಅಧಿಕಾರಿಗಳ ಅಂಬೋಣದಂತೆ ಭಕ್ತಿಯಿಂದ ನಡಕೊಂಡು ೬-೬ ತಿಂಗಳಿಗೊಮ್ಮೆ ಬರುವ ಪ[illegible] ಯೋಗಗಳನ್ನು ಹಾರೈಸುತ್ತಿರಬೇಕು. ಅಂದರೆ ಒಂದಲ್ಲ [illegible] ಪಟ್ಟಿಯಲ್ಲಿ ಹೆಸರು ಬರಲೇಬೇಕು. ನಿರಾಶೆಯನ್ನು [illegible] ಅಪಯಶಸ್ಸೇ ಯಶೋಮಂದಿರದ ಪಾವಟಿ[illegible]ದೆಣಿಸಿ ಆಶೆ ಹಿಡಿದು ಕಿತಾಬು ಕಾಂಕ್ಷಿಗಳು [illegible]ಂಡ ಕಾರ್ಯವನ್ನು ಅಪ್ರತಿಹತವಾಗಿ ಮುಂದರಿಸಬೇ[illegible]ದು ಸಿಮ್ಲಾದೊಳಗಿನ ಸುದ್ದಿಗಾರರ ಒಯಕೆ.

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿರಿ!

ಪೊಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಕಂಪನಿ.

ಪೊಲೀಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ !!

ವಿ. ಸೂ. 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು !

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರಕೊಳ್ಳತಕ್ಕದ್ದು।

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು:- ಮೆಸರ್ಸ ಜೀವನ ಏಜನ್ಸಿ, ಕಾರವಾರ.

ಸುಲಭ ಕ್ರಯ! **ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ.** ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ



(Registered Trade Mark.)

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಕಾಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ, ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ.ಪಿ. ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವಿ. ಪಿ ೦-೫-೦.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ —(ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಮೌಂಟರೋಡ ಮದ್ರಾಸ.

ಓಂ

'दशमूलारिष्ट.'
ದಶಮೂಲಾರಿಷ್ಟ

ಇದು ಓಮುತ್ತರದಾ... ಎಲ್ಲಾ ಆಯುರ್ವೇದ ವೈದ್ಯರ ... ಹಾಗೂ ... ಫಾರ್ಮಸಿಗಳಲ್ಲೂ ಸಿಗು... ವ ಔಷಧವ ... ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ... ಕಡಿಮೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ ದಶಮೂಲಾರಿಷ್ಟವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ... ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ... ಆಗಿರುತ್ತದೆ.

— ಬಂಗಾಲದೊಳಗಿನ ಸ್ಥಾನಬದ್ಧ ಕೈದಿಗಳ ಮಾಹಿತಿಯನ್ನು ಸಂಗ್ರಹಿಸಿ, ಅವರ ಸ್ಥಿತಿ-ಗತಿ ಬಗ್ಗೆ ವರದಿಯನ್ನೊಪ್ಪಿಸುವರೆ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನವರು ಶ್ರೀ|| ಮೋಹನಲಾಲ ಸಕ್ಸೆನಾ ಇವರ ಅಧ್ಯಕ್ಷತೆಯಲ್ಲಿ ಒಂದು ಮಂಡಳವನ್ನು ನೇಮಿಸಿದ್ದಾರೆ. ಶ್ರೀ|| ಸಕ್ಸೆನಾರವರು ಒಂದು ಪ್ರಕಟಣೆಯನ್ನು ಹೊರಡಿಸಿ, ಅಲ್ಲಲ್ಲಿಯ ಸ್ಥಾನಬದ್ಧ ಕೈದಿಗಳ ಬಗ್ಗೆ ತಮತಮಗಿರುವ ಮಾಹಿತಿಯನ್ನು ತಮ್ಮ ಕಡೆಗೆ ಕಳಿಸಿಕೊಡಬೇಕಾಗಿ ಸಾರ್ವಜನಿಕರಿಗೆ ಬಿನ್ನೈಸಿದ್ದರು. ಒಂದು ಪ್ರಶ್ನಾವಲಿಯನ್ನೂ ಅವರು ಪ್ರಕಟಿಸಿದ್ದರು. ಆದರೆ ಈ ವರೆಗೆ ತನಕ ಯಾರೂ ಮಾಹಿತಿ ಕಳಿಸಿಕೊಡಲಿಲ್ಲ. ಸರಕಾರದ ಭೀತಿಯಿಂದ ಜನರು ಮಾಹಿತಿ ಕೊಡಲು ಅಂಜಿರಬೇಕೆಂದು ಕಮಿಟಿಯವರ ಅಭಿಪ್ರಾಯವಾಗಿ ಅವರು ಈಗ ಬಂಗಾಲದಲ್ಲಿ ಸಂಚಾರ ಮಾಡಿ ಸ್ವತಃ ಮಾಹಿತಿ ಸಂಗ್ರಹ ಮಾಡಬೇಕೆಂದು ನಿರ್ಣಯಿಸಿದ್ದಾರೆ. ಆದರೆ ಕಮಿಟಿಯ ಕಾರ್ಯಕ್ಕೆ ಸರಕಾರವು ತಡೆಹಾಕುವದಾಗಿಯೂ ಕಮಿಟಿಯು ವರದಿಯು ಹೊರಬೀಳುವಷ್ಟರಲ್ಲಿ ಅದನ್ನು ಜಪ್ತ ಮಾಡುವದಾಗಿಯೂ 'ಯುನೈಟೆಡ್ ಪ್ರೆಸ್' ವಾರ್ತಾ ಸಂಸ್ಥೆಗೆ ತಿಳಿದುಬಂದಿದೆಯಂತೆ. ಸರಕಾರದವರು ಕಮಿಟಿಯ ಮೆಂಬರರ ಪತ್ರವ್ಯವಹಾರವನ್ನು ತೆರೆದು ನೋಡುತ್ತಾರೆಂತಲೂ ಸುದ್ದಿ ಹಬ್ಬಿದೆ.

ಹೇಳಬರದು ಯುದ್ಧವೆಸಗಿದ್ದಲ್ಲಿ ರುಮಾನಿಯಾ ದೇಶದೊಳಗಿಂದ ಸೈನ್ಯವನ್ನೊಯ್ಯಗೊಡುವಂತೆ ರುಮಾನಿಯಾ ಸರಕಾರದ ಕಡೆ ರುಶ್ಯ ಸರಕಾರವು ಆಲೋಚನ ಮಾಡುವದಂತೆ ೧೯೧೭ನೇ ಇಸ್ವಿಯಲ್ಲಿ ರುಮಾನಿಯಾ ಅರಸರು ಆಂಸು ಮೌಲ್ಯದ ರತ್ನಾದಿಗಳನ್ನು ರುಶ್ಯರ ಕಡೆ ಇಡಗೊಟ್ಟಿದ್ದರಂತೆ ಅವನ್ನು ತಿರುಗಿ ಕೊಟ್ಟಲ್ಲಿ ರುಶ್ಯರಿಗೆ ರುಮಾನಿಯಾ ಸರಕಾರವು ಸೈನ್ಯವನ್ನು ಒಯ್ಯಗೊಡಬಹುದಂತೆ ಬ್ರಿಟಿಶ ದೇಶದಲ್ಲಿ ಯುದ್ಧಕಾರ್ಯಕ್ಕಾಗಿ ಪಟ್ರೋಲ ನಲಮನೆಗಳನ್ನು ರಚಿಸುವ ಉದ್ಯೋಗದಲ್ಲಿ ಸರಕಾರವು ತೊಡಗಿರುವದಂತೆ ಮಹಾಯುದ್ಧದಲ್ಲಿ ವ್ಯಭಿಚಾರದಿಂದ ಹುಟ್ಟಿದ ಮಕ್ಕಳಿಗೆಲ್ಲ ಫ್ರೆಂಚರು ಸೈನ್ಯಪಥಕದಲ್ಲಿ ಸೇರಿಸಿಕೊಂಡಿದ್ದಾರೆ ಅವರಿಗ ಸೈನ್ಯಶಿಕ್ಷಣ ಕೊಡುವ ರವಸ ನಡೆದದೆ ತಕ್ಕಮಟ್ಟಿಗೆ ೧ ಲಕ್ಷ ಜನರಿಗೆ ಕಲಿಸಿತೊಳ್ಳಬೇಕೆಂಬ ವಿಚಾರ ನಡೆದಿರುವದಂತೆ ಹೋಲಿವುಡ್ ಅಂದರೆ ಇಂಗ್ಲಂಡ ದೇಶದಲ್ಲಿ ಚಲಚ್ಚಿತ್ರಪಟ ಮಾಡುವ ಸ್ಥಳ ಇಲ್ಲಿ ದೊಡ್ಡ ದೊಡ್ಡ ಚಲಚ್ಚಿತ್ರಪಟ ತಯಾರಿಸುವ ದೊಡ್ಡ ದೊಡ್ಡ ಕಂಪನಿಗಳಿವೆ ಈ ಕಂಪನಿಯವರು ಯುದ್ಧವಾಗುವದೆಂದು ಎಣಿಸಿ ಯುದ್ಧದ ಚಲಚ್ಚಿತ್ರಪಟಗಳನ್ನು ತಯಾರಿಸುವದಕ್ಕಾಗಿ ಲೂಥಿಯಾನಿಯಾ, ಪೋಲಂಡ, ಚೆಕೊಸ್ಲೋವಾಕಿಯಾ, ಗ್ರೀಸ ತುರ್ಕಸ್ತಾನ, ಯುಗೋಸ್ಲಾವಿಯಾ ದೇಶಗಳಲ್ಲಿ ಛಾಯಾಚಿತ್ರ ಕೊಳ್ಳುವವರನ್ನು ಸಿದ್ಧವಾಗಿಟ್ಟಿದ್ದಾರೆ ಈ ದೇಶಗಳಲ್ಲಿಯೇ ಯುದ್ಧ ಕಿಡಿ ಮುಂಚಿತವಾಗಿ ಹಾರುವದಂತೆ ಇವಲ್ಲ ತಯಾರಿ ಯಾವತರ ದ್ಯೋತಕ ?

ತನ್ಮಧ್ಯದಲ್ಲಿಯೇ ಪೌರ್ವಾತ್ಯ ದೇಶಗಳಲ್ಲಿ ಒಂದು ಪ್ರಕರಣ ಹುಟ್ಟಿದೆ ಚೀನಿಯರಿಗೂ ಜಪಾನಿಯರಿಗೂ ಯಾವಾಗಲೂ ಕಲಹ ನಡೆದದ್ದೇ ಇದೆ ಚೀನ ದೇಶದ ಮೇಲೆ ಪರಚಕ್ರ ಒರವಂತೆ ಬೇರೆ ಬೇರೆ ಠಾಣೆಗಳಾಗಿವೆ ಚೀನ ದೇಶದಲ್ಲ ಬ್ರಿಟನ್ ಅಮೇರಿಕಾ, ರಶಿಯಾ ಮತ್ತು ಜಪಾನ ಈ ನಾಲ್ಕು ರಾಷ್ಟ್ರಗಳ ಆಂಗವಿದೆ ಉತ್ತರ ಚೀನ ಪ್ರದೇಶದ ಪೇಕಿಂಗ ಮತ್ತು ಟೆನಸ್ಟೀನ ಪ್ರದೇಶದಲ್ಲಿ ಜಪಾನಿಯರಿಗೆ ವಿರುದ್ಧವಾಗಿ ಚೀನಿಯರು ಚಳವಳ ನಡಿಸುತ್ತಾರೆಂದು ಆರೋಪ ಹೊರಿಸಿ ಆ ಪ್ರದೇಶವನ್ನು ಜಪಾನಿಯರು ಕಳೆದ ವಾರವೇ ಸ್ವಾಧೀನಪಡಿಸಿಕೊಂಡರು. ಹಾಗೆಯೇ ಮುಂ ಕಹಾರ ಪ್ರಾಂತವನ್ನು ಕೈವಶ ಮಾಡಿಕೊಂಡಿರುತ್ತಾರೆ ಕಹಾರ ಪ್ರಾಂತಕ್ಕೊಪ್ಪಿದ ಚೆಂಗಮೇ ಕ್ರಮದಲ್ಲಿ ನಾಲ್ಕು ಜಪಾನಿಯರಿಗ ಅಲ್ಲಿಯ ಸರಕಾರವು ಕಾರಾಗೃಹಕ್ಕಟ್ಟಿತಂತೆ ಈ ಅಪರಾಧಕ್ಕಾಗಿ ಜಪಾನ ಸರಕಾರವು ಅಲ್ಲಿಯ ಸರಕಾರಕ್ಕೆ ಆ ಪ್ರದೇಶದಲ್ಲಿ ತಮ್ಮೊಡನೆ ಸ್ನೇಹಭಾವ ಬೆಳಸಬಲ್ಲ ಅಧಿಕಾರಿಗಳ ನೇಮಿಸಬೇಕಾಗಿಯೂ ಪ್ರಾಂತಾಧಿಪರಿಗೆ ದೂರು ಮಾಡಬೇಕಾಗಿಯೂ ತಿಳಿಸಿತು ಜಪಾನಿ ಸೈನ್ಯ ಪಥಕಗಳು ರವಾನೆಯಾದವು ಚೀನಿಯರು ಹೆದರಿ ಉಗಿಬಂಡಿ ತುಂಬಿ ದಕ್ಷಿಣ ಭಾಗಕ್ಕೆ ಓಡಿಹೋದರು ಈ ಪ್ರಕಾರ ಈ ಭಾಗವೂ ಜಪಾನದ ವಶವಾಗಿದೆ ಜಪಾನಿಯರು ಈಗ ಕ್ವಿನಸ್ಟೀನ–ತಾಂಗರಾಜ ಉಗಿಬಂಡಿಯು ತಮ್ಮ ಸ್ವಾಧೀನವಾಗಬೇಕಾಗಿ ಆಗ್ರಹ ಕೊಟ್ಟಿದ್ದಾರಂತೆ ಈ ಉಗಿಬಂಡಿಯು ಜಪಾನಿಯರ ವಶವಾದರೆ ಇವರಿಂದ ರಶ್ಯರ ಹಿತಸಂಬಂಧಗಳಿಗೆ ಬಾಧೆ ಬರುವದಾಗಿ ಒಲ್ಲವರ ಅಂಬೋಣ ಮೊಂಗೋಲಿಯಾ ಪ್ರಾಂತದ ಪಶ್ಚಿಮದಲ್ಲಿ ಜಪಾನಿಯರು ನುಗ್ಗಿ ರಾಶ್ಯರೊಡನ ಕಾಲು ಕೆದರಿ ಜಗಳ ಮಾಡಬಹುದಂತೆ ಚೀನಿಯರು ಜಪಾನದ ಆಕ್ರಮಣದಿಂದ ಉದ್ವಿಗ್ನರಾಗಿ ಯುರೋಪ್ಯ ರಾಷ್ಟ್ರಗಳ ಜಾಳದಲ್ಲಿ ಸಿಲುಕಬಹುದಾಗಿಯೂ, ಇದರಿಂದ ಅನರ್ಥವಾಗಬಹುದಾಗಿಯೂ ಬಲ್ಲವರು ಹೇಳುತ್ತಾರೆ ಜಪಾನ ಸರಕಾರವು ಯುದ್ಧ ಮಾಡದೆ ಸೈನ್ಯಬಲ ಪ್ರದರ್ಶನದಿಂದ ಸಾಕೊಂಡ ಎರಡು ಪ್ರಾಂತಗಳಿಂದ ಮುಂದ ಏನೇನಾದೀತೆಂದು ಇದೀಗಲೇ ಹೇಳಬರದು ಈ ಪಾಕ್ಷಿಕದ ವಾರ್ತೆ ಯಥಾರ್ಥವಾಗಿ ಸಿಗುವದು ಕಠಿಣ ಜಪಾನ ಸರಕಾರವು ಪತ್ರಿಕಾ ಸ್ವಾತಂತ್ರ್ಯವನ್ನು ಅಪಹರಿಸಿ ಸರಕಾರವಾನ್ಯ ವಾರ್ತೆಯನ್ನಷ್ಟೇ ಪ್ರಕಟಿಸುವಂತೆ ಏರ್ಪಾಟು ಮಾಡಿದ ವಿಚಾರವಲ್ಲವೆ ಇಂಥ ಸ್ಥಿತಿಯಲ್ಲಿ ಈ ಪ್ರಕರಣದ ಫಲಿತಾಂಶವನ್ನು ತಟ್ಟನೆ ಹೇಳಬರದು

ಇನ್ನೊಂದು ಮಾತನ್ನು ಇಲ್ಲಿಯೇ ನಮೂದಿಸಬಹುತ್ತೇನೆ ಬ್ರಿಟಿಶ, ಫ್ರಾನ್ಸ ಇಟಾಲಿ, ಜರ್ಮನಿ ಮತ್ತು ರಶಿಯಾ ಈ ಸರಕಾರದವರು ನೂರಾರು ಮಂದಿ ಗುಪ್ತಚಾರರನ್ನು ದೂರ ದೂರ ದೇಶಗಳಿಗೆ ಕಳುಹಿವೆ ಈ ಚಾರರು ಸಮುದ್ರ ಸಂಚಾರ ಮಾಡಿ ವೈಮಾನಿಕ ಠಾಣ್ಯಗಳಿಗೆ, ನೌಕಾ ಠಾಣ್ಯಗಳಿಗೆ ಅನುಕೂಲವಾದ ನಡುಗಡ್ಡೆಗಳ ಪತ್ತೆ ಹಚ್ಚಿ ಅವನ್ನು ಗುಪ್ತವಾಗಿ ತಮ್ಮ ತಮ್ಮ ಸರಕಾರಕ್ಕೆ ತಿಳಿಸುತ್ತಾರಂತೆ ಆದರಿಂದ ಮಹಾಸಾಗರಗಳಲ್ಲೆಲ್ಲ ಬೇರೆ ಬೇರೆ ರಾಷ್ಟ್ರಗಳ ಚಾರರು ಶೋಧ ನಡೆದಿರುವದಾಗಿ ಪಾರೀಸ ಪಟ್ಟಣದಿಂದ ವಾರ್ತೆ ಈ ಚಾರರು ಬೇರೆ ಬೇರೆ ವೇಷಗಳನ್ನು ಧರಿಸಿರುತ್ತಾರೆ ವಿಲಾಸಕ್ಕಾಗಿ ಸಂಚರಿಸುತ್ತೇವಾಗಿ ನುಡಿಯುತ್ತಾರೆ, ಸರಕು ಮಾರಾಟ ಮಾಡುವವರೆಂದು ಹೇಳಿಕೊಳ್ಳುತ್ತಾರೆ ಕೆಲವರು ಅಂಬಿಗರ ವೇಷ ಧರಿಸಿರುತ್ತಾರೆ, ಇನ್ನು ಕೆಲವರು ಮುತ್ತು ತೆಗೆಯುವವರ ವೇಷ ತಾಳುತ್ತಾರೆ "ನಾವು ಬಡವರು, ಕೂಲಿ ಮಾಡಬೇಕು, ಉಣ್ಣಬೇಕು" ಹೀಗೆ ಅನ್ನುತ್ತಾರೆ ಆದರೆ ಇವರು ಸಂಚರಿಸುವ ಹಡಗವು ವಿಲಾಸಿಗಳಿಗೆ ಸಹ ದುರ್ಲಭವಾದುದು ಇವರಿಗೆ ಬೇಕಾದ್ದು ಹಣ ಆಯಾ ರಾಷ್ಟ್ರಗಳಿಂದ ಸಪ್ಪದೆ ಹೋಗುತ್ತದೆ ಸರಕಾರಗಳು ಯಾವ ರೀತಿ ಈ ರಕಮುಗಳನ್ನು ಖರ್ಚು ಹಾಕುತ್ತವೆಂದು ಯಾರಿಗೂ ತಿಳಿಯದ ಮಾತು ಪ್ರತಿಯೊಂದು ರಾಷ್ಟ್ರವು ಇದೇ ಪ್ರಕಾರ ಗುಪ್ತವಾಗಿ ಮಾಹಿತಿಯನ್ನು ಸಂಗ್ರಹ ಮಾಡತೊಡಗಿವೆ

ಈ ಪ್ರಕಾರ ಈಗಿನ ಸ್ಥಿತಿಯಿದೆ ಮುಂದಿನ ಸ್ಥಿತಿ ಪರಮಾತ್ಮನಿಗೇ ಗೋಚರ !

ಹಳೇ ಬ್ರಿಟಿಶ ಪ್ರಧಾನ ಮಂಡಳವು ರಾಜಿನಾಮೆ ಕೊಟ್ಟಿದೆ ಹೊಸ ಪ್ರಧಾನ ಮಂಡಳದ ರಚನೆಯಾಗಿದೆ ಭಾರತ ಮಂತ್ರಿಗಳಾಗಿದ್ದ ಸರ್ ಸಮ್ಯುಅಲ್ ಹೋರರವರು ಪರರಾಷ್ಟ್ರೀಯ ಪ್ರಧಾನರಾದರು ಝೆಟ್ಲಂಡ ದೊರೆಗಳು ಭಾರತ ಮಂತ್ರಿಗಳಾಗಿದ್ದಾರೆ ವ್ಯಕ್ತಿಭೇದದಿಂದ ರಾಜ್ಯಧೋರಣದಲ್ಲಿ ಭೇದವಾಗಲಿಕ್ಕಿಲ್ಲವಾಗಿ ಹೊಸ ಭಾರತ ಮಂತ್ರಿಗಳ ಪ್ರಕಟಣೆ ಝೆಟ್ಲಂಡರವರು ಹಿಂದೆ ಬಂಗಾಲ ಪ್ರಾಂತದಲ್ಲಿ ಗವ್ಹರ್ನರಾದ್ದರು ದಬ್ಬಾಳಿಕೆಯ ಧೋರಣದವರು

ಮನೆತನದಲ್ಲಿ ಯಾ ಸಣ್ಣ ಸಣ್ಣ ತೋಟಗಳಲ್ಲಿ
ಉಪಯೋಗಿಸುವಂಥ,

ಕಿರ್ಲೋಸ್ಕರ

ಮನೆವಾಡಿಕೆಯ ಪಂಪುಗಳು

ನಿಮಗೆ ಪೂರ್ಣ ಸಮಾಧಾನ ಕೊಡುವವು



ತನ್ನಿಂದ ತಾನೇ ಸ್ವಿಚ್ಚ್ ಬಲದಿಂದ ಪಂಪ ಸುರುವಾಗಿ ಬೇಕಾದ ಜಾಗದಲ್ಲಿರುವ ನೀರನ್ನು ಮೇಲಕ್ಕೆ ಏರಿಸಿ ತೆಗೆದು ೩ ಇಂಚು ಡಿಲಿವರಿ ಪೈಪದಿಂದ ನೀರು ಏರುವದು

೩ ಬಿ ಎಚ್ ಪಿ ಇಲೆಕ್ಟ್ರಿಕ್ ಮೋಟರ ಸಹಿತ ಸಿಗುವದು

ತಪಶೀಲ ಮಾಹಿತಿ ಬಗ್ಗೆ ಒರದು ಚಿತ್ರಯುಕ್ತ ಕ್ಯಾಟಲಾಗನ್ನು ಪಡಕೊಳ್ಳಿರಿ

ಪತ್ರವ್ಯವಹಾರ ಇಂಗ್ಲೀಷ ಯಾ ಮರಾಠಿಯಲ್ಲಿ ಮಾಡುವದು

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್—
ಕಿರ್ಲೋಸ್ಕರವಾಡಿ.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಒಳ್ಳೇ ರಭಸದಿಂದ ಮಳೆ ಬಿದ್ದು ಬಿಸಿಲು ತಾಪದಿಂದ ಬಳಲುತ್ತಿದ್ದವರೆಲ್ಲ ಬಹಳ ಸಮಾಧಾನವಾಯಿತು. ನೀರಿನ ಕೊರತೆ ದೂರವಾಗಲಾರಂಭಿಸಿದೆ. ಹೊಳೆಗುತ್ತಿ ಮೊದಲಾದ ಸಮೀಪದ ಗ್ರಾಮಗಳಲ್ಲಿ ವ್ಯಾಪಿಸಿ ಉದ್ಭವಿಸಿದ್ದ ಮಾರ್ಗದ ಮೇಲಿನ ನೀರಿನ ಕಷ್ಟ ತಪ್ಪಿ ಜನರ ಹಸಿವೆಗೆ ಸಾಯುತ್ತಿದ್ದ ಉಳಿವೆಗೆ ಅನುವಾಯಿತು.

೧೯೩೧ನೇ ಇಸ್ವಿಯಲ್ಲಿ ಕೆಲ ಜನರ ಸಂಘವನ್ನು ಇಲ್ಲಿಯ ತಾಲೂಕ ಬೋರ್ಡಿನವರು ಕಾಂಟ್ರಾಕ್ಟಿಗೆ ಕೊಡದೆ ಸಬ್ ಓವರ್ಸೀಯರ ವಿದ್ಯಮಾನ ಇಟ್ಟಿರುವ ಈ ಕಟ್ಟೋಣ್ಗ ಕರಾರಿನಲ್ಲಿ ವಿಚಾರಣೆಯಾಗಿ ಮಾಡಿಕೊಂಡ ಕರಾರಿನ ಮೇರೆಗೆ ಬೋರ್ಡಿನವರಿಂದ ಆಕ್ಷೇಪ ಮಾಡಿ ಕಷ್ಟ ಉಂಟುಮಾಡಿದ್ದರು. ಕಲೆಕ್ಟರರಿಗೆ ಅರ್ಜಿಮಾಡಿದರು. ಈ ಕುರಿತು ತಾಲೂಕ ಬೋರ್ಡಿನಲ್ಲಿ ಮತ್ತು ಜಿಲ್ಹಾ ಬೋರ್ಡಿನಲ್ಲಿಯೂ ಚರ್ಚೆ ನಡೆದು ಪಕ್ಷಪಾತದ ಪತ್ರವ್ಯವಹಾರಗಳು ನಡೆದವು. ಜಿಲ್ಹಾ ಬೋರ್ಡಿನವರು ಚೌಕಶಿ ಮುಂತಾದ ನಡೆಸಿ ವಿಚಾರ ಸಹ ನಂತರವೂ ಅದರ ವರದಿಗಳಲ್ಲಿ ನಿರಾಕರಿಸಲು ರಿಪೋರ್ಟು ಮಾಡಿದರು. ಈ ರಿಪೋರ್ಟಿನ ಚರ್ಚೆ ಜಿಲ್ಹಾ ಬೋರ್ಡಿನ ಮೀಟಿಂಗದಲ್ಲಿ ೧೯೩೩ನೇ ಇಸ್ವಿ ಮಾರ್ಚ ತಿಂಗಳ ಸುಮಾರಿನಲ್ಲಿ ನಡೆದು ಪ್ರಮುಖರ ಬಹುಮತದಿಂದ ರಿಪೋರ್ಟು ಮಾನ್ಯವಾಯಿತು. ಕಲೆಕ್ಟರರಿಗೆ ಆ ರಿಪೋರ್ಟು ಮಾನ್ಯವಾಗಲಿಲ್ಲವಂತೆ. ತಾಲೂಕದ ಆವರು ತಮ್ಮ ಪಾತ್ರ ಮುಗಿದಂತರ ಚೌಕಶಿ ನಡಿಸಿ ಆ ಪ್ರಕರಣವನ್ನು ಇಲ್ಲಿಯ ಪೋಲೀಸರ ಕಡೆ ಮುಂದಿನ ಕ್ರಮ ಕೈಕೊಳ್ಳಲು ಕಳಿಸಿದಂತೆ ಪೋಲೀಸರು ಚೌಕಶಿ ನಡೆಸಿ ಕಳೆದ ವಾರ ಸಬ್ ಓವರಸೀಯರ ಮೇಲೆ ಗಿದ್ದ ಮಿಂ ಅಯ್ಯರವರಿಗೆ ಮೇಲ್ಕಾಣಿಸಿದಂತೆ ಸಲ್ಲಿಸಿದರು. ತಂದಿದ್ದಾರೆ. ಇನ್ನೂ ಪೋಲೀಸರ ಚೌಕಶಿ ಕ್ರಮ ನಡೆದಿದೆ.

ಟೋಲಿನ ಹೀಡನ ಮೋಟಾರುಗಳನ್ನು—ಮಿನ್ನರಾರು ಜೊತೆ ಹುಕುಮುಗಳನ್ನು ಹೊರಡಿಸಿದಾರೆ. ೧೯೩೧ ರಿಂದ ಕೆಲ ಮೋಟಾರುಗಳನ್ನು ೧ ಟನ್ನಿನವೆಂತ ಎಣಿಸಿ ಆ ಅಳತೆಯಂತೆ ಹಣಸಲು ಮಸೂಲು ಕೊಡಬೇಕು. ಅದಕ್ಕಾಗಿ ಮಿಕ್ಕ ಪ್ರಮಾಣಕನ್ನಾ ಮ್ಯಾನ ಮೋಟಾರುಗಳು ೧ ಟನ್ನಿನವೆಂತ ಎಣಿಸಿ ೧೨ ಹಣದಂತೆ ಮಸೂಲು ಮಾಡಬೇಕು. ೧ ಟನ್ನಿನ ಮೋಟಾರಿಗೆ ೧೪ ಪ್ರಯಾಣಿಕರನ್ನು ಒಯ್ಯಗೊಡುತ್ತಾರೆ. ಪ್ರಮಾಣಕರ ಸಂಖ್ಯೆಗೂ ಮೋಟರಿನ ತೂಕಕ್ಕೂ ಮೇಲೆ ಹೇಳಿದ ಕ್ರಮದಂತೆ ಹಣ ಆ ಮೋಟಾರಿನವರು ಟೋಲಿನ ವ್ಯಾಪಾರಿಯಿಂದ ಕಷ್ಟಪಡುತ್ತಿದ್ದರೆ ಮೆಟ್ಟಿಮೆಟ್ಟಿಗೆ ಕರ ತಪ್ಪುವುದು. ಸೋತರು ಮುಂದಿಯ ಸರಕಾರವು ಈ ಹುಕುಮ ನ್ನು ತಿದ್ದುಪಡಿ ಮಾಡಿ ನ್ಯಾಯ ದೊರಕಿಸಬೇಕೆಂದು ಮೋಟಾರಿನವರೆಲ್ಲರು ವಿನಂತಿ ಮಾಡಿಕೊಳ್ಳುತ್ತಾರೆ.

ಮಾರಾಟದ ಕೆರೆ ಕಟ್ಟುತ್ತಾರೆ. ಇಲ್ಲಿಯ ಮ್ಯುನಿಸಿಪಾಲಿಟಿಯವರು ಕೆರೆ ಕಟ್ಟಿಸಲಾರಂಭಿಸಿದ್ದಾರೆ. ಹರಿಕಟ್ಟೆಯಲ್ಲಿ ಬಡಾವಿ ಕೆರೆ ಎಂಬುದೊಂದು ಕೆರೆಯಿದೆ. ಇದು ದೊಡ್ಡ ಕೆರೆ, ಪಟ್ಟಣಕ್ಕೆ ನೀರು ಕುಡಿಯಲು ಉಪಯೋಗಕ್ಕೆ ಬರುವ ಕೆಲ ಭಾವಿಗಳಿಗೆಲ್ಲ ನೀರಿನ ಉಕ್ಕು ಈ ನೀರಿನ ಪಕ್ಕಿಯಿಂದ ಒದಗುತ್ತದೆ. ಇದು ಪ್ರತಿವರ್ಷ ಶಿಥಿಲವಾಗುತ್ತಿದೆ. ಮರ್ಜನ ಸಮಯಕ್ಕೆ ಕೆರೆ ದುರಸ್ತಿ ಕೆಲಸವನ್ನು ಸರಕಾರವು ನಡೆಸಲಿಲ್ಲ. ಕೆರೆ ಹುಗಿದುಹೋಗಿ ೧೯೩೩ನೇ ಇಸ್ವಿ ಸುಮಾರಿನಲ್ಲಿ ಸರಕಾರವು ಕೆರೆ ದುರಸ್ತಿಯ ಜವಾಬುದಾರಿಯನ್ನು ಇಲ್ಲಿಯ ಮ್ಯುನಿಸಿಪಾಲಿಟಿಯು ನೇಮಿಸಿ ಹೊರಿಸಿದರು. ಅದನ್ನು ಮ್ಯುನಿಸಿಪಾಲಿಟಿಗೆ ಒಪ್ಪಿಸಿತು. ನೀರಿನ ಒದಗಿಸುವ ಜವಾಬುದಾರಿಯನ್ನು ಮಾತ್ರ ತಾನೇ ಇಟ್ಟುಕೊಂಡು ಈಗ ಮ್ಯುನಿಸಿಪಾಲಿಟಿಯವರು ಕೆಲ ಪಟ್ಟಿಗೆ ಮಾಡಲಿಲ್ಲ. ಈಗ ಅದನ್ನು ಹುಗಿಯುತ್ತಿದ್ದಾರೆ. ಊರೊಳಗಿನ ಕಸ ಕಡ್ಡಿಗಳನ್ನು ಸಹ ಅಲ್ಲಿ ತುಂಬುತ್ತಾರಂತೆ. ಅದರಿಂದ ಸುತ್ತುಮುತ್ತಲಿನ ಹವೆ ಕೆಟ್ಟಿದೆ. ಮನೆಯವರು ಟಕ್ಕೆ ಬರುವವರಿಗೆ ರಸ್ತೆ ಬರಲಿಲ್ಲ. ಲೋಕಲ್ ಸುಧಾರಣೆಯ ವಿಭಾಗದ ಕಡೆಯ ಜಿಲ್ಹಾಧಿಕಾರಿ ವಿಚಾರ ಮಾಡಬೇಕು. ನೀರಿನ ಮಾರ್ಗವು ನಿಂತು ನೀರು ನಿಂತಂತೆ ಈ ಕೆಲ ಕಾಲ ವರೆಗೆ ಜಲ ಹರಿಯಬೇಕಾಗಿದೆ. ಕುಮಟಾ ಪಟ್ಟಣದವರೆ ತಕ್ಕ ಉಪಾಯ ಕೈಕೊಳ್ಳಬೇಕಾಗಿ ಸೂಚನೆ.

ಇಲ್ಲಿಯ ಮಾಮಲೇದಾರಾಂದ ಪಿ. ಅಲ್ಲೂರ್ಕರರವರಿಗೆ ೧೯ನೇ ವರ್ಗದ ಮಜಿಸ್ಟ್ರೇಟ ಅಧಿಕಾರ ದೊರೆತಿದೆ.

ಈ ಮ್ಯುನಿಸಿಪಾಲಿಟಿ ಹದ್ದಿನೊಳಗಿನ ಸರ್ವಸ್ಥಳ ದ್ವಾರಿ ಹುಲ್ಲುಗಾವಲುಗಳಿಗೆ ಬಂದಿಗ್ರಹವಾಗಿ ಸರಕಾರದ ವಿವಿಧ ಲಾಗಿದೆ. ಈಗ ಮ್ಯುನಿಸಿಪಾಲಿಟಿಯು ನಿಂತಿದ್ದಿನ ಪ್ಲಾಟ ಇದರ ಪ್ರಕಾರ ಹುಕುಮು ಆಗಿದೆ. ಮೈಲಿ ಟ ವಿಕಸವನ್ನು ಉಳಿಯುವ ಕೆಲ ಈ ಗಿನ ಕ್ಲಾಸ್ ನ ಕೋರುವಗಳಂತೆ ಮತ್ತಾ ಪಾವ ಎಮಗೆ ಸಾಜರು ಸಹ ಈ ಕಲಿಸು ತಕ್ಷೇಪ ಮಾಡುತ್ತಿರಬಾರ. ಸರಕಾರವು ಅಂಥ ಹುಕುಮು ಹೊರಡಿಸಿದ್ದು ಪ್ರಕಟವಾಗಲಿಲ್ಲ.

ಇಲ್ಲಿಯ ಮ್ಯುನಿಸಿಪಲ್ ಡಿಸ್ಪೆನ್ಸರಿ ನಿರ್ಮಾಣದ ಸಮಯದಲ್ಲಿ ಪುನಃ ಅರ್ಥವಾಗಿ ಬರಿಸುವ ಸ್ಪಿಂತ ಮ್ಯುನಿಸಿಪಾಲಿಟಿಯು ವರ್ಗೀಕರಿಸಿ ಅದನ್ನು ಸರಕಾರದ ವಿದ್ಯಮಾನ ಪ್ರಯೋಗಾರ್ಥವಾಗಿ ನಡೆಸುವ ಹುಕುಮು ಹೊರಡಿಸಿದರೆ ಬರುತ್ತಿದ್ದ ಮ್ಯುನಿಸಿ ಪಾಲಿಟಿಯ ಮುಂದಿನ ನಿರ್ಣಯ ಕರಿಯುವರಾಗಿ ಮಾಸಕಲಿಗೆ ಮೇಲುದಾರರ ಶಾಲ ಮಟ್ಟಿಗೆ ಕುಗ್ಗಿಸಲು ಸರಕಾರದ ಈಗಿನ ವಿಚಾರ ಮಾತಾಡುವ ಡ. ಅವರನ್ನು ಬೇಡಿಕ ತರಿಸಿ ಮ್ಯುನಿಸಿಪಾಲಿಟಿಯನ್ನು ರದ್ದು ಪಡಿಸಿದ ಮೇಲೆ ಹುಕುಮು ಅಪಮರ್ಯಾದೆಯಾದಿತ್ತು ಅದನ್ನು ಬೇಗನೆ ತೀರ ತಪ್ಪು ಸರಕಾರವು ಹೊಸ ಕಾನೂನು ನಡಿಸಿದರೆ ಮತ್ತು ಮುಂಬಯಿ ಅಧಿಕಾರಿಯಾದ ಪಕ್ಷದ ಆರಿಸುವದಿದ್ದರೆ ಅವಧಿ ಬೇಕಾಗಲು ಒಂದು ಅದಾ ರದಂದರೆ ಸಾಕಾಗುತ್ತದೆ. ಮಾಡುವದರಿಂದ ಸ್ಥಳ ಸಮ ಮಾಡಿ ಮ್ಯುನಿಸಿಪಾಲಿಟಿಯನ್ನು ರದ್ದು ಪಡಿಸುವದು, ತಕ್ಕ ಕಾರಣಗಳಿಲ್ಲದೆ ಆ ಇಂದಿ ಬೇಕಾಗುವದು ಸರಕಾರಕ್ಕೆ ಆಕ್ಷೇಪಕರವಾಗಿದೆ. ಇದನ್ನು ಎಲ್ಲರೂ ತೀವ್ರವಾಗಿ ನಿಷೇಧಿಸುತ್ತಿದ್ದಾರೆ. ಹೀಗೆ ಸ್ಥಾನಿಕಲ್ ಪತ್ರಿಕೆಯು ಬರೆಯುತ್ತದೆ.

ಹೊಳೆಗುತ್ತಿದ ಪ್ರಿ ಹುಲಿಯ ಕಾಟ ಮರಕಳ್ಳರಿಂದ ದನ ಹುಲಿಯ ಪಾಲಾಗುತ್ತಿದೆ. ಆದರಿಂದ ಅಲ್ಲಿಯ ಜನರು ಸರಕಾರದವರು ಮತ್ತು ಅಧಿಕಾರಿಗಳು ಇತ್ತ ಕಡೆ ಲಕ್ಷ್ಯಕೊಡಬೇಕು.

ರೈತ್ರ ಮತ್ತು ಮೋಹನದ ಸಿದ್ಧಿಸಂಘ ಕಕ್ಷ್ಯಾಗಿ ಮಾಡಿ ರವೆ ಬಗ್ಗೆಯು ನಿಕಲಿನ ಪದಕಗಳನ್ನು ತಯಾರಿಸಿದ್ದು ಬೆಳ್ಳಿಯ ಪದಕಗಳ ಮೂಲ ಬೆಲೆ ಸರಾಸರಿ ೧—೦ ರೂಪಾಯಿ ನಿಕಲ ಪದಕಗಳ ಪ ಸುಬೆಲೆ ಅದರೊಳಗೆ ಮಾರಾಟದ ಬೆಲೆ ಬೆಳ್ಳಿಯ ಪದಕಕ್ಕೆ ೧೦ ರೂಪಾಯಿ, ೧೫ ರೂಪಾಯಿ ಅದಕ್ಕೆ ಇಷ್ಟು ಕಡಿಮೆಗಳು ಮೋಕಿಂದ ಚಮಾರರ ಕಂಡಿಗೆ ಇದ್ದ ಪದಕಕ್ಕೆ ೧೫ ರೂಪಾಯಿ ಕಾಗದದ ಕಂಡಿಗೆ ಮಡಕ್ಕೆ ೧೦ ರೂಪಾಯಿ ನಿಕಲ ಪದಕಗಳಿಗೆ ೧॥ ರೂಪಾಯಿ ಉತ್ಸವ ನಿಧಿ ಸಂಗ್ರಹ ಮೋಕ್ಷಿಗೆ ತಾರೀಖಿಗೆ ಮುಗಿಯಿತು. ಅದೇ ರಾತ್ರೆ ಕೈಬ್ರಿಡ್ಜ ಭಾಕಂಡವಾಯಿತು. ಅದಕ್ಕಾಗಿ ಈಗ ನಿಧಿ ಸಂಗ್ರಹವಾಗುತ್ತಿದೆ. ಉತ್ಸವ ನಿಧಿಗಾಗಿ ತಯಾರಿಸಿದ ಬೆಳ್ಳಿಯ ಪದಕಗಳನ್ನು ಈಗ ಸರಕಾರವು ಮಾರಾಟ ಮಾಡಲಾರಂಭಿಸಿದೆ. ನಾವ್ಯ ನಿಕಲ ಪದಕಗಳು ಇದ್ದ ಬಂದರೆ ೧॥ ರೂಪಾಯಿ ಕಾಣಿಕೆ ವನ್ನು ಪೂರೈಸಿ ಸಿಕ್ಕಬಹುದು. ಈ ಪದಕ ಕಳೆದ ಎಂದು ನಿಮ್ಮಿಗೆ ಒಡೆದು ಹೋದಂತೆ ಹಾ ಕೊಟ್ಟು ಆವರು ಸದರ ಪದಕಗಳನ್ನು ತಂದರು.

ಶಿರಸಿ— (೧೫—೬—೩೫) ಮಳೆಗೆ ಪ್ರಾರಂಭವಾಗಿ ೬-೭ ದಿನಗಳಾದವು. ರೈತ ಜನರು ಹೊಲದ ಕೆಲಸದಲ್ಲಿ ತೊಡಗಿದ್ದಾರೆ. ಈಗ ವ್ಯಾಪಾರ–ಉದ್ಯೋಗ ಕಡಿಮೆ ಹೊಂದಿಗಿನಿಂದ ಸರಾಸ ಬರುವದೇ ಇಲ್ಲ.

ಹೊಸದ ಮಂಗಳವಾರ ಮುಂಜಾನೆಗೆ ಮ್ಯುನಿಸಿಪಾಲಿಟಿ ಎದುರಿನ ಸಣ್ಣ ಅಂಗಡಿಯು ಸುಟ್ಟು ಬಿತ್ತು. ಅಂಗಡಿ ಮಾಲಿಕನು ಮಲಗಿದ್ದವನು ಎದ್ದಿದ್ದಿಲ್ಲ. ಜನರು ಕೂಡಿ ಅವನನ್ನು ಹೊರಗೆ ತೆಗೆದರು. ಅವನಿಗೆ ಸ್ವಲ್ಪ ಪೆಟ್ಟಾಗಿದೆ.

ಶಿರಸಿಯ ಗೃಹಸ್ಥರೊಬ್ಬರು ಒರೆದು ತಿಳಿಸುವದೇನಂದರೆ— ಕಳೆದ ಜೂನ ತಾ ೮ ನೆಗೆ ಬೆಳಿಗ್ಗೆ ಹುಲೇಕಲ್ಲ ಗ್ರಾಮದ ರಾ। ರಾಮಯ್ಯ ಸಂಗಯ್ಯ ಇವರ ಮನೆಯಲ್ಲಿ ಗೇಟಿನ ಬಾಗಿಲು ತೆರೆದು ಹೊಲದ ಕಡೆ ಹೋದಾಗ ಜಪ್ತಿಮಾಡಿದರು. ರಾ। ದತ್ತು ಗಣಪತಿ ಹೆಗಡೆ ಮುಲಗಾರ ಇವರು ನಟೇಲ–ಕುಲಕರ್ಣಿಗರೊಡನೆ ಜಪ್ತಿ ಮಾಡಲಿಕ್ಕೆ ಕರಕೊಂಡು ಬಂದರು. ಪ್ರತಿಯೊಂದು ಮನೆಯ ಬಾಗಿಲು ತೆರೆಯಿತು. ಗ್ರಾಮಾಧಿಕಾರಿಗಳಿಗೆ ಜಪ್ತಿಗೆ ಪ್ರಾರಂಭ ಮಾಡಬೇಕಾದರೆ ಮಂತ್ರ ಲಾಭ ಕೆಡ ತೋರಲಿಲ್ಲ! ಅವರು ಮನೆಯಲ್ಲಿ ಹೊಕ್ಕು ಒಂದು ಸಂದೂಕ ಹೊರಗೆ ತಂದು ಅದರ ಬೀಗ ತೆಗೆದರು. ಮತ್ತು ಸಂದೂಕದಲ್ಲಿದ್ದ ಕಾಗದ–ಪತ್ರ ಮತ್ತು ಇತರೇ ಸಾಮಾನು ಜಪ್ತಿ ಮಾಡಿ ಒಯ್ದರು. ಜಪ್ತಿ ಮಾಡಿದ ಸಾಮಾನಿನ ಯಾದಿ ಸಹ ಬಿಟ್ಟು ಹೋಗಲಿಲ್ಲ. ಹೋಗುವಾಗ ಒಂದು ಪಂಚನಾಮೆ ಬರೆದು ತೆಗೆದು ದಾರಿಗೆ ಬರು ಹೋಗ ಮನುಷ್ಯರನ್ನು ಕರೆದು ಅದರ ಮೇಲೆ ಸಹಿ ಮಾಡಿಸಿಕೊಂಡರು. ಎಟೇಲರ ಬಳಿಗೆ ಹೋಗಿ ಜಪ್ತ ಸಾಮಾನಿನ ಯಾದಿ ಬೇಡಿದರೆ, "ನಮಗೇನೂ ಗೊತ್ತಿಲ್ಲ ಕುಲಕರ್ಣಿಗರು ಹೇಳಿದ್ದರಿಂದ ನಾನು ಪಂಚನಾಮೆಗೆ ಸಹಿ ಹಾಕಿದ್ದೇನಷ್ಟೇ" ಎಂದು ಹೇಳುತ್ತಾರೆ. ಮೇಲಧಿಕಾರಿಗಳು ಇತ್ತ ಲಕ್ಷ್ಯಕೊಟ್ಟು ಈ ಪ್ರಕರಣದ ಚೌಕಶಿ ಮಾಡುವದವಶ್ಯವಿದೆ.

ಒಂದು ಸಣ್ಣ ಅಪಘಾತ. ಕಳೆದ ವಾರ ಇಲ್ಲಿಂದ ಸಿದ್ದಾಪುರಕ್ಕೆ ಸ್ಯಾಕಲ್ ಮೇಲಿಂದ ಹೋಗುವವನೊಬ್ಬನು ೧॥ ಮೈಲು ಆಚೆ ಬಿದ್ದು ಮಾರ್ಗಸ್ಥನಾದನು. ಇದನ್ನು ಒಬ್ಬ ಆಕ್ಕಡಿಯವನು ನೋಡಿ ಅವನಿಗೆ ಮೋಟಾರ ಮೇಲೆ ಹಾಕಿ ಊರಿಗೆ ಕಳಿಸಿಕೊಟ್ಟನು. ಅವನಿಗೆ ಸ್ಯಾಕಲ್ ಸ್ವಾರಿ ಮಾಡಲು ಸರಿಯೂ ತಿಳಿಯುತ್ತಿದ್ದಿಲ್ಲವಂತೆ. ಪಾಪ!

ಇಲ್ಲಿಂದ ಬನವಾಸಿಗೆ ಮೋಟಾರ ಸರ್ವೀಸ ಸರಿಯಾಗಿ ನಡೆಯುತ್ತದೆ. ಟಪಾಲ ಕಳಿಸುವ ವ್ಯವಸ್ಥೆಯಾದಲ್ಲಿ ಜನರಿಗೆ ಒಳ್ಳೇ ಅನುಕೂಲವೆಂಬುದರಿಂದ ಟಪಾಲ ಖಾತೆಯವರು ವಿಚಾರ ಮಾಡಬಹುದು.

ಮಿಸ್ಸನರಿಯೊಬ್ಬರು ಬರೆದು ಪಡೆದೇನಂದರೆ— ಈ ಮಾಸ ಸಾಲಿನಲ್ಲಿ ತಾ ೧—೬—೩೫ನೇಗೆ ಸರಕಾರ ಖಾತೆಯ ಮ.ರಾ. ಡಿಸ್ಟ್ರಿಕ್ಟಲ್ ಆ। ಬಂಜಾಬಿಯವರು ಭಾಗದ್ರಿದೆಯ ಬೇಲಲಳ ವಿಷಯ ಒಳ್ಳೇ ವಿಚಾರಪರ ಪೂರಿತ ಭಾಷಣ ಕೊಟ್ಟರು. ಈ ಸಭೆಗೆ ಜಿಲ್ಹೆಯೊಳಗಿನ ಸಹಕಾರಿ ಪ್ರಮುಖರು ಬೆಕ್ಕಸಿದ್ದರು. ಮಿ। ಪಂಜಾಬಿಯವರು ಮಾಡಿದ ಭಾಷಣದ ಸಾರ—ರೈತರು ತೀರ ಬಡವರಾಗಿದ್ದಾರೆ. ಸಾಲದಲ್ಲಿದ್ದಾರೆ. ಇದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ೩-೪ ಕಾರಣಗಳನ್ನು ಹೇಳಬಹುದು. (೧) ಹೊಲ–ಕಡಿಗಳ ವರ ಭಕ್ಕನೆ ಇಳಿದದ್ದು, (೨) ಉಪ ಉತ್ಪನ್ನಗಳ ಅಭಾವ, (೩) ಭೂಮಿಯ ಉತ್ಪನ್ನದ ಮೇಲೆ ಸರಕಾರ ನಿರ್ಧಾರ ಮಾಡಬೇಕಾದ ಪರಿಸ್ಥಿತಿ. ಈ ಪ್ರಕಾರ ಬೇರೆ ಬೇರೆ ಕಾರಣವಾಗುವುದರಿಂದ ರೈತನು ಬಡಿದ್ಯತೆಯಿಂದ ಆರಿಸಿಕೊಂಡಿವೆ. ಇದನ್ನು ಬಿಡುಗಡೆ ಹೊಂದಲಾರದಿರಲಿಕ್ಕೆ ಭಾಗದ್ರಿತೆಯು ಬೇಕಿನಿಂದ ಸಾಧ್ಯವಿಲ್ಲ. ಬಾಲು ಅದರಮನೆಯನ್ನು ಪರಿಹರಿಸುವದಕ್ಕಾಗಿ ಈಗಿನ ಬೇಂಕು ಸಾಲ ಕೊಡುತ್ತದೆ. ಅಲ್ಪಾವಧಿಯ ಸಾಲಗಳಿಂದ ೧-೨ ವರ್ಷಗಳಲ್ಲಿ ಇದನ್ನು ತೀರಿಸಬೇಕು. ಇದಕ್ಕೆ ದೀರ್ಘ ಸಾಲಗಳಿಂದ ಬೇಕಾದ ಉದ್ದಿಮೆಯವರಿಗೆ ಪ್ರಯೋಜನವಾಗುವ

ದಿಲ್ಲಿಂದು ಬೇಸಾಯ ಕಮೀಶನಿನ ಅಭಿಪ್ರಾಯವಾಗಿ ದೀರ್ಘಾವಧಿಯ ಸಾಲ ಕೊಟ್ಟಲ್ಲಿ ಬೇಸಾಯಗಾರರಿಗೆ ಕೆಲವಷ್ಟಗೆ ಸಹಾಯವಾಗುವದಾಗಿ ಅಭಿಪ್ರಾಯವಾಯಿತು. ಆದಕ್ಕನುಸಾರವಾಗಿ ಮುಂಬಯಿ ಇಲಾಖೆಯಲ್ಲಿ ಮಾಜೋರಾ, ಧಡಕೇಚ ಮತ್ತು ಧಾರವಾಡ ಈ ಮೂರು ಸ್ಥಳಗಳಲ್ಲಿ ಪ್ರಯೋಗವೆಂದು ಭೂಭದ್ರತೆಯ ಬೇಂಕುಗಳು ಸ್ಥಾಪಿಸಲ್ಪಟ್ಟವು. ಈ ಗಳಿಕೆ ದುಂಬಯಿ ಇಲಾಖೆಯಲ್ಲಿ ೧೦ ಬೇಂಕುಗಳನ್ನು ಸ್ಥಾಪಿಸುವ ನಿಶ್ಚಯವಾಗಿದೆ. ಈ ಯೋಜನೆಯಂತೆ ಈ ಜಿಲ್ಲೆಯಲ್ಲಿ ಒಂದು ಬೇಂಕು ಸ್ಥಾಪಿಸಲ್ಪಡುವದು. ಈ ಜಿಲ್ಲೆಯಲ್ಲಿ ಬೇಂಕು ಸ್ಥಾಪಿಸುವ ಬಗ್ಗೆ ಹಲವು ಆಕ್ಷೇಪಗಳಿದ್ದವು. ಅದರೆ ಅವನ್ನೆಲ್ಲ ಸಹಕಾರಿ ವಿಭಾಗದವರು ಖಂಡಿಸಿ ಈ ಜಿಲ್ಲೆಯೊಳಗೆ ಒಂದು ಬೇಂಕು ಸ್ಥಾಪಿಸಲೇ ಬೇಕೆಂದು ಆಗ್ರಹ ಮಾಡಿದಂತೆ ಇಲ್ಲಿ ಬೇಂಕು ಸ್ಥಾಪನೆಯಾಗುವದು. ಈ ಬೇಂಕುಗಳ ಧ್ಯೇಯ ಬೇಸಾಯಗಾರರಿಗೆ ದೀರ್ಘಾವಧಿಯ ಸಾಲ ಕೊಡುವದು. ಈ ಬೇಂಕು ಮೂರು ತರದಿಂದ ಹಣ ಸಂಗ್ರಹಿಸುತ್ತದೆ (೧) ಶೇರುಗಳಿಂದ, (೨) ಠೇವುಗಳಿಂದ, (೩) ಡಿಬೆಂಚರ ಯಾನೆ ಸಾಲ-ಪತ್ರಗಳಿಂದ. ಸಾಲ ಪತ್ರ ಅಂದರೆ ಬೇಂಕು ಸಾರ್ವಜನಿಕರ ಕಡೆಯಿಂದ ಹಣ ಕೊಂಡು ಅವರಿಗೆ ಬರೆದುಕೊಡುವ ಪತ್ರ. ಇವುಗಳಿಗೆ ಸರಕಾರದ ಹೊಣೆಯಿದೆ. ಬಡ್ಡಿ ಕೊಡಲಿಕ್ಕೂ, ಸಾಲ ತೀರಲಿಕ್ಕೂ ಸರಕಾರವು ಒಪ್ಪಿದೆ. ಶೇರುಗಳನ್ನು ಬೇಕಾದವರು ಕೊಳ್ಳಬಹುದು. ಸಾಲಗಾರರು ಕೊಳ್ಳಲೇಬೇಕು. ಸಾಲ ಬೇಕಾದವರು ಬೇಂಕಿಗೆ ಅರ್ಜಿ ಮಾಡಬೇಕು. ಸದರಿ ಅರ್ಜಿಯನ್ನು ಬೇಂಕಿನ ಡಾಯರೆಕ್ಟರರು ಪೂರ್ವಾಲೋಚನೆ ಮಾಡಿ ಭೂಮಿಯ ಬೆಲೆಯನ್ನು ನಿರ್ಧರಿಸುವ ಅಧಿಕಾರಿಗಳ ಕಡೆ ಕಳಿಸುತ್ತಾರೆ. ಭೂಮಿಯ ಬೆಲೆ ಸಾಲದ ರಕಮಿಗಿಂತ ಇಮ್ಮಡಿ ಇರಬೇಕು. ಸಾಲ ಕೊಡುವ ರಕಮು ೫೦ ರಿಂದ ೫೦೦೦ ತನಕ ಇರುತ್ತದೆ. ಸಾಲ ತೀರಿಸುವ ಮುದ್ದತ್ತು ೨೦ ವರ್ಷ. ೨೦ ವಾರ್ಷಿಕ ಕಂತುಗಳಿಂದ ಸಾಲ ತೀರಿಸಬೇಕು. ಬಡ್ಡಿ ದರಸಾಲು ಶೇಕಡಾ ರೂಪಾಯಿ ೬ ರಂತೆ. ಹಳೆ ಸಾಲ ತೀರಿಸಲಿಕ್ಕೂ, ಬೇಸಾಯ ಸುಧಾರಣೆ ಮಾಡಲಿಕ್ಕೂ ಸಾಲ ಕೊಡಲ್ಪಡುವದು. ಸ್ವಂತ ಖರ್ಚು ಇಲ್ಲ. ಈಗಿನ ಸಹಕಾರಿ ಸಂಘಗಳಿಗಿಂತ ಎಲ್ಲ ಅನುಕೂಲತೆಗಳು ಈ ಬೇಂಕಿಗಿವೆ. ರೂಪಾಯಿ ೫೦೦೦ಕ್ಕಿಂತ ಹೆಚ್ಚು ಸಾಲ ಬೇಕಾದಲ್ಲಿ ರಿಜಿಸ್ಟ್ರಾರರ ಕಡೆಯಿಂದ ಅಪ್ಪಣೆ ಪಡೆಕೊಳ್ಳಬೇಕು. ಭೂಮಿಯ ಬೆಲೆ ನಿರ್ಣಯಿಸುವ ಅಧಿಕಾರಿಗಳಿಂದ ರಿಪೋರ್ಟು ಬಂದಮೇಲೆ ಡಾಯರೆಕ್ಟರರು ಅರ್ಜಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಮುಂಬಯಿಯ ಮಧ್ಯವರ್ತಿ ಭೂಭದ್ರ ಬೇಂಕಿಗೆ ಕಳಿಸಬೇಕು. ಅಲ್ಲಿಂದ ಮಂಜೂರಿ ಸಿಕ್ಕಿದ ಬಳಿಕ ಹಣ ದೊರೆಯುವದು. ಮುಂಬೈನ ೩-೪ ವರ್ಷ ತನಕ ಸರಕಾರವು ಬೆಲೆ ನಿರ್ಣಯಿಸುವ ಅಧಿಕಾರಿಗಳ ಖರ್ಚನ್ನು ಸಹಿಸುವದು. ಆ ಮೇಲೆ ಬೇಂಕು ಈ ಖರ್ಚು ಕೊಡಬೇಕು. ಮೊದಲಿನ ೫ ವರ್ಷಗಳ ವರೆಗೆ ಈ ಸಂಘದ ಡಾಯರೆಕ್ಟರರನ್ನು ರಿಜಿಸ್ಟ್ರಾರರು ನೇಮಿಸುವರು. ಆ ಮೇಲೆ ೫ ಜನ ಡಾಯರೆಕ್ಟರರನ್ನು ಈ ಕೆಳಗೆ ಕಾಣಿಸಿದವರು ನೇಮಿಸಬೇಕು. (೧) ಸೆಂಟ್ರಲ್ ಬೇಂಕಿನ ಪ್ರತಿನಿಧಿಗಳು, (೨) ಶೇರುದಾರರ ಇಬ್ಬ ಪ್ರತಿನಿಧಿಗಳು, (೩) ಸಾಲಗಾರರ ಇಬ್ಬ ಪ್ರತಿನಿಧಿಗಳು, (೪) ಮುಂಬಯಿ ಭೂಭದ್ರತೆಯ ಬೇಂಕಿನ ಪ್ರತಿನಿಧಿಗಳಿಬ್ಬರು, (೫)ರಿಜಿಸ್ಟ್ರಾರರಿಂದ ನೇಮಿಸಲ್ಪಡುವ ಇಬ್ಬರು ೧ ಇತ್ಯಾದಿ. ಭೂಭದ್ರತೆಯ ಬೇಂಕಿನ ಜಿಲ್ಲೆಯೊಳಗಿನ ಭೂಭದ್ರತೆಯ ಬೇಂಕಿನ ಆಫೀಸನ್ನು ಇಡುವ ಸ್ಥಳದ ಕುರಿತು ಚರ್ಚೆಯಾಯಿತು. ಕಾರವಾರವು ಮಧ್ಯವರ್ತಿ ಸ್ಥಳವಾದ್ದರಿಂದ ಕಾರವಾರದಲ್ಲಿಯೇ ಇಡಬೇಕಾಗಿ ಒಬ್ಬರು ಹೇಳಿದರು. ಬೇಂಕು ಮೊದಲು ಸಂಸ್ಥೆ ನಡಿಸುವ ವ್ಯವಹಾರಕೌಶಲ್ಯ ಕಾರವಾರದವರಿಗೆ ಇದ್ದದರಿಂದಲೂ ಕಾರವಾರವು ಜಿಲ್ಲೆಯ ಮುಖ್ಯ ಸ್ಥಳವಾದ್ದರಿಂದಲೂ ಕಾರವಾರದಲ್ಲಿಯೇ ಇಡಬೇಕೆಂದು ಕಾರವಾರದವರು ನುಡಿದರು! ಸಾಕಷ್ಟು ಜಿಲ್ಲೆಯಲ್ಲಿ ಅಡ್ಡಿಯಿಲ್ಲವಾಗಿ ಮಾತೆತ್ತಿದ್ದರು ನುಡಿದರು. ರಿಜಿಸ್ಟ್ರಾರರು ನೇಮಿಸುವ ಇನಾಮುಗಳ ಬೇಂಕು ನಡಿಸಬೇಕಾದಾಗ ಕಚೇರಿ ಎಲ್ಲಿಟ್ಟರೇನು ? ಇತ್ಯಾದಿ.

ಅಂಕೋಲಾ—(ತಾ ೧೫-೬-೩೫) ಇಲ್ಲಿ ಬಹು ದೊಡ್ಡ ಗಲಭೆಯನ್ನೆಬ್ಬಿಸಿದ ಖತಿಜಾಬಿ ಯಾನೆ ಬೀಬೀಮಾ ಇವಳ ಮದುವೆಯು ಹುಬ್ಬಳ್ಳಿಯಲ್ಲಿ ಆಗಿತ್ತು. ಮಹಮ್ಮದ ಖತಿಜಾಬಿಯು ತಂದೆ ಮಹಮ್ಮದ ಸಾಹೇಬ ಮೊದಲಿನ ೫ ಮಂದಿ ಆರೋಪಿಗಳಿಗೆ ೨೦೦—೨೦೦ ರಂತೆ ದಂಡ ವಿಧಿಸಿದ್ದರಷ್ಟೇ! ಈ ಹುಕುಮಿನ ವಿರುದ್ಧ ಆರೋಪಿತರು ಸೆಶನ್ಸ ಕೋರ್ಟಿನಲ್ಲಿ ಅಪೀಲು ಮಾಡಿದ್ದರು. ಅಪೀಲಿನ ವಿಚಾರ ನಡೆದು ಸೆಶನ್ಸ ಜಡ್ಜರು ಆರೋಪಿಗಳಿಗೆ ದೋಷಮುಕ್ತರೆಂದು ರಿಯಾಯತಿ ಮಾಡಿದ್ದಾರೆ. ಫಿರ್ಯಾದಿಗೆ ಮದುವೆಯಾಗಿರುವದೆಂಬ ಸುಳ್ಳೇ ಗುಲ್ಲೆಬ್ಬಿಸಿದ್ದಾನೆ. ಅದರೊಳಗೆ ಮಾನಹಾನಿಯಾಗುವಂಥ ವಿಷಯವಿಲ್ಲವಾಗಿ ಸೆಶನ ಜಡ್ಜರು ಅಭಿಪ್ರಾಯ ಪಟ್ಟಿರುತ್ತಾರೆ. ಕಳೆದ ವರ್ಷ ಜೂನ ೧೩ನೇ ತಾರೀಖಿಗೆ ಈ ಫಿರ್ಯಾದು ದಾಖಲಾಗಿತ್ತು. ಈ ವರ್ಷ ಜೂನ ೧೩ನೇ ತಾರೀಖಿಗೆ ಅದರ ತೀರ್ಮಾನವಾಯಿತು. ತಮ್ಮ ವ್ಯವದಲ್ಲಿ ಹ್ಯಾಕೋರ್ಟಿಗೆ ಈ ಪ್ರಕರಣ ಹೋಗಿ ಬಹು ಆರೋಪಿತ ನಿರ್ದೋಷಿಗಳೆಂದು ನಿರ್ಣಯಿಸಲು ಧಾರವಾಡದ ಹೆಡ ರಾದ ವಕೀಲರಾದ ವಿ (ದಿವಾನರವರು ಒಂದಿದ್ದರು. ಮಿ) ಪರಾಂಜಪೆ ಅವರ ಕಾರ್ಯವು ಬಹು ಚೆನ್ನಾಗಿ ಇತ್ತು. ಶ್ರೀ ಯುತರಾದ ಮಿ। ಪರಾಂಜಪೆ ಮಿರ್ಜಾನಕರರು ಕೂಡ ಸಂಸ್ಕೃತ ಭಾಷೆಯಲ್ಲಿ ನಿಪುಣರಿದ್ದಾರೆ. ಸಂಸ್ಕೃತ ಶ್ಲೋಕಗಳನ್ನು ಸಹಜ ಅವರು ಹೇಳುವಾಗ ದಿನ ಕಾಲಾಕ್ಷೇಪ. ಈ ಖಟ್ಲೆಗೆ ಇತ್ತಿತ್ತಲ್ಲಿ ಕೊಡಿ ೮-೧೦ ಸಾವಿರ ರೂಪಾಯಿ ಖರ್ಚಾಗಿರಬೇಕಾಗಿ ಹೇಳುತ್ತಾರೆ. ಗುಸ್ತೆ ವಿಷಯ ಅಂದರೆ ಮದುವೆಯಾಗದ ಖತಿಜಾಬಿಗೆ ಮದುವೆಯಾಯಿತೆಂದು ಹೇಳಿದ್ದು! ಇಷ್ಟಾಗಿ ಮದುವೆಯಾಗಿದ್ದು ಸಟಿಯೋ, ದಿಟವೋ ಎಂಬ ಸಂಗತಿ ನಿರ್ಣಯವಾಗಲಿಲ್ಲ. ಹಾಗೇರಿಯ ಸಿವಿಲ್ ಕೋರ್ಟಿನಲ್ಲಿ ವ್ಯವಹಾರ ನಡೆದಿದೆ. ಮದುವೆಯ ವಾರ್ತೆಗೆ ಇಷ್ಟು ಖರ್ಚಾದರೆ ಮದುವೆಗೆಷ್ಟು ಖರ್ಚಾಗಬೇಕೆಂದು ಒಬ್ಬರು ವಿನೋದ ಮಾಡುತ್ತಾರೆ!

ತಾರಗಾರ—(ತಾ, ೧೫-೬-೩೫) ೫ ೬ ದಿನಗಳಿಂದ ಒಳ್ಳೇ ಮಳೆ ಬೀಳುತ್ತದೆ, ಕುಂಟೆ ಇಲ್ಲಿ ಮೈಲಿಯ ಬೇನೆಯದೆ ಕಳೆದ ವಾರಗಳಿಂದ ಇಲ್ಲಿಯ ವಕೀಲರಾದ ರಾ। ರಾ। ಮಧುರ ಮನೋಹರರಿಗೆ ಮೈಲಿ ಬೇನೆಯಿಂದ ಅಕಸ್ಮಾತ್ ತೀರಿಕೊಂಡರೆಂದು ತಿಳಿಸಲು ವಿಷಾದವಾಗುತ್ತದೆ. ರಾ। ಮನೋಹರರವರು ದೈವಜ್ಞ ಸಮಾಜದ ಮೊದಲನೇ ವಕೀಲರಿದ್ದರು. ಸ್ವಸಮಾಜದ ಉನ್ನತಿಗಾಗಿ ಅಧ್ಯಕ್ಷರಿಂದ ದುಡಿಯುತ್ತಿದ್ದರು. ಮೇಲಾಗಿ ಸರಳ ಸ್ವಭಾವದವರು, ಉತ್ಸಾಹಿಗಳು. ಇವರ ನಿಧನದಿಂದ ದೈವಜ್ಞ ಸಮಾಜಕ್ಕೆ ಒಳ್ಳೇ ಹಾನಿಯಾಗಿದೆ. ಎರಿಯಬ ಸಂಪಾದಕರು ದುಃಖಿತ್ರದರ್ಶಕ ರದಾವನ್ನು ಮುಂಜೂರ ಮಾಡಿದಾರೆ. ಸ್ವಾಮೀಯರಾಗರು ಸ್ವಸನಸ್ತ್ರದರ್ಶನ ಮಾಡಿದರು. ಅವರ ಕಾರ್ಯಕಾಯರು ಪಿತೃವೆ ಮತ್ತು ಇಬ್ಬ ಮಕ್ಕಳಿದ್ದಾರೆ. ಅಕಸ್ಮಾತ್ ಒದಗಿದ ಆಪತ್ತಿನಲ್ಲಿ ದೈವಜ್ಞ ಸಮಾಜದವರೂ, ವಕೀಲ ಸಂಘದವರೂ ಮಾಲಗಾರರೆಂದು ಎಷ್ಟು ಸಾಂತ್ವನ ಮಾಡಿಕೊಳ್ಳಬೇಕು ಈಶ್ವರೇಚ್ಛೆಗೆ ಉಪಾಯವಿಲ್ಲ. ಮೃತಾತ್ಮರಿಗೆ ಸದ್ಗತಿ ಪ್ರಾಪ್ತವಾಗಲೆಂದು ಪ್ರಾರ್ಥಿಸುತ್ತೇವೆ.

ಹಳಿಯಾಳ— (ತಾ ೧೪-೬-೩೫) ಮೊನ್ನೆಯಿಂದ ಮೋಡಗಳಿಂದ ಕ್ಷಮಾವೃಷ್ಟಿಯಾಗುತ್ತಿದೆ. ಇನ್ನೂ ದೊಡ್ಡ ಮಳೆ ಆರಂಭವಾಗಲಿಲ್ಲ.

ಹಳ್ಳಿಗಳಲ್ಲಿ ಹುಲಿಯ ಕಾಟ! ಬಹಳ ದನಕರುಗಳು ಆದರ ಪಾಲಾಗಿ ಹೋದವು! ಯಾರಾದರೂ ಹುಲಿಯ ಸಮಾಚಾರ ಕೊಂಡು ರೈತ ಜನರನ್ನು ಕಾಯುವರೇ ?

ಶ್ರೀ ಮಾ ನಾ ಭೀ ಪೇಟಕರ ಇವರು ತಮ್ಮ ಮುಲ್ಕಿ ಖಾಸನದಲ್ಲಿ ಆಜ್ಞೆ ಮಾಡಿದಂತೆ ಮುಂದಿನ ಶಾಸನದ ರಾಜತಂತ್ರ ಇಲ್ಲಿಯ ಗೋಪಕ್ಷ ನಷ್ಟಗೆ ರೂ ೫೦ ಕಾಣಿಕೆಯಾಗಿ ಅರ್ಪಿಸಿದ್ದಾರೆ. ಸಂಸ್ಥೆಯ ಹಳೇ ಅಧ್ಯಕ್ಷರಾದ ರಾ। ದೇಶಪಾಂಡೆಯವರು, ದೊಡ್ಡ ೫ ಖಾಯಿ ಸಾಗವಾನಿ ಕಟ್ಟಿಗೆಯನ್ನು ಕಂಪನಿಯ ಉಪಯೋಗಕ್ಕೆ ಧರ್ಮಾರ್ಥ ಕೊಟ್ಟಿದ್ದಾರೆ. ಸಂಸ್ಥೆಯ ಚಾಲಕರು ಈ ಬಗ್ಗೆ ಅವರಿಗೆ ವಂದನೆಗಳನ್ನು ಅರ್ಪಿಸುತ್ತಾರೆ. ಇದೇ ರೀತಿ ಬೇರೆಯವರೂ ಉದಾರತ್ವ ತೋರಿಸಬೇಕಾಗಿ ಅವರ ಕೋರಿಕೆಯಿದೆ.

Siromani Udipi Narayanacharya,

CHAUKHAMBA, BENARES CITY.

ಮಹಾಶಯರೇ, ರುದ್ರನೇತ್ರ್ಯ. ಶ್ರೀನ್ನವಾಣ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಕ್ರಿಂ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದೆ. ಸ್ಫಟಿಕದಾಗುಸ್ತ, ಆಗುತ್ತ, ಕ್ರಿಯ ಹೆಜ್ಜವಡು ಕಾಚಿ ಸರ 32 ಸರ1ಕ್ಕೆ ರೂ.0 8-0ಯಿಂದ ರೂ 100 ವರೆಗೆ ಗೌರಿಶಂಕರ 1ಕ್ಕೆ ರೂ. 3 8 0ರಿಂದ 5ರ ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0ಸ್ಟಾಂಪು ಕಳಿಸಿದರೆ, 1 ಕಾಶಿ ನಕ್ಷೆ, 1 ವಿಶ್ವೇಶ್ವರನ ಪಟ ಸಹ ಕಳಿಸಲಾಗುವದು ಉಚಿತ ಕಳಿಸಲಾಗುವದು

ಪತ್ತೆ:- ಶಿರೋಮಣಿ ನಾರಾಯಣಾಚಾರ್ಯ, ಚೌಕಾಂಬಾ, ಕಾಶೀ ಕ್ಷೇತ್ರ.

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ. 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂಪನಿನ ದರಗಳೂ, ಕರಾರುಗಳೂ ಬಹಳ ಕೋಣಿಯಾಗಿವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು.

Kumta Agents
D. K. Nayak Bros
D S Pai
N K. Nayak.
Honavar Agent
R V. Prabhu Esq

K. Padmanabha Rao & Sons,
BELGAUM
Chief Agents for
Karnatak Districts & S M States

ಅಲ್ಲಿಲ್ಲಿ ಇಷ್ಟಿಷ್ಟು!

[ಹಿಂದಿನ ವಾರದಿಂದ ಮುಂದರಿಸಿದ್ದು]

ಸನ್ ಪರೀಕ್ಷೆಯಲ್ಲಿ ಇತಿಹಾಸ ಪ್ರಶ್ನ ಪತ್ರಿಕೆಯನ್ನು ದೇಶಿ ಭಾಷೆಯಲ್ಲಿ ಬರೆಯಬಹುದೆಂಬ ಅಪ್ಪಣೆಯಿದೆ. ಮರಾಠಿ ಹುಡುಗರು ಇದರ ಒಳ್ಳೇ ಲಾಭ ಪಡೆಯುತ್ತಿದ್ದಾರೆ. ೧೯೩೫ನೇ ಇಸವಿಯಲ್ಲಿ ೧೬೧೪ ವಿದ್ಯಾರ್ಥಿಗಳು ಪರೀಕ್ಷೆಗೆ ಕೂತಿದ್ದರು ೧೨೭೩ ಜನರು ಅಭಿಮಾನದಿಂದ ಮರಾಠಿಯಿಂದಲೇ ಉತ್ತರ ಬರೆದರು. ಕನ್ನಡಿಗ ವಿದ್ಯಾರ್ಥಿಗಳು ಇದನ್ನು ಅನುಕರಿಸಬಹುದು. ಇದೇ ರಿಪೋರ್ಟಿನಲ್ಲಿ ಸರಕಾರದ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿ (ಡಾಯರೆಕ್ಟರರ) ಅಭಿಪ್ರಾಯವನ್ನು ಉಲ್ಲೇಖಿಸಿದೆ "ಸ್ಕೂಲ ಬೋರ್ಡುಗಳು ಒಂದರ ಹಿಂದೊಂದು ಶಾಲೆಗಳನ್ನು ಹೊರಡಿಸುತ್ತ ಹೋಗುವದಕ್ಕಿಂತ ಇದ್ದ ಶಾಲೆಗಳನ್ನು ಭದ್ರಪಡಿಸುವದು ಲೇಸು." "ಸ್ಕೂಲ ಬೋರ್ಡ ಸರಕಾರಿ ದ್ರವ್ಯಸಹಾಯದ ನಿರೀಕ್ಷೆ ಮಾಡಬಾರದು ೫೦೦ಕ್ಕೆ ಮಿಕ್ಕಿ ಜನಸಂಖ್ಯೆಯುಳ್ಳ ೩ ಸಾವಿರ ಹಳ್ಳಿಗಳಲ್ಲಿ ಶಾಲೆಗಳನ್ನು ಹೊರಡಿಸುವ ಯೋಜನೆ ಮಾಡಬೇಕು" ಈ ಎರಡು ಉಲ್ಲೇಖಗಳು ಪರಸ್ಪರ ವಿಸಂಗತವಾದವುಗಳೆಂದು ಕೆಲ ಪತ್ರಕರ್ತರ ಟೀಕೆ. ಸ್ಕೂಲ ಬೋರ್ಡುಗಳು ಇದ್ದ ಶಾಲೆಗಳನ್ನು ಭದ್ರಪಡಿಸಲಿಕ್ಕೂ, ಹೊಸ ಶಾಲೆಗಳನ್ನು ಹೊರಡಿಸಲಿಕ್ಕೂ ಹಣ ಹೇಗೆ ಒದಗಿಸಿಕೊಳ್ಳಬೇಕೆಂಬ ಸೂಚನೆ ರಿಪೋರ್ಟಿನಲ್ಲಿ ನಮೂದಿಲ್ಲ ಮುಂಬಯಿ ಇಲಾಖೆಯೊಳಗಿನ ಪ್ರಾಥಮಿಕ ಶಿಕ್ಷಕರಿಗೆ ಇತರ ಪ್ರಾಂತಗಳಿಗಿಂತ ಹೆಚ್ಚಿನ ಸಂಬಳದ ವಿಷಯವನ್ನು ಸರಕಾರವು ಪುನರಾಲೋಚಿಸುತ್ತಿದೆಯೆಂದು ರಿಪೋರ್ಟಿನಲ್ಲಿ ನಮೂದಿದೆ ಈ ಆಲೋಚನೆಯಂತೆ ಹೊಸ ಸಂಬಳದ ಸ್ಕೇಲು ತಯಾರಾಗಿ ಬೋರ್ಡುಗಳ ಅಭಿಪ್ರಾಯಕ್ಕೆ ಒಂದಿರುತ್ತದೆ. ದೊಡ್ಡ ದೊಡ್ಡ ಅಧಿಕಾರಿಗಳು ಪಡೆಯುವ ದೊಡ್ಡ ದೊಡ್ಡ ಸಂಬಳ ಬೇರೆ ರಾಷ್ಟ್ರಗಳ ಮಾನದಿಂದ ಹೆಚ್ಚಾಗಿರುವದರಿಂದ ಅದನ್ನು ತಗ್ಗಿಸಬೇಕೆಂಬ ವಿಚಾರ ಸರಕಾರಕ್ಕೆ ಇರುವದೋ ಇಲ್ಲವೋ ಎಂಬ ವಿಷಯ ಈ ರಿಪೋರ್ಟಿಗೆ ಸಂಬಂಧಪಟ್ಟಿದ್ದಲ್ಲವಾದ್ದರಿಂದ ಆ ಕುರಿತು ಏನೊಂದೂ ಉಲ್ಲೇಖ ಈ ರಿಪೋರ್ಟಿನಲ್ಲಿರುವದಿಲ್ಲ

***

ಕ್ವೆಟ್ಟಾ ಭೂಕಂಪದ ವಾರ್ತೆ ಕೇಳಿದರೆ ಏನೂ ಸೂಚಿಸುವದಿಲ್ಲ. ಸುಮಾರು ೧೩೦ ಮೈಲು ಉದ್ದ, ೨೦-೩೫ ಮೈಲು ಅಗಲಳತೆಯ ಪ್ರದೇಶದಲ್ಲಿ ಭೂಕಂಪದಿಂದ ಗ್ರಾಮಗಳೂ, ಪಟ್ಟಣಗಳೂ ನೆಲಸಮವಾಗಿವೆ ಸುಮಾರು ೧೦೦ ಗ್ರಾಮಗಳು ಈ ಪ್ರದೇಶದಲ್ಲಿದ್ದವು. ೫೫ ಸಾವಿರ ಜನರು ತೀರಿಕೊಂಡರಂತೆ ಎಷ್ಟೋ ಜನರು ಹುಗಿದುಬಿದ್ದಿರಬೇಕು. ಬದುಕಿ ಉಳಿದವರಿಗೆ ಅಧಿಕಾರಿಗಳು ಉಗಿಬಂಡಿ ಹತ್ತಿಸಿ ಹೊರಸೂಕಲಾರಂಭಿಸಿದ್ದಾರೆ ಕರಾಚಿ, ಲಾಹೋರ, ದಿಲ್ಲಿ, ಜಕೋಬಾಬಾದ, ಶಿಕಾರಪುರ ಮೊದಲಾದ ಪಟ್ಟಣಗಳಲ್ಲಿ ಮನೆ-ಮಾರು ಕಳಕೊಂಡ ನಿರ್ಗತಿಕರ ವ್ಯವಸ್ಥೆಯಾಗುತ್ತಿದೆ. ಘಾಯಪಟ್ಟವರಿಗೆ ಶುಶ್ರೂಷೆ ಮಾಡಲ್ಪಡುತ್ತದೆ. ಊಟ-ಉಳಕೊಳ್ಳುವ ವ್ಯವಸ್ಥೆಯೂ ಮಾಡಲ್ಪಡುತ್ತದೆ. ಭೂಕಂಪವಾದಾಗ ಅನೇಕ ಹೆಂಗಸರು ಪ್ರಸೂತರಾದರಂತೆ! ಆ ಸಮಯ ಹುಟ್ಟಿದ ಮಕ್ಕಳು ಕ್ಷೇಮದಿಂದಿರ ವರಾಗಿ ಒಂದು ವಾರ್ತೆ.

***

ಹಿಂದುಸ್ಥಾನ ಸರಕಾರವು ಗಟ್ಟಿ ಕೂತಿದೆ. ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರ ಆಸೇಷ್ಟಿಯಂತ ಕಾರ್ಯದರ್ಶಿಗಳಿಗೆ ಪ್ರವೇಶ ಕೊಡಲಿಕ್ಕೆ ಸರಕಾರವು ಒಪ್ಪಲಿಲ್ಲ ಭೂಕಂಪಪ್ರದೇಶದಲ್ಲಿ ಬೇಕಷ್ಟು ಸಹಾಯ ಮಾಡಲು ಸರಕಾರವು ಸಮರ್ಥವಿರುವದಾಗಿಯೂ, ಪರರ ಸಹಾಯದ ಅಪೇಕ್ಷೆ ಇಲ್ಲವಾಗಿಯೂ ಹಿಂದುಸ್ಥಾನ ಸರಕಾರವು ರಾಷ್ಟ್ರಪತಿಗಳಿಗೆ ಉತ್ತರ ಕೊಟ್ಟಿದೆ. ಹೊರಪ್ರದೇಶದಿಂದ ಜನರಿಗೆ ನಗ್ಗಗೊಟ್ಟರೆ (೧) ನೀರಿನ ಕೊರತೆಯಾಗಬಹುದು, (೨) ವಾಹನಗಳ ಒದಾಟಕ್ಕೆ ತೊಂದರೆಯಾಗಬಹುದು (೩) ಸಾಂಸರ್ಗಿಕ ರೋಗ ಹಬ್ಬಬಹುದು, (೪) ಆಹಾರ ಸಾಮಗ್ರಿಗಳಲ್ಲಿ, ಉಳಕೊಳ್ಳಲು ವ್ಯವಸ್ಥೆಯಲ್ಲಿ, (೫) ಒಯ್ಯಲು ವಾಹನಗಳಲ್ಲಿ, (೬) ಪುನಃ ಭೂಕಂಪವಾಗುವ ಭೀತಿಯಿದೆ, ಈ ಕಾರಣಪರಂಪರೆಯನ್ನು ಸರ್ವಾಧಿಪತಿಗಳು ರಾಷ್ಟ್ರಪತಿಗಳಿಗೆ ತೋರಿಸಿದ್ದಾರೆ ಕ್ವೆಟ್ಟದೊಳಗಿನ ನೀರಿನ ಪೂರೈಕೆಗೆ ಭೂಕಂಪದಿಂದ ಪೆಟ್ಟಾಗಿಲ್ಲ. ಭೂಕಂಪದಲ್ಲಿ ಅರ್ಧ ಲಕ್ಷ ಜನರು ತೀರಿಹೋದಾಗ್ಯೂ ಇದ್ದ ನೀರು ಶುಶ್ರೂಷೆಗೆ ಹೋಗುವ ಲೋಕಪಕ್ಷದ ಕಾರ್ಯಕರ್ತರಿಗೆ ಪೂರೈಕೆಯಾಗಲಿಕ್ಕಿಲ್ಲವೇನು? ವಾಹನ ಸೌಕರ್ಯ ನ್ಯೂನತೆ, ಭೂಕಂಪಭೀತಿ, ಆಹಾರ ಪೂರೈಕೆಯ ಕೊರತೆಗಳ ಕಾರಣಗಳನ್ನು ಸಾಮಾನ್ಯ ವ್ಯವಹಾರಶೂನ್ಯರು ಸಹ ನಿರಾಧಾರವೆಂದು ಹೇಳುವರು. 'ಕ್ರೊನಿಕಲ್ ಪತ್ರಿಕೆ'ಯ ಸೈನ್ಯ ಇಲಾಖೆಯ ಸುದ್ದಿಗಾರರು ಬರೆದಂತೆ, "ಕ್ವೆಟ್ಟಾದಲ್ಲಿ ಸೈನ್ಯಖಾತೆಯವರು ದೇಶರಕ್ಷಣೆಗಾಗಿ ಸುರಂಗಗಳನ್ನು ಹುಗಿದಿಟ್ಟಿರಬೇಕು; ಭೂಕಂಪದಿಂದ ಅವುಗಳ ಸ್ಫೋಟವಾಗಿ ಅಪಾರ ನಷ್ಟ ಒದಗಿರಬೇಕು; ಇದನ್ನು ಬಚ್ಚಿಡಲು ಸೈನ್ಯ ಇಲಾಖೆಯವರು ಪ್ರಮುಖರಿಗೆ ಪ್ರತಿಬಂಧ ಮಾಡುತ್ತಿರಬೇಕು. ಆದರೆ ಇದರೊಳಗೆ ಸೈನ್ಯ ಖಾತೆಯವರ ತಪ್ಪೇನಿಲ್ಲ. ಭೂಕಂಪವಾಗುವದೆಂದು ಯಾವನೂ ಎಣಿಸಲಾರನು. ಮೇಲಾಗಿ ದೇಶರಕ್ಷಣೆಗೆ ಸೈನ್ಯ ಇಲಾಖೆಯವರು ಒಳಪ್ರದೇಶಗಳಲ್ಲಿ ಸುರಂಗ ಹಾಕಿಟ್ಟಿದ್ದರು." ಹೀಗಿದ್ದು ಸರಕಾರವು ಹೊರ ಜನರಿಗೆ ಪ್ರತಿಬಂಧಿಸುವ ಕಾರಣವೇನೆಂದು ಯಾರಿಗೂ ತಿಳಿಯದಾಗಿದೆ ಸೈನಿಕರು ಭೂಕಂಪ ಪ್ರದೇಶದಲ್ಲಿ ತತ್ಪರತೆಯಿಂದ ದುಡಿದು ಜನರಿಗೆ ರಕ್ಷಣೆ ಮಾಡಿದರಾಗಿ ಸೈನ್ಯ ಇಲಾಖೆಯ ವಕೀಲಿಯನ್ನು ಬೇರೆ ಬೇರೆ ಜನರು ಮಾಡುತ್ತಿದ್ದಾರೆ ಸರಕಾರಿ ಪಕ್ಷದ ಪತ್ರಕರ್ತರ ಸುದ್ದಿಗಾರರಿಗೆ ಸೈನ್ಯ ಇಲಾಖೆಯವರು ಪ್ರವೇಶ ಕೊಟ್ಟು ಅವರ ಕಡೆಯಿಂದ ಸೈನ್ಯಾಧಿಕಾರಿಗಳೇ ಭೂಕಂಪಗ್ರಸ್ತರ ಸೇವೆ ಮಾಡಿದರಾಗಿ ಪ್ರಕಟಿಸುತ್ತಿದ್ದಾರೆ. ಆದರೆ ಸೈನ್ಯಾಧಿಕಾರಿಗಳು ಕೊಳೆತ ನಾತದಿಂದ ಆಗುವ ಕೆಲಸ ಅಸಾಧ್ಯವೆಂದು ೩-೪ ದಿನಗಳಲ್ಲಿಯೇ ತಡಿಸಿದರು. ಈಗ ಕೊಳೆತ ನಾತದಿಂದ ಆಗಿಯುವ

THE INDIAN MERCANTILE INSURANCE CO. LTD.,

BOMBAY.

(Established in 1907)

A Solid and purely Indian Life Office which has substantial growth under the Chairmanship of the late Sir Munmohandas Ramji Kt.

WANTED Energetic & Influential Agents and experienced Organisers, both on commission & pay for the Karnatak Districts.

For particulars apply to

G. Yellapurkar & Sons,
Chief Agents for Karnatak,
Market Square, KARWAR.

ಇಂಡಿಯನ್ ಮರ್ಕಂಟೈಲ ಇನ್ಶೂರನ್ಸ ಕಂಪನಿ, ಲಿಮಿಟೆಡ್,

ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು.

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿಗೊಂಡಿದ ಕಂಪನಿಯು'

ಬೇಕು! ಕರ್ನಾಟಕದೊಳಗಿನ ಜಿಲ್ಹೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ಪಗಾರ ಸಿಗುವದು ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆ ಪೇಟೆ, ಕಾರವಾರ.

ಕೆಲಸ ನಿಲ್ಲಿಸತಕ್ಕದ್ದೆಂದು ತೀರ್ಮಾನವಾಗಿರುವದಂತೆ. ೧ ವರ್ಷದ ತನಕ ಕ್ವೆಟ್ಟಾ ಪಟ್ಟಣವನ್ನು ಮುದ್ರೆ ಹಾಕಿಡಬೇಕೆಂದು ತಜ್ಞರೊಬ್ಬರು ಸೂಚಿಸುತ್ತಾರಂತೆ. ಸೈನ್ಯ ಇಲಾಖೆಯವರು ಜನರಿಗೆ ಬದುಕಿಸಿಕೊಳ್ಳಲು ತಕ್ಕಷ್ಟು ಪ್ರಯತ್ನ ಮಾಡಲಿಲ್ಲವಾಗಿ ಲಾಹೋರದ ಲೋಕಸೇವಕ ಸಮಾಜ ಸಂಘದ ಶ್ರೀ| ದೇವರಾಜ ಶೇಟರವರು ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರಿಗೆ ಮುದ್ದಾಂ ದೂರನ್ನು ಕಳುಹಿ ಬರೆದು ತಿಳಿಸಿದ್ದಾರೆ. ಶ್ರೀ| ದೇವರಾಜ ಶೇಟರವರು ಲಗುಬಗೆಯಿಂದ ಕ್ವೆಟ್ಟಾಕ್ಕೆ ಹೋಗಿ ಅಲ್ಲಿಯ ಆಸ್ಪತ್ರೆಯಲ್ಲಿ ಅಡ್ಡಾಡಿದರು; ಪ್ರತಿ ಗುಡಾರಿಗೆ ಹೋಗಿ ಜನರೊಡನೆ ಮಾತನಾಡಿದರು, ಅಧಿಕಾರಿಗಳೊಡನೆ ಸಂಭಾಷಣೆ ನಡಿಸಿದರು; ಭೂಕಂಪ ಪ್ರದೇಶದಲ್ಲಿ ಸಂಚರಿಸಿದರು, ದಿವಾಣಬಹಾದ್ದೂರ ಮುರಲೀಧರರೊಡನೆ ಸರಕಾರದ ಅಂಬೋಣವನ್ನೂ ಕೇಳಿಕೊಂಡರು. ಲೋಕಸೇವಕ ಸಮಾಜವು ಪ್ರಸಿದ್ಧ ಲಾಲಾ ಲಜಪತರಾಯರಿಂದ ಸ್ಥಾಪಿತವಾದದ್ದು. ಸೈನ್ಯಾಧಿಕಾರಿಗಳು ಭೂಕಂಪವಾದೊಡನೆ ಎದೆಗುಂದಿದವರಾಗಿಯೂ, ಏನು ಮಾಡಬೇಕೆಂದು ಅವರಿಗೆ ತಿಳಿಯಲಿಲ್ಲವೆಂದೂ ಶ್ರೀ| ದೇವರಾಜರ ಅಂಬೋಣ. ಮೊದಲ್ಪ್ರಂತೆದಿಂದ ಕಾರ್ಯಕರ್ತರಿಗೆ ಹೋಗಗೊಟ್ಟಲ್ಲಿ ಬಹಳ ಲಾಭವಾಗುತ್ತಿತ್ತಾಗಿಯೂ ಶ್ರೀ| ದೇವರಾಜರವರು ಪ್ರಕಟಿಸುತ್ತಾರೆ. ಸರಕಾರ ಪಕ್ಷದ ಪರವಾಗಿ ಜವಾಬದಾರ ಬ್ರಿಟಿಶ ನಿರೀಕ್ಷಕರೊಬ್ಬರು (A responsible British on looker) ಸೈನ್ಯಾಧಿಕಾರಿಗಳಿಗೆ ಪ್ರಶಸ್ತಿಪತ್ರಕ ಕೊಡುವಾಗ ಬರೆದ ಉಲ್ಲೇಖ ವಿಚಾರಾರ್ಹವಿದೆ. ಆಸ್ಪತ್ರೆಗೆ ಅವರು ಹೋಗಿದ್ದರು. ಆ ಸಮಯ ಅಲ್ಲಿದ್ದವರು ತಮ್ಮ ತಮ್ಮ ಕಥೆ ಹೇಳಿದರಂತೆ. ಒಬ್ಬರು ಹೇಳಿದ್ದೇನೆಂದರೆ – "ನನ್ನ ದೈವಬಲ ದೊಡ್ಡದು, ಸೂಂಟದ ಮಟ್ಟಿಗೆ ನಾನು ಹುಗಿದುಬಿದ್ದಿದ್ದೆ; ನಾನು ಎದ್ದೆ. ನನ್ನ ತಮ್ಮನಿಗೂ ಒಬ್ಬ ಚಿಕ್ಕ ಮಗುವಿಗೂ ಬದುಕಿಸಿಕೊಂಡೆ. ಆದರೆ ಇನ್ನೂ ಕೆಳಪಾರ್ಶ್ವದಿಂದ ಜನರ ದನಿ ಕೇಳಿ ಬರುತ್ತಿತ್ತು. ಅವರಿಗೆ ಅಗೆದು ತೆಗೆಯುವ ಆಶ್ಕೆ ಇರಲಿಲ್ಲ. ಅವರು ಖಂಡಿತವಾಗಿ ತೀರಿಕೊಂಡಿರಬೇಕು." ಈ ಪ್ರಕಾರ ಬ್ರಿಟಿಶ ನಿರೀಕ್ಷಕರು ಭೂಕಂಪವಾದ ೩೬ ತಾಸುಗಳ ಮೇಲಿನ ತಮ್ಮ ಅನುಭವವನ್ನು [illegible]ತ್ತಾರೆ. ಇದರ ಮೇಲಿಂದ ಸೈನ್ಯಾಧಿಕಾರಿಗಳು ಇಷ್ಟು ಅಲ್ಪಾವಧಿಯಲ್ಲಿಯೇ ಜನರನ್ನು ಬದುಕಿಸುವ ಕಾರ್ಯವನ್ನು ನಿಲ್ಲಿಸಿದರೆಂದು ತೋರುತ್ತದೆ. ಬಿಹಾರ ಪ್ರಾಂತದ ಮೊಂಘೀರ ಪಟ್ಟಣದಲ್ಲಿ ಭೂಕಂಪವಾದ ೬ ದಿನಗಳ ನಂತರ ಹುಗಿದುಬಿದ್ದ ಜನರಿಗೆ ಅಗೆದು ತೆಗೆದ ಉದಾಹರಣೆಗಳಿವೆ. ಗಿಳಿಮರಿಯನ್ನು ಬದುಕಿಸಿಕೊಂಡ ವಾರ್ತೆಯನ್ನು ಎಲ್ಲರೂ ಬಲ್ಲಂಥ ವಿಷಯ! ಸೈನ್ಯ ಇಲಾಖೆಯವರು ಯಾವತ್ತೂ ಪ್ರಯತ್ನಗಳನ್ನು ನಡಿಸಿ ದಕ್ಷ ರೀತಿಯಿಂದ ದುಡಿದಿದ್ದರೆ, ಮುಂಬಯಿಯ ಶ್ರೀ| ನರಿಮಾನರವರು ಸೂಚಿಸಿದಂತೆ, ರಾಷ್ಟ್ರಪತಿಗಳಿಗೂ, ರಾಷ್ಟ್ರೀಯ ಕಾರ್ಯದರ್ಶಿಗಳಿಗೂ, ಒಬ್ಬಿಬ್ಬ ಮುಸಲ್ಮಾನ ಪ್ರತಿನಿಧಿಗಳಿಗೂ ಭೂಕಂಪ ಪ್ರದೇಶಕ್ಕೆ ಒಯ್ದು ಅಲ್ಲಿಯ ಪರಿಸ್ಥಿತಿಯ ಗ್ರಹಿಕೆ ಕೊಟ್ಟು ಸರಕಾರದ ಪ್ರತಿಬಂಧವನ್ನು ಸಮರ್ಥಿಸಿಕೊಳ್ಳಬೇಕು. ರಾಷ್ಟ್ರಪತಿಗಳಾಗಲಿ, ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಾಗಲಿ, ಮಾನ್ಯ ಮುಸಲ್ಮಾನ ಪ್ರಮುಖರಾಗಲಿ ಸರಕಾರಕ್ಕೆ ಸಂಕಟದಲ್ಲಿ ಹಾಕಬಯಸುವವರಲ್ಲ. ಭೂಕಂಪಗ್ರಸ್ತರ ಸೇವೆ ಸೈನ್ಯ ಇಲಾಖೆಯು ವಿದ್ಯಮಾನ ದಕ್ಷತೆಯಿಂದ ನಡಿಯುತ್ತಿದ್ದರೆ ಅವರು ಅದನ್ನು ಕೆಡಿಸಲೆಣಿಸಲಿಕ್ಕಿಲ್ಲ. ಭೂಕಂಪ ಸಂಕಟದಿಂದ ಪಾರಾದ 'ರ್ಯೂಟರ' ವಾರ್ತಾವಾಹಕ ಸಂಸ್ಥೆಯ ಕ್ವೆಟಾದೊಳಗಿನ ಸುದ್ದಿಗಾರರು ಬರೆದಂತೆ, "ಇಲ್ಲಿಯ ಸ್ಥಿತಿ ವರ್ಣನಾತೀತವಾದುದು. ಸ್ವತಃ ಕ್ವೆಟಾ ಪಟ್ಟಣವನ್ನು ನೋಡಿದನಕ ನಂಬಿಗೆ ಹುಟ್ಟದು." (The whole thing is beyond description, and really, Quetta has to be seen to be believed !) ಇಂಥ ಪ್ರಸಕ್ತಿಯಲ್ಲಿ ಶ್ರೀ| ನರಿಮಾನರ ಸೂಚನೆಯಂತೆ ಸರಕಾರವು ನಡೆದು ಲೋಕಕ್ಷೋಭವನ್ನು ಪರಿಹರಿಸಬೇಕಾಗಿ ಸೂಚನೆ.

***

ಭೂಕಂಪಗ್ರಸ್ತರಿಗಾಗಿ ಬ್ರಿಟಿಶ ಸರಕಾರವು ಪಾರ್ಲಿಮೆಂಟಿನ ಮನ್ನಣೆಯನ್ನು ಮುಂದಾಗಿ ಎಣಿಸಿ ಅರ್ಧ ಲಕ್ಷ ಪವನುಗಳನ್ನು ಸರ್ವಾಧಿಪತಿಗಳ ಭೂಕಂಪಗ್ರಸ್ತರ ನಿಧಿಗೆ ಕಳುಹಿದೆ. ಹಿಂದುಸ್ಥಾನ ಸರಕಾರವು ೧೦ ಲಕ್ಷ ರೂ. ಗಳನ್ನು ಅರ್ಪಿಸಿದೆ. ಬಿಹಾರ ಭೂಕಂಪದ ಸಮಯ ಬ್ರಿಟಿಶ ಸರಕಾರವಾಗಲಿ, ಹಿಂದುಸ್ಥಾನ ಸರಕಾರವಾಗಲಿ ಈ ಪರಿ ಔದಾರ್ಯ ತೋರಿಸದೆ, ಇದೀಗಲೇ ಈ ಪ್ರಕಾರ ಧರ್ಮ ಮಾಡಲು ಕಾರಣವೇನೆಂದು ತಿಳಿಯದೆ ಎಲ್ಲರೂ ಚಕಿತರಾಗಿದ್ದಾರೆ. ಕ್ವೆಟ್ಟಾ ಪ್ರದೇಶವು ಸೈನ್ಯ ಠಾಣ್ಯವಿದ್ದು ಬ್ರಿಟಿಶ ಸಾಮ್ರಾಜ್ಯದ ಮರ್ಮಸ್ಥಾನವಿದ್ದದರಿಂದ ಬ್ರಿಟಿಶರ ಔದಾರ್ಯ ಈ ಸಮಯ ಉಕ್ಕೇರಿ ಬಂದಿರಬಹುದಂತೆ. ಜನರೂ ನಿಧಿಸಂಗ್ರಹ ಮಾಡುತ್ತಿದ್ದಾರೆ. ಸಂಸ್ಥಾನಿಕರು ದ್ರವ್ಯಾರ್ಪಣ ಮಾಡುತ್ತಿದ್ದಾರೆ. ಹಿಂದುಸ್ಥಾನ ಸರಕಾರದ ಪ್ರತಿಬಂಧದ ಮೂಲಕ ಸರ್ವಾಧಿಪತಿಗಳ ಭೂಕಂಪ ನಿಧಿಗೆ ಹಣ ಕೊಡಲಿಕ್ಕೆ ಸಂತೋಷಪಡದಿರುವವರು ರಾಷ್ಟ್ರೀಯ ಸಭೆಯವರ ಕಡೆ ಹಣ ಕಳಿಸಬಹುದು, ಕ್ರಾನಿಕಲ್– ಸೆಂಟಿನಲ್– ಸಮಾಚಾರ ಪತ್ರಿಕೆಯವರು ಏರ್ಪಡಿಸಿದ ನಿಧಿಗೆ ದ್ರವ್ಯಾರ್ಪಣ ಮಾಡಬಹುದು. ಈ ನಿಧಿಯ ವಿನಿಯೋಗವನ್ನು ಜನರ ವಿಶ್ವಾಸಕ್ಕೆ ಪಾತ್ರರಾದ ಲೋಕಪ್ರತಿನಿಧಿಗಳೇ ನಡಿಸುವರು.

***

ಲೋಕಪಕ್ಷದವರು ಭೂಕಂಪ ಪ್ರದೇಶದಿಂದ ಹೊರಬಂದ ನಿರ್ಗತಿಕರಿಗೆ ಒಳ್ಳೇ [illegible]ವಾಗುತ್ತಿದ್ದಾರೆ.

[೫ನೇ ಪಾನಿನ ಮೇಲೆ ಮುಂದರಿಸಿದೆ.]

ನಮ್ಮ ಜಯಭೇರಿ!

ಮಕ್ಕಳಿಗೆ ಆಗುವ ಭಯಂಕರವಾದ ಲಿವರ್ ಕಂಪ್ಲೇಂಟು (ಕೂರ್ಮವ್ಯಾಧಿ) ಮತ್ತು ಜ್ವರಗಡ್ಡೆಗೆ **ಜಮ್ಮಿ ವೆಂಕಟರಮಣಯ್ಯನವರು**

'ಲಿವರ್ ಕ್ಯೂರ್' (ರಿಜಿಸ್ಟರ್ಡ್)

ಎಂಬ ದಿವ್ಯೌಷಧವನ್ನು ತಯಾರಿಸುವದರಲ್ಲಿ ಸಂಪೂರ್ಣ ಜಯ ಹೊಂದಿರುತ್ತಾರೆ. ಶುದ್ಧವಾದ ದೇಶಿ ಸಾಮಾನುಗಳಿಂದ ಇದನ್ನು ತಯಾರಿಸಿರುವದರಿಂದ ಅದು ಪೂರ್ಣ ತೃಪ್ತಿ ಕೊಡುವುದೆಂದು ನಮ್ಮ ಭರವಸೆ. ಈ ಔಷಧವು ಕಾಹಿಲೆಯನ್ನು ಗುಣ ಮಾಡುವದಲ್ಲದೆ ಕಾಹಿಲೆಯೂ ಬಾರದಂತೆ ಮಾಡುವುದರಿಂದ ಮತ್ತಷ್ಟು ಜನರ ತೃಪ್ತಿಗೆ ಕಾರಣವಾಗಿದೆ. ಹೆಚ್ಚಿನ ಮಾಹಿತಿಗೆ ಈ ದಿನವೇ ಬರೆಯಿರಿ.

ಉತ್ತರ ಕನ್ನಡ ಮತ್ತು ಪೋರ್ತುಗೀಜಿನ ಸೋಲ ಏಜಂಟರು:—

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ.)

ಸುಲಭ ಕ್ರಯ! **ಡಾಕ್ಟರ ಜೇ. ಬೀ. ಗುಮಾವರ ಸುಗಂಧಿ ನಶ್ಯದ ಪುಡಿ.** ಸುಲಭ ಕ್ರಯ!



(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸರ್ವವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಯಾರು ಬೆಟ್ಟದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ, ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ಯಾಕೆಟ್ [illegible] ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ. ಪಿ. ಖರ್ಚು ಡಜನ್ ೧ಕ್ಕೆ ರೂ. ೨-೮-೦. ವಿ. ಪಿ. ೦-೫-೦.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ – ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ.ಬಾ. ೫೧೦, ಮೌಂಟರೋಡ ಮದರಾಸ.

ೞ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆರ್ಯ ವೈದ್ಯರ ಕಡೆಗೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅವರ ಗುಣಗಳು ಸರಿಯಾಗಿ ಕೂಡದೆ ಇರುವವಂತೆ. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳನ್ನು ನಕಲಿ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹಳ ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಹೋಗಲಾಡಿಸಿ ಮೈಯಲ್ಲಿ ತಾಕತ್ತನ್ನೂ, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ವಾಂತಿ,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಶ್ಮರಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಶಕ್ತಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ, ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ನಂಜಿನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆ ಶೂಲಿ ವಗೈರೆ ಆದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಿರುತ್ತದೆ.

ವಿಶೇಷವಾಗಿ ಹೆಂಗಸರಿಗೆ:— ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔಂಸಿನಂತೆ ೧೨ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯಾಗುತ್ತಾರೆ

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔಂಸ ಬಾಟ್ಲಿ ೧ಕ್ಕೆ ರೂ. ೧—೪—೦

,, ಬಾಟ್ಲಿ ೬ಕ್ಕೆ ರೂ ೬ ೧೨ — ೦

,, ಬಾಟ್ಲಿ ೧೨ಕ್ಕೆ ರೂ. ೧೨—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕುಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ:—

ಪಿ. ಅಚ್ಯುತ ಪಂಡಿತ,

ಮಾಲಕ,

ಆರ್ಯಧನ್ವಂತರಿ ಔಷಧಾಲಯ,

ಪೋಸ್ಟ:— ಕುಮಟಾ. (ಉ. ಕನ್ನಡ.)

|| ಶ್ರೀರಾಮ ಪ್ರಸನ್ನ ||

ಡಾ| ಅಂಕಲೀಕರ, ಎಮ್. ಡಿ., (ಅಮೇರಿಕಾ) ಸಂಕೇಶ್ವರ ಆಸ್ಪತ್ರಿ ಇವರು ದಮ್ಮು, ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ ರಾಮಬಾಣ ಔಷಧವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ— ಮನೆತನದ ವೈದ್ಯ!

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ದೋಷಿ ಅಥವಾ ಸಾದಾ) ನಿಮೋನಿಯಾ (ವಾಯುಮಾನ), ಟಾಯಿಫಾಯಿಡ (ವಿಷಮಜ್ವರ), ಹೊಟ್ಟೆಶೂಲಿ, ಕಾಲರಾ, ಪ್ಲೇಗ, ಇನ್‌ಫ್ಲುಎಂಝಾ, ಸಂಧಿವಾತ, ಬಾಣಂತಿ ರೋಗ, (ಹಡೆದಾಗ ಇಲ್ಲವೆ ಹಿಂದಿನಿಂದ ಸಂಭವಿಸುವ ಬಾಣಂತ ರೋಗಗಳ ಮೇಲೆ), ಚಿಕ್ಕ ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ, ಮಲಬದ್ಧತೆ, ಮೈನೋವು, ಥಂಡಿಯಿಂದ ಗಂಟಲು ನೋವು ಮತ್ತು ಗಾಯಕ ಜನರಿಗೆ ಧ್ವನಿ ಬೀಳೋಣ, ರಕ್ತಹೋರಡಣೆ, ಅತಿಸಾರ, ತಂಬಾಕು ತಲೆಗೇರೋಣ, ವಾಂತಿಯಾಗೋಣ, ಯಾವದೇ ಕಾರಣದಿಂದ ಉಂಟಾದ ದುರ್ಬಲತೆ, ಲಿವ್ಹರ (ಸ್ಪ್ಲೀನ), ಹೊಟ್ಟೆಯೊಳಗಿನ ಗಂಟು, ಪುಪ್ಪುಸದ ಹಾಗೂ ಹೊಟ್ಟೆಯೊಳಗಿನ ಯಾವದೇ ವಿಕಾರ, ಧಾತುಕ್ಷೀಣತೆ, ಸ್ವಪ್ನಾವಸ್ಥೆ, ಎಲ್ಲ ತರದ ಕಡಿತ, ಸ್ತ್ರೀಯರ ಮುಟ್ಟುದೋಷ ಮೊದಲಾದ ಎಲ್ಲಾ ರೋಗಗಳ ಮೇಲೆ ಅನುಭವಸಿದ್ಧ, ಖಾತ್ರಿದಾಯಕ ಸಿದ್ಧೌಷಧವಿರುತ್ತದೆ. ಈ ಔಷಧವು ತಕೊಳ್ಳಲಿಕ್ಕೆ ಸ್ವಾದಿಷ್ಟ, ರುಚಿಕರವಿರುವದು. ಸಣ್ಣ ಹುಡುಗರಂತೂ ಬಹಳ ಪ್ರೀತಿಯಿಂದ ತಕೊಳ್ಳುವರು. ಇದು ತಕೊಳ್ಳುವದರಿಂದ ರಕ್ತಶುದ್ಧಿ ಹಾಗೂ ರಕ್ತವೃದ್ಧಿಯಾಗಿ ವೀರ್ಯವೃದ್ಧಿಯಾಗುವದು. ಮತ್ತು ಯಾವದೇ ಕಾರಣದಿಂದ ಉಂಟಾದ ಉದಾಸೀನತೆಯನ್ನು ಕಳೆದು ಮನಸ್ಸು ಆನಂದಿತ ಮಾಡುವದು ಹಾಗೂ ಜಗತ್ತು ರಮಣೀಯವಾಗಿ ತೋರುವದು.

ಈ ಔಷಧದಿಂದ ೨೦-೨೨ ವರ್ಷಗಳಿಂದ ದಮ್ಮಿನ ರೋಗದಿಂದ ನರಳುತ್ತಿರುವ ರೋಗಿಗಳು ಪೂರ್ಣ ಗುಣ ಪಡೆದಿರುವರು. ಈಗ ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗಗಳ ಮೇಲೆ ಔಷಧವಿಲ್ಲೆಂದು ನಿರಾಶೆಪಡುವ ಕಾರಣವಿಲ್ಲದಂತಾಗಿದೆ. ಈ ಔಷಧ ಉಪಯೋಗ ಮಾಡಿಕೊಂಡು ರೋಗಮುಕ್ತರಾಗಿರಿ. ಈ ತನಕ ಸಾವಿರಾರು ಜನರು ರೋಗಮುಕ್ತರಾಗಿರುವರು. ನಿರಾಶೆಯಿಂದ ದುಃಖಪಡುತ್ತಿರುವ ಜನರಿಗೆ ಇದರ ಮಾಹಿತಿಯಾಗಿ ಗುಣವಡೆಯಬೇಕೆಂದು ಈ ಔಷಧದ ಜಾಹೀರಾತು ಪ್ರಕಟಿಸಲ್ಪಟ್ಟಿರುವದು. ಇದನ್ನು ಹಳ್ಳಿಗರು ಹಾಗೂ ಶಹರವಾಸಿಯರು ಖರೀದಿ ತಮ್ಮ ಸಂಗ್ರಹದಲ್ಲಿ ಇಟ್ಟುಕೊಳ್ಳತಕ್ಕದ್ದು.

ನೆಗಡಿ, ಜ್ವರ, ಕೆಮ್ಮು ಶುರು ಆದ ಹೊತ್ತಿನಲ್ಲಿ ಜನರು ನಿಷ್ಕಾಳಜಿಯಿಂದ ೨ ೩ ದಿವಸ ಹಾಗೇ ಮೈಮೇಲೆ ತೆಗೆಯುತ್ತಾರೆ. ಹೀಗೆ ಮಾಡುವದರಿಂದ ಮುಂದೆ ಜ್ವರವು ದೋಷಿಯಾಗುವ ಸಂಭವವಿರುತ್ತದೆ. ಆ ಕಾರಣ ಶುರುವಾದ ಕೂಡಲೆ ಈ ಕಷಾಯ ತೆಗೆದುಕೊಳ್ಳುವದರಿಂದ ಮುಂದಿನ ತ್ರಾಸು ತಪ್ಪುವದು. ಇದೇ ರೀತಿ ಬಾಣಂತಿ ಮತ್ತು ಕೂಸು ಇವರಿಗೆ ಮೊದಲನೇ ದಿವದಿಂದ ಶುರು ಮಾಡಿ ಮೂರು ತಿಂಗಳು ತನಕ ಚಾಲು ಇಡುವದು, ಹುಡುಗರಿಗೆ ಬೇರೆ ಔಷಧವು ಕೊಡುವ ಗರಜಿಲ್ಲ. ಚಿಕ್ಕಮಕ್ಕಳ ತರತರೆ ನಿಲ್ಲುತ್ತದೆ. ಗರ್ಭಿಣಿ ಹೆಂಗಸರಿಗೆ ಸಹ ಇದನ್ನು ಕೊಡಲು ಅಡ್ಡಿಯಿಲ್ಲ. ಅನುಪಾನ ಪತ್ರಿಕೆಯು ಬಾಟ್ಲಿಯ ಸಂಗಡ ಸಿಗುತ್ತದೆ.

ಲಕ್ಷ್ಮೀಬಾಯಿ ಕೊಲ್ಹಾಪೂರಕರ- ಸಂಸ್ಥಾನ ಬಡೋದಾ, ಅಸ್ಥಾನ್ ಗಾಯಕಿ- ತಮ್ಮ "ಕಲ್ಪತರು ಕಷಾಯ" ಈ ಔಷಧವನ್ನು ನನ್ನ ಧ್ವನಿ ಬಿದ್ದ ಹೊತ್ತಿನಲ್ಲಿ ತಕೊಳ್ಳುವ ಪ್ರಸಂಗ ಬಂತು ತಿಳಿಸಲಿಕ್ಕೆ ಬಹಳ ಆನಂದವಾಗುತ್ತದಲ್ಲಾ! ಔಷಧ ತಕೊಂಡ ಅರ್ಧ ತಾಸಿನಲ್ಲಿಯೇ ಮೊದಲಿನಂತೆಯೇ ಸುಸ್ವರದಿಂದ ಹಾಡಲಿಕ್ಕೆ ಹಿಂದು ಧ್ವನಿ ಬಿದ್ದ ಕಲ್ಪನೆಯೇ ಉಳಿಯಲಿಲ್ಲ.
ತಾ. ೧—೫—೧೯೩೨

ಶ್ರೀಯುತ ಪು. ಹ. ಕಿರಪೇಕರ, ಪಾಡೇಕರ ಬಿಲ್ಡಿಂಗ- ಮುಂಬಯಿ. ತಾ. ೧-೪-೩೪. ತಮ್ಮ "ಕಲ್ಪತರು ಕಷಾಯ"ವು ದಮ್ಮಿನ ಮೇಲೆ ಹಳ್ಳೇ ಲಾಗು ಬಿದ್ದಿತು. ನನ್ನ ಅತ್ತಿಗೆಗೆ ದಮ್ಮು ಇರುವದು. ಅದಕ್ಕಾಗಿ ಅವರಿಗೆ ೨ ಕಷಾಯದ ಬಾಟ್ಲಿಗಳನ್ನು ರೇಲ್ವೆ ಪಾರ್ಸಲಿನಿಂದ ಕಳಿಸಿಕೊಡಿರಿ. ಕಿಮ್ಮತ್ತು:— ೧ ರತ್ತಲ ಬಾಟ್ಲಿಗೆ ರೂ. ೨||; ಅರ್ಧ ರತ್ತಲ ಬಾಟ್ಲಿಗೆ ರೂ. ೧||; ¼ ರತ್ತಲ ಬಾಟ್ಲಿಗೆ ೧೪ ಆಣೆ. ನಟರತ್ನ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪೂರಕರ ಮೊದಲಾದ ಅನೇಕ ಮಹನೀಯರು ಉಪಯೋಗಿಸಿ ಪ್ರಶಂಸಾ ಪತ್ರಗಳನ್ನು ಕೊಟ್ಟಿರುತ್ತಾರೆ.

ಔಷಧೀ ದಂತಮಂಜನ.

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು, ಕೀವು, ರಕ್ತ, ಹಲ್ಲು-ವಸಡುಗಳ ರೋಗ ಮುಂತಾದವುಗಳು ವಾಸಿಯಾಗುತ್ತವೆ ಈ ಔಷಧವನ್ನು ದಿನಾ ಒಂದಾವರ್ತಿ ಯಾ ಎರಡಾವರ್ತಿ ಹಲ್ಲುಗಳಿಗೆ ತಿಕ್ಕುವದಲ್ಲದೆ ನಾಲಿಗೆಗೂ ತಿಕ್ಕಬೇಕು. ಬೆಲೆ ಆಣೆ ೫.

ಇದಲ್ಲದೆ, ಥಂಡಿ ಜ್ವರ, (ಮಲೇರಿಯಾ) ದ ಮೇಲೆ ಮಿಶ್ರಣ, ಶೌಚಕ್ಕೆ ಸವಿ ಔಷಧ, ಜಂತುನಾಶಕ ಕಷಾಯ, ಕೊಲೆರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೆಶಲ್ ಔಷಧಗಳು ನಮ್ಮಲ್ಲಿ ಸಿಗುತ್ತವೆ.

ಶ್ರೀರಾಮ ಆಯುರ್ವೇದಿಕ ಫಾರ್ಮಸಿ, ಗಡಹಿಂಗ್ಲಜ. (ಕೊಲ್ಹಾಪುರ ಸಂ.)

ಇದನ್ನು ಪಾಂಡುರಂಗ ಕೃಷ್ಣ ಶಿಶ್ನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270.

Monday, 24th June, 1935.

ವರ್ಷ ೧೭

ಸಂಚಿಕೆ ೫೪

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಟೈಪಿನ (೧೫ ಎಮ್ ಅಗಲ) ಐದು ಸಾಲುಗಳವರೆಗೆ ರೂ. 1-0-0
ಆ ನಂತರ ಪ್ರತಿಸಾಲಿಗೆ 0-2-0
ಹತ್ತಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವವು.

—(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೨೪ ನೇ ಜೂನ ಸನ್ ೧೯೩೫ ನೇ ಇಸವಿ.)—

ರೂ. ೧೦ ಯಾ ಹೆಚ್ಚಿನ ಬೆಲೆಯ

ಕನ್ನಡ ಸೇವಿಂಗ್ಸ ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ಸಹ ವಟಾಯಿಸಬರುತ್ತವೆ.

ಅಂತು ವರಸಾಲ ಶೇಕಡಾ ೪-೬-೦ ರಂತೆ ಬಡ್ಡಿ ಸಿಗುತ್ತದೆ!

ಆರಾರು ತಿಂಗಳಿಗೆ ವರಸಾಲ ಶೇಕಡಾ ೩ ರಂತೆ ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ವರಸಾಲ ಶೇಕಡಾ ೧॥ ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು!

ನಡುವೆ ಬಡ್ಡಿ ತೆಗೆದುಕೊಳ್ಳದೆ ಇಟ್ಟರೆ, ರೂ. ೧೦೦ರ ರಕಮು ಮುದ್ದತ್ತಿನ ಕೊನೆಗೆ ರೂ. ೧೨೨-೧೩-೬ ಆಗುತ್ತದೆ.

ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.

ಕೆನರಾ ಬ್ಯಾಂಕ ಲಿಮಿಟೆಡ್.

(ಸ್ಥಾಪನೆ ೧೯೦೬)

ಬ್ಯಾಡಗಿಯವರ ಬಿಲ್ಡಿಂಗ, ಹುಬ್ಬಳ್ಳಿ.

ಈ ಕೆಳಗಿನ ನಗರಗಳಲ್ಲೂ ನಮ್ಮ ಶಾಖೆಗಳಿವೆ:—

ಮುಂಬಯಿ-ಕೋಟೆ, ಮುಂಬಯಿ-ಮಾಂಡವಿ, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲಮ್, ಆಲಪ್ಪೆ, ಬೆಂಗಳೂರು, ದಾವಣಗೇರಿ, ಚಿಕ್ಕಮಗಳೂರು, ಮಂಗಳೂರು-ಬಂದರ, ಮಂಗಳೂರು ಶಹರ, ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ, ಕುಂದಾಪುರ ಮತ್ತು ಗಂಗೊಳ್ಳಿ.

ಸಂಕಲ್ಪಿತ ಮೂಲಧನ	೬,೦೦,೦೦೦
ತೆತ್ತ ಮೂಲಧನ	೩,೨೧,೦೦೦
ಕ್ಷೇಮನಿಧಿ	೪,೫೦,೦೦೦
ಠೇವುಗಳು	೫೮,೬೭,೦೦೦
ವ್ಯವಹಾರದ ಹಣ	೭೩,೪೯,೦೦೦

The Canara Industrial & Banking Syndicate, Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Head Office.— Mukund Nivas, UDIPI.

Branches— Udipi, Bangalore City, Mangalore, Payyanur, Cannanore, Brahmavar, Honnavar, Karwar, Hubli, Belgaum, Sirsi, Kumta, Hungarkatta, Coondapur, Ankola, Kanhangad & Bellary.

Paid-up Capital Rs. 2,12,200.
Working Capital exceeds Rs. 17 Lacs.
Last 5 Year's Progress proves growing popularity.

Year	Rolling Capital.
1930.	2,42,095.
1931.	4,95,266.
1932.	9,25,958.
1933.	13,90,789.
1934.	15,93,238.

Fixed Deposits for one year and two years are accepted now at 5% and 5½% respectively.

All sorts of Banking Business transacted.

For further particulars apply to:—

Kumta, 1—5—1935

G. Sanjiva Nayak, **Agent** at KUMTA.

ಬನ್ನಿರಿ! ‖ ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ‖ ನೋಡಿರಿ!!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್, ಕುಮಟಾ. (ಉ. ಕನ್ನಡ)

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರಿಪ್ಪಲರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

" ದಿ ಮೊಡರ್ನ ಹಿಂದೂ ಹೊಟೆಲ್ " ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ:- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾಲಿಕ.

ಅಲ್ಲಲ್ಲಿ ಇಷ್ಟಿಷ್ಟು!

ಬ್ರಿಟಿಶ ಪ್ರಧಾನ ಮಂಡಳದ ಪುನರ್ಘಟನೆಯಾಗಿದೆ. ಭಾರತ ಮಂತ್ರಿಗಳಾಗಿದ್ದ ಸರ್ ಸೆಮ್ಯುಯೆಲ್ ಹೋರರವರು ಪರರಾಷ್ಟ್ರೀಯ ಪ್ರಧಾನರಾದರು. ಮಿ. ಬಾಲ್ಡ್ವಿನ್‌ರವರು ಮುಖ್ಯ ಪ್ರಧಾನರಾದರು. ಝೆಟ್ಲೆಂಡ ದೊರೆಗಳು ಭಾರತ ಮಂತ್ರಿಗಳಾಗಿದ್ದಾರೆ. ಇವರು ಹಿಂದುಸ್ಥಾನದಲ್ಲೆಲ್ಲ ಅಡ್ಡಾಡಿದ್ದಾರೆ. ಕರ್ಝನ್ ದೊರೆಗಳ ಅಂಗರಕ್ಷಕರಾಗಿದ್ದರು. ೧೯೧೭-೨೨ರ ತನಕ ಬಂಗಾಲದ ಗವ್ಹರ್ನರರಿದ್ದರು. ಆ ಕಾಲದಲ್ಲಿ ರೋನಾಲ್ಡಶೇ ದೊರೆಗಳೆಂದು ಇವರಿಗೆ ಹೇಳುತ್ತಿದ್ದರು. ಇವರು ಝೆಟ್ಲೆಂಡ ದೊರೆಗಳ ಮಗಂದಿರು. ಝೆಟ್ಲೆಂಡ ದೊರೆಗಳು ತೀರಿದ ತರುವಾಯ ಇವರು ಮನೆತನದ ಹೆಸರಿನಿಂದ ಲೋಕಪ್ರಸಿದ್ಧರಾಗಿದ್ದಾರೆ. ಇವರು ಭಾರತ ಮಂತ್ರಿಗಳಾದ್ದರಿಂದ ಹಿಂದುಸ್ಥಾನ ಸರಕಾರಕ್ಕೂ, ಬ್ರಿಟಿಶ ಸರಕಾರಕ್ಕೂ ಮೇಳಗೂಡುವದಂತೆ, ಹೋರರವರಿಗೆ ತಮ್ಮ ಹಟವೇ ಪ್ರಾಧಾನ್ಯವಾಗಿತ್ತಾಗಿಯೂ, ಹಿಂದುಸ್ಥಾನ ಸರಕಾರದ ಅಭಿಪ್ರಾಯಕ್ಕ ಅವರು ಮನ್ನಣೆ ಕೊಡುತ್ತಿದ್ದಿಲ್ಲವಾಗಿಯೂ, ಆದರಿಂದ ಝೆಟ್ಲೆಂಡ ದೊರೆಗಳ ಕಾರಕೀರ್ದಿಯಲ್ಲಿ ಹಿಂದುಸ್ಥಾನದ ರಾಜ್ಯದಾದಳತೆ ಸುಕರವಾಗುವವಾಗಿಯೂ ಸಿವ್ಹಾ ದೊಳಗಿನ ಸುದ್ದಿಗಾರರ ಅಂಬೋಣ. ಝೆಟ್ಲೆಂಡ ದೊರೆಗಳು ಕೆಲ ಮಟ್ಟಿಗೆ ವಿಶಾಲ ದೃಷ್ಟಿಯವರೇನೋ ಆಹುದು. ಆದರೆ ಅದರಿಂದ ಸ್ವಾತಂತ್ರ್ಯಕಾಂಕ್ಷಿ ಹಿಂದೀಯರಿಗೆ ಪ್ರಯೋಜನ ದೊರೆಕೀತೆಂದ ಹೇಳಬರದು. ಝೆಟ್ಲೆಂಡ ದೊರೆಗಳಿಗೆ ಹಿಂದೀಯರ ಕಲ್ಯಾಣವಾಗಬೇಕೆಂಬ ಸದಿಚ್ಛೆಯಿದೆ. ಮಾನ್ಯರಿಗೆ ಆವರು ಮನ್ನಿಸುವವರು. ಬಂಗಾಲದ ಗವ್ಹರ್ನರರಾದ ಬಳಿಕ ತಾ. ೨೦-೧-೧೯೧೮ರಂದು ಸೇರಿದ ದುಃಖ ಪ್ರದರ್ಶಕ ಸಭೆಯಲ್ಲಿ ನಡೆದ ಒಂದು ಸಂಗತಿ ಪ್ರಕಟವಾಗಿದೆ ಅದು ಮನನೀಯವಿದೆ. ಅದರೊಳಗೆ ಬ್ರಿಟಿಶರ ಸ್ವಾಭಿಮಾನವೂ, ಝೆಟ್ಲೆಂಡ ದೊರೆಗಳ ಔದಾರ್ಯವೂ ಸ್ಫುಟವಾಗಿವೆ

***

ಸರ್ ಗುರುದಾಸ ಬ್ಯಾನರ್ಜಿಯವರ ನಿಧನದ ಕುರಿತು ದುಃಖಪ್ರದರ್ಶಕ ಸಭೆಯ ಅಧ್ಯಕ್ಷಸ್ಥಾನವನ್ನು ರೋನಾಲ್ಡಶೇ ದೊರೆಗಳು ವಹಿಸಿಕೊಂಡ ಬಗ್ಗೆ ಶ್ರೀ| ಬಾ| ಬಾಬು ಮೋತಿಲಾಲ ಘೋಷರವರು ಆಭಾರ ಮನ್ನಿಸುವಾಗ ನುಡಿದದ್ದೇನಂದರೆ:— "ನಾಮದಾರ ಗವ್ಹರ್ನರರು ಇದೇ ಪ್ರಕಾರ ನಮ್ಮ ಸಾಮಾಜಿಕ ಸಮಾರಂಭಗಳಲ್ಲಿ ಸೇರುತ್ತ ಹೋದರೆ ನಾವು ಪಾರತಂತ್ರ್ಯದಲ್ಲಿದ್ದೇವೆಂಬ ಅರಿವು ಉಳಿಯದು. ನಾಮದಾರರು ಪ್ರಜಾಪ್ರೀತಿಯನ್ನು ಸಂಪಾದಿಸುವದಕ್ಕಾಗಿನಮ್ಮ ಮಾದರಿಯ ಮೇಲೆ ಉಡಿಗೆ-ತೊಡಿಗೆಗಳನ್ನು ಧರಿಸಬಹುದು. ಈಗ ವಿಪರೀತ ಸೆಕೆ, ಬೆವರುತ್ತದೆ. ಇಂಥ ಪ್ರಸಕ್ತಿಯಲ್ಲಿ ನಾಮದಾರರು ಧೋತರವನ್ನುಟ್ಟು ಸುಖಹೊಂದಬಹುದು. ಪೋಷಾಕನ್ನು ಬದಲಿಸಿದ್ದನ್ನು ನೋಡಿ ಜನಸಾಮಾನ್ಯರಿಗೆ ನಮ್ಮವರೇ ಪ್ರಾಂತಾಧಿಪರೆಂಬ ಗ್ರಹಿಕೆಯಾಗುವದು. ಹಿಂದೆ ಕಾರ್ಮೈಕೇಲ ದೊರೆಗಳಿದ್ದರು. ಎಪ್ರಿಲ ತಿಂಗಳು. ನಾನವರಿಗೆ ಭೆಟ್ಟಿಯಾಗಹೋಗಿದ್ದೆ ಸೆಕೆಯಿಂದ ಅವರು ಬೆವರುತ್ತಿದ್ದರು ನಾನು ಧೋತರ ಉಟ್ಟಿದ್ದೆ, ಸಟೀರ ತೊಟ್ಟಿದ್ದೆ. "ನಾಮದಾರರು ಧೋತರವನ್ನು ಯಾಕೆ ಉಡಬಾರದು?" ಎಂದು ನಾನು ಕೇಳಿದೆ. "ಯಾಕೆಂದರೆ ನಾವು ಮೂರ್ಖ ಜನಾಂಗದವರು. (stupid people)." ಎಂಬದಾಗಿ ಗವ್ಹರ್ನರರು ಉತ್ತರ ಕೊಟ್ಟರು. "ಛೀ! ಮೂರ್ಖರೆಂದು ಧೋತರವನ್ನು ಉಡುವದಿಲ್ಲೆಂಬ ಸಂಗತಿ ತಪ್ಪು. ನಿಮಗೆ ರಾಷ್ಟ್ರೀಯ ಉಡುಪಿನ ಬಗ್ಗೆ ವಿಶೇಷ ಅಭಿಮಾನವಿದೆ. ಅದಕ್ಕಾಗಿ ನೀವು ಬೇಕಾದ ಕಷ್ಟಗಳನ್ನನುಭವಿಸಲು ಸಿದ್ಧರಿದ್ದೀರಿ" ಎಂಬದಾಗಿ ನಾನು ಹೇಳಿದೆ. "ಹಿಂದೀಯರಾಗಿ ಹುಟ್ಟಿ ಬೆಳೆದವರು ರಾಷ್ಟ್ರೀಯ ಉಡುಪನ್ನು ತ್ಯಜಿಸಿ ಪರದೇಶಗಳ ಉಡುಪನ್ನು ಧರಿಸುತ್ತಾರೆ." ಈ ಪ್ರಕಾರ ಬಾಬು ಮೋತಿಲಾಲರವರು ನುಡಿದು ಸಭಾಪತಿಗಳಾದ ಬಗ್ಗೆ ಗವ್ಹರ್ನರರಿಗೆ ಧನ್ಯವಾದಗಳನ್ನರ್ಪಿಸಿದರು ರೋನಾಲ್ಡಶೇ ದೊರೆಗಳು ಆಭಾರಮನ್ನಣೆಗೆ ಉತ್ತರ ಕೊಟ್ಟದ್ದೇನಂದರೆ— "ಯಾವದೊಂದು ದೇಶದಲ್ಲಿ ಜನ್ಮಹೊಂದುವದು ಯಾರ ಕೈಯಲ್ಲಿಯೂ ಇಲ್ಲ. ಯಾವದೇ ದೇಶದಲ್ಲಿ ಹುಟ್ಟಿದವನಿರಲಿ, ಆತನಿಗೊಪ್ಪಿಸಿದ ರಾಜ್ಯದಾಡಳಿತೆಯನ್ನು ಆತನು ಆ ದೇಶದ ಪ್ರಜೆಯಂತೆ ಎಣಿಸಿ ನಡಿಸುವನು. ಬಾಬು ಮೋತಿಲಾಲ ಘೋಷರು ಹೇಳಿದ ನುಡಿಗಳಲ್ಲಿ ತಥ್ಯಾಂಶವಿದೆ. ಆದರೆ ಯಾವದೇ ಪೋಷಾಕು ಇದ್ದಾಗ್ಯೂ ನಮ್ಮ ಅಂತಃಕರಣದಲ್ಲಿ ಭೇದವಾಗದು." ಎಂಬದಾಗಿ ಝೆಟ್ಲೆಂಡ ದೊರೆಗಳು ನುಡಿದರು. ಭಾರತ ಮಂತ್ರಿಗಳು ಈ ಅಭಿಪ್ರಾಯದಿಂದಲೇ ಜನಸಾಮಾನ್ಯರ ಸ್ಥಿತಿಯನ್ನು ಗ್ರಹಿಸಿ ಹಿಂದೀ ಪ್ರಜೆಗಳ ಕಷ್ಟ-ನಷ್ಟಗಳನ್ನು ತಿಳಕೊಂಡು ಅವನ್ನು ಪರಿಹರಿಸಲೆತ್ನಿಸಿದರೆ ಅತ್ಯಗತ್ಯವೂ ಕ್ಷೇಮವಿದೆ. ಆದರೆ ಅಷ್ಟು ಸ್ವಾತಂತ್ರ್ಯ ಝೆಟ್ಲೆಂಡ ದೊರೆಗಳಿಗೆ ಇರುವದೇ? ಮುಖ್ಯ ರಾಜ್ಯ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ವೃದ್ಧಿಕಾಲದ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುಗ್ರವು).
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾಪಕ್ಷವಾತ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಕಾಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಲಿವರ್ ರೋಗಗಳಿಗೆ ಅತ್ಯುತ್ತಮ)
ಕೃಷ್ಣಾರಿಷ್ಟ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ರಕ್ತವಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ)
ಸುವರ್ಣಾಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ)
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-
ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ಬಹಳ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಗಣನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಇವು ಶಾಸ್ತ್ರಸಿದ್ಧವಾಗಿ ಅನುಭವಪ್ರಧಾನವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ದರ್ಶನೀಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವರು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸ್ಥೆ ವಹಿಸಿದಾಗಲೇ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ. ೧೦-೧೧-೧೯೩೩.

ವಿದ್ವಾನ್ ಕೆ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಅಖಿಲ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟು, ದ. ಕನ್ನಡ.

ಘೋರಣದಲ್ಲಿ ತಿದ್ದುಪಾಟ ಮಾಡಲು ಯಾರಿಗೂ ಸಾಮರ್ಥ್ಯವಿಲ್ಲದಾಗ, ಹೋರರು ಹೋಗಿ ಧೊಟ್ಲೆಂಡರವರು ಬಂದರೆ ಹಿಂದುಸ್ಥಾನಕ್ಕೆ ಲಾಭವೇನಿದೆ? ಹಿಂದುಸ್ಥಾನ ಸರಕಾರಕ್ಕೂ, ಭಾರತ ಮಂತ್ರಿಗಳಿಗೂ ಐಕ್ಯಮತ್ಯವಾದ್ದರಿಂದ ಹಿಂದೀ ಪ್ರಜೆಗಳ ಸ್ಥಿತಿಯಲ್ಲಿ ಭೇದವಾಗದು. ಯಾಕಂದರೆ ಹಿಂದುಸ್ಥಾನ ಸರಕಾರವು ಹಿಂದೀ ಪ್ರಜಾಪ್ರತಿನಿಧಿ ಸರಕಾರವಲ್ಲ!

***

ಭೂಕಂಪೋತ್ತರ ಕಥೆ ಹೇಳಿ ತೀರದು. ಮಹಾತ್ಮರು ಭೂಕಂಪ ಪ್ರದೇಶದಲ್ಲಿ ಹೋಗಬಯಸಿ ಹಿಂದುಸ್ಥಾನ ಸರಕಾರದ ಅಪ್ಪಣೆ ಕೇಳಿದರು. ಸಹಕಾರಿಗಳೊಡನೆ ಅಲ್ಲಿ ಹೋಗಿ ಭೂಕಂಪ ಪೀಡಿತರಿಗೆ ನೆರವಾಗುತ್ತೇವಾಗಿಯೂ ಸರಕಾರಕ್ಕೆ ಆಶ್ವಾಸನವನ್ನಿತ್ತರು. ಹಿಂದುಸ್ಥಾನ ಸರಕಾರವು ಮಹಾತ್ಮರಂಥ ಜಗದ್ವಂದ್ಯ ಲೋಕೋಪಕಾರಿ ವಿಭೂತಿಗಳಿಗೆ ಸಹ ಅತ್ತ ಕಡೆ ಸುಳಿಯಗೊಡಲೊಪ್ಪಲಿಲ್ಲ. ಈ ಕುರಿತು ರಾಷ್ಟ್ರೀಯ ಸಭೆಯವರು ಸರಕಾರದ ಹುಕುಮನ್ನು ಉಲ್ಲಂಘಿಸುವ ಕಾರ್ಯಕ್ರಮ ಕೈಕೊಳ್ಳುತ್ತಾರೇನೆಂಬದರ ಕುರಿತು ಸಿಮ್ಲಾದೊಳಗೆ ಭೀತಿಯಾಗಿತ್ತು. ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ಆ ಭೀತಿಯನ್ನು ಪರಿಹರಿಸಿದ್ದಾರೆ. "ಮೊಟ್ಟಮೊದಲು ನಿರಾಶ್ರಿತರಿಗೆ, ನಿರ್ಗತಿಕರಿಗೆ ಆಶ್ರಯಕೊಟ್ಟು ರಕ್ಷಿಸುವದು; ಆ ಮೇಲೆ ಈ ಹುಕುಮಿನ ವಿಚಾರ ಮಾಡುವದು." ಎಂಬದಾಗಿ ಬಾಬು ರಾಜೇಂದ್ರ ಪ್ರಸಾದರವರು ಪ್ರಕಟಿಸಿದ್ದಾರೆ. ರಾಜೇಂದ್ರ ಪ್ರಸಾದರವರು ಮಹಾರಾಷ್ಟ್ರ ಸಂಚಾರ ಕಾರ್ಯಕ್ರಮವನ್ನು ರದ್ದುಪಡಿಸಿ ಮಹಾತ್ಮರಿಗೆ ಭೆಟ್ಟಿಯಾಗಿ ಮುಂಬಯಿ ಮಾರ್ಗವಾಗಿ ಮಂಗಳವಾರ ಕರಾಚಿಗೆ ತಲ್ಪಿದರು. ರಾಜೇಂದ್ರ ಪ್ರಸಾದರವರು ಅಲ್ಲಿ ಉಳಿದು ನಿರ್ಗತಿಕರ ವ್ಯವಸ್ಥೆ ಮಾಡುವ ಪಂಜಾಬ–ಸಿಂಧ ಪ್ರಾಂತಗಳೊಳಗಿನ ಪ್ರಮುಖರಿಗೆ ಕರಿಸಿಕೊಂಡು ಅಲ್ಲಲ್ಲಿ ಹೋದ ಭೂಕಂಪತ್ರಸ್ತರ ಸಂಕಟ ನಿವಾರಣೆ ಮಾಡಲು ಉಪಾಯ ಮಾಡುವರು. ಸರಕಾರದೊಡನೆ ಯಾವದೇ ಪ್ರಕಾರ ಮೇಲಾಟ ಮಾಡಗೊಡಗರು. ಸ್ವತಂತ್ರವಾಗಿ ದೇಶಬಾಂಧವರ ಪೀಡನೆಯನ್ನು ಪರಿಹರಿಸಯೋಜಿಸುವರು. ದ್ರವ್ಯನಿಧಿಯನ್ನು ಸಂಗ್ರಹಿಸುವದಕ್ಕಾಗಿ ಹಿಂದೀ ಪ್ರಮುಖರ ಮಂಡಳವನ್ನೊಂದನ್ನು ನೇಮಿಸುವರು. ಮುಂಬಯಿಯೊಳಗೆ ಶ್ರೀ| ಭುಲಾಭಾಯಿ ದೇಸಾಯಿಯವರ ಅಧ್ಯಕ್ಷತೆಯಲ್ಲಿ ದ್ರವ್ಯಸಂಗ್ರಹ ಮಂಡಳದ ಏರ್ಪಾಟಾಗಿದೆ.

***

ಕ್ವೆಟ್ಟಾ ಪ್ರದೇಶದಲ್ಲಿ ಇನ್ನೂ ಸೈನ್ಯಾಧಿಕಾರಿಗಳ ನಿರಂಕುಶ ಕಾರಭಾರ ನಡೆದಿದೆ. ಪಟ್ಟಣದಲ್ಲಿ ಒಟ್ಟರೂ ಸೇರಬಾರದೆಂದು ಜಾಹೀರನಾಮೆ ಹೊರಟಿದೆ. ಹುಕುಮನ್ನು ಉಲ್ಲಂಘಿಸಿ ಪಟ್ಟಣ ಪ್ರವೇಶ ಮಾಡುವವರಿಗೆ ೨ ವರ್ಷ ಕಾರಾಗೃಹವಾಸದ ಶಿಕ್ಷೆ. ಸರಕಾರದವರು ಸದ್ಯಕ್ಕೆ ಸೈನ್ಯಾಧಿಕಾರಿಗಳ ಅಧಿಕಾರ ತಪ್ಪಿಸಿ ದಿವಾಣಿ ಅಧಿಕಾರಿಗಳಿಗೆ ಕಾರಭಾರ ಒಪ್ಪಿಸಲಿಕ್ಕಿದ್ದರು. ಒಪ್ಪಿಸುವ ಮುಂಚೆ ರಾಜಶಾಸನಗಳನ್ನು ಹೊರಡಿಸಿ ಆ ಪ್ರದೇಶದಲ್ಲಿ ಪ್ರವೇಶಿಸಲು ಸಾಮಾನ್ಯರಿಗೆ ಬರದಂತೆ ಏರ್ಪಾಟಾಗುವದಿತ್ತು, ಆದರೆ ಇನ್ನೂ ರಾಜಶಾಸನ ತಯಾರಾಗಿಲ್ಲ. ಆದರಿಂದ ವಿಳಂಬವಾಗಿರುವದಂತೆ ಪಟ್ಟಣದಲ್ಲಿ ಪ್ರವೇಶ ದೊರಕದ ಬಳಿಕ ಸೈನ್ಯಾಧಿಕಾರವಿದ್ದರೇನು? ದಿವಾಣಿ ಅಧಿಕಾರವಿದ್ದರೇನು? ಈಗಿನಚೀಫ ಕಮಿಶನರರಿಗೆ ಆರೋಗ್ಯರಕ್ಷಣೆಗಾಗಿ ಅವಶ್ಯವುಳ್ಳ ಅಧಿಕಾರಗಳನ್ನು ಕೊಟ್ಟು ನಾಡದು ಬುಧವಾರದಿಂದ ಸೈನ್ಯಾಧಿಕಾರಿಗಳ ಅಂಕೆಯನು ಬಲುಚಿಸ್ಥಾನದೊಳಗಿಂದ ತಪ್ಪಿಸಬೇಕೆಂದು ಹಿಂದುಸ್ಥಾನ ಸರಕಾರದ ನಿರ್ಣಯವಾಗಿರುವದಂತೆ. ಭೂಕಂಪ ಪ್ರದೇಶದೊಳಗೆ ಜನರು ಪ್ರವೇಶಿಸದಂತೆ ಹಾಗೂ ಭೂಕಂಪ ಪ್ರದೇಶದಲ್ಲಿ ನೆಲದಡಿ ಹುಗಿದು ಬಿದ್ದ ಆಸ್ತಿ ಲೂಟಿಗಾರರು ಒಯ್ಯದಂತೆ ಯುಕ್ತಕಂಡ ಉಪಾಯ ಕೈಕೊಳ್ಳಲು ಅಧಿಕಾರಾರ್ಪಣವಾಗುವದಂತೆ.

***

ಬಾಬು ರಾಜೇಂದ್ರ ಪ್ರಸಾದರವರು ಮಧ್ಯವರ್ತಿ ನಿರಾಶ್ರಿತ ಸಹಾಯಕ ಮಂಡಳವೊಂದನ್ನು ಘಟಿಸಿದ್ದಾರೆ. ಶೇಟ್ ಜಮನಾಲಾಲ ಬಜಾಜ, ಸರದಾರ ವಲ್ಲಭಭಾಯಿ ಪಟೇಲ, ಪಂಡಿತ ಮದನಮೋಹನ ಮಾಲವೀಯ, ಸರ್ ಪ್ರಫುಲ್ಲಚಂದ್ರ ರಾಯ್, ಶ್ರೀ| ಭುಲಾಭಾಯಿ ದೇಸಾಯಿ, ಘನಶ್ಯಾಮದಾಸ ಬಿರ್ಲಾ, ಮಥುರಾದಾಸ ವಿಸನಜಿ, ಡಾ| ಖಾನಸಾಹೇಬ, ಸೌ| ಪೆರಿನ ಬೆನ್ ಕೆಪ್ಟನ್, ಶ್ರೀ| ಜಮಶೇದ ಮೇಥಾ, ಶೇಖ ಅಬ್ದುಲ್ ಮಜೀದ, ದಿ| ಬ| ಮುರಲೀಧರ, ಶೇಟ ಚಿನಿರಾಯ ಜುಮಾನಿ, ಡಾ| ಗೋಪಿಚಂದ, ಲಾಲಾ ಧುನಿಚಂದ ಅಂಬಾಲಾ, ಲಾಲಾ ಧುನಿಚಂದ ಲಾಹೋರ, ಸರದಾರ ಶಾರ್ದೂಲಸಿಂಗ ಕವೀಶ್ವರ, ಮೌಲಾನಾ ಅಬ್ದುಲ್ ಕಾದಿರ ಕಸೂರಿ, ಲಾಲಾ

[೧೦ನೇ ಪಾನಿನ ಮೇಲೆ ಮುಂದರಿಸಿದೆ.]

THE AGRICULTURAL & INDUSTRIAL BANK, LIMITED, COONDAPOOR.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್, ಕುಂದಾಪುರ.

ಕಾಯಂ ಠೇವಣಾತಿಗಳು.

	3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ 3½ರಂತೆ,	
ಸೇವಿಂಗ್ಸ ಬೇಂಕ ಠೇವಣಾತಿಗೆ	6 ತಿಂಗಳಿಗೆ ... ... 4½ರಂತೆ,	ಪ್ರತಿ ಮೂರು ತಿಂಗಳಿಗೊಮ್ಮೆ
ಶೇಕಡಾ	12 ತಿಂಗಳಿಗೆ ... ... 5½ ,,	ಬಡ್ಡಿ
4% ರಂತೆ ಬಡ್ಡಿ.	24 ತಿಂಗಳಿಗೆ ... ... 6 ,,	ಕೊಡಲಾಗುವದು.
	3 ವರ್ಷ ಯಾ ಹೆಚ್ಚಿನ ಅವಧಿಗೆ ... 6½ರಂತೆ	

ಬಡ್ಡಿ ದರದಿಂದ ಅಂಗೀಕರಿಸಲ್ಪಡುತ್ತವೆ.

ಚಿನ್ನ ವ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಪಾತ್ರಿಯಾದ ಬೀಲುಗಳು, ದರ್ಶನಿ ಹುಂಡಿಗಳು, ಚೆಕ್ಕುಗಳು ವಸ್ತೈರೆ ವಟಾಯಿಸಲ್ಪಡುವವು.

ಕರೆಂಟ, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಂದಾಪುರ,
ತಾ. 21—1—1935.

K. Vaman Shenai &
G. Balakrishna S. Nayak.
Managing Directors.

ಹಬಸಿ ಪ್ರಕರಣ.

[೧ನೇ ಪುಟದಿಂದ ಮುಂದುವರಿಸಿದ್ದು]

ಗುಂಡುಗಳನ್ನೂ ತೋಫುಗಳನ್ನೂ ಪೂರೈಸುತ್ತಾರೆ. ಗ್ಯಾರಿಬಾಲ್ಡಿಯವರ ಕಾಲದ ಹೋರಾಟದ ಇಟಲಿಯ ಮನೋವೃತ್ತಿ ಸ್ಪಷ್ಟವಾಗುತ್ತದೆ. ಹಬಸಿ ಜನಾಂಗವನ್ನು ಸಾಧಾರಣವಾಗಿ ಪರಾಧೀನವನ್ನಾಗಿ ಮಾಡುವಲ್ಲಿ ಯಾವದೇ ಪ್ರತಿಬಂಧಗಳಿದ್ದಾಗ್ಯೂ ಅವುಗಳನ್ನು ಇದಿರಿಸಲು ಇಟಲಿಯು ಸಿದ್ಧವಿರುವದು. ಬ್ರಿಟಿಶರೇ ಆಗಲಿ, ಫ್ರೆಂಚರೇ ಆಗಲಿ, ರಾಷ್ಟ್ರಸಂಘವೇ ಆಗಲಿ ಇದಿರು ಬಂದರೆ ಅವುಗಳ ಪರಿವೆ ಹಿಡಿಯದೆ ಮುಸೋಲಿನಿಯವರು ಮುಂದಾಗುವರೆಂದೂ ಅವರ ನಿಯೋಗಿಗಳ ವಿಚಾರ ಸರಣಿ ಅಭಿಪ್ರಾಯವಾಗಿರುವದಂತೆ.

ಇಟಲಿಗೂ, ಜರ್ಮನಿಗೂ ಇರುವ ದ್ವೇಷ ಒಮ್ಮೆಲೇ ಗೆಳೆತನವಾಗಲಾರಂಭಿಸಿದೆ. ಇಟಾಲಿಯ ವಿರೋಧವಾಗಿ ಲೇಖ ಬರೆಯಬಾರದೆಂದು ಪತ್ರಕರ್ತರಿಗೆ ಜರ್ಮನ್ ಸರಕಾರವು ಗುಪ್ತ ಸೂಚನೆಗಳನ್ನು ಕೊಡುತ್ತಿರುವದಾಗಿ 'ಮಂಚೆಸ್ಟರ ಗಾರ್ಡಿಯನ್' ಪತ್ರಿಕೆಯ ಬರ್ಲಿನ ಪ್ರತಿನಿಧಿಯ ಅಂಬೋಣ. 'ಸ್ಟುಟರ ಡೆರ್' ಎಂಬ ಜರ್ಮನ್ ವಿನೋದ ಪತ್ರಿಕೆಯು ಹಬಸಿ ರಾಜಕಾರಣದಲ್ಲಿ ಮುಸೋಲಿನಿಯವರು ನಡಿಸುವ ಅತ್ಯಾಚಾರಗಳನ್ನು ವರ್ಣಿಸಿ ಜೂನ ೭ನೇ ತಾರೀಖಿನ ಪತ್ರಿಕೆಯಲ್ಲಿ ಒಂದು ಚಿತ್ರ ಪ್ರಕಟಿಸಿತ್ತು. ಅದಕ್ಕಾಗಿ ಜರ್ಮನ್ ಸರಕಾರವು ಆ ಮುದ್ರಣಾಲಯವನ್ನು ಜಪ್ತ ಮಾಡಿತು. ಈಗ ಇಟಾಲಿಯವರೂ, ಜರ್ಮನರೂ ಒಟ್ಟಾಗಿ ಪೋಲಂಡ, ಬಲ್ಗೇರಿಯಾ, ಹಂಗೇರಿ, ಗ್ರೀಸ ದೇಶಗಳೊಳಗೆ ತಮ್ಮ ನಾಮ ಮಾಡಿಕೊಂಡು ಫ್ರಾನ್ಸ-ರಶಿಯಾ ದೇಶಗಳಿಗೆ ಇದಿರಾಗುವ ಕಾರಸ್ಥಾನ ಹೂಡಿದ್ದಾರೆ. ಹಿಟ್ಲರರ ನಂಬಿಗಸ್ತ ಸೇನಾಪತಿಗಳಾದ ಗೋರಿಂಗರವರು ವಿವಾಹೋತ್ತರ ವಿಲಾಸದ ನವ ಮಾಡಿ ಈ ದೇಶಗಳೊಳಗೆ ಸಂಚರಿಸುತ್ತಿದ್ದಾರೆ. ಗೋರಿಂಗರವರು ವಿಚಾರಿ ಪ್ರಾಣಿಗಳಲ್ಲ, ವಿವಾಹೋತ್ತರ ವಿಲಾಸದ ಸಮಯವೂ ಇದಲ್ಲ. ಗುಪ್ತ ಕಾರಸ್ಥಾನ ಬಯಲಾಗಬಾರದೆಂದು ಸದ್ಯಕ್ಕೆ ಮದುವೆಯಾದ ನೆವ ಮಾಡಿ ವಿಲಾಸದ ವಾರ್ತೆ ಪ್ರಕಟಗೊಂಡಿದೆ. ಸಾಮಾನ್ಯವಾಗಿ ಹೊಸ ಯುದ್ಧದಲ್ಲಿ ಯಾರ‍್ಯಾರು ಶತ್ರು-ಮಿತ್ರರಾಗುವರೆಂಬ ಸಂಗತಿ ಈಗ ನಿಶ್ಚಯವಾಗಲಾರಂಭಿಸಿದೆ. ಇದೊಂದು ಯುದ್ಧಸ್ಥಿತಿಯೊಳಗಿನ ಅವಸ್ಥಾಂತರ! ಮುಸೋಲಿನಿಯವರು 'ಲಿಟರರಿ ಡೈಜೆಸ್ಟ' ಪತ್ರಿಕೆಯ ಮಿ| ಎಡ್ವರ್ಡ್ ಪ್ರೈಸ ಬೆಲ್ ರವರ ಕಡೆ ನುಡಿದಂತೆ, "ಯುರೋಪ್ಯ ಶಾಂತತೆಯನ್ನು ಕಾಪಾಡುವದು ಕಠಿಣವಾದುದು (To keep the European place is difficult) ನಾವು ಸಮಸ್ತರೂ ಅಂತಃಕರಣಪೂರ್ವಕವಾಗಿ ಶಾಂತತೆಯನ್ನು ಬಯಸುವವರಲ್ಲ." ಮುಸೋಲಿನಿಯಂಥವರು ಈ ಪ್ರಕಾರ ನುಡಿಯುತ್ತಾರೆಂದ ಬಳಿಕ ಯುದ್ಧ ದೂರವಿರುವದೆಂದು ನಾನು ಹೇಳಲೇನು? ಯುದ್ಧ ಮಾಡುವದೇನೋ ದಡ್ಡತನ. ಆದರೆ ಕಾಲಚಕ್ರ ತಿರುಗಿದರೆ ಸುಜ್ಞರು ದಡ್ಡರಾಗುತ್ತಾರೆ. ಯುದ್ಧ ಮಾಡುವದು ದಡ್ಡತನವೆಂದು, ಯುದ್ಧದಿಂದ ನಷ್ಟವಾಗುತ್ತದೆಂದು, ಯುದ್ಧದಿಂದ ಕ್ಷೇಮವಿಲ್ಲವೆಂದು ಯುದ್ಧವಾದ ಬಳಿಕ ಹೊಳೆಯುತ್ತದೆ. ಅಮೇರಿಕೆಯ ಡಾ| ಎಂಜೆಲ ಬ್ರೈಟ್‌ರವರು ಇತಿಹಾಸಜ್ಞರು. ಬೇರೆ ಬೇರೆ ರಾಷ್ಟ್ರಗಳಲ್ಲಿ ಸಂಚಾರ ಮಾಡಿದವರು. ಯುದ್ಧ ಮಾಡುವದು ದಡ್ಡತನವೆಂದು ತಿಳಿದೂ ತಿಳಿದೂ ಸ್ವಾರ್ಥಾಂಧರಾಗಿ ರಾಷ್ಟ್ರಗಳು ಯುದ್ಧದಲ್ಲಿ ಸೇರುತ್ತವೆಂದು ಬರೆಯುತ್ತಾರೆ. ಅಮೇರಿಕೆಯವರಿಗೂ ಜಪಾನದೇಶಕ್ಕೂ ಸ್ಪಷ್ಟರವಾಗತೊಡಗಿದೆ. ಮತ್ಸರಭಾವವನ್ನು ಬಿಟ್ಟು ವಿಚಾರ ಮಾಡಿದ್ದಲ್ಲಿ ಜಪಾನದ ಗೆಳೆತನದಿಂದ ಅಮೇರಿಕೆಯವರಿಗೆ ಲಾಭವಿದೆಯೆಂಬದನ್ನು ಸಿದ್ಧ ಮಾಡಿಕೊಡಬಹುದು. ಆದರೆ ಅತ್ತ ಕಿವಿಗೊಡುವವರ‍್ಯಾರು? ಬ್ರಿಟಿಶರಿಗೂ, ಜಪಾನಿಯರಿಗೂ ಮನಸ್ತಾಪವಾಗಲಾರಂಭಿಸಿದೆ. ಹೊಂಗಕೊಂಗದಲ್ಲಿ ವೈಮಾನಿಕರನ್ನೂ, ಸೈನ್ಯ ರಾಜ್ಯವನ್ನೂ ಭದ್ರಪಡಿಸಿಕೊಂಡು ಚೀನ ದೇಶದ ಸ್ನೇಹ ಸಂಪಾದನ ಮಾಡಿ ಅಲ್ಲಿ ವೈಮಾನಿಕ ರಾಜ್ಯ ಸ್ಥಾಪಿಸಬೇಕಾಗಿ ಬ್ರಿಟಿಶರು ಸಂಕಲ್ಪ ಮಾಡಿರುತ್ತಾರಂತೆ. ಚೀನ ದೇಶದ ಯಾಜಮಾನ್ಯವನ್ನು ಪಡೆಯುವದಕ್ಕಾಗಿ ಜಪಾನ ದೇಶವು ನಡಿಸುವ ಬಲಾತ್ಕಾರವನ್ನು ನಾನು ಈ ಹಿಂದೆಯೇ ಹೇಳಿದ್ದೇನೆ. ಪುನಃ ಈ ವಿಷಯವನ್ನು ವಿಸ್ತಾರದಿಂದ ಹೇಳಬೇಕೆಂಬ ಅಭಿಲಾಷೆಯಿದೆ. ಅದನ್ನು ಮುಂದೆ ಅನುಕೂಲತೆಯಂತೆ ವಿವರಿಸುವೆನು. ಎಂಡ್ರ್ಯೂಸರವರು ನುಡಿದಂತೆ, ಚೀನದೊಳಗಿನ ಪ್ರಕರಣವಾದರೂ ಚಿಂತೆಗೆ ಕಾರಣವಾದದ್ದು. ಆದರೆ ಚೀನ ದೇಶದ ದೌರ್ಬಲ್ಯದ ಮೂಲಕ ಅಲ್ಲಿ ವಿರೋಧ ಸಂಘಟನೆಯಾಗಲಿಲ್ಲ; ಇಷ್ಟೆ.

ಬ್ರಿಟಿಶ ರಾಯಭಾರಿಗಳಾದ ಮಿ| ಈಡನ್‌ರವರ ಪ್ಯಾರಿಸ, ರೋಮ ಯಾತ್ರೆಯ ಫಲವನ್ನು ಕೇಳಿಕೊಂಡನಕ ಹಬಸಿ ಪ್ರಕರಣದ ಮುಂದಿನ ವಿಚಾರ ಹೇಳುವ ಬಗೆ ಹೇಗೆ?

ಮತ್ತಿಷ್ಟು !

ಮುಂಬಯಿಯ 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಗೆ ಭೂಕಂಪ ಬಾಧೆಯಾಗಿ ೨೦ ಸಾವಿರ ರೂಪಾಯಿ ನಷ್ಟ. 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯ ಜೂನ ತಾ ೭ ಮತ್ತು ೯ನೇ ಸಂಚಿಕೆಗಳಲ್ಲಿ ಪ್ರಕಟಗೊಂಡ ಎರಡು ಭೂಕಂಪ ವಿಷಯಕ ಲೇಖಗಳಿಂದ ಹಿಂದುಸ್ಥಾನದಲ್ಲಿ ಕಾಯಿದೆಯಂತೆ ಪ್ರಸ್ಥಾಪಿತವಾದ ಬ್ರಿಟಿಶ ರಾಜ್ಯಕ್ಕೆ ಅಪಮಾನವಾದ್ದರಿಂದ ಮುದ್ರಣ ಕಾನೂನಿನನ್ವಯ ಪ್ರಕಾಶಕರ-ಮುದ್ರಕರು ಇಟ್ಟ ರೂ. ೨೦ ಸಾವಿರ ಹೊಣೆಯನ್ನು ಸರಕಾರವು ಜಪ್ತ ಮಾಡಿದೆ. ಪತ್ರಿಕೆ ಹೊರಡಿಸಿ ೫ ವರ್ಷಗಳಾದವು; ೬ನೇ ವರ್ಷ ನಡೆಯುತ್ತಿದೆ. ಮೂರಾವರ್ತಿ ಜಾಮೀನ ಜಪ್ತಾಯಿತು. ಮುಂಬಯಿ ದಂಗೆಯ ಲೇಖ ಬರೆದ ಬಗ್ಗೆ ೧೯೩೩ನೇ ಇಸ್ವಿ ಜುಲೈ ತಿಂಗಳಲ್ಲಿ ರೂ. ೬೦೦೦ ಗಳ ಜಪ್ತಿ. ಅದೇ ಇಸ್ವಿಯ ಅಕ್ಟೋಬರ ತಿಂಗಳಲ್ಲಿ ಮಹಾತ್ಮರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಬರೆದ ಲೇಖ ಪ್ರಕಟಿಸಿದ ಬಗ್ಗೆ ೧೦ ಸಾವಿರ ರೂಪಾಯಿಗಳ ಜಪ್ತಿ. ೧೯೩೪ನೇ ಇಸ್ವಿ ಸಪ್ಟಂಬರ ತಿಂಗಳಲ್ಲಿ ಮಹಾತ್ಮರಿಗೆ ಆದೇ ಕಳೆದ ಆಗಸ್ಟ ತಿಂಗಳಲ್ಲಿ ಆದ ಶಿಕ್ಷೆಯ ಕುರಿತು ಬರೆದ ಲೇಖದ ಬಗ್ಗೆ ೧೦ ಸಾವಿರ ರೂ ಗಳ ಜಪ್ತಿ. ಈಗ ೨೦ ಸಾವಿರ ರೂ ಗಳ ಜಪ್ತಿ. ಅಂತೂ ೫ ವರ್ಷಗಳಲ್ಲಿ ೪೬ ಸಾವಿರ ರೂ ಗಳನ್ನು ನಾಲ್ಕು ಕಂತಿನಿಂದ 'ಫ್ರೀ ಪ್ರೆಸ್' ಪತ್ರಿಕೆಯು ಮುದ್ರಣ ಕಾಯಿದೆಗೆ ತುಂಬಿದೆ. ಪತ್ರಕರ್ತರು ಪತ್ರಿಕೆಯನ್ನು ಹೊಸ ಜಾಮೀನು ತುಂಬಿ ಹೊರಡಿಸುವ ನಿರ್ಧಾರ ಮಾಡಿದ್ದಾರೆ.

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪಾಪ್ಯುಲರ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪೋಲಿಸಿದಾರರಿಗೆ ವಿಶೇಷ ರಿಯಾಯತಿ! ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ.
ಜೀವವಿಮೆಯ ಬಗ್ಗೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!
ವಿ. ಸೂ. 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪೋಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!
ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾಗುವದು.
ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು!

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—
ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.
ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು - ಮೆಸರ್ಸ ಜೀವನ ಏಜನ್ಸಿ, ಕಾರವಾರ.

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪೆನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.
ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.
ಸವಿಸ್ತರ ಮಾಹಿತಿ ಕೆಳಗಿನ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು.

Kumta Agents -
D. K. Nayak, Bros
D. S. Pai.
K. N Nayak.
Honavar Agent
R. V. Prabhu Esq.

K. Padmanabha Rao & Sons,
BELGAUM
Chief Agents for
Karnatak Districts & S. M. States

ಅಲ್ಲಲ್ಲಿ ಇಷ್ಟಿಷ್ಟು!

(೧೧ನೇ ಪಾನಿನಿಂದ ಮುಂದರಿಸಿದ್ದು)

ನೀರಿಗೆ ಕೈಹಾಕುವ ಪ್ರಸಂಗ ಬಂತು ಎಂಥ ವಿಧಿಘಟನೆ! ೩ ನಿಮಿಷಗಳಲ್ಲಿ ಇಷ್ಟು ಸ್ಥಿತ್ಯಂತರ!! ಪ್ರಪಂಚವು ಅನಿತ್ಯವಾದುದು ಎಂಬದಾಗಿ ದಾಸರು ಹಾಡುವದು ನಿಜವಾದುದಲ್ಲವೇ?

* *

ಬಂಗಾಲದೊಳಗಿನ ದಬ್ಬಾಳಿಕೆಯ ನಮೂನೆ ಹೇಳಲಾಸಲ್ಲ. ಜೈಲಿನಲ್ಲಿದ್ದ ಮಗಂದಿರೊಡನೆ ಮಾತಾಡಲು ತಾಯಿ-ತಂದೆಗಳಿಗೆ ಬದ್ವಾನದ ಪೋಲೀಸ ಸುಪರಿಂಟೆಂಡೆಂಟರು ಕೆಲ ಅವಧಿ ಕೊಟ್ಟಿದ್ದರು. ಅದರಂತೆ ತಾಯಿ-ತಂದೆಗಳು ಇಬ್ಬ ಮಗಂದಿರೊಡನೆ ಜೈಲ ಅಧಿಕಾರಿಗಳ ಸಮಕ್ಷ ಮಾತನಾಡಿದರು. ಮಾತನಾಡುವ ಸಮಯವು ಥಕ್ಕನೆ ಮೀರಿಹೋಯಿತು! ಮಾತು ನಿಲ್ಲಲಿಲ್ಲ, ಅದಿನ್ನೂ ನಡೆದಿತ್ತು. ಅದಕ್ಕಾಗಿ ತಾಯಿ-ತಂದೆಗಳಿಗೆ ಸೆರೆಹಿಡಿದು ಕಾರಾಗೃಹಕ್ಕಟ್ಟಿಬಿಟ್ಟಿದ್ದಾರ. ಇದೊಂದು ಚಮತ್ಕಾರವೇ ಸರಿ.

* *

ಕೆಲ ಕೈದಿಗಳಿಗೆ ಸರಕಾರವು ಬಿಡುಗಡೆ ಮಾಡತೊಡಗಿದೆ. ದೇಶದ ಶಾಂತತೆಗೆ ಭಂಗ ಬರದಂತೆ ಅವರಿಗೆ ಬಿಡುಗಡೆಯಾಗುವದು. ಈ ಬಿಡುಗಡೆಯ ಅರ್ಥ ಬೇರೆ. ತಾಯಿ-ತಂದೆಗಳು ತಮ್ಮ ಹುಡುಗರ ನಡಾವಳಿಗೆ ಹೊಣೆಯಾಗಬೇಕು. ಕೆಲ ರಕಮನ್ನು ಸರಕಾರದ ಕಡೆ ಠೇವಾಗಿಡಬೇಕು ಮತ್ತು ೬ ಶರ್ತುಗಳನ್ನು ಪಾಲಿಸಬೇಕು. ಈ ಶರ್ತುಗಳನ್ನು ಉಲ್ಲಂಘಿಸಿದರೆ ಹಣ ಜಪ್ತಾಗುತ್ತದೆ. ಹೊಣೆ ರಕಮು ತೆರಬೇಕು. ಆ ಶರ್ತುಗಳ್ಯಾವವೆಂದರೆ— (೧) ಆ ಹುಡುಗನು ತಂದೆಯ ಬಳಿ ಉಳಿಯಬೇಕು, ನಿರ್ದಿಷ್ಟ ಪ್ರದೇಶಗಳಲ್ಲಿ ಉಳಿಯಬೇಕು (೨) ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಅಪ್ಪಣೆ ಪಡೆದನಕ ನಿರ್ದಿಷ್ಟ ಪ್ರದೇಶವನ್ನು ಬಿಟ್ಟು ಹೋಗಲಾಗದು. (೩) ಆತನು ಕ್ರಾಂತಿಕಾರಕ ಪಕ್ಷದವರ ಗೊಡವೆಗೆ ಹೋಗಲಾಗದು. (೪) ರಾಜದ್ರೋಹಿ ಸಭೆಯ ಕಡೆ ಸುಳಿಯಲಾಗದು. ಬೇಹಾಯಿದಶೀರ ಹೇತು ಇದ್ದ ಮನುಷ್ಯನ ಸಹವಾಸಕ್ಕೆ ಹೋಗಬಾರದು. (೫) ಪೋಲೀಸ ಸುಪರಿಂಟೆಂಡೆಂಟರು ಹೇಳಿದ ಮನುಷ್ಯರ ಕಡೆ ಯಾವದೇ ಪ್ರಕಾರದ ಸಂಬಂಧವನ್ನಿಡಕೂಡದು (೬) ಕ್ರಾಂತಿಕಾರಕ ಉದ್ದೇಶದಿಂದ ಯಾರಾದರೂ ಆತನ ಕಡ ... ಆತನು ಈ ಸಂಗತಿಯನ್ನು ಕೂಡಲೆ ಪೋಲೀಸ ಸುಪರಿಂಟೆಂಡೆಂಟರಿಗೆ ಇಲ್ಲವೆ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಗೆ ತಿಳಿಸಬೇಕು. ಈ ಶರ್ತುಗಳಿಗೊಪ್ಪಿ ಕೆಲ ಜನರು ತಮ್ಮ ಹುಡುಗರಿಗೆ ಸೆರೆಮನೆಯೊಳಗಿಂದ 'ಬಿಡುಗಡೆ' ಮಾಡಿಕೊಂಡು ಬಂದರಂತೆ. ವರಿಷ್ಠ ಶಾಯುದೆ ಕೌನ್ಸಿಲಿನ ರಾಷ್ಟ್ರೀಯ ಪಕ್ಷದ ಸಭಾಸದರು ನೇಮಿಸಿದ ಬಂಗಾಲ ರಾಜಬಂದಿಗಳ ಅವಸ್ಥೆ ಚೌಕಶಿ ಮಂಡಳದ ರಿಪೋರ್ಟು ಸದ್ಯಕ್ಕೆ ತಯಾರಾಗಲಿಕ್ಕಿದೆ. ಅದು ಏಕತರ್ಫಿಯವೆಂದೂ ಪ್ರಕಟಗೊಂಡೊಡನೆ ಸರಕಾರವು ಅದನ್ನು ಜಪ್ತ ಮಾಡುವದಾಗಿಯೂ ಲೋಕವಾರ್ತೆ. ಚೌಕಶಿ ಮಂಡಳದ ಅಧ್ಯಕ್ಷರಾದ ಬಾಬು ಮೋಹನಲಾಲ ಸಕ್ಸೇನಾರವರು ಮಂಡಳಕ್ಕೆ ನೆರವಾಗಲು ಸರಕಾರಕ್ಕೆ ವಿನಂತಿ ಮಾಡಿಕೊಂಡಿರುತ್ತಾರೆ. ಸರಕಾರವು ಆ ವಿನಂತಿಯನ್ನು ಮನ್ನಿಸದೆ ರಿಪೋರ್ಟನ್ನು ಏಕತರ್ಫಿಯದೆಂದು ಹೇಳುವದು ಸಭ್ಯತನವಲ್ಲ.

* *

ಬೆಳ್ಳಿಯ ದರ ಈಗ ತಟಸ್ಥ ನಿಂತಿದೆ. ಏರಿಕೆ ತಡೆದಿದೆ, ಅದರೆ ಲಕ್ಷಣ ಏರಿಕೆಯದೇ. ಅಮೇರಿಕೆಯವರು ಬೆಳ್ಳಿಯನ್ನು ಖರೇದಿ ಮಾಡುವ ಕಾರ್ಯಕ್ರಮಕ್ಕೆ ತಡೆಹಾಕಿಲ್ಲ. ಆದಂದ ಬೆಳ್ಳಿಯದರ ಇಂದಲ್ಲ, ನಾಳೆ ಏರಲೇ ಬೇಕು. ಹೀಗೆ ಏರಿದರೆ ಸ್ವಲ್ಪ ಕಾಲದಲ್ಲಿಯೇ ರೂಪಾಯಿಯೊಳಗಿನ ಬೆಳ್ಳಿ ರೂಪಾಯಿಗೆ ಮಿಕ್ಕೀತು. ಆದರಿಂದ ಮುಂದೇನು ಮಾಡಬೇಕೆಂಬದರ ಕುರಿತು ಹಿಂದುಸ್ಥಾನ ಸರಕಾರದ ಅರ್ಥಸಚಿವರಾದ ಸರ್ ಜೇಮ್ಸ ಗ್ರಿಗ್‌ರವರೂ, ರಿಝರ್ವ ಬೇಂಕಿನ ಗವ್ಹರ್ನರರಾದ ಸರ್ ಒಸ್ಬರ್ನ ಸ್ಮಿಥ್‌ರವರೂ ಆಲೋಚಿಸತೊಡಗಿದ್ದಾರಂತೆ. ಬಹುಶಃ ವಾಗಿ ಈ ಆಲೋಚನೆಯಿಂದ ಹಿಂದೀಯರ ಅವಸ್ಥೆ ಕೆಟ್ಟುಹೋಗುವದೆಂದು "ಫ್ರೀ ಪ್ರೆಸ್" ಪತ್ರಿಕೆಯ ವಾರ್ತೆ. ರೂಪಾಯಿಗೂ ಪವನು-ನೋಟಿಗೂ ಗಂಟುಬಿದ್ದಿದೆ. ಈಗಿನ ವಿನಿಮಯದಂತೆ ರೂಪಾಯಿಗೆ ೧೮ ಪೆನ್ಸ ಪವನಿಗೆ ಸರಾಸರಿ ರೂ. ೧೩. ಬೆಳ್ಳಿಯ ಬೆಲೆ ಏರಿ ರೂಪಾಯಿಗೆ ಮಿಕ್ಕಿದರೆ ವಿನಿಮಯದ ದರವಾರನ್ನು ಏರಿಸಿ ರೂಪಾಯಿಗೆ ೨ ಶಿಲಿಂಗು ದರ ಇಡುವಂತೆ ಆಲೋಚನೆ ನಡೆದಿರುವದಂತೆ. ಹೀಗೆ ದರ ಇಟ್ಟಲ್ಲಿ ಪವನು-ನೋಟಿಗೆ ಹತ್ತೇ ರೂಪಾಯಿ ಸಾಮಾನ್ಯವಾಗಿ ೧೫ ರೂಪಾಯಿಗಳಿಗೆ ಮಾರಾಟವಾಗುವ ಹಿಂದುಸ್ಥಾನದ ಸರಕು ಈಗ ೧೩ ರೂಪಾಯಿಗಳಿಗೆ ಮಾರಾಟವಾಗುವದು. ೧೫ ರೂಪಾಯಿ ಬೀಳುವ ವಿದೇಶಿ ಸರಕಿಗೆ ಈಗ ೧೩ ರೂಪಾಯಿ ಬೀಳುತ್ತದೆ. ಮುಂದೆ ೧೦ ರೂಪಾಯಿ ಬೀಳುವವು. ಹಿಂದುಸ್ಥಾನದ ಸರಕು ಲೋಕದಲ್ಲಿ ತುಟ್ಟಿವಾದ್ದರಿಂದ ಬೇಸಾಯಗಾರರು ಕೊರತಲ್ಲಿ ನಷ್ಟ ಹೊಂದುವರು. ವಿದೇಶಿ ಸರಕುಗಳು ಅಗ್ಗವಾದ್ದರಿಂದ ವಿದೇಶಿ ಕಾರಖಾನೆಯವರು ಸಾವಕಾರರಾಗುವರು. ದೇಶದೊಳಗಿನ ಸ್ಥಿತಿಯಲ್ಲಿ ಹೆಚ್ಚು-ಕಡಿಮೆಯಿಲ್ಲ. ಇಲ್ಲಿ ತೆರುವಷ್ಟೇ ಹಣ ತೆರಬೇಕು. ಸಾಲದ ರಕಮು, ಬಡ್ಡಿಯ ದರ, ಕೂಲಿಯ ದರ, ಸಾಮಾನು ದರ ಇವೆಲ್ಲವೂ ರೂಪಾಯಿ ನಾಣ್ಯದಿಂದ ಕೊಡ-ಕೊಳ್ಳುವ ವ್ಯವಸ್ಥೆ ಈಗಿನಂತೆ ಮುಂದೆಯೂ ಉಳಿಯುವದರಿಂದ ಅವುಗಳಲ್ಲಿ ಹೆಚ್ಚು-ಕಡಿಮೆಯಾಗದು. ರೂಪಾಯಿಯ ದರ ಲೋಕದಲ್ಲಿ ಬೆಳೆದದ್ದರಿಂದ ಹಣವಿದ್ದವರು ಕೂತಲ್ಲಿ ಇನ್ನಿಷ್ಟು ಐಶ್ವರ್ಯವಂತರಾಗುವರು. ಹಣದ ಪ್ರತಿಫಲ ಪಡೆಯುವವರಿಗೆ ಲಾಭವಾಗುವದು. ಸರಕಿನ ಬೆಲೆ ಇಳಿಯುವದರಿಂದ ಸರಕುಳ್ಳವರು ದರಿದ್ರರಾಗುವರು. ಈಗಲೇ ದಾರಿದ್ರ್ಯ ತುಂಬಿದೆ, ಮತ್ತೂ ಜನರು ದರಿದ್ರರಾಗುವರು. ಹಿಂದುಸ್ಥಾನವು ಪ್ರಾಧಾನ್ಯವಾಗಿ ಬೇಸಾಯದೇಶ. ಬೇಸಾಯದ ಸಾಮಗ್ರಿಗಳೇ ಹೆಚ್ಚಿತ್ತಾಗಿ ರಫ್ತಾಗುತ್ತಿವೆ. ರೂಪಾಯಿಗೂ, ಪವನು-ನೋಟಿಗೂ ಗಂಡ-ಹೆಂಡರಂತೆ ಸರಕಾರವು ನೆರಗು ಕಟ್ಟಿ ಹಾಕಿಟ್ಟದ್ದರಿಂದ ಇದಿಂಗಲೇ ಸರ್ವ ಪರಿಯಿಂದ ನಷ್ಟ ... ರೂಪಾಯಿಯ ದರ ಏರಿಸಿ ಪವನು-ನೋಟಿಗೆ ೧೦ ರೂಪ್ಯಾ ಮಾಡಿದರೆ ಅನರ್ಥವೇ ಸರಿ. ಇದಿಂಗಲೇ ಎಚ್ಚರಾಗಬೇಕಾಗಿ ಪತ್ರಿಕೆಗಳ ಮುಂಜಾಗ್ರತೆ. ಸರ್ವಾಧಿಕಾರವು ಹಿಂದುಸ್ಥಾನ ಸರಕಾರದ ಕೈಯಲ್ಲಿರುವಾಗ ಎಚ್ಚರಾಗಿ ಈ ಜನರ ಮಾಡಿದ್ದೇನು? ಇನ್ನು ಮುಂದೆ ಮಾಡುವದೇನು? ರಾಜ್ಯಾಧಿಕಾರ ಪ್ರಜೆಗಳ ಸ್ವಾಧೀನವಾದನಕ ಈಗಿನ ರಾಜ್ಯಾಧಿಕಾರಿಗಳು 'ದೇಶಹಿತಕ್ಕಾಗಿ' ನಡಿಸುವ ಯಾವತ್ತೂ ವ್ಯಾಪಾರಗಳನ್ನು ಪ್ರಜೆಗಳು ಸಹಿಸಲೇ ಬೇಕು.

ಡಾ॥ ಮುಹಿಷಿಯವರ ಅನುಭವಸಿದ್ಧ ಔಷಧ.

ಡಾ| ಮುಹಿಷಿಯವರು ಕಳೆದ ಮೂವತ್ತು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ, ಪ್ರಯೋಗದಿಂದಲೂ ತಯಾರಿಸಿದ ಈ ಕೆಳಗಣ ಔಷಧಗಳು ಅತ್ಯಂತ ಪರಿಣಾಮಕಾರಿಗಳಾಗಿರುವವೆಂದು ಅವನ್ನು ಉಪಯೋಗಿಸಿದವರೆಲ್ಲರೂ ಅಭಿಪ್ರಾಯಪಡುತ್ತಿರುವರು. ಡಾ| ಮುಹಿಷಿಯವರು ಈ ಅಮೂಲ್ಯವಾದ ಔಷಧಗಳಿಂದಲೇ ಧಾರವಾಡ ಜಿಲ್ಹೆಯಲ್ಲಿ ಅತ್ಯಂತ ಲೋಕಪ್ರಿಯರಾಗಿರುವರು.

ಅಶೋಕಾ ಕಾರ್ಡಿಯಲ್:— ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ದಿವ್ಯೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವವಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು. ಕ್ರಯ ರೂ ೧-೮-೦.

ಅಶ್ವಗಂಧ ಟೋನಿಕ್:— ಮಜ್ಜಾ, ಮಾಂಸ, ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿದಾಯಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಪಚನ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಣಂತಿ ಸ್ತ್ರೀಯರಿಗೆ ಇದು ದಿವ್ಯೌಷಧ! ರೂ ೧-೨-೦,

ಎಗ್ಯು ಮಿಕ್ಚ್ಚರ, ಫೀವರ ಡ್ರೊಪ್ಸ, ಅಮೃತಸುಧಾ, ಕರ್ಪೂರದಾರ್ಕ, ಸಾಯರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ನಿತ್ಯಗಟ್ಟಲೆ ಇವುಗಳ ಉಪಯೋಗವಾಗುವುದು. ಇವು ಅಮೂಲ್ಯ ಔಷಧಗಳು!!

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ-ಮಲೇರಿಯಲ್ ಮಿಕ್ಚ್ಚರ, ಬಾಲಾಮೃತ, ಬ್ಲಡ್ ಮಿಕ್ಚ್ಚರ, ಕಾಲರೇಲು, ಡಿಸ್ಪೆಪ್ಸಿಯಾ ಪೌಡರ, ಸಾಯರಪ್ ಕ್ಯಾಲ್ಸಿಲೆಕ್ಟೋ ಫಾಸ್ಫೇಟ, ಪ್ರಮೇಹದಿಂದ, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಳಂತಿ ಮದ್ದು, ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು. ಕ್ಯಾಟಲಾಗು ಪುಕ್ಕಟೆಯಾಗಿ ಸಿಗುವದು.

ಡಾ| ಶಿವರಾಮ ಗಣೇಶ-ಶಾಸ್ತ್ರಿ, ಕುಮಟಾ ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು. ‖ ಹೆಡ್ ಆಫೀಸು— ಸ್ವಾಸ್ಥ್ಯನಿಲಯ, ಧಾರವಾಡ.

ಕಾನಡಾವೃತ್ತ.

ಯುವ ಸಂ। ಜ್ಯೇಷ್ಠ ಬ॥ ೯ಮಿ, ಸೋಮವಾರ.

ಭೂಭದ್ರ ಬೇಂಕು.

ಸಹಕಾರಿ ಇಲಾಖೆಯ ರಜಿಸ್ಟ್ರಾರರಾದ ಮಿ| ಪಂಜಾಬಿಯವರು ಭೂಭದ್ರ ಬೇಂಕುಗಳಿಂದ ಬೇಸಾಯಗಾರರ ಬಡತನ ನೀಗುವದಾಗಿ ಪ್ರತಿಪಾದಿಸುವದಿಲ್ಲ. ಈ ಸಂಗತಿಯನ್ನು ಸ್ಪಷ್ಟವಾಗಿ ಒಪ್ಪಿಕೊಂಡ ಬಗ್ಗೆ ನಾವು ಅವರಿಗೆ ಅಭಿನಂದಿಸುತ್ತೇವೆ. ಆದರೆ ಈ ಬೇಂಕುಗಳಿಂದ ಸಾಲಗಾರರಿಗೆ ಕೆಲ ಮಟ್ಟಿಗಾದರೂ ಪ್ರಯೋಜನ ಸಿಗುವದೇನೆಂಬದೊಂದು ಪ್ರಶ್ನೆ. ಭೂಭದ್ರ ಬೇಂಕುಗಳಿಗೆ ಸಾಲದ ರಕಮಿನ ಇಮ್ಮಡಿ ಭೂಮಿ ಭದ್ರತೆ ಕೊಡುವವನ್ನು ಸ್ಥಾವರಾಸ್ತಿಯುಳ್ಳವರು ತೀರ ಕಡಿಮೆ. ಸ್ಥಾವರಾಸ್ತಿ ಇದ್ದಾಗ್ಯೂ, ಸಾಲ ಕೊಂಡಾಗ್ಯೂ ಅದನ್ನು ತೀರಿಸುವದು ದುರಾಪಾಸ್ತ ಮಾತು. ಬೇಸಾಯಗಾರರಿಗೆ ಭೂಕಂದಾಯ ತೆತ್ತು ಸಂಸಾರ ನಡಿಸಿಕೊಂಡು ಉಳಿತಾಯವಾಗುವಂತೆ ಉಪಾಯಯೋಜನೆ ಇನ್ನೂ ಕಲ್ಪಿಸೋಣಾಗಲಿಲ್ಲ ಹೀಗಿರಲು, ಸಾಲ ಸಿಗುವ ಭೂಭದ್ರ ಬೇಂಕುಗಳನ್ನು ಸ್ಥಾಪಿಸುವದರಿಂದೇನು ಪ್ರಯೋಜನ? ಸಹಕಾರಿ ಸಂಘಗಳನ್ನು ಸ್ಥಾಪಿಸಿ ಪತ್ತಿಲ್ಲದವರಿಗೆ ಪತ್ತು ಕೊಟ್ಟು, ಪತ್ತಿದ್ದವರು ಪತ್ತುಗೇಡಾಗಿ ಪೇಚಾಡುವದನ್ನು ನಾವು ಕಣ್ಣಾರೆ ಕಾಣುತ್ತೇವೆ. ಸಾಲ ಸಿಗದೆ ತೊಂದರೆಯಾಗುವವರಿಗೆ, ಸಾವಕಾರರ ಸಾಲದಿಂದ ಬಿಡುಗಡೆಯಾಗದಿದ್ದವರಿಗೆ ಕಡಿಮೆ ಬಡ್ಡಿಯಿಂದ ಸಾಲ ಪೂರೈಸಿ ಲೋಕೋದ್ಧಾರ ಮಾಡುವ ಸಂಕಲ್ಪ ತಳೆದು, ಸಹಕಾರ ಚಳವಳಿ ಪುರಸ್ಕರಿಸೋಣಾಗಿತ್ತು. ಸಾಲಗಾರರ ಸಾಲ ನಿವಾರಣೆ ಮಾಡುವದೊತ್ತಟ್ಟಿಗಿರಲಿ; ಸಾಲವಿಲ್ಲದವರಿಗೆ ಸಾಲಕ್ಕೆ ಹೋಗದಿದ್ದವರಿಗೆ ಸಹಕಾರಿ ಸಂಘಗಳು ಹೊಣೆ ಪಡಕೊಂಡು, ಸಾಲದಲ್ಲಿ ಮುಳುಗಿಸಿ ಬಿಟ್ಟಿವೆ. ಈ ಪ್ರಕಾರ ಸಾಲದ ಮೊಬಲಗು ತಗ್ಗುವ ಬದಲಿಗೆ ಹೆಚ್ಚಿತು. ದುಷ್ಟ ಸಾವಕಾರರ ಕಷ್ಟವಾದರೂ ಬೇಕು; ಉಪಕಾರಿ ಸಹಕಾರಿ ಸಂಘಗಳ ಮುದ್ದು ಬೇಡ; ಎಂಬಂತೆ ಸ್ಥಿತಿಯಾಗಿದೆ. ಇಂಥ ಪರಿಸ್ಥಿತಿಯಲ್ಲಿ ಭೂಭದ್ರ ಬೇಂಕುಗಳಿಂದ ಪ್ರಯೋಜನ ದೊರೆದೀತೆಂದು ನಾವು ಹೇಳಲಾರೆವು. ತಕ್ಕಮಟ್ಟಿಗೆ ಶೇಕಡಾ ೫-೬ ರಷ್ಟು ಬಡ್ಡಿ ತೆರುವ ಶಕ್ತಿ ಬೇಸಾಯಗಾರರಿಗಿಲ್ಲ. ಭೂಮಿಯಲ್ಲಿ ಅಷ್ಟು ಉತ್ಪತ್ತಿಯೂ ಇಲ್ಲ. ೨೦ ವರ್ಷಗಳ ಅವಧಿ ಇರಲಿ, ೨೫ ವರ್ಷಗಳ ಅವಧಿ ಇರಲಿ, ಬೇಸಾಯಗಾರರಿಗೆ ಭೂಮಿಯ ಉತ್ಪನ್ನದಿಂದ ಸಾಲ ತೀರಿಸುವ ಸಾಮರ್ಥ್ಯವುಂಟಾಗದು. ಭೂಮಿಯ ಬೆಲೆ ಮಾಡುವ ಆಫೀಸರರು ಕೃಪಣರಾಗಿದ್ದರೆ, ೫ ಸಾವಿರ ರೂಪಾಯಿಗಳ ಸಾಲಕ್ಕೆ ೨೦ ಸಾವಿರ ರೂ.ಗಳ ಬೆಲೆಯ ಭೂಮಿ ಕೊಟ್ಟಾಗ್ಯೂ ೫ ಸಾವಿರ ರೂ.ಗಳ ಸಾಲ ಸಿಗುವದು ಕಠಿಣ! ಉಪಾಯದಿಂದ ಸಾಲ ಪಡಕೊಂಡಾಗ್ಯೂ ಅದು ನಿಶ್ಚಿತವಾಗಿ ಬಾಕಿಯಲ್ಲುಳಿದು, ಸಾವಕಾರರು ಭೂಮಿ ಮಾರಿಕೊಂಡು ಹೋಗುವದಕ್ಕಿಂತ ಪೂರ್ವದಲ್ಲಿಯೇ, ಭೂಭದ್ರ ಬೇಂಕುಗಳು ತಮಗೆ ಭದ್ರತೆಗೆ ಕೊಟ್ಟ ಭೂಮಿ ಮಾರಾಟ ಮಾಡಿ ಬೇಸಾಯಗಾರರಿಗೆ ಒಮ್ಮೆಲೇ ಮುಳುಗಿಸಿ ಬಿಡುವವು. ಬೇಂಕಿನ ವಸೂಲಿಯ ಕಠೋರತನವನ್ನು ಎಲ್ಲರೂ ಬಲ್ಲಂಥ ವಿಷಯ. ಹಣ ಕೊಡದ ಸಾಲಗಾರನ ಮೇಲೆ ಸಹಕಾರಿ ಸಂಘಗಳಿಗಾಗಲಿ, ಸರಕಾರಕ್ಕಾಗಲಿ ಏನೊಂದೂ ದಯೆ-ದಾಕ್ಷಿಣ್ಯವಿಲ್ಲ. ಆತನು ಪತಿತನೆಂದೇ ಎಲ್ಲರ ಅಭಿಪ್ರಾಯ. ೫ ೬ ವರ್ಷಗಳಲ್ಲಿಯೇ ಭೂಭದ್ರ ಬೇಂಕುಗಳು ಸಾಲಗಾರರ ಆಸ್ತಿಯನ್ನು ಸಶಾಸ್ತ್ರ ವಿಕ್ರಯಿಸಿಕೊಂಡು, ಈ ಸಾಲಗಾರರಂಥ ನಾಲಾಯಕ ಕುಳಗಳು ಲೋಕದಲ್ಲಿ ಇಲ್ಲವಾಗಿ ದೂರುವವು. ಸಾಲಗಾರರ ಪರಿಸ್ಥಿತಿಯನ್ನು ಲೆಕ್ಕಿಸದೆ, ಅದನ್ನು ಸುಧಾರಿಸಲು ಉಪಾಯ ಮಾಡದೆ ಭೂಭದ್ರ ಬೇಂಕುಗಳ ಸ್ಥಾಪನೆಯಾಯಿತೆಂದು ಒಬ್ಬರೂ ಹೇಳರು. ದಿ| ಬ| ಕಂಬಳಿಯವರು ನುಡಿದಂತೆ, ತನ್ನ ಕಾಲ ಮೇಲೆ ತಾನೇ ನಿಲ್ಲಬೇಕೆಂದು ವೇದಾಂತ ಹೇಳುವದು ಸುಲಭ ಮಾತು. ಎಲ್ಲರೂ ಕಾಲಿನ ಮೇಲೆಯೇ ನಿಲ್ಲುತ್ತಾರೆ! ಕೈಗಳ ಮೇಲೆ ನಿಲ್ಲುವ ಅಭ್ಯಾಸವನ್ನು ಇನ್ನೂ ಯಾರೂ ಮಾಡಿಲ್ಲ. ಬೇಂಕಿನವರು ಸಾಲಗಾರರ ಕಡೆಯಿಂದ ಹಣ ವಸೂಲ ಮಾಡತಕ್ಕದ್ದೆಂದು ದಿವಾಣ ಬಹಾದ್ದೂರ ದಿವಾಣರು ಹೇಳುವಾಗ ಹೇಗೆ ವಸೂಲ ಮಾಡಬೇಕೆಂದು ಸೂಚಿಸಲಿಲ್ಲ. ಸರಕಾರಕ್ಕೆ ದ್ರವ್ಯ ಸಹಾಯ ಮಾಡಲು ಹಣದ ಅಡಚಣೆಯೆಂದು ಹೇಳಿದ ಬಾಯಿಯಿಂದಲೇ, ಜನರ ಕಡೆಯಿಂದ ಹಣ ವಸೂಲ ಮಾಡಬೇಕೆಂದು ಹೇಳಿದ ಮಾತು ಕೇಳಿ ನಮಗೆ ಪರಮಾಶ್ಚರ್ಯವಾಗುತ್ತದೆ. ಸರಕಾರಕ್ಕೆ ವಿಪನ್ನಾವಸ್ಥೆ, ಜನರಿಗೆ ಸಂಪನ್ನಾವಸ್ಥೆ; ಹೀಗಿರುವದಾಗಿ ದಿವಾಣ ಬಹಾದ್ದೂರರ ಕಲ್ಪನೆಯಾಗಿರುವದೇನೆಂಬುದು ನಮಗೆ ತಿಳಿಯದ ಮಾತು. ಸಹಕಾರಿ ಸಂಘದ ಸಾಲಗಾರರೆಂದರೆ ಪತಿತರು, ಸಾವಕಾರರ ಸಾಲಗಾರರೆಂದರೆ ಉತ್ತಮರು, ಎಂಬದೊಂದು ಭಾವನೆ ಈ ವಚನಗಳಿಂದ ಸ್ಫುಟವಾಗುತ್ತದೆ. ಭೂಭದ್ರ ಬೇಂಕುಗಳಲ್ಲಿ ಸಾಲ ಕೊಂಡು ತೀರಿಸದಿದ್ದವರ ಅವಸ್ಥೆಯಿದೇ. ಬೇಸಾಯಗಾರರ ಉತ್ಪತ್ತಿಯೇನು? ಅವರಿಗೆ ತಗಲುವ ಖರ್ಚೇನು? ಹುಟ್ಟುವಳಿ ಖರ್ಚಿಗೆ ಸಾಲದಿದ್ದರೆ, ಅದಕ್ಕೆ ಮಾಡಬೇಕಾದ ಉಪಾಯವೇನು? ಸಾಲ ತೀರಿಸುವ ಐಪತ್ತನ್ನು ಸಂಪಾದಿಸಿ ಕೊಡುವ ಯೋಜನೆ ಯಾವದು? ಎಂಬ ವಿಚಾರ ಮಾಡದೆ ಬರೇ ಸಾಲ ಕೊಡುವ ಸಹಕಾರಿ ಸಂಘಗಳನ್ನು ಸ್ಥಾಪಿಸುವದು ನಿರರ್ಥಕವಾದುದು. ದುಷ್ಟ ಸಾವಕಾರರ ಸ್ಥಾನದಲ್ಲಿ ಉಪಕಾರಿ ಭೂಭದ್ರ ಬೇಂಕು ಆವಾಹನವಾಗುತ್ತದೆ. ಸಾವಕಾರ ವ್ಯಕ್ತಿಭೇದದಿಂದ ಸಾಲಗಾರನ ಸ್ಥಿತಿ ಭಿನ್ನವಾಗುವದಿಲ್ಲ. ಬೇಂಕಿನ ಬಡ್ಡಿಯ ದರವಾದರೂ ಕಡಿಮೆ ಇಲ್ಲ. ದರಸಾಲ ಶೇಕಡಾ ೫-೬ ರಂತೆ ಸ್ವಾರ್ಥಿ, ನಿರ್ದಯ ಸಾವುಕಾರರು ಸಹ ಬಡ್ಡಿ ಆಕರಿಸುತ್ತಾರೆ. ಭೂಮಿಯ ಭದ್ರತೆಯ ಮೇಲೆ ಈ ಪ್ರಕಾರ ಕೊಂಡ ಸಾಲಗಳನೇಕವಿವೆ. ಶೇಕಡಾ ೬ಕ್ಕೆ ಮಿಕ್ಕಿ ಬಡ್ಡಿ ಕೊಡುವದು ಬೇಸಾಯಗಾರರಿಗೆ ಎಷ್ಟಕ್ಕೂ ಅಸಾಧ್ಯ ಮಾತು. ಸರಕಾರವು ಬಡ್ಡಿಯ ದರವನ್ನು ಇಳಿಸುವ ವ್ಯವಸ್ಥೆ ಮಾಡಬೇಕು. ಸಮರ್ಥ ಸರಕಾರಕ್ಕೆ ಇದೇನು ದೊಡ್ಡ ಮಾತಲ್ಲ. ಸರಕಾರದ ಕಡೆ ನೋಟುಗಳ ರೀವು ಮೊದಲಾದ ಬೇರೆ ಬೇರೆ ಹಣ ಯಾವಾಗಲೂ ಶಿಲ್ಕಿನಲ್ಲಿರುತ್ತದೆ. ಭಾರತ ಮಂತ್ರಿಗಳು ಇಂಗ್ಲಂಡ ದೇಶದಲ್ಲಿ ಶೇಕಡಾ ೨½ ರಂತೆ ಕೋಟ್ಯಾವಧಿ ರೂಪಾಯಿಗಳ ಸಾಲ ಕೊಡುತ್ತಾರೆ. ಆ ಹಣವನ್ನು ಹಿಂದುಸ್ಥಾನದಲ್ಲಿ ತಂದು ಬಡಬಿದ್ದ ಬೇಸಾಯಗಾರರ ಋಣವಿಮೋಚನೆಯ ಕಾರ್ಯಕ್ಕೆ ತೊಡಗಿಸಿದ್ದಲ್ಲಿ ಕೆಲ ಮಟ್ಟಿಗಾದರೂ ಲಾಭವಾದೀತು. ಬಡ್ಡಿಯ ದರವನ್ನು ಇಳಿಸಬೇಕು; ಸಾಲದ ರಕಮಿನಲ್ಲಿ ಸಾವಕಾರರ ಕಡೆಯಿಂದ, ಸಹಕಾರಿ ಸಂಘಗಳ ಕಡೆಯಿಂದ ಸೂಟ ಸಂಪಾದಿಸಿ ಕೊಡಬೇಕು; ಭೂಮಿಯ ಉತ್ಪತ್ತಿಯನ್ನು ಬೆಳಸಿ ಕೊಡುವ ಏರ್ಪಾಟು ಆಗಬೇಕು; ಬೇಸಾಯ ಉದ್ಯೋಗವಿಲ್ಲದಾಗ, ಕೂತಲ್ಲಿ ಕೈಗಾರಿಕೆಗಳನ್ನು ಕೈಕೊಂಡು ಸಂಪಾದನೆ ಮಾಡಲು ದೇಶ-ಕಾಲ-ಪರಿಸ್ಥಿತಿಗನುರೂಪವಾಗಿ ಬೇಸಾಯಗಾರರಿಗೆ ಮಾರ್ಗ ತೋರಿಸಿಕೊಡಬೇಕು; ಆಂದರೆ ಮಾತ್ರ ಪ್ರಜೆಗಳ ಋಣವಿಮೋಚನೆಯಾಗಿ ಕ್ಷೇಮವಾದೀತು. ಸಾಲಗಾರರ ಐಪತ್ತು ಬೆಳಸದೆ, ಬರೇ ಸ್ವಾವಲಂಬನದ ಸದುಪದೇಶವನ್ನು ಮಾಡುತ್ತ ಹೋಗುವದರಿಂದ ಲೋಕಾಶ್ರಯ ಕೊಟ್ಟ ಶ್ರೇಯಸ್ಸು ಸಿಗದು. ವೇದಾಂತ ನಿರೂಪಣದಿಂದ ಜನರು ಸಂಪನ್ನರಾಗುತ್ತಿದ್ದರೆ ಇಷ್ಟೊತ್ತಿಗೆ ಹಿಂದೀಯರು ಕೋಟ್ಯಾಧೀಶರಾಗಿ ಅಷ್ಟೈಶ್ವರ್ಯಗಳಲ್ಲಿ ತೇಲಾಡುತ್ತಿದ್ದರು. ಸಾಲಗಾರರ ಸಂಪಾದನೆಯ ಮಾರ್ಗಗಳನ್ನು ಘಟಿಸದೆ ಸಾವಕಾರರ ಸಾಲದೊಳಗಿಂದ ಬಿಡುಗಡೆ ಮಾಡಲು ಭೂಭದ್ರ ಬೇಂಕನ್ನು ಸ್ಥಾಪಿಸುವದರಿಂದ ಲೋಕಕ್ಷೇಮವಿಲ್ಲ. ಸಾವಕಾರನು ಹಣ ಬಿಡುವದಿಲ್ಲ, ಬೇಂಕು ಧರ್ಮ ಮಾಡುತ್ತದೆ; ಹೀಗೇನಿಲ್ಲ. ಇಂಥ ಪ್ರಸಕ್ತಿಯಲ್ಲಿ ಭೂಭದ್ರ ಬೇಂಕನ್ನು ಸ್ಥಾಪಿಸಿ ಬೇಸಾಯಗಾರರಿಗೆ ಆಗುವ ಪ್ರಯೋಜನವೆಂತಹದು? ಬೇಂಕಿನ ಉಪಯುಕ್ತತೆಯನ್ನು ಆಳವಾಗಿ ಪರಾಂಬರಿಸದೆ, ಬೇಂಕಿನ ಆಫೀಸನ್ನು ಎಲ್ಲಿಡಬೇಕೆಂಬದರ ಕುರಿತು ಬೇರೆ ಬೇರೆ ಪ್ರಮುಖರು ಅನಾವಶ್ಯವಾಗಿ ತಿಕ್ಕಾಟ ನಡಿಸಿದ್ದನ್ನು ಕೇಳಿ ನಮಗೆ ವ್ಯಸನವಾಗಿದೆ. ಸಹಕಾರಿ ಪ್ರಮುಖರು ಪ್ರಜೆಗಳ ಸಂಪದಭ್ಯುದಯ ಮಾಡುವ ವಿಚಾರ ಮಾಡಿದನಕ, ಸಾಲದಿಂದ ಬಿಡುಗಡೆ ಮಾಡುವ ಮಹತ್ವಾಕಾಂಕ್ಷೆ ಹಿಡಿಯುವದು ತೀರ ತಪ್ಪು. ಸಾಲಗಾರರ ಪ್ರಾಪ್ತಿ ಬೆಳೆದ ಹೊರತು ಋಣವಿಮೋಚನೆಯಾದೀತೆಂದು ವ್ಯವಹಾರಜ್ಞರ್‍ಯಾರೂ ಹೇಳರು. ಅಂದಬಳಿಕ ಭೂಭದ್ರ ಬೇಂಕುಗಳ ಸಂಭ್ರಮವೇಕೆ?

ಗೌ| ಸಾ| ಬ್ರಾಹ್ಮಣ ಸ್ಕಾಲರಶಿಪ್ ಲೀಗ, ಮುಂಬಯಿ

ಉತ್ತರ ಕಾನಡಾ ಯಾ ಮಂಗಳೂರ ಜಿಲ್ಹೆಯ ಔದ್ಯೋಗಿಕ ಶಿಕ್ಷಣಾಲಯ (Technical Institute) ಗಳಲ್ಲಿ ಕಲಿಯುವ ಇಲ್ಲವೆ ಕಳೆದ ಮೆಟ್ರಿಕ್ ಪರೀಕ್ಷೆಯಲ್ಲಿ ಹೆಚ್ಚಿನ ಗುಣಗಳನ್ನು ಪಡೆದ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಗಳಿಗೆ, ರೂ. ೨೦ರ ಒಂದೊಂದರಂತೆ ಎರಡು ಇನಾಮುಗಳು ಕೊಡತಕ್ಕವಿವೆ ಅರ್ಜದಾರರು ತಮ್ಮ ಪ್ರಗತಿ ಮತ್ತು ಕಳೆದ ಪರೀಕ್ಷೆಯಲ್ಲಿ ಸಿಕ್ಕ ಗುಣಸಂಖ್ಯೆಗಳನ್ನು ಹೊಗಳುವಂಥ, ತಮ್ಮ ಶಿಕ್ಷಣ ಸಂಸ್ಥೆಯ ಮುಖ್ಯಾಧಿಕಾರಿಗಳ ಕಡೆಯಿಂದ ಪ್ರಶಂಸಾಪತ್ರ ಸಹಿತ ತಾ. ೬-೭-೩೫ರೊಳಗಾಗಿ ಈ ಕೆಳಗಿನ ಪತ್ತೆಗೆ ಅರ್ಜ ಕಳಿಸಿಕೊಡಬೇಕು.

Hon. Secretary,
G. S. B. S. League,
C/o The Saraswat Brahman Samaj,
Charni Road, Girgaum, Bombay.

ಹಬಸಿ ಪ್ರಕರಣ.

[ನಿರೀಕ್ಷಕನು ಬರೆದುದು.]

ಹಬಸಿ ಪ್ರಕರಣವನ್ನು ಪರಿಶೋಧಿಸಿದ ಹಾಗೆ ನನಗೆ ಚಿಂತೆಯೇ ಉಂಟಾಗುತ್ತದೆ. ದೀನಬಂಧು ಎಂಡ್ರ್ಯೂಸರವರು 'ಮುಂಬಯಿ ಕ್ರೊನಿಕಲ್' ಪತ್ರಿಕೆಯ ಪಾಟಣಾ ಪ್ರತಿನಿಧಿಗಳ ಬಳಿ ಇದೇ ಪ್ರಕಾರ ಉದ್ಗರಿಸಿದರು. "ಹಬಸಿ ಪ್ರಕರಣವನ್ನು ಕೇಳಿ ನಾನು ಚಿಂತೆಯಲ್ಲಿ ಮುಳುಗಿದ್ದೇನೆ." ಎಂಬದಾಗಿ ಅವರು ಭೀತಿಗೊಂಡು ಹೇಳಿದರು. ಈ ವಾರದಲ್ಲಿ ಈ ಪ್ರಕರಣಕ್ಕೆ ಒಳ್ಳೇ ಕಳೆ ಏರುವ ಲಕ್ಷಣಗಳಿವೆ. ಪ್ಯಾರಿಸದೊಳಗಿನ ಹಬಸಿ ರಾಯಭಾರಿಗಳು ರಾಷ್ಟ್ರಸಂಘದ ಬಳಿ ಪುನಃ ಮೊರೆಯಿಟ್ಟಿದ್ದಾರೆ. "ಹಬಸಿ ದೇಶದ ಸ್ವಾತಂತ್ರ್ಯಹರಣ ಮಾಡಲು ಇತಾಲಿಯು ಹೊಂಚುಹಾಕಿ ಕೂತುಕೊಂಡಿದೆ. ಫಕ್ಕನೆ ಮೈಮೇಲೆ ಹಾರಿಬರಬಹುದು. ನೀವು ರಕ್ಷಿಸಬೇಕು. ದಿನ ಹೋದ ಹಾಗೆ ಇತಾಲಿಯ ಜಗಳಗಂಟತನ ಮಿಗಿಲಾಗುತ್ತಿದೆ. ರಾಷ್ಟ್ರಸಂಘದವರು ತ್ರಯಸ್ಥ ರಾಷ್ಟ್ರಪ್ರತಿನಿಧಿಗಳ ಮಂಡಳವೊಂದನ್ನು ನೇಮಿಸಿ ಗಡಿನಾಡಿನಲ್ಲಿ ಇತಾಲಿಯು ನಡಿಸುವ ಅನ್ಯಾಯಗಳನ್ನು ಕಣ್ಣಾರೆ ಕಂಡು ರಾಷ್ಟ್ರಸಂಘಕ್ಕೆ ವರದಿ ಕೊಡಬೇಕು." ಇತಾಲಿಯು ಬಗ್ಗುವ ಲಕ್ಷಣಗಳಿಲ್ಲ. ರಾಷ್ಟ್ರಸಂಘವು ತನ್ನ ಶಕ್ತಿಯ ಗ್ರಹಿಕೆ ಪಡೆಯದೆ ಅಧಿಕಪ್ರಸಂಗತನ ನಡಿಸಿದ್ದಲ್ಲಿ ಇತಾಲಿಯು ರಾಷ್ಟ್ರಸಂಘದ ಬಂಧನವನ್ನು ತಟ್ಟನೆ ತುಂಡರಿಸಿ ಸ್ವತಂತ್ರವಾಗುವದಾಗಿ ರೋಮದೊಳಗಿನ ಪತ್ರಿಕೆಗಳು ರಾಷ್ಟ್ರಸಂಘಕ್ಕೆ ಮುಂಜಾಗ್ರತೆ ಕೊಡುತ್ತಿವೆ. ಸದ್ಯಕ್ಕೆ ಇತಾಲಿಯವರು ಹಬಸಿ ದೇಶದ ಗಡಿ ಪ್ರದೇಶದಲ್ಲಿರುವ ತಮ್ಮ ಎರಿಟ್ರಿ ವಸಾಹತಿನಲ್ಲಿ ವೈಮಾನಿಕ ದಳದ, ಸೈನ್ಯ ದಳದ ದೊಡ್ಡ ನಾಟಕ ಮಾಡಿದರು. ಬಾಂಬುಗಳನ್ನೊಗೆದು ಗುಡ್ಡಗಳ ಮೇಲಿನ ಬಂಡೆಗಲ್ಲುಗಳನ್ನು ನುಚ್ಚುನೂರು ಮಾಡಿದರು. ತೋಫುಗಳನ್ನು ಸರಸರನೆ ಬೆಟ್ಟದ ಮೇಲೆ ಓಡಿಸಿಕೊಂಡು ಹೋದರು. ಹಬಸಿ ಜನರು ಈ ಪ್ರಾಬಲ್ಯ ನೋಡಿ ಶರಣಾಗತರಾಗಬೇಕೆಂಬ ಉದ್ದೇಶದಿಂದ ನಾಟಕ ನಡೆಯಿತೆಂದು ದಡ್ಡರು ಸಹ ಹೇಳಬಲ್ಲರು. ಇತಾಲಿಯವರು ಯುಗೋಸ್ಲಾವಿಯಾದಿಂದ ತತ್ತಿ, ಕೋಳಿ, ಹಂದಿ, ಗೋಮಾಂಸ, ಕುದುರೆ, ಕಟ್ಟಿಗೆ ಮೊದಲಾದ ಸಾಹಿತ್ಯಗಳನ್ನು ಕೊಂಡುಕೊಳ್ಳ ಲಾರಂಭಿಸಿದ್ದಾರೆ. ಖರೀದಿಗೆ ಪರಿಮಿತಿಯೇ ಇಲ್ಲ. ಹಬಸಿ ದೇಶದೊಡನೆ ಯುದ್ಧ ಪ್ರಸಂಗವೊದಗಿದಾಗ ಆಹಾರ ಸಾಮಗ್ರಿಗಳ ಕೊರತೆಯಾಗಬಾರದೆಂದು ಇದೀಗಲೇ ಸಂಗ್ರಹವಾಗಲಾರಂಭಿಸಿದೆ. ಹಬಸಿ ಪ್ರಕರಣವು ಸಮಾಧಾನದಿಂದ ಬಗೆಹರಿಯುವದೆಂದು ನಾನು ಹೇಗೆ ಹೇಳಲಿ? ನನಗೇನು ಹೇಳ ಧೈರ್ಯ ಸಾಲದು.

ಬ್ರಿಟಿಶ ರಾಯಭಾರಿಗಳಾದ ಮಿ| ಈಡನ್‌ರವರು ಪುನಃ ಯಾತ್ರೆಗೆ ಹೊರಟಿದ್ದಾರೆ. ಮೊನ್ನೆ ಶುಕ್ರವಾರ ಫ್ರೆಂಚ ಸರಕಾರದೊಡನೆ ಮಾತನಾಡಿ ಹಾಗೆಯೇ ರೋಮ ಪಟ್ಟಣಕ್ಕೆ ಹೋಗಿ ಮುಸೊಲಿನಿಯವರೊಡನೆ ಸಂಭಾಷಣೆ ನಡಿಸಿ ಸ್ವದೇಶಕ್ಕೆ ಮರುಳುವವರಿದ್ದರು. ಇಷ್ಟೊತ್ತಿಗೆ ಮರಳಿರಬಹುದು. ಆ ಸುದ್ದಿ ಇನ್ನೂ ಕೈಸೇರಲಿಕ್ಕಿದೆ. ಬ್ರಿಟಿಶರು ಜರ್ಮನರೊಡನೆ ವರ್ಸೇಲೀಸ ತಹನಾಮೆಯ ವಿರುದ್ಧವಾಗಿ ನೌಕಾದಲದ ಪರಿಮಾಣವನ್ನು ನಿಶ್ಚೈಸಿಕೊಂಡರು. ಶೇಕಡಾ ೩೫ರಷ್ಟು ನೌಕಾದಲವನ್ನು ಜರ್ಮನರು ಕಟ್ಟಿಸಬಹುದಾಗಿ ಬ್ರಿಟಿಶರ ಒಪ್ಪಿಗೆ. ಇದರಿಂದ ಫ್ರೆಂಚರಿಗೆ ದೊಳ್ಳುರಿ. ವರ್ಸೇಲೀಸ ತಹನಾಮೆಯಲ್ಲಿ ತಿದ್ದುಪಡಿಯಾಗಬೇಕಾದರೆ ಬ್ರಿಟಿಶ, ಫ್ರಾನ್ಸ, ಇತಾಲಿ ಮೊದಲಾದ ಸಮಸ್ತ ಪಕ್ಷಗಾರರ ಅನುಮತಿ ಇರಬೇಕು. ಅದನ್ನು ಬ್ರಿಟಿಶರು ಪಡೆಯಲಿಲ್ಲ. ಮೇಲಾಗಿ ಶೇಕಡಾ ೩೫ರಷ್ಟು ಪ್ರಮಾಣ ಕೊಟ್ಟಲ್ಲಿ ಉತ್ತರ ಸಮುದ್ರದೊಳಗೆ ಜರ್ಮನರೇ ಪ್ರಭುಗಳಾಗುತ್ತಾರೆ; ಫ್ರೆಂಚರ ಗೌರವಭಂಗವಾಗುತ್ತದೆ. ಆದರಿಂದ ಫ್ರೆಂಚ ಸರಕಾರವು ಇನ್ನಿಷ್ಟು ಹಡಗುಪಡೆಗಳನ್ನು ಕಟ್ಟಿಸುವ ಆಲೋಚನೆಯಲ್ಲಿದೆ. ಫ್ರೆಂಚರು ಹಡಗುಪಡೆಗಳನ್ನು ಕಟ್ಟಿಸಿದರೆ ಬ್ರಿಟಿಶ-ಫ್ರೆಂಚರೊಳಗಿನ ತಹನಾಮೆಯಂತೆ ಬ್ರಿಟಿಶರು ಹೆಚ್ಚಿನ ಹಡಗುಪಡೆಗಳನ್ನು ಕಟ್ಟಿಸುವರು. ಈಗಿನ ಬ್ರಿಟಿಶ-ಜರ್ಮನರೊಳಗಿನ ತಹನಾಮೆಯಂತೆ ಜರ್ಮನರ ಹಡಗುಪಡೆಗಳು ಹೆಚ್ಚುವವು. ಪುನಃ ಉತ್ತರ ಸಮುದ್ರದಲ್ಲಿ ಜರ್ಮನರದೇ ಪ್ರತಿಷ್ಠೆ. ಈ ಶರ್ಯತ್ತಿನಲ್ಲಿ ಸೋಲುವವರ್‍ಯಾರು, ಗೆಲ್ಲುವವರ್‍ಯಾರು? ಮತ್ಸರ ಸಾಮ್ರಾಜ್ಯವು ಯುರೋಪ ಖಂಡದಲ್ಲೆಲ್ಲ ಹಬ್ಬುತ್ತಿದೆ.

ಹಬಸಿ ಪ್ರಕರಣದ ಮೂಲಕ ಬ್ರಿಟಿಶರಿಗೂ, ಇತಾಲಿಯವರಿಗೂ ದ್ವೇಷ ಬೆಳೆಯಲಾರಂಭಿಸಿದೆ. ರೋಮದೊಳಗಿನ 'ಗೊರ್ನೇಲ ಡಿ ಇಟಾಲಿಯಾ' ಪತ್ರಿಕೆಯೊಳಗೆ ಸಂಪಾದಕರಾದ ಸಿನೊರ ಗ್ಯಾಡಾರವರು ಬರೆದ ಲೇಖವನ್ನು ಪಾರಾಂಬರಿಸಿದರೆ ಇತಾಲಿಯವರು ಬ್ರಿಟಿಶರ ಸಂಬಂಧವನ್ನು ತುಂಡರಿಸಿದರೆಂದೇ ಹೇಳಬಹುದು. ಗ್ಯಾಡಾರವರು ಮುಸೊಲಿನಿಯವರ ಪ್ರತಿನಿಧಿಗಳೆಂದು ಸಾಮಾನ್ಯವಾದ ಭಾವನೆ. ಅವರು ಬರೆಯುವದೇನೆಂದರೆ:— "ಬ್ರಿಟಿಶ ಜನಾಂಗ ಜಗತ್ತಿನ ರಾಜಕಾರಣದ ಪಾದುಷಾಹ್ಯಗಾರವೆಂದು ತಿಳಿಯಲು ಇತಾಲಿಯವರು ಎಷ್ಟಕ್ಕೂ ಸಿದ್ಧರಿಲ್ಲ. ಬ್ರಿಟಿಶರ ಪಕ್ಷಪಾತದಿಂದ ಇತಾಲಿಯ ಹಬಸಿ ಧೋರಣದಲ್ಲಿ ಎಷ್ಟಕ್ಕೂ ಸ್ಥಿತ್ಯಂತರವಾಗದು. ಬ್ರಿಟಿಶ ಪತ್ರಿಕೆಗಳು ಇತಾಲಿಗೆ ಬುದ್ಧಿ ಹೇಳುವದು ಬೇಡ. ಅವಕ್ಕೆ ಆ ಅಧಿಕಾರವೇ ಇಲ್ಲ. ಬ್ರಿಟಿಶರಿಗೆ ಧೈರ್ಯವಿದ್ದರೆ ತಾವು ಹಬಸಿ ಪಕ್ಷದವರೆಂದು ಸ್ಪಷ್ಟವಾಗಿ ಹೇಳಿ ಅವರು ಮುಂದಾಗಿ ಬರಲಿ; ಅಂದರೆ ಬ್ರಿಟಿಶರ ರೂಪ ಸ್ಫುಟವಾಗುವದು. ಬ್ರಿಟಿಶರು ತಮ್ಮ ಸಾಮ್ರಾಜ್ಯಸ್ಥಾಪಿಸುವಾಗ ಲೋಕಲಜ್ಜೆಯನ್ನೂ ಮನಲಜ್ಜೆಯನ್ನೂ ಹಿಡಿದ ಸಾಕ್ಷಿಯಿಲ್ಲ. ಬಲಾತ್ಕಾರದಿಂದ ರಾಜ್ಯವಿಸ್ತಾರ ಮಾಡಿರುತ್ತಾರೆ. ಈಗ ರಾಷ್ಟ್ರಸಂಘದ ತಿಮಿಂಡಿಯನ್ನು ಮುಂದೊಡ್ಡಿ ಬೇರೆಯವರಿಗೆ ನಿರ್ಬಂಧ ಹಾಕಬಯಸುತ್ತಾರೆ. ನಮ್ಮ ಪೂರ್ವ ಆಫ್ರಿಕೆಯ ವಸಾಹತುಗಳ ಗಡಿನಾಡಿನಲ್ಲಿ ಹಬಸಿ ಜನಾಂಗದವರು ನಮ್ಮ ರಾಷ್ಟ್ರಕ್ಕೆ ಅಪಮಾನ ಮಾಡಿದ್ದಾರೆ. ನಾವದನ್ನು ಎಷ್ಟಕ್ಕೂ ಸಹಿಸಲಾರೆವು. ಅದನ್ನು ನಾವು ಸಹಿಸಿದರೆ ರಾಷ್ಟ್ರವೆಂದು ಹೇಳಿಸಿಕೊಳ್ಳಲು ನಾವು ಅಪಾತ್ರರು. ಬ್ರಿಟಿಶರು ಕಳ್ಳತನದಿಂದ ಹಬಸಿದೇಶಕ್ಕೆ ಮದ್ದು

[೬ನೇ ಪಾನಿನ ಮೇಲೆ ಮುಂದರಿಸಿದೆ.]

ಮನೆತನದಲ್ಲಿ ಯಾ ಸಣ್ಣ ಸಣ್ಣ ತೋಟಗಳಲ್ಲಿ

ಉಪಯೋಗಿಸುವಂಥ,

ಕಿರ್ಲೋಸ್ಕರ

ಮನೆವಾಡಿಕೆಯ ಪಂಪುಗಳು

ನಿಮಗೆ ಪೂರ್ಣ ಸಮಾಧಾನ ಕೊಡುವವು.



ತನ್ನಿಂದ ತಾನೇ ಸ್ವಿಚ್ ಬಲದಿಂದ ಪಂಪ ಸುರುವಾಗಿ ಬೇಕಾದ ಜಾಗದಲ್ಲಿರುವ ನೀರನ್ನು ಮೇಲಕ್ಕೆ ಸುರಿದು ತೆಗೆದು ¾ ಇಂಚು ಡಿಲಿವರಿ ವ್ಯಾಸದಿಂದ ನೀರು ಏರುವದು.

½ ಬಿ. ಎಚ್. ಪಿ. ಇಲೆಕ್ಟ್ರಿಕ್ ಮೋಟರ ಸಹಿತ ಸಿಗುವದು.

ತಪಶೀಲ ಮಾಹಿತಿ ಬಗ್ಗೆ ಬರೆದು ಚಿತ್ರಯುಕ್ತ ಕ್ಯಾಟಲಾಗನ್ನು ಪಡಕೊಳ್ಳಿರಿ.

ಪತ್ರವ್ಯವಹಾರ ಇಂಗ್ಲೀಷ ಯಾ ಮರಾಠಿಯಲ್ಲಿ ಮಾಡುವದು.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್—

ಕಿರ್ಲೋಸ್ಕರವಾಡಿ.

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಚನ್ನಾಗಿ ಬೀಳುತ್ತಿದೆ. ಈ ತನಕ ಸುಮಾರು ೩೦ ಇಂಚು ಮಳೆಯಾಯಿತು. ಊರಿನ ಮಾರ್ಗಗಳ ಮೇಲೂ, ಓಣಿಗಳಲ್ಲೂ ಅಲ್ಲಲ್ಲಿ ಕಸಕಡ್ಡಿಗಳ ರಾಶಿಗಳು ಕೊಳೆಯುತ್ತ ಬಿದ್ದಿವೆ. ಜನ-ಹೋಗುವವರಿಗೆ ಕಷ್ಟ! ನೆರೆಹೊರೆಯ ಜನರ ಆರೋಗ್ಯಕ್ಕೂ ಬಾಧೆ. ಮ್ಯಾನೇಜಮೆಂಟ ಕಮಿಟಿಯವರು, ಅವಶ್ಯವಿದ್ದರೆ ಜಾಡು ನೌಕರರನ್ನು ಕೆಲಸಕ್ಕೆ ಹಚ್ಚಿ, ಈ ರಾಶಿಗಳನ್ನು ಬೇಗನೇ ತೆಗೆಸಿ ಸ್ವಚ್ಛತೆ ಕಾಪಾಡಬೇಕು.

ಶುಕ್ರವಾರ ತಾ. ೨೧ನೇ ಮುಂಬಯಿ ಸರಕಾರದ ಶಿಕ್ಷಣ-ಸಹಕಾರ ಇಲಾಖೆಗಳ ಮಂತ್ರಿಗಳಾದ ದಿ| ಬ| ಕಾಂಬಳಿಯವರು ಕುಮಟಾ, ಹೊನ್ನಾವರಗಳಿಗೆ ದರ್ಶನ ಕೊಡುವರೆಂದು ಕಳೆದ ಸೋಮವಾರ ವಾರ್ತೆ ಬಂತು. ಸ್ಥಾನಿಕ ಅಧಿಕಾರಿಗಳು ಗಡಿಬಿಡಿಯಿಂದ ಸ್ವಾಗತದ ಸಿದ್ಧತೆ ಮಾಡಿದರು. ಕೆಲವು ಮಾನಪತ್ರಗಳನ್ನು ಅರ್ಪಿಸುವ ವ್ಯವಸ್ಥೆಯೂ ಆಯಿತು. ಶುಕ್ರವಾರ ಬೆಳಿಗ್ಗೆ ೮ ಘಂಟೆಗೆ ಮಂತ್ರಿಗಳ ಸಂಚಾರಕ್ರಮ ರದ್ದಾಗಿರುವದಾಗಿ ಕಾರವಾರದಿಂದ ತಂತಿ ಬಂತು! ಅದೇ ೧೦ ನಿಮಿಷಗಳಲ್ಲಿ ಮಂತ್ರಿಗಳು ಕುಮಟೆಗೆ ಹೊರಟರೆಂದು ಹುಬ್ಬಳ್ಳಿಯಿಂದ ತಂತಿ. ಅಂತು ಶುಕ್ರವಾರ ೩ ಘಂಟೆಗೆ ದಿವಾನರು ಇಲ್ಲಿ ಬಂದರು. ಅಧಿಕಾರಿಗಳೂ, ಸಹಕಾರಿಗಳೂ, ರಾಜನಿಷ್ಠರೂ ಅವರನ್ನು ಎದುರುಗೊಂಡು ಸ್ವಾಗತ ಮಾಡಿದರು. ಸಂಜೆ ೫ ಘಂಟೆಗೆ ಶ್ರೀಮಂತ ದೇಂಪೆ ಸಭಾಮಂದಿರದಲ್ಲಿ ಸಭೆಯಾಗಿ ದಿವಾನ ಬಹಾದ್ದೂರರಿಗೆ ೪ ಮಾನಪತ್ರಗಳು ಕೊಡಲ್ಪಟ್ಟವು. ಗಿಬ್ಸ ಹೈಸ್ಕೂಲಿನ ಪರವಾಗಿ ಕೊಟ್ಟ ಮಾನಪತ್ರದಲ್ಲಿ ಹೆಡ್ ಮಾಸ್ತರರಾದ ರಾ| ಮುರ್ಡೇಶ್ವರರು ಶಾಲೆಯ ಇತಿಹಾಸವನ್ನು, ಶಾಲೆಯು ಸ್ಥಾಪನೆಯಾದಂದಿನಿಂದ ಈ ಜಿಲ್ಲೆಯಲ್ಲಿ ಆದ ಮಾಧ್ಯಮಿಕ ಶಿಕ್ಷಣದ ಪ್ರಗತಿಯನ್ನು ಉಲ್ಲೇಖಿಸಿ, "ಈಗ ನಮ್ಮ ಶಾಲೆಯಲ್ಲಿ ೩೧೦ ಹುಡುಗರು, ೩೧ ಹುಡುಗಿಯರೂ ಕಲಿಯುತ್ತಾರೆ. ನಾಲ್ಕು ವರ್ಷಗಳ ಹಿಂದೆ ನಮಗೆ ೪೫೦೦ ರೂ. ಗ್ರಾಂಟು ಸಿಗುತ್ತಿತ್ತು; ಈಗ ದುಡ್ಡಿನ ಅಡಚಣಿ ಮೂಲಕ ಸರಕಾರದವರು ಗ್ರಾಂಟಿನ ರಕಮನ್ನು ೩೭೦೦ ರೂ.ಗಳಿಗೆ ಇಳಿಸಿದ್ದಾರೆ. ವಿದ್ಯಾರ್ಥಿಗಳ ಪ್ರವೇಶ, ಬಡತಿ, ಟ್ರೇನ್ಡ ಶಿಕ್ಷಕರ ನೇಮಣೂಕಿ ಮುಂತಾದ ವಿಷಯಗಳಲ್ಲಿ ವಿದ್ಯಾಧಿಕಾರಿಗಳು ಕಠೋರ ನಿಯಮಗಳನ್ನು ಹೇರುತ್ತಾರೆ; ಗ್ರಾಂಟು ಕೊಡುವಾಗ ಮಾತ್ರ ಜಿಪುಣತನ ಮಾಡುತ್ತಾರೆ! ಇದರಿಂದ ಆಯ-ವ್ಯಯಗಳ ಬಾಯಿಗೂಡಿಸುವದು ನಮಗೆ ಕಠಿಣವಾಗಿದೆ. ಇತರ ಪ್ರಾಂತಗಳಿಗಿಂತ ಕರ್ನಾಟಕವು ಶಿಕ್ಷಣ ಸಂಬಂಧದಲ್ಲಿ ಹಿಂದೆ ಬಿದ್ದ ಪ್ರಾಂತ; ಅದರಲ್ಲೂ ಕಾನಡಾ ಜಿಲ್ಲೆಯು ತೀರ ಹಿಂದೆ ಬಿದ್ದದ್ದಲ್ಲದೆ, ಆರ್ಥಿಕ ದೃಷ್ಟಿಯಿಂದ ಅತಿ ಕಡು ಬಡ ಜಿಲ್ಲೆಯಾಗಿದೆ. ಕಾರಣ ದಿವಾನ ಸಾಹೇಬರವರನ್ನು ಪ್ರತಿಷ್ಠೆಯ ಬಲದಿಂದ ಈ ಜಿಲ್ಲೆಯೊಳಗಿನ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಆಶ್ರಯ ದೊರಕಿಸಿ ಕೊಡುವರಾಗಿ ನಾವು ನಂಬಿದ್ದೇವೆ" ಎಂದು ಹೇಳಿಕೊಂಡರು. ಕುಮಟಾ ಅರ್ಬನ್ ಸಹಕಾರಿ ಬ್ಯಾಂಕಿನ ಮಾನಪತ್ರವನ್ನು ಚೇರಮನ್‌ರಾದ ರಾ| ಅಣ್ಣಪ್ಪನವರು ಓದಿದರು. ಈ ಮಾನಪತ್ರದೊಳಗೆ ಕುಮಟೆಯು ೫೦ ವರ್ಷಗಳ ಹಿಂದೆ ಹತ್ತಿಯ ವ್ಯಾಪಾರದ ಕೇಂದ್ರವಿತ್ತು. ೧೯೧೫ರ ತನಕ ಇಲ್ಲಿ ಅಡಿಕೆ ಮತ್ತು ಮೆಣಸಿನ ಕಾಳುಗಳ ವ್ಯಾಪಾರ ದೊಡ್ಡ ಪ್ರಮಾಣದಿಂದ ನಡೆಯುತ್ತಿತ್ತು. ಅನಂತರ ಕುಮಟೆಯ ಸ್ಥಿತಿ ಕ್ರಮೇಣ ಹಾಳಾಗಹತ್ತಿದೆ; ವ್ಯಾಪಾರ ಕುಗ್ಗಹತ್ತಿದೆ. ಹೀಗಾಗಲು ಕಾರಣಗಳ್ಯಾವವೆಂದರೆ:— (೧) ನೆಲಕಾಂಡ ರಸ್ತೆಯು ಕೆಟ್ಟುಹೋಗಿದೆ; ಅದರ ದುರುಸ್ತಿಯ ಕಡೆಗೆ ಲಕ್ಷವಿಲ್ಲ. (೨) ಸಾಗುಭೂಮಿಗಳಲ್ಲಿ ಜಂಗಲು ಬೆಳೆದು ಸಾವಿರಾರು ರೈತರು ನಿರುದ್ಯೋಗಿಗಳಾಗಿದ್ದಾರೆ. (೩) ಚಳಿಜ್ವರದಿಂದ ಹಳ್ಳಿಗಳ ಜನಸಂಖ್ಯೆಯು ಕುಗ್ಗಹತ್ತಿದೆ; ಮಳೆಗಾಲದಲ್ಲಿ ಹಳ್ಳಿಗಳಿಗೆ ಸಂಕಗಳಿಲ್ಲವಾದ್ದರಿಂದ ಕೆಸರಿನಿಂದ ಹಳ್ಳಿಗಳಿಗೆ ವೈದ್ಯಕೀಯ ಸಹಾಯ ಮುಟ್ಟಿಸಲು ಸಾಧ್ಯವಾಗುತ್ತದೆ ಬೆಳೆಯು ಕಡಿಮೆಯಾಗುತ್ತದೆ. ಈ ಪ್ರಕಾರ ಕುಮಟೆಯ ದುಃಸ್ಥಿತಿಯನ್ನು ಬಣ್ಣಿಸಿದ ಮೇಲೆ ರಾ| ಪೈಯವರು ಬ್ಯಾಂಕಿನ ಇತಿಹಾಸವನ್ನು, ಈಗಿನ ಪರಿಸ್ಥಿತಿಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಇತ್ತಲಾಗಿ ವ್ಯಾಪಾರ-ಧಂದೆಯು ತೀರ ಜಡವಾಗಿ ನೋಡಿದರಿಂದ ಸಾಲಗಳ ವಸೂಲಿಯು ಸರಿಯಾಗಿ ಆಗುವದಿಲ್ಲ. ಇನ್ನೂ ನಮ್ಮ ಬ್ಯಾಂಕು ಡಿಫಿಸಿಟ್‌ದಲ್ಲಿ ಇದೆ. ರೀಸರ್ವ ೧೦ ರಷ್ಟು ಸಾಲಕ್ಕೆ ಮುದ್ದತ್ತು ವಿಸ್ತರಿಸಿದೆ, ಒಡ್ಡಿಯಲ್ಲಿ ಸೂಟು ಬಿಟ್ಟು, ಪಾತ್ರರಿದ್ದವರಿಗೆ ಕಾಯಿದೆ ಕೊಟ್ಟು ನಾವು ಬಿಟ್ಟಬಾಕಿ ಸಾಲದ ಪ್ರಮಾಣ ಇಳಿಸಹತ್ತಿದ್ದೇವೆ. ಭೂಭದ್ರತೆಯ ಬ್ಯಾಂಕು ಬಂದರೆ ನಮ್ಮ ಕಷ್ಟ ಕೆಲಮಟ್ಟಿಗೆ ಸುಧಾರಿಸಬಹುದು." ಎಂದು ಅವರು ಉಪಸಂಹಾರ ಮಾಡಿದರು.

ಕಾನಡಾ ಜಿಲ್ಲಾ ಸಹಕಾರಿ ಸಂಘದ ಮಾನಪತ್ರವನ್ನು ಉಪಾಧ್ಯಕ್ಷರಾದ ರಾ| ಕೃ. ದ. ಪ್ರಭು ಇವರು ಓದಿದರು. "ಗ್ರಾಮ ಸುಧಾರಣೆಯು ಒಂದು ನಮ್ಮ ವಿಶೇಷ ಕಾರ್ಯಕ್ಷೇತ್ರವಿದೆ. ಕಲ್ಲಬ್ಬೆ ಗ್ರಾಮದಲ್ಲಿ ನಮ್ಮ ಪ್ರಯೋಗ ನಡೆದಿದೆ. 'ಹೆಚ್ಚಿನ ಉತ್ಪತ್ತಿ, ಚಲೋ ವ್ಯಾಪಾರ ಮತ್ತು ಸುಧಾರಿಸಿದ ಜೀವನಕ್ರಮ' ಎಂಬ ತತ್ವದ ಮೇಲೆ ಒಂದು ಮಾದರಿಯ ಹಳ್ಳಿ ನಿರ್ಮಾಣ ಮಾಡಬೇಕೆಂದು ನಾವು ಹವಣಿಸುತ್ತೇವೆ. ರಸ್ತೆ ದುರಸ್ತಿ, ಕೆರೆ-ಬಾವಿಗಳ ದುರುಸ್ತಿ, ನೀರು-ಪ್ರವಾಹ, ಊರ ಸುತ್ತಲು ಬೇಲಿ ಹಾಕಿ ಬೆಳೆಯ ಸಂರಕ್ಷಣೆ, ಕಿಸಾನಿಯ ನೇಮಣೂಕಿ, ಬೇಸಾಯದ ಸುಧಾರಣೆ, ಸಹಕಾರಿ ತತ್ವದ ಮೇಲೆ ಕ್ರಯ-ವಿಕ್ರಯ, ಸಮಾರಂಭಗಳ ಖರ್ಚಿನಲ್ಲಿ ಉಳಿತಾಯ, ಪಂಚರ ನಿರ್ಣಯದಿಂದ ವ್ಯಾಜ್ಯಗಳ ನಿಕಾಲಿ, ಸಣ್ಣ ಸಣ್ಣ ಹೊಲಗಳ ಏಕೀಕರಣ, ಆರೋಗ್ಯ ಸುಧಾರಣೆ ಮುಂತಾದ ಕಾರ್ಯಗಳನ್ನು ಕೈಕೊಂಡಿದೆ. ಗ್ರಾಮ ಸುಧಾರಣೆ ಮಾಡಬೇಕಾಗಿ ನಾವು ಸಂಕಲ್ಪ ಮಾಡಿದ್ದೇವೆ. ಆ ಬಗ್ಗೆ ಸಹಕಾರಿ ಪ್ರಾಪಗ್ಯಾಂಡ ಸಂಪಾದನ್ನು ಹೊಂದಿಸಿದ್ದೇವೆ. ಇದು ಇದೇ ಹಲವಿನಲ್ಲಿ ದೊರೆಯದೆ ಸಂಘದ ವ್ಯಾಪಾರ ಕಾರ್ಯಕ್ಕೆ ಹಣ ಬೇಕು. ಸರಕಾರದವರು ಹಳ್ಳಿಗಳ ಸುಧಾರಣೆ ಬಗ್ಗೆ ತೆಗೆದಿಟ್ಟ ನಿಧಿಯೊಳಗಿಂದ ಹೆಚ್ಚಿನ ಸಹಾಯ ಸಿಗುವಂತೆ ತಾವು ಮಾಡುವಿರಾಗಿ ಕೋರುತ್ತೇವೆ. ಸಹಕಾರದಲ್ಲಿ ನಮಗೆ ಶ್ರದ್ಧೆಯಿದೆ. ಸಹಕಾರದಿಂದ ನಮ್ಮ ಅನೇಕ ಕಷ್ಟಗಳ ಪರಿಹಾರವಾದೀತೆಂದು ನಂಬಿಗೆಯಿದೆ. ಆದರೆ ದುಡ್ಡಿನ ಅಡಚಣಿ! ದುಡ್ಡಿಲ್ಲದ ಪ್ರಚಾರಕನ ನೇಮಣೂಕಿಯನ್ನು ನಾವು ಬಂದಿಡಬೇಕಾಯಿತು. ಆರ್ಥಿಕ ಮುಗ್ಗಟ್ಟಿನ ಮೂಲಕ ಸಹಕಾರಿ ಸಂಸ್ಥೆಗಳ ವ್ಯವಹಾರ ಕುಗ್ಗಿದೆ. ಅವುಗಳಿಂದ ವಂತಿಗೆ ಸಿಗುವದು ಕಡಿಮೆ; ಸರಕಾರಿ ಗ್ರಾಂಟು ಸಹ ಕಡಿಮೆಯಾಗಿದೆ. ಕಾನಡಾ ಜಿಲ್ಲೆಯಲ್ಲಿ ಬೇಸಾಯದ ಸಂಘಟಕನೊಬ್ಬನನ್ನು ನೇಮಿಸಬೇಕಾಗಿ ನಾವು ಹೇಳಿಕೊಳ್ಳುತ್ತಿದ್ದೇವೆ. ಈಗಾದರೂ ಒಬ್ಬನನ್ನು ನೇಮಿಸಿರೆಂದು ನಾವು ಪ್ರಾರ್ಥಿಸುತ್ತೇವೆ. ಇದು ಬೇಸಾಯದ ಮೇಲೆ ಅವಲಂಬಿಸಿದ್ದ ಜಿಲ್ಲೆ. ಅನೇಕ ನೈಸರ್ಗಿಕ ಅನುಕೂಲತೆಗಳಿದ್ದಾಗ್ಯೂ ನಾವು ಬಹಳೇ ಬಡತನದಲ್ಲಿದ್ದೇವೆ. ನಮ್ಮ ಮುಖ್ಯ ತೋಟದ ವ್ಯವಸಾಯ ಹಾಳುಗೆಡಹತ್ತಿದೆ. ಹಳ್ಳಿಗಳು ನಿರ್ಜನವಾಗಹತ್ತಿವೆ. ಜಂಗಲ ಬೆಳವಣಿಗೆ, ಜಂಗಲ ಖಾತೆಯ ಕಾಟ, ಅನಾರೋಗ್ಯ, ಕಾಡು ಮೃಗಗಳ ಕಾಟ, ಅಡಿಕೆಯ ಕೊಳೆ ರೋಗ, ಪರದೇಶ ಅಡಿಕೆಯ ಸ್ಪರ್ಧೆ ಇವುಗಳಿಂದ ತೋಟಿಗರು ಕಂಗೆಟ್ಟಿದ್ದಾರೆ. ತಾವು ನಮ್ಮ ಪ್ರಾಂತದವರು. ತಾವು ನಮ್ಮ ಕಷ್ಟಗಳನ್ನು ಪರಿಹರಿಸಬೇಕು" ಎಂದು ಬೇಡಿಕೊಂಡರು. ಅಡಿಕೆ ಸೊಸಾಯಿಟಿಯ ಮಾನಪತ್ರವನ್ನು ಸಬ್-ಗವರ್ನಮೆಂಟ ವಕೀಲರಾದ ರಾ| ಹೆಗಡೆಯವರು ಓದಿತೋರಿಸಿದರು. "ನಮ್ಮ ಮೆಣಸಿನ ಕಾಳಿನ ತೋಟಗಳು ಇತಿಹಾಸ ಪ್ರಸಿದ್ಧವಾಗಿವೆ. ಹಿಂದೆ ಈ ವ್ಯವಸಾಯವು ಚಲೋ ಭರತಿಗೇರಿತ್ತು. ಪರದೇಶಿ ವರ್ತಕರಿಗೆ ಆಕರ್ಷಿಸಿ ತಂದ ವ್ಯವಸಾಯ ಇದೇ. ನಮ್ಮ ಜಿಲ್ಲೆಯ ಮುಖ್ಯ ವ್ಯವಸಾಯವಿದು. ಈಗಲೂ ನಮಗೆ ಇದರಿಂದ ೫೦ ಲಕ್ಷ ರೂ. ಉತ್ಪನ್ನ ಸಿಗುತ್ತದೆ. ಸರಕಾರಕ್ಕೆ ಇದೇ ಜಿಲ್ಲೆಯ ½ ಕಂದಾಯ ಈ ತೋಟಗಳಿಂದಲೇ ಸಿಗುತ್ತದೆ. ಈ ತೋಟಗಳು ಬೆಟ್ಟಗಳ ನಡುವೆ ಸಿಕ್ಕಿಬಿದ್ದಿವೆ. ಬೆಟ್ಟಗಳಿಗೂ, ತೋಟಗಳಿಗೂ ಹೋರಾಟ ನಡೆದದೆ. ಹೀಗಾಗಿ ತೋಟಗಳ ವ್ಯವಸಾಯವು ಈಗ ಕ್ಷೀಣವಾಗುತ್ತ ನಡೆದದೆ. ಪರದೇಶ ಅಡಿಕೆಯು ಮುಂದೆ ನಮ್ಮ ಅಡಿಕೆ ವ್ಯವಸಾಯವೂ ಹಾಳಾಗುತ್ತ ನಡೆದದೆ. ಈ ಹೋರಾಟದಿಂದ ನಮ್ಮನ್ನು ಕಾಯಬೇಕು. ಕೊಳೆ ರೋಗದಿಂದ ನಮಗೆ ಹೇರಳ ಹಾನಿಯಾಗುತ್ತದೆ. ಬೋರ್ಡೋ ಮಿಕ್ಶ್ಚರವೆ ಕೊಳೆ ರೋಗಕ್ಕೆ ರಾಮಬಾಣ ಮದ್ದು. ಈ ಮದ್ದು ತಯಾರಿಸಲು ಸರಕಾರದವರು ತಗಾವಿ ಕೊಡುತ್ತಾರೆ, ಆದರೆ ಬೇಸಾಯ ಖಾತೆಯಲ್ಲಿ ಸಾಕಷ್ಟು ಜನರಿಲ್ಲದ್ದರಿಂದ ಬಹಳ ತೊಂದರೆಯಾಗಿದೆ." ಎಂದು ಮಾನಪತ್ರದಲ್ಲಿ ಬರೆದಿತ್ತು. ನಾಲ್ಕೂ ಮಾನಪತ್ರಗಳಿಗೆ ದಿವಾನರು ಒಂದೇ ಭಾಷಣದಿಂದ ಉತ್ತರ ಕೊಟ್ಟರು. "ನಿಮ್ಮ ಶಾಲೆಯ ಪ್ರಗತಿ ಕೇಳಿ ನನಗೆ ಸಂತೋಷವಾಗುತ್ತದೆ. ಸರಕಾರಕ್ಕೆ ಹಣದ ಅಡಚಣಿ ಬಂದಿದ್ದರಿಂದ ಗ್ರಾಂಟಿನ ರಕಮು ಕುಗ್ಗಿತು. ಧನವಂತರು ನಿಮಗೆ ಸಹಾಯ ಮಾಡತಕ್ಕದ್ದು. ನಿಮ್ಮ ಇನ್‌ಸ್ಟಿಟ್ಯೂಟನವರು ಕಲ್ಲಬ್ಬೆಯಲ್ಲಿ ಕೈಕೊಂಡ ಗ್ರಾಮಸುಧಾರಣೆ ವಿವರ ಕೇಳಿ ಸಂತೋಷವಾಗುತ್ತದೆ. ಇದರಂತೆಯೇ ನೀವು ಬೇರೆಯವರ ಕಡೆಯಿಂದ ದ್ರವ್ಯಸಹಾಯದ ಅಪೇಕ್ಷೆ ಮಾಡದೆ ಗ್ರಾಮ ಸುಧಾರಣೆ ಮಾಡುತ್ತ ಹೋಗಬೇಕು. ಸಹಕಾರಿ ಸಂಘದ ರಿಜಿಸ್ಟ್ರಾರರು ಸಾಲಗಾರರ ಅನುಕೂಲತೆಗಾಗಿ ಸಹಕಾರಿ ಸಂಘಗಳಿಗೆ ವ್ಯವಸ್ಥೆ ಮಾಡಿದ್ದು ಇನ್ನೂ ಬೆಳೆಸಬೇಕಾಗಿ ನೀವು ಅಪೇಕ್ಷಿಸಬಹುದು. ಸಾಲಗಾರರು ತಾವು ಕೊಂಡ ಹಣವನ್ನು ತೀರಿಸುವ ವ್ಯವಸ್ಥೆ ಮಾಡಬೇಕು. ಪ್ರತಿಯೊಬ್ಬರೂ ಪರಸ್ಪರ ಸಹಾಯದ ಅಪೇಕ್ಷಿಸದೆ ತಮ್ಮ ಕಾಲ ಮೇಲೆ ತಾವೇ ನಿಂತುಕೊಳ್ಳಬೇಕು. ಅಡಿಕೆ ಉದ್ದಿಮೆಗೆ ಅವಶ್ಯವಿದ್ದ ಸಂರಕ್ಷಣವನ್ನು ಹಿಂದುಸ್ಥಾನ ಸರಕಾರದ ಪರವಾಗಿ ಪಡೆಯತಕ್ಕದ್ದು. ಅಲ್ಲಿ ಬಿನ್ನಹ ಮಾಡಿಕೊಂಡಲ್ಲಿ ನಿಮ್ಮ ನಿರೀಕ್ಷಿಸಬಹುದು. ಬ್ಯಾಂಕಿನ ಪ್ರಗತಿ ಕೇಳಿ ಆನಂದವಾಗುತ್ತದೆ. ಬಿಟ್ಟ ಬಾಕಿ ರಕಮಿನ ಪ್ರಮಾಣ ಶೇಕಡಾ ೧೦ಕ್ಕೆ ಇಳಿಯುತೆಂದು ನೀವು ಹುರುಳಿ (   ) ಹೋಗಲಾಗದು. ಎಲ್ಲ ಸಭಾಸದರು ಹಣ ವಸೂಲ ಮಾಡಲು ಎಡಬಿಡದೆ ಪ್ರಯತ್ನ ಮಾಡತಕ್ಕದ್ದು. ಇನ್ನೊಂದು ವರ್ಷದಲ್ಲಿ ಹಣ ವಸೂಲು ನಿರಿದ್ದಲ್ಲಿ ಪಶ್ಚಾತ್ತಾಪ ಪಡಬೇಕಾದೀತು."*(lament)* ಅಡಿಕೆ ಸಂಘದವರಿಗೆ ಇನ್‌ಸ್ಟಿಟ್ಯೂಟಿಗೆ ಕೊಟ್ಟ ಅರ್ಥದ ಉತ್ತರವನ್ನೇ ಕೊಟ್ಟು ಸ್ವಾಗತ ಸತ್ಕಾರ ಮಾಡಿದ ಬಗ್ಗೆ ಮಾನಪತ್ರದವರಿಗೆಲ್ಲ ಧನ್ಯವಾದಗಳನ್ನರ್ಪಿಸಿದರು. ತಾಂಬೂಲ ಸಮರ್ಪಣೆಯಾದ ಬಳಿಕ ಸಭೆಯು ವಿಸರ್ಜನಹೊಂದಿತು. ದಿವಾನರು ಹೊನ್ನಾವರಕ್ಕೆ ಹೋಗಿ ಪುನಃ ಇಲ್ಲಿಗೆ ಬಂದು ಇಲ್ಲಿಂದ ಹಾಗೆಯೇ ಗೋಕರ್ಣಕ್ಕೆ ಹೋಗಿ ಶ್ರೀ ಮಹಾಬಲೇಶ್ವರನ ದರ್ಶನ ಪಡೆಕೊಂಡು ಹುಬ್ಬಳ್ಳಿಗೆ ತೆರಳಿದರು. ಈ ಮಳೆಗಾಲದಲ್ಲಿ ದಿವಾನರು ಇತ್ತ ಕಡೆಯ ಸಂಚಾರ ಕಾರ್ಯಕ್ರಮವನ್ನು ಕೈಕೊಳ್ಳುವ ಕಾರಣವೇನು? ಆತುರ ಬಗೆಯಿಂದ ಅದನ್ನು ಮುಗಿಸಿ ಪುನಃ ಹುಬ್ಬಳ್ಳಿಗೆ ಹೋಗುವ ಕಾರಣವೇನು? ಎಂಬುದಾಗಿ ಹಲವರು ಪ್ರಶ್ನಿಸುತ್ತಾರೆ.

ಇಲ್ಲಿಯ ಒಂದನೇ ನಂಬರ ಕನ್ನಡ ಶಾಲೆಯ ಕಟ್ಟಡವು ಬಹಳ ಜೀರ್ಣವಾಗಿತ್ತು. ೪-೫ ದಿನಗಳ ಹಿಂದೆ ಅದರ ಕೆಲ ಭಾಗವು ಕುಸಿದು ಬಿತ್ತು. ಈಗ ಶಾಲಾ ವರ್ಗಗಳು ಶ್ರೀ ವಸ್ತಾಳ ದೇವಸ್ಥಾನದಲ್ಲಿ ಕೂಡುತ್ತವೆ. ಶಾಲಾ ಇಮಾರತು ಕುಸಿದು ಬೀಳುವ ತನಕ ಕಣ್ಮುಚ್ಚಿ ಕೊಂಡು ಕೂತ ಅಧಿಕಾರಿಗಳ ಕರ್ತವ್ಯದಕ್ಷತೆ ಹೊಗಳುವಷ್ಟು ಕಡಿಮೆ!!

ರಾ| ಎಸ್. ಜಿ. ಪಟೇಲಯವರು ಮುಂಬಯಿ ಯುನಿವರ್ಸಿಟಿಯ ಸಿನೇಟಿನ ಚುನಾವಣೆಯಲ್ಲಿ ಪದವೀಧರ ಸಂಘದ ಪರವಾಗಿ ಉಮೇದವಾರರಾಗಿ ನಿಂತಿದ್ದಾರೆ. ದೇ| ಭ| ಭುಲಾಭಾಯಿ ದೇಸಾಯಿ ಮತ್ತು ಬ್ಯಾ| ಮುಕುಂದರಾವ ಜಯಕರರು ರಾ| ಪಟೇಲಯವರ ಸೇವಾ ಶಕ್ತಿಯನ್ನು ಸೂಚಿಸಿ ಕಳೆದ ಸೋಮವಾರಕ್ಕೆ ಸೇವಾ ಶಕ್ತಿ ಪತ್ರಿಕೆಯನ್ನು ಚುನಾವಣ ಅಧಿಕಾರಿಗಳ ಕಡೆಗೆ

ಬಿಟ್ಟಿಸಿರುತ್ತಾರೆ ಕರ್ನಾಟಕದ ಸದಸ್ಯರೆಲ್ಲರೂ ತಮ್ಮ ಮತಗಳನ್ನು ಡಾ| ಪಟ್ಟಾಭಿ ಅವರಿಗೆ ಕೊಡಬೇಕಾಗಿ ವಿನಂತಿಸಿದೆ.

ಕೆಕ್ಕಾರ— ಇಲ್ಲಿಯ ರಾ| ವಿಷ್ಣು ಆರ್. ಭಟ್ಟರು ಮುಂಬಯಿ ವಿಶ್ವವಿದ್ಯಾಲಯದ ಕಳೆದ ಎಮ್. ಏ. ಪರೀಕ್ಷೆಯಲ್ಲಿ ೧ನೇ ವರ್ಗದಲ್ಲಿ ಉತ್ತೀರ್ಣರಾಗಿ ಸರ್ ಲೋರೆನ್ಸ ಜೆಂಕಿನ್ಸ ಶಿಷ್ಯವೃತ್ತಿಯನ್ನು ಪಡೆದಿರುತ್ತಾರೆಂದು ತಿಳಿಸಲು ಆನಂದವಾಗುತ್ತದೆ. ನಮ್ಮ ಜಿಲ್ಲೆಯವರಿಗೆ ಈ ಬಹುಮಾನ ಸಿಕ್ಕಿದ್ದು ಇದೇ ಮೊದಲು. ರಾ| ಭಟ್ಟರು ಬಾಲ್ಯದಿಂದಲೂ ಶಿಷ್ಯವೃತ್ತಿಗಳನ್ನು ಪಡೆಯುತ್ತಿದ್ದರು. ಕುಮಟೆಯ ಗಿಬ್ಸ ಹೈಸ್ಕೂಲಿನಲ್ಲಿ ಕಲಿತು ೧೯೨೮ರಲ್ಲಿ ಅವರು ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾಗಿ ಕರ್ನಾಟಕ ಕಾಲೇಜಿಗೆ ಹೋದರು. ಮುಂದೆ ಗಣಿತಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ಬಿ. ಏ. ಪರೀಕ್ಷೆಯಲ್ಲಿ ೩ನೇ ವರ್ಗದಲ್ಲಿ ಉತ್ತೀರ್ಣರಾದರು. ನಂತರ ಮುಂಬಯಿಗೆ ಹೋಗಿ ಎಲ್.ಎಲ್. ಬಿ., ಮತ್ತು ಎಮ್. ಏ. ಈ ಎರಡೂ ಪರೀಕ್ಷೆಗಳ ಅಭ್ಯಾಸ ಮಾಡಿ ಎಲ್.ಎಲ್. ಬಿ. ಪರೀಕ್ಷೆಯಲ್ಲಿ ೩ನೇ ವರ್ಗದಲ್ಲೂ, ಎಮ್. ಏ. ಪರೀಕ್ಷೆಯಲ್ಲಿ ೧ನೇ ವರ್ಗದಲ್ಲೂ ನಿಂತು ಯಶಸ್ವಿಗಳಾಗಿರುವರು. ರಾ| ಭಟ್ಟರಿಗೆ ಕನ್ನಡ-ಸಂಸ್ಕೃತ ಭಾಷೆಗಳಲ್ಲೂ ಪ್ರಭುತ್ವವಿದೆ. ರಾ| ಭಟ್ಟರು ನಮ್ಮ ಜಿಲ್ಲೆಯ ಹಾಗೂ ಕರ್ನಾಟಕದ ಹೆಸರು ತಮ್ಮ ಕೀರ್ತಿಯಿಂದ ಬೆಳಗಿದ ಬಗ್ಗೆ ನಾವು ಅವರನ್ನು ಮನಃಪೂರ್ವಕ ಅಭಿನಂದಿಸುತ್ತೇವೆ.

ಇಲ್ಲಿಯ ವೇ| ಶಾ| ಸಂ| ನರಸಿಂಹ ಸುಬ್ರಾಯ ಭಟ್ಟ ಕಕ್ಕಾರ ಇವರು ಕಳೆದ ವೈಶಾಖ ಬ| ತಿಂಗಳ್ಳ ದಿನ ಹಾಸಗಲ್ಲಿನಲ್ಲಿ ಶ್ರೀ ಪಾಂಡುರಂಗ ದೇವಾಲಯದೆದುರಿಗೆ ಹಾಸಗಲ್ಲ ಪ್ರಾಂತ ಸಂಘದ ವಿದ್ವನ್ಮಾನ್ಯ ಕೂಡಿದ ಸಭೆಯಲ್ಲಿ "ಧರ್ಮೇಣ ಹನ್ಯತೇ ವ್ಯಾಧಿರ್ಹನ್ಯಂತೇ ವೈ ಗ್ರಹಾಃ । ಧರ್ಮೇಣ ಹನ್ಯತೇ ಶತ್ರುರ್ಯತೋ ಧರ್ಮಸ್ತತೋ ಜಯಃ ॥" ಎಂಬ ವಿಷಯದ ಮೇಲೆ ಉಪನ್ಯಾಸ ಕೊಟ್ಟರು. ರಾ| ಭಟ್ಟರ ಉಪನ್ಯಾಸದಿಂದ ಕೂಡಿದ ವೈದಿಕರ ಮನಸ್ಸಿನ ಮೇಲೆ ಚಲೋ ಪರಿಣಾಮವಾಯಿತು.

ಹೊನ್ನಾವರ— (ತಾ. ೧೯-೬-೩೩) ಮಳೆ ಚನ್ನಾಗಿ ಬೀಳುತ್ತದೆ.

ಕೆಂಪು ಶಿರಿನಿಟಿಯವರು ಮೆಂಬರರನ್ನು ಕೂಡಿ ಸುತ್ತಿದ್ದಾರೆ. ಈ ಕನಕ ಗಣ ಸಭಾಸದರಾಗಿದ್ದಾರೆ.

ಇಲ್ಲಿ ಒಂದು ಸಣ್ಣ ಹುಲಿಯ ಉಪಟಳ ಅತಿಶಯವಾಗಿದೆ. ಮೇಯ ಹೋದ ದನಕರುಗಳನ್ನು ಹಿಡಿಯುತ್ತದೆ. ಮೊನ್ನೆ ಒಂದು ಆಕಳ ಕುತ್ತಿಗೆ ಹಿ. ಆಕಳು ತಪ್ಪಿಸಿಕೊಂಡು ಊರಲ್ಲಿ ಓಡಿ ಬಂತು. ಕುತ್ತಿಗೆಯಿಂದ ರಕ್ತ ಸುರಿಯುತ್ತಿತ್ತು. ಯಾರಾದರೂ ಪ್ರಜ್ಞಾವಂತರು ಹುಲಿಯ ನಿರ್ನಾಮ ಮಾಡಿ ಉಪಕರಿಸಬೇಕು.

ಮುಂಚಿ ಗ್ರಾಮದಲ್ಲಿ ಒಂದೆಡೆ ಮಣ್ಣು ಅಗೆಯುವಾಗ ಒಬ್ಬ ಹೆಂಗಸಿಗೆ ಕೆಲವು ಬಂಗಾರದ ನಾಣ್ಯಗಳು ಸಿಕ್ಕವು. ಮೇ| ಮಾಮಲೇದಾರರೂ ಪೋಲೀಸರೂ ಬಂದು ಚೌಕಶಿ ಮಾಡಿ ಕೆಲವು ನಾಣ್ಯಗಳನ್ನು ಕಚೇರಿಗೆ ತಂದಿದ್ದಾರೆ.

ನಗರ ಸಂಸ್ಥೆಯ ವರ ಎಸ್ಟೇಟು ಕೆಲಸ ನಡೆದಿದೆ. ಕಾಶಿಯವರ ಮನೆಯ ಮಾಲಿಗೆ ಮಣ್ಣು ತೆಗೆದು ಮಾರ್ಗದ ಮೇಲೆ ಹಾಕುತ್ತಾರೆ! ಈ ಮಣ್ಣಿನಲ್ಲಿ ಕಾಲಿನ ತುಂಬಾ ಕೆಸರು, ಹೀಗಾಗಿ ಸಂಚರಿಸುವವರಿಗೆ ಅಡಚಣೆಯಾಗುತ್ತದೆ! ನಗರ ಸಂಸ್ಥೆಯ ಸಭಾಸದರು ಒಂದು ದಿನ ಓಡಾಡಿ ನೋಡಿ ಅನುಭವ ಪಡೆಯಬಹುದು!!

ಭಟಕಳ— ಹೊಸದಾಗಿ ಕಟ್ಟಿಸಿದ ಭವ್ಯ ಸಭಾಗೃಹದಲ್ಲಿ ತಾ. ೧೮-೬-೩೩ಕ್ಕೆ ಪಾಠಶಾಲೆಯ ಇನ್ಸ್‌ಪೆಕ್ಟರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಸಭೆಯು ನಡೆಯಿತು. ಪ್ರವಾಸಿನ ಜನಾಲಿಯಾ ಕಾಲೇಜಿನ ವಿದ್ಯಾರ್ಥಿಗಳಾದ ಮೌಲವಿ ಸಯ್ಯದ ಅಬ್ದುಲ್ಲ

ಪಾಷಾ ಸಾಹೇಬ ಮುಂತಾದವರು ಉಪನ್ಯಾಸಕರಾಗಿ ಬಂದಿದ್ದರು. ಅವರ ಭಾಷಣವು ಬಲು ಜೋರಾಗಿದ್ದು ಹಾಗೂ ಚಿತ್ತವೇಧಕವಾಯಿತು. ಅವರು ಹೇಳಿದ್ದೇನೆಂದರೆ:—

"ಹಿಂದು-ಮುಸಲ್ಮಾನರು ಒಂದೇ ತಾಯಿಯ ಉದರದಲ್ಲಿ ಹುಟ್ಟಿದವರು. ಅವರೂ, ನಾವೂ ಅಣ್ಣ-ತಮ್ಮಂದಿರು. ಅಣ್ಣ-ತಮ್ಮಂದಿರಂತೆ ನಾವು ನಡೆಯಬೇಕು. ಆದರೆ ಸ್ವಾರ್ಥಕ್ಕಾಗಿ ನಮ್ಮೊಳಗೆ ಜಗಳ ಹುಟ್ಟಿಸುವ ಯತ್ನ ಮಾಡುತ್ತಾರೆ. ನಾವು ಈ ಕುತಂತ್ರಗಳಿಗೆ ಒಳಗಾಗಬಾರದು. ನಾವು ಹುಸ್ತ್ರಧಾರವಿಲ್ಲದ ಒಂದು ಮೂರ್ಖ ಕಲ್ಪನೆಗೆ ಅಂಟಿಕೊಂಡಿದ್ದೇವೆ. ನಮ್ಮ ವೈರಿಗಳ ಮುಂದೆ ನಾವು ಬಾಗಬೇಕಾಗಬಾರದೆಂಬುದೇ ಆ ಕಲ್ಪನೆ. ಹಿಂದು-ಮುಸಲ್ಮಾನರಲ್ಲಿ ಕಲಹಗಳಾಗಲಿಕ್ಕೆ ಇದೇ ಮುಖ್ಯ ಕಾರಣ. ಈ ಕಲ್ಪನೆಯನ್ನು ನಾವು ಬಿಟ್ಟುಬಿಡೋಣ; ಹಿಂದು ಬಾಂಧವರೊಡನೆ ಪ್ರೇಮದಿಂದಿರೋಣ."

ಚೆಂಡಿಯೆ— ಒಬ್ಬ ಗೃಹಸ್ಥರು ಬರೆಯುತ್ತಾರೆ:— "ಇಲ್ಲಿಯ ಕನ್ನಡ ಶಾಲೆಯಲ್ಲಿ ಬೇರೆಯ ಶಿಕ್ಷಕ ಕೊಡಬೇಕೆಂದು ಸರಿಸುಮಾರು ಕೇಳಿದರೂ ಸಿಗಿ ರಾಯರು ಸ್ಕೂಲ ಮಾಡಿದರೆ, ಬೇರೆಯವರ ವಿಷಯಗಳು ಹರಿದಾಗ ಕಲಿಸುವುದು ಇಲ್ಲವಂತೆ. ಬೇರೆಯವರ ಶಿಕ್ಷಣವು ಸಮರ್ಪಕವಾಗುವುದಿಲ್ಲ. ಪ್ರಯೋಗದ ಹೊಲ ನೋಡಿದರೆ ಹಾಗಿನ ತಿಳಿಯುವಂತಿದೆ; ವಿದ್ಯಾರ್ಥಿಗಳ ಹೆಸರಲ್ಲಿ ಇಟ್ಟ ಕೃಷಿಯ ವಸ್ತುಗಳ ಜ್ಞಾನ ಆ ವಿದ್ಯಾರ್ಥಿಗಳಿಗೆ ಆಗೋ ಇಲ್ಲವೆಂಬುದು ಪ್ರಶ್ನೆ. ಪ್ರಯೋಗದ ಹೊಲವು ಶಾಲಾ ಶಿಕ್ಷಕರ ಪಾಲಿನದು. ಶಿಕ್ಷಕರಿಗೂ ಶಾಲಾ ಬೋರ್ಡಿನವರಿಗೂ ಇದು ಕೇಳುವಂತೆ ಹೊಲದಲ್ಲಿ ವ್ಯವಸ್ಥೆಯಾಗಿರುವದಿಲ್ಲ. ಈ ವರ್ಷ ಆ ಹೊಲ ವಿದ್ಯಾರ್ಥಿಗಳು ಮುಲ್ಕಿ ಪರೀಕ್ಷೆಗೆ ಹೋಗಿದ್ದರು. ಯಾರೂ ಉತ್ತೀರ್ಣರಾಗಿಲ್ಲ. ಹುಡುಗರು ಸರಿಯಾಗಿ ಗಳಿಕೆಗಳ ಬರಲಿಕ್ಕೆ ಹೋಗಲು ಅಂಬಿಸುತ್ತಾರೆ; ಶಾಲೆಯಲ್ಲಿ ೧೦ ವಿದ್ಯಾರ್ಥಿಗಳಿದ್ದಾರೆ. ೫-೬-೬ನೇ ಇಯತ್ತೆಗಳಲ್ಲಿ ೧೯ ಜನರಿದ್ದಾರೆ. ಅವರಿಗೆ ಮಾತ್ರ ಬೇರೆಯದೇ ಶಿಕ್ಷಣ. ಇದರ ವ್ಯವಸ್ಥೆ ಬಗ್ಗೆ ಅಧಿಕಾರಿಗಳೂ ಅದರ ಹಾಗೆ ಪ್ರಶ್ನೆ ಮಾಡಿದರು. ಬೋರ್ಡಿನವರು ಇತ್ತ ಲಕ್ಷ್ಯಕೊಟ್ಟು ಸುಧಾರಣೆ ಮಾಡಿ ಕರುಣಿಸರೇನು?"

ಜಾಹೀರಾತು.

॥ಓಂ॥ ॥ ಶ್ರೀ ಸದ್ಗುರು ಸಿದ್ಧಾರೂಢ ಪ್ರಸನ್ನ ॥

ಬಹುಮಾನಗಳನ್ನೂ, ಪ್ರಶಸ್ತಿಪತ್ರಿಕೆಗಳನ್ನೂ ಪಡೆದ

ಜ್ಯೋತಿಷಿ ಜಗನ್ನಾಥ ಗಣೇಶ ದೇಸಾಯಿ ಸಾತರಪೇಕರ, ಪಣಜಿ

(ಗೋವಾ) ಆಫೀಸು— ಡಾ|| ಚಿಕ್ಕಮಂಗಳೂರರ ಮನೆಯ ಹತ್ತಿರ, ಕುಮಟಾ. (ಉ. ಕ.)

ನಾವು ಜಾತಕ ನೋಡಿ ಜ್ಯೋತಿಷ ಹಾಗು ಹಸ್ತ-ಪರೀಕ್ಷೆ ಮಾಡಿ ಭೂತ-ವರ್ತಮಾನ-ಭವಿಷ್ಯಗಳನ್ನು ವಿವರವಾಗಿ ತಿಳಿಸುತ್ತೇವೆ. ಅನೇಕ ಜನರು ಅನುಭವ ಕೊಂಡು ಪ್ರಶಸ್ತಿ ಪತ್ರ ಕೊಟ್ಟಿದ್ದಾರೆ. ಕುಮಟೆಯಲ್ಲಿ ಮುಕ್ಕಾಮು ಇನ್ನೇ ೧ ತಿಂಗಳು! ಬೇಕಾದವರು ಅನುಭವ ಕೊಳ್ಳಬಹುದು.

Siromani Udipi Narayanacharya,

CHAUKHAMBA, BENARES CITY.

S. U. N. & CO. BENARES CITY.

ಮುಖಾತಪದೇ, ರುದ್ರಾಕ್ಷಿ. ಶ್ರೇಷ್ಠವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಶ್ರಿ. 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಕಡಿಮೆವಾಗು. ಕಂಠಿ ಸರ 32 ಪದರ 1ಕ್ಕೆ ರೂ.0-8-0ಯಿಂದ ರೂ. 100 ವರೆಗೆ. ಗೌರಿಶಂಕರ 1ಕ್ಕೆ ರೂ. 3-8-0ರಿಂದ ೨೦ ವರೆಗೆ ಮತ್ತು ಬೇರೆ ಪದಾರ್ಥಗಳ ಪಿವರ ತಿಳಿಯಲು ಅಪೇಕ್ಷಿಸುವವರು 0-1-0ಸ್ಟಾಂಪು ಕಳಿಸಿದರೆ, 1 ಕಾರ್ಡ ಪತ್ರ, 1 ಪಿಕ್ಚರ್ ಸಹಿತ ಸರ್ವ ಕಟಲಾಗು ಸಹ ಉಚಿತ ಕಳಿಸಲಾಗುವುದು.

ಪತ್ತೆ:- ಶಿರೋಮಣಿ ನಾರಾಯಣಾಚಾರ್ಯ, ಚೌಖಾಂಬಾ, ಕಾಶೀ ಕ್ಷೇತ್ರ.

Established 1900. ಓಂ FIXED RATE.

ದಾಸಪ್ಪಾ ಕೃಷ್ಣಪ್ಪಾ ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರಸಿ.

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರೇಷ್ಮೆಯ ಖಣಗಳೂ, ಕೋಟಿಂಗ ಪರ್ಟಿಂಗ ಪ್ಯಾರಶೋಟಿಂಗ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರೀ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಷ್ಮೆ ಜಲ್ಪರ ಮಡಿಗಳೂ, ನಾರ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಟ್ಟಿಗೆಯ ಮಜಬೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಬಿಕರಿಗೆ ಸಿದ್ಧವಿದ್ದು ಯಾರೂ ಮೋಸ ಹೋಗುವ ಚಿಂತೆಯಿಲ್ಲದೆ ಭಯವಿಲ್ಲದೆ ಸೋಯಿ ದರದಿಂದ ಸಿಗುವವು. ಹೋಲ್‌ಸೇಲ್ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel:- "Honesty." D. K. DHAKAPPA BROS.,

ಹೊಸ ಮಾಲು. Cloth Merchants, SIRSI. N. KANARA. ದರ ಅಗ್ಗ.

ಅಲ್ಲಲ್ಲಿ ಇಷ್ಟಿಷ್ಟು!

[ಒನೇ ವಾನಿನಿಂದ ಮುಂದುವರಿಸಿದ್ದು]

ಘಲುರಾಮ್, ಶ್ರೀ| ಜಯರಾಮದಾಸ ದೌಲತರಾಮ ಮತ್ತು ಡಾ| ಚೊಯಿತರಾಮ ಗಿಡವಾನಿ ಈ ಪ್ರಕಟ [illegible] ಮುಂದಿ ಪಕ್ಷದ ಸಿಂಧಿ [illegible] ಗಿದೆ ಈ ಮಂಡಳದವರು ಅಲ್ಲಲ್ಲಿ [illegible] ಪತ್ರ [illegible] ನಿವಾರಣೆ ಮಾಡವೆ [illegible] ವರು ಸರಕಾರಿ ಧೋರಣದ ಮೂಲಕ ಮಾಡಿದ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಹಾರಡಿಸಿದ ಮಂದ [illegible] ದ ವೇಳಿನ ಕಲವರು [illegible] ಕೆಲವರು [illegible] ಕೆ [illegible] ವಿಚಾರದಲ್ಲಿ [illegible] ಭೂಕಂಪದಿಂದ [illegible] ವರು [illegible] ಮದ್ದುಗುಂಡ [illegible] ವೆಂದೂ, ಭೂಕಂಪವ [illegible] ಅಪತ್ತಿಗ ಕಾರಣವೆಂದೂ ಹಿಂದೂಸ್ಥಾನ ಸರಕಾರದ [illegible] ಸಿದ ಇನ್ನೂ [illegible] ತಗಲುವ [illegible] ಸಾವಿರ ಜನರು [illegible] ಯೂ ಅವರಿಗೆ [illegible] ತ್ರಿತ್ತಾಗಿ [illegible] ಯುತ್ತಾರೆ [illegible] ಕಂಪ್ಪ [illegible] ಕೆಲಸವನ್ನು [illegible] ವರು [illegible] ಮತ್ತು [illegible] ಸರ [illegible] ಧ ಬರವರು [illegible] ಯುವ ಕಲಸವನ್ನು [illegible] ಈ ಕೆಲಸವನ್ನು ಸಹಿಸಲು ಸಿದ್ಧನಿದ್ದಾನೆ' [illegible] ದಾಗಿ ಇವರು ಬರಯುತ್ತಾರೆ

***

ಮತ್ತೊಂದು ವರ್ತು ಭೂಕಂಪದಲ್ಲಿ ಬದುಕಿ [illegible] ಆಸ್ಪತ್ರೆಗಳಲ್ಲಿಯೂ, [illegible] ಯಗಳಲ್ಲಿಯೂ ಇಟ್ಟಿದ್ದಾರೆ ತಾಯಿ-ತಂದೆಗಳು ತಮ್ಮ ತಮ್ಮ ಹಕ್ಕು ಸಿದ್ಧ ಮಾಡಿ ಆ [illegible] ಒಯ್ಯಬೇಕೆಂದು ಸರಕಾರಿ ಪ್ರಕಟನೆ ಒಬ್ಬ ಸಿಂಧಿ ಹೆಂಗಸು [illegible] ಮಹಿಳಾ ಮಹಾವಿದ್ಯಾಲಯ [illegible] ತನ್ನ [illegible] ಕೊಡಹೇಳಿದಳು ಸಿಟಿ ಮೆಜಿಸ್ಟ್ರೇಟರು ಪುರಾವೆ ಕೊಟ್ಟು ಸಿದ್ಧ ಪಡಿಸಬೇಕಾಗಿ ಹೇಳಿದರು ಭೂಕಂಪದಲ್ಲಿ ಆವ-ಗಂಡನು [illegible] ಎಂದ [illegible] ವರು? ಅವಳು ಬಿಕ್ಕಿ ಬಿಕ್ಕಿ ಅತ್ತು ಹೋದ ಮತ್ತೇನು ಮಾಡುವಳು?

***

ದಿವಾಣ [illegible] ಮುರಲೀಧರರವರು ಸೈನ್ಯಾಧಿಕಾರಿಗಳು ಭೂಕಂಪವಾದ ಬಳಿಕ ನಡಿಸಿದ ಕಾರ್ಯಕ್ರಮದ ವರ್ಣನೆ ಮಾಡಿದ್ದಾರೆ "ಜನರನ್ನು [illegible] ಯುವದಕ್ಕಾಗಿ ಇವರು ಶಕ್ತಿಯಿಂದ ಪ್ರಯತ್ನ ಮಾಡಲಿಲ್ಲ [illegible] ಆಕ್ರೋಶ [illegible] ಬಿದ್ದಲ್ಲಿ ಇವರು [illegible] ಜನರಿಗೆ ಬದುಕಿದ್ದಾರೆ [illegible] ಇವರು ಬಂದಾಗ ಹೂಳಬಿದ್ದ ಜನರು ಆಕ್ರೋಶ ಮಾಡದಿದ್ದಲ್ಲಿ [illegible] ಕಾರಣಾಂತರದಿಂದ ಆಕ್ರೋಶ [illegible] ಗದಿದ್ದಲ್ಲಿ ಆ ಜನರೆಲ್ಲರೂ ನೆಲದ ಡಿಯಲ್ಲಿಯೇ [illegible] ಬೇಕಾಗಿದೆ ಸರಕಾರವು [illegible] ಯುವವರ [illegible] ಸಹಕರಿಸಲು ಸಂತೋಷಪಡದಿದ್ದವರಿಂದ [illegible] ವ್ಯಾಪಾರಿಗಳ [illegible] ಲೋಕಪ್ರತಿನಿಧಿಗಳು ಕೂಡ [illegible] ವನ್ನು ನಿರಾಕರಿಸಿದ್ದು ತಪ್ಪು [illegible] ಅವರು [illegible] ಪತ್ರಿಕೆಯಲ್ಲಿ ಬರೆಯುತ್ತಾರೆ ರಾಷ್ಟ್ರೀಯ ಸಭೆಯವರ [illegible] ಮೂಲಕ ೧೦-೧೫ ಸಾವಿರ [illegible] ಸ್ವಾತಂತ್ರ್ಯ [illegible] ಮಾಡುವ ಪ್ರಸಂಗ [illegible] ಸ್ಥಿತಿ [illegible] ವ್ಯಸನವಾಗುತ್ತದೆ

***

ಕಲಾತ ಸಂಸ್ಥಾನಿಕರು [illegible] ವಿವಾರ ಅಹಮ್ಮದ [illegible] ಈ ಭೂಕಂಪದಲ್ಲಿ [illegible] ಮಡಿಯುತ್ತಿದ್ದರು ಆ [illegible] ವನ್ನು ಒಪ್ಪಿ ಪಕೀರನು ತಪ್ಪಿಸಿದನು ಕ್ವೆಟ್ಟಾದಲ್ಲಿ [illegible] ಅರಮನೆ ಇತ್ತು [illegible] ವಾಸ ಮಾಡುತ್ತಿದ್ದರು ಭೂಕಂಪವಾಗುವ ಮುಂಚಿನ ದಿನ ವಿವಾರ ಮಹಮ್ಮದ [illegible] ಪಕೀರ [illegible] ಅರಮನೆಯಲ್ಲಿ ಮದುವೆ ಮಾಡಬೇಕಾಗಿ [illegible] ಪಕೀರ [illegible] ಅವರು ಎಲ್ಲಿಯಾದರೂ [illegible] ದರ್ಶನ ಕೊಡುತ್ತಾರೆ ಮದುವ [illegible] ಕೆಲವು ದಿನಗಳ ಮುಂಚೆ ಅವರು ಕ್ವೆಟ್ಟಾ ಅರಮನೆಗೆ ಬಂದು ಅಲ್ಲಿ ಅರಘಳಿಗೆ ನಿಲ್ಲಲಾಗದೆಂದೂ ಮದುವೆಯನ್ನು ಸಂಸ್ಥಾನದ ರಾಜಧಾನಿಯಾದ ಕಲಾತದಲ್ಲಿ ನೆರವೇರಿಸಬೇಕೆಂದೂ ಹಟಹಿಡಿದರು ದೊಡ್ಡ ದೊಡ್ಡ ಸರದಾರರು ಇದಕ್ಕೊಪ್ಪಲಿಲ್ಲ ಕ್ವೆಟ್ಟಾ ಅರಮನೆಯಲ್ಲಿಯೇ ವಿವಾಹ ಸಮಾರಂಭವನ್ನು ನೆರವೇರಿಸುವದುಚಿತವೆಂದು ಪ್ರತಿಪಾದಿಸಿದರು ಸಂಸ್ಥಾನಿಕರಿಗೆ ಪಕೀರರ ಮೇಲೆ ಭಕ್ತಿ ವಿಶೇಷ ಕೂಡಲೆ ಕ್ವೆಟ್ಟಾ ಪಟ್ಟಣವನ್ನು ತ್ಯಜಿಸಿ ಕಲಾತಕ್ಕೆ ತೆರಳಿದರು ಅಲ್ಲಿ ಸಂಕಲ್ಪದಂತೆ ಮದುವೆಯಾಯಿತು ಕ್ವೆಟ್ಟಾ ಅರಮನೆಯು ಭೂಕಂಪದಲ್ಲಿ ಕಡಕಡನೆ ಕುಸಿದು ಬಿತ್ತು ಈಗ ಕಲ್ಲು-ಮಣ್ಣಿನ ರಾಶಿಯಾಗಿದೆ ಆಯುಷ್ಯವಿದ್ದರೆ, ಪರಮಾತ್ಮನ ಅನುಗ್ರಹವಿದ್ದರೆ, ಸಾವುಗಳ ಅವೀ [illegible] ಬದುಕುವದೆಂದು ಹೀಗೆ!

***

ಕಲಾತ ಸಂಸ್ಥಾನದ ಕೆಲ ಭಾಗಗಳಲ್ಲಿಯೂ ಭೂಕಂಪವಾಗಿದೆ ಸಂಸ್ಥಾನಿಕರು ಸ್ವತಃ ಸಂಕಟವಾದ ಜನರಿಗೆ ಒದಗಿಸುವದಕ್ಕಾಗಿ ಪ್ರಯತ್ನ ಮಾಡಿದರು ಹಿಂದು-ಮುಸಲ್ಮಾನ ಪ್ರಜೆಗಳಿಗಲ್ಲ ಅನ್ನ ಸಾಮಗ್ರಿ ಪೂರೈಸಿದರು, ಔಷಧೋಪಚಾರದ ಏರ್ಪಾಟು ಮಾಡಿದರು ದೇವಸ್ಥಾನದ ಗುಡಿಗಳೆಲ್ಲ ನೆಲಸಮವಾದಾಗ್ಯೂ, ಶ್ರೀ ದೇವರ ಮೂರ್ತಿಗಳಿಗೆ ಏನೊಂದೂ ಪೆಟ್ಟಾಗಲಿಲ್ಲ ಇದೊಂದು ಚಮತ್ಕಾರವೆಂದು 'ಮುಂಬಯಿ ಕ್ರೊನಿಕಲ್' ಪತ್ರಿಕೆಯ ಕಾಬೂಲದೊಳಗಿನ ಸುದ್ದಿ

THE INDIAN MERCANTILE INSURANCE CO. LTD.,
BOMBAY.

(Established in 1907)

A solid and purely Indian Life Office which has substantial growth under the Chairmanship of the late Sir Manmohandas Ramji, Kt.

WANTED Energetic & Influential Agents and experienced Organisers, both on commission & pay for the Karnatak Districts.

For particulars apply to—

G. Yellapurkar & Sons,
Chief Agents for Karnatak,
Market Square, KARWAR.

ಇಂಡಿಯನ್ ಮರ್ಕಂಟೈಲ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್.
ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಸ್ಥೆ

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ್, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿಹೊಂದಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಲೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ ವಜನದಾರ ಏಜಂಟರು ಬೇಕು, ಅನುಭವಿಕ ಆರ್ಗನೈಝರು ಬೇಕು ಕಮಿಶನ್ ಹಾಗು ಪಗಾರ ಸಿಗುವದು ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರಯಿರಿ

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆ ಪೇಟೆ ಕಾರವಾರ

ನಾರಿರು ಒರಯು ತ್ತಾರ ಕಲಾತದಲ್ಲಿ ಒ ಅದಿ ತಗ್ಗಿನಲ್ಲಿ ಒಂದು ನಾಯಿ ಹುಗಿದುಬಿದ್ದಿತ್ತು ಆದು ಪಝಾಯಿವರ್ ಅಂದರ ಮುಖ್ಯ ಪ್ರಧಾನರ ನಾಯಿ ಮುಖ್ಯ ಪ್ರಧಾನರು ಒಂದು ದಿನ ಛಕ್ಕಾಗಿ ಹುಡುಕಿದರು ಎರಡನೇ ದಿನ ಬಹು ಪ್ರಯತ್ನದಿಂದ ಅಗೆಸಲು, ಒಂದಡೆ ಒದ್ದಾಡುವ ಶಬ್ದ ಕೇಳಿತು ಅಲ್ಲಿ ಅಗಿಯಲು ನಾಯಿ ಸಿಕ್ಕಿತು ನಾಯಿಗೆ ಸ್ಮೃತಿ ತಪ್ಪಿಹೋಗಿತ್ತು ನೀರು ಹಾಕಿ ಸಮಾಧಾನ ಮಾಡಬೇಕಾಯಿತು ಗ್ರಾಮಗಳಲ್ಲಿ ಬಹು ಅನರ್ಥವಾಗಿದೆ ಮನೆ—ಮಾರು ನೆಲಸಮವಾಗಿವೆ ಬದುಕಿ ಉಳಿದವರು ಕೀರ ಕಡಿಮೆ ಗುರು ಗ್ರಾಮದೊಳಗಿನ ಸೃಷ್ಟಿಚಮತ್ಕಾರ ನಮೂದಿಸತಕ್ಕದಾಗಿದೆ ಈ ಗ್ರಾಮದಲ್ಲಿ ಗೋದಿ ಬೆಳೆಯುವ ವಿಸ್ತೀರ್ಣ ಪ್ರದೇಶವಿದೆ ಇದಕ್ಕೆ ಕ್ರೀಯುಸ್ ಯಾನೆ ನೀರಿನ ಕಾಲುವೆಗಳಿಂದ ನೀರಿನ ಪೂರೈಕೆಯಾಗುತ್ತಿತ್ತು ಭೂಕಂಪದಲ್ಲಿ ಈ ಕಾಲುವೆಗಳು ಪೂರ್ಣ ಬತ್ತಿಹೋದವು ಜನರಿಗೆ ಕುಡಿಯಲಿಕ್ಕೂ ಬೇರೆ ಉಪಯೋಗಕ್ಕೂ ಇದೇ ನೀರ ಕೆಲವು ಬಾವಿಗಳಿದ್ದವು ಅವು ಸಹ ಬತ್ತಿಹೋದವು ಜನರಿಗೆ ಕುಡಿಯುವ ನೀರಿಲ್ಲದೆ ಕಷ್ಟವಾಯಿತು ಅಷ್ಟರಲ್ಲಿ ಬಳಿಯಲ್ಲಿದ್ದ ಗಡ್ಡದೊಳಗಿಂದ ನೀರು ಹರಿದು ಬಂದು ಭೂಕಂಪದಿಂದ ಈ ಗುಡ್ಡಗಳು ಸೀಳಿದವು ನಾಲ್ಕು ದಿನಗಳ ನಕ ನೀರಿನ ಪೂರೈಕೆಯಾಯಿತು ಅಷ್ಟರಲ್ಲಿ ಜನರು ಹೊಸ ಬಾವಿಯನ್ನು ಕಡಕೊಂಡರು ಇನ್ನೊಂದು ತಿಂಗಳೊಳಗೆ ಗೋದಿಯ ಬೆಳೆ ತಯಾರಾಗುವದು ಅನಕವರಗೆ ಸಂಸ್ಥಾನಿಕರು ಸಮಸ್ತರಿಗೆ ಅನ್ನ-ಸಾಮಗ್ರಿಯನ್ನು ಪೂರೈಸುವರು ನೀರಿನ ಪೂರೈಕೆಯಾದ ಸೃಷ್ಟಿಚಮತ್ಕಾರ ಕೇಳಿದರೆ ಕನಕದಾಸರ 'ತಲ್ಲಣವಗೊಳ್ಳದಿರು' ಪದ್ಯದ ನೆನಪಾಗುತ್ತದೆ —

ತಲ್ಲಣವಗೊಳ್ಳದಿರು ಎಲೆ ಮಾನವಾ।
ಕೊಳ್ಳು ಶಾಂತಿಯ ಸ್ವಾಮಿ ರಕ್ಷಿಸುವ ನಿನ್ನ॥
ಅಡವಿಯೊಳಗಾಡುವ ಮೃಗಜಾತಿ ಪಕ್ಷಿಗೆ।
ಆಹಾರವಿತ್ತವರಾರೋ॥
ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗಾರನಾಗಿ।
ಬಿಡದೆ ರಕ್ಷಿಸುವನು ಸಂದೇಹ ಬೇಡ॥
ಬೆಟ್ಟದ ತುದಿಯಲ್ಲಿ ಬೆಳೆದಿರ್ಪ ವೃಕ್ಷಗಳಿಗೆ।
ಕಟ್ಟೆಯನು ಕಟ್ಟಿ ನೀರೆರೆದವರಾರೋ॥
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು।
ಕೊಟ್ಟು ರಕ್ಷಿಸುವನು ಸಂದೇಹ ಬೇಡ॥
ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ।
ಅಲ್ಲಲ್ಲಿಗಾಹಾರವಿತ್ತವರಾರೋ॥
ಇಲ್ಲಿಹನು ಕಾಗಿನೆಲೆಯಾದಿ ಕೇಶವರಾಯ।
ನಿಲ್ಲದೆ ರಕ್ಷಿಸನು ಸಂದೇಹ ಬೇಡ॥

ಈ ಪ್ರಕಾರ ಆದಿಕೇಶವರಾಯನು ರಕ್ಷಿಸುವವನಿರಲು, ಮಾನವನು ತಲ್ಲಣವಗೊಳ್ಳುವದು ವಿಹಿತವೇ!

* * *

ಭೂಕಂಪವಾಗುವ ಮುಂಚೆ ಬಿಲ್ಚಿನ್ ಬೆಟ್ಟದ ಪಾರ್ಶ್ವದಿಂದ ಮಿಂಚು ಹೊಳೆಯಿತು ಅಲ್ಲಿಂದ ಅದು ಕಲಾತ ಪಟ್ಟಣದ ಕಡೆ ಹಾಯು ಮೂಡಿತು. ಕೂಡಲೆ ಒಂದು ಪ್ರಕಾರದ ಧ್ವನಿಯಾಗಿ ಪಕ್ಕನೆ ಭೂಮಾತೆ ನಡುಗಿತು. ಕಲಾತ ಪಟ್ಟಣದಲ್ಲಿ ಭೂಕಂಪ ಪ್ರದೇಶ ತಗ್ಗಾಗಿರುವದಾಗಿಯೂ, ಭೂಕಂಪ ಪ್ರದೇಶದ ಸೀಮೆಗುಂಟ ಸಣ್ಣ ದರೆ ಬಿದ್ದಿರುವದಾಗಿಯೂ ತಕ್ಕ ಮಟ್ಟಿಗೆ ೭೫ ಮೈಲು ಉದ್ದವಾಗಿ ಈ ದರೆ ಕಾಣುತ್ತದಾಗಿಯೂ, ಕೆಲವಡೆ ೮ ಫೂಟು, ಕೆಲವಡೆ ೩೦ ಫೂಟು ಅಗಲವಾಗಿರುವದಾಗಿಯೂ ಹೇಳುತ್ತಾರೆ. ಭೂಕಂಪ ಪ್ರದೇಶದ ಮಿರಿ ಗ್ರಾಮದಲ್ಲಿ ಕಲಾತ ಸಂಸ್ಥಾನಿಕರ ಪುರಾತನ ಅರಮನೆ ಇತ್ತು ಇದನ್ನು ಕಟ್ಟಿ ೭೦೦ ವರ್ಷಗಳಾದವಂತೆ ಈ ಭೂಕಂಪದ ಮೂಲಕ ಕೆಲವೆಡೆ ಹೊಲ-ಮನೆಗಳು ಎತ್ತರವಾದವು ನೀರು ಬರುವ ಕಾಲುವೆಗಳು ತಗ್ಗಾದವು ಇದರಿಂದ ಹೊಲಗಳಿಗೆ ಸಿಗತಕ್ಕ ನೀರಿನ ಆಶ್ರಯ ಕಟ್ಟಾಗಿ ಅನೇಕ ಹೊಲಗಳು ಒಂಟಿದು ಬೀಳುವ ಪ್ರಸಂಗ ಬಂದಿದೆ ಕಲಾತದಿಂದ ೧೫ ಮೈಲು ದಕ್ಷಿಣಕ್ಕೆ ಜ್ವಾಲಾಮುಖಿಯೊಂದಾದಿಯಲ್ಲಿ ಒಂದು ಬಾವಿಯಾಗಿದೆ. ಇದೊಂದು ನೋಡತಕ್ಕಂಥ ದೃಶ್ಯವೆಂದು 'ಕ್ರಾನಿಕಲ್' ಪತ್ರಿಕೆಯ ಕ್ವೆಟ್ಟಾ ಸುದ್ದಿಗಾರರು ಬರೆಯುತ್ತಾರೆ

* * *

ಕಲಾತ ಸಂಸ್ಥಾನದೊಳಗಿನ ಅರ್ಥಸಚಿವರಾದ ಖಾನಬಹಾದ್ದೂರ ಗುಲಮಹಮ್ಮದರವರ ಕಥೆ ಕೇಳಿದರೆ ಕರಳು ಕರಗಿ ನೀರಾಗುತ್ತದೆ. ಖಾನ ಬಹಾದ್ದೂರರು ಕೋಟ್ಯಾಧೀಶರು ಆದರೆ ಕ್ವೆಟ್ಟಾ ಭೂಕಂಪದಲ್ಲಿ ಹೆಂಡರು-ಮಕ್ಕಳನ್ನೂ ಸಕಲೈಶ್ವರ್ಯವನ್ನೂ ಕಳಕೊಂಡು ನಿರ್ಗತಿಕರಾಗಿದ್ದಾರೆ ಜಾಕೊಬಾಬಾದಕ್ಕೆ ಬರಲು ಇವರ ಕಡೆ ಹಣವಿರಲಿಲ್ಲ ಉಚಿತವಾಗಿ ಇವರಿಗೆ ಕಳಿಸಿಕೊಡಲಾಯಿತು ಜಾಕೊಬಾಬಾದ ಸ್ಟೇಶನಿನಲ್ಲಿ ಮುಸಲ್ಮಾನ ಸ್ವಯಂಸೇವಕರು ನಿರ್ಗತಿಕರಿಗೆ ತಿನ್ನಲಿಕ್ಕೆ ಅವರೆ, ಕುಡಿಯಲಿಕ್ಕೆ ನೀರು ಹಂಚುತ್ತಿದ್ದರು ಖಾನಬಹಾದ್ದೂರರಿಗೆ ೨ ದಿನಗಳಿಂದ ಉಪವಾಸ ದರ್ಮವಾಗಿ ಹಂಚುವ ಅವರೆಗಳನ್ನ ಪಡೆಯಲು ಕೈ ನೀಡಿದರು ಅವರ ಕೈ ಮೇಲೆ ಬಿದ್ದೊಡನೆ ಬಿಕ್ಕಿ ಬಿಕ್ಕಿ ಅಳಹತ್ತಿದರು. ಕಣ್ಣೀರು ಧಾರೆಯಾಗಿ ಸುರಿಯಲಾರಂಭಿಸಿತು ಸ್ವಯಂಸೇವಕರಿಗೆ ಏನೆಂದು ಪತ್ತೆ ಹತ್ತಲಿಲ್ಲ ಮೈಮೇಲೆ ಹರಕು ಅಂಗಿ, ಬರಿಗಾಲು, ಮೈತುಂಬ ಧೂಳು ಇವುಗಳಿಂದ ಖಾನ ಬಹಾದ್ದೂರರ ಮುಖಚರ್ಯೆಯೇ ಬದಲಿ ಹೋಗಿತ್ತು ಸೂಕ್ಷ್ಮವಾಗಿ ವಿಚಾರಿಸಲು ಖಾನ ಬಹಾದ್ದೂರರ ಅವಸ್ಥೆ ಜನರಿಗೆ ತಿಳಿಯಿತು ಕೋಟ್ಯಾಧೀಶರು ಭಿಕ್ಷಾಪತಿಗಳಾಗಿ ಧರ್ಮದಿಂದ ಹಂಚುವ ಅವರೆ—

[೫ನೇ ಪಾನಿನ ಮೇಲೆ ಮುಂದರಿಸಿದೆ]

ನಮ್ಮ ಜಯಭೇರಿ!

ಮಕ್ಕಳಿಗೆ ಆಗುವ ಭಯಂಕರವಾದ ಲಿವರ್ ಕಂಪ್ಲೇಂಟು (ಕುಮರ್ವ್ಯಾಧಿ) ಮತ್ತು ಜ್ವರಗಡ್ಡೆಗೆ **ಜಮ್ಮಿ ವೆಂಕಟರಮಣಯ್ಯನವರು**

'ಲಿವರ್ ಕ್ಯುಅರ್' (ರಿಜಿಸ್ಟರ್ಡ್)

ಎಂಬ ದಿವ್ಯೌಷಧವನ್ನು ತಯಾರಿಸುವದರಲ್ಲಿ ಸಂಪೂರ್ಣ ಜಯ ಹೊಂದಿರುತ್ತಾರೆ.
ಶುದ್ಧವಾದ ದೇಶಿ ಸಾಮಾನುಗಳಿಂದ ಇದನ್ನು ತಯಾರಿಸಿರುವದರಿಂದ ಅದು ಪೂರ್ಣ ತೃಪ್ತಿ ಕೊಡುವುದೆಂದು ನಮ್ಮ ಭರವಸೆ ಈ ಔಷಧವು ಕಾಹಿಲೆಯನ್ನು ಗುಣ ಮಾಡುವುದಲ್ಲದೆ ಕಾಹಿಲೆಯೂ ಬಾರದಂತೆ ಮಾಡುವುದರಿಂದ ಮತ್ತಿಷ್ಟು ಜನರ ತೃಪ್ತಿಗೆ ಕಾರಣವಾಗಿದೆ ಹೆಚ್ಚಿನ ಮಾಹಿತಿಗೆ ಈ ದಿನವೇ ಬರೆಯಿರಿ

ಉತ್ತರ ಕನ್ನಡ ಮತ್ತು ಪೋರ್ತುಗೀಜ ಸೋಲ ಏಜಂಟರು —

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ.ಕ)

ಸುಲಭ ಕ್ರಯ! **ಡಾಕ್ಟರ ಜೇ ಬೀ. ಯವರ ಸುಗಂಧಿ ನಸ್ಯದ ಪುಡಿ.** ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಿಕೆಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಏಲ್ಪಟ್ಟರ್ವ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ ಮೂರು ಬೆಟ್ಟನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ, ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸೆ ಉತ್ಕೃಷ್ಟ ಕಳಿಸಲಾದೀತು
ಒಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ಪ್ಲಿ ಪಿ ೪ ಬಳ ಡಜನ್ ಗಕ್ಕೆ ರೂ ೨-೮-೦ ವಿ. ಪಿ ೦-೨-೦
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ
ಪತ್ತೆ – **ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ ಬಾ ೫೧೦ ಮಾರ್ಕೆಟ್‌ನ ಮದರಾಸ**

ॐ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆರ್ಯ ವೈದ್ಯರ ಕಡೆಗೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲಿಯೂ ಸಿಗುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕೊಡದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಯಾಗಿ ಎಂಥ ಅಶಕ್ತತೆ ಇದ್ದರೂ ದೂರ ಮಾಡಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನೂ ಹುಟ್ಟುಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಸ್ನಾಯು, ವಾಂತಿ,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಶೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅರ್ಶರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಶುಚಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ, ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ನರಗಳ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹುಟ್ಟಿಕೊಂಡಿರುವಂಥ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗುತ್ತದೆ.

ವಿಶೇಷವಾಗಿ ಹೆಂಗಸರಿಗೆ:— ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸ ಸಂತೆ ೧೨ ದಿವಸಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ಸನಾರೋಗ್ಯವತಿಯಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿ ೧ಕ್ಕೆ ರೂ. ೧—೪—೦.
,, ಬಾಟ್ಲಿ ೬ಕ್ಕೆ ರೂ ೬-೧೨—೦.
,, ಬಾಟ್ಲಿ ೧೨ಕ್ಕೆ ರೂ. ೧೨—೦—೦.

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಚೂರ್ಣ, ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಚಿಂಚಾಕ್ಷಾರ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಅನೇಕ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ:—

ಪಿ. ಅಚ್ಯುತ ಪಂಡಿತ,

ಮಾಲಕ,

ಆರ್ಯಧನ್ವಂತರಿ ಔಷಧಾಲಯ,

ಪೋಸ್ಟ:— ಕುಮಟಾ. (ಉ. ಕನ್ನಡ.)

॥ ಶ್ರೀರಾಮ ಪ್ರಸನ್ನ ॥

ಡಾ। ಅಂಕಲೀಕರ, ಎಮ್. ಡಿ., (ಅಮೇರಿಕಾ) ಸಿಕೇಶ್ವರ ಆಸ್ಪತ್ರೆ ಇವರು ದಮ್ಮು, ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ ರಾಮಬಾಣ ಔಷಧವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ— ಮನೆತನದ ವೈದ್ಯ!

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ದೋಷಿ ಅಥವಾ ಸಾದಾ) ನಿಮೋನಿಯಾ (ವಾಯುಪ್ರಮಾದ), ಟಾಯಿಫಾಯಿಡ (ವಿಷಮಜ್ವರ), ಹೊಟ್ಟೆಶೂಲಿ, ಕಾಲರಾ, ಪ್ಲೇಗ, ಇನ್‌ಫ್ಲುಎಂಝಾ, ಸಂಧಿವಾತ, ಬಾಣಂತಿ ರೋಗ, (ಹಡೆದಾಗ ಥಂಡಿ ಹಿಡಿದಿದ್ದರಿಂದ ಸಂಭವಿಸುವ ಬಾಣಂತ ರೋಗಗಳ ಮೇಲೆ), ಚಿಕ್ಕ ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ, ಮಲಬದ್ಧತೆ, ಮೈನೋವು, ಥಂಡಿಯಿಂದ ಗಂಟಲು ನೋವು ಮತ್ತು ಗಾಯಕ ಜನರಿಗೆ ಧ್ವನಿ ಬೀಳೋಣ, ರಕ್ತ ಹೋರಡಣೆ, ಅತಿಸಾರ, ತಂಬಾಕು ಸಲಿಗೆರೋಣ, ವಾಂತಿಯಾಗೋಣ, ಯಾವದೇ ಕಾರಣದಿಂದ ಉಂಟಾದ ದುರ್ಬಲತೆ, ಲಿವ್ಹರ (ಸ್ಪ್ಲೀನ), ಹೊಟ್ಟೆಯೊಳಗಿನ ಗಂಟು, ಪುಪ್ಪುಸದ ಹಾಗೂ ಹೊಟ್ಟೆಯೊಳಗಿನ ಯಾವದೇ ವಿಕಾರ, ಧಾತುಕ್ಷೀಣತೆ, ಸ್ವಪ್ನಾವಸ್ಥೆ, ಎಲ್ಲ ತರದ ಕಡತಿ, ಸ್ತ್ರೀಯರ ಮುಟ್ಟಿನ ದೋಷ ಮೊದಲಾದ ಎಲ್ಲ ರೋಗಗಳ ಮೇಲೆ ಅನುಭವಸಿದ್ಧ, ಖಾತ್ರಿದಾಯಕ ಸಿದ್ಧೌಷಧವಿರುತ್ತದೆ. ಈ ಔಷಧವು ಕುಡಿಯಲಿಕ್ಕೆ ಸ್ವಾದಿಷ್ಟ ರುಚಿಕರವಿರುವದು. ಸಣ್ಣ ಹುಡುಗರಂತೂ ಬಹಳ ಪ್ರೀತಿಯಿಂದ ತಕ್ಕೊಳ್ಳುವರು. ಇದು ತಕ್ಕೊಳ್ಳುವದರಿಂದ ರಕ್ತಶುದ್ಧಿ ಹಾಗೂ ರಕ್ತವೃದ್ಧಿಯಾಗಿ ವೀರ್ಯವೃದ್ಧಿಯಾಗುವದು. ಮತ್ತು ಯಾವದೇ ಕಾರಣದಿಂದ ಉಂಟಾದ ಉದಾಸೀನತೆಯನ್ನು ಕಳೆದು ಮನಸ್ಸು ಆನಂದಿತ ಮಾಡುವದು ಹಾಗೂ ಜಗತ್ತು ರಮಣೀಯವಾಗಿ ತೋರುವದು.

ಈ ಔಷಧದಿಂದ ೨೦–೨೨ ವರ್ಷಗಳಿಂದ ದಮ್ಮಿನ ರೋಗದಿಂದ ನರಳುತ್ತಿರುವ ರೋಗಿಗಳು ಪೂರ್ಣ ಗುಣ ಪಡೆದಿರುವರು. ಈಗ ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗಗಳ ಮೇಲೆ ಔಷಧವಿಲ್ಲೆಂದು ನಿರಾಶೆಪಡುವ ಕಾರಣವಿಲ್ಲದಂತಾಗಿದೆ. ಈ ಔಷಧ ಉಪಯೋಗ ಮಾಡಿಕೊಂಡು ರೋಗಮುಕ್ತರಾಗಿರಿ. ಈ ವರೆಗೆ ಸಾವಿರಾರು ಜನರು ರೋಗಮುಕ್ತರಾಗಿರುವರು. ನಿರಾಶೆಯಿಂದ ದುಃಖಪಡುತ್ತಿರುವ ಜನರಿಗೆ ಇದರ ಮಾಹಿತಿಯಾಗಿ ಗುಣವಡೆಯ್ಯಬೇಕೆಂದು ಈ ಔಷಧದ ಜಾಹೀರಾತು ಪ್ರಕಟಿಸಲ್ಪಟ್ಟಿರುವದು. ಇದನ್ನು ಹಳ್ಳಿಗರು ಹಾಗೂ ಶಹರವಾಸಿಯರು ಜರೂರ ತಮ್ಮ ಸಂಗ್ರಹದಲ್ಲಿ ಇಟ್ಟುಕೊಳ್ಳತಕ್ಕದ್ದು.

ನೆಗಡಿ, ಜ್ವರ, ಕೆಮ್ಮು ಶುರು ಆದ ಕೂಡಲೆ ಜನರು ನಿಷ್ಕಾಳಜಿಯಿಂದ ೨-೩ ದಿವಸ ಹಾಗೇ ಮೈಮೇಲೆ ತೆಗೆಯುತ್ತಾರೆ. ಹೀಗೆ ಮಾಡುವದರಿಂದ ಮುಂದೆ ಜ್ವರವು ದೋಷಿಯಾಗುವ ಸಂಭವವಿರುತ್ತದೆ. ಆ ಕಾರಣ ಶುರುವಾದ ಕೂಡಲೆ ಈ ಕಷಾಯ ತೆಗೆದುಕೊಳ್ಳುವದರಿಂದ ಮುಂದಿನ ತ್ರಾಸು ತಪ್ಪುವದು. ಇದೇ ರೀತಿ ಬಾಣಂತಿ ಮತ್ತು ಕೂಸು ಇವರಿಗೆ ಮೊದಲನೇ ದಿವಸದಿಂದ ಶುರು ಮಾಡಿ ಮೂರು ತಿಂಗಳು ತನಕ ಚಾಲು ಇಡುವದು. ಹುಡುಗರಿಗೆ ಬೇರೆ ಔಷಧವು ಕೊಡುವ ಗರಜಿಲ್ಲ. ಚಿಕ್ಕಮಕ್ಕಳ ಕರಕರೆ ನಿಲ್ಲುತ್ತದೆ. ಗರ್ಭಿಣಿ ಹೆಂಗಸರಿಗೆ ಸಹ ಇದನ್ನು ಕೊಡಲು ಅಡ್ಡಿಯಿಲ್ಲ. ಅನುಪಾನ ಪತ್ರಿಕೆಯು ಬಾಟ್ಲಿಯ ಸಂಗಡ ಸಿಗುತ್ತದೆ.

ಲಕ್ಷ್ಮೀಬಾಯಿ ಕೊಲ್ಹಾಪೂರಕರ- ಸಂಸ್ಥಾನ ಬಡೋದಾ, ಉಸ್ತಾದ್ ಗಾಯಕಿ- ತಮ್ಮ "ಕಲ್ಪತರು ಕಷಾಯ" ಈ ಔಷಧವನ್ನು ನನ್ನ ಧ್ವನಿ ಬಿದ್ದ ಹೊತ್ತಿನಲ್ಲಿ ತಕ್ಕೊಳ್ಳುವ ಪ್ರಸಂಗ ಬಂತು ತಿಳಿಸಲಿಕ್ಕೆ ನನ್ನ ಆನಂದವಾಗುತ್ತದೆ! ಔಷಧ ತಕ್ಕೊಂಡ ಅರ್ಧ ತಾಸಿನಲ್ಲಿಯೇ ಮೊದಲಿನಂತೆಯೇ ಸುಸ್ವರದಿಂದ ಹಾಡಲಿಕ್ಕೆ ಒಂದು ಧ್ವನಿ ಬಿದ್ದ ಕಲ್ಪನೆಯೇ ಉಳಿಯಲಿಲ್ಲ. ತಾ. ೧—೫—೧೯೩೪

ಶ್ರೀಯುತ ಪು. ಹ. ಶಿರಪೇಕರ, ವಾಡೇಕರ ಬಿಲ್ಡಿಂಗ- ಮುಂಬಯಿ. ತಾ. ೧-೪-೩೪. ತಮ್ಮ "ಕಲ್ಪತರು ಕಷಾಯ"ವು ನನ್ನ ಮೇಲೆ ಹಳ್ಳೆ ಲಾಗು ಬಿದ್ದಿತು. ನನ್ನ ಅತ್ತಿಗೆಗೆ ದಮ್ಮು ಇರುವದು. ಅದಕ್ಕಾಗಿ ಅವರಿಗೆ ೨ ಕಷಾಯದ ಬಾಟ್ಲಿಗಳನ್ನು ರೇಲ್ವೆ ಪಾರ್ಸಲಿನಿಂದ ಕಳಿಸಿಕೊಡಿರಿ.

ಕಿಮ್ಮತ್ತು:- ೧ರತ್ತಲ ಬಾಟ್ಲಿಗೆ ರೂ. ೨॥; ಅರ್ಧರತ್ತಲ ಬಾಟ್ಲಿಗೆ ರೂ. ೧॥. ೩ ರತ್ತಲ ಬಾಟ್ಲಿಗೆ ೧೫ ಆಣೆ.

ನಟರತ್ನ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪೂರಕರ ಮೊದಲಾದ ಅನೇಕ ಮಹನೀಯರು ಉಪಯೋಗಿಸಿ ಪ್ರಶಂಸಾ ಪತ್ರಗಳನ್ನು ಕೊಟ್ಟಿರುತ್ತಾರೆ.

ಔಷಧೀ ದಂತಮಂಜನ.

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು, ಕೀವು, ರಕ್ತ, ಹಲ್ಲು-ವಸಡುಗಳ ರೋಗ ಮುಂತಾದವುಗಳು ನಾಶವಾಗುತ್ತವೆ. ಈ ಔಷಧವನ್ನು ದಿನಾ ಒಂದಾವರ್ತಿ ಅಥವಾ ಎರಡಾವರ್ತಿ ಹಲ್ಲುಗಳಿಗೆ ತಿಕ್ಕುವದಲ್ಲದೆ ನಾಲಿಗೆಗೂ ತಿಕ್ಕಬೇಕು. ಬೆಲೆ ಆಣೆ ೫.

ಇದಲ್ಲದೆ, ಥಂಡಿ ಜ್ವರ, (ಮಲೇರಿಯಾ) ದ ಮೇಲೆ ಮಿಶ್ರಣ, ಕಾಡಕ್ಕೆ ಸಬಿ ಔಷಧ, ಜಂತುನಾಶಕ ಕಷಾಯ, ಕಾಲರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೆಶಲ್ ಔಷಧಗಳು ನಮ್ಮಲ್ಲಿ ಸಿಗುತ್ತವೆ.

ಶ್ರೀರಾಮ ಆಯುರ್ವೇದ ಫಾರ್ಮಸಿ, ಗಡಹಿಂಗ್ಲಜ. (ಕೊಲ್ಹಾಪುರ ಸಂ.)

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.